

ಪೇಜಾವರ ಪ್ರಶಸ್ತಿ

ಪೇಜಾವರ ಪ್ರಶಸ್ತಿ

(ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಜೀವನ ಸಾಧನೆಗಳ ಸಮೀಕ್ಷೆ)

ಸಂಪಾದಕರು

ಹೆರಂಜೆ ಕೃಷ್ಣ ಭಟ್ಟ

ಮುರಳೀಧರ ಉಪಾಧ್ಯ, ಹಿರಿಯಡಕ

ಪ್ರಕಾಶಕರು

ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಪೀಠಾರೋಹಣ ವಜ್ರ ಮಹೋತ್ಸವ ಸಮಿತಿ

ಪೂರ್ಣಪ್ರಜ್ಞ ವಿದ್ಯಾಪೀಠ

ಬೆಂಗಳೂರು – ೫೬೦ ೦೨೮

PEJAVARA PRASHASTHI: Life and Achievements of Shri Vishwesha Theertha Swamiji of Sri Pejavara Matha, Udupi. Published on the occasion of the "Diamond Jubilee" celeberation of taking up the life of consecration and taking charge of the Sri Pejavara Matha. Edited by Heranje Krishna Bhat and Muraleedhara Upadhya, Hiriadka, 1999.

PP : 770 + 32 + 48 (Photo Pages)

COVER DESIGN:

Conception : Ramesh Rao

Art work : Shailesh Kotian

Photo : Yajna, Mangalore

Printed at Manipal Power Press, Manipal 576 119

‘ಪೇಜಾವರ ಪ್ರಶಸ್ತಿ’ಯಲ್ಲಿ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಚಿಕಣ ಆತ್ಮಕತೆ ಹಾಗೂ ಮಹಾ ಪರಂಪರೆಯ ಧಾರ್ಮಿಕ ಗ್ರಂಥಗಳ ಕುರಿತು ಅವರು ಬರೆದಿರುವ ೩೪ ಲೇಖನಗಳಿವೆ. ಶ್ರೀ ವಿಶ್ವೇಶತೀರ್ಥರ ಜೀವನ, ಸಾಧನೆ, ವ್ಯಕ್ತಿತ್ವ, ಸಾಮಾಜಿಕ - ರಾಜಕೀಯ ನಿಲುವುಗಳ ಕುರಿತು, ದ. ರಾ. ಬೇಂದ್ರೆ, ಗೌರೀಶ ಕಾಯ್ಕಿಣಿ, ಕು. ಶಿ. ಹರಿದಾಸ ಭಟ್ಟ, ಪಾ. ವೆಂ. ಆಚಾರ್ಯ, ಡಾ। ಎಂ. ಪ್ರಭಾಕರ ಜೋಶಿ, ಲಕ್ಷ್ಮೀಶ ತೋಳ್ಪಾಡಿ, ಬನ್ನಂಜೆ ಗೋವಿಂದಾಚಾರ್ಯ, ಪಂಡರೀನಾಥಾಚಾರ್ಯ ಗಲಗಲಿ, ಪ್ರೊ। ಪಿ. ಶ್ರೀಪತಿ ತಂತ್ರಿ, ರಾಜಾರಾಮ ತೋಳ್ಪಾಡಿ, ಪಾಟೀಲ ಪುಟ್ಟಪ್ಪ, ಕೆ. ಕೆ. ಪೈ, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಡಾ। ಸಿ. ಎಚ್. ಶ್ರೀನಿವಾಸ ಮೂರ್ತಿ, ಎ. ಹರಿದಾಸ ಭಟ್ ಮತ್ತಿತರ ವಿದ್ವಾಂಸರು ಬರೆದಿರುವ ಎಪ್ಪತ್ತು ಲೇಖನಗಳು ಈ ಗ್ರಂಥದಲ್ಲಿವೆ. ‘ಗೋವಿಂದ ಪೈ ಸಂಶೋಧನ ಸಂಪುಟ’ ಖ್ಯಾತಿಯ ಪ್ರೊ। ಹೆರಂಜೆ ಕೃಷ್ಣ ಭಟ್ಟ ಹಾಗೂ ಪ್ರೊ। ಮುರಳೀಧರ ಉಪಾಧ್ಯ, ಹಿರಿಯಡಕ ಈ ಗ್ರಂಥದ ಸಂಪಾದಕರು.

ಅನುಕ್ರಮಣಿಕೆ

೩. ಶ್ರೀ ವಿಶ್ವೇಶತೀರ್ಥರ ಲೇಖನಗಳು – ಪ್ರವಚನಗಳು

ಡಾ। ಡಿ. ವೀರೇಂದ್ರ ಹೆಗ್ಗಡೆ

ವಿಚಿತ್ರ ಚೇತನ

ಗುಣೇಷು ಕ್ರಿಯತಾಂ ಯತ್ನಃ ಕಿಮಾಟೋಪೈಃ ಪ್ರಯೋಜನಂ ವಿಕ್ರೀಯಂತೇ ನ ಘಂಟಾಭಿಃ ಗಾವಃ ಕ್ಷೀರವಿವರ್ಜಿತಾಃ – ಎಂಬ ಸುಭಾಷಿತದಂತೆ ಮನುಷ್ಯ ತನಗೆ ಯೋಗ್ಯವಾದ ಗುಣಗಳನ್ನು ಸಂಪಾದಿಸಲು ಪ್ರಯತ್ನಿಸಬೇಕು. ಬರಿಯ ಆಡಂಬರದಿಂದ ಪ್ರಯೋಜನವೇನು ? ಹಾಲು ಹಿಂಡುವ ಹಸುವಿನ ಘಂಟೆಯೂ ಶಬ್ದ ಮಾಡುತ್ತದೆ. ಹಾಲಿಲ್ಲದ ಹಸುವಿನ ಗಂಟೆಯೂ ಶಬ್ದ ಮಾಡುತ್ತದೆ. ಹಸುವನ್ನು ಕೊಳ್ಳಲು ಬಂದವರಿಗೆ ಈ ಶಬ್ದ ಮುಖ್ಯವಲ್ಲ. ಆ ಹಸು ಎಷ್ಟು ಹಾಲು ಕೊಡುತ್ತದೆ ಎಂಬುದನ್ನು ನೋಡಿ ಅದಕ್ಕೆ ಬೆಲೆ ಕಟ್ಟುತ್ತಾರೆ. ಘಂಟಾನಾದವು ಅಧಿಕವಾದ ಮಾತ್ರಕ್ಕೆ ಆ ಹಸುವಿನ ಬೆಲೆ ಅಧಿಕವಾಗುವುದಿಲ್ಲ.

ಹಾಗೇ ಮನುಷ್ಯನಿಗೆ ಕೀರ್ತಿ-ಗೌರವಗಳು ಬರುವುದು ಆತನ ಯೋಗ್ಯತೆಯಿಂದ. ಬರಿಯ ಹೊರಗಿನ ವೇಷ ಅಥವಾ ಪ್ರಚಾರದಿಂದಲ್ಲ. ಚಿನ್ನಕ್ಕಾಗಲೀ, ವಜ್ರಕ್ಕಾಗಲೀ ಇರುವ ಬೆಲೆ ಅವುಗಳ ಪ್ರಚಾರದಿಂದ ಬಂದದ್ದಲ್ಲ. ಬದಲಾಗಿ ಶ್ರೇಷ್ಠತೆಯಿಂದ ಬಂದದ್ದಾಗಿದೆ. ಹಸುವನ್ನು ಕೊಳ್ಳಬಯಸುವವನು ಹಸುವಿನ ಹಾಲು ಹಿಂಡಿ ಅಲ್ಲಿ ಆಗಲೇ ಅದರ ಅರ್ಹತೆಯನ್ನು, ಬೆಲೆಯನ್ನು ನಿರ್ಣಯಿಸುತ್ತಾನೆ. ಆದರೆ ಬರಿಯ ಪ್ರಚಾರದಿಂದ ಮೇಲೇರಿದ ವ್ಯಕ್ತಿಯ ನಿಜವಾದ ಮೌಲ್ಯವನ್ನು ನಿರ್ಧರಿಸಲು ಸರಿಯಾದ ಸಾಧನಗಳೇ ಇಲ್ಲ.

ಪೇಜಾವರ ಶ್ರೀಗಳು ಅನೇಕ ಸಂದರ್ಭಗಳಲ್ಲಿ ನಾನು ಒಂದು ಹಸು ಎಂಬುದಾಗಿ ಹೇಳಿಕೊಂಡದ್ದುಂಟು. ಅವರು ಬರಿಯ ಘಂಟಾನಾದದಿಂದ ಜನರನ್ನು ಆಕರ್ಷಿಸುವ ಹಸುವಲ್ಲ. ಬದಲಾಗಿ ತನ್ನ ಸದಾಚಾರ, ಸತ್ಕರ್ಮ, ನಿಷ್ಕಲ್ಮಶ ಹೃದಯಪೂರ್ಣ ಪ್ರವಚನಗಳೆಂಬ ಅಮೃತವನ್ನು ತನ್ನ ಕೊಡಗೆಚ್ಚಲಿನಲ್ಲಿ ತುಂಬಿಕೊಂಡು ಎಲ್ಲಾ ತರದ ಜನರನ್ನು ಆಕರ್ಷಿಸುತ್ತಿರುವ 'ಸಾತ್ವಿಕ ಗೋವು' ಎಂದರೆ ತಪ್ಪಾಗದು. ತಾನಿರುವ ಸಮಾಜದ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಗಳೆಲ್ಲದರಲ್ಲಿ ಭಾಗಿಯಾಗುತ್ತಾ, ತನ್ನ ಮಾತು ಮತ್ತು ಕೃತಿಯ ಮೂಲಕ ಜನಮನವನ್ನು ಮುಟ್ಟಿರುವ, ಮುಟ್ಟುತ್ತಿರುವ ಸಂತರಲ್ಲಿ ಶ್ರೀ ವಿಶ್ವೇಶತೀರ್ಥರು ಅದ್ವಿತೀಯರೆಂದರೆ ತಪ್ಪಾಗದು.

ಜನೋಪಯೋಗಿಯಾಗಿ ವಿಭೂತಿ ಎನಿಸುತ್ತದೆ. ಹಾಗೆ ಸರ್ವ ಜನೋಪಯೋಗಿ ವ್ಯಕ್ತಿಗಳೂ ವಿಭೂತಿ ಪುರುಷರೆನಿಸುತ್ತಾರೆ. ಹಣ್ಣಿನ ಸಿಪ್ಪೆಗೆ ಬಣ್ಣ ಬಂದಾಗಲೇ ಅದರೊಳಗಿನ ರಸಕ್ಕೆ ಸಿಹಿ, ಮಾಧುರ್ಯ ಉಂಟಾಗುತ್ತದೆ. ಶ್ರೀಗಳವರ ಪಟ್ಟಾಧಿಕಾರ ಸ್ವರ್ಣಮಹೋತ್ಸವದಲ್ಲಿ ಅವರ ವ್ಯಕ್ತಿತ್ವದ ಪೂರ್ಣತೆ, ಪಕ್ವತೆ, ಮಾಧುರ್ಯಗಳು ಬಳಿ ಬಂದವರನ್ನು ಹಸನಾಗಿಸುತ್ತಿದೆ. ●

ಹೆರಂಜೆ ಕೃಷ್ಣ ಭಟ್ಟ, ಮುರಲೀಧರ ಉಪಾಧ್ಯ ಹಿರಿಯಡಕ

ಸಂಪಾದಕೀಯ

ಶ್ರೀ ವಿಶ್ವೇಶತೀರ್ಥರು ಪೇಜಾವರ ಸ್ವಾಮಿಗಳೆಂದೇ ಪ್ರಸಿದ್ಧರು. ಶ್ರೀ ವಿಶ್ವೇಶತೀರ್ಥರ ಜೀವನ-ಸಾಧನೆಗಳ ಅಧ್ಯಯನ, ಸಮೀಕ್ಷೆ ಈ ಗ್ರಂಥದ ಉದ್ದೇಶ. ಈ ಗ್ರಂಥದ ಯೋಜನೆಯನ್ನು ಆರಂಭಿಸಿದಾಗ ನಾವು ಸಿದ್ಧಪಡಿಸಿದ ರೂಪರೇಷೆ ಸ್ಥೂಲವಾಗಿ ಹೀಗಿತ್ತು: (೧) ಶ್ರೀ ವಿಶ್ವೇಶತೀರ್ಥರ ಸುದೀರ್ಘ ಸಂದರ್ಶನವೊಂದನ್ನು ದಾಖಲಿಸುವುದು, ಚಿಕ್ಕ ಆತ್ಮಕಥನವೊಂದನ್ನು ಬರೆಯುವಂತೆ ಅವರನ್ನು ವಿನಂತಿಸುವುದು. (೨) ಶ್ರೀ ವಿಶ್ವೇಶತೀರ್ಥರು ಉಪನಿಷತ್ತುಗಳು, ಭಗವದ್ಗೀತೆ ಹಾಗೂ ಶ್ರೀಮಧ್ವಚಾರ್ಯರ 'ತತ್ತ್ವವಾದ'ವನ್ನು ಕುರಿತು ಬರೆದಿರುವ ಕೆಲವು ಲೇಖನಗಳನ್ನು ಸಂಕಲಿಸುವುದು. (೩) ಶ್ರೀ ವಿಶ್ವೇಶತೀರ್ಥರ ಈವರೆಗಿನ ಮೂರು ಪರ್ಯಾಯಗಳ ಸಾಧನೆಗಳನ್ನು ದಾಖಲಿಸುವುದು. (೪) ಶ್ರೀ ವಿಶ್ವೇಶತೀರ್ಥರ ವ್ಯಕ್ತಿತ್ವ, ಸಾಮಾಜಿಕ-ರಾಜಕೀಯ ನಿಲುವುಗಳನ್ನು ಕುರಿತು ಈಗಾಗಲೇ ವಿವಿಧ ಸ್ಮರಣ ಸಂಚಿಕೆಗಳಲ್ಲಿ ಪ್ರಕಟವಾಗಿರುವ ಕೆಲವು ಅಸಾಧರಣ ಲೇಖನಗಳನ್ನು ಆಯ್ಕೆಮಾಡುವುದು. (೫) ಶ್ರೀ ವಿಶ್ವೇಶತೀರ್ಥರ ಜೀವನ ಸಾಧನೆಗಳನ್ನು ಕುರಿತು ತಜ್ಞರಿಂದ ಕೆಲವು ಲೇಖನಗಳನ್ನು ಬರೆಸುವುದು. (೬) ಶ್ರೀ ವಿಶ್ವೇಶತೀರ್ಥರು ನೀಡಿರುವ ಕೆಲವು ಮಹತ್ವದ ಸಂದರ್ಶಗಳನ್ನು ಸಂಕಲಿಸುವುದು. (೭) ಶ್ರೀ ವಿಶ್ವೇಶತೀರ್ಥರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಸಂಸ್ಥೆಗಳ ಮಾಹಿತಿ ಸಂಗ್ರಹಿಸಿ, ಅವುಗಳನ್ನು ಪರಿಚಯಿಸುವುದು. (೮) ಶ್ರೀ ವಿಶ್ವೇಶತೀರ್ಥರ ಬಹುಮುಖಿ ವ್ಯಕ್ತಿತ್ವವನ್ನು ಪರಿಚಯಿಸುವ ಛಾಯಾಚಿತ್ರಗಳನ್ನು ಸಂಕಲಿಸುವುದು. ಸಂಸ್ಥೆಗಳ ಮಾಹಿತಿ ಸಂಗ್ರಹದ ಕೆಲಸ ನಮಗಿದ್ದ ಕಾಲ ಮಿತಿಯಿಂದಾಗಿ ಅಪೂರ್ಣವಾಗಿದೆ. ನಮ್ಮ ಇತರ ಉದ್ದೇಶಗಳು ಈಡೇರಿವೆ ಎಂಬ ತೃಪ್ತಿ ನಮಗಿದೆ.

ಓಸ್ನೆಲಿ

'ಪೇಜಾವರ ಪ್ರಶಸ್ತಿ'ಯ ಮೊದಲ ಭಾಗದಲ್ಲಿ ಉಡುಪಿಯ ಅಷ್ಟಮಠಗಳು ಹಾಗೂ ಪೇಜಾವರ ಮಠವನ್ನು ಕುರಿತು ಆರು ಲೇಖನಗಳಿವೆ. ಕಡಿಯಾಳಿ ವಾದಿರಾಜ ಉಪಾಧ್ಯಾಯರ

‘ಅಷ್ಟಮಠದ ಹೆಸರಾಂತ ಯತಿಗಳು’ ಹಾಗೂ ಮೆಕೆಂಝಿ ಸಂಪುಟದ ‘ಪೇಜಾವರ ಮಠದ ಕೈಫಿಯತ್ತು’ ಕುತೂಹಲಕಾರಿ ಸಂಗತಿಗಳನ್ನು ತಿಳಿಸುತ್ತವೆ. ಪೇಜಾವರ ಮಠದ ಯತಿಗಳು ಉಡುಪಿಯ ಗಡಿದಾಟಿ, ದೇಶದ ಉದ್ದಗಲದಲ್ಲಿ ಸಂಚಾರ ಮಾಡುತ್ತಿದ್ದರೆಂಬುದನ್ನು ಕೈಫಿಯತ್ತು ದೃಢೀಕರಿಸುತ್ತದೆ. ಬನ್ನಂಜೆ ಗೋವಿಂದಾಚಾರ್ಯರ ‘ಆಧ್ಯಾತ್ಮಿಕ ಪ್ರಪಂಚಕ್ಕೆ ಉಡುಪಿಯ ಕೊಡುಗೆ’ ಹಾಗೂ ‘ಪೇಜಾವರ ಮಠದ ಗುರುಪರಂಪರೆ, ಒಂದು ಹೊಸ ಬೆಳಕು’ ಈ ವಿಭಾಗದ ಮುಖ್ಯ ಲೇಖನಗಳು. ಪೇಜಾವರ ಮಠ ಆರ್ಥಿಕವಾಗಿ ದುರ್ಬಲವಾಗಿದ್ದ ಉಡುಪಿ ಮಠಗಳಲ್ಲೊಂದಾಗಿತ್ತು. ಎಸ್. ಯು. ಪಣಿಯಾಡಿಯವರ ಸಪ್ಲೈ ಏಜೆನ್ಸಿ (ಲಿ.) ೧೯೩೮ರಲ್ಲಿ ಉಡುಪಿ ‘ಪರ್ಯಾಯಮ್ ಸೊವೆನಿರ್’ನ್ನು ಪ್ರಕಟಿಸಿತ್ತು. ಕತೆಗಾರ ಕೊರಡ್ಕಲ್ ಶ್ರೀನಿವಾಸರಾಯರು ಇದರ ಸಂಪಾದಕರಾಗಿದ್ದರು. ಈ ಸ್ಮರಣ ಸಂಚಿಕೆಯ ಮುಖಪುಟದಲ್ಲಿ ‘‘ಪೇಜಾವರ ಮಠದ ನೂರು ರೂಪಾಯಿ ಬೆಲೆಯ ‘ಪರ್ಯಾಯ ಪ್ರಾಮಿಸರಿ ನೋಟು’ಗಳನ್ನು ಕೊಳ್ಳಿರಿ’’ ಎಂದು ವಿನಂತಿಸುವ ಜಾಹೀರಾತು ಪ್ರಕಟವಾಗಿದೆ.

‘ಕೊಟ್ಟ ಕುದುರೆಯನೇರಿ ಗಡಿದಾಟಿದವರು’

ಎಂ. ನಾರಾಯಣಾಚಾರ್ಯ-ಕಮಲಮ್ಮ ಈ ದಂಪತಿಗಳ ಮಗನಾಗಿ, ಪ್ರಜಾಪತಿ ಸಂ।ದ ವೈಶಾಖಶುದ್ಧ ಪಂಚಮಿಯಂದು ಸೋಮವಾರ (೨೭-೪-೧೯೩೧), ಸುಬ್ರಹ್ಮಣ್ಯ ಸಮೀಪದ ರಾಮಕುಂಜದಲ್ಲಿ ಜನನ . ಬಹುಧಾನ್ಯ ಸಂ।ರದ ಮಾರ್ಗಶಿರ ಶುದ್ಧ ಪಂಚಮಿ, ಶುಕ್ರವಾರ (೩-೧೨-೧೯೩೮) ಪೇಜಾವರ ಮಠದ ಶ್ರೀ ವಿಶ್ವಮಾನ್ಯತೀರ್ಥರಿಂದ ಸನ್ಯಾಸದೀಕ್ಷೆ ಪಡೆದು ಶ್ರೀ ವಿಶ್ವೇಶತೀರ್ಥರಾದದ್ದು. ಬಾರ್ಕೂರಿನ ಭಂಡಾರಕೇರಿ ಮಠದಲ್ಲಿ ಶ್ರೀ ವಿದ್ಯಾಮಾನ್ಯತೀರ್ಥರ ಶಿಷ್ಯರಾಗಿ ಎಂಟು ವರ್ಷಗಳ ಕಾಲ ವಿದ್ಯಾಭ್ಯಾಸ. ನಿತ್ಯೋತ್ಸವ ಎಂಬಂತೆ ನಡೆಸಿದ ಮೂರು ಪರ್ಯಾಯಗಳು: ೧೯೫೨-೫೪; ೧೯೬೮-೧೯೭೦; ೧೯೮೪-೮೬; ೧೯೫೩ರಲ್ಲಿ ಅಖಿಲ ಭಾರತ ಮಾಧ್ವ ಮಹಾಮಂಡಲದ ಸ್ಥಾಪನೆ; ‘ಗೀತಾಸಾರೋದ್ಧಾರ’ ಕೃತಿ ರಚನೆ (೧೯೬೮). ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯತೀರ್ಥರನ್ನು ಪಲಿಮಾರು ಮಠದ ಅಧಿಪತಿಗಳಾಗಿ (೧೯೬೯) ನೇಮಿಸುವಲ್ಲಿ ಮಹತ್ವದ ಪಾತ್ರ; ಬನ್ನಂಜೆ ಗೋವಿಂದಾಚಾರ್ಯರು ಸಂಪಾದಿಸಿದ ಮಧ್ವಾಚಾರ್ಯರ ಸರ್ವಮೂಲ ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹ; ಬೆಂಗಳೂರಿನಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠದ ಸ್ಥಾಪನೆ (೧೯೫೬), ಪಾಜಕ ಪ್ರತಿಷ್ಠಾನದ ಸ್ಥಾಪನೆ (೧೯೮೦), ಆನಂದತೀರ್ಥ ಪ್ರತಿಷ್ಠಾನದ ಸ್ಥಾಪನೆ. ‘ಪಂಡಿತ ಪೋಷಣಾ ನಿಧಿ’ ಸ್ಥಾಪನೆ (೧೯೯೦) ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಪೂರ್ಣಪ್ರಜ್ಞ ಸಂಶೋಧನ ಮಂದಿರ ಆರಂಭ (೧೯೯೪) ಶ್ರೀ ವಿದ್ಯಾಮಾನ್ಯ ಪ್ರಶಸ್ತಿ ಹಾಗೂ ಶ್ರೀ ವಿಶ್ವೇಶತೀರ್ಥ ಪ್ರಶಸ್ತಿ ಕೊಡುವ ವ್ಯವಸ್ಥೆ; ಬೆಂಗಳೂರಿನ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಿಂದ ಮಧ್ವಾಚಾರ್ಯರ ಸರ್ವ ಮೂಲ ಗ್ರಂಥಗಳ ಕನ್ನಡ ಭಾಷಾಂತರ ಪ್ರಕಟಣೆ. ಹದಿನೇಳು ಸುಧಾ ಮಂಗಲೋತ್ಸವಗಳು; ಉಡುಪಿಯಲ್ಲಿ ಶ್ರೀಕೃಷ್ಣ ಉಚಿತ ಚಿಕಿತ್ಸಾಲಯದ ಆರಂಭ (೧೯೬೮). ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯ ದಲಿತರ ಕಾಲೋನಿಯಲ್ಲಿ ಪಾದಯಾತ್ರೆ (೧೯೭೦). ಆಂಧ್ರಪ್ರದೇಶದಲ್ಲಿ ಚಂಡಮಾರುತದ ಹಾವಳಿಗೊಳಗಾದವರಿಗಾಗಿ ಹಂಸಲದಿವಿ ಗ್ರಾಮದಲ್ಲಿ ೧೫೦ ಮನೆಗಳನ್ನು ನಿರ್ಮಿಸಿಕೊಟ್ಟದ್ದು (೧೯೭೮). ಕರ್ಜಿಗಿಯಲ್ಲಿ ವೃದ್ಧಾಶ್ರಮ ಸ್ಥಾಪನೆ; ಭೂಕಂಪ ಪೀಡಿತ ಗೋವಿಂದಪುರದಲ್ಲಿ

ಅರುವತ್ತು ಮನೆಗಳ ವಿತರಣೆ (೧೯೬೫), ಸುಮಾರು ಅರುವತ್ತು ವಿವಿಧ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಕಲ್ಯಾಣ ಮಂಟಪಗಳು, ವಿದ್ಯಾರ್ಥಿ ವಸತಿಗೃಹಗಳ ಸ್ಥಾಪನೆಗೆ ಮಾರ್ಗದರ್ಶನ. ಇವು ಶ್ರೀ ವಿಶ್ವೇಶತೀರ್ಥರ ಜೀವನದ ಮಹತ್ವದ ಘಟನೆಗಳಲ್ಲಿ ಕೆಲವು.

ಈ ಗ್ರಂಥದ ಎರಡನೆಯ ಭಾಗದಲ್ಲಿ ಶ್ರೀ ವಿಶ್ವೇಶತೀರ್ಥರು ನಮ್ಮ ವಿನಂತಿಯನ್ನು ಒಪ್ಪಿ ಬರೆದುಕೊಟ್ಟಿರುವ ಒಂದು ಚಿಕಣಿ ಆತ್ಮಕಥನವಿದೆ. ಬಾಲ್ಯದ ನೆನಪುಗಳು, ಮಠದ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯ ಅನುಭವ, ಎರಡನೆಯ ಮಹಾಯುದ್ಧದ ಗಾಯಾಳುಗಳ ಶುಶ್ರೂಷೆಗೆ ಹೋಗಬೇಕೆಂದು ಕನಸು ಕಂಡದ್ದು, ಗಾಂಧೀಜಿಯವರ ಪ್ರಭಾವ, ಮಾಧ್ವ ಮಹಾಮಂಡಲದ ಸ್ಥಾಪನೆಗೆ ಪಟ್ಟ ಶ್ರಮ, ದಲಿತರು ಅನುಭವಿಸುವ ಅವಮಾನದ ಪ್ರತ್ಯಕ್ಷ ಅನುಭವ, 'ಸಮಾಜದಲ್ಲಿ ಸಮುದ್ರ ಮಂಥನಕ್ಕೆ ಕಾರಣವಾದ' ಹರಿಜನಕೇರಿ ಭೇಟಿ, ವಾಕ್ಯಾರ್ಥಗಳು, ತುರ್ತುಪರಿಸ್ಥಿತಿಯ ಪ್ರತಿಭಟನೆ, ಪರಿಸರ ಚಳವಳಿ, ರಾಮಜನ್ಮಭೂಮಿ ಪ್ರಕರಣದ ಕೆಲವು ತೆರೆಮರೆಯ ಸಂಗತಿಗಳು-ಪಂಜಾಬಿನ ಶಾಂತಿಯಾತ್ರೆ, ಗೋಕಾಕ್ ಚಳವಳಿಗೆ ಬೆಂಬಲ ಇವುಗಳ ಕುರಿತು ಸ್ವಾಮೀಜಿಯವರು ವಿವರವಾಗಿ ಬರೆದಿದ್ದಾರೆ.

ಬಾಲ್ಯದ ನೆನಪುಗಳನ್ನು ಬರೆಯುತ್ತ ಶ್ರೀ ವಿಶ್ವೇಶತೀರ್ಥರು, "ನಾನು ಗಾಂಧೀಜಿಯವರ ವಿಚಾರಕ್ಕೆ ಸಂಬಂಧಿಸಿದ ಪತ್ರಿಕೆಗಳು ಮತ್ತು ಪುಸ್ತಕಗಳನ್ನು ತರಿಸಿ ಓದುತ್ತಿದ್ದೆ. ಗಾಂಧೀಜಿಯವರ 'ಹರಿಜನ' ಪತ್ರಿಕೆಯ ಕನ್ನಡ ಅನುವಾದಗಳು, ಗಾಂಧೀಜಿ, ವಿನೋಬಾ, ಮಶ್ರೂವಾಲಾ, ಕುಮಾರಪ್ಪ ಮುಂತಾದವರ ಲೇಖನಗಳನ್ನು ಓದುತ್ತಿದ್ದೆ. ವಿಕೇಂದ್ರೀಕರಣ ಹಾಗೂ ಗ್ರಾಮೋದ್ಯೋಗಿಗಳಿಗೆ ಒತ್ತುಕೊಡುತ್ತಿದ್ದ ಗಾಂಧೀಜಿಯವರ ಆರ್ಥಿಕ ವಿಚಾರಗಳ ಬಗ್ಗೆ ನನ್ನ ಒಲವು ಬೆಳೆದಿತ್ತು. ಇದರ ಜೊತೆಗೆ ಜಯಪ್ರಕಾಶ, ಲೋಹಿಯಾ, ಆಚಾರ್ಯ ನರೇಂದ್ರದೇವ ಮುಂತಾದವರ ಸಮಾಜವಾದಿ ವಿಚಾರಗಳಿಂದಲೂ ಪ್ರಭಾವಿತನಾಗಿದ್ದೆ. ಶ್ರೀಮಂತರ ಹಾಗೂ ಬಡವರ ಆರ್ಥಿಕ ಅಂತರವು ಬಹಳಷ್ಟು ಕಡಿಮೆಯಿರಬೇಕು. ಜನರ ಆರ್ಥಿಕ ಸಮಾನತೆಯನ್ನು ಸಾಧಿಸಬೇಕೆಂಬ ತೀವ್ರ ಕಳಕಳಿಯು ನನ್ನಲ್ಲಿ ಬಾಲ್ಯದಿಂದಲೂ ಬೆಳೆದುಕೊಂಡು ಬಂದಿತ್ತು" (೨-೧) ಎಂದಿದ್ದಾರೆ.

'ಕೊಟ್ಟ ಕುದುರೆಯನೇರಿ ಗಡಿದಾಟಿದ' ಪೇಜಾವರ ಸ್ವಾಮೀಜಿಯವರ ಕನಸು-ನನಸುಗಳನ್ನು ಲಕ್ಷ್ಮೀಶ ತೋಳ್ಪಾಡಿಯವರು ವಿವರಿಸಿದ್ದಾರೆ (೨-೩).

'ನಾನಾ ಜನಸ್ಯ ಶುಶ್ರೂಷಾ'

ಶ್ರೀ ವಿಶ್ವೇಶತೀರ್ಥರು, ಉಪನಿಷತ್ತುಗಳು, ಭಗವದ್ಗೀತೆ ಹಾಗೂ ಮಧ್ವಾಚಾರ್ಯರ ವಿವಿಧ ಗ್ರಂಥಗಳ ಕುರಿತು ಬರೆದಿರುವ ಮೂವತ್ತೊಂದು ಲೇಖನಗಳು ಈ ಗ್ರಂಥದಲ್ಲಿವೆ. ಅವರು ಉಪನಿಷತ್ತುಗಳು ಹಾಗೂ ಭಗವದ್ಗೀತೆಯ ಸಾರಾಂಶವನ್ನು ನೀಡಿರುವುದಲ್ಲದೆ ಮಾಧ್ವ ಸಿದ್ಧಾಂತದ ನೆಲೆಯಿಂದ ಅವುಗಳನ್ನು ವ್ಯಾಖ್ಯಾನಿಸಿದ್ದಾರೆ. ಗಂಭೀರ ತಾತ್ವಿಕ ಜಿಜ್ಞಾಸೆಯಿರುವ ಸಂಸ್ಕೃತ ಗ್ರಂಥಗಳನ್ನು ಕನ್ನಡದಲ್ಲಿ ಪಾರಿಭಾಷಿಕ ಶಬ್ದಗಳ ಭಾರವಿಲ್ಲದೆ, ವಾಗಾಡಂಬರವಿಲ್ಲದೆ ಸರಳವಾಗಿ ಹೇಗೆ ಪರಿಚಯಿಸಬಹುದೆಂಬುದಕ್ಕೆ ಈ ಲೇಖನಗಳು ಮಾದರಿಯಾಗಿವೆ. ಮಧ್ವಾಚಾರ್ಯರ 'ತತ್ತ್ವವಾದ'ವನ್ನು ಶ್ರೀ ವಿಶ್ವೇಶತೀರ್ಥರು ಹೀಗೆ ಪರಿಚಯಿಸುತ್ತಾರೆ- "ಸಕಲ ವೇದಗಳಿಂದ ಪ್ರತಿಪಾದ್ಯನಾದ ಶ್ರೀ ಹರಿಯು ಸರ್ವೋತ್ತಮನಾಗಿದ್ದು, ಅವನ ಲೀಲಾವಿಹಾರ

ಕೇಂದ್ರವೂ, ಲೀಲಾತ್ಮರ ಸಾಧನ ಕ್ಷೇತ್ರವೂ ಆಗಿರುವ ಈ ಜಗತ್ತು ಸತ್ಯವಾಗಿದೆ. ಈ ಪರಾತ್ಪರ ಶಕ್ತಿಯ ಸೇವಕರೂ ಸಾಧಕರೂ ಆದ ಈ ಜೀವರು ಭಗವಂತನಿಂದ ಭಿನ್ನವಾಗಿದ್ದು ಮೂಲಭೂತವಾದ ಮತ್ತು ತನ್ನ ಕರ್ತವ್ಯಗಳಿಗೆ ಅನುಗುಣವಾಗಿ ಸ್ವಾಭಾವಿಕವಾದ ಅಂತರವನ್ನು ಪಡೆದಿರುವರು. ಭಗವಂತನ ಅನುಗ್ರಹದಿಂದ ಪರಿಶುದ್ಧ ಭಕ್ತಿಯಿಂದ ತನ್ನ ದಿವ್ಯ ಸ್ವರೂಪದ ಸಾಕ್ಷಾತ್ಕಾರವೇ ಸಾಧಕ ಜೀವರ ಗುರಿಯಾಗಿರಬೇಕು. ಈ ಪ್ರಮೇಯಗಳನ್ನು ಅಪೌರುಷೇಯ ವೇದ ಮತ್ತು ಇತರ ಶಾಸ್ತ್ರಗಳು ಹಾಗೂ ಪ್ರತ್ಯಕ್ಷ ಮತ್ತು ಯುಕ್ತಿಗಳಿಂದ ನಾವು ತಿಳಿದುಕೊಳ್ಳಬೇಕು.'' (೩-೩೦)

ಮಧ್ವಾಚಾರ್ಯರ 'ಗೀತಾತಾತ್ಪರ್ಯ'ದಲ್ಲಿರುವ ''ನಾನಾ ಜನಸ್ಯ ಶುಶ್ರೂಷಾ ಕರ್ತವ್ಯಾ ಕರವನ್ಮಿತೇಃ'' ಎಂಬ ಮಾತನ್ನು ಶ್ರೀ ವಿಶ್ವೇಶತೀರ್ಥರು ಧ್ಯೇಯವಾಕ್ಯವಾಗಿ ಸ್ವೀಕರಿಸಿದ್ದಾರೆ -''ಇದು ನಮಗೆ ಪ್ರಿಯವಾದ ಧ್ಯೇಯವಾಕ್ಯವೆನಿಸಿದೆ. ಕರ್ಮಾಚರಣೆಯು ಆವಶ್ಯಕವೆಂದು ಭಾವಿಸಿ ತಮ್ಮ ವೈಯಕ್ತಿಕ ಧರ್ಮ ಕರ್ಮಗಳನ್ನು ಮಾತ್ರ ಆಚರಿಸಿ, ಸಮಾಜದ ಬಗ್ಗೆ ಉದಾಸೀನವಾಗಿರುವ ಪ್ರವೃತ್ತಿಯನ್ನೇ ನಾವು ಹೆಚ್ಚಾಗಿ ಕಾಣುತ್ತೇವೆ. ಸಮಾಜದ ಸೇವೆಯೆಂದರೆ ಅದೊಂದು ಲೌಕಿಕ ಕಾರ್ಯವೆಂದೂ, ಅದನ್ನು ತೊರೆದು ದಿನವಿಡೀ ಜಪತಪ ಮೊದಲಾದ ವೈಯಕ್ತಿಕ ಆಧ್ಯಾತ್ಮಿಕ ಕಾರ್ಯಗಳಲ್ಲಿ ತೊಡಗುವವನೇ ಕಟ್ಟಾ ಧಾರ್ಮಿಕನೆಂದೂ ಒಂದು ಭಾವನೆಯು ಪ್ರಚಲಿತವಿದೆ. ಗೀತೆಯಲ್ಲಿ ಹೇಳಿದ ಕರ್ಮದ ಸಂದೇಶವನ್ನು ವರ್ಣಾಶ್ರಮ ಪದ್ಧತಿಯಿಂದ ಬಂದ ನಮ್ಮ ವೃತ್ತಿ ಹಾಗೂ ಜಪ ಪೂಜಾದಿಗಳಲ್ಲೇ ನಾವು ಪರಿಮಿತಗೊಳಿಸಿದ್ದೇವೆ. ನಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಆರ್ತ ಜನತೆಯ ಸೇವೆಯೂ ಒಂದು ಪ್ರಧಾನವಾದ ಅಂಶವಾಗಿದೆಯೆಂದೂ, ಸಾಧಕನು ತನ್ನ ನಿತ್ಯಾನುಷ್ಠಾನಗಳ ಜತೆಗೆ ಈ ಸೇವಾಕಾರ್ಯವನ್ನು ಆಚರಿಸಬೇಕೆನ್ನುವುದು ಗೀತೆಯ ಆದೇಶ ವೆಂದೂ ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ್ದಾರೆ. ವೇದಾಂತವು ಸಮಾಜ ವಿಮುಖವಾದ ದೃಷ್ಟಿಯನ್ನು ನಮಗೆ ನೀಡದೆ ವೈಯಕ್ತಿಕ ಹಾಗೂ ಸಮಾಜದ ಉನ್ನತಿಗೆ ಪೋಷಕವಾದ , ವಿಧಾಯಕವಾದ ಮಾರ್ಗವನ್ನು ಹೇಗೆ ತೋರಿಸುತ್ತದೆ ಎಂಬುದನ್ನು ಇದರಿಂದ ನಾವು ಮನಗಾಣಬಹುದು.'' (೩-೨೯)

ಮಧ್ವಾಚಾರ್ಯರು ತನ್ನ ಎಲ್ಲ ಗ್ರಂಥಗಳನ್ನೂ ಸಂಸ್ಕೃತದಲ್ಲೆ ಬರೆದರು. ಸೋದೆ ಮಠದ ಶ್ರೀ ವಾದಿರಾಜ ಸ್ವಾಮಿಗಳು ಕನ್ನಡದಲ್ಲಿ ನೂರಾರು ಕೀರ್ತನೆಗಳನ್ನು ಬರೆದರು. ಉಡುಪಿಯ ಅಷ್ಟಮಠಗಳ ಇತಿಹಾಸದಲ್ಲಿ ಶ್ರೀ ವಾದಿರಾಜರ ಅನಂತರ ಕನ್ನಡಪರವಾದ ದಿಟ್ಟ ಹೆಜ್ಜೆಯಿಟ್ಟವರು ಶ್ರೀ ವಿಶ್ವೇಶತೀರ್ಥರು. ಮಧ್ವಾಚಾರ್ಯರ ಸರ್ವ ಮೂಲ ಗ್ರಂಥಗಳ ಕನ್ನಡ ಭಾಷಾಂತರಗಳನ್ನು ಮಾಡಿಸಿರುವ ಇವರು ಆ ಎಲ್ಲ ಗ್ರಂಥಗಳಿಗೆ ಕನ್ನಡದಲ್ಲಿ ಪ್ರಸ್ತಾವನೆಯನ್ನು ಬರೆದಿದ್ದಾರೆ.

ಶ್ರೀ ವಿಶ್ವೇಶತೀರ್ಥರು ತನ್ನ ಉಪನ್ಯಾಸ ಪ್ರವಚನಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತಗಳಿಂದ ಆಯ್ದ ಉಪಾಖ್ಯಾನಗಳನ್ನು ವಿವರಿಸುತ್ತಾರೆ. ಅವರ ಉಪನ್ಯಾಸಗಳಿಂದ ಆಯ್ದ ಕೆಲವು ದೃಷ್ಟಾಂತ ಕತೆಗಳು ಈ ಗ್ರಂಥದಲ್ಲಿವೆ (೩-೩೧; ೩-೩೨)

ಪೇಜಾವರ ಸ್ವಾಮೀಜಿಯವರ ಮೂರು ಪರ್ಯಾಯಗಳು ಹಾಗೂ ನೂರಾರು ಸಾಧನೆಗಳ ಸಮಗ್ರ ವಿವರಗಳು ಪಂಡರೀನಾಥಾಚಾರ್ಯ ಗಲಗಲಿ ಅವರ ಲೇಖನದಲ್ಲಿವೆ. (೪-೧). ಈ ಗ್ರಂಥದ ನಾಲ್ಕನೆಯ ಭಾಗ ಶ್ರೀ ವಿಶ್ವೇಶತೀರ್ಥರ ಪರ್ಯಾಯ ಕಾಲದ ವೈವಿಧ್ಯಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದಾಖಲಿಸುತ್ತದೆ.

'ಚೈತನ್ಯದ ಬುಗ್ಗೆ'

ಈ ಗ್ರಂಥದ ಐದನೆಯ ಭಾಗದಲ್ಲಿ ಶ್ರೀ ವಿಶ್ವೇಶತೀರ್ಥರ ಸರಳ, ನಿರಾಡಂಬರ ಹಾಗೂ ''ಚೈತನ್ಯದ ಬುಗ್ಗೆ''ಯಂಥ ವ್ಯಕ್ತಿತ್ವವನ್ನು ಕುರಿತು ಶ್ರೀ ವಿದ್ಯಾಮಾನ್ಯ ತೀರ್ಥರು, ದ. ರಾ. ಬೇಂದ್ರೆ, ಶಂ. ಬಾ. ಜೋಶಿ, ಪಾ. ವೆಂ. ಆಚಾರ್ಯ, ಕೃಷ್ಣಮೂರ್ತಿ ಪುರಾಣಿಕ, ಕೀರ್ತಿನಾಥ ಕುರ್ತಕೋಟಿ, ಮಾಲತಿ ಪಟ್ಟಣಶೆಟ್ಟಿ, ಕೆ. ಎಸ್. ದೇಶಪಾಂಡೆ, ಎಮ್. ಕೆ. ಭಾರತೀರಮಣಾಚಾರ್ಯ ಮತ್ತಿತರರು ಬರೆದಿರುವ ಹದಿಮೂರು ಲೇಖನಗಳು ಹಾಗೂ ಎರಡು ಕವನಗಳಿವೆ. ಶ್ರೀ ವಿದ್ಯಾಮಾನ್ಯ ತೀರ್ಥರ ಲೇಖನದಲ್ಲಿ ಶ್ರೀ ವಿಶ್ವೇಶತೀರ್ಥರು ಹಾಗೂ ಶ್ರೀ ವಿಜಯೀಂದ್ರಾಚಾರ್ಯರ ನಡುವೆ ನಡೆದ ಒಂದು ವಾಕ್ಯಾರ್ಥದ ವಿವರಗಳಿವೆ. (೫-೨) ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ತತ್ವಶಾಸ್ತ್ರದ ವಾಕ್ಯಾರ್ಥಗಳು ಹೇಗೆ ನಡೆಯುತ್ತಿದ್ದವು ಎಂಬುದಕ್ಕೆ ಇದೊಂದು ಮಾದರಿಯಾಗಿದೆ. ''ಶ್ರೀ ಪೇಜಾವರ ಶ್ರೀ ವಿಶ್ವೇಶತೀರ್ಥ ಮಹಾಸ್ವಾಮಿಗಳಷ್ಟು ಜಾಗೃತ ಸಾಮಾಜಿಕ ಪ್ರಜ್ಞೆಯ ಬೇರೊಬ್ಬರನ್ನು ನಾನು ಇನ್ನೂ ಕಂಡಿಲ್ಲ'' ಎಂದು ಶಂ. ಬಾ. ಜೋಶಿ ಬರೆದಿದ್ದಾರೆ. (೫-೪) ಎ. ಹರಿದಾಸ ಭಟ್ಟರ 'ಶ್ರೀಗಳವರು ಮತ್ತು ಪರಿವಾರ' ಎಂಬ ಲೇಖನ (೫-೧೫). ಶ್ರೀ ವಿಶ್ವೇಶತೀರ್ಥರ ನಿಕಟವರ್ತಿಗಳ ಸಂದರ್ಶನಗಳ ಮೂಲಕ ಅವರ ವ್ಯಕ್ತಿತ್ವದ ಆತ್ಮೀಯ, ಸಮೀಪ ಚಿತ್ರವೊಂದನ್ನು ನೀಡುತ್ತದೆ. ಜರತಾರಿಯ ಬದಲು ಖಾದಿ-ಕಾವಿ ಧರಿಸುವ ಪೇಜಾವರ ಶ್ರೀಗಳು ಪೀಠಾಧಿಪತಿಗಳ ಗುಂಪಿನಲ್ಲಿ ಪ್ರತ್ಯೇಕವಾಗಿ ಕಾಣಿಸುತ್ತಾರೆ.

ಬಿಡುವಿಲ್ಲದ ಕಾರ್ಯಕ್ರಮಗಳು ಶ್ರೀ ವಿಶ್ವೇಶತೀರ್ಥರ ದಿನಚರಿಯಲ್ಲಿ ಅನಿವಾರ್ಯ. ''ಹಳೇಹಾಳ ಒಂದು ಗ್ರಾಮ. ಪರ್ಯಾಯ ಸಂಚಾರ ಕಾಲದಲ್ಲಿ ಶ್ರೀಗಳವರು ಅಲ್ಲಿನ ಸಂದರ್ಶನಕ್ಕಾಗಿ ಕೇವಲ ಹದಿನೈದು ನಿಮಿಷಗಳನ್ನಿಟ್ಟಿದ್ದರು. ಭಕ್ತರು ಬಹಳ ಸಂಖ್ಯೆಯಲ್ಲಿ ಸೇರಿದ್ದರು. ಮೆರವಣಿಗೆಯಲ್ಲಿ ಶ್ರೀಗಳವರನ್ನು ಕರೆದೊಯ್ಯಬೇಕೆಂದು ಜನರ ಅಪೇಕ್ಷೆ. ಶ್ರೀಗಳವರು ಸಮಯವಿಲ್ಲವೆಂದು ನಿರಾಕರಿಸಿದರು. 'ತಾವು ಕಾರಲ್ಲಿ ಬನ್ನಿ. ನಾವು ನಡೆದುಕೊಂಡು ಬರುತ್ತೇವೆ' ಎಂದರು ಜನರು. 'ಅದು ನನಗೆ ಸಂಕೋಚವಾಗುತ್ತದೆ' ಎಂದು ಕೊನೆಗೂ ಶ್ರೀಗಳು ಮೆರವಣಿಗೆಗೆ ಒಪ್ಪಿದರು. ಶ್ರೀಗಳವರು ಓಡುತ್ತ ಹೋದರು. ಜನರೂ ಹಿಂದಿನಿಂದ ಓಡಿದರು. ಇದೊಂದು ರೀತಿಯ ಓಟದ ಮೆರವಣಿಗೆಯಾಯಿತು. ಹೀಗಿದೆ ಶ್ರೀಗಳವರ ಕಾರ್ಯದ ಒತ್ತಡ.'' (೫-೧೫) ಬಿಜಾಪುರದಲ್ಲಿ ಶ್ರೀ ಬಂಧನಾಳ ಶಿವಯೋಗಿಗಳು ಏರ್ಪಡಿಸಿದ್ದ ಸಮಾರಂಭದಲ್ಲಿ ನಡೆದ ಘಟನೆ ಶ್ರೀ ವಿಶ್ವೇಶತೀರ್ಥರ ಸರಳತೆಗೆ ಉದಾಹರಣೆಯಾಗಿದೆ. (೮-೮) ಮಂಗಳೂರಿನ ಸಂಮಾನ ಸಮಾರಂಭದಲ್ಲಿ ನಡೆದ ಇಂಥ ಇನ್ನೊಂದು ಘಟನೆಯ ವಿವರ ಡಾ| ಡಿ. ವೀರೇಂದ್ರ ಹೆಗ್ಗಡೆಯವರು ಈ ಗ್ರಂಥಕ್ಕೆ ಬರೆದಿರುವ ಪ್ರಸ್ತಾವನೆಯಲ್ಲಿದೆ.

'ಒಂದು ಹೆಜ್ಜೆ ಮುಂದೆ'

ಎಳವೆಯಲ್ಲೇ ಮಹಾತ್ಮಾ ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದ ಶ್ರೀ ವಿಶ್ವೇಶತೀರ್ಥರು ೧೯೭೦ರಲ್ಲಿ ದಲಿತರ ಕೇರಿಗೆ ಭೇಟಿ ನೀಡಿದ್ದು ದೊಡ್ಡ ಸುದ್ದಿಯಾಯಿತು. ದಲಿತರ ಕುರಿತು ತನ್ನಲ್ಲಿ ಸಹಾನುಭೂತಿ ಮೂಡಲು ಕಾರಣವಾದ ಒಂದು ಘಟನೆಯನ್ನು ಅವರು ಹೀಗೆ ನೆನಪಿಸಿಕೊಳ್ಳುತ್ತಾರೆ – ''ಒಮ್ಮೆ ಮಠದಲ್ಲಿ ರೈತರ ಜತೆ ಮಠದ ವ್ಯವಹಾರದ ಬಗ್ಗೆ ಮಾತನಾಡುತ್ತಿದ್ದೆ, ಅವರಲ್ಲಿ ಮುಸಲ್ಮಾನ ಹಾಗೂ ಕ್ರೈಸ್ತ ಮತಕ್ಕೆ ಸೇರಿದ ರೈತರೂ ಇದ್ದರು. ಆ

ಸಂದರ್ಭದಲ್ಲಿಯೇ ಹಿಂದುಳಿದ ಪಂಗಡಕ್ಕೆ ಸೇರಿದ ರೈತರೂ ಆಗಮಿಸಿದರು. ಅವರು ಮಠದ ಒಳಗೆ ಬರಲು ಸಂಕೋಚಪಟ್ಟಾಗ, ನಾನು ಒಳಬರುವಂತೆ ಹೇಳಿದೆ. ನನ್ನ ಎದುರಿಗೆ ಕುಳಿತುಕೊಂಡಿರುವ ಮುಸಲ್ಮಾನ, ಕ್ರೈಸ್ತ ಮತಕ್ಕೆ ಸೇರಿದ ರೈತರು, 'ಅವರು ಒಳಗೆ ಬರಲು ಅರ್ಹವಾದ ಜಾತಿಗೆ ಸೇರಿದವರಲ್ಲ' ಎಂದು ತಿಳಿಸಿದಾಗ ನನಗೆ, ಒಳಬರದವರ ಸಂಕೋಚದ ಅರಿವಾಯಿತು. ಇತರ ಧರ್ಮಕ್ಕೆ ಸಂಬಂಧಿಸಿದ ರೈತರು ನನ್ನ ಎದುರಿಗೇ ಕುಳಿತುಕೊಂಡು, ನಮ್ಮ ಧರ್ಮದ ಅನುಯಾಯಿಗಳನ್ನು ತಮ್ಮಂತೆ ಒಳಗೆ ಬರಲು ಅರ್ಹರಲ್ಲವೆಂದು ಹೇಳಿರುವುದು ನಮ್ಮ ಧರ್ಮಕ್ಕೆ ಅವಮಾನವೆಂದು ನನಗೆ ಅರಿವಾಯಿತು. ಇಂತಹ ಕೆಲವು ಸನ್ನಿವೇಶಗಳೇ ಹರಿಜನರ ಸಮಸ್ಯೆಯ ಬಗ್ಗೆ ಗಮನ ಕೊಡಲು ಪ್ರಚೋದಿಸಿದ್ದವು.'' (೯-೨)

ಶ್ರೀ ವಿಶ್ವೇಶತೀರ್ಥರು ದಲಿತರ ಕೇರಿಗೆ ಭೇಟಿ ನೀಡಿದ ಘಟನೆಯ ಬಗ್ಗೆ ''ಸಾಂಪ್ರದಾಯಿಕ ಪೀಠಾಧಿಪತಿಯೊಬ್ಬರು ಮುಂದಾಗಿ ಇಂತಹ ಧೈರ್ಯದ ಹೆಜ್ಜೆ ಇಟ್ಟದ್ದು ಇತಿಹಾಸದಲ್ಲಿ ಒಂದು ಅಪರೂಪದ ಉದಾಹರಣೆಯಾಗಿ ನಿಲ್ಲುತ್ತದೆಂಬುದು ಖಂಡಿತ'' ಎನ್ನುವ ಪಾ. ವೆಂ. ಆಚಾರ್ಯರು ಈ ಘಟನೆಗಳ ಪರಿಣಾಮವನ್ನು ಹೀಗೆ ಗುರುತಿಸುತ್ತಾರೆ – ಶ್ರೀ ವಿಶ್ವೇಶತೀರ್ಥರ ಈ ಹರಿಜನ ಸಂಪರ್ಕದ ಕಾರ್ಯ ಎರಡು ರೀತಿಗಳಿಂದ ಪ್ರಭಾವ ಬೀರುತ್ತಿದೆ. ಒಂದು – ಬಗೆಬಗೆಯ ಸಂಕಟ ಅವಮಾನಗಳಿಂದ ಪೀಡಿತರಾದ , ದೇಶದಲ್ಲಿ ಶೇಕಡಾ ೧೬.ರಷ್ಟಿರುವ ದಲಿತರಲ್ಲಿ ಹಿಂದೂ ಧರ್ಮದಲ್ಲಿ ತಮಗೆ ಇನ್ನೂ ಗೌರವದ ಸ್ಥಾನ ಸಂಪಾದನೆ ಸಾಧ್ಯವಿದೆ. ಎಲ್ಲವೂ ನಿರಾಶಾಮಯವಾಗಿಲ್ಲ. ಆತ್ಮಗೌರವವನ್ನು ಸಂಪಾದಿಸುವುದಕ್ಕೆ ತಮ್ಮ ಮಾತೃಧರ್ಮದ ಬೇರುಗಳನ್ನು ಕತ್ತರಿಸಿಕೊಳ್ಳಬೇಕಾಗಿಲ್ಲ ಎಂಬ ಆಶೋದಯವನ್ನುಂಟುಮಾಡಿದೆ. ಇನ್ನೊಂದೆಡೆಯಲ್ಲಿ, ಸವರ್ಣೀಯ ಹಿಂದೂಗಳಲ್ಲಿ ಹರಿಜನ ಸಮಸ್ಯೆಯ ತುರ್ತನ್ನು ಅದು ತೀವ್ರವಾಗಿ ಬಿಂಬಿಸುತ್ತಿದೆ. ಈ ದೀನ ದಲಿತರನ್ನು ಅಲಕ್ಷಿಸುತ್ತಲೇ ಇದ್ದರೆ ಇಡೀ ಹಿಂದೂ ಸಮಾಜವೇ ಹೇಗೆ ವಿಸ್ತರಿಸಲಾರದ ಅಪಾಯಕ್ಕೆ ಗುರಿಯಾದೀತೆಂಬುದನ್ನು ಸವರ್ಣೀಯರ ಗಮನಕ್ಕೆ ಅದು ತಂದು ಕೊಡುತ್ತಿದೆ. (೯-೨)

ಶ್ರೀ ವಿಶ್ವೇಶತೀರ್ಥರು ಹಿಂದೂ ಸವರ್ಣೀಯರ ಹೃದಯ ಪರಿವರ್ತನೆ ಮಾಡಬಲ್ಲರೆಂಬ ನಂಬಿಕೆ ಡಾ। ಯು. ಆರ್. ಅನಂತಮೂರ್ತಿಯವರಿಗಿದೆ – ''ಈಗ ನಾವು ಬದಲಾಗಬೇಕಾದ್ದು ಹರಿಜನರ ವಿಮೋಚನೆಗಾಗಿ ಎಂದು ತಿಳಿಯುವುದು ತಪ್ಪಾಗುತ್ತದೆ. ನಮ್ಮ ದೃಷ್ಟಿಯಲ್ಲಾಗಬೇಕಾದ ಬದಲಾವಣೆ ನಮ್ಮ ವಿಮೋಚನೆಗಾಗಿಯೇ. ಹರಿಜನರನ್ನು ಅಸ್ಪೃಶ್ಯರೆಂದು ದೂರವಿಟ್ಟು ನಾವು ಮಹಾಪಾಪಿಗಳಾಗಿದ್ದೇವೆ. ಈ ಪಾಪವನ್ನು ನಾವು ತೊಳೆದುಕೊಳ್ಳಬೇಕಾಗಿದೆ. ಇಡೀ ನಮ್ಮ ದೇಶಕ್ಕೆ ಈ ವಿಷಯದಲ್ಲಿ ನೀವು ಮಾರ್ಗದರ್ಶಕರಾಗಬೇಕು. ಬ್ರಾಹ್ಮಣರು ಮಾತ್ರವಲ್ಲದೆ, ಉಳಿದ ಹಿಂದೂ ಸವರ್ಣೀಯರ ಹೃದಯ ಪರಿವರ್ತನೆಯನ್ನು ನೀವು ಮಾಡಬೇಕು.'' (೬-೩)

ಮಠಗಳು ಒಂದು ಜಾತಿಯವರಿಗೆ ಸಂಬಂಧಪಟ್ಟವುಗಳಲ್ಲ, ಎಲ್ಲ ಹಿಂದುಗಳಿಗೆ ಸಂಬಂಧಿಸಿದ ಜವಾಬ್ದಾರಿ ಅವುಗಳಿಗಿದೆ ಎಂದು ಶ್ರೀ ವಿಶ್ವೇಶತೀರ್ಥರು ಪ್ರತಿಪಾದಿಸುತ್ತಾರೆ. ಈ ಬಗ್ಗೆ ಸಂಪ್ರದಾಯವಾದಿಗಳಿಂದ ಬಂದ ಆಕ್ಷೇಪಗಳಿಗೆ ಅವರು ಹೀಗೆ ಉತ್ತರಿಸಿದ್ದಾರೆ - ''ಜಗತ್ತಿನ ಜನರ ಕಲ್ಯಾಣಕ್ಕಾಗಿ ತಮ್ಮ ಸಿದ್ಧಾಂತವನ್ನು ಸಾರಿದ ಜಗದ್ಗುರು ಮಧ್ವಾಚಾರ್ಯರ ಪೀಠವು ಕೇವಲ ಒಂದು ಕೋಮಿನ ಪೀಠವಾಗಿರಲು ಹೇಗೆ ಸಾಧ್ಯ ? ಶ್ರೀ ಮಧ್ವಾಚಾರ್ಯರು ಆದೇಶಿಸಿದ ತತ್ತ್ವ ಮತ್ತು ನಿಯಮಗಳಿಗೆ ಅನುಗುಣವಾಗಿ ನಡೆಯುವಾಗ ಸಂಪ್ರದಾಯದ

ಮೌಲ್ಯ ಮತ್ತು ಸಾರ್ವಜನಿಕರ ಸಂಬಂಧ ಇವೆರಡನ್ನು ಸಮನ್ವಯಗೊಳಿಸಲು ಸಾಧ್ಯವೆಂದು ನನ್ನ ದೃಢನಂಬಿಕೆಯಾಗಿದೆ.'' (೯-೨) ''ಮಠಾಧಿಪತಿಗಳು, ಏನೂ ಸಾರ್ವಜನಿಕ ಕಾರ್ಯ ಮಾಡುವುದಿಲ್ಲ ಎಂದು ಒಂದು ಕಾಲದಲ್ಲಿ ಆರೋಪ ಇತ್ತು. ಈಗ, 'ಅವರು ಮಾಡುವುದು ಅತಿರೇಕವಾಯಿತು. ತಮ್ಮ ಪೀಠದ ಅಂತಸ್ತನ್ನು ಕೂಡಾ ಬಿಟ್ಟು ಮುಂದುವರಿಯುತ್ತಾ ಇದ್ದಾರೆ' ಎಂಬ ಮಾತನ್ನೂ ಕೇಳುತ್ತೇವೆ. ಆದರೆ ನಾನು ಇಷ್ಟರವರೆಗೆ ನಡೆಸಿಕೊಂಡು ಬಂದ ರೀತಿ ಈ ಎರಡರ ಸಮನ್ವಯದ ಹಾದಿಯಲ್ಲಿ.'' (೯-೧).

'ಒಂದು ಹೆಜ್ಜೆ ಮುಂದೆ, ಇಷ್ಟು ಸಾಕು ನನಗೆ' ಎಂದು ಗಾಂಧೀಜಿ ಹೇಳುತ್ತಿದ್ದರು. ಶ್ರೀ ವಿಶ್ವೇಶತೀರ್ಥರು ಗಾಂಧೀಜಿಯವರಿಂದ ಪ್ರೇರಣೆ ಪಡೆದರು. ಆದರೆ ಸಂಪ್ರದಾಯಬದ್ಧ ಮಠವೊಂದರ ಪೀಠಾಧಿಪತಿಯಾಗಿ ತನ್ನ ಇತಿ-ಮಿತಿಗಳೇನು ಎಂಬ ಅರಿವು ಶ್ರೀ ವಿಶ್ವೇಶ ತೀರ್ಥರಿಗಿದೆ. ಉಡುಪಿಯ ಸಾರ್ವಜನಿಕ ಸಭೆಯೊಂದರಲ್ಲಿ ದಲಿತ ಕವಿ ಸಿದ್ಧಲಿಂಗಯ್ಯನವರು ಕೇಳಿದ ಪ್ರಶ್ನೆಗೆ ಶ್ರೀ ವಿಶ್ವೇಶತೀರ್ಥರು ನೀಡಿದ ಉತ್ತರವನ್ನು ಗೌರೀಶ ಕಾಯ್ಕಿಣಿಯವರು ತನ್ನ ಲೇಖನದಲ್ಲಿ ದಾಖಲಿಸಿದ್ದಾರೆ – ''ನಾವು ವೈಯಕ್ತಿಕವಾಗಿ ಯಾವುದೇ ಭೇದ - ಭಾವವನ್ನು ನಂಬುವುದಿಲ್ಲ. ಇವು ಅನ್ಯಾಯಪೂರಿತವಾದ ಅನೈತಿಕ ಭೇದಗಳು. ಇವುಗಳನ್ನು ನಂಬುವುದೆಂದರೆ ದೇವರು ಮತ್ತು ದೇವವಾಣಿಯ ವಿರುದ್ಧ ಪಾಪ ಮಾಡಿದಂತೆ. ಮೇಲ್ವರ್ಗ ಕೆಳವರ್ಗ, ಉಚ್ಚ-ನೀಚ ಎಂಬ ಜಾತಿ ಮತಗಳು ತೊಲಗಬೇಕು. ಅವು ನಮ್ಮ ಸನಾತನ ಧರ್ಮದ ಅವಿಭಾಜ್ಯ ಅಂಗಗಳಲ್ಲ. ಮಧ್ಯಯುಗದಲ್ಲಿ ತಲೆಎತ್ತಿ ನಿಂತ ಈ ಜಾತಿ-ಮತಗಳು ಆಧುನಿಕ ಯುಗದಲ್ಲಿ ತಮ್ಮಿಂದ ತಾವೇ ಮಾಯವಾಗುವುವು. ನಾವೀಗ ಮಾಡುತ್ತಿರುವುದು ಅತ್ಯಲ್ಪವೆಂಬ ಅರಿವು ನಮಗಿದೆ. ನಮಗೂ ಸಹ ಇತಿ-ಮಿತಿಗಳುಂಟು. ನಾವು ಸೈನ್ಯದ ಕಪ್ತಾನರು. ನಮ್ಮ ಸೈನ್ಯವನ್ನು ಬಿಟ್ಟು ಬಹಳಷ್ಟು ಹಿಂದೆ, ಬಹಳಷ್ಟು ಮುಂದೆ ಹೋಗಲಾರೆವು. ನಾವು ಬಹಳ ಮುಂದೆ ಹೋದರೆ ಶತ್ರುಗಳು ನಮ್ಮನ್ನು ಬಂಧಿಸುವರು ಅಥವಾ ನಾವೇ ಸಮರಾಂಗಣವನ್ನು ತ್ಯಜಿಸಿದೆವೆಂದು ನಮ್ಮ ಸೈನ್ಯವೇ ನಮ್ಮನ್ನು ಕೊಂದೀತು. ನಾವು ಆದಷ್ಟು ಕಾಳಜಿಯಿಂದಿರಬೇಕು. ನಾವು ಸ್ವಲ್ಪ ದೂರ ಹೋಗಬಹುದೇ ವಿನಾ ಬಹಳಷ್ಟು ದೂರ ಹೋಗಲು ಸಾಧ್ಯವಿಲ್ಲ. ನಮ್ಮ ಸೈನ್ಯವನ್ನು ನಮ್ಮೊಂದಿಗೆ ನಾವು ತೆಗೆದುಕೊಂಡು ಹೋಗಬೇಕು.'' (೬-೧)

ಕರ್ನಾಟಕ ಸರಕಾರದ ಭೂಸುಧಾರಣೆಯ ಶಾಸನವನ್ನು ಶ್ರೀ ವಿಶ್ವೇಶತೀರ್ಥರು ಬೆಂಬಲಿಸಿದರು. ಶ್ರೀ ಕಡಿದಾಳ್ ಮಂಜಪ್ಪನವರನ್ನು ಭೇಟಿಯಾಗಿ ತನ್ನ ಅಭಿಪ್ರಾಯ ತಿಳಿಸಿದರು. (೮-೮). ದಲಿತರಿಗಾಗಿ ಇರುವ ಮೀಸಲಾತಿಯನ್ನು ಸಮರ್ಥಿಸಿದ ಶ್ರೀ ವಿಶ್ವೇಶತೀರ್ಥರು ಮೀಸಲಾತಿಯ ವಿರೋಧವನ್ನು ವಿರೋಧಿಸಿದರು. (೯-೨) ಕೈಗಾ ಹೋರಾಟದಂಥ ಪರಿಸರ ರಕ್ಷಣೆಯ ಚಳವಳಿಯಲ್ಲಿ ಅವರು ಸಕ್ರಿಯ ಪಾತ್ರವಹಿಸಿದ್ದಾರೆ. ಬರಗಾಲಪೀಡಿತರಿಗೆ ಪೇಜಾವರ ಶ್ರೀಗಳು ನೀಡಿದ ನೆರವಿನ ವಿವರಗಳು ಬಿ. ಆರ್. ನಾಡಗೌಡ (೬-೧೧) ಎ. ಹರಿದಾಸ ಭಟ್ಟ (೬-೧೫) ಹಾಗೂ ವಾದಿರಾಜ ಪಂಚಮುಖಿಯವರ (೬-೧೨) ಲೇಖನಗಳಲ್ಲಿವೆ.

ಪೀಠಾಧಿಪತಿಗಳಾಗಿ ಪೇಜಾವರ ಸ್ವಾಮೀಜಿಯವರು ಮಾಡಿದ ಇನ್ನೂ ಕೆಲವು ಸುಧಾರಣೆಗಳನ್ನು ಸಮಾಜಶಾಸ್ತ್ರಜ್ಞ ಪ್ರೊ| ಪಿ. ಶ್ರೀಪತಿ ತಂತ್ರಿಯವರು ತನ್ನ ಲೇಖನದಲ್ಲಿ ಪ್ರಸ್ತಾವಿಸಿದ್ದಾರೆ (೯-೧೪) ಸಂಪ್ರದಾಯವನ್ನು ಮುರಿದು, ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯತೀರ್ಥರನ್ನು ಪಲಿಮಾರುಮಠದ ಪೀಠಾಧಿಪತಿಯಾಗಿ ನೇಮಿಸುವುದರಲ್ಲಿ

ಶ್ರೀ ವಿಶ್ವೇಶತೀರ್ಥರು ಮಹತ್ವದ ಪಾತ್ರ ವಹಿಸಿದರು. (ವಿವರಗಳಿಗಾಗಿ ನೋಡಿ – ಸಂಗೊಳ್ಳಿ, ಎನ್.ಎಸ್. – 'ಉಡುಪಿ ಶ್ರೀಕೃಷ್ಣ ಮಠದ ಖಟ್ಲೆ, ತೀರ್ಪು, ಗದಗ, ೧೯೮೨) ಬಾಲಸನ್ಯಾಸದ ಕಟ್ಟುನಿಟ್ಟಿನ ಸಂಪ್ರದಾಯವನ್ನು ನಾಜೂಕಾಗಿ ಸಡಿಲಿಸಿ ಯೌವನದ ಬಳಿಕವೇ ಸನ್ಯಾಸದೀಕ್ಷೆ ನೀಡುವ ಕ್ರಮವನ್ನು ಆರಂಭಿಸಿದರು. ಶೃಂಗೇರಿ ಸ್ವಾಮಿಗಳನ್ನು, ವೀರಶೈವ ಪೀಠಾಧಿಪತಿಗಳನ್ನು ತನ್ನ ಸೌಹಾರ್ದತೆಯ ಕಕ್ಷೆಯೊಳಗೆ ಸ್ವಾಗತಿಸಿದರು. ಇದು "ಹಿಂದೂ ಧರ್ಮದ ಅನೇಕತೆಯಲ್ಲಿ ಏಕತೆಯನ್ನು ಸಾಧಿಸಲು ಪೀಠಾಧಿಪತಿಗಳ ಮಟ್ಟದಲ್ಲಿ ಇಟ್ಟ ಮೊದಲ ಹೆಜ್ಜೆ"ಯಾಗಿತ್ತು. (೬-೧೪) ತನ್ನ ಪಾಠ-ಪ್ರವಚನ, ಬರವಣಿಗೆ, ಸಂಸ್ಥೆಗಳ ಸ್ಥಾಪನೆ-ಚಾಲನೆ, ಸಭೆ ಸಮಾರಂಭಗಳ ಆಯೋಜನೆ, ಪಂಡಿತರ ಪೋಷಣೆ-ಪ್ರೋತ್ಸಾಹ, ಪ್ರಕಟಣೆ-ಪ್ರಕಾಶನಗಳ ಮೂಲಕ ಮಾಧ್ವ ಸಿದ್ಧಾಂತಕ್ಕೆ ಶ್ರೀ ವಿಶ್ವೇಶತೀರ್ಥರು ನೀಡಿರುವ ಕೊಡುಗೆಯನ್ನು ಸಗ್ರಿ, ರಾಘವೇಂದ್ರ ಉಪಾಧ್ಯಾಯರು ಸಮೀಕ್ಷಿಸಿದ್ದಾರೆ. (೬-೯).

'ಪ್ರಗತಿಶೀಲ ಸಮಾಜ ಸುಧಾರಕ'

ರಾಮಜನ್ಮಭೂಮಿ ಪ್ರಕರಣದಲ್ಲಿ ತನ್ನ ಶಾಂತಿ ಪ್ರಯತ್ನಗಳು ವಿಫಲವಾದುದನ್ನು ಶ್ರೀ ವಿಶ್ವೇಶತೀರ್ಥರು ತನ್ನ ಆತ್ಮಕಥನದಲ್ಲಿ ಹೀಗೆ ವಿವರಿಸಿದ್ದಾರೆ– "ರಾಮಜನ್ಮಭೂಮಿಯನ್ನು ಸಂತರಿಗೆ ಒಪ್ಪಿಸಬೇಕು. ಅಲ್ಲಿದ್ದ ಮಸೀದಿಯನ್ನು ಒಡೆಯದೆ ಹಾಗೆಯೇ ಉಳಿಸಿಕೊಂಡು ದೇವಸ್ಥಾನದ ರೂಪು ಬರುವಂತೆ ಕೆಲವೊಂದು ಬದಲಾವಣೆಗಳನ್ನು ಮಾತ್ರ ಮಾಡುವುದು. ಇದು ಕಾಂಚಿ ಶಂಕರಾಚಾರ್ಯರೂ ನಾವೂ ಆಲೋಚಿಸಿ ರೂಪಿಸಿದ ಸೂತ್ರವಾಗಿತ್ತು. ಮಸೀದಿಯನ್ನು ಒಡೆಯದಿರುವುದರಿಂದ ಮುಸಲ್ಮಾನರ ಮನಸ್ಸಿಗೂ ಆಘಾತವಾಗುವುದಿಲ್ಲ. ಅವರನ್ನೂ ಇದಕ್ಕೆ ಒಪ್ಪಿಸಬಹುದೆಂದು ಅನೇಕ ರಾಜಕಾರಣಿಗಳ ಅಭಿಪ್ರಾಯವಾಗಿತ್ತು." "ಅನಂತರದಲ್ಲಿ ವಿಶ್ವ ಹಿಂದೂ ಪರಿಷತ್ತಿನ ಪ್ರಮುಖ ಹಿಂದು ಮುಸ್ಲಿಂ ಸಂತರ ವಿಚಾರವಿನಿಮಯ ಸಭೆಯನ್ನು ಏರ್ಪಡಿಸಲು ಪ್ರಯತ್ನಿಸಿದೆ. ಆಂಧ್ರಭವನದಲ್ಲಿ ಆಂಧ್ರ ರಾಜ್ಯಪಾಲ ಕೃಷ್ಣಕಾಂತಜಿ ಮತ್ತು ಬಿಹಾರದ ರಾಜ್ಯಪಾಲ ಸಲೀಮರ ಉಪಸ್ಥಿತಿಯಲ್ಲಿ ಈ ಸಭೆಯು ನಡೆಯಿತು. ಬಹಳ ಸೌಹಾರ್ದದ ವಾತಾವರಣದಲ್ಲಿಯೇ ಈ ಸಭೆಯು ನಡೆಯಿತು. ನನ್ನ ಜೊತೆಗೆ ವಿಶ್ವಹಿಂದೂ ಪ್ರಮುಖ ಸಂತರಾದ ಸತ್ಯಮಿತ್ರಾನಂದಜಿ, ಸ್ವಾಮೀ ಚಿನ್ಮಯಾನಂದ ಮುಂತಾದವರೂ ಭಾಗವಹಿಸಿದ್ದರು. ಲಖನೋದ ಅಲಿಮಿಯಾನ್ ಮುಂತಾದ ರಾಷ್ಟ್ರದ ಪ್ರಮುಖ ಮುಸ್ಲಿಂ ಸಂತರು ಬಂದಿದ್ದರು. ನಾವು ಸಂನ್ಯಾಸಿಗಳು, ಭಿಕ್ಷೆ ಬೇಡುವುದು ಧರ್ಮ, ರಾಮಜನ್ಮಭೂಮಿಯ ಜಾಗದಲ್ಲಿರುವ ಬಾಬ್ರಿ ಮಸೀದಿಯನ್ನು ನಮಗೆ ಬಿಟ್ಟುಕೊಡಿ ಎಂದು ಇಡೀ ಮುಸ್ಲಿಂ ಸಮಾಜದಲ್ಲಿ ನಾವು ಭಿಕ್ಷೆಯನ್ನು ಕೇಳುತ್ತೇವೆಂದು ಹಿಂದೂ ಸಂತರು ತಮ್ಮ ಬೇಡಿಕೆಯನ್ನು ಮುಂದಿಟ್ಟರು. ಮುಸ್ಲಿಂ ಸಂತರಿಂದ ಈ ಬಗ್ಗೆ ಒಳ್ಳೆಯ ಪ್ರತಿಕ್ರಿಯೆಯೇ ಬಂದಿತು. ಅವರು ಈ ಬೇಡಿಕೆಯನ್ನು ನಿರಾಕರಿಸಲಿಲ್ಲ. ಮುಸಲ್ಮಾನರಿಗೆ ಆ ಪ್ರದೇಶದಲ್ಲಿ ಯಾವುದಾದರೂ ಒಂದು ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ ಕೊಡುವಿರಾ ? ಎಂದು ಮುಸ್ಲಿಂ ಸಂತರು ನಮ್ಮಲ್ಲಿ ಪ್ರಶ್ನಿಸಿದರು. ಅವಕಾಶ ಕೊಡಲು ನಾವು ಸಂತೋಷದಿಂದ ಒಪ್ಪಿದೆವು. ವಿವಾದಿತ ಪ್ರದೇಶದಲ್ಲಿ ಕರಸೇವೆ ಕಾರ್ಯಕ್ರಮವನ್ನು ಮೊದಲು ಸ್ಥಗಿತಗೊಳಿಸುವಂತೆ ಬಿಹಾರದ ರಾಜ್ಯಪಾಲ ಸಲೀಮರು ಸೂಚಿಸಿದರು. ನಮ್ಮ ಬೇಡಿಕೆಯನ್ನು ಮುಸ್ಲಿಂ ಸಂತರು ಸ್ವೀಕರಿಸಿ ವಿವಾದವನ್ನು

ಹಿಂತೆಗೆದುಕೊಂಡರೆ ಅದು ವಿವಾದಿತ ಪ್ರದೇಶವೇ ಆಗಲಾರದು. ಆದುದರಿಂದ ಕರಸೇವೆಯನ್ನು ನಿಲ್ಲಿಸುವ ಅವಶ್ಯಕತೆಯಿಲ್ಲವೆಂದು ನಾನು ಪ್ರತಿವಾದಿಸಿದೆ. ಕೊನೆಗೆ ತಾತ್ವಿಕವಾಗಿ ಅವರು ನಮ್ಮ ಬೇಡಿಕೆಯನ್ನು ಸ್ವೀಕರಿಸಿದರು. ಆದರೆ ಮುಸ್ಲಿಂ ಸಮಾಜವು ಇದನ್ನು ಒಪ್ಪುವಂತೆ ಪೂರ್ವಸಿದ್ಧತೆಯನ್ನು ಮಾಡಬೇಕಾಗಿದೆ. ಆದ್ದರಿಂದ ಕಾಲಾವಕಾಶ ಬೇಕೆಂದು ಬಯಸಿದರು. ಈ ವಿವಾದವನ್ನು ಬಗೆಹರಿಸಲು ಹಿಂದೂ-ಮುಸ್ಲಿಂ ಸಂತರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು. ಅಷ್ಟರಲ್ಲಿ ಬಿಹಾರಿನಲ್ಲಿ ಅಡ್ವಾನಿ– ರಥಯಾತ್ರೆಯನ್ನು ತಡೆದು ಅಡ್ವಾನಿಯವರ ಬಂಧನ, ವಿ.ಪಿ.ಸಿಂಗ್ ಸರಕಾರದ ಪತನ ಮುಂತಾದ ಘಟನೆಗಳು ಸಂಭವಿಸಿದ್ದರಿಂದ ಆ ಸಮಿತಿಯ ಸಮಾವೇಶವೇ ನಡೆಯಲಿಲ್ಲ. ಹೀಗಾಗಿ ರಾಮಜನ್ಮಭೂಮಿಯ ಬಗ್ಗೆ ನಮ್ಮ ಶಾಂತಿ ಪ್ರಯತ್ನವು ವಿಫಲವಾಯಿತು.'' (೨-೧)

ರಾಜಾರಾಮ ತೋಳ್ಪಾಡಿಯವರು ಶ್ರೀ ವಿಶ್ವೇಶತೀರ್ಥರ ರಾಜಕೀಯ ಒಲವುಗಳನ್ನು ಕುರಿತ ಲೇಖನದಲ್ಲಿ ಮೂರು ಅಂಶಗಳನ್ನು ಗುರುತಿಸಿದ್ದಾರೆ. ಒಂದು-ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಬಗೆಗಿನ ಅವರ ಅಚಲವಾದ ವಿಶ್ವಾಸ. ಎರಡು-ಗಾಂಧೀಜಿಯವರ ವಿಚಾರಗಳ ಬಗೆಗಿನ ಅವರ ಅಪರಿಮಿತವಾದ ಗೌರವ. ಮೂರು-ಸಮಾಜವಾದದ ಕುರಿತು ವಿಶೇಷವಾಗಿ ಜಯಪ್ರಕಾಶ್ ನಾರಾಯಣ್ ಪ್ರತಿಪಾದಿಸಿದ ವಿಚಾರಗಳ ಕುರಿತು ಅವರ ಕಾಳಜಿ. ಶ್ರೀ ವಿಶ್ವೇಶತೀರ್ಥರು ಪ್ರತಿಚುನಾವಣೆಯಲ್ಲೂ ಮತದಾನ ಮಾಡಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರ ಕಾಲದ ತುರ್ತು ಪರಿಸ್ಥಿತಿಯನ್ನು ಪ್ರತಿಭಟಿಸಿ ಅವರು ಬರೆದ ಪತ್ರ ಈ ಗ್ರಂಥದಲ್ಲಿದೆ (೭-೧).

ಶ್ರೀ ವಿಶ್ವೇಶತೀರ್ಥರನ್ನು, ಗಾಂಧೀಜಿಯ ಅಹಿಂಸೆಯ ಪರಿಕಲ್ಪನೆಯನ್ನು ಕೆಲವು ತಿದ್ದುಪಡಿಗಳೊಂದಿಗೆ ಒಂದು ಪರಿಷ್ಕೃತ ರೂಪದಲ್ಲಿ ಒಪ್ಪಿಕೊಳ್ಳುವ ಓರ್ವ 'ಮೃದು ಹಿಂದುತ್ವವಾದಿ' ಎಂದು ಪರಿಗಣಿಸುವ ರಾಜಾರಾಮ ತೋಳ್ಪಾಡಿಯವರು, ''ಜಾತೀಯತೆ ಪ್ರತಿನಿಧಿಸುವ ಸಂಕುಚಿತ ದೃಷ್ಟಿಯನ್ನು ತೊಲಗಿಸುವ ನೆಲೆಯಲ್ಲಿ ಅವರು ನಡೆಸಿದ ಪ್ರಯತ್ನಗಳು, ದಲಿತರು ಹಾಗೂ ಸಮಾಜದ ಇತರ ಹಿಂದುಳಿದ ವರ್ಗಗಳ ಕುರಿತಂತೆ ಅವರ ಔದಾರ್ಯಪೂರ್ಣವಾದ ನಿಲುವು, ಸಾಮಾಜಿಕ ಅಸಮತೆ ಹಾಗೂ ಅನ್ಯಾಯಗಳ ಕುರಿತು ಅವರ ಪ್ರತಿರೋಧ, ಸ್ವಾಮೀಜಿಯವರನ್ನು ಒಬ್ಬ ಪ್ರಗತಿಶೀಲ ಸಮಾಜ ಸುಧಾರಕನನ್ನಾಗಿ ಗುರುತಿಸಲು ನಮ್ಮನ್ನು ಒತ್ತಾಯಿಸುತ್ತದೆ'' ಎನ್ನುತ್ತಾರೆ. (೭-೨)

ಶಿಷ್ಯ-ವಾತ್ಸಲ್ಯ

ಹದಿನೇಳು ಸುಧಾ ಮಂಗಲೋತ್ಸವಗಳನ್ನು ನಡೆಸಿರುವ, ಬೆಂಗಳೂರಿನ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ಕುಲಪತಿಗಳಾಗಿರುವ ಶ್ರೀ ವಿಶ್ವೇಶತೀರ್ಥರು ಗಹನವಾದ ತಾತ್ವಿಕ ವಿಷಯಗಳನ್ನು ಸರಳವಾಗಿ ವಿವರಿಸಬಲ್ಲ ಬೋಧಕರಾಗಿ ಪ್ರಸಿದ್ಧರು. ಅವರ ಬೋಧನ ಕ್ರಮ ಹಾಗೂ ಶಿಷ್ಯವಾತ್ಸಲ್ಯಗಳನ್ನು ಕುರಿತು ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಶ್ರೀ ವಿದ್ಯಾಪ್ರಸನ್ನತೀರ್ಥ ಶ್ರೀಪಾದರು, ಎ. ವಿ. ನಾಗಸಂಪಿಗೆ, ಸಗ್ರಿ ರಾಘವೇಂದ್ರ ಉಪಾಧ್ಯಾಯ, ಡಾ! ರಾಮಕೃಷ್ಣ ಜೋಶಿ, ಕೆ. ವಿಠ್ಠಲೋಪಾಧ್ಯಾಯ, ಅರುಣಾಚಲ ಹೆಬ್ಬಾರ್ ಹಾಗೂ ಡಿ. ಸುದರ್ಶನ ಜೋಯಿಸರು ಬರೆದಿರುವ ಲೇಖನಗಳು ಈ ಗ್ರಂಥದ ಎಂಟನೆಯ ಭಾಗದಲ್ಲಿವೆ. ಉಡುಪಿಯ

ಸಂಸ್ಕೃತ ಕಾಲೇಜಿನಲ್ಲಿ ಶ್ರೀ ವಿಶ್ವೇಶತೀರ್ಥರು ಮಾಡಿದ ಜಗನ್ನಾಥನ ಶೃಂಗಾರರಸ ಪ್ರಧಾನವಾದ 'ರಸಗಂಗಾಧರ' ಪಾಠ ಕೇಳಿದ್ದನ್ನು ಡಿ. ಸುದರ್ಶನ ಜೋಯಿಸ್ ನೆನಪಿಸಿಕೊಂಡಿದ್ದಾರೆ. (೮-೮) ಪೂರ್ಣಪ್ರಜ್ಞ ವಿದ್ಯಾಪೀಠದ ಒಬ್ಬ ವಿದ್ಯಾರ್ಥಿ ಪಾಠ-ಪ್ರವಚನಗಳಲ್ಲಿ ಅನಾಸಕ್ತನಾದ. ಅವನನ್ನು ತಿದ್ದಲು ಸಾಧ್ಯವಾಗದೆ ಪ್ರಾಧ್ಯಾಪಕರು ಸೋಲೊಪ್ಪಿಕೊಂಡರು. ಶ್ರೀ ವಿಶ್ವೇಶತೀರ್ಥರು ಅವನನ್ನು ತನ್ನ ಜತೆಯಲ್ಲಿರಿಸಿಕೊಂಡು ಸರಿದಾರಿಗೆ ತರಲು ಪ್ರಯತ್ನಿಸಿ ಕೊನೆಗೆ ಸೋಲೊಪ್ಪಿಕೊಂಡರು. (೮-೫) ಮಾತೃ ವಾತ್ಸಲ್ಯದಿಂದ ತುಂಬಿದ ಪೇಜಾವರ ಶ್ರೀಗಳ ಶಿಷ್ಯ-ವಾತ್ಸಲ್ಯವನ್ನು ಕುರಿತು ಹೆಚ್ಚಿನವರು ಪ್ರಸ್ತಾವಿಸಿದ್ದಾರೆ. ಒಮ್ಮೆ ಮಠದಲ್ಲಿ ಆರ್ಥಿಕ ದುಸ್ಥಿತಿ ಇದ್ದಾಗ ಶ್ರೀ ವಿಶ್ವೇಶತೀರ್ಥರು ಮುಸುಂಬಿ ರಸ ಕುಡಿಯಲು ನಿರಾಕರಿಸಿ, 'ಮುಸುಂಬಿ ತರಬೇಡಿ, ಆ ಹಣವನ್ನು ಮಠದ ವಿದ್ಯಾರ್ಥಿಗಳ ಊಟದ ಖರ್ಚಿಗೆ ತೆಗೆದಿರಿಸಿ' ಎಂದರಂತೆ. (೮-೬) ತನ್ನ ಸಂಚಾರದ ಅವಧಿಯಲ್ಲೂ ಶ್ರೀ ವಿಶ್ವೇಶತೀರ್ಥರು ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾರೆ. (೬-೯)

'ಸೀತಾಯಣ'ದ ಪೋಲಂಕಿ ರಾಮಮೂರ್ತಿಯವರೊಡನೆ ಶ್ರೀ ವಿಶ್ವೇಶತೀರ್ಥರು ನಡೆಸಿದ ಸಂವಾದದ ವಿವರಗಳು ಶ್ರೀ ವಿಶ್ವಪ್ರಸನ್ನತೀರ್ಥರ (೮-೧) ಹಾಗೂ ಪ್ರೊ। ಶ್ರೀಪತಿ ತಂತ್ರಿಗಳ (೯-೧೪) ಲೇಖನಗಳಲ್ಲಿವೆ. ಸಂಸ್ಕೃತ ಗೊತ್ತಿಲ್ಲದೆ ಭಾಷಾಂತರದ ಮೂಲಕ ವಾಲ್ಮೀಕಿ ರಾಮಾಯಣವನ್ನು ಅರ್ಥೈಸುವಾಗ ಆಗಿರುವ ಪ್ರಮಾದಗಳನ್ನು ಶ್ರೀ ವಿಶ್ವೇಶತೀರ್ಥರು ಪೋಲಂಕಿಯವರಿಗೆ ವಿವರಿಸಿದರು. ಪೋಲಂಕಿಯವರು ತನ್ನ ತಪ್ಪುಗಳನ್ನು ಒಪ್ಪಿಕೊಂಡರು.

ಲೋಕಾಂತಪ್ರಿಯ

'ಪೇಜಾವರ ಪ್ರಶಸ್ತಿ'ಯ ಒಂಬತ್ತನೆಯ ಭಾಗದಲ್ಲಿ ಶ್ರೀ ವಿಶ್ವೇಶತೀರ್ಥರ ಐದು ಸಂದರ್ಶನಗಳಿವೆ. ಲಕ್ಷ್ಮಣರೇಖೆಯನ್ನು ದಾಟಿದ ಪೀಠಾಧಿಪತಿಯಾಗಿ ಶ್ರೀ ವಿಶ್ವೇಶತೀರ್ಥರ ಎದುರಿಸಿದ ಪ್ರಶ್ನೆಗಳು, ಅವುಗಳಿಗೆ ನೀಡಿರುವ ಉತ್ತರಗಳು ಎ. ಹರಿದಾಸ ಭಟ್ಟ ಹಾಗೂ ಗೋಪಾಡಿ ರಾಘವೇಂದ್ರ, ಭಟ್ಟರ ಸಂದರ್ಶನಗಳಲ್ಲಿವೆ. ಧಾರ್ಮಿಕ, ಸಾಮಾಜಿಕ ಆಚರಣೆಗಳಲ್ಲಿರುವ ಲಿಂಗಾಧಾರಿತ ಅಸಮಾನತೆಯನ್ನು ಕುರಿತ ಶ್ರೀ ವಿಶ್ವೇಶತೀರ್ಥರ ಅಭಿಪ್ರಾಯಗಳು ಡಾ। (ಶ್ರೀಮತಿ) ಶ್ರೀರಾಮ ಹೆರ್ಲೆಕರ ಅವರ ಲೇಖನದಲ್ಲಿವೆ. (೯-೨) ಬಾಲಸನ್ಯಾಸ, ಶಿಕ್ಷಣದಲ್ಲಿ ಕನ್ನಡ-ಸಂಸ್ಕೃತಗಳ ಸ್ಥಾನ-ಮಾನ, ಮೀಸಲಾತಿ, ತುರ್ತುಪರಿಸ್ಥಿತಿ ಈ ವಿಷಯಗಳನ್ನು ಕುರಿತ ಪೇಜಾವರ ಸ್ವಾಮೀಜಿಯವರ ಅಭಿಪ್ರಾಯಗಳು ಪ್ರೊ। ಕು.ಶಿ. ಹರಿದಾಸ ಭಟ್ಟರಿಗೆ ನೀಡಿದ ಸಂದರ್ಶನದಲ್ಲಿವೆ. (೯-೧)

'ನಿಮಗೆ ಏಕಾಂತ ಇಷ್ಟವೋ ಅಥವಾ ಲೋಕಾಂತವೋ ?' ಎಂಬ ಪ್ರಶ್ನೆಗೆ ಶ್ರೀ ವಿಶ್ವೇಶತೀರ್ಥರು ಹೀಗೆ ಉತ್ತರ ನೀಡಿದ್ದಾರೆ- ''ಇದು ಎರಡೂ ಬೇಕಾಗುತ್ತದೆ. ಕೆಲವೊಮ್ಮೆ ಚಿಂತನ-ಮಂಥನ ಬಯಸುವಾಗ ಎಲ್ಲರಿಂದ ಪ್ರತ್ಯೇಕವಾಗಿ ಇರಬೇಕು ಅಂಥ ನನಗೆ ಅನ್ನಿಸುತ್ತದೆ. ಆದರೆ ಬರೀ ಏಕಾಂತವೂ ನನ್ನ ಸ್ವಭಾವಕ್ಕೆ ಒಗ್ಗುವುದಿಲ್ಲ. ಸಮಾಜದ ಮಧ್ಯೆ ಇರುವುದರಿಂದಲೇ ನನಗೆ ಸನ್ಯಾಸಿಯಾಗಿ ಒಳ್ಳೆಯ ರೀತಿಯ ಬದುಕನ್ನು ಬದುಕಲು ಹೆಚ್ಚು ಅನುಕೂಲವಾಗಿದೆಯೆಂದು ನಾನು ಭಾವಿಸುತ್ತೇನೆ.'' (೯-೧)

'ಕೊಟ್ಟ ಕುದುರೆಯನೇರಿ ಗಡಿದಾಟಿದ' ಶ್ರೀ ವಿಶ್ವೇಶತೀರ್ಥರ ಪೂರ್ಣದೃಷ್ಟಿ ಅನಿಕೇತನವಾಗಿ, ವಿಶ್ವವ್ಯಾಪಿಯಾಗುತ್ತದೆ – ''ಅಲ್ಲದೆ ಕೇವಲ ಹಿಂದೂ ಸಮಾಜಕ್ಕೆ, ತತ್ತ್ವಜ್ಞಾನಕ್ಕೆ

ಸೀಮಿತರಾಗದೆ ಪ್ರಪಂಚದ ಮಾನವರಾಗಿ ಕೂಡ ಸ್ಪಂದಿಸಬೇಕು. ಮನುಷ್ಯರಿಗೆ, ಪ್ರಾಣಿಗಳಿಗೆ ಆಗುವ ಆಘಾತಗಳಿಗೆ ಕೂಡ ಸ್ಪಂದಿಸಬೇಕು. ಕೈಗಾ ಚಳವಳಿಯಂತಹ ಚಳವಳಿಯಲ್ಲಿ ನಾವು ತೊಡಗಿದಾಗ ಜನತೆ ನಮ್ಮ ಕಳಕಳಿಯನ್ನು ಅರ್ಥಮಾಡಿಕೊಳ್ಳಬೇಕು.'' (೬-೪)

ಈ ಗ್ರಂಥದ ಯೋಜನೆಯನ್ನು ಸಿದ್ಧಪಡಿಸುವಾಗ ನಾವು ಶ್ರೀ ವಿಶ್ವೇಶತೀರ್ಥರನ್ನು ಭೇಟಿಯಾಗಿ, ಅವರ ಮಾರ್ಗದರ್ಶನದಲ್ಲಿರುವ ಸುಮಾರು ಅರುವತ್ತು ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಸಂಸ್ಥೆಗಳ ಪಟ್ಟಿ ತಯಾರಿಸಿದೆವು. (೧೧-೫) ಆ ಎಲ್ಲ ಸಂಸ್ಥೆಗಳ ಸಂಕ್ಷಿಪ್ತ ಪರಿಚಯವನ್ನು ಈ ಗ್ರಂಥದಲ್ಲಿ ಪ್ರಕಟಿಸಬೇಕೆಂಬ ನಮ್ಮ ಯೋಜನೆ ಯಶಸ್ವಿಯಾಗಲಿಲ್ಲ. ಈ ಗ್ರಂಥ ಪ್ರಕಟಣೆಗಿದ್ದ ಕಾಲಮಿತಿ ಹಾಗೂ ಪೇಜಾವರ ಮಠದ ಸಂಸ್ಥೆಗಳನ್ನು ನೋಡಿಕೊಳ್ಳುವ ಒಂದು ಕೇಂದ್ರೀಕೃತ ವ್ಯವಸ್ಥೆ ಇಲ್ಲದಿರುವುದು ಇದಕ್ಕೆ ಕಾರಣ. ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಮಾರ್ಗದರ್ಶನ ಪಡೆಯುತ್ತಿರುವ ಹದಿನಾಲ್ಕು ಸಂಸ್ಥೆಗಳ ಪರಿಚಯ ಹಾಗೂ ಛಾಯಾಚಿತ್ರಗಳು ಈ ಗ್ರಂಥದ ಹತ್ತನೆಯ ಭಾಗದಲ್ಲಿವೆ. ಅನುಬಂಧದಲ್ಲಿ ಪೇಜಾವರ ಶ್ರೀಗಳ ಜೀವನ-ಸಾಧನೆಗಳಿಗೆ ಸಂಬಂಧಪಟ್ಟ ಹಲವು ಉಪಯುಕ್ತ ಮಾಹಿತಿಗಳಿವೆ.

ಶ್ರೀ ವಿಶ್ವೇಶತೀರ್ಥರ ಸಾಧನೆ, ವೇದಾಂತದ ಜೀವನ ವಿಮುಖ ರೂಪವನ್ನು ಮರೆಮಾಡಿ, ತಗ್ಗಿಸಿ, ಜೀವನಪರವಾದ ರೂಪಕ್ಕೆ ಒತ್ತು ಕೊಟ್ಟು ಬೆಳಗಿಸಿದ ರಾಜಾರಾಮ ಮೋಹನ್ ರಾಯ್, ದಯಾನಂದ ಸರಸ್ವತಿ ಮೊದಲಾದವರ ಕೆಲಸದ ಮುಂದುವರಿಕೆ ಎನ್ನುವ ಡಾ। ಎಂ. ಪ್ರಭಾಕರ ಜೋಶಿಯವರ ಹಾರೈಕೆ, ಈ ಗ್ರಂಥದ ಸಂಪಾದಕರ ಹಾರೈಕೆಯೂ ಹೌದು- ''ಒಂದು ಹೆಜ್ಜೆ ಮುಂದಿಟ್ಟವರು ನಿಶ್ಚಿತವಾಗಿಯೂ ಪ್ರಶಂಸಾರ್ಹರೇ. ಶ್ರೀ ವಿಶ್ವೇಶತೀರ್ಥರಿಗೆ ಇರುವ ಅಸಾಮಾನ್ಯ ಪ್ರಭಾವ, ಸಾಮರ್ಥ್ಯಗಳಿಂದ ಅವರು ಇನ್ನೂ ಸ್ವಲ್ಪ ಮುಂದೆ ಹೋಗಬಹುದಿತ್ತು, ಹೋಗಬೇಕು ಎಂದು ನಿರೀಕ್ಷೆ ಇದ್ದರೆ ಅದು ನ್ಯಾಯವಾದದ್ದು. ಈ ನಿರೀಕ್ಷೆಯನ್ನು ಪೂರೈಸುವ ಹೊಸ ಉಪಕ್ರಮಗಳು ಅವರ ಸನ್ಮಾನ ಷಷ್ಠ್ಯಬ್ದಿಯ ಸಂಕಲ್ಪವಾಗಲಿ.'' (೯-೧೩)

ಶ್ರೀ ವಿಶ್ವೇಶತೀರ್ಥರು, ತುರ್ತುಪರಿಸ್ಥಿತಿಯನ್ನು ಹೇರಿ ಜನರ ಮೂಲಭೂತ ಹಕ್ಕುಗಳನ್ನು ಕಿತ್ತುಕೊಂಡಿದ್ದ ಪ್ರಧಾನಿ ಇಂದಿರಾಗಾಂಧಿಯವರಿಗೆ ಬರೆದ ಪತ್ರದಲ್ಲಿ ಸಂಸ್ಕೃತ ಸುಭಾಷಿತವೊಂದನ್ನು ನೆನಪಿಸಿದ್ದರು-

''ಸುಲಭಾಃ ಪುರುಷಾಃ ರಾಜನ್ ಸತತಂ ಪ್ರಿಯವಾದಿನಃ
ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ''

(ಮುಖದೆದರು ಸಿಹಿಯಾಗಿ ಮಾತನಾಡುವ ಜನ ಹೇರಳವಾಗಿ ಸಿಗುತ್ತಾರೆ. ಆದರೆ, ಕಹಿಯಾದರೂ ವಿಹಿತವಾದುದನ್ನು ಹೇಳುವವರಾಗಲಿ, ಕೇಳುವವರಾಗಲಿ ಸಿಗುವುದು ಕಷ್ಟ.) 'ಪೇಜಾವರ ಪ್ರಶಸ್ತಿ' ಗ್ರಂಥದ ಓದುಗರೂ ಈ ಸುಭಾಷಿತದ ಒಡಲಾಳದ ಆಶಯವನ್ನು ನೆನಪಿಡಬೇಕೆಂದು ನಾವು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

* * *

'ಪೇಜಾವರ ಸ್ವಾಮಿಗಳಿಗೆ ಚಿನ್ನದ ತುಲಾಭಾರ ಮಾಡುವಷ್ಟೇ ಮುಖ್ಯ ಅವರ ವ್ಯಕ್ತಿತ್ವದ ಸಮಗ್ರ ಪರಿಚಯ ನೀಡುವ ಗ್ರಂಥವೊಂದರ ಪ್ರಕಟಣೆ' ಎಂದು ತಿಳಿಸಿದವರು ಧರ್ಮಸ್ಥಳದ ಧರ್ಮಾಧಿಕಾರಿಗಳಾದ, ಶ್ರೀ ವಿಶ್ವೇಶತೀರ್ಥರ ಪೀಠಾರೋಹಣದ ವಜ್ರ ಮಹೋತ್ಸವ ಸಮಿತಿಯ ಕಾರ್ಯಾಧ್ಯಕ್ಷರಾದ ರಾಜರ್ಷಿ ಡಾ। ಡಿ. ವೀರೇಂದ್ರ ಹೆಗ್ಗಡೆಯವರು. ಶ್ರೀ ಹೆಗ್ಗಡೆ

ಯವರ ಕನಸನ್ನು ನಮಗೆ ವಿವರಿಸಿ, ಈ ಕೆಲಸಕ್ಕೆ ನಮ್ಮನ್ನು ತೊಡಗಿಸಿದವರು ಪ್ರೊ। ಕು. ಶಿ. ಹರಿದಾಸ ಭಟ್ಟರು.

ಈ ಗ್ರಂಥದ ಪ್ರಕಾಶಕರು ಬೆಂಗಳೂರಿನ, ಶ್ರೀ ವಿಶ್ವೇಶತೀರ್ಥರ ಪೀಠಾರೋಹಣ ವಜ್ರಮಹೋತ್ಸವ ಸಮಿತಿಯವರು. (ಗೌರವಾಧ್ಯಕ್ಷರು- ನಿವೃತ್ತ ಮುಖ್ಯ ನ್ಯಾಯಾಧೀಶರು ಶ್ರೀ ಎಂ. ಎನ್. ವೆಂಕಟಾಚಲಯ್ಯ, ಉಪಾಧ್ಯಕ್ಷರು – ಶ್ರೀ ಕೆ. ವಿಷ್ಣುಮೂರ್ತಿ ಎರ್ಕಾಡಿತ್ತಾಯ, ಪ್ರೊ। ಕೆ.ಟಿ. ಪಾಂಡುರಂಗಿ, ಶ್ರೀ ಸದಾನಂದ ಎ. ಶೆಟ್ಟಿ, ಶ್ರೀ ಬಿ. ಆರ್. ಶೆಟ್ಟಿ, ಶ್ರೀ ಎನ್. ವಿನಯ ಹೆಗ್ಡೆ, ಶ್ರೀ ಬಿ. ಕೃಷ್ಣ ಭಟ್, ಶ್ರೀ ಕೆ. ಬಲರಾಮ ದಾಸ್, ಶ್ರೀ ಕೆ. ಶಂಕರ ರಾವ್, ಶ್ರೀ ಬಿ. ಗೋವಿಂದ ರಾವ್, ಖಜಾಂಚಿ - ಶ್ರೀ ಎಸ್.ಎಸ್. ಮಡಿ, ಕಾರ್ಯದರ್ಶಿಗಳು: ಶ್ರೀ ಪಿ. ಜೆ. ಬಾಗಿಲ್ತಾಯ, ಪ್ರೊ। ಡಿ. ಪ್ರಹ್ಲಾದಾಚಾರ್ಯ, ಪ್ರೊ। ಎನ್. ವಜ್ರಕುಮಾರ್, ಡಾ। ಎಂ. ಎಸ್. ಆಳ್ವ, ಶ್ರೀ ಕೆ. ನಾರಾಯಣದಾಸ್, ಶ್ರೀ ಶ್ರೀಕಾಂತ ಕೆಮ್ಮೂತ್ತೂರ್, ಶ್ರೀ ಕೆ. ಎಲ್. ರಾಮನಾಥ್ ಭಟ್, ಶ್ರೀ ಯು. ಕೇಶವ ಆಚಾರ್.)

ಈ ಗ್ರಂಥದ ಮುಖಪುಟ ವಿನ್ಯಾಸ ರಚಿಸಿದವರು ಹಿರಿಯ ಕಲಾವಿದ ಶ್ರೀ ರಮೇಶ ರಾವ್, ಉಡುಪಿ.

ಈ ಗ್ರಂಥದ ಸಂಪಾದನೆಯ ಸಂದರ್ಭದಲ್ಲಿ ನಮಗೆ ನೆರವು ನೀಡಿದವರು ಶ್ರೀ ರಘು ರಾಮಾಚಾರ್ಯ ಪೇಜಾವರ ಮಠ, ಉಡುಪಿ, ಪ್ರೊ। ನಿ. ಶ್ರೀಶ ಬಲ್ಲಾಳ, ಅಂಬಲಪಾಡಿ, ಉಡುಪಿ, ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ ಸಂಸ್ಕೃತ ಕಾಲೇಜು, ಉಡುಪಿ, ಶ್ರೀ ಬನ್ನಂಜೆ ಗೋವಿಂದಾಚಾರ್ಯ, ಉಡುಪಿ, ಶ್ರೀ ಟಿ. ಮೋಹನದಾಸ ಪೈ, ಮಣಿಪಾಲ, ಶ್ರೀ ಟಿ. ಸತೀಶ ಯು. ಪೈ, ಮಣಿಪಾಲ ಪವರ್‌ಪ್ರೆಸ್, ಮಣಿಪಾಲ, ಶ್ರೀ ಎ. ಹರಿದಾಸ ಭಟ್ಟ, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು, ಹಾಗೂ ಪೇಜಾವರ ಸ್ವಾಮೀಜಿಯವರ ಮಾರ್ಗದರ್ಶನ ಪಡೆಯುತ್ತಿರುವ ಸಂಸ್ಥೆಗಳ ಆಡಳಿತ ಮಂಡಳಿಯವರು.

ನಮ್ಮ ವಿನಂತಿಯ ಮೇರೆಗೆ ಈ ಗ್ರಂಥಕ್ಕಾಗಿ ಹೊಸ ಲೇಖನಗಳನ್ನು ಬರೆದು ಕೊಟ್ಟವರು- ಡಾ। ಎಂ. ಪ್ರಭಾಕರ ಜೋಶಿ, ಪ್ರೊ। ಪಿ. ಶ್ರೀಪತಿ ತಂತ್ರಿ, ಶ್ರೀ ರಾಜಾರಾಮ ತೋಳ್ಪಾಡಿ, ಶ್ರೀ ಲಕ್ಷ್ಮೀಶ ತೋಳ್ಪಾಡಿ, ಶ್ರೀ ಎಂ. ಎನ್. ಪ್ರಭು, ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ, ಡಾ। ಬಿ. ಆರ್. ನಾಡಗೌಡ, ಶ್ರೀ ಶ್ರೀನಿವಾಸ ವರಖೇಡಿ, ಶ್ರೀ ವಾದಿರಾಜ ಪಂಚಮುಖಿ, ಶ್ರೀ ವಿಶ್ವಪ್ರಸನ್ನತೀರ್ಥರು, ಶ್ರೀ ವಿದ್ಯಾಪ್ರಸನ್ನತೀರ್ಥರು, ಡಾ। ರಾಮಕೃಷ್ಣ ಜೋಶಿ, ಶ್ರೀ ಅರುಣಾಚಲ ಹೆಬ್ಬಾರ್, ಡಾ। (ಶ್ರೀಮತಿ) ಶ್ರೀರಾಮ ಹರ್ಲೇಕರ, ಡಾ। ಸಿ. ಎಚ್. ಶ್ರೀನಿವಾಸಮೂರ್ತಿ, ಶ್ರೀ ಎ. ಹರಿದಾಸ ಭಟ್ಟ, ಶ್ರೀ ಬಿ. ಎನ್. ರಾಘವೇಂದ್ರಾಚಾರ್ಯ, ಪ್ರೊ। ಎಂ. ಆರ್. ಹೆಗಡೆ – ಇವರೆಲ್ಲರಿಗೂ ನಮ್ಮ ಕೃತಜ್ಞತೆಗಳು (ನೋಡಿ- ಅನುಬಂಧ- ೧೧-೮).

ಈ ಗ್ರಂಥದ ಸಂಪಾದಕರಾದ ನಾವು (ಮುರಳೀಧರ ಉಪಾಧ್ಯ ಹಿರಿಯಡಕ, ಹೆರಂಜೆ ಕೃಷ್ಣ ಭಟ್ಟ.) ವಿದ್ಯಾರ್ಥಿಗಳಾಗಿದ್ದಾಗ, ಶ್ರೀ ವಿಶ್ವೇಶತೀರ್ಥರ ಪರ್ಯಾಯ ಕಾಲದಲ್ಲಿ ಮಠದಲ್ಲಿ ಊಟ ಮಾಡುತ್ತ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ ಬೆಳೆದವರು. ಅನ್ನದ ಋಣ ತೀರಿಸಲು ಸಾಧ್ಯವಿಲ್ಲ. ಅನ್ನದ ಋಣವನ್ನು ನೆನಪಿಸಿಕೊಂಡು, 'ಪೇಜಾವರ ಪ್ರಶಸ್ತಿ' ಗ್ರಂಥವನ್ನು ಅರ್ಪಿಸುತ್ತ, ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ಅಭಿವಂದನೆಗಳನ್ನು ಸಲ್ಲಿಸುತ್ತೇವೆ.

ಶ್ರೀ ವಿಶ್ವೇಶತೀರ್ಥರ
ಲೇಖನಗಳು – ಪ್ರವಚನಗಳು

೩ - ೧

ಈಶೋಪನಿಷತ್

ಈಶಾವಾಸ್ಯೋಪನಿಷತ್ತಿಗೆ ಸ್ವಾಯಂಭುವ ಮನುವು ಋಷಿಯು. ಯಜ್ಞರೂಪದಲ್ಲಿ ಅವತರಿಸಿದ ಭಗವಂತನೇ ಉಪನಿಷತ್ತಿನ ಪ್ರತಿಪಾದ್ಯ ದೇವತೆಯು. ಮನುವು ತನ್ನ ಮೊಮ್ಮಗನಾಗಿ ಅವತರಿಸಿದ ಯಜ್ಞನಾಮಕ ಭಗವಂತನನ್ನು ಈ ಮಂತ್ರಗಳಿಂದ ಸ್ತುತಿಸುತ್ತಿರುವಾಗ ರಾಕ್ಷಸರ ಆಕ್ರಮಣಕ್ಕೆ ಬಲಿಯಾದನು. ಆದರೆ ಭಕ್ತಿಜ್ಞಾನಗಳಿಂದ ಪರವಶನಾಗಿ ಭಗವಂತನ ಸ್ತೋತ್ರದಲ್ಲಿ ಮಗ್ನನಾದ ಮನು ಮಹಾರಾಜನನ್ನು ಪರಮಾತ್ಮನೇ ಪ್ರಸನ್ನನಾಗಿ ರಕ್ಷಿಸಿದನು. ರಾಕ್ಷಸರನ್ನು ಉಚ್ಚಾಟಿಸಿ ಮನುವನ್ನು ಪಾರುಮಾಡಿದನು. ಮನುವಂಶಜರಾದ ನಾವೂ ಇಂದು ಇದೇ ದುರ್ದೆಶೆಗೆ ಒಳಗಾಗಿದ್ದೇವೆ. ಭೌತಿಕ ಪ್ರಪಂಚದಲ್ಲಿ ರಾಕ್ಷಸೀ ಶಕ್ತಿಗಳು ನಮ್ಮನ್ನು ಕಬಳಿಸಲು ಉಪಕ್ರಮಿಸಿವೆ. ನಮ್ಮ ಸುತ್ತಮುತ್ತಲೂ ಇರುವ ವಿಷಯ ಪದಾರ್ಥಗಳೇ ಅಸುರರು. ''ದೈತ್ಯೇಷು ಅಸಂಗಂ ವಿಷಯಾತ್ಮಕೇಷು'' ಎಂದು ಭಾಗವತದಲ್ಲಿ ಅಧಃಪತನದ ದಾರಿಯಲ್ಲಿ ನಮ್ಮನ್ನು ಎಳೆದೊಯ್ಯುವ ವಿಷಯ ಪದಾರ್ಥಗಳೇ ಅಸುರರು. ಅವು ದೈತ್ಯ ಶಕ್ತಿಯಿಂದ ಅಧಿಷ್ಠಿತಗಳು ಎಂದು ಹೇಳಿದೆ. ವಿಷಯ ಪದಾರ್ಥಗಳನ್ನು ನಾವು ಆಸ್ವಾದಿಸುತ್ತಿದ್ದರೂ ವಾಸ್ತವವಾಗಿ ಅವುಗಳೇ ನಮ್ಮನ್ನು ನುಂಗುತ್ತಿವೆ. ಮದ್ಯವನ್ನು ನಾವು ಕುಡಿಯುತ್ತಿದ್ದರೂ ಕೊನೆಗೆ ಮದ್ಯವೇ ನಮ್ಮನ್ನು ಕುಡಿಯುವಂತೆ. ವಿಷಯ ಪದಾರ್ಥಗಳ ಆಕ್ರಮಣಕ್ಕೆ ಒಳಗಾದ ನಾವು ನಮ್ಮ ವ್ಯಕ್ತಿತ್ವವನ್ನು ಉಳಿಸಬೇಕಾದರೆ ಈಶಾವಾಸ್ಯೋಪನಿಷತ್ತಿಗೆ ಶರಣಾಗಬೇಕು. ಇದರ ಸಂದೇಶವನ್ನು ಮನನ ಮಾಡಿ ತ್ಯಾಗ, ಕರ್ತವ್ಯ, ಭಗವತ್ ಪ್ರೇಮಗಳಿಂದ ಬಾಳನ್ನು ಬಾಳಿದರೆ ಮಾತ್ರ ಈ ಅಸುರ ಶಕ್ತಿ ಆಘಾತದಿಂದ ನಮ್ಮನ್ನು ರಕ್ಷಿಸಿಕೊಳ್ಳಬಹುದು.

ಪ್ರಾರಂಭದಲ್ಲಿ ಉಪನಿಷತ್ತು ಸಾಧಕರಿಗಿರಬೇಕಾದ ಮೊದಲ ಅರ್ಹತೆಗಳನ್ನು ಬಹುಸುಂದರವಾಗಿ ನಿರೂಪಿಸಿದೆ. ಈ ಸಂದೇಶವು ಸಾಧಕರಿಗೆ ಮಾತ್ರವಾಗಿರದೆ ಮಾನವರೆಲ್ಲರಿಗೂ ಬದುಕಿನ ದಾರಿದೀಪವಾಗಿದೆ. ಪ್ರಕೃತಿಯಲ್ಲಿ ಅಧಿಷ್ಠಿತವಾದ ಈ ಚರಾಚರ ಪ್ರಪಂಚದಲ್ಲೆಲ್ಲಾ ಭಗವಂತನು ನೆಲೆಸಿದ್ದಾನೆ. ಅವನಿಲ್ಲದೆ ಜಗತ್ತಿನಲ್ಲಿ ಯಾವ ಚಲನವಲನಗಳೂ ನಡೆಯಲಾರವು. ಎಷ್ಟೇ ದೊಡ್ಡ ಯಂತ್ರವಾಗಿದ್ದರೂ ವಿದ್ಯುತ್ತಿನ ಸಂಪರ್ಕವಿಲ್ಲದೆ ಸಣ್ಣ ಸಣ್ಣ ಚಟುವಟಿಕೆಗಳೂ ಅದರಿಂದ ನಡೆಯುವುದಿಲ್ಲವಷ್ಟೇ. ಅದರಂತೆ ಭಗವಂತನ ಸಂಪರ್ಕವಿಲ್ಲದೆ ಈ ಜಡಚೇತನಗಳಿಂದ ಯಾವುದೇ ಕ್ರಿಯೆಗಳು ಸಂಭವಿಸಲಾರವು. ''ತತ್ ಸೃಷ್ಟ್ವಾ ತದೇವಾನುಪ್ರಾವಿಶತ್'' ಭಗವಂತನು ಈ ಜಗತ್ತನ್ನು ಸೃಜಿಸಿ

ಅಲ್ಲಿ ಚಟುವಟಿಕೆಗಳನ್ನು ಪ್ರಚೋದಿಸಲು ಅದನ್ನು ಪ್ರವೇಶಿಸುವನು. ಪರಮಾತ್ಮನಿಲ್ಲದೆ ಯಾವ ವಸ್ತುಗಳಿಗೂ ಅಸ್ತಿತ್ವ ಮತ್ತು ಪ್ರವೃತ್ತಿಗಳಿಲ್ಲ. ಈ ಚರಾಚರ ಪ್ರಪಂಚಕ್ಕೆ ಪ್ರಕೃತಿಯೇ ಮೂಲಾಧಾರ ವಾಗಿದ್ದರೂ ಅಗಕ್ಕೂ ನಿಯಾಮಕನಾಗಿ ಅದನ್ನೂ ಮೀರಿ ಭಗವಂತನ ಒಡೆತನಕ್ಕೆ ಈ ಜಗತ್ತೆಲ್ಲಾ ಸೇರಿದೆ. ಇದರ ಮೇಲೆ ನಮ್ಮ ಪ್ರಭುತ್ವವನ್ನು ಆರೋಪಿಸಿ ಸ್ವಾರ್ಥ ಅಹಂಕಾರಗಳಿಂದ ನಾವು ವ್ಯವಹರಿಸುತ್ತೇವೆ. ಇಲ್ಲಿ ನಮ್ಮ ಒಡೆತನವನ್ನು ಸ್ಥಾಪಿಸುವುದಕ್ಕಾಗಿ ನಾನಾ ರೀತಿಯ ಅವ್ಯವಹಾರ ಮತ್ತು ಅಕ್ರಮಗಳನ್ನು ನಡೆಸುತ್ತಿದ್ದೇವೆ. ಇದೆಲ್ಲವೂ ಭಗವಂತನ ಪ್ರಭುತ್ವಕ್ಕೆ ಒಳಪಟ್ಟಿವೆಯೆಂಬುದನ್ನು ಮನಗಂಡಾಗ ಈ ಎಲ್ಲಾ ಅಹಂಕಾರ ಮತ್ತು ದುಷ್ಪವೃತ್ತಿಗಳಿಗೆ ನಮ್ಮ ಜೀವನದಲ್ಲಿ ಅವಕಾಶವೊದಗಲಾರದು. ಯಾವುದೇ ವಸ್ತುವನ್ನು ಅಪಹರಿಸುವ ಪ್ರವೃತ್ತಿಗೆ ಇಳಿಯದೆ ದೇವರು ಕೊಟ್ಟಿದ್ದರಲ್ಲಿ ತೃಪ್ತಿಯನ್ನು ಪಡಬೇಕು. ದೇವರು ಕೊಟ್ಟಿದ್ದರಿಂದ ತೃಪ್ತನಾಗುವುದೆಂದರೆ ದೇವರ ಮೇಲೆ ಭಾರ ಹಾಕಿ ನಿಷ್ಕ್ರಿಯನಾಗಿರುವುದು ಎಂದರ್ಥವಲ್ಲ. ನ್ಯಾಯವಾದ ರೀತಿಯಲ್ಲಿ ನಾವು ಗಳಿಸಿದ ಹಣವೇ ದೇವರು ಕೊಟ್ಟಿದ್ದು. ಅನ್ಯಾಯ ಅಕ್ರಮಗಳಿಂದ ನಾವು ಹಣ ಪಡೆಯುವುದೇ ಬಲತ್ಕಾರ ಅಪಹರಣವೆನಿಸುವುದು. ''ಇದೆಲ್ಲವೂ ತನ್ನದು, ತಾನು ಇದರ ಒಡೆಯ'' ಎಂಬ ಅಹಂಕಾರವಿದ್ದಾಗ ನಮ್ಮಲ್ಲಿ ಸ್ವಚ್ಛಂದ ಪ್ರವೃತ್ತಿಗೆ ಅವಕಾಶವಾಗುವುದು. ಎಲ್ಲವೂ ಭಗವಂತನದೆಂಬ ಅನುಸಂಧಾನವಿರುವಾಗ ಹಣವನ್ನು ಗಳಿಸುವುದರಲ್ಲೂ, ಅದನ್ನು ವ್ಯಯಿಸುವುದರಲ್ಲೂ ನಿಯಂತ್ರಣ ವುಂಟಾಗಿ ನಾವು ಎಚ್ಚರದಿಂದ ವ್ಯವಹರಿಸಬಲ್ಲೆವು. ಜಡಚೇತನಗಳ ಸಕಲ ವ್ಯವಹಾರಗಳಿಗೂ ಕಾರಣ ಪುರುಷನಾದ ಭಗವಂತನ ಒಡೆತನಕ್ಕೆ ಎಲ್ಲವೂ ಸೇರಿದೆಯೆಂದು ಭಾವಿಸಿ ನ್ಯಾಯವಾದ ರೀತಿಯಿಂದ ಗಳಿಸಿದ ವಸ್ತುಗಳನ್ನು ಯೋಗ್ಯರೀತಿಯಿಂದ ಸೇವಿಸಿ ಅದರಲ್ಲೇ ತೃಪ್ತಿ ಪಡೆಯಬೇಕು. ದುರಾಶೆಯಿಂದ ಅಕೃತ್ಯಕ್ಕೆ ಇಳಿಯಬಾರದು.

ಈ ಸೊತ್ತುಗಳು ನಮ್ಮದಲ್ಲವೆಂದ ಮೇಲೆ ಅದನ್ನು ಉಪಯೋಗಿಸಲು ನಾವು ಅರ್ಹತೆ ಪಡೆಯಬೇಕಾದರೆ ನಾವು ನಮ್ಮ ಕರ್ತವ್ಯವನ್ನು ಅರಿತು ನೆರವೇರಿಸಬೇಕು. ನಮ್ಮ ಕರ್ತವ್ಯವನ್ನು ಮಾಡದೆ ಈ ಜಗತ್ತಿನಲ್ಲಿ ಬದುಕುವ ಅಧಿಕಾರವೇ ನಮಗಿಲ್ಲವೆಂದು ಈ ಉಪನಿಷತ್ತು ಘೋಷಿಸುತ್ತಿದೆ. ಭಗವದ್ಭಕ್ತಿಯು ನಿಷ್ಕ್ರಿಯತೆಗೆ ಚಾಲನೆ ನೀಡುವುದೆಂದು ಅನೇಕರು ಆಕ್ಷೇಪಿಸುವುದುಂಟು. ಈ ಉಪನಿಷತ್ತನ್ನು ಅವಲೋಕಿಸಿದರೆ ಇದಕ್ಕೆ ಸರಿಯಾದ ಸಮಾಧಾನವು ದೊರಕಬಹುದು. ಜಗತ್ತಿನ ಎಲ್ಲ ವಸ್ತುಗಳೂ ಭಗವಂತನ ಆಧಿಪತ್ಯಕ್ಕೆ ಒಳಪಟ್ಟಿವೆ. ಯಾವ ವ್ಯಕ್ತಿಗೂ ಅವುಗಳ ಮೇಲೆ ಅಧಿಕಾರವಿಲ್ಲ. ಆ ಪದಾರ್ಥಗಳನ್ನು ಅವನು ಉಪಯೋಗಿಸಬೇಕಾದರೆ ಜಗತ್ತಿಗೆ ತನ್ನ ಕರ್ತವ್ಯವನ್ನು ಸಲ್ಲಿಸಲೇಬೇಕಾಗುವುದು. ತನ್ನ ಸ್ವಂತದ ವಸ್ತುವನ್ನು ತಾನು ಬೇಕಾದಂತೆ ಬಳಸಬಹುದು. ಆದರೆ ಸೊತ್ತು ತನ್ನದಲ್ಲ, ಎಲ್ಲವೂ ಭಗವಂತನದೆಂದಾದ ಮೇಲೆ ಅದನ್ನು ಎಚ್ಚರದಿಂದ ಉಪಯೋಗಿಸಬೇಕಾಗುವುದು. ಸ್ವಚ್ಛಂದವಾಗಿ ಅದನ್ನು ಬಳಸಬಾರದು. ತನ್ನ ಕರ್ತವ್ಯವನ್ನು ನೆರವೇರಿಸಿ ಅವಶ್ಯವಿದ್ದುದನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಬೇಕಾವುದು. ಹೀಗೆ ಭಕ್ತಿಯು ಕರ್ತವ್ಯವನ್ನು ಪ್ರಚೋದಿಸುವ ದಿವ್ಯಶಕ್ತಿಯಾಗಿದೆ. ಭಗವಂತನ ಭಕ್ತನು ನಿಷ್ಕ್ರಿಯನೂ ಆಗಲಾರ. ಸ್ವಚ್ಛಂದರೀತಿಯಿಂದಲೂ ವರ್ತಿಸಲಾರ. ಇಂತಹ ತ್ಯಾಗ, ಭಕ್ತಿ, ಕರ್ತವ್ಯಗಳ ಸಮನ್ವಯದ ಜೀವನವಿಧಾನವನ್ನು ಈ ಉಪನಿಷತ್ತು ಬೋಧಿಸಿದೆ. ಆದ್ದರಿಂದ ಭೌತಿಕ ವಿಷಯಗಳಲ್ಲಿ ಅತಿಯಾದ ಆಶೆಯನ್ನು ಮಾಡದೆ ಭಗವಂತನ ಭಕ್ತರಾಗಿ ಕರ್ತವ್ಯಶೀಲರಾಗಿರಲು ನಾವೆಲ್ಲರೂ ಪ್ರಯತ್ನಿಸಬೇಕು. ಆಧ್ಯಾತ್ಮಿಕ ಸಾಧನೆಯಲ್ಲಿ, ಮುನ್ನಡೆಯಲು ಇದೇ ಪ್ರಾಥಮಿಕ ಅರ್ಹತೆ. ಇದಿಲ್ಲದೆ ಜ್ಞಾನ, ಧ್ಯಾನ, ಸಾಕ್ಷಾತ್ಕಾರಗಳಿಗೆ ಬೇಕಾದ ಅಂತಃಕರಣ ಸಂಸ್ಕಾರವನ್ನು ನಾವು ಪಡೆಯಲಾರೆವು. ಇದಕ್ಕಾಗಿಯೇ ಈ ಉಪನಿಷತ್ತು ಆರಂಭದ ಎರಡು ಮಂತ್ರಗಳಲ್ಲಿ ಸಾಧಕರ ಮಾರ್ಗದರ್ಶನಕ್ಕಾಗಿ ಅವರು ಅನುಸರಿಬೇಕಾದ ಮೊದಲ ಅರ್ಹತೆಗಳನ್ನು ನಿರೂಪಿಸಿದೆ.

ಭಗವದ್ಗೀತೆಯಲ್ಲಿ ವಿಸ್ತಾರದಿಂದ ವಿವೇಚಿಸಿದ ನಿಷ್ಕಾಮಕರ್ಮಯೋಗವನ್ನು ಈ ಮಂತ್ರವು ಸಂಕ್ಷೇಪದಿಂದ ತಿಳಿಸಿದೆ. ಭಕ್ತಿಯಿಂದ ನಾವು ಏನೇ ಒಳ್ಳೆಯ ಕೆಲಸ ಮಾಡಿದರೂ ಅದರ ಒಳ್ಳೆಯದರ ಜೊತೆಗೆ ಕೆಟ್ಟದೂ ನಮಗೆ ಅಂಟಿಕೊಳ್ಳುವುದು. ಬೆಂಕಿಯನ್ನು ಉರಿಸುವಾಗ ಅನಿವಾರ್ಯವಾಗಿ ಹೊಗೆಯನ್ನು ಅನುಭವಿಸಬೇಕಾಗುವಂತೆ ಒಂದು ಕ್ರಿಯೆಯಿಂದ ಪುಣ್ಯ – ಪಾಪ ಇವೆರಡನ್ನೂ ನಾವು ಪಡೆಯಬೇಕಾಗುತ್ತದೆ. ಆದ್ದರಿಂದ ಕರ್ತವ್ಯದಲ್ಲಿ ತೊಡಗಿದರೆ ನಮಗೆ ಈ ಸಂಸಾರದಿಂದ ಬಿಡುಗಡೆಯೇ ಆಗಲಾರದು. ಅದಕ್ಕಾಗಿ ಕರ್ಮ ಮಾರ್ಗವನ್ನು ತೊರೆಯುವುದೇ ಒಳಿತು ಎಂಬ ಭಾವನೆಗೆ ಸೂಕ್ತ ಪರಿಹಾರವನ್ನು ಈ ಮಂತ್ರ ನೀಡಿದೆ.

ಏವಂ ತ್ವಯಿ ನ ಕರ್ಮ ಲಿಪ್ಯತೇ

ಎಲ್ಲವೂ ಭಗವಂತನದೆಂದು ಭಾವಿಸಿ ಲೌಕಿಕ ಆಶೆಯನ್ನು ತೊರೆದು ಭಕ್ತಿಯಿಂದ, ಭಗತ್ಸೇವಾಭಾವನೆಯಿಂದ ಕರ್ತವ್ಯದಲ್ಲಿ ತೊಡಗಿದರೆ ಕೆಟ್ಟದು ಅಂಟಿಕೊಳ್ಳದೆ ಒಳ್ಳೆಯದನ್ನು ಮಾತ್ರ ಪಡೆಯಬಲ್ಲೆವು. ಸ್ವಾರ್ಥ ಕಾಮನೆಯಿಂದ ಕಾರ್ಯವನ್ನು ಮಾಡುವಾಗ ಮಾತ್ರ ಪಾಪವು ಅಂಟಿಕೊಳ್ಳುವುದು. ಭಗವತ್ಪ್ರೇಮದಿಂದ, ಅವನ ಅನುಗ್ರಹಾಕಾಂಕ್ಷೆಯಿಂದ ಮಾಡಿದ ಸಾಧನೆಗಳು ಸತ್ಫಲಗಳನ್ನೇ ಕೊಡುವವು. ಹಸಿಕಟ್ಟಿಗೆಯಲ್ಲಿ ಬೆಂಕಿ ಉರಿಸಿದಾಗ ಹೊಗೆಯು ಉಂಟಾಗುವಂತೆ ಒಣ ಕಟ್ಟಿಗೆಯಲ್ಲಿ ಆಗುವುದಿಲ್ಲವಷ್ಟೆ. ಕಾದ ಕಬ್ಬಿಣದ ಉರಿಯಲ್ಲಿ ಹೊಗೆಯೇ ಇರುವುದಿಲ್ಲ. ಅದರಂತೆ ನಿಷ್ಕಾಮವಾದ ನಿರ್ಮಲ ಮನಸ್ಸಿನಿಂದ ಆಚರಿಸಿದ ಕ್ರಿಯೆಗಳಿಂದ ಪಾಪಗಳು ಸಂಭವಿಸುವುದೇ ಇಲ್ಲ. ಹೀಗೆ ಭಕ್ತಿ, ನಿಷ್ಕಾಮ ಕರ್ಮದ ಸಂದೇಶವನ್ನು ಈ ಎರಡು ಮಂತ್ರಗಳು ನೀಡಿವೆ.

ಸಾಧಕನಿಗೆ ಇರಬೇಕಾದ ಅರ್ಹತೆಗಳನ್ನು ಸೂಚಿಸಿದ ನಂತರ ತತ್ವಜ್ಞಾನದ ಬಗ್ಗೆ ನಾವು ವಹಿಸಬೇಕಾದ ಎಚ್ಚರದ ಬಗ್ಗೆಯೂ ಉಪನಿಷತ್ತು ನಮಗೆ ಬೋಧಿಸುತ್ತದೆ. ಭಗವಂತನು ಅನಂತ ಗುಣಪೂರ್ಣನು, ಸರ್ವೋತ್ತಮನು, ಜಗತ್ತಿನ ಜನ್ಮಾದಿ ಸಕಲ ವ್ಯವಹಾರ ಕಾರಣನು, ಸರ್ವಾಂತರ್ಯಾಮಿ ಎಂದು ಮುಂತಾಗಿ ದೇವರ ಸ್ವರೂಪವನ್ನು ಅಲ್ಲಲ್ಲಿ ವೇದೋಪನಿಷತ್ ಪುರಾಣಗಳಲ್ಲಿ ಹೇಳಿದೆ. ಪರಮಾತ್ಮನ ನಿಜ ಸ್ವರೂಪಕ್ಕೆ ವ್ಯತಿರಿಕ್ತವಾಗಿ ಅವನ ಜ್ಞಾನ ಮತ್ತು ಉಪಾಸನೆಯು ನಡೆಯದಂತೆ ನಾವು ವಿಶೇಷ ಎಚ್ಚರ ವಹಿಸಬೇಕು. ದೇವರನ್ನು ಅವನ ನಿಜ ಸ್ವರೂಪಕ್ಕಿಂತ ವಿಪರೀತವಾಗಿ ತಿಳಿದುಕೊಳ್ಳುವುದೆಂದರೆ ಅವನ ಹತ್ಯೆ ಮಾಡಿದಂತೆ ಎಂದು ಉಪನಿಷತ್ತು ಹೇಳುತ್ತದೆ. ವಾಸ್ತವಿಕವಾಗಿ ಪರಮಾತ್ಮನ ಹನನವನ್ನು ಯಾರೂ ಮಾಡಲಾರರು. ಅವನು ಸತ್ಯ, ಸನಾತನ ಪುರುಷನು. ಆದರೂ ಅವನನ್ನು ವಿಪರೀತವಾಗಿ ತಿಳಿದುಕೊಂಡರೆ ಒಂದು ರೀತಿಯ ಹತ್ಯೆ ಮಾಡಿದಂತೆ ಅಪಚಾರವೇ ಆಗುವುದು. ವಿಕೃತವಾಗಿ ಹಾಡಿದಾಗ ಅದನ್ನು ಸಂಗೀತ ಸರಸ್ವತಿಯ ಹತ್ಯೆಯೆಂದು ನಾವು ಹೇಳುವುದಿಲ್ಲವೇ? ಅಸತ್ಯೋಪಾಸನೆಯು ಪರಮಾತ್ಮನ ಹತ್ಯೆಯಂತೆ ಎಂಬ ವಿಷಯವನ್ನು ಭಾಗವತದಲ್ಲಿಯೂ 'ಅಸದುಪಾಸನಯಾತ್ಮಹನಃ' ಎಂದು ಹೇಳಿದೆ. ಇಂತಹ ವಿಪರೀತ ಜ್ಞಾನದಿಂದ ಅನರ್ಥವನ್ನು ಅನುಭವಿಸಬೇಕಾಗುವುದರಿಂದ ಪರಮಾತ್ಮನ ಯಥಾರ್ಥ ಜ್ಞಾನಕ್ಕಾಗಿ ನಾವು ವಿಶೇಷ ಆಸಕ್ತಿಯನ್ನು ವಹಿಸಬೇಕು.

ಮುಂದೆ ಈ ಉಪನಿಷತ್ತು ಭಗವತತ್ತ್ವದ ಸಾಮಾನ್ಯ ಪರಿಚಯವನ್ನು ನಮಗೆ ನೀಡುತ್ತದೆ. ಸಕಲ ದೇವತೆಗಳೂ ಪರಮಾತ್ಮನ ಭಯದಿಂದ ನಡುಗುತ್ತಾರೆ. ಅವನ ಶಾಸನಕ್ಕೆ ಒಳಪಟ್ಟು ಪ್ರಪಂಚದ ಆಡಳಿತವನ್ನು ನಡೆಸುತ್ತಾರೆ. ಆದರೆ ಸರ್ವತಂತ್ರ ಸ್ವತಂತ್ರನಾದ ಭಗವಂತನಿಗೆ ಯಾರ ಭಯವೂ ಇಲ್ಲ. ಯಾರ ನಿಯಂತ್ರಣವೂ ಇಲ್ಲ. ಅವನು ಸರ್ವಪ್ರಧಾನನೂ ಪ್ರಪಂಚದ ಎಲ್ಲವನ್ನೂ ಅರಿತವನೂ ಆಗಿರುವನು. ಆದರೆ ಸರ್ವಜ್ಞನಾದ ಈ ಭಗವಂತನನ್ನು ದೇವತೆಗಳೂ ಪೂರ್ತಿಯಾಗಿ ಅರಿಯರು. ಅವನು

ಈ ಜಗತ್ತಿನ ಅತಿವೇಗದ ಪದಾರ್ಥಗಳನ್ನೂ ಮೀರಿ ನಿಂತಿದ್ದಾನೆ. ಶೀಘ್ರವಾಗಿ ಚಲಿಸುವ ವಸ್ತುಗಳಿಗಿಂತಲೂ ಮುಂದೆ ಅವನಿದ್ದಾನೆ. ಮನಸ್ಸಿಗಿಂತಲೂ ತೀವ್ರವೇಗ ಅವನಿಗಿದೆ. ನಮಗಿಂತ ಬಹುದೂರದಲ್ಲಿಯೂ ಇದ್ದಾನೆ. ನಮಗೆ ಅತ್ಯಂತ ಸನಿಹದಲ್ಲೂ ಇರುವನು. ನಮ್ಮ ಒಳಗೂ ಹೊರಗೂ ಅವನು ನೆಲೆಸಿದ್ದಾನೆ. ಈ ಎಲ್ಲಾ ಮಾತಿನ ಮಥಿತಾರ್ಥ ಭಗವಂತನು ಸರ್ವವ್ಯಾಪಕನು ಎಂದಾಗಿದೆ. ಭಗವಂತನು ಸರ್ವವ್ಯಾಪಕನಾಗಿರುವಂತೆ ಸರ್ವಾಧಾರನೂ ಆಗಿರುವನೆಂದು ನಾವು ತಿಳಿದುಕೊಳ್ಳಬೇಕು. ಎಲ್ಲಾ ವಸ್ತುಗಳೂ ಭಗವಂತನಲ್ಲಿರುವವು. ಎಲ್ಲಾ ಪದಾರ್ಥಗಳಲ್ಲಿ ಪರಮಾತ್ಮನು ವ್ಯಾಪಿಸಿ, ನೆಲೆಸಿದ್ದಾನೆ. ಎಲ್ಲ ಪದಾರ್ಥಗಳೂ ಭಗವಂತನನ್ನು ಆಶ್ರಯಿಸಿ ಅವನ ಆಧಾರದಲ್ಲಿ ನಿಂತಿವೆ. ಹೀಗೆ ದೇವರು ಸರ್ವವ್ಯಾಪಿಯೂ ಸರ್ವಾಶ್ರಯನೂ ಎಂದು ತಿಳಿದವನಿಗೆ ಭಯವೇ ಇಲ್ಲ. ತನ್ನನ್ನು ರಕ್ಷಿಸಲು ಅವನು ಪ್ರಯತ್ನಿಸುವುದೇ ಇಲ್ಲ. ಸರ್ವ ರಕ್ಷಕನಾದ ಭಗವಂತನು ತನ್ನ ಹಿಂದೆ ಮುಂದೆ ಇರುವಾಗ ಅವನು ಯಾರಿಗೆ ಹೆದರಬೇಕು? ನಿಜವಾದ ಭಕ್ತನಿಗೆ ಇಂತಹ ಆತ್ಮವಿಶ್ವಾಸವು ಮೂಡಬಲ್ಲದು. ಭಗವಂತನನ್ನು ಹೀಗೆ ಸರಿಯಾಗಿ ತಿಳಿದಾಗ ಶೋಕ, ಮೋಹ ಮೊದಲಾದ ದೌರ್ಬಲ್ಯಗಳನ್ನೆಲ್ಲಾ ದಾಟಿ ನಿಲ್ಲುವ ಶಕ್ತಿಯೂ ಬರುವುದು.

ಪರಮಾತ್ಮನು ಶುದ್ಧ ಚೈತನ್ಯ ಸ್ವರೂಪಿಯಾಗಿರುವನು. ಅವನಿಗೆ ಈ ಪ್ರಾಕೃತವಾದ ಸ್ಥೂಲ, ಸೂಕ್ಷ್ಮ, ಶರೀರಗಳಿಲ್ಲ. ಭೌತಿಕ ಶರೀರವೇ ಇಲ್ಲದಿರುವಾಗ ಪಾಪಲೇಪಕ್ಕೆ ಆವಕಾಶವೆಲ್ಲಿ ? ಪಾಪವಿಲ್ಲದಿದ್ದ ಮೇಲೆ ದುಃಖವೆಲ್ಲಿ ? ಹೀಗಾಗಿ ಪರಮಾತ್ಮನಿಗೆ ದುಃಖ ವ್ಯಾಮೋಹ ಮುಂತಾದ ಯಾವ ದೋಷಗಳಿಗೂ ಅವಕಾಶವಿಲ್ಲ. ಇಂತಹ ನಿರ್ದೋಷ ಗುಣಪೂರ್ಣನಾದ ಭಗವಂತನನ್ನು ಅರಿತು ಧ್ಯಾನ ಮಾಡುವ ಭಕ್ತನಿಗೆ ದುಃಖ ಮೋಹಗಳು ಹೇಗೆ ಸಂಭವಿಸುವವು ?

ತಂ ಯಥಾ ಯಥೋಪಾಸತೇ ಸ ತಥೈವ ಭವತಿ

ಶ್ರೀ ಹರಿಯನ್ನು ನಾವು ಹೇಗೆ ಉಪಾಸಿಸುವೆವೋ ನಾವು ಅದರಂತೆ ಆಗುವೆವು. ಆದ್ದರಿಂದ ಭಗವಂತನ ಉಪಾಸಕನು ಅವನಂತೆ ಜ್ಞಾನಾನಂದಮಯವಾದ ಸ್ವರೂಪವನ್ನು ಪಡೆಯುವನು. ಅಸ್ವಾಭಾವಿಕವಾದ ತನ್ನ ಪ್ರಾಕೃತ ದೋಷಮಯ ರೂಪವನ್ನು ಕಳಚಿ ಚೈತನ್ಯಮಯವಾದ ತನ್ನ ನಿಜರೂಪವನ್ನು ದೇವರ ಅನುಗ್ರಹದಿಂದ ಪಡೆದ ಭಕ್ತನು, ರಾಗ, ದ್ವೇಷ, ಕ್ಲೇಶಗಳಿಂದ ಶಾಶ್ವತವಾಗಿ ಬಿಡುಗಡೆ ಹೊಂದುವನು. ಅನಾದಿಕಾಲದಿಂದಲೂ ಈ ಸತ್ಯವಾದ ವಿಚಿತ್ರ ಜಗತ್ತನ್ನು ಸೃಜಿಸಿದ ಸರ್ವಕರ್ತನೂ, ಸ್ವತಂತ್ರನೂ, ಸರ್ವಜ್ಞನೂ, ಸರ್ವೋತ್ತಮನೂ, ಸರ್ವೇಶ್ವರನೂ ಆದ ದೇವರ ಅನುಗ್ರಹದಿಂದ ಮುಕ್ತಿಯ ಆನಂದ ಸಾಮ್ರಾಜ್ಯವನ್ನು ಅನುಭವಿಸುವನು.

ಸಾಧಕನ ಅರ್ಹತೆ ಮತ್ತು ಭಗವಂತನ ಸ್ವರೂಪವನ್ನು ಉಪನಿಷತ್ತು ವಿವರಿಸಿ ಮುಂದೆ ನಾವು ಪಡೆಯುವ ತತ್ತ್ವಜ್ಞಾನದ ಬಗ್ಗೆ ಹೇಗೆ ಎಚ್ಚರದಲ್ಲಿರಬೇಕು ಎಂಬುದನ್ನು ವಿವರಿಸುತ್ತದೆ. ನಾವು ಅಜ್ಞಾನಿಗಳಾಗಿದ್ದರೆ ಅನರ್ಥವಿದೆಯೆಂದು ನಮಗೆ ಗೊತ್ತಿದೆ. ಆದರೆ ಜ್ಞಾನವನ್ನು ಪಡೆಯುವ ಆತುರದಲ್ಲಿ ಸರಿಯಾಗಿ ವಿಮರ್ಶಿಸದೆ ಅದನ್ನು ಗ್ರಹಿಸಿದರೆ ಅದೂ ಅನರ್ಥಕಾರಿಯೇ. ಆಹಾರವಿಲ್ಲದೆ ಉಪವಾಸದಿಂದ ಬಳಲಿದಾಗ ನಮಗೆ ತುಂಬಾ ಕಷ್ಟವಾಗಬಹುದು. ಆದರೆ ಆಹಾರವನ್ನು ಸ್ವೀಕರಿಸುವ ಭರದಲ್ಲಿ, ಪರೀಕ್ಷಿಸದೆ ಸಿಕ್ಕಿದ ಆಹಾರವನ್ನೆಲ್ಲಾ ಉಪಯೋಗಿಸಿದರೆ ಹೆಚ್ಚು ಅನರ್ಥವಾಗುವುದಿಲ್ಲವೇ ? ಕೆಟ್ಟ ಆಹಾರವನ್ನು ಸ್ವೀಕರಿಸುವುದಕ್ಕಿಂತ ಉಪವಾಸವಿರುವುದೇ ಒಳಿತು. ಅದರಂತೆ ತತ್ತ್ವಜ್ಞಾನದ ಕ್ಷೇತ್ರದಲ್ಲೂ ವಿಮರ್ಶೆಯ ಆವಶ್ಯಕತೆಯಿದೆ. ಯಾವ ಮತವಾದರೇನು? ಎಲ್ಲವೂ ಒಂದೇ ಎನ್ನುವ ದೃಷ್ಟಿಯು ವೈಚಾರಿಕ ಕ್ಷೇತ್ರಕ್ಕೆ ಸರಿಯೆನಿಸುವುದಿಲ್ಲ. ಸತ್ಯಾನ್ವೇಷಣೆಯೇ ಸಾಧಕನ ಮುಖ್ಯವಾದ ಗುರಿ. ಸತ್ಯ,

ಅಸತ್ಯ ಇವೆರಡನ್ನೂ ಸಮಾನವಾಗಿ ನೋಡುವುದರ ಜೊತೆಗೆ ಸತ್ಯ, ಅಸತ್ಯಗಳನ್ನು ತೂಗಿ ನೋಡುವ ವಿಮರ್ಶಕ ದೃಷ್ಟಿಯನ್ನೂ ಬೆಳೆಸಿಕೊಳ್ಳಬೇಕು. ಸತ್ಯ ಯಾವುದು ಮತ್ತು ಅಸತ್ಯ ಯಾವುದು ಎಂಬುದನ್ನು ಉಳಿದವರಿಗೆ ಸ್ಪಷ್ಟವಾಗಿ ತಿಳಿಸಲೂ ಬೇಕು. ಹೀಗೆ ವರ್ತಿಸಿದಾಗ ನಾವು ನಿಜವಾಗಿ ಸತ್ಯಕ್ಕೆ ಗೌರವ ಸಲ್ಲಿಸಿದಂತಾಗುವುದು. ತತ್ತ್ವಜ್ಞಾನ ಮತ್ತು ತತ್ತ್ವ ವಿಮರ್ಶೆ ಇವೆರಡನ್ನೂ ಪಡೆದಾಗಲೇ ಅನರ್ಥವನ್ನು ಕಳಚಿ ಇಷ್ಟವನ್ನು ಪಡೆಯಬಲ್ಲೆವು. ತತ್ತ್ವಜ್ಞಾನವನ್ನು ವಿದ್ಯೆಯೆಂದೂ, ತತ್ತ್ವವಿಮರ್ಶೆಯನ್ನು ಅವಿದ್ಯೆಯೆಂದೂ ಕರೆಯಲಾಗಿದೆ. ಅನಿಷ್ಟದ ನಿವಾರಣೆ ಮತ್ತು ಇಷ್ಟದ ಪ್ರಾಪ್ತಿ ಇವು ಮೋಕ್ಷದ ಎರಡು ಭಾಗಗಳಾಗಿದ್ದರೆ ಪರಿಪೂರ್ಣ ಮೋಕ್ಷವನ್ನು ಪಡೆಯಲು ವಿದ್ಯೆ, ಅವಿದ್ಯೆ ಇವೆರಡೂ ಅಂದರೆ ತತ್ತ್ವಜ್ಞಾನ ಮತ್ತು ತತ್ತ್ವ ವಿಮರ್ಶೆ ಅವಶ್ಯವಾಗಿದೆ. ನಿಜವಾದ ತತ್ತ್ವಜ್ಞಾನಿಯು, ಉಳಿದವರು ಈ ಸತ್ಯವನ್ನು ತಿಳಿಯದೆ ಭ್ರಾಂತಿಯ ಸುಳಿಯಲ್ಲಿ ಸಿಲುಕುವುದನ್ನು ನೋಡುತ್ತಾ ಮೂಕ ಪ್ರೇಕ್ಷಕನಾಗಿ ಸುಮ್ಮನೆ ಕುಳಿತಿರಲಾರ. ಅವರನ್ನು ಮುತ್ತಿರುವ ಭ್ರಾಂತಿಯ ಜಾಲವನ್ನು ಕಿತ್ತೆಸೆಯಲು ಪ್ರಯತ್ನಿಸಿಯೇ ತೀರುವನು. ಒಬ್ಬನು ಕಣ್ಣು ಕಾಣದೆ ಬಾವಿಯಲ್ಲಿ ಬೀಳುತ್ತಿರುವಾಗ ಗೊತ್ತಿದ್ದರೂ ಅದನ್ನು ತಡೆಯಲು ಪ್ರಯತ್ನಿಸದಿರುವುದು ಅಪರಾಧವೇ ಆಗುವುದು. ತತ್ತ್ವಜ್ಞಾನವನ್ನು ಪಡೆಯುವಂತೆ ಜನರಲ್ಲಿ ಹುದುಗಿದ ವಿಪರೀತ ಜ್ಞಾನವನ್ನು ನಿವಾರಿಸುವುದೂ ಸಾಧಕನ ಕರ್ತವ್ಯವಾಗಿದೆ. ತತ್ತ್ವಜ್ಞಾನವು ವಿದ್ಯೆಯಾದರೆ ವಿಪರೀತ ಜ್ಞಾನದ ನಿವಾರಣೆಯೇ ಅವಿದ್ಯೆಯೆನಿಸುವುದು. ಸಾಧಕನಿಗೆ ಇವೆರಡೂ ಅವಶ್ಯವಾಗಿದೆ.

ಅದರಂತೆ ಸಾಧಕನು ಭಗವಂತನನ್ನು ಸೃಷ್ಟಿಕರ್ತನೆಂದೂ ಸಂಹಾರಕರ್ತನೆಂದೂ ಅರಿತು ಉಪಾಸನೆ ಮಾಡಬೇಕು. ಅವನನ್ನು ಸೃಷ್ಟಿಕರ್ತನೆಂದು ಉಪಾಸಿಸುವುದರಿಂದ ನಮ್ಮ ಜ್ಞಾನಾನಂದಾದಿ ಕಲ್ಯಾಣಗುಣಗಳ ಅಭಿವ್ಯಕ್ತಿಯಾಗುವುದು. ಅವನನ್ನು ಸಂಹಾರಕರ್ತನೆಂದು ತಿಳಿಯುವುದರಿಂದ ನಮ್ಮ ದುಃಖ, ದುರಾಶೆ, ಅಜ್ಞಾನ, ಮೊದಲಾದ ವಿಕೃತಿಗಳ ವಿನಾಶವಾಗುವುದು. ಸೃಷ್ಟಿಕರ್ತನಾದ ದೇವರು ಬೇರೆ, ಜಗತ್ತಿನ ಪ್ರಳಯಕ್ಕೆ ಕಾರಣನಾದ ದೇವರು ಬೇರೆಯೆಂದು ಭಾವಿಸಿ ಪರಮಾತ್ಮನ ಗುಣಗಳನ್ನು ಹಂಚಿ ಅನೇಕ ದೇವರುಗಳನ್ನು ಕಲ್ಪಿಸಬಾರದು. ಸಕಲ ಗುಣ ಪರಿಪೂರ್ಣನಾದ ದೇವರು ಒಬ್ಬನೇ ಎಂಬ ದೃಢ ಭಾವನೆಯಿರಬೇಕು. ಅವನ ಗುಣಕ್ರಿಯೆಗಳಲ್ಲಿ ಕೆಲವನ್ನು ಅವನಿಂದ ಪ್ರತ್ಯೇಕಿಸುವುದು ತುಂಬ ಅನರ್ಥಕಾರಿಯೆನಿಸುವುದು. ಇದರಿಂದ ಭಗವಂತನನ್ನು ಅಪೂರ್ಣನೆಂದು ಭಾವಿಸಿದಂತಾಗುವುದು. ಸೃಷ್ಟಿಕರ್ತನೂ ಸಂಹಾರಕರ್ತನೂ ಆದವನು ಶ್ರೀಹರಿಯೊಬ್ಬನೇ. ಅವನೇ ಸಕಲ ಗುಣ ಪರಿಪೂರ್ಣನು ಎಂದು ತಿಳಿದಾಗಲೇ ಪರಿಪೂರ್ಣ ಮೋಕ್ಷವನ್ನು ನಾವು ಪಡೆಯಬಲ್ಲೆವು. ಜಗತ್ತನ್ನು ಸೃಜಿಸಿದ ದೇವರೇ ಇಲ್ಲವೆನ್ನುವುದು ಅನರ್ಥಕಾರಿಯಾಗುವಂತೆ ಭಗವಂತನ ಕೆಲವು ಶಕ್ತಿಗಳನ್ನು ಅಲ್ಲಗಳೆದು ಅವನನ್ನು ಅಪೂರ್ಣನೆಂದು ತಿಳಿಯುವುದೂ ಅನಿಷ್ಟಕಾರಿಯಾಗಿದೆ. ಯಾವುದೇ ವಿಪರೀತ ಕಲ್ಪನೆಗೆ ಅವಕಾಶ ಕೊಡದೆ ಜ್ಞಾನದ ವಿಷಯದಲ್ಲಿ ಸಾಧಕನು ಹೆಚ್ಚು ಎಚ್ಚರದಲ್ಲಿರಬೇಕೆಂದು ಇವೆಲ್ಲ ವಿಚಾರಗಳ ಮಥಿತಾರ್ಥವಾಗಿದೆ.

ಸಾಧಕನಿಗಿರಬೇಕಾದ ಅರ್ಹತೆ ಅವನು ಪಡೆಯಬೇಕಾದ ತತ್ತ್ವಜ್ಞಾನದ ಸ್ವರೂಪ, ಅದರಿಂದ ಲಭಿಸುವ ಮೋಕ್ಷದ ಅಮೃತಫಲ ಇವುಗಳನ್ನು ನಿರೂಪಿಸಿ ಮುಂದೆ ಭಕ್ತನು ಭಗವಂತನ ದರ್ಶನಕ್ಕಾಗಿ ಅವನ ಅನುಗ್ರಹಕ್ಕಾಗಿ ಸಲ್ಲಿಸುವ ಕಾತರತೆಯ, ಕಳಕಳಿಯ ಪ್ರಾರ್ಥನೆಯನ್ನು ವರ್ಣಿಸುತ್ತಾರೆ. ನಾವು ಎಷ್ಟು ಪ್ರಯತ್ನಿಸಿದರೂ ಭಗವಂತನ ಅನುಗ್ರಹವಿಲ್ಲದೆ ಅವನ ದರ್ಶನ ಪಡೆಯಲಾರೆವು. ಸಾಕ್ಷಾತ್ಕಾರ ಪಡೆದರೂ ಅವನ ಅನುಗ್ರಹವಿಲ್ಲದೆ ಮೋಕ್ಷದ ಅನಂತ ಫಲವನ್ನು ಹೊಂದಲಾರೆವು. ಸಾಕ್ಷಾತ್ಕಾರ, ಮೋಕ್ಷ ಇವೆರಡಕ್ಕೂ ಭಗವಂತನ ಅನುಗ್ರಹ ಅವಶ್ಯವಾಗಿದೆ. ಜಗತ್ತಿನ ಅಸ್ತಿತ್ವಕ್ಕೆ ಕಾರಣನಾದ ಸತ್ಯರೂಪಿಯಾದ ಭಗವಂತನು ಸೂರ್ಯಮಂಡಲದೊಳಗೆ ನೆಲೆಸಿರುವನು. ತನ್ನನ್ನು ಹೃದಯದಲ್ಲಿ ಧರಿಸಿದ ಭಕ್ತನಿಗೆ

ಸೂರ್ಯಮಂಡಲದಲ್ಲಿ ಅಡಗಿದ ತನ್ನ ಸ್ವರೂಪವನ್ನು ಪ್ರದರ್ಶಿಸಬೇಕೆಂದು ಸಾಧಕನ ಭಕ್ತಿಪೂರ್ವಕ ಪ್ರಾರ್ಥನೆಯಾಗಿದೆ.

ಅನಾದಿಕಾಲದಿಂದಲೂ ಜೀವನನ್ನು ಆವರಿಸಿಕೊಂಡಿರುವ ಅಜ್ಞಾನವನ್ನು ನಾಶಪಡಿಸುವುದು ಸಾಮಾನ್ಯ ಕೆಲಸವಲ್ಲ. ಸಾಧಾರಣವಾದ ಪ್ರಯತ್ನಕ್ಕೆ ಅದು ಭಗ್ನವಾಗಲಾರದು. ಆತ್ಮನು ಜ್ಞಾನಸ್ವರೂಪಿಯಾದರೂ ಅವನನ್ನು ಈ ಅಜ್ಞಾನವು ಆವರಿಸಿದೆ. ಸ್ವರೂಪಭೂತವಾದ ಅಂತರಂಗ ಜ್ಞಾನದ ಜೊತೆಗೆ ನಮ್ಮ ಅಂತಃಕರಣದಲ್ಲಿ ಪರಿಣಮಿಸುವ ಶ್ರವಣ, ಮನನ, ಧ್ಯಾನರೂಪವಾದ ಬಾಹ್ಯ ಜ್ಞಾನವೂ ಬೇಕು. ಅಂತರಂಗ, ಬಹಿರಂಗ ಜ್ಞಾನಗಳು ಎರಡೂ ಕಡೆಗಳಿಂದ ಏಕಕಾಲದಲ್ಲಿ ಘರ್ಷಣೆ ನಡೆಸಿದಾಗ ಮಾತ್ರ ಬಲವಾಗಿ ಬೇರೂರಿದ ಈ ಅಜ್ಞಾನವು ಧ್ವಂಸವಾಗುವುದು. ಅದಕ್ಕಾಗಿ ಪರಿಪೂರ್ಣನೂ, ಸರ್ವಜ್ಞನೂ, ಸರ್ವನಿಯಾಮಕನೂ, ಜ್ಞಾನಗಮ್ಯನೂ ಆದ ಭಗವಂತನಲ್ಲಿ ''ನನ್ನ ಚೈತನ್ಯರೂಪವಾದ ಅಂತರ ಜ್ಞಾನವನ್ನೂ ಮನೋಮಯವಾದ ಬಾಹ್ಯ ಜ್ಞಾನವನ್ನೂ ವಿಸ್ತಾರಗೊಳಿಸು. ನಿನ್ನ ಕಲ್ಯಾಣಮಯವಾದ ಸುಂದರರೂಪ ದರ್ಶನ ನೀಡು. ಅನಂತ ಗುಣಗಳಿಂದ ಕೂಡಿದ ನಿನಗಿಂತ ಬೇಕಾದವರು ನನಗೆ ಜಗತ್ತಿನಲ್ಲಿ ಬೇರೊಬ್ಬರಿಲ್ಲ. ನೀನು ಅಹೇಯ. ನಿನ್ನನ್ನು ನಾನು ಬಿಡಲಾರೆ. ಸಜ್ಜನರಿಗೆ ನಿನ್ನ ಅಸ್ತಿತ್ವದಲ್ಲಿ ಎಂದೆಂದಿಗೂ ಸಂಶಯವಿಲ್ಲ. ಅವರು ನಿನ್ನನ್ನು ಸನಾತನ ಸತ್ಯನೆಂದು ದೃಢವಾಗಿ ನಂಬಿದ್ದಾರೆ. ಜ್ಞಾನರೂಪಿಯಾದ ಹರಿಯೇ ! ನನ್ನಲ್ಲಿ ಅನುಗ್ರಹೋನ್ಮುಖನಾಗು. ನನ್ನ ಸಾಧನೆಯನ್ನೆಲ್ಲಾ ಸರ್ವಜ್ಞನಾದ ನೀನು ಅರಿತಿರುವೆಯಷ್ಟೇ? ನನ್ನ ಪಾಪಗಳನ್ನೆಲ್ಲಾ ದೂರೀಕರಿಸಿ ಮೋಕ್ಷದ ನಿಧಿಯ ಕಡೆಗೆ ನನ್ನನ್ನು ಕೊಂಡೊಯ್ಯು ಭಕ್ತಿ, ಜ್ಞಾನಗಳ ಜೊತೆಗೆ ಅನಂತ ಪ್ರಣಾಮಗಳ ಹೊರತು ಬೇರೇನನ್ನು ಪರಿಪೂರ್ಣನಾದ ನಿನಗೆ ನಾನು ಅರ್ಪಿಸಬಲ್ಲೆ ?'' ಎಂದು ಹೃದಯವನ್ನೇ ಅರಳಿಸುವ ಭಕ್ತಿಮಯ ಸುಂದರ ಪ್ರಾರ್ಥನೆಯೊಡನೆ ಈ ಉಪನಿಷತ್ತು ಮುಕ್ತಾಯವಾಗಿದೆ.

೩-೨ ತಲವಕಾರೋಪನಿಷತ್

ಭಗವಂತನಾದ ಶ್ರೀವಿಷ್ಣುವಿನ ತತ್ತ್ವವನ್ನು ತಿಳಿಯಲು ಬ್ರಹ್ಮ – ರುದ್ರರು ನಡೆಸುವ ಸಂವಾದವೇ ತಲವಕಾರೋಪನಿಷತ್ತು. ಈ ಉಪನಿಷತ್ತಿನಲ್ಲಿ ವಿಷ್ಣುವು ಪ್ರತಿಪಾದ್ಯನಾದರೆ ಬ್ರಹ್ಮದೇವರು ಉಪದೇಶಕರಾಗಿರುವರು. ಮಹಾರುದ್ರದೇವರೇ ಜಿಜ್ಞಾಸುಗಳಾಗಿ ಬ್ರಹ್ಮನಲ್ಲಿ ಪ್ರಶ್ನೆಯನ್ನು ಕೇಳುತ್ತಾರೆ. ಹೀಗೆ ತ್ರಿಮೂರ್ತಿಗಳಾದ ಬ್ರಹ್ಮ - ವಿಷ್ಣು - ಮಹೇಶ್ವರರಿಗೆ ಈ ಉಪನಿಷತ್ತು ಸಂಬಂಧಿಸಿದೆ.

ವೈಜಯಂತವೆನ್ನುವ ತನ್ನ ಸ್ಥಾನದಲ್ಲಿ ಬ್ರಹ್ಮದೇವರು ಆಸೀನರಾಗಿದ್ದಾಗ ರುದ್ರದೇವರು ಅಲ್ಲಿಗೆ ಆಗಮಿಸಿ ಪ್ರಶ್ನಿಸುತ್ತಾರೆ. ನಮ್ಮ ಮನಸ್ಸು ಮತ್ತು ಇಂದ್ರಿಯಗಳು ನಾನಾ ವಿಷಯಗಳ ಕಡೆ ಧಾವಿಸುತ್ತವೆ. ಇವು ಕೆಲವೊಮ್ಮೆ ಕೆಟ್ಟ ವಿಷಯಗಳತ್ತ ಹರಿಯುತ್ತವೆ. ಕೆಲವು ಸಲ ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತವೆ. ಇವುಗಳ ಈ ವರ್ತನೆ, ಚಲನವಲನಗಳಿಗೆ ಪ್ರೇರಕನಾದ ಮಹಾಚೇತನನು ಯಾರು ? ಜೀವೋತ್ತಮನಾದ ಮುಖ್ಯಪ್ರಾಣನೇ ? ಅವನಿಗೂ ಮತ್ತೊಬ್ಬ ನಿಯಾಮಕನಿರುವನೇ ? ಅವನು ಯಾರು ?

ಶ್ರೀನಾರಾಯಣನನ್ನು ಧ್ಯಾನಿಸಿ ಬ್ರಹ್ಮದೇವರು ಈ ಪ್ರಶ್ನೆಗೆ ಉತ್ತರಿಸುವರು. ನಮ್ಮ ಎಲ್ಲಾ ಇಂದ್ರಿಯಗಳಿಗೂ, ಮನಸ್ಸಿಗೂ ನಮ್ಮಲ್ಲಿ ನಿಯಾಮಕನಾಗಿರುವ ಮುಖ್ಯಪ್ರಾಣನಿಗೂ ಪ್ರೇರಕನಾಗಿರುವವನು ಸರ್ವದೇವನಿಯಾಮಕನಾದ ವಿಷ್ಣುವೇ ಆಗಿರುವನು. ದೇವತೆಗಳಿಗೂ ಪೂರ್ತಿಯಾಗಿ ತಿಳಿಯದಂತಹ ಅಪರಿಮೇಯ ಪರಿಪೂರ್ಣ ವ್ಯಕ್ತಿತ್ವವು ಅವನದಾಗಿದೆ. ಅವನು ನಮ್ಮ ಕಣ್ಣಿಗೆ ಕಣ್ಣಾಗಿರುವನು. ನಮ್ಮ ಮನಸ್ಸಿಗೆ ಅವನು ಮನಸ್ಸಾಗಿದ್ದರೆ ನಮ್ಮ ಪ್ರಾಣಕ್ಕೆ ಅವನು ಪ್ರಾಣನಾಗಿದ್ದಾನೆ.

ಎಂದರೆ ನಮ್ಮ ಕಣ್ಣು, ಕಿವಿ, ಮನಸ್ಸು, ಪ್ರಾಣ ಇವುಗಳೆಲ್ಲದರ ಅಸ್ತಿತ್ವ ಪ್ರವೃತ್ತಿಗಳೆಲ್ಲವೂ ಅವನ ಅಧೀನವಾಗಿದೆ. ನಮ್ಮ ಕಣ್ಣು ಕಣ್ಣಾಗಿರಲು ನಮ್ಮ ಮನಸ್ಸು ಮನಸ್ಸಾಗಿರಲು ಅವನೇ ಕಾರಣ.

ಭಗವಂತನನ್ನು ತಾನು ಪೂರ್ಣನಾಗಿ ತಿಳಿದಿದ್ದೇನೆಂದು ಭಾವಿಸುವವನು ನಿಜವಾಗಿಯೂ ಭಗವಂತನನ್ನು ತಿಳಿದಿಲ್ಲ. ಅವನಿಗೆ ಭಗವಂತನ ಪೂರ್ಣತೆಯ ಜ್ಞಾನವಿದ್ದಿದ್ದರೆ ತಾನು ಪರಮಾತ್ಮನನ್ನು ತಿಳಿದಿದ್ದೇನೆಂಬ ಭ್ರಮೆಗೆ ಅವನು ಒಳಗಾಗುತ್ತಿರಲಿಲ್ಲ. ಆದುದರಿಂದ ವಸ್ತುತಃ ಅವನು ಪರಮಾತ್ಮನ ಬಗ್ಗೆ ಅಜ್ಞಾನಿಯೇ ಆಗಿರುವನು. ತಾನು ಭಗವಂತನನ್ನು ಚೆನ್ನಾಗಿ ತಿಳಿದಿಲ್ಲವೆಂದು ಭಾವಿಸುವವನೇ ನಿಜವಾದ ಬ್ರಹ್ಮಜ್ಞಾನಿಯು. ಪರಮಾತ್ಮನು ಪರಿಪೂರ್ಣನು, ಅಪರಿಮೇಯನು ಎಂಬುದನ್ನು ಆತನು ಅರ್ಥ ಮಾಡಿಕೊಂಡಿರುವುದರಿಂದ ಪ್ರಾಂಜಲವಾಗಿ ತನ್ನ ಅಜ್ಞಾನವನ್ನು ಒಪ್ಪಿಕೊಳ್ಳುವ ವಿನಮ್ರತೆಯನ್ನು ಆತನು ತೋರಿಸುತ್ತಾನೆ. ಜ್ಞಾನ, ಅಜ್ಞಾನಗಳ ವಿವೇಚನೆಯನ್ನು ನಾವು ಈ ರೀತಿ ಮಾಡಬೇಕೆಂದು ಉಪನಿಷತ್ತು ಹೇಳುತ್ತದೆ.

ನೇದಂ ಯದಿದಮುಪಾಸತೇ

ನಮ್ಮ ಆತ್ಮಸ್ವರೂಪವನ್ನೇ ನಾವು ಬ್ರಹ್ಮ ಎಂದು ತಿಳಿದುಕೊಳ್ಳಬಾರದು. ಶರೀರೇಂದ್ರಿಯಗಳಿಗಿಂತ ಬೇರೆಯಾದ ಜೀವಾತ್ಮನಿರುವಂತೆ ಜೀವಾತ್ಮನಿಗಿಂತಲೂ ಬೇರೆಯಾಗಿ ಅವನ ಜೊತೆಗೆ ಇದ್ದುಕೊಂಡು ಅವನ ನಿಮಾಮಕನಾಗಿ ಪರಮಾತ್ಮನಿದ್ದಾನೆ. ''ನ ಇದಂ'' ಈ ಜೀವನೇ ಭಗವಂತನಲ್ಲ. ''ಯದಿದಂ ಉಪ ಆಸ ತೇ'' ಇವನ ''ಉಪ'' ಸಮೀಪದಲ್ಲಿಯೇ ಆಸ ನಿಯಾಮಕನಾಗಿ ಇರುವ ಇನ್ನೊಂದು ವಸ್ತುವೇ ಭಗವಂತನು. ಆ ಪರಮಾತ್ಮನ ಅನುಗ್ರಹದಿಂದಲೇ ಜೀವರ ಎಲ್ಲಾ ಪ್ರವೃತ್ತಿ ವ್ಯವಹಾರಗಳು ನಡೆಯುತ್ತಿರುವಾಗ ಈ ದುರ್ಬಲ ಜೀವನು ಹೇಗೆ ಸರ್ವಶಕ್ತ ಪರಮಾತ್ಮನಾಗಬಲ್ಲನು ?

ಉಪಾಖ್ಯಾನ

ಒಮ್ಮೆ ಭಗವಂತನು ದೇವಾಸುರರ ಸಮರದಲ್ಲಿ ದೇವತೆಗಳ ಒಳಗೆ ನೆಲಸಿ ಅವರಿಗೆ ವಿಜಯವನ್ನು ದೊರಕಿಸಿದನು. ಆದರೆ ದೇವತೆಗಳು ಇದನ್ನು ತಿಳಿಯದೆ ತಮ್ಮ ಶಕ್ತಿಯಿಂದಲೇ ತಮಗೆ ಜಯವು ದೊರಕಿದೆಯೆಂದು ಭಾವಿಸಿದ್ದರು. ಬಾಹ್ಯ ಯುದ್ಧದಲ್ಲಿ ಸೋತ ಅಸುರರು ದೇವತೆಗಳ ಅಂತರಂಗವನ್ನು ಪ್ರವೇಶಿಸಿ ಕಲುಷಿತಗೊಳಿಸಿದ್ದರಿಂದ ಅವರಲ್ಲಿ ಈ ಅಹಂಕಾರ ಮತ್ತು ವಿಸ್ಮರಣೆಯುಂಟಾಯಿತು. ಅವರನ್ನು ಎಚ್ಚರಿಸಲು ಯಕ್ಷರೂಪವನ್ನು ಸ್ವೀಕರಿಸಿ ಪಾರ್ವತಿ, ರುದ್ರ, ಬ್ರಹ್ಮರ ಜೊತೆಗೆ ಭಗವಂತನು ದೇವತೆಗಳ ಮುಂದೆ ನಿಂತನು. ಅಗ್ನಿಯೂ, ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ವಾಯುವೂ ಈ ಯಕ್ಷರೂಪಧಾರಿಯಾದ ಭಗವಂತನನ್ನು ತಿಳಿಯಲು ಪ್ರಯತ್ನಿಸಿದರು. ಜಗತ್ತನೇ ಸುಡಬಲ್ಲ ಶಕ್ತಿಯನ್ನು ಅಗ್ನಿಯು ಭಗವಂತನ ಮುಂದೆ ಹೇಳಿಕೊಂಡರೆ ವಿಶ್ವವನ್ನೇ ಬುಡಮೇಲು ಮಾಡುವ ತನ್ನ ಸಾಮರ್ಥ್ಯದ ಬಗ್ಗೆ ವಾಯುವು ಕೊಚ್ಚಿಕೊಂಡನು. ಆದರೆ ಭಗವಂತನು ಮುಂದಿಟ್ಟ ಹುಲ್ಲುಕಡ್ಡಿಯನ್ನು ಸುಡಲು ಅಗ್ನಿಗೆ ಸಾಧ್ಯವಾಗದಿದ್ದರೆ ವಾಯುವಿಗೆ ಅದನ್ನು ಅಲುಗಾಡಿಸಲೂ ಸಾಧ್ಯವಾಗಲಿಲ್ಲ. ಈ ಯಕ್ಷನು ಯಾರೆಂಬುದನ್ನು ತಿಳಿಯಲಾರದೆ ಅವಮಾನಿತರಾಗಿ ಅವರಿಬ್ಬರೂ ದೂರ ಸರಿದರು. ಇಂದ್ರನು ಈ ಯಕ್ಷನನ್ನು ವಿಚಾರಿಸಲು ಮುಂದೆ ಬಂದಾಗ ಯಕ್ಷನು ಅದೃಶ್ಯನಾಗಿ ಉಮಾದೇವಿಯು ಪ್ರತ್ಯಕ್ಷಳಾದಳು. ಅವಳಿಂದಲೇ ಉಪದೇಶವನ್ನು ಪಡೆಯುವ ಅರ್ಹತೆಯು ಇಂದ್ರನದಾಗಿತ್ತು. ಉಮಾದೇವಿಯು ಇಂದ್ರನಿಗೆ ಯಕ್ಷರೂಪದಿಂದ ಬಂದವನು ಸಾಕ್ಷಾತ್ ಪರಬ್ರಹ್ಮನೆಂದು ತಿಳಿಸಿ ದೇವತೆಗಳ ಈ ವಿಜಯಕ್ಕೆ ಅವನೇ ಕಾರಣಪುರುಷನೆಂದು ಬೋಧಿಸುತ್ತಾಳೆ. ದೇವತೆಗಳ ಅಹಂಕಾರವು ಇಳಿಯಿತು. ಅಸುರಾವೇಶದ ಕತ್ತಲು ದೂರ ಸರಿಯಿತು.

ಬ್ರಹ್ಮಜ್ಞಾನದ ಬೆಳಕನ್ನು ಅನುಭವಿಸಿದರು. ಬ್ರಹ್ಮ, ವಾಯು, ರುದ್ರ, ಶೇಷ, ಗರುಡರೂ ಅವರ ಪತ್ನಿಯರೂ ಅಹಂಕಾರಪರವಶರಾಗಿ ಅವನನ್ನು ಮರೆಯಲಿಲ್ಲ. ಆದುದರಿಂದ ಇಂದ್ರಾದಿ ದೇವತೆಗಳಿಗಿಂತ ಇವರು ಶ್ರೇಷ್ಠರಾಗಿರುವರು. ಉಳಿದ ದೇವತೆಗಳಲ್ಲಿ ಇಂದ್ರನೇ ಮೊದಲು ಬ್ರಹ್ಮನನ್ನು ತಿಳಿದಿದ್ದರಿಂದ ಅವನು ಉತ್ತಮನೆನಿಸಿದ್ದಾನೆ. ಕಾಮ, ಸೂರ್ಯ, ಚಂದ್ರ, ವರುಣ, ಯಮ ಮುಂತಾದ ದೇವತೆಗಳು ಈ ಬ್ರಹ್ಮಜ್ಞಾನವನ್ನು ಪಡೆಯಲು ಸಹಕರಿಸಿದ್ದಾರೆ. ದಿಕ್‌ಪಾಲಕ ವಾಯುವೂ, ಅಗ್ನಿಯೂ ಮೊತ್ತಮೊದಲು ಈ ಯಕ್ಷನನ್ನು ನೋಡಿ ಭಗವಂತನ ಜ್ಞಾನದ ಪ್ರಯತ್ನವನ್ನು ಆರಂಭಿಸಿದರು. ಆದುದರಿಂದ ದೇವತೆಗಳಲ್ಲಿ ಇವರೆಲ್ಲರಿಗೂ ವಿಶಿಷ್ಟ ಸ್ಥಾನವಿದೆ. ಹೀಗೆ ಬ್ರಹ್ಮಜ್ಞಾನದ ಸಂಬಂಧದಲ್ಲಿ ಇರುವ ಕ್ರಮವನ್ನು ಅನುಸರಿಸಿಯೇ ದೇವತೆಗಳ ತಾರತಮ್ಯವನ್ನು ನಿರ್ಧರಿಸಲಾಗಿದೆ. ಅಗ್ನಿಯಿಂದ ಆರಂಭಿಸಿ ಬ್ರಹ್ಮದೇವರವರೆಗೆ ದೇವತೆಗಳ ವಿಭಿನ್ನ ಸ್ತರಗಳನ್ನು ಸೂಚಿಸಿ ಪರಬ್ರಹ್ಮನಾದ ವಿಷ್ಣುವೇ ಜೀವರಿಗೂ ದೇವತೆಗಳಿಗೂ ಪ್ರವರ್ತಕನೆಂಬುದನ್ನೇ ಉಪನಿಷತ್ತು ಈ ಉಪಾಖ್ಯಾನದ ಮೂಲಕವಾಗಿ ದೃಢಪಡಿಸಿದೆ.

ದೇವತೆಗಳ ಒಳಗೆ ಕಪಿಲ ರೂಪದಿಂದ ಭಗವಂತನು ನೆಲೆಸಿದ್ದಾನೆ. ಬೆಳಕಿಗೆ ಬೆಳಕನ್ನು ನೀಡುವ ಈ ಭಗವಂತನೇ ಕಣ್ಣು ಮುಚ್ಚಿಕೊಂಡು ವಿಶ್ವದ ಎಲ್ಲ ಶಕ್ತಿಯನ್ನೂ ಉಪಸಂಹರಿಸಿಕೊಂಡು ಕ್ಷೀರಸಾಗರದಲ್ಲಿ ಪವಡಿಸುವ ಪುರಾಣ ಪುರುಷನು.

ದೇವತೆಗಳಲ್ಲಿ ಕಪಿಲನಾಗಿ ಭಗವಂತನು ನೆಲೆಸಿದ್ದರೆ ಈ ದೇಹದೊಳಗೆ ಅನಿರುದ್ಧನಾಗಿ ಅವನು ವಾಸಿಸಿದ್ದಾನೆ. ಅವನೆಡೆಗೆ ನಮ್ಮ ಮನಸ್ಸು ಪೂರ್ತಿಯಾಗಿ ಹೋಗಲಾರದು. ಆದರೆ ನಮ್ಮ ಮನಸ್ಸಿನ ವ್ಯಾಪಾರವೆಲ್ಲ ಅವನಿಂದಲೇ ನಡೆಯುತ್ತದೆ. ಮನಸ್ಸಿಗೆ ಅಗೋಚರನೂ, ಮನೋನಿಯಾಮಕನೂ ಆದ ಪರಮಾತ್ಮನು ಸರ್ವವ್ಯಾಪ್ತನೂ ಎಲ್ಲರ ಭಜನೆ-ಸ್ತೋತ್ರಗಳಿಗೆ ಪಾತ್ರನೂ ಆಗಿ "ತದ್ವನ" ಎಂದೂ ಕರೆಯಲ್ಪಡುವನು.

ಭಗವಂತನ ಸರಿಯಾದ ಜ್ಞಾನವೇ ವಿದ್ಯೆ. ವೇದ, ವೇದಾಂಗಗಳ ಅಧ್ಯಯನ ಬ್ರಹ್ಮಸೂತ್ರಗಳ ನೆಲೆಯಲ್ಲಿ ಅವುಗಳ ಮನನ, ಮಂಥನದಿಂದ ಈ ವಿದ್ಯೆಯನ್ನು ನಾವು ಪಡೆಯಬಲ್ಲೆವು. ತಪಸ್ಸು, ಇಂದ್ರಿಯನಿಗ್ರಹ, ಸತ್ಕರ್ಮಾಚರಣೆಯಿದ್ದಲ್ಲಿ ಮಾತ್ರ ಈ ವಿದ್ಯೆಯು ಸ್ಥಿರವಾಗಿ ನಮ್ಮಲ್ಲಿ ನಿಲ್ಲುವುದು ಎಂಬುದಾಗಿ ವಿದ್ಯೆಯ ಕಾರಣ ಮತ್ತು ನೆಲೆಗಳನ್ನು ಕೊನೆಯಲ್ಲಿ ನಿರೂಪಿಸಿದ್ದಾರೆ.

೩-೩ ಕಾಠಕೋಪನಿಷತ್

ವಾಜಶ್ರವ ಮುನಿಗಳ ಮೊಮ್ಮಗ ಉದ್ದಾಲಕ ಮುನಿಗಳು ಯಜ್ಞದಲ್ಲಿ ಅನುಪಯುಕ್ತಗಳಾದ ಬಡಕಲು ದನಗಳನ್ನು ದಾನ ಮಾಡುವುದನ್ನು ಕಂಡು ಅವರ ಪುತ್ರನಾದ ಬಾಲಕ ನಚಿಕೇತನಿಗೆ ಸಮಾಧಾನವಾಗಲಿಲ್ಲ. ಇಂತಹ ಗೋವುಗಳನ್ನು ದಾನ ಮಾಡುವುದಕ್ಕಿಂತ ನನ್ನನ್ನೇ ಯಾರಿಗಾದರೂ ದಾನ ಮಾಡಬಹುದಲ್ಲವೇ ? ತನ್ನಿಂದ ದಾನ ಪಡೆದವರಿಗೆ ಏನಾದರೂ ಉಪಯೋಗವಾಗಬಹುದೆಂದು ನಚಿಕೇತನು ಎರಡು, ಮೂರು ಸಲ ಹೇಳಿದಾಗ ಸಿಟ್ಟಿನ ಆವೇಶದಲ್ಲಿ ಉದ್ದಾಲಕರು ಮೃತ್ಯುವಿಗೆ ನಿನ್ನನ್ನು ನೀಡುವೆನೆಂದು ಶಪಿಸಿದರು. ಆದರೆ ನಚಿಕೇತನು ಮೃತ್ಯುವಿಗೆ ಹೆದರಲಿಲ್ಲ. ಸಾರ್ಥಕ ಜೀವನವನ್ನು ನಡೆಸುವವರಿಗೆ ಮೃತ್ಯುವಿನ ಭಯವೇಕೆ ? ನಿರ್ಭೀತಿಯಿಂದ ತನ್ನ ಬಳಿಗೆ ಬಂದ ನಚಿಕೇತನ ಧೈರ್ಯ-ಶ್ರದ್ಧೆಗಳನ್ನು ಕಂಡು ಯಮನಿಗೆ ಆಶ್ಚರ್ಯವಾಯಿತು. ಅವನಿಗೆ ಮೆಚ್ಚಿ ಮೂರು ವರಗಳನ್ನು ಕೊಡಲು ಯಮನು ಸಿದ್ಧನಾದನು. ಮೊದಲನೆಯ ವರವಾಗಿ ತನ್ನ ತಂದೆಯ ಸೌಮನಸ್ಯವನ್ನು ನಚಿಕೇತನು ಕೇಳಿದನು.

ಎರಡನೆಯ ವರವಾಗಿ ಯಜ್ಞದಲ್ಲಿ ನಾವು ಆರಾಧನೆ ಮಾಡುವ ಅಗ್ನಿಯ ಅಂತರ್ಗತನಾದ ಭಗವಂತನ ಸ್ವರೂಪವನ್ನು ನಚಿಕೇತನು ಕೇಳಿದನು. ಯಮದೇವರು ಅದನ್ನು ನಚಿಕೇತನಿಗೆ ಚೆನ್ನಾಗಿ ವಿವರಿಸಿ ಉಪದೇಶಿಸಿದರು. ತಾನು ಕಲಿತ ಪಾಠವನ್ನು ಸ್ವಲ್ಪವೂ ತಪ್ಪದೆ ಗುರುಗಳಿಗೆ ನಚಿಕೇತನು ಒಪ್ಪಿಸಿದಾಗ ಯಮದೇವರು ಸಂತುಷ್ಟರಾಗಿ ಅವನನ್ನು ಪ್ರಶಂಸಿಸಿ ಅವನಿಗೆ ಅನರ್ಘ್ಯವಾದ ಕಂಠಹಾರವನ್ನು ಉಡುಗೊರೆಯಾಗಿ ನೀಡುವರು. ಅಗ್ನಿಯ ಅಂತರ್ಗತನಾದ ಪರಮಾತ್ಮನನ್ನು ಸ್ಮರಿಸಿಕೊಂಡು ಯಜ್ಞವನ್ನು ಆಚರಿಸಿದರೆ ಸ್ವರ್ಗವನ್ನು ಪಡೆದು ಅಲ್ಲಿ ಕೆಲಕಾಲವಿದ್ದು ಕ್ರಮದಿಂದ ಮುಕ್ತಿಯನ್ನು ಪಡೆಯಬಹುದು. ಭಗವಂತನ ಸರಿಯಾದ ಅನುಸಂಧಾನದ ಜೊತೆಗೆ ಮಾಡುವ ಕರ್ಮಾನುಷ್ಠಾನವೂ ಮುಕ್ತಿಗೆ ಸಹಾಯಕವಾಗಬಹುದು.

ನಚಿಕೇತನು ಮೂರನೆಯ ವರವಾಗಿ ಮುಕ್ತಿಯಲ್ಲೂ ಜೀವರಿಗೆ ನಿಯಾಮಕನಾಗಿರುವ ಭಗವಂತನ ವಿಷಯವನ್ನು ಪ್ರಶ್ನಿಸುವನು. ಕೆಲವರು ಮರಣಾನಂತರ ಜೀವದ ಅಸ್ತಿತ್ವದ ಬಗ್ಗೆ ನಚಿಕೇತನು ಪ್ರಶ್ನಿಸಿದ್ದಾನೆಂದು ಅರ್ಥ ಮಾಡುವರು. ತಾನು ತನ್ನ ದೇಹವನ್ನು ತೊರೆದು ಯಮನ ಬಳಿಗೆ ಬಂದ ನಚಿಕೇತನಿಗೆ ದೇಹಕ್ಕಿಂತ ಬೇರೆಯಾದ ಆತ್ಮದ ಬಗ್ಗೆ ಸಂಶಯವಿರಲು ಸಾಧ್ಯವೇ? ಆದುದರಿಂದ ಇಲ್ಲಿ ಮರಣವೆಂದರೆ, ಈ ಸ್ಥೂಲದೇಹದ ವಿಯೋಗವನ್ನು ಮಾತ್ರ ಇಟ್ಟುಕೊಳ್ಳದೆ 'ಈ ಸ್ಥೂಲಸೂಕ್ಷ್ಮ ದೇಹಗಳೆರಡನ್ನೂ ಪರಿತ್ಯಜಿಸಿ ಮುಕ್ತಿಯನ್ನು ಪಡೆದಾಗ ಅಂತಹ ಜೀವರಿಗೆ ನಿಯಾಮಕನಾಗಿ ಭಗವಂತನು ಇರುವನೇ? ಅವನ ಸ್ವರೂಪವೇನು?' ಎನ್ನುವುದೇ ನಚಿಕೇತನ ಪ್ರಶ್ನೆಯಾಗಿದೆ. ಸಂಸಾರದಲ್ಲಿ ಮಾತ್ರ ಜೀವ ಬ್ರಹ್ಮ ಎನ್ನುವ ವ್ಯತ್ಯಾಸವಿದೆ. ಮುಕ್ತಿಯಲ್ಲಿ ಜೀವ ಪರಮಾತ್ಮರಿಗೆ ಈ ಭೇದಭಾವವೇ ಇಲ್ಲ. ಈಗ ತೋರುವ ಭೇದವೆಲ್ಲ ಬರೇ 'ಮಾಯಾ' ಎನ್ನುವ ವಾದವಿದೆ. ಆದುದರಿಂದ ಮುಕ್ತಿಯಲ್ಲಿ ಜೀವ ಪರಮಾತ್ಮರ ಸಂಬಂಧದ ಬಗ್ಗೆ ವಿಶೇಷ ಜಿಜ್ಞಾಸೆ ಮೂಡುವುದು ಸಹಜ. ಅಜ್ಞಾನ, ಮಾಯೆಗಳ ಸಂಪರ್ಕವೇ ಇಲ್ಲದ ಮುಕ್ತಿಯಲ್ಲಿ ಜೀವರಿಗೆ ನಿಯಾಮಕನಾಗಿ ಪರಮಾತ್ಮನು ಇರುವುದಾದರೆ ಜೀವ ಪರಮಾತ್ಮರಿಗೆ ಇರುವ ಭೇದವು ಪೂರ್ಣ ವಾಸ್ತವವೆನಿಸುತ್ತದೆ. ಈ ಸತ್ಯವನ್ನು ತಿಳಿಯುವುದೇ ನಚಿಕೇತನ ಉದ್ದೇಶವಾಗಿತ್ತು. ನಚಿಕೇತನ ಈ ಪ್ರಶ್ನೆಯನ್ನು ಯಮದೇವರು ಬೇಗನೆ ಉತ್ತರಿಸುವುದಿಲ್ಲ. ಸಂಸಾರದಲ್ಲೂ ಮುಕ್ತಿಯಲ್ಲೂ ಜೀವರಿಗೆ ನಿಯಾಮಕನಾದ ಭಗವಂತನ ರೂಪದ ಜ್ಞಾನ ಮತ್ತು ಉಪಾಸನೆಗೆ ಬೇಕಾದ ಅರ್ಹತೆಯು ನಚಿಕೇತನಿಗೆ ಇದೆಯೇ ಎಂಬುದನ್ನು ಪರೀಕ್ಷಿಸುವರು. ಅತ್ಯಂತ ರಹಸ್ಯವಾದ ಈ ಭಗವತ್ತತ್ವದ ಉಪದೇಶದ ಬದಲು ಬೇರೆ ಭೌತಿಕ ಸುಖಸಂಪತ್ತುಗಳನ್ನು ನೀಡುವುದಾಗಿ ಹೇಳಿ ಈ ಪ್ರಶ್ನೆಯ ಬಗ್ಗೆ ಹಠ ಹಿಡಿಯಬಾರದೆಂದೂ ಒತ್ತಾಯಿಸುವರು. ಸಂಸಾರದಲ್ಲಿ ಅಲಭ್ಯವಾದ ಸಕಲ ಸುಖಸಾಧನಗಳನ್ನು ಭೂಮಿ, ಐಶ್ವರ್ಯ, ಧನ, ಕನಕ, ರತ್ನಗಳು ಚಿರಜೀವನ ಮೊದಲಾದ ಸಕಲ ಭೋಗ ಭಾಗ್ಯಗಳನ್ನು ನಚಿಕೇತನು ಮನಸ್ಸು ಮಾಡಿದರೆ ಯಮನಿಂದ ಪಡೆಯಬಹುದಿತ್ತು. ಆದರೆ ನಚಿಕೇತನು ಈ ಯಾವ ಆಮಿಷ, ಆಕರ್ಷಣೆಗಳಿಗೂ ಒಳಗಾಗಲಿಲ್ಲ. ಈ ಭೋಗ ಸಾಮಗ್ರಿಗಳಿಂದ ದೊರೆಯುವ ಸುಖದ ಇತಿಮಿತಿಗಳನ್ನು ಆತನು ಚೆನ್ನಾಗಿ ತಿಳಿದಿದ್ದನು. ವಿಷಯ ಭೋಗದಿಂದ ನಮ್ಮ ಕಾಮನೆಯು ತಣಿಯುವುದಿಲ್ಲ. ಅದು ಇನ್ನೂ ಹೆಚ್ಚು ಪ್ರಜ್ವಲಿತವಾಗುವುದು. ಮನಸ್ಸನ್ನು ಪ್ರಸನ್ನಗೊಳಿಸುವ ಬದಲು ಉದ್ರಿಕ್ತಗೊಳಿಸುವ ಈ ಸಾಂಸಾರಿಕ ಸುಖಭೋಗದಿಂದ ಶಾಂತಿಯು ದೊರಕಲಾರದು. ಹಳೆಯ ಸುಖ ಸನ್ನಿವೇಶಗಳನ್ನು ನೆನೆಯುತ್ತಾ ಕಳೆಯುವ ದೀರ್ಘಜೀವನವು ಬೋರ್ ಆಗಿ ಪರಿಣಮಿಸಬಹುದು. ಎಷ್ಟು ಧನ ಸಂಪತ್ತು ದೊರಕಿದರೂ ಎಷ್ಟು ಕಾಲ ಬದುಕಿದರೂ ಯಾರಿಗೂ ಸಾಕೆಂಬ ತೃಪ್ತಿ ಉಂಟಾಗಲಾರದು. 'ಇಂದ್ರಿಯ ಮನಸ್ಸುಗಳನ್ನು ಕೆರಳಿಸಿ ಶರೀರವನ್ನು ಕರಗಿಸುವ ಈ ಎಲ್ಲಾ ಭೋಗ ಸಾಮಗ್ರಿಗಳು ನಿನಗೇ ಇರಲಿ. ನಾನು ಕೇಳಿದ ಈ ಭಗವತ್ತತ್ವದ ಹೊರತು ಬೇರೆ ಯಾವುದನ್ನೂ ಬಯಸಲಾರೆ'ನೆಂದು ಖಡಾಖಂಡಿತವಾಗಿ ಯಮದೇವರ ಕೊಡುಗೆಯನ್ನು

ನಚಿಕೇತನು ನಿರಾಕರಿಸುವನು. ನಚಿಕೇತನ ಈ ತ್ಯಾಗ ವೈರಾಗ್ಯಗಳನ್ನು ಕಂಡು ಯಮದೇವರು ಅತ್ಯಂತ ಪ್ರಸನ್ನರಾಗಿ ಅವನ ಈ ನಿಷ್ಠೆಯನ್ನು ತುಂಬಾ ಪ್ರಶಂಸಿಸುವರು.

ಜೀವನದಲ್ಲಿ ಶ್ರೇಯಸ್ಸು ಮತ್ತು ಪ್ರೇಯಸ್ಸು ಇವೆರಡೂ ನಮ್ಮ ಮುಂದಿವೆ. ಭೌತಿಕ ಸುಖ ಸಾಮಗ್ರಿಯೇ ಪ್ರೇಯಸ್ಸು. ಆಧ್ಯಾತ್ಮಿಕ ಸುಖ ಸಾಧನವನ್ನು ಶ್ರೇಯಸ್ಸು ಎಂದು ಕರೆಯುತ್ತಾರೆ. ಇವೆರಡರಲ್ಲಿ ನಾವು ಯಾವುದನ್ನು ಆಯ್ಕೆ ಮಾಡುತ್ತೇವೆಯೋ ಅದರಿಂದಲೇ ನಮ್ಮ ವ್ಯಕ್ತಿತ್ವ ಮತ್ತು ಭವಿಷ್ಯ ನಿರ್ಧಾರವಾಗುತ್ತದೆ. ಪ್ರೇಯಸ್ಸಿನ ಆಕರ್ಷಣೆಗೆ ಮರುಳಾಗದೆ ಶ್ರೇಯಸ್ಸಿನ ದಾರಿಯಲ್ಲಿ ನಡೆದಾಗಲೇ ನಮಗೆ ಒಳಿತಾಗುವುದು. ಭೌತಿಕ ಸುಖದ ಆಕರ್ಷಣೆಗೆ ಒಳಗಾಗದೆ ಆಧ್ಯಾತ್ಮಿಕ ನಿಷ್ಠೆಯನ್ನು ತೋರಿದ ಧೀರ ಚೇತನನೆಂದು ನಚಿಕೇತನನ್ನು ಯಮನು ಹೊಗಳಿ ತತ್ತ್ವೋಪದೇಶವನ್ನು ಆರಂಭಿಸುವನು.

ಉಪದೇಶದ ಮೊದಲ ಭಾಗ

ಪರಮಾತ್ಮನು ಜೀವರಿಗೆ ಅಂತರ್ಯಾಮಿಯಾಗಿ ಸಂಸಾರದಲ್ಲೂ , ಮುಕ್ತಿಯಲ್ಲೂ , ನಿಯಾಮಕನಾಗಿ ಇರುವನು. ಅವನು ಅನಂತಗುಣಪೂರ್ಣನು. ವೇದಗಳು ತನ್ನ ಪ್ರತಿಯೊಂದು ವಾಕ್ಯಪದಗಳಿಂದಲೂ ಅವನ ಈ ಅನಂತ ಗುಣಗಳನ್ನು ವರ್ಣಿಸುತ್ತವೆ. ಸಕಲ ವೇದಗಳ ಸಾರವನ್ನು ಹೇಳುವ ವೇದದ ಸಂಕ್ಷಿಪ್ತ ರೂಪವೆನಿಸಿದ ಓಂಕಾರವು ಅವನು ಗುಣಪೂರ್ಣನೆಂದು ತಿಳಿಸುತ್ತದೆ. ಅವನ ಪೂರ್ಣತೆಯನ್ನು ಸಂಗ್ರಹವಾಗಿ ತಿಳಿಸುವ ಶ್ರೇಷ್ಠನಾಮವೇ ಓಂಕಾರವಾಗಿದೆ. ಜ್ಞಾನಿಗಳು ಮಾಡುವ ತಪಸ್ಸು, ಸತ್ಕರ್ಮಗಳಿಗೆಲ್ಲಾ ಭಗವಂತನನ್ನು ಪ್ರಸನ್ನಗೊಳಿಸುವುದೇ ಮುಖ್ಯ ಉದ್ದೇಶವಾಗಿದೆ. ಆ ಭಗವಂತನೇ ಜಗತ್ತಿನ ಸರ್ವಶ್ರೇಷ್ಠ ವಸ್ತು . ಮುಕ್ತಿಯಲ್ಲೂ ಅವನ ಅನುಗ್ರಹದಿಂದಲೇ ಜೀವನು ಜನನ, ಮರಣಗಳನ್ನು ದಾಟಿ ಅಮೃತತತ್ವವನ್ನು ಪಡೆಯುತ್ತಾನೆ. ಜೀವನಿಗೆ ಜಡ ವಸ್ತುಗಳಿಗೆ ಇರುವ ಹುಟ್ಟು-ಸಾವುಗಳಿಲ್ಲ. ಆತನು ಅಜರಾಮರನು. ಆದರೆ ಪ್ರಕೃತಿ ಮತ್ತು ದೇಹದ ಸಂಬಂಧದಿಂದ ಜನನ-ಮರಣ ಮುಂತಾದ ವಿಕೃತಿಗಳಿಗೆ ಒಳಗಾಗುವನು. ಆದರೆ ಭಗವಂತನ ಸಾಕ್ಷಾತ್ಕಾರವನ್ನು ಪಡೆದ ನಂತರ ಮುಕ್ತಿಯಲ್ಲಿ ಅವನ ಅನುಗ್ರಹದಿಂದ ಈ ವಿಕೃತಿ, ಬಾಧೆಗಳನ್ನು ಜೀವನು ದಾಟಿ ನಿಲ್ಲುವನು. ಜೀವರು ತಮ್ಮ ಕೈಮೀರಿದ ಅನಾದಿ ಜಡಬಂಧನಕ್ಕೆ ಒಳಗಾಗಿ ತಮ್ಮದೇ ಆದ ಚೈತನ್ಯಮಯವಾದ ಸಹಜ ಆನಂದ ಸ್ವರೂಪವನ್ನು ಅನುಭವಿಸಲಾರದಂಥ ದುಃಸ್ಥಿತಿಗೆ ಒಳಪಟ್ಟಿದ್ದಾರೆ. ತಮ್ಮಲ್ಲಿ ದಿವ್ಯವಾದ ಆನಂದದ ನಿಧಿಯಿದ್ದರೂ ಅದು ಅವರಿಗೆ ಇಲ್ಲದಂತಾಗಿದೆ. ತಮ್ಮನ್ನು ಆವರಿಸಿದ ಈ ತೊಗಟೆಯನ್ನು ತೊಡೆದುಹಾಕುವ ಶಕ್ತಿಯೂ ಅವರಿಗಿಲ್ಲ. ಅದಕ್ಕಾಗಿ ಭಗವಂತನ ಶಕ್ತಿಯನ್ನು ಜೀವರು ಅವಲಂಬಿಸಬೇಕಾಗಿದೆ. ಬೆಳಕು ಬಂದಾಗಲೇ ಕತ್ತಲೂ ಸರಿಯುವಂತೆ ಭಗವಂತನನ್ನು ಪಡೆದಾಗಲೇ ನಮಗೆ ಈ ಅಜ್ಞಾನದ ಬಿಡುಗಡೆಯಾಗುವುದು. ಬರೀ ಪಾಂಡಿತ್ಯ, ಅಧ್ಯಯನ, ಪ್ರವಚನಗಳ ಬಲದಿಂದ ಅವನನ್ನು ಪಡೆಯಬಲ್ಲೆವೆಂದು ಅಹಂಕಾರ ಸಲ್ಲದು. ನಮ್ಮ ವಿದ್ವತ್ತು , ಪ್ರವಚನ ಮುಂತಾದ ಸಾಧನೆಗಳಿಂದ ಅವನನ್ನು ಒಲಿಸಿ, ಭಕ್ತಿಯನ್ನು ಬೆಳೆಸಿ ಅವನ ಅನುಗ್ರಹದಿಂದಲೇ ಅವನ ಸಾಕ್ಷಾತ್ಕಾರ, ಬಂಧವಿಮೋಚನೆ ಮತ್ತು ನಮ್ಮ ನೈಜವಾದ ಆನಂದ ಸ್ವರೂಪದ ಆವಿಷ್ಕಾರವಾಗಲು ಸಾಧ್ಯ. ಆದುದರಿಂದ ಈ ಸಂಸಾರದಲ್ಲೂ, ಮುಕ್ತಿಯಲ್ಲೂ ಅವನ ಅನುಗ್ರಹ ನಿಯಮನಗಳು ನಮಗೆ ಅವಶ್ಯ. ಜನನ-ಮರಣ ಚಕ್ರಗಳಲ್ಲಿ ಸಿಲುಕಿ ಬಳಲಿದ ನಮಗೆ ಪ್ರಳಯಕಾಲದಲ್ಲಿ ಸರ್ವವನ್ನೂ ಉಪಸಂಹರಿಸಿ ನಮಗೆ ಬಹುಕಾಲದ ವಿಶ್ರಾಂತಿಯನ್ನು ನೀಡುವ ಸರ್ವಶಕ್ತನಾದ ಪರಮಾತ್ಮನೇ ಈ ಅಭೇದ್ಯವಾದ ಭವಬಂಧನವನ್ನು ನಾಶ ಮಾಡಬಲ್ಲನು. ಅವನ ಸಾಕ್ಷಾತ್ಕಾರ ಮತ್ತು ಅನುಗ್ರಹವನ್ನು ಪಡೆಯಲು ಚಾರಿತ್ರ್ಯ , ಭಕ್ತಿ , ತತ್ತ್ವಜ್ಞಾನ, ಸಂತೃಪ್ತಿ ಇವು ಆವಶ್ಯಕ.

ಪರಮಾತ್ಮನು ನಮ್ಮ ಶರೀರದೊಳಗೆ ದೇಹ ಮತ್ತು ಆತ್ಮಗಳನ್ನು ನಿಯಮಿಸಲು ''ಆತ್ಮ'' ಮತ್ತು

''ಅಂತರಾತ್ಮ''ವೆಂಬ ಎರಡು ರೂಪಗಳನ್ನು ಧರಿಸಿ ನಿಂತಿದ್ದಾನೆ. ಅವನು ಸಜ್ಜನರಿಗೆ ನೆರಳಾಗಿ ಸಂತೋಷವನ್ನೂ ದುರ್ಜನರಿಗೆ ಬಿಸಿಲಾಗಿ ಸಂತಾಪವನ್ನೂ ನೀಡುವನು. ಅವನಿಗೆ ಇಷ್ಟವಾದ ವಸ್ತುಗಳು ಪ್ರಾಕೃತವಾದ ಭಕ್ಷ್ಯ -ಭೋಜ್ಯಗಳಲ್ಲ. ಬರೇ ಅವುಗಳ ಸಮರ್ಪಣೆಯಿಂದ ಅವನಿಗೆ ಸಮಾಧಾನವಿಲ್ಲ. ನಾವು ಆಚರಿಸುವ ಸತ್ಕರ್ಮಗಳೇ ಅವನಿಗೆ ಇಷ್ಟವಾದ ಭೋಜ್ಯ ವಸ್ತುಗಳು. ನಮ್ಮ ಈ ಸತ್ಕರ್ಮಗಳನ್ನು ಸ್ವೀಕರಿಸಿ ಅವನು ಪ್ರಸನ್ನನಾಗುವನು.

ನಮ್ಮ ಜೀವನ ಯಾತ್ರೆಗೆ ಈ ಶರೀರವೇ ರಥ. ಜೀವಾತ್ಮನು ರಥಿಕನಾಗಿ ರಥಯಾತ್ರೆಯನ್ನು ನಡೆಸಬೇಕು. ಇಂದ್ರಿಯಗಳೇ ಈ ರಥಕ್ಕೆ ಹೂಡಿದ ಕುದುರೆಗಳು. ಈ ಇಂದ್ರಿಯಗಳು ಸ್ವಚ್ಛಂಧವಾಗಿ ನಮ್ಮನ್ನು ಎಳೆದು ನಮ್ಮ ಜೀವನವು ಪ್ರಪಾತದಲ್ಲಿ ಬೀಳಬಹುದು. ಅದಕ್ಕಾಗಿ ನಮ್ಮ ಸುಗಮವಾದ ಯಾತ್ರೆಗೆ ಇಂದ್ರಿಯಗಳ ಮೇಲೆ ಹತೋಟಿ ಆವಶ್ಯಕ. ಕುದುರೆಗಳು ಎಳೆದ ಕಡೆಗೆ ನಾವು ಹೋಗದೆ ಅವುಗಳನ್ನು ನಿಯಂತ್ರಿಸುವಂತೆ ಇಂದ್ರಿಯಗಳನ್ನು ನಮ್ಮ ಅಧೀನದಲ್ಲಿ ಇಟ್ಟುಕೊಳ್ಳಬೇಕು. ನಮ್ಮಲ್ಲಿರುವ ವಿವೇಕ ಶಕ್ತಿಯೇ ಸಾರಥಿಯಾಗಿ, ಮನಸ್ಸನ್ನೇ ಕಡಿವಾಣವನ್ನಾಗಿ ಬಳಸಿ ಸಿಕ್ಕಾಪಟ್ಟೆ ಓಡುವ ಈ ಇಂದ್ರಿಯಾತ್ಮಗಳನ್ನು ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾಡಬೇಕು. ಶ್ರೀ ಹರಿಯೇ ಈ ಪಯಣದಲ್ಲಿ ನಾವು ಕೊನೆಗೆ ಮುಟ್ಟಬೇಕಾದ ಗುರಿ.

ತದ್ವಿಷ್ಣೋಃ ಪರಮಂ ಪದಮ್

ಈ ಇಂದ್ರಿಯಗಳನ್ನು ಗೆಲ್ಲಲು ನಮ್ಮ ಸಾಧನೆ, ಪ್ರಯತ್ನಗಳನ್ನು ನಡೆಸುವುದರ ಜೊತೆಗೆ ಇಂದ್ರಿಯ ಅಭಿಮಾನಿ ದೇವತೆಗಳ ಒಲವನ್ನೂ ಪಡೆಯಬೇಕು. ಅಭಿಮಾನಿ ದೇವತೆಗಳನ್ನು ತಿಳಿದು ಒಲಿಸಿ ಅವರ ಅನುಗ್ರಹ ಬಲದಿಂದಲೇ ನಮ್ಮ ಋಷಿಮುನಿಗಳು ಭೌತಿಕ ಶಕ್ತಿಯ ಮೇಲೆ ವಿಜಯವನ್ನು ಸಾಧಿಸಿದ್ದಾರೆ. ವಿಷಯ ವಸ್ತುಗಳು, ಇಂದ್ರಿಯ, ಮನಸ್ಸು, ಬುದ್ಧಿ ಮುಂತಾದವುಗಳ ಅಭಿಮಾನಿ ದೇವತೆಗಳನ್ನೂ, ಅವರ ಶಕ್ತಿ, ಗುಣ ಸ್ವರೂಪಗಳನ್ನೂ ಆ ದೇವತೆಗಳಲ್ಲಿ ಪರಸ್ಪರವಾಗಿ ಇರುವ ಅಂತರ, ಒಂದು ದೈವೀಶಕ್ತಿಯು ಇನ್ನೊಂದು ದೈವೀಶಕ್ತಿಯನ್ನು ನಿಯಂತ್ರಿಸುವ ವಿಧಾನ, ಇವರೆಲ್ಲರಿಗೂ ಅಂತರ್ಯಾಮಿಯಾಗಿ ನಿಯಾಮಕನಾಗಿರುವ ಪರಮಾತ್ಮನನ್ನು ಅರಿತುಕೊಳ್ಳಬೇಕು. ಇದನ್ನೇ ದೇವತಾ ತಾರತಮ್ಯವೆಂದು ಹೇಳಲಾಗಿದೆ. ವಸ್ತುಗಳ ಅನ್ಯೋನ್ಯ ಸಂಬಂಧಕ್ಕೆ ಒಳಗಿರುವ ದೈವೀಶಕ್ತಿಗಳ ಸಂಬಂಧವೂ ಕಾರಣವಾಗಿದೆ. ಈ ಪರಸ್ಪರ ಸಂಬಂಧ ಮತ್ತು ತಾರತಮ್ಯಗಳನ್ನು ತಿಳಿದು ಈ ದೇವತೆಗಳನ್ನೂ ಸರ್ವನಿಯಾಮಕನಾದ ಭಗವಂತನನ್ನೂ ಒಲಿಸಿಕೊಂಡಾಗ ಇಂದ್ರಿಯಗಳನ್ನು ಗೆಲ್ಲಲು ಏನೂ ಕಷ್ಟವಾಗಲಾರದು.

ಜೀವರು ಪರಮಾತ್ಮನ ಕಡೆಗೆ ಸಾಗುವ ಈ ಮಹಾಯಾತ್ರೆಯು ಅತ್ಯಂತ ಕಠಿಣವಾದುದು. ಕತ್ತಿಯ ಅಲಗಿನಂತಿರುವ ಈ ದಾರಿಯಲ್ಲಿ ನಡೆಯಲು ಜ್ಞಾನಿಗಳ ಮಾರ್ಗದರ್ಶನವು ಅವಶ್ಯ. ಆದುದರಿಂದ ಎದ್ದೇಳಿರಿ ! ಎಚ್ಚರಗೊಳ್ಳಿರಿ ! ಜ್ಞಾನಿಗಳ ಬಳಿಗೆ ಹೋಗಿ ಅವರಿಂದ ಉಪದೇಶ ಪಡೆಯಿರಿ ! ''ಉತ್ತಿಷ್ಠತ ! ಜಾಗ್ರತ ! ಪ್ರಾಪ್ಯ ವರಾನ್ನಿಬೋಧತ'' ಎಂದು ಉಪನಿಷತ್ತು ಘೋಷಿಸುತ್ತದೆ. ಜೀವ, ಜಡ, ಪರಮಾತ್ಮರನ್ನು ವಿಶ್ಲೇಷಿಸಿ ಅವರಲ್ಲಿರುವ ಪ್ರತ್ಯೇಕತೆಯನ್ನು ತಿಳಿದುಕೊಂಡಿರುವ ತತ್ತ್ವಜ್ಞಾನಿಯ ಉಪದೇಶದಿಂದಲೇ ನಮಗೆ ಸಿದ್ಧಿ. ಭಗವಂತನನ್ನೂ ಜೀವ ಜಡರನ್ನೂ ಪೃಥಕ್ಕರಿಸಿ ತಿಳಿಯದ ಸಂಕೀರ್ಣ ಜ್ಞಾನಿಗಳಿಂದ ಶ್ರೇಯಸ್ಸು ದೊರೆಯದು. ''ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ'' ಎಂಬುದಾಗಿ ಉಪನಿಷತ್ತು ಸಾರಿ ಹೇಳಿದೆ.

ಉಪದೇಶದ ಎರಡನೆ ಭಾಗ

ಹೊರಮುಖಿಗಳಾಗಿರುವ ಈ ಎಲ್ಲಾ ಇಂದ್ರಿಯಗಳೂ ಬಾಹ್ಯ ವಸ್ತುಗಳ ಕಡೆಗೆ ಧಾವಿಸುತ್ತವೆ. ಅವುಗಳ ಈ ಸಹಜ ಪ್ರವೃತ್ತಿಯನ್ನು ತಡೆದು ನಮ್ಮ ಎಲ್ಲಾ ಮನೋವೃತ್ತಿಗಳನ್ನೂ ಭಗವಂತನ ಕಡೆಗೆ ತಿರುಗಿಸಲು ಸಮರ್ಥನಾದ ಧೀರ ವ್ಯಕ್ತಿಯೇ ಅಮೃತತ್ವವನ್ನು ಪಡೆಯಬಲ್ಲನು.

ನಮ್ಮ ಪಂಚೇಂದ್ರಿಯಗಳಿಗೆ ಗೋಚರವಾಗುವ ಜಡ ಪದಾರ್ಥಗಳಿಗಿಂತ ಭಿನ್ನನಾದ ಜೀವಾತ್ಮನಲ್ಲಿಯೇ ನಮ್ಮ ಅನ್ವೇಷಣೆಯು ಮುಕ್ತಾಯವಾಯಿತೆಂದು ತಿಳಿಯಬಾರದು. ಜೀವಾತ್ಮನ ಆಚೆಗೆ ಪರತತ್ವವೇ ಇಲ್ಲ. ಅದೇ ಕೊನೆಯೆಂದು ಭ್ರಮಿಸಬಾರದು. ''ಆತ್ಮಾನಂ ಜೀವಮಂತಿಕಾತ್'' ಜೀವನ ಸನಿಹದಲ್ಲೇ ಭೂತ ಭವಿಷ್ಯತ್ ಪ್ರಪಂಚಕ್ಕೆ ನಿಯಾಮಕನಾಗಿ ನೆಲೆಸಿರುವ ಪರಮಾತ್ಮನೇ ಪರತತ್ವ. ಪರಮಾತ್ಮನನ್ನು ಜೀವನ ಸಮೀಪದಲ್ಲೇ ಇರುವ ವಸ್ತುವೆಂದು ಹೇಳಿದ್ದರಿಂದ ಅವನು ಜೀವನಿಂದ ಭಿನ್ನನೆಂಬುದು ಸ್ಪಷ್ಟವಾಗುವುದು. ತಾನೇ ತನ್ನ ಸಮೀಪದಲ್ಲಿರುತ್ತದೆಯೆಂದು ಯಾರೂ ಹೇಳಲಾರರು.

ಆದುದರಿಂದ ಜೀವ ಪರಮಾತ್ಮರ ಪ್ರತ್ಯೇಕತೆಯನ್ನು ತಿಳಿದ ಜ್ಞಾನಿಗಳಾದ ಗುರುಗಳ ಉಪದೇಶ, ಅವರ ಜೊತೆಗೆ ನಡೆಸುವ ಚರ್ಚೆ ವಿಮರ್ಶೆಗಳಿಂದ ಈ ತತ್ತ್ವಜ್ಞಾನವನ್ನು ನಾವು ಪಡೆಯಬೇಕು. ಹಿಂದಿನ ಕಾಲದಲ್ಲಿ ಅರಣಿ ಮಂಥನದಿಂದ (ಎರಡು ಕಾಷ್ಠಗಳ ಪರಸ್ಪರ ಘರ್ಷಣೆ) ಅಗ್ನಿಯು ಪ್ರಕಟವಾಗುವಂತೆ ಗುರುಶಿಷ್ಯರು ನಡೆಸುವ ತತ್ತ್ವವಿಮರ್ಶೆಯಿಂದ ಜ್ಞಾನಾಗ್ನಿಯು ಪ್ರಜ್ವಲಿತವಾಗುವುದು. ಗರ್ಭಿಣಿಯರು ತಮ್ಮ ಗರ್ಭದಲ್ಲಿ ಮಗುವು ಚೆನ್ನಾಗಿ ಬೆಳೆಯಬೇಕೆಂದು ಭೋಗದಲ್ಲಿ ಶಿಸ್ತನ್ನು ಕಾಪಾಡಿಕೊಂಡು ಎಚ್ಚರದಿಂದ, ಸಂಯಮದಿಂದ ವರ್ತಿಸುವಂತೆ ನಾವು ನಮ್ಮ ಹೃದಯ ಗರ್ಭದಲ್ಲಿ ಭಗವಂತನ ಜ್ಞಾನವು ಬೆಳೆಯಲು ಅನುಕೂಲವಾಗುವಂತೆ ವಿಶೇಷ ಧಾರ್ಮಿಕ ನಿಯಮಗಳನ್ನು ಪಾಲಿಸಿಕೊಂಡು ಬದುಕಬೇಕು.

ಪರಮಾತ್ಮನು ಎಲ್ಲಿಯೋ ದೂರದಲ್ಲಿ ಸ್ವರ್ಗದ ಅರಮನೆಯಲ್ಲಿ ಆಸೀನವಾಗಿ ಮಹಾರಾಜನಂತೆ ಜಗತ್ತನ್ನು ಆಳುವುದಿಲ್ಲ. ಜಗತ್ತಿನ ಪ್ರತಿಯೊಂದು ವಸ್ತುಗಳಲ್ಲೂ ಅಂತರ್ಯಾಮಿಯಾಗಿ ನಿಂತು ಜಗತ್ತನ್ನು ನಡೆಸುತ್ತಿದ್ದಾನೆ. ಸೂಕ್ಷ್ಮಾತಿಸೂಕ್ಷ್ಮ ಕಾರ್ಯಗಳೂ ಅವನ ಚಾಲನೆಯಿಲ್ಲದೆ ನಡೆಯದು. ಅದಕ್ಕಾಗಿ ಅನಂತ ವಸ್ತುಗಳಲ್ಲಿ ಅನಂತ ರೂಪಗಳನ್ನು ಧರಿಸಿ ಅವನು ವಿಶ್ವವ್ಯಾಪಾರವನ್ನು ನಡೆಸುತ್ತಾನೆ. ಈ ಬೇರೆ ಬೇರೆ ವಸ್ತುಗಳಲ್ಲಿ ನಿಯಾಮಕನಾಗಿ ಇರುವ ದೇವರು ಬೇರೆ ಬೇರೆಯೆಂದಾಗಲಿ ಸೃಷ್ಟಿ, ಸಂಹಾರ, ಪಾಲನೆ, ಮುಂತಾದ ಮಹಾವ್ಯಾಪಾರಗಳನ್ನು ಮಾಡುವ ವ್ಯಕ್ತಿಗಳು ಬೇರೆ ಬೇರೆಯೆಂದಾಗಲಿ ಲೋಕದ ಉದಾಹರಣೆಯಿಂದ ತಿಳಿದು ಸ್ವತಂತ್ರರಾದ ಅನೇಕ ದೇವರುಗಳನ್ನು ನಾವು ಕಲ್ಪಿಸಬಾರದು. ಇಲ್ಲಿಯೂ ಮುಕ್ತಿಯಲ್ಲಿಯೂ ನಮಗೆ ನಿಯಾಮಕನಾಗಿರುವವನು ಒಬ್ಬನೇ. ವಸ್ತುಗಳು ಅನೇಕವಿದ್ದರೂ ಅವುಗಳಲ್ಲಿ ನಿಯಾಮಕನಾಗಿ ನೆಲೆಸಿದವನು ಅನಂತ ಗುಣಪೂರ್ಣನೂ, ನಿರ್ದೋಷನೂ ಆದ ಭಗವಂತನು ಒಬ್ಬನೇ. ಅನೇಕೇಶ್ವರವಾದವನ್ನು ಸರ್ವಥಾ ಒಪ್ಪಬಾರದು. ಭಗವಂತ ಪೂರ್ಣತೆಗೆ ಭಂಗ ತರುವ ಈ ವಾದವು ಅನರ್ಥಕ್ಕೆ ಕಾರಣವಾಗುವುದು.

ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ

ಅದರಂತೆ ಪರಮಾತ್ಮನ ಅಪರಿಮೇಯ ಕಲ್ಯಾಣ ಸದ್ಗುಣಗಳೂ ಅವನಿಂದ ಬೇರೆಯಲ್ಲ. ದೀಪದಿಂದ ಬೆಳಕನ್ನೂ ಸಕ್ಕರೆಯಿಂದ ಸಿಹಿಯನ್ನೂ ಪ್ರತ್ಯೇಕಿಸಲು ಹೇಗೆ ಸಾಧ್ಯವಿಲ್ಲವೋ ಅದರಂತೆ ಭಗವಂತನನ್ನೂ ಅವನ ಗುಣಗಳನ್ನೂ ಪ್ರತ್ಯೇಕಿಸಲಾರೆವು. ಅವನ ಗುಣಗಳೆಲ್ಲವೂ ಅವನ ಸಹಜ ಸ್ವಭಾವ. ಅವನ ಗುಣಗಳನ್ನು ಅವನಿಂದ ಬೇರೆಯೆಂದು ತಿಳಿಯುವುದರಿಂದ ಅವುಗಳನ್ನು ಅಸ್ವಾಭಾವಿಕವೆಂದು

ಭಾವಿಸಿದಂತಾಗುವುದು. ಅದರಂತೆ ಚೇತನ ಸ್ವರೂಪಿಯಾದ ಭಗವಂತನಿಂದ ಬೇರೆಯಾದಲ್ಲಿ ಅವನ್ನು ಜಡ ಹಾಗೂ ಪ್ರಾಕೃತವೆಂದು ತಿಳಿಯಬೇಕಾಗುತ್ತದೆ. ದೇವರಿಗೆ ಪ್ರಕೃತಿಯ ಸಂಬಂಧವಿರಲು ಸಾಧ್ಯವೇ? ಆದುದರಿಂದ ದೇವರು ಮತ್ತು ಅವನ ಸದ್ಗುಣಗಳಿಗೆ ಭೇದವಿದೆಯೆಂದು ತಿಳಿಯುವುದು ದೋಷ ಚಿಂತನೆಯಲ್ಲೇ ಪರ್ಯವಸಾನ ಹೊಂದುತ್ತದೆ.

ಮುಕ್ತಿಯಲ್ಲಿ ಜೀವನು ಪರಮಾತ್ಮನನ್ನು ಹೊಂದಿ ಅವನೇ ಆಗುವನೆಂದು ಕೆಲವರು ಭಾವಿಸುತ್ತಾರೆ. ಈ ಉಪನಿಷತ್ತು ಇದನ್ನು ಒಪ್ಪದೆ ಉದಾಹರಣೆಯೊಂದಿಗೆ ವಿವರಣೆಯನ್ನು ನೀಡುತ್ತದೆ.

ಪಾತ್ರೆಯ ನೀರಿನ ಜೊತೆಗೆ ಸೇರಿದ ನೀರು ಮುಂಚೆ ಇದ್ದ ನೀರೇ ಆಗಲಾರದು. ಪಾತ್ರೆಯಲ್ಲಿದ್ದ ಆ ನೀರಿನಂತೆ ಆಕಾರವನ್ನು ಪಡೆಯುತ್ತದೆ. ಅದರಂತೆ ಭಗವಂತನನ್ನು ಸೇರಿದ ಜ್ಞಾನಿಶ್ರೇಷ್ಠನೂ ಭಗವಂತನಂತೆ ಚಿದಾನಂದ ರೂಪಿಯಾಗುವನಲ್ಲದೆ ಅವನೇ ಆಗಲಾರನು. ''ತಾದೃಗೇವ ಭವತಿ'' ಎಂಬುದಾಗಿ ಮುಕ್ತಿಯಲ್ಲಿರುವ ಜೀವ ಪರಮಾತ್ಮರ ಸಂಬಂಧದ ಸ್ವರೂಪವನ್ನು ಉಪನಿಷತ್ತು ಸ್ಪಷ್ಟಪಡಿಸಿದೆ.

ಈ ಶರೀರವು ಒಂದು ನಗರ. ಭಗವಂತನೇ ಇದರ ರಾಜನು. ಹೊರತು, ನಾವೇ ಇದರ ಒಡೆಯರೆಂದು ತಿಳಿದುಕೊಳ್ಳಬಾರದು. ಭಗವಂತನ ಅಧೀನವಾದ ಈ ಶರೀರ ಇಂದ್ರಿಯ ವಿಷಯಗಳನ್ನು ತನ್ನದೇ ಎಂದು ಭಾವಿಸಿ, ಮೋಹ, ಅಭಿಮಾನಗಳಿಗೆ ಒಳಗಾಗಿ ಸಾಮಾನ್ಯ ಜನರು ಈ ಸಂಸಾರದಲ್ಲಿ ಕ್ಲೇಶಪಡುತ್ತಾರೆ. ಆದರೆ ಭಗವತ್ ಸಾಕ್ಷಾತ್ಕಾರಿಗಳು ಈ ಅಭಿಮಾನವನ್ನು ಕಿತ್ತೆಸೆಯುವುದರಿಂದ ಸಂಸಾರದಲ್ಲಿ ಇದ್ದರೂ ಅವರಿಗೆ ಯಾವ ಕ್ಲೇಶವೂ ಇರುವುದಿಲ್ಲ. ಕ್ಲೇಶದ ಮೂಲವಾದ ಅಭಿಮಾನವೇ ಇಲ್ಲದಿರುವಾಗ ಅವರಿಗೆ ಕ್ಲೇಶವೆಲ್ಲಿ? ಅವರು ಸಂಸಾರದಲ್ಲೂ ಮುಕ್ತರಂತೆಯೇ ಇರುವರು. ಈ ಜೀವನ್ಮುಕ್ತರು ಅತಿಶಯಿತವಾದ ಭಗವತ್‌ಪ್ರೇಮ ಮತ್ತು ಅವನ ಪರಮ ಅನುಗ್ರಹದಿಂದ ಕ್ರಮೇಣ ಮುಕ್ತಿಯನ್ನು ಪಡೆಯುವರು. ಈ ಜೀವನ್ಮುಕ್ತರ ಆದರ್ಶವನ್ನು ಮುಂದಿಟ್ಟುಕೊಂಡು ಈ ಸಾಧನ ಶರೀರವಾದ ಮನುಷ್ಯ ದೇಹದಲ್ಲಿ ಒಂದು ಕ್ಷಣವನ್ನೂ ವ್ಯರ್ಥಗೊಳಿಸದೆ ಭಗವತ್ ಜ್ಞಾನಕ್ಕಾಗಿ ಪ್ರಯತ್ನಿಸಬೇಕು. ಜೀವನವು ದೀರ್ಘವಾಗಿದೆಯೆಂದು ಆಲಸ್ಯದಿಂದ ವರ್ತಿಸಬಾರದು. ಭೋಗ ಜೀವನದಲ್ಲಿ ಮುಳುಗಬಾರದು. ಈ ಶರೀರವು ದುರ್ಬಲವಾಗುವುದರೊಳಗೆ ನಮ್ಮ ಈ ಜನ್ಮದ ಸಾಧನೆಯನ್ನು ಪೂರ್ಣಗೊಳಿಸಬೇಕು. ಮುಂದೆ ಮರಣದ ನಂತರ ಅನೇಕ ನೀಚಯೋನಿಗಳಲ್ಲಿ ಸಿಲುಕಿ ಸಾಧನೆಯ ಈ ಅಪೂರ್ವ ಅವಕಾಶವನ್ನು ನಾವು ಕಳೆದುಕೊಳ್ಳುವಂತೆ ಆಗಬಾರದು.

ಭಗವಂತನೇ ನಮ್ಮ ಆರಾಧನೆಯ ಕೇಂದ್ರ. ಅವನೇ ನಮ್ಮ ಬಿಂಬರೂಪಿ. ಕಣ್ಣಿಗೆ ಕಾಣುವ ಬೆಂಕಿಯ ಒಳಗೆ ಅಗ್ನಿದೇವತೆಯು ನಿಯಾಮಕನಾಗಿ ಇರುವಂತೆ ನಮ್ಮ ಒಳಗೂ ಬಿಂಬರೂಪಿಯಾಗಿ ಭಗವಂತನು ಇದ್ದು ನಿಯಮನವನ್ನು ಮಾಡುವನು. ಬಿಂಬವಿಲ್ಲದೆ ಪ್ರತಿಬಿಂಬದಲ್ಲಿ ಯಾವ ಕ್ರಿಯೆಯೂ ನಡೆಯಲಾರದು. ಅದರಂತೆ ಪರಮಾತ್ಮನಿಲ್ಲದೆ ನಾವೂ ಯಾವ ವ್ಯಾಪಾರವನ್ನೂ ಮಾಡಲಾರೆವು. ಬಿಂಬ -ಪ್ರತಿಬಿಂಬಗಳಲ್ಲಿ ತುಂಬಾ ವ್ಯತ್ಯಾಸ, ಅಂತರವಿದ್ದರೂ ಒಂದು ರೀತಿಯ ಸಮಾನತೆಯಿರುವಂತೆ ಅನಂತ ಗುಣ ಸಮುದ್ರನಾದ ಪರಮಾತ್ಮನ ಮುಂದೆ ಜೀವನು ಒಂದು ಬಿಂದುವಾದರೂ ಅವನಂತೆಯೇ ಜೀವಾತ್ಮನೂ ಚಿದಾನಂದಮಯನಾಗಿ ಸಮಾನನೂ ಆಗಿರುವನು. ಆದರೆ ನಮ್ಮ ನೆರಳು - ಪ್ರತಿಬಿಂಬಗಳಲ್ಲಿರುವ ದೋಷ ಮಾಲಿನ್ಯಗಳನ್ನು ಬಿಂಬದಲ್ಲಿ ಕಾಣಲಾರೆವು. ಅದರಂತೆ ನಮ್ಮ ದೋಷ ದುರ್ಬಲತೆಗಳು ಬಿಂಬರೂಪಿಯಾದ ಹರಿಯಲ್ಲಿ ಸ್ವಲ್ಪವೂ ಇರಲಾರವು.

ಈ ಜಗತ್ತೇ ಒಂದು ಮಹಾವೃಕ್ಷ. ಭೂಮಿಯ ಒಂದು ಭಾಗದಲ್ಲಿ ಮರವು ನೆಲೆ ನಿಲ್ಲುವಂತೆ ಸರ್ವೋತ್ತಮನಾದ ಪರಮಾತ್ಮನೂ ಪ್ರಕೃತಿಯ ಅಧಿಷ್ಠಾತ್ರಿಯಾದ ಶ್ರೀತತ್ವವೂ ಈ ವಿಶ್ವದ ಆಧಾರಶಕ್ತಿಗಳು. ಪಂಚಭೂತಗಳೂ ಅವುಗಳ ಅಭಿಮಾನಿ ದೇವತೆಗಳೂ ಈ ಮರದ ಬೀಳಲುಗಳು.

ಇವುಗಳಿಗೂ ಪರಮಾತ್ಮನೇ ಆಧಾರ. ಜಗತ್ತಿನ ಮೂಲನಾದ ಪರಮಾತ್ಮನನ್ನು ತಿಳಿಯುವುದೇ ನಮ್ಮ ಜೀವನದ ಮೂಲೋದ್ದೇಶ. ಅದರಿಂದ ನಮ್ಮ ಬಾಳಿನ ಅಂತಿಮ ಸಿದ್ಧಿ. ಎಲ್ಲಾ ಜ್ಞಾನಿಗಳೂ ಭಗವಂತನನ್ನು ಒಂದೇ ರೀತಿಯಾಗಿ ವಿಶದವಾಗಿ ತಿಳಿಯಲಾರರು. ಅವರ ಜ್ಞಾನಶಕ್ತಿಯ ಹಿನ್ನೆಲೆಯಲ್ಲಿ ಅವರ ದರ್ಶನದಲ್ಲಿ ಅಂತರವಿದೆ. ಕೆಲವು ಜ್ಞಾನಿಗಳು ಸ್ವಪ್ನದಲ್ಲಿ ವಸ್ತುಗಳು ಕಾಣುವಂತೆ, ನೀರಲ್ಲಿ ಪ್ರತಿಬಿಂಬವು ತೋರುವಂತೆ, ಅಸ್ಪಷ್ಟವಾಗಿ ಭಗವಂತನನ್ನು ಕಾಣುವರು. ಕೆಲವರಂತೂ ಕನ್ನಡಿಯಲ್ಲಿ ಪ್ರತಿಬಿಂಬವು ತೋರುವಂತೆ ಇನ್ನೂ ನಿಚ್ಚಳವಾಗಿ ದೇವರನ್ನು ನೋಡುವರು. ಆದರೆ ಶ್ರೇಷ್ಠ ಜ್ಞಾನಿಗಳಿಗೆ ಬಿಸಿಲು ನೆರಳುಗಳ ಹೊಂದಾಣಿಕೆಯಿರುವ ಪ್ರದೇಶದಲ್ಲಿ ವ್ಯಕ್ತಿಯು ಸ್ಪಷ್ಟವಾಗಿ ಗೋಚರಿಸುವಂತೆ ಭಗವಂತನು ಚೆನ್ನಾಗಿ ಕಾಣಿಸುವನು.

ಶರೀರದಿಂದ ನಮ್ಮ ಜೀವಾತ್ಮನನ್ನು ನಾವು ಪ್ರತ್ಯೇಕಿಸಿ ನೋಡುವೆವು. ಆದರಂತೆ ಜೀವನಿಂದಲೂ ಪರಮಾತ್ಮನನ್ನು ಪೃಥಕ್ಕರಿಸಿ ನೋಡಬೇಕು. ಈ ಜೀವನೂ ದೇವರಿಗೆ ದೇಹದಂತೆ. ದೇಹದಲ್ಲಿದ್ದು ಜೀವನು ಅದನ್ನು ನಿಯಂತ್ರಿಸುವಂತೆ ಜೀವಾತ್ಮನಿಗೂ ಆತ್ಮನಾಗಿ ದೇವರು ಅವನನ್ನು ನಿಯಮಿಸುತ್ತಾನೆ. ಈ ದೇಹವಾಗಲೀ ಜೀವನಾಗಲೀ ನಮ್ಮ ಜೀವನದ ಕೇಂದ್ರ ಬಿಂದುವಾಗಿರಬಾರದು. ಪರಬ್ರಹ್ಮ ವಸ್ತುವೇ ಅಂತಹ ಕೇಂದ್ರ ಬಿಂದುವಾಗಿರಬೇಕು. ಅವನನ್ನು ಪಡೆಯುವುದೇ ನಮ್ಮ ಜೀವನದ ಗುರಿಯಾಗಿರಬೇಕು.

ಆಸ್ತಿಕ್ಯ ಭಾವನೆಯಿಂದಲೆ ಮುಕ್ತಿಯೆಂದು ಈ ಉಪನಿಷತ್ತಿನಲ್ಲೂ ಬೇರೆ ಕಡೆಯಲ್ಲಿಯೂ ಹೇಳಲಾಗುತ್ತದೆ. ಆಸ್ತಿಕ್ಯಭಾವನೆಯೆಂದರೇನು ? ದೇವರಿದ್ದಾನೆಂದು ತಿಳಿದುಕೊಳ್ಳುವುದು ಮಾತ್ರ ಆಸ್ತಿಕ್ಯ ಭಾವವಲ್ಲ. ಜಗತ್ತಿನ ಎಲ್ಲ ವಸ್ತುಗಳಿಗಿಂತ ಅವನು ಉತ್ತಮನೆಂದು ತಿಳಿದು ಎಲ್ಲದಕ್ಕಿಂತಲೂ ಮಿಗಿಲಾದ ಸ್ಥಾನವನ್ನು ಅವನಿಗೆ ನೀಡುವುದೇ ನಿಜವಾದ ಆಸ್ತಿಕ್ಯಭಾವವೆನಿಸುತ್ತದೆ. ಈ ಆಸ್ತಿಕ್ಯಭಾವನೆಯಿಂದಲೇ ತತ್ವಪ್ರವರ್ತಕನಾಗಿ ''ತತ್ತ್ವಭಾವ''ನೆನಿಸಿದ ಪರಮಾತ್ಮನ ಅನುಗ್ರಹವನ್ನು ಪಡೆದು ಪ್ರಕೃತಿ ಮುಂತಾದ ಜಡತತ್ವಗಳ ಬಂಧನದಿಂದ ಬಿಡುಗಡೆ ಹೊಂದಿ ಜೀವಾತ್ಮನು ಅಮೃತತ್ವವನ್ನು ಪಡೆಯುವನು.

೩-೪ ಷಟ್‌ಪ್ರಶ್ನೋಪನಿಷತ್

ಮೊದಲ ಪ್ರಶ್ನೆ

ಬ್ರಹ್ಮನಿಷ್ಠರಾದ ಆರು ಜನ ಋಷಿಗಳು ಭಗವಂತನ ಅನ್ವೇಷಣೆಯ ಕಳಕಳಿಯಿಂದ ''ಪಿಪ್ಪಲಾದ'' ಮಹರ್ಷಿಗಳ ಬಳಿಗೆ ಆಗಮಿಸಿದರು. ಅವರಿಗೆ ತನ್ನ ಜೊತೆಗೆ ಒಂದು ವರ್ಷ ವಿಶೇಷ ನಿಯಮದ ಗುರುಕಾಲವಾಸದ ನಂತರ ಪ್ರಶ್ನೆಗಳನ್ನು ಕೇಳಲು ಪಿಪ್ಪಲಾದರೂ ಅವಕಾಶ ನೀಡಿದರು.

ಅವರಲ್ಲಿ ಕಬಂಧಿಕಾತ್ಯಾಯನರು ಮೊದಲು ಪ್ರಶ್ನಿಸಿದರು. 'ಈ ಪ್ರಾಣಿಗಳ ಉತ್ಪತ್ತಿಗೆ ಕಾರಣ ಯಾರು?' ಪರಮಾತ್ಮನು ಮುಖ್ಯಪ್ರಾಣ, ಭಾರತಿದೇವಿಯವರ ಮೂಲಕವಾಗಿ ಎಲ್ಲಾ ಪ್ರಾಣಿಗಳನ್ನು ಸೃಜಿಸಿದ್ದಾನೆಂದು ಪಿಪ್ಪಲಾದವರು ಉತ್ತರಿಸುತ್ತಾರೆ. ಜಗತ್ತಿನಲ್ಲಿ ಜೀವವರ್ಗದ ಉತ್ಪತ್ತಿಗೆ ಸೂರ್ಯ, ಚಂದ್ರರೇ ಕಾರಣರೆಂದು ನಮಗೆ ತೋರಿದರೂ ಸೂರ್ಯ ಚಂದ್ರರೊಳಗೆ ಮುಖ್ಯಪ್ರಾಣ ಭಾರತೀದೇವಿಯರನ್ನು ನೆಲೆಗೊಳಿಸಿ ಅವರಿಂದಲೇ ಎಲ್ಲಾ ಜೀವರ ಸೃಷ್ಟಿಯನ್ನು ಪರಮಾತ್ಮನು ಮಾಡಿಸುತ್ತಾನೆ. ಸೂರ್ಯನೊಳಗೆ ಇರುವ ಮುಖ್ಯಪ್ರಾಣನು ಹತ್ತು ದಿಕ್ಕುಗಳಿಗೂ ಬೆಳಕನ್ನು ಬೀರಿ ಜಗತ್‌ಪ್ರಕಾಶಕನಾಗಿ ಈ ಸೃಷ್ಟಿಗೆ ಕಾರಣನಾಗಿರುವನು. ಎಲ್ಲಾ ದಿಗಭಿಮಾನಿ ದೇವತೆಗಳೂ ಅವನ ಅಧೀನರಾಗಿರುವರು.

ಎಲ್ಲಾ ವಸ್ತುಗಳ ಹುಟ್ಟು ಹಾಗೂ ಬದಲಾವಣೆಗಳು ಕಾಲದಿಂದ ಸಂಭವಿಸುತ್ತವೆಯೆಂದು ನಾವು ಭಾವಿಸಿದ್ದೇವೆ. ಈ ಕಾಲದಲ್ಲೂ ಪರಮಾತ್ಮ ಮತ್ತು ಮುಖ್ಯಪ್ರಾಣ ಭಾರತೀಯರು ನಿಂತು ಈ ಕಾರ್ಯ

ವನ್ನು ಮಾಡಿಸುತ್ತಾನೆ. ವರುಷ, ತಿಂಗಳು, ದಿನ ಈ ಕಾಲಖಂಡಗಳಲ್ಲಿ ಪರಮಾತ್ಮನೂ, ಉತ್ತರಾಯಣ, ದಕ್ಷಿಣಾಯನ, ಶುಕ್ಲಪಕ್ಷ, ಹಗಲು, ರಾತ್ರಿಗಳಲ್ಲಿ ಮುಖ್ಯಪ್ರಾಣ ಭಾರತಿಯರೂ ಸನ್ನಿಹಿತರಾಗಿ ಈ ಜಗದ್ ವ್ಯಾಪಾರವನ್ನು ನಡೆಸುತ್ತಿರೆಂದು ಪಿಪ್ಪಲಾದರು ವಿವರಿಸುವರು.

ಎರಡನೇ ಪ್ರಶ್ನೆ

ಎರಡನೆಯ ಪ್ರಶ್ನೆಯನ್ನು ಭಾರ್ಗವ ವೈದರ್ಭಿಯು ಕೇಳುವನು. ಪಂಚಭೂತ, ಇಂದ್ರಿಯ ಮುಂತಾದ ತತ್ತ್ವಗಳಿಗೆ ಅಭಿಮಾನಿಗಳಾದ ದೇವತೆಗಳಲ್ಲಿ ಯಾರು ಶ್ರೇಷ್ಠರು ? ಎಂಬುದೇ ಅವನ ಪ್ರಶ್ನೆ. ಮುಖ್ಯಪ್ರಾಣನು ಶ್ರೇಷ್ಠನೆಂಬುದನ್ನು ಪಿಪ್ಪಲಾದರು ವಿವರಿಸುತ್ತಾರೆ. ಈ ತತ್ತ್ವಾಭಿಮಾನಿ ದೇವತೆಗಳು ಶರೀರದ ವ್ಯವಹಾರವೆಲ್ಲವೂ ತಮ್ಮಿಂದಲೇ ನಡೆಯುವುದೆಂಬ ಭ್ರಮೆಗೆ ಒಳಗಾಗಿದ್ದರು. ಮುಖ್ಯಪ್ರಾಣನೇ ತಮ್ಮ ನಿಯಂತ್ರಕನೆಂಬುದನ್ನು ಸ್ವೀಕರಿಸದೆ ಅಹಂಕಾರದಿಂದ ವರ್ತಿಸಿದರು. ಆದರೆ ಮುಖ್ಯಪ್ರಾಣನು ಶರೀರವನ್ನು ಬಿಟ್ಟು ಮೇಲೇರಿದಾಗ ಇವರೂ ಅವನ ಹಿಂದೆಯೇ ಹಾರಾಡಬೇಕಾಯಿತು. ಮುಖ್ಯಪ್ರಾಣನು ಶರೀರವನ್ನು ಮರಳಿ ಪ್ರವೇಶಿಸಿದಾಗ ಈ ದೇವತೆಗಳೂ ಅವನ ಹಿಂದೆಯೇ ಆಗಮಿಸಿದರು. ದೊಡ್ಡ ಜೇನ್ನೊಣಗಳ ಹಿಂದೆ ಹಾರಾಡುವ ಇತರ ಜೇನ್ನೊಣಗಳಂತೆ ಈ ದೇವತೆಗಳ ಸ್ಥಿತಿಯಾಯಿತು. ಮುಖ್ಯಪ್ರಾಣನ ಆಕರ್ಷಣದೊಳಗೆ ತಾವೆಲ್ಲ ಇದ್ದೇವೆಂಬ ಅರಿವು ಆಗ ದೇವತೆಗಳಿಗುಂಟಾಗಿ ಅವನನ್ನು ವಿಶೇಷವಾಗಿ ಸ್ತುತಿಸಿ ತಾಯಿ, ಮಕ್ಕಳನ್ನು ರಕ್ಷಿಸುವಂತೆ ತಮ್ಮನ್ನು ನೋಡಿಕೊಳ್ಳಬೇಕೆಂದೂ ತಮಗೆ ಒಳ್ಳೆಯ ಪ್ರಜ್ಞೆಯನ್ನು ನೀಡಬೇಕೆಂದೂ ಪ್ರಾರ್ಥಿಸಿದರು.

ಮೂರನೆಯ ಪ್ರಶ್ನೆ

ಕೌಸಲ್ಯ ಆಶ್ವಲಾಯನರು ಮೂರನೇ ಪ್ರಶ್ನೆಯನ್ನು ಮುಂದಿಡುತ್ತಾ ಮುಖ್ಯಪ್ರಾಣನಿಗೂ ಕಾರಣಪುರುಷನು ಯಾರು ? ಮುಖ್ಯಪ್ರಾಣನು ಯಾವ ರೀತಿಯಿಂದ ಜಗತ್ತಿನ ವ್ಯವಹಾರವನ್ನು ನಡೆಸುತ್ತಾನೆ ಎಂದು ಕೇಳುತ್ತಾರೆ. ಪರಮಾತ್ಮನಿಂದಲೇ ಮುಖ್ಯಪ್ರಾಣನು ಹುಟ್ಟಿದ್ದಾನೆ. ವ್ಯಕ್ತಿಯನ್ನು ಅವನ ನೆರಳು ಆಶ್ರಯಿಸುವಂತೆ ಮುಖ್ಯಪ್ರಾಣನು ಭಗವಂತನನ್ನು ಆಶ್ರಯಿಸಿದ್ದಾನೆ. ಅವನ ಪ್ರೇರಣೆಯಿಂದಲೇ ಶರೀರದೊಳಗೆ ಪ್ರವೇಶಿಸಿದ್ದಾನೆ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನರು ಈ ಮುಖ್ಯಪ್ರಾಣನಿಂದ ಹುಟ್ಟಿದ ಇವನ ಪರಿವಾರ ದೇವತೆಗಳು. ಮಹಾರಾಜನು ತನ್ನ ಅಧಿಕಾರಿಗಳಿಗೆ ಅಥವಾ ಸಾಮಂತರಿಗೆ ಬೇರೆ ಬೇರೆ ಪ್ರದೇಶಗಳ ಜವಾಬ್ದಾರಿಯನ್ನು ನೀಡಿ ನಿರ್ದಿಷ್ಟ ಕೆಲಸಗಳನ್ನು ವಹಿಸಿಕೊಡುವಂತೆ ಮುಖ್ಯಪ್ರಾಣನು ಈ ಪ್ರಾಣ ಮೊದಲಾದ ಪರಿವಾರ ದೇವತೆಗಳಿಗೂ ಶರೀರದಲ್ಲಿ ವಿಭಿನ್ನ ಕಾರ್ಯಗಳನ್ನು ಒಪ್ಪಿಸಿ ವಿವಿಧ ಜೀವ ವ್ಯವಹಾರಗಳು ನಡೆಯುವಂತೆ ಮಾಡುವನು. ರಾಜನು ಆದೇಶವನ್ನು ನೀಡುತ್ತಾ ಮೇಲ್ವಿಚಾರಣೆಯನ್ನು ಮಾತ್ರ ಮಾಡುವುದಾದರೆ ಮುಖ್ಯಪ್ರಾಣನು ಅದಕ್ಕಿಂತಲೂ ಮಿಗಿಲಾಗಿ ಎಲ್ಲಾ ಪರಿವಾರ ದೇವತೆಗಳ ಒಳಗೂ ಪಂಚರೂಪಗಳಿಂದ ನೆಲೆಸಿ ಅವರಿಗೆ ಶಕ್ತಿಯನ್ನು ಪ್ರಚೋದಿಸಿ ಅವರಿಂದ ಕಾರ್ಯವನ್ನು ಮಾಡಿಸುವನು. ಈ ಮುಖ್ಯಪ್ರಾಣನು ದೇಹದ ಒಳಗೂ ಹೊರಗೂ ಬೇರೆ ಬೇರೆ ರೂಪಗಳಿಂದ ನೆಲೆಸಿಕೊಂಡು ಬಾಹ್ಯ ಮತ್ತು ಆಂತರಿಕ ಪ್ರಪಂಚವನ್ನು ನಿಯಂತ್ರಣ ಮಾಡುವನು.

ನಾಲ್ಕನೆಯ ಪ್ರಶ್ನೆ

ನಾಲ್ಕನೆಯ ಪ್ರಶ್ನೆಯನ್ನು ಗಾರ್ಗ್ಯ ಸೌರ್ಯಾಯಣಿಯು ಕೇಳುವನು. 'ಜೀವಾತ್ಮನ ನಿದ್ರಾವಸ್ಥೆಯಲ್ಲಿ ಯಾವ ಯಾವ ದೇವತೆಗಳು ನಮ್ಮ ವ್ಯಾಪಾರವನ್ನು ಸ್ಥಗಿತಗೊಳಿಸುತ್ತಾರೆ? ಯಾವ

ದೇವತೆಗಳ ವ್ಯಾಪಾರವು ಆ ಕಾಲದಲ್ಲಿ ನಡೆಯುತ್ತದೆ ? ಜೀವನು ಯಾವ ದೇವತೆಗಳ ಸಹಾಯದಿಂದ ಸ್ವಪ್ನವನ್ನು ನೋಡುತ್ತಾನೆ ? ಸುಷುಪ್ತಿಯಲ್ಲಿ ಎಲ್ಲ ಇಂದ್ರಿಯಗಳ ಉಪರಮವಾದಾಗ ಜೀವನಿಗೆ ಸುಖಾನುಭವವು ಹೇಗೆ ? ಇವರೆಲ್ಲರಿಗೂ ಆಶ್ರಯನು ಯಾರು ?

ಇದಕ್ಕೆ ಪಿಪ್ಪಲಾದರು ಉತ್ತರಿಸುವರು 'ನಿದ್ರೆಯಲ್ಲಿ ಎರಡು ಅವಸ್ಥೆಗಳಿವೆ. ಸ್ವಪ್ನ ಮತ್ತು ಸುಷುಪ್ತಿ (ಗಾಢ ನಿದ್ರೆ). ಸ್ವಪ್ನದಲ್ಲಿ ಮನಸ್ಸನ್ನು ಹೊರತು ಉಳಿದ ಎಲ್ಲಾ ಇಂದ್ರಿಯಗಳ ಅಭಿಮಾನಿ ದೇವತೆಗಳು ತಮ್ಮ ವ್ಯಾಪಾರವನ್ನು ನಿಲ್ಲಿಸುವರು. ಸುಷುಪ್ತಿಯಲ್ಲಿ ಮನೋಭಿಮಾನಿ ದೇವತೆಯ ವ್ಯಾಪಾರವೂ ಸ್ಥಗಿತಗೊಳ್ಳುವುದು. ಆಗ ಮಾನಸಿಕ ವ್ಯಾಪಾರವೂ ನಡೆಯುವುದಿಲ್ಲ. ಸೂರ್ಯನು ಮುಳುಗುವಾಗ ಸೂರ್ಯನ ಕಿರಣಗಳೂ ಅವನ ಜೊತೆಗೆ ನಮಗೆ ಅಗೋಚರವಾಗುವಂತೆ ಭಗವಂತನು ಸ್ವಪ್ನಕಾಲದಲ್ಲಿ ಮನಸ್ಸಿನಲ್ಲೂ ಸುಷುಪ್ತಿಯಲ್ಲಿ ಹೃದಯ ದೇಶದಲ್ಲೂ ನೆಲೆಸಿದಾಗ ಈ ಇಂದ್ರಿಯ ದೇವತೆಗಳ ವ್ಯಾಪಾರವೂ ನಿಂತು ಹೋಗುತ್ತದೆ. ಸೂರ್ಯೋದಯವಾಗುವಾಗ ಎಲ್ಲ ಕಿರಣಗಳೂ ಪ್ರಕಟವಾಗುವಂತೆ ಭಗವಂತನೂ ಹೃದಯ, ಮನಸ್ಸುಗಳಿಂದ ಹೊರಬಂದಾಗ ಇಂದ್ರಿಯಾಭಿಮಾನಿ ದೇವತೆಗಳ ಕಾರ್ಯವೂ ಪ್ರಾರಂಭವಾಗುತ್ತದೆ.

ಆದರೆ ಮುಖ್ಯಪ್ರಾಣನು ಸ್ವಪ್ನ, ಸುಷುಪ್ತಿ ಈ ಎರಡೂ ಅವಸ್ಥೆಗಳಲ್ಲೂ ಜಾಗ್ರತನಾಗಿರುತ್ತಾನೆ. ಅವನ ವ್ಯಾಪಾರವು ನಿರಂತರವಾಗಿ ನಡೆಯುತ್ತದೆ. ಮುಖ್ಯಪ್ರಾಣನೇ ಅಗ್ನಿ. ಪ್ರಾಣಾದಿಗಳೆ ಋತ್ವಿಜರು. ಶ್ವಾಸ ಉಚ್ಛ್ವಾಸಗಳೇ ಆಹುತಿಗಳು. ಈ ಯಜ್ಞಕ್ರಿಯೆ ಯಾವಾಗಲೂ ನಡೆಯುತ್ತಿರುತ್ತದೆ. ಸ್ವಪ್ನದಲ್ಲಿ ನಾನಾ ವಿಧ ಸಂಸ್ಕಾರಗಳಿಂದ ವಿಚಿತ್ರ ಅನುಭವಗಳನ್ನು ಜೀವನು ಪಡೆಯುತ್ತಾನೆ. ಜೀವನು ಹೃದಯದಲ್ಲಿರುವ ಪ್ರಾಜ್ಞರೂಪಿಯಾದ ಪರಮಾತ್ಮನನ್ನು ಪ್ರವೇಶಿಸಿದಾಗ ಈ ಮಾನಸಿಕ ವ್ಯಾಪಾರವೆಲ್ಲ ನಿಂತುಹೋಗುತ್ತದೆ. ಆಗಲೂ ಸುಖದ ಅನುಭವವಿದೆ. ಇದು ಶಾರೀರಿಕವಾದ ಬಾಹ್ಯಾನುಭವವಲ್ಲ. ಭಗವಂತನ ಶರೀರದಂತಿರುವ ಜೀವಾತ್ಮನ ಸ್ವರೂಪಶರೀರದಲ್ಲಿ ಸ್ವಾಭಾವಿಕವಾದ ಆಂತರಿಕ ಸುಖವನ್ನು ಈ ಅವಸ್ಥೆಯಲ್ಲಿ ಜೀವನು ಅನುಭವಿಸುತ್ತಾನೆ.

ಹಕ್ಕಿಗಳೆಲ್ಲವೂ ಮರವನ್ನು ಆಶ್ರಯಿಸಿಕೊಂಡು ಬದುಕುವಂತೆ ಸಕಲ ಪ್ರಾಣಿಗಳಿಗೂ ಪರಮಾತ್ಮನೇ ಮುಖ್ಯ ಆಶ್ರಯನು. ಎಲ್ಲಾ ಅವಸ್ಥೆಗಳಲ್ಲೂ ಅವನೇ ನಿಯಾಮಕನಾಗಿದ್ದಾನೆ. ಪಂಚಭೂತ ಮುಂತಾದ ಸಕಲ ತತ್ತ್ವಗಳಿಗೂ ಅಭಿಮಾನಿ ದೇವತೆಗಳಿಗೂ ಅವನೇ ಆಧಾರನು.

ಐದನೆಯ ಪ್ರಶ್ನೆ

ಶೈಬ್ಯ ಸತ್ಯಕಾಮನು ಐದನೆಯ ಪ್ರಶ್ನೆಯಾಗಿ ಓಂಕಾರ ಪ್ರತಿಪಾದ್ಯವಾದ ವಸ್ತು ಯಾವುದು? ಅದರ ಉಪಾಸನೆಯ ಫಲವೇನು ? ಎಂದು ಕೇಳುವನು. ಓಂಕಾರದಿಂದ ಪರಮಾತ್ಮನು ಮುಖ್ಯ ಪ್ರತಿಪಾದ್ಯನಾಗಿದ್ದರೆ ಅವರ ಪ್ರತಿಮೆಯಂತಿರುವ ಅವನ ಸನ್ನಿಧಾನ ಪಾತ್ರರಾದ ಬ್ರಹ್ಮದೇವರನ್ನೂ ಓಂಕಾರವು ಬೋಧಿಸುತ್ತದೆಯೆಂದು ಪಿಪ್ಪಲಾದರು ಉತ್ತರಿಸುವರು.

ಓಂಕಾರದಲ್ಲಿ ಅ, ಉ, ಮ್ ಎಂದು ಮೂರು ಅಕ್ಷರಗಳಿವೆ. ಒಂದೊಂದು ಅಕ್ಷರಗಳ ಅರ್ಥವನ್ನು ಮಾತ್ರ ತಿಳಿದು ಉಪಾಸನೆಯನ್ನು ಮಾಡಿದರೆ ಅಪೂರ್ಣಫಲ. ಮೂರು ಅಕ್ಷರಗಳ ಅರ್ಥವನ್ನು ತಿಳಿದು ಅದರಂತೆ ಉಪಾಸನೆ ಮಾಡುವವನು ಸಾಕ್ಷಾತ್ಕಾರವನ್ನು ಪಡೆದು ಹಾವು ಪೊರೆಯನ್ನು ಕಳಚಿಕೊಳ್ಳುವಂತೆ ಪಾಪಗಳನ್ನು ಕಳೆದುಕೊಂಡು ಬ್ರಹ್ಮಲೋಕವನ್ನು ಸೇರಿ ಬ್ರಹ್ಮದೇವರಿಂದಲೂ ಉಪದೇಶವನ್ನು ಪಡೆದು ಪರಮ ಮುಕ್ತಿಯನ್ನು ಪಡೆಯುವನು.

ಆರನೆಯ ಪ್ರಶ್ನೆ

ಸುಕೇಶಾ ಭರದ್ವಾಜನು ಕೇಳುವ ಆರನೇ ಪ್ರಶ್ನೆ – ''ರಾಜಪುತ್ರನಾದ ಕೌಸಲ್ಯ ಹಿರಣ್ಯನಾಭನು ನನ್ನಲ್ಲಿಗೆ ಬಂದು ಹದಿನಾರು ಕಲೆಗಳುಳ್ಳ ಪುರುಷನು ಯಾರು ? ಆ ಕಲೆಗಳು ಯಾವುವು ? ನನಗೆ ತಿಳಿಸುವಿಯಾ ? ಎಂದು ಪ್ರಶ್ನಿಸಿದನು. ನನಗೆ ತಿಳಿಯದ ಈ ಪ್ರಶ್ನೆಯನ್ನು ರಾಜಕುಮಾರನಿಗೆ ನಾನು ಹೇಗೆ ಉತ್ತರಿಸಲಿ ? ನನಗೆ ಈ ವಿಷಯವು ಗೊತ್ತಿಲ್ಲವೆಂದು ಅವನಿಗೆ ತಿಳಿಸಿದೆ. ಅವನು ಏನೂ ಮಾತನಾಡದೆ ಹಾಗೆಯೇ ಹಿಂತೆರಳಿದನು. ತಮ್ಮಲ್ಲಿ ನಾನೀಗ ಇದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.''

ಪಿಪ್ಪಲಾದರು ಉತ್ತರಿಸುವರು ''ಈ ಶರೀರದ ಭಾಗಗಳಾಗಿರುವ ಹದಿನಾರು ಕಲೆಗಳನ್ನು ನಿಯಂತ್ರಿಸಿಕೊಂಡಿರುವ ಆ ಪರಮಪುರುಷನೇ ಪರಮಾತ್ಮನು. ಪ್ರಾಣ, ಶ್ರದ್ಧೆ, ಪಂಚಭೂತಗಳು, ಮನಸ್ಸು, ಇಂದ್ರಿಯಗಳು, ಇಂದ್ರಿಯಗಳ ಹೊರ ಆವರಣಗಳು, ಆಹಾರ, ಶರೀರಕಾರಣವಾದ ವೀರ್ಯ, ತತ್ತ್ವಜ್ಞಾನ ಸಾಧನವಾದ ವೇದಾದಿ ಮಂತ್ರಗಳು, ತಪಸ್ಸು, ಕರ್ಮ, ಹೆಸರು ಇವೇ ಜೀವನದ ಅವಿಭಾಜ್ಯ ಅಂಗಗಳಾದ ಹದಿನಾರು ಕಲೆಗಳು. ಹೆಸರಿನ ಅಭಿಮಾನಿಯಾದ ಉಷಾದೇವಿಯಿಂದ ಮುಖ್ಯಪ್ರಾಣನ ವರೆಗಿನ ದೇವತೆಗಳು ಈ ಕಲೆಗಳ ಅಭಿಮಾನಿಗಳು. ತಾರತಮ್ಯ ಕ್ರಮದಿಂದ ಈ ದೇವತೆಗಳನ್ನು ತಿಳಿದುಕೊಂಡು ಇವರಲ್ಲಿ ವಾಯುದೇವರ ಪಾರಮ್ಯವನ್ನೂ ಪರಮಾತ್ಮನ ಸರ್ವೋತ್ತಮತ್ವವನ್ನೂ ಅರಿತುಕೊಳ್ಳಬೇಕು.

ಮುಕ್ತಿದಶೆಯಲ್ಲಿ ಈ ಅಭಿಮಾನಿ ದೇವತೆಗಳು, ನದಿಗಳು, ಸಮುದ್ರದಲ್ಲಿ ಸೇರುವಂತೆ ಪರಮಾತ್ಮನನ್ನು ಸೇರುತ್ತಾರೆ. ನದಿಗಳು ಸಮುದ್ರದಲ್ಲಿ ಸೇರುವಾಗ ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳುವುದಿಲ್ಲ. ''ಭಿದ್ಯೇತೇ ತಾಸಾಂ ನಾಮರೂಪೇ'' ಅವುಗಳ ನಾಮರೂಪಗಳು ಬೇರೆಬೇರೆ ಯಾಗಿರುತ್ತವೆ, ಎಂದು ಈ ಉಪನಿಷತ್ತು ಸಮುದ್ರದ ಆಶ್ರಯದಲ್ಲಿರುವ ಹೊಳೆಯ ನೀರು ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡಿರುತ್ತದೆಯೆಂದು ಹೇಳಿದೆ. ಅದರಂತೆ ಮುಕ್ತರ ನಾಮರೂಪಗಳೂ ಅಳಿಯುವುದಿಲ್ಲ. ಅವರು ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಂಡು ಪರಮಾತ್ಮನನ್ನು ಆಶ್ರಯಿಸಿಕೊಂಡು ಇರುತ್ತಾರೆ.

ಮುಕ್ತರು ಪರಮಾತ್ಮನನ್ನು ಸೇರುವಾಗ ಅಸ್ತಂಗತರಾಗುವರೆಂದು ಉಪನಿಷತ್ತು ಹೇಳಿದೆ. ಅವರು ತಮ್ಮ ವ್ಯಕ್ತಿತ್ವವನ್ನೇ ಕಳೆದುಕೊಳ್ಳುವರೆಂದು ಇದರ ಅರ್ಥವಲ್ಲ. ಸಂಸಾರಿಗಳಾದ ನಮಗೆ ಅಗೋಚರವಾಗುವುದರಿಂದ ಅವರು ಅಸ್ತ ಹೊಂದುವರೆಂದು ಪ್ರಯೋಗಿಸಲಾಗಿದೆ.

ಸೂರ್ಯಾಸ್ತವಾಗುವಾಗಲೂ ಸೂರ್ಯನ ಅಸ್ತಿತ್ವ ನಷ್ಟವಾಗುವುದಿಲ್ಲ. ನಮಗೆ ಸೂರ್ಯನು ಕಾಣಿಸದಿರುವುದರಿಂದಲೇ ಸೂರ್ಯಾಸ್ತವಾಗಿದೆಯೆಂದು ನಾವು ಹೇಳುತ್ತೇವೆ. ಭಗವಂತನಲ್ಲಿ ಮುಕ್ತರ ಅಸ್ತವೂ ಇದೇ ರೀತಿಯದಾಗಿದೆ.

ಆರು ಋಷಿಗಳೂ ಈ ಉತ್ತರಗಳಿಂದ ಸಮಾಧಾನಗೊಂಡರು.

೩-೫ ಆಥರ್ವಣೋಪನಿಷತ್

ಪರಾಪರ ವಿದ್ಯೆ

ವೈವಸ್ವತ ಕಲ್ಪದಲ್ಲಿ ಬ್ರಹ್ಮದೇವರ ಜೇಷ್ಠ ಪುತ್ರರಾಗಿ ಹುಟ್ಟಿದ ಅಥರ್ವ ಮುನಿಗಳಿಗೆ ಬ್ರಹ್ಮದೇವರು ಉಪದೇಶಿಸಿದ ವಿದ್ಯೆಯೇ ಆಥರ್ವಣೋಪನಿಷತ್ತು. ಈ ಉಪನಿಷತ್ತು ವಿದ್ಯೆಯನ್ನು ಪರವಿದ್ಯೆ ಮತ್ತು ಅಪರ ವಿದ್ಯೆಯೆಂದು ಎರಡು ವಿಭಾಗವಾಗಿ ವಿಭಜಿಸಿದೆ. ಪರವಿದ್ಯೆಯೆಂದರೆ ಪ್ರಧಾನವಾದ ವಿದ್ಯೆಯೆಂದೂ ಅಪರ ವಿದ್ಯೆಯೆಂದರೆ ಅಪ್ರಧಾನವಾದ ವಿದ್ಯೆಯೆಂದೂ ಅರ್ಥ. ವೇದ, ವೇದಾಂಗ, ಪಂಚರಾತ್ರ, ಭಾರತ

ಮುಂತಾದ ಇತಿಹಾಸ ಪುರಾಣಗಳನ್ನು ಅಪರ ವಿದ್ಯೆಯೆಂದು ಉಪನಿಷತ್ತು ನಿರ್ದೇಶಿಸಿದೆ. ವೇದಾದಿಗಳೇ ಅಪರ ವಿದ್ಯೆಯೆನಿಸಿದರೆ ಇನ್ನು ಪರವಿದ್ಯೆಯು ಯಾವುದೆನ್ನುವ ಕುತೂಹಲವುಂಟಾಗುವುದು ಸಹಜ. ಅಪರವಿದ್ಯೆಯೆಂದು ಪರಿಗಣಿಸಿದ ವೇದಾದಿಗಳಿಗಿಂತ ಪರವಿದ್ಯೆಯು ಬೇರೆಯಲ್ಲ. ವೇದಾದಿ ಶಾಸ್ತ್ರಗಳ ಅಂತರಂಗವನ್ನು ಅರಿತು ಅರ್ಥಮಾಡಿದಾಗ ಅದೇ ಪರವಿದ್ಯೆಯಾಗುವುದು. ಬ್ರಹ್ಮಸೂತ್ರಗಳು ವೇದದ ಅರ್ಥವನ್ನು ಅರಿತುಕೊಳ್ಳುವ ವಿಚಾರಪದ್ಧತಿಯನ್ನು ವಿಶದವಾಗಿ ವಿವರಿಸಿವೆ. ಆ ದಾರಿಯಲ್ಲಿ ನಡೆದು ಬ್ರಹ್ಮಸೂತ್ರದ ಹಿನ್ನೆಲೆಯಲ್ಲಿ ವೇದವನ್ನು ವಿಮರ್ಶಿಸಿದಾಗ ಭಗವಂತನ ಅನಂತ ಗುಣ ವೈಭವಗಳನ್ನು ವೇದಾದಿ ಶಾಸ್ತ್ರಗಳಿಂದ ನಾವು ಗ್ರಹಿಸಿಕೊಳ್ಳಬಹುದು. ಆಗ ವೇದ ಪುರಾಣಾದಿಗಳು ಆರಂಭದಿಂದ ಕೊನೆಯವರೆಗೂ ಭಗವಂತನನ್ನೇ ವರ್ಣಿಸುವ ಪರವಿದ್ಯೆಯೆನಿಸುವುವು. ಬ್ರಹ್ಮಸೂತ್ರದ ಈ ಹಿನ್ನೆಲೆಯನ್ನು ತೊರೆದು ವೇದವನ್ನು ನೋಡಿದಾಗ ಬರೇ ಯಾಜ್ಞಿಕ ಪ್ರಕ್ರಿಯೆ, ಕರ್ಮಜಾಲ, ಸ್ವರ್ಗಭೋಗಗಳನ್ನೇ ವೇದವು ಬೋಧಿಸುವುದೆಂಬ ಭಾವನೆಯು ನಮಗೆ ಉಂಟಾಗುವುದು. ಈ ಹಿನ್ನೆಲೆಯಲ್ಲಿ ವೇದಾದಿಗಳು ಅಪರ ವಿದ್ಯೆಯೆನಿಸುವುವು. ನಮ್ಮ ವಿಭಿನ್ನ ದೃಷ್ಟಿಕೋನಗಳಿಂದ ಅಳೆಯುವುದರಿಂದ ಒಂದೇ ವೇದವು ಪರವಿದ್ಯೆಯೂ ಅಪರ ವಿದ್ಯೆಯೂ ಆಗಬಲ್ಲದು. ಬ್ರಹ್ಮಸೂತ್ರವು ನಿರೂಪಿಸಿದ ನ್ಯಾಯಗಳ ಅನುಸಂಧಾನ ವನ್ನು ಮಾಡಿದಾಗ ವೇದದ ಶಬ್ದಶಬ್ದಗಳೂ ಭಗವಂತನ ಸ್ತೋತ್ರಗಳಾಗಿ ಪರಿಣಮಿಸುತ್ತವೆ. ಸಕಲ ಶಬ್ದ ಪ್ರತಿಪಾದ್ಯನೂ, ಅನಂತ ಗುಣಪರಿಪೂರ್ಣನೂ ಆದ ಭಗವಂತನನ್ನು ಈ ನೆಲೆಯಲ್ಲಿ ವೇದಗಳಿಂದ ನಾವು ತಿಳಿದುಕೊಳ್ಳಬಲ್ಲೆವು. ಹಿಂಡದೆ ಇದ್ದಾಗ ಕಬ್ಬು ಬರೇ ಕಟ್ಟಿಗೆ ತುಂಡಾಗಿದ್ದರೆ ಹಿಂಡಿದರೆ ರಸಧಾರೆಯಾಗು ವಂತೆ ಬರೇ ಕರ್ಮ ಪ್ರಕ್ರಿಯೆಯನ್ನೇ ಬೋಧಿಸಿ ಅಪರ ವಿದ್ಯೆಯೆನಿಸುವ ವೇದವೇ ಬ್ರಹ್ಮಸೂತ್ರಗಳ ಸಂಯೋಜನದೊಂದಿಗೆ ಮಥನಗೊಂಡಾಗ ಜ್ಞಾನ ರಸಧಾರೆಯಾಗಿ ಪರವಿದ್ಯೆಯೆನಿಸುವುದು. ಗಂಧದ ಕೊರಡನ್ನು ತೇಯಬೇಕು. ಆಗ ಮಾತ್ರ ಅದು ಪರಿಮಳವನ್ನು ಸೂಸುವುದು. ಮಥನ ಮತ್ತು ವಿಮರ್ಶೆಯಿಂದಲೇ ವೇದವೂ ಜ್ಞಾನದ ಪರಿಮಳವನ್ನು ಬೀರಬಲ್ಲದು. ಹೀಗೆ ವೇದಾದಿಗಳು ಅಪರವಿದ್ಯೆಯೂ ಅಹುದು, ಪರವಿದ್ಯೆಯೂ ಹೌದು. ಅಧ್ಯಯನ ಮಾಡುವವರ ದೃಷ್ಟಿಕೋನದಿಂದ ಇವೆರಡು ಸ್ವರೂಪವನ್ನೂ ವೇದವು ಪಡೆದಿದೆ.

ಕೃತಯುಗದಲ್ಲಿ ಸಮಗ್ರವಾದ ವೇದದಿಂದ ಜನರು ಭಗವತ್ ತತ್ತ್ವವನ್ನೇ ಅರಿಯುತ್ತಿದ್ದರು. ಋಗ್, ಯಜುಸ್ ಮುಂತಾದ ವಿಭಾಗವಿಲ್ಲದೆ ವೇದವು ಅಖಂಡವಾಗಿ ಮೂಲ ವೇದವೆಂದು ಪರಿಗಣಿತವಾಗಿತ್ತು. ಇಂದ್ರ, ಅಗ್ನಿ , ಬ್ರಹ್ಮ , ರುದ್ರ ಮುಂತಾದ ವಿವಿಧ ಶಬ್ದಗಳಿಂದ ಭಗವಂತನಾದ ಶ್ರೀಹರಿಯೊಬ್ಬನನ್ನೇ ಕರೆಯುತ್ತಿದ್ದರು. ಅವನೊಬ್ಬನೇ ದೇವನಾಗಿದ್ದನು. ಅನೇಕ ದೇವತಾವಾದಕ್ಕೆ ಅವಕಾಶವೇ ಇರಲಿಲ್ಲ. ಬ್ರಹ್ಮಾದಿ ದೇವತೆಗಳನ್ನು ಗುರುಗಳೆಂದೂ, ತತ್ತ್ವಪ್ರವಕ್ತಾರರೆಂದೂ, ಭಗವಂತನ ಸೇವಕರೆಂದೂ ಗೌರವಿಸುತ್ತಿದ್ದರು. ದೇವರೆಂದು ಶ್ರೀವಿಷ್ಣುವೊಬ್ಬನನ್ನೇ ಪೂಜಿಸುತ್ತಿದ್ದರು. ಅಂದು ಏಕದೇವತಾವಾದವು ಅತ್ಯಂತ ಸ್ಪಷ್ಟವಾಗಿ ಪ್ರಚಲಿತವಾಗಿತ್ತು. ಆಗ ವೇದವು ಪೂರ್ತಿಯಾಗಿ ಪರವಿದ್ಯೆಯೆನಿಸಿತ್ತು. ಅದರಲ್ಲಿ ಪರ, ಅಪರವೆಂಬ ವಿಭಾಗವೇ ಇರಲಿಲ್ಲ. ಎಲ್ಲರೂ ವೇದಸಾಗರದಿಂದ ಭಗವತ್ ತತ್ತ್ವದ ಮುತ್ತು ರತ್ನಗಳ ಹೊರತು ಬೇರೇನನ್ನೂ ಪಡೆಯುತ್ತಿರಲಿಲ್ಲ. ಮುಂದಿನ ಯುಗದಲ್ಲಿ ಈ ವೇದಕುಸುಮಗಳಿಂದ ಜ್ಞಾನದ ಮಕರಂದವನ್ನು ಹೀರುವ ಶಕ್ತಿಯು ಜನರಲ್ಲಿ ಕುಗ್ಗಲು ಆರಂಭವಾಯಿತು. ಆಗಲೇ ವೇದವು ಕೆಲವರ ದೃಷ್ಟಿಯಲ್ಲಿ ಅಪರ ವಿದ್ಯೆಯಾಗಿ ಪರಿಣಮಿಸಿತು.

ವೇದಗಳ ಗುರಿ

ವೇದವು ಕರ್ಮಾಚರಣೆ ಮೊದಲಾದ ಅನೇಕ ಇತರ ವಿಷಯಗಳನ್ನು ಹೇಳಿದರೂ ಭಗವಂತನ

ಜ್ಞಾನವೇ ಅದರ ಗುರಿಯಾಗಿದೆ. ಆ ಜ್ಞಾನಕ್ಕಾಗಿಯೇ ಅದು ಕರ್ಮವನ್ನು ಬೋಧಿಸುತ್ತದೆ. ನಮ್ಮ ವಿಭಿನ್ನ ವಿಷಯಗಳ ಜ್ಞಾನವೆಲ್ಲವೂ ಭಗವಂತನ ಜ್ಞಾನದಿಂದಲೇ ಸಫಲವಾಗುವುದು. ಆದುದರಿಂದ ಪರವಿದ್ಯೆಯೆನಿಸಿದ ವೇದಾದಿಗಳು ಭಗವಂತನ ಜ್ಞಾನಕ್ಕಾಗಿ ಅವನಿಗೆ ಪ್ರೀತಿಕರವಾದ ಕರ್ಮಗಳನ್ನು ನಮಗೆ ಬೋಧಿಸುತ್ತವೆ. ಇದರಿಂದ ಅದರ ಪರವಿದ್ಯೆಯ ಸ್ವರೂಪಕ್ಕೆ ಧಕ್ಕೆ ಬರುವುದಿಲ್ಲ. ಭಗವಂತನ ಪ್ರೀತಿಯ ಉದ್ದೇಶವಿಲ್ಲದೆ ನಮ್ಮ ಸ್ವಾರ್ಥಕ್ಕಾಗಿ ವಿವಿಧ ಕಾರ್ಯಗಳಲ್ಲಿ ತೊಡಗಿದಾಗ ಮಾತ್ರ ಈ ಕ್ರಿಯೆಗಳು ದುರ್ಬಲವಾದ ನಾವೆಗಳಂತೆ ಸಂಸಾರ ನದಿಯನ್ನು ದಾಟಿಸಲು ಅಸಮರ್ಥವಾಗುವವು. 'ಸ್ವರ್ಗ, ಐಹಿಕ ಸುಖ ಮುಂತಾದ ಸ್ವಾರ್ಥ ಭಾವನೆಯಿಂದ ಕರ್ಮವನ್ನು ಆಚರಿಸಬಾರದು, ಪರಮಾತ್ಮನ ಜ್ಞಾನಕ್ಕಾಗಿ ಅವನ ಪ್ರೀತಿಗಾಗಿ ಮಾತ್ರ ಅವುಗಳನ್ನು ಆಚರಿಸಬೇಕೆಂದು ಕರ್ಮದಲ್ಲಿ ಈ ಎರಡು ವಿಭಾಗವೇಕೆ? ಪೂರ್ತಿಯಾಗಿ ಕರ್ಮವನ್ನು ಪರಿತ್ಯಜಿಸಿ ನಾವು ಬರೀ ಜ್ಞಾನಮಾರ್ಗವನ್ನೇ ಏಕೆ ಅನುಸರಿಸಬಾರದು?' ಎಂದು ಕೆಲವರು ಪ್ರಶ್ನಿಸುವುದುಂಟು. ಆದರೆ ಭಗವದ್ಗೀತೆ ಹಾಗೂ ಇತರ ಸ್ಮೃತಿಗಳಲ್ಲಿ ನಾವು ಕರ್ತವ್ಯವನ್ನು ಆಚರಿಸಲೇ ಬೇಕೆನ್ನುವ ಸ್ಪಷ್ಟವಾದ ವಿಧಾನವನ್ನು ಗಮನಿಸಿದಾಗ ಇಂಥಹ ಪ್ರಶ್ನೆಗಳು ಉಂಟಾಗಲಾರವು. ''ಇಂತಹ ಕರ್ತವ್ಯವನ್ನು ಮಾಡಿ ಜಗಚ್ಚಕ್ರದ ಪ್ರವರ್ತನೆಗೆ ಕಾಣಿಕೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ಅವನು ಲೋಕಹಂತಕನೆನಿಸುವನು.'' ಇಂತಹ ಮಾತುಗಳನ್ನು ಪುರಾಣಗಳಲ್ಲಿ ಸಾಕಷ್ಟು ಕಾಣಬಹುದು. ಜ್ಞಾನಿಯೂ ಕರ್ತವ್ಯದಿಂದ ಹಿಂದೆ ಸರಿಯಬಾರದೆಂದು ಗೀತೆಯು ಎಚ್ಚರಿಸಿದೆ. ಹೊರಗಿನ ಪರಿವೆಯೇ ಇಲ್ಲದೆ ಧ್ಯಾನದಲ್ಲಿ ಮಗ್ನನಾದವನಿಗೆ ಮಾತ್ರ ಕರ್ತವ್ಯದ ಬಂಧನವಿಲ್ಲ. ಸನ್ಯಾಸಿಗಳಿಗೆ ಯಾವುದೇ ಕರ್ಮವಿಲ್ಲವೆಂದು ಕೆಲವರು ಭ್ರಮಿಸಿದ್ದಾರೆ. ಅವರಿಗೆ ಗೃಹಸ್ಥರು ಮಾಡುವ ಯಜ್ಞಾದಿ ಕರ್ಮಗಳಿಲ್ಲದಿದ್ದರೂ ಯತಿಗಳಿಗೆ ಉಚಿತವಾದ ಅನೇಕ ಕರ್ತವ್ಯಗಳಿವೆ. ಆದುದರಿಂದ ಮುಕ್ತಿಯನ್ನು ಪಡೆಯಲು ಎಲ್ಲರೂ ಸ್ವಾರ್ಥವನ್ನು ತೊರೆದು ಭಗವತ್ ಪ್ರೀತಿಗಾಗಿ ಕರ್ತವ್ಯವನ್ನು ಮಾಡಲೇ ಬೇಕು. ಇಂತಹ ಕರ್ಮಾಚರಣೆಯ ನಿದರ್ಶನವನ್ನು ವಿಶೇಷವಾಗಿ ಕೃತಯುಗದಲ್ಲಿ ಕಾಣಬಹುದು. ಮುಂದಿನ ಯುಗಗಳಲ್ಲಿ ಈ ನಿಷ್ಕಾಮ ಭಾವನೆಯು ಶಿಥಿಲವಾಗಿ ಕರ್ಮಾಚರಣೆಯ ಬೇರೆ ಬೇರೆ ಪ್ರಕಾರಗಳು ಪ್ರಾರಂಭವಾದವು. ಕೃತಯುಗದಲ್ಲಿ ಯಜ್ಞಗಳಲ್ಲಿ ಇಂದ್ರ, ಅಗ್ನಿ ಮುಂತಾದ ವಿವಿಧ ಹೆಸರುಗಳಿಂದ ಒಬ್ಬನೇ ಆದ ಭಗವಂತನ ಆರಾಧನೆಯೇ ನಿಷ್ಕಾಮನೆಯಿಂದ ನಡೆಯುತ್ತಿತ್ತು. ಕೃತಯುಗದ ಈ ಧರ್ಮವನ್ನೇ ಈ ಯುಗದಲ್ಲಿಯೂ ಪ್ರವರ್ತಿಸಲು ನಾವು ಪ್ರಯತ್ನಿಸಬೇಕು.

ಪರಮಾತ್ಮನಿಗೆ ನಾವು ಜೀವನದಲ್ಲಿ ಎಲ್ಲರಿಗಿಂತೂ ವಿಶಿಷ್ಟವಾದ ಸ್ಥಾನವನ್ನು ನೀಡಬೇಕು. ಅವನನ್ನೇ ಸರ್ವೋತ್ತಮನೆಂದು ತಿಳಿಯಬೇಕು. ಇತರ ದೇವತೆಗಳಿಗಾಗಲೀ, ಬೇರೆ ಬೇರೆ ಇಷ್ಟವಸ್ತುಗಳಿಗಾಗಲೀ ಭಗವಂತನಾದ ಶ್ರೀಹರಿಗೆ ಸಮಾನವಾದ ಅಥವಾ ಅವನಿಗಿಂತ ಮಿಗಿಲಾದ ಸ್ಥಾನವನ್ನು ನೀಡಬಾರದು. ಈಗಂತೂ ಹೆಚ್ಚಿನ ಜನರು ತಮ್ಮ ಪ್ರತ್ಯಕ್ಷ ಜೀವನದಲ್ಲಿ ಭಗವಂತನನ್ನು ಕಡೆಗಣಿಸಿ ಉಳಿದವುಗಳಿಗೇ ಹೆಚ್ಚಿನ ಮಹತ್ತ್ವ ನೀಡುತ್ತಿದ್ದಾರೆ. ಇದು ವಿಶೇಷ ಅನರ್ಥಕ್ಕೆ ಕಾರಣವಾಗುವುದು. ಕೆಲವರು ಪರಮಾತ್ಮನಲ್ಲಿ ಭಕ್ತಿಯನ್ನು ಮಾಡುತ್ತಾರೆ. ಅವನನ್ನು ಸ್ಮರಿಸಿಕೊಂಡು ತಮ್ಮ ಸತ್‌ಕರ್ಮಗಳನ್ನು ಅವನಲ್ಲಿ ಸಮರ್ಪಿಸುತ್ತಾರೆ. ಆದರೆ ಅವನು ನಮ್ಮ ಅಂತರ್ಯಾಮಿಯಾಗಿ ನಮ್ಮ ಸರ್ವ ಸತ್ಕರ್ಮಗಳನ್ನು ಸ್ವೀಕರಿಸುವ, ನಮ್ಮನ್ನು ಸರ್ವರೀತಿಯಿಂದಲೂ ನಿಯಮಿಸುವ ಅಪೂರ್ವ ಮಹಾಪುರುಷನೆಂಬುದನ್ನು ಮನಗಾಣದೆ ಸಾಮಾನ್ಯ ರಾಜಮಹಾರಾಜರನ್ನು ಕಾಣುವ ರೀತಿಯಲ್ಲಿ ಭಗವಂತನನ್ನು ಕಾಣುವರು. ಸಿಂಹಾಸನದಲ್ಲಿ ಕುಳಿತು ರಾಜ್ಯ ಪರಿಪಾಲನೆಯನ್ನು ಮಾಡುವ ರಾಜನಂತೆ ಪರಮಾತ್ಮನೂ ಜಗತ್ತಿನ ವ್ಯವಹಾರವನ್ನು ನಡೆಸುತ್ತಾನೆಂಬುದನ್ನು ಮಾತ್ರ ತಿಳಿಯುತ್ತಾರೆ. ಅದಕ್ಕಿಂತಲೂ ಮಿಗಿಲಾದ ಭಗವಂತನ ವ್ಯಕ್ತಿತ್ವವನ್ನು, ವಿಶ್ವದ ಹೊರಗೂ ಒಳಗೂ ನೆಲೆಸಿ ಅದರ ಎಲ್ಲಾ ಚಲನವಲನ, ಅಸ್ತಿತ್ವಗಳಿಗೆ ಕಾರಣನೆನಿಸುವ

ಅವನ ವಿಶಿಷ್ಟವಾದ ಪ್ರಭುತ್ವವನ್ನು ಅರಿಯರು. ಇವರು ಸ್ವರ್ಗ, ಮರ್ತ್ಯಗಳಲ್ಲಿಯೇ ಅಲೆಯುವರಲ್ಲದೆ ಮುಕ್ತಿಯನ್ನು ಪಡೆಯಲಾರರು. ಪರಮಾತ್ಮನ ಸರಿಯಾದ ತಿಳಿವಳಿಕೆಯಿಂದ ಅವನ ನಿಜವಾದ ಮಾಹಾತ್ಮ್ಯದ ಪರಿಜ್ಞಾನದಿಂದ ಮಾತ್ರ ಮುಕ್ತಿಯು ದೊರೆಯಬಲ್ಲುದು.

ಭಗವಂತನ ವ್ಯಕ್ತಿತ್ವ ಮತ್ತು ಮಹಿಮೆ

ಭಗವಂತನಿಗೆ ಯಾವುದೇ ರೀತಿಯ ನಾಶವೂ ಇಲ್ಲ. ಆದುದರಿಂದ ಅವನನ್ನು ಅಕ್ಷರನೆಂದು ಉಪನಿಷತ್ತು ನಿರೂಪಿಸಿದೆ. ನಮ್ಮ ಬುದ್ಧಿಗೆ ನಿಲುಕದ ವಿರಾಟ್ ವ್ಯಕ್ತಿತ್ವ ಅವನದು. ನಮ್ಮಂತೆ ಪ್ರಾಕೃತ ದೇಹ ಇಂದ್ರಿಯಗಳು ಅವನಿಗಿಲ್ಲ. ಜೇಡರ ಹುಳುವು ತನ್ನ ಶರೀರದ ಧಾತುಗಳಿಂದ ವಿಚಿತ್ರವಾದ ಬಲೆಯನ್ನು ಹೆಣೆಯುವಂತೆ ಭಗವಂತನೂ ಈ ಜಡಪ್ರಕೃತಿಯನ್ನು ಬಳಸಿಕೊಂಡು ಈ ವಿಶಾಲ ವಿಶ್ವವನ್ನು ರಚಿಸುತ್ತಾನೆ. ಅವನಿಂದ ರಚಿತವಾದ ಈ ಪ್ರಪಂಚದ ನೆಲೆಯೂ ಅವನೇ ಆಗಿರುವನು. ವಿವಿಧ ಸಸ್ಯಗಳು ಭೂಮಿಯಲ್ಲಿ ಬೆಳೆಯುವಂತೆ ಭಗವಂತನು ಜಗತ್ತಿನ ನಿರ್ಮಾಣಕರ್ತನಾಗಿರುವ ಜೊತೆಗೆ ಆಧಾರನೂ ಆಗಿರುವನು. ಈ ವಿಶ್ವವನ್ನು ಸೃಷ್ಟಿಸಲು ಆತನಿಗೆ ಯಾವ ಶ್ರಮ ಕ್ಲೇಶಗಳೂ ಇಲ್ಲ. ನಮ್ಮ ಶರೀರದಲ್ಲಿ ಸಹಜವಾಗಿ ತಲೆಕೂದಲುಗಳು ಹುಟ್ಟುವಂತೆ ಈ ವಿಶ್ವವನ್ನು ಅನಾಯಾಸದಿಂದ ಪರಮಾತ್ಮನು ನಿರ್ಮಿಸುತ್ತಾನೆ. ಅಗ್ನಿಯಿಂದ ಬೆಂಕಿಯ ಕಿಡಿಗಳಂತೆ ವಿವಧ ಜೀವರು ಭಗವಂತನಿಂದ ಹೊರಹೊಮ್ಮುವರು. ವಿಶ್ವದ ಮೂಲ ವಸ್ತುಗಳಾದ ತತ್ತ್ವಪದಾರ್ಥಗಳನ್ನೂ, ಅವುಗಳ ಅಭಿಮಾನಿ ದೇವತೆಗಳನ್ನೂ ಸೃಜಿಸಿ ಅನಂತರ ಈ ವಿಶಾಲ ಬ್ರಹ್ಮಾಂಡವನ್ನು ಭಗವಂತನು ನಿರ್ಮಿಸುತ್ತಾನೆ. ಪರಮಾತ್ಮನ ಅಮೂರ್ತಗಳಾದ ಜ್ಞಾನಾನಂದಮಯ ದಿವ್ಯ ಅಂಗಗಳಿಂದ ಈ ವಿಶ್ವದ ಬೇರೆ ಬೇರೆ ಪದಾರ್ಥಗಳ ಮತ್ತು ಅವುಗಳ ಅಭಿಮಾನಿ ದೇವತೆಗಳ ಸೃಷ್ಟಿಯಾಗಿದೆ. ಇಂತಹ ಅದ್ಭುತ ಜ್ಞಾನ ಕ್ರಿಯಾತ್ಮಕನೂ ಪರಮ ಅಮೃತ ಸ್ವರೂಪಿಯೂ ಆದ ಭಗವಂತನ ಜ್ಞಾನದಿಂದಲೇ ನಮ್ಮ ಅಜ್ಞಾನಬಂಧವು ಶಿಥಿಲವಾಗುವುದು. ಈ ಐಹಿಕ ಭೋಗದಿಂದಾಗಲೀ ಸ್ವರ್ಗಾನುಭವದಿಂದಾಗಲೀ ನಮಗೆ ಶಾಶ್ವತ ಶಾಂತಿಯು ದೊರಕದು. ಈ ಭೌತಿಕ ಸುಖವೆಲ್ಲವೂ ನಶ್ವರ. ನಾನಾ ಕಾಮನೆಗಳಿಂದ ತುಂಬಾ ಪರಿಶ್ರಮ ವಹಿಸಿ ನಾವು ಮಾಡುವ ಯಜ್ಞಾದಿ ಕರ್ಮಗಳಿಂದ ಪಡೆಯುವ ಸ್ವರ್ಗವೂ ಶಾಶ್ವತವಲ್ಲ. ಪುಣ್ಯವು ತೀರಿದಾಗ ಪುನಃ ಈ ಪ್ರಪಂಚಕ್ಕೆ ಇಳಿಯಬೇಕಾಗುತ್ತದೆ. ಆದುದರಿಂದ ಬ್ರಹ್ಮನ ಜ್ಞಾನವೇ ನಮ್ಮ ಜೀವನದ ಸಕಲ ವ್ಯವಹಾರಗಳ ಲಕ್ಷ್ಯವಾಗಿರಬೇಕು.

ಈ ಪರಬ್ರಹ್ಮವಸ್ತುವು ಎಲ್ಲಿಯೋ ಬಹುದೂರದಲ್ಲಿದೆಯೆಂದು ನಾವು ಕಾತರಪಡಬೇಕಿಲ್ಲ. ನಮ್ಮ ಅತ್ಯಂತ ಸಮೀಪದಲ್ಲಿ ನಮ್ಮ ಹೃದಯ ಗುಹೆಯಲ್ಲಿಯೇ ಭಗವಂತನು ನೆಲೆಸಿದ್ದಾನೆ. ವಿವಿಧ ವ್ಯಾಪಾರದಲ್ಲಿ ತೊಡಗಿದ ಈ ಜೀವವರ್ಗವೆಲ್ಲವೂ ತನ್ನ ಒಳಗೇ ವ್ಯಾಪಿಸಿರುವ ಈ ಅಂತರ್ಯಾಮಿಯಾದ ಪರಮಾತ್ಮನನ್ನೇ ಅವಲಂಬಿಸಿವೆ. ಅತ್ಯಂತ ಸೂಕ್ಷ್ಮವಸ್ತುಗಳಿಗಿಂತಲೂ ಸೂಕ್ಷ್ಮನಾದ, ಬ್ರಹ್ಮದೇವರಿಗಿಂತಲೂ ಮಿಗಿಲಾದ, ಸಕಲ ಲೋಕಾಶ್ರಯನಾದ ಈ ಪರಮಾತ್ಮನನ್ನು ನಾವು ಅವಶ್ಯವಾಗಿ ತಿಳಿಯಬೇಕು.

ಸರಿಯಾಗಿ ತಿಕ್ಕಿ ಹರಿತವಾದ ಬಾಣವನ್ನು ಧನುಸ್ಸಿನಲ್ಲಿ ಜೋಡಿಸಿ ಅದರ ಹಿನ್ನೆಲೆಯ ಬಲದಿಂದ ಬಾಣವನ್ನು ಎಚ್ಚರದಿಂದ ಹೊಡೆದಾಗ ಅದು ಸರಿಯಾಗಿ ಗುರಿಯನ್ನು ಮುಟ್ಟುವುದು. ಆಧ್ಯಾತ್ಮದಲ್ಲಿಯೂ ಇಂತಹ ಪ್ರಯೋಗವನ್ನು ಉಪನಿಷತ್ತು ನಿರ್ದೇಶಿಸುತ್ತದೆ. ಈ ಜೀವಾತ್ಮನೇ ಬಾಣ. ನಿರಂತರ ಉಪಾಸನೆಯಿಂದ ನಿಶಿತವಾದ ಈ ಬಾಣವನ್ನು ಪರಬ್ರಹ್ಮನ ಕಡೆಗೆ ಗುರಿಯಿಟ್ಟು ಪ್ರಯೋಗಿಸಬೇಕು. ಆದರೆ ಧನುಸ್ಸಿನ ಆಧಾರವಿಲ್ಲದೆ ಬಿಟ್ಟ ಬಾಣವು ಗುರಿಯನ್ನು ತಲುಪಲಾರದು. ಜೀವಾತ್ಮನೆಂಬ ಈ ಬಾಣವು ವೇದೋಪನಿಷತ್ತುಗಳೆಂಬ ಧನುಸ್ಸಿನೊಂದಿಗೆ ಜೊತೆಗೂಡಿ ಅದರ ಆಶ್ರಯದಿಂದ ಶಕ್ತಿಯನ್ನು ಪಡೆದು ಭಗವಂತನ ಕಡೆಗೆ ಧುಮುಕಬೇಕು. ಬಾಣಪ್ರಯೋಗದಲ್ಲಿ ತೋರುವ ಏಕಾಗ್ರತೆಯನ್ನು ಇಲ್ಲಿಯೂ

ಅಳವಡಿಸಿಕೊಳ್ಳಬೇಕು. ಆಗ ನಾವು ಭಗವಂತನಲ್ಲಿ ಪೂರ್ಣವಾಗಿ ಲಗ್ನವಾಗುವೆವು . ಶಾಸ್ತ್ರಾಧ್ಯಯನ, ವಿಮರ್ಶೆಗಳಿಂದ ಸರಿಯಾದ ಜ್ಞಾನಶಕ್ತಿಯನ್ನು ಪಡೆದು ಧ್ಯಾನದಲ್ಲಿ ತೊಡಗಿದಾಗ ನಾವು ಪರಮಾತ್ಮನನ್ನು ಪಡೆಯುವೆವು. ಅವನ ಸಾಕ್ಷಾತ್ಕಾರವನ್ನು ಹೊಂದುವೆವು ಎಂಬುದೇ ಈ ರೂಪಕದ ಆಶಯವಾಗಿದೆ.

ನಮ್ಮ ಅಂತರಂಗದೊಳಗೆ ನಿಯಾಮಕನಾಗಿ ಇರುವ ಭಗವಂತನ ಸಾಕ್ಷಾತ್ಕಾರವನ್ನು ಪಡೆದ ಮೇಲೆ ನಮ್ಮ ಅನಾದಿ ಬಂಧವಾದ ಅವಿದ್ಯೆಯು ನಾಶಗೊಳ್ಳುವುದು. ಬಂಧನಗಳೆಲ್ಲ ಕಳಚಿಹೋಗುವವು. ಸಂಸಾರಕ್ಕೆ ಕಾರಣವಾದ ಕರ್ಮಗಳ ಸಂಚಯವೂ ನಷ್ಟವಾಗುವುದು. ಪ್ರಾರಬ್ಧಕರ್ಮಗಳಿದ್ದರೂ ಅದರ ಫಲವು ಮೊಟಕುಗೊಳ್ಳುವುದು. ಮುಂದಿನ ಕರ್ಮಗಳ ಲೇಪವೂ ಅವನಿಗೆ ಆಗುವುದಿಲ್ಲ. ಹೀಗೆ ತನ್ನನ್ನು ಮುಚ್ಚಿದ ಆವರಣವನ್ನೆಲ್ಲಾ ಕಳಚಿಕೊಂಡು ತನ್ನದೇ ಆದ ಜ್ಞಾನಾನಂದಮಯವಾದ ಸ್ವರೂಪವನ್ನು ಅನುಭವಿಸುವನು.

ಭಗವಂತನು ಪರಾವರನು. ಶ್ರೇಷ್ಠರಾದ ಬ್ರಹ್ಮಾದಿದೇವತೆಗಳೂ ಅವನ ಸೇವಕರು. ಅವನು ಬೆಳಕಿಗೆ ಬೆಳಕು. ಅವನಿಂದಲೇ ಸೂರ್ಯ, ಚಂದ್ರ ಮುಂತಾದ ಎಲ್ಲಾ ಜ್ಯೋತಿಗಳೂ ಬೆಳಗುವುವು. ಇವುಗಳನ್ನೆಲ್ಲಾ ಮೀರಿದ, ಈ ಎಲ್ಲಾ ಬೆಳಕಿಗೆ ನಿಲುಕದ ಪ್ರಕಾಶಶಕ್ತಿ ಅವನದಾಗಿದೆ. ಈ ಪರಬ್ರಹ್ಮನು ಎಲ್ಲೆಲ್ಲಿಯೂ ಇದ್ದಾನೆ. ನಮ್ಮ ಹಿಂದೆ, ಮುಂದೆ ಎಲ್ಲೆಡೆಗಳಲ್ಲೂ ಅವನು ವ್ಯಾಪಿಸಿದ್ದಾನೆ. ಆತನೇ ಸರ್ವೋತ್ತಮನು.

ಈ ಶರೀರವೆಂಬ ಮರದಲ್ಲಿ ಎರಡು ಹಕ್ಕಿಗಳಂತೆ ಜೀವನೂ, ಪರಮಾತ್ಮನೂ ವ್ಯಾಪಿಸಿದ್ದಾರೆ. ಈ ಸಂಸಾರದ ಅಶುಭ ಫಲವನ್ನು ಅತ್ಯಂತ ರುಚಿಕರವೆಂದು ಭಾವಿಸಿಕೊಂಡು ಜೀವಾತ್ಮನು ತಲ್ಲೀನತೆಯಿಂದ ಅದನ್ನು ಆಸ್ವಾದಿಸುತ್ತಾನೆ. ಆದರೆ ಭಗವಂತನು ಈ ದೇಹದಲ್ಲಿದ್ದರೂ ಇಂತಹ ಯಾವುದೇ ದೋಷ ಲೇಪವೂ ಅವನಿಗಿಲ್ಲ. ಜೀವಾತ್ಮರು ಮಾಡಿದ ಸತ್‌ಕರ್ಮದ ಸಾರವನ್ನು ಸ್ವೀಕರಿಸುತ್ತಾ ತನ್ನದೇ ಆದ ಆನಂದವನ್ನು ಅನುಭವಿಸಿಕೊಂಡು ಸಜ್ಜೀವರನ್ನು ಅನುಗ್ರಹಿಸುತ್ತಾ ಈ ದೇಹದಲ್ಲಿ ಆತನು ನೆಲೆಸಿದ್ದಾನೆ. ಅವನು ಭೋಕ್ತನೂ ಆಹುದು. ಅಭೋಕ್ತನೂ ಅಹುದು. ಅವನಿಗೆ ದುಃಖದ ಭೋಗವಿಲ್ಲ. ಜೀವಾತ್ಮರ ಸತ್‌ಕರ್ಮಗಳಿಂದ ಸುಪ್ರೀತನಾಗಿ ತನ್ನದೇ ಆದ ಆನಂದವನ್ನು ಸ್ವತಂತ್ರವಾಗಿ ಅನುಭವಿಸುತ್ತಾನೆ. ಜೀವರು ಮಾತ್ರ ಪರಮಾತ್ಮನ ಅಧೀನರಾಗಿ ಕರ್ಮದ ಫಲವಾಗಿ ಸುಖದುಃಖಗಳೆರಡನ್ನೂ ಅನುಭವಿಸುತ್ತಾರೆ. ಇದು ಒಂದೇ ಶರೀರದಲ್ಲಿರುವ ಜೀವ ಪರಮಾತ್ಮರಲ್ಲಿ ಇರುವ ಭೋಗದ ಅಂತರವಾಗಿದೆ.

ಪರಮಾತ್ಮನನ್ನು ತಿಳಿಯದೆ ಭೋಗಮಗ್ನನಾಗಿ ಜೀವನು ಈ ಸಂಸಾರದಲ್ಲಿ ಸಂಕಟಪಡುತ್ತಾನೆ. ಈ ಜೀವನು ಎಂದು ತನಗಿಂತ ಭಿನ್ನನಾದ, ಸ್ವಾಮಿಯಾದ ಪರಮಾತ್ಮನನ್ನು ತಿಳಿದು ಅವನ ದರ್ಶನವನ್ನು ಪಡೆಯುವನೋ ಅಂದಿಗೆ ಅವನ ಎಲ್ಲಾ ದುಃಖ ದುರಂತಗಳ ವಿಮೋಚನೆ. ಈ ಸಂಸಾರದಲ್ಲಿ ಈ ದೇಹದೊಳಗೆ ಜೀವ ಪರಮಾತ್ಮರು ಬೇರೆ ಬೇರೆಯಾಗಿರುವಂತೆ ಮುಕ್ತಿಯಲ್ಲಿಯೂ ಬೇರೆಯೇ ಆಗಿರುತ್ತಾರೆ. ಮೋಕ್ಷದಲ್ಲಿ ಅವರು ಪರಮಾತ್ಮನ ಜೊತೆಗೆ ಏಕತೆಯನ್ನು ಅನುಭವಿಸುವರೆಂದು ಭಾವಿಸಬಾರದು. ಅಲ್ಲಿಯೂ ಜ್ಞಾನಾನಂದರೂಪವನ್ನು ಹೊಂದಿ ಪರಮಾತ್ಮನ ಸಮಾನತೆಯನ್ನು ಮಾತ್ರ ಪಡೆಯುತ್ತಾರೆ. ಅಂತೂ ಈ ಸಂಸಾರದಲ್ಲಿಯೂ, ಮೋಕ್ಷದಲ್ಲಿಯೂ ಪರಮಾತ್ಮನು ನಮಗಿಂತ ಭಿನ್ನನೂ, ನಮ್ಮ ಸ್ವಾಮಿಯೂ ಆಗಿ ಇರುತ್ತಾನೆಂಬುದನ್ನು ಈ ಉಪನಿಷತ್ತು ಸ್ಪಷ್ಟಪಡಿಸಿದೆ.

ಪರೇಽವ್ಯಯೇ ಸರ್ವ ಏಕೀಭವಂತಿ

ಮುಕ್ತಿಯನ್ನು ಪಡೆದ ಜೀವರು ಮತ್ತು ಅಭಿಮಾನಿ ದೇವತೆಗಳು ಭಗವಂತನಲ್ಲಿ ಏಕೀಭಾವವನ್ನು ಪಡೆಯುವರು ಎಂದು ಈ ಉಪನಿಷತ್ತಿನ ಕೊನೆಯಲ್ಲಿ ಹೇಳಿದೆ. ಇಲ್ಲಿ ಏಕೀಭಾವವೆಂದರೆ ಅಭೇದವೆಂದು ಅರ್ಥವಲ್ಲ. ಈ ಉಪನಿಷತ್ತಿನಲ್ಲಿ ಅನೇಕ ಕಡೆಗಳಲ್ಲಿ ಮುಕ್ತಿಯಲ್ಲೂ ಜೀವರಿಗೂ ಪರಮಾತ್ಮನಿಗೂ ಭಿನ್ನತೆಯನ್ನು ಸಾರಲಾಗಿದೆ – ''ಅಮೃತಸ್ಯೈಷ ಸೇತುಃ'' ಭಗವಂತನು ಮುಕ್ತರಿಗೆ ನಿಯಾಮಕನು.

''ಪರಮಂ ಸಾಮ್ಯಮುಪೈತಿ'' ಮುಕ್ತಿಯಲ್ಲೂ ಏಕತೆಯಿಲ್ಲ, ವಿಶೇಷವಾದ ಸಮಾನತೆಯನ್ನು ಭಗವಂತನಿಂದ ಜೀವನು ಪಡೆಯುತ್ತಾನೆ. ''ಬ್ರಹ್ಮ ತತ್ ಲಕ್ಷ್ಯಮುಚ್ಯತೇ'' ಜೀವಾತ್ಮನು ಬಾಣವೆನಿಸಿದರೆ ಪರಮಾತ್ಮನು ಅವನ ಗುರಿಯಾಗಿದ್ದಾನೆ. ಬಾಣವು ಗುರಿಯನ್ನು ತಲುಪುವಂತೆ ಜೀವನು ಪರಮಾತ್ಮನನ್ನು ಹೊಂದುವನು. ಬಾಣ ಮತ್ತು ಗುರಿ ಬೇರೆ ಬೇರೆಯಾಗಿರುವಂತೆ ಜೀವಬ್ರಹ್ಮರೂ ಭಿನ್ನರು. ಹೀಗೆ ಜೀವರಿಗೆ ಭಗವಂತನಿಂದ ಭಿನ್ನತೆಯನ್ನೇ ಹೇಳುವ ಈ ಉಪನಿಷತ್ತು ''ಏಕೀಭವಂತಿ'' ಎಂಬುದಾಗಿ ಅಭೇದವನ್ನು ಹೇಳಲು ಸಾಧ್ಯವಿಲ್ಲ. ಭಗವಂತನ ಜೊತೆಗೆ ಮೋಕ್ಷದಲ್ಲಿ ಜೀವರಿಗೆ ಇರುವ ಐಕ್ಯಮತ್ಯವನ್ನೇ ಏಕೀಭಾವವೆಂದು ಇಲ್ಲಿ ಹೇಳಿದೆ. ಸಂಸಾರದಲ್ಲಿ ಜೀವಪರಮಾತ್ಮರಿಗೆ ಈ ಸಹಮತಿ ಕೂಡುವುದಿಲ್ಲ. ಭಗವಂತನ ವಿಚಾರಕ್ಕೆ ವಿರುದ್ಧವಾಗಿ ಸಂಸಾರಿಗಳು ವಿಚಾರಮಾಡುವರು. ಮುಕ್ತಿಯಲ್ಲಿ ಇಂತಹ ಮತಿಭೇದವಿಲ್ಲದೆ ಜೀವ ಪರಮಾತ್ಮರಲ್ಲಿ ಪೂರ್ಣವಾದ ಮಾನಸಿಕ ಸಾಮರಸ್ಯವಿರುತ್ತದೆ. ಲೋಕದಲ್ಲಿ ಐಕ್ಯಮತ್ಯವೆಂಬ ಅರ್ಥದಲ್ಲಿ ಏಕೀಭಾವ ಶಬ್ದವನ್ನು ಧಾರಾಳವಾಗಿ ಉಪಯೋಗಿಸಲಾಗುತ್ತದೆ. ಭಾರತೀಯರು ಒಂದಾಗಬೇಕೆಂಬುದಾಗಿ ಐಕ್ಯಮತ್ಯದ ಅಭಿಪ್ರಾಯದಲ್ಲಿ ಹೇಳುವುದು ಸಾಮಾನ್ಯವಾಗಿದೆ. ಅದರಂತೆ ಒಂದು ವಿಶಿಷ್ಟವಾದ ಜಾಗದಲ್ಲಿ ಜನರು ಸೇರಿದಾಗ ಆ ಸ್ಥಳದಲ್ಲಿ ಊರಿನ ಜನರು ಒಂದಾಗಿದ್ದಾರೆ ಎಂಬುದಾಗಿ ಪ್ರಯೋಗಿಸುತ್ತೇವೆ. ಅದರಂತೆ ವೈಕುಂಠ ಮುಂತಾದ ಸ್ಥಾನವಿಶೇಷಗಳಲ್ಲಿ ಪರಮಾತ್ಮನ ಜೊತೆಗೆ ಜೀವಾತ್ಮರು ಸೇರಿಕೊಳ್ಳುವುದರಿಂದಲೂ ಈ ಏಕೀಭಾವ ಶಬ್ದದ ಬಳಕೆ ಬಂದಿದೆ. ಜೀವಪರಮಾತ್ಮರಿಗೆ ಅಭೇದವೆಂದು ಇದನ್ನು ತಪ್ಪಾಗಿ ಗ್ರಹಿಸಬಾರದು.

ನದಿಗಳು ಸಮುದ್ರಗಳನ್ನು ಸೇರುವಂತೆ ಜೀವರು ಮುಕ್ತಿಯಲ್ಲಿ ಪರಮಾತ್ಮನನ್ನು ಸೇರುವರೆಂದೂ ಈ ಉಪನಿಷತ್ತು ಹೇಳಿದೆ. ನೀರು ದೊಡ್ಡ ಜಲಾಶಯದಲ್ಲಿ ಸೇರಿದಾಗ ಅಲ್ಲಿ ಮಿಲನಗೊಳ್ಳುತ್ತದೆಯಲ್ಲದೆ, ತನ್ನ ಪ್ರತ್ಯೇಕವಾದ ಅಸ್ತಿತ್ವವನ್ನು ಕಳೆದುಕೊಳ್ಳುವುದಿಲ್ಲ. ನದಿಯು ಸಮುದ್ರದಲ್ಲಿ ಸೇರಿದಾಗ ಅದರ ಪ್ರತ್ಯೇಕತೆಯು ಸ್ಪಷ್ಟವಾಗದೆ ನಾವು ಅದನ್ನು ಹಿಂದಿನ ಹೆಸರಿನಲ್ಲಿ ಕರೆಯದಿದ್ದರೂ ಆ ಎರಡು ನೀರುಗಳಿಗೂ ಮೊದಲು ಇದ್ದ ಭಿನ್ನತೆಯು ಮಾಯವಾಗುವುದಿಲ್ಲ. ಅದರಂತೆ ಜೀವರು ಮುಕ್ತಿಯಲ್ಲಿ ಪರಮಾತ್ಮನನ್ನು ಹೊಂದಿದಾಗ ಅಮುಕ್ತರಾದ ಸಂಸಾರಿ ಜನರಿಗೆ ಅವರ ನಾಮರೂಪಗಳು ತೋರದೆ ಇರಬಹುದು. ಆದರೆ ಜೀವರು ಮುಕ್ತಿಯನ್ನು ಪಡೆದಾಗ ತಮ್ಮ ಪ್ರತ್ಯೇಕವಾದ ವ್ಯಕ್ತಿತ್ವವನ್ನು ಉಳಿಸಿಕೊಂಡೇ ಭಗವಂತನ ಜೊತೆಗೆ ಸೇರುವರು. ಒಂದು ವಸ್ತುವಿಗೂ ಇನ್ನೊಂದು ವಸ್ತುವಿಗೂ ಭಿನ್ನತೆಯು ಕೆಲವು ಕಾಲ ಮಾತ್ರ ಇದ್ದು ನಶಿಸಿಹೋಗುವ ಪದಾರ್ಥವಲ್ಲ. ಯಾರಿಗೂ ಅಂತಹ ಅನುಭವವಿಲ್ಲ. ಪದಾರ್ಥಗಳಲ್ಲಿ ಇರುವ ಪರಸ್ಪರ ಭೇದವು ತಾತ್ಕಾಲಿಕವೆನ್ನುವುದು ಅವೈಜ್ಞಾನಿಕವಾಗಿದೆ. ಆದುದರಿಂದ ಸಂಸಾರ ಹಾಗೂ ಮುಕ್ತಿ ಈ ಎರಡು ಸ್ಥಿತಿಗಳಲ್ಲೂ ಜೀವ ಪರಮಾತ್ಮರಿಗೆ ಭೇದವಿದೆಯೆಂಬುದೇ ಉಪನಿಷತ್ತಿನ ಅಭಿಪ್ರಾಯವಾಗಿದೆ.

೩-೬ ಮಾಂಡೂಕೋಪನಿಷತ್

ಓಂಕಾರವು ಸಕಲ ವೇದಗಳ ಸಂಕ್ಷಿಪ್ತ ರೂಪ. ಅದು ಎಲ್ಲ ವೇದಗಳ ಸಾರ ಸಂಗ್ರಹವೇ ಆಗಿದೆ. ಈ ಓಂಕಾರವು ಅನಂತ ಗುಣಪೂರ್ಣನೂ ತ್ರಿಕಾಲದಲ್ಲಿಯೂ ನಾಶರಹಿತನೂ ಆಗಿ, ಪೂರ್ಣನೂ ಅಕ್ಷರನೂ ಎನಿಸುವ ಪರಮಾತ್ಮನನ್ನು ಪ್ರತಿಪಾದಿಸುತ್ತದೆ. ಅವನೊಬ್ಬನೇ ಪರಿಪೂರ್ಣನು. ಕಾಲತ್ರಯದ ವಿಕೃತಿಯನ್ನು ಮೀರಿದ ಅಕ್ಷರಪುರುಷನು. ಅನಾದಿಯೂ ಅವಿಕಾರಿಯೂ ಆದ ಶ್ರೀತತ್ವ ಮುಂತಾದ ಎಲ್ಲವೂ ಅವನ ಅಧೀನ.

ಈ ಭಗವಂತನು ಜೀವಾತ್ಮನ ಎಲ್ಲಾ ಅವಸ್ಥೆಗಳಲ್ಲೂ ಅವನಿಗೆ ನಿಯಾಮಕನಾಗಿರುವನು. ಜೀವನಿಗೆ

ಒಟ್ಟು ನಾಲ್ಕು ಅವಸ್ಥೆಗಳಿವೆ. ಜಾಗ್ರತ್ (ಎಚ್ಚರ), ಸ್ವಪ್ನ, ಸುಷುಪ್ತಿ (ಗಾಢನಿದ್ರೆ) ಮತ್ತು ಮುಕ್ತಿ ಇವುಗಳೇ ಈ ನಾಲ್ಕು ಅವಸ್ಥೆಗಳು. ಸಂಸಾರದಲ್ಲಿ ಮೊದಲಿನ ಮೂರು ಸ್ಥಿತಿಗಳನ್ನು ನಾವು ಅನುಭವಿಸುವು ದಾದರೆ ಸಂಸಾರದ ನಂತರದಲ್ಲಿ ಕೊನೆಯ ಸ್ಥಿತಿಯಾದ ಮುಕ್ತಿಯನ್ನು ಪಡೆಯುತ್ತೇವೆ. ವಿಶ್ವ, ತೈಜಸ, ಪ್ರಾಜ್ಞ, ತುರ್ಯ ಈ ನಾಲ್ಕು ರೂಪಗಳಿಂದ ನಾಲ್ಕು ಅವಸ್ಥೆಗಳಲ್ಲಿ ಭಗವಂತನು ನಮ್ಮನ್ನು ನಿಯಂತ್ರಿಸುತ್ತಾನೆ.

ನಮ್ಮ ಜಾಗ್ರದವಸ್ಥೆಯಲ್ಲಿ ಭಗವಂತನು ''ವಿಶ್ವ'' ರೂಪದಿಂದ ನಮ್ಮ ಕಣ್ಣಿನಲ್ಲಿ ನೆಲೆಸಿ ನಮಗೆ ಬಾಹ್ಯವಸ್ತುಗಳ ಪರಿಜ್ಞಾನವನ್ನು ಉಂಟುಮಾಡುವನು. ಈ ಸ್ಥೂಲ ಪದಾರ್ಥಗಳನ್ನು ಭಗವಂತನು ಸ್ವೀಕರಿಸಿ ಅವುಗಳಿಂದ ವಿವಿಧ ಭೋಗಗಳ ಅನುಭವವನ್ನು ಈ ಸಮಯದಲ್ಲಿ ನಮಗೆ ಮಾಡಿಸುವನು.

ಸ್ವಪ್ನಾವಸ್ಥೆಯಲ್ಲಿ ನಮಗೆ ಈ ಭೌತಿಕ ವಸ್ತುಗಳ ಭೋಗವಿಲ್ಲ. ಎಚ್ಚರದಲ್ಲಿ ನಮಗೆ ಉಂಟಾಗುವ ಅನುಭವಗಳ ಸಂಸ್ಕಾರದಿಂದ ನಿರ್ಮಾಣಗೊಳ್ಳುವ ಸೂಕ್ಷ್ಮ ವಸ್ತುಗಳನ್ನು ಮಾತ್ರ ಆಗ ನಾವು ಅನುಭವಿಸುತ್ತೇವೆ. ತೈಜಸಸ್ವರೂಪಿಯಾದ ಭಗವಂತನು ನಮ್ಮ ಈ ವ್ಯಾಪಾರವನ್ನು ನಡೆಸುತ್ತಾನೆ.

ಗಾಢ ನಿದ್ರೆಯಾದ ಸುಷುಪ್ತಿಯಲ್ಲಿ ಸ್ಥೂಲ, ಸೂಕ್ಷ್ಮಗಳಾದ ಎರಡು ಪದಾರ್ಥಗಳ ಅನುಭವವೂ ನಮಗೆ ಇರುವುದಿಲ್ಲ. ಯಾವ ವಿಷಯ ಭೋಗವೂ ಆಗ ಇಲ್ಲ. ಆದರೆ ನಮ್ಮನ್ನು ಮಾತ್ರ ನಾವು ತಿಳಿದುಕೊಂಡಿರುತ್ತೇವೆ. ನಮ್ಮಲ್ಲಿ ಹುದುಗಿದ ನೈಜಸುಖವನ್ನೂ ಸ್ವಲ್ಪವಾಗಿ ಅನುಭವಿಸುತ್ತೇವೆ. ಪ್ರಾಜ್ಞರೂಪಿಯಾದ ಪರಮಾತ್ಮನೇ ನಮ್ಮ ಈ ಸ್ಥಿತಿಗೆ ನಿಯಾಮಕನು. ಅವನು ಹೃದಯದೇಶದಲ್ಲಿದ್ದು ಈ ಸುಖವನ್ನು ನಮಗೆ ಉಣಿಸುವನು. ಈ ಮೂರು ರೂಪಗಳೂ ಸರ್ವಜ್ಞನಾದ ಭಗವಂತನ ಸರ್ವಶಕ್ತ ಚಿದಾನಂದಮಯ ಸ್ವರೂಪಗಳೇ ಆಗಿವೆ.

ಭಗವಂತನು ಮಾಡುವ ವಿಶ್ವನಿರ್ಮಾಣದ ವಿಷಯದಲ್ಲಿ ಅನೇಕ ವಾದಗಳು ಪ್ರಚಲಿತವಾಗಿವೆ ಯೆಂದು ಈ ಉಪನಿಷತ್ತು ಉಲ್ಲೇಖಿಸಿ ತನ್ನ ನಿರ್ಣಯವನ್ನು ಸಾರುತ್ತದೆ. ಚಿನ್ನವು ವಿಚಿತ್ರ ಆಭರಣಗಳ ರೂಪವನ್ನು ತಾಳುವಂತೆ ಪರಮಾತ್ಮನೇ ಈ ವಿಚಿತ್ರ ವಿಶ್ವದ ಆಕಾರವನ್ನು ಪಡೆಯುತ್ತಾನೆಂದು ಕೆಲವರು ವಾದಿಸುತ್ತಾರೆ. ಈ ವಿಶ್ವವು ಕೇವಲ ಭ್ರಮೆ. ಸ್ವಪ್ನದಂತೆ, ಮಾಯೆಯಂತೆ ಇದು ಕಾಣಿಸಿಕೊಳ್ಳುತ್ತದೆಯೆಂದು ಮುಂತಾದ ವಾದಗಳೂ ಇವೆ. ಸರ್ವಸಮರ್ಥನಾದ ಭಗವಂತನ ಇಚ್ಛೆಯಿಂದಲೇ ಯಥಾರ್ಥವಾದ ಈ ವಿಶ್ವದ ನಿರ್ಮಾಣವಾಗಿದೆಯೆಂದು ಸೃಷ್ಟಿಯ ಬಗ್ಗೆ ಬಲ್ಲವರು ನಿರ್ಧರಿಸಿದ್ದಾರೆಂದು ಅಂತಿಮ ನಿರ್ಣಯವನ್ನು ಶ್ರುತಿಯು ಘೋಷಿಸಿದೆ. ಈ ವಿಶ್ವವು ಬ್ರಹ್ಮನಲ್ಲಿ ಕಲ್ಪನೆಯಿಂದ ತೋರುವಂತಹ ಅಸತ್ಯ ಪದಾರ್ಥವಲ್ಲ. ನಿರ್ವಿಕಾರನಾದ ಪರಮಾತ್ಮನ ವಿಕೃತಿಯೂ ಅಲ್ಲ. ಇದು ಸತ್ಯ. ಅವನ ಇಚ್ಛೆ ಮತ್ತು ಸಾಮರ್ಥ್ಯದಿಂದ ನಿರ್ಮಾಣಗೊಂಡಿದೆಯೆಂದೇ ಈ ವಾಕ್ಯದ ಆಶಯವಾಗಿದೆ.

ತನ್ನ ಇಚ್ಛೆಯಿಂದ ಭಗವಂತನು ಈ ಜಗತ್ತನ್ನು ಯಾಕೆ ಸೃಜಿಸಿದನು? ತನ್ನ ಆನಂದಕ್ಕಾಗಿಯೇ ತನ್ನ ಲೀಲಾವಿಹಾರಕ್ಕಾಗಿ ಇದನ್ನು ನಿರ್ಮಿಸಿದನೇ ? ಪರಿಪೂರ್ಣನಾದ ದೇವರಿಗೆ ಬಯಕೆಯಿರಲು ಸಾಧ್ಯವೇ ? ಸರ್ವವನ್ನು ಪಡೆದ ಪರಮಾತ್ಮನಿಗೆ ಪ್ರಯೋಜನದ ಅಪೇಕ್ಷೆಯೇನು ? ಮುಂತಾದ ಪ್ರಶ್ನೆಗಳು ಏಳಬಹುದು. ಜೀವರನ್ನು ಅನಾದಿ ಬಂಧನದಿಂದ ಬಿಡುಗಡೆ ಮಾಡಲು ಕೇವಲ ತನ್ನ ಕಾರುಣ್ಯ ಸ್ವಭಾವದಿಂದಲೇ ಭಗವಂತನ ಈ ಸೃಷ್ಟಿ ವ್ಯಾಪಾರವು ನಡೆದಿದೆ. ಯಾವ ಪ್ರಯೋಜನದ ಉದ್ದೇಶವೂ ಅವನಿಗೆ ಇಲ್ಲವೆಂದು ಉಪನಿಷತ್ತು ಸಿದ್ಧಾಂತವನ್ನು ಮಾಡಿದೆ.

ಹಿಂದೆ ಹೇಳಿದ ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥೆಗಳಿಂದಲೂ ವಿಭಿನ್ನವಾದ ಇನ್ನೊಂದು ಸ್ಥಿತಿಯಿದೆ. ಎಚ್ಚರದಲ್ಲಿರುವಂತೆ ಆಗ ಯಾವುದೇ ಬಾಹ್ಯವಾದ ಜ್ಞಾನವಿರುವುದಿಲ್ಲ. ಸ್ವಪ್ನದಲ್ಲಿರುವಂತೆ ಮಾನಸಿಕ ವ್ಯಾಪಾರವು ಆಗ ಇಲ್ಲ. ಗಾಢನಿದ್ರೆಯ ಅಜ್ಞಾನವೂ ಆಗ ಇರುವುದಿಲ್ಲ. ಪ್ರಜ್ಞೆಯೇ ಇಲ್ಲದ ನಿರ್ವ್ಯಾಪಾರ ಸ್ಥಿತಿಯೂ ಇದಲ್ಲ. ಭಗವಂತನನ್ನೂ ತನ್ನ ದಿವ್ಯವಾದ ನೈಜಸ್ವರೂಪವನ್ನೂ

ಅನುಭವಿಸುವಂತಹ ಈ ನಾಲ್ಕನೆಯ ಅವಸ್ಥೆಯೇ ಮುಕ್ತಿಯಾಗಿದೆ. ಇಲ್ಲಿ ನಮ್ಮ ನಿಯಾಮಕನಾಗಿ ನಮಗೆ ಜ್ಞಾನ, ಆನಂದ ಮೊದಲಾದವುಗಳನ್ನು ತುರ್ಯರೂಪಿಯಾದ ಭಗವಂತನು ನೀಡುತ್ತಾನೆ. ಇವನೇ ಈ ಸಂಸಾರದೆಶೆಯಲ್ಲಿದ್ದ ನಮ್ಮ ಎಲ್ಲಾ ಅನಿಷ್ಟ ಪ್ರಪಂಚವನ್ನು ಉಪಶಮನ ಮಾಡುವ, ಮಿಥ್ಯಾಜ್ಞಾನವನ್ನು ನಿವೃತ್ತಿಗೊಳಿಸುವ ದೇವನಾಗಿದ್ದಾನೆ. ಎಚ್ಚರ ಮತ್ತು ಸ್ವಪ್ನದಲ್ಲಿ ನಮಗೆ ಕಾರ್ಯ, ಕಾರಣಗಳ ಬಂಧನವು ಇದೆ. ಈ ಎರಡು ದೆಶೆಗಳಲ್ಲಿ ಸಾಂಸಾರಿಕ ಭ್ರಮೆಯೂ ಇದೆ. ಅದಕ್ಕೆ ಕಾರಣವಾದ ಅವಿದ್ಯೆಯೂ ಇದೆ. ಭಗವಂತನು ಆಗ ನಮಗೆ ಈ ಎರಡೂ ಬಂಧನಗಳ ಪ್ರವರ್ತಕನಾಗಿದ್ದಾನೆ. ಸುಷುಪ್ತಿಯಲ್ಲಿ ಕಾರ್ಯವಾದ ಭ್ರಮೆಯಿರುವುದಿಲ್ಲ. ಭ್ರಮೆಗಳಿಗೆ ಕಾರಣವಾದ ಅವಿದ್ಯೆಯ ಬಂಧನವನ್ನು ಮಾತ್ರ ಆಗ ಭಗವಂತನು ನಮಗೆ ಮಾಡುವನು. ಮುಕ್ತಿಯಲ್ಲಿ ಪರಮಾತ್ಮನ ಅನುಗ್ರಹದಿಂದ ನಮಗೆ ಈ ಎರಡೂ ಬಂಧನಗಳೂ ಇರುವುದಿಲ್ಲ. ಗಾಢನಿದ್ರೆಯಲ್ಲಿ ತನ್ನ ಸಾಮಾನ್ಯವಾದ ಜ್ಞಾನದ ಹೊರತು ಇತರ ವಸ್ತುಗಳ ಪರಿಜ್ಞಾನವೇ ಇರುವುದಿಲ್ಲ. ಮುಕ್ತಿಯಲ್ಲಿ ಮಾತ್ರ ಜ್ಞಾನದ ವಿಸ್ತಾರವೇ ಇದೆ. ಸುಷುಪ್ತಿಯಲ್ಲೂ, ಮುಕ್ತಿಯಲ್ಲೂ ಭ್ರಮೆಯಿಲ್ಲವೆಂಬುದು ಸಮಾನವಾಗಿದ್ದರೂ ಸುಷುಪ್ತಿಯಲ್ಲಿ ಭ್ರಮೆಗೆ ಮೂಲರಾದ ಅವಿದ್ಯೆಯ ಬಂಧನವಿದೆ. ಮುಕ್ತಿಯಲ್ಲಿ ಆ ಬಂಧನವೂ ಇಲ್ಲ. ಹೀಗೆ ಎಲ್ಲಾ ಅವಸ್ಥೆಗಳಲ್ಲೂ ನಾವು ಭಗವಂತನಿಂದ ನಡೆಯುವ ವಿವಿಧ ವ್ಯಾಪಾರಗಳ ಅನುಸಂಧಾನದ ಜೊತೆಗೆ ಅವನ ಮಹಿಮೆಯನ್ನು ಅರಿತುಕೊಳ್ಳಬೇಕು.

ಭಗವಂತನ ಇಚ್ಛೆಯಿಂದ ಅನಾದಿಯಾದ ಅಜ್ಞಾನ ಬಂಧನಕ್ಕೆ ಒಳಗಾದ ಜೀವನು ಅವನ ಅನುಗ್ರಹದಿಂದಲೇ ಎಚ್ಚರಗೊಂಡಾಗ, ಸರಿಯಾದ ಅರಿವನ್ನು ಹೊಂದಿದಾಗ ನಮ್ಮ ಎಲ್ಲ ಅನಿಷ್ಟಗಳ ನಿವಾರಕನಾದ, ಸ್ವತಂತ್ರನಾದ ಪರಮಾತ್ಮನ ದರ್ಶನವನ್ನು ಪಡೆಯುವನು.

''ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ ।
ಮಾಯಾಮಾತ್ರಮಿದಂ ದ್ವೈತಂ ಅದ್ವೈತಂ ಪರಮಾರ್ಥತಃ ॥

ಚೈತನ್ಯಮಯನಾದ ಈ ಜೀವನಿಗೆ ಒದಗಿರುವ ಈ ಸಾಂಸಾರಿಕ ಬಂಧನವು ಸ್ವಾಭಾವಿಕವಲ್ಲ. ಇದು ಸತ್ಯವಾಗಿದ್ದರೂ ಅಸ್ವಾಭಾವಿಕವೂ ಭಗವಂತನ ಅಧೀನವೂ ಆಗಿದೆ. ಇಂತಹ ದುರ್ಘಟನೆಗಳಿಗೆ ಒಳಗಾಗಿರುವೆವೆಂದು ನಾವು ಭಯಪಡಬೇಕಿಲ್ಲ. ಭಗವಂತನ ಅನುಗ್ರಹದಿಂದ ಈ ಅಸ್ವಾಭಾವಿಕವಾದ ಬಂಧನವನ್ನು ಕಳೆದುಕೊಳ್ಳಬಲ್ಲೆವು. ಭ್ರಮೆ, ತತ್ವಜ್ಞಾನ ಇವೆರಡಕ್ಕೂ ಭಗವದಿಚ್ಛೆಯೇ ಕಾರಣ. ಅವನ ಅನುಗ್ರಹವಿದ್ದಾಗ ಈ ಭ್ರಮೆಯ ಸುಳಿಯಿಂದ ಪಾರಾಗುವುದು ಕಷ್ಟವಲ್ಲ. ಮಮತೆ, ಅಭಿಮಾನ ಮುಂತಾದ ಈ ವಿವಿಧ ಶಾರೀರಿಕ ಬಂಧನಗಳೂ ಯಾವುದೇ ಅಜ್ಞಾನಾದಿ ಕಾರಣಗಳಿಂದ ನಮಗೆ ಸಂಭವಿಸಿದ್ದರೂ ಗುರುಗಳ ಉಪದೇಶದಿಂದ ಸರಿಯಾದ ತತ್ವಜ್ಞಾನವನ್ನು ಪಡೆದು ಇವುಗಳಿಂದ ಬಿಡುಗಡೆಯನ್ನು ಪಡೆಯಬಹುದು.

ನಮ್ಮ ಜೀವನದ ನಾಲ್ಕು ಅವಸ್ಥೆಗಳ ನಿಯಾಮಕರಾದ ವಿಶ್ವ, ತೈಜಸ, ಪ್ರಾಜ್ಞ, ತುರ್ಯರೆಂಬ ಭಗವಂತನ ರೂಪಗಳನ್ನು ಓಂಕಾರವು ಪ್ರತಿಪಾದಿಸುತ್ತದೆ. ಓಂಕಾರದಲ್ಲಿ ಅ, ಉ, ಮ್ ಈ ಮೂರು ವರ್ಣಗಳು ಇವೆ. ಅಕಾರವು ಎಲ್ಲಾ ಬಾಹ್ಯ ವಿಷಯ ಭೋಗಗಳ ''ಆಪ್ತಿ'' – ಅನುಭವವನ್ನು ನಮಗೆ ನೀಡುವ ಜಾಗ್ರತಾವಸ್ಥೆಗೆ ನಿಯಾಮಕವಾದ ''ವಿಶ್ವ'' ಎಂಬ ಭಗದ್ರೂಪವನ್ನು ಪ್ರತಿಪಾದಿಸುತ್ತದೆ. ಸ್ವಪ್ನದಲ್ಲಿ ಎಚ್ಚರದಲ್ಲಿರುವಂತೆ ವಿಷಯಾನುಭವವೂ ಇದೆ. ಗಾಢ ನಿದ್ರೆಯಂತೆ ಹೊರಗಿನ ಪರಿವೆಯೂ ಇರುವುದಿಲ್ಲ. ಅಂತಹ ಉಭಯ ಸ್ಥಿತಿಯನ್ನು ನೀಡುವ ಸ್ವಪ್ನಾವಸ್ಥಾನಿಯಾಮಕನಾದ ತೈಜಸನನ್ನು ಓಂಕಾರದ ''ಉ'' ವರ್ಣವು ಪ್ರತಿಪಾದಿಸುತ್ತದೆ. ದೇಹಾಭಿಮಾನವನ್ನು ಬಿಡಿಸಿ ನಮ್ಮನ್ನು ಸ್ವಪ್ನಮಂಡಲದ ಇನ್ನೊಂದು ಪ್ರಪಂಚಕ್ಕೆ ಉತ್ಕರ್ಷಣ ಮಾಡುವುದರಿಂದಲೂ ತೈಜಸನನ್ನು ಉಕಾರವು ಬೋಧಿಸುತ್ತದೆ. ಮಕಾರವು ''ಮಿತಿ'' – ಅಂತರ್ಗತಿಯನ್ನು ತಿಳಿಸುತ್ತದೆ. ಜೀವನು ಪರಮಾತ್ಮನನ್ನು ಪ್ರವೇಶಿಸಿ ಹೊರಗಿನ

ಸಂಬಂಧವನ್ನೇ ಕಳೆದುಕೊಂಡು ಬಾಹ್ಯ ಮತ್ತು ಮಾನಸಿಕ ಜ್ಞಾನದಿಂದ ವಿಮುಕ್ತವಾದ ಸ್ಥಿತಿಯನ್ನು ಪಡೆಯಲು ಕಾರಣನಾದ ಪ್ರಾಜ್ಞರೂಪಿಯಾದ ಪರಮಾತ್ಮನನ್ನು ಮಕಾರವು ಬೋಧಿಸುತ್ತದೆ. ಓಂಕಾರದಲ್ಲಿ ನಾದವು ಮುಕ್ತಿ ಅವಸ್ಥೆಗೆ ನಿಯಾಮಕನಾದ ''ತುರ್ಯ'' ರೂಪಿಯಾದ ಪರಮಾತ್ಮನನ್ನು ತಿಳಿಸಿಕೊಡುತ್ತದೆ. ಜೀವ ಅವನ ಸಾಕ್ಷಾತ್ಕಾರದಿಂದ ಭಗವವಂತನಿಗೆ ಸದೃಶವಾದ ರೂಪವನ್ನು ಪಡೆದು ಜ್ಞಾನಾನಂದ ರೂಪಿಯಾಗಿ ಮೋಕ್ಷದಲ್ಲಿ ವಿಹರಿಸುತ್ತಾನೆ. ಮುಕ್ತಿಯಲ್ಲಿ ಜೀವರು ಪರಮಾತ್ಮನ ಸಾದೃಶ್ಯ ಪಡೆದರೂ ಜ್ಞಾನ, ಆನಂದ, ಶಕ್ತಿ ಮುಂತಾದ ಗುಣಗಳಲ್ಲಿ ಜೀವರಿಗೂ ಭಗವಂತನಿಗೂ ಅತೀವ ಅಂತರವೂ ಇದೆಯೆಂಬುದನ್ನು ನಾವು ಮರೆಯಬಾರದು. ಈ ರೀತಿಯಾಗಿ ಈ ಉಪನಿಷತ್ತು, ಪ್ರಣವ ಪ್ರತಿಪಾದ್ಯ ವಾದ ನಾಲ್ಕು ರೂಪಗಳಿಂದ ನಾಲ್ಕು ಅವಸ್ಥೆಗಳಿಗೆ ನಿಯಾಮಕನಾಗಿರುವ ಪರಮಾತ್ಮನ ಮಹಿಮೆಯನ್ನು ವರ್ಣಿಸುತ್ತದೆ.

ಈ ಉಪನಿಷತ್ತಿನಲ್ಲಿ ವಿಶ್ವ, ತೈಜಸ, ಪ್ರಾಜ್ಞ ರೂಪಗಳನ್ನು ಕಾರ್ಯ ಮತ್ತು ಕಾರಣಗಳಿಂದ ಬದ್ಧವೆಂದು ಹೇಳಿದೆ. ಈ ರೂಪಗಳಿಗೆ ಅಜ್ಞಾನವಿದೆಯೆಂದೂ ಇಲ್ಲಿಯ ವಾಕ್ಯಗಳಿಂದ ಭಾಸವಾಗುತ್ತದೆ. ''ಪ್ರಪಂಚೋ ಯದಿ ವಿದ್ಯೇತ'', ''ವಿಕಲ್ಪೋ ವಿನಿವರ್ತೇತ'' ಮುಂತಾದ ವಾಕ್ಯಗಳಿಂದ ಜಗತ್ತು ಕಲ್ಪಿತವೆಂದೂ ದ್ವೈತವು ಕೇವಲ ಮಾಯೆಯೆಂದೂ ಅದ್ವೈತವೇ ಪರಮಾರ್ಥವೆಂದೂ ಅರ್ಥವಾಗುತ್ತದೆ. ಆದುದರಿಂದ ಸಂಸಾರದ ಅವಸ್ಥೆಯಲ್ಲಿ ಅಜ್ಞಾನಿಯೂ ಬದ್ಧನೂ ಆಗಿ ದ್ವೈತಭಾವವನ್ನು ಹೊಂದಿರುವ ಆತ್ಮನು ತುರ್ಯಾವಸ್ಥೆಯಾದ ಮೋಕ್ಷದಲ್ಲಿ ಕಾರ್ಯ ಕಾರಣ ಬಂಧನದಿಂದ ಮುಕ್ತನಾಗಿ ಪೂರ್ಣ ಜ್ಞಾನಸ್ವರೂಪ ನಾಗುವನು. ಆಗ ಈ ದ್ವೈತಭಾವವೇ ಇರುವುದಿಲ್ಲವೆಂಬ ಭಾವನೆಯು ನಮಗೆ ಉಂಟಾಗಬಹುದು.

ಆದರೆ ಉಪನಿಷತ್ತು ಪರಮಾತ್ಮನ ವಿಶ್ವ, ತೈಜಸ, ಪ್ರಾಜ್ಞ ರೂಪಗಳನ್ನು ಉಲ್ಲೇಖಿಸಿ ಈ ರೂಪಗಳನ್ನು ''ಸರ್ವೇಶ್ವರ'', ''ಸರ್ವಜ್ಞ'', ''ಅಂತರ್ಯಾಮಿ''ಯೆಂದು ವರ್ಣಿಸಿದೆ. ಅದರಂತೆ ''ತುರ್ಯ''ನನ್ನು ''ಸರ್ವದೃಕ್'' ಎಲ್ಲವನ್ನೂ ಬಲ್ಲವನೆಂದು ಹೇಳಿದೆ. ಜಗತ್ತು ಕಲ್ಪಿತವಾಗಿದ್ದರೆ ಪರಮಾತ್ಮನು ಸರ್ವೇಶ್ವರನೂ, ಸರ್ವಜ್ಞನೂ ಹೇಗೆ ಆಗಬಲ್ಲನು? ಅದರಂತೆ ಜಗತ್ತು ಸ್ವಪ್ನ, ಮಾಯೆಯಂತೆ ಅಲ್ಲ. ಪ್ರಭುವಿನ ಇಚ್ಛೆಯಿಂದಲೇ ಇದರ ನಿರ್ಮಾಣವಾಗಿದೆಯೆಂದು ಇದೇ ಉಪನಿಷತ್ತು ನಿರ್ಧಾರದ ವಾಣಿಯಿಂದ ಹೇಳಿದೆ. ಈ ಎಲ್ಲಾ ಮಾತುಗಳಿಂದ ಉಂಟಾಗುವ ಗೊಂದಲವನ್ನು ಶ್ರೀಮಧ್ವಾಚಾರ್ಯರು ತಮ್ಮ ಭಾಷ್ಯದಲ್ಲಿ ಪರಿಹರಿಸಿದ್ದಾರೆ. ಸರ್ವೇಶ್ವರನಾದ ಭಗವಂತನಿಗೆ ಕಾರ್ಯ ಕಾರಣಗಳ ಬಂಧನವಾಗಲೀ, ಅಜ್ಞಾನವಾಗಲೀ ಇದೆಯೆಂದು ಈ ವಾಕ್ಯಗಳ ಅರ್ಥವಲ್ಲ. ಈ ಬಂಧನ ಮತ್ತು ಜೀವರ ಜ್ಞಾನ, ಅಜ್ಞಾನ ಇವುಗಳಿಗೆಲ್ಲ ಭಗವಂತನು ಕಾರಣನು. ಇವೆಲ್ಲದರ ಮೇಲೆ ಅವನದೇ ಸ್ವಾತಂತ್ರ್ಯ ವಿದೆಯೆಂಬುದೇ ಈ ಮಾತುಗಳ ಅಭಿಪ್ರಾಯವಾಗಿದೆ. ಇಲ್ಲಿರುವ ದ್ವೈತ ಅದ್ವೈತ ಪದಗಳನ್ನು ಪ್ರಚಲಿತವಾದ ಅರ್ಥದಲ್ಲಿ ಪ್ರಯೋಗಿಸಿಲ್ಲ. ಅದ್ವೈತವೆಂದರೆ ಜ್ಞಾನಿಗಳು ಸರಿಯಾಗಿ ವಿಮರ್ಶಿಸಿ ತಿಳಿದ ಸತ್ಯವಸ್ತುವೆಂದೂ, ದ್ವೈತವೆಂದರೆ ಭ್ರಮೆ, ಮಿಥ್ಯಾಜ್ಞಾನವೆಂತಲೂ ಅರ್ಥವಾಗಿದೆ. ಪದಾರ್ಥ ಸ್ವರೂಪ ಕ್ಕಿಂತ ಭಿನ್ನವಾಗಿ ತಿಳಿದಾಗ ಆ ವಿಪರೀತ ಜ್ಞಾನವು ದ್ವೈತವೆನಿಸುವುದು. ವಸ್ತುವನ್ನು ಇದ್ದಂತೆಯೇ ತಿಳಿಯು ವಾಗ ಈ ತತ್ವಜ್ಞಾನವೇ ಅದ್ವೈತ. ನಮಗೆ ಈ ದೇಹದ ಮೇಲೆ ಅಭಿಮಾನ, ಮಮತೆ ಇದೆ. ಸ್ವಾತಂತ್ರ್ಯ ಭ್ರಮೆಯೂ ಇದೆ. ಈ ಭ್ರಮೆಯು ನಮ್ಮ ಸಹಜ ಗುಣವಲ್ಲ. ಇದು ಭಗವಂತನ ಇಚ್ಛೆಯ ಅಧೀನವಾದ ಅಸ್ವಾಭಾವಿಕ ಧರ್ಮವಾಗಿದೆ. ಇವೆಲ್ಲವೂ ದೇವರ ಮಾಯೆಯಿಂದ ನಮಗೆ ಆಗುತ್ತವೆ. ಇಲ್ಲಿ ಮಾಯೆ ಯೆಂದರೆ ಭ್ರಮೆ ಅಥವಾ ಇಂದ್ರಜಾಲವೆಂದು ಅರ್ಥವಲ್ಲ. ಪರಮಾತ್ಮನ ಅಮೋಘವಾದ ಸಂಕಲ್ಪ ಮತ್ತು ವಿಚಿತ್ರ ಶಕ್ತಿಯನ್ನೇ ಅವನ ಮಾಯೆಯೆಂದು ನಾವು ಕರೆಯುತ್ತೇವೆ. ನಮ್ಮ ಭ್ರಾಂತಿಯಾಗಲೀ, ತತ್ವಜ್ಞಾನ ವಾಗಲೀ ''ಪರಮಾರ್ಥ''ನಾದ ಸರ್ವೋತ್ತಮ ವಸ್ತುವಾದ ದೇವರಿಂದಲೇ ಆಗಿದೆ. ಅವನ ''ಮಾಯೆ''

ಯಿಂದ ಸಂಕಲ್ಪ ಶಕ್ತಿಯಿಂದಲೇ ಇದರ ನಿರ್ಮಾಣ. ಅಸ್ವಾಭಾವಿಕವಾದ ಈ ಸಂಸಾರ ಬಂಧನವು ಅವನ ಅನುಗ್ರಹ ಮತ್ತು ಗುರುಗಳ ಉಪದೇಶದಿಂದ ನಿವೃತ್ತಿಗೊಳ್ಳುತ್ತದೆಯೆಂದು ಶ್ರೀಮಧ್ವಾಚಾರ್ಯರು ಯಾವುದರ ವಿರೋಧವೂ ಭಾರದಂತೆ ಈ ಮಾತುಗಳ ಅರ್ಥವನ್ನು ವಿವರಿಸಿದ್ದಾರೆ.

೩-೭ ತೈತ್ತಿರೀಯೋಪನಿಷತ್

ಭಗವಂತನ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪಗಳು ಬೇರೆ ಬೇರೆ ಸ್ಥಾನಗಳಲ್ಲಿ ವಿವಿಧ ರೂಪಭೇದಗಳಿಂದ ನೆಲೆಸಿವೆ. ಭೂಮಿ, ಆಕಾಶ ಮುಂತಾದ ಬಾಹ್ಯ ಲೋಕಗಳಲ್ಲಿ ಅಗ್ನಿ, ಸೂರ್ಯ ಮುಂತಾದ ತೇಜಸ್ಸುಗಳಲ್ಲಿ, ಗುರುಶಿಷ್ಯರ ಪ್ರವಚನ, ದೇಹದಲ್ಲಿ ಮುಖದೊಳಗೆ ನಡೆಯುವ ವಚನ, ಮಾತಾಪಿತೃಗಳಿಂದ ಮಗುವಿನ ಪ್ರಜನನ ಮುಂತಾದ ಎಲ್ಲಾ ವ್ಯಾಪಾರಗಳಲ್ಲಿ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ಈ ಪಂಚರೂಪಗಳು ನೆಲೆಸುವ ಅಧಿಷ್ಠಾನಗಳನ್ನು ಅನುಸಂಧಾನ ಮತ್ತು ಉಪಾಸನೆಗಾಗಿ ನಾವು ತಿಳಿಯಬೇಕು. ಪೂರ್ವಾಪರ ವರ್ಣಗಳು ಅವುಗಳ ಸಂಧಿ ಮತ್ತು ಸಂಧಾನಗಳಲ್ಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ನಾಲ್ಕು ರೂಪಗಳನ್ನು ಚಿಂತಿಸಬೇಕು, ಭೂಃ, ಭುವಃ, ಸ್ವಃ, ಮಹಃ ಎನ್ನುವ ನಾಲ್ಕು ವ್ಯಾಹೃತಿಗಳು ಕ್ರಮವಾಗಿ ಪರಮಾತ್ಮನ ಪ್ರಜ್ಞೆ, ಕಾರ್ಯನಿರ್ವಹಣಶಕ್ತಿ, ಬಲ, ಪೂರ್ಣತೆಗಳೆಂಬ ನಾಲ್ಕು ಮಹಾಗುಣಗಳನ್ನು ಬೋಧಿಸುತ್ತವೆ. ಈ ನಾಲ್ಕು ಪದಗಳೂ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವರನ್ನೇ ಪ್ರತಿಪಾದಿಸುತ್ತವೆ. ಈ ವ್ಯಾಹೃತಿ ಪ್ರತಿಪಾದ್ಯಗಳಾದ ನಾಲ್ಕು ರೂಪಗಳು ದೇಹದ ಹೊರಗೆ ಭೂಮಿ ಮುಂತಾದ ಲೋಕಗಳಲ್ಲೂ ಸೂರ್ಯ, ಚಂದ್ರ ಮುಂತಾದ ಜ್ಯೋತಿಗಳಲ್ಲೂ ದೇಹದ ಒಳಗೆ ವಿಭಿನ್ನ ಸ್ಥಾನಗಳಲ್ಲೂ ನಿಂತು ಭೌತಿಕ, ದೈಹಿಕ ವ್ಯಾಪಾರಗಳನ್ನು ನಡೆಸುತ್ತವೆ. ಬಾಹ್ಯವಾದ ಭೌತಿಕ ವಸ್ತುಗಳನ್ನೂ ಶರೀರದೊಳಗಿನ ವಸ್ತುಗಳನ್ನೂ ಐದು ಐದು ವರ್ಗಗಳಾಗಿ ವಿಂಗಡಿಸಲಾಗಿದೆ. ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧಗಳೆಂಬ ಐದು ರೂಪಗಳು ನೆಲೆಸಿರುವುದ ರಿಂದಲೇ ಈ ಎಲ್ಲಾ ವರ್ಗಗಳಿಂದ ತಮ್ಮ ತಮ್ಮ ವ್ಯಾಪಾರವು ನಡೆಯುತ್ತದೆ

ಬ್ರಹ್ಮವಿದ್ಯೆಯನ್ನು ಪಡೆಯಬಯಸುವ ಸಾಧಕನು ಕೆಲವು ನಿಯಮಗಳನ್ನು ಅವಶ್ಯವಾಗಿ ಪಾಲಿಸಬೇಕು. ತಿಳುವಳಿಕೆ, ಮಾತು, ಕೃತಿಗಳಲ್ಲಿ ಏಕರೂಪತೆಯಿರಬೇಕು. ಒಳಗಿರುವುದೊಂದು ಹೇಳುವುದು ಇನ್ನೊಂದು, ಮಾಡುವುದು ಮತ್ತೊಂದು ಎನ್ನುವ ಅಪ್ರಾಮಾಣಿಕತನವಿರಬಾರದು. ''ಸತ್ಯ, ಇಂದ್ರಿಯ ನಿಗ್ರಹ, ಸರಿಯಾದ ತಿಳುವಳಿಕೆ, ಅತಿಥಿ ಸತ್ಕಾರ, ನಿತ್ಯಾನುಷ್ಠಾನ, ಧ್ಯಾನ, ಪೂಜ್ಯರಲ್ಲಿ ಗೌರವ, ಮುಂತಾದ ಉತ್ತಮ ನಡವಳಿಕೆಗಳನ್ನು ಅಳವಡಿಸಿಕೊಳ್ಳಬೇಕು. ಮಾನವೀಯ ಕರ್ತವ್ಯಗಳನ್ನು ಅಲಕ್ಷಿಸಬಾರದು. ದೇವತೆಗಳೂ ಭೂಮಿಯಲ್ಲಿ ಅವತರಿಸಿದಾಗ ಮಾನವೋಚಿತ ಕರ್ತವ್ಯಗಳನ್ನು ತಪ್ಪದೆ ನಡೆಸುತ್ತಾರೆ. ಈ ಎಲ್ಲ ನಿಯಮಗಳ ಜೊತೆಗೆ ಸ್ವಾಧ್ಯಾಯ ಪ್ರವಚನಗಳು ಜಿಜ್ಞಾಸುವು ಮಾಡಬೇಕಾದ ಮುಖ್ಯವಾದ ಕರ್ತವ್ಯವಾಗಿದೆ. ವೇದವಿದ್ಯೆಯ ಅಧ್ಯಯನದಲ್ಲಿ ಪ್ರಣವಕ್ಕೆ ವಿಶೇಷವಾದ ಮಹತ್ವವಿದೆ. ಓಂಕಾರದಿಂದ ಗುಣಪೂರ್ಣನಾದ ಬ್ರಹ್ಮನನ್ನು ಸ್ಮರಿಸುವುದೊಂದೇ ಅಲ್ಲದೆ ಯಜ್ಞ, ಹೋಮ, ಪ್ರವಚನಾದಿಗಳನ್ನೂ ನಾವು ಮಾಡಬೇಕು.

ವಿದ್ಯೆಗಾಗಿ ಪ್ರಾರ್ಥನೆ

ಅಧ್ಯಯನ ಮಾಡುವಾಗ ವಿದ್ಯಾರ್ಥಿಗಳು ತಮ್ಮ ಪ್ರಯತ್ನದ ಜೊತಗೆ ಉತ್ತಮ ಜ್ಞಾನಕ್ಕಾಗಿ

ಭಗವಂತನ ಪ್ರಾರ್ಥನೆಯನ್ನು ಮಾಡಬೇಕು. ''ಅಮೃತವಾದ ದೇಹದಿಂದ ಪ್ರಕಟವಾಗುವ ಭಗವಂತನಿಂದ ನನಗೆ ಮೇಧಾಬಲವುಂಟಾಗಲಿ. ಹೃದಯ ಪಾತ್ರೆಯಲ್ಲಿ ವೇದದ ದಿವ್ಯಜ್ಞಾನಮೃತವನ್ನು ನಾನು ನಿರಂತರವೂ ಧರಿಸುವಂತಾಗಲಿ. ಉತ್ತಮ ಶಿಷ್ಯಸಂಪತ್ತಿಯು ನನಗೆ ದೊರೆಯಲಿ. ನನ್ನ ನಾಲಿಗೆಯಿಂದ ಭಗವಂತನ ಮಧುರ ಗುಣಗಾನವು ಹೊರಹೊಮ್ಮಲಿ. ನನ್ನ ಶ್ರೋತ್ರ ಪುಟಗಳಿಂದ ಭಗವಂತನ ಮಹಿಮೆಯನ್ನು ಕೇಳುವಂತಾಗಲಿ. ಅನಂತರ ಜ್ಞಾನನಿಧಿಯಾದ ಅವನು ನನ್ನ ಜ್ಞಾನ ಸಂಚಯವನ್ನು ರಕ್ಷಿಸಲಿ. ಆರ್ಥಿಕ ಸಂಕಟದಿಂದ ಮನಸ್ಸು ಗಲಿಬಿಲಿಗೊಂಡು ನನ್ನ ಜ್ಞಾನಾರ್ಜನೆಗೆ ಅಡಚಣೆಯಾಗದಿರಲಿ. ಅನ್ನ, ಬಟ್ಟೆ, ಹಾಲು ಮುಂತಾದ ಜೀವನಾವಶ್ಯಕ ವಸ್ತುಗಳ ಸಮೃದ್ಧಿಯನ್ನು ತರಬಲ್ಲ ಲಕ್ಷ್ಮೀದೇವಿಯೂ ಭಗವಂತನ ಜೊತೆಗೆ ನನ್ನಲ್ಲಿ ನೆಲೆಸಲಿ.

ಇಂತಹ ಆಧ್ಯಾತ್ಮಿಕ ಮತ್ತು ಭೌತಿಕ ಸಮೃದ್ಧಿಯನ್ನು ಪಡೆದ ನನ್ನಿಂದ ನಿರಂತರವಾಗಿ ಜ್ಞಾನಪ್ರಸಾರ ಕಾರ್ಯವು ನಡೆಯಲಿ. ಶಮ, ದಮಾದಿ ಸಂಪನ್ನರಾದ ಒಳ್ಳೆ ವಿದ್ಯಾರ್ಥಿಗಳು ಎಲ್ಲೆಡೆಗಳಿಂದಲೂ ನನ್ನಲ್ಲಿಗೆ ಬರಲಿ. ಅವರಿಗೆ ಯಾವುದೇ ಅಸೌಕರ್ಯವಾಗದಂತೆ ಶಾಂತಿ, ಪ್ರಸನ್ನತೆಯಿಂದ ಪ್ರವಚನ ಕಾರ್ಯ ನಡೆಯುತ್ತಿರಲಿ. ಪರಮಾತ್ಮನು ನನ್ನಲ್ಲಿ ವಿಶೇಷವಾಗಿ ಸನ್ನಿಹಿತನಾಗಬೇಕು. ನಾನು ಅವನಲ್ಲಿ ಪೂರ್ತಿಯಾಗಿ ಮಗ್ನನಾಗಬೇಕು. ಇದೇ ನನ್ನ ಬೇಡಿಕೆ''.

ನಮ್ಮ ಶಾಸ್ತ್ರವು ಆಧ್ಯಾತ್ಮಿಕ ಉನ್ನತಿಯ ಜೊತೆಗೆ ಭೌತಿಕ ಸಮೃದ್ಧಿಗೂ ಸ್ಥಾನವನ್ನು ನೀಡಿ ಜೀವನದಲ್ಲಿ ಶಾಂತಿ, ಸಮೃದ್ಧಿಯನ್ನು ಬಯಸಿದೆ. ಆದರೆ ಈ ಸುಖ, ಶಾಂತಿಗಳು ಅಂತಿಮವಾಗಿ ಭಗವಂತನ ಜ್ಞಾನದ ಕಡೆಗೆ ನಮ್ಮನ್ನು ಒಯ್ಯುವಂತಿರಬೇಕು. ಪ್ರಾಪಂಚಿಕ ಸುಖವೇ ನಮ್ಮ ಜೀವನದ ಲಕ್ಷ್ಯವಾಗಿರಬಾರದು.

ಸತ್ಯ, ತಪಸ್ಸು, ಅಧ್ಯಯನ ಈ ಮೂರೂ ಶ್ರೇಯಸ್ಸಾಧನಗಳು. ಉತ್ತಮ ನಡತೆ, ಧರ್ಮಾನುಷ್ಠಾನ, ಜ್ಞಾನಸಾಧನೆ ಈ ಮೂರರ ಸಮ್ಮಿಲನದಿಂದ ನಮ್ಮ ದೇಹ, ಬುದ್ಧಿ, ಹೃದಯಗಳು ಪರಿಶುದ್ಧವಾಗಿ ನಮ್ಮ ಸಾಧನೆಗೆ ಪೂರ್ಣತೆಯುಂಟಾಗುವುದು. ಭಗವತ್ ಜ್ಞಾನವೇ ನಮ್ಮ ಜೀವನದ ಅಂತಿಮ ಗುರಿಯಾಗಿರುವುದರಿಂದ ಎಲ್ಲಾ ಸಾಧನೆಗಳಿಗಿಂತ ಅಧ್ಯಯನ, ಪ್ರವಚನಗಳಂತಹ ಜ್ಞಾನಸಾಧನೆಗೆ ವಿಶೇಷ ಪ್ರಾಧಾನ್ಯ ನೀಡಲಾಗಿದೆ.

ಅಧ್ಯಯನ ಪ್ರವಚನಗಳೇ ತಪಸ್ಸು ಎಂದು ಈ ಉಪನಿಷತ್ತು ಒತ್ತಿ ಹೇಳಿದೆ. ''ಬ್ರಹ್ಮಜ್ಞಾನವು ಸಂಸಾರವೆಂಬ ಹೆಮ್ಮರವನ್ನು ಕಡಿಯಬಲ್ಲ ಕೊಡಲಿಯಾಗಿದೆ. ಜ್ಞಾನದಿಂದಲೇ ನಮ್ಮ ಕೀರ್ತಿಯು ಚಿರಸ್ಥಾಯಿಯಾಗಿರುವುದು. ಸರ್ವೋತ್ತಮನಾದ ಭಗವಂತನ ಜ್ಞಾನವೇ ಅಮೃತಸಿಂಚನ. ಇದರಿಂದ ಜೀವನು ಪುನೀತನಾಗುವನು. ಬೆಂಕಿಯ ಸಂಪರ್ಕದಿಂದ ಚಿನ್ನವು ಪ್ರಕಾಶಮಾನವಾಗುವಂತೆ ಭಗವಂತ ಜ್ಞಾನದಿಂದ ಜೀವನೂ ದೇದೀಪ್ಯಮಾನನಾಗುವನು'' ಎಂದು ತ್ರಿಶಂಕುವು ಜ್ಞಾನದ ಮಹಿಮೆಯನ್ನು ಹೊಗಳಿರುವುದರಿಂದ ಅಧ್ಯಯನ ಪ್ರವಚನಾದಿ ಜ್ಞಾನ ಕಾರ್ಯವು ವಿಶೇಷ ಶ್ರೇಯಃಸಾಧನವಾಗಿದೆ.

ಗುರುಗಳು ಮಾಡಬೇಕಾದ ಉಪದೇಶ

ಅಧ್ಯಯನವನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಉಪನಿಷತ್ತು ನೀಡುವ ಸಂದೇಶವು ಬಹಳ ಸೊಗಸಾಗಿದೆ. ''ಕಲಿತ ವಿದ್ಯೆಯನ್ನು ಮರೆಯಬಾರದು. ಸ್ವಾಧ್ಯಾಯ ಪ್ರವಚನಗಳನ್ನು ಬಿಡಬಾರದು. ಸತ್ಯ ಧರ್ಮನಿರತನಾಗಿರಬೇಕು. ಸತ್ಯ ಧರ್ಮಗಳಿಗೆ ವಿರೋಧವಾಗದಂತೆ ಭೌತಿಕ ಸಂಪತ್ತಿಯನ್ನು ಪಡೆದು ಕುಶಲಿಯಾಗಿರಬೇಕು. ಮಾತಾ, ಪಿತೃ, ಗುರು, ಅತಿಥಿಗಳನ್ನು ಗೌರವಿಸಬೇಕು. ಭಾವೀಪೀಳಿಗೆಯೂ ಉತ್ತಮವಾಗಿರುವಂತೆ ನೋಡಿಕೊಳ್ಳಬೇಕು. ಶ್ರದ್ಧೆಯಿಂದ ದಾನಾದಿ ಸತ್ಕಾರ್ಯಗಳನ್ನು ಮಾಡಬೇಕು.

ಶ್ರದ್ಧೆಯು ಕಡಿಮೆಯಿದೆಯೆಂಬ ನೆಪದಿಂದ ಸತ್ಕಾರ್ಯಗಳನ್ನು ತೊರೆಯಬಾರದು. ಧರ್ಮ ಸಂದೇಹವುಂಟಾದಾಗ ರಾಗದ್ವೇಷರಹಿತರಾದ ಸಜ್ಜನರ ವರ್ತನೆಯನ್ನು ನೋಡಿ ಕರ್ತವ್ಯವನ್ನು ತಿಳಿದುಕೊಳ್ಳಬೇಕು'' ಇಂತಹ ಹೃದಯ ಸ್ಪರ್ಶಿಯಾದ ಉಪದೇಶವನ್ನು ಉಪನಿಷತ್ತು ನೀಡಿದೆ.

ಪರಬ್ರಹ್ಮನು ಸತ್ಯನೂ ಜ್ಞಾನಿಯೂ ಅನಂತನೂ ಆಗಿರುವನು. ಎಲ್ಲಾ ವಸ್ತುಗಳ ಅಸ್ತಿತ್ವ ಮತ್ತು ಪ್ರವೃತ್ತಿಗೆ ಕಾರಣನಾಗಿರುವುದರಿಂದ ಅವನು ಸತ್ಯನಾಗಿದ್ದಾನೆ. ಎಲ್ಲ ವಿಷಯಗಳನ್ನು ತಿಳಿದ ಪೂರ್ಣಜ್ಞಾನರೂಪನಾದುದರಿಂದ ಅವನು ಜ್ಞಾನನೆನಿಸಿದ್ದಾನೆ. ಎಲ್ಲ ದೇಶಗಳಲ್ಲೂ ವ್ಯಾಪ್ತನಾಗಿ ಸರ್ವಕಾಲಗಳಲ್ಲೂ ಇದ್ದು ಅನಂತ ಗುಣಪೂರ್ಣನಾಗಿರುವುದರಿಂದ ಅವನು ಅನಂತನೂ ಆಗಿರುವನು. ಆರಂಭದಲ್ಲಿ ಭಗವಂತನಿಂದ ಕ್ರಮವಾಗಿ ಪಂಚಭೂತಗಳಲ್ಲಿ ಸೇರಿದ ಆಕಾಶ, ವಾಯು, ಅಗ್ನಿ , ಜಲ, ಪ್ರಥ್ವೀ, ಔಷಧಿ, ಅನ್ನ , ಶರೀರಗಳ ಸೃಷ್ಟಿಯಾಗಿದೆ. ಇವುಗಳ ಸೃಷ್ಟಿಯೊಂದಿಗೆ ತಮ್ಮ ತಮ್ಮ ದೇಹ ಗಳೊಂದಿಗೆ ಅಭಿಮಾನಿ ದೇವತೆಗಳ ಸೃಷ್ಟಿಯೂ ಆಗುವುದು. ಅವುಗಳ ಜೊತೆಗೆ ಅಂತರ್ಯಾಮಿಯಾಗಿ ಪರಮಾತ್ಮನ ರೂಪಗಳೂ ಪ್ರಾದುರ್ಭಾವಗೊಳ್ಳುವುವು. ಶರೀರದಲ್ಲಿ ಅದೇ ಆಕಾರದಲ್ಲಿ ಚಿನ್ಮಯ ಮೂರ್ತಿಯಾಗಿ, ಅನ್ನಮಯರೂಪಿಯಾಗಿ ಭಗವಂತನು ಇರುವನು. ಅನ್ನಮಯದೊಳಗೆ ಪ್ರಾಣಮಯ ನಾಗಿ ಅದರೊಳಗೆ ಮನೋಮಯನಾಗಿ, ಅದರ ಒಳಗೆ ವಿಜ್ಞಾನಮಯನೂ, ಅದರೊಳಗೆ ಆನಂದ ಮಯನೂ ಆಗಿ ಐದು ರೂಪಗಳಿಂದ ಈ ಶರೀರದ ಆಕಾರದಿಂದಲೇ ಭಗವಂತನು ನೆಲೆಸಿದ್ದಾನೆ. ಅನ್ನವನ್ನು ಉಪಜೀವಿಸಿಕೊಂಡು ನಾವು ಬದುಕುವಂತೆ ಭಗವಂತನನ್ನು ಅವಲಂಬಿಸಿಕೊಂಡಿರುವುದರಿಂದ ಅವನು ಅನ್ನಮಯನಾಗಿದ್ದಾನೆ. ಸರ್ವಸಂಹಾರಕನಾಗಿ ಎಲ್ಲವನ್ನು ಆಪೋಶನ ಮಾಡುವುದರಿಂದಲೂ ಅವನು ಅನ್ನಮಯನು. ಜಗಚ್ಚೇಷ್ಟಕನಾಗಿರುವುದರಿಂದ ಪ್ರಾಣಮಯನೂ, ಜ್ಞಾನ ವಿಜ್ಞಾನ ರೂಪಿಯಾದದರಿಂದ ಮನೋಮಯನೂ, ವಿಜ್ಞಾನಮಯನೂ, ಪರಿಪೂರ್ಣಾನಂದನಾಗಿರುವುದರಿಂದ ಆನಂದಮಯನೂ ಆಗಿದ್ದಾನೆ. ಕೆಲವರು ಈ ಐದು ರೂಪಗಳೂ ಬ್ರಹ್ಮನಲ್ಲವೆಂದು ಹೇಳಿದರೆ ಕೊನೆಯ ಆನಂದಮಯನು ಮಾತ್ರ ಬ್ರಹ್ಮನೆಂದು ಮತ್ತೆ ಕೆಲವರು ಹೇಳುವರು. ಉಪನಿಷತ್ತಿನಲ್ಲಿ ರೂಪಗಳನ್ನೂ ಬ್ರಹ್ಮನೆಂದು ಹೇಳಿದೆ. ಬ್ರಹ್ಮನಲ್ಲಿ ಮಾತ್ರ ಇರಬಹುದಾದ ಮಹಿಮೆಯನ್ನು ಐದು ರೂಪಗಳಿಗೂ ವರ್ಣಿಸಿದೆ. ಆದುದರಿಂದ ಈ ಐದು ರೂಪಗಳೂ ಬ್ರಹ್ಮನಿಂದ ಬೇರೆಯಲ್ಲ. ಒಬ್ಬನೇ ಬ್ರಹ್ಮನನ್ನು ಬೇರೆ ಬೇರೆಯಾಗಿ ಐದು ರೂಪಗಳೆಂದು ವರ್ಣಿಸುವುದು ಹೇಗೆ ? ಎನ್ನುವ ಪ್ರಶ್ನೆಯುಂಟಾಗಬಹುದು. ಸಕ್ಕರೆ ಮತ್ತು ಅದರ ಸಿಹಿ ಬೇರೆಯಲ್ಲದಿದ್ದರೂ ವಿಭಿನ್ನ ಶಬ್ದಗಳಿಂದ ವ್ಯವಹರಿಸುವಂತೆ ಭಗವಂತನೂ ತನ್ನ ವಿಶೇಷ ಶಕ್ತಿಯಿಂದ ಒಬ್ಬನೇ ಅನೇಕ ರೂಪಗಳನ್ನು ಧರಿಸಬಲ್ಲನು. ಶರೀರ ಮುಂತಾದ ಉಪಾಧಿಗಳಿಂದ ಕೂಡಿದ ಜೀವನನ್ನೇ ಅನ್ನಮಯ ಮುಂತಾದ ಶಬ್ದಗಳು ತಿಳಿಸುತ್ತವೆ. ಜೀವನೇ ಕೊನೆಗೆ ಬ್ರಹ್ಮನಾಗು ವುದರಿಂದ ಅವನಲ್ಲಿ ಬ್ರಹ್ಮಶಬ್ದವನ್ನು ಬಳಸಲಾಗಿದೆಯೆಂದು ಕೆಲವರು ವಾದಿಸುತ್ತಾರೆ. ಆದರೆ ಇದೇ ಉಪನಿಷತ್ತಿನಲ್ಲಿ 'ಸಹ ಬ್ರಹ್ಮಣಾ ವಿಪಶ್ಚಿತಾ' ಎಂಬುದಾಗಿ ಅವಿದ್ಯೆಯ ಕಲ್ಪನೆಗೆ ಅವಕಾಶವಿಲ್ಲದ ಮುಕ್ತಿಯಲ್ಲಿ ಜೀವಬ್ರಹ್ಮರೂ ಬೇರೆ ಬೇರೆಯಾಗಿರುತ್ತಾರೆಂದು ಉಲ್ಲೇಖವಿದೆ. ಈ ಶರೀರವನ್ನು ತ್ಯಜಿಸಿದ ನಂತರ ಈ ಜೀವನು ಅನ್ನಮಯ ಮುಂತಾದ ರೂಪಗಳ ಬಳಿಗೆ ಸಾಗುವನು ಎಂದೂ ವರ್ಣಿಸಲಾಗಿದೆ. ಆದುದರಿಂದ ಅನ್ನಮಯ ಮುಂತಾದವುಗಳು ಜೀವನೂ ಅಲ್ಲ. ಶರೀರ ಮುಂತಾದ ಕೋಶಗಳೂ ಅಲ್ಲ. ಸಾಕ್ಷಾತ್ ಭಗವಂತನ ರೂಪಗಳೇ ಆಗಿವೆ. ಜಗತ್ತನ್ನು ಸೃಜಿಸಿ ಅವುಗಳನ್ನು ನಿಯಮಿಸಲು ಪ್ರತಿ ಶರೀರದಲ್ಲೂ ಈ ಅನೇಕ ರೂಪಗಳನ್ನು ಪರಮಾತ್ಮನು ಧರಿಸುತ್ತಾನೆ.

ಅನ್ನಮಯ ಮುಂತಾದ ರೂಪಗಳು ಬ್ರಹ್ಮನಲ್ಲ. ಆದರೂ ಈ ರೂಪಗಳನ್ನು ಬ್ರಹ್ಮನೆಂದು ಉಪಾಸನೆ ಮಾಡುವುದಕ್ಕಾಗಿಯೇ ಉಪನಿಷತ್ತಿನಲ್ಲಿ ಬ್ರಹ್ಮನೆಂದು ಇವುಗಳನ್ನು ಕರೆದಿದೆಯೆಂದು ಕೆಲವರ

ಪ್ರತಿಪಾದನೆಯಾಗಿದೆ. ಬ್ರಹ್ಮನಲ್ಲದ ವಸ್ತುವನ್ನು ಬ್ರಹ್ಮನೆಂದು ಉಪಾಸಿಸುವುದು ಅಸತ್ಯೋಪಾಸನೆ ಯಾಗುವುದಿಲ್ಲವೇ ? ನಮ್ಮಲ್ಲಿ ಅಸತ್ಯ ಸಂಸಾರವನ್ನು ಬಲಪಡಿಸುವ ಅಸತ್ಯೋಪಾಸನೆಯು ಸತ್ಯ ಸಾಕ್ಷಾತ್ಕಾರಕ್ಕೆ ಸಹಾಯಕವಾಗಲಾರದು. ಭಾಗವತವು ಇಂತಹ ಉಪಾಸನೆಯನ್ನು ನಿಷೇಧಿಸಿದೆ. ಸತ್ಯವನ್ನು ಸಾರುವ ಉಪನಿಷತ್ತು ಈ ಪಂಚರೂಪಗಳನ್ನು ಬ್ರಹ್ಮನೆಂದು ಸ್ಪಷ್ಟವಾಗಿ ಹೇಳಿರುವುದರಿಂದ ಇವು ಪರಬ್ರಹ್ಮನ ರೂಪಗಳೇ ಆಗಿವೆ.

ಮುಕ್ತಿಯಲ್ಲೂ ಜೀವಾತ್ಮರು ಒಂದೇ ವಿಧವಾದ ಆನಂದವನ್ನು ಅನುಭವಿಸುವುದಿಲ್ಲ. ತಮ್ಮ ತಮ್ಮ ಸಾಧನೆ, ವ್ಯಕ್ತಿತ್ವಕ್ಕೆ ಅನುಗುಣವಾಗಿ ಅವರು ಅನುಭವಿಸುವ ಸ್ವರೂಪಾನಂದದಲ್ಲೂ ಅಂತರವಿದೆ. ಕಾಮಾದಿ ಉಪದ್ರವ ರಹಿತರಾಗಿ ''ಅಕಾಮಹತ'' ರೆನಿಸಿದ ಮುಕ್ತರಾದ ಸಾಮಾನ್ಯ ಜೀವರಿಂದ ಬ್ರಹ್ಮದೇವರವರೆಗೂ ಮುಕ್ತದೇವತೆಗಳ ಆನಂದ ತಾರತಮ್ಯವನ್ನು ವಿಸ್ತಾರವಾಗಿ ಇಲ್ಲಿ ವಿವರಿಸಲಾಗಿದೆ. ಆನಂದದಲ್ಲಿ ಅಂತರವಿದ್ದರೂ ಎಲ್ಲರೂ ತಮ್ಮ ಸ್ವಾಭಾವಿಕ ಆನಂದದಿಂದ ಪೂರ್ಣರಾಗಿರುವುದರಿಂದ ಯಾರಿಗೂ ಅತೃಪ್ತಿಯಿಲ್ಲ. ಮುಕ್ತಿಯಲ್ಲಿ ಚೇತನರಲ್ಲಿಯೇ ಪರಸ್ಪರ ಭಿನ್ನತೆ ಮತ್ತು ಅಂತರವಿರುವಾಗ ಜೀವಪರಮಾತ್ಮರಿಗೆ ಮುಕ್ತಿಯಲ್ಲಿ ಅಭೇದವಿದೆಯೆಂಬುದನ್ನು ಕಲ್ಪಿಸಲೂ ಸಾಧ್ಯವಿಲ್ಲ.

ಇಷ್ಟರವರೆಗೆ ಪರಬ್ರಹ್ಮವೆಂದು ನಿರೂಪಿತವಾದ ಐದುರೂಪಗಳನ್ನು ಭೃಗು ಋಷಿಗಳು ತಂದೆಯಾದ ವರುಣನ ಉಪದೇಶದಿಂದ ತಿಳಿದು ಉಪಾಸನೆಮಾಡಿ ಸಾಕ್ಷಾತ್ಕಾರವನ್ನು ಪಡೆದ ಸಂಗತಿಯನ್ನು ಉಪಾಖ್ಯಾನ ರೂಪದಲ್ಲಿ ಮುಂದಿನ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಹಿಂದಿನ ಅಧ್ಯಾಯದಲ್ಲಿ ಹೇಳಿದ ಅನ್ನಮಯ ಮುಂತಾದ ರೂಪಗಳೂ ಈ ಅಧ್ಯಾಯದಲ್ಲಿ ಹೇಳಿದ ಅನ್ನ ಮುಂತಾದ ರೂಪಗಳೂ ಬೇರೆಯಲ್ಲ. ಇವುಗಳ ಉಪಾಸನೆಯಿಂದ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ರೂಪಗಳನ್ನು ತಲುಪಿ ಆನಂದ ಪೂರ್ಣವಾಗಿ ವಿಹರಿಸುತ್ತಾನೆಂದು ಈ ಅಧ್ಯಾಯದ ಕೊನೆಯಲ್ಲಿ ಹೇಳಿದೆ. ಬೇರೆ ಯಾವುದೋ ವಸ್ತುವಿನ ಉಪಾಸನೆಯಿಂದ ಅನ್ನಮಯ ಮುಂತಾದವರನ್ನು ಹೊಂದಲು ಸಾಧ್ಯವಿದೆಯೇ? ಆದುದರಿಂದ ಈ ಅಧ್ಯಾಯದಲ್ಲಿ ಹೇಳಿದ ಅನ್ನ ಮುಂತಾದ ರೂಪಗಳು ಅನ್ನಮಯ ಮುಂತಾದ ಭಗವದ್ರೂಪಗಳಿಂದ ಬೇರೆಯಲ್ಲವೆಂದು ಸ್ಪಷ್ಟವಾಗುವುದು. ತಪಸ್ಸು ಮಾಡಿ ಇವುಗಳನ್ನು ಬ್ರಹ್ಮನೆಂದು ಭೃಗುವು ಸಾಕ್ಷಾತ್ಕರಿಸಿದನೆಂದು ಹೇಳಿರುವುದರಿಂದ ಇದು ಕಲ್ಪನೆಯೂ ಅಲ್ಲವೆಂದು ಸಿದ್ಧವಾಗುವುದು. ಈ ಎರಡೂ ಅಧ್ಯಾಯಗಳನ್ನು ಜೊತೆಯಾಗಿ ಪರಾಮರ್ಶಿಸಿ ನೋಡಿದಾಗ ನಮ್ಮ ಶರೀರದೊಳಗೆ ಜೀವನಿಗೆ ನಿಯಾಮಕನಾಗಿರುವ ಅವನಿಂದ ಬೇರೆಯಾದ ಭಗವಂತನ ರೂಪಗಳನ್ನೇ ಇಲ್ಲಿ ನಿರೂಪಿಸಲಾಗಿದೆಯೆಂದು ನಮಗೆ ಮನವರಿಕೆಯಾಗುವುದು.

೩-೮ ಐತರೇಯೋಪನಿಷತ್

ಇತರಾ ಪುತ್ರನಾಗಿ ಮಹಿದಾಸನೆಂಬ ಹೆಸರಿನಿಂದ ಅವತರಿಸಿದ ಭಗವಂತನು ಲಕ್ಷ್ಮೀದೇವಿಗೆ ನೀಡಿದ ಉಪದೇಶವೇ ಈ ಉಪನಿಷತ್ತು. ಅನಂತರ ಬ್ರಹ್ಮದೇವರು ಜ್ಞಾನಿಗಳಿಗೆ ಇದನ್ನು ಉಪದೇಶಿಸಿ ದರು. ಜಗತ್ಪಿತನೂ ಜಗತ್ಪತಿಯೂ ಆದ ಶ್ರೀಹರಿ, ಜಗನ್ಮಾತೆಯಾದ ಶ್ರೀದೇವಿ, ಜಗದ್ಗುರುವಾದ ಬ್ರಹ್ಮದೇವರು ಈ ಮೂವರಿಗೂ ಸಂಬಂಧಿಸಿದ ಮಹೋಪದೇಶವಿದು. ಜೀವನದಲ್ಲಿ ಭಗವಂತನನ್ನು ನಾವು ಪರಿತ್ಯಜಿಸಬಾರದು. ಅವನನ್ನು ಮರೆಯಬಾರದು. ಲಕ್ಷ್ಮೀದೇವಿಯು ಅನಾದಿ ಕಾಲದ ಅವನ ಸ್ಮರಣೆಯಿಂದಲೇ ನಿತ್ಯಮುಕ್ತಳಾಗಿದ್ದಾಳೆ. ಬ್ರಹ್ಮಾದಿ ದೇವತೆಗಳೂ ಅವನ ಸ್ಮರಣೆ, ಧ್ಯಾನದಿಂದಲೇ ಸಂಸಾರ ದಿಂದ ಬಿಡುಗಡೆ ಪಡೆದಿದ್ದಾರೆ. ಪಿಶಾಚಿಗಳು, ರಾಕ್ಷಸರು, ಅಸುರರು ಭಗವಂತನನ್ನು ಪರಿತ್ಯಜಿಸಿದ್ದರಿಂದಲೇ

ಮಹಾ ಅನರ್ಥಕ್ಕೆ ಭಾಗಿಯಾಗಿದ್ದಾರೆ. ಮನುಷ್ಯ ಜೀವರು ಅಗ್ನಿಯಲ್ಲಿ, ಋಷಿಗಳು ಸೂರ್ಯನಲ್ಲಿ, ದೇವತೆಗಳು ವಾಯುದೇವರಲ್ಲಿ ನೆಲೆಸಿರುವ ಪರಮಾತ್ಮನನ್ನು ಆಶ್ರಯಿಸಿಕೊಂಡಿದ್ದಾರೆ. ಅಗ್ನಿಯು ಕರ್ಮದ ಪ್ರತೀಕ. ಕೆಳಮಟ್ಟದ ಅಧಿಕಾರಿಗಳಾದ ಮನುಷ್ಯರು ಸತ್ಕರ್ಮಾಚರಣೆಯಿಂದ ಅಗ್ನ್ಯಂತರ್ಗತನಾದ ಪರಮಾತ್ಮನನ್ನು ಆರಾಧಿಸುತ್ತಾರೆ. ಸೂರ್ಯನು ಜ್ಞಾನದ ಪ್ರತೀಕ. ಋಷಿಗಳು ವಿಶೇಷವಾದ ಜ್ಞಾನಕಾರ್ಯಗಳಿಂದ ಸೂರ್ಯಾಂತರ್ಗತನಾದ ಭಗವಂತನನ್ನು ಸೇವಿಸುತ್ತಾರೆ. ಸಂಸಾರದಲ್ಲಿ ಮಲಿನ ರಾದ ನಮ್ಮನ್ನು ಪಾವನಗೊಳಿಸಿ ಮುಕ್ತಿಯ ಆನಂದದಲ್ಲಿ ಮಜ್ಜನಗೊಳಿಸುವ ಪವಮಾನರೂಪಿಯಾದ ಭಗವಂತನು ನಮಗೆ ಮುಕ್ತಿಯ ಮಾರ್ಗದರ್ಶನ ನೀಡುವ ವಾಯುದೇವರಲ್ಲಿ ಇದ್ದಾನೆ. ದೇವತೆಗಳು ಇಲ್ಲಿ ಭಗವಂತನನ್ನು ವಿಶೇಷವಾಗಿ ಪೂಜಿಸುತ್ತಾರೆ. ಹೀಗೆ ಕರ್ಮ, ಜ್ಞಾನ ಮತ್ತು ಮೋಕ್ಷದೇವತೆಗಳಾದ ಅಗ್ನಿ, ಸೂರ್ಯ, ವಾಯುಗಳಲ್ಲಿ ಮಾನವರೂ ಋಷಿಗಳೂ ದೇವತೆಗಳೂ ಪರಮಾತ್ಮನನ್ನು ಆರಾಧಿಸುತ್ತಾರೆ.

ಭಗವಂತನು ಜಗತ್ತಿನ ಉತ್ಥಾಪಕ. ಜಗತ್ತಿನಲ್ಲಿ ಶಕ್ತಿ ತುಂಬಿ ಕಾರ್ಯ ಪ್ರವರ್ತಕನಾಗಿದ್ದಾನೆ. ಆದುದರಿಂದ ಅವನನ್ನು ಉಕ್ಥ ಎಂದು ಕರೆಯುತ್ತಾರೆ. ಅವರು ಪೃಥ್ವಿಯಲ್ಲಿ ನೆಲೆಸಿ ಅಲ್ಲಿ ಸಸಿ ಗಿಡಗಳು ಹುಟ್ಟಲು ಕಾರಣನಾದರೆ ಅವನು ಆಕಾಶದಲ್ಲಿ ಇದ್ದುದರಿಂದ ಅಲ್ಲಿ ಹಕ್ಕಿಗಳು ಹಾರಾಡುತ್ತವೆ. ದ್ಯುಲೋಕದಲ್ಲಿ ಇರುವ ಭಗವಂತನಿಂದಲೇ ಮಳೆಯಾಗುತ್ತದೆ. ಅವನು ಶರೀರದೊಳಗೂ ಮುಖ, ಮೂಗು, ಹಣೆಗಳಲ್ಲೂ ಇದ್ದು ಪ್ರವರ್ತಕನಾಗಿದ್ದಾನೆ. ನಮ್ಮ ಶರೀರದಲ್ಲೂ ಕಣ್ಣು, ಕಿವಿ, ಮೂಗು ಮುಂತಾದ ಇಂದ್ರಿಯಗಳೊಳಗೆ ಇದ್ದು ಭಗವಂತನ ಚೈತನ್ಯರೂಪಗಳು ಇಂದ್ರಿಯಗಳಿಂದ ಕಾರ್ಯವನ್ನು ಮಾಡಿಸುತ್ತವೆ. ಪರಮಾತ್ಮನಿಂದ ಸೃಷ್ಟರಾದ ದೇವತೆಗಳಿಂದ ಮಳೆಬೆಳೆಗಳುಂಟಾಗಿ ಈ ಆಹಾರದ ಮುಖಾಂತರ ಶರೀರದ ಉತ್ಪತ್ತಿಯಾಗುತ್ತದೆ. ಶರೀರದಲ್ಲಿ ನಡೆಯುವ ವಿವಿಧ ಕಾರ್ಯಗಳಿಗೆ ಅಭಿಮಾನಿಯಾದ ಜೀವನು ಭಗವಂತನ ಆವಾಸಸ್ಥಾನ. ಜಡವಸ್ತುಗಳಿಗಿಂತ ಚೇತನದಲ್ಲಿ ಭಗವಂತನ ವಿಶೇಷ ಸನ್ನಿಧಾನವಿದೆ. ಪರಮಾತ್ಮನು ಇಂದ್ರಿಯಾಭಿಮಾನಿ ದೇವತೆಗಳ ಜೊತೆಗೆ ಬ್ರಹ್ಮದೇವರ ಶರೀರದಲ್ಲಿ ಪ್ರವೇಶಿಸುತ್ತಾನೆ. ಅಭಿಮಾನಿ ದೇವತೆಗಳು ತಮ್ಮಲ್ಲಿ ಯಾರು ಉತ್ತಮರೆನ್ನುವ ಚರ್ಚೆ, ಜಿಜ್ಞಾಸೆಯನ್ನು ನಡೆಸಿದರು. ಇದನ್ನು ಪರೀಕ್ಷಿಸಿ ನಿರ್ಣಯಿಸಲು ಅಭಿಮಾನಿದೇವತೆಗಳು ಒಬ್ಬೊಬ್ಬರಾಗಿ ಶರೀರದಿಂದ ಹೊರಬಂದರು. ಯಾವ ದೇವತೆಗಳು ಹೊರಬಂದರೂ ಶರೀರವು ನಿಷ್ಕ್ರಿಯವಾಗಲಿಲ್ಲ. ಮುಖ್ಯಪ್ರಾಣನು ಶರೀರವನ್ನು ತ್ಯಜಿಸಿದಾಗ ಮಾತ್ರ ಆ ಶರೀರವು ಸ್ತಬ್ಧವಾಯಿತು. ಶ್ರೀಹರಿ ಮತ್ತು ಬ್ರಹ್ಮದೇವರು ಈ ಸ್ಪರ್ಧೆಯಲ್ಲಿ ಭಾಗವಹಿಸದೆ ತಟಸ್ಥರಾಗಿದ್ದರು. ಪುನಃ ದೇವತೆಗಳು ಪ್ರವೇಶ ಮಾಡುವಾಗಲೂ ವಾಯುದೇವರು ಶರೀರದಲ್ಲಿ ಪ್ರವೇಶ ಮಾಡುವವರೆಗೂ ಯಾವುದೇ ಚಟುವಟಿಕೆಯು ಆರಂಭವಾಗಲಿಲ್ಲ. ಮುಖ್ಯಪ್ರಾಣನ ಪ್ರವೇಶವಾದ ಕೂಡಲೇ ಅದು ಕ್ರಿಯಾಶೀಲ ವಾಯಿತು. ವಾಯುದೇವರೇ ಜೀವೋತ್ತಮರೆಂದು ಎಲ್ಲರಿಗೂ ಮನವರಿಕೆಯಾಗಿ ಅವರ ಪ್ರಾರ್ಥನೆಯನ್ನು ಮಾಡಿದರು. ಶರೀರದಲ್ಲಿ ಈ ಎಲ್ಲಾ ಅಭಿಮಾನಿ ದೇವತೆಗಳಿಗಿಂತಲೂ ಶ್ರೇಷ್ಠನಾದವನು ಪರಮಾತ್ಮನು. ಉಳಿದವರೆಲ್ಲ ಬರೇ ದೇವತೆಗಳೆನಿಸಿದರೆ ಭಗವಂತನು ಅಧಿದೈವನಾಗಿರುವನು.

ಹಗ್ಗದಲ್ಲಿ ಪಶುಗಳನ್ನು ಬಂಧಿಸಿ ಯಜಮಾನನು ಅವುಗಳನ್ನು ನಿಯಂತ್ರಿಸುವಂತೆ ವೇದವಾಣಿ ಯೆಂಬ ಹಗ್ಗವನ್ನು ಬಳಸಿ ಭಗವಂತನು ಸಕಲ ದೇವತೆಗಳನ್ನೂ ನಿಯಂತ್ರಿಸುತ್ತಾನೆ. ವೇದಗಳೆಲ್ಲವೂ ಭಗವಂತನ ನಾಮಗಳೇ ಆಗಿವೆ. ಅವುಗಳು ಪ್ರತಿಪಾದಿಸುವ ಪರಮಾತ್ಮನ ಮಹಿಮೆ, ಭಕ್ತಿ, ನೀತಿ, ನಿಯಮ ಗಳ ಆಧಾರದಿಂದ ಶ್ರೀಹರಿಯು ಜಗತ್ತನ್ನು ನಡೆಸುತ್ತಾನೆ. ರಾಷ್ಟ್ರಕ್ಕೆ ಒಂದು ಸಂವಿಧಾನವಿರುವಂತೆ ವೇದವೇ ವಿಶ್ವದ ಸಂವಿಧಾನವಾಗಿದೆ. ಸರಕಾರವು ಸಂವಿಧಾನವನ್ನು ಆಧರಿಸಿ ರಾಷ್ಟ್ರವನ್ನು ನಡೆಸುವಂತೆ ವೇದದ ನಿಯಮ, ಶಾಸನಗಳ ಸೂತ್ರದಂತೆ ವಿಶ್ವದ ಆಡಳಿತವನ್ನು ಭಗವಂತನು ನಿರ್ವಹಿಸುತ್ತಾನೆ.

ನಾಟಕದ ರಂಗಮಂಟಪದಲ್ಲಿರುವಂತೆ ವೇದವೂ ಭಗವಂತನಿಗೆ ಪರದೆಯಾಗಿದೆ. ಅದರೊಳಗೆ ಪರಮಾತ್ಮನ ವೈಭವವನ್ನೂ ನಾವು ಕಾಣಬಹುದು. ವೇದವು ಅದರ ಅಧ್ಯಯನ ಮಾಡುವವರಿಗೆ ಕವಚದಂತೆ ಪಾಪದಿಂದ ರಕ್ಷಣೆಯನ್ನು ನೀಡಬಲ್ಲದು. ವಾಯುವಿನಲ್ಲಿ ಅಂತರ್ಗತನಾದ ಪರಮಾತ್ಮನು ವೇದ ಪ್ರತಿಪಾದ್ಯನಾಗಿ ಅದನ್ನು ಓದುವ ಸಜ್ಜನರಿಗೆ ರಕ್ಷಣೆಯನ್ನು ನೀಡುವನು.

ಪರಮಾತ್ಮನ ವಿಭಿನ್ನ ಅವಯವಗಳಿಂದ ಹುಟ್ಟಿದ ದೇವತೆಗಳು ಅವನ ಸೇವೆಗಾಗಿಯೇ ಭೂತ, ಭೌತಿಕ ವಸ್ತುಗಳನ್ನು ನಿರ್ಮಿಸಿದ್ದಾರೆ. ವಿಶ್ವದ ಎಲ್ಲಾ ಪದಾರ್ಥಗಳು ಪರಮಾತ್ಮನ ಪೂಜೆಗಾಗಿಯೇ, ಅವನಿಗೆ ಪ್ರೀತಿಕರವಾದ ಕಾರ್ಯಗಳಿಗಾಗಿಯೇ ನಿರ್ಮಾಣಗೊಂಡಿವೆ. ಅದರ ಬದಲು, ಸ್ವಾರ್ಥ, ಸ್ವಭೋಗಗಳಿಗೆ ಅವುಗಳನ್ನು ಉಪಯೋಗಿಸುವುದು ಸೂಕ್ತವಲ್ಲ. ನಮ್ಮ ಪಂಚೇಂದ್ರಿಯಗಳಿಗೆ ವಿಷಯ ಪದಾರ್ಥಗಳನ್ನು ನೀಡುವಾಗಲೂ ಅಂತರ್ಯಾಮಿಯಾದ ಭಗವಂತನಿಗೆ ಸಂತರ್ಪಣೆಯೆಂದೇ ಭಾವಿಸಬೇಕು.

ಎಲ್ಲಾ ಶಬ್ದಗಳೂ ಬರೆ ವಸ್ತುಗಳನ್ನು ತಿಳಿಸುವುದಿಲ್ಲ. ವಸ್ತುಗಳ ಒಡೆಯನಾದ ಭಗವಂತನನ್ನೇ ಅವು ಬೋಧಿಸುತ್ತವೆ. ನಮ್ಮ ದೇಹವನ್ನು ಹೆಸರಿಸುವ ನಾಮಗಳು ಆ ದೇಹದ ಯಜಮಾನನನ್ನೇ ಮುಖ್ಯವಾಗಿ ತಿಳಿಸುವಂತೆ ಎಲ್ಲಾ ಶಬ್ದಗಳಿಂದಲೂ ಆ ಪದಾರ್ಥಗಳ ಅಂತರ್ಯಾಮಿಯಾದ ಭಗವಂತನೇ ಮುಖ್ಯ ಪ್ರತಿಪಾದ್ಯನು. ಆದರೂ ಆ ಶಬ್ದಗಳು ಲೌಕಿಕ ವಸ್ತುಗಳನ್ನೂ ಪ್ರತಿಪಾದಿಸುತ್ತವೆ. ಹಾಲು ನೀರಿನಲ್ಲಿ ವ್ಯಾಪಿಸಿಕೊಂಡಿರುವಾಗ ಆ ನೀರನ್ನೂ ಹಾಲು ಎಂಬುದಾಗಿ ಕರೆಯುವಂತೆ ಎಲ್ಲಾ ಶಬ್ದಗಳೂ ಪರಮಾತ್ಮನದ್ದೇ ಆದರೂ ಅವರು ವ್ಯಾಪಿಸಿರುವುದರಿಂದ ಉಳಿದ ವಸ್ತುಗಳನ್ನೂ ಗೌಣವಾಗಿ ಕರೆಯಬಹುದು. ಕುರು ಕುಲದಲ್ಲಿ ಹುಟ್ಟಿದವರನ್ನೆಲ್ಲಾ ಕುರು ಎನ್ನುವ ಹೆಸರಿನಿಂದ ಕರೆಯುವಂತೆ ಎಲ್ಲಾ ಶಬ್ದಗಳೂ ಪರಮಾತ್ಮನಲ್ಲಿಯೇ ಮುಖ್ಯವಾಗಿದ್ದರೂ ಅವನಿಂದ ಹುಟ್ಟಿದ ಇತರ ಚೇತನರಲ್ಲಿಯೂ ಆ ಶಬ್ದಗಳ ಬಳಕೆಯಾಗಿದೆ.

ಎಲ್ಲ ಕಡೆಗಳಲ್ಲಿಯೂ ಭಗವಂತನ ಸನ್ನಿಧಾನವಿರುವುದರಿಂದ ಎಲ್ಲಾ ಶಬ್ದಗಳೂ ಭಗವಂತನನ್ನೇ ಹೇಳುತ್ತವೆಯೆಂಬ ಹಿನ್ನೆಲೆಯಲ್ಲಿಯೇ ಈ ಉಪನಿಷತ್ತಿನ ಮುಂದಿನ ಭಾಗದ ಅರ್ಥವನ್ನು ನಾವು ತಿಳಿದುಕೊಳ್ಳಬೇಕು. ಇಂದ್ರ ವಿಶ್ವಾಮಿತ್ರರ ಸಂವಾದದಲ್ಲಿ ನೀನು ಯಾರೆಂದು ವಿಶ್ವಾಮಿತ್ರನು ಕೇಳಿದಾಗ ಸರ್ವಚೇಷ್ಟಕನಾದ ಭಗವಂತನೇ ತಾನೆಂದು ಇಂದ್ರನು ಹೇಳಿದಂತೆ ಭಾಸವಾಗುತ್ತದೆ. ಎಲ್ಲ ದೇವತೆಗಳೂ ಪರಮಾತ್ಮನ ಅಧೀನರು. ಅವನ ಶಾಸನದಂತೆ ಇವರು ಕಾರ್ಯಪ್ರವೃತ್ತರಾಗುತ್ತಾರೆಂದು ಉಪನಿಷತ್ತುಗಳಲ್ಲಿ ಹೇಳಿರುವಾಗ ಇಂದ್ರನೇ ಭಗವಂತನಾಗಿರಲು ಹೇಗೆ ಸಾಧ್ಯ? ಇಲ್ಲಿ ಇಂದ್ರನೆಂಬುದಾಗಿ ಇಂದ್ರನ ಒಳಗಿರುವ ಪರಮಾತ್ಮನನ್ನೇ ಕರೆಯಲಾಗಿದೆ. ಇಂದ್ರನೊಳಗಿರುವ ಮುಖ್ಯಪ್ರಾಣನೂ ಅವನ ಒಳಗಿರುವ ಪರಮಾತ್ಮನೂ ವಿಶ್ವಾಮಿತ್ರನನ್ನು ಸಂಧಿಸುವರು. ವಿಶ್ವಾಮಿತ್ರನು ಈ ಇಂದ್ರನಲ್ಲಿ ಭಗವಂತನನ್ನು ಕಂಡು ಅವನಿಗೆ ಅತಿಪ್ರಿಯವಾದ ಅವನ ಸ್ತೋತ್ರ ರೂಪವಾದ ಬೃಹತೀಸಹಸ್ರವನ್ನು ಉತ್ತಮ ನೈವೇದ್ಯವೆಂದು ಸಮರ್ಪಿಸುತ್ತಾನೆ. ಇದರಿಂದ ಅತ್ಯಂತ ಪ್ರಸನ್ನನಾದ ಪರಮಾತ್ಮನು ವಿಶ್ವಾಮಿತ್ರನಿಗೆ ವರವನ್ನು ನೀಡಲು ಸಿದ್ಧನಾಗುತ್ತಾನೆ. 'ನಿನ್ನನ್ನು ಇನ್ನೂ ಚೆನ್ನಾಗಿ ತಿಳಿಯಲು ಉತ್ಸುಕನಾಗಿದ್ದೇನೆ, ಅದನ್ನೇ ಕರುಣಿಸು' ಎಂದು ವಿಶ್ವಾಮಿತ್ರನು ಬೇಡುವನು. ಆಗ ಅಂತರ್ಯಾಮಿಯಾದ ಪರಮಾತ್ಮನು ಪ್ರಾಣ, ಸೂರ್ಯ ಮುಂತಾದ ಎಲ್ಲಾ ಶಬ್ದಗಳಿಂದ ಪ್ರತಿಪಾದ್ಯವಾದ ತನ್ನ ಸ್ವರೂಪವನ್ನು ತಿಳಿಸುತ್ತಾನೆ. ಒಂದೊಂದು ಶಬ್ದಗಳೂ ನಿರರ್ಥಕವಾಗಿ ಭಗವಂತನನ್ನು ಬೋಧಿಸುವುದಿಲ್ಲ. ಪ್ರತಿಯೊಂದು ಶಬ್ದವೂ ದೇವರ ಒಂದೊಂದು ಗುಣವನ್ನು ಬೋಧಿಸುತ್ತದೆ. ಎಲ್ಲಾ ಶಬ್ದಗಳೂ ಶ್ರೀಹರಿಯನ್ನು ಬೋಧಿಸಿದರೆ ಎಲ್ಲಾ ಗುಣಗಳೂ ಅವನಲ್ಲಿ ಇವೆಯೆಂದು ಅರ್ಥವಾಗುವುದು. ಹೀಗೆ ದೇವರು ಸರ್ವಶಬ್ದವಾಚ್ಯನೆಂದರೆ

ಸರ್ವಗುಣಪೂರ್ಣನೆಂದೇ ಪರ್ಯವಸಾನವಾಗುವುದು. ಹೀಗೆ ವಿಶ್ವಾಮಿತ್ರನಿಗೆ ಅಂತರ್ಯಾಮಿಯಾದ ಸರ್ವ ಶಬ್ದ ಪ್ರತಿಪಾದ್ಯವಾದ ತನ್ನ ಸ್ವರೂಪವನ್ನು ಪರಮಾತ್ಮನು ತಿಳಿಸುತ್ತಾನೆ.

ಬ್ರಹ್ಮಸೂತ್ರದಲ್ಲೂ 'ಇಂದ್ರನಲ್ಲಿ ಪರಮಾತ್ಮನ ವಿಶೇಷವಾದ ಸಂಬಂಧವು ಇದೆ, ಆದುದರಿಂದ ಇಂದ್ರನೆಂದು ಪರಮಾತ್ಮನನ್ನೇ ಹೇಳಿದೆ'ಯೆಂದು ವಿವರಿಸಲಾಗಿದೆ. ಪರಮಾತ್ಮನ ವಿಶೇಷ ಸನ್ನಿಧಾನವು ಇಂದ್ರನಲ್ಲಿದೆಯೆಂದು ಹೇಳಿದುದರಿಂದ ಇಂದ್ರನು ಪರಮಾತ್ಮನಲ್ಲವೆಂದೇ ಬ್ರಹ್ಮಸೂತ್ರದ ಅಭಿಪ್ರಾಯವಾಗುವುದು. ಅಂತೂ ವೇದೋಪನಿಷತ್ತುಗಳಲ್ಲಿ ಇಂದ್ರ ಮುಂತಾದ ಹೆಸರುಗಳಿಂದ ಪರಮಾತ್ಮನನ್ನು ಕರೆದಿದ್ದರೂ ಈ ಎಲ್ಲ ದೇವತೆಗಳೆ ಪರಮಾತ್ಮನೆಂದು ನಾವು ಭ್ರಮಿಸಬಾರದು. ಇಂದ್ರ ಮುಂತಾದ ಶಬ್ದಗಳು ಪರಮಾತ್ಮನ ಅಧೀನರಾದ ನಾನಾ ದೇವತೆಗಳನ್ನು ಹೇಳುತ್ತವೆ. ಆದರೂ ಮುಖ್ಯವಾಗಿ ಸರ್ವದೇವ ತಾನಿಯಾಮಕನಾದ ಶ್ರೀಹರಿಯನ್ನೇ ಪ್ರತಿಪಾದಿಸುತ್ತವೆ. ಐತರೇಯೋಪನಿಷತ್ತು ಉದಾಹರಣೆಗಾಗಿ ಅನೇಕ ಶಬ್ದಗಳನ್ನು ಉಲ್ಲೇಖಿಸಿ ಅವುಗಳ ಅರ್ಥವಿವರಣೆಯನ್ನೂ ಮಾಡಿ ಎಲ್ಲ ಶಬ್ದಗಳೂ ಭಗವಂತನ ಗುಣಮಹಿಮೆಗಳನ್ನು ಹೇಗೆ ಬೋಧಿಸುತ್ತವೆ ಎಂಬುದನ್ನು ವಿವರಿಸಿದೆ. ಬರೆ ಸಕಲ ವೇದಗಳು ಮಾತ್ರ ಪರಮಾತ್ಮನನ್ನು ಬೋಧಿಸುತ್ತವೆಯೆಂದು ನಾವು ತಿಳಿದುಕೊಳ್ಳಬಾರದು. ಎಲ್ಲ ಶಬ್ದಗಳೂ ಸಕಲ ಧ್ವನಿಗಳೂ ಹರಿಯ ಗುಣಗಾನವನ್ನು ಮಾಡುತ್ತವೆ. ಮೋಡದ ಗುಡುಗು, ಕಡಲಿನ ಘೋಷ, ಹಕ್ಕಿಗಳ ಕಲರವ, ಗೆಜ್ಜೆಯ ಝುಣತ್ಕಾರ ಇವುಗಳೆಲ್ಲದರಿಂದಲೂ ಜ್ಞಾನಿಗಳು ಮಾಧವನ ಮಂಗಲ ಮಹಿಮೆಯನ್ನೇ ಆಲಿಸುತ್ತಾರೆ. ವಿಶ್ವದ ಎಲ್ಲ ಸ್ವರ, ವರ್ಣ, ನಾದ, ಘೋಷಗಳೂ ಪರಮಾತ್ಮನ ಮಧುರ ಸ್ತೋತ್ರಗಳೇ ಆಗಿವೆ.

ವಿಶ್ವಾಮಿತ್ರನು ಪರಮಾತ್ಮನಿಗೆ ಸಮರ್ಪಿಸಿದ ಅವನ ಸ್ತೋತ್ರರೂಪವಾದ ಬೃಹತೀಸಹಸ್ರದಲ್ಲಿ ಸ್ವರ ವ್ಯಂಜನಗಳು ಸೇರಿ ಎಪ್ಪತ್ತೆರಡು ಸಾವಿರ ವರ್ಣಗಳಿವೆ. ನಮ್ಮ ನೂರು ವರ್ಷಗಳ ಪೂರ್ಣ ಜೀವನದ ಹಗಲು ರಾತ್ರಿಗಳನ್ನು ಸೇರಿಸಿದಾಗ ಅದೂ ಎಪ್ಪತ್ತೆರಡು ಸಾವಿರವಾಗುತ್ತದೆ. ಈ ಸ್ವರ, ವ್ಯಂಜನಗಳಲ್ಲೂ, ಹಗಲು ರಾತ್ರಿಗಳಲ್ಲೂ ಅಷ್ಟೇ ಸಂಖ್ಯೆಯ ಭಗವದ್ರೂಪಗಳು ಇರುತ್ತವೆ. ಈ ಭಗವದ್ರೂಪಗಳ ಜ್ಞಾನ, ಉಪಾಸನೆಗಳನ್ನು ಮಾಡಿದರೆ ನಮ್ಮ ಸಮಗ್ರ ಜೀವನದಲ್ಲಿ ಪರಮಾತ್ಮನ ಧ್ಯಾನವನ್ನು ಮಾಡಿದ ಫಲವನ್ನು ಪಡೆಯುತ್ತೇವೆ. ಇದು ನಮ್ಮ ಪರಿಪೂರ್ಣ ಸಮೃದ್ಧ ಜೀವನಕ್ಕೆ ಕಾರಣವೂ ಆಗುವುದು.

''ತದ್ಯೋಽಹಂ ಸೋಽಸೌ ಯೋಽಸೌ ಸೋಽಹಂ'' ಪ್ರತಿಯೊಬ್ಬನೂ ತನ್ನನ್ನು 'ಅಹಂ' ಎಂದು ಕರೆಯುತ್ತಾನೆ. ಯಾರನ್ನು ನಾವು ಬಿಡಲಾರೆವೋ ಅಂತಹ ಅತ್ಯಂತ ಪ್ರಿಯ ವಸ್ತುವನ್ನು 'ಅಹಂ' ಎಂದು ಕರೆಯುತ್ತೇವೆ. 'ಅಹಂ' ಎಂದರೆ ಅಹೇಯನು, ಪರಿತ್ಯಜಿಸಲಾರದಂತಹ ಅತಿಪ್ರಿಯ ವಸ್ತುವೆಂದು ಅರ್ಥವಾಗುತ್ತದೆ. ಅನಂತ ಗುಣಪೂರ್ಣನಾದ ಪರಬ್ರಹ್ಮನು ನಮಗಿಂತಲೂ ಹೆಚ್ಚು ಅಹೇಯನಾದ ಪರಮಪ್ರಿಯ ವಸ್ತುವಾಗಿದ್ದಾನೆ. ಆದುದರಿಂದ ನಮ್ಮೊಳಗಿರುವ ಪರಮಾತ್ಮನನ್ನು 'ಅಹಂ' ಎಂದು ಉಪನಿಷತ್ತು ಕರೆಯುತ್ತದೆ. 'ಅಹಂ' ನಮ್ಮ ಒಳಗಿರುವವನೂ 'ಅಸೌ' ನಮ್ಮ ಪ್ರತ್ಯಕ್ಷ ಪ್ರಪಂಚದಲ್ಲಿ ಅತ್ಯಂತ ಶ್ರೇಷ್ಠವಾದ ಸೂರ್ಯ ಮಂಡಲದೊಳಗೆ ಇರುವವನೂ ಒಬ್ಬನೆ ಆದ ಭಗವಂತನಾಗಿದ್ದಾನೆ. ಅವನು ಮಾನವರೊಳಗೆ ಇದ್ದು ಮಾನವರಿಗೆ ಅಹೇಯನಾಗಿರುವಂತೆ ದೇವತೆಗಳ ಒಳಗೆ ಇದ್ದು ದೇವತೆಗಳಿಗೂ ಅಹೇಯನಾಗಿರುವನು.

ಪರಮಾತ್ಮನು ಎಲ್ಲಾ ವಸ್ತುಗಳಲ್ಲೂ ನೆಲೆಸಿದ್ದಾನೆ. ಭೋಕ್ತೃ ಮತ್ತು ಭೋಜ್ಯಗಳಲ್ಲೂ ಅವನ ಸನ್ನಿಧಾನವಿದೆ. ಕಲ್ಲು, ಮರಗಿಡಗಳು, ಪಶು ಪ್ರಾಣಿಗಳು, ಮಾನವರು ಎಲ್ಲರಲ್ಲೂ ಅವನ ಸನ್ನಿಧಾನವಿದೆ. ಆದರೆ ಮರಗಿಡಗಳಲ್ಲಿ ರಸ ಹರಿಯುತ್ತದೆ. ಕಲ್ಲು ಬರೆ ಒಣವಸ್ತುವಾಗಿದೆ. ಮರಗಿಡಗಳಿಗಿಂತಲೂ ಹೆಚ್ಚಿನ ಮಾನಸಿಕ ಚಟುವಟಿಕೆಗಳನ್ನು ಪಶು, ಮೃಗಗಳಲ್ಲಿ ಕಾಣುತ್ತೇವೆ. ಆದರೆ ಮಾನವನು ಎಲ್ಲರಿಗಿಂತಲೂ

ಮಿಗಿಲಾಗಿದ್ದಾನೆ. ಮಾತು, ವಿಮರ್ಶೆ, ನಿನ್ನೆ ಮತ್ತು ನಾಳೆಯ ವಸ್ತುಗಳ ಪರಿಜ್ಞಾನ, ಸ್ವರ್ಗ, ನರಕ, ಸಂಸಾರ, ಮೋಕ್ಷ ಇವುಗಳ ಸಮಾಲೋಚನೆ ಮೊದಲಾದ ವಿಶೇಷ ಬೌದ್ಧಿಕ ಕ್ರಿಯೆ ಅವನಲ್ಲಿ ಇದೆ. ಪರಮಾತ್ಮನ ವಿಶೇಷ ಸನ್ನಿಧಾನವೆ ಇದಕ್ಕೆ ಕಾರಣ. ಎಲ್ಲಾ ಪ್ರಾಣಿಗಳಿಗಿಂತಲೂ ಮಾನವರಲ್ಲಿ ದೇವರ ಸನ್ನಿಧಾನವು ವಿಶೇಷವಾಗಿ ಇದೆ. ಎಲ್ಲಾ ವ್ಯಕ್ತಿಗಳಲ್ಲಿ ಇರುವ ಅಂತರ ಮತ್ತು ತಾರತಮ್ಯಕ್ಕೆ ಭಗವಂತನ ಸನ್ನಿಧಾನದಲ್ಲಿ ಇರುವ ವ್ಯತ್ಯಾಸವೆ ಕಾರಣವಾಗಿದೆ.

ಭಗವಂತನ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಈ ಐದು ರೂಪಗಳನ್ನೇ ಉಪನಿಷತ್ತು ಬೇರೆ ಬೇರೆ ಶಬ್ದಗಳಿಂದ ವಿವಿಧ ವಸ್ತುಗಳಲ್ಲಿ ಸನ್ನಿಹಿತಗಳಾಗಿವೆಯೆಂದು ವರ್ಣಿಸಿದೆ. ಪರಮಾತ್ಮನು ಈ ಐದು ರೂಪಗಳಿಂದ ನೆಲೆಸಿರುವುದರಿಂದಲೇ ಪಂಚಭೂತಗಳು, ಪಂಚ ಪ್ರಾಣಗಳು ಮುಂತಾದ ಐದೈದು ವಿಭಾಗಗಳು ಜಗತ್ತಿನಲ್ಲಿ ಪ್ರಚಲಿತವಾಗಿವೆ. ಯಜ್ಞದಲ್ಲಿ ಮತ್ತು ಛಂದಸ್ಸು ಮುಂತಾದ ವಿವಧ ಅಂಗಗಳಲ್ಲಿ ಈ ಕಾರಣದಿಂದಲೇ ಐದು ಪ್ರಕಾರಗಳು ಇವೆ.

ಈ ಉಪನಿಷತ್ತು ಶ್ರೀನಾರಾಯಣನ ವಿಶೇಷ ಸ್ತೋತ್ರರೂಪವಾದ ಬೃಹತೀಸಹಸ್ರದ ಮಹತ್ವವನ್ನು ಒತ್ತಿ ಹೇಳುತ್ತದೆ. ವೇದದ ಉಳಿದ ಎಲ್ಲ ಛಂದಸ್ಸುಗಳಿಗಿಂತ ಬೃಹತಿಯೇ ಶ್ರೇಷ್ಠವಾಗಿದೆ. ಅನುಷ್ಟುಪ್ ಮಂತ್ರಗಳನ್ನೇ ಶ್ರೇಷ್ಠವೆಂದು ಒಬ್ಬ ಋಷಿಯು ಪ್ರತಿಪಾದಿಸಿದರೆ ಭಗವಂತನ ಅವತಾರನಾದ ಮಹಿದಾಸನು ಅದನ್ನು ನಿರಾಕರಿಸಿ ಬೃಹತೀ ಮಂತ್ರದ ಮಹತ್ತ್ವವನ್ನು ಸಮರ್ಥಿಸುತ್ತಾನೆ. ಅನುಷ್ಟುಪ್ ಮಂತ್ರಕ್ಕೆ ಉಮಾದೇವಿಯು ಅಭಿಮಾನಿಯಾಗಿದ್ದರೆ ಜೀವೋತ್ತಮನಾದ ಮುಖ್ಯಪ್ರಾಣನೇ ಬೃಹತಿಯ ಅಭಿಮಾನಿ ದೇವತೆ. ಇದೇ ಈ ಮಂತ್ರದ ಶ್ರೇಷ್ಠತೆಗೆ ಕಾರಣವಾಗಿದೆ. ಅಕಾರವು ಶ್ರೇಷ್ಠವಾದ ಭಗವನ್ನಾಮವಾಗಿದೆ. ನಾರಾಯಣ ಶಬ್ದವು ಆಕಾರದ ವಿವರಣೆಯೇ ಆಗಿದೆ. ಬೃಹತೀಸಹಸ್ರವು ಈ ಅಕಾರದ ವ್ಯಾಖ್ಯಾನ ರೂಪವಾಗಿ ನಾರಾಯಣನ ಸ್ತೋತ್ರವೆನಿಸಿದೆ. ಬೃಹತೀಸಹಸ್ರವನ್ನು ಇಂದ್ರನ ಯಶೋಗಾಥೆಯೆಂದು ಇಲ್ಲಿ ಹೇಳಿದೆ. ಇಲ್ಲಿ ಇಂದ್ರ ಶಬ್ದವು ನಾರಾಯಣನನ್ನೇ ಹೇಳುತ್ತದೆ. ಇಂದ್ರ ಶಬ್ದದಿಂದ ನಾರಾಯಣನನ್ನೇ ಹೇಳಿದ ಉಲ್ಲೇಖವು ವೇದದಲ್ಲಿ ಸ್ಪಷ್ಟವಾಗಿ ಇದೆ. ಆದುದರಿಂದ ಪರಮೈಶ್ವರ್ಯಶಾಲಿಯಾಗಿ ಇಂದ್ರನಿಗೂ ಇಂದ್ರನೆನಿಸಿದ ನಾರಾಯಣನ ಮಹಿಮೆಯ ವರ್ಣನೆಯೇ ಬೃಹತೀಸಹಸ್ರ.

ದೇವತೆಗಳನ್ನು ನಿರೂಪಿಸುವ ಇಂದ್ರ ಮುಂತಾದ ಶಬ್ದಗಳಿಂದ ಮಾತ್ರ ಭಗವಂತನು ಪ್ರತಿಪಾದ್ಯನಲ್ಲ. ಲೋಕದಲ್ಲಿ ವಿಭಿನ್ನ ವ್ಯವಹಾರಗಳಲ್ಲಿ ಬಳಸುವ ಲೌಕಿಕ ಶಬ್ದಗಳನ್ನು ವಿಮರ್ಶಿಸಿ ಜ್ಞಾನಿಗಳು ಅವುಗಳಿಂದಲೂ ಭಗವಂತನ ಮಹಿಮೆಯನ್ನು ಅರಿತುಕೊಂಡಿದ್ದಾರೆ.

ವಿಶ್ವದ ವಿವಿಧ ಪದಾರ್ಥಗಳಲ್ಲಿ ಇರುವ ಭಗವಂತನು ಚಿದಾನಂದಮಯವಾದ ಸ್ತ್ರೀ ಪುರುಷ ರೂಪಗಳನ್ನು ಧರಿಸುತ್ತಾನೆ. ಜ್ಞಾನಿಗಳು ಇಲ್ಲಿಯೂ ಭಗವಂತನ ಅಲೌಕಿಕ ಕ್ರೀಡೆಯನ್ನೇ ಕಾಣುತ್ತಾರೆ.

ಪರಮಾತ್ಮನಿಂದ ಸೃಷ್ಟಿಯ ಆದಿಯಲ್ಲಿ ಅಭಿಮಾನಿದೇವತೆಗಳು ಹುಟ್ಟುವರು. ತಮ್ಮ ಚಟುವಟಿಕೆಗಳ ಕೇಂದ್ರವಾದ ಒಂದು ಉತ್ತಮ ನೆಲೆಯನ್ನು ಅವರು ಭಗವಂತನಲ್ಲಿ ಕೇಳುವರು. ಕುದುರೆ, ಹಸು ಮುಂತಾದ ಪ್ರಾಣಿಗಳ ಶರೀರವನ್ನು ಭಗವಂತನು ತೋರಿಸಿದಾಗ ದೇವತೆಗಳಿಗೆ ಸಮಾಧಾನವಾಗಲಿಲ್ಲ. ಪುರುಷಾಕಾರದ ಶರೀರವನ್ನು ತೋರಿಸದಾಗಲೇ ಅವರಿಗೆ ತೃಪ್ತಿಯಾಯಿತು. ಸಾಧನ ಶರೀರವಾದ ಮನುಷ್ಯ ದೇಹ ದೇವತೆಗಳ ವಿಶೇಷ ಸನ್ನಿಧಾನ ಮತ್ತು ಚಟುವಟಿಕೆಯ ಸ್ಥಾನವಾಗಿದೆ.

ಭಗವಂತನೇ ನಮಗೆ 'ಅನ್ನ ನೆನಿಸಿದ್ದಾನೆ. ಅನ್ನವನ್ನು ಉಪಜೀವಿಸಿ ನಾವು ಬದುಕುವಂತೆ ಜೀವನದಲ್ಲಿ ಪರಮಾತ್ಮನು ನಮಗೆ ಆಶ್ರಯನಾಗಿದ್ದಾನೆ. ಅವನಿಂದಲೇ ನಮ್ಮ ಜೀವನದ ಎಲ್ಲಾ ವ್ಯವಹಾರಗಳೂ ನಡೆಯುವುದರಿಂದ ಅವನೇ ನಮಗೆ ಅನ್ನನಾಗಿದ್ದಾನೆ. ಆದರೆ ಪರಮಾತ್ಮನಿಂದ ಉಪಯೋಗವನ್ನು ಪಡೆಯಲು ವಾಯುದೇವರ ಸಹಾಯವನ್ನು ನಾವು ಅವಶ್ಯವಾಗಿ ಪಡೆಯಬೇಕು.

ದೇವತೆಗಳು ಪರೀಕ್ಷಿಸಿ ಪ್ರಯೋಗಿಸಿ ವಾಯುದೇವರ ಅವಶ್ಯಕತೆಯನ್ನು ಮನಗಂಡಿದ್ದಾರೆ. ಈ ವಿಷ್ಣು, ವಾಯುಗಳೇ ಜಗತ್ತಿನ ಮುಖ್ಯ ಶಕ್ತಿಗಳಾಗಿದ್ದಾರೆ.

ನಮ್ಮ ಕಣ್ಣು, ಕಂಠ, ಹೃದಯಗಳಲ್ಲಿ ಇದ್ದು ಜಾಗ್ರತ್, ಸ್ವಪ್ನ, ಸುಷುಪ್ತಿ ಪ್ರೇರಕನಾಗಿ ನಮ್ಮ ಜೀವನದ ಎಲ್ಲಾ ಅವಸ್ಥೆಗಳಿಗೆ ಕಾರಣನಾಗಿರುವ ಪರಮಾತ್ಮನು ಸಕಲ ಪ್ರಾಣಿಗಳ ಪ್ರೇರಕನಾಗಿ ಎಲ್ಲರ ಒಳಗೆ ಪ್ರವೇಶಿಸಿರುವಂತೆ ಈ ಲೋಕದಲ್ಲಿ ರಾಮ, ಕೃಷ್ಣ, ವರಾಹ, ನರಸಿಂಹ ಮುಂತಾದ ಅನೇಕ ಅವತಾರಗಳನ್ನೂ ಧರಿಸಿದ್ದಾನೆ. ಲೋಕವಿಘಾತಿಗಳಾದ ದುಷ್ಟ ದೈತ್ಯ ಶಕ್ತಿಗಳ ದಮನ, ಸಜ್ಜನರಿಗೆ ಜ್ಞಾನದಾನ ಇವೇ ಈ ಅವತಾರಗಳ ಉದ್ದೇಶವಾಗಿದೆ. ಪರಮಾತ್ಮನ ಈ ಎಲ್ಲ ಮಹಿಮೆಗಳನ್ನು ಪೂರ್ಣವಾಗಿ ತಿಳಿದವನು ಅವನೊಬ್ಬನೇ. ಈ ಅರ್ಥದಲ್ಲಿ ''ಇದಂದ್ರ'' ಎಂಬ ನಾಮವು ದೇವರಿಗಿದೆ. ''ಇದಂ'' ತನ್ನ ಈ ಎಲ್ಲಾ ಸ್ವರೂಪದ ''ದ್ರ'' ದ್ರಷ್ಟಾರ ಎಂಬುದೇ ಈ ನಾಮದ ಅರ್ಥ. ಇದಂದ್ರ ಶಬ್ದವನ್ನು ಸಂಗ್ರಹವಾಗಿ ಇಂದ್ರ ಎಂಬುದಾಗಿ ವೇದೋಪನಿಷತ್ತುಗಳಲ್ಲಿ ಪರಮಾತ್ಮನಲ್ಲಿ ಪ್ರಯೋಗಿಸಲಾಗಿದೆ.

ದಂಪತಿಗಳು ತಮ್ಮ ಪ್ರಾಚೀನ ಧಾರ್ಮಿಕ ಸಾಂಸ್ಕೃತಿಕ ಪರಂಪರೆಯನ್ನು ಮುನ್ನಡೆಸುವ ಪುತ್ರನಲ್ಲೂ ಭಗವಂತನ ರೂಪವನ್ನು ಕಾಣಬೇಕು. ಭಗವಂತನ ರೂಪದ ಅಭಿವ್ಯಕ್ತಿಗೆ ಕಾರಣಳೆಂದು ಪತ್ನಿಯನ್ನೂ ಗೌರವಿಸಬೇಕು. ಅವಳಿಗೆ ಯಾವುದೇ ದೈಹಿಕ, ಮಾನಸಿಕ ಹಿಂಸೆಯನ್ನು ನೀಡಬಾರದು. ಅದರಂತೆ ಭಾವೀ ಪ್ರಜೆಯಾದ ಪುತ್ರನಲ್ಲೂ ದೇವರನ್ನು ಸಂದರ್ಶಿಸಿ ಅವನನ್ನೂ ಚೆನ್ನಾಗಿ ನೋಡಿಕೊಳ್ಳಬೇಕು. ದಂಪತಿಗಳು ಶಾಸ್ತ್ರಸಮ್ಮತವಾದ ದಾಂಪತ್ಯಕ್ರಿಯೆಯಲ್ಲೂ ಭಗವಂತನ ಸನ್ನಿಧಾನ ಮತ್ತು ಪವಿತ್ರ ಕರ್ತವ್ಯ ಭಾವನೆಯನ್ನು ಕಂಡುಕೊಂಡು ಅಲ್ಲಿ ಹೊಲಸುತನವನ್ನು ಕಾಣಬಾರದು. ಭಗವಂತನ ಉಪಾಸನೆಯನ್ನು ವಿವರಿಸುವುದರ ಜೊತೆಗೆ ಉತ್ತಮ ಸಾಮಾಜಿಕ ಸಂದೇಶವನ್ನೂ ಉಪನಿಷತ್ತು ನೀಡುತ್ತದೆ. ಹೀಗೆ ಭಗವಂತನು ಗರ್ಭದಲ್ಲಿಯೂ ಜೀವನದಲ್ಲಿಯೂ ಮರಣದಲ್ಲಿಯೂ ನಮ್ಮ ಜೊತೆಗೆ ಇರುವ ನಮ್ಮ ರಕ್ಷಕನೂ ಸುಖಿನೂ ಆಗಿರುವನು. ಇದೇ ನಮ್ಮಲ್ಲಿ ಭಗವಂತನ ಮೂರು ಆವಿರ್ಭಾವಗಳು.

ಸಂಸಾರದಲ್ಲಿರುವ ಸ್ಥಾವರ ಜಂಗಮಾತ್ಮಕವಾದ ಸಕಲ ಪ್ರಾಣಿಗಳ ಹುಟ್ಟಿಗೂ ಅವುಗಳ ಎಲ್ಲಾ ವ್ಯಾಪಾರಗಳಿಗೂ ಪರಮಾತ್ಮನು ಕಾರಣನಾಗಿರುವಂತೆ ಸಂಸಾರವನ್ನು ದಾಟಿದ ಈ ''ಅಲೋಕ''ವೆನಿಸಿದ ಮುಕ್ತ ಪ್ರಪಂಚಕ್ಕೂ ಅವನು ನಿಯಾಮಕನಾಗಿದ್ದಾನೆ.

''ನನ್ನ ಮನಸ್ಸಿನಲ್ಲಿ ಭಗವಂತ ಜ್ಞಾನವು ಉದಯಿಸಲಿ, ನನ್ನ ನಾಲಿಗೆಯಿಂದ ಭಗವಂತನ ಮಹಿಮೆಯ ವರ್ಣನೆಯ ಹರಿಯಲಿ. ನನಗೆ ಪರಮಾತ್ಮನ ಸಾಕ್ಷಾತ್ಕಾರವಾಗಲಿ. ಎಂದಿಗೂ ನಾನು ಅವನನ್ನು ಮರೆಯದಂತಾಗಲಿ. ಹಗಲು ರಾತ್ರಿಗಳನ್ನು ಅವನ ಚಿಂತನೆಯಲ್ಲಿಯೇ ನಾನು ಕಳೆಯುವಂತಾಲಿ. ಭಗವಂತನ ಬಗ್ಗೆ ನನ್ನಿಂದ ನಿರಂತರ ಪ್ರವಚನವು ನಡೆಯಲಿ'' – ಇದು ಜಿಜ್ಞಾಸುವಾದ ಭಕ್ತನು ಮಾಡುವ ಪ್ರಾರ್ಥನೆಯ ಒಂದು ಮಾದರಿ.

ಮುಂದೆ ಈ ಉಪನಿಷತ್ತಿನಲ್ಲಿ ಭಗವಂತನ ನಾಮದ ಪೂರ್ವಾಪರ ವರ್ಣಗಳೂ ಅವುಗಳ ಸಂಹಿತಿತೆಯೂ ಅವನ ಬೇರೆ ಬೇರೆ ರೂಪಗಳನ್ನು ಪ್ರತಿಪಾದಿಸುತ್ತವೆಯೆಂಬುದನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಪೂರ್ಣತ್ವವನ್ನು ಹೇಳುವ ವಿಷ್ಣು ಶಬ್ದವು ಪರಬ್ರಹ್ಮನನ್ನು ಪ್ರತಿಪಾದಿಸುವ ಮುಖ್ಯವಾದ ಶಬ್ದವಾಗಿದೆ. ಸಮಗ್ರ ವೇದವು ವಿಷ್ಣು ಶಬ್ದದ ವಿವರಣೆಯೇ ಆಗಿದೆ. ಈ ಎಲ್ಲಾ ವರ್ಣಗಳೂ ಅವುಗಳ ಸಂಹಿತೆಯೂ ವಾಯು, ಆಕಾಶ ಮುಂತಾದ ಅಧಿದೈವಿಕ ವಸ್ತುಗಳಲ್ಲಿರುವ ಭಗವಂತನ ರೂಪಗಳನ್ನೂ ಮನಸ್ಸು, ವಾಕ್ ಮುಂತಾದ ಅಧಿದೈಹಿಕ ವಸ್ತುಗಳಲ್ಲಿರುವ ಭಗವದ್ರೂಪಗಳನ್ನೂ ಪ್ರತಿಪಾದಸುತ್ತವೆಯೆಂದು ಮುಂತಾದ ಅನೇಕ ಸಂಗತಿಗಳನ್ನು ಅನುಸಂಧಾನ ಮತ್ತು ಉಪಾಸನೆಗಾಗಿ ಇಲ್ಲಿ

ವಿವರಿಸಿದ್ದಾರೆ. ಈ ಬಗ್ಗೆ ಮಾಕ್ಷವ್ಯ, ಮಾಂಡೂಕೇಯ, ಶಾಕಲ್ಯ ಮುಂತಾದ ಋಷಿಗಳ ಅಭಿಪ್ರಾಯ ಭೇದಗಳನ್ನೂ ನಿರೂಪಿಸಿದ್ದಾರೆ.

ನಮ್ಮ ದೇಹದ ಅಸ್ಥಿ , ಮಜ್ಜಾ ಮುಂತಾದವುಗಳಲ್ಲಿಯೂ ಭಗವಂತನ ರೂಪಗಳ ಅನುಸಂಧಾನ ಮಾಡಬೇಕು. ನಮ್ಮ ದೇಹದ ಬಲ ಮತ್ತು ಎಡ ಭಾಗಗಳಲ್ಲಿ ೩೬೦ರಂತೆ ಒಟ್ಟು ೭೨೦ ಭಗವದ್ರೂಪಗಳು ಇವೆ. ನಮ್ಮ ಒಂದು ವರ್ಷದ ಹಗಲು ರಾತ್ರಿಗಳ ಸಂಖ್ಯೆಯೂ ಇಷ್ಟೇ ಆಗಿದೆ. ಭಗವಂತನ ರೂಪಗಳೂ ಇದೇ ಸಂಖ್ಯೆಯಲ್ಲಿ ಇಲ್ಲಿ ನೆಲೆಸಿವೆ. ಭಗವಂತನ ನಾಮದ ಹಿಂದಿನ ಮತ್ತು ಮುಂದಿನ ವರ್ಣಗಳು ಮತ್ತು ಅವುಗಳ ಜೋಡಣೆಯಲ್ಲಿ ೩೬೦ರಂತೆ ೧೦೮೦ ಭಗವಂತನ ರೂಪಗಳಿವೆ. ಹಗಲು, ರಾತ್ರಿ, ಸಂಧ್ಯೆಗಳ ಸಂಖ್ಯೆಯೂ, ಅಲ್ಲಿರುವ ಭಗವದ್ರೂಪಗಳ ಸಂಖ್ಯೆಯೂ ಇದೆ ಆಗಿದೆ. ನಮ್ಮ ದೇಹದ ಎಡ, ಬಲ ಭಾಗಗಳಲ್ಲಿಯೂ ೫೪೦ರಂತೆ ಇದೇ ಸಂಖ್ಯೆಯಲ್ಲಿ ಭಗವದ್ರೂಪಗಳಿವೆ. ಬೃಹತೀಸಹಸ್ರ ಮಂತ್ರದ ಸಂಖ್ಯೆಯೂ ಇದೇ ಆಗಿದೆ. ಈ ೧೦೮೦ ಭಗವದ್ರೂಪಗಳನ್ನೇ ಈ ಮಂತ್ರಗಳು ಪ್ರತಿಪಾದಿಸುತ್ತವೆ. ಹೀಗೆ ನಮ್ಮ ಬದುಕಿಗೆ ಸಂಬಂಧಿಸಿದ ದೇಶ, ಕಾಲಗಳಿಗೂ ವಿಷ್ಣುವಿನ ನಾಮ ಮತ್ತು ಬೃಹತೀಸಹಸ್ರದ ಮಂತ್ರಗಳಿಗ ಇರುವ ಈ ಅಪೂರ್ವವಾದ ಆಧ್ಯಾತ್ಮಿಕ ಸಂಬಂಧವನ್ನು ತಿಳಿದುಕೊಳ್ಳುವುದು ನಮ್ಮ ಜೀವನದ ಪರಮೋನ್ನತಿಗೆ ಕಾರಣವಾಗುತ್ತದೆ.

ನಮ್ಮ ದೇಹಕ್ಕೆ ರುದ್ರದೇವರೂ, ಸಕಲ ವರ್ಣಗಳಿಗೆ ಶೇಷದೇವರೂ, ಸಕಲ ವೇದಗಳಿಗೆ ಗರುಡದೇವರೂ, ವರ್ಷ – ಕಾಲಗಳಿಗೆ ಬ್ರಹ್ಮದೇವರೂ ಅಭಿಮಾನಿಗಳಾಗಿದ್ದಾರೆ. ಈ ಎಲ್ಲ ಕಡೆಗಳ ಲ್ಲಿಯೂ ಅಂತರ್ಯಾಮಿಯಾಗಿ ಪರಮಾತ್ಮನು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ , ಅನಿರುದ್ಧ ರೂಪ ಗಳಿಂದ ಇರುವನು. ಇದೂ ನಮ್ಮ ದೇಹ ಕಾಲಗಳಿಗೂ ಮಂತ್ರಗಳಿಗೂ ಇರುವ ಅನ್ಯೋನ್ಯ ಸಂಬಂಧದ ಇನ್ನೊಂದು ಪ್ರಕಾರವಾಗಿದೆ. ಮಂತ್ರಗಳಿಂದ ಪ್ರತಿಪಾದ್ಯನಾದ ಭಗವಂತನನ್ನು ಉಪಾಸನೆ ಮಾಡುವುದ ರಿಂದಲೇ ಈ ದೇಹದಲ್ಲಿ ಪೂರ್ಣಕಾಲದ ಉತ್ತಮ ಜೀವನವನ್ನು ನಾವು ನಡೆಸಬಹುದೆಂಬುದೇ ಇದರ ಅಭಿಪ್ರಾಯವಾಗಿದೆ.

ಈ ರೀತಿಯಲ್ಲಿ ನಮ್ಮ ಜೀವನದಲ್ಲೂ ಮರಣದಲ್ಲೂ ನಮ್ಮ ಜೊತೆಗೇ ಇರುವ ನಮಗೆ ಅತ್ಯಂತ ಉಪಕಾರಕನೂ ನಮ್ಮ ಪರಮಸುಖನೂ ಆದ ಪರಮಾತ್ಮನನ್ನು ನಾವು ಎಂದಿಗೂ ತ್ಯಜಿಸಬಾರದು. ಪರಮಾತ್ಮನ ಪರಿತ್ಯಾಗದ ಅನೇಕ ಪ್ರಕಾರಗಳಿವೆ. ಪರಮಾತ್ಮನೇ ಇಲ್ಲವೆನ್ನುವ ನಾಸ್ತಿಕ್ಯವಾದ, ಅವನ ಸರ್ವೋತ್ತಮತ್ವದ ನಿರಾಕರಣ, ಅವನಲ್ಲಿರುವ ಐಶ್ವರ್ಯಾದಿ ಗುಣಗಳನ್ನೆಲ್ಲಾ ಕಾಲ್ಪನಿಕವೆನ್ನುವುದು, ಜೀವಜಡಾದಿಗಳಿಗೂ ಅವನಿಗೂ ಭೇದವಿಲ್ಲವೆಂದು ಹೇಳಿ ಅವನ ಮಹತ್ವವನ್ನು ಕುಗ್ಗಿಸುವುದು, ಅವನು ನಿರ್ಮಿಸಿದ ಜಗತ್ತನ್ನು ಸ್ವಪ್ನದಂತೆ ಮಾಯೆಯೆಂದು ಭಾವಿಸುವುದು, ಅಚಿಂತ್ಯ ವಿಭವನೂ ಸರ್ವಶಕ್ತನೂ ಆದ ಅವನ ಮೇಲೆ ಕುತರ್ಕಗಳ ಧಾಳಿಯನ್ನು ಮಾಡುವುದು, ಇವೆಲ್ಲವುಗಳಿಂದಲೂ ನಾವು ನಮ್ಮ ಜೀವನದಿಂದ ಪರಮಾತ್ಮನನ್ನು ದೂರಗೊಳಿಸುತ್ತೇವೆ. ಇಂತಹ ಆತ್ಮಘಾತುಕ ಪ್ರವೃತ್ತಿಗೆ ಅವಕಾಶ ನೀಡದೆ ಭಗವಂತನ ನಿಷ್ಠಾವಂತ ಭಕ್ತರಾಗಿ ನಾವು ವರ್ತಿಸಬೇಕು.

ಬ್ರಹ್ಮಾದಿ ದೇವತೆಗಳ, ಜ್ಞಾನಿಗಳ, ಸಜ್ಜನರ ದೇಹವೇ ಒಂದು ವೀಣೆಯಾಗಿದೆ. ಮಾನವರು ಉಪಯೋಗಿಸುವ ಈ ವೀಣೆಯಿಂದ ಮಧುರ ಸಂಗೀತವು ಹೊರಹೊಮ್ಮುವಂತೆ ಈ ದೇಹ ವೀಣೆಯಿಂದ ಭಗವಂತನ ಮಹಿಮೆಯ ಮಂಗಲ ಗಾನವೇ ಪ್ರತಿಧ್ವನಿಸುತ್ತದೆ. ಅಂತಹ ಜ್ಞಾನಿಗಳ, ಭಕ್ತರ ಜೀವನವನ್ನು ನಾವು ಅನುಸರಿಸಲು ಪ್ರಯತ್ನಿಸಬೇಕು.

ಈ ಉಪನಿಷತ್ತು ಅಂತಿಮವಾಗಿ ತನ್ನ ಉಪಸಂಹಾರ ವಾಕ್ಯದಲ್ಲಿ ಶ್ರೀವಿಷ್ಣುವೇ ವೇದಪ್ರತಿ

ಪಾದ್ಯನೆಂದು ಪುನಃ ಒತ್ತಿ ಹೇಳುತ್ತದೆ. ''ವಿಷ್ಣು'' ಎಂಬ ಭಗವಂತನ ನಾಮದಲ್ಲಿ ''ಷ'', ''ಣ'' ಈ ಎರಡು ಶಬ್ದಗಳಿವೆ. ''ಣ''ಕಾರವು ಭಗವಂತನ ಬಲವನ್ನೂ ''ಷ''ಕಾರವು ಅವನ ವ್ಯಾಪ್ತಿ ಮತ್ತು ನಿಯಾಮಕತ್ವವನ್ನೂ ತಿಳಿಸುತ್ತದೆ. ''ವಿ'' ಶಬ್ದವು ಈ ಗುಣಗಳ ವಿಶಿಷ್ಟತೆಯನ್ನು ತಿಳಿಸುತ್ತದೆ. ವಿಶೇಷವಾದ ಬಲ, ಶಕ್ತಿ, ಪೂರ್ಣತೆ ಮತ್ತು ನಿಯಾಮಕತ್ವವು ಪರಮಾತ್ಮನಲ್ಲಿ ಸಹಜವಾಗಿ ಇದೆ ಎಂಬುದೇ ವಿಷ್ಣು ಶಬ್ದದ ಅರ್ಥವಾಗಿದೆ. ವೇದದ ಪ್ರತಿಯೊಂದು ಸಂಹಿತೆಯಲ್ಲಿಯೂ ಈ ಷಕಾರ, ಣಕಾರಗಳನ್ನು ತಿಳಿದುಕೊಳ್ಳಬೇಕು. ಅರ್ಥಾತ್ ಸಕಲ ವೇದಗಳಲ್ಲೂ ವಿಷ್ಣುವನ್ನು ತಿಳಿದುಕೊಳ್ಳಬೇಕು. ವಿಷ್ಣುವೇ ಸಕಲ ವೇದಾರ್ಥವಾಗಿದ್ದಾನೆ ಎಂಬುದಾಗಿ ವಿಷ್ಣುವಿನ ಸರ್ವೋತ್ತಮತ್ವವನ್ನು ಅಂತಿಮವಾಗಿ ಈ ಉಪನಿಷತ್ತು ಪ್ರತಿಪಾದಿಸುತ್ತದೆ.

('ಸರ್ವಮೂಲಗ್ರಂಥಗಳು' ಸಂಪುಟ –೨, ಉಪನಿಷತ್ ಭಾಷ್ಯಗಳು, ೧೯೭೭. ಪ್ರಕಾಶಕರು – ಅಖಿಲ ಭಾರತ ಮಾಧ್ವ ಮಹಾಮಂಡಲ, ಆನಂದತೀರ್ಥ ಪ್ರತಿಷ್ಠಾನ, ಬೆಂಗಳೂರು.)

●

೩ - ೯

ಛಾಂದೋಗ್ಯೋಪನಿಷತ್ ಸಾರ

ಛಾಂದೋಗ್ಯೋಪನಿಷತ್ತು ಸಾಕ್ಷಾತ್ ಹಯಗ್ರೀವದೇವರ ಮುಖದಿಂದ ಹೊರಹೊಮ್ಮಿದ ಪವಿತ್ರವಾದ ವಾಗ್ಝರಿ. ಈ ಉಪನಿಷತ್ತಿನಿಂದಲೇ ರಮಾದೇವಿಯು ಶೇಷಶಾಯಿಯಾದ ತನ್ನ ಪತಿಯನ್ನು ಹಾಡಿ ಹೊಗಳಿದ್ದಾಳೆ. ಹಯಗ್ರೀವರೂಪಿಯಾದ ಶ್ರೀವಿಷ್ಣುವೂ ಲಕ್ಷ್ಮೀದೇವಿಯೂ ಈ ಉಪನಿಷತ್ತಿನ ಋಷಿಗಳಾಗಿದ್ದರೆ ಲಕ್ಷ್ಮೀಪತಿಯಾದ ನಾರಾಯಣನೇ ಇದರ ಪ್ರತಿಪಾದ್ಯ ದೇವತೆಯಾಗಿದ್ದಾನೆ.

ಒಂದನೇ ಅಧ್ಯಾಯ

ಓಂಕಾರಪ್ರತಿಪಾದ್ಯನಾದ ಶ್ರೀಹರಿಯು ಸರ್ವೋತ್ತಮನು. ಓಂಕಾರವು ಸಕಲ ವೇದಗಳ ಮೂಲಗ್ರಂಥವಾಗಿದೆ. ಓಂಕಾರದ ವ್ಯಾಖ್ಯಾನರೂಪವಾಗಿ ಅದರ ಅರ್ಥವಿವರಣೆಯನ್ನು ನೀಡುವುದಕ್ಕಾಗಿಯೇ ಸಕಲ ವೇದಗಳು ಹೊರಟಿವೆ. ಸರ್ವವೇದಸಾರವಾದ ಈ ಓಂಕಾರವು ಪರಮಾತ್ಮ ನನ್ನೇ ಪ್ರತಿಪಾದಿಸುತ್ತದೆ. ಭಗವಂತನು ಜಗತ್ತಿನಲ್ಲಿ ಓತಪ್ರೋತನಾಗಿ ನಿಯಾಮಕನಾಗಿ ನೆಲೆಸಿದ್ದಾನೆ; ಜಗತ್ತು ಅವನನ್ನು ಆಶ್ರಯಿಸಿಕೊಂಡು ನಿಂತಿದೆ; ಅವನು ಸರ್ವೋತ್ತಮನೂ, ಜಗದ್ರಕ್ಷಕನೂ, ಸರ್ವಜ್ಞನೂ, ಪರಿಪೂರ್ಣನೂ ಆಗಿರುವವನು; ಮುಂತಾದ ಅನೇಕ ಅರ್ಥಗಳನ್ನು ಓಂಕಾರವು ಒಳಗೊಂಡಿದೆ. ಓಂಕಾರವು ಭಗವಂತನ ಗುಣವರ್ಣನಾತ್ಮಕವಾದ ಪವಿತ್ರ ನಾಮವಾದುದರಿಂದಲೇ ಅವನ ಸ್ತೋತ್ರ ಮಾಡುವಾಗಲೆಲ್ಲಾ ಓಂಕಾರವನ್ನು ಉಚ್ಚರಿಸಲಾಗುತ್ತದೆ. ಓಂಕಾರ ಪ್ರತಿಪಾದ್ಯನಾದ ಶ್ರೀಹರಿಯನ್ನೇ ಉದ್ಗೀಥನೆಂಬುದಾಗಿ ಈ ಉಪನಿಷತ್ತಿನಲ್ಲಿ ಕರೆಯಲಾಗಿದೆ.

ಭೂಮಿ, ನೀರು ಮುಂತಾದ ಬೇರೆ ಬೇರೆ ವಸ್ತುಗಳ ಅಭಿಮಾನಿಗಳಾದ ಎಲ್ಲ ದೇವತೆಗಳಿಗಿಂತಲೂ ಮುಖ್ಯಪ್ರಾಣನು ಶ್ರೇಷ್ಠನು. ಅವನಿಗಿಂತಲೂ ಉದ್ಗೀಥನೆಂದು ಇಲ್ಲಿ ವರ್ಣಿತವಾಗಿರುವ ಶ್ರೀಹರಿಯು ಶ್ರೇಷ್ಠನಾಗಿದ್ದಾನೆ. ಅವನು ಸರ್ವೋತ್ತಮನಾಗಿರುವವನು. ಅವನನ್ನು ಪರಮಪರಾರ್ಧ್ಯರಸತಮನೆಂದು ಉಪನಿಷತ್ತು ವರ್ಣಿಸುತ್ತದೆ. ಭಗವಂತನು ನಮ್ಮೆಲ್ಲರಿಗಿಂತಲೂ ಇಷ್ಟುಪಾಲು ಮಿಗಿಲು ಎಂಬುದಾಗಿ ಆತನ ಶ್ರೇಷ್ಠತೆಯನ್ನು ಅಳೆಯಲು ಉಪನಿಷತ್ತಿಗೆ ಸಂಖ್ಯೆಯೇ ದೊರೆಯಲಿಲ್ಲ. ಲೋಕದಲ್ಲಿ ಪರಾರ್ಧ ಸಂಖ್ಯೆಗಿಂತ ಮಿಗಿಲಾದ ಸಂಖ್ಯೆಯಿಲ್ಲ. ಭಗವಂತನ ಮೇಲ್ಮೆಯನ್ನು ಅತ್ಯಂತ ದೊಡ್ಡದಾದ ಪರಾರ್ಧ

ಸಂಖ್ಯೆಯಿಂದಲೂ ಅಳೆಯಲು ಸಾಧ್ಯವಿಲ್ಲ. ಹೀಗೆ ಜಗತ್ತಿನಿಂದ ಅನಂತಪಾಲು ಮಿಗಿಲಾಗಿರುವ ಪರಮಾತ್ಮನ ಶ್ರೇಷ್ಠತೆಯನ್ನು ಅಳೆಯುವ ಸಂಖ್ಯೆಯು ದೊರೆಯದಿರುವುದರಿಂದ ಪರಾರ್ಧದ ಬದಲು ಪರಾರ್ಧ್ಯ ಎಂಬ ಪದವನ್ನು ಉಪನಿಷತ್ತು ಉಪಯೋಗಿಸಿದೆ. ಅತ್ಯಂತ ಶ್ರೇಷ್ಠವ್ಯಕ್ತಿಗಳೆನಿಸಿದ ರಸತಮ ವಸ್ತುಗಳಲ್ಲಿ ಮುಖ್ಯಪ್ರಾಣನು ಪರಾರ್ಧನೂ, ಲಕ್ಷ್ಮೀದೇವಿಯು ಪರಾರ್ಧಿಯೂ ಶ್ರೀಮನ್ನಾರಾಯಣನು ಪರಾರ್ಧ್ಯನೂ ಆಗಿರುವನು. ಜಗತ್ತಿನ ಸಕಲ ಚೇತನಗಣವೂ ಜ್ಞಾನಿವರ್ಗವೂ ಅಜ್ಞಾನಿವರ್ಗವೂ ಇವನ ನಿಯಂತ್ರಣದಲ್ಲಿಯೇ ಇದೆ. ಆದರೆ ಅಜ್ಞಾನಿಗಳು ತಾವು ಭಗವಂತನ ನಿಯಂತ್ರಣದಲ್ಲಿ ಇದ್ದೇವೆಂದು ತಿಳಿಯದೆ ತಾವೇ ಎಲ್ಲವನ್ನೂ ನಡೆಸುತ್ತಿದ್ದೇವೆಂಬ ಭ್ರಮೆಯಲ್ಲಿ ಇರುತ್ತಾರೆ. ಜ್ಞಾನಿಗಳು ತಮ್ಮ ಎಲ್ಲ ಕ್ರಿಯೆಗಳ ಹಿನ್ನೆಲೆಯಲ್ಲಿ ಭಗವಂತನ ಶಕ್ತಿಯನ್ನು ಕಾಣುತ್ತಾರೆ. ಇಂತಹ ಜ್ಞಾನಪೂರ್ವಕವಾದ ಕ್ರಿಯೆಗಳೇ ನಮ್ಮ ಮೋಕ್ಷಕ್ಕೆ ಕಾರಣವಾಗುತ್ತದೆ.

ಭಗವದುಪಾಸನೆಗೆ ಮುಖ್ಯಪ್ರಾಣನೇ ಪವಿತ್ರ ಪ್ರತಿಮೆ

ದೇವಾಸುರರ ಯುದ್ಧದಲ್ಲಿ ದೇವತೆಗಳು ಉದ್ಗೀಥರೂಪಿಯಾದ ಪರಮಾತ್ಮನ ಉಪಾಸನೆಯನ್ನು ಮಾಡಿ ಅವನ ಅನುಗ್ರಹದಿಂದ ಅಸುರರ ಮೇಲೆ ವಿಜಯವನ್ನು ಸಾಧಿಸಲು ಸಮರ್ಥರಾದರು. ಭಗವಂತನ ಉಪಾಸನೆಯನ್ನು ಮಾಡಲು ಪವಿತ್ರವಾದ ಪ್ರತಿಮೆಯ ಆವಶ್ಯಕತೆ ಇರುವುದರಿಂದ ಅಂತಹ ಪ್ರತಿಮೆಯನ್ನು ಹುಡುಕಲು ದೇವತೆಗಳು ಪ್ರಯತ್ನಿಸಿದರು. ಕಣ್ಣು , ಮೂಗು ಮುಂತಾದ ವಿವಿಧ ಇಂದ್ರಿಯಗಳ ಅಭಿಮಾನಿ ದೇವತೆಗಳನ್ನೇ ಪ್ರತಿಮೆಗಳೆಂದು ಪರಿಗಣಿಸಿ ಅಲ್ಲಿ ಪರಮಾತ್ಮನನ್ನು ಕಾಣಲು ದೇವತೆಗಳು ಮಾಡಿದ ಪ್ರಯತ್ನವನ್ನು ಅಸುರರು ವಿಫಲಗೊಳಿಸಿದರು. ಅಸುರರು ತಮ್ಮ ಆಕ್ರಮಣದಿಂದ ಆ ಅಭಿಮಾನಿ ದೇವತೆಗಳನ್ನು ದೂಷಿತಗೊಳಿಸಿದ್ದರಿಂದ ಆ ಅಶುದ್ಧ ಪ್ರತಿಮೆಗಳಲ್ಲಿ ಪರಮಾತ್ಮನನ್ನು ಉಪಾಸಿಸಲು ದೇವತೆಗಳಿಗೆ ಸಾಧ್ಯವಾಗಲಿಲ್ಲ. ಇಂದ್ರಿಯಾಭಿಮಾನಿ ದೇವತೆಗಳ ಮೇಲೆ ಅಸುರರ ಆಕ್ರಮಣವಾಗಿರುವುದರಿಂದಲೇ ಇಂದ್ರಿಯಗಳಿಂದ ಒಳ್ಳೆಯದು ಮತ್ತು ಕೆಟ್ಟದ್ದು ಇವೆರಡನ್ನೂ ನಾವು ಅನುಭವಿಸುತ್ತಿದ್ದೇವೆ. ಕಿವಿಯಿಂದ ಒಳ್ಳೆಯ ವಿಷಯವನ್ನೂ ಕೇಳುವಂತೆ ಕರ್ಕಶ ಸ್ವರವನ್ನೂ, ಕೆಟ್ಟ ವಿಷಯವನ್ನೂ ನಾವು ಕೇಳಲು ಈ ಅಸುರ ಶಕ್ತಿಯ ಪ್ರಭಾವವೇ ಕಾರಣವಾಗಿದೆ.

ಹೀಗೆ ಯಾವ ದೇವತೆಗಳಲ್ಲೂ ಭಗವಂತನನ್ನು ಧ್ಯಾನಿಸಲು ಸಾಧ್ಯವಾಗದೆ ಕೊನೆಗೆ ದೇವತೆಗಳು ಮುಖ್ಯಪ್ರಾಣನನ್ನು ಭಗವಂತನ ಪ್ರತಿಮೆಯೆಂದು ಪರಿಗ್ರಹಿಸಿ ಅಲ್ಲಿ ಉಪಾಸನೆ ಮಾಡಲು ಪ್ರವೃತ್ತರಾದರು. ಅಸುರರು ಅಲ್ಲಿಯೂ ತಮ್ಮ ಆಕ್ರಮಣವನ್ನು ಪ್ರಾರಂಭಿಸಿದರು. ಆದರೆ ಕಲ್ಲಿನ ಗೋಡೆಯ ಮೇಲೆ ಒಗೆದ ಮಣ್ಣಿನ ಹೆಂಟೆಯು ಪುಡಿಪುಡಿಯಾಗುವಂತೆ ಆಕ್ರಮಣಕಾರಿ ಅಸುರೀ ಶಕ್ತಿಗಳೇ ಮುಖ್ಯಪ್ರಾಣನ ಮುಂದೆ ಸೋತು ನುಚ್ಚು ನೂರಾದವು. ಮುಖ್ಯಪ್ರಾಣನನ್ನು ದೂಷಿತಗೊಳಿಸಲು ಅವುಗಳಿಗೆ ಸಾಧ್ಯವಾಗಲಿಲ್ಲ. ಅಂತಹ ಪರಿಶುದ್ಧನೂ ಅಚ್ಛೇದ್ಯಾಭೇದ್ಯನೂ ಆದ ಮುಖ್ಯಪ್ರಾಣನಲ್ಲಿ ನಿರಂತರವೂ ನೆಲೆಸಿರುವ ಭಗವದ್ರೂಪದ ಉಪಾಸನೆಯನ್ನು ನಡೆಸಿ ದೇವತೆಗಳು ವಿಜಯಿಗಳಾದರು. ಅಸುರರ ಪ್ರಭಾವಕ್ಕೆ ಒಳಗಾಗದ ಇಂತಹ ಪರಿಶುದ್ಧಸ್ವರೂಪನಾಗಿರುವುದರಿಂದಲೇ ಮುಖ್ಯಪ್ರಾಣನು ಯಾವ ಕೆಡುಕೂ ಇಲ್ಲದ ನಿರ್ಮಲವಾದ ಮಂಗಳಮಯವಾದ ಮುಕ್ತಿಯನ್ನು ನಮಗೆ ನೀಡಬಲ್ಲನು.

ಇಂದ್ರಿಯಗಳಿಗೆ ಬೇರೆ ಬೇರೆ ದೇವತೆಗಳು ಅಭಿಮಾನಿಗಳಾಗಿದ್ದರೆ ಜೀವಸ್ವರೂಪಕ್ಕೆ ಮುಖ್ಯಪ್ರಾಣನೇ ಅಭಿಮಾನಿ. ಅಸುರ ಪ್ರಭಾವಕ್ಕೆ ದೇವತೆಗಳು ಒಳಪಡುವುದರಿಂದಲೇ ಅವರು ನೆಲೆಸಿದ ಇಂದ್ರಿಯಗಳಿಂದ ಕೆಲವೊಮ್ಮೆ ಒಳ್ಳೆಯದನ್ನೂ, ಕೆಲವೊಮ್ಮೆ ಕೆಟ್ಟದ್ದನ್ನೂ ಅನುಭವಿಸುತ್ತೇವೆ. ಆದರೆ ಮುಕ್ತಿಯಲ್ಲಿ ಈ ಇಂದ್ರಿಯಗಳಿಲ್ಲ. ಜೀವಸ್ವರೂಪವು ಮಾತ್ರ ಇರುವುದು. ಮುಖ್ಯಪ್ರಾಣನು ನೆಲೆಸಿದ ಈ

ಜೀವಸ್ವರೂಪದಿಂದ ಮುಕ್ತಿಯಲ್ಲಿ ದಿವ್ಯ ಆನಂದ ಮುಂತಾದ ಒಳ್ಳೆಯ ಅನುಭವವಲ್ಲದೆ ಕೆಟ್ಟ ಅನುಭವವಾಗುವುದೇ ಇಲ್ಲ. ಅಸುರ ಪ್ರಭಾವಕ್ಕೆ ಒಳಪಡದ ಮುಖ್ಯಪ್ರಾಣನಿರುವುದೇ ಇದಕ್ಕೆ ಕಾರಣ. ಹೀಗೆ ಭಗವಂತನ ಮುಖ್ಯ ಸನ್ನಿಧಾನಪಾತ್ರನೂ ದೋಷವಿದೂರನೂ ಆದ ಮುಖ್ಯಪ್ರಾಣನೇ ಜೀವೋತ್ತಮನಾಗಿರುವನು. ಅವನಲ್ಲಿ ಉದ್ಗೀಥರೂಪಿಯಾದ ಭಗವಂತನನ್ನು ಉಪಾಸಿಸಬೇಕು.

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನರೆಂಬುದಾಗಿ ಪ್ರಾಣರು ಐವರು. ಈ ಪಂಚಪ್ರಾಣರೆಂದರೆ ಭೌತಿಕವಾದ ವಾಯುವಿನ ಐದು ಪ್ರಕಾರಗಳು ಮಾತ್ರವೇ ಅಲ್ಲ, ಇವುಗಳ ಅಭಿಮಾನಿಗಳಾದ ಮುಖ್ಯಪ್ರಾಣನ ಪುತ್ರರಾದ ಐದು ಪ್ರಾಣ ದೇವತೆಗಳೂ ಪಂಚಪ್ರಾಣರು. ಇದಕ್ಕಿಂತಲೂ ಮಿಗಿಲಾಗಿ ಗರುಡನ ಐದು ರೂಪಗಳೂ ಪಂಚಪ್ರಾಣರೆನಿಸುವರು. ಇದಕ್ಕಿಂತಲೂ ಮಿಗಿಲಾಗಿ ಮುಖ್ಯಪ್ರಾಣನದೇ ಆದ ಐದು ರೂಪಗಳೂ ಪಂಚಪ್ರಾಣರೆನಿಸುವರು. ಇದಲ್ಲದೆ ಶೇಷ ಗರುಡರೇ ಪ್ರಾಣ ಅಪಾನರು, ರುದ್ರ ಇಂದ್ರರೇ ಉದಾನ ಸಮಾನರು, ಮುಖ್ಯಪ್ರಾಣನೇ ವ್ಯಾನನೆನ್ನುವುದೂ ಇದೆ. ಈ ಐದು ಶಬ್ದಗಳು ಬೇರೆ ಬೇರೆ ದೇವತೆಗಳನ್ನು ಹೇಳಿದರೂ ಇವುಗಳಿಂದ ಮುಖ್ಯಪ್ರಾಣನೇ ಮುಖ್ಯ ಪ್ರತಿಪಾದ್ಯನಾಗಿರುವನು.

ಋಕ್‌ನಲ್ಲಿ ಸಾಮವನ್ನು ಜೋಡಿಸಿ ಭಗವಂತನನ್ನು ಗಾನದಿಂದ ಸ್ತುತಿಸುವೆವು. ಋಕ್‌ನಲ್ಲಿ ಭಾರತೀದೇವಿಯೂ, ಸಾಮದಲ್ಲಿ ವಾಯುದೇವರೂ ನೆಲೆಸಿದ್ದಾರೆ. ಈ ಭಾರತೀಮುಖ್ಯಪ್ರಾಣರು ಕಣ್ಣು ಮತ್ತು ಜೀವಸ್ವರೂಪ, ಕಿವಿ ಮತ್ತು ಮನಸ್ಸು ಮುಂತಾದ ಶರೀರದೊಳಗಿನ ವಸ್ತುಗಳಲ್ಲೂ ಭೂಮಿ ಮತ್ತು ಅಗ್ನಿ , ಆಕಾಶ ಮತ್ತು ವಾಯು ಮೊದಲಾದ ಶರೀರದ ಹೊರಗಿನ ಆದಿಭೌತಿಕ ವಸ್ತುಗಳಲ್ಲೂ ಇರುವರು. ಇವರಿಬ್ಬರಿಗಿಂತಲೂ ಶ್ರೇಷ್ಠನಾಗಿ ಹೊರಗೆ ಸೂರ್ಯಮಂಡಲದಲ್ಲೂ ಅಧಿಷ್ಠಿತನಾಗಿರುವ ಪರಬ್ರಹ್ಮರೂಪಿಯಾದ ಅತ್ಯಂತ ಸುಖರೂಪಿಯಾದ ಶ್ರೀಮನ್ನಾರಾಯಣನೇ ಉದ್ಗೀಥನು. ಜೀವಶ್ರೇಷ್ಠರಾದ ಈ ಭಾರತೀ ಮುಖ್ಯಪ್ರಾಣರು ಅವನ ಮಹಿಮೆಯನ್ನು ಗಾನ ಮಾಡುವರು. ಲೋಕದಲ್ಲೂ ಜನಮನ ರಂಜನೆಗಾಗಿ ಮಾಡುವ ಗಾನವೆಲ್ಲವೂ ಅವನಿಗೆ ಸೇರುವುದು. ಅವನಿಂದಲೇ ನಮಗೆ ಲೌಕಿಕ ಮತ್ತು ಆಧ್ಯಾತ್ಮಿಕ ಪುರುಷಾರ್ಥವು ದೊರೆಯುತ್ತದೆ.

'ಕಪ್ಯಾಸಂ ಪುಂಡರೀಕಂ'

ಈ ಸಂದರ್ಭದಲ್ಲಿ ಪರಮಾತ್ಮನನ್ನು ವರ್ಣಿಸುವಾಗ ''ತಸ್ಯ ಯಥಾ ಕಪ್ಯಾಸಂ ಪುಂಡರೀಕಂ ಏವಮಕ್ಷಿಣೀ'' ಎಂಬುದಾಗಿ ಉಪನಿಷತ್ತಿನಲ್ಲಿ ಒಂದು ವಾಕ್ಯವಿದೆ. ಕೆಲವರು ಇದನ್ನು ವ್ಯಾಖ್ಯಾನಿಸುತ್ತಾ ಕಪಿಪೃಷ್ಠದಂತೆ ಕೆಂಪಾಗಿರುವ ಕಮಲದಂತೆ ಭಗವಂತನ ಕಣ್ಣುಗಳಿವೆ ಎಂದು ಈ ವಾಕ್ಯಕ್ಕೆ ಅರ್ಥವನ್ನು ಬರೆದಿರುವರು. ಭಗವಂತನ ಕಣ್ಣುಗಳನ್ನು ವರ್ಣಿಸುವಾಗ ಕಪಿಪೃಷ್ಠದ ಉಲ್ಲೇಖವು ಯಾವುದೇ ರೀತಿಯಿಂದಲೂ ಶೋಭಿಸುವುದಿಲ್ಲ. ಇಲ್ಲಿ ಕಪ್ಯಾಸವೆಂದರೆ ಕಪಿಪೃಷ್ಠವಲ್ಲ. ನೀರಿಗೆ ಸಂಸ್ಕೃತ ಭಾಷೆಯಲ್ಲಿ 'ಕ' ಎಂಬುದಾಗಿ ಹೆಸರಿದೆ. ನೀರನ್ನು ಪಾನಮಾಡುವ ನಾಳದ ಮೇಲಿರುವ ಕಮಲದಂತೆ ವಿಕಸಿತವಾದ ನಯನವುಳ್ಳವನೆಂದು ಈ ವಾಕ್ಯವು ಭಗವಂತನನ್ನು ವರ್ಣಿಸಿದೆ. ನಾಳದಿಂದ ಬೇರೆಯಾದ ಕಮಲವು ಬಾಡಿರುತ್ತದೆ. ಪರಮಾತ್ಮನ ಕಣ್ಣು ನಾಳದಲ್ಲೇ ಇರುವ ತಾವರೆಯಂತೆ ಅರಳಿಕೊಂಡಿದೆಯೆಂಬ ಸುಂದರವಾದ ಅರ್ಥವನ್ನು ನಾವು ಆಚಾರ್ಯರ ಭಾಷ್ಯದಿಂದ ತಿಳಿದುಕೊಳ್ಳಬಹುದು.

ದೇವತೆಗಳು ಮೃತ್ಯುವಿಗೆ ಹೆದರಿ ಅದರಿಂದ ತಪ್ಪಿಸಿಕೊಳ್ಳಲು ವೇದವನ್ನು ಆಶ್ರಯಿಸಿದರು. ಆದರೆ ಮೀನು ನೀರಿನ ಒಳಗೆ ಇದ್ದರೂ ಹಕ್ಕಿಯು ಅದನ್ನು ನೋಡಿ ಹಿಡಿಯಲು ಉಪಕ್ರಮಿಸುವಂತೆ ದೇವತೆಗಳಿಗೂ ಮೃತ್ಯುವಿನ ದೃಷ್ಟಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಹಕ್ಕಿಯಿಂದ ತಪ್ಪಿಸಿಕೊಳ್ಳಲು ಮೀನು ನೀರಲ್ಲಿ ಇನ್ನೂ ಆಳಕ್ಕೆ ಹೋಗುವಂತೆ ದೇವತೆಗಳೂ ಓಂಕಾರ ಪ್ರತಿಪಾದ್ಯನಾದ ವಾಯುವಿನಲ್ಲಿ

ಅಧಿಷ್ಠಿತನಾದ ಭಗವಂತನನ್ನು ಆಶ್ರಯಿಸಿ ಮೃತ್ಯುವಿನಿಂದ ಪಾರಾಗಿ ಅಮೃತತ್ವವನ್ನು ಪಡೆದರು. ಪ್ರಣವ ಪ್ರತಿಪಾದ್ಯನಾದ ಭಗವಂತನನ್ನು ಹೇಳುವುದೇ ವೇದದ ಮುಖ್ಯ ಉದ್ದೇಶ. ಭಗವಂತನನ್ನು ತಿಳಿಯದೆ ಬರೇ ವೇದದಲ್ಲಿ ಓಡಾಡಿದರೆ ನೀರಿನ ಮೇಲ್ಭಾಗದಲ್ಲಿ ಚಲಿಸುವ ಮೀನು ಹಕ್ಕಿಗೆ ಬಲಿಯಾಗುವಂತೆ ಮೃತ್ಯುವು ನಮ್ಮನ್ನೂ ಕಬಳಿಸುತ್ತದೆ. ಮೀನು ನೀರಿನ ಆಳಕ್ಕೆ ಹೋಗಿ ತನ್ನನ್ನು ರಕ್ಷಿಸಿಕೊಳ್ಳುವಂತೆ ನಾವೂ ವೇದದ ಆಳಕ್ಕೆ ಇಳಿಯಬೇಕು. ವೇದದಲ್ಲಿ ಆಪಾತವಾಗಿ ತೋರುವ ಅರ್ಥವನ್ನು ಗ್ರಹಿಸದೆ ಅದರ ಅಂತರಾರ್ಥವಾದ ಪರಮಾತ್ಮನನ್ನು ತಿಳಿದುಕೊಂಡಾಗ ಮೃತ್ಯುವಿನ ಭಯವಿಲ್ಲದೆ ಅಮೃತತ್ವವನ್ನು ಹೊಂದಬಹುದೆಂಬುದೇ ಈ ವರ್ಣನೆಯ ಸಾರವಾಗಿದೆ.

ಶಿಲಕ ಶಾಲಾವತ್ಯ, ಚೇಕಿತಾಯನ ದಾಲ್ಭ್ಯ, ಪ್ರವಾಹಣ ಜೈಬಿಲಿ ಎಂಬ ಮೂವರು ಜ್ಞಾನಿಗಳು ತಾತ್ವಿಕ ಸಂವಾದವನ್ನು ನಡೆಸಿದರು. ಸಾಮದ ಆಶ್ರಯನು ಯಾರು ಎಂಬ ಪ್ರಶ್ನೆಯಿಂದ ಈ ಸಂವಾದವು ಆರಂಭವಾಯಿತು. ಸಾಮಕ್ಕೆ ಸ್ವರವು ನೆಲೆಯೆಂದೂ, ಸ್ವರಕ್ಕೆ ಪ್ರಾಣವೂ, ಪ್ರಾಣಕ್ಕೆ ಅನ್ನವೂ, ಅನ್ನಕ್ಕೆ ನೀರೂ, ಇವುಗಳಿಗೆ ಪರಮಾತ್ಮನೂ ನೆಲೆಯೆಂದು ಹೇಳಿ ಚೇಕಿತಾಯನ ದಾಲ್ಭ್ಯನು ವಿರಮಿಸಿದನು. ಪರಲೋಕಕ್ಕೆ ಸಾಧನ ಭೂಮಿಯಾದ ಈ ಲೋಕವೇ ಆಶ್ರಯವೆಂದು ಹೇಳಿ ಶಿಲಕ ಶಾಲಾವತ್ಯನು ಮುಕ್ತಾಯ ಗೊಳಿಸಿದರೆ ''ಈ ಲೋಕಕ್ಕೂ ಆಶ್ರಯವಿದೆ. ಅದೇ ಆಕಾಶ. ಸರ್ವಭೂತಗಳೂ ಆಕಾಶದಿಂದಲೇ ಹುಟ್ಟು ಸಾವುಗಳನ್ನು ಪಡೆಯುತ್ತವೆ. ಅದೇ ಸರ್ವಶ್ರೇಷ್ಠ'' ಎಂದು ಪ್ರವಾಹಣ ಜೈಬಿಲಿಯು ನಿರ್ಣಯವನ್ನು ಹೇಳಿ ಈ ಸಂವಾದದ ಉಪಸಂಹಾರವನ್ನು ಮಾಡಿದನು. ಇಲ್ಲಿ ಕೇವಲವಾಗಿ ಜಡವಸ್ತುಗಳ ಮತ್ತು ಈ ಲೋಕ ಪರಲೋಕಗಳ ನೆಲೆಯ ವಿಮರ್ಶೆಯನ್ನು ಮಾಡಿಲ್ಲ. ಈ ಎಲ್ಲ ವಸ್ತುಗಳ ಅಭಿಮಾನಿಗಳಾದ ದೇವತೆಗಳ ತಾರತಮ್ಯವನ್ನು ಇಲ್ಲಿ ಉಪನಿಷತ್ತು ಪ್ರತಿಪಾದಿಸುತ್ತದೆ. ಚೇಕಿತಾಯನ ದಾಲ್ಭ್ಯನು ಸಾಮದ ಅಭಿಮಾನಿಯಾದ ಅಗ್ನಿ, ಸ್ವರದ ಅಭಿಮಾನಿಯಾದ ವರುಣ, ಪ್ರಾಣವಾಯುವಿನ ಅಭಿಮಾನಿ ಸೂರ್ಯ, ಅನ್ನಾಭಿಮಾನಿ ದಕ್ಷ, ನೀರಿನ ಅಭಿಮಾನಿ ಇಂದ್ರ, ಪರಲೋಕದ ಅಭಿಮಾನಿ ರುದ್ರದೇವರು ಇವರುಗಳಲ್ಲಿ ಮೊದಲಿನ ದೇವತೆಗಿಂತ ಮುಂದಿನ ದೇವತೆಯ ಶ್ರೇಷ್ಠತೆಯನ್ನು ಹೇಳಿ ರುದ್ರದೇವರಲ್ಲಿ ಕೊನೆಗಾಣಿಸಿದಾಗ ಶಿಲಕ ಶಾಲಾವತ್ಯನು ಅದನ್ನು ಆಕ್ಷೇಪಿಸಿ ಈ ಲೋಕದ ಅಭಿಮಾನಿಯಾದ ಬ್ರಹ್ಮದೇವರೇ ಪರದೇವತೆಯೆಂದು ಪ್ರತಿಪಾದಿಸುತ್ತಾನೆ. ಪ್ರವಹಣ ಜೈಬಿಲಿಯು ಸರ್ವಭೂತ ಕಾರಣನಾದ, ಬ್ರಹ್ಮದೇವರಿಗಿಂತಲೂ ಶ್ರೇಷ್ಠನಾದ ಉದ್ಗೀಥರೂಪಿಯಾದ ಶ್ರೀನಾರಾಯಣನೇ ಸರ್ವೋತ್ತಮನೆಂದು ನಿರ್ಣಯವನ್ನು ಹೇಳುವನು. ಆಕಾಶವೆಂದರೆ ಜಡ ವಸ್ತುವಲ್ಲ. ಎಲ್ಲವನ್ನೂ ವ್ಯಾಪಿಸಿ ಪ್ರಕಾಶಿಸುವ ಶ್ರೀಹರಿಯೇ ಆಕಾಶನೆಂಬುದಾಗಿ ಬ್ರಹ್ಮಸೂತ್ರವೂ ಸಮರ್ಥಿಸಿದೆ.

ಸಾಮ ಮತ್ತು ಪ್ರಕೃತಿಗಳಲ್ಲಿ ಭಗವಂತನ ಚಿಂತನೆ

ಉಷಸ್ತಿ ಚಾಕ್ರಾಯಣನು ಒಂದು ಮಹಾಯಜ್ಞದಲ್ಲಿ ಭಾಗವಹಿಸಿದ, ಪ್ರಸ್ತೋತೃ, ಪ್ರತಿಹರ್ತೃ ಮತ್ತು ಉದ್ಗಾತೃಗಳಲ್ಲಿ ಪ್ರಸ್ತಾವ ಪ್ರತಿಹಾರ ಉದ್ಗೀಥಗಳ ಒಳಗೆ ಇರುವ ದೇವತೆಯ ಬಗ್ಗೆ ಪ್ರಶ್ನಿಸಿದನು. ಅವರೆಲ್ಲರೂ ಉತ್ತರಿಸಲಾರದೆ ಸುಮ್ಮನಾದರು. ಯಜ್ಞದ ಯಜಮಾನನಾದ ರಾಜನು ಉಷಸ್ತಿಚಾಕ್ರಾಯಣನಲ್ಲಿ ಜಿಜ್ಞಾಸುವಾಗಿ ಪ್ರಾರ್ಥಿಸಿದಾಗ ಆತನು ಈ ಮೂರಲ್ಲೂ ಅಂತರ್ಯಾಮಿಯಾಗಿರುವ ಪ್ರಾಣ, ಆದಿತ್ಯ, ಅನ್ನರೆಂಬ ಭಗವದ್ರೂಪಗಳನ್ನು ತಿಳಿಸುತ್ತಾನೆ. ಪ್ರಾಣನ ಒಳಗೆ ಇರುವ ಪ್ರಾಣರೂಪಿಯಾದ ಭಗವಂತನಿಂದಲೇ ಎಲ್ಲ ವಸ್ತುಗಳ ಉತ್ಪತ್ತಿಯಾಗುತ್ತದೆ. ಅವನು ಪ್ರಸ್ತಾವ ದೇವತೆಯು. ಸೂರ್ಯನಲ್ಲಿರುವ ಭಗವಂತನೇ ಎಲ್ಲರ ಸ್ತೋತ್ರವನ್ನು ಸ್ವೀಕರಿಸುವ ಉದ್ಗಾನ ದೇವತೆ.

ಅನ್ನದೊಳಗೆ ಇದ್ದು ಎಲ್ಲರ ಉಪಜೀವನಕ್ಕೆ ಕಾರಣನಾದ ಅನ್ನರೂಪಿಯಾದ ಭಗವಂತನೇ ಪ್ರತಿಹಾರ ದೇವತೆಯೆಂದು ಇಲ್ಲಿ ವಿವರಿಸಲಾಗಿದೆ.

ಎರಡನೆಯ ಅಧ್ಯಾಯ

ಹಿಂಕಾರ, ಪ್ರಸ್ತಾವ, ಉದ್ಗೀಥ, ಪ್ರತಿಹಾರ, ನಿಧನ ಎಂಬುದಾಗಿ ಸಾಮಗಾನದ ಐದು ಭಾಗಗಳು. ಈ ಐದು ಸಾಮ ಭಾಗಗಳಿಂದ ಪಂಚ ರೂಪಿಯಾದ ಭಗವಂತನು ಪ್ರತಿಪಾದ್ಯನು. ಭಗವಂತನ ಪ್ರದ್ಯುಮ್ನ, ವಾಸುದೇವ, ನಾರಾಯಣ, ಅನಿರುದ್ಧ, ಸಂಕರ್ಷಣ ರೂಪಗಳು ಕ್ರಮವಾಗಿ ಪ್ರಥ್ವೀ, ಅಗ್ನಿ, ಆಕಾಶ, ಸೂರ್ಯ, ದ್ಯುಲೋಕಗಳಲ್ಲಿ ನೆಲೆಸಿವೆ. ಈ ಐದು ರೂಪಗಳೇ ಕ್ರಮವಾಗಿ ಸಾಮಗಳ ಐದು ಭಾಗಗಳಿಂದ ಪ್ರತಿಪಾದ್ಯವಾಗಿವೆ. ಮಳೆಯುಂಟಾಗುವಾಗ ಸಾಮಾನ್ಯ ಐದು ಸನ್ನಿವೇಶಗಳನ್ನು ನಾವು ಕಾಣುತ್ತೇವೆ. ಗಾಳಿ, ಮೋಡ, ಮಳೆನೀರು, ಮಿಂಚು, ಗುಡುಗುಗಳೇ ಮಳೆಯ ಐದು ಸನ್ನಿವೇಶಗಳು. ಭಗವಂತನ ಈ ಐದು ರೂಪಗಳನ್ನು ಮಳೆಯ ಈ ಐದು ಅವಸ್ಥೆಗಳಲ್ಲಿ ಕ್ರಮವಾಗಿ ನಾವು ಕಾಣಬೇಕು. ಆಕಾಶದಲ್ಲಿ ಮೋಡ ಚಲಿಸುತ್ತದೆ. ಮಳೆ ಸುರಿಯುತ್ತದೆ. ಪೂರ್ವಕ್ಕೂ ಪಶ್ಚಿಮಕ್ಕೂ ನೀರು ಹರಿಯುತ್ತದೆ. ಕೊನೆಗೆ ಈ ನೀರು ಸಮುದ್ರವನ್ನು ಸೇರುತ್ತದೆ. ಇದು ನೀರಿನ ಐದು ಅವಸ್ಥೆಗಳು. ಇವುಗಳಲ್ಲೂ ಹಿಂದೆ ಹೇಳಿದ ಭಗವಂತನ ಐದು ರೂಪಗಳನ್ನು ಚಿಂತಿಸಬೇಕು. ಅದರಂತೆ ವಸಂತ, ಬೇಸಿಗೆ, ಮಳೆ, ಶರತ್, ಚಳಿ ಎನ್ನುವ ಕಾಲದ ಐದು ಪ್ರಕಾರಗಳಲ್ಲಿ ಭಗವಂತನ ಐದು ರೂಪಗಳ ಉಪಾಸನೆಯನ್ನು ಮಾಡಬೇಕು. ಇದೇ ರೀತಿಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಭಗವಂತನ ಧ್ಯಾನದ ರೀತಿಯನ್ನು ಉಪನಿಷತ್ತು ಪ್ರತಿಪಾದಿಸುತ್ತದೆ. ಉಪನಿಷತ್ತಿನ ವಾಕ್ಯಗಳನ್ನು ಸ್ಥೂಲವಾಗಿ ಗಮನಿಸಿದಾಗ ಹಿಂಕಾರ, ಪ್ರಸ್ತಾವ ಮುಂತಾದ ಸಾಮಗಳಿಗೂ ಮಳೆನೀರು ಋತುಗಳಿಗೂ ಸಂಬಂಧವೇನೆಂದು ನಮಗೆ ಅರ್ಥವಾಗದೆ ಗೊಂದಲವುಂಟಾಗಬಹುದು. ಪುರಾಣಗಳಲ್ಲಿರುವ ಉಪನಿಷತ್ತುಗಳ ವ್ಯಾಖ್ಯಾನವನ್ನು ಉಲ್ಲೇಖಿಸಿ ಸಾಮಪ್ರತಿಪಾದ್ಯವಾದ ಪರಮಾತ್ಮನ ಪ್ರದ್ಯುಮ್ನ ಮೊದಲಾದ ರೂಪಗಳಿಗೆ ಭಿನ್ನ ಭಿನ್ನ ವಸ್ತುಗಳನ್ನೂ, ವಿವಿಧ ಅವಸ್ಥೆಗಳನ್ನೂ ಪ್ರತೀಕಗಳೆಂದು ವಿವರಿಸಿ ಅಲ್ಲಿ ಭಗವಂತನ ಈ ರೂಪಗಳನ್ನು ಚಿಂತಿಸಬೇಕೆಂದು ಶ್ರೀಮಧ್ವಾಚಾರ್ಯರು ಇವುಗಳಿಗೆ ಆಧ್ಯಾತ್ಮಿಕ ಅರ್ಥವನ್ನು ಪ್ರತಿಪಾದಿಸಿ ಈ ಗೊಂದಲವನ್ನು ಪರಿಹಾರ ಮಾಡಿದ್ದಾರೆ. ಅಲ್ಲದೆ ಉಪನಿಷತ್ತುಗಳಲ್ಲಿ ಅಸಂಬದ್ಧವಾದ ಬಾಲಭಾಷೆಯ ಮಾತುಗಳೇ ತುಂಬಿವೆಯೆನ್ನುವ ಭಾವನೆಯನ್ನು ತೊಡೆದು ಹಾಕಿ ಉಪನಿಷತ್ತಿನ ರಹಸ್ಯವನ್ನು ಹೊರಗೆಡಹಿದ್ದಾರೆ.

ಹಿಂದೆ ಹೇಳಿದ ಐದು ಸಾಮಗಳ ಜೊತೆಗೆ ಆದಿ, ಉಪದ್ರವಗಳೆಂಬ ಮತ್ತೆರಡು ಸಾಮಗಳನ್ನು ಸೇರಿಸಿ ಅವುಗಳಿಂದ ಪ್ರತಿಪಾದ್ಯನಾದ ವರಾಹ, ನರಸಿಂಹ ರೂಪಗಳ ಜೊತೆಗೆ ಹಿಂದೆ ಹೇಳಿದ ಐದು ರೂಪಗಳ ಉಪಾಸನೆಯನ್ನು ಈ ಉಪನಿಷತ್ತು ತಿಳಿಸುತ್ತದೆ. ಉದಯದಿಂದ ಅಸ್ತಮಾನದವರೆಗೆ ಸೂರ್ಯಗತಿಯ ವಿವಿಧ ಘಟ್ಟಗಳಲ್ಲಿ ಭಗವಂತನ ಈ ಏಳು ರೂಪಗಳನ್ನು ನಾವು ಚಿಂತಿಸಬೇಕು. ಸೂರ್ಯೋದಯಕ್ಕಿಂತ ಮೊದಲು ಪ್ರದ್ಯುಮ್ನನನ್ನು ಸೂರ್ಯನಲ್ಲಿ ಕಾಣಬೇಕು. ಪಶುಗಳು ಭಗವಂತನ ಈ ರೂಪವನ್ನೇ ಅವಲಂಬಿಸಿ ಬದುಕುತ್ತವೆ. ಉದಯಕಾಲದಲ್ಲಿ ಮನುಷ್ಯರಿಗೆ ಆಶ್ರಯಭೂತನಾದ ವಾಸುದೇವನನ್ನು ಅದರ ನಂತರ ಮಧ್ಯಾಹ್ನದವರೆಗೆ ಹಕ್ಕಿಗಳಿಗೆ ಆಧಾರನಾಗಿರುವ ವರಾಹನನ್ನು ಮಧ್ಯಾಹ್ನದಲ್ಲಿ ದೇವತೆಗಳಿಗೆ ಆಶ್ರಯನಾದ ನಾರಾಯಣನನ್ನೂ ಅದರ ನಂತರ ಅಪರಾಹ್ನದ ಮೊದಲು ಗರ್ಭದಲ್ಲಿರುವ ಪ್ರಾಣಿಗಳಿಗೆ ಆಶ್ರಯದಾತನಾದ ಅನಿರುದ್ಧನನ್ನೂ, ಅದರ ನಂತರ ಅಸ್ತಮಾನದವರೆಗಿನ ಕಾಲದಲ್ಲಿ ಅರಣ್ಯದ ಮೃಗಗಳಿಗೆ ನೆಲೆಯಾದ ನರಸಿಂಹನನ್ನೂ ಅಸ್ತಮಾನದಲ್ಲಿ ಪಿತೃಗಳಿಗೆ ಆಧಾರನಾದ

ಸಂಕರ್ಷಣನನ್ನೂ ಸೂರ್ಯನಲ್ಲಿ ಉಪಾಸಿಸಬೇಕು. ಹೀಗೆ ಉದಯಕಾಲ, ಮಧ್ಯಾಹ್ನ ಮತ್ತು ಅಸ್ತಕಾಲಗಳಲ್ಲಿ ಮಾನವರು, ದೇವತೆಗಳು ಮತ್ತು ಪಿತೃಗಳಿಗೆ ನೆಲೆಯಾಗಿರುವ ವಾಸುದೇವ, ನಾರಾಯಣ, ಸಂಕರ್ಷಣ ರೂಪಗಳು ಸೂರ್ಯನಲ್ಲಿ ಇರುವುದರಿಂದ ಈ ಮೂರುಕಾಲಗಳಲ್ಲಿ ಸಂಧ್ಯಾವಂದನೆಗೆ ವಿಶೇಷ ಮಹತ್ವವನ್ನು ನೀಡಲಾಗಿದೆ. ಇದೇ ರೀತಿಯಲ್ಲಿ ಇನ್ನೂ ಬೇರೆ ಬೇರೆ ಕಡೆಗಳಲ್ಲಿ ವಿವಿಧ ಹಂತಗಳಲ್ಲಿ ಈ ಏಳು ರೂಪಗಳ ಚಿಂತನೆಯ ಪ್ರಕ್ರಿಯೆಯನ್ನು ಈ ಉಪನಿಷತ್ತಿನಲ್ಲಿ ವಿವರಿಸಲಾಗಿದೆ.

ಹಿಂಕಾರ, ಉದ್ಗೀಥ ಮುಂತಾದ ಏಳು ವಿಧವಾದ ಸಾಮದ ಹೆಸರುಗಳಲ್ಲಿ ಒಟ್ಟು ಇಪ್ಪತ್ತೆರಡು ಅಕ್ಷರಗಳಿವೆ. ಇಷ್ಟರವರೆಗೆ ಹೇಳಿದ ಸಾಮ ಪ್ರತಿಪಾದ್ಯಗಳಾದ ಏಳು ರೂಪಗಳೇ ಇಪ್ಪತ್ತೊಂದು ರೂಪಗಳನ್ನು ಪಡೆಯುತ್ತವೆ. ಕೇಶವನಿಂದ ದಾಮೋದರನವರೆಗೆ ಹನ್ನೆರಡು, ಬುದ್ಧನ ಹೊರತು ಮತ್ಸ್ಯನಿಂದ ಕಲ್ಕಿಯವರೆಗೆ ಒಂಭತ್ತು ರೂಪಗಳು. ಈ ಇಪ್ಪತ್ತೊಂದು ರೂಪಗಳೇ ಇಪ್ಪತ್ತೊಂದು ಅಕ್ಷರಗಳಿಂದ ಪ್ರತಿಪಾದ್ಯಗಳು. ಕೊನೆಯ ಅಕ್ಷರವು ಸಮುದ್ರ ಶಾಯಿಯಾದ ಭಗವಂತನನ್ನೇ ಪ್ರತಿಪಾದಿಸುತ್ತದೆ. ಹನ್ನೆರಡು ತಿಂಗಳು, ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತಗಳೆಂಬ ಐದು ಋತುಗಳಲ್ಲಿ, ಭೂಮಿ, ಆಕಾಶ, ಸ್ವರ್ಗಲೋಕ, ಸೂರ್ಯರಲ್ಲಿ ಈ ರೂಪಗಳನ್ನು ಚಿಂತಿಸಬೇಕು.

'ಸರ್ವಂ ಹ ಭವತಿ'

ಇಂತಹ ಉಪಾಸಕನಿಗೆ ಫಲವನ್ನು ನಿರೂಪಿಸುವ ''ಸರ್ವಂ ಹ ಭವತಿ'' ಎಲ್ಲವೂ ಅವನೇ ಆಗುವನೆಂಬ ಅರ್ಥ ಬರುವಂತಹ ವಾಕ್ಯವು ಉಪನಿಷತ್ತಿನಲ್ಲಿ ಕಂಡು ಬರುತ್ತದೆ. ಎಲ್ಲವೂ ತಾನೇ ಆಗುವುದು ಯಾರಿಗೂ ಇಷ್ಟವಲ್ಲ.

ಈ ಜಗತ್ತಿನಲ್ಲಿ ದೋಷಗುಣಗಳು ತುಂಬಿವೆ. ಇಂತಹ ಕಶ್ಮಲ ಪೂರಿತವಾದ ವಸ್ತುವು ತಾನಾಗಬೇಕೆಂದು ಯಾರೂ ಬಯಸಲಾರರು. ತಾನು ಸರ್ವ ಸ್ವರೂಪಿಯಾಗುವುದೆಂದರೆ ಈ ಜಡ ಪ್ರಪಂಚವೇ ತಾನಾಗುವುದೆಂದಾಗಲೀ ದು:ಖ ಜರ್ಜರಿತರಾದ ಸಕಲ ಪ್ರಾಣಿಗಳೂ ತಾವಾಗುವುದೆಂದಾಗಲೀ ಅರ್ಥವಲ್ಲ. ತಾನು ಸರ್ವನಾಗುವುದೆಂದರೆ ತನ್ನ ಎಲ್ಲೆಯನ್ನು ಪೂರ್ತಿಯಾಗಿ ತಲುಪುವುದು. ತನ್ನ ಯೋಗ್ಯತೆಯ ಅಂತಿಮ ಮಟ್ಟವನ್ನು ತಾನು ಮುಟ್ಟವುದು ಎಂಬುದೇ ಅರ್ಥ. ಮುಕ್ತಿಯಲ್ಲಿ ಪ್ರತಿಯೊಬ್ಬರೂ ತನ್ನ ಯೋಗ್ಯತೆಗೆ ಅನುಗುಣವಾದ ಪೂರ್ಣತ್ವವನ್ನು ಪಡೆಯುವುದರಿಂದಲೇ ಎಲ್ಲರೂ ಸರ್ವಸ್ವರೂಪಿಗಳೆನಿಸುವುದು. ಆದುದರಿಂದಲೇ ಪರಮಾತ್ಮನು ಪರಿಪೂರ್ಣನಾದುದರಿಂದ ಅವನನ್ನು ''ಸರ್ವ'' ಎಂಬುದಾಗಿ ಉಪಾಸನೆ ಮಾಡಬೇಕೆಂದು ಈ ಉಪನಿಷತ್ತು ನಿರೂಪಿಸಿದೆ. ಹಿಂದಿನ ವಾಕ್ಯದಲ್ಲಿ ''ನ ಜ್ಯಾಯಃ ಪರಮನ್ಯದಸ್ತಿ'' ಎಂಬುದಾಗಿ ಪರಮಾತ್ಮನಿಂದ ಭಿನ್ನವಾದ ಇನ್ನೊಂದು ಶ್ರೇಷ್ಠತಮ ವಸ್ತುವೇ ಇಲ್ಲವೆಂದು ಹೇಳಿದೆ. ಎಲ್ಲವೂ ಬ್ರಹ್ಮನೇ ಆಗಿದ್ದರೆ ಬೇರೆ ವಸ್ತುವೇ ಇಲ್ಲವೆಂದು ಹೇಳಬೇಕಿತ್ತು. ಇನ್ನೊಂದು ಶ್ರೇಷ್ಠತಮ ವಸ್ತುವಿಲ್ಲವೆಂದು ಹೇಳುವುದರಿಂದ ಬ್ರಹ್ಮನಿಗಿಂತ ಭಿನ್ನವಾದ ವಸ್ತುವಿನ ಅಸ್ತಿತ್ವವನ್ನು ಈ ಉಪನಿಷತ್ತೂ ಒಪ್ಪಿದೆ. ಆದುದರಿಂದ ಜಡ ಚೇತನಾತ್ಮಕವಾದ ಎಲ್ಲ ವಸ್ತುಗಳೂ ಬ್ರಹ್ಮನೆಂದಾಗಲೀ ಸಾಧಕನಾದ ಜೀವನೇ ಎಲ್ಲವೂ ಆಗುವನೆಂದಾಗಲೀ ಈ ಉಪನಿಷತ್ತಿನ ಅರ್ಥವಾಗಿರದೆ ತನ್ನ ಪೂರ್ಣತ್ವವನ್ನು ಪಡೆದು ಮುಕ್ತನಾಗುವನೆಂಬುದೇ ಅದರ ಆಶಯವಾಗಿದೆ.

ಮುಕ್ತಿಯನ್ನು ಪಡೆಯಲು ಬ್ರಹ್ಮನ ಸಾಕ್ಷಾತ್ಕಾರವೇ ಮುಖ್ಯ ಸಾಧನ. ಗೃಹಸ್ಥರಿಗೆ ಮುಕ್ತಿಯಿಲ್ಲ. ಸನ್ಯಾಸಿಗಳಿಗೆ ಮಾತ್ರ ಮೋಕ್ಷವೆಂದು ಕೆಲವರು ಮುಕ್ತಿಯನ್ನು ಕೆಲವು ಆಶ್ರಮಗಳಿಗೆ ಮಾತ್ರ ಸೀಮಿತಗೊಳಿಸಿದ್ದಾರೆ. ತತ್ವಜ್ಞಾನವೇ ಮೋಕ್ಷಕ್ಕೆ ಸಾಧನವೆಂದು ಸ್ಪಷ್ಟವಾಗಿ ಉಪನಿಷತ್ತಿನಲ್ಲಿ ಉಲ್ಲೇಖವಿದೆ. ಆದುದರಿಂದ ಬ್ರಹ್ಮಚಾರಿಗಳಾಗಲೀ ಗೃಹಸ್ಥರಾಗಲೀ ತತ್ವಜ್ಞಾನವನ್ನು ಹೊಂದಿದಲ್ಲಿ ಅವರಿಗೆ ಮುಕ್ತಿಯು

ದೊರೆಯಲೇಬೇಕು. ಯಜ್ಞ, ಅಧ್ಯಯನ, ದಾನಗಳಲ್ಲಿ ನಿರತರಾದ ಗೃಹಸ್ಥರೂ ತಪಸ್ಸನ್ನು ಆಚರಿಸುತ್ತಿರುವ ವಾನಪ್ರಸ್ಥರೂ, ಸನ್ಯಾಸಿಗಳೂ ಅಧ್ಯಯನದಲ್ಲೇ ಮಗ್ನರಾದ ಬ್ರಹ್ಮಚಾರಿಗಳೂ ತಮ್ಮ ಸ್ವಕರ್ತವ್ಯಾಚರಣೆಯಿಂದ ಉತ್ತಮ ಲೋಕವನ್ನು ಪಡೆಯುತ್ತಾರೆ. ಬ್ರಹ್ಮನ ಅಪರೋಕ್ಷಜ್ಞಾನವನ್ನು ಪಡೆದಲ್ಲಿ ಎಲ್ಲ ಆಶ್ರಮದವರೂ ಮುಕ್ತಿಗೆ ಅರ್ಹರಾಗುವರು. ಮುಕ್ತಿಯು ಸನ್ಯಾಸಿಗಳಿಗೆ ಮಾತ್ರ ಮೀಸಲು ಅಲ್ಲ.

ಈ ಅಪರೋಕ್ಷಜ್ಞಾನವನ್ನು ಪಡೆಯುವುದೂ ಅಷ್ಟು ಸುಲಭವಲ್ಲ. ನಿರಂತರವಾಗಿ ವಿಮರ್ಶಾಪೂರ್ವಕವಾಗಿ ಶಾಸ್ತ್ರದ ಅಧ್ಯಯನವನ್ನು ನಡೆಸಿ ಅಜ್ಞಾನ ಭ್ರಾಂತಿಗಳಿಗೆ ಎಡೆಕೊಡದೆ ಸರಿಯಾದ ಜ್ಞಾನವನ್ನು ಪಡೆಯಬೇಕು. ಭೌತಿಕ ಆಕರ್ಷಣೆಗೆ ಒಳಗಾಗದೆ ನಿಷಿದ್ಧ ಕೃತ್ಯಗಳಿಗೆ ತೊಡಗದೆ ಭಕ್ತನೂ, ಕರ್ತವ್ಯನಿಷ್ಠನೂ ಆಗಿರಬೇಕು. ಇಂತಹ ವ್ಯಕ್ತಿಯೇ ಶಾಸ್ತ್ರೀಯ ಜ್ಞಾನದ ಬಲದಿಂದ ಬ್ರಹ್ಮನ ಅಪರೋಕ್ಷಜ್ಞಾನವನ್ನು ಹೊಂದಬಲ್ಲನು.

ಈ ಉಪನಿಷತ್ತು ಬೇರೆ ಬೇರೆ ದೇವತೆಗಳು ವಿಭಿನ್ನ ರೀತಿಯಲ್ಲಿ ನಡೆಸುವ ಮಧುರ, ಗಂಭೀರ ಗಾನಶೈಲಿಯನ್ನು ವರ್ಣನೆ ಮಾಡಿ ನಾವೂ ಕೂಡ ಭಕ್ತಿಯಿಂದ ಆದಷ್ಟು ಮಧುರವಾಗಿ ಗಾನಮಾಡಬೇಕೆಂದೂ, ಅಪಸ್ವರದಿಂದ ಗಾನ ಮಾಡಬಾರದು ಎಂದೂ ತಿಳಿಸಿದೆ. ಈ ಸಂದರ್ಭದಲ್ಲಿ ''ದೇವತೆಗಳಿಗೆ ಮುಕ್ತಿ ದೊರೆಯಲಿ'' ಎಂದು ಮುಂತಾಗಿ ಆಶಿಸಿ ಗಾನ ಮಾಡಬೇಕೆಂದು ವಾಕ್ಯವಿದೆ. ದೇವತೆಗಳಿಗೆ ಆಶೀರ್ವಾದ ಮಾಡುವ ಅರ್ಹತೆ ನಮಗೆ ಇದೆಯೇ? ಉಪನಿಷತ್ತಿನಲ್ಲಿ ಬಂದಿರುವ ಇಂತಹ ಮಾತುಗಳ ಅರ್ಥವೇನೆನ್ನುವ ಪ್ರಶ್ನೆ ನಮಗೆ ಉದ್ಭವಿಸುತ್ತದೆ. ಶ್ರೀಮಧ್ವಾಚಾರ್ಯರು ಇದನ್ನು ಪರಿಹರಿಸಿದ್ದಾರೆ. ವಾಯುದೇವರೇ ಸಾಮದ ಮುಖ್ಯ ಗಾಯಕರು. ಅವರು ದೇವತೆಗಳಿಗೆ ಮೋಕ್ಷವು ದೊರೆಯಲೆಂದು ಆಶಿಸಿ ಸಾಮಗಾನವನ್ನು ದೇವತೆಗಳ ಶ್ರೇಯಸ್ಸಿಗಾಗಿ ಮಾಡುವರು. ನಾವು ಮಾತ್ರ ಅಂತಹ ಭಾವನೆಯಿಂದ ಸಾಮಗಾನವನ್ನು ಮಾಡಿ ದೇವತೆಗಳ ಶ್ರೇಯಸ್ಸಿಗೂ ನಾವೇ ಕಾರಣರೆಂಬ ರೀತಿಯಲ್ಲಿ ವರ್ತಿಸಬಾರದು. ನಮ್ಮ ಹೃದಯದಲ್ಲಿರುವ ಮುಖ್ಯಪ್ರಾಣನು ಭಗವಂತನ ಗುಣಗಾನವನ್ನು ಮಾಡಿ ನಮಗೂ ನಮ್ಮ ತತ್ವಾಭಿಮಾನಿಗಳಾದ ದೇವತೆಗಳಿಗೂ ಶ್ರೇಯಸ್ಸನ್ನು ನೀಡುವನೆಂಬ ಅನುಸಂಧಾನವನ್ನು ಮಾತ್ರ ನಾವು ಮಾಡಬೇಕು.

ಮೂರನೆಯ ಅಧ್ಯಾಯ

ಸೂರ್ಯಮಂಡಲದ ಒಳಗೆ ಇರುವ ಭಗವಂತನನ್ನು ''ದೇವ ಮಧು'' ದೇವತೆಗಳು ಉಪಜೀವಿಸಿಕೊಂಡಿರುವ ಮಧುರವಾದ ಜೇನು ಎಂಬುದಾಗಿ ಉಪನಿಷತ್ತು ವರ್ಣಿಸಿದೆ. ಭ್ರಮರಗಳು ನಿರ್ಮಿಸಿದ ಹೊಟ್ಟಿನಲ್ಲಿ ಜೇನು ನೆಲೆಸಿರುವಂತೆ ಮುಖ್ಯಪ್ರಾಣನಲ್ಲಿ ಪರಮಾತ್ಮನೆಂಬ ಮಧು ನೆಲೆಸಿದೆ. ನಾನಾ ವಿಧಗಳಾದ ಪುಷ್ಪಗಳಿಂದ ರಸವನ್ನು ಸಂಗ್ರಹಿಸಿ ಭ್ರಮರಗಳು ಜೇನನ್ನು ಸಿದ್ಧಪಡಿಸುವಂತೆ ವೇದಗಳೆಂಬ ಪುಷ್ಪಗಳಿಂದ ವೇದದ ಸಾರವೆನಿಸಿದ ಈ ಬ್ರಹ್ಮಮಧುವನ್ನು ದೇವತೆಗಳೇ ವ್ಯಕ್ತಗೊಳಿಸುತ್ತಾರೆ. ದೇವತೆಗಳು ಇತರ ಭೋಗಗಳಲ್ಲಿ ಆಸಕ್ತಿ ವಹಿಸದೆ ಈ ಅಮೃತ ಪಾನವನ್ನು ಮಾಡುತ್ತಾ ಆನಂದಪರವಶರಾಗಿದ್ದಾರೆ. ವೇದಾರ್ಥ ವಿಚಾರವೇ ಈ ಅಮೃತಪಾನವಾಗಿದೆ. ಅದರಲ್ಲಿ ಅಂತಹ ತೃಪ್ತಿಯನ್ನು ದೇವತೆಗಳು ಕಾಣುತ್ತಾರೆ. ಸೂರ್ಯನ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ಮತ್ತು ಊರ್ಧ್ವಕಿರಣಗಳಲ್ಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾರಾಯಣ ರೂಪಗಳು ಇವೆ. ಅಗ್ನಿ, ರುದ್ರ, ಆದಿತ್ಯ, ಸಾಧ್ಯ ದೇವತೆಗಳು ಈ ರೂಪಗಳನ್ನು ಉಪಜೀವಿಸಿಕೊಂಡು ಈ ರೂಪಗಳ ದರ್ಶನ ರೂಪವಾದ ಅಮೃತಪಾನದಿಂದ ಆನಂದವನ್ನು ಪಡೆಯುತ್ತಾರೆ.

ವೇದಗಳು ಬೋಧಿಸಿದ ಯಜ್ಞಾದಿಗಳ ಫಲವನ್ನೇ ಉಪಾಸನೆಯ ದೃಷ್ಟಿಯಿಂದ ಮಧು ರಸವೆಂದು ಇಲ್ಲಿ ವರ್ಣನೆ ಮಾಡಿರುವುದಾಗಿ ಅನೇಕರು ವ್ಯಾಖ್ಯಾನ ಮಾಡಿದ್ದಾರೆ. ಇಂತಹ ಕಾಲ್ಪನಿಕ ಜಡೋಪಾಸನೆಯಿಂದ ನಾವು ಏನಾದರೂ ಪುರುಷಾರ್ಥವನ್ನು ಹೊಂದಲು ಸಾಧ್ಯವೆ ? ಈ ಉಪಾಸನೆ ಯಿಂದ ದೇವತೆಗಳು ತಮ್ಮ ತಮ್ಮ ಸ್ಥಾನಗಳನ್ನು ಪಡೆದರೆಂದು ಇಲ್ಲಿ ಹೇಳಿದೆ. ಇಂತಹ ಜಡೋಪಾಸನೆ ಯಿಂದ ದೇವತೆಗಳು ತಮ್ಮ ಪದವಿಯನ್ನು ಪಡೆದಿರುವರೆಂಬುದು ಉಚಿತವಾಗುವುದಿಲ್ಲ. ಉಪನಿಷತ್ತಿನಲ್ಲಿಯೇ ''ಏತಾಮೇವಂ ಬ್ರಹ್ಮೋಪನಿಷದಂ'' ಎಂಬುದಾಗಿ ಇದನ್ನು ಬ್ರಹ್ಮವಿದ್ಯೆಯೆಂದು ಹೇಳಿರುವಾಗ ಇದು ಜಡವಿದ್ಯೆಯಾಗಿರಲು ಸಾಧ್ಯವಿಲ್ಲ. ಆದುದರಿಂದ ಇದು ವೇದಸಾರಭೂತನಾದ ಪರಬ್ರಹ್ಮನ ಉಪಾಸನೆಯ ಸುಂದರ ವರ್ಣನೆಯೆಂಬ ಶ್ರೀಮಧ್ವಾಚಾರ್ಯರ ವ್ಯಾಖ್ಯಾನವೇ ಸೂಕ್ತವಾಗಿದೆ.

ಈ ಸಂದರ್ಭದಲ್ಲಿ ಈ ಉಪನಿಷತ್ತಿನಲ್ಲಿ ಕೆಲವು ವಿಚಿತ್ರ ಉಲ್ಲೇಖಗಳು ಕಾಣಿಸುತ್ತವೆ. ಸೂರ್ಯನು ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಅಸ್ತಹೊಂದುವಂತೆ ದಕ್ಷಿಣದಿಂದ ಉತ್ತರಕ್ಕೂ, ಪಶ್ಚಿಮದಿಂದ ಪೂರ್ವಕ್ಕೂ, ಉತ್ತರದಿಂದ ದಕ್ಷಿಣಕ್ಕೂ ಸೂರ್ಯನ ಉದಯ ಅಸ್ತಗಳ ನಿರೂಪಣೆಯು ಇಲ್ಲಿದೆ. ಪೂರ್ವ ದಿಕ್ಪಾಲಕನಾದ ಇಂದ್ರನ ಅಮರಾವತಿಯ ವಿನಾಶದ ನಂತರ ದಕ್ಷಿಣದಿಂದ ಉತ್ತರಕ್ಕೆ ಸೂರ್ಯನ ಉದಯಾಸ್ತಗಳು ನಡೆಯುತ್ತವೆ. ದಕ್ಷಿಣ ದಿಕ್ಪಾಲಕನಾದ ಯಮನ ಪುರಿಯ ನಿವೃತ್ತಿಯಾದ ಮೇಲೆ ಪಶ್ಚಿಮದಿಂದ ಪೂರ್ವಕ್ಕೂ , ಪಶ್ಚಿಮ ದಿಕ್ಕಿನ ದೇವತೆಯಾದ ವರುಣನ ರಾಜಧಾನಿಯು ನಾಶವಾದ ಮೇಲೆ ಉತ್ತರದಿಂದ ದಕ್ಷಿಣಕ್ಕೂ, ಸೂರ್ಯನ ಉದಯ ಗತಿಯು ಬದಲಾಯಿಸುತ್ತದೆಯೆಂದು ಕೆಲವರು ಇದನ್ನು ವ್ಯಾಖ್ಯಾನಿಸಿದ್ದಾರೆ. ಇದು ಅತ್ಯಂತ ಅಸಂಬದ್ಧವೂ ಅಪ್ರಾಕೃತಿಕವೂ ಆಗಿರುವುದರಿಂದ ಉಪನಿಷತ್ತಿನಲ್ಲಿ ಇಂತಹ ನಿರೂಪಣೆಯಿರಲು ಸಾಧ್ಯವಿಲ್ಲ. ಶ್ರೀಮಧ್ವಾಚಾರ್ಯರು ತಮ್ಮ ವ್ಯಾಖ್ಯಾನದಲ್ಲಿ ಇದನ್ನು ಸುಸಂಗತಗೊಳಿಸಿದ್ದಾರೆ. ಸೂರ್ಯನು ಯಾವಾಗಲೂ ಪೂರ್ವದಲ್ಲಿ ಉದಯಿಸಿ ಪಶ್ಚಿಮ ದಲ್ಲಿಯೇ ಅಸ್ತಗೊಳ್ಳುವನು. ಇದಕ್ಕೆ ಯಾವ ಕಾಲದಲ್ಲೂ ಬದಲಾವಣೆಯಿಲ್ಲ. ಆದರೂ ಮೇರು ಪರ್ವತದ ಸುತ್ತಲೂ ಸೂರ್ಯನ ಉದಯಾಸ್ತಗಳೂ ಬೇರೆ ಬೇರೆ ಪ್ರದೇಶಗಳಲ್ಲಿ ಭಿನ್ನ ಭಿನ್ನ ಸಮಯ ದಲ್ಲಿ ನಡೆಯುತ್ತವೆ. ನಮ್ಮ ಪ್ರದೇಶದಲ್ಲಿ ಸೂರ್ಯನ ಅಸ್ತಮಾನವಾದ ಮೇಲೆ ರಾತ್ರಿಯ ವೇಳೆಯಲ್ಲಿ ಮೇರುಪರ್ವತದ ಇತರ ಭಾಗಗಳಲ್ಲಿ ಸೂರ್ಯನ ಉದಯಾಸ್ತಗಳು ವಿಭಿನ್ನ ಸಮಯದಲ್ಲಿ ಸಂಭವಿಸುತ್ತಲೇ ಇರುತ್ತವೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡಾಗ ನಮ್ಮ ರಾತ್ರಿಕಾಲದಲ್ಲಿ ಬೇರೆ ಭಾಗದಲ್ಲಿ ಸೂರ್ಯನು ನಮ್ಮ ಪೂರ್ವಕ್ಕೆ ವಾಲಿಕೊಂಡು ಮೊದಲು ದಕ್ಷಿಣದಿಂದ ಉತ್ತರಕ್ಕೂ , ನಂತರ ಪಶ್ಚಿಮದಿಂದ ಪೂರ್ವಕ್ಕೂ ಆಮೇಲೆ ಉತ್ತರದಿಂದ ದಕ್ಷಿಣಕ್ಕೂ ಉದಯಾಸ್ತವನ್ನು ಹೊಂದುವನು. ಪ್ರತಿ ದಿನವೂ ಈ ರೀತಿಯ ಸೂರ್ಯನ ಉದಯಾಸ್ತಗಳು ನಡೆಯುತ್ತಲೇ ಇರುತ್ತವೆ. ಈ ವಿಭಿನ್ನ ವೇಳೆಗಳಿಗೆ ಬೇರೆ ಬೇರೆ ದೇವತೆಗಳು ಅಧಿಪತಿಗಳಾಗಿರುವರು. ನಮ್ಮ ಪೂರ್ಣ ಹಗಲಿಗೆ ವಸುಗಳು ಸಾಮಾನ್ಯವಾಗಿ ಅಧಿಪತಿಗಳು. ಅವರ ಮೇಲೂ ನಿಯಂತ್ರಣವುಳ್ಳ ಬೇರೆ ದೇವತೆಗಳೂ ಹಗಲಿಗೆ ಅಧಿಪತಿಗಳಾಗಿರುವರು. ಸಮ ರಾತ್ರಿಯಲ್ಲಿ ಬೇರೆ ಪ್ರದೇಶದಲ್ಲಿ ನಡೆಯುವ ಉದಯಾಸ್ತಗಳ ವಿಭಿನ್ನ ಕಾಲ ಮತ್ತು ದೇಶಗಳಿಗೂ ರುದ್ರರೂ ಆದಿತ್ಯರೂ ಮರುತರೂ ವಿಶೇಷ ಅಧಿಪತಿಗಳಾಗಿರುವರು. ಕೊನೆಯ ಬ್ರಾಹ್ಮ ಮೂಹೂರ್ತಕ್ಕೆ ಬ್ರಹ್ಮದೇವರೇ ವಿಶೇಷ ಅಧಿಪತಿಗಳು. ಹೀಗೆ ಸೂರ್ಯಮಂಡಲದಲ್ಲಿ ಮತ್ತು ಅದರ ವಿಭಿನ್ನ ಕಿರಣಗಳಲ್ಲಿ ನೆಲೆಸಿದ ಭಗವದ್ರೂಪಗಳು ಮತ್ತು ಭಗವಂತನನ್ನು ಆಶ್ರಯಿಸಿಕೊಂಡಿರುವ ವಿಶೇಷ ದೇವತೆಗಳ ನಿರೂಪಣೆಯನ್ನು ಈ ಮಧು ವಿದ್ಯೆಯಲ್ಲಿ ಮಾಡಲಾಗಿದೆ.

ಭಗವಂತನ ಗಾಯತ್ರೀ ರೂಪ

ಧಾರ್ಮಿಕ ಜನತೆಯು ಪ್ರತಿದಿನ ಜಪಿಸುತ್ತಿರುವ ಪರಮ ಪವಿತ್ರವಾದ ಗಾಯತ್ರೀ ಮಂತ್ರದಲ್ಲಿ ಅಧಿಷ್ಠಿತವಾದ ಭಗವದ್ರೂಪವು ನಿರಂತರವೂ ವೇದಗಾನ ಮತ್ತು ಲೋಕತ್ರಾಣವನ್ನು ಮಾಡುತ್ತಿದೆ. ತನ್ನ ವೇದಗಾನದಿಂದ ಅನಾದಿಯಾದ ವೇದಸಂದೇಶವನ್ನು ದೇವತೆಗಳಿಗೆ ಉಪದೇಶಿಸಿ ಜ್ಞಾನಪರಂಪರೆಯನ್ನು ಜಗತ್ತಿನಲ್ಲಿ ಪ್ರವಹಿಸುವುದರ ಜೊತೆಗೆ ತನ್ನ ಜಗದ್ಧಾರಕ ಶಕ್ತಿಯಿಂದ ಲೋಕ ರಕ್ಷಣೆಯನ್ನು ಭಗವಂತನು ನಡೆಸುತ್ತಿದ್ದಾನೆ. ಈ ಗಾನ ತ್ರಾಣಗಳ ಕಾರ್ಯದಿಂದಲೇ ಅವನು ''ಗಾಯತ್ರೀ'' ಎನಿಸಿದ್ದಾನೆ. ಅವನಿಗೆ ಅತ್ಯಂತ ವ್ಯಾಪಕರೂಪವೂ ಇದೆ. ಅತಿ ಸೂಕ್ಷ್ಮರೂಪವೂ ಇದೆ. ಜೀವಾತ್ಮನಲ್ಲಿ ವ್ಯಾಪಿಸಿರುವ ಆತನು ಜೀವಾತ್ಮನ ಸೂಕ್ಷ್ಮ ಹೃದಯ ಪ್ರದೇಶದಲ್ಲಿ ಅಣೋರಣೀಯನಾಗಿ ನೆಲೆಸಿದ್ದಾನೆ. ಜೀವಾತ್ಮನ ಹೊರಗೆ ಈ ದೇಹದ ಹೃದಯಾಕಾಶದಲ್ಲಿ ಸ್ವಲ್ಪ ಸ್ಥೂಲ ರೂಪದಲ್ಲಿ ಇರುವ ಭಗವಂತನು ದೇಹದ ಹೊರಗೂ ವಿಶ್ವವ್ಯಾಪಿಯಾಗಿ ವಿರಾಟ್‌ರೂಪದಲ್ಲಿ ಮಹತೋಮಹೀಯನಾಗಿದ್ದಾನೆ. ಈ ರೀತಿಯಾಗಿ ಇಡೀ ವಿಶ್ವದಲ್ಲಿ, ದೇಹದ ಒಳಗೆ, ಜೀವದಲ್ಲಿ ವ್ಯಾಪಿಸಿಕೊಂಡು ಮತ್ತು ಜೀವನ ಹೃದಯ ಭಾಗದಲ್ಲಿ ಎಂಬುದಾಗಿ ಭಗವಂತನ ನಾಲ್ಕು ಅಣು ಮಹತ್‌ರೂಪಗಳನ್ನು ಅರಿತುಕೊಳ್ಳಬೇಕು. ಈ ನಾಲ್ಕು ರೂಪಗಳನ್ನೇ ಬ್ರಹ್ಮನ ನಾಲ್ಕು ಪಾದಗಳೆಂದು ಉಪನಿಷತ್ತು ವರ್ಣಿಸಿದೆ.

ಇನ್ನೊಂದು ರೀತಿಯಲ್ಲೂ ಪರಮಾತ್ಮನ ನಾಲ್ಕು ಪಾದಗಳನ್ನು ನಾವು ತಿಳಿದುಕೊಳ್ಳಬಹುದು. ಶ್ವೇತದ್ವೀಪ, ಅನಂತಾಸನ, ವೈಕುಂಠಗಳಲ್ಲಿ ನಾರಾಯಣ, ವಾಸುದೇವ, ವೈಕುಂಠವೆಂಬ ಮೂರು ಭಗವಂತನ ನಿಜರೂಪಗಳಿವೆ. ಈ ಮೂರು ರೂಪಗಳೂ ಭಗವಂತನ ನಿಜರೂಪಗಳೇ ಆಗಿರುವುದರಿಂದ ಭಗವಂತನ ಸ್ವರೂಪಾಂಶಗಳಾಗಿವೆ. ಈ ಮೂರು ರೂಪಗಳೇ ಭಗವಂತನ ಮೂರು ಪಾದಗಳು. ಇಡೀ ಬ್ರಹ್ಮಾಂಡವೇ ಪರಮಾತ್ಮನ ಇನ್ನೊಂದು ಪಾದ. ಭಗವಂತನ ಮೂರು ರೂಪಗಳಂತೆ ಈ ಜಗತ್ತು ಭಗವಂತನ ಸ್ವರೂಪವಲ್ಲ. ಆದರೆ ಇದು ಅವನ ಬಾಹ್ಯರೂಪವಾಗಿದೆ. ಈ ಜಡವಾದ ಪ್ರಪಂಚವನ್ನು ಚೈತನ್ಯ ಆನಂದರೂಪಿಯಾದ ಭಗವಂತನ ಒಂದು ಭಾಗವೆಂದು ಪರಿಗಣಿಸಲು ಸಾಧ್ಯವಿಲ್ಲ. ಚಿನ್ನದ ತುಂಡು ಚಿನ್ನವೇ ಆಗಿರುವಂತೆ ಜಗತ್ತು ಬ್ರಹ್ಮನ ಒಂದು ತುಣುಕು ಆಗಿದ್ದರೆ ಇದು ಚೈತನ್ಯಮಯವಾಗಬೇಕಿತ್ತು. ಜಡವೂ ದೋಷಭರಿತವೂ ಆದ ಜಗತ್ತು ಬ್ರಹ್ಮನ ಆವಾಸಸ್ಥಾನವಾಗಿರುವುದರಿಂದ ಶರೀರದಂತೆ ಅವನ ಬಾಹ್ಯರೂಪವೆನಿಸಿ ಅವನ ನಾಲ್ಕನೇ ಪಾದವೆಂದು ಉಪನಿಷತ್ತು ನಿರೂಪಿಸಿದೆ. ಭಗವಂತನ ಉಳಿದ ಚೈತನ್ಯಮಯ ಅವತಾರರೂಪ ಗಳಲ್ಲಿರುವಂತೆ ಪರಿಪೂರ್ಣತೆಯನ್ನು ಈ ಜಡರೂಪದಲ್ಲಿ ನಾವು ಗ್ರಹಿಸಬಾರದು. ಆದುದರಿಂದ ಭಗವಂತನ ಮೊದಲಿನ ಮೂರು ಪಾದಗಳೆನಿಸಿದ ಮೂರು ರೂಪಗಳನ್ನು ಮಾತ್ರ 'ತ್ರಿಪಾದಸ್ಯಾಮೃತಂ ದಿವಿ' ಎಂಬುದಾಗಿ ಅಮೃತವೆಂದು ಹೇಳಿ ಮೂರು ಪಾದಗಳಿಗೂ ನಾಲ್ಕನೇ ಪಾದಕ್ಕೂ ಇರುವ ಅಂತರವನ್ನು ತೋರಿಸಿದ್ದಾರೆ.

ಈ ಉಪನಿಷತ್ತಿನಲ್ಲಿ ಪರಮಾತ್ಮನ ಈ ಮೂರು ರೂಪಗಳನ್ನು ಸ್ವರ್ಗಲೋಕದಲ್ಲಿ ಇವೆಯೆಂದು ಒಂದು ಕಡೆ ವರ್ಣಿಸಿದರೆ ಸ್ವರ್ಗಲೋಕಕ್ಕಿಂತಲೂ ಮೇಲೆ ಇದೆಯೆಂದು ಇನ್ನೊಂದು ಕಡೆ ಹೇಳಿದೆ. ಈ ವಚನಗಳಲ್ಲಿ ಸಾಮಾನ್ಯವಾಗಿ ವಿರೋಧವು ಕಂಡುಬಂದರೂ ನಿಜವಾಗಿ ವಿರೋಧವಿಲ್ಲ. ಭೂಲೋಕ ದಿಂದ ಸತ್ಯಲೋಕದವರೆಗಿನ ಲೋಕಗಳು ಸಪ್ತಲೋಕಗಳೆಂದು ಪ್ರಸಿದ್ಧವಾಗಿವೆ. ಈ ಏಳು ಲೋಕಗಳನ್ನು ಇನ್ನೊಂದು ರೀತಿಯಲ್ಲಿ ಭೂಮಿ, ಅಂತರಿಕ್ಷ, ಸ್ವರ್ಗವೆಂಬುದಾಗಿ ಮೂರು ಲೋಕಗಳಾಗಿಯೂ ವರ್ಗೀಕರಿಸಲಾಗಿದೆ. ಈ ಮೂರು ಲೋಕಗಳ ದೃಷ್ಟಿಯಿಂದ ಅಂತರಿಕ್ಷದ ಮೇಲಿನ ಲೋಕಗಳೆಲ್ಲವೂ ಸ್ವರ್ಗವೇ ಆಗುತ್ತವೆ. ಶ್ವೇತದೀಪ, ಅನಂತಾಸನ, ವೈಕುಂಠಗಳು ಅತ್ಯಂತ ಉನ್ನತಗಳಾಗಿರುವ ಚೈತನ್ಯಮಯ

ಲೋಕಗಳು. ಭೂಮಿ, ಅಂತರಿಕ್ಷಗಳಿಗಿಂತಲೂ ಎತ್ತರವಾಗಿರುವ ಶ್ರೀ ತತ್ತ್ವವೇ ರೂಪವೆತ್ತು ನಿಂತಿರುವ ಈ ಮೂರು ಲೋಕಗಳೂ ಅಂತರಿಕ್ಷಕ್ಕಿಂತಲೂ ಮೇಲೆ ಇರುವುದರಿಂದ ಇದೂ ಸ್ವರ್ಗಲೋಕವೇ ಆಗಿದೆ. ಆದುದರಿಂದ ಈ ಮೂರು ರೂಪಗಳನ್ನು ಸ್ವರ್ಗದಲ್ಲಿವೆಯೆಂದು ಉಪನಿಷತ್ತು ಹೇಳಿದೆ. ಏಳು ಲೋಕಗಳ ದೃಷ್ಟಿಯಿಂದ ನೋಡಿದಾಗ ಈ ಮೂರು ಲೋಕಗಳೂ ಸ್ವರ್ಗಕ್ಕಿಂತ ಮೇಲಿವೆಯೆಂದು ಹೇಳಬಹುದು. ಭೂಮಿಯ ಸ್ವರ್ಗವೆನಿಸಿದ ಮಹಾ ಮೇರುವಿನಿಂದಲೂ ಎತ್ತರದಲ್ಲಿ ಅನಂತಾಸನವು ನೆಲೆಸಿದೆ. ಅಂತರಿಕ್ಷದ ಸ್ವರ್ಗವೆನಿಸಿದ ಸೂರ್ಯ ಮಂಡಲದಿಂದಲೂ ಎತ್ತರದಲ್ಲಿ ಶ್ವೇತದ್ವೀಪವಿದೆ. ಇಂದ್ರನ ಸ್ವರ್ಗ ನಗರಿಯಿಂದಲೂ ಬಹು ಎತ್ತರದಲ್ಲಿ ವೈಕುಂಠವು ರಾರಾಜಿಸುತ್ತಿದೆ. ಹೀಗೆ ದ್ಯುಲೋಕಕ್ಕಿಂತಲೂ ಎತ್ತರವಾದ ಈ ಮೂರು ಸ್ಥಾನಗಳಲ್ಲಿರುವ ಭಗವಂತನ ಮೂರು ರೂಪಗಳು ಸ್ವರ್ಗದಲ್ಲಿವೆ, ಸ್ವರ್ಗದ ಮೇಲೂ ಇವೆ. ''ದಿವಿಸ್ಥವೂ'' ಆಗಿವೆ. ''ದಿವಃ ಪರ''ವೂ ಆಗಿವೆಯೆಂದು ಅರ್ಥಗರ್ಭಿತವಾಗಿ ಉಪನಿಷತ್ತು ಹೇಳಿದೆ.

ಭಗವಂತನು ಇಡೀ ವಿಶ್ವವನ್ನು ವ್ಯಾಪಿಸಿದ ವಿಶ್ವರೂಪಿ. ಆಕಾಶದಲ್ಲಿ ಭಗವಂತನ ಉದರ ಭಾಗವಿದೆ. ಪೃಥ್ವಿ ಲೋಕದಲ್ಲಿ ಅವನ ಪಾದಗಳಿವೆ. ನಾಲ್ಕು ದಿಕ್ಕುಗಳಲ್ಲಿ ಚಕ್ರ, ಶಂಖ, ಗದಾ, ಪದ್ಮಗಳನ್ನು ಧರಿಸಿದ ಅವನ ನಾಲ್ಕು ಬಾಹುಗಳಿವೆ. ಸಕಲ ಜೀವರಿಗೆ ಗುರುವೂ ನಿಯಾಮಕನೂ ಆಗಿರುವ ಮುಖ್ಯಪ್ರಾಣನು ಆ ವಿರಾಟ್‌ರೂಪಿಯಾದ ಭಗವಂತನ ಪ್ರೀತಿಯ ಮಗು. ಭಗವಂತನನ್ನೂ ಅವನ ಮಗುವಾದ ವಾಯುದೇವರನ್ನೂ ತಿಳಿದುಕೊಂಡಲ್ಲಿ ಪುನಃ ಈ ಭೂಮಿಯಲ್ಲಿ ಮಗುವಾಗಿ ಹುಟ್ಟುವ ದುಃಸ್ಥಿತಿಯು ನಮಗೆ ಬಾರದೆ ನಾವು ಅಮೃತಾತ್ಮರಾಗುವೆವು.

ಜೀವನವೇ ಒಂದು ಯಜ್ಞ

ನಮ್ಮ ನೂರು ವರ್ಷಗಳ ಪರಿಪೂರ್ಣ ಜೀವನವನ್ನು ಭಗವಂತನ ಸೇವೆಗಾಗಿ ಇರುವ ಪವಿತ್ರವಾದ ಯಜ್ಞವೆಂದು ಭಾವಿಸಬೇಕು. ಕೇವಲ ಸಾಂಸಾರಿಕ ಭೋಗಗಳನ್ನು ಅನುಭವಿಸಲಿಕ್ಕಾಗಿಯೇ ಈ ಜೀವವಿದೆಯೆಂದು ತಿಳಿದುಕೊಳ್ಳಬಾರದು.

ನಮ್ಮ ಜೀವನದ ಬಾಲ್ಯ , ತಾರುಣ್ಯ , ವಾರ್ಧಕ್ಯಗಳೆಂಬ ಮೂರು ಘಟ್ಟಗಳನ್ನೂ ಈ ಜೀವನ ಮಹಾಯಜ್ಞದ ಪ್ರಾತಃ ಸವನ, ಮಾಧ್ಯಂದಿನ ಸವನ, ತೃತೀಯ ಸವನಗಳೆಂದು ಭಾವಿಸಿ ಇಡೀ ಜೀವನವನ್ನು ಭಗವತ್‌ಸೇವೆಗಾಗಿ ಸಮರ್ಪಿಸಿಕೊಳ್ಳಬೇಕು. ಜೀವನದ ವಿಭಿನ್ನ ಹಂತಗಳಲ್ಲಿ ತೀವ್ರ ರೋಗಗಳಿಂದ ಬಳಲುವ ಸಂದರ್ಭವೊದಗಿದಾಗ ನಮ್ಮ ಜೀವನದ ಸುಖ ಐಶಾರಾಮಗಳಿಗಾಗಿ ದೇವರಲ್ಲಿ ಪ್ರಾರ್ಥಿಸದೆ ನಮ್ಮ ಜೀವನದಲ್ಲಿ ನಡೆಯಬೇಕಾದ ಭಗವಂತನ ಪೂಜಾರೂಪವಾದ ಯಜ್ಞಕ್ಕೆ ಯಾವುದೇ ಲೋಪವಾಗದಿರಲೆಂಬುದಾಗಿಯೇ ಸ್ವಾರ್ಥದ ಆಶೆಯನ್ನು ತೊರೆದು ಪ್ರಾರ್ಥಿಸಬೇಕು. ಇಂತಹ ಭಕ್ತನು ಭಗವಂತನ ಅನುಗ್ರಹದಿಂದ ಪೂರ್ಣಜೀವನವನ್ನು ಬದುಕುವನು. ನಮ್ಮ ಜೀವನವನ್ನು ಯಜ್ಞವೆಂದು ಅನುಸಂಧಾನ ಮಾಡುವಾಗ ಯಜ್ಞದಲ್ಲಿ ಅವಶ್ಯವಾದ ದಕ್ಷಿಣೆಗಳು ಯಾವುವು ಎಂಬುದನ್ನೂ ನಾವು ತಿಳಿಯಬೇಕು. ತಪಸ್ಸು , ಸತ್ಯ , ದಯೆ, ಪ್ರಾಮಾಣಿಕತೆಗಳೇ ನಾವು ನೀಡಬೇಕಾದ ದಕ್ಷಿಣೆಗಳು. ನಮ್ಮ ಜೀವನದ ಹಾಸ, ವಿಲಾಸ, ವಿಹಾರ ಮೊದಲಾದ ಭೋಗ ವ್ಯಾಪಾರಗಳು ಈ ಜೀವನ ಯಜ್ಞದ ಸಾಮಗಾನಗಳು. ಆಮೋದ ಪ್ರಮೋದಗಳ ವ್ಯವಹಾರಗಳಲ್ಲೂ ದೇವರನ್ನು ಮರೆಯದೆ ಅವುಗಳಲ್ಲೂ ಭಗವಂತನ ಪೂಜೆಯನ್ನು ಕಾಣಬೇಕು. ಜೀವನವು ಉಲ್ಲಸಿತವಾಗಿ ನಡೆದರೆ ಪರಮಾತ್ಮನ ಸೇವೆಗೆ ಅದು ಅನುಕೂಲವೇ ಆಗುವುದು. ಮರಣವೇ ಈ ಬಾಳಿನ ಯಜ್ಞದ ಅವಭೃಥಸ್ನಾನ. ಈ ರೀತಿಯಾಗಿ ನಮ್ಮ ಜೀವನವನ್ನು ಭಗವನ್ಮಯವನ್ನಾಗಿ ಪರಿವರ್ತಿಸಿಕೊಳ್ಳಬೇಕು. ನಮ್ಮ ಶರೀರದ ಒಳಗಿನ ವಸ್ತುಗಳಲ್ಲೂ ,

ಹೊರಗಿನ ಭೌತಿಕ ವಸ್ತುಗಳಲ್ಲೂ ಭಗವಂತನ ಬೇರೆ ಬೇರೆ ರೂಪಗಳನ್ನು ಚಿಂತಿಸುವ ಪ್ರಕಾರವನ್ನು ಈ ಸಂದರ್ಭದಲ್ಲಿ ಉಪನಿಷತ್ತು ನಿರೂಪಿಸಿದೆ.

ನಾಲ್ಕನೆಯ ಅಧ್ಯಾಯ

ಜಾನ ಶ್ರುತಿ ಪೌತ್ರಾಯಣನು ಧರ್ಮಶೀಲನೂ ದಾನಶೀಲನೂ ಆದ ರಾಜನಾಗಿದ್ದನು. ರಾಜ್ಯದ ಎಲ್ಲ ಕಡೆಗಳಲ್ಲಿ ಜನರಿಗೆ ಭೋಜನ ಸೌಕರ್ಯವನ್ನು ಒದಗಿಸಲು ಛತ್ರಗಳನ್ನು ನಿರ್ಮಿಸಿದ್ದನು. ಇಂತಹ ಉದಾರನಾದ ರಾಜನು ತನ್ನ ಉನ್ನತವಾದ ಪ್ರಾಸಾದದಲ್ಲಿ ರಾತ್ರಿ ಮಲಗಿದ್ದಾಗ ಅವನ ಮೇಲಿನಿಂದ ದೇವಹಂಸಗಳು ಹಾರುತ್ತಾ ಸಾಗಿದ್ದವು. ಆ ಸಂದರ್ಭದಲ್ಲಿ ಒಂದು ಹಂಸವು ಇನ್ನೊಂದು ಹಂಸವನ್ನು ತಡೆದು ''ರಾಜಾ ಜಾನಶ್ರುತಿಯು ಕೆಳಗೆ ಮಲಗಿದ್ದಾನೆ. ಅವನ ದೇಹದಿಂದ ಹೊರಹೊಮ್ಮಿದ ಜ್ಯೋತಿಯು ಸುತ್ತಲೂ ಹರಡಿದೆ. ಅದನ್ನು ಸ್ಪರ್ಶಿಸುವ ಸಾಹಸ ಮಾಡಬೇಡ. ನಿನ್ನ ಮೈಯೆಲ್ಲಾ ಸುಟ್ಟು ಬೂದಿಯಾದೀತು'' ಎಂದು ಎಚ್ಚರಿಸುತ್ತದೆ. ಆಗ ಇನ್ನೊಂದು ಹಂಸವು ''ರೈಕ್ವನನ್ನು ಹೊಗಳುವ ರೀತಿಯಲ್ಲಿ ಈ ರಾಜನ ಬಗ್ಗೆ ಮಾತನಾಡುತ್ತಿರುವಿಯಲ್ಲ! ಆ ರೈಕ್ವನ ಯೋಗ್ಯತೆಯು ಇವನಿಗೆಲ್ಲಿದೆ?'' ಎಂಬುದಾಗಿ ರಾಜನನ್ನು ಮೂದಲಿಸಿ ಮಾತನಾಡಿತು. ಹಂಸಗಳ ಈ ಸಂವಾದವನ್ನು ಕೇಳಿದ ರಾಜನು ರೈಕ್ವನನ್ನು ಸಂದರ್ಶಿಸಿ ಅವನಿಂದ ಉಪದೇಶವನ್ನು ಪಡೆಯಲು ಉತ್ಕಂಠಿತನಾದನು. ಮರುದಿನ ಬೆಳಿಗ್ಗೆಯೇ ರೈಕ್ವನನ್ನು ಹುಡುಕಲು ಜನರನ್ನು ಕಳುಹಿಸಿದನು. ಎಲ್ಲಿಯೂ ರೈಕ್ವನು ಕಾಣಲಿಲ್ಲ. ಕೊನೆಗೆ ಒಂದು ಕಡೆ ಎತ್ತಿನ ಗಾಡಿಯ ಕೆಳಗೆ ಕಜ್ಜಿ ತುರಿಸಿಕೊಂಡು ಕುಳಿತಿರುವ ಅವಧೂತ ಯೋಗಿ ರೈಕ್ವನನ್ನು ಗುರುತಿಸಿದ ದೂತರು ರಾಜನಿಗೆ ರೈಕ್ವನ ಇರುವನ್ನು ನಿವೇದಿಸಿದರು. ಮಹಾರಾಜನು ರೈಕ್ವನ ಬಳಿಗೆ ಧಾವಿಸಿ ನೂರಾರು ಗೋವುಗಳು ಮತ್ತು ನಾಣ್ಯ, ವಾಹನಗಳನ್ನು ಗುರುದಕ್ಷಿಣೆಯೆಂದು ಸಮರ್ಪಿಸುತ್ತಾ ಉಪದೇಶಕ್ಕಾಗಿ ಪ್ರಾರ್ಥಿಸಿದನು. ರೈಕ್ವನು ''ಎಲೆ ಶೂದ್ರನೇ! ಈ ಕಾಣಿಕೆಗಳೆಲ್ಲ ನಿನಗೇ ಇರಲಿ. ನನಗೆ ಇದರ ಅವಶ್ಯಕತೆಯೇನೂ ಇಲ್ಲ'' ಎಂದು ಹೇಳಿ ಈ ಕೊಡುಗೆಯನ್ನು ತಿರಸ್ಕರಿಸಿದನು. ರಾಜನು ಹಂಸಗಳು ಮಾಡಿದ ಅವಮಾನದಿಂದ ದುಃಖಿತನಾಗಿ ರೈಕ್ವ ಮುನಿಯ ಬಳಿಗೆ ಧಾವಿಸಿ ಬಂದಿದ್ದನು. ಶೋಕದಿಂದ ದ್ರವಿತನಾಗಿ ಓಡಿ ಬಂದಿರುವುದರಿಂದ ರಾಜನನ್ನು ಮುನಿಯು ಶೂದ್ರನೆಂದು ಸಂಬೋಧಿಸಿದ್ದಾನೆ. ರಾಜನು ತಾನು ನೀಡಿದ ಕಾಣಿಕೆಯನ್ನು ರೈಕ್ವನು ತಿರಸ್ಕರಿಸಿದ್ದನ್ನು ತಪ್ಪಾಗಿ ಗ್ರಹಿಸಿಕೊಂಡನು. ಭೌತಿಕ ಸಂಪತ್ತಿನ ಕಾಮನೆಯೇ ಇಲ್ಲದ ರೈಕ್ವನು ನಿರಪೇಕ್ಷೆಯಿಂದ ಈ ಕಾಣಿಕೆಯನ್ನು ತ್ಯಜಿಸಿದ್ದರೆ ತನ್ನ ಕೊಡುಗೆಯು ಕಡಿಮೆಯಾಯಿತೆಂದು ಮುನಿಯು ಅದನ್ನು ಸ್ವೀಕರಿಸಲಿಲ್ಲವೆಂದು ತಪ್ಪಾಗಿ ಭಾವಿಸಿ ಇನ್ನೂ ಹೆಚ್ಚಿನ ದ್ರವ್ಯಸಂಪತ್ತನ್ನು ಮತ್ತು ಪಶುಸಂಪತ್ತಿನ ಜೊತೆಗೆ ತನ್ನ ಮಗಳನ್ನು ಕರೆದುಕೊಂಡು ಬಂದು ಮುನಿಗೆ ಸಮರ್ಪಿಸಿದನು. ರೈಕ್ವನು ಇದನ್ನು ನೋಡಿ ಇನ್ನೂ ಅಸಮಾಧಾನಗೊಂಡು ''ಈ ಧನಕಾಣಿಕೆ ಸಂಪತ್ತುಗಳು ಜ್ಞಾನವನ್ನು ಪಡೆಯುವ ಮುಖವಲ್ಲ. ಕೇವಲ ದ್ರವ್ಯವನ್ನು ವೆಚ್ಚಮಾಡಿ ಸಂಪತ್ತಿನ ಬಲದಿಂದ ಜ್ಞಾನವನ್ನು ಪಡೆಯಬಲ್ಲೆನೆಂದು ಭಾವಿಸಬೇಡ. ಜ್ಞಾನವನ್ನು ಪಡೆಯಲು ಭಕ್ತಿ, ವೈರಾಗ್ಯ, ಜಿಜ್ಞಾಸೆಗಳೇ ಅಗತ್ಯ. ಧನದಿಂದ ಜ್ಞಾನವನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ'' ಎಂದು ಹೇಳಿದನು. ಅದರೂ ರಾಜನ ಪ್ರಾರ್ಥನೆ, ಕಳಕಳಿಯನ್ನು ಗಮನಿಸಿ ಅವನು ಕೊಡಮಾಡಿದ ಗ್ರಾಮದಲ್ಲಿ ತಾತ್ಕಾಲಿಕವಾಗಿ ಕೆಲ ಸಮಯ ಇದ್ದು ಅವನಿಗೆ ಸಂವರ್ಗ ವಿದ್ಯೆಯ ಉಪದೇಶವನ್ನು ಮಾಡುವನು. ದೇಹದ ಹೊರಗಿನ ಭೌತಿಕ ಅಭಿಮಾನಿಗಳಾದ ಸೂರ್ಯಚಂದ್ರಾದಿ ದೇವತೆಗಳಿಗೆ ವಾಯುದೇವನಾಗಿಯೂ, ದೇಹದ ಒಳಗೆ ಇಂದ್ರಿಯಗಳಿಗೆ ಅಭಿಮಾನಿಗಳಾದ ದೇವತೆಗಳಿಗೆ ಪ್ರಾಣದೇವನಾಗಿಯೂ, ಜೀವೋತ್ತಮನಾದ ಮುಖ್ಯಪ್ರಾಣನೇ ನಿಯಾಮಕನೂ,

ಲಯಕರ್ತನೂ ಆಗಿರುವನು. ಲಯಕಾರನಾಗಿರುವುದರಿಂದಲೇ ಅವನು 'ಸಂವರ್ಗ'ನಾಗಿರುವನು. ಮುಖ್ಯವಾಯುವಿನ ಈ ಎರಡು ರೂಪಗಳನ್ನು ತಿಳಿದವನು ಮಹಾಜ್ಞಾನಿಯಾಗಿರುವನು. ಸರ್ವೋತ್ತಮನಾದ ಪರಬ್ರಹ್ಮನೇ ಈ ಮುಖ್ಯಪ್ರಾಣನಿಗೂ ಆಶ್ರಯ ಹಾಗೂ ಲಯಕಾರನೂ ಆಗಿರುತ್ತಾನೆ. ಈ ಸಂದರ್ಭದಲ್ಲಿ ರೈಕ್ವನ ಇನ್ನೊಂದು ಉಪಖ್ಯಾನವನ್ನು ಉದಾಹರಿಸುತ್ತಾನೆ –

ಸತ್ಯಕಾಮನ ಉಪಾಖ್ಯಾನ

ಜಬಾಲೆಯ ಪುತ್ರನಾದ ಸತ್ಯಕಾಮನು ಗುರುಕುಲ ವಾಸವನ್ನು ಬಯಸಿ ಅದಕ್ಕಾಗಿ ತನ್ನ ಗೋತ್ರವನ್ನು ತಿಳಿಯಲು ತಾಯಿಯಲ್ಲಿ ತನ್ನ ಗೋತ್ರದ ಬಗ್ಗೆ ಪ್ರಶ್ನಿಸುವನು. "ನಾನು ದಾಸಿಯಾಗಿದ್ದು ತಾರುಣ್ಯದಲ್ಲಿ ನಿನ್ನನ್ನು ಪಡೆದೆ. ನಿನ್ನ ಗೋತ್ರವು ಯಾವುದೆಂದು ನನಗೂ ತಿಳಿಯದು" ಎಂದು ಆ ತಾಯಿ ಏನೂ ಕಪಟವಿಲ್ಲದೆ ನಿಜಸ್ಥಿತಿಯನ್ನು ತಿಳಿಸಿದಳು. ಗುರು ಗೌತಮರ ಬಳಿಗೆ ಹೋದ ಸತ್ಯಕಾಮನೂ ನಿರ್ವಂಚನೆಯಿಂದ ಇದನ್ನೇ ಅರುಹಿದನು. ಯಾವುದಾದರೂ ಒಂದು ಗೋತ್ರವನ್ನು ಕಲ್ಪಿಸಿ ಗುರುಗಳ ಮುಂದೆ ಸುಳ್ಳು ಹೇಳಲು ಪ್ರವರ್ತಿಸಲಿಲ್ಲ. ಅವನ ಈ ಸತ್ಯವಚನದಿಂದ ಸರಳ ವರ್ತನೆಯಿಂದ ಗುರುಗಳು ಪ್ರಸನ್ನರಾದರು. ಇಂತಹ ಪ್ರಾಮಾಣಿಕತನದ ನಿಷ್ಕಪಟ ವರ್ತನೆಯಿಂದ ಸತ್ಯಕಾಮನು ಬ್ರಾಹ್ಮಣನೆಂದೇ ನಿರ್ಧರಿಸಿ ತನ್ನ ಗುರುಕುಲದಲ್ಲಿ ಆವನಿಗೆ ಆಶ್ರಯವನ್ನು ನೀಡಿದರು. ನಾಲ್ಕುನೂರು ದುರ್ಬಲ ಗೋವುಗಳ ಪೋಷಣೆಯ ಜವಾಬ್ದಾರಿಯನ್ನು ಅವನಿಗೆ ನೀಡಿ ಈ ಗೋಸಂಪತ್ತಿಯು ಸಾವಿರ ಸಂಖ್ಯೆಗೆ ತಲುಪುವವರೆಗೆ ಇವುಗಳ ಸೇವೆಯನ್ನು ಮಾಡಲು ಆದೇಶಿಸಿದರು. ಅದರಂತೆ ಅತ್ಯಂತ ನಿಷ್ಠೆಯಿಂದ ಸಾವಿರ ಗೋವುಗಳಾಗುವವರೆಗೆ ಈ ಕಾಯಕವನ್ನು ನಡೆಸಿದನು. ತನ್ನ ಗೋಸೇವೆಯ ಅವಸರದಲ್ಲಿ ಕಾಡುಮೇಡುಗಳಲ್ಲಿ ಸುತ್ತಾಡುತ್ತಿದ್ದ ಈ ಬಾಲಕ ಸತ್ಯಕಾಮನು ಗುರುಗಳ ಉಪದೇಶವಿಲ್ಲದೆಯೆ ತನ್ನ ಸುತ್ತಮುತ್ತಲಿನ ವಸ್ತುಗಳಿಂದಲೇ ದಿವ್ಯ ಜ್ಞಾನವನ್ನು ಪಡೆದನು. ವೃಷಭ, ಹಂಸ, ನೀರುಕೋಳಿಗಳನ್ನು ನೋಡಿ ಅಲ್ಲಿರುವ ದೇವತೆಗಳಿಂದಲೇ ಅವನಿಗೆ ತತ್ವೋಪದೇಶ ದೊರೆಯಿತು. ಅಗ್ನಿಯ ಉಪಾಸನೆ ಗೈಯುವಾಗ ಅಗ್ನಿದೇವನೇ ಅವನಿಗೆ ಜ್ಞಾನವನ್ನು ನೀಡಿದನು. ನಾಲ್ಕು ದಿಕ್ಕುಗಳಲ್ಲಿ, ಭೂಮಿ, ಆಕಾಶ ಮುಂತಾದ ವಸ್ತುಗಳಲ್ಲಿ, ಪಶುಗಳಲ್ಲಿ, ಸೂರ್ಯ ಚಂದ್ರ ಮುಂತಾದ ತೇಜಸ್ಸುಗಳಲ್ಲಿ ನೆಲೆಸಿರುವ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪಗಳ ದರ್ಶನವು ಈ ದೇವತೆಗಳಿಂದ ಸತ್ಯಕಾಮನಿಗೆ ದೊರೆಯಿತು. ಅವನೊಮ್ಮೆ ಗೌತಮರ ಮುಂದೆ ಬಂದು ನಿಂತಾಗ ಗೌತಮರು ಅವನನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರು. ಅವನಲ್ಲಿರುವ ಬ್ರಹ್ಮತೇಜಸ್ಸನ್ನು ಕಂಡು ಆನಂದಭರಿತರಾಗಿ "ಬ್ರಹ್ಮಜ್ಞಾನಿಯ ಲಕ್ಷಣವನ್ನು ನಿನ್ನಲ್ಲಿ ಕಾಣುತ್ತಿದ್ದೇನೆ. ನಿನಗೆ ಉಪದೇಶ ನೀಡಿದವರು ಯಾರು ?" ಎಂದು ಪ್ರಶ್ನಿಸುವರು. "ನನಗೆ ಉಪದೇಶ ನೀಡಿದವರು ಮಾನವರಲ್ಲ. ಮನಷ್ಯರಿಗಿಂತ ಬೇರೆಯಾದ ವ್ಯಕ್ತಿಗಳು ನನಗೆ ದಿವ್ಯಜ್ಞಾನವನ್ನು ನೀಡಿದ್ದಾರೆ. ಆದರೂ ನನಗೆ ತೃಪ್ತಿಯಿಲ್ಲ, ನನ್ನ ಸಾಕ್ಷಾತ್ ಗುರುವಾದ ತಮ್ಮಿಂದಲೇ ನಾನು ಉಪದೇಶ ಪಡೆಯಬೇಕಾಗಿದೆ" ಎಂದು ಪ್ರಾರ್ಥಿಸಿ ಪುನಃ ಅವರಿಂದ ಉಪದೇಶವನ್ನು ಪಡೆಯುವನು.

ಉಪಕೋಸಲನಿಗೆ ಅಗ್ನಿದೇವನ ಉಪದೇಶ

ಸತ್ಯಕಾಮ ಜಾಬಾಲನಲ್ಲಿ ಉಪಕೋಸಲನೆಂಬ ಬ್ರಹ್ಮಚಾರಿಯು ಅಧ್ಯಯನ ಮಾಡುತ್ತಿದ್ದನು. ಹನ್ನೆರಡು ವರ್ಷಗಳಿದ್ದು ಅಗ್ನಿಪರಿಚರ್ಯವನ್ನು ಮಾಡಿದರೂ ಅವನಿಗೆ ಸತ್ಯಕಾಮನು ಬ್ರಹ್ಮಜ್ಞಾನವನ್ನು ನೀಡಲಿಲ್ಲ. ಉಳಿದ ಶಿಷ್ಯರು ಉಪದೇಶ ಪಡೆದು ತಮ್ಮ ತಮ್ಮ ಮನೆಗೆ ತೆರಳುತ್ತಿದ್ದರೂ ಉಪಕೋಸಲನಿಗೆ ಈ ಅವಕಾಶ ದೊರೆಯಲಿಲ್ಲ. ಸತ್ಯಕಾಮನ ಪತ್ನಿಯು ಉಪಕೋಸಲನ ಬಗ್ಗೆ ಅನುಕಂಪ ತೋರಿ ಅವನ

ಧರ್ಮಾನುಷ್ಠಾನವನ್ನೂ ಸೇವೆಯನ್ನೂ ಪ್ರಶಂಸಿಸಿ ಅವನಿಗೆ ಉಪದೇಶವನ್ನು ನೀಡುವಂತೆ ಪತಿಯನ್ನು ಒತ್ತಾಯಿಸಿದರೂ ಉಪದೇಶವನ್ನು ನೀಡದೆಯೇ ಸತ್ಯಕಾಮನು ಪ್ರವಾಸ ಹೊರಟನು. ಅನಾರೋಗ್ಯ ಪೀಡಿತನಾದ ಉಪಕೋಸಲನು ಆಹಾರವನ್ನು ಸ್ವೀಕರಿಸದೆ ಬಳಲುತ್ತಿರುವಾಗ ಅಗ್ನಿದೇವತೆಗಳೇ ಅನುಕಂಪ ಭರಿತರಾಗಿ ಅವನಿಗೆ ಬ್ರಹ್ಮೋಪದೇಶವನ್ನು ನೀಡುತ್ತಾರೆ. ಸಕಲಜೀವರಿಗಿಂತಲೂ ಮಿಗಿಲಾದ ಬಲ ದೇವತೆ ಬ್ರಹ್ಮನಾದ ಮುಖ್ಯಪ್ರಾಣತತ್ವವನ್ನೂ ಜ್ಞಾನ, ಆನಂದ, ಶಕ್ತಿಗಳು ಪರಿಪೂರ್ಣವಾಗಿ ತುಂಬಿ ತುಳುಕುತ್ತಿರುವ ವಿಶ್ವವ್ಯಾಪ್ತನಾದ ಪರಬ್ರಹ್ಮನಾದ ಭಗವಂತನ ಸ್ವರೂಪವನ್ನೂ ಅಗ್ನಿದೇವತೆಗಳು ಉಪಕೋಸಲನಿಗೆ ಉಪದೇಶಿಸುತ್ತಾರೆ. ಅದರಂತೆ ಅಗ್ನಿದೇವತೆಗಳು ತಮ್ಮೊಳಗೆ ಅಂತರ್ಯಾಮಿಯಾಗಿರುವ ಭಗವದ್ರೂಪವೂ ಸೂರ್ಯ, ಚಂದ್ರ , ಭೂಮಿ ಮುಂತಾದ ಬಾಹ್ಯ ಪ್ರಪಂಚದಲ್ಲಿರುವ ಭವಗದ್ರೂಪವೂ ಬೇರೆಬೇರೆ ಅಲ್ಲ. ನಮ್ಮ ಒಳಗೆ ಇದ್ದು ಆತ್ಮನಿಗೂ ಆತ್ಮನಾಗಿ ನಮ್ಮ ವ್ಯವಹಾರ ಪ್ರವರ್ತಕನಾಗಿ ಇರುವ ಅಂತರ್ಯಾಮಿಯೂ ಹೊರಗೆ ಇಡೀ ವಿಶ್ವದಲ್ಲಿ ವ್ಯಾಪ್ತನಾಗಿ ಸಕಲರಿಗೂ ಆಶ್ರಯನಾಗಿರುವ ಬ್ರಹ್ಮನೂ ಒಬ್ಬನೇ ಆಗಿದ್ದಾನೆಂಬುದನ್ನು ಸಾರಿಸಾರಿ ಹೇಳುವರು. ಇಲ್ಲಿ ''ಯ ಏಷ ಆದಿತ್ಯೇ ಪುರುಷಃ ಸೋಽಹಮಸ್ಮಿ'' ಆದಿತ್ಯನಲ್ಲಿರುವ ಪುರುಷನೇ ನಾನಾಗಿದ್ದೇನೆಂದು ಅಗ್ನಿದೇವರತೆಯು ನಿರೂಪಿಸುವಂತೆ ತೋರುತ್ತದೆ. ಅಗ್ನಿ ದೇವತೆಯೂ ಸೂರ್ಯ ದೇವತೆಯೂ ಒಬ್ಬನೇ ಎಂದು ಯಾವ ದಾರ್ಶನಿಕರೂ ಹೇಳುವುದಿಲ್ಲ. ಅದ್ವೈತ ಸಿದ್ಧಾಂತದಲ್ಲಿಯೂ ವಿಭಿನ್ನ ಉಪಾಧಿಗಳಿಂದ ವಿಶಿಷ್ಟರಾದ ಈ ದೇವತೆಗಳು ಭಿನ್ನ ಭಿನ್ನರೇ ಆಗಿರುವರು. ಆದುದರಿಂದ ಈ ದೇವತೆಗಳಿಗೆ ಪರಸ್ಪರ ಅಭೇದವನ್ನು ಹೇಳಿರದೆ ಈ ದೇವತೆಗಳ ಒಳಗೆ ಇನಿಂತಿರುವ ಪರಮ ಪುರುಷನು ಒಬ್ಬನೇ ಎಂಬುದೇ ಈ ವಾಕ್ಯದ ಅರ್ಥವಾಗಿದೆ. ಸೂರ್ಯಮಂಡಲದ ಒಳಗಿರುವ ದೇವನನ್ನು ಸೂರ್ಯನೆಂದು ಕರೆಯುತ್ತೇವೆ. ಅಗ್ನಿಯಲ್ಲಿರುವ ದೇವತೆಯನ್ನು ಅಗ್ನಿಯೆಂದೇ ಕರೆಯುತ್ತೇವೆ. ಅದರಂತೆ ನಮ್ಮ ಒಳಗೆ ಇರುವ ಅಂತರ್ಯಾಮಿಯಾದ ಪರದೇವತೆಯನ್ನೂ ''ಅಹಂ'' ''ಅಸ್ಮಿ'' ಮುಂತಾದ ಶಬ್ದಗಳಿಂದ ಕರೆಯದೆ ಬೇರೆ ಯಾವ ಶಬ್ದದಿಂದ ಕರೆಯಲು ಸಾಧ್ಯ ? ಆದುದರಿಂದ ಇಲ್ಲಿರುವ ''ಅಹಮಸ್ಮಿ'' ಶಬ್ದಗಳು ಶರೀರಿಯಾದ ಜೀವನನ್ನು ಹೇಳಿರದೆ ಜೀವರ ಜೀವನಾದ ಅಂತರ್ಯಾಮಿಯನ್ನೇ ಹೇಳಿದೆ.

ಅಗ್ನಿದೇವತೆಗಳಿಂದ ಇಂತಹ ದಿವ್ಯೋಪದೇಶವನ್ನು ಪಡೆದ ಉಪಕೋಸಲನು ಅಪೂರ್ವ ದಿವ್ಯತೇಜಸ್ಸನ್ನು ಪಡೆದನು. ಪ್ರವಾಸವನ್ನು ಮುಗಿಸಿ ಹಿಂದಿರುಗಿದ ಸತ್ಯಕಾಮನು ಉಪಕೋಸಲನ ಮುಖದಲ್ಲಿರುವ ಉಜ್ವಲ ಕಳೆಯನ್ನು ಕಂಡು ಇವನಿಗೆ ಬ್ರಹ್ಮಜ್ಞಾನವಾಗಿರುವುದನ್ನು ಗುರುತಿಸಿದನು. ಮೂರ್ತಿಮತ್ತಾದ ಅಗ್ನಿದೇವತೆಗಳೇ ಇವನಿಗೆ ಉಪದೇಶವನ್ನು ಕರುಣಿಸಿದ್ದಾರೆಂದು ತಿಳಿದು ಸಂತೋಷ ಗೊಂಡು ಆತನ ಸಾಕ್ಷಾತ್ ಗುರುಗಳಾಗಿ ತಾನೂ ಅವನಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸುವನು.

ಜಗತ್ತಿನ ಸಾರವೇ ಮೂರು ವೇದಗಳಾಗಿವೆ. ಮೂರು ವೇದಗಳ ಸಾರವೇ ''ಭೂಃ'' ''ಭುವಃ'' ''ಸ್ವಃ'' ಎನ್ನುವ ಮೂರು ವ್ಯಾಹೃತಿಗಳು. ಋಗ್ವೇದ, ಯಜುರ್ವೇದ, ಸಾಮವೇದಗಳಿಗೆ ಕ್ರಮವಾಗಿ ಬ್ರಹ್ಮ, ರುದ್ರ, ವಾಯುಗಳು ಅಭಿಮಾನಿ ದೇವತೆಗಳು. ವ್ಯಾಹೃತಿಯ ಮೂರು ಸಾಮಗಳಿಂದ ಭಗವಂತನ ವರಾಹ, ನರಸಿಂಹ, ಕಪಿಲ ರೂಪಗಳು ಪ್ರತಿಪಾದ್ಯಗಳಾಗಿವೆ. ನಮ್ಮ ಕರ್ಮಾನುಷ್ಠಾನಗಳಲ್ಲಿ ಏನಾದರೂ ಲೋಪದೋಷಗಳಾಗಿದ್ದರೆ ವೇದಸಾರಗಳಾದ ಪರಮ ಪವಿತ್ರ ವ್ಯಾಹೃತಿ ಮಂತ್ರಗಳ ಜಪ, ಹೋಮಗಳಿಂದ ಪ್ರಾಯಶ್ಚಿತ್ತ ಮಾಡಿ ಈ ದೋಷಗಳನ್ನು ಪರಿಹರಿಸಿಕೊಳ್ಳಬೇಕು.

ಐದನೆಯ ಅಧ್ಯಾಯ

ಇಂದ್ರಿಯಾಭಿಮಾನಿಗಳಾದ ಎಲ್ಲ ದೇವತೆಗಳಿಗಿಂತಲೂ ಪ್ರಾಣಾಭಿಯಾನಿಯಾದ

ಮುಖ್ಯಪ್ರಾಣನೇ ಶ್ರೇಷ್ಠನು. ಬ್ರಹ್ಮದೇವರು ದೇವತೆಗಳ ಶ್ರೇಷ್ಠತೆಯನ್ನು ಪರೀಕ್ಷಿಸಲು ತನ್ನ ಶರೀರವನ್ನೇ ಪ್ರಯೋಗಶಾಲೆಯನ್ನಾಗಿ ತೋರಿಸಿದರು. ಒಂದೊಂದು ಇಂದ್ರಿಯದ ಅಭಿಮಾನಿ ದೇವತೆಯು ಶರೀರದಿಂದ ನಿರ್ಗಮಿಸಿದರೂ ಉಳಿದ ಇಂದ್ರಿಯಾಭಿಮಾನಿಗಳು ಶರೀರದಲ್ಲಿ ನೆಲೆಸಿ ತಮ್ಮ ವ್ಯಾಪಾರವನ್ನು ನಡೆಸುತ್ತಿದ್ದುದರಿಂದ ಶರೀರವು ಜೀವಂತವಾಗಿತ್ತು. ಮುಖ್ಯಪ್ರಾಣನು ಶರೀರದಿಂದ ಹೊರಗೆ ಬಂದಾಗ ಉಳಿದ ಅಭಿಮಾನಿ ದೇವತೆಗಳಿಗೂ ಶರೀರದಲ್ಲಿರಲು ಸಾಧ್ಯವಾಗದೆ ಎಲ್ಲರೂ ನಿರ್ಗಮಿಸಿ ಶರೀರದ ಪತನವಾಯಿತು. ಆಗ ಉಳಿದ ದೇವತೆಗಳು ಮುಖ್ಯಪ್ರಾಣನ ಮಹತ್ವವನ್ನು ಅರಿತು ಅವನೇ ಜೀವೋತ್ತಮನೆಂದು ಕೊಂಡಾಡಿ ಪೂಜಿಸಿದರು.

ಪಂಚಾಗ್ನಿ ವಿದ್ಯೆ

ಶ್ವೇತಕೇತುವು ಪಾಂಚಾಲ ದೇಶದ ಸಭೆಯಲ್ಲಿ ಭಾಗವಹಿಸಿದಾಗ ರಾಜಾ ಪ್ರವಾಹಣ ಜೈಬಿಲಿಯು ಅವನಲ್ಲಿ ಐದು ಅಗ್ನಿಗಳಲ್ಲಿ ಜೀವಾತ್ಮದ ಹೋಮದ ಪ್ರಕಾರವನ್ನು ಪ್ರಶ್ನಿಸಿದನು. ಮರಣದ ನಂತರ ಜೀವರು ಹೋಗುವ ವಿಭಿನ್ನ ದಾರಿಗಳ ಬಗ್ಗೆ ಪ್ರಶ್ನಿಸಿದನು. ಇದಕ್ಕೆ ಉತ್ತರಿಸಲು ಶ್ವೇತಕೇತುವಿಗೆ ಸಾಧ್ಯವಾಗದಿದ್ದಾಗ ರಾಜನು ''ಅಧ್ಯಯನವನ್ನು ಪೂರ್ಣಗೊಳಿಸಿದ್ದೇನೆಂದು ಸಭೆಯಲ್ಲಿ ಹೇಳಿರುವಿ, ಇದನ್ನು ಉತ್ತರಿಸಲಾಗದ ನಿನ್ನ ಅಧ್ಯಯನವು ಪೂರ್ಣವಾಗುವುದು ಹೇಗೆ'' ಎಂದು ಕೇಳಿದನು. ಅವಮಾನಿತನಾದ ಶ್ವೇತಕೇತುವು ತಂದೆ ಗೌತಮನ ಬಳಿಗೆ ಆಗಮಿಸಿ ''ರಾಜನು ಕೇಳಿದ ಪ್ರಶ್ನೆಗೆ ನನ್ನಿಂದ ಉತ್ತರಿಸಲಾಗಲಿಲ್ಲ. ನನಗೆ ಸರಿಯಾದ ಉಪದೇಶವನ್ನು ನೀಡದೆ ರಾಜನ ಸಭೆಗೆ ಯಾಕೆ ಕಳುಹಿಸಿದೆ ?'' ಎಂದು ಆಕ್ಷೇಪಿಸಿದನು. ರಾಜನು ಕೇಳಿದ ಪ್ರಶ್ನೆಗೆ ಉತ್ತರವು ಗೊತ್ತಿದ್ದರೆ ನಾನು ನಿನಗೆ ಅದನ್ನು ತಿಳಿಸುತ್ತಿದ್ದೆ. ನನಗೆ ಗೊತ್ತಿಲ್ಲದ ವಿಷಯವನ್ನು ನಿನಗೆ ಹೇಗೆ ಉಪದೇಶಿಸಲಿ ?'' ಎಂಬುದಾಗಿ ಪ್ರಾಂಜಲನಾಗಿ ತನ್ನ ಜ್ಞಾನದ ಮಿತಿಯನ್ನು ಗೌತಮನು ಒಪ್ಪಿಕೊಂಡು ಶ್ವೇತಕೇತುವನ್ನು ಕರೆದುಕೊಂಡು ರಾಜಾ ಪ್ರವಾಹಣನ ಬಳಿಗೆ ಆಗಮಿಸುತ್ತಾನೆ. ರಾಜನು ಗೌತಮನನ್ನು ಗೌರವದಿಂದ ಸ್ವಾಗತಿಸಿ ಯಥೇಚ್ಛವಾಗಿ ಧನ, ಕನಕ, ಸಂಪತ್ತುಗಳನ್ನು ಅವನಿಗೆ ಅರ್ಪಿಸಲು ಮುಂದಾಗುವನು. ''ಈ ಭೌತಿಕ ಸಂಪತ್ತಿಗಾಗಿ ನಾನು ನಿನ್ನ ಬಳಿಗೆ ಬಂದಿಲ್ಲ. ನಿನ್ನಲ್ಲಿರುವ ಆಧ್ಯಾತ್ಮ ಸಂಪತ್ತನ್ನು ನಾನು ಪಡೆಯಬೇಕಾಗಿದೆ. ನನ್ನ ಮಗನಲ್ಲಿ ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನೂ ಪಡೆದು ನಿನ್ನಲ್ಲಿ ಹುದುಗಿರುವ ಜ್ಞಾನಸಂಪತ್ತನ್ನು ಹೊಂದಲು ನಾನು ಆಗಮಿಸಿದ್ದೇನೆ'' ಎಂದು ಗೌತಮನು ಹೇಳಿದಾಗ ರಾಜನು ಈ ರಹಸ್ಯ ವಿದ್ಯೆಯನ್ನು ಉಪದೇಶಿಸಲು ಹಿಂದೆ ಮುಂದೆ ನೋಡುವನು. ಕೆಲ ದಿನಗಳವರೆಗೆ ಆಸ್ಥಾನದಲ್ಲಿಯೇ ಇರುವಂತೆ ಗೌತಮನಲ್ಲಿ ಕೇಳಿಕೊಳ್ಳುವನು. ಆಮೇಲೆ ಕ್ರಮೇಣ ಅವನಿಗೆ ಈ ಪಂಚಾಗ್ನಿ ವಿದ್ಯೆಯನ್ನು ಉಪದೇಶಿಸುವನು.

ಮರಣದ ನಂತರ ದೇವತೆಗಳು ಜೀವನನ್ನು ಐದು ಸ್ಥಾನಗಳಿಗೆ ತಲುಪಿಸುತ್ತಾರೆ. ಸ್ವರ್ಗಲೋಕ, ಪರ್ಜನ್ಯಲೋಕ, ಭೂಮಿ, ಗಂಡು ಮತ್ತು ಹೆಣ್ಣು – ಇವೇ ಈ ಐದು ಸ್ಥಾನಗಳು. ಈ ಐದು ಸ್ಥಾನಗಳಲ್ಲಿ ಇರುವ ಭಗವಂತನ ಐದು ರೂಪಗಳೇ ಐದು ಅಗ್ನಿಗಳಾಗಿವೆ. ದೇವತೆಗಳು ಜೀವಾತ್ಮನನ್ನು ಐದು ಸ್ಥಾನಗಳಿಗೆ ತಲುಪಿಸಿ ಅಲ್ಲಿರುವ ಭಗವಂತನೆಂಬ ಅಗ್ನಿಯಲ್ಲಿ ಜೀವಾತ್ಮನನ್ನು ಹೋಮಿಸುತ್ತಾರೆ. ಜೀವನು ಪರಲೋಕಕ್ಕೆ ಹೋಗಿ ಅಲ್ಲಿಂದ ಪರ್ಜನ್ಯಲೋಕಕ್ಕೆ ಇಳಿದು ಮಳೆಯ ದ್ವಾರದಿಂದ ಭೂಮಿಗೆ ತಲುಪಿ ಆಹಾರದಲ್ಲಿ ಸೇರಿ ಪುರುಷನನ್ನು ಪ್ರವೇಶಿಸಿ ರೇತಸ್ಸಿನ ದ್ವಾರಾ ಹೆಣ್ಣಿನ ಗರ್ಭದಲ್ಲಿ ಜನಿಸುವನು. ಈ ಎಲ್ಲಾ ಸ್ಥಾನಗಳಲ್ಲಿಯೂ ಭಗವಂತನು ''ನಾರಾಯಣ'' ''ವಾಸುದೇವ'' ''ಸಂಕರ್ಷಣ'' ''ಪ್ರದ್ಯುಮ್ನ'' ''ಅನಿರುದ್ಧ'' ರೂಪಗಳಿಂದ ಜೀವನಿಗೆ ಆಶ್ರಯನಾಗಿರುವನು. ದೇವತೆಗಳು ಮಾಡುವ ಸೃಷ್ಟಿ ವ್ಯಾಪಾರವೂ ಭಗವಂತನ ಪೂಜಾರೂಪವಾದ ಯಜ್ಞವೇ ಆಗಿರುತ್ತದೆ. ಈ ಯಜ್ಞದಲ್ಲಿ ಭಗವಂತನು ಅಗ್ನಿಯಾಗಿದ್ದರೆ ಜೀವನು

ಹವಿಸ್ಸಾಗಿರುವನು. ಹೀಗೆ ಐದು ಸ್ಥಾನಗಳಲ್ಲಿ ಭಗವಂತನ ಈ ಐದು ರೂಪಗಳನ್ನು ಸಾಧಕನು ಚಿಂತಿಸಬೇಕು. ಇದೇ ಪಂಚಾಗ್ನಿ ವಿದ್ಯೆಯಾಗಿದೆ.

ದೇವಯಾನ ಮತ್ತು ಪಿತೃಯಾನ

ಬ್ರಹ್ಮಜ್ಞಾನವನ್ನು ಪಡೆದವನು ಬೆಳಕು, ಹಗಲು, ಶುಕ್ಲಪಕ್ಷ, ಉತ್ತರಾಯಣ, ಸಂವತ್ಸರ ಇವುಗಳಿಗೆ ಅಭಿಮಾನಿಗಳಾದ ದೇವತೆಗಳಿಂದ ಅಧಿಷ್ಠಿತವಾದ ಲೋಕಗಳ ಮಾರ್ಗವಾಗಿ ವಾಯುದೇವರನ್ನು ಹೊಂದುವನು. ವಾಯುದೇವರು ಇವರಿಗೆ ಮುಕ್ತಿಯನ್ನು ದೊರಕಿಸಿಕೊಡುವರು. ಅಲ್ಲಿ ಇವರು ಶಾಶ್ವತ ಸುಖವನ್ನು ಅನುಭವಿಸುವರು. ಬ್ರಹ್ಮಜ್ಞಾನಿಗಳು ಭಗವಂತನ ಕಡೆಗೆ ಸಾಗುವ ಈ ದಾರಿಯನ್ನು ದೇವಯಾನವೆಂದು ಕರೆಯುತ್ತಾರೆ. ನಾನಾವಿಧ ಪಲಗಳ ಅಭಿಲಾಷೆಯಿಂದ ವಿವಿಧ ಸತ್ಕರ್ಮಗಳನ್ನು ಬಹಳ ಜನರು ಮಾಡುತ್ತಾರೆ. ಇವರು ನಿಷ್ಕಾಮ ಕರ್ಮಿಗಳಲ್ಲ. ಭೋಗದ ಆಶೆಯಿಂದ ಉತ್ತಮ ಕರ್ಮಗಳನ್ನು ಮಾಡುವ ಇವರನ್ನು ಪ್ರವೃತ್ತಿಕರ್ಮಿಗಳೆಂದು ಹೆಸರಿಸಲಾಗಿದೆ. ಇವರು ಹೊಗೆ, ರಾತ್ರಿ, ಕೃಷ್ಣಪಕ್ಷ, ದಕ್ಷಿಣಾಯನ, ಸಂವತ್ಸರಗಳ ಅಭಿಮಾನಿ ದೇವತೆಗಳಿಂದ ಅಧಿಷ್ಠಿತವಾದ ಮಾರ್ಗದಲ್ಲಿ ಸಾಗಿ ಪುಣ್ಯಲೋಕದಲ್ಲಿ ಕೆಲಕಾಲವಿದ್ದು ಪುನಃ ಈ ಸಂಸಾರಕ್ಕೆ ತಿರುಗಿ ಆಗಮಿಸುತ್ತಾರೆ. ತಮ್ಮ ಸತ್ಕರ್ಮ, ದುಷ್ಕರ್ಮಗಳಿಗೆ ಅನುಗುಣವಾಗಿ ಉತ್ತಮ ಅಥವಾ ನಿಕೃಷ್ಟ ಜನ್ಮವನ್ನು ಪಡೆಯುತ್ತಾರೆ. ಹೀಗೆ ಫಲಾಭಿಲಾಷೆಯಿಂದ ಕಾರ್ಯಪ್ರವೃತ್ತರಾದವರು ಶಾಶ್ವತ ಸುಖವನ್ನು ಪಡೆಯದೆ ಈ ಸಂಸಾರ ಚಕ್ರದಲ್ಲಿ ಸುತ್ತುವರಿಯಬೇಕಾಗುವುದು. ನಿಷ್ಕಾಮ ಕರ್ತವ್ಯವನ್ನು ಆಚರಿಸಿ ಬ್ರಹ್ಮಜ್ಞಾನವನ್ನು ಪಡೆದ ಮಹಾತ್ಮರು ಹಗಲು, ಬೆಳಕು, ಶುಕ್ಲ ಪಕ್ಷದ ಬೆಳದಿಂಗಳು, ಉತ್ತರಾಯಣದ ನಿರಭ್ರ ಆಕಾಶದ ಪ್ರಸನ್ನ ಪ್ರಕಾಶಮಾನವಾದ ಶುಭ್ರ ಪಥದಲ್ಲಿ ಸಾಗಿದರೆ ಕಾಮನೆಯ ಗುಲಾಮರಾಗಿ ಸತ್ಕರ್ಮದಲ್ಲಿ ತೊಡಗುವರು. ಹೊಗೆ, ಮೋಡ, ಕತ್ತಲೆಯ ಮಲಿನ ಮಾರ್ಗದಲ್ಲಿ ಸಾಗಿ ಅಮೃತತ್ವವನ್ನು ಪಡೆಯದೆ ಸಂಸಾರದ ಆವರ್ತದಲ್ಲಿಯೇ ತಿರುಗುವರು. ಇದೇ ಪಿತೃಯಾನವಾಗಿದೆ. ನಿಷ್ಕಾಮಕರ್ಮ ಮತ್ತು ಬ್ರಹ್ಮಜ್ಞಾನದ ದಾರಿಯಲ್ಲಿಯೂ ನಡೆಯದೆ ಫಲಾಶೆಯಿಂದಾದರೂ ಸತ್ಕರ್ಮವನ್ನು ಆಚರಿಸದೆ ಉಭಯ ಭ್ರಷ್ಟರ ಸ್ಥಿತಿ ಇನ್ನೂ ಶೋಚನೀಯ. ಅವರು ಸ್ವರ್ಗಲೋಕದ ಸುಖವನ್ನೂ ಸವಿಯುವುದಿಲ್ಲ. ಮೋಕ್ಷವಂತೂ ಅವರಿಗೆ ದೂರ ತೋಪಾಸ್ತ. ಅವರು ಕೇವಲ ಜನನ ಮರಣ ಚಕ್ರದಲ್ಲಿ ಭ್ರಮಿಸುತ್ತಾ ನಾನಾ ಹೀನ ಯೋನಿಗಳಲ್ಲಿ ಕಾಲ ಕಳೆಯುವರು.

ವೈಶ್ವಾನರ ವಿದ್ಯೆ

ಪ್ರಾಚೀನಶಾಲ, ಸತ್ಯಯಜ್ಞ, ಇಂದ್ರದ್ಯುಮ್ನ, ಜನ, ಬುಡಿಲರೆಂಬ ಐದು ಮಂದಿ ಮಹಾನುಭಾವರು ಭಗವಂತನ ಜಿಜ್ಞಾಸುಗಳಾಗಿ ಉದ್ದಾಲಕರು ವೈಶ್ವಾನರ ವಿದ್ಯೆಯನ್ನು ತಿಳಿದವರೆಂದು ಭಾವಿಸಿ ಅವರ ಬಳಿಗೆ ಆಗಮಿಸಿದರು. ಆದರೆ ಪ್ರಾಮಾಣಿಕರಾದ ಉದ್ದಾಲಕರು ತಾನು ಸರಿಯಾಗಿ ಈ ವಿದ್ಯೆಯನ್ನು ತಿಳಿಯದೆ ಉಪದೇಶಿಸುವುದು ಸೂಕ್ತವಲ್ಲವೆಂದು ಭಾವಿಸಿ ಅವರನ್ನು ಕರೆದುಕೊಂಡು ಕೇಕಯ ರಾಜನ ಬಳಿಗೆ ಹೋಗುವರು. ಕೇಕಯ ರಾಜನು ಮಹಾಜ್ಞಾನಿಯೂ ಧಾರ್ಮಿಕನೂ ಆದ ರಾಜನಾಗಿದ್ದನು. ತನ್ನ ರಾಜ್ಯದಲ್ಲಿ ಕಳ್ಳರೂ ಕುಡುಕರೂ ಆಚಾರಹೀನರೂ ಆದ ಪ್ರಜೆಗಳೇ ಇಲ್ಲ; ರಾಜ್ಯದಲ್ಲಿ ಎಲ್ಲಿಯೂ ವ್ಯಭಿಚಾರದ ಛಲನೆಯೇ ನಡೆಯಲಾರದೆಂದು ಆತ್ಮವಿಶ್ವಾಸದಿಂದ ಹೇಳಿಕೊಳ್ಳುವಂಥಹ ಆದರ್ಶ ರಾಜನಾಗಿದ್ದನು. ಅವನು ಈ ಆರು ಮಂದಿಯನ್ನೂ ಸ್ವಾಗತಿಸಿ ಅವರಿಗೆ

ಧನಕಾಣಿಕೆಗಳನ್ನು ಅರ್ಪಿಸಲು ಸಿದ್ಧತೆಯನ್ನು ನಡೆಸಿದನು. ''ನಾವು ಈ ಧನಕ್ಕಾಗಿ ಆಗಮಿಸಲಿಲ್ಲ. ಜ್ಞಾನಧನ ಪಡೆಯಲು ಬಂದಿದ್ದೇವೆ. ನೀನು ಅಧ್ಯಯನ ಮಾಡಿದ ವೈಶ್ವಾನರ ವಿದ್ಯೆಯನ್ನು ನಮಗೆ ಕರುಣಿಸು'' ಎಂದು ಈ ಋಷಿಗಳು ರಾಜನಲ್ಲಿ ಕೇಳಿಕೊಂಡರು. ಪ್ರಥಮವಾಗಿ ಈ ಆರು ಮಂದಿಯನ್ನೂ ಕೇಕಯ ರಾಜನು ಪ್ರತ್ಯೇಕ ಪ್ರತ್ಯೇಕವಾಗಿ ವಿಚಾರಿಸಿ ಅವರು ಪಡೆದಿರುವ ಜ್ಞಾನದ ಸ್ವರೂಪವನ್ನು ಪರೀಕ್ಷಿಸಿದನು. ಇವರಲ್ಲಿ ಪ್ರತಿಯೊಬ್ಬರೂ ದ್ಯುಲೋಕ, ಸೂರ್ಯ, ವಾಯು, ಆಕಾಶ, ಭೂಮಿ, ನೀರುಗಳಲ್ಲಿ ವೈಶ್ವಾನರರೂಪಿಯಾದ ಭಗವಂತನ ಒಂದೊಂದು ಅವಯವವನ್ನು ಮಾತ್ರ ತಿಳಿದು ಉಪಾಸನೆ ಮಾಡುತ್ತಿದ್ದರು. ಕೇಕಯ ರಾಜನು ಅವರು ಮಾಡುತ್ತಿರುವ ಉಪಾಸನೆಯು ಅಪೂರ್ಣವೆಂದೂ ವ್ಯಸ್ತೋಪಾಸನೆಯೆಂದೂ ತಿಳಿಸಿ ವೈಶ್ವಾನರರೂಪಿಯಾದ ಭಗವಂತನ ಸಮಗ್ರ ಉಪಾಸನೆಯನ್ನು ತಿಳಿಸಿ ಹೇಳುವನು. ನಮ್ಮ ಹೃದಯದೊಳಗೆ ಸೂಕ್ಷ್ಮರೂಪದಲ್ಲಿ ಇರುವ ಭಗವಂತನೇ ಈ ಜಗತ್ತಿನಲ್ಲಿ ವಿಶ್ವರೂಪವನ್ನು ಧರಿಸಿ ನಿಂತಿದ್ದಾನೆ. ಅವನ ಶಿರಸ್ಸು ದ್ಯುಲೋಕದಲ್ಲೂ ಕಣ್ಣು ಸೂರ್ಯಮಂಡಲದಲ್ಲೂ ಪ್ರಾಣವು ವಾಯುವಿನಲ್ಲೂ ದೇಹದ ಮಧ್ಯಭಾಗವು ಆಕಾಶದಲ್ಲೂ ಹೊಟ್ಟೆಯ ಕೆಳಭಾಗವು ನೀರಿನಲ್ಲಿಯೂ ಪಾದವು ಭೂಮಿಯಲ್ಲಿಯೂ ನೆಲೆಸಿದೆ. ಆವಾವ ವಸ್ತುಗಳಲ್ಲಿರುವ ಅಭಿಮಾನಿ ದೇವತೆಗಳಿಗೆ ಭಗವಂತನ ಈ ಅವಯವ ರೂಪಗಳೇ ಆಧಾರವಾಗಿವೆ. ಪರಮಾತ್ಮನೂ ಅವನ ಈ ಅವಯವಗಳೂ ಒಂದೇ ಆಗಿವೆ. ಹೀಗೆ ಈ ಜಗತ್ತನ್ನು ವ್ಯಾಪಿಸಿ ಎಲ್ಲಾ ವಸ್ತುಗಳಲ್ಲಿಯೂ ನೆಲೆಸಿರುವ ವಿಶ್ವರೂಪಿಯಾದ ಭಗವಂತನ ವೈಶ್ವಾನರರೂಪವನ್ನು ತಿಳಿದುಕೊಳ್ಳಬೇಕು. ಈ ವೈಶ್ವಾನರ ರೂಪಿಯಾದ ಭಗವಂತನೇ ನಮ್ಮ ಹೃದಯದೊಳಗೂ ನೆಲೆಸಿದ್ದಾನೆ. ನಾವು ಭೋಜನವನ್ನು ಮಾಡುವಾಗ ಈ ರೂಪವನ್ನು ಸ್ಮರಿಸಿ ಅವನಿಗೆ ಆಹುತಿಯನ್ನು ನೀಡುವುದಾಗಿ ಭಾವಿಸಬೇಕು. ನಾವು ಭುಂಜಿಸುವ ಪ್ರತಿಯೊಂದು ಗ್ರಾಸವೂ ಭಗವಂತನಿಗೆ ಅರ್ಪಿಸುವ ಹವಿಸ್ಸು ಎಂಬುದಾಗಿ ತಿಳಿದುಕೊಂಡು ನಾವು ಭೋಜನವನ್ನು ಮಾಡಿದಾಗ ಇದೂ ಪವಿತ್ರ ಯಜ್ಞವಾಗಿ ಪರಿಣಮಿಸುತ್ತದೆ. ಭೋಜನವೂ ಒಂದು ಯಜ್ಞವೆಂದು ಪರಿಗಣಿಸುವಾಗ ಪವಿತ್ರವಾದ ಆಹಾರವನ್ನೇ ಸ್ವೀಕರಿಸುವ ಪ್ರವೃತ್ತಿಯು ನಮ್ಮಲ್ಲಿ ಬೆಳೆಯುತ್ತದೆ. ನಿಷಿದ್ಧವಾದ ಕೆಟ್ಟ ಆಹಾರವನ್ನಾಗಲೀ ಅನ್ಯಾಯದಿಂದ ಗಳಿಸಿದ ಆಹಾರವನ್ನಾಗಲೀ ಈ ಭೋಜನ ಯಜ್ಞದಲ್ಲಿ ನಾವು ಹೇಗೆ ಅರ್ಪಿಸೋಣ ? ನಮ್ಮ ಜೀವನವನ್ನೇ ಪರಿವರ್ತಿಸಬಲ್ಲ ಉತ್ತಮ ಸ್ಫೂರ್ತಿಯು ಈ ವೈಶ್ವಾನರ ಯಜ್ಞದಲ್ಲಿ ಅಡಗಿದೆ.

ಆರನೇ ಅಧ್ಯಾಯ

'ಯೇನಾಶ್ರುತಂ ಶ್ರುತಂ ಭವತಿ'

ಹನ್ನೆರಡು ವರುಷ ಗುರುಕುಲ ವಾಸವನ್ನು ಪೂರೈಸಿದ ಶ್ವೇತಕೇತುವು ಪಾಂಡಿತ್ಯದ ಗರ್ವದಿಂದಲೇ ತಂದೆಯ ಬಳಿಗೆ ಆಗಮಿಸುತ್ತಾನೆ. ಅವನ ಅಹಂಕಾರವನ್ನು ಇಳಿಸುವಂತಹ ಪ್ರಶ್ನೆಯನ್ನು ತಂದೆ ಉದ್ದಾಲಕನು ಅವನ ಮುಂದಿಡುವನು. ''ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿಯಬಹುದೋ ಆ ವಸ್ತುವನ್ನು ತಿಳಿದು ಮನನ ಮಾಡಿರುವಿಯಾ ?'' ಎಂಬ ತಂದೆಯ ಪ್ರಶ್ನೆಗೆ ಉತ್ತರಿಸಲು ಶ್ವೇತಕೇತುವಿಗೆ ಸಾಧ್ಯವಾಗಲಿಲ್ಲ. ''ಪರಬ್ರಹ್ಮನೇ ಆ ವಸ್ತು. ಅವನನ್ನು ತಿಳಿದರೆ ಇಡೀ ವಿಶ್ವವನ್ನೇ ನಾವು ತಿಳಿದಂತೆ. ಈ ಜಗತ್ತನ್ನು ತಿಳಿದರೆ ದೊರೆಯುವ ಪ್ರಯೋಜನವೆಲ್ಲವನ್ನೂ ನಾವು ಭಗವಂತನ ಜ್ಞಾನದಿಂದ ಪಡೆಯಬಲ್ಲೆವು'' ಎಂಬುದಾಗಿ ಶ್ವೇತಕೇತುವಿಗೆ ಉದ್ದಾಲಕರು ವಿವರಿಸುವರು. ಜಗತ್ತಿನಲ್ಲಿ ಭಗವಂತನೇ ಪ್ರಧಾನವೂ ಸಾರಭೂತವೂ ಆದ ವಸ್ತುವಾಗಿದ್ದಾನೆ. ಪ್ರಧಾನವಾದ ಭಾಗವನ್ನು ತಿಳಿದರೆ ಉಳಿದ ಭಾಗವನ್ನು

ತಿಳಿಯಲು ಯಾರೂ ಪ್ರಯತ್ನಿಸುವುದಿಲ್ಲವೆಂಬುದನ್ನು ಲೋಕದಲ್ಲೂ ನಾವು ಕಾಣುತ್ತೇವೆ. ಮಾವಿನ ಹಣ್ಣಿನ ರಸಕವಳವನ್ನು ತಿಂದ ಮೇಲೆ ಸಿಪ್ಪೆ-ಗೊರಟುಗಳನ್ನು ತಿನ್ನದಿದ್ದರೂ ಇಡೀ ಮಾವಿನ ಹಣ್ಣನ್ನು ತಿಂದಿದ್ದಾನೆಂದು ನಾವು ಹೇಳುವುದಿಲ್ಲವೆ ? ಈಗಲೂ, ಪ್ರಧಾನವಾದ ಅಂತರ್‌ರಾಷ್ಟ್ರೀಯ ಭಾಷೆಯನ್ನು ತಿಳಿದರೆ ಎಲ್ಲ ಭಾಷೆಗಳನ್ನೂ ತಿಳಿದಂತೆಯೇ ಎಂದು ನಾವು ಹೇಳುವುದಿಲ್ಲವೇ ? ಹಿಂದಿನ ಕಾಲದಲ್ಲೂ ಸಕಲ ಭಾಷೆಗಳಿಗೂ ತಾಯಿಯಾದ ಎಲ್ಲ ಕಡೆಗಳಲ್ಲೂ ಪಸರಿಸಿದ ಸಂಸ್ಕೃತ ಭಾಷೆಯನ್ನು ತಿಳಿದರೆ ಅವನು ಎಲ್ಲಾ ಭಾಷೆಗಳನ್ನೂ ತಿಳಿದಂತೆಯೇ ; ಎಲ್ಲಿ ಬೇಕಾದರೂ ಅವನು ಸಂಚರಿಸಬಹುದೆಂದು ಹೇಳುತ್ತಿದ್ದರು. ಅದರಂತೆ ಸರ್ವೋತ್ತಮನಾದ ಭಗವಂತನನ್ನು ತಿಳಿದರೆ ಜಗತ್ತಿನಲ್ಲಿ ತಿಳಿಯಬೇಕಾದದ್ದು ಏನೂ ಇರುವುದಿಲ್ಲವೆಂದು ಈ ವಾಕ್ಯದ ಅಭಿಪ್ರಾಯ. ಅದರಂತೆ ಜಗತ್ತಿಗೆ ಕಾರಣನಾದ ಪರಮಾತ್ಮನನ್ನು ತಿಳಿದರೆ ಕಾರ್ಯಪ್ರಪಂಚವನ್ನೂ ನಾವು ತಿಳಿದಂತೆಯೇ. ರೋಗದ ಮೂಲವನ್ನು ತಿಳಿದವನನ್ನೇ ನಾವು ರೋಗದ ತಜ್ಞನೆಂದು ಕರೆಯುತ್ತೇವೆ. ಜಗತ್ತಿನ ಮೂಲನಾದ ಭಗವಂತನನ್ನು ತಿಳಿದವನೇ ಜಗತ್ತನ್ನು ತಿಳಿದವನೂ ಆಗುವನು. ಜಗತ್ತಿನ ಬಿಂಬರೂಪಿಯಾದ ಭಗವಂತನಲ್ಲಿ ಜಗತ್ತಿನ ಒಂದೊಂದು ವಸ್ತುಗಳಲ್ಲೂ ಇರುವ ಗುಣಶಕ್ತಿಗಳು ಕೇಂದ್ರೀಕರಿಸಿವೆ. ಆದುದರಿಂದ ಒಬ್ಬ ಭಗವಂತನನ್ನೂ ಅವನ ಗುಣ-ಮಹಿಮೆಗಳನ್ನೂ ತಿಳಿದರೆ ಮತ್ತೆ ಜಗತ್ತಿನಲ್ಲಿ ತಿಳಿಯಲು ಏನಿದೆ ? ಒಂದು ಸಣ್ಣ ವಸ್ತುವನ್ನು ತಿಳಿದುಕೊಂಡಲ್ಲಿ ಅದಕ್ಕೆ ಸದೃಶವಾದ ಬಹು ಪದಾರ್ಥಗಳ ಜ್ಞಾನವು ನಮಗೆ ದೊರೆಯುತ್ತದೆ. ಒಂದು ಹಸುವನ್ನು ನೋಡಿದ ನಂತರ ಮತ್ತೆ ಪ್ರತ್ಯೇಕವಾಗಿ ಬೇರೆ ಬೇರೆ ಹಸುಗಳನ್ನು ನೋಡುವ ಆವಶ್ಯಕತೆ ಇದೆಯೇ ? ಒಂದು ಮಣ್ಣಿನ ವಸ್ತುವನ್ನು ನೋಡಿದಲ್ಲಿ ಮಣ್ಣಿನ ಪದಾರ್ಥಗಳೆಲ್ಲವನ್ನೂ ನಮಗೆ ತಿಳಿಯಲು ಸಾಧ್ಯವಾಗುತ್ತದೆ. ಅಲ್ಪ ವಸ್ತುವನ್ನು ನೋಡಿ ಬಹು ಪದಾರ್ಥಗಳ ಪರಿಜ್ಞಾನವನ್ನು ನಾವು ಪಡೆಯುವುದಾದರೆ ಅನಂತಗುಣಶಾಲಿಯಾದ ಪರಮಾತ್ಮನೆಂಬ ಮಹಾವಸ್ತುವನ್ನು ತಿಳಿದ ಮೇಲೆ ಅವನ ಮುಂದೆ ಅತ್ಯಲ್ಪವೆನಿಸಿದ ಈ ಪ್ರಪಂಚವನ್ನು ಪುನಃ ತಿಳಿಯಲು ಏನಿದೆ ? ಈ ರೀತಿಯಲ್ಲಿ ಎಲ್ಲ ವಸ್ತುಗಳಲ್ಲಿ ಬಿಡಿಬಿಡಿಯಾಗಿ ಇರುವ ಗುಣಶಕ್ತಿಗಳಲ್ಲೆಲ್ಲಾ ಸಮಗ್ರವಾಗಿ ನೆಲೆಸಿರುವ ಸರ್ವೋತ್ತಮನೂ ಸರ್ವಕಾರಣನೂ ಆದ ಪರಮಾತ್ಮನನ್ನು ತಿಳಿದ ಮೇಲೆ ಇಡೀ ವಿಶ್ವವೇ ಅವನಿಗೆ ಜ್ಞಾತಪ್ರಾಯವೆಂದು ಈ ಉಪನಿಷತ್ತು ಹೇಳುತ್ತದೆ.

ಪ್ರಪಂಚವು ಮಿಥ್ಯೆ, ಬ್ರಹ್ಮನಿಂದ ಬೇರೆಯಾಗಿ ಅದಕ್ಕೆ ಅಸ್ತಿತ್ವವಿಲ್ಲವೆಂದಾಗಲೀ, ಬ್ರಹ್ಮನೇ ಜಗತ್ತಾಗಿ ಪರಿಣಾಮಗೊಂಡಿದ್ದಾನೆಂದಾಗಲೀ ಈ ವಾಕ್ಯದ ಅಭಿಪ್ರಾಯವಲ್ಲ. ಇಲ್ಲಿರುವ ''ವಾಚಾರಂಭಣಂ ವಿಕಾರಃ'' ಮುಂತಾದ ವಾಕ್ಯಗಳಲ್ಲಿ ಜಗತ್ತು ಸುಳ್ಳೆಂದು ಹೇಳುವ ಒಂದೇ ಒಂದು ಪದವೂ ಕಾಣುವುದಿಲ್ಲ. ಬ್ರಹ್ಮನಲ್ಲಿ ಜಗತ್ತು ಕಲ್ಪಿತವಾದಲ್ಲಿ ಹಗ್ಗದ ಜ್ಞಾನದಿಂದ ಅಲ್ಲಿ ಕಲ್ಪನೆಗೊಂಡ ಹಾವಿನ ಜ್ಞಾನದ ನಿರಸನವಾಗುವಂತೆ ಬ್ರಹ್ಮಜ್ಞಾನದಿಂದ ಜಗತ್ತನ್ನು ತಿಳಿಯುವ ಬದಲು ಜಗತ್ತಿನ ಜ್ಞಾನವೇ ಇಲ್ಲವೆನಿಸಬೇಕಾಗುತ್ತದೆ. ಚೇತನರೂಪಿಯಾದ ಬ್ರಹ್ಮನು ಜಡವೂ, ದೋಷವೂ ಆದ ಜಗತ್ತಾಗಿ ಪರಿಣಮಿಸುತ್ತಾನೆಂಬುದೂ ಅತ್ಯಂತ ಅಸಂಬದ್ಧವಾದ ಸಂಗತಿಯಾಗಿದೆ.

ಈ ಭಾಗದಲ್ಲಿರುವ ''ಏಕಮೇವಾದ್ವಿತೀಯಂ'' ಎಂಬ ವಾಕ್ಯಕ್ಕೆ ಎರಡನೇ ವಸ್ತುವೇ ಇಲ್ಲವೆಂದು ಅರ್ಥವಲ್ಲ. ಅವನಿಗೆ ಸಮಾನನೂ ಅವನಿಗಿಂತ ಅತಿಶಯನಾದವನೂ ಇನ್ನೊಬ್ಬನಿಲ್ಲವೆಂಬುದನ್ನೇ ಈ ವಾಕ್ಯವು ಹೇಳುತ್ತದೆ. ಲೋಕದಲ್ಲಿಯ ಒಬ್ಬ ರಾಷ್ಟ್ರದ ನಾಯಕನನ್ನು 'ಈ ದೇಶದಲ್ಲಿ ಈತನೇ ಏಕಮೇವಾದ್ವಿತೀಯ ವ್ಯಕ್ತಿ' ಎಂದು ಕರೆದರೆ ಆ ದೇಶದಲ್ಲಿ ಬೇರೆ ಜನರೇ ಇಲ್ಲವೆಂದು ಅರ್ಥವಾಗುತ್ತದೆಯೇ ?

ಮುಂದೆ ಈ ಅಧ್ಯಾಯದಲ್ಲಿ ಭಗವಂತನು ಮಾಡುವ ಜಗತ್‌ಸೃಷ್ಟಿ ವ್ಯಾಪಾರವನ್ನು ವಿವರಿಸಿ ಅವನು

ಸರ್ವಕಾರಣನೂ ವಿಶ್ವದ ಪ್ರಧಾನ ವಸ್ತುವೂ ಆಗಿದ್ದಾನೆ ಎಂಬುದನ್ನು ಸಮರ್ಥಿಸಲಾಗಿದೆ. ಆದುದರಿಂದ ಎರಡನೆಯ ಪದಾರ್ಥವೇ ಇಲ್ಲವೆಂದು ಈ ಉಪನಿಷತ್ತಿನ ಅಭಿಪ್ರಾಯವಲ್ಲ. ಅಂತಹ ಭಗವಂತನ ಅಧೀನರಾಗಿ ಹಗ್ಗಕ್ಕೆ ಕಟ್ಟಿದ ಹಕ್ಕಿಗಳಂತೆ ನಾವು ಈ ಜಗತ್ತಿನಲ್ಲಿ ವ್ಯವಹರಿಸುತ್ತೇವೆ. ನಮ್ಮ ಜೊತೆಗೆ ನಮಗಿಂತ ಬೇರೆ ಪರಮಾತ್ಮನಿದ್ದರೂ ನಾವು ಅವನನ್ನು ಬೇಗನೇ ಗುರುತಿಸುವುದಿಲ್ಲ. ಪುಷ್ಪದ ವಿಭಿನ್ನ ರಸಗಳು ಜೇನಿನಲ್ಲಿ ಸೇರಿದಾಗ ಅವುಗಳು ಪ್ರತ್ಯೇಕವಾಗಿದ್ದರೂ ಆ ಭಿನ್ನತೆಯು ನಮಗೆ ತೋರುವುದಿಲ್ಲ. ನದಿಗಳ ನೀರು ಮತ್ತು ಅಭಿಮಾನಿ ದೇವತೆಗಳು ಸಮುದ್ರದಲ್ಲಿ ಸೇರಿದರೂ ಆ ಪ್ರತ್ಯೇಕತೆಯು ಗೋಚರವಾಗುವುದಿಲ್ಲ. ಅದರಂತೆ ಭಗವಂತನು ನಮ್ಮ ಜೊತೆಗೆ ಇದ್ದರೂ ನಾವು ಅವನನ್ನು ತಿಳಿಯುವುದಿಲ್ಲ. ಹೀಗೆ ಭಗವಂತನ ಆಶ್ರಯದಲ್ಲಿದ್ದರೂ ಅವನ ಪ್ರತ್ಯೇಕತೆಯನ್ನು ತಿಳಿಯದವರು ಮಹಾ ಅನರ್ಥಕ್ಕೆ ಭಾಗಿಯಾಗುವರು. ಮರ ಗಿಡಗಳ ಜೀವನವನ್ನು ಗಮನಿಸಿದಾಗ ಈ ಜೀವರ ಅಸ್ವಾತಂತ್ರ್ಯವನ್ನು ಕ್ಷಣ ಕ್ಷಣಗಳಲ್ಲಿ ಮನಗಾಣಬಹುದು. ಮರಕ್ಕೆ ಒಮ್ಮೊಮ್ಮೆ ನಾವು ಎಷ್ಟು ಆಘಾತ ಮಾಡಿದರೂ ಅದು ರಸವನ್ನೇ ಸುರಿಸುತ್ತದೆ. ನಾಶವಾಗುವುದಿಲ್ಲ. ಕೆಲವೊಮ್ಮೆ ಏನೂ ವಿಶೇಷ ಕಾರಣವಿಲ್ಲದಿದ್ದರೂ ಒಣಗಿ ನಾಶವಾಗುತ್ತದೆ. ಮರದಲ್ಲಿರುವ ಚೇತನಕ್ಕೂ ಚೇತನನಾದ ಎಲ್ಲರ ಜೀವನಕ್ಕೂ ಪೋಷಕನಾದ ಭಗವಂತನು ಮರೆಯಾದಾಗ ಮರವೂ ಮರಣವನ್ನಪ್ಪುತ್ತದೆ. ಅದರಂತೆ ಮಾನವ ಜೀವನದಲ್ಲಿಯೂ ಈ ಪಾರತಂತ್ರ್ಯವನ್ನು ನಾವು ಅನುಭವಿಸುತ್ತಿದ್ದೇವೆ. ಪರಮಾತ್ಮನು ಈ ದೇಹದಲ್ಲಿ ಇರುವವರೆಗೆ ರುಗ್ಣಾವಸ್ಥೆಯಲ್ಲಿಯೂ ನಾವು ಎಲ್ಲರನ್ನೂ ಗುರುತಿಸುತ್ತೇವೆ. ಭಗವಂತನು ಈ ದೇಹವನ್ನು ತೊರೆದು ಪ್ರಾಣ ಇಂದ್ರಿಯಶಕ್ತಿಯನ್ನು ಸೆಳೆದಾಗ ಜ್ಞಾನವೆಲ್ಲವೂ ಲುಪ್ತವಾಗುವುದು. ಹೀಗೆ ಅಸ್ವತಂತ್ರರಾದ ನಮಗೆ ಪ್ರವರ್ತಕನಾಗಿ ನಮಗಿಂತ ಭಿನ್ನನಾದ ಪರಮಾತ್ಮನ ಅಸ್ತಿತ್ವವನ್ನು ಒಪ್ಪಿಕೊಳ್ಳಬೇಕು. ಆದರೂ ನಮ್ಮ ಸ್ಥೂಲದೃಷ್ಟಿಗೆ ಅವನು ತೋರುವುದಿಲ್ಲ. ಹಣ್ಣಿನ ಬೀಜದ ಒಳಗಿರುವ ಸೂಕ್ಷ್ಮ ಪದಾರ್ಥಗಳನ್ನು ಭೇದಿಸಿದಾಗ ನಮಗೆ ಏನೂ ತೋರುವುದಿಲ್ಲ. ಆದರೂ ನಮ್ಮ ಕಣ್ಣಿಗೆ ಕಾಣದ ಆ ಅತ್ಯಂತ ಸೂಕ್ಷ್ಮವಾದ ಜೀವ ಚೈತನ್ಯದ ಶಕ್ತಿಯಿಂದಲೇ ಇಡೀ ಮರವು ನಿಂತಿದೆ. ಅದರಂತೆ ಜೀವರೊಳಗೆ ಇರುವ ಪರಮಾತ್ಮನ ಶಕ್ತಿಯಿಂದಲೇ ನಾವಿದ್ದರೂ ಅವನು ಮಾತ್ರ ನಮಗೆ ಕಾಣಿಸುವುದಿಲ್ಲ. ಆದರೂ ಅವನ ಶಕ್ತಿಯ ಅನುಭವವು ನಮಗೆ ಪ್ರತಿಕ್ಷಣವೂ ಆಗುತ್ತದೆ. ನೀರಿಗೆ ಹಾಕಿದ ಉಪ್ಪು ನಮ್ಮ ಕಣ್ಣಿಗೆ ಕಾಣದಿದ್ದರೂ ಕೈಗೆ ಎಟಕದಿದ್ದರೂ ನೀರಿನ ಕಣಕಣಗಳಲ್ಲಿಯೂ ಆ ಶಕ್ತಿಯು ಗೋಚರವಾಗುವಂತೆ ನಮ್ಮ ಇಂದ್ರಿಯಗಳಿಗೆ ಭಗವಂತನು ಅಗೋಚರನಾದರೂ ಎಲ್ಲ ವಸ್ತುಗಳಲ್ಲೂ ಅವನ ಶಕ್ತಿಯ ದರ್ಶನವು ನಮಗೆ ಆಗುತ್ತದೆ. ಈ ಭಗವಂತನನ್ನು ಪಡೆಯಲು ನಮಗೆ ಗುರುಗಳ ಆಸರೆಯೇ ಬೇಕು. ಕಾಡಿನಲ್ಲಿ ಕಳ್ಳರು ಒಬ್ಬನನ್ನು ಆಕ್ರಮಿಸಿ ಅವನ ಸರ್ವಸ್ವವನ್ನೂ ಅಪಹರಿಸಿ ಕಣ್ಣಿಗೆ ಬಟ್ಟೆ ಕಟ್ಟಿ ತೊರೆಯುವರು. ಅವನ ಆರ್ತನಾದವನ್ನು ಕೇಳಿದ ಸಜ್ಜನನೊಬ್ಬ ಅವನ ಕಟ್ಟುಗಳನ್ನು ಬಿಚ್ಚಿ ಅವನು ಹೋಗಬೇಕಾದ ಊರಿನ ದಾರಿಯನ್ನು ತೋರಿದರೆ ಅವನು ತಾನು ತಲುಪಬೇಕಾದ ಸ್ಥಳವನ್ನು ಸೇರುವನು. ಈ ಸಂಸಾರ ಅರಣ್ಯದಲ್ಲಿ ದುಷ್ಟಶಕ್ತಿಗಳ ಆಕ್ರಮಣಕ್ಕೆ ಒಳಗಾದ ನಮಗೂ ಭಗವಂತನೆಡೆಗೆ ಹೋಗಲು ದಾರಿಯನ್ನು ತೋರಲು ಗುರುಗಳೇ ಬೇಕು. ಆ ಗುರುಗಳಿಂದ ನಾವು ಸರಿಯಾದ ಜ್ಞಾನವನ್ನು ಪಡೆಯಬೇಕು. ಕಳ್ಳನು ಅಧಿಕಾರಿಗಳ ಮುಂದೆ ಸುಳ್ಳು ಹೇಳುತ್ತಾ ಶಿಕ್ಷೆಗೆ ಗುರಿಯಾಗುವನು, ನಿರಪರಾಧಿಯು ಸತ್ಯವನ್ನು ಹೇಳಿ ಬಿಡುಗಡೆಗೊಳ್ಳುವನು. ಅದರಂತೆ ತತ್ವಜ್ಞಾನಿಯು ಸತ್ಯನಿಷ್ಠೆಯಿಂದ ಭಗವಂತನ ಅನುಗ್ರಹದಿಂದ ಸಂಸಾರ ಬಂಧನದಿಂದ ಬಿಡುಗಡೆ ಹೊಂದುವನು ಎಂಬುದಾಗಿ ಅನೇಕ ಉದಾಹರಣೆಗಳಿಂದ ಭಗವಂತನಿಗೂ ನಮಗೂ ಇರುವ ಸಂಬಂಧವನ್ನೂ ಅವನ ಶಕ್ತಿ ಸ್ವಾತಂತ್ರ್ಯಗಳನ್ನೂ ನಮಗೂ ಅವನಿಗೂ ಇರುವ ಭೇದವನ್ನೂ ಉದ್ದಾಲಕನು ಶ್ವೇತಕೇತುವಿಗೆ ವಿವರಿಸಿ ಭಗವಂತನ ಮಹಿಮೆಯನ್ನು ಹೊಗಳುವನು.

'ಸ ಆತ್ಮಾ ತತ್ತ್ವಮಸಿ'

ಈ ಪ್ರಕರಣದಲ್ಲಿರುವ ''ಸ ಆತ್ಮಾ ತತ್ತ್ವಮಸಿ'' ಈ ವಾಕ್ಯವನ್ನು ಅವಲಂಬಿಸಿಕೊಂಡು ನೀನು ಬ್ರಹ್ಮನೇ ಆಗಿರುವಿಯೆಂದು ಶ್ವೇತಕೇತುವಿಗೆ ಬ್ರಹ್ಮನ ಅಭೇದವನ್ನು ಉದ್ದಾಲಕನು ಉಪದೇಶಿಸಿರುವನೆಂದೂ ಇದೇ ಅದ್ವೈತವನ್ನು ಹೇಳುವ ಮಹಾವಾಕ್ಯವೆಂದೂ ಶಂಕರಾಚಾರ್ಯರು ಮತ್ತು ಅವರ ಅನುಯಾಯಿಗಳು ಪ್ರತಿಪಾದಿಸಿದ್ದಾರೆ. ಆದರೆ ಇಲ್ಲಿ ಉಲ್ಲೇಖಿಸಿರುವ ಒಂಭತ್ತು ದೃಷ್ಟಾಂತಗಳ ಹಿನ್ನೆಲೆಯನ್ನು ಪರಿಶೀಲಿಸಿದರೆ ಇದು ಜೀವಬ್ರಹ್ಮರ ಅಭೇದವನ್ನು ಹೇಳಲು ಸಾಧ್ಯವೇ ಇಲ್ಲ. ಇಲ್ಲಿರುವ ಒಂಭತ್ತು ದೃಷ್ಟಾಂತಗಳಲ್ಲಿ ಜೀವ ಮತ್ತು ಪರಮಾತ್ಮರನ್ನು ೧) ಹಕ್ಕಿ ಮತ್ತು ಅದಕ್ಕೆ ಕಟ್ಟಿದ ಹಗ್ಗ. ೨) ಬೇರೆ ಬೇರೆ ಹಣ್ಣಿನ ರಸಗಳು, ೩) ಹೊಳೆ ಮತ್ತು ಕಡಲು, ೪) ಮರ ಮತ್ತು ಅದನ್ನು ಬದುಕಿಸುವ ಚೇತನ, ೫) ಸೂಕ್ಷ್ಮ ಬೀಜ ಮತ್ತು ಅದರೊಳಗಿನ ಅದೃಶ್ಯ ಶಕ್ತಿ , ೬) ನೀರು ಮತ್ತು ಉಪ್ಪು , ೭) ಯಾತ್ರಿಕ ಮತ್ತು ಅವನು ತಲುಪುವ ದೇಶ, ೮) ರೋಗಿ ಮತ್ತು ಅವನ ಪ್ರಾಣವನ್ನು ನಿಯಂತ್ರಿಸುಫ ಪರದೇವತೆ, ೯) ಕಳ್ಳ ಮತ್ತು ಅಪಹರಿಸಿದ ವಸ್ತು ಇವುಗಳಿಗೆ ಹೋಲಿಸಿದ್ದಾರೆ. ಈ ಎಲ್ಲ ವಸ್ತುಗಳಿಗೆ ಪರಸ್ಪರ ಭೇದವಿರುವುದು ಸ್ಪಷ್ಟ. ಇಂತಹ ದೃಷ್ಟಾಂತಗಳನ್ನು ಬಳಸಿಕೊಂಡಿರುವ ಉಪನಿಷತ್ತು ಜೀವಪರಮಾತ್ಮರಿಗೆ ಅಭೇದವನ್ನು ಖಂಡಿತವಾಗಿ ಹೇಳಲಾರದು. ಭವಗಂತನ ಆಶ್ರಯದಲ್ಲಿದ್ದರೂ ಈ ಭಿನ್ನತೆಯನ್ನು ಅರಿಯದವರು ಹುಲಿ, ಹಂದಿ ಕ್ರಿಮಿ ಕೀಟಗಳಾಗಿ ನಾನಾ ನೀಚಯೋನಿಗಳಲ್ಲಿ ಜನಿಸುವರೆಂದು ಅಭೇದ ಜ್ಞಾನದಿಂದ ಅನರ್ಥವನ್ನೇ ಇಲ್ಲಿ ಹೇಳಿದೆ.

ಮೂರನೆಯದಾದ ಹೊಳೆ ಮತ್ತು ಕಡಲಿನ ದೃಷ್ಟಾಂತವನ್ನು ತೋರಿಸಿ ಹೊಳೆ ಕಡಲಿನಲ್ಲಿ ಐಕ್ಯವನ್ನು ಹೊಂದುವಂತೆ ಜೀವನು ಪರಮಾತ್ಮನಲ್ಲಿ ಒಂದಾಗುವನೆಂದು ವ್ಯಾಖ್ಯಾನವನ್ನೂ ಮಾಡಲಾಗುತ್ತಿದೆ. ಆದರೆ ಹೊಳೆ ಮತ್ತು ಕಡಲಿನ ನೀರಿಗೆ ಸಮ್ಮಿಲನವಾಗುವುದಲ್ಲದೆ ಐಕ್ಯವಲ್ಲ. ಈ ಮಿಲನವನ್ನೇ ಐಕ್ಯವೆಂದು ಭ್ರಮಿಸಲಾಗುತ್ತಿದೆ. ಸಮುದ್ರದ ಜಲಗಳಿಗೂ ಹೊಸದಾಗಿ ಬಂದ ನದಿಯ ಜಲಗಳಿಗೂ ಭೇದವಿಲ್ಲವೆಂದು ಯಾವ ವಿಜ್ಞಾನಿಯೂ ಹೇಳಲಾರ. ಪಾತ್ರೆಯ ನೀರಿಗೆ ಹೊಸ ನೀರನ್ನು ಹಾಕಿದರೆ ಅವುಗಳ ಭೇದವು ಮಾಯವಾಗುವುದೇ ? ಹಾಗಿದ್ದರೆ ಆ ಪಾತ್ರೆಯಲ್ಲಿ ನೀರು ಹೆಚ್ಚಲು ಸಾಧ್ಯವಿಲ್ಲ. ನದೀಸಮುದ್ರಗಳ ಮಿಲನವಾದಾಗ ಆ ನೀರಿನ ಕಣಗಳಲ್ಲಿ ಮೊದಲಿದ್ದ ಭಿನ್ನತೆಯು ಹಾಗೇ ಉಳಿಯುವ ರೀತಿಯಲ್ಲಿ ಜೀವಬ್ರಹ್ಮರ ಮಿಲನವೂ ನಡೆಯುತ್ತದೆ.

ಕೊನೆಯ ದೃಷ್ಟಾಂತದಲ್ಲಿ ಮಿಥ್ಯಾಜ್ಞಾನಿಯನ್ನು ಕಳ್ಳನಿಗೆ ಹೋಲಿಸಿದ್ದಾರೆ. ಭೇದವನ್ನು ಮಿಥ್ಯಾಜ್ಞಾನವೆಂದು ಇಟ್ಟುಕೊಂಡಲ್ಲಿ ಅವನನ್ನು ಕಳ್ಳನಿಗೆ ಹೋಲಿಸಲು ಸಾಧ್ಯವಿಲ್ಲ. ತನ್ನದ್ದನ್ನು ಮರೆತವನು ಹುಂಬನೆನಿಸಿಕೊಳ್ಳಬಹುದೇ ಹೊರತು ಕಳ್ಳನಾಗಲಾರ. ತಾನೇ ಬ್ರಹ್ಮನೆಂದು ಆಲೋಚಿಸಿದಾಗ ಬ್ರಹ್ಮನ ಮಹಿಮೆಯನ್ನೂ ತನ್ನದೇ ಎಂದು ತಿಳಿದುಕೊಳ್ಳುವುದರಿಂದ ಇದೂ ಕಳ್ಳತನವೇ ಆಗುತ್ತದೆ. ಕಳ್ಳನಾಗಬೇಕಾದರೆ ಇನ್ನೊಬ್ಬರ ವಸ್ತುವನ್ನು ಕದಿಯಲೇ ಬೇಕಿಲ್ಲ. ಇನ್ನೊಬ್ಬರ ಸೊತ್ತನ್ನು ತನ್ನದೆಂದು ತಿಳಿದುಕೊಂಡರೂ ಕಳ್ಳನೇ ಆಗುವನು. ಆದುದರಿಂದ ''ಸ ಆತ್ಮಾ ತತ್ತ್ವಮಸಿ'' ಈ ವಾಕ್ಯದ ಪೂರ್ವಾಪರಗಳನ್ನೂ ದೃಷ್ಟಾಂತಗಳನ್ನೂ ಪರಿಶೀಲಿಸಿದಾಗ ಇದು ಜೀವಬ್ರಹ್ಮರ ಅಭೇದವನ್ನು ಹೇಳುವುದಿಲ್ಲವೆಂದು ನಮಗೆ ಮನವರಿಕೆಯಾಗುತ್ತದೆ. ಅಹಂಕಾರದಿಂದ ಆಗಮಿಸಿದ ಶ್ವೇತಕೇತುವಿಗೆ

ಈ ಆರನೇ ಅಧ್ಯಾಯದಲ್ಲಿರುವ ''ಸ ಆತ್ಮಾ ತತ್ತ್ವಮಸಿ'' ಎಂಬ ವಾಕ್ಯದ ಹೆಚ್ಚಿನ ವಿಮರ್ಶೆಯನ್ನು ಶ್ರೀಗಳವರು ಬರೆದಿರುವ 'ವಿಷ್ಣುತತ್ವವಿನಿರ್ಣಯಸಾರ' ಗ್ರಂಥದಲ್ಲಿ ನೋಡಬಹುದು.

ನೀನು ಬ್ರಹ್ಮನಲ್ಲ – ''ಅತತ್ ತ್ವಮಸಿ'' ಮತ್ತು ತತ್ ಬ್ರಹ್ಮನಿಂದಾಗಿ ತ್ವಂ ನೀನು ಅಸಿ ಇರುವಿ ''ತತ್ ತ್ವಮಸಿ'' ಎಂಬುದೇ ಈ ವಾಕ್ಯದ ಅರ್ಥವಾಗಿದೆ.

ಏಳನೆಯ ಅಧ್ಯಾಯ

ಎಲ್ಲ ವೇದಗಳನ್ನೂ ಪುರಾಣಗಳನ್ನೂ ಗಣಿತಶಾಸ್ತ್ರ, ಜ್ಯೋತಿಷ, ನೀತಿಶಾಸ್ತ್ರ ಮುಂತಾದ ಸಕಲ ವಿದ್ಯೆಗಳನ್ನೂ ಪಡೆದ ನಾರದರು ಸನತ್ಕುಮಾರರ ಬಳಿಗೆ ಬಂದು ''ಇಷ್ಟೆಲ್ಲ ಗ್ರಂಥಗಳನ್ನು ಓದಿದರೂ ಬರೆ ಶಬ್ದರಾಶಿಯನ್ನು ಮಾತ್ರ ತಿಳಿದಿದ್ದೇನೆ. ಈ ಶಬ್ದಗಳ ಅಂತರಾರ್ಥವಾದ ಆತ್ಮವನ್ನು ತಿಳಿದಿಲ್ಲ. ಎಲ್ಲ ವಾಕ್ಯಗಳ ಪೂರ್ವಾಪರ ವಿಮರ್ಶೆಯನ್ನು ನಡೆಸಿ ಸಕಲ ಶಾಸ್ತ್ರಪ್ರತಿಪಾದ್ಯನಾದ ಭಗವಂತನ ನಿರ್ಣಯವನ್ನು ಈ ಗ್ರಂಥಗಳಿಂದ ಪಡೆಯಲಿಲ್ಲ'' ಎಂದು ತನ್ನ ಕೊರಗನ್ನು ಅವರಲ್ಲಿ ನಿವೇದಿಸುತ್ತಾರೆ. ಸನತ್ಕುಮಾರರು ಈ ಎಲ್ಲ ಶಬ್ದರಾಶಿಗಳು ಭಗವಂತನ ನಾಮಗಳೇ ಆಗಿವೆ. ಎಲ್ಲ ಶಾಸ್ತ್ರಗಳೂ ಭಗವಂತನನ್ನೇ ನಿರೂಪಿಸಲು ಹೊರಟಿವೆಯೆಂದು ಪ್ರತಿಪಾದಿಸುತ್ತಾ ಶಬ್ದಗಳು, ಅವುಗಳ ಪ್ರಯೋಗಕ್ಕೆ ಕಾರಣವಾದ ವಾಕ್, ಸಂಕಲ್ಪ, ಸ್ಮರಣ, ಧ್ಯಾನ, ವಿಜ್ಞಾನ ಮುಂತಾದ ಮನಸ್ಸಿನ ವಿವಿಧ ವ್ಯಾಪಾರ, ಪಂಚಭೂತಗಳೇ ಮೊದಲಾದ ಎಲ್ಲ ಬಾಹ್ಯ ಅಂತರ ವಸ್ತುಗಳನ್ನೂ ಅವುಗಳಿಂದ ನಮಗೆ ಆಗುತ್ತಿರುವ ವಿವಿಧ ಪ್ರಯೋಜನಗಳನ್ನೂ ವಿವರಿಸಿ ಈ ಜಡಪದಾರ್ಥಗಳಿಂದ ಇಂತಹ ವಿವಿಧ ಕಾರ್ಯಗಳನ್ನು ನಡೆಸಿ ಲೋಕಾನುಗ್ರಹವನ್ನು ಮಾಡುತ್ತಿರುವ ನಾಮಾಭಿಮಾನಿಯಾದ ಉಷೆಯಿಂದ ಆರಂಭಸಿ ಮುಖ್ಯಪ್ರಾಣನವರೆಗಿನ ಈ ಪದಾರ್ಥಗಳ ಅಭಿಮಾನಿ ದೇವತೆಗಳನ್ನೂ ಅವರ ತಾರತಮ್ಯವನ್ನೂ ನಿರೂಪಿಸಿ ಈ ದೇವತೆಗಳನ್ನೇ ಭಗವಂತನ ಪ್ರತಿಮೆಗಳೆಂದು ಭಾವಿಸಿ ಅಲ್ಲಿ ಪರಮಾತ್ಮನನ್ನು ಚಿಂತಿಸಬೇಕೆಂದು ಬೋಧಿಸುತ್ತಾರೆ.

'ನಾಮ ಬ್ರಹ್ಮೇತ್ಯುಪಾಸೀತ'

ಈ ಉಪನಿಷತ್ತೂ, ಆಪಾತತಃ ನೋಡುವಾಗ, ಈ ಎಲ್ಲ ಜಡಪದಾರ್ಥಗಳ ತಾರತಮ್ಯವನ್ನು ಹೇಳುತ್ತಾ ಆ ವಸ್ತುಗಳನ್ನೇ ಬ್ರಹ್ಮನೆಂದು ಉಪಾಸಿಸಬೇಕೆಂದು ತಿಳಿಸುತ್ತದೆಯೆಂದು ನಮಗೆ ಭಾಸವಾಗುತ್ತದೆ. ಇದು ಉಪನಿಷತ್ತಿನ ನಿಜವಾದ ಅರ್ಥವಲ್ಲ. ಜಡವಸ್ತುವಿನ ಉಪಾಸನೆಯಿಂದ ನಾವು ಏನು ಫಲವನ್ನು ಪಡೆಯಲು ಸಾಧ್ಯ ? ಅದರಲ್ಲೂ ಈ ಜಡವಾದ ಪದಾರ್ಥಗಳನ್ನೇ ಪರಮಾತ್ಮನೆಂದು ಚಿಂತಿಸುವುದು ಮಹಾ ಅನರ್ಥಕಾರಿಯೇ ಆಗುವುದು. ಜಡವಸ್ತುಗಳಂತೂ ಪರಬ್ರಹ್ಮವಾಗಿರಲು ಸಾಧ್ಯವಿಲ್ಲ. ಪರಬ್ರಹ್ಮನಲ್ಲದ ವಸ್ತುಗಳನ್ನು ಪರಮಾತ್ಮನೆಂದು ತಿಳಿದು ಮಾಡುವ ಅನ್ಯಥೋಪಾಸನೆಯಿಂದ ಯಾವ ಶ್ರೇಯಸ್ಸನ್ನು ಪಡೆಯಲು ಸಾಧ್ಯ ? ಉಪಾಸನೆಯಲ್ಲಿ ಸತ್ಯ ಸಂಗತಿಯೇ ಇರಬೇಕಾಗಿಲ್ಲ. ಹೇಗೆ ಉಪಾಸನೆ ಮಾಡಿದರೂ ಫಲವನ್ನು ಪಡೆಯಬಹುದೆಂದು ಕೆಲವರ ವಾದವಿದೆ. ನಮ್ಮ ಲೌಕಿಕ ಜೀವನದಲ್ಲಿಯೇ ಭ್ರಮೆ ವಿಪರೀತ ಜ್ಞಾನಗಳಿಂದ ಅನೇಕ ಹಾನಿಯಾಗುವುದನ್ನು ನೋಡುತ್ತಿದ್ದೇವೆ. ಹೀಗಿರುವಾಗ ಆಧ್ಯಾತ್ಮಿಕ ಸಾಧನೆಯಲ್ಲಿ ವಿಪರೀತ ಉಪಾಸನೆಗೆ ಅವಕಾಶ ನೀಡುವುದು ಸರ್ವಥಾ ಸರಿಯಲ್ಲ. ಜಡೋಪಾಸನೆಯನ್ನಾಗಲೀ ಅನ್ಯಥೋಪಾಸನೆಯನ್ನಾಗಲೀ ಇಲ್ಲಿ ಉಪನಿಷತ್ತು ಪ್ರತಿಪಾದಸಲಿಲ್ಲ. ಈ ಜಡತತ್ವಗಳ ಅಭಿಮಾನಿ ದೇವತೆಗಳನ್ನು ಪರಮಾತ್ಮನ ಪ್ರತಿಮೆಯೆಂದು ತಿಳಿದು ಅಲ್ಲಿ ಭಗವಂತನನ್ನು ಉಪಾಸಿಸಬೇಕೆಂದು ಶ್ರೀಮಧ್ವಾಚಾರ್ಯರು ತಮ್ಮ ಭಾಷ್ಯದಲ್ಲಿ ಅನೇಕ ಯುಕ್ತಿ ಪ್ರಮಾಣಗಳಿಂದ ಸಮರ್ಥಿಸಿದ್ದಾರೆ. ಯಜ್ಞದಲ್ಲಿ ಉಪಯೋಗಿಸುವ ಯೂಪವೆಂಬ ಮರದ ಕಂಬವನ್ನೇ ಸೂರ್ಯನೆಂದು ವೇದದಲ್ಲಿ ಹೇಳಿದೆ. ಬ್ರಾಹ್ಮಣನೇ ಭಗವಂತನ ಮುಖವೆಂದು ಹೇಳಿದೆ. ಇದನ್ನೇ ವೇದದ

ಅರ್ಥವೆಂದು ಯಾರೂ ಹೇಳುವುದಿಲ್ಲ. ಯೂಪದಲ್ಲಿ ಸೂರ್ಯನು ಸನ್ನಿಹಿತವಾಗಿದ್ದಾನೆ. ಬ್ರಾಹ್ಮಣನು ಭಗವಂತನ ಮುಖದಿಂದ ಹುಟ್ಟಿದ್ದಾನೆ ಎಂದು ಅರ್ಥ ಮಾಡುವಂತೆ ''ನಾಮ ಬ್ರಹ್ಮೇತಿ ಉಪಾಸೀತ'' ಎಂದು ಮುಂತಾದ ಉಪನಿಷತ್ತಿನ ವಾಕ್ಯಗಳಿಗೂ ನಾಮದಲ್ಲಿ ಬ್ರಹ್ಮನನ್ನು ಉಪಾಸಿಸಬೇಕು ಎಂಬುದಾಗಿಯೇ ಅರ್ಥಮಾಡಬೇಕು. ಜಡವಸ್ತುಗಳಿಂದ ನಾವು ಪ್ರಯೋಜನ ಪಡೆಯುವುದು ಅವುಗಳ ಸ್ವಯಂ ಶಕ್ತಿಯಿಂದ ಅಲ್ಲ. ಅವುಗಳಲ್ಲಿ ನೆಲೆಸಿದ ದೇವತೆಗಳಿಂದಲೇ ನಮಗೆ ಅದು ದೊರೆಯುತ್ತದೆ. ಅಂತಹ ದೇವತೆಗಳಲ್ಲಿ ಪರಮಾತ್ಮನನ್ನು ಕಂಡು ಉಪಾಸನೆ ಮಾಡಿದರೆ ವಿಶೇಷ ಫಲವಿದೆ.

ಉಷಾದೇವಿಯಿಂದ ಆರಂಭಿಸಿ ಮುಖ್ಯಪ್ರಾಣನವರೆಗೆ ದೇವತೆಗಳ ತಾರತಮ್ಯವನ್ನು ನಿರೂಪಿಸಿ ಮುಖ್ಯಪ್ರಾಣನೇ ಸರ್ವಶ್ರೇಷ್ಠನೆಂದು ಹೇಳಿ ಆ ಮುಖ್ಯಪ್ರಾಣನಿಗಿಂತಲೂ ಶ್ರೇಷ್ಠನಾದ ಪರಬ್ರಹ್ಮನ ಸ್ವರೂಪವನ್ನು ಸನತ್ಕುಮಾರರು ಹೇಳುತ್ತಿದ್ದಾರೆ. ನಿರ್ದೋಷನೂ ಜ್ಞಾನರೂಪಿಯೂ ಸರ್ವಕರ್ತನೂ ಆದ ಭಗವಂತನು ಸತ್ಯ, ವಿಜ್ಞಾನ, ಮತಿ, ಕೃತಿ ಮುಂತಾದ ಶಬ್ದಗಳಿಂದ ಪ್ರತಿಪಾದ್ಯ , ಅನಂತಗುಣರೂಪಿ. ಇವನೇ ಭೂಮನು. ಈತನೇ ಸರ್ವವ್ಯಾಪಕನೂ, ಸರ್ವೋತ್ತಮನೂ ಎಂದು ತಾರತಮ್ಯದ ತುತ್ತತುದಿಯಾಗಿ ಪರಬ್ರಹ್ಮನನ್ನು ಹೇಳಿ ಸನತ್ಕುಮಾರರು ಉಪಸಂಹರಿಸಿದ್ದಾರೆ.

ಎಂಟನೇ ಅಧ್ಯಾಯ

ಈ ದೇಹವು ಭಗವಂತನ ರಾಜಧಾನಿಯಾಗಿದೆ. ಇಲ್ಲಿ ಭಗವಂತನು ನೆಲೆಸಿ ವಿಚಿತ್ರ ನಾನಾವಿಧ ವ್ಯಾಪಾರವನ್ನು ನಡೆಸಿಕೊಂಡು ನಮ್ಮನ್ನು ಪಾಲಿಸುತ್ತಿದ್ದಾನೆ. ಬ್ರಹ್ಮಪುರವಾದ ದೇಹದಲ್ಲಿರುವ ಹೃದಯಕಮಲದೊಳಗೆ ಏನಿದೆಯೆಂಬುದನ್ನು ನಾವು ವಿಮರ್ಶಿಸಬೇಕು. ಇದರೊಳಗೆ ಬರೇ ಆಕಾಶವಿದೆಯೆಂದು ನಾವು ತಿಳಿಯಬಾರದು. ಈ ಆಕಾಶದೊಳಗೂ ಆಕಾಶನಾಗಿ ಸುತ್ತಲೂ ಪ್ರಕಾಶಕನಾಗಿ ಪರಮಾತ್ಮನಿದ್ದಾನೆ. ಹೊರಗೆ ಜಗತ್ತಿನಲ್ಲಿ ವ್ಯಾಪಿಸಿರುವವನೂ ಹೃದಯಾಕಾಶದಲ್ಲಿ ಸೂಕ್ಷ್ಮನಾಗಿ ನೆಲೆಸಿರುವವನೂ ಬೇರೆಯಲ್ಲ. ಒಬ್ಬನೇ ಪರಬ್ರಹ್ಮನು ಒಳಗೆ ಸೂಕ್ಷ್ಮನಾಗಿಯೂ ಹೊರಗೆ ವ್ಯಾಪಕನಾಗಿಯೂ ಇರುವನು. ಸಕಲ ಪ್ರಪಂಚವೂ ಇವನನ್ನೇ ಆಧರಿಸಿದೆ. ನಮ್ಮ ಹೃದಯದ ಈ ದಹರಾಕಾಶದಲ್ಲಿರುವ ಜಗದಾಧಾರನಾದ ಪರಬ್ರಹ್ಮನನ್ನು ತಿಳಿದು ಉಪಾಸನೆಯನ್ನು ಮಾಡಿ ಅವನ ಸಾಕ್ಷಾತ್ಕಾರವನ್ನು ಪಡೆದವನು ಸಕಲ ಪುರುಷಾರ್ಥಗಳನ್ನು ಪಡೆಯುತ್ತಾನೆ. ಮುಕ್ತಿಯಲ್ಲಿ ದಿವ್ಯಾನಂದದಲ್ಲಿ ನಲಿಯುತ್ತಾನೆ. ಬಯಸಿದ್ದೆಲ್ಲವನ್ನೂ ಪಡೆಯುವನು. ದುಃಖದೋಷಗಳಿಗೆ ಅವಕಾಶವಿಲ್ಲದ ಅಮೃತ ಸ್ಥಾನದಲ್ಲಿ ವಿರಾಜಿಸುತ್ತಾನೆ.

ಇಂದ್ರ ವಿರೋಚನರಿಗೆ ಬ್ರಹ್ಮನ ಉಪದೇಶ

ದೇವೇಂದ್ರನೂ, ಅಸುರೋತ್ತಮನಾದ ವಿರೋಚನನೂ ಸಕಲ ದೋಷ ರಹಿತನಾದ ಪರಬ್ರಹ್ಮನನ್ನು ತಿಳಿದುಕೊಳ್ಳಲು ಬ್ರಹ್ಮದೇವರ ಬಳಿಗೆ ಆಗಮಿಸಿ ಪ್ರಾರ್ಥಿಸಿಕೊಂಡರು. ಕಣ್ಣಿನಲ್ಲಿ ನೀವು ಬ್ರಹ್ಮನನ್ನು ಕಾಣಬಹುದು. ಸ್ವಚ್ಛವಾದ ನೀರಿನಲ್ಲಿ ಬ್ರಹ್ಮನನ್ನು ನೋಡಬಹುದೆಂದು ಬ್ರಹ್ಮದೇವರು ಸಂಮುಗ್ಧವಾಗಿ ಉಪದೇಶಿಸಿದರು. ಕಣ್ಣಲ್ಲಿ , ನೀರಲ್ಲಿ ಕಾಣುವ ಪ್ರತಿಬಿಂಬವೇ ಬ್ರಹ್ಮನೆಂದು ಅಸುರ ವಿರೋಚನನು ತಿಳಿದನು. ಒಳ್ಳೆಯ ಬಟ್ಟೆ ಅಲಂಕಾರಗಳನ್ನು ಧರಿಸಿದಾಗ ನೀರಿನಲ್ಲಿರುವ ಪ್ರತಿಬಿಂಬದಲ್ಲಿ ಅದೇ ಅಲಂಕಾರ ಸೌಂದರ್ಯವನ್ನು ಕಂಡ ವಿರೋಚನನು ಶರೀರಕ್ಕಿಂತ ಬೇರೆ ಪರಬ್ರಹ್ಮನಿಲ್ಲ. ಶರೀರ ಪೂಜೆಗಿಂತ ಬೇರೆ ಯಾವ ದೇವರ ಪೂಜೆಯೂ ಇಲ್ಲ. ಶರೀರಕ್ಕೆ ಬೇಕಾದ ಸಕಲೋಪಚಾರಗಳನ್ನೂ

ಮಾಡಿಕೊಂಡು ಸುಖಭೋಗ ಜೀವನವನ್ನು ನಡೆಸುವುದೇ ಜೀವನದ ಸಾರ್ಥಕ್ಯವೆನ್ನುವ ನಾಸ್ತಿಕ ಸಂದೇಶವನ್ನೇ ಬ್ರಹ್ಮದೇವರ ಉಪದೇಶವೆಂದು ಅಪಾರ್ಥಮಾಡಿಕೊಂಡು ಅದನ್ನೇ ಅಸುರರಿಗೆ ಪ್ರಚಾರ ಮಾಡಿದನು.

ಆದರೆ ಇಂದ್ರದೇವರಿಗೆ ಈ ಉಪದೇಶದಿಂದ ಸಮಾಧಾನವಾಗಿಲ್ಲ. ಈ ನಶ್ವರವಾದ ಶರೀರವನ್ನೇ ನೆಚ್ಚಿಕೊಂಡು ವರ್ತಿಸಿದರೆ ಶಾಶ್ವತ ಸುಖದ ಬದಲು ಅನರ್ಥವನ್ನೇ ಅಪ್ಪಿಕೊಳ್ಳಬೇಕಾಗುವುದೆಂದು ಅರಿತು ಪುನಃ ಬ್ರಹ್ಮದೇವರ ಬಳಿಗೆ ಬಂದರು. ಬ್ರಹ್ಮದೇವರು ಅವನಿಗೆ ಸ್ವಪ್ನ ಸುಷುಪ್ತಿಗಳ ಅನುಭವವನ್ನು ವಿವರಿಸಿದರು. ಜೀವನೇ ಪರಮಾತ್ಮನೆಂದು ಭಾವಿಸುವಂತಹ ಸಂಮುಗ್ಧ ರೀತಿಯ ಉಪದೇಶವನ್ನು ಮಾಡಿದರು. ದೋಷ ಅಜ್ಞಾನಗಳಿಂದ ಕೂಡಿದ ಜೀವನು ಬ್ರಹ್ಮನಾಗುವುದು ಸಾಧ್ಯವಿಲ್ಲವೆಂದು ಪುನಃ ಪರಿಪರಿಯಾಗಿ ಇಂದ್ರನು ಪ್ರಶ್ನಿಸಿದಾಗ ಕೊನೆಗೆ ಸತ್ಯತತ್ವವನ್ನು ಬ್ರಹ್ಮದೇವರು ಉಪದೇಶಿಸುವರು. ಈ ಜಡವಾದ ಶರೀರವಾಗಲೀ ಈ ಶರೀರದಲ್ಲಿ ಸುಖದುಃಖಗಳನ್ನು ಅನುಭವಿಸುತ್ತಿರುವ ಜೀವನಾಗಲೀ ಪರವಸ್ತುವಲ್ಲ. ಇವರಿಬ್ಬರಿಗಿಂತಲೂ ಭಿನ್ನನಾಗಿ ನಮ್ಮ ಸಕಲ ಅವಸ್ಥೆಗಳ ಪ್ರವರ್ತಕನಾಗಿ ಪರಮಾತ್ಮ ನಿರುವನು. ಜೀವನು ಈ ಶರೀರದಲ್ಲಿ ನೆಲೆಸಿರುವ ಚೈತನ್ಯರೂಪಿಯಾದ ಜಡಜೀವರಿಂದ ಭಿನ್ನನಾದ ಪರಮಾತ್ಮನನ್ನು ಹೊಂದಿದಾಗ ತನ್ನದೇ ಆದ ಜ್ಞಾನಾನಂದ ರೂಪವನ್ನು ಪಡೆಯುವನು. ಇದೇ ಮುಕ್ತಿ. ಇಲ್ಲಿ ಸಕಲ ಆನಂದಗಳನ್ನೂ ಅನುಭವಿಸುವನು. ಇದೇ ಬ್ರಹ್ಮದೇವರ ಉಪದೇಶದ ಸಾರ.

ಎಚ್ಚರ, ಸ್ವಪ್ನ, ಗಾಢನಿದ್ರೆ ಈ ಮೂರು ಅವಸ್ಥೆಗಳಲ್ಲಿಯೂ ನಡೆಯುವ ವಿವಿಧ ವ್ಯಾಪಾರಗಳಲ್ಲಿ ನಾವು ಭಗವಂತನನ್ನು ಕಾಣಬೇಕು. ನಾವು ಅಲಂಕಾರ ಮಾಡಿಕೊಂಡಾಗ ಪ್ರತಿಬಿಂಬದಲ್ಲಿಯೂ ಅಲಂಕಾರ ಸೌಂದರ್ಯಗಳು ಕಾಣಿಸಿಕೊಳ್ಳುವಂತೆ ಭಗವಂತನ ಪೂಜೆಯಲ್ಲಿಯೇ ಅವನ ಪ್ರತಿಬಿಂಬದಂತಿರುವ ನಮ್ಮ ಸುಖ ಸಮೃದ್ಧಿಯೇ ಅಡಗಿದೆ. ಇದನ್ನು ತಿಳಿಸುವುದಕ್ಕಾಗಿಯೇ ಬ್ರಹ್ಮದೇವರು ಪ್ರತಿಬಿಂಬವನ್ನು ತೋರಿಸಿದರು. ಆದರೆ ವಿರೋಚನನು ಅದನ್ನು ಅರ್ಥ ಮಾಡಿಕೊಳ್ಳಲಿಲ್ಲ. ಇಂದ್ರನು ಸತ್ಯಶೋಧನೆಯಾಗುವವರೆಗೂ ಬ್ರಹ್ಮದೇವರನ್ನು ಬಿಡದೆ ಪ್ರಶ್ನಿಸಿ ಅವರಿಂದ ಸರಿಯಾದ ಅಸಂದಿಗ್ಧ ಉಪದೇಶವನ್ನು ಪಡೆದನು. ಉತ್ತಮ ಯೋಗ್ಯತೆ ಮತ್ತು ಸತ್ಯಾನ್ವೇಷಣದ ಅವಿರತ ಪ್ರಯತ್ನದಿಂದ ನಾವು ಸತ್ಯವನ್ನು ಪಡೆಯಬಲ್ಲೆವು. ಇದೇ ಈ ಉಪಾಖ್ಯಾನದ ಸಂದೇಶವಾಗಿದೆ.

(ಶ್ರೀ ಸರ್ವಮೂಲ ಗ್ರಂಥಗಳು, ಸಂಪುಟ – ೩ , ಛಾಂದೋಗ್ಯೋಪನಿಷತ್, ಸಂ– ವಿದ್ವಾನ್ ಕೆ. ಹಯವದನ ಪುರಾಣಿಕ, ೧೯೭೦. ಪ್ರ : ಅಖಿಲ ಭಾರತ ಮಾಧ್ವ ಮಹಾಮಂಡಲ, ಆನಂದತೀರ್ಥ ಪ್ರತಿಷ್ಠಾನ , ಬೆಂಗಳೂರು.)

●

೩ - ೧೦

ಬೃಹದಾರಣ್ಯಕೋಪನಿಷತ್ ಸಾರ

ಸೃಷ್ಟಿಯ ಆದಿಯಲ್ಲಿ ಬ್ರಹ್ಮದೇವರು ಲಕ್ಷ್ಮೀಪತಿಯಾದ ಶ್ರೀಹರಿಯನ್ನು ಸ್ತುತಿಸಿದ ದಿವ್ಯ ಮಂತ್ರಗಳೇ ಬೃಹದಾರಣ್ಯಕೋಪನಿಷತ್. ಬ್ರಹ್ಮದೇವರು ಸೂರ್ಯದೇವರಿಗೆ ಈ ಉಪನಿಷತ್ತನ್ನು ಉಪದೇಶಿಸಿದರು. ಸೂರ್ಯನು ಕುದುರೆ (ವಾಜಿ) ಯ ರೂಪದಲ್ಲಿ ಯಾಜ್ಞವಲ್ಕ್ಯರಿಗೆ ಉಪದೇಶಿಸಿದ ಈ ಉಪನಿಷತ್ತಿಗೆ ''ವಾಜಸನೇಯ'' ಎಂದು ಪ್ರಸಿದ್ಧಿಯು ಬಂದಿದೆ. ಯಾಜ್ಞವಲ್ಕ್ಯರು ಕಣ್ವಮುನಿಗಳಿಗೆ ಇದನ್ನು ಉಪದೇಶಿಸಿದರು. ಜಗತ್ತಿಗೆ ಬೆಳಕನ್ನು ನೀಡುವ ಸೂರ್ಯದೇವರೇ ಈ ಉಪನಿಷತ್ತಿನ ಮೂಲಕ ಜ್ಞಾನದ ಬೆಳಕನ್ನು ನೀಡಿದ್ದಾರೆ.

ಪ್ರಾರಂಭದಲ್ಲಿ ಅಶ್ವಮೇಧದ ಕುದುರೆಯ ವರ್ಣನೆಯು ಇದೆ. ಈ ಕುದುರೆಯ ವಿಭಿನ್ನ ಅವಯವಗಳನ್ನು ಋತು, ಪಕ್ಷ, ಮಾಸ, ಪರ್ವತ ಮುಂತಾದ ರೀತಿಯಲ್ಲಿ ಚಿಂತಿಸಬೇಕೆಂದೂ ಇದು ಆ ಕುದುರೆಗೆ ಮಾಡಬೇಕಾದ ಸಂಸ್ಕಾರವೆಂದೂ ಹಲವರು ವ್ಯಾಖ್ಯಾನ ಮಾಡಿದ್ದಾರೆ. ಪಶುವಿನ ಅಂಗಾಂಗಗಳ ಬಗ್ಗೆ ಮಾಡುವ ಈ ಅಲ್ಲಸಲ್ಲದ ಕಲ್ಪನೆಯಿಂದ ಆಗುವ ಲಾಭವೇನು? ಇಂತಹ ಮಿಥ್ಯಾ ಕಲ್ಪನೆಯೂ ಒಂದು ಸಂಸ್ಕಾರವೆನಿಸಬಹುದೇ ? ತತ್ತ್ವಜ್ಞಾನದ ಖನಿಯೆನಿಸಿದ ಉಪನಿಷತ್ತಿನಂತಹ ವೇದಾಂತ ವಿದ್ಯೆಯಲ್ಲಿ ಇಂತಹ ಅಸಂಬದ್ಧ ಮಾತುಗಳು ಇರಬಹುದೇ ? ಮುಂತಾದ ಸಂದೇಹಗಳು ಉದ್ಭವಿಸಬಹುದು. ಶ್ರೀಮಧ್ವಾಚಾರ್ಯರು ಇದರ ಆಧ್ಯಾತ್ಮಿಕ ವಿವರಣೆಯನ್ನು ನೀಡಿ ಈ ಎಲ್ಲಾ ಸಂದೇಹಗಳನ್ನು ಪರಿಹರಿಸಿದ್ದಾರೆ. ಈ ಶಬ್ದಗಳು ಕಾಲ, ಪಕ್ಷ ಮೊದಲಾದ ಜಡವಸ್ತುಗಳನ್ನು ಬೋಧಿಸದೆ ಅವುಗಳ ಅಭಿಮಾನಿಗಳಾದ ದೇವತೆಗಳನ್ನು ಪ್ರತಿಪಾದಿಸುತ್ತವೆ. ಅಶ್ವಮೇಧದ ಕುದುರೆಯಲ್ಲಿ ಭಗವಂತನೂ ಬ್ರಹ್ಮದೇವರೂ ನೆಲೆಸಿದ್ದಾರೆ. ಅವರನ್ನು ಆಧರಿಸಿ ಅಂಗಾಂಗಳಲ್ಲಿ ಬೇರೆ ಬೇರೆ ಅಭಿಮಾನಿ ದೇವತೆಗಳು ಅಧಿಷ್ಠಿತರಾಗಿದ್ದಾರೆ. ಹೀಗೆ ಯಾವುದೇ ಮಿಥ್ಯಾ ಕಲ್ಪನೆಗೆ ಅವಕಾಶವಿಲ್ಲದಂತೆ ಇದರ ವ್ಯಾಖ್ಯಾನವನ್ನು ಶ್ರೀಮಧ್ವಾಚಾರ್ಯರು ಮಾಡಿ ಅಶ್ವಮೇಧದ ಕುದುರೆಯ ಪಾವಿತ್ರ್ಯ ಮತ್ತು ಮಹತ್ವವನ್ನು ವಿಶದಪಡಿಸಿದ್ದಾರೆ. ಶ್ರೀ ಮಧ್ವಾಚಾರ್ಯರ ಉಪನಿಷತ್ತಿನ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಈ ಆಧ್ಯಾತ್ಮಿಕ ದೃಷ್ಟಿಯನ್ನು ನಾವು ಎಲ್ಲೆಡೆಯಲ್ಲಿಯೂ ಕಾಣಬಹುದು. ಇದನ್ನು ಅಳವಡಿಸಿಕೊಳ್ಳದಿದ್ದರೆ ಉಪನಿಷತ್ತು ಅಸಂಬದ್ಧ ಅಂತೆ ಕಂತೆಗಳೆಂದು ನಮಗೆ ಭಾಸವಾಗಬಹುದು.

ಈ ವಿಶ್ವವೂ ಭಗವಂತನ ಶರೀರದಂತೆ. ಆತ್ಮನ ಪ್ರವೇಶದಿಂದಲೇ ಶರೀರದ ಚಟುವಟಿಕೆ. ಆತ್ಮ ನಿಲ್ಲದ ಶರೀರವು ಸ್ತಬ್ಧ. ಅದರಂತೆ ಭಗವಂತನಿಲ್ಲದ ಜಗತ್ತಿನಲ್ಲಿ ಯಾವ ಕ್ರಿಯೆ ಪ್ರವೃತ್ತಿಗಳೂ ಉಂಟಾಗ ಲಾರವು. ನಾವು ನಮ್ಮ ಇಚ್ಛೆಯಿಲ್ಲದಿದ್ದರೂ ಪರವಶರಾಗಿ ಶರೀರವನ್ನು ಪಡೆಯುವುದಾದರೆ ಭಗವಂತನು ತನ್ನ ಲೀಲಾ ವಿಹಾರಕ್ಕಾಗಿ ಶರೀರವನ್ನು ಬಯಸಿದಾಗ ತನ್ನ ಸ್ವೇಚ್ಛೆಯಿಂದಲೇ ತನ್ನ ಶರೀರದಂತಿರುವ ಜಗತ್ತನ್ನು ಸೃಜಿಸಿ ವಿವಿಧ ರೂಪಗಳಿಂದ ಅದನ್ನು ಪ್ರವೇಶಿಸಿ ವಿಶ್ವವ್ಯಾಪಾರವನ್ನು ನಡೆಸುತ್ತಾನೆ.

ಸಂಹಾರಕ್ರಿಯೆ ಜೀವರ ವಿಶ್ರಾಂತಿ

'ಪರಮಾತ್ಮನು ಸೃಷ್ಟಿಯ ಆದಿಯಲ್ಲಿ ಬ್ರಹ್ಮನನ್ನು ನಿರ್ಮಿಸಿದ ನಂತರ ಅವನನ್ನು ನುಂಗಲು ಬಾಯಿ ತೆರೆದನು. ಆಗ ಬ್ರಹ್ಮದೇವರು ಭಯವನ್ನು ವ್ಯಕ್ತಪಡಿಸಿ ಶಬ್ದ ಮಾಡಿದರು. ಆಗ ಪರಮಾತ್ಮನು ಆಲೋಚಿಸಿದನು. ''ಇವನನ್ನು ಈಗಲೇ ನುಂಗಿದರೆ ನನ್ನ ಆಹಾರವು ಇಷ್ಟರಲ್ಲೇ ಸೀಮಿತವಾಗುವುದು. ಇವನಿಗೆ ಸೃಷ್ಟಿ ಮಾಡಲು ಅವಕಾಶ ನೀಡಿದರೆ ಇವನು ಸೃಜಿಸಿದ ವಿಶಾಲ ಬ್ರಹ್ಮಾಂಡದೊಂದಿಗೆ ಹೆಚ್ಚಿನ ಆಹಾರವನ್ನು ನಾನು ಪಡೆಯಬಹುದು'' ಆಮೇಲೆ ಬ್ರಹ್ಮದೇವರು ಜಗತ್ ಸೃಷ್ಟಿಯನ್ನು ಆರಂಭಿಸಿದರು. ಅವನು ಸೃಜಿಸಿಧ ಜಗತ್ತೆಲ್ಲವನ್ನೂ ಭಗವಂತನು ಕಬಳಿಸಿದನು' ಎಂಬುದಾಗಿ ಉಪನಿಷತ್ತಿನಲ್ಲಿ ನಿರೂಪಣೆಯಿದೆ. ಸಾಮಾನ್ಯ ಜನರಿಗೆ ಈ ಕಥೆಯಿಂದ ಗೊಂದಲವಾಗಬಹುದು. ನಮ್ಮ ಸೃಷ್ಟಿಕರ್ತನು ಪಾಲಕನು ಎಂಬುದಾಗಿ ದೇವರಲ್ಲಿ ಭಕ್ತಿಯು ಉದಯಿಸುವುದಾದರೆ ಸಂಹಾರಕರ್ತನೆಂದು ಅವನಲ್ಲಿ ದ್ವೇಷವೂ ಉಂಟಾಗಲಾರದೆ ? ಒಂದು ಕುರಿಯಿಂದ ತೃಪ್ತನಾಗದೆ ಅವುಗಳ ವಂಶವನ್ನು ಬೆಳೆಸಿ ನಂತರ ಕೊಲ್ಲುವ ಕಟುಕನಂತೆ ದೇವರ ವರ್ತನೆಯಾಗುವುದಿಲ್ಲವೇ ? ಎಂದು ಮುಂತಾಗಿ ಸಂದೇಹವು ಉದ್ಭವಿಸಬಹುದು. ಆದರೆ ಭಗವಂತನ ಸಂಹಾರದ ನಿಜಸ್ವರೂಪವನ್ನೂ, ಅದರ ಉದ್ದೇಶವನ್ನೂ ಅರಿತಾಗ ಈ ಸಂದೇಹಕ್ಕೆ ಎಡೆಯಿರುವುದಿಲ್ಲ. ಜನನ-ಮರಣ ಚಕ್ರದಲ್ಲಿ ಸಿಲುಕಿ ಸ್ವರ್ಗ, ನರಕ, ಮರ್ತ್ಯಗಳಲ್ಲಿ ತಿರುಗಿ ಬಳಲಿ ಬೆಂಡಾದ ಜೀವರಾಶಿಗೆ ದೀರ್ಘ ವಿಶ್ರಾಂತಿಯನ್ನು ನೀಡುವುದೇ ಪರಮಾತ್ಮನ ಸಂಹಾರ ವ್ಯಾಪಾರವಾಗಿದೆ. ಪ್ರಳಯ ಕಾಲದಲ್ಲಿ ಸಕಲ ಜೀವರೂ ಗಾಢನಿದ್ರೆಯ ಅನುಭವವನ್ನೇ ಪಡೆಯುವರು. ''ಸುಷುಪ್ತಿ ಸಂಸ್ಥಾನ್ ಬ್ರಹ್ಮಾದಿಕಾನ್ ಕಲಿಪರಾನ್ ಮನುಜಾನ್'' ಎಂಬುದಾಗಿ ಜೀವರಿಗೆ ಪ್ರಳಯವೆಂದರೆ ಸುಷುಪ್ತಿ ಕಾಲವೆಂದು ಆಚಾರ್ಯರು ವರ್ಣಿಸಿದ್ದಾರೆ. ಹಗಲಿಡೀ ಎದ್ದು, ಬಿದ್ದು, ತಿರುಗಿ, ಆಟವಾಡಿ ಸುಸ್ತಾದ ಮಗುವನ್ನು ರಾತ್ರಿಯಲ್ಲಿ ತಾಯಿಯು ತೊಟ್ಟಿಲಲ್ಲಿ ತೂಗಿ ಪವಡಿಸುವಂತೆ ಭಗವಂತನೂ ಜೀವರ ಶ್ರಮಪರಿಹಾರವನ್ನು ಮಾಡುವುದಕ್ಕಾಗಿಯೇ ಪ್ರಳಯವನ್ನು ಏರ್ಪಡಿಸಿರುವನು. ಇಲ್ಲಿ ಕಟುಕನ ಕ್ರೂರತೆಯಿಲ್ಲ, ತಾಯಿಯ ವಾತ್ಸಲ್ಯವಿದೆ. ಆದುದರಿಂದಲೇ ''ಸ್ವಾಪಂ ಪ್ರಾಪಯತಿ ಶ್ರಮಾಪಹೃತಯೇ'' ಎಂದು ಟೀಕಾಕೃತ್‌ಪಾದರು ಪರಮಾತ್ಮನನ್ನು ಸ್ತುತಿಸಿದ್ದಾರೆ. ಪ್ರಥಮವಾಗಿ ಸೃಷ್ಟಿಗೊಂಡ ಬ್ರಹ್ಮದೇವರಿಗೆ ಕೂಡಲೇ ಮುಕ್ತಿಯನ್ನು ನೀಡಿ ಚಿರವಿಶ್ರಾಂತಿಯನ್ನು ನೀಡಿದರೆ ಉಳಿದ ಸಜ್ಜನ ಚೇತನರ ಉದ್ಧಾರವಾಗುವುದು ಹೇಗೆ ? ಅವರು ತಮ್ಮ ಸಾಧನೆಗಳನ್ನು ನೆರವೇರಿಸಿ ಸುಖಶಾಂತಿ ಗಳನ್ನು ಪಡೆಯಬೇಡವೇ? ಆದುದರಿಂದ ಬ್ರಹ್ಮನನ್ನು ಕೂಡಲೇ ತನ್ನಲ್ಲಿಗೆ ಕರೆಸಿಕೊಳ್ಳದೆ ಉಳಿದ ಚೇತನ ಸಮುದಾಯವನ್ನು ಸೃಷ್ಟಿಸಲು ಅವನಿಗೆ ಅನುವು ನೀಡಿ ಅವರೆಲ್ಲರ ಸಾಧನೆ, ಸಂತಸಗಳಿಗೆ ಅವಕಾಶ ನೀಡಿದನೆಂಬುದೇ ಈ ಸನ್ನಿವೇಶದ ಅಂತರಂಗವಾಗಿದೆ.

ಜೀವೋತ್ತಮ ವಾಯುದೇವ

ದೇವತೆಗಳಿಗೂ ದೈತ್ಯರಿಗೂ ಮೊದಲಿನಿಂದಲೂ ಸ್ಪರ್ಧೆ. ಬಹುಸಂಖ್ಯಾಕರಾದ ಅಸುರರಿಂದ

ದೇವತೆಗಳು ಪರಾಭವಗೊಂಡು ಯಜ್ಞದಿಂದ ಭಗವಂತನನ್ನು ಆರಾಧಿಸಿ ದೈತ್ಯರ ವಿರುದ್ಧವಾಗಿ ವಿಜಯವನ್ನು ಸಾಧಿಸಲು ಪ್ರವರ್ತಿಸಿದರು. ದೇವತೆಗಳ ಕೈ ಮೇಲಾಗುವುದೆಂದು ತಿಳಿದ ಅಸುರರು ದೇವತೆಗಳನ್ನು ಆಕ್ರಮಿಸಿ ಪಾತಕಗಳಿಂದ ಅವರನ್ನು ದೂಷಿತಗೊಳಿಸಿದರು. ಆಯಾಯ ಇಂದ್ರಿಯಾಭಿಮಾನಿ ದೇವತೆಗಳ ಮೇಲೆ ಅಸುರರ ಆಕ್ರಮಣವಾಗಿರುವುದರಿಂದಲೇ ಇಂದ್ರಿಯಗಳಿಂದ ಒಳ್ಳೆಯ ಜ್ಞಾನದ ಜೊತೆಗೆ ಕೆಟ್ಟ ಜ್ಞಾನವೂ ಸಂಭವಿಸುತ್ತದೆ. ಆದರೆ ವಾಯುದೇವರನ್ನು ಮಾತ್ರ ತಮ್ಮ ಆಕ್ರಮಣದಿಂದ ದೂಷಿತ ಗೊಳಿಸಲು ದೈತ್ಯರಿಗೆ ಸಾಧ್ಯವಾಗಲಿಲ್ಲ. ಕಲ್ಲಿನ ಗೋಡೆಗೆ ಅಪ್ಪಳಿಸಿದ ಮಣ್ಣಿನ ಹೆಂಟೆಯಂತೆ ಅವರ ಸ್ಥಿತಿಯಾಯಿತು. ಅಂತೂ ವಾಯುದೇವರ ನೇತೃತ್ವದಲ್ಲಿ ದೇವತೆಗಳು ಅಸುರರನ್ನು ಸೋಲಿಸಿ ವಿಜಯವನ್ನು ಸಾಧಿಸಿದರೆಂದು ವಾಯುದೇವರ ಶ್ರೇಷ್ಠತೆಯನ್ನು ಪ್ರತಿಪಾದಿಸಲಾಗಿದೆ.

ಈ ಉಪನಿಷತ್ತಿನಲ್ಲಿ ಇನ್ನೊಂದು ಕಡೆಯೂ ಮುಖ್ಯಪ್ರಾಣನ ಶ್ರೇಷ್ಠತೆಯನ್ನು ಪ್ರತಿಪಾದಿಸಲಾಗಿದೆ. ಇಂದ್ರಿಯ ಮತ್ತು ಪಂಚಭೂತಗಳ ಅಭಿಮಾನಿಗಳಾದ ದೇವತೆಗಳ ಶ್ರೇಷ್ಠತೆಯ ಬಗ್ಗೆ ಸ್ಪರ್ಧೆಯುಂಟಾದಾಗ ಭಗವತ್ ಸೇವಾ ರೂಪವಾದ ತಮ್ಮ ದೈವಿಕ ಮತ್ತು ದೈಹಿಕ ವ್ಯಾಪಾರವನ್ನು ನಿರಂತರವಾಗಿ ಶ್ರಮವಿಲ್ಲದೆ ನೆರವೇರಿಸುವವರೇ ಶ್ರೇಷ್ಠರೆಂದು ಭಗವಂತನು ಘೋಷಿಸಿದನು. ಎಲ್ಲಾ ದೇವತೆಗಳು ತಮ್ಮ ಕರ್ತವ್ಯವನ್ನು ನಿರಂತರವಾಗಿ ನಡೆಸಲು ಉಪಕ್ರಮಿಸಿದರು. ಆದರೆ ಕ್ರಮೇಣ ಅವರೆಲ್ಲರೂ ಶ್ರಮಕ್ಕೆ ಒಳಗಾಗಿ ಭಗವತ್ ಸೇವಾರೂಪವಾದ ತಮ್ಮ ಕರ್ತವ್ಯವನ್ನು ನಿರಾತಂಕವಾಗಿ ನಡೆಸಲು ಅಸಮರ್ಥರಾದರು. ಆದರೆ ವಾಯುದೇವರ ವ್ಯಾಪಾರವು ನಿಲ್ಲಲೇ ಇಲ್ಲ. ಎಂದೆಂದಿಗೂ ಶ್ರಮಕ್ಕೆ ಒಳಗಾಗದೆ ನಿರಂತರವಾಗಿ ಜಗತ್ ವ್ಯಾಪಾರದ ರೂಪದಲ್ಲಿ ಭಗವತ್ ಸೇವೆಯನ್ನು ವಾಯುದೇವರು ನಡೆಸುತ್ತಲೇ ಇದ್ದರು. ನಿದ್ರೆಯಲ್ಲಿ ಎಲ್ಲ ಇಂದ್ರಿಯಗಳೂ ಉಪರತಗಳಾಗಿ ನಿಷ್ಕ್ರಿಯಗಳಾದರೂ ವಾಯುದೇವರ ಉಸಿರಾಟದ ವ್ಯಾಪಾರವು ನಡೆಯುತ್ತಲೇ ಇರುತ್ತದೆ. ಹೀಗೆ ನಿರಂತರ ಕ್ರಿಯಾಶೀಲರಾಗಿ ಸರ್ವಲೋಕ ಪ್ರವರ್ತಕರಾದ ವಾಯುದೇವರೇ ಶ್ರೇಷ್ಠರೆಂದು ನಿರ್ಧರಿಸ ಲಾಯಿತು.

ಸಪ್ತಾನ್ನ ವಿದ್ಯೆ

ಪರಮಾತ್ಮನು ಏಳು ವಿಧವಾದ ಆಹಾರವನ್ನು ಏರ್ಪಡಿಸಿದ್ದಾನೆ. ದೇವತೆಗಳಿಗಾಗಿ ಎರಡು, ಮಾನವರಿಗೆ, ಹಸು ಮುಂತಾದ ಪಶುಗಳಿಗೆ ಒಂದೊಂದು ಆಹಾರವನ್ನು ವಿಧಿಸಿ, ತನಗಾಗಿ ಮೂರು ಆಹಾರವನ್ನು ಏರ್ಪಡಿಸಿಕೊಂಡಿದ್ದಾನೆ. ಬಲಿ ಮತ್ತು ಯಜನಗಳು ದೇವತೆಗಳಿಗೆ ಅನ್ನವಾದರೆ ನಾವೆಲ್ಲರೂ ಸ್ವೀಕರಿಸುತ್ತಿರುವ ಆಹಾರವೇ ಮಾನವರ ಅನ್ನವೆನಿಸಿದೆ. ಪಶುಗಳಿಗೆ ಭಗವಂತನು ನೀಡಿದ ಅನ್ನ ಹಾಲು. ಮನಸ್ಸು, ವಾಕ್, ಪ್ರಾಣ – ಈ ಮೂರು ವಸ್ತುಗಳು ಭಗವಂತನು ತನಗಾಗಿ ಏರ್ಪಡಿಸಿಕೊಂಡ ಅನ್ನವಾಗಿದೆ. ನಮ್ಮ ಮನಸ್ಸು, ನಮ್ಮ ಮಾತು, ನಮ್ಮ ಕ್ರಿಯೆ ಪರಮಾತ್ಮನಿಗೆ ಸಮರ್ಪಿತವಾಗಬೇಕು. ಮನಸ್ಸು ಮತ್ತು ಪಂಚೇಂದ್ರಿಯಗಳನ್ನು ಭಗವಂತನ ವಿಷಯದಲ್ಲಿ ತೊಡಗಿಸಿಕೊಂಡು ಭಗವಂತನ ಗುಣಗಾನದ ಜೊತೆಗೆ ಅವನಿಗೆ ಪ್ರೀತಿಕರವಾದ ಕ್ರಿಯೆಗಳಲ್ಲಿ ನಿರತರಾದಾಗ ಮನೋ, ವಾಕ್, ಪ್ರಾಣಗಳೆಂಬ ಅನ್ನವನ್ನು ನಾವು ದೇವರಿಗೆ ನೀಡಿದಂತಾಗುವುದು. ನಮ್ಮ ಮನಸ್ಸಿನಲ್ಲಿ ಕೆಟ್ಟ ವಿಚಾರ ಮತ್ತು ಆಲೋಚನೆಗಳು ಮೂಡಬಾರದು. ಕೆಟ್ಟ ಮಾತುಗಳನ್ನು ಆಡದೆ, ದುಷ್ಟ ಕೃತಿಗಳಿಗೆ ಇಳಿಯದೆ ಭಗವಂತನು ವಿಧಿಸಿದ ನೀತಿ ನಿಯಮಗಳಿಗೆ ಅನುಗುಣವಾದ ಜೀವನವನ್ನು ನಡೆಸುವುದರಿಂದ ದೇವರಿಗೆ ನಮ್ಮ ಮನಸ್ಸು, ಮೈ, ಮಾತುಗಳ ಸಮರ್ಪಣೆಯಾಗುತ್ತದೆ. ದೇವರಿಗೆ ಇಂತಹ ಮೂರು ಅನ್ನಗಳನ್ನು ನೀಡುವುದರಿಂದಲೇ ನಮಗೂ ಸರ್ವಾನ್ನ ಸಮೃದ್ಧಿಯಾಗುವುದು.

''ಅಹಂ ಬ್ರಹ್ಮಾಸ್ಮಿ''

ಈ ಉಪನಿಷತ್ತಿನಲ್ಲಿ ವಿವಾದಾಸ್ಪದವಾದ ವಾಕ್ಯಗಳಲ್ಲಿ ಅತ್ಯಂತ ಪ್ರಸಿದ್ಧವಾದ ''ಅಹಂ ಬ್ರಹ್ಮಾಸ್ಮಿ'' ಎಂಬ ವಾಕ್ಯವಿದೆ. ಈ ವಾಕ್ಯದ ಆಧಾರದಿಂದ ಜೀವಬ್ರಹ್ಮರಿಗೆ ಅಭೇದವೇ ಉಪನಿಷತ್ತುಗಳ ಅಂತರಾರ್ಥವೆಂದು ಅದ್ವೈತ ಸಂಪ್ರದಾಯದ ಅನುಯಾಯಿಗಳು ಪ್ರತಿಪಾದಿಸಿದ್ದಾರೆ. ಅದರಂತೆ ''ಅಥ ಯೋऽನ್ಯಾಂ ದೇವತಾ ಮುಪಾಸ್ತೇ ಅನ್ಯೋऽಸೌ ಅನ್ಯೋऽಹಮಸ್ಮೀತಿ ನ ಸ ವೇದ ಯಥಾ ಪಶುಃ'' ಎಂಬ ವಾಕ್ಯವಿದೆ. ದೇವರು ಮತ್ತು ತಾನು ಬೇರೆ ಬೇರೆಯೆಂದು ಉಪಾಸನೆ ಮಾಡುವವನು ಪಶುವಿನಂತೆ ಅಜ್ಞಾನಿಯೆಂದು ಈ ವಾಕ್ಯದಿಂದ ಸಾಮಾನ್ಯವಾಗಿ ಭಾಸವಾಗುವ ಅರ್ಥವಾಗಿದೆ. ಈ ಎರಡೂ ವಾಕ್ಯಗಳೂ ಸಾಮಾನ್ಯ ಜನರಿಗೆ ಗೊಂದಲವನ್ನೇ ಉಂಟುಮಾಡುತ್ತವೆ. ಆದರೆ ಈ ವಾಕ್ಯಗಳನ್ನು ಸ್ವಲ್ಪ ಆಳವಾಗಿ ವಿಮರ್ಶಿಸಿದರೆ ಇಂತಹ ಯಾವುದೇ ಗಲಿಬಿಲಿಗೆ ಅವಕಾಶವಿರುವುದಿಲ್ಲ. ಈ ಉಪನಿಷತ್ತಿನಲ್ಲಿ ''ಆತ್ಮಾನಮೇವಾವೇತ್ ಅಹಂ ಬ್ರಹ್ಮಾಸ್ಮಿ'' ಎಂಬುದಾಗಿ ಪರಮಾತ್ಮನು ತನ್ನನ್ನೇ ತಾನು ಬ್ರಹ್ಮನೆಂದು ತಿಳಿದನೆಂಬುದಾಗಿ ಹೇಳಿದೆ. ಪರಮಾತ್ಮನು ತನ್ನನ್ನು ಬ್ರಹ್ಮನೆಂದು ತಿಳಿದರೆ ಜೀವರೆಲ್ಲರೂ ಬ್ರಹ್ಮರಾಗುವುದು ಹೇಗೆ? ಪರಮಾತ್ಮನ ಸ್ವಾತ್ಮಜ್ಞಾನದ ವರ್ಣನೆಯಿದು. ಸೃಷ್ಟಿಯ ಆದಿಯಲ್ಲೂ ಇರುವ ಜನನ-ಮರಣ ರಹಿತನಾದ ಸ್ವತಂತ್ರ ನಿರ್ವಿಕಾರನಾದ ಪರಮಾತ್ಮನಿಗೆ ಮೊದಲಿನಿಂದಲೂ ತನ್ನ ಪೂರ್ಣತೆಯ ಅರಿವಿದೆ. ಆ ಭಗವಂತನ ಪೂರ್ಣತೆಯನ್ನು ತಿಳಿಯುವುದರಿಂದ ನಾವು ಪೂರ್ಣತೆಯನ್ನು ಪಡೆಯಬಲ್ಲೆವು – ಎಂಬುದು ಈ ವಾಕ್ಯದ ಮಥಿತಾರ್ಥ. ಪರಮಾತ್ಮನಷ್ಟು ಗುಣ ಮಹಿಮೆಗಳು ಇಲ್ಲದಿದ್ದರೂ ಎಲ್ಲಾ ಜೀವರು ಮುಕ್ತಿಯಲ್ಲಿ ತಮ್ಮ ತಮ್ಮ ಪರಿಧಿಯಲ್ಲಿ ಪೂರ್ಣತೆಯನ್ನು ಅನುಭವಿಸುವರು. ದೊಡ್ಡ ಮತ್ತು ಚಿಕ್ಕ ಪಾತ್ರೆಗಳಲ್ಲಿ ನೀರು ತುಂಬಿಸಿದಾಗ ನೀರಿನ ಪ್ರಮಾಣದಲ್ಲಿ ಅಂತರವಿದ್ದರೂ ಎಲ್ಲಾ ಪಾತ್ರೆಗಳೂ ನೀರಿನಿಂದ ತುಂಬಿ ಪೂರ್ಣವಾಗಿರುವಂತೆ ಆನಂದ, ಜ್ಞಾನ ಮುಂತಾದ ಗುಣಗಳಲ್ಲಿ ಅಂತರವಿದ್ದರೂ ಎಲ್ಲಾ ಜೀವರೂ ಮುಕ್ತಿಯಲ್ಲಿ ತಮ್ಮ ಯೋಗ್ಯತೆಗೆ ಅನುಗುಣವಾಗಿ ಪೂರ್ಣತೆಯನ್ನೇ ಅನುಭವಿಸುತ್ತಾರೆ. ಆದುದರಿಂದ ಜೀವರೂ ಪರಮಾತ್ಮನಂತೆ ತಮ್ಮದೇ ಆದ ಪೂರ್ಣತೆಯನ್ನು ತಿಳಿದುಕೊಂಡು ಭಗವಂತನ ಅನುಗ್ರಹದಿಂದ ಇದನ್ನು ಪಡೆಯಲು ಪ್ರಯತ್ನಿಸಬೇಕೆಂಬುದೇ ಇದರ ಸಂದೇಶವಾಗಿದೆಯಲ್ಲದೆ ತಾನೇ ಪರಮಾತ್ಮನೆನ್ನುವ ವಿಪರೀತ ಕಲ್ಪನೆಯನ್ನು ಇದು ಬೋಧಿಸುವುದಿಲ್ಲ. ಸುಖ ದುಃಖಾದಿಗಳ ಭೋಕ್ತರರಾಗಿ ನಾವು ನಿರಂತರವೂ ಅನುಭವಿಸುತ್ತಿರುವ ನಾನು ಎನ್ನುವ ವಿಶಿಷ್ಟ ವಸ್ತುವೂ ಪರಬ್ರಹ್ಮನೂ ಒಂದೇ ಎಂಬುದು ಅದ್ವೈತ ವಾದಕ್ಕೆ ವಿರುದ್ಧವಾಗಿದೆ. ಆದುದರಿಂದ ನಮ್ಮಲ್ಲಿ ಅಡಗಿರುವ ವಿಶುದ್ಧ ಚೇತನವೇ ಪರಬ್ರಹ್ಮವೆಂಬುದಾಗಿ ''ಅಹಂ ಬ್ರಹ್ಮಾಸ್ಮಿ'' ವಾಕ್ಯದ ವಿವರಣೆಯನ್ನು ಅದ್ವೈತವಾದಿಗಳು ಮಾಡಿದ್ದಾರೆ. ಅಂತೂ ''ಅಹಂ'' ವಸ್ತುವೇ ಪರಬ್ರಹ್ಮವಾಗಿರದೆ ಅದರಲ್ಲಿ ಸೇರಿಕೊಂಡಿರುವ ಶುದ್ಧ ಚೈತನ್ಯವೇ ಪರಬ್ರಹ್ಮನೆಂದು ಆ ವಾಕ್ಯಕ್ಕೆ ಅರ್ಥ ಮಾಡುವುದಾದರೆ ''ಅಹಂ'' ವಸ್ತುವೆನಿಸಿದ ನಮ್ಮಲ್ಲಿ ಅಂತರ್ಗತನಾದ ಅಂತರ್ಯಾಮಿಯಾದ ಮಹಾಚೇತನವೇ ಪರಬ್ರಹ್ಮನೆಂದು ಅರ್ಥವನ್ನು ಯಾಕೆ ಮಾಡಬಾರದು ? ಶಬ್ದಗಳಿಂದ ಬೋಧ್ಯನಾಗಿ ಪ್ರತಿಯೊಂದು ವಸ್ತುವಿನಲ್ಲೂ ಸಾರಭೂತನಾಗಿ ಪರಮಾತ್ಮನು ನೆಲೆಸಿದ್ದಾನೆ. ಕಣ್ಣಿಗೆ ಗೋಚರವಾಗುವ ಬಾಹ್ಯರೂಪ ಮತ್ತು ಅದರ ಅಸ್ತಿತ್ವಕ್ಕೆ ಕಾರಣವೆನಿಸಿದ ಮಹಾಚೈತನ್ಯ ಇವೆರಡೂ ಪ್ರತಿಯೊಂದು ವಸ್ತುವಿನಲ್ಲಿ ಅಡಕವಾಗಿದೆ. ಇವೆರಡರ ಸಮ್ಮಿಶ್ರಣವೇ ಒಂದು ಪದಾರ್ಥವೆನ್ನಬಹುದು. ಆದುದರಿಂದ ಶಬ್ದಕ್ಕೆ ವಸ್ತುವಿನ ಹೊರಗಿನ ರೂಪ ಮಾತ್ರ ಅರ್ಥವಾಗಿರದೆ ಅದರ ಅಂತಃಸಾರವೆನಿಸಿದ ಚೇತನವೂ ಆ ಶಬ್ದದ ಅರ್ಥವೆನಿಸುತ್ತದೆ. ಹಣ್ಣಿನ ಹೊರಗಿನ ಸಿಪ್ಪೆ, ತೊಗಟೆ ಮತ್ತು ಒಳಗಿನ ಸಿಹಿಯಾದ ಸಾರಭಾಗ ಇವೆಲ್ಲವೂ ಸೇರಿಯೇ ಒಂದು ಸಮಗ್ರವಾದ ಹಣ್ಣು. 'ಮಾವಿನಹಣ್ಣು', 'ತೆಂಗಿನಕಾಯಿ'

ಮುಂತಾದ ಪದಗಳು ಆ ವಸ್ತುವಿನ ಈ ಹೊರ ಮತ್ತು ಒಳ ರೂಪಗಳೆರಡನ್ನೂ ತಿಳಿಸುತ್ತವೆ. ''ಹಸು'' ಎನ್ನುವ ಪದವು ಆ ಪಶುವಿನ ಶರೀರದ ಜೊತೆಗೆ ಅದರ ಒಳಗಿರುವ ಚೇತನವನ್ನು ಹೇಳುವುದಿಲ್ಲವೆ ? ''ಮನುಷ್ಯ''ನೆಂದು ನಾವು ನಮ್ಮ ಶರೀರವನ್ನು ಕರೆಯುವುದಾದರೆ ಆ ದೇಹದೊಳಗಿನ ಆತ್ಮನನ್ನು ಕರೆಯಲು ಬೇರೆ ಪದವನ್ನು ಬಳಸುತ್ತೇವೆಯೇ ? ಶರೀರವನ್ನೂ ಅದರೊಳಗಿರುವ ಆತ್ಮವನ್ನೂ ಒಂದೇ ಶಬ್ದದಿಂದ ನಾವು ಕರೆಯುತ್ತೇವೆ. ಅದರಂತೆ ನಮ್ಮನ್ನೂ ನಾವು ''ಅಹಂ'' ಎಂದು ಹೇಳುವುದಾದರೆ ನಮ್ಮ ಒಳಗೆ ನೆಲೆಸಿರುವ ಸಾರತಮ ವ್ಯಕ್ತಿ ಅಂತರ್ಯಾಮಿಯಾದ ಪರಮಾತ್ಮನನ್ನು ಕರೆಯಲು ಋಷಿಗಳೂ ಅದೇ ''ಅಹಂ'' ಶಬ್ದವನ್ನು ಬಳಸಿದ್ದಾರೆ. ಹೀಗೆ ಬೇರೆ ಬೇರೆ ನಿಟ್ಟಿನಿಂದ ಪರಿಶೀಲಿಸಿದಾಗ ''ಅಹಂ ಬ್ರಹ್ಮಾಸ್ಮಿ'' ಎನ್ನುವ ವಾಕ್ಯವು ಪರಮಾತ್ಮನ ''ಸ್ವಪ್ರಜ್ಞೆ'', ನಮ್ಮ ಪೂರ್ಣತೆಯ ಪರಿಜ್ಞಾನ, ನಮ್ಮಲ್ಲಿ ಹುದುಗಿದ ಅಂತರ್ಯಾಮಿಯ ನಿರೂಪಣೆಯೇ ಆಗಿದೆಯಲ್ಲದೆ ಜೀವ ಬ್ರಹ್ಮರ ಅದ್ವೈತ ಪ್ರತಿಪಾದನೆಯಲ್ಲವೆಂಬುದನ್ನು ಅರಿತುಕೊಳ್ಳಬೇಕು.

''ಅಹಂ ಬ್ರಹ್ಮಾಸ್ಮಿ'' ಎಂಬ ವಾಕ್ಯವನ್ನು ಮಾತ್ರ ನೋಡಿ ನಾವು ಗೊಂದಲ ಮಾಡಿಕೊಳ್ಳಬಾರದು. ಬೃಹದಾರಣ್ಯಕದಲ್ಲಿಯೇ ಇನ್ನೊಂದು ಕಡೆ ತಂದೆಯು ಮಗನಿಗೆ ''ತ್ವಂ ಬ್ರಹ್ಮ'' ''ತ್ವಂ ಯಜ್ಞಃ'' ''ತ್ವಂ ಲೋಕಃ'' ಎಂದು ಹೇಳುತ್ತಾನೆ. ಆಗ ಮಗನು ''ಅಹಂ ಬ್ರಹ್ಮ'' ''ಅಹಂ ಯಜ್ಞಃ'' ''ಅಹಂ ಲೋಕಃ'' ಎಂದು ಉತ್ತರಿಸುವನು. ನಾನು ವೇದವನ್ನು ಅಧ್ಯಯನ ಮಾಡಿ ಯಜ್ಞವನ್ನು ಆಚರಿಸಿ ಲೋಕವನ್ನು ಗೆಲ್ಲುವೆನು ಎಂದೇ ಎಲ್ಲರೂ ಇದಕ್ಕೆ ಅರ್ಥವನ್ನು ಮಾಡಿದ್ದಾರೆ. ''ಅಹಂ ಬ್ರಹ್ಮ'' ಎಂಬ ಪದಕ್ಕೆ ಅದ್ವೈತದ ಅರ್ಥವನ್ನು ಮಾಡದೆ ಈ ಸರಳವಾದ ವಿವರಣೆಯನ್ನು ಎಲ್ಲರೂ ಒಪ್ಪಿದ್ದಾರೆ. ಅದರಂತೆ ''ಅಹಂ ಬ್ರಹ್ಮಾಸ್ಮಿ'' ಎಂಬ ವಾಕ್ಯವನ್ನು ಆಪಾತವಾಗಿ ನೋಡಿ ಭ್ರಮೆಗೆ ಒಳಗಾಗದೆ ಈ ದೃಷ್ಟಿಯಿಂದ ಅದರ ಅರ್ಥವನ್ನು ಪರಿಶೀಲಿಸಬೇಕು.

''ಅಥ ಯೋಽನ್ಯಾಂ ದೇವತಾಮುಪಾಸ್ತೇ'' ಎಂಬ ವಾಕ್ಯದಲ್ಲಿಯೂ ನಾವು ಉಪಾಸನೆ ಮಾಡಬೇಕಾದ ದೇವತೆಯು ನಮಗಿಂತ ಭಿನ್ನವಾದದ್ದು ಎಂದು ಸ್ಪಷ್ಟವಾಗಿ ಹೇಳಿದೆ. ''ಯಃ ಅನ್ಯಾಂ'' ಎಂಬುದಾಗಿ ಆ ದೇವತೆಯು ನಮಗಿಂತ ಬೇರೆಯೇ ಆಗಿದೆಯೆಂದು ನಿಸ್ಸಂದಿಗ್ಧವಾಗಿ ಹೇಳಿದೆ. ಆದರೆ ನಮಗಿಂತ ಬೇರೆಯಾದ ದೇವರನ್ನು ''ಅನ್ಯೋಽಸೌ ಅನ್ಯೋಽಹಂ'' ಆ ದೇವರೂ ನಾವೂ ಬೇರೆ ಬೇರೆಯೇ, ನಮಗೂ ಅವನಿಗೂ ಸಂಬಂಧವೇ ಇಲ್ಲ, ನಾವೇ ಸ್ವತಂತ್ರರು ಎಂಬ ರೀತಿಯಲ್ಲಿ ತಿಳಿದುಕೊಳ್ಳಬಾರದೆಂದು ನಿಷೇಧಿಸಿದೆ. ಆ ಮನೆಯ ಅಣ್ಣತಮ್ಮಂದಿರು ಬೇರೆ ಬೇರೆಯಾಗಿದ್ದಾರೆಂದರೆ ಪರಸ್ಪರ ಸಂಪರ್ಕವಿಲ್ಲದೆ ಪ್ರತ್ಯೇಕವಾಗಿ ಸ್ವತಂತ್ರರಿದ್ದಾರೆಂದು ಲೋಕಪ್ರಸಿದ್ಧವಾದ ವ್ಯವಹಾರವಾಗಿದೆ. ಪರಮಾತ್ಮನೂ ನಾವೂ ಅನ್ಯರು. ಅವನು ಬೇರೆ ನಾವು ಬೇರೆ ಎನ್ನುವ ಭಗವಂತನಿಂದ ಪ್ರತ್ಯೇಕತಾ ಭಾವವು ಸಲ್ಲದು – ಎಂಬುದೇ ಆ ವಾಕ್ಯದ ಅರ್ಥವಾಗಿದೆಯಲ್ಲದೆ ಜೀವ- ಪರಮಾತ್ಮರ ಭಿನ್ನತೆಯನ್ನು ನಿಷೇಧಿಸುವುದಲ್ಲ. ವಾಕ್ಯದ ಪ್ರಾರಂಭದಲ್ಲಿ ಭಿನ್ನತೆಯನ್ನು ಸ್ಪಷ್ಟವಾಗಿ ಅಂಗೀಕರಿಸಿ ಉತ್ತರಾರ್ಧದಲ್ಲಿ ಅದನ್ನು ನಿಷೇಧಿಸುವಂತಹ ಅಸಂಬದ್ಧತೆಯನ್ನು ಉಪನಿಷತ್ತಿನಲ್ಲಿ ನಾವು ನಿರೀಕ್ಷಿಸಲಾರೆವು.

''ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್''

ಯಾಜ್ಞವಲ್ಕ್ಯರು ತನ್ನ ಇಬ್ಬರು ಪತ್ನಿಯರನ್ನು ಕರೆಸಿ ತಾನು ಎಲ್ಲವನ್ನೂ ಪರಿತ್ಯಜಿಸಿ ಯಾತ್ರೆಗೆ ಹೊರಟಿರುವುದಾಗಿ ತಿಳಿಸಿ ತನ್ನ ಭೌತಿಕ ಸಂಪತ್ತನ್ನು ಇಬ್ಬರಿಗೂ ವಿಭಜಿಸಿ ಹಂಚುವುದಾಗಿ ತಿಳಿಸುತ್ತಾರೆ. ''ನೀವು ನೀಡಿದ ಈ ಸಂಪತ್ತಿನಿಂದ ನನಗೆ ಶಾಶ್ವತ ಸುಖವು ದೊರೆಯಬಲ್ಲುದೇ ?'' ಎಂದು ಮೈತ್ರೇಯಿಯಿಯು ಪ್ರಶ್ನಿಸುತ್ತಾಳೆ. ಸಂಪತ್ ಸಮೃದ್ಧವಾದ ಸಮಗ್ರ ಭೂಮಂಡಲದ ಒಡೆತನವು ದೊರೆತರೂ

ಶಾಶ್ವತ ಸುಖವನ್ನು ಹೊಂದಲು ಸಾಧ್ಯವಿಲ್ಲ ; ಸಂಪತ್ತಿನಿಂದ ಅಮೃತತ್ವವನ್ನು ಪಡೆಯುವ ಆಶೆ ಸಫಲವಾಗಲಾರದೆಂದು ಯಾಜ್ಞವಲ್ಕ್ಯರು ಉತ್ತರಿಸುತ್ತಾರೆ. ''ಯೇನಾಹಂ ನಾಮೃತಾ ಸ್ಯಾಂ ಕಿಮಹಂ ತೇನ ಕುರ್ಯಾಂ'' ಯಾವುದರಿಂದ ಅಮೃತತ್ವವು ದೊರೆಯಲಾರದೋ ಅಂತಹ ಈ ಭೌತಿಕ ಸಂಪತ್ತಿನಿಂದ ತನಗೆ ಏನಾಗಬೇಕು ? ಎಂದು ಹೇಳಿ ಯಾಜ್ಞವಲ್ಕ್ಯರು ಕೊಡಮಾಡಿದ ಆಸ್ತಿಯನ್ನು ನಿರಾಕರಿಸಿ ಅಮೃತತ್ವದ ದಾರಿಯನ್ನು ತೋರಿಸಬೇಕೆಂದು ಯಾಜ್ಞವಲ್ಕ್ಯರಲ್ಲಿ ಪ್ರಾರ್ಥಿಸುತ್ತಾಳೆ. ಅವಳ ಈ ತ್ಯಾಗ ಮತ್ತು ಆಧ್ಯಾತ್ಮದ ಕಳಕಳಿಯನ್ನು ಕಂಡು ಸಂತುಷ್ಟರಾಗಿ ''ಇಂತಹ ಇಷ್ಟವದ ಆಧ್ಯಾತ್ಮದ ಮಾತನ್ನು ಆಡುವ ನೀನೇ ನನ್ನ ಪ್ರೀತಿಯ ಸಹಧರ್ಮಚಾರಿಣಿಯಾಗಿರುವಿ'' ಎಂದು ಅವಳನ್ನು ಪ್ರಶಂಸಿಸಿ ತತ್ತ್ವಜ್ಞಾನವನ್ನು ವಿವರಿಸುವರು. ಜಗತ್ತಿನಲ್ಲಿ ನಮಗೆ ಅತ್ಯಂತ ಇಷ್ಟತಮವಾದ ವಸ್ತುವು ಪರಮಾತ್ಮನೇ ಆಗಿರವನು. ಅವನ ಸಂಪರ್ಕದಿಂದಲೇ ಮನೆ, ಮಡದಿ, ಮಕ್ಕಳು ಎಲ್ಲವೂ ನಮಗೆ ಪ್ರಿಯವಾಗುತ್ತಿವೆ. ಅವನು ವಿಮುಖನಾದಾಗ ನಾವು ಅತ್ಯಂತವಾಗಿ ಪ್ರೀತಿಸುವ ವಸ್ತುಗಳನ್ನೂ ನಾವು ದ್ವೇಷಿಸುವಂತಹ ಸ್ಥಿತಿಯುಂಟಾಗುವುದು. ಆದುದರಿಂದ ಭೌತಿಕ ವಸ್ತುಗಳನ್ನಾಗಲೀ, ಸತಿ-ಸುತರನ್ನಾಗಲೀ ನಮ್ಮ ಪ್ರೇಮದ ಕೇಂದ್ರಬಿಂದುವೆಂದು ಪರಿಗಣಿಸದೆ ತಂದೆ, ತಾಯಿ, ಬಂಧು, ಬಾಂಧವರೆಲ್ಲರಿಗಿಂತಲೂ ಮಿಗಿಲಾಗಿ ತನಗಿಂತಲೂ ಹೆಚ್ಚಾಗಿ ಪರಮಾತ್ಮನೇ ನಮ್ಮ ಪ್ರೀತಿಯ ಕಣ್ಮಣಿಯೆಂದು ಅವನನ್ನೇ ಅತಿಶಯಿತವಾಗಿ ಪ್ರೀತಿಸಬೇಕು. ಪರಮಾತ್ಮನಿಗಿಂತಲೂ ಜಗತ್ತಿನ ಬೇರೆ ವಸ್ತುಗಳಿಗೆ ಮಹತ್ತ್ವ ನೀಡಿದವನಿಗೆ ದುರಂತ ಕಾದಿದೆ.

ವೀಣೆ, ಶಂಖಗಳನ್ನು ನೋಡದೆ ಶಬ್ದವನ್ನು ಮಾತ್ರ ಕೇಳಿದರೆ ಅದರ ಸರಿಯಾದ ಪರಿಚಯವಾಗುವುದಿಲ್ಲ. ವೀಣೆ, ಶಂಖಗಳನ್ನು ನೋಡಿದಾಗಲೇ ಅದರಿಂದ ಹೊರಹೊಮ್ಮುವ ಧ್ವನಿಯ ನಿಜವಾದ ಪರಿಚಯವಾಗುವುದು. ಅದರಂತೆ ಜಗತ್‌ಕಾರಣನಾದ ಭಗವಂತನನ್ನು ತಿಳಿಯದೆ ಜಗತ್ತಿನ ಸರಿಯಾದ ಜ್ಞಾನವೇ ನಮಗೆ ಉಂಟಾಗಲಾರದು. ಹೀಗೆ ಸರ್ವಕಾರಣವೂ ಸರ್ವರ ಆನಂದದ ಮೂಲಸ್ರೋತವೂ ಆದ ಪರಬ್ರಹ್ಮನ ದರ್ಶನವೇ ನಮ್ಮ ಜೀವನದ ಪ್ರಧಾನ ಲಕ್ಷ್ಯ. ಚೈತನ್ಯರೂಪಿಯಾದ ಜೀವನು ಆ ಅನಂತ ಅಪಾರ ಬ್ರಹ್ಮನನ್ನು ಹೊಂದಿದಾಗ 'ನ ಪ್ರೇತ್ಯ ಸಂಜ್ಞಾಸ್ತಿ' ತನ್ನ ಜ್ಞಾನವನ್ನೇ ಕಳೆದುಕೊಳ್ಳುತ್ತಾನೆಂದು ಅಂತಿಮವಾಗಿ ಯಾಜ್ಞವಲ್ಕ್ಯರು ಹೇಳುತ್ತಾರೆ. ಇದನ್ನು ಕೇಳಿದ ಮೈತ್ರೇಯಿಯು ಗಲಿಬಿಲಿಗೊಂಡು ''ಮುಕ್ತಿಯಲ್ಲಿ ಜ್ಞಾನವಿಲ್ಲವೆನ್ನುವ ನಿಮ್ಮ ಮಾತು ಭ್ರಾಮಕವಾಗಿದೆ, ಅದನ್ನು ವಿವರಿಸಬೇಕು'' ಎಂದು ಕೇಳಿಕೊಳ್ಳುವಳು. ಆಗ ಯಾಜ್ಞವಲ್ಕ್ಯರು ತನ್ನ ಮಾತಿನ ವಿವರಣೆಯನ್ನು ನೀಡಿ ಭ್ರಮೆಯನ್ನು ತಂದುಕೊಡುವಂತಹ ಅಸತ್ಯ ವಿಚಾರವನ್ನು ತಾನು ಹೇಳಿಲ್ಲ. ಆತ್ಮನಿಗೂ ವಿನಾಶವಿಲ್ಲ. ಆತ್ಮನ ಸ್ವಾಭಾವಿಕ ಗುಣವಾಗಿರುವ ಜ್ಞಾನಕ್ಕೂ ವಿನಾಶವಿಲ್ಲ. ಮುಕ್ತಿಯಲ್ಲಿ ಜ್ಞಾನವೇ ಇಲ್ಲದಂತಹ ಅಂಧಕಾರ ಸ್ಥಿತಿಗೆ ಮುಕ್ತನು ತಲುಪುವುದಿಲ್ಲ. ವಿಜ್ಞಾನಘನನಾದ ಜೀವನು ಅಜ್ಞಾನವನ್ನು ಸರ್ವಥಾ ಬಯಸಲಾರನು. ಶರೀರ, ಇಂದ್ರಿಯ, ಅಂತಃಕರಣಗಳನ್ನು ತೊರೆದು ಚೈತನ್ಯರೂಪವಾದ ತನ್ನ ನಿಜರೂಪವನ್ನು ಪಡೆಯುವ ಮುಕ್ತಿಯಲ್ಲಿ ಇಂದ್ರಿಯ, ಅಂತಃಕರಣಗಳಿಂದ ಜನ್ಯವಾದ ಭೌತಿಕ ಜ್ಞಾನವಿರುವುದಿಲ್ಲ. ಸ್ವರೂಪಭೂತವಾದ ಚೈತನ್ಯಜ್ಞಾನವೊಂದೇ ಬೆಳಗುತ್ತದೆಯೆಂಬುದಾಗಿ ಹೇಳಿ ಮುಕ್ತಿಯಲ್ಲಿ ಜ್ಞಾನವಿಲ್ಲವೆನ್ನುವ ತನ್ನ ಮಾತಿಗೆ, ಆಗ ಭೌತಿಕ ಜ್ಞಾನವಿಲ್ಲವೆನ್ನುವ ಸ್ಪಷ್ಟೀಕರಣವನ್ನು ಯಾಜ್ಞವಲ್ಕ್ಯರು ನೀಡುತ್ತಾರೆ. ''ಯತ್ರ ಹಿ ದ್ವೈತಮಿವ ಭವತಿ'' ಚೈತನ್ಯಕ್ಕಿಂತ ವ್ಯತಿರಿಕ್ತವಾದ ಭೌತಿಕ ವಸ್ತುಗಳಿದ್ದರೆ ಆಗ ಮನಸ್ಸಿನಲ್ಲಿ ಇಂದ್ರಿಯಗಳಿಂದ ಬಾಹ್ಯಜ್ಞಾನವುಂಟಾಗಲು ಸಾಧ್ಯ. ''ಯತ್ರ ತ್ವಸ್ಯ ಸರ್ವ ಮಾತ್ಮೈವಾಭೂತ್'' ಆದರೆ ಮುಕ್ತಿಯಲ್ಲಿ ಚೈತನ್ಯ ಮಾತ್ರವಿದ್ದು ಪ್ರಕೃತಿಯ ಸಂಬಂಧವೇ ಇಲ್ಲದಿರುವಾಗ ಬಾಹ್ಯೇಂದ್ರಿಯಗಳಿಂದ ಜ್ಞಾನವು ಹೇಗೆ ಹುಟ್ಟಬಲ್ಲುದು ? ಆಗ ಚೈತನ್ಯರೂಪವಾದ

ಅಂತರಜ್ಞಾನವೊಂದೇ ಇರುತ್ತದೆ. ಅಂತೂ ಜಡವಸ್ತುಗಳ ಸಂಬಂಧವಿಲ್ಲದ ಮುಕ್ತಿಯಲ್ಲಿ ಇಂದ್ರಿಯ, ಮನಸ್ಸುಗಳೇ ಇಲ್ಲದಿರುವುದರಿಂದ ಅಂತಃಕರಣದ ವಿಕೃತಿಯಾದ ಭೌತಿಕ ಜ್ಞಾನವಿಲ್ಲದಿದ್ದರೂ ಮುಕ್ತನು ಅಜ್ಞಾನದ ಕತ್ತಲಲ್ಲಿ ಮುಳುಗುವುದಿಲ್ಲ. ಚೈತನ್ಯದ ದಿವ್ಯಪ್ರಭೆಯಲ್ಲಿ ಬೆಳಗುತ್ತಾ ತನ್ನನ್ನೂ, ಭಗವಂತನನ್ನೂ, ಉಳಿದ ವಿಶ್ವವನ್ನೂ ಕಾಣುತ್ತಾನೆ.

'ನ ಪ್ರೇತ ಸಂಜ್ಞಾಸ್ತಿ' ಈ ವಾಕ್ಯವನ್ನು ಇನ್ನೊಂದು ರೀತಿಯಲ್ಲೂ ವ್ಯಾಖ್ಯಾನ ಮಾಡಬಹುದು. ಮುಕ್ತಿಯನ್ನು ಪಡೆದ ಸಿದ್ಧಪುರುಷನಿಗೆ ಜ್ಞಾನವಿಲ್ಲವೆಂದು ಈ ವಾಕ್ಯವು ಹೇಳುವುದಿಲ್ಲ. ಮುಕ್ತಪುರುಷನ ಜ್ಞಾನವು ಸಂಸಾರಿಗಳಾದ ನಮಗೆ ಇಲ್ಲ. ಮುಕ್ತನು ಅಜ್ಞಾನವನ್ನು ಕಳೆದು ಸಂಸಾರವನ್ನು ತೊರೆದು ಭಗವಂತನ ಲೋಕಕ್ಕೆ ಹೋದ ಮೇಲೆ ಈ ಭೌತಿಕ ಪ್ರಪಂಚಕ್ಕೂ ಅವನಿಗೂ ಸಂಬಂಧವೇ ಕಳಚಿ ಹೋಗುವುದರಿಂದ ನಾವು ಅವನನ್ನು ಕಾಣಲಾರೆವು. ನಮ್ಮ ಸ್ಥೂಲದೃಷ್ಟಿಗೆ ಭಗವಂತನಂತೆ ಮುಕ್ತನೂ ಅಗೋಚರನಾಗುವನೆಂದು ಮುಕ್ತಿಯ ವೈಶಿಷ್ಟ್ಯವನ್ನು ಈ ವಾಕ್ಯವು ಪ್ರತಿಪಾದಿಸುತ್ತದೆ ಎಂದೂ ನಾವು ಈ ವಾಕ್ಯದಿಂದ ತಿಳಿದುಕೊಳ್ಳಬಹುದು.

ಈ ವಾಕ್ಯಕ್ಕೆ ಅದ್ವೈತವಾದದ ವ್ಯಾಖ್ಯಾನವೂ ಹೀಗಿದೆ – ಮುಕ್ತಿಯಲ್ಲಿ ಒಬ್ಬನೇ ಇದ್ದು ಬೇರೆ ವಸ್ತುವೇ ಇಲ್ಲದೆ ಅದ್ವೈತದ ಸ್ಥಿತಿಯಲ್ಲಿರುವಾಗ ಯಾರಿಗೆ ಯಾವ ವಸ್ತುವಿನ ಜ್ಞಾನವುಂಟಾಗಲು ಸಾಧ್ಯ ? ಜ್ಞಾತೃ, ಜ್ಞೇಯವಸ್ತು, ಜ್ಞಾನಸಾಧನ ಮುಂತಾದ ಭಿನ್ನತೆಗಳೇ ಇಲ್ಲದಿದ್ದಾಗ ಜ್ಞಾನವು ಹೇಗೆ ಉಂಟಾಗುತ್ತದೆ ? ಹೀಗೆ ಅದ್ವೈತಭಾವದ ಈ ಮುಕ್ತಿಯಲ್ಲಿ ಜ್ಞಾನವುಂಟಾಗಲು ಅವಕಾಶವೇ ಇಲ್ಲದಿರುವುದರಿಂದ ಮುಕ್ತಿಯಲ್ಲಿ ಜ್ಞಾನವಿಲ್ಲವೆಂದು ಯಾಜ್ಞವಲ್ಕ್ಯರು ಹೇಳಿದ್ದಾರೆಂದು ವ್ಯಾಖ್ಯಾನಿಸಲಾಗಿದೆ. ಮುಕ್ತಿಯ ನಿಜರೂಪವು ಇದೇ ಆದಲ್ಲಿ ಇಂತಹ ಮುಕ್ತಿಯನ್ನು ಯಾರೂ ಬಯಸಲಾರರು. ಚೈತನ್ಯಹೀನನಾಗಿ ಅಜ್ಞಾನದ ಕಗ್ಗತ್ತಲೆಯಲ್ಲಿ ಕಲ್ಲಿನಂತೆ ಕಾಲಕಳೆಯುವುದು ಪುರುಷಾರ್ಥವೆನಿಸಬಹುದೇ ? ಇದಕ್ಕಿಂತ ಸ್ವಲ್ಪವಾದರೂ ಜ್ಞಾನದ ಬೆಳಕಿರುವ ಸಂಸಾರವೇ ಲೇಸು ಎನ್ನಬೇಕಾಗುತ್ತದೆ.

ಉಪನಿಷತ್ತು ಇಂತಹ ಮುಕ್ತಿಯನ್ನು ನಿರೂಪಿಸಲು ಹೊರಟಿಲ್ಲ. ತರ್ಕದ ರೂಪದಲ್ಲಿ ಇಂತಹ ಮುಕ್ತಿಯನ್ನು ನಿರಾಕರಿಸುವುದೇ ಈ ವಾಕ್ಯದ ಉದ್ದೇಶವಾಗಿದೆ. ನಿರ್ವಿಶೇಷ ಅದ್ವೈತ ಭಾವವೇ ಮುಕ್ತಿಯಾದಲ್ಲಿ ಯಾವುದೇ ಜ್ಞಾನಕ್ಕೆ ಅವಕಾಶವಿಲ್ಲದೆ ಅಜ್ಞಾನದ ಭಾರಿ ದುರಂತಕ್ಕೆ ನಾವು ಒಳಗಾಗಬಹುದೆಂದು ಎಚ್ಚರಿಸಿ ಇದು ನಿಜವಾದ ಮುಕ್ತಿಯಲ್ಲವೆಂಬುದನ್ನೇ ಈ ಉಪನಿಷತ್ತು ಪ್ರತಿಪಾದಿಸುತ್ತದೆ. ತರ್ಕದಲ್ಲಿರುವಂತಹ ಆಪಾದನೆಯನ್ನೇ ನಿಜವಾದ ಪ್ರತಿಪಾದನೆಯೆಂದು ಭಾವಿಸಿ ಆವಾಂತರಕ್ಕೆ ಎಡೆಯಾಗುವುದುಂಟು. "ದೇವರು ಇಲ್ಲದಿದ್ದಲ್ಲಿ ಈ ಜಗತ್ತಿನ ರಚನೆಯಾಗುತ್ತಿರಲಿಲ್ಲ" ಇದು ತರ್ಕದ ಆಪಾದನೆಗೆ ಒಂದು ಉದಾಹರಣೆ. ದೇವರು ಇಲ್ಲವೆಂದಾಗಲೀ, ಜಗತ್ತಿನ ರಚನೆಯಾಗಿಲ್ಲವೆಂದಾಗಲೀ ಈ ವಾಕ್ಯದ ಅಭಿಪ್ರಾಯವಲ್ಲ. ದೇವರು ಇಲ್ಲದಿದ್ದಲ್ಲಿ ಕರ್ತನೇ ಇಲ್ಲದಿರುವುದರಿಂದ ಜಗತ್ತು ಹುಟ್ಟುವುದು ಹೇಗೆ ? ಎಂದು ಆಕ್ಷೇಪಿಸಿ ಜಗತ್ತಿನ ರಚನೆಯನ್ನು ನಿರ್ವಹಿಸಲು ದೇವರನ್ನು ಅಂಗೀಕರಿಸಲೇಬೇಕು ಎಂಬುದೇ ಈ ತರ್ಕದ ಆಶಯವಾಗಿದೆ. ಅದರಂತೆ ಅದ್ವೈತವನ್ನು ಪ್ರತಿಪಾದಿಸಲು ಈ ವಾಕ್ಯವು ಪ್ರವೃತ್ತವಾಗಿಲ್ಲ. ಮುಕ್ತಿಯಲ್ಲಿ ಅದ್ವೈತವನ್ನು ಅಂಗೀಕರಿಸುವುದರಿಂದ ಜ್ಞಾನವೇ ಇಲ್ಲದಂತಾಗಬಹುದು. ಜ್ಞಾನವನ್ನು ನಾವೆಲ್ಲರೂ ಬಯಸುವುದರಿಂದ ಅದಕ್ಕೆ ಅನುಕೂಲವಾಗುವಂತೆ ದ್ವೈತವನ್ನು ಮೋಕ್ಷದಲ್ಲಿ ಒಪ್ಪಬೇಕು. ಅದ್ವೈತ ಸ್ಥಿತಿಯು ಮುಕ್ತಿಯೆನಿಸಲಾರದೆಂಬುದೇ ಈ ವಾಕ್ಯದ ಪರ್ಯವಸಾನವಾಗುತ್ತದೆ.

ಇನ್ನೊಂದು ರೀತಿಯಲ್ಲಿ ಪರ್ಯಾಲೋಚಿಸಿದಾಗ ಇದು ಭಕ್ತನ ಸಮಾಧಿ ಸ್ಥಿತಿಯನ್ನು ವಿವರಿಸುತ್ತದೆಯೆಂದು ತಿಳಿಯಬಹುದು. ಸಾಮಾನ್ಯವಾಗಿ ನಮ್ಮ ಮನಸ್ಸು ಆಧ್ಯಾತ್ಮಿಕ ಪ್ರಪಂಚದ ಕಡೆಗೂ,

ಬಾಹ್ಯ ವಿಷಯಗಳ ಕಡೆಗೂ ಎರಡು ಮುಖವಾಗಿ ಹರಿಯುವುದರಿಂದ ಏಕಾಗ್ರತೆಯಿಂದ ಧ್ಯಾನವನ್ನು ನಮಗೆ ಮಾಡಲಾಗುವುದಿಲ್ಲ. ಆದರೆ ಮನಸ್ಸು ಬಹಿರ್ಮುಖವಾಗಿ ಹರಿಯದೆ ಪರಮಾತ್ಮನಲ್ಲಿ ಮಾತ್ರ ಕೇಂದ್ರೀಕೃತವಾದಾಗ ಯಾವ ಬಾಹ್ಯ ವಸ್ತುಗಳನ್ನೂ ಗಮನಿಸದೆ ಅದು ಏಕಾಗ್ರವಾಗುತ್ತದೆ. ಅನೇಕ ವಿಷಯಗಳ ಕಡೆಗೆ ಮನಸ್ಸು ಓಡುವುದೇ ದ್ವೈತ. ಪರಮಾತ್ಮನಲ್ಲೊಬ್ಬನಲ್ಲಿ ಮಾತ್ರ ಮನಸ್ಸು ನೆಲೆ ನಿಲ್ಲುವುದೇ ಅದ್ವೈತ. ಈ ರೀತಿಯಲ್ಲಿ ಈ ವಾಕ್ಯವು ಸಮಾಧಿಯ ವರ್ಣನೇ ಆಗಿದೆ, ಮುಕ್ತಿಯ ವರ್ಣನೆಯಲ್ಲವೆಂದೂ ಭಾವಿಸಬಹುದು. ಅಂತೂ ಇಷ್ಟರವರೆಗೆ ನಿರೂಪಿಸಿದಂತೆ ಮೂರು ರೀತಿಗಳಿಂದ ''ಯತ್ರ ತ್ವಸ್ಯ ಸರ್ವಂ ಆತ್ಮೈವಾಭೂತ್'' ಎಂಬ ವಾಕ್ಯವನ್ನು ಅರ್ಥಮಾಡಿಕೊಳ್ಳಬಹುದು –

೧. ಮುಕ್ತಿಯಲ್ಲಿ ಭೌತಿಕ ಜ್ಞಾನವಿಲ್ಲವೆಂಬ ನಿರೂಪಣೆ.

೨. ತರ್ಕದ ರೂಪದಲ್ಲಿ ಅದ್ವೈತದ ನಿರಾಕರಣೆ.

೩. ಸಮಾಧಿಯಲ್ಲಿ ತಂದುಕೊಳ್ಳುವಂತಹ ಏಕಾಗ್ರತೆಯ ವರ್ಣನೆ.

ಮುಕ್ತಿಯಲ್ಲಿ ತಾರತಮ್ಯ

ಮುಕ್ತಿಯಲ್ಲಿ ಜೀವನು ತನ್ನ ಅಸ್ವಾಭಾವಿಕವಾದ ರೂಪವನ್ನು ಕಳೆದುಕೊಂಡು ನಿಜರೂಪದಿಂದ ಕಂಗೊಳಿಸುವನು. ಬೇರೆ ಬೇರೆ ಲೋಹಗಳ ಬೆರಕೆಯಿಂದ ತನ್ನ ಪರಿಶುದ್ಧತೆಯನ್ನು ಕಳೆದುಕೊಂಡ ಚಿನ್ನವನ್ನು ಬೆಂಕಿಯಲ್ಲಿ ಹಾಕಿದಾಗ ಅದು ತನ್ನ ಕಶ್ಮಲವನ್ನು ಕಳೆದುಕೊಂಡು ಸಹಜ ಪ್ರಭೆಯನ್ನು ಹೊಂದಿ ದೇದೀಪ್ಯಮಾನವಾಗುವಂತೆ ಜೀವರ ಸ್ಥಿತಿಯೂ ಆಗಿದೆ. ಬೆರಕೆ ಚಿನ್ನದಂತೆ ಪ್ರಕೃತಿ ಅಂತಃಕರಣಗಳ ಸಂಬಂಧದಿಂದ ಜೀವರಲ್ಲಿ ನೈಜವಾಗಿರುವ ಜ್ಞಾನ, ಆನಂದ ಮುಂತಾದ ಗುಣಗಳು ಮುಚ್ಚಿಹೋಗಿವೆ. 'ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೇ' ಪರಮಾತ್ಮನೆಂಬ ದಿವ್ಯಜ್ಯೋತಿಯ ಸಂಬಂಧದಿಂದ ಪ್ರಕೃತಿ ಸಂಬಂಧದ ಕಶ್ಮಲವನ್ನು ಕಳೆದುಕೊಂಡು ಜೀವಾತ್ಮನು ನೈಜಕಾಂತಿಯನ್ನು ಪಡೆಯುವನು. ಸ್ವರ್ಣಕಾರನು ಚಿನ್ನಕ್ಕೆ ವಿವಿಧ ಆಕಾರವನ್ನು ನೀಡಿ ಅವುಗಳಿಗೆ ಥಳಥಳಿಸುವ ಹೊಸರೂಪವನ್ನು ಕೊಡುವಂತೆ ಪರಮಾತ್ಮನೂ ಸಂಸಾರಿಗಳಾದ ಜೀವರಿಗೆ ಮುಕ್ತಿಯಲ್ಲಿ ಮಂಗಳ ಮಯವಾದ ವಿವಿಧ ಚಿನ್ಮಯ ರೂಪಗಳ ಅಭಿವ್ಯಕ್ತಿಯ ಜೊತೆಗೆ ಅವರಿಗೆ ಹೊಸ ಮೆರುಗನ್ನು ಕೊಡುವನು. 'ಅನ್ಯತ್ ನವತರಂ ಕಲ್ಯಾಣತಮಂ ತನುತೇ'. ಆದರೆ ಮುಕ್ತಿಯಲ್ಲಿ ಈ ಜೀವರು ಒಂದೇ ರೀತಿಯಲ್ಲಿ ಇರುವುದಿಲ್ಲ. ಅವರ ಸಾಧನೆಗಳಿಗೆ ಅನುಗುಣವಾಗಿ ಮುಕ್ತಿಯಲ್ಲಿ ಆನಂದರೂಪವಾದ ಫಲದಲ್ಲಿ ಅಂತರ, ವ್ಯತ್ಯಾಸಗಳು ಇರುತ್ತವೆ. ಮನುಷ್ಯ, ಋಷಿ, ದೇವತೆಗಳು ಮುಂತಾದ ಜೀವರ ಸಾಧನೆಗಳು ಒಂದೇ ರೀತಿ ಇರುವುದಿಲ್ಲ. ಕೆಲವರು ಹೆಚ್ಚಿನ ಅಧ್ಯಯನ, ತಪಸ್ಸುಗಳನ್ನೂ ಕೆಲವರು ಕಡಿಮೆ ಸಾಧನೆಯನ್ನು ಮಾಡುವುದನ್ನೂ ನಾವು ನೋಡುತ್ತಿದ್ದೇವೆ. ಸಾಧನೆಗಳಲ್ಲಿ ಅಂತರವಿದ್ದು ಫಲವು ಏಕಮುಖವಾಗಿ ಇರಲು ಸಾಧ್ಯವಿಲ್ಲ. ಆದುದರಿಂದ ಸಾಧನೆಗಳಿಗೆ ಅನುಗುಣವಾಗಿ ಮುಕ್ತಿಯ ಆನಂದದಲ್ಲಿಯೂ ತಾರತಮ್ಯವಿದೆ ಯೆಂಬುದನ್ನು ಈ ಉಪನಿಷತ್ತಿನಲ್ಲಿ ಪ್ರತಿಪಾದಿಸಲಾಗಿದೆ. ಮನುಷ್ಯಚೇತನರು, ಪಿತೃದೇವತೆಗಳು, ಗಂಧರ್ವರು, ದೇವತೆಗಳು ಇವರೆಲ್ಲರಿಗೂ ಸಂಸಾರದಲ್ಲಿಯೂ ಮುಕ್ತಿಯಲ್ಲೂ ಆನಂದದಲ್ಲಿರುವ ಅಂತರವನ್ನೂ, ವೈಚಿತ್ರ್ಯವನ್ನೂ ಪ್ರತಿಪಾದಿಸಲಾಗಿದೆ.

''ಸಂಸಾರದಲ್ಲಿ ಮಾತ್ರ ಆನಂದದ ತಾರತಮ್ಯವನ್ನು ಇಲ್ಲಿ ಹೇಳಲಾಗಿದೆ. ಇದು ಮುಕ್ತಿಯ ಆನಂದದ ವಿವರಣೆಯಲ್ಲ''ವೆಂದು ಕೆಲವರು ವಾದಿಸಬಹುದು. ಆದರೆ ಈ ಆನಂದಾನುಭವಿಗಳನ್ನು ಅವೃಜಿನ, ಅಕಾಮಹತ ಎಂದು ವರ್ಣಿಸಲಾಗಿದೆ. ಪಾತಕ ಅಥವಾ ಅದರ ಫಲವಾದ ದುಃಖವೇ ವೃಜಿನ.

ಈ ದುಃಖವಾಗಲೀ, ಪಾಪವಾಗಲೀ ಇಲ್ಲದವರೇ ಅವೃಜಿನರು. ಸಂಸಾರದಲ್ಲಿ ಯಾರೂ ಈ ದುಃಖದಿಂದ, ಪಾಪದಿಂದ ಮುಕ್ತರಾಗಿಲ್ಲ. ಆದುದರಿಂದ ಅವೃಜಿನರೆಂದು ಮುಕ್ತರನ್ನೇ ಉಲ್ಲೇಖಿಸಲಾಗಿದೆ. ಅದರಂತೆ 'ಅಕಾಮಹತ' ಪದದ ಅರ್ಥವನ್ನು ಪರಿಶೀಲಿಸಿದಾಗ ಈ ಶಬ್ದವೂ ಮುಕ್ತರಿಗೆ ಅನ್ವಯಿಸುತ್ತದೆ. ಕಾಮನೆಯ ಉಪದ್ರವಕ್ಕೆ ಒಳಪಡುವ ಸಂಸಾರಿಗಳೆಲ್ಲರೂ ''ಕಾಮಹತರು''. ತಮ್ಮ ಇಚ್ಛೆಯಂತೆ ಕಾರ್ಯಗಳು ಕೈಗೂಡದೆ ಸಂಕಟಪಡುವುದರಿಂದ ಇವರೆಲ್ಲರೂ ಕಾಮಹತರೆನಿಸುತ್ತಾರೆ. ಮುಕ್ತರ ಯಾವ ಇಚ್ಛೆಯೂ ವಿಫಲವಾಗುವುದಿಲ್ಲ. ಬಯಸಿದ್ದೆಲ್ಲವನ್ನೂ ಏನೂ ಪ್ರಯತ್ನವಿಲ್ಲದೆ ಅನಾಯಾಸದಿಂದ ಪಡೆಯುತ್ತಾರೆ. ಹೀಗೆ ಆಪ್ತಕಾಮರಾದ ಮುಕ್ತರೆಲ್ಲರೂ 'ಅಕಾಮಹತ'ರೇ ಆಗಿರುತ್ತಾರೆ. ಇಂತಹ ಮುಕ್ತ ಪುರುಷರೊಳಗೆಯೇ ಆನಂದದ ವ್ಯತ್ಯಾಸ, ವಿಚಿತ್ರತೆಯನ್ನು ಉಪನಿಷತ್ತು ಹೇಳಿರುವುದರಿಂದ ಮುಕ್ತಿಯಲ್ಲೂ ಅನುಸ್ಯೂತವಾಗಿರುವ ಆನಂದದ ತಾರತಮ್ಯವು ಈ ಉಪನಿಷತ್ತಿನಿಂದ ಸಿದ್ಧವಾಗುತ್ತದೆ.

''ಮೃತ್ಯೋರ್ಮಾ ಅಮೃತಂ ಗಮಯ''

''ಅಸತ್ಯದಿಂದ ಸತ್ಯದ ಕಡೆಗೂ, ಕತ್ತಲೆಯಿಂದ ಬೆಳಕಿನ ಕಡೆಗೂ, ಮೃತ್ಯುವಿನಿಂದ ಅಮೃತತ್ವದ ಕಡೆಗೂ ನಮ್ಮನ್ನು ಕರೆದೊಯ್ಯು'' ಎಂಬ ಅರ್ಥದ ಪ್ರಸಿದ್ಧವಾದ ಪ್ರಾರ್ಥನಾ ಮಂತ್ರವೂ ಈ ಉಪನಿಷತ್ತಿನಲ್ಲಿಯೇ ಇದೆ. ಅಶುಭವೂ, ಅಸ್ವಾಭಾವಿಕವೂ ಆದ ಸಾಂಸಾರಿಕ ದುಃಖವೇ ಅಸತ್ಯ. ಶುಭವೂ ಆತ್ಮಸ್ವರೂಪವಾಗಿರುವುದರಿಂದ ಸಹಜವೂ ಆದ ಮೋಕ್ಷಸುಖವೇ ಸತ್ಯ. 'ಅಸ್ವಾಭಾವಿಕವಾದ ಸಂಸಾರ ದುಃಖದಿಂದ ಬಿಡುಗಡೆ ಮಾಡಿ ಮುಕ್ತಿಯ ನೈಜಸುಖವನ್ನು ನೀಡು. ಅದಕ್ಕಾಗಿ ಮೃತ್ಯುವಿನಿಂದ ಅಮೃತತ್ವದ ಕಡೆಗೆ ನಮ್ಮನ್ನು ಒಯ್ಯು. ಮರಣವನ್ನು ಗೆದ್ದು ಅಮೃತಾತ್ಮನಾಗಿ ನಿರಂತರ ನಲಿಯುವಂತೆ ಮಾಡು. ಅದಕ್ಕಾಗಿ ಕತ್ತಲೆಯಿಂದ ಬೆಳಕಿನ ಕಡೆಗೆ ಸಾಗಿಸು. ಸಂಸಾರದ ಈ ದುರಂತಕ್ಕೆ ಕಾರಣವಾದ ಅಜ್ಞಾನವನ್ನು ಪರಿಹರಿಸಿ ದಿವ್ಯಜ್ಞಾನವನ್ನು ದಯಪಾಲಿಸು' ಎಂಬುದೇ ಈ ಮಂತ್ರರೂಪಕವಾದ ಪ್ರಾರ್ಥನೆಯ ಸಾರವಾಗಿದೆ.

ಜೀವನದಲ್ಲಿ ನಮ್ಮ ಕರ್ತವ್ಯಗಳು

ನಾವು ನಮ್ಮ ಜೀವನದಲ್ಲಿ ವಿವಿಧ ಸಾಧನೆಗಳಿಂದ ಮೂರು ಲೋಕಗಳನ್ನೂ ಗೆಲ್ಲಬೇಕೆಂದು ಉಪನಿಷತ್ತು ವಿಧಿಸಿದೆ. ಪಿತೃಲೋಕ, ದೇವಲೋಕ, ಮಾನವಲೋಕಗಳೇ ನಾವು ಗೆಲ್ಲಬೇಕಾದ ಈ ಮೂರು ಲೋಕಗಳು. ಗೀತೆಯಲ್ಲಿಯೂ, ಉಪನಿಷತ್ತಿನಲ್ಲಿಯೂ ಯಜ್ಞವೆಂದು ಕರೆದಿರುವ ವಿವಿಧ ಸತ್ಕರ್ಮಾಚರಣೆಗಳಿಂದ ನಾವು ಪಿತೃಲೋಕವನ್ನು ಗೆದ್ದು ಸ್ವರ್ಗಸುಖವನ್ನು ಪಡೆಯಬಲ್ಲೆವು. ವಿದ್ಯೆಯಿಂದಲೇ ದೇವಲೋಕದ ವಿಜಯವನ್ನು ಸಾಧಿಸಬೇಕು. ಅಧ್ಯಯನ, ಚಿಂತನ, ಧ್ಯಾನಗಳಿಂದ ಸಾಕ್ಷಾತ್ಕಾರವನ್ನು ಪಡೆದು ಭಗವಂತನನ್ನು ಹೊಂದುವುದೇ ದೇವಲೋಕದ ವಿಜಯವಾಗಿದೆ. ಮಾನವಲೋಕದ ವಿಜಯಕ್ಕಾಗಿ ಶಸ್ತ್ರಾಸ್ತ್ರಗಳಿಂದ ಹೋರಾಟ ನಡೆಸಬೇಕಾಗಿಲ್ಲ. ನಿರಂತರ ಕ್ರಿಯಾಶೀಲರಾಗಿದ್ದರೆ ಈ ಲೋಕವನ್ನು ನಾವು ಗೆದ್ದಂತೆ. ನಿರಂತರ ಕರ್ತವ್ಯಪರಾಯಣತೆಯೇ ನಮ್ಮ ಮಾನವ ಜೀವನದ ಯಶಸ್ಸಿನ ಅಡಿಗಲ್ಲು. ನಾವು ವೈಯಕ್ತಿಕವಾಗಿ ಅನೇಕ ಜನ್ಮಗಳಲ್ಲಿ ಕ್ರಿಯಾಶೀಲರಾದರೆ ಸಾಲದು. ನಮ್ಮ ಮುಂದಿನ ಪೀಳಿಗೆಯೂ ಕರ್ತವ್ಯಶೀಲತೆಯಿಂದ ಮುನ್ನಡೆದು ಭಾವಿ ಜನಾಂಗವು ಧಾರ್ಮಿಕ ಸಂಸ್ಕಾರ ಮತ್ತು ಕಾರ್ಯೋತ್ಸಾಹದಿಂದ ರೂಪುಗೊಂಡಾಗಲೇ ನಮ್ಮ ಈ ಲೋಕದ ವಿಜಯವು ಪೂರ್ಣಗೊಳ್ಳುವುದು. ಆದುದರಿಂದ ನಮ್ಮ ಮಕ್ಕಳು ಮತ್ತು ಭಾವೀ ಪರಂಪರೆಯಿಂದ ಈ ಲೋಕವನ್ನೂ, ಯಜ್ಞ-ಸತ್ಕರ್ಮಾಚರಣೆಗಳಿಂದ ಪಿತೃಲೋಕವನ್ನೂ, ವಿದ್ಯೆಯಿಂದ ದೇವಲೋಕವನ್ನೂ ನಾವು

ಗೆಲ್ಲಬಲ್ಲೆವು. ಆದುದರಿಂದಲೇ ನಮ್ಮ ಮರಣದ ನಂತರವೂ ಉಳಿಯುವ ಈ ಜೀವನದ ಅಮೃತ ಫಲಗಳೆಂದರೆ ವಿದ್ಯೆ, ಸತ್ಕರ್ಮ ಮತ್ತು ಮಕ್ಕಳು ಎಂಬುದಾಗಿ ವರ್ಣಿಸಲಾಗಿದೆ.

ಇದಕ್ಕಾಗಿ ತಂದೆಯು ತನ್ನ ಅಂತ್ಯ ಕಾಲದಲ್ಲಿ ಮಗನನ್ನು ಕರೆದು ತನ್ನ ಮುಂದಿನ ಜವಾಬ್ದಾರಿಯನ್ನು ಅವನಿಗೆ ವಹಿಸಬೇಕು. ''ಅಹಂ ಬ್ರಹ್ಮಃ ಅಹಂ ಯಜ್ಞಃ ಅಹಂ ಲೋಕಃ'' ''ನಾನು ಶಾಸ್ತ್ರದ ಅಧ್ಯಯನವನ್ನು ಮಾಡಿ ತತ್ತ್ವಜ್ಞಾನವನ್ನು ಪಡೆದು ಉತ್ತಮ ಕೃತಿಗಳಿಂದ ಲೋಕಗಳನ್ನು ಗೆಲ್ಲುವೆನು'' ಎಂದು ಅವನಿಂದ ಪ್ರತಿಜ್ಞೆ ಮಾಡಿಸಬೇಕು. ತನ್ನ ಹಿಂದಿನ ಪರಂಪರೆಯಿಂದ ಬಂದ ಧರ್ಮ, ತತ್ತ್ವಜ್ಞಾನಗಳ ಹೊಣೆಯನ್ನು ಮಗನು ತಂದೆಯಿಂದ ಸ್ವೀಕರಿಸಬೇಕು. ಪೂರ್ವಜರಿಂದ ಬಂದ ಆಸ್ತಿ, ಸಂಪತ್ತುಗಳಿಗೆ ಮಾತ್ರ ಹಾತೊರೆಯದೆ ಇಂತಹ ವಿಶಿಷ್ಟವಾದ ಆಧ್ಯಾತ್ಮಿಕ ಜವಾಬ್ದಾರಿಯ ಬಗ್ಗೆಯೂ ನಮಗೆ ಎಚ್ಚರ ನೀಡುವ ಉಪನಿಷತ್ತಿನ ಈ ಉಜ್ವಲವಾಣಿಯು ಅತ್ಯಂತ ಉದ್ಬೋಧಕವಾಗಿದೆ.

ಅಜಾತಶತ್ರುವಿನ ಅಂತರ್ದೃಷ್ಟಿ

ಬಾಲಾಕಿ ಮುನಿಯು ರಾಜಾ ಅಜಾತಶತ್ರುವಿನ ಬಳಿಗೆ ತಾನು ತತ್ತ್ವಜ್ಞಾನಿಯೆಂಬ ಗರ್ವದಿಂದ ಆಗಮಿಸಿ ಪರಬ್ರಹ್ಮನ ಬಗ್ಗೆ ನಿನಗೆ ಉಪದೇಶ ನೀಡುವೆನೆಂದು ಹೇಳಿಕೊಂಡನು. ''ನಿನಗೆ ಇನ್ನೂ ಬ್ರಹ್ಮಜ್ಞಾನವು ಬಂದಿಲ್ಲ. ನೀನು ಅಂತಹ ಜ್ಞಾನಿಯಾಗಿದ್ದರೆ ಜಿಜ್ಞಾಸು ಜನತೆಯು ನಿನ್ನನ್ನು ಬಿಟ್ಟು ಜನಕನನ್ನು ಹಾಡಿ ಹೊಗಳುತ್ತಾ ಅವನ ಬಳಿಗೇ ಯಾಕೆ ಹೋಗುತ್ತಿದ್ದಾರೆ?'' ಎಂದು ಅಜಾತಶತ್ರುವು ಪ್ರಶ್ನಿಸುವನು. ಬಾಲಾಕಿಯು ಆ ರಾಜನ ಮಾತಿಗೆ ಮಹತ್ತ್ವ ನೀಡದೆ ತಾನು ಬ್ರಹ್ಮಜ್ಞಾನಿಯೆಂಬ ಅಹಂಕಾರದಿಂದ ಸೂರ್ಯ, ಚಂದ್ರ, ವಿದ್ಯುತ್ ಮುಂತಾದ ಕಡೆಗಳಲ್ಲಿ ಇರುವ ಭಗವಂತನ ರೂಪಗಳ ಬಗ್ಗೆ ತನಗಿರುವ ಜ್ಞಾನವನ್ನು ಪ್ರದರ್ಶಿಸುತ್ತಾನೆ. ''ಈ ರೂಪಗಳನ್ನೆಲ್ಲಾ ನಾನು ಈಗಾಗಲೇ ಅರಿತಿದ್ದೇನೆ. ನಿನ್ನ ಈ ಜ್ಞಾನವು ಅಪೂರ್ಣವಾಗಿದೆ. ಸಿದ್ಧಿಗೆ ಅವಶ್ಯಕವಾದ ಜ್ಞಾನವನ್ನು ಅರುಹು'' ಎಂದು ಅಜಾತಶತ್ರುವು ನುಡಿದಾಗ ಬಾಲಾಕಿಗೆ ಏನೂ ಹೊಳೆಯದೆ ನಿರುತ್ತರನಾಗುವನು. ನಮ್ಮ ಹೊರಗಿರುವ ಜಡವಸ್ತುಗಳಲ್ಲಿಯೂ, ದೇವತೆಗಳಲ್ಲಿಯೂ ಭಗವಂತನನ್ನು ತಿಳಿದರೆ ಸಾಲದು. ನಮ್ಮ ಅಂತರಂಗದಲ್ಲಿ ಭಗವಂತನನ್ನು ಕಾಣಬೇಕು. ನಮ್ಮ ಒಳಗೆ ಇರುವ ಭಗವದ್ರೂಪದಿಂದ ಮೋಕ್ಷ ಸಿದ್ಧಿಯೆಂಬುದನ್ನು ಅಜಾತಶತ್ರುವು ವಿವರಿಸಿ ಅಂತಹ ಭಗವದ್ ರೂಪದ ಉಪಾಸನೆಯನ್ನು ಉಪದೇಶಿಸುವನು.

ಯಾಜ್ಞವಲ್ಕ್ಯನ ಉಪದೇಶ

ಈ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯನು ನಡೆಸಿದ ಜ್ಞಾನ ಸಂವಾದದಲ್ಲಿ ಭಗವಂತನ ರೂಪಗಳು ಮತ್ತು ಅವನ ಮಹಿಮೆಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ವಿಸ್ತೃತವಾಗಿ ವರ್ಣಿಸಲಾಗಿದೆ. ಜನಕ ಮಹಾರಾಜನು ಏರ್ಪಡಿಸಿದ ಮಹಾಯಜ್ಞದಲ್ಲಿ ಬಹುಸಂಖ್ಯೆಯಿಂದ ಜ್ಞಾನಿಗಳು ಸೇರಿದ್ದರು. ಇವರಲ್ಲಿ ಯಾರು ಶ್ರೇಷ್ಠ ಜ್ಞಾನಿಯೆಂದು ಜನಕನಿಗೆ ಜಿಜ್ಞಾಸೆಯುಂಟಾಯಿತು. ಇಲ್ಲಿ ನೆರೆದ ಜ್ಞಾನಿಗಳಲ್ಲಿ ತಾನು ಶ್ರೇಷ್ಠ ಬ್ರಹ್ಮಜ್ಞಾನಿಯೆಂಬ ಆತ್ಮವಿಶ್ವಾಸವುಳ್ಳವನು ಇಲ್ಲಿ ಸೇರಿಸಿದ ಸಾವಿರ ಗೋವುಗಳನ್ನು ಸಾಗಿಸಿಕೊಂಡು ಹೋಗಲಿ ಎಂದು ಜನಕನು ಆಹ್ವಾನ ನೀಡಿದನು. ಯಾರೂ ಧೈರ್ಯದಿಂದ ಮುಂದೆ ಬಾರದಿದ್ದಾಗ ಯಾಜ್ಞವಲ್ಕ್ಯನು ಆ ಗೋವುಗಳನ್ನು ಸಾಗಿಸಲು ಉಪಕ್ರಮಿಸಿದನು. ಉಳಿದವರೆಲ್ಲರೂ ಇದನ್ನು ಪ್ರತಿಭಟಿಸಿ ತನ್ನನ್ನು ಬ್ರಹ್ಮಿಷ್ಠನೆಂದು ಸಿದ್ಧಪಡಿಸುವಂತೆ ಯಾಜ್ಞವಲ್ಕ್ಯನನ್ನು ಆಹ್ವಾನಿಸಿದರು. ''ನನ್ನನ್ನು ಬ್ರಹ್ಮಜ್ಞಾನಿಯೆಂದು ಅಹಂಕಾರದಿಂದ ನಾನು ಹೇಳಿಕೊಳ್ಳಲಾರೆ. ಯಾರು ಬ್ರಹ್ಮಜ್ಞಾನಿಗಳೋ ಅವರಿಗೆ ನನ್ನ ನಮಸ್ಕಾರಗಳು. ಗೋವುಗಳು ನನಗೆ ಬೇಕಾಗಿದ್ದರಿಂದ ಅವುಗಳನ್ನು ಕರೆದುಕೊಂಡು ಹೋಗಲು

ಪ್ರವರ್ತಿಸಿದೆ''ನೆಂದು ವಿನಯದಿಂದ ಉತ್ತರಿಸುತ್ತಾ ಅವರ ಜೊತೆಗೆ ಸಂವಾದವನ್ನು ಆರಂಭಿಸಿದನು. ಆಶ್ವಲ, ಉಷಸ್ತಿಚಾಕ್ರಾಯಣ, ಕಹೋಲ, ಉದ್ಧಾಲಕ ಆರುಣಿ, ಗಾರ್ಗಿ ಮುಂತಾದವರು ಪುಂಖಾನುಪುಂಖವಾಗಿ ತಾತ್ವಿಕ ಪ್ರಶ್ನೆಗಳನ್ನು ಮುಂದಿಟ್ಟಾಗ ಯಾಜ್ಞವಲ್ಕ್ಯನು ನಿರರ್ಗಳವಾಗಿ ಅವುಗಳಿಗೆ ಉತ್ತರಿಸಿದನು.

ಈ ಪ್ರಕರಣದಲ್ಲಿ ಭಗವಂತನ ಅಂತರ್ಯಾಮಿ ಸ್ವರೂಪದ ನಿರೂಪಣೆಯಿದೆ. ರಾಜನಾಗಲೀ, ಪ್ರಧಾನಿಯಾಗಲೀ, ಅಧಿಕಾರಿಗಳಿಗೆ ಹೊರಗಿನಿಂದಲೇ ಆದೇಶ ನೀಡಿ ಅವರಿಂದ ಕಾರ್ಯಗಳನ್ನು ನಡೆಸುತ್ತಾರೆ. ಆ ಅಧಿಕಾರಿಗಳ ಆಲೋಚನೆ, ಪ್ರವೃತ್ತಿ, ಚಲವನಲನಗಳ ಮೇಲೆ ರಾಜನಿಗಾಗಲೀ, ಪ್ರಧಾನಿಗಾಗಲೀ ಪೂರ್ಣ ಪ್ರಭುತ್ವವಿರುವುದಿಲ್ಲ. ಆದುದರಿಂದ ಅನೇಕ ವೇಳೆ ಈ ಆದೇಶಗಳು ವಿಫಲವಾಗುವ ಸಂಭವವೇ ಹೆಚ್ಚು. ಮಾತ್ರವಲ್ಲದೆ ಈ ಆಡಳಿತ ನಡೆಸುವವರು ಹೆಜ್ಜೆ ಹೆಜ್ಜೆಗೂ ಗಾಬರಿ, ಉದ್ವೇಗಗಳಿಗೆ ಒಳಗಾಗುತ್ತಾರೆ. ಅವರ ಕೈ ಮೀರಿದ ಅನೇಕ ಘಟನೆಗಳು ನಡೆದು ತುಂಬಾ ಸಂಭ್ರಾಂತರಾಗಿ ಶಾಂತಿ, ನೆಮ್ಮದಿಯನ್ನು ಕಳೆದುಕೊಳ್ಳುತ್ತಾರೆ. ಆದರೆ ಭಗವಂತನು ನಡೆಸುತ್ತಿರುವ ವಿಶ್ವದ ವ್ಯವಹಾರವು ಈ ರಾಜ್ಯದ ಆಡಳಿತದಂತೆ ಅಲ್ಲ. ಭಗವಂತನು ಎಲ್ಲಾ ವಸ್ತುಗಳಲ್ಲಿಯೂ, ಎಲ್ಲರ ಹೃದಯದಲ್ಲಿಯೂ ನಿಯಾಮಕನಾಗಿ ನೆಲೆಸಿದ್ದಾನೆ. ಪ್ರತಿಯೊಂದು ವ್ಯವಹಾರವೂ ಭಗವಂತನ ಇಚ್ಛೆಯಂತೆ ಅವನ ಪೂರ್ಣ ಹಿಡಿತದಲ್ಲಿ ನಡೆಯುತ್ತದೆ. ಅವನ ನಿಯಂತ್ರಣಕ್ಕೆ ಒಳಪಡದೆ ಯಾವ ಘಟನೆಯೂ ನಡೆಯುವುದಿಲ್ಲ. ಸರ್ವಜ್ಞನಾದ ಅವನ ಗಮನಕ್ಕೆ ಬಾರದೆ ಅವನ ಇಚ್ಛೆ ಮತ್ತು ನಿಯಂತ್ರಣವನ್ನು ಮೀರಿ ಯಾವುದೂ ನಡೆಯುವುದಿಲ್ಲ. ಆದುದರಿಂದ ಲೀಲಾಜಾಲವಾಗಿ ಯಾವ ಗೊಂದಲವೂ, ಶ್ರಮವೂ ಇಲ್ಲದೆ ಪ್ರಪಂಚದ ವ್ಯವಹಾರವನ್ನು ಪರಮಾತ್ಮನು ನಡೆಸುತ್ತಾನೆ. ಭೂಮಿ, ನೀರು, ಆಕಾಶ ಮುಂತಾದ ಎಲ್ಲ ವಸ್ತುಗಳೂ ಅವನಿಗೆ ಶರೀರದಂತೆ. ಜೀವಾತ್ಮನು ಶರೀರದಲ್ಲಿದ್ದು ಅದರ ಚಾಲನೆಯನ್ನು ಮಾಡುವಂತೆ ಭಗವಂತನೂ ಎಲ್ಲ ವಸ್ತುಗಳ ಒಳಗೆ ನಿಂತು ಅವುಗಳಿಂದ ವಿವಿಧ ಚಟುವಟಿಕೆಗಳನ್ನು ನಡೆಸುತ್ತಾನೆ. ಅಂತಹ ಅಂತರ್ಯಾಮಿಯೂ, ಅಮೃತರೂಪಿಯೂ ಆದ ಪರಬ್ರಹ್ಮನ ಮಹಿಮೆಯ ವಿಸ್ತಾರವನ್ನು ಇಲ್ಲಿ ನಿರೂಪಿಸಲಾಗಿದೆ. ಪರಮಾತ್ಮನು ಇಂತಹ ಅದ್ಭುತ ವ್ಯಾಪಾರ ಚಟುವಟಿಕೆಗಳನ್ನು ನಡೆಸುತ್ತಿದ್ದರೂ ನಮ್ಮಂತೆ ಅವನಿಗೆ ಭೌತಿಕ ಶರೀರವಿಲ್ಲ. ಭೌತಿಕ ದೇಹ, ಇಂದ್ರಿಯ, ಮನಸ್ಸುಗಳಲ್ಲದೆ ಜ್ಞಾನಾನಂದಮಯವಾದ ತನ್ನ ಅಪ್ರಾಕೃತ ದಿವ್ಯ ದೇಹದಿಂದಲೇ ತನ್ನ ಲೀಲಾ ವಿಹಾರವನ್ನು ಅವನು ನಡೆಸುತ್ತಾನೆ. ಭೌತಿಕ ಜಗತ್ತಿನಲ್ಲಿ ನಾವು ಮಾಡುವ ವ್ಯವಹಾರದ ಜೊತೆಗೆ ಅವನ ವ್ಯಾಪಾರವನ್ನು ತುಲನೆ ಮಾಡಬಾರದು. ಅವನದು ಪ್ರಾಕೃತ ದೇಹದ ಸಂಬಂಧವಿಲ್ಲದ ಅಲೌಕಿಕ ಕ್ರಿಯೆ. ಅವನ ವ್ಯಕ್ತಿತ್ವ ನಮ್ಮ ಬುದ್ಧಿ, ಇಂದ್ರಿಯಗಳಿಗೆ ನಿಲುಕಲಾರದು. ಇಂತಹ ಅದ್ಭುತ, ಅಪರಿಮೇಯ, ಅಲೌಕಿಕ ವ್ಯಕ್ತಿತ್ವದಿಂದ ಈ ಅಕ್ಷರ ಪುರುಷನ ಶಾಸನದಲ್ಲಿ ಸೂರ್ಯ, ಚಂದ್ರ ಮುಂತಾದ ಸಕಲ ವಿಶ್ವವೂ ನಿಂತಿದೆ.

ಯಾಜ್ಞವಲ್ಕ್ಯರು ಅಲ್ಲಿ ನೆರೆದ ಜ್ಞಾನಿಗಳು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿದರು. ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಕೇಳುವಂತೆ ಮತ್ತು ತಾನು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವಂತೆಯೂ ಎಲ್ಲರನ್ನೂ ಆಹ್ವಾನಿಸಿದರು. ಯಾಜ್ಞವಲ್ಕ್ಯರ ಅಪೂರ್ವ ದಿವ್ಯಜ್ಞಾನದ ಮುಂದೆ ಎಲ್ಲರೂ ಅಪ್ರತಿಭರಾಗಿ ಚರ್ಚೆಯನ್ನು ಮುಂದುವರಿಸಲು ಅಧೀರರಾದರು. ಅವರೆಲ್ಲ ನಿರುತ್ತರರಾದ ನಂತರ ಯಾಜ್ಞವಲ್ಕ್ಯರು ಮಹಾಪ್ರಲಯದ ನಂತರ ಪುನಃ ಜಗತ್ ಸೃಷ್ಟಿಯ ಬಗ್ಗೆ ತಾನೇ ಕೆಲವು ಪ್ರಶ್ನೆಗಳನ್ನು ಅವರಲ್ಲಿ ಮಾಡಿದರು. ಇದಕ್ಕೆ ಉತ್ತರವನ್ನು ಸಾಮಾನ್ಯವಾಗಿ ಆ ಋಷಿಗಳು ತಿಳಿದಿದ್ದರೂ, ಯಾಜ್ಞವಲ್ಕ್ಯನ ಪ್ರಶ್ನೆಗಳಿಗೆ ಭಗವಂತನ ವಿಷಯದಲ್ಲಿ ಎಲ್ಲಾ ವಿವರಗಳನ್ನೂ ತಿಳಿಸಲು ತಮ್ಮ ಅಸಮರ್ಥತೆಯನ್ನು ವ್ಯಕ್ತಪಡಿಸಿದರು. ಆಗ ಯಾಜ್ಞವಲ್ಕ್ಯರೇ ವಿಜ್ಞಾನ ಆನಂದಪೂರ್ಣನಾದ ಪರಮಾತ್ಮನೇ ಜಗತ್ತಿಗೆ ಸ್ವತಂತ್ರ ಮೂಲಕಾರಣನು ಹೇಗೆ? ಎಂಬುದನ್ನು

ವಿವರಿಸುತ್ತಾರೆ. ಅನಂತರ ಜನಕನನ್ನು ಸಂದರ್ಶಿಸಿ ಪರಮಾತ್ಮನ ಬಗ್ಗೆ ಅವನು ತಿಳಿದಿರುವ ವಿಷಯವನ್ನು ನಿರೂಪಿಸುವಂತೆ ಹೇಳುವರು. ತನಗೆ ಬೇರೆ ಬೇರೆ ಋಷಿಗಳು ತಿಳಿಸಿದ ಉಪಾಸನೆಯ ಪ್ರಕಾರಗಳನ್ನು ಅವನು ಅರುಹುವನು. ಯಾಜ್ಞವಲ್ಕ್ಯರು ಆ ಋಷಿಗಳನ್ನೂ ಜನಕನನ್ನೂ ಪ್ರಶಂಸಿಸಿದರೂ ಅವರಿಂದ ಪಡೆದ ಈ ಜ್ಞಾನದ ಅಪೂರ್ಣತೆಯನ್ನು ಮನಗಾಣಿಸಿ ಅವರು ಹೇಳದೇ ಉಳಿದ ಅಂಶಗಳನ್ನೂ ಜನಕನಿಗೆ ಬೋಧಿಸುತ್ತಾರೆ. ಯಾಜ್ಞವಲ್ಕ್ಯರು ಜನಕನ ಜೊತೆಗೆ ಸಂವಾದವನ್ನು ಮುಂದುವರಿಸುತ್ತಾ ಭಗವಂತನೇ ನಮ್ಮ ಎಲ್ಲಾ ವ್ಯವಹಾರಗಳಿಗೆ ಪ್ರವರ್ತಕನಾದ ಪರಮಜ್ಯೋತಿಯೆಂದು ತಿಳಿಸುತ್ತಾರೆ. ನಮ್ಮ ಎಲ್ಲಾ ದೈನಂದಿನ ವ್ಯವಹಾರಗಳಿಗೆ ಸೂರ್ಯನೇ ಬೆಳಕು. ಅವನಿಲ್ಲದಿದ್ದಾಗ ಚಂದ್ರನ ಬೆಳದಿಂಗಳಲ್ಲಿ ಕಾರ್ಯಗಳು ನಡೆಯುತ್ತವೆ. ಸೂರ್ಯಚಂದ್ರರು ಇಲ್ಲದಿರುವಾಗಲೂ ದೀಪದ ಬೆಳಕಿನಲ್ಲಿ ಪ್ರವರ್ತಿಸುತ್ತೇವೆ. ಈ ಯಾವ ಬೆಳಕು ಇಲ್ಲದಿದ್ದರೂ ಸ್ವಪ್ನ, ಸುಷುಪ್ತಿ, ಮುಕ್ತಿಗಳಲ್ಲಿ ನಮ್ಮ ಪ್ರವರ್ತಕನು ಭಗವಂತ. ಅವನೇ ಬೆಳಕಿಗೆ ಬೆಳಕೂ ಆಗಿರುವನು. ಅವನ ಧ್ಯಾನ, ಸಾಕ್ಷಾತ್ಕಾರ ಅನುಗ್ರಹಗಳಿಂದಲೇ ಅನಾದಿ ಬಂಧನದಿಂದ ಬಿಡುಗಡೆ ಹೊಂದಿ ಪರಮಾನಂದವನ್ನು ನಾವು ಅನುಭವಿಸುತ್ತೇವೆ.

ಈ ಸಂದರ್ಭದಲ್ಲಿ ಉಪನಿಷತ್ತು ಭಗವಂತನಿಂದ ಎರಡನೆಯ ವಸ್ತು ಇಲ್ಲ. ಅವನು ಅದ್ವಿತೀಯನೆಂದು ಹೇಳಿದೆ-''ನ ತು ತದ್ ದ್ವಿತೀಯಮಸ್ತಿ'' ಬ್ರಹ್ಮನಿಂದ ವ್ಯತಿರಿಕ್ತವಾದ ಇನ್ನೊಂದು ವಸ್ತುವೇ ಇಲ್ಲವೆಂದು ಇದರ ಅರ್ಥವಲ್ಲ. ಪರಮಾತ್ಮನಿಗೆ ಸಮನಾದವನು ಇನ್ನೊಬ್ಬನು ಇಲ್ಲವೆಂದೇ ಅದರ ಆಶಯ. ಈ ಊರಿನಲ್ಲಿ ಈ ವ್ಯಕ್ತಿಗೆ ಎರಡನೆಯವನಿಲ್ಲ. ಇವನು ಅದ್ವಿತೀಯನು ಎಂದರೆ ಅವನಿಗೆ ಮನೆ, ಮಡದಿ, ಮಕ್ಕಳು ಮುಂತಾದ ಯಾವ ಪರಿವಾರವೂ ಇಲ್ಲವೆಂದು ಯಾರೂ ಅರ್ಥ ಮಾಡುವುದಿಲ್ಲ, ಈ ಊರಲ್ಲಿ ಅವನಿಗೆ ಸಮನಾದವನು ಯಾರೂ ಇಲ್ಲವೆಂದು ಎಲ್ಲರಿಗೂ ಹೊಳೆಯುತ್ತದೆ. ಪರಮಾತ್ಮನಿಗೆ ಎರಡನೆಯವನಿಲ್ಲವೆಂಬುದಕ್ಕೂ ಈ ರೀತಿಯಲ್ಲೇ ಅರ್ಥ ಮಾಡಬೇಕು. ಅಂತೂ ಪರಮಾತ್ಮನ ಅದ್ವಿತೀಯ, ಸಾರ್ವಭೌಮ ಸರ್ವಾಂತರ್ಯಾಮಿ, ಮಹಾಮಹಿಮೋಪೇತವಾದ ಸ್ವರೂಪವನ್ನು ಅನೇಕ ಉಪಾಖ್ಯಾನಗಳ ಮತ್ತು ಸಂವಾದಗಳ ಮೂಲಕವಾಗಿ ಈ ಉಪನಿಷತ್ತು ಪ್ರತಿಪಾದಿಸುತ್ತದೆ.

(ಶ್ರೀ ಸರ್ವಮೂಲ ಗ್ರಂಥಗಳು, ಸಂಪುಟ — ೪, ಬೃಹದಾರಣ್ಯಕೋಪನಿಷತ್, ಸಂ — ಹಯವದನ ಪುರಾಣಿಕ, ೧೯೯೧, ಪ್ರ : ಅಖಿಲ ಭಾರತ ಮಾಧ್ವ ಮಹಾಮಂಡಲ, ಆನಂದತೀರ್ಥ ಪ್ರತಿಷ್ಠಾನ, ಬೆಂಗಳೂರು.)

●

೩ -೧೧

ಶ್ರೀಮಧ್ವರಾಮಾಯಣ

ಅದ್ಭುತ ಸಂಶೋಧನೆ

ಹಿಂದೆ ದೇವತೆಗಳು ಮಂದರಪರ್ವತವನ್ನೇ ಕಡಗೋಲಾಗಿ ಬಳಸಿ ಅದರಿಂದ ಸಮುದ್ರವನ್ನು ಕಡೆದು ಅಮೃತವನ್ನು ಪಡೆದಿದ್ದರು. ಅದರಂತೆ ಶ್ರೀ ಮಧ್ವಾಚಾರ್ಯರೂ ಇತಿಹಾಸ ಪುರಾಣಗಳೆಂಬ ಅಗಾಧವೂ ವಿಶಾಲವೂ ಆದ ಸಾಗರವನ್ನು ತಮ್ಮ ಮಹೋನ್ನತವಾದ ಬುದ್ಧಿಯ ಬೆಟ್ಟದಿಂದ ಮಥಿಸಿ ಪಡೆದ ಅಮೃತವೇ 'ಶ್ರೀಮಹಾಭಾರತ ತಾತ್ಪರ್ಯ ನಿರ್ಣಯ'

ಇತಿಹಾಸಪುರಾಣಾಬ್ಧೇಃ ಭವಚ್ಚಿತ್ತಾದ್ರಿ ಲೋಡಿತಾತ್ ।
ಜಾತಾಂ ಭಾರತತಾತ್ಪರ್ಯಸುಧಾಂ .... ॥

ಇದು ಶ್ರೀಮಧ್ವಾಚಾರ್ಯರ ಮಹಾಭಾರತತಾತ್ಪರ್ಯನಿರ್ಣಯ ಕೃತಿಯ ಬಗ್ಗೆ ತ್ರಿವಿಕ್ರಮ ಪಂಡಿತಾಚಾರ್ಯರು ಮಾಡಿದ ಉದ್ಗಾರವೆಂದು ಸುಮಧ್ವವಿಜಯದ ಉಲ್ಲೇಖವಾಗಿದೆ.

ಅತ್ಯಂತ ಕ್ಲಿಷ್ಟವೂ ಬಹುಗಂಭೀರವೂ ಆದ ವೇದರಾಶಿಯ ಆಶಯವನ್ನು ತಿಳಿದು ಅದರ ಅರ್ಥವನ್ನು ಗ್ರಹಿಸಲು ಇತಿಹಾಸ- ಪುರಾಣಗಳೇ ನಮಗೆ ಆಧಾರ. ಅದರ ಹಿನ್ನೆಲೆಯಿಂದಲೇ ವೇದವನ್ನು ಅರ್ಥೈಸಬೇಕಾಗಿದೆ :

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್॥

ಆದರೆ ಇತಿಹಾಸ ಪುರಾಣಗಳಲ್ಲಿಯೇ ಗೊಂದಲವುಂಟಾದರೆ ಅದನ್ನು ಆಧರಿಸಿ ವೇದದ ಅರ್ಥವನ್ನು ನಾವು ತಿಳಿಯುವುದು ಹೇಗೆ ? ಇತಿಹಾಸ ಪುರಾಣಗಳನ್ನು ನಾವು ಮೇಲುನೋಟದಿಂದ ಕಾಣುವಾಗ ಬಹಳ ಗೊಂದಲಗಳು ಉಂಟಾಗುತ್ತವೆ. ಇವುಗಳಲ್ಲಿ ಪರಸ್ಪರ ವಿರುದ್ಧವಾದ ಸಂಗತಿಗಳು ತುಂಬಾ ಕಾಣುತ್ತವೆ. ಅನೇಕ ವಿಷಯಗಳು ತುಂಬಾ ಅಸಂಬದ್ಧವೆಂದೂ ನಮಗೆ ತೋರಬಹುದು. ಭಗವಂತನ ಮತ್ತು ಅವನ ಭಕ್ತರಾದ ಮಹಾಪುರುಷರ ಅನೇಕ ವ್ಯವಹಾರಗಳು ಲೋಕದ ಉತ್ತಮ ಆದರ್ಶಗಳಿಗೆ ವ್ಯತಿರಿಕ್ತವೆಂದು ನಮಗೆ ಭಾಸವಾಗಿ ಅವರ ಬಗ್ಗೆ ನಮಗೆ ಇರಬೇಕಾದ ಭಕ್ತಿ ಗೌರವಗಳಿಗೆ ಭಂಗವುಂಟಾಗುವ ಸಂದರ್ಭವಿದೆ. ಪರಸ್ಪರ ವಿರುದ್ಧವಾದ ವಿಷಯಗಳನ್ನು ಪ್ರತಿಪಾದಿಸುವ ಪುರಾಣ ಇತಿಹಾಸಗಳ ಬಗ್ಗೆ ನಮ್ಮ ವಿಶ್ವಾಸವೇ ಹಾರಿ ಹೋಗುವ ಸಾಧ್ಯತೆಯೂ ಇದೆ. ಪುರಾಣ ಗ್ರಂಥಗಳನ್ನು ಬರೆದ ವೇದವ್ಯಾಸರು

ಈ ಗೊಂದಲಗಳಿಗೆ ಅವಕಾಶವಾಗಬಾರದೆಂದು ಪುರಾಣಗಳ ಅರ್ಥವನ್ನು ತಿಳಿಯಲು ಅನುಕೂಲವಾಗುವ ಲಕ್ಷಣ ಗ್ರಂಥವನ್ನು ಬರೆದಿರುವರು. ಆದರೆ ನಮ್ಮ ದುರದೃಷ್ಟದಿಂದ ಈ ಲಕ್ಷಣ ಗ್ರಂಥವೂ ಲುಪ್ತವಾಗಿ ಪುರಾಣಗಳ ದಾರಿಯನ್ನು ತೋರುವ ಮಾರ್ಗದರ್ಶಿಯೇ ನಮಗೆ ಇಲ್ಲದಂತಾಗಿತ್ತು.

ಇಷ್ಟೇ ಸಾಲದೆಂಬಂತೆ ಕೆಲವರು ಬೇರೆ ಬೇರೆ ಕಾಲಗಳಲ್ಲಿ ತಮಗೆ ಬೇಕಾದಂತೆ ಪುರಾಣಗಳಲ್ಲಿ ಶಬ್ದಗಳನ್ನೂ ವಾಕ್ಯಗಳನ್ನೂ ಸೇರಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡರು. ತಮಗೆ ಬೇಡವಾದ ಭಾಗವನ್ನು ತೆಗೆದುಹಾಕುವ, ಸ್ಥಾನಾಂತರಗೊಳಿಸುವ ವ್ಯವಹಾರಗಳೂ ತುಂಬಾ ನಡೆದಿವೆ. ಪುರಾಣದ ನಿಜವಾದ ಭಾಗ ಯಾವುದು ? ಸೇರಿಸಿದ ಭಾಗ ಯಾವುದು ? ಕಳೆದುಹೋದ ಭಾಗ ಯಾವುದು? ಎಂಬುದನ್ನು ತಿಳಿಯುವುದೇ ದುಸ್ತರವಾಗಿದೆ. ಶ್ರೀಮಧ್ವಾಚಾರ್ಯರ ಕಾಲದಲ್ಲಿಯೇ ಈ ಪ್ರಕ್ಷೇಪದ ಹಾವಳಿ ಮಿತಿಮೀರಿತ್ತು. 'ಇಂದು ಗ್ರಂಥಗಳ ಕೋಟ್ಯಂಶವೂ ದೊರಕುವುದು ಕಷ್ಟ'ವೆಂದು ಅವರೇ ಉಲ್ಲೇಖಿಸಿದ್ದಾರೆ. ಆಚಾರ್ಯರ ಕಾಲದ ನಂತರವೂ ಬೇರೆ ಬೇರೆ ಕಾಲದ ಜನರೂ ಈ ಪ್ರಕ್ಷೇಪದ ವ್ಯವಹಾರಕ್ಕೆ ತಮ್ಮ ತಮ್ಮ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಈ ಎಲ್ಲಾ ಗೊಂದಲಗಳಲ್ಲಿ ನಿಜವಾದ ಮಹಾಭಾರತ ಮತ್ತು ಪುರಾಣಗಳನ್ನು ಗುರುತಿಸಿ ಅದರ ಸರಿಯಾದ ಅರ್ಥವನ್ನು ಅರಿತುಕೊಳ್ಳುವುದು ಎಷ್ಟು ಕಠಿಣವೆಂಬುದನ್ನು ನಾವು ಊಹಿಸಿಕೊಳ್ಳಬಹುದು. ಪ್ರಕ್ಷೇಪ ಮುಂತಾದ ಅವಾಂತರದಿಂದ ನಿಜವಾದ ಗ್ರಂಥವನ್ನು ಗೊತ್ತು ಮಾಡುವುದು ಕಷ್ಟವಾದರೆ, ಮಾರ್ಗದರ್ಶಿಯಾದ ಲಕ್ಷಣಗ್ರಂಥವು ಇಲ್ಲದಿರುವುದರಿಂದ, ಆ ಗ್ರಂಥಗಳ ನಿಜವಾದ ಅರ್ಥವನ್ನೂ ನಾವು ಅರಿಯಲು ಸಾಧ್ಯವಿರಲಿಲ್ಲ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸ್ವತಃ ವೇದವ್ಯಾಸರು ಶ್ರೀಮಧ್ವಾಚಾರ್ಯರಿಗೆ ಇತಿಹಾಸ-ಪುರಾಣಗಳ ನಿಜಾರ್ಥವನ್ನು ಅರುಹುವ ಗ್ರಂಥವನ್ನು ರಚಿಸಲು ನಿರ್ದೇಶಿಸಿದರು. ಈ ಆದೇಶದಂತೆ ರಚಿಸಿದ ಗ್ರಂಥವೇ ಮಹಾಭಾರತತಾತ್ಪರ್ಯ ನಿರ್ಣಯ.

ಶ್ರೀಮಧ್ವಾಚಾರ್ಯರು ದೇಶದ ಮೂಲೆ ಮೂಲೆಗಳಲ್ಲಿರುವ ಪುರಾಣ ಗ್ರಂಥಗಳ ಎಲ್ಲಾ ಪ್ರತಿಗಳನ್ನು ನೋಡಿ ಪರಿಶೀಲಿಸಿ ಶ್ರೀವೇದವ್ಯಾಸದೇವರು ರಚಿಸಿದ ಮೂಲಗ್ರಂಥಕ್ಕೆ ಅನುಗುಣವಾದ ಪದಪುಂಜಗಳು ಯಾವುದು ಎಂಬುದನ್ನು ಸಂಶೋಧನೆ ಮಾಡಿ ಅಧಿಕೃತವಾದ ಮಹಾಭಾರತಕ್ಕೆ ಅನುಗುಣವಾಗಿ ಈ ಗ್ರಂಥವನ್ನು ರಚಿಸಿದ್ದಾರೆ.

ಆದುದರಿಂದ ಇದನ್ನು ನಮ್ಮ ನಾಡಿನ ಇತಿಹಾಸದಲ್ಲಿಯೇ ಪ್ರಪ್ರಥಮವಾಗಿ ರಚಿತವಾದ ಅಪೂರ್ವ ಸಂಶೋಧನ ಗ್ರಂಥವೆನ್ನಬಹುದು. ಶ್ರೀಮಧ್ವಾಚಾರ್ಯರು ನಿಜವಾದ ಮಹಾಭಾರತವನ್ನು ನಮಗೆ ಗುರುತಿಸಿಕೊಡುವುದರ ಜೊತೆಗೆ ಪುರಾಣಗಳ ನಿಜಾರ್ಥವನ್ನೂ ಸ್ಪಷ್ಟ ಮಾತುಗಳಿಂದ ತಿಳಿಸಿಕೊಟ್ಟಿದ್ದಾರೆ. ಪುರಾಣಗಳಲ್ಲಿ ಹಿಂದಿನ ಘಟನೆಗಳನ್ನು ಎಲ್ಲಾ ಜನರಿಗೆ ಪ್ರತ್ಯಕ್ಷವಾಗಿ ಕಂಡ ರೀತಿಯಲ್ಲಿ ವರ್ಣಿಸಲಾಗುತ್ತದೆ. ಕಣ್ಣಿಗೆ ಕಾಣುವ ದೃಶ್ಯದ ಶಬ್ದಚಿತ್ರವನ್ನು ಮಾತ್ರ ಪುರಾಣಗಳಲ್ಲಿ ನಾವು ಕಾಣಬಲ್ಲೆವು. ಅವುಗಳ ಹಿನ್ನೆಲೆಯನ್ನಾಗಲೀ ಅವುಗಳಿಂದ ಉಂಟಾಗಬಹುದಾದ ಸಂಶಯ, ಅಪಾರ್ಥಗಳ ನಿವಾರಣೆಯನ್ನಾಗಲೀ ಭಾರತ ಮತ್ತು ಪುರಾಣಗಳಿಂದ ಪೂರ್ಣವಾಗಿ, ಸ್ಪಷ್ಟವಾಗಿ ಪಡೆಯಲು ಸಾಧ್ಯವಿಲ್ಲ; ಪುರಾಣಗಳಲ್ಲಿ ಅನೇಕ ಕಡೆಗಳಲ್ಲಿ ಬೇರೆ ಬೇರೆ ದಾರ್ಶನಿಕ ಪರಿಭಾಷೆಯ ಅನುವಾದಗಳೂ ಇವೆ. ಇವೆಲ್ಲವುಗಳನ್ನೂ ವೇದವ್ಯಾಸರ ಅಭಿಪ್ರಾಯವೆಂದು ನಾವು ಭಾವಿಸಬಾರದು. ಎಷ್ಟೋ ಕಡೆ ಈ ಗ್ರಂಥಗಳಲ್ಲಿ ಅಡಗಿದ ಗೂಢಾರ್ಥಗಳನ್ನು ಅರಿಯುವುದೂ ನಮಗೆ ಕಠಿಣವಾಗುತ್ತದೆ. ದಾರ್ಶನಿಕ ಭಾಷೆಯಲ್ಲಿ ಹೇಳಿದ ವಿಷಯಗಳನ್ನು ಪ್ರತ್ಯೇಕಿಸಿ ಗೂಢಾರ್ಥಗಳನ್ನು ಸ್ಪಷ್ಟೀಕರಿಸಿ ಜೊತೆಗೆ ಪೌರಾಣಿಕ ಘಟನೆ ಮತ್ತು ಸಂಭಾಷಣೆಗಳಿಂದ ನಮ್ಮಲ್ಲಿ ಮೂಡಬಹುದಾದ ಸಂಶಯ ಅಪಾರ್ಥಗಳ ನಿವಾರಣೆಯನ್ನು ಶ್ರೀಮಧ್ವಾಚಾರ್ಯರು ಈ ಗ್ರಂಥದಲ್ಲಿ ಬಹಳ ಚೆನ್ನಾಗಿ ವಿಷದವಾಗಿ ಮಾಡಿರುವರು. ಸರ್ವಜ್ಞನೂ,

ಸರ್ವಶಕ್ತನೂ, ನಿರ್ದೋಷನೂ, ಆದ ಭಗವಂತನು ರಾಮ, ಕೃಷ್ಣ ಮುಂತಾದ ಅವತಾರಗಳಲ್ಲಿ ತೋರಿದ ಅಜ್ಞಾನ, ಅಶಕ್ತಿ, ದುಃಖ, ದೌರ್ಬಲ್ಯಗಳ ನಿಜವಾದ ಅರ್ಥ ಮತ್ತು ಹಿನ್ನೆಲೆಯ ಪರಿಚಯವನ್ನು ಈ ಗ್ರಂಥವಲ್ಲದೇ ಬೇರೆ ಯಾವುದರಿಂದಲೂ ನಾವು ತಿಳಿಯಲಾರೆವು. ತಾತ್ಪರ್ಯನಿರ್ಣಯ ಗ್ರಂಥವನ್ನು ಸರಿಯಾಗಿ ಅಧ್ಯಯನ ಮಾಡಿದವರಿಗೆ ಸಿದ್ಧಾಂತದ ಪ್ರಮೇಯಗಳ ಬಗ್ಗೆಯಾಗಲೀ ಪೌರಾಣಿಕ ಘಟನೆಗಳ ಬಗ್ಗೆಯಾಗಲೀ ಯಾವುದೇ ಸಂಶಯ ಉಳಿಯಲಾರದು. ಭಾರತೀಯ ಸಂಸ್ಕೃತಿ ಮತ್ತು ತತ್ವಜ್ಞಾನದ ಅಧ್ಯಯನವನ್ನು ಮಾಡಬಯಸುವವರು ಈ ಗ್ರಂಥವನ್ನು ಅವಶ್ಯವಾಗಿ ಅಭ್ಯಸಿಸಲೇಬೇಕಾಗಿದೆ. ಮಾಧ್ವಮತಾನುಯಾಯಿಗಳಿಗಂತೂ ಈ ಗ್ರಂಥಾಧ್ಯಯನವು ಅತ್ಯವಶ್ಯವೂ ಅನಿವಾರ್ಯವೂ ಆಗಿದೆ.

ವಾಲಿಯನ್ನು ಮರೆಯಲ್ಲೇಕೆ ಕೊಂದ ?

ಈ ಮೊದಲನೇ ಸಂಪುಟದ ಒಂಭತ್ತು ಅಧ್ಯಾಯಗಳಲ್ಲಿ ಸಂಶೋಧನೆ ವಿವರಣೆಗಳೊಂದಿಗೆ ಪ್ರಧಾನವಾಗಿ ರಾಮಾಯಣದ ನಿರೂಪಣೆಯನ್ನು ಶ್ರೀಮಧ್ವಾಚಾರ್ಯರು ಮಾಡಿರುವರು. ಶ್ರೀರಾಮನ ಚರಿತ್ರೆ, ಅವನ ಆದರ್ಶಗಳ ಬಗ್ಗೆಯೂ ತುಂಬಾ ಗೊಂದಲ, ಟೀಕೆ, ಆಕ್ಷೇಪಗಳಿರುವುದನ್ನು ನಾವು ಕಾಣುತ್ತಿದ್ದೇವೆ. ತಾತ್ಪರ್ಯ ನಿರ್ಣಯದ ಹಿನ್ನೆಲೆಯಲ್ಲಿ ಇವುಗಳಿಗೆ ಸೂಕ್ತ ಸಮಾಧಾನವನ್ನು ಪಡೆಯಲು ನಮಗೆ ಸಾಧ್ಯವಾಗುವುದು. ಶ್ರೀರಾಮನ ಬಗ್ಗೆ ಇಂದು ಮಾಡಲಾಗುತ್ತಿರುವ ಆಕ್ಷೇಪಗಳಲ್ಲಿ ಪ್ರಧಾನವಾಗಿ ಮೂರನ್ನು ಪರಿಗಣಿಸಬಹುದು. ಒಂದು ವಾಲಿಯ ವಧೆ, ಎರಡನೆಯದು ಸೀತಾ ಪರಿತ್ಯಾಗ, ಮೂರನೆಯದು ಶ್ರೀರಾಮನಿಂದ ಶೂದ್ರತಪಸ್ವಿಯ ಹತ್ಯೆ.

ಆಚಾರ್ಯರ ಈ ಗ್ರಂಥದ ಬೆಳಕಿನಲ್ಲಿ ಈ ಮೂರು ವಿಷಯಗಳನ್ನು ಪರಿಶೀಲಿಸೋಣ.

ಶ್ರೀರಾಮ ವಾಲಿಯನ್ನು ನೇರವಾಗಿ ಎದುರಿಸದೇ ಮರದ ಮರೆಯಲ್ಲಿ ನಿಂತು ಬಾಣವನ್ನು ಪ್ರಯೋಗಿಸಿ ವಧಿಸಿದ್ದು ಸರಿಯೇ ? ಎನ್ನುವ ಪ್ರಶ್ನೆಗೆ ಸ್ಪಷ್ಟವಾಗಿ ಕಾಣುವ ನೈತಿಕ ಕಾರಣವನ್ನು ವಾಲ್ಮೀಕಿರಾಮಾಯಣದಲ್ಲಿ ವಿವರಿಸಲಾಗಿದೆ. ಪರಸ್ತ್ರೀಯನ್ನು ಬಲಾತ್ಕಾರವಾಗಿ ಅಪಹರಿಸಿದ ರಾವಣನ ವಿರುದ್ಧವಾಗಿ ಹೋರಾಟವನ್ನು ಆರಂಭಿಸಿದ ಶ್ರೀರಾಮನು ಸುಗ್ರೀವನು ಜೀವಂತನಿರುವಾಗಲೇ ಅವನ ಪತ್ನಿಯ ಮೇಲೆ ಬಲಾತ್ಕಾರದ ಅತ್ಯಾಚಾರವನ್ನು ಎಸಗಿ ರಾವಣನಂತೆಯೇ ವರ್ತಿಸಿದ ವಾಲಿಯನ್ನು ನಿಗ್ರಹಿಸುವುದರಲ್ಲಿ ತಪ್ಪೇನಿದೆ ? ಶಕ್ತಿ ಪರೀಕ್ಷೆಗಾಗಿ ನಡೆಸುವ ಯುದ್ಧದಲ್ಲಿ ಕ್ರಿಕೆಟ್ ಮುಂತಾದ ಆಟಗಳ ನಿಯಮಗಳಂತೆ, ಯುದ್ಧದ ನಿಯಮಗಳನ್ನೂ ಚಾಚೂ ತಪ್ಪದೆ ಅನುಸರಿಸಬೇಕು. ಆದರೆ ದುಷ್ಟರನ್ನು ಅಧಾರ್ಮಿಕರನ್ನು ಶಿಕ್ಷಿಸುವಾಗ ಈ ನಿಯಮಗಳನ್ನು ಅನುಸರಿಸುವ ಅವಶ್ಯಕತೆಯಿಲ್ಲ. ಕಳ್ಳರು, ದರೋಡೆಗಾರರು ಮತ್ತು ಭಯೋತ್ಪಾದಕರನ್ನು ಹಿಡಿಯಲು ಯಾವುದೇ ತಂತ್ರಗಳನ್ನು ಅನುಸರಿಸಿದರೂ ತಪ್ಪೆನಿಸುವುದಿಲ್ಲವಷ್ಟೆ. ಆದುದರಿಂದ ಅತ್ಯಾಚಾರಿಯಾದ ವಾಲಿಯನ್ನು ಮರೆಯಲ್ಲಿ ನಿಂತು ಕೊಂದುದರಲ್ಲಿ ಯಾವುದೇ ನೈತಿಕ ಅಪರಾಧವಿಲ್ಲ. ಈ ಸಮರ್ಥನೆಯನ್ನು ವಾಲ್ಮೀಕಿ ರಾಮಾಯಣದಿಂದ ನಾವು ತಿಳಿದುಕೊಳ್ಳಬಹುದು.

ಆದರೆ ಶ್ರೀರಾಮನು ನೇರವಾಗಿ ವಾಲಿಯನ್ನು ಎದುರಿಸಿ ಕೊಂದಿದ್ದರೆ ಅವನ ಕೀರ್ತಿಯು ಇನ್ನೂ ಹೆಚ್ಚುತ್ತಿರಲಿಲ್ಲವೇ ? ಅವನ ಜೊತೆಗೆ ಪ್ರತ್ಯಕ್ಷ ಹೋರಾಟ ಮಾಡುವ ಸಾಮರ್ಥ್ಯವಿಲ್ಲದಿರುವುದರಿಂದ ರಾಮನು ಈ ತಂತ್ರ ನೀತಿಯನ್ನು ಅನುಸರಿಸಿದನೆಂದು ಭಾವಿಸಲು ಅವಕಾಶ ವಾಗುವುದಿಲ್ಲವೆ ? ವಾಲಿಯನ್ನು ಎದುರಿಗೇ ಕೊಲ್ಲಲು ಸಾಧ್ಯವಿರುವಾಗ ಈ ಮಾರ್ಗವನ್ನು ಯಾಕೆ ಅನುಸರಿಸಿದನೆಂಬ ಪ್ರಶ್ನೆ ಉಳಿಯುತ್ತದೆ. ಶ್ರೀಮಧ್ವಾಚಾರ್ಯರು ತಮ್ಮ 'ನಿರ್ಣಯ' ದಲ್ಲಿ ಈ ಪ್ರಶ್ನೆಯನ್ನು ಪರಿಹರಿಸಿದ್ದಾರೆ – "ವಾಲಿಯು ರಾವಣನಂತೆ ಒಂದು ರೀತಿಯ ಅತ್ಯಾಚಾರವನ್ನು ಮಾಡಿದ್ದರೂ ಅಂತಹ ದುಷ್ಟತನವು

ಅವನಲ್ಲಿ ಇರಲಿಲ್ಲ. ಶ್ರೀರಾಮನು ಪ್ರತ್ಯಕ್ಷವಾಗಿ ಯುದ್ಧಕ್ಕೆ ಕರೆದಿದ್ದರೆ ಭಕ್ತಶ್ರೇಷ್ಠನಾದ ವಾಲಿಯು ಕೂಡಲೇ ಶರಣಾಗತನಾಗುತ್ತಿದ್ದನು. ಶ್ರೀರಾಮನು ತನ್ನ ಎದುರಿಗೇ ಹೋರಾಟಕ್ಕೆ ನಿಂತಿದ್ದರೂ ರಾವಣನು ಅವನನ್ನು ಗುರುತಿಸಿ ಗೌರವವನ್ನು ಸಲ್ಲಿಸಲಿಲ್ಲ. ದೈತ್ಯಶಕ್ತಿಯ ಒತ್ತಡದಿಂದ ರಾವಣನಲ್ಲಿ ತುಂಬಿದ್ದ ಈ ದೌಷ್ಟ್ಯವು ವಾಲಿಯಲ್ಲಿ ಇರಲಿಲ್ಲ. ಶರಣಾಗತನಾದ ವಾಲಿಯನ್ನು ಕೊಲ್ಲುವುದಂತೂ ಧರ್ಮ ಮೂರ್ತಿಯೆನಿಸಿದ ಭಕ್ತರಕ್ಷಕನಾದ ರಾಮನಿಗೆ ಸಾಧ್ಯವಿರಲಿಲ್ಲ. ಮುಂದಿನ ರಾಮಾಯಣದ ಕಥಾನಕದ ದೃಷ್ಟಿಯಿಂದ ವಾಲಿಯನ್ನು ಕೊಂದು ಸುಗ್ರೀವನಿಗೆ ರಾಜ್ಯವನ್ನು ನೀಡುವುದು ಅನಿವಾರ್ಯವಾಗಿತ್ತು. ವಾಲಿಯು ಶರಣಾಗತನಾಗಿ ರಾಮನ ಕಾರ್ಯದಲ್ಲಿ ಸಹಭಾಗಿ ಯಾದಲ್ಲಿ ಅವನ ಪರಮಮಿತ್ರನಾದ ರಾವಣನೂ ರಾಮನನ್ನು ಎದುರಿಸುವ ಧೈರ್ಯವನ್ನು ಮಾಡದೆ ವಾಲಿಯ ಮಾತಿನಂತೆ ನಡೆಯುತ್ತಿದ್ದ. ಹೀಗಾಗಿ ತನ್ನ ಅವತಾರದ ಮುಖ್ಯ ಕಾರ್ಯವಾದ ಮಹಾನ್ ಅನ್ಯಾಯಕಾರಿ ರಾವಣನ ವಧೆಯೂ ಸ್ಥಗಿತವಾಗುತ್ತಿತ್ತು. ರಾವಣನಂತಹ ಅತ್ಯಾಚಾರಿಯ ಜೊತೆಗೆ ಹೋರಾಟವನ್ನು ಆರಂಭಿಸಿರುವ ಶ್ರೀರಾಮನು ಅದೇ ರೀತಿಯ ಅತ್ಯಾಚಾರವನ್ನು ಮಾಡಿರುವ ವಾಲಿಯ ಜೊತೆಗೆ ಅಪವಿತ್ರ ಮೈತ್ರಿಯನ್ನು ಮಾಡುವುದು ಉತ್ತಮ ನೈತಿಕ ಆದರ್ಶಕ್ಕೆ ವಿರುದ್ಧವಾಗುವುದಿಲ್ಲವೆ ? ಇದೆಲ್ಲ ಮುಜುಗರವನ್ನು ಗಮನಿಸಿ ಶ್ರೀರಾಮನು ತನ್ನ ಅವತಾರ ಕಾರ್ಯವು ಸುಲಲಿತವಾಗಿ ನಡೆಯಲು ಅನುಕೂಲವಾಗುವಂತೆ ಸಾಮಾಜಿಕ, ನೈತಿಕ ಹಿನ್ನೆಲೆಯಲ್ಲಿ ಅಪರಾಧಿಯೂ ಭಕ್ತನೂ ಆದ ವಾಲಿಯನ್ನು ಮರೆಯಲ್ಲಿ ನಿಂತು ಸಂಹರಿಸಿದನು'' ಎಂಬುದಾಗಿ ವಾಲಿವಧೆಯ ಹಿಂದಿರುವ ಅಂತರಂಗ ರಹಸ್ಯವನ್ನು ಸ್ಪಷ್ಟಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಇನ್ನೂ ಒಂದು ಮಹತ್ವದ ಘಟನೆಯನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಶ್ರೀರಾಮನ ಬಾಣದಿಂದ ಕುಸಿದು ಬಿದ್ದು ಧರಾಶಾಯಿಯಾದ ವಾಲಿಯು ಅವನ ಜೊತೆಗೆ ದೀರ್ಘವಾದ ಚರ್ಚೆಯನ್ನು ನಡೆಸುವನು. ರಾಮನ ಉದ್ಬೋಧಕ ಮಾತುಗಳಿಂದ ವಾಲಿಗೆ ತನ್ನ ತಪ್ಪಿನ ಅರಿವಾಗಿ ಅವನಲ್ಲಿ ಪಶ್ಚಾತ್ತಾಪದ ಭಾವವು ಮೂಡುತ್ತದೆ. ಶಾಂತಿ ಸಮಾಧಾನಗಳಿಂದ ಮರಣವನ್ನು ಸ್ವಾಗತಿಸಲು ಆತನು ಸಿದ್ಧನಾಗುವನು. ಆಗ ರಾಮನು ಕರುಣೆ ತುಂಬಿದ ನುಡಿಗಳಿಂದ, ''ನೀನು ಅಪೇಕ್ಷಿಸಿದರೆ ನನ್ನ ಬಾಣವನ್ನು ಹಿಂತೆಗೆದುಕೊಂಡು ಪುನಃ ನಿನ್ನನ್ನು ಬದುಕಿಸುವೆನು'' ಎನ್ನುವನು. ಆದರೆ ತನ್ನ ತಪ್ಪಿನ ಪ್ರಾಯಶ್ಚಿತ್ತವಾಗಿ ಶ್ರೀರಾಮನ ಸನ್ನಿಧಾನದಲ್ಲಿಯೇ ದಿವ್ಯ ಮರಣವನ್ನು ಬಯಸಿದ ವಾಲಿಯು ರಾಮನು ಜೀವನವನ್ನು ನೀಡಲು ಮುಂದೆ ಬಂದರೂ ಅದನ್ನು ಸ್ವೀಕರಿಸಲಿಲ್ಲ. ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸದ ಈ ಘಟನೆಯನ್ನು ಶ್ರೀ ಮಧ್ವಾಚಾರ್ಯರು ಉದಾಹರಿಸಿ ರಾಮನ ಕರುಣಾಶೀಲ, ಉದಾರ ವ್ಯಕ್ತಿತ್ವದ ಪರಿಚಯವನ್ನು ಮಾಡಿಸಿದ್ದಾರೆ. ವಾಲಿವಧೆಯ ಬಗ್ಗೆ ಆಕ್ಷೇಪಿಸುವವರು ರಾಮನ ಈ ಉದಾರ ಕೊಡುಗೆಯನ್ನೂ ಗಮನಿಸಬೇಕು.

ಸೀತಾಪರಿತ್ಯಾಗ ಸಮುಚಿತವೆ ?

ಸೀತಾಪರಿತ್ಯಾಗದ ಹಿನ್ನೆಲೆಯನ್ನೂ ವಾಲ್ಮೀಕಿ ರಾಮಾಯಣದಲ್ಲಿ ವಿವರಿಸಲಾಗಿದೆ. ಕೇವಲ ಒಬ್ಬ ಅಗಸನ ಮಾತಿಗಾಗಿ ರಾಮನು ಸೀತೆಯನ್ನು ಕಾಡಿಗೆ ಕಳುಹಿಸಿದ್ದಲ್ಲ. ರಾವಣನು ಅಪಹರಿಸಿದ ಸೀತಾಮಾತೆಯನ್ನು ಸ್ವೀಕರಿಸಿದ ಬಗ್ಗೆ ಊರು ಊರುಗಳಲ್ಲಿ, ಕೇರಿ ಕೇರಿಗಳಲ್ಲಿ, ಮನೆ ಮನೆಗಳಲ್ಲಿ ಜನರು ಆಡಿಕೊಳ್ಳುತ್ತಿದ್ದರು. ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಹಬ್ಬಿರುವ ಈ ಅಪಪ್ರಚಾರದ ಸಂಗತಿಯನ್ನು ದೂತರು ರಾಮನಲ್ಲಿ ನಿವೇದಿಸುತ್ತಾರೆ. ಆಗ ಸಭೆಯಲ್ಲಿ ಇದ್ದ ಜನರಲ್ಲಿ 'ಇದು ನಿಜವೇ ?' ಎಂದು ರಾಮನು ಪ್ರಶ್ನಿಸುತ್ತಾನೆ. ಸಭಿಕರೆಲ್ಲರೂ ತಲೆ ತಗ್ಗಿಸಿ ಇದು ನಿಜವೆಂದು ಒಪ್ಪುತ್ತಾರೆ. ಹೀಗೆ ರಾಜ್ಯದ ಪ್ರಜೆಗಳೆಲ್ಲರೂ ಒಕ್ಕೊರಲಿನಿಂದ ಸೀತೆಯು ರಾಣಿಯಾಗಿರುವುದನ್ನು ಆಕ್ಷೇಪಿಸಿದಾಗ ಜನತೆಗಾಗಿ

ಯಾವುದೇ ಸ್ವಾರ್ಥವನ್ನು ತ್ಯಾಗ ಮಾಡಲು ರಾಜನು ಸಿದ್ಧನಾಗಬೇಕೆಂಬ ಉತ್ತಮ ನೈತಿಕ ಆದರ್ಶವನ್ನು ತೋರಲು ಸೀತೆಯನ್ನು ಪರಿತ್ಯಜಿಸಿ ನಿತ್ಯಾವಿಯೋಗಿನಿಯಾದರೂ ಲೋಕದೃಷ್ಟಿಯಲ್ಲಿ ವಾಲ್ಮೀಕಿಯ ಆಶ್ರಮದಲ್ಲಿ ಅವಳು ವಾಸಿಸುವಂತೆ ವ್ಯವಸ್ಥೆ ಮಾಡುವನು. ಯಾರೋ ಒಬ್ಬ ಅನಾಮಧೇಯ ವ್ಯಕ್ತಿಯ ನಿಂದನೆಯ ಮಾತುಗಳಿಗಾಗಿ, ಜನತೆಯ ಇಚ್ಛೆಯನ್ನು ಕಡೆಗಣಿಸಿ ರಾಮನು ಸೀತೆಯನ್ನು ಪರಿತ್ಯಜಿಸಿದ್ದಲ್ಲ. ರಾಜನು ಜನಾಭಿಪ್ರಾಯವನ್ನು ಹೇಗೆ ಗೌರವಿಸಬೇಕು, ನೈತಿಕ ವಿಷಯದಲ್ಲಿ ಹೇಗೆ ಸಂಶಯಾತೀತನಾಗಿರಬೇಕು ಎಂಬುದನ್ನೂ ತನ್ನ ನಡತೆಯಿಂದ ಶ್ರೀರಾಮನು ತೋರಿದ್ದಾನೆಂಬುದಾಗಿ ವಾಲ್ಮೀಕಿ ರಾಮಾಯಣದಿಂದ ನಾವು ತಿಳಿದುಕೊಳ್ಳಬಹುದು.

ಆದರೆ ರಾಮನ ಭಕ್ತರಾದ ಅಯೋಧ್ಯೆಯ ಸಾತ್ವಿಕ ಜನರು ಇಂತಹ ಘೋರ ಅನ್ಯಾಯವನ್ನು ಏಕೆ ಮಾಡಿದರು? ರಾಮನ ವನವಾಸದ ಸಂದರ್ಭದಲ್ಲಿ ಊರಿಗೆ ಊರೇ ಕೈಕೇಯಿಯನ್ನು ಪ್ರತಿಭಟಿಸಿ, ರಾಮನನ್ನು ಅನುಸರಿಸಿ ಕಾಡಿಗೆ ಹೋಗಲು ಸಿದ್ಧರಾದ ಅಯೋಧ್ಯೆಯ ನಾಗರಿಕರು ಸೀತೆಯ ವಿಷಯದಲ್ಲಿ ಏನೂ ವಿಮರ್ಶೆ ಮಾಡದೆ ಇಂತಹ ಅಪಪ್ರಚಾರದ ಸತ್ರವನ್ನು ಏಕೆ ನಡೆಸಿದರು? ಸೀತೆಯ ಪರಿಶುದ್ಧ ಚಾರಿತ್ರ್ಯ, ಸದ್ಗುಣಗಳಿಂದ ಪ್ರಭಾವಿತರಾಗದಷ್ಟು ಕೆಟ್ಟತನವು ಸಾಕೇತ ರಾಜ್ಯದ ಜನರಲ್ಲಿ ಹೇಗೆ ಉಂಟಾಯಿತು? ಇದರ ಸಮಾಧಾನವನ್ನು ನಾವು ಯಾವ ಗ್ರಂಥದಲ್ಲಿಯೂ ಕಾಣಲಾರೆವು. ಆಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಈ ಬಗ್ಗೆಯೂ ಬೆಳಕು ಚೆಲ್ಲಿದ್ದಾರೆ – ಸುರಾಣಕರೆಂಬ ಅಸುರರ ಒಂದು ಗುಂಪು ರಾಮನ ಆಳ್ವಿಕೆಯ ಸಮಯದಲ್ಲಿ ಈ ನೆಲದಲ್ಲಿ ಹುಟ್ಟಿಕೊಂಡಿತ್ತು. ಅಜ್ಞಾನದ ಒತ್ತಡಕ್ಕೆ ಒಳಗಾದ ಈ ದುಷ್ಟಜನರು ಸೀತಾರಾಮರನ್ನು ಲಕ್ಷ್ಮೀನಾರಾಯಣರೆಂದು ತಿಳಿಯದೆ ಸೀತೆಯ ವಿರುದ್ಧವಾಗಿ ಚಾರಿತ್ರ್ಯಹನನದ ವ್ಯವಸ್ಥಿತ ಅಪಪ್ರಚಾರಸತ್ರವನ್ನು ಯೋಜಿಸಿ ಲೋಕದೃಷ್ಟಿಯಿಂದ ಸೀತಾರಾಮರನ್ನು ಬೇರ್ಪಡಿಸಲು ಕಾರಣರಾದರು. ಲಕ್ಷ್ಮೀನಾರಾಯಣರನ್ನು ಬೇರ್ಪಡಿಸುವುದರ ಹೊರತಾಗಿ ತಾವು ಮಾಡುವ ಬೇರೆ ಯಾವುದೇ ಅಕೃತ್ಯವೂ ಮುಕ್ತಿಗೆ ಅಡಚಣೆಯಾಗದಂತೆ ಬ್ರಹ್ಮದೇವರಿಂದ ವರವನ್ನು ಪಡೆದ ಈ ದುಷ್ಟರು ಏನು ಮಾಡಿದರೂ ತಾವು ಮುಕ್ತಿಯನ್ನು ದಕ್ಕಿಸಿಕೊಳ್ಳಬಲ್ಲೆವೆಂಬ ಧೈರ್ಯದಿಂದ ಸ್ವಚ್ಛಂದವಾಗಿ ಅಕೃತ್ಯದಲ್ಲಿ ನಿರತರಾಗಿದ್ದರು. ಶ್ರೀರಾಮನ ರಾಜ್ಯದಲ್ಲಿ ವಾಸಿಸುತ್ತಿದ್ದ ನಿಷ್ಪಾಪ ಪ್ರಜೆಗಳೂ ಇವರ ಈ ಅಪಪ್ರಚಾರದ ಕುತಂತ್ರಕ್ಕೆ ಬಲಿಯಾದರು. ಅಂತೂ ಈ ಅಸುರರ ಗುಂಪು ಇಡೀ ನಾಡಿನ ವಾತಾವರಣವನ್ನು ಕದಡಿಸಿ ಸಮಗ್ರ ಜನಸಮುದಾಯದ ಭಾವವು ಸೀತೆಯ ವಿರುದ್ಧವಾಗಿ ತಿರುಗುವಂತೆ ಮಾಡಿದ್ದರಿಂದ ಈ ದುರಂತವು ಸಂಭವಿಸಿತು. ಇದರಿಂದ ಪಾಪಕೃತ್ಯದಲ್ಲಿಯೇ ತೊಡಗಿದ ಈ ಅಸುರರ ತಂಡವು ಮುಕ್ತಿಗೆ ಎರವಾಗುವಂತಾಯಿತು ಎಂಬುದಾಗಿ ಈ ದುರ್ಘಟನೆಯ ನಿಜವಾದ ಹಿನ್ನೆಲೆಯನ್ನು ಈ ಗ್ರಂಥವು ಬಯಲುಗೊಳಿಸಿದೆ.

ಶಂಬೂಕ ವಧೆ

ಶೂದ್ರ ಶಂಬೂಕನು ತಪಸ್ಸು ಮಾಡಿದ್ದಕ್ಕಾಗಿ ಅವನನ್ನು ನಿರ್ದಯವಾಗಿ ಸಂಹರಿಸುವ ಕ್ರೂರ ಅಮಾನವೀಯ ವ್ಯವಹಾರವನ್ನು ರಾಮನು ಮಾಡಿರುವನೆಂದು ಇತ್ತೀಚೆಗೆ ತುಂಬಾ ಆಕ್ಷೇಪಿಸಲಾಗುತ್ತಿದೆ. ಇದು ವರ್ಣಾಶ್ರಮ ಪದ್ಧತಿಯ ದುಷ್ಟತನದ ಒಂದು ಕರಾಲಕೃತ್ಯವೆಂದು ಬಣ್ಣಿಸಲಾಗುತ್ತಿದೆ. ಆದರೆ ಶಂಬೂಕನನ್ನು ಸಂಹರಿಸಿದ ಶ್ರೀರಾಮನೇ ಬೇಡರಜಾತಿಯ ತಪಸ್ವಿನೀ ಶಬರಿಯ ಆಶ್ರಮಕ್ಕೆ ಆಗಮಿಸಿ ಅನುಗ್ರಹಿಸಿರುವುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಆ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಯ ಬಳಿಗೆ ಬಂದು ಶ್ರೀರಾಮನು, ''ನಿನ್ನ ತಪಸ್ಸು ಚೆನ್ನಾಗಿ ನಡೆದಿದೆಯೇ?'' ಎಂದು ಪ್ರೀತಿಯಿಂದ ವಿಚಾರಿಸುತ್ತಾನೆ. ಬ್ರಾಹ್ಮಣೇತರರು ತಪಸ್ಸು ಮಾಡಿದರೆ ಶಿಕ್ಷಿಸುವುದು ಅಂದಿನ ಪದ್ಧತಿಯಾಗಿದ್ದರೆ ರಾಮನು

ಶಬರಿಯನ್ನು ಅನುಗ್ರಹಿಸಿದ ಘಟನೆಯು ವಿಸಂಗತವಾಗುತ್ತದೆ. ಹಾಗಾದರೆ ಶೂದ್ರ ತಪಸ್ವಿನಿಯನ್ನು ರಾಮನು ಸಂಹರಿಸದೆ ಶೂದ್ರ ತಪಸ್ವಿನಿಯನ್ನು ರಾಮನು ಸಂಹರಿಸಿದ್ದೇಕೆ? ಶ್ರೀಮಧ್ವಾಚಾರ್ಯರು ಈ ವಿಷಯದಲ್ಲಿಯೂ ವಿವರಣೆಯನ್ನು ನೀಡಿದ್ದಾರೆ.

ತಪಸ್ಸು ಮಾಡುವವರೆಲ್ಲರೂ ಒಳ್ಳೆಯವರೆಂದು ಭಾವಿಸಬೇಕಾಗಿಲ್ಲ. ರಾವಣ ಮುಂತಾದ ರಾಕ್ಷಸರೂ ಉಗ್ರ ತಪಸ್ಸನ್ನು ಆಚರಿಸಿದ್ದಾರೆ. ಅವರನ್ನು ಸಜ್ಜನರೆಂದು ನಾವು ಭಾವಿಸುತ್ತೇವೆಯೇ? ತಪಸ್ಸಿನ ಹಿಂದೆ ಉತ್ತಮ ಉದ್ದೇಶವಿದ್ದರೆ ಮಾತ್ರ ಆ ತಪಸ್ಸು ಪವಿತ್ರವೆನಿಸುತ್ತದೆ. ಸೇವೆಯ ಮುಖವಾಡ ಧರಿಸಿ ಅನೇಕರು ಸಮಾಜದ ಶೋಷಣೆ, ವಂಚನೆಗಳನ್ನು ನಡೆಸುವಂತೆ ತಮ್ಮ ದುರುದ್ದೇಶ ಸಾಧನೆಗಾಗಿ ತಪಸ್ಸಿನ ನಾಟಕವನ್ನು ಆಡುವವರೂ ಇದ್ದರು. ಶಂಬೂಕನೆಂದು ಹೆಸರಿಸಲಾದ ಶೂದ್ರ ತಪಸ್ವಿಯೂ ಈ ವರ್ಗಕ್ಕೆ ಸೇರಿದವನು. ರಾಮನು ಅವನನ್ನು ಸಂಹರಿಸಲು ಅವನ ಜಾತಿಯು ಕಾರಣವಲ್ಲ. ಅವನ ತಪಸ್ಸಿನ ಹಿಂದಿನ ಕೆಟ್ಟ ಉದ್ದೇಶವನ್ನು ಗಮನಿಸಿಯೆ ರಾಮನು ಅವನನ್ನು ವಧಿಸಿದ್ದಾನೆ. ಭಗವಂತನು ಭಕ್ತರ ಜಾತಿಯನ್ನು ಗಮನಿಸುವುದಿಲ್ಲ. ಯಾವ ಜಾತಿಯಲ್ಲಿ ಹುಟ್ಟಿದ್ದರೂ ಭಕ್ತರಾಗಿದ್ದಲ್ಲಿ ತಮ್ಮ ಸಾಧನೆಯಿಂದ ಅವರು ಶ್ರೇಯಸ್ಸು ಪಡೆಯಬಹುದು. ಇದಕ್ಕೆ ಪುರಾಣ - ಇತಿಹಾಸಗಳಲ್ಲಿ ನೂರಾರು ಉದಾಹರಣೆಗಳಿವೆ. ಶ್ರೀರಾಮ ರಾಜ್ಯದಲ್ಲಿಯೇ ಯಾವ ಜಾತಿವ್ಯತ್ಯಾಸವಿಲ್ಲದೇ ಸಕಲ ಸಜ್ಜನರೂ ಮೋಕ್ಷದ ಮಹಾಯಾತ್ರೆಯಲ್ಲಿ ಶ್ರೀರಾಮನ ಜೊತೆಗೆ ಪಾಲುಗೊಂಡ ವರ್ಣನೆಯಿದೆ.

ಜಂಘನೆಂಬ ದೈತ್ಯನೇ ಶಂಬೂಕನಾಗಿ ಹುಟ್ಟಿದ್ದನು. **''ಸ ಲೋಕಕ್ಷಯ ಕಾಮ್ಯಯಾ । ತಪಃ ಚಚಾರ ದುರ್ಬುದ್ಧಿಃ ಇಚ್ಛನ್ ಮಾಹೇಶ್ವರಂ ಪದಂ''** ಆತನು ಲೋಕಕ್ಷಯವನ್ನು ಬಯಸಿ ತಾನು ರುದ್ರ ಪದವಿಯನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆಯಿಂದಲೂ ಕೆಟ್ಟ ಉದ್ದೇಶದಿಂದ ತಪಸ್ಸನ್ನು ಮಾಡಿದನು. ಅದಕ್ಕಾಗಿ ಸಜ್ಜನ ನಾಗರಿಕರ ಪ್ರಾರ್ಥನೆಯಂತೆ ರಾಮನು ಅವನನ್ನು ಸಂಹರಿಸುತ್ತಾನೆ. ಇಲ್ಲಿ ಯಾವುದೇ ರೀತಿಯ ಜಾತಿಯ ಹಿನ್ನೆಲೆಯಿಲ್ಲ. ವೇದಾಧ್ಯಯನ ಮುಂತಾದ ವಿಷಯದಲ್ಲಿ ಕೆಲವು ನಿಯಮಗಳಿದ್ದರೂ ತಪಸ್ಸು, ಧ್ಯಾನಗಳಿಂದ ಭಗವಂತನನ್ನು ಒಲಿಸಲು ಎಲ್ಲಾ ಜಾತಿಯವರಿಗೂ ಮುಕ್ತ ಅವಕಾಶವಿದೆ. ಶ್ರೀಮಧ್ವಾಚಾರ್ಯರ ತಾತ್ಪರ್ಯ ನಿರ್ಣಯವಲ್ಲದೇ ಬೇರೆ ಯಾವ ಗ್ರಂಥದಲ್ಲಿಯೂ ಇಂತಹ ಸಮರ್ಪಕ ಸ್ಪಷ್ಟೀಕರಣವನ್ನು ನಾವು ಕಾಣಲಾರೆವು.

ರಾಮಪರಶುರಾಮರ ಸಂಘರ್ಷ

ಇದರಂತೆ ವಾಲ್ಮೀಕಿ ರಾಮಾಯಣದಲ್ಲಿ ಕಾಣುವ ರಾಮ, ಪರಶುರಾಮರ ಸಂಘರ್ಷವೂ ಭಕ್ತರ ಮನಸ್ಸಿನಲ್ಲಿ ಮುಜುಗರವನ್ನು ಉಂಟುಮಾಡುತ್ತದೆ. ಪರಮಾತ್ಮನ ಹತ್ತು ಅವತಾರಗಳಲ್ಲಿ ಸೇರಿದ ರಾಮ ಪರಶುರಾಮರೊಳಗೆ ನಡೆಯುವ ವಾಗ್ವಾದ, ಪರಶುರಾಮನ ಸೋಲು, ಅವನ ತಪಸ್ಸು ಮತ್ತು ಲೋಕಗಳನ್ನು ರಾಮನು ಬಾಣದಿಂದ ನಾಶಪಡಿಸಿರುವುದು ಇವೆಲ್ಲ ಭಗವದ್ಭಕ್ತರಿಗೆ ಬಿಡಿಸಲಾಗದ ಕಗ್ಗಂಟಾಗಿತ್ತು. ಈ ವಿಷಯದಲ್ಲಿಯೂ ಅಪೂರ್ವವಾದ ವಿವರಣೆಯನ್ನು ಆಚಾರ್ಯರು ನೀಡಿದ್ದಾರೆ – ಅತುಲನೆಂಬ ದೈತ್ಯನು ಮಹಾ ತಪಸ್ಸನ್ನು ಮಾಡಿ ಬ್ರಹ್ಮದೇವರ ಅನುಗ್ರಹದಿಂದ ಲೋಕವನ್ನೇ ವ್ಯಾಪಿಸಿ ತಪೋಮಯನೂ, ಲೋಕಮಯನೂ ಎಂದೆನಿಸಿದ್ದನು. ತಾನು ಯಾರಿಂದಲೂ ಸಾಯಬಾರದು, ಅಮರನಾಗಿರಬೇಕೆಂಬುದನ್ನು ಬಯಸಿ ಆ ವರವನ್ನು ಪಡೆಯಲು ಹೊಸ ತಂತ್ರವನ್ನು ಅನುಸರಿಸಿದ್ದನು. ಹರಿಯು ಯಾರಿಂದಲೂ ಸೋಲುವುದಿಲ್ಲವೆಂಬುದನ್ನು ಅರಿತ ಈ ದೈತ್ಯನು ಹರಿಯು ಸೋತಾಗ ಮಾತ್ರ ತನಗೆ ಮರಣವೊದಗಬೇಕೆಂಬ ವರವನ್ನು ಬ್ರಹ್ಮನಿಂದ ಪಡೆದಿದ್ದನು. ಹರಿಯು ಸೋಲುವುದಿಲ್ಲ. ಆದುದರಿಂದ ತನಗೆ ಎಂದಿಗೂ ಮರಣ ಬರುವುದಿಲ್ಲವೆಂದು ಅವನ ಆಶೆಯಾಗಿತ್ತು. ಬ್ರಹ್ಮದೇವರ ವರವನ್ನು ಉಳಿಸಿಕೊಂಡು

ಅಸುರನ ಕುತಂತ್ರವನ್ನು ಭಗ್ನಗೊಳಿಸಲು ಭಗವಂತನು ಈ ಹೊಸ ನಾಟಕವನ್ನು ಹೂಡಿದ್ದಾನೆ. ತನ್ನ ಇನ್ನೊಂದು ರೂಪದಿಂದ ತಾನು ಸೋತವನಂತೆ ನಟಿಸಿ ತನ್ನ ಸೋಲಿನಿಂದ ಅತುಲನ ಸಂಹಾರಕ್ಕೆ ಕಾರಣನಾದನು. ಭಗವಂತನು ಇಲ್ಲಿ ತಾನು ಸೋತು ಗೆದ್ದಿದ್ದಾನೆ. ಬ್ರಹ್ಮದೇವರ ವರದಿಂದ ಪರಶುರಾಮನ ಉದರದಲ್ಲಿಯೇ ಆಶ್ರಯವನ್ನು ಪಡೆದ ತಪೋಮಯನೂ ಲೋಕಮಯನೂ ಎನಿಸಿಕೊಂಡ ಈ ಅತುಲನನ್ನು ಶ್ರೀರಾಮನು ಸಂಹರಿಸಿರುವುದೇ ಪರಶುರಾಮನಲ್ಲಿದ್ದ ತಪಸ್ಸನ್ನೂ ಲೋಕವನ್ನೂ ರಾಮನು ನಾಶ ಪಡಿಸಿದನೆಂಬುದರ ರಹಸ್ಯಾರ್ಥ. ಈ ಗ್ರಂಥವಿಲ್ಲದಿದ್ದರೆ ಈ ಗೊಂದಲವನ್ನು ನಾವು ಹೇಗೆ ಪರಿಹರಿಸಿಕೊಳ್ಳಬಲ್ಲೆವು ?

ಶಾಸ್ತ್ರಾರ್ಥವಿನಿರ್ಣಯ

ಈ ಗ್ರಂಥದ ಪ್ರಾರಂಭದ ಅಧ್ಯಾಯಗಳಲ್ಲಿ ಸಮಗ್ರಶಾಸ್ತ್ರದ ಸಂದೇಶವೇನು? ಎಲ್ಲಾ ಶಾಸ್ತ್ರಗಳು ಪ್ರತಿಪಾದಿಸುವ ಮುಖ್ಯ ವಿಷಯಗಳೇನು? ಎಂಬುದನ್ನು ಶಾಸ್ತ್ರಗಳಲ್ಲಿನ ವಚನಗಳನ್ನೇ ಉಲ್ಲೇಖಿಸಿ ಸಂಗ್ರಹವಾಗಿ ಪ್ರತಿಪಾದಿಸಲಾಗಿದೆ. ಪುರಾಣ ಗ್ರಂಥಗಳಲ್ಲಿ ಪರಸ್ಪರ ವಿರುದ್ಧವಾದ ಅನೇಕ ವಚನಗಳು ಕಂಡುಬರುತ್ತಿವೆ. ಹರಿ, ಹರ ಮುಂತಾದ ದೇವತೆಗಳ ಹಿರಿಮೆಯನ್ನು ವರ್ಣಿಸುವಾಗ ಈ ವಿರೋಧಗಳು ಎದ್ದು ಕಾಣಿಸುತ್ತವೆ. ತತ್ತ್ವ ಜಿಜ್ಞಾಸುಗಳ ಮನದಲ್ಲಿ ಇದರಿಂದ ಗಲಿಬಿಲಿಯುಂಟಾಗಲು ಅವಕಾಶ ವಾಗುವುದು. ಉದ್ದೇಶಪೂರ್ವಕವಾಗಿ ಭ್ರಮೆಯನ್ನು ಉಂಟುಮಾಡುವುದಕ್ಕಾಗಿಯೇ ಮೋಹಕವಾಕ್ಯಗಳನ್ನು ಪುರಾಣಕಾರರು ತಮ್ಮ ಗ್ರಂಥಗಳಲ್ಲಿ ಜೋಡಿಸಿದ್ದಾರೆಂದು ಪುರಾಣಗಳಲ್ಲಿಯೇ ಹೇಳಲಾಗಿದೆ. ಜನರಿಗೆ ತತ್ತ್ವ ದರ್ಶನವನ್ನು ನೀಡಲು ಹೊರಟ ಪುರಾಣಗಳು ಈ ವಂಚನೆಯನ್ನು ಏಕೆ ಮಾಡುತ್ತವೆಯೆಂದು ನಮಗೆ ಸಂಶಯ ಬರಬಹುದು. ಇದರಲ್ಲಿಯೂ ಒಂದು ವಿಶಿಷ್ಟ ಉದ್ದೇಶವು ಅಡಗಿದೆ. ಅನೇಕ ತಾತ್ವಿಕ ರಹಸ್ಯಗಳನ್ನು ಬಹಿರಂಗಗೊಳಿಸುವುದು ಕೆಲವೊಮ್ಮೆ ಅನರ್ಥಕಾರಿಯಾಗುವ ಸಾಧ್ಯತೆಯಿದೆ. ದುಷ್ಟವ್ಯಕ್ತಿಗಳು ತಾವು ಪಡೆದಿರುವ ತಾತ್ವಿಕ ಜ್ಞಾನವನ್ನು ದುರುಪಯೋಗಪಡಿಸಿ ಜಗತ್ತಿಗೆ ದುರಂತವನ್ನು ತಂದೊಡ್ಡಬಹುದು. ಅನೇಕ ವಿಷಯಗಳ ಸರಿಯಾದ ಪರಿಜ್ಞಾನ ಮತ್ತು ಉಪಾಸನೆಗಳಿಂದ ಪಡೆಯುವ ಪ್ರಚಂಡಶಕ್ತಿಯಿಂದ ಲೋಕದ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿ ಸ್ವಚ್ಛಂದ ಸ್ವಾರ್ಥ ಸಾಧನೆಯ ಜೊತೆಗೆ ಲೋಕವನ್ನು ಅಲ್ಲೋಲಕಲ್ಲೋಲಗೊಳಿಸಬಹುದು. ಪರಮಾಣು ಶಕ್ತಿಯ ರಹಸ್ಯವನ್ನು ಬಹಿರಂಗಗೊಳಿಸಿದರೆ ವಿಶ್ವಕ್ಕೆ ಎಂತಹ ಗಂಡಾಂತರವೊದಗಬಹುದೆಂಬುದನ್ನು ನಾವು ಊಹಿಸಿಕೊಳ್ಳಬಹುದು. ಭೌತಿಕ ರಹಸ್ಯಗಳು ಪ್ರಕಟಗೊಳ್ಳುವುದರಿಂದಲೇ ಇಂತಹ ಅನರ್ಥಗಳು ಸಂಭವಿಸುವುದಾದರೆ ಆಧ್ಯಾತ್ಮಿಕ ರಹಸ್ಯಗಳು ಬಯಲುಗೊಂಡಲ್ಲಿ ಅದರ ದುರುಪಯೋಗದಿಂದ ಆಗಬಹುದಾದ ಭೀಕರ ಪರಿಣಾಮವನ್ನು ಅರ್ಥಮಾಡಿಕೊಳ್ಳಬಹುದು. ಆದುದರಿಂದ ವಿಶ್ವದ ಆಧ್ಯಾತ್ಮಿಕ ಸತ್ಯವನ್ನು ಅರುಹಲು ಹೊರಟ ಶಾಸ್ತ್ರಗ್ರಂಥಗಳೂ ಮೋಹಕ ಭಾಷೆಯನ್ನು ಬಳಸಿ ತತ್ತ್ವ ವಿಭ್ರಮವನ್ನು ಪದೇ ಪದೇ ಮಾಡುವುದುಂಟು. ಸ್ವಾರ್ಥ ರಹಿತರಾದ ನಿಜವಾದ ತತ್ತ್ವಾನ್ವೇಷಕರು ಮಾತ್ರ ಈ ರಹಸ್ಯವನ್ನು ಭೇದಿಸಿ ಸತ್ಯದರ್ಶನವನ್ನು ಪಡೆಯಲಿ ಎಂಬುದೇ ಈ ಗ್ರಂಥಗಳ ಉದ್ದೇಶವಾಗಿದೆ. ಈ ಗ್ರಂಥರಾಶಿಯಲ್ಲಿ ಮೋಹಕ ವಚನಗಳು ಯಾವುವು? ಸತ್ಯವಚನಗಳು ಯಾವುವು? ಎಂಬುದನ್ನು ಹೇಗೆ ತಿಳಿಯಬೇಕು? ಎಂಬ ಪ್ರಶ್ನೆ ಉದ್ಭವಿಸಬಹುದು. ಶಾಸ್ತ್ರಗ್ರಂಥಗಳಲ್ಲಿ ಈ ಮೋಹಕ ಭಾಗವನ್ನೂ ಸರಿಯಾದ ಭಾಗವನ್ನೂ ಪೃಥಕ್‌ಕರಿಸಿ ಗುರುತಿಸುವ ಸೂತ್ರವನ್ನೂ ಶ್ರೀಮಧ್ವಾಚಾರ್ಯರು ಈ ಗ್ರಂಥದಲ್ಲಿ ಸೂಚಿಸಿದ್ದಾರೆ. ನಿರ್ಣಾಯಕಗಳಾದ ಬ್ರಹ್ಮಸೂತ್ರಗಳೇ ಈ ವಿಷಯದಲ್ಲಿ ನಮಗೆ ದಾರಿದೀಪಗಳಾಗಿವೆ. ಬ್ರಹ್ಮಸೂತ್ರದ ಆಧಾರದಲ್ಲಿ ನಿಜವಾದ ಪ್ರಮೇಯಗಳನ್ನು ಅರಿತುಕೊಂಡು ಅದಕ್ಕೆ ಅನುಗುಣಗಳಾದ ವಾಕ್ಯಗಳೇ ಪ್ರಮಾಣಗಳೆಂದೂ ಅದಕ್ಕೆ ವಿರುದ್ಧವಾದುದು ಮೋಹಕಗಳೆಂದೂ ನಾವು ವಿಶ್ಲೇಷಿಸಬೇಕು. ಈ ಬ್ರಹ್ಮಸೂತ್ರಗಳ ಹಿನ್ನೆಲೆಯಲ್ಲಿಯೇ

ಅಪೌರುಷೆಯವಾಗಿರುವುದರಿಂದ ಯಾವ ದೋಷಸ್ಪರ್ಶವೂ ಇಲ್ಲದ ವೇದೋಪನಿಷತ್ತುಗಳ ಅರ್ಥವನ್ನು ಅರಿತುಕೊಂಡು ಅವುಗಳಿಂದಲೂ ಜಗತ್ತಿನ ಸತ್ಯವನ್ನು ನಾವು ಅರಿತುಕೊಳ್ಳಬಹುದು. ಹೀಗೆ ವಿಶಾಲವಾದ ಗ್ರಂಥರಾಶಿಯನ್ನು ವಿಶ್ಲೇಷಿಸಿ ನಿಜವಾದ ಪ್ರಮೇಯಗಳನ್ನು ಅರಿಯುವ ವಿಧಾನವನ್ನು ಆಚಾರ್ಯರು ಈ ಗ್ರಂಥದಲ್ಲಿ ವಿವರಿಸಿದ್ದಾರೆ. ಇದನ್ನು ಬ್ರಹ್ಮಸೂತ್ರ ಮತ್ತು ವೇದೋಪನಿಷತ್ತು ಮುಂತಾದ ಶಾಸ್ತ್ರಗಳ ವಾಕ್ಯಗಳಿಂದಲೇ ದೃಢಪಡಿಸಿದ್ದಾರೆ.

ಎರಡೂ ಅವತಾರಗಳಲ್ಲಿ ವಾಯುದೇವರ ಪರಿಶುದ್ಧ ವ್ಯಕ್ತಿತ್ವ

ಈ ಶಾಸ್ತ್ರೀಯ ಪ್ರಮೇಯಗಳನ್ನು ದೃಷ್ಟಾಂತ ಪುರಸ್ಸರವಾಗಿ ತೋರಿಸಲು ರಾಮಾಯಣ ಭಾರತ ಇತಿಹಾಸಗಳು ಹೊರಟಿವೆಯೆಂದು ಶ್ರೀಮಧ್ವಾಚಾರ್ಯರು ಪ್ರತಿಪಾದಿಸಿದ್ದಾರೆ. ಈ ಇತಿಹಾಸದಲ್ಲಿ ರಾಮ ಮತ್ತು ಕೃಷ್ಣ ಅವತಾರಗಳಲ್ಲಿ ಹರಿಯ ಹಿರಿಮೆಯು ಸುಸ್ಪಷ್ಟವಾಗಿ ಗೋಚರವಾಗುತ್ತದೆ. ಅದರಂತೆ ದೇವತೆಗಳ ತಾರತಮ್ಯವೂ ಮುಖ್ಯಪ್ರಾಣನ ಜೀವೋತ್ತಮತ್ವವೂ ಈ ಎರಡೂ ಅವತಾರಗಳಲ್ಲಿ ನಡೆದ ಘಟನೆಗಳಿಂದ ನಮಗೆ ವೇದ್ಯವಾಗುತ್ತದೆ. ಒಂದು ಅವತಾರದಲ್ಲಿ ಹೆಚ್ಚು ಸಾಧನೆಯನ್ನು ಮಾಡದ ದೇವತೆಯು ಇನ್ನೊಂದು ಅವತಾರದಲ್ಲಿ ವಿಶೇಷವಾದ ಭಗವತ್‌ಸೇವೆಯನ್ನು ಮಾಡಿದ್ದನ್ನೂ ನಾವು ಕಾಣಬಹುದು. ಇಂದ್ರನು ವಾಲಿಯಾಗಿ ವಿಶೇಷ ಸೇವೆಯನ್ನು ಮಾಡದಿದ್ದರೂ ಅವನೇ ಅರ್ಜುನನಾಗಿ ಭಗವಂತನ ಬಹುವಿಧ ಸೇವೆಯನ್ನು ನಡೆಸಿದ್ದಾನೆ. ರಾಮಾವತಾರದಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದವರಿಂದ ಕೃಷ್ಣಾವತಾರದಲ್ಲಿ ಕಡಿಮೆ ಪ್ರಮಾಣದ ಸಾಧನವು ನಡೆಯಿತು. ಅನೇಕರು ಎರಡೂ ಅವತಾರಗಳಲ್ಲಿ ಸೇವೆ ಸಲ್ಲಿಸುತ್ತಿದ್ದರೂ ಕೊನೆಗೆ ಭಗವಂತನಿಗೆ ವಿರೋಧಿಯಾದ ಕಾರ್ಯವನ್ನು ಮಾಡಿ ತಮ್ಮ ಸಾಧನೆಯನ್ನು ಕಳೆದುಕೊಂಡರು. ಬಲರಾಮ, ಅರ್ಜುನ, ಮುಂತಾದ ಎಲ್ಲ ಮಹಾನುಭಾವರೂ ಭಗವಂತನ ವಿಶೇಷಸೇವೆಯನ್ನು ಸಲ್ಲಿಸಿದ್ದರೂ ಕೆಲವೊಮ್ಮೆ ಪರಮಾತ್ಮನ ವಿಷಯದಲ್ಲಿಯೇ ಅನುಚಿತವಾಗಿ ನಡೆದುಕೊಂಡು ದೋಷಿಗಳೆನಿಸಿದ್ದಾರೆ. ಆದರೆ ಎರಡೂ ಅವತಾರಗಳಲ್ಲಿಯೂ ಅತ್ಯಧಿಕವಾದ ಸೇವೆಯನ್ನು ಸಲ್ಲಿಸಿ ಯಾವ ಸಂದರ್ಭದಲ್ಲಿಯೂ ಭಗವಂತನಿಗೆ ವಿರುದ್ಧವಾಗಿ ವರ್ತಿಸದೆ ಅವನಿಗೆ ಅಸಮ್ಮತವಾದ ಯಾವ ಕಾರ್ಯವನ್ನೂ ಮಾಡದೇ ಪೂರ್ಣವಾಗಿ ಶ್ರೀಹರಿಯ ಪ್ರೀತಿಪಾತ್ರರಾದವರು ವಾಯುದೇವರು ಮಾತ್ರ. ವಾಯುದೇವರು ರಾಮಾವತಾರದಲ್ಲಿ ಹನುಮಂತನಾಗಿಯೂ ಕೃಷ್ಣಾವತಾರದಲ್ಲಿ ಭೀಮಸೇನನಾಗಿಯೂ ಆದರ್ಶ ಭಕ್ತಜೀವನವನ್ನು ತೋರಿದ್ದಾರೆ. ಪರಿಪೂರ್ಣ ಭಾಗವತ ಧರ್ಮವನ್ನು ತಮ್ಮ ಜೀವನದಲ್ಲಿ ಅಳವಡಿಸಿದ್ದಾರೆ. ಯಾವ ದೋಷವೂ ಇಲ್ಲದ ಸ್ಫಟಿಕದಂತಹ ಶುಭ್ರ ವ್ಯಕ್ತಿತ್ವವನ್ನು ನಾವು ಅವರಲ್ಲಿ ಕಾಣಬಲ್ಲೆವು.

ಇಂತಹ ಮಹಾಭಾರತ ಗ್ರಂಥವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಶ್ರೀಹರಿಯ ಸರ್ವೋತ್ತಮತ್ವ ವಾಯುವಿನ ಜೀವೋತ್ತಮತ್ವ ಇವೆರಡೂ ಸುಸ್ಪಷ್ಟವಾಗಿ ಗೋಚರವಾಗುತ್ತವೆಯೆಂದು ಮಹಾಭಾರತದ ಅನೇಕಾನೇಕ ವಾಕ್ಯಗಳನ್ನು ಉಲ್ಲೇಖಿಸಿ ಸ್ಪಷ್ಟಪಡಿಸಿದ್ದಾರೆ.

ಹೀಗೆ ಮಹಾಭಾರತ ತಾತ್ಪರ್ಯನಿರ್ಣಯವು ರಾಮಾಯಣ ಮಹಾಭಾರತಗಳ ವಾಸ್ತವ ಚಿತ್ರವನ್ನು ನಮ್ಮ ಮುಂದಿಟ್ಟು ಅದರ ಹಿಂದಿರುವ ಎಲ್ಲ ಆಧ್ಯಾತ್ಮಿಕ ಪ್ರಮೇಯಗಳ ಸುಸ್ಪಷ್ಟ ಪರಿಚಯವನ್ನು ನಮಗೆ ನೀಡುವ ಅತ್ಯುತ್ತಮ ಅಪೂರ್ವ ಕೃತಿಯೆನಿಸಿದೆ.

(ಶ್ರೀ ಸರ್ವಮೂಲ ಗ್ರಂಥಗಳು – ಸಂಪುಟ – ೫ , ಮಹಾಭಾರತ ತಾತ್ಪರ್ಯ ನಿರ್ಣಯ ಭಾಗ – ೧. ಸಂ – ವ್ಯಾಸನಕೆರೆ ಪ್ರಭಂಜನ ಆಚಾರ್ಯ, ೧೯೯೩. ಪ್ರ : ಅಖಿಲ ಭಾರತ ಮಾಧ್ವ ಮಹಾಮಂಡಲ, ಆನಂದತೀರ್ಥ ಪ್ರತಿಷ್ಠಾನ, ಬೆಂಗಳೂರು.)

●

೩-೧೨

ಮಹಾಭಾರತ ತಾತ್ಪರ್ಯ ನಿರ್ಣಯ

ಮಹಾಭಾರತ ತಾತ್ಪರ್ಯ ನಿರ್ಣಯದ ಕನ್ನಡ ಅನುವಾದದ ೨ನೇ ಸಂಪುಟವು ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿಯಾಗಿದೆ. ಹತ್ತನೆಯ ಅಧ್ಯಾಯದಲ್ಲಿ ವೇದವ್ಯಾಸರ ಚರಿತ್ರೆಯ ವರ್ಣನೆಯಿದ್ದರೆ ಹನ್ನೊಂದನೆಯ ಅಧ್ಯಾಯದಿಂದ ಮಹಾಭಾರತದ ಕಥಾನಿರೂಪಣೆಯಿದೆ. ಮಹಾಭಾರತವು ಕೇವಲ ಪಾಂಡವರ ಇತಿಹಾಸವಲ್ಲ. ಇದರಲ್ಲಿ ಇಡೀ ಮನುಕುಲದ ಇತಿಹಾಸವೇ ಅಡಗಿದೆ. ಮಾನವರ ಅಂತರಂಗದ ಭಾವನೆಗಳ ತುಮುಲ, ತಿಕ್ಕಾಟಗಳ ಚಿತ್ರಣವನ್ನೂ ಮಹಾಭಾರತದಲ್ಲಿ ನಾವು ಕಾಣಬಹುದು. ಆಚಾರ್ಯರು ಮಹಾಭಾರತವನ್ನು ಮೂರು ದೃಷ್ಟಿಗಳಿಂದ ನೋಡುವಂತೆ ತಿಳಿಸಿದ್ದಾರೆ. ಮಹಾಭಾರತವು ಸರ್ವೋತ್ತಮನಾದ ಶ್ರೀಕೃಷ್ಣನ ಕಥೆಯಾಗಿದೆ. ಆರಂಭದಿಂದ ಕೊನೆಯವರೆಗೂ ಶ್ರೀಕೃಷ್ಣನ ಮಹಿಮೆಯನ್ನೇ ವರ್ಣಿಸುತ್ತಿದೆ. ಮಹಾಭಾರತದ ಒಂದೊಂದು ಪದಗಳೂ ಶ್ರೀಕೃಷ್ಣನ ನಾಮಗಳೆನಿಸಿವೆ. ಹೀಗೆ ಮಹಾಭಾರತವೆಲ್ಲವೂ ಶ್ರೀಮನ್ನಾರಾಯಣನ ಮಹಾಮಹಿಮೆಯ ನಿರೂಪಣೆಯಲ್ಲಿಯೇ ಪ್ರವೃತ್ತವಾಗಿದೆ. ಇದು ಮಹಾಭಾರತದ ಒಂದು ಅರ್ಥ. ಭಗವದ್ಭಕ್ತರಾದ ಪಾಂಡವರು ಭಗವದ್ವಿರೋಧಿಗಳಾದ ದುರ್ಯೋಧನಾದಿಗಳ ವಿರುದ್ಧವಾಗಿ ನಡೆಸಿದ ಹೋರಾಟ ಮತ್ತು ಸಾಧಿಸಿದ ವಿಜಯವು ಮಹಾಭಾರತದ ಎರಡನೆಯ ಅರ್ಥವಾಗಿದೆ. ಅಂತೂ ಮಹಾಭಾರತದಿಂದ ಎಲ್ಲರೂ ಗ್ರಹಿಸಿಕೊಂಡಿರುವಂತೆ ಪಾಂಡವರನ್ನು ಮುಖ್ಯವಿಷಯವನ್ನಾಗಿ ಇಟ್ಟುಕೊಂಡು ಬರೆದ ಪ್ರಾಚೀನ ಇತಿಹಾಸವನ್ನು ತಿಳಿದುಕೊಳ್ಳಬಹುದು. ಮೂರನೆಯದೇ ಮಹಾಭಾರತದ ಆಧ್ಯಾತ್ಮಿಕ ಅರ್ಥ. ಪಾಂಡವರೆಂದರೆ ಬೇರೆಬೇರೆ ಸದ್ಗುಣಗಳ ಪ್ರತಿನಿಧಿಗಳು ಮತ್ತು ಅದರ ಅಭಿಮಾನಿ ದೇವತೆಗಳು. ಧರ್ಮರಾಜನು ಧರ್ಮದ ಅಭಿಮಾನಿಯಾಗಿದ್ದರೆ ಭಕ್ತಿ, ಜ್ಞಾನ, ವೈರಾಗ್ಯ, ಪ್ರಜ್ಞೆ, ಮೇಧಾಶಕ್ತಿ, ಧೈರ್ಯ, ಸ್ಥೈರ್ಯ, ಯೋಗಶಕ್ತಿ, ಪ್ರಾಣಶಕ್ತಿ, ಬಲ ಈ ಎಲ್ಲ ಸದ್ಗುಣಗಳೇ ಭೀಮಸೇನನೆನಿಸಿದ್ದಾನೆ. ಶ್ರವಣ, ಮನನ, ಧ್ಯಾನ ಮುಂತಾದ ಸಾಧನೆಯ ಪ್ರತಿನಿಧಿಯಾಗಿ ಅರ್ಜುನನಿದ್ದರೆ ಶೀಲ, ವಿನಯಗಳೇ ನಕುಲ, ಸಹದೇವರಾಗಿದ್ದಾರೆ. ದ್ರೌಪದಿಯು ಸಕಲ ವಿದ್ಯಾಭಿಮಾನಿನಿಯಾಗಿರುವಳು. ನೂರು ಮಂದಿ ಕೌರವರೆಲ್ಲರೂ ದುರ್ಗುಣಗಳ ಪ್ರತಿಮೂರ್ತಿಗಳಾಗಿದ್ದಾರೆ. ಅಜ್ಞಾನ, ವಿಪರೀತ ಜ್ಞಾನಗಳೇ ದುರ್ಯೋಧನ, ದುಶ್ಶಾಸನರು. ಉಳಿದ ಸಹೋದರರು ಕಾಮ-ಕ್ರೋಧಾದಿ ದುರ್ಗುಣಗಳ ಸ್ವರೂಪಿಗಳಾಗಿದ್ದಾರೆ. ಈ ಎಲ್ಲ ದೋಷಗಳ ಮೂಲಾಧಾರವೇ ನಾಸ್ತಿಕ್ಯ

ಬುದ್ಧಿಯಾಗಿದೆ. ಭಗವಂತನಲ್ಲಿ ಶ್ರದ್ಧೆಯಿಲ್ಲದಿರುವುದರಿಂದಲೇ ನಮ್ಮಲ್ಲಿ ಎಲ್ಲ ದೋಷ ದುರ್ಗುಣಗಳು ಸಂಭವಿಸುತ್ತವೆ. ಕೌರವರ ಎಲ್ಲ ದುಷ್ಟ ಪ್ರವೃತ್ತಿಗಳಿಗೆ ಶಕುನಿಯೇ ಮೂಲಪ್ರೇರಕನಾಗಿರುವುದರಿಂದ ಅವನೇ ನಾಸ್ತಿಕ್ಯಭಾವನೆಯ ಪ್ರತಿನಿಧಿಯೆನ್ನಬಹುದು. ಇಂದ್ರಿಯಾಭಿಮಾನಿ ದೇವತೆಗಳಾದ ಭೀಷ್ಮದ್ರೋಣಾದಿಗಳು ಇಂದ್ರಿಯಗಳ ಪ್ರತಿನಿಧಿಗಳು. ನಮ್ಮ ಇಂದ್ರಿಯಗಳಿಂದ ಒಳ್ಳೆಯ ಘಟನೆಗಳೂ ನಡೆಯುತ್ತವೆ; ಕೆಟ್ಟ ಘಟನೆಗಳೂ ನಡೆಯುತ್ತವೆ. ಅದರಂತೆ ಪಾಂಡವರ ಕಡೆಗೂ ಕೌರವರ ಕಡೆಗೂ ಹೊಯ್ದಾಡುತ್ತಿರುವ ಭೀಷ್ಮ-ದ್ರೋಣಾದಿಗಳು ಇಂದ್ರಿಯಗಳಂತೆ ಇದ್ದಾರೆ. ಪಾಂಡವರ ಸೈನ್ಯವು ಪುಣ್ಯದ ಪ್ರತೀಕವಾಗಿದ್ದರೆ ಕೌರವರ ಸೈನ್ಯವು ಪಾಪವನ್ನು ಪ್ರತಿನಿಧೀಕರಿಸುತ್ತದೆ. ಹೀಗೆ ಪಾಂಡವರನ್ನು ಪ್ರತಿನಿಧೀಕರಿಸುವ ಸತ್‌ಪ್ರವೃತ್ತಿಗಳಿಗೂ ಕೌರವರನ್ನು ಪ್ರತಿನಿಧೀಕರಿಸುತ್ತಿರುವ ದುಷ್ಟ ಪ್ರವೃತ್ತಿಗಳಿಗೂ ನಡೆಯುವ ಈ ಹೋರಾಟವೇ ಭಾರತದ ಅಂತರಂಗ ಚಿತ್ರ. ನಮ್ಮ ಜೀವನದಲ್ಲಿ ನಮ್ಮ ಅಂತರಂಗದ ಕುರುಕ್ಷೇತ್ರದಲ್ಲಿ ಈ ಕುರುಕ್ಷೇತ್ರಯುದ್ಧವು ನಡೆಯುತ್ತಿದೆ. ದುಷ್ಟ ಕಾರ್ಯಗಳಲ್ಲಿ ತೊಡಗುವಾಗ ನಮ್ಮ ಒಳಗಿನ ದನಿಯು ಅದನ್ನು ತಡೆಯುತ್ತದೆ. ಭ್ರಷ್ಟಾಚಾರವನ್ನು ನಡೆಸುವಾಗಲೂ ನಿಃಸಂಕೋಚವಾಗಿ ಅದರಲ್ಲಿ ಯಾರೂ ತೊಡಗುವುದಿಲ್ಲ. ತಾನು ನಡೆಸುವ ಈ ವ್ಯವಹಾರವು ಅನುಚಿತವೆನ್ನುವ ತಳಮಳ ಅವರಲ್ಲಿ ಇದ್ದೇ ಇರುತ್ತದೆ. ಅಧಾರ್ಮಿಕ ಕಾರ್ಯಗಳನ್ನು ನಡೆಸುವಾಗ ಒಂದೆಡೆ ಇದನ್ನು ಮಾಡಬೇಕೆಂದು, ಮತ್ತೊಂದೆಡೆ ಇದನ್ನು ಮಾಡಬಾರದೆಂದು ಈ ಎರಡು ಭಾವನೆಗಳ ತಾಕಲಾಟ, ಹೊಯ್ದಾಟಗಳೇ ಪಾಂಡವರ ಮತ್ತು ಕೌರವರ ಯುದ್ಧದ ಆಧ್ಯಾತ್ಮಿಕ ಅಂತರಾರ್ಥವಾಗಿದೆ. ಆದರೆ ಮಹಾಭಾರತದ ಯುದ್ಧದಲ್ಲಿ ಶ್ರೀಕೃಷ್ಣನ ಅನುಗ್ರಹದಿಂದ ಕೌರವರ ವಿರುದ್ಧವಾದ ಹೋರಾಟದಲ್ಲಿ ಪಾಂಡವರು ವಿಜಯಶಾಲಿಗಳಾಗಿ ಧರ್ಮರಾಜನ ಪಟ್ಟಾಭಿಷೇಕವಾದರೆ ನಮ್ಮ ಜೀವನದ ಈ ಕುರುಕ್ಷೇತ್ರ ಸಮರದಲ್ಲಿ ಶಕುನಿಯ ಪ್ರೋತ್ಸಾಹದಿಂದ ಕೌರವರ ವಿಜಯವಾಗಿ ದುರ್ಯೋಧನನಿಗೆ ಪಟ್ಟಾಭಿಷೇಕವಾಗುತ್ತದೆ. ನಾಸ್ತಿಕ್ಯದ ಬೆಂಬಲದಿಂದ ನಮ್ಮ ಜೀವನದಲ್ಲಿ ದುರ್ಗುಣ, ದುಷ್ಪ್ರವೃತ್ತಿಗಳೇ ಮೇಲುಗೈ ಪಡೆದು ಸಾತ್ವಿಕಶಕ್ತಿಯನ್ನು ಅಡಗಿಸಿ ತಮ್ಮ ಅಧಿಕಾರವನ್ನು ಚಲಾಯಿಸುತ್ತಿವೆ. ಭಗವಂತನ ಭಕ್ತಿಯ ಬಲದಿಂದ ಇಂತಹ ದುಷ್ಟಶಕ್ತಿಗಳ ವಿರುದ್ಧವಾಗಿ ಸಾತ್ವಿಕ ಶಕ್ತಿಯು ವಿಜಯವನ್ನು ಸಾಧಿಸುವ ಆಧ್ಯಾತ್ಮಿಕ ಸಂದೇಶವನ್ನೂ ಮಹಾಭಾರತವು ನೀಡುತ್ತಿದೆಯೆಂದು ಶ್ರೀಮಧ್ವಾಚಾರ್ಯರು ತಿಳಿಸಿದ್ದಾರೆ.

ಶ್ರೀಮಧ್ವಾಚಾರ್ಯರು ಮಹಾಭಾರತದ ಇತಿಹಾಸವನ್ನು ನಿರೂಪಿಸುವಾಗ ಜೊತೆಗೆ ಶ್ರೀಕೃಷ್ಣನ ಕಥೆಯನ್ನೂ ಹೆಣೆದಿದ್ದಾರೆ. ಮಹಾಭಾರತದ ಘಟನೆಗಳ ಯಾವ ಯಾವ ಘಟ್ಟದಲ್ಲಿ ಶ್ರೀಕೃಷ್ಣನ ಅವತಾರದ ಘಟನೆಗಳು ನಡೆದಿವೆಯೆನ್ನುವುದನ್ನು ಕರಾರುವಾಕ್ಕಾಗಿ ತಿಳಿಸಿದ್ದಾರೆ. ಪಾಂಡವರ ಜೀವನದ ಘಟನೆಗಳನ್ನು ವಿವರಿಸುತ್ತ, ಅದೇ ಸಂದರ್ಭದಲ್ಲಿ ನಡೆದ ಶ್ರೀಕೃಷ್ಣನ ಲೀಲಾಕಾರ್ಯವನ್ನೂ ನಿರೂಪಿಸಿದ್ದಾರೆ. ಮಹಾಭಾರತ ತಾತ್ಪರ್ಯನಿರ್ಣಯವನ್ನು ಬಿಟ್ಟರೆ ಇಂತಹ ಜೋಡಣೆಯನ್ನು ನಾವು ಬೇರೆ ಯಾವ ಗ್ರಂಥದಿಂದಲೂ ತಿಳಿಯಲು ಸಾಧ್ಯವಿಲ್ಲ. ಪ್ರಾರಂಭದ ಐದು, ಆರು ಅಧ್ಯಾಯಗಳಲ್ಲಿ ಶ್ರೀರಾಮನ ಅವತಾರ ಕಥೆಯನ್ನೂ ತಿಳಿಸಿದ ಈ ಗ್ರಂಥವು ರಾಮಾಯಣ, ಮಹಾಭಾರತ, ಹರಿವಂಶದ ಕೃಷ್ಣಕಥೆ, ಭಾಗವತ ದಶಮಸ್ಕಂಧಗಳ ಸಾರಸಂಗ್ರಹವಾಗಿದೆಯೆಂದು ಹೇಳಬಹುದು.

ಮಹಾಭಾರತದ ಮಹಾಪುರುಷರ ಅನೇಕ ವರ್ಣನೆಗಳು ನಮಗೆ ವಿಚಿತ್ರವಾಗಿ ತೋರುತ್ತವೆ. ಗಂಗಾಮಾತೆಯು ತನ್ನ ಹುಟ್ಟಿದ ಏಳು ಮಕ್ಕಳನ್ನು ನಿರ್ದಯವಾಗಿ ಗಂಗಾನದಿಗೆ ಎಸೆದು ಕೊಲ್ಲುವುದು ಅತ್ಯಂತ ಅಮಾನವೀಯ ಘಟನೆಯಾಗಿದೆ. ತಾಯಿಯು ತನ್ನ ಕರುಳಿನ ಕುಡಿಗಳನ್ನು ಈ ರೀತಿಯಾಗಿ ಕೊಲ್ಲುವುದು ಎಲ್ಲಿಯಾದರೂ ಇದೆಯೇ ? ಪ್ರಾಣಿಗಳಲ್ಲೂ ಇಂತಹ ವರ್ತನೆಯನ್ನು ನಾವು ಕಾಣಲಾರೆವು.

ಕ್ರೂರನಾದ ಕಂಸನು ದೇವಕಿಯ ಎಂಟನೆಯ ಗರ್ಭದಲ್ಲಿ ಜನಿಸುವ ಪುತ್ರನಿಂದ ತನಗೆ ಮರಣವಾಗುವುದೆಂಬ ದೇವವಾಣಿಯನ್ನು ಕೇಳಿ ದೇವಕಿಯನ್ನು ಕೊಲ್ಲಲು ಪ್ರವೃತ್ತನಾದರೂ ವಸುದೇವನ ಬೇಡಿಕೆಯನ್ನು ಮನ್ನಿಸಿ ಅವಳಿಗೆ ದಯಾಭಿಕ್ಷೆಯನ್ನು ನೀಡಿದನು. ಅವಳ ಎಂಟನೆ ಮಗನನ್ನು ಮಾತ್ರ ಕೊಲ್ಲುವ ನಿರ್ಧಾರವನ್ನು ಮಾಡಿ ಅದರಂತೆ ವಸುದೇವನಿಗೆ ಕಟ್ಟಪ್ಪಣೆ ಮಾಡಿದನು. ಆದರೆ ನಾರದರ ಬೋಧನೆಯಿಂದ ತನ್ನ ನಿರ್ಧಾರವನ್ನು ಬದಲಾಯಿಸಿ ಆರು ಮಕ್ಕಳನ್ನೂ ನಿರ್ದಯವಾಗಿ ಸಂಹರಿಸಿದನು. ಹೀಗೆ ಈ ಮುಗ್ಧ ಮಕ್ಕಳ ಹತ್ಯೆಗೆ ಕಾರಣವಾಗುವಂತಹ ಕೆಟ್ಟ ಬೋಧನೆಯನ್ನು ನಾರದರಂತಹ ಮಹಾನುಭಾವರು ಯಾಕೆ ಮಾಡಿದರು ? ಈ ಎಲ್ಲ ಪ್ರಶ್ನೆಗಳಿಗೆ ವಿವರವಾದ ಸಮಾಧಾನ ನೀಡಿ ಗಂಗಾ ದೇವಿಯ ಮತ್ತು ನಾರದರ ಇಂತಹ ವ್ಯವಹಾರದ ಹಿಂದಿರುವ ಕಾರುಣ್ಯಭಾವದ ಸ್ಪಷ್ಟಚಿತ್ರಣವನ್ನು ಶ್ರೀಮಧ್ವಾಚಾರ್ಯರು ಈ ಗ್ರಂಥದಲ್ಲಿ ಮಾಡಿದ್ದಾರೆ. ದ್ರೌಪದಿದೇವಿಗೆ ಐದು ಮಂದಿ ಪತಿಗಳಿರುವ ಹಿನ್ನೆಲೆ ಹಾಗೂ ಅದರ ದೇವರಹಸ್ಯವನ್ನು ವಿಷದೀಕರಿಸಿದ್ದಾರೆ. ಮಹಾಭಾರತದಿಂದಲೂ ನಮಗೆ ದೊರೆಯದ ಅನೇಕ ಮಾಹಿತಿಗಳ ಕಡೆಗೆ ಬೆಳಕು ಚೆಲ್ಲಿದ್ದಾರೆ.

ಏಕಲವ್ಯನ ವಿಷಯದಲ್ಲಿ ದ್ರೋಣರ ವ್ಯವಹಾರವು ಅತ್ಯಂತ ಕಠೋರವೂ ಪಕ್ಷಪಾತಪೂರ್ಣವೂ ಆಗಿ ನಮಗೆ ತೋರಬಹುದು. ಏಕಲವ್ಯನ ಗುರುಭಕ್ತಿಯು ಅಸಾಧಾರಣವಾದುದೇ. ಆದರೆ ಬೇರೆ ದೃಷ್ಟಿಯಿಂದ ನೋಡಿದರೆ ಏಕಲವ್ಯನು ಒಳ್ಳೆಯ ವ್ಯಕ್ತಿಯಲ್ಲ. ಜರಾಸಂಧನ ಆಕ್ರಮಣಕಾರಿ ಕಾರ್ಯಗಳಲ್ಲಿ ಇವನು ಆತನಿಗೆ ಬೆಂಬಲಿಗನಾಗಿದ್ದನು. ಜರಾಸಂಧನು ಪ್ರಜಾರಕ್ಷಕನೂ ಧರ್ಮಪರಿಪಾಲಕನೂ ಆದ ಶ್ರೀಕೃಷ್ಣನ ಬಗ್ಗೆ ಅನ್ಯಾಯವಾಗಿ ಹೂಡಿದ ಯುದ್ಧದಲ್ಲಿ ಏಕಲವ್ಯನೂ ಸಹಭಾಗಿಯಾಗಿದ್ದನು. ದುಷ್ಟರಲ್ಲಿಯೂ ಕೆಲವೊಮ್ಮೆ ದೈವೀಶಕ್ತಿಯ ಒತ್ತಡದಿಂದ ತಾತ್ಕಾಲಿಕವಾಗಿ ಅದ್ಭುತಗುಣವನ್ನು ಕಾಣಬಹುದು. ಸಜ್ಜನರೂ ಕೆಲವು ವೇಳೆ ಅಸುರಪ್ರಭಾವದಿಂದ ಅಕಾರ್ಯಗಳನ್ನು ಮಾಡುವುದುಂಟು. ಏಕಲವ್ಯನು ಗುರುಭಕ್ತಿಯ ಉನ್ನತ ಆದರ್ಶವನ್ನು ತೋರಿ ತನ್ನ ಕೈಬೆರಳನ್ನು ತುಂಡರಿಸಿ ದ್ರೋಣಾಚಾರ್ಯರಿಗೆ ಅರ್ಪಿಸಿದರೂ ಸ್ವಯಂ ದುಷ್ಟಸ್ವಭಾವದವನೇ ಆಗಿದ್ದನು. ಅವನ ದುಷ್ಟಶಕ್ತಿಯಿಂದ ಆಗಬಹುದಾದ ಸಜ್ಜನರ ಪೀಡೆಗೆ ಕಡಿವಾಣ ಹಾಕುವಂತೆ ದೈವಪ್ರೇರಣೆಯಿಂದಲೇ ದ್ರೋಣಾಚಾರ್ಯರು ಅವನಿಂದ ಇಂತಹ ಕ್ರೂರ ಗುರುದಕ್ಷಿಣೆಯನ್ನು ಬೇಡಿದರೆಂದು ನಾವು ಭಾವಿಸ ಬೇಕಾಗುತ್ತದೆ. ಆದರೂ ದ್ರೋಣಾಚಾರ್ಯರ ದಯಾಭಾವವನ್ನೂ ಆಚಾರ್ಯರು ಸ್ಪಷ್ಟಪಡಿಸುತ್ತಾರೆ. ಗುರುಗಳಿಗಾಗಿ ಏಕಲವ್ಯನು ಮಾಡಿದ ತ್ಯಾಗದಿಂದ ಕರಗಿದ ದ್ರೋಣಾಚಾರ್ಯರು ಈ ಘಟನೆಯ ನಂತರ ರೈವತಕ ಪರ್ವತಕ್ಕೆ ಅವನನ್ನು ಕರೆದುಕೊಂಡು ಹೋಗಿ ಅವನಿಗೆ ವಿಶೇಷ ಶಸ್ತ್ರಾಸ್ತ್ರ ಶಿಕ್ಷಣವನ್ನು ನೀಡಿದರೆಂಬ ಹೊಸ ಸಂಗತಿಯನ್ನು ಆಚಾರ್ಯರು ತಿಳಿಸಿದ್ದಾರೆ.

ಭಗವಾನ್ ಪರಶುರಾಮನು, ಅಂಬೆಗೆ ತಾನು ನೀಡಿದ ವರಕ್ಕನುಗುಣವಾಗಿ ಅವಳನ್ನು ಸ್ವೀಕರಿಸುವಂತೆ ಭೀಷ್ಮನನ್ನು ನಿರ್ಬಂಧಿಸುತ್ತಾನೆ. ತನ್ನ ಪ್ರತೀಕ್ಷೆಗೆ ಬದ್ಧನಾಗಿ ಭೀಷ್ಮನು ಪರಶುರಾಮನ ಆದೇಶವನ್ನು ಪಾಲಿಸುವುದಿಲ್ಲ. ಆಗ ನಡೆದ ಭೀಷ್ಮ-ಪರಶುರಾಮರ ಯುದ್ಧದಲ್ಲಿ ಪರಶುರಾಮನು ಭೀಷ್ಮರಿಂದ ಪರಾಜಿತನಾಗಿದ್ದನೆಂದು ಪ್ರಸಿದ್ಧಿಯಿದೆ. ಆಚಾರ್ಯರು ಇದರ ವಾಸ್ತವ ಸಂಗತಿಯನ್ನು ನಿರೂಪಿಸಿದ್ದಾರೆ. ಇಲ್ಲಿ ನಿಜವಾಗಿ ಪರಶುರಾಮನೇ ಗೆದ್ದಿದ್ದರೂ ತನ್ನ ಭಕ್ತನಾದ ಭೀಷ್ಮನ ಕೀರ್ತಿಯನ್ನು ಸ್ಥಿರ ಪಡಿಸಲು ತಾನು ಸೋತವನಂತೆ ನಟಿಸಿದ್ದಾನೆ. ಭೀಷ್ಮನು ಮದುವೆಯಾಗುವಂತೆ ಮಾಡುವುದಾಗಿ ಅಂಬೆಗೆ ಪರಶುರಾಮನು ವಚನಕೊಟ್ಟಿದ್ದರೂ ಭಕ್ತನಾದ ಭೀಷ್ಮನ ಪ್ರತಿಜ್ಞೆಯನ್ನು ಉಳಿಸುವುದಕ್ಕಾಗಿ ತನ್ನ ಮಾತನ್ನೇ ಭಗವಂತನು ಗೌಣಗೊಳಿಸಿದ್ದಾನೆ. ಭಗವಂತನ ಭಕ್ತವಾತ್ಸಲ್ಯಕ್ಕೆ ಭೀಷ್ಮನೇ ಎರಡು ಬಾರಿ ಉದಾಹರಣೆ ಯೆನಿಸಿದ್ದಾನೆ. ಕುರುಕ್ಷೇತ್ರದ ಯುದ್ಧದಲ್ಲಿ ತಾನು ಅಸ್ತ್ರವನ್ನು ಧರಿಸುವುದಿಲ್ಲವೆಂದು ಶ್ರೀಕೃಷ್ಣನು ಪ್ರತಿಜ್ಞೆ

ಮಾಡಿದ್ದರೂ ಕೃಷ್ಣನು ಅಸ್ತ್ರವನ್ನು ಧರಿಸುವಂತೆ ಮಾಡುವುದಾಗಿ ಭೀಷ್ಮನು ಮಾಡಿದ ಪ್ರತಿಜ್ಞೆಯನ್ನು ಸತ್ಯಗೊಳಿಸುವುದಕ್ಕಾಗಿ ತನ್ನ ನಿಯಮವನ್ನು ತೊರೆದು ಚಕ್ರವನ್ನು ಧರಿಸಿ ಭಕ್ತವಾತ್ಸಲ್ಯವನ್ನು ಭಗವಂತನು ತೋರಿದರೆ ಅಂಬೆಯ ಪ್ರಕರಣದಲ್ಲಿಯೂ ಭೀಷ್ಮನ ಬಗ್ಗೆ ಇದೇ ವಾತ್ಸಲ್ಯವನ್ನು ತೋರಿದ್ದಾನೆ.

ಪಾಂಡವರಲ್ಲಿ ಭೀಮನದು ಅತ್ಯಂತ ಧೀರೋದಾತ್ತ ವ್ಯಕ್ತಿತ್ವ, ಸತ್ಯ, ಧರ್ಮಗಳಲ್ಲಿ ಶೌರ್ಯ, ಪಾಂಡಿತ್ಯಗಳಲ್ಲಿ ಭೀಮಸೇನನಿಗೆ ಸಮಾನರು ಬೇರೆ ಯಾರೂ ಇಲ್ಲವೆಂದು ಮಹಾಭಾರತದಲ್ಲಿಯೇ ಅನೇಕ ಕಡೆ ಹೇಳಿದೆ. ಆದರೆ ಭೀಮನ ಬಗ್ಗೆ ಲೋಕದಲ್ಲಿ ಬಹಳ ತಪ್ಪು ಕಲ್ಪನೆಯು ಮೂಡಿದೆ. ಇದನ್ನೆಲ್ಲ ಪರಿಹರಿಸಿ ಭೀಮನ ಮಹೋನ್ನತ ವ್ಯಕ್ತಿತ್ವವನ್ನು ಆಚಾರ್ಯರು ಬಹಳ ಚೆನ್ನಾಗಿ ತೋರಿಸಿಕೊಟ್ಟಿದ್ದಾರೆ. ಧನುರ್ವಿದ್ಯೆಯಲ್ಲಿ ಅರ್ಜುನನು ಅತ್ಯಂತ ಪ್ರಸಿದ್ಧಿಯನ್ನು ಪಡೆದಿದ್ದಾನೆ. ಆದರೆ ಭೀಮಸೇನನು ಧನುರ್ವಿದ್ಯೆಯಲ್ಲಿ ಇಂತಹ ಪ್ರಾವೀಣ್ಯವನ್ನು ಏಕೆ ತೋರಿಲ್ಲವೆನ್ನುವ ಪ್ರಶ್ನೆ ಹುಟ್ಟುತ್ತದೆ. ಇದಕ್ಕೂ ಸರಿಯಾದ ವಿವರಣೆಯನ್ನು ಆಚಾರ್ಯರು ನೀಡಿದ್ದಾರೆ. ಧನುರ್ವಿದ್ಯೆಯಲ್ಲಿ ಆಯಾಯ ದೇವತೆಗಳನ್ನು ಶತ್ರುಸಂಹಾರಕ್ಕಾಗಿ ಮಂತ್ರಗಳಿಂದ ಪ್ರಾರ್ಥಿಸಬೇಕಾಗುತ್ತದೆ. ತನ್ನ ಲೌಕಿಕ ಪ್ರಯೋಜನಕ್ಕಾಗಿ ದೇವತೆ ಗಳನ್ನು ಪ್ರಾರ್ಥಿಸುವುದು ಭೀಮನಿಗೆ ಇಷ್ಟವಿಲ್ಲ. ತನ್ನ ಸ್ವಾರ್ಥಕ್ಕಾಗಿ ಶ್ರೀಹರಿಯನ್ನೂ ಭೀಮನು ಬೇಡಲಾರ. ಜ್ಞಾನ, ಭಕ್ತಿ, ಭಗವದನುಗ್ರಹದ ಹೊರತು ಭಗವಂತನಿಂದಲೂ ಬೇರೆ ಯಾವ ಲೌಕಿಕ ಇಷ್ಟಾರ್ಥವನ್ನು ಭೀಮನು ಬಯಸಿದವನಲ್ಲ. ಇದು ಭೀಮನ ವೀರವ್ರತ. ಅವನ ಭಾಗವತಧರ್ಮದೀಕ್ಷೆ ಇದಾಗಿದೆ. ಹೀಗಿರುವಾಗ ಲೌಕಿಕ ಲಾಭಕ್ಕಾಗಿ ಬೇರೆ ಬೇರೆ ದೇವತೆಗಳನ್ನು ಪ್ರಾರ್ಥಿಸುವುದು ಹೇಗೆ ? ಆದುದರಿಂದ ಧನುರ್ವಿದ್ಯೆಯಲ್ಲಿ ಆಸಕ್ತಿಯನ್ನು ತೋರಲಿಲ್ಲವೆಂದು ಆಚಾರ್ಯರು ಸ್ಪಷ್ಟಪಡಿಸಿ ಭೀಮಭಕ್ತಿಯ ಉಚ್ಚ ಆದರ್ಶವನ್ನು ನಮಗೆ ತೋರಿಸಿದ್ದಾರೆ.

ಇಲ್ಲಿ ಒಂದು ಪ್ರಶ್ನೆಯುಂಟಾಗಬಹುದು. ತನ್ನ ಸ್ವಾರ್ಥಕ್ಕಾಗಿ ದೇವತೆಗಳನ್ನೂ ಬೇಡದ ಭೀಮಸೇನನು ಏಕಚಕ್ರಾನಗರದಲ್ಲಿ ಬ್ರಾಹ್ಮಣವೇಷದಲ್ಲಿರುವಾಗ ತನ್ನ ಆಹಾರಕ್ಕಾಗಿ ಭಿಕ್ಷಾಟನೆಯನ್ನು ಹೇಗೆ ಮಾಡಿದನು ? ದೇವತೆಗಳನ್ನು ಸ್ವಪ್ರಯೋಜನಕ್ಕಾಗಿ ಪ್ರಾರ್ಥಿಸದವನು ಮನುಷ್ಯರಲ್ಲಿ ಬೇಡಬಹುದೆ? ಈ ಸಂದೇಹವನ್ನು ಆಚಾರ್ಯರು ತಾತ್ಪರ್ಯನಿರ್ಣಯದಲ್ಲಿ ಪರಿಹರಿಸಿದ್ದಾರೆ. ಭೀಮಸೇನನು ಯಾರನ್ನೂ ದೈನ್ಯದಿಂದ ಬೇಡಿಲ್ಲ, ಭಿಕ್ಷಾಟನೆಯನ್ನು ನಡೆಸುವಾಗಲೂ ತನ್ನ ಹುಂಕಾರದ ಗರ್ಜನೆಯಿಂದಲೇ ಜನರಿಂದ ಆಹಾರವನ್ನು ಪಡೆದನು. ಆದಾಯಕರ ಅಧಿಕಾರಿಯು ವ್ಯಾಪಾರಿಗಳಿಂದ ಆದಾಯಕರವನ್ನು ಪಡೆದಂತೆ ಭೀಮಸೇನನು ಜನರಿಂದ ತನ್ನ ಆಹಾರವನ್ನು ಪಡೆದಿದ್ದಾನೆಂದು ವರ್ಣಿಸಿದ್ದಾರೆ. ಹಾಗಾದರೆ ಇದು ಭಿಕ್ಷಾಟನೆಯಿಂದಲೂ ಭೀಕರವಾದ ದರೋಡೆಯೆನಿಸುವುದಿಲ್ಲವೆ ? ಜನರನ್ನು ಹೆದರಿಸಿ ಬೆದರಿಸಿ ಅವರಿಂದ ತನಗೆ ಬೇಕಾದ್ದನ್ನು ಪಡೆಯುವುದು ಗೂಂಡಾಗಿರಿಯಾಗುವುದಿಲ್ಲವೆ ? ಇದಕ್ಕಿಂತ ಭಿಕ್ಷಾಟನೆಯೇ ಹೆಚ್ಚು ಸ್ವೀಕಾರಾರ್ಹವಾಗುತ್ತದೆಯೆಂಬ ಆಕ್ಷೇಪವುಂಟಾಗಬಹುದು. ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ನೆರವೇರಿಸಿದರೆ ಸಮಾಜದಿಂದ ತನಗೆ ಬೇಕಾದ್ದನ್ನು ಪಡೆಯಲು ಅಧಿಕಾರವಿದೆ. ಕಡುಬಡವನೂ ಕರ್ತವ್ಯನಿಷ್ಠನಾಗಿದ್ದರೆ ತನಗೆ ಅವಶ್ಯಕವಾದುದನ್ನು ಜನರಿಂದ ಪಡೆಯಬಹುದು. ಆದರೆ ಕೋಟ್ಯಾಧೀಶನೂ ತನ್ನ ಕರ್ತವ್ಯವನ್ನು ಮಾಡದಿದ್ದರೆ ಅವನಿಗೆ ತನ್ನ ಹಣವನ್ನೇ ಸ್ವೀಕರಿಸಲು ಅಧಿಕಾರವಿಲ್ಲ. ಭೀಮಸೇನನು ಏಕಚಕ್ರಾನಗರದಲ್ಲಿರುವಾಗ ಕ್ಷತ್ರಿಯನಾಗಿ ತಾನು ಮಾಡಬೇಕಾದ ಆರ್ತರ ರಕ್ಷಣೆಯನ್ನು ಅತ್ಯಂತ ಅತಿಶಯಿತವಾಗಿ ಮಾಡಿದನು. ಪ್ರಜೆಗಳ ರಕ್ಷಣೆಯನ್ನು ಮಾಡಬೇಕಾದ ಏಕಚಕ್ರಾನಗರದ ಅರಸನು ತನ್ನ ಜೀವನರಕ್ಷಣೆಗಾಗಿ ತನ್ನ ರಾಜ್ಯದ ಪ್ರಜೆಗಳನ್ನೇ ದಿನಕ್ಕೊಬ್ಬರಂತೆ ಅನೇಕ ಭೋಜನ ಸಾಮಾಗ್ರಿಯ ಜೊತೆಗೆ ಬಕಾಸುರನಿಗೆ ಅರ್ಪಿಸುವಂತಹ ಅಸಹಾಯಸ್ಥಿತಿಯಲ್ಲಿದ್ದಾಗ ತನ್ನ ಜೀವನವನ್ನೇ ಪಣವಾಗಿಟ್ಟುಕೊಂಡು ಬಕಾಸುರನನ್ನು ಪರಿಹರಿಸಿ ಆ ಜನಪದವನ್ನು ರಕ್ಷಿಸಿದ ಭೀಮನು ಅಲ್ಲಿಯ

ಜನರಿಂದ ಪಡೆದ ಆಹಾರವು ಭಿಕ್ಷೆಯೂ ಅಲ್ಲ; ದರೋಡೆಯೂ ಅಲ್ಲ.

ಅಶ್ವತ್ಥಾಮನ ನಾರಾಯಣಾಸ್ತ್ರದಿಂದ ಇಡೀ ಪಾಂಡವ ಸೈನ್ಯವು ತತ್ತರಿಸಿದಾಗ ತಮ್ಮ ಪ್ರಾಣರಕ್ಷಣೆಗಾಗಿ ಅಸ್ತ್ರಗಳನ್ನು ಕೆಳಗಿಟ್ಟು ಅಸ್ತ್ರದೇವತೆಯಾದ ನಾರಾಯಣನಿಗೆ ಪಾಂಡವಸೈನ್ಯದ ವೀರಾಧಿವೀರ ಸೈನಿಕರೆಲ್ಲರೂ ನಮಿಸಿದಾಗ ಭೀಮಸೇನನು ನಾರಾಯಣನಿಗೂ ಶರಣಾಗಲಿಲ್ಲ. ನನ್ನ ಸ್ವಾಮಿಯಾದ ಶ್ರೀಹರಿಗೆ ಯಾವಾಗಲೂ ನಮಸ್ಕರಿಸುತ್ತೇನೆ. ಆದರೆ ತನ್ನ ಜೀವರಕ್ಷಣೆಯ ಸ್ವಾರ್ಥಕ್ಕಾಗಿ ನಾರಾಯಣನಿಗೂ ನಮಸ್ಕರಿಸಲಾರೆ. ಜ್ಞಾನ, ಭಕ್ತಿ, ಅನುಗ್ರಹಗಳಿಗೆ ಮಾತ್ರ ತಾನು ಭಗವಂತನಿಗೆ ಶರಣಾಗುವೆನಲ್ಲದೆ ತನ್ನ ಜೀವವುಳಿಯುವುದಕ್ಕಾಗಿ ದೇವರನ್ನೂ ಬೇಡಲಾರೆನೆಂಬ ಧೀರವ್ರತವನ್ನು ಭೀಮನು ತೋರಿದ್ದಾನೆ. ಮಹಾಭಾರತದ ಭೀಮನ ನಿಜವಾದ ವ್ಯಕ್ತಿತ್ವವನ್ನು ತಾತ್ಪರ್ಯನಿರ್ಣಯದಿಂದಲೇ ನಾವು ಅರಿಯಬಲ್ಲೆವು.

ಶ್ರೀಕೃಷ್ಣನ ಬಗ್ಗೆಯೂ ನಮಗೆ ಸ್ವಲ್ಪವೂ ತಪ್ಪು ಕಲ್ಪನೆಯಾಗದಂತೆ ಅವನ ಗುಣಪೂರ್ಣವಾದ ನಿರ್ದೋಷವಾದ ವ್ಯಕ್ತಿತ್ವವನ್ನು ಇಲ್ಲಿ ವರ್ಣಿಸಲಾಗಿದೆ. ಜರಾಸಂಧನ ಪ್ರಚಂಡಸೈನ್ಯವನ್ನು ಅನೇಕಬಾರಿ ನಿರಾಯಾಸವಾಗಿ ಎದುರಿಸಿ ನುಚ್ಚುನೂರು ಮಾಡಿದ ಕೃಷ್ಣನೇ ಒಮ್ಮೆ ಉದ್ದೇಶಪೂರ್ವಕವಾಗಿ ಆ ಸೈನ್ಯದಿಂದ ತಪ್ಪಿಸಿಕೊಂಡು ಗೋಮಂತಕ ಪರ್ವತಕ್ಕೆ ಓಡಿಹೋಗಿ ಅಡಗಿ ಕುಳಿತುಕೊಳ್ಳುತ್ತಾನೆ. ಮತ್ತೆ ಸೂಕ್ತ ಸಂದರ್ಭದಲ್ಲಿ ಹಠಾತ್ತನೆ ಆ ಸೈನ್ಯದ ಮೇಲೆ ಎರಗಿ ಚೆಲ್ಲಾಪಿಲ್ಲಿಗೊಳಿಸುತ್ತಾನೆ. ಬಲಿಷ್ಠವಾದ ಆಕ್ರಮಣವಾದಾಗ ದುಷ್ಟಸೈನ್ಯದ ಜೊತೆಗೆ ಜಾಣ್ಮೆಯಿಂದ ಹೇಗೆ ವ್ಯವಹರಿಸಬೇಕೆಂಬ ರಾಜನೀತಿಯನ್ನು ಶ್ರೀಕೃಷ್ಣನು ತೋರಿಸಿದ್ದಾನೆಂದು ಆಚಾರ್ಯರು ವಿವರಿಸುತ್ತಾರೆ. ನಮ್ಮ ದೇಶದ ರಾಜರು ವಿದೇಶದ ವಿಮತೀಯ ಪ್ರಚಂಡ ದುಷ್ಟಸೈನ್ಯವನ್ನು ಎದುರಿಸುವಾಗಲೂ ಇದೇ ನೀತಿಯನ್ನು ಅನುಸರಿಸಿದ್ದರೆ ನಮ್ಮ ರಾಷ್ಟ್ರವು ಅನೇಕ ಶತಮಾನಗಳ ಗುಲಾಮಗಿರಿಯನ್ನು ಅನುಭವಿಸುತ್ತಿರಲಿಲ್ಲ.

ಗೋಪಿಕಾಸ್ತ್ರೀಯರ ಜೊತೆಗೆ ಶ್ರೀಕೃಷ್ಣನ ವ್ಯವಹಾರದ ಹಿಂದಿರುವ ದೇವರಹಸ್ಯ ಮುಂತಾದ ಅನೇಕ ದಾರ್ಶನಿಕ ಸಂಗತಿಗಳನ್ನು ವಿವರಿಸಿ ಅವನ ಮಹಾಮಹಿಮೆ, ಜನನಾದಿ ವಿದೂರತೆ ಮೊದಲಾದ ವಿಶಿಷ್ಟಪ್ರಮೇಯಗಳನ್ನೂ ಆಚಾರ್ಯರು ಈ ಗ್ರಂಥದಲ್ಲಿ ನಮಗೆ ತಿಳಿಸಿಕೊಟ್ಟಿದ್ದಾರೆ.

(ಶ್ರೀ ಸರ್ವಮೂಲಗ್ರಂಥಗಳು – ಸಂಪುಟ – ೮, ಮಹಾಭಾರತ ತಾತ್ಪರ್ಯ ನಿರ್ಣಯ, ಭಾಗ –೨, ಅನುವಾದ – ಹಯವದನ ಪುರಾಣಿಕ. ೧೯೯೮, ಪ್ರ : ಅಖಿಲ ಭಾರತ ಮಾಧ್ವ ಮಹಾಮಂಡಲ, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು.)

●

೩-೧೩

ಗೀತಾಪ್ರಸ್ಥಾನ

ಭಾರತದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪ್ರಸ್ಥಾನತ್ರಯಕ್ಕೆ ವಿಶಿಷ್ಟವಾ ದ ಸ್ಥಾನವಿದೆ. ಅದರ ನೆಲೆಯಲ್ಲಿಯೇ ನಮ್ಮ ಸಮಗ್ರ ತತ್ವಜ್ಞಾನವು ವಿಸ್ತಾರವಾಗಿ ಬೆಳೆದು ನಿಂತಿದೆ. ಉಪನಿಷತ್, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳೇ ಈ ಪ್ರಸ್ಥಾನತ್ರಯ. ಅದರಲ್ಲಿಯೂ ಭಗವದ್ಗೀತೆಯು ವಿಶ್ವದಲ್ಲಿಯೇ ಸರ್ವಮಾನ್ಯವೂ, ವೈಶಿಷ್ಟ್ಯಪೂರ್ಣವು ಆದ ಮಹಾಕೃತಿಯೆನಿಸಿದೆ. ಸರಳವೂ ಸತ್ವಪೂರ್ಣವೂ ಆದ ಶೈಲಿಯಲ್ಲಿ ಜೀವನದ ಎಲ್ಲ ಅಂಶಗಳಿಗೂ ಸ್ಫೂರ್ತಿಯನ್ನು ನೀಡುವ, ಚಿಕ್ಕದಾದರೂ ಸರ್ವಸಂಗ್ರಾಹಕವಾದ ಇಂತಹ ಉದಾತ್ತ ತತ್ವಗ್ರಂಥವು ಜಗತ್ತಿನಲ್ಲಿ ಇನ್ನೊಂದು ದೊರೆಯಲಾರದು. ಭಗವಾನ್ ವೇದವ್ಯಾಸರಿಂದ ರಚಿತವಾದ, ಶ್ರೀಕೃಷ್ಣ-ಅರ್ಜುನರ ಸಂವಾದ ರೂಪವಾದ ಈ ಭಗವದ್ಗೀತೆಗೆ ಶ್ರೀಮಧ್ವಾಚಾರ್ಯರು ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯವೆಂದು ಎರಡು ವ್ಯಾಖ್ಯಾನಗಳನ್ನು ರಚಿಸಿರುವರು. ಸೂರ್ಯ-ಚಂದ್ರರು ತಮ್ಮ ಕಿರಣಗಳಿಂದ ವಿಶ್ವವನ್ನೇ ಪ್ರಕಾಶಿಸುವಂತೆ ಈ ಎರಡು ಗ್ರಂಥಗಳು ತಾತ್ವಿಕ ಪ್ರಪಂಚವನ್ನೇ ನಮಗೆ ತೆರೆದು ತೋರಿಸುತ್ತವೆಯೆಂದು ತ್ರಿವಿಕ್ರಮ ಪಂಡಿತಾಚಾರ್ಯರು ಈ ಗ್ರಂಥವನ್ನು ಪ್ರಶಂಸಿಸಿದ್ದಾರೆ.

ತಾನು ''ಗೀತಾರ್ಥಂ ವಕ್ಷ್ಯಾಮಿ'' – ಗೀತೆಯ ಅರ್ಥವನ್ನು ವಿವರಿಸುತ್ತೇನೆಂದು ಶ್ರೀಮಧ್ವಾಚಾರ್ಯರು ಹೇಳಿದ್ದಾರೆ. ತಮ್ಮ ತಮ್ಮ ಪಕ್ಷದ ಮೇಲಿನ ಆಗ್ರಹದಿಂದ ತಮ್ಮ ವಿಚಾರವನ್ನು ಗೀತೆಯ ಮೇಲೆ ಹೇರಿ ಗೀತೆಯ ವ್ಯಾಖ್ಯಾನದ ಹೆಸರಿನಿಂದ ತಮ್ಮ ವಾದಗಳನ್ನೇ ಅನೇಕರು ವ್ಯಕ್ತಪಡಿಸಿದ್ದರೆ ತಾನು ಗೀತೆಯ ನಿಜವಾದ ಅರ್ಥವನ್ನೇ ಹೇಳುತ್ತಿದ್ದೇನೆಂದು ಆಚಾರ್ಯರ ಆಶಯವಾಗಿದೆ.

ಗೀತೆಯು ಮಹಾಭಾರತದ ಒಂದು ಭಾಗ. ಆದುದರಿಂದ ಗೀತೆಯ ಮಹತ್ವವನ್ನು ತಿಳಿಸುವುದಕ್ಕಾಗಿ ಮಹಾಭಾರತದ ಮಹತ್ವವನ್ನು ಪ್ರಾರಂಭದಲ್ಲಿ ವರ್ಣಿಸಿದ್ದಾರೆ ''ಮಹಾಭಾರತವು ಸರ್ವಶಾಸ್ತ್ರದ ಸಾರವಾಗಿದೆ''. ''ಬ್ರಹ್ಮಾದಿ ದೇವತೆಗಳೂ, ಋಷಿಗಳೂ ಭಾರತವನ್ನೂ ವೇದಾದಿ ಇತರ ಶಾಸ್ತ್ರಗಳನ್ನೂ ತೂಗಿ ನೋಡಿದಾಗ ಭಾರತದ ಭಾರವೇ ಹೆಚ್ಚಾಯಿತು. ಭಾರತದಲ್ಲೇ ಹೆಚ್ಚಿನ ಅರ್ಥಗೌರವವನ್ನು ಕಂಡರು. ಆದುದರಿಂದಲೇ ಇದು ಮಹಾಭಾರತವೆನಿಸಿದೆ''.

''ಲೋಕದಲ್ಲಿ ಧರ್ಮ, ಜ್ಞಾನಗಳ ಲೋಪವಾದಾಗ ಬ್ರಹ್ಮ ರುದ್ರಾದಿಗಳ ಪ್ರಾರ್ಥನೆಯಂತೆ ಸರ್ವಜ್ಞನೂ, ಸಜ್ಜನ ಕೃಪಾಳುವೂ ಆದ ಭಗವಂತನು ವ್ಯಾಸ ರೂಪದಲ್ಲಿ ಅವತರಿಸಿ ಸಜ್ಜನರ ಉದ್ಧಾರಕ್ಕಾಗಿ ಮಹಾಭಾರತವನ್ನು ರಚಿಸಿದನು. ವೇದಾರ್ಥಗಳ ಜೊತೆಗೆ ತನ್ನ ಜ್ಞಾನಕ್ಕೆ ಮಾತ್ರ ಗೋಚರವಾದ ವೇದದಲ್ಲಿ

ಹೇಳದ ವಿಷಯಗಳೂ ಮಹಾಭಾರತದಲ್ಲಿ ಇವೆ. ಆದುದರಿಂದ ಇದು ವೇದಕ್ಕಿಂತಲೂ ಶ್ರೇಷ್ಠವಾಗಿದೆ''- ಎಂದು ಮುಂತಾಗಿ ಅನೇಕ ಗ್ರಂಥಗಳ ಆಧಾರದಿಂದ ಮಹಾಭಾರತದ ಮಹತ್ವವನ್ನು ಸಮರ್ಥಿಸಿ ಗೀತೆಯು ಮಹಾಭಾರತದಲ್ಲಿಯೇ ಸಾರಭಾಗವಾಗಿರುವುದರಿಂದ ಅದು ಅತ್ಯಂತ ಶ್ರೇಷ್ಠ ಪ್ರಮಾಣವೆಂದು ಪ್ರತಿಪಾದಿಸಿದ್ದಾರೆ.

ಗೀತೆಯ ಸಾರ ಸಂದೇಶ

ಪ್ರತಿಯೊಬ್ಬನೂ ತನ್ನ ವೃತ್ತಿಯನ್ನು ಭಗವಂತನ ಆರಾಧನೆಯೆಂದು ಭಾವಿಸಿ ಭಕ್ತಿಯಿಂದ ಅದನ್ನು ನಡೆಸಬೇಕು. ತನ್ನ ಕರ್ತವ್ಯದಿಂದ ಭಗವಂತನನ್ನು ಪೂಜಿಸಬೇಕು. ಇದೇ ಧರ್ಮ. ಇದಕ್ಕೆ ವಿರುದ್ಧವಾದುದೆಲ್ಲಾ ಅಧರ್ಮ. ಜಗತ್ತಿನ ಎಲ್ಲ ವಸ್ತುಗಳೂ, ನಮ್ಮ ಸಕಲ ಪ್ರವೃತ್ತಿಗಳೂ ಭಗವಂತನ ಆಧೀನ. ಅವನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಭಗವಂತನ ಭಕ್ತಿಯ ನೆಲೆಯಲ್ಲಿ ಸೇವಾಭಾವದಿಂದ ನಾವು ನಮ್ಮ ಕರ್ತವ್ಯವನ್ನು ಮಾಡಬೇಕು ; ಇದೇ ಭಗವದ್ಗೀತೆಯ ಸಾರ ಸಂದೇಶವೆಂದು ಆಚಾರ್ಯರು ಗೀತಾತಾತ್ಪರ್ಯದಲ್ಲಿ ಪ್ರತಿಪಾದಿಸಿದ್ದಾರೆ. ''ಲೋಕ ವ್ಯವಸ್ಥೆಗಾಗಿ ಭಗವಂತ ಏರ್ಪಡಿಸಿದ ಮಾನವೀಯ ಶಾಶ್ವತ ಮೌಲ್ಯಗಳನ್ನು ಮುರಿದು ಸ್ವಚ್ಛಂದ ಪ್ರವೃತ್ತಿಯಿಂದ ವರ್ತಿಸುವ ಭಗವದ್ವಿರೋಧಿಯಾದ ದುಷ್ಟ ಕೂಟವನ್ನು ನಿಗ್ರಹಿಸಿ ಸಮಾಜವ್ಯವಸ್ಥೆಯನ್ನು ಕಾಪಾಡುವುದು ಕ್ಷತ್ರಿಯ ಕರ್ತವ್ಯ. ಅರ್ಜುನನಿಗೂ ಇಂತಹ ಕರ್ತವ್ಯವು ಕಾದಿತ್ತು, ದುರ್ಯೋಧನ ಮುಂತಾದವರು ಇಂತಹ ದುಷ್ಟಕೂಟದ ಅಗ್ರಣಿಗಳು. ಭಗವಂತನು ಸಾರಿದ ನೀತಿ-ನಿಯಮಗಳನ್ನು ಉಲ್ಲಂಘಿಸಿ ಸ್ವಾರ್ಥಸಾಧನೆಗಾಗಿ ಯಾವ ಕುಟಿಲ ಮಾರ್ಗವನ್ನೂ ಅನುಸರಿಸಲು ಸಿದ್ಧರಾದವರು. ಭೀಷ್ಮಾದಿಗಳು ಸಜ್ಜನರಾಗಿದ್ದರೂ ಇವರ ಈ ದುಷ್ಕೃತಿಗಳನ್ನು ಪ್ರತಿಭಟಿಸಲಿಲ್ಲ. ಮಾತ್ರವಲ್ಲದೆ ಮನಸ್ಸಿಲ್ಲದಿದ್ದರೂ ಇವರಿಗೆ ಯುದ್ಧದಲ್ಲಿ ಸಹಾಯಕರಾಗಿ ನಿಂತಿದ್ದಾರೆ. ಆದುದರಿಂದ ಆ ದುಷ್ಟಕೂಟದ ಕೃತಿಗಳಲ್ಲಿ ಇವರೂ ಸಹಭಾಗಿಗಳಾಗಿದ್ದಾರೆ. ಇವರನ್ನು ನಿಗ್ರಹಿಸುವುದು ಅರ್ಜುನನ ಪರಮ ಕರ್ತವ್ಯವಾಗಿತ್ತು. ಆದರೆ ತನ್ನ ಮುಂದಿರುವ ಬಂಧು - ಬಾಂಧವರು ಮತ್ತು ಗುರುಗಳನ್ನು ನೋಡಿ ವ್ಯಾಮೋಹಕ್ಕೆ ಒಳಗಾಗಿ ತನ್ನ ಕರ್ತವ್ಯವನ್ನೂ ಅಧರ್ಮವೆಂದು ಭ್ರಮಿಸಿ ಅರ್ಜುನನು ಹಿಂದೆ ಸರಿದಾಗ ನಿಜವಾದ ಧರ್ಮದ ಸಂದೇಶವನ್ನು ಶ್ರೀಕೃಷ್ಣನು ಈ ಗೀತೆಯ ಮುಖಾಂತರ ನೀಡಿದ್ದಾನೆ.

''ಸರ್ವಧರ್ಮಾನ್ ಪರಿತ್ಯಜ್ಯ''

''ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ'' ಎಂದು ಮುಂತಾದ ವಾಕ್ಯಗಳಿಂದ ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಭಗವಂತನ ಪೂಜಾರೂಪವಾಗಿ ಮಾಡಬೇಕು. ಅದರಿಂದಲೇ ಮಾನವನ ಸಿದ್ಧಿ ಎಂಬ ವಿಚಾರವನ್ನು ಭಗವದ್ಗೀತೆಯು ಸ್ಪಷ್ಟಪಡಿಸಿದೆ. ಆದರೆ ''ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ'' ಎಂಬ ವಾಕ್ಯದಲ್ಲಿ ಭಕ್ತನು ಎಲ್ಲ ಕರ್ತವ್ಯಗಳನ್ನೂ ತೊರೆದು ಭಗವಂತನನ್ನು ಶರಣಾಗಬೇಕೆಂದು ಹೇಳಿರುವುದರಿಂದ ಭಕ್ತನಿಗೆ ಯಾವುದೇ ಕರ್ತವ್ಯದ ನಿರ್ಬಂಧವಿಲ್ಲವೆಂದು ಕೆಲವರು ವಾದಿಸುತ್ತಾರೆ. ಅದರಂತೆ ''ಯಸ್ತು ಆತ್ಮರತಿರೇವ ಸ್ಯಾತ್ ಆತ್ಮತೃಪ್ತಶ್ಚ ಮಾನವಃ । ಆತ್ಮನ್ಯೇವ ಚ ಸಂತುಷ್ಟಃ ತಸ್ಯ ಕಾರ್ಯಂ ನ ವಿದ್ಯತೇ'' ಎಂಬುದಾಗಿ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು ಅವನಲ್ಲಿಯೇ ಮಗ್ನನಾದ ಜ್ಞಾನಿಯೂ ಮಾಡಬೇಕಾದ ಯಾವ ಕರ್ತವ್ಯವೂ ಇಲ್ಲವೆಂದು ಹೇಳಿರುವುದರಿಂದ ಜ್ಞಾನವನ್ನು ಪಡೆದ ನಂತರ ಕರ್ತವ್ಯ ನಿರ್ಬಂಧವಿಲ್ಲವೆಂದೂ ಕೆಲವರು ಹೇಳುವರು. ಇವೆರಡೂ ಗೀತೆಗೆ ಸಮ್ಮತವಲ್ಲವೆಂದು ಶ್ರೀಮಧ್ವಾಚಾರ್ಯರು ಪ್ರತಿಪಾದಿಸಿದ್ದಾರೆ. ''ಮತ್‌ಕರ್ಮಕೃತ್ ಮತ್‌ಪರಮೋ ಮದ್ಭಕ್ತಃ ಸಂಗವರ್ಜಿತಃ'' ಎಂಬುದಾಗಿ ಗೀತೆಯಲ್ಲಿ ಭಕ್ತನೂ ದುಷ್ಟಕರ್ಮಗಳ ಸಂಪರ್ಕವಿಲ್ಲದೆ ಭಗವಂತನ

ಸೇವಾರೂಪವಾದ ಕರ್ಮವನ್ನು ಮಾಡಬೇಕೆಂದು ಹೇಳಿರುವುದರಿಂದ ಭಕ್ತನಿಗೂ ಕರ್ತವ್ಯದ ಹೊಣೆಯಿದೆಯೆಂಬುದೇ ಗೀತೆಯ ಆಶಯ. ಭಗವಂತನ ಆರಾಧನೆಯ ಮನೋಭಾವವಿಲ್ಲದ ಸ್ವಾರ್ಥ ಮನೋಭಾವದ ಕರ್ಮಗಳನ್ನು ಬಿಡಬೇಕು ಎಂಬುದೇ 'ಸರ್ವಧರ್ಮಾನ್ ಪರಿತ್ಯಜ್ಯ' ಈ ಶ್ಲೋಕದ ಅಭಿಪ್ರಾಯವಾಗಿದೆ. ಧರ್ಮದ ತಾತ್ವಿಕ ಫಲವನ್ನು ಬಯಸದಿರುವುದೇ ಧರ್ಮತ್ಯಾಗವೆನಿಸುತ್ತದೆಯಲ್ಲದೆ ಧರ್ಮವನ್ನೇ ಪರಿತ್ಯಜಿಸುವುದಲ್ಲ. 'ದುಷ್ಟ ನಿಗ್ರಹ ರೂಪವಾದ ಧರ್ಮವು ನಿನ್ನ ಧರ್ಮ. ಅದನ್ನು ನೀನು ಆಚರಿಸಲೇಬೇಕು' ಎಂದು ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿ ಇದೀಗ 'ಎಲ್ಲ ಧರ್ಮಗಳನ್ನು ಪರಿತ್ಯಜಿಸು' ಎಂಬುದಾಗಿ ಕೃಷ್ಣನು ಹೇಳಲು ಸಾಧ್ಯವೇ ? ಅದುದರಿಂದಲೇ 'ಸರ್ವಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ' ಎಂಬುದಾಗಿ ಕರ್ಮ ತ್ಯಾಗವೆಂದರೆ ಕರ್ಮವನ್ನು ಬಿಡುವುದಲ್ಲ. ಅದರ ಫಲವನ್ನು ತ್ಯಜಿಸುವುದೇ ನಿಜವಾದ ಕರ್ಮತ್ಯಾಗವೆಂದು ಗೀತೆಯು ವಿವರಿಸಿದೆ. ಆದುದರಿಂದ ಭಕ್ತನಿಗೆ ಯಾವುದೇ ಕರ್ತವ್ಯದ ನಿರ್ಬಂಧವಿಲ್ಲವೆಂದು ಭಾವಿಸಬಾರದು.

ಜ್ಞಾನಿಗೂ ಕರ್ತವ್ಯವು ಅನಿವಾರ್ಯ

ಅದರಂತೆ ಜ್ಞಾನಿಯೂ ಕರ್ತವ್ಯವನ್ನು ಮಾಡಲೇಬೇಕೆಂದು ಗೀತೆಯು ಸ್ಪಷ್ಟಪಡಿಸಿದೆ. ಅರ್ಜುನನು ಸ್ವಯಂ ಜ್ಞಾನಿಯೇ ಆಗಿರುವನು. ಬ್ರಹ್ಮದರ್ಶನವನ್ನು ಪಡೆಯದವರು ದೇವತೆಗಳ ಪದವನ್ನು ಏರಲಾರರು. ಆದುದರಿಂದ ಇಂದ್ರನ ಅವತಾರನಾದ ಅರ್ಜುನನು ಪರಮಜ್ಞಾನಿಯೇ ಆಗಿರುವನು. ಗೀತೆಯಲ್ಲಿ ಅರ್ಜುನನು ಸಾಕ್ಷಾತ್ಕಾರವನ್ನು ಪಡೆದ ಮಹಾಜ್ಞಾನಿಯೆಂದು ಉಲ್ಲೇಖಿಸಲಾಗಿದೆ. ಜ್ಞಾನಿಗಳಿಗೂ ಕೆಲವೊಮ್ಮೆ ಜ್ಞಾನದ ಅಭಿಭವವಾಗುವುದುಂಟು. ಹೀಗೆ ಪರಮಜ್ಞಾನಿಯಾದ ಅರ್ಜುನನಿಗೆ ಶ್ರೀಕೃಷ್ಣನು ಕರ್ತವ್ಯವನ್ನು ವಿಧಿಸಿದ್ದರಿಂದ ಅಪರೋಕ್ಷ ಜ್ಞಾನಿಗಳಿಗೂ ಕರ್ತವ್ಯದ ವಿನಾಯಿತಿಯಿಲ್ಲವೆಂದು ಸಿದ್ಧವಾಗುತ್ತದೆ. ಭಗವದ್ಗೀತೆಯಲ್ಲಿ ಜ್ಞಾನಿಗಳೂ ಕರ್ತವ್ಯವನ್ನು ಆಚರಿಸಲೇಬೇಕೆಂದು ಹೇಳುವ ಅನೇಕ ವಾಕ್ಯಗಳನ್ನು ನಾವು ಕಾಣಬಹುದು. ಭಗವಂತನೇ ತನ್ನ ಉದಾಹರಣೆಯನ್ನು ತೋರಿಸಿ ಎಲ್ಲರೂ ಕರ್ತವ್ಯವನ್ನು ಆಚರಿಸಲೇಬೇಕೆಂದು ಆದೇಶ ನೀಡಿದ್ದಾನೆ. ಅಜ್ಞಾನದ ಸ್ಥಿತಿಯಲ್ಲಿ ಇರುವ ಕೆಳಮಟ್ಟದ ಜನರಿಗೆ ಮಾತ್ರ ಕರ್ತವ್ಯದ ನಿರ್ಬಂಧ, ಸಾಕ್ಷಾತ್ಕಾರದ ಮಟ್ಟವನ್ನು ತಲುಪಿದವರಿಗೆ ಅದರ ಅವಶ್ಯಕತೆಯಿಲ್ಲವೆನ್ನುವುದು ಗೀತೆಗೆ ಸಮ್ಮತವಲ್ಲ. ಜ್ಞಾನಿಗಳೇ ಇರಲಿ, ಅಜ್ಞಾನಿಗಳೇ ಇರಲಿ ಈ ಜಗತ್ತಿನಲ್ಲಿ ಇರುವವರೆಲ್ಲರೂ ತಮ್ಮ ಹೊಣೆಗಾರಿಕೆಯ ಕರ್ತವ್ಯವನ್ನು ನಿರ್ವಹಿಸಲೇಬೇಕು. ಭಗವತ್ ಸಾಕ್ಷಾತ್ಕಾರ ಪಡೆದ ಜ್ಞಾನಿಗಳು ಕರ್ತವ್ಯವನ್ನು ಏಕೆ ಆಚರಿಸಬೇಕು ? ಅವರಿಗೆ ಮುಕ್ತಿಯಾಗುವುದು ನಿಶ್ಚಿತವಾಗಿರುವಾಗ ಕರ್ತವ್ಯಾಚರಣೆಯಿಂದ ಅವರಿಗೆ ಫಲವೇನು ? ಎಂಬ ಪ್ರಶ್ನೆ ಬರಬಹುದು. ಅಜ್ಞಾನಿಗಳು ತಮ್ಮ ಕರ್ತವ್ಯ ಸಾಧನೆಯಿಂದ ಅಂತಃಕರಣದ ಮಾಲಿನ್ಯವನ್ನು ಕಳೆದುಕೊಂಡು ಸಾಕ್ಷಾತ್ಕಾರದ ಸಾಧನೆಯಲ್ಲಿ ಮುನ್ನಡೆಯಲು ಸಮರ್ಥರಾಗುವುದಾದರೆ ಜ್ಞಾನವನ್ನು ಪಡೆದ ಸಿದ್ಧಪುರುಷರು ತಮ್ಮ ಕರ್ತವ್ಯಾಚಾರಣೆಯಿಂದ ಮುಕ್ತಿಯಲ್ಲಿ ಆನಂದಾತಿಶಯವನ್ನು ಪಡೆಯುತ್ತಾರೆ. ಹೀಗೆ ಜ್ಞಾನಿಗಳಿಗೂ ಕರ್ತವ್ಯವನ್ನು ಆಚರಿಸುವುದರಿಂದ ವಿಶೇಷ ಫಲವಿದೆ. ಈ ರೀತಿ ಜ್ಞಾನಿಗಳೂ, ಅಜ್ಞಾನಿಗಳೂ ಕರ್ತವ್ಯದ ಅನುಷ್ಠಾನದಿಂದ ಬೇರೆ ಬೇರೆ ಫಲಗಳನ್ನು ಪಡೆಯುತ್ತಾರೆ.

'ಯಸ್ತ್ವಾತ್ಮರತಿರೇವ ಸ್ಯಾತ್' ಎಂಬುದಾಗಿ ಹಿಂದೆ ಉದಾಹರಿಸಿದ ವಾಕ್ಯಗಳಲ್ಲಿ ಜ್ಞಾನಿಗಳು ಕರ್ತವ್ಯವನ್ನು ಆಚರಿಸಬೇಕಿಲ್ಲವೆಂದು ಹೇಳಿಲ್ಲ, ಮುಕ್ತಿಯನ್ನು ಪಡೆದ ಮೇಲೆ ಕರ್ತವ್ಯದ ನಿರ್ಬಂಧವಿಲ್ಲ. ಮುಕ್ತಿಯನ್ನು ಪಡೆಯುವವರೆಗೂ ಕರ್ತವ್ಯವನ್ನು ಮಾಡಲೇಬೇಕೆಂದೇ ಆ ವಾಕ್ಯದ ಅಭಿಪ್ರಾಯವಾಗಿದೆ. ಇಲ್ಲಿ ಹೇಳಿರುವ ಆತ್ಮರತಿಯೆಂದರೆ ಮುಕ್ತಿಯೆಂದೇ ಅರ್ಥ. ಆದುದರಿಂದ ಸಾಕ್ಷಾತ್ಕಾರದ ಹಂತ

ದಲ್ಲಿಯೂ ಕರ್ತವ್ಯದ ಆಚರಣೆಯು ಅವಶ್ಯವೆಂದೇ ಗೀತೆಯ ಅಭಿಪ್ರಾಯವಾಗಿದೆ.

ಸಾಧಕರು ಜ್ಞಾನವನ್ನು ಪಡೆದ ನಂತರವೂ ಕರ್ತವ್ಯವನ್ನು ಆಚರಿಸಲೇಬೇಕಿದ್ದರೆ ಗೀತೆಯ ಜ್ಞಾನಯೋಗ ಮತ್ತು ಕರ್ಮಯೋಗ ಎಂಬುದಾಗಿ ಸಾಧನೆಯ ಎರಡು ಪ್ರಕಾರಗಳನ್ನು ಹೇಳಿರುವುದರ ಔಚಿತ್ಯವೇನು ? ಎನ್ನುವ ಸಂದೇಹ ಬರಬಹುದು. ಇಲ್ಲಿ ಜ್ಞಾನಯೋಗವೆಂದು ಯತಿಧರ್ಮವಾದ ಸನ್ಯಾಸವನ್ನು ಹೇಳಿದೆ. ಸನ್ಯಾಸಿಗಳೂ ಪೂರ್ತಿಯಾಗಿ ಕರ್ಮವನ್ನು ಬಿಡಲಾರರು. 'ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್' – ಏನೂ ಕಾರ್ಯವನ್ನು ಮಾಡದೆ ಜಗತ್ತಿನಲ್ಲಿ ಯಾರೂ ಒಂದು ಕ್ಷಣವೂ ಇರಲಾರರೆಂದು ಗೀತೆಯು ಕರ್ಮಪರಿತ್ಯಾಗದ ಅವ್ಯವಹಾರ್ಯತೆಯನ್ನು ಪ್ರತಿಪಾದಿಸಿದೆ. ಉಳಿದ ಸಂಸಾರಿಗಳಂತೆ ಜಗತ್ತಿನ ವ್ಯವಹಾರದಲ್ಲೇ ಮುಳುಗದೆ ಲೌಕಿಕ ಕಾರ್ಯಗಳನ್ನು ಆದಷ್ಟು ಕಡಿಮೆ ಮಾಡಿಕೊಂಡು ನಿಷ್ಕಾಮನೆಯಿಂದ ಅವಶ್ಯವಾದ ಸತ್ಕರ್ಮಗಳನ್ನು ಮಾಡಿಕೊಂಡು ವಿಶೇಷವಾಗಿ ಜ್ಞಾನಮಾರ್ಗ ನಿರತರಾದ ಯತಿಗಳನ್ನು ಜ್ಞಾನಯೋಗಿಗಳೆಂದು ಇಲ್ಲಿ ಕರೆಯಲಾಗಿದೆ. ಹಣ ಕಡಿಮೆ ಇರುವ ವ್ಯಕ್ತಿಯನ್ನು ನಿರ್ಧನನೆಂದು ಕರೆಯುವಂತೆ ಕರ್ಮವು ಕಡಿಮೆ ಇರುವುದರಿಂದ ಅವರನ್ನು ಜ್ಞಾನಯೋಗಿಗಳೆಂದು ಹೇಳಲಾಗಿದೆ. ಅವರು ಪೂರ್ತಿಯಾಗಿ ಕರ್ಮವನ್ನು ಪರಿತ್ಯಜಿಸಿದ್ದಾರೆಂದು ಅದರ ಅರ್ಥವಲ್ಲ. ಅಂತೂ ಮುಕ್ತಿಯವರೆಗೆ ಜ್ಞಾನಿಗಳಿಗೂ ಅಜ್ಞಾನಿಗಳಿಗೂ ಕರ್ತವ್ಯವು ಅನಿವಾರ್ಯವೆಂದೇ ಗೀತೆಯ ಅಭಿಪ್ರಾಯ.

ಕರ್ತವ್ಯ ಮತ್ತು ಭಕ್ತಿ

ಈ ಕರ್ತವ್ಯಾಚರಣೆಯ ಹಿನ್ನೆಲೆಯಲ್ಲಿ ಭಕ್ತಿ ಮತ್ತು ಭಗವತ್ ಸೇವಾಭಾವವೂ ಅವಶ್ಯವೆಂದು ಗೀತೆಯ ಆಶಯವಾಗಿದೆ. 'ಅಹಂ ಸರ್ವಸ್ಯ ಪ್ರಭವಃ ಮತ್ತಃ ಸರ್ವಂ ಪ್ರವರ್ತತೇ', 'ಮತ್ತಃ ಪರತರಂ ನಾನ್ಯತ್' ಮುಂತಾದ ಅನೇಕಾನೇಕ ವಾಕ್ಯಗಳಿಂದ ಜಗತ್ತೆಲ್ಲವೂ ಭಗವಂತನ ಅಧೀನವೆಂದೂ ಅವನೇ ಸರ್ವೋತ್ತಮನೆಂದೂ ಗೀತೆಯು ನಿಚ್ಚಳವಾಗಿ ಸಾರಿದೆ.

ಈ ಭಗವಂತನು ಯಾರು ? ಅನೇಕ ದೇವತೆಗಳಲ್ಲಿ ಸರ್ವೋತ್ತಮನಾದ ಭಗವಂತನು ಯಾರು ? ಎಂಬುದನ್ನು ನಿರ್ಧರಿಸುವುದು ಹೇಗೆ ? ಮುಂತಾದ ಗೊಂದಲಗಳನ್ನು ವೇದೋಪನಿಷತ್ತುಗಳೇ ಪರಿಹರಿಸಿವೆ. 'ಏಕೋ ನಾರಾಯಣ ಆಸೀತ್ ನ ಬ್ರಹ್ಮಾ ನ ಚ ಶಂಕರಃ' – ಬ್ರಹ್ಮ, ರುದ್ರ , ಮೊದಲಾದ ಯಾವ ದೇವತೆಗಳೂ ಇಲ್ಲದ ಪ್ರಳಯ ಕಾಲದಲ್ಲಿ ನಾರಾಯಣನು ಇದ್ದನು. 'ನ ತೇ ವಿಷ್ಣೋ ಜಾಯಮಾನೋ ನ ಜಾತಃ – ಭೂತ, ಭವಿಷ್ಯತ್, ವರ್ತಮಾನ ಕಾಲಗಳ ಯಾವ ವ್ಯಕ್ತಿಗಳೂ ವಿಷ್ಣುವಿಗೆ ಸಮವೆನಿಸಲಾರರು ಮುಂತಾದ ವೇದೋಪನಿಷತ್ತುಗಳ ಬಹುವಾಕ್ಯಗಳು ವಿಷ್ಣುವೇ ಪರಮ ಪುರುಷನೆಂಬುದನ್ನೂ ನಿರ್ಧಾರವಾಗಿ ತಿಳಿಸಿವೆ.

ಇಂತಹ ಸರ್ವೋತ್ತಮನಾದ ಭಗವಂತನಲ್ಲಿ ನಮ್ಮ ಭಕ್ತಿಯು ಹಂತ ಹಂತವಾಗಿ ಬೆಳೆಯಬೇಕು. ವ್ಯಾಪಾರದಿಂದ ಹಣವನ್ನು ಗಳಿಸಿ ಅದರಿಂದ ವ್ಯಾಪಾರವನ್ನು ಪುನಃ ಬೆಳೆಸಿ ಹೆಚ್ಚು ಹಣವನ್ನು ಪಡೆಯುವಂತೆ ಭಕ್ತಿ ಪೂರ್ವಕವಾದ ಕರ್ತವ್ಯಾಚರಣೆಯಿಂದ ಉತ್ತಮ ಜ್ಞಾನವನ್ನು ಪಡೆದಾಗ ಭಗವಂತನಲ್ಲಿ ವಿಶೇಷ ಭಕ್ತಿಯುಂಟಾಗುತ್ತದೆ. ಈ ಪ್ರೇಮಾತಿಶಯದಿಂದ ಭಗವಂತನ ಅಖಂಡ ಧ್ಯಾನವನ್ನು ನಡೆಸಿ ಅವನ ಸಾಕ್ಷಾತ್ಕಾರವನ್ನು ಪಡೆದಾಗಲಂತೂ ಇನ್ನೂ ಅತಿಶಯಿತವಾದ ಭಕ್ತಿಯು ಬೆಳೆಯುವುದು. ಈ ಭಕ್ತಿಯ ಬಲದಿಂದಲೇ ಜೀವನಿಗೆ ಭವಬಂಧನದ ಮೋಚನೆಯಾಗುವುದು. ಸಂಸಾರದಲ್ಲಿ ಈ ಭಕ್ತಿಯು ಮುಕ್ತಿಗೆ ಒಂದು ಉಪಕರಣವೆನಿಸಿದ್ದರೆ ಮುಕ್ತಿಯಲ್ಲಿ ಭಕ್ತಿಯು ಜೀವಾತ್ಮನ ಸಹಜ ಸ್ವರೂಪವೆನಿಸುವುದು. ಭಗವಂತನ ಜ್ಞಾನ ಮತ್ತು ಪ್ರೇಮಗಳ ಸಮನ್ವಯವೇ ಭಕ್ತಿ. ಜೀವನು ಜ್ಞಾನ, ಪ್ರೇಮರೂಪಿಯಾಗಿರುವುದರಿಂದ ಮೋಕ್ಷದ ಸ್ಥಿತಿಯಲ್ಲಿ ಭಕ್ತಿಯು ಅವನ ಸಹಜರೂಪವೇ ಆಗಿರುತ್ತದೆ. ಸಾಧಕರಿಗೆ

ಕರ್ತವ್ಯದ ನಿರ್ಬಂಧವು ಅಜ್ಞಾನ ಮತ್ತು ಜ್ಞಾನ ಈ ಎರಡೂ ಸ್ಥಿತಿಗಳಲ್ಲಿ ಇರುವಂತೆ ಸಾಧನ ಮತ್ತು ಫಲ – ಸಂಸಾರ ಹಾಗೂ ಮೋಕ್ಷ – ಈ ಎರಡೂ ಹಂತಗಳಲ್ಲೂ ಭಕ್ತಿಯು ನಮ್ಮ ಜೊತೆಗೆ ಇರುವುದು ಅನಿವಾರ್ಯ. ಕೊನೆಗಂತೂ ಭಕ್ತಿಯು ನಮ್ಮ ಸ್ವರೂಪವೇ ಆಗಿ ನಮ್ಮ ಅವಿಭಾಜ್ಯ ಧರ್ಮವಾಗುತ್ತದೆ. ಹೀಗೆ ಕರ್ತವ್ಯ ಭಕ್ತಿಗಳಿಗೆ ನಮ್ಮ ಜೀವನದಲ್ಲಿ ಇರುವ ಸ್ಥಾನವನ್ನು ಆಚಾರ್ಯರು ವಿಶ್ಲೇಷಿಸಿದ್ದಾರೆ.

ದ್ವಿತೀಯಾಧ್ಯಾಯ

"ಪ್ರಜ್ಞಾವಾದಾಂಶ್ಚ ಭಾಷಸೇ"

ಕುರುಕ್ಷೇತ್ರದಲ್ಲಿ ಯುದ್ಧ ಸನ್ನದ್ಧ ಸೇನೆಗಳ ಮಧ್ಯದಲ್ಲಿ ನಿಂತು ಹೋರಾಟವನ್ನು ಆರಂಭಿಸಬೇಕಾದ ಸಂದರ್ಭದಲ್ಲಿ ಅರ್ಜುನನಿಗೆ ಎರಡೂ ಬದಿಯ ಸೇನೆಗಳಲ್ಲಿ ಪರಸ್ಪರವಾಗಿ ಹೋರಾಡಿಕೊಂಡು ಸಾಯಲು ಸಿದ್ಧರಾದ ಬಂಧು-ಬಾಂಧವರು, ಗುರುಗಳು ಮತ್ತು ಗೆಳೆಯರನ್ನು ಕಂಡು ವ್ಯಾಮೋಹವುಂಟಾಗಿ ಅವನ ಮನಸ್ಸು ಉದ್ವಿಗ್ನವಾಗುವುದು. ಹೋರಾಟದಿಂದ ಹಿಂದೆ ಸರಿಯುವ ಭಾವನೆಯುಂಟಾಗಿ ಅದನ್ನು ಸಮರ್ಥಿಸಲು ನಾನಾ ರೀತಿಯ ವಾದಗಳನ್ನು ಶ್ರೀಕೃಷ್ಣನ ಮುಂದೆ ಇಡುವನು. ಆ ವಾದಗಳನ್ನು ಪ್ರಜ್ಞಾವಾದವೆಂದು ಗೀತೆಯು ಹೇಳಿದೆ. ಆದರೆ ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನ ಈ ಪ್ರವೃತ್ತಿಯನ್ನು ಖಂಡಿಸಿ ದುಷ್ಟ ನಿಗ್ರಹ ಮತ್ತು ಧರ್ಮಸ್ಥಾಪನೆಗಾಗಿ ಅನಿವಾರ್ಯವಾಗಿ ಮಾಡಬೇಕಾದ ಈ ಹೋರಾಟದಿಂದ ಹಿಂದೆ ಸರಿಯುವುದು ಅಧರ್ಮವೆಂದು, ಪ್ರತಿಯೊಬ್ಬರೂ ಸ್ವಧರ್ಮದಲ್ಲಿ ಮುನ್ನುಗ್ಗುವುದೇ ಕರ್ತವ್ಯವೆಂದು ಪ್ರತಿಪಾದಿಸಿದ್ದಾನೆ. ಈ ಕರ್ತವ್ಯಾಚರಣೆಗೆ ವಿರುದ್ಧವಾದ ಅರ್ಜುನನ ವಾದವು ಪ್ರಜ್ಞಾವಾದವೆನಿಸುವುದು ಹೇಗೆ ? ಎಂಬ ಗೊಂದಲವುಂಟಾಗುವುದು ಸಹಜ. ಶ್ರೀಮಧ್ವಾಚಾರ್ಯರು ಈ ಗೊಂದಲವನ್ನು ಸುಲಭವಾಗಿ ಹೋಗಲಾಡಿಸಿದ್ದಾರೆ. ಪ್ರಜ್ಞಾವಾದವೆಂದರೆ ಪ್ರಜ್ಞರ ಅವಾದವೆಂದು ವಿವರಿಸಿದ್ದಾರೆ. ಪ್ರಜ್ಞರು ಎಂದರೆ ಪ್ರಾಜ್ಞರು ಎಂದು ಅರ್ಥವಾಗುವುದು. ಪ್ರಾಜ್ಞರ ಅವಾದವು ಅರ್ಥಾತ್ ಪ್ರಾಜ್ಞರ ಮತಕ್ಕೆ ವಿರುದ್ಧವಾದ ವಾದವನ್ನು ಅರ್ಜುನನು ಮಂಡಿಸಿದ್ದಾನೆಂದೇ ಶ್ರೀಕೃಷ್ಣನ ಅಭಿಪ್ರಾಯವಾಗಿದೆ. ಅಥವಾ ಕೇವಲ ತನ್ನ ಪ್ರಜ್ಞೆಯನ್ನು ಮಾತ್ರ ಅವಲಂಬಿಸಿ ತನ್ನ ವಿಚಾರಶಕ್ತಿಯನ್ನು ಮಾತ್ರ ಆಧರಿಸಿ ಮಾಡಿದ ವಾದವಾಗಿರುವುದರಿಂದಲೂ ಇದನ್ನು ಪ್ರಜ್ಞಾವಾದವೆಂದು ಕರೆಯಬಹುದು. ಶಾಸ್ತ್ರದ ಆಧಾರವಿಲ್ಲದೇ ಕೇವಲ ತನ್ನ ಬುದ್ಧಿಬಲವನ್ನು ಮಾತ್ರ ಉಪಯೋಗಿಸಿ ಈ ತರಹದ ವಾದವನ್ನು ಅರ್ಜುನನು ಮಂಡಿಸಿದ್ದಾನೆ ಎಂಬುದೇ ಶ್ರೀಕೃಷ್ಣನ ತಾತ್ಪರ್ಯವಾಗಿದೆ.

ಆತ್ಮನ ಅಮರತ್ವ

ತನ್ನ ಜನರ ಮರಣದ ಆತಂಕದಿಂದಾಗಿ ಬಂಧು ಜನರ ವ್ಯಾಮೋಹದಿಂದ ಅರ್ಜುನನು ಯುದ್ಧನಿವೃತ್ತನಾಗಿರುವುದರಿಂದ ಈ ಮೋಹದ ಮೂಲವನ್ನೇ ಕಿತ್ತೊಗೆಯುವ ಪ್ರಯತ್ನವನ್ನು ಶ್ರೀಕೃಷ್ಣನು ಆರಂಭದಲ್ಲಿ ಮಾಡಿದ್ದಾನೆ. ತನ್ನ ಜನರ ಮರಣಕ್ಕಾಗಿ ಯಾಕೆ ಶೋಕಿಸಬೇಕು ? ಅನಿತ್ಯವಾದ ಶರೀರದ ನಾಶಕ್ಕಾಗಿ ನಾವು ಚಿಂತಿಸಬೇಕಾಗಿಲ್ಲ. ಈ ಶರೀರವು ಎಂದಾದರೂ ನಾಶವಾಗತಕ್ಕದ್ದು. ಈ ಶರೀರವೇ ನಾವಲ್ಲ. ಈ ಶರೀರಕ್ಕಿಂತ ಬೇರೆಯಾದ ಆತ್ಮನಿದ್ದಾನೆ. ಅವನು ಅಮರನು. ಅವನಿಗೆ ಎಂದೂ ನಾಶದ ಭಯವೇ ಇಲ್ಲ. ಪರಮಚೇತನನಾದ ಭಗವಂತನಂತೆ ಎಲ್ಲಾ ಚೇತನರೂ ಅವಿನಾಶಿಗಳು. ಮುಕ್ತಿಯ ಮೊದಲು ಜೀವನಿಗೆ ಶರೀರ ಸಂಬಂಧ ವಿಯೋಗವಿದ್ದರೂ ಅವನ ವ್ಯಕ್ತಿತ್ವಕ್ಕೆ ನಾಶವು ಇಲ್ಲವೇ ಇಲ್ಲ. ಭಗವಂತನಿಗಂತೂ ದೇಹ ಸಂಬಂಧ ಮೊದಲಾದ ಯಾವುದೇ ರೀತಿಯ ವಿಕೃತಿಯು ಇಲ್ಲ, ಹೀಗೆ

ಪರಮಾತ್ಮನಂತೆ ಜೀವಸ್ವರೂಪವು ಅನಾದಿ ನಿತ್ಯವಾಗಿರುವಾಗ ಆತ್ಮನಾಶದ ಭಯಕ್ಕೆ ಅವಕಾಶವೇ ಇಲ್ಲ. ದೇಹ ನಾಶವಾಗುವುದಾದರೂ ಅದರ ಬದಲು ಇನ್ನೊಂದು ದೇಹ ದೊರಕುವುದರಿಂದ ಇದೊಂದು ಬದಲಾವಣೆ ಮಾತ್ರ. ಈ ಜೀವನದಲ್ಲಿಯೂ ಬಾಲ್ಯ, ತಾರುಣ್ಯ ಮುಂತಾದ ಬದಲಾವಣೆಯು ನಡೆಯುತ್ತಲೇ ಇದೆ. ಅದರಂತೆ ಮರಣವೂ ಒಂದು ಬದಲಾವಣೆ ಮಾತ್ರ. ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡು ಆಗುವ ಈ ಬದಲಾವಣೆಯನ್ನು ನಾವು ಸಹಜವಾಗಿಯೇ ಸ್ವೀಕರಿಸಬೇಕು. ಅದಕ್ಕಾಗಿ ಚಿಂತೆ - ಗಾಬರಿ ಏಕೆ ?

ಶರೀರಕ್ಕಿಂತ ಬೇರೆಯಾದ ಆತ್ಮನೇ ಇಲ್ಲ. ಆದ್ದರಿಂದ ಶರೀರ ನಾಶವು ಆತ್ಮನಾಶದಲ್ಲೇ ಪರ್ಯವಸಾನ ಹೊಂದುವುದು ಎಂದು ವಾದಿಸುವುದು ಸರಿಯಲ್ಲ, ಬಾಲ್ಯ, ಕೌಮಾರ ಮುಂತಾದ ವಿಭಿನ್ನ ಅವಸ್ಥೆಗಳಿದ್ದರೂ ಅವುಗಳಲ್ಲಿ ಸುಖ - ದುಃಖಗಳನ್ನು ಅನುಭವಿಸುವ ವ್ಯಕ್ತಿಯು ಒಬ್ಬನೇ ಎಂಬುದು ಸರ್ವಾನುಭವ ಸಿದ್ಧವಾಗಿದೆ. ದೇಹದಲ್ಲಿ ಈ ವಿಭಿನ್ನ ಅವಸ್ಥೆಗಳಿರುವಂತೆ ಆತ್ಮನ ಈ ದೇಹ ಮತ್ತು ಮುಂದಿನ ದೇಹಗಳಿಗೂ ಸಂಬಂಧವಿದೆಯೆಂಬುದನ್ನು ನಾವು ಒಪ್ಪಬೇಕು. ಹುಟ್ಟಿದ ಮಗುವಿನ ಮನಸ್ಸು ಖಾಲಿ ಕಾಗದದಂತೆ ಶೂನ್ಯವಾಗಿರುವುದಿಲ್ಲ. ಅನೇಕ ಸಂಸ್ಕಾರಗಳಿಂದ ಅದು ತುಂಬಿರುತ್ತದೆ. ಆದ್ದರಿಂದಲೇ ಹುಟ್ಟಿದ ಕೂಡಲೇ ಮಗುವಿನಲ್ಲಿಯೂ, ಪ್ರಾಣಿಗಳ ಮರಿಗಳಲ್ಲಿಯೂ ಚಟುವಟಿಕೆಗಳನ್ನು ನಾವು ನೋಡುತ್ತೇವೆ. ಯಾವುದೇ ಸಂಸ್ಕಾರವಿಲ್ಲದಿದ್ದರೆ ಇಷ್ಟಾನಿಷ್ಟಗಳ ಪರಿವೆ, ಆಸೆ, ಹಂಬಲಗಳಿಲ್ಲದಿರುವುದರಿಂದ ಹುಟ್ಟಿದ ಕೂಡಲೇ ಪ್ರವೃತ್ತಿಯಾಗುವುದು ಹೇಗೆ ? ಆದ್ದರಿಂದಲೇ ನಾವು ಹಿಂದಿನ ಸಂಸ್ಕಾರಗಳ ಜೊತೆಗೇ ಹುಟ್ಟುತ್ತೇವೆಂಬುದನ್ನು ಒಪ್ಪಿಕೊಳ್ಳಬೇಕು. ಈ ದೇಹದಲ್ಲಿ ಹಿಂದಿನ ದೇಹದ ಅನುಸ್ಯೂತತೆ (continuation)ಯನ್ನು ಒಪ್ಪದೇ ಈ ಸಂಸ್ಕಾರಗಳನ್ನು ಮತ್ತು ಹುಟ್ಟಿದ ಕೂಡಲೇ ಆಗುವ ಸಹಜ ಪ್ರವೃತ್ತಿಗಳನ್ನು ನಾವು ಕೂಡಿಸುವುದು ಹೇಗೆ ? ಹೀಗಾಗಿ ಅನೇಕ ದೇಹಗಳಲ್ಲಿ ಪ್ರವಹಿಸುವ ದೇಹಕ್ಕಿಂತ ಬೇರೆಯಾದ ಆತ್ಮನನ್ನು ನಾವು ಅಂಗೀಕರಿಸಲೇ ಬೇಕು.

ನಮ್ಮಲ್ಲಿರುವ ಜ್ಞಾನಶಕ್ತಿಯನ್ನು ಗಮನಿಸಿದಾಗಲೂ ಈ ಜಡದೇಹಕ್ಕಿಂತ ಬೇರೆಯಾದ ಆತ್ಮನನ್ನು ನಾವು ಅಂಗೀಕರಿಸಲೇ ಬೇಕಾಗುತ್ತದೆ. ಪ್ರಕೃತಿಯ ಪರಿಣಾಮವಾದ ಜಡವಸ್ತುವಿನಲ್ಲಿ ಚೈತನ್ಯ ಶಕ್ತಿಯಿರಲು ಸಾಧ್ಯವೇ ಇಲ್ಲ. ನಮ್ಮ ಕಣ್ಣ ಮುಂದಿರುವ ಕಲ್ಲು, ಕಟ್ಟಿಗೆ ಮುಂತಾದ ಯಾವುದೇ ಜಡ ವಸ್ತುಗಳಲ್ಲಿ ಇಲ್ಲದ ಜ್ಞಾನ ಶಕ್ತಿಯು ನಮ್ಮಲ್ಲಿ ಹೇಗೆ ಬಂತು ? ಅದಕ್ಕಾಗಿ ಜಡದಲ್ಲಿ ಚೈತನ್ಯವನ್ನು ತುಂಬಲು ಚೈತನ್ಯ ಸ್ವರೂಪಿಯಾದ ಆತ್ಮನ ಅವಶ್ಯಕತೆ ಇದೆ. ''ಈ ಶರೀರ ಬಿದ್ದರೂ ಮರಣದ ನಂತರ ನಮಗೆ ಜ್ಞಾನ ಉಂಟಾಗುವುದಿಲ್ಲ , ಅರಿವಿಗೆ ಪ್ರಾಣ ವಾಯುವೇ ಕಾರಣ''ವೆನ್ನಲು ಸಾಧ್ಯವಿಲ್ಲ. ವ್ಯಕ್ತಿಯು ಮೂರ್ಛಿತ ನಾದಾಗ, ನಿದ್ರೆಯಲ್ಲಿದ್ದಾಗ ಪ್ರಾಣವಾಯುವಿನ ಸಂಚಾರವಿದ್ದರೂ ಆಗ ಜ್ಞಾನವುಂಟಾಗುವುದಿಲ್ಲ. ಮನಸ್ಸು ಇಂದ್ರಿಯಗಳಿದ್ದರೂ ಕೆಲವೊಮ್ಮೆ ಜ್ಞಾನವುಂಟಾಗಲು ಮತ್ತು ಕೆಲವೊಮ್ಮೆ ಲೋಪವಾಗಲು ಏನು ಕಾರಣ ಎಂಬುದನ್ನು ನಾವು ಪರಿಶೀಲಿಸಬೇಕು. ಯಾವುದೋ ಒಂದು ವಿಶಿಷ್ಟ ವಸ್ತುವಿನ ಸಂಬಂಧವು ನಮ್ಮ ಮನಸ್ಸಿಗೆ ಉಂಟಾದಾಗ ನಾವು ಜ್ಞಾನವನ್ನು ಪಡೆಯುತ್ತೇವೆ. ಆ ಸಂಬಂಧವು ತಪ್ಪಿದಾಗ ಜ್ಞಾನವನ್ನು ಕಳೆದು ಕೊಳ್ಳುತ್ತೇವೆ – ಎಂಬ ನಿರ್ಣಯಕ್ಕೆ ನಾವು ಬರಬೇಕಾಗುತ್ತದೆ. ಜ್ಞಾನದ ಮೂಲವಾದ ಆ ವಿಶಿಷ್ಟ ವಸ್ತುವೇ ಆತ್ಮನು. ಅವನು ಚೈತನ್ಯ ಸ್ವರೂಪಿ. ಅವನ ಸಂಬಂಧದಿಂದಲೇ ಜಡದಲ್ಲಿ ಜ್ಞಾನದ ಸೃಷ್ಟಿಯಾಗುತ್ತದೆ.

ವೇದದ ಪ್ರಾಮಾಣ್ಯ

ಹೀಗೆ ಯುಕ್ತಿಯಿಂದ ಪರಿಶೀಲಿಸಿದಾಗ ಜಡದೇಹಕ್ಕಿಂತ ಬೇರೆಯಾದ ಆತ್ಮನು ಸಿದ್ಧನಾಗುವುದರ ಜೊತೆಗೆ ವೇದಾದಿ ಪ್ರಮಾಣಗಳಿಂದಲೂ ಇದನ್ನು ದೃಢಪಡಿಸಬಹುದು. ವೇದ - ಪುರಾಣಗಳಲ್ಲಿ ಆತ್ಮನು

ಶರೀರವನ್ನು ಪ್ರವೇಶಿಸುವ ಮತ್ತು ಶರೀರವನ್ನು ತ್ಯಜಿಸುವ ಉಲ್ಲೇಖಗಳು ಸಾಕಷ್ಟು ಇವೆ. ವೇದದಲ್ಲಿ ಹೇಳಿದ್ದನ್ನು ಯಾಕೆ ಒಪ್ಪಬೇಕು ಎಂದು ಪ್ರಶ್ನಿಸುವುದು ಸರಿಯಲ್ಲ. ಪ್ರತ್ಯಕ್ಷ ಪ್ರಮಾಣದಂತೆ ವೇದವೂ ಪ್ರಮಾಣವಾಗಿದೆ. ಪ್ರತ್ಯಕ್ಷ ಸಿದ್ಧವಾದ ಪದಾರ್ಥಗಳನ್ನು ನಾವು ಅಂಗೀಕರಿಸುವಂತೆ ವೇದಸಿದ್ಧವಾದ ಅತೀಂದ್ರಿಯ ವಸ್ತುಗಳನ್ನೂ ನಾವು ಅಂಗೀಕರಿಸಬೇಕು. ಬೌದ್ಧ , ಜೈನ ಮುಂತಾದ ಅನೇಕ ದರ್ಶನಗಳಿರುವಾಗ ವೇದದಲ್ಲಿ ಹೇಳಿದ್ದನ್ನೇ ನಾವು ಯಾಕೆ ಒಪ್ಪಬೇಕು? ಎಂಬ ಸಂದೇಹವುಂಟಾಗಬಹುದು. ಆದರೆ ವೇದಕ್ಕೆ ಬೇರೆ ಎಲ್ಲಾ ದರ್ಶನಗಳಿಗಿಂತ ವಿಶಿಷ್ಟತೆ ಇದೆ. ವೇದವು ಅಪೌರುಷೇಯ, ಯಾವ ಪುರುಷನಿಂದಲೂ ರಚಿಸಲ್ಪಟ್ಟದ್ದಲ್ಲ. ಅಜ್ಞಾನ, ವಂಚನೆ, ವಿಪರೀತ ಕಲ್ಪನೆ ಮೊದಲಾದವುಗಳೆಲ್ಲ ಪುರುಷನ ಧರ್ಮಗಳು. ಪುರುಷನ ರಚನೆಯೇ ಅಲ್ಲದ ವೇದದಲ್ಲಿ ಈ ಮಾನವೀಯ ದೋಷಗಳಿಗೆ ಅವಕಾಶವಿಲ್ಲ. ಹೀಗಾಗಿ ಯಾವುದೇ ದೋಷಗಳಿಗೆ ಅವಕಾಶವಿಲ್ಲದ ಅಪೌರುಷೇಯ ವಾದ ವೇದದ ಪ್ರಾಮಾಣ್ಯದಲ್ಲಿ ಸಂಶಯಪಡುವಂತಿಲ್ಲ.

ಇಂಥಹ ಅಪೌರುಷೇಯವಾದ ಒಂದು ಗ್ರಂಥವನ್ನು ಏಕೆ ಒಪ್ಪಬೇಕು ? ಎಲ್ಲ ಗ್ರಂಥಗಳಂತೆ ಇದೂ ಒಂದು ಪುರುಷ ರಚನೆಯೆಂದು ಯಾಕೆ ಹೇಳಬಾರದು ಎಂದು ಕೆಲವರು ಆಕ್ಷೇಪಿಸಬಹುದು. ಆದರೆ ಈ ಜಗತ್ತಿಗೆ ಒಂದು ಅಪೌರುಷೇಯ ಗ್ರಂಥದ ಅವಶ್ಯಕತೆ ಇದೆ. ಎಲ್ಲಾ ದಾರ್ಶನಿಕರೂ ಧರ್ಮ ಮೊದಲಾದ ಅತೀಂದ್ರೀಯ ಪದಾರ್ಥಗಳನ್ನು ಒಪ್ಪಬೇಕು. ಅದಿಲ್ಲದಿದ್ದರೆ ದರ್ಶನಗಳಿಗೆ ಪ್ರಯೋಜನ ವೇನು ? ದರ್ಶನಗಳು ತಿಳಿಸಬೇಕಾದ ವಿಷಯವಾದರೂ ಏನು ? ಧರ್ಮದ ಭ್ರಾಂತಿ, ಅಂಧ ಶ್ರದ್ಧೆಯಿಂದ ಜನರಿಗೆ ಉಂಟಾದ ದುಃಖ ಕಷ್ಟಗಳನ್ನು ಪರಿಹರಿಸಲು ಧರ್ಮವೇ ಇಲ್ಲ ಎಂದು ತಿಳಿಸಲು ಚಾರ್ವಾಕ ದರ್ಶನದಂತಹ ಮತಗಳು ಹೊರಟಿವೆಯೆಂದು ಹೇಳಬಹುದು. ಆದರೆ ಈ ಮತದಿಂದಲೂ ಧರ್ಮ ಇಲ್ಲವೆಂಬುದನ್ನು ನಾವು ನಿರ್ಧರಿಸುವುದು ಹೇಗೆ? ಒಂದು ವಸ್ತುವು ತೋರದಿದ್ದ ಕೂಡಲೇ ಇಲ್ಲವೆನ್ನಲು ಬರುವುದಿಲ್ಲ. ವಸ್ತು ಇದ್ದರೂ ಬೇರೆ ಬೇರೆ ಕಾರಣಗಳಿಂದ ಅದು ತೋರದಿರುವ ಸಾಧ್ಯತೆಗಳಿವೆ. ಇಷ್ಟರವರೆಗೆ ತಿಳಿಯದಿದ್ದ ಹೊಸ ಹೊಸ ವಸ್ತುಗಳ ಆವಿಷ್ಕಾರವು ಈ ವಿಜ್ಞಾನ ಯುಗದಲ್ಲಿ ದಿನದಿನವೂ ನಡೆಯುತ್ತಿದೆ. ಧರ್ಮ-ಅಧರ್ಮ, ಆತ್ಮ-ಪರಮಾತ್ಮಗಳ ಬಗ್ಗೆ ವಾದ ವಿವಾದಗಳು ನಡೆಯುತ್ತಲೇ ಇವೆ. ಅತೀಂದ್ರಿಯ ವಸ್ತುಗಳನ್ನು ಪ್ರತ್ಯಕ್ಷವಾಗಿ ನಾವು ಕಂಡಿದ್ದೇವೆಂದು ಅನೇಕ ಮಹಾವ್ಯಕ್ತಿಗಳು ಹೇಳಿದ್ದಾರೆ. ಹೀಗಿರುವಾಗ ನಮಗೆ ತೋರಲಿಲ್ಲವೆಂಬ ಒಂದೇ ಕಾರಣದಿಂದ ಇವುಗಳನ್ನು ನಿಷೇಧಿಸುವುದು ಸರಿಯಲ್ಲ.

ಒಂದು ವಸ್ತುವನ್ನು ತಿಳಿಯಲು ಪ್ರತ್ಯಕ್ಷ ಒಂದೇ ಆಧಾರವಲ್ಲ. ಎಷ್ಟೋ ವಿಷಯಗಳನ್ನು ನಾವು ನೋಡದಿದ್ದರೂ ವಿಶ್ವಾಸಾರ್ಹರಾದ ವ್ಯಕ್ತಿಗಳ ಮಾತಿನಿಂದ ತಿಳಿದುಕೊಳ್ಳುತ್ತೇವೆ. ಆದ್ದರಿಂದ ಆಪ್ತವಾಕ್ಯವನ್ನು ಪ್ರಮಾಣವೆಂದು ಒಪ್ಪಬೇಕು. ಪ್ರತ್ಯಕ್ಷದ ಹೊರತು ಬೇರೆ ಪ್ರಮಾಣವೇ ಇಲ್ಲವಾದರೆ ಜಗತ್ತಿನ ವ್ಯವಹಾರವೆಲ್ಲವೂ ಸ್ಥಗಿತವಾಗಬೇಕಾಗಬಹುದು. ಕಣ್ಣಿಗೆ ಕಾಣದ ಎಷ್ಟೋ ವಿಷಯವನ್ನು ನಾವು ಅನುಮಾನದಿಂದಲೂ ತಿಳಿದುಕೊಳ್ಳುತ್ತೇವೆ. ಮತ್ತೊಬ್ಬನಿಗೆ ಉಂಟಾಗುವ ಜ್ಞಾನ-ಸುಖ ದುಃಖಗಳನ್ನು ನಾವು ಪ್ರತ್ಯಕ್ಷವಾಗಿ ನೋಡುತ್ತೇವೆಯೇ ? ನಾವು ಮಾತಾಡಿದ್ದನ್ನು ಇನ್ನೊಬ್ಬರು ತಿಳಿಯುತ್ತಾರೆಂಬುದನ್ನು ಅವರು ಕೊಡುವ ಪ್ರತ್ಯುತ್ತರದಿಂದಲೇ ತಿಳಿದುಕೊಳ್ಳುತ್ತೇವೆ. ಇದು ಅನುಮಾನವಲ್ಲವೇ ? ನಾವು ಮಾತನಾಡುವ ಶಬ್ದಗಳಿಂದ ಯಥಾರ್ಥ ಜ್ಞಾನವುಂಟಾಗುವುದಿಲ್ಲವಾದರೆ ನಮ್ಮ ಬಂಧುಗಳು ಮತ್ತು ಗೆಳೆಯರಿಗೆ ಭ್ರಮೆಯನ್ನುಂಟುಮಾಡಲು ನಾವು ಮಾತಾಡುವುದೇ ? ಆದ್ದರಿಂದ ಪ್ರತ್ಯಕ್ಷದ ಜೊತೆಗೆ ಶಬ್ದ ಮತ್ತು ಯುಕ್ತಿಗಳನ್ನು ಪ್ರಮಾಣವೆಂದು ನಾವು ಸ್ವೀಕರಿಸಬೇಕು. ಆದುದರಿಂದ ಪ್ರತ್ಯಕ್ಷಕ್ಕೆ ತೋರಲಿಲ್ಲವೆಂದು ಧರ್ಮ ಮುಂತಾದ ಅತೀಂದ್ರಿಯ ವಸ್ತುಗಳು ಇಲ್ಲವೆಂದು ಸಿದ್ಧವಾಗಲಾರದು.

ಧರ್ಮವೇ ಇಲ್ಲವೆಂದು ಪ್ರತಿಪಾದಿಸುವುದರಿಂದ ಜಗತ್ತಿನ ಎಲ್ಲಾ ಸಾಮಾಜಿಕ ವ್ಯವಸ್ಥೆಯು ಕುಸಿದು

ಬೀಳುವುದು. ಧರ್ಮದ ಭೀತಿಯಿಂದ ಎಷ್ಟೋ ಅನ್ಯಾಯ, ಅಕೃತ್ಯಗಳನ್ನು ನಿಯಂತ್ರಣ ಮಾಡಲು ನಮಗೆ ಸಾಧ್ಯವಾಗಿದೆ. ಧರ್ಮವೇ ಇಲ್ಲವೆಂಬ ಭಾವನೆಯನ್ನು ಹುಟ್ಟಿಸಿದಲ್ಲಿ ಯಾವುದೇ ಸಂಕೋಚವಿಲ್ಲದೆ ಸ್ವಚ್ಛಂದ ಪ್ರವೃತ್ತಿ, ಅತಿಕ್ರಮಣವನ್ನು ಮಾಡಲು ಜನರಿಗೆ ಮುಕ್ತ ಅವಕಾಶವನ್ನು ನೀಡಿದಂತಾಗುವುದು. ಇದರಿಂದ ಯಾರಿಗಾದರೂ ಸುಖವಿದೆಯೇ ? ಯಾವ ನೀತಿ ನಿಯಮ ಬಂಧನಗಳು ಇಲ್ಲದಿರುವುದ ರಿಂದ ಅತಿಕ್ರಮಣ ಅರಾಜಕತೆಯು ಮಿತಿಮೀರಿ ಯಾವ ಭದ್ರತೆಯೂ ಇಲ್ಲದಂತಾಗಿ ಜನರಿಗೆ ಸುಖದಿಂದ ಜೀವಿಸುವುದೇ ಅಶಕ್ಯವಾಗುವುದು. ಆದುದರಿಂದ ಲೋಕವ್ಯವಸ್ಥೆಗಾಗಿ ಅನಾದಿ ಕಾಲದಿಂದಲೂ ಜನರ ಶ್ರದ್ಧಾಕೇಂದ್ರವಾದ ಧರ್ಮವನ್ನು ಎಲ್ಲರೂ ಒಪ್ಪಬೇಕು. ಈ ಧರ್ಮವನ್ನು ಅಂಗೀಕರಿಸಲು ಅಪೌರುಷೇಯವಾದ ವೇದದ ಹೊರತು ಬೇರೆ ಆಧಾರವಿಲ್ಲ. ವ್ಯಕ್ತಿಗಳ ಅಜ್ಞಾನದ ಸಮಗ್ರತೆ ಮತ್ತು ಪ್ರಾಮಾಣಿಕತೆಯ ಬಗ್ಗೆ ನಮಗೆ ವಿಶ್ವಾಸವಿಲ್ಲದ್ದರಿಂದ ವ್ಯಕ್ತಿಗಳು ರಚಿಸಿದ ಗ್ರಂಥಗಳ ಬಗ್ಗೆ ನಮಗೆ ಪೂರ್ಣ ನಂಬಿಕೆ ಉಂಟಾಗಲಾರದು. ದೊಡ್ಡ ದೊಡ್ಡ ಮಠಾಚಾರ್ಯರಲ್ಲೇ ಕಚ್ಚಾಟವಿರುವಾಗ ಯಾರ ವಾದವನ್ನು ನಾವು ನಂಬುವುದು ? ತನ್ನ ಮಾತಿನಿಂದಲೇ ತನ್ನ ಗ್ರಂಥವು ನಿರ್ದುಷ್ಟವೂ ಪ್ರಮಾಣವೂ ಎಂದು ಸಿದ್ಧವಾಗುವುದಿಲ್ಲ. ಅದಕ್ಕಾಗಿ ಯಾರೂ ನಿರ್ಮಿಸದ ಅಪೌರುಷೇಯ ವಾಕ್ಯಕ್ಕೇ ನಾವು ಶರಣಾಗಬೇಕು. ವೇದವೇ ಅಂತಹ ಅಪೌರುಷೇಯ ವಾಕ್ಯವಾಗಿದೆ. ಅದಕ್ಕೆ ಅವಿಚ್ಛಿನ್ನವಾದ ಅನಾದಿ ಪರಂಪರೆಯಿದೆ. ವೇದವು ಇಂತಹ ಕಾಲದಲ್ಲಿಯೇ ರಚನೆಯಾಗಿದೆ ಎಂಬುದಕ್ಕೆ ಏನೂ ಆಧಾರವಿಲ್ಲ. ಪ್ರತಿಯೊಬ್ಬರಿಗೂ ತಾನು ಹಿಂದಿನ ವೇದವನ್ನೇ ಉಚ್ಚರಿಸುತ್ತಿದ್ದೇನೆ ಎಂಬ ಅನುಭವವೇ ಇದೆ. ಯಾರು ನಿರ್ಮಿಸಿದರೆಂದು ತಿಳಿಯದ ಎಷ್ಟೋ ವಾಕ್ಯಗಳೂ ಗಾದೆಗಳೂ ಹಾಡುಗಳೂ ಇರಬಹುದು. ವೇದವನ್ನು ಅವುಗಳಿಗೆ ಹೋಲಿಸಬಾರದು. ಅವುಗಳಿಗೆ ಅನಾದಿಯಾದ ಪರಂಪರೆಯಿಲ್ಲ. ಇಂತಹ ನಿರ್ದಿಷ್ಟ ಕಾಲದಲ್ಲಿಯೇ ಅವುಗಳ ರಚನೆಯಾಗಿದೆಯೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಆದುದರಿಂದ ಅನಾದಿ ಪರಂಪರೆಯಿರುವ ವೇದವು ಅಪೌರುಷೇಯವೂ ಪ್ರಮಾಣವೂ ಆಗಿದೆ. ಅದರ ಆಧಾರದಿಂದಲೂ ಶರೀರಕ್ಕಿಂತ ಬೇರೆಯಾದ ಆತ್ಮನನ್ನು ನಾವು ಸ್ವೀಕರಿಸಲೇ ಬೇಕು. ಈ ಆತ್ಮನು ಅಮರನಾಗಿರುವುದರಿಂದ ಅವನ ನಾಶಕ್ಕಾಗಿ ನಾವು ಚಿಂತಿಸಿ ದುಃಖಪಡಬೇಕಾಗಿಲ್ಲ.

ದುಃಖದ ಮೂಲ ಅಭಿಮಾನ

ಆತ್ಮನಿಗೆ ನಾಶ ಇಲ್ಲದಿದ್ದರೂ ಈ ಶರೀರದ ಬದಲು ಇನ್ನೊಂದು ಶರೀರ ಬರುವುದು ನಿಶ್ಚಿತವಾಗಿದ್ದರೂ ಮರಣದಿಂದ ಇನ್ನೊಂದು ಬಗೆಯ ದುಃಖವನ್ನು ನಾವು ಅನುಭವಿಸಬೇಕಾಗುತ್ತದೆ. ಮರಣದಿಂದ ನಮ್ಮ ಗೆಳೆಯರ ಮತ್ತು ಬಾಂಧವರ ಸಂಪರ್ಕವು ತಪ್ಪುತ್ತದೆ. ಈ ವಿಯೋಗದಿಂದಲೂ ನಮಗೆ ತುಂಬಾ ದುಃಖವಾಗುತ್ತದೆ. ನಮಗೆ ಬೇಕಾದವರ ದರ್ಶನ ಸಂಭಾಷಣೆಗಳಿಲ್ಲದಿದ್ದಾಗ ತುಂಬಾ ಬೇಸರವಾಗುತ್ತದೆ. ಇದಕ್ಕೆ ಪರಿಹಾರವೇನು ?

ಇದಕ್ಕೂ ಶ್ರೀಕೃಷ್ಣನಲ್ಲಿ ಪರಿಹಾರ ಸಿಗುತ್ತದೆ. ಸುಖದುಃಖಾದಿಗಳಿಗೆ ವಿಷಯ ಪದಾರ್ಥಗಳ ಸಂಬಂಧವು ಮಾತ್ರ ಕಾರಣವಲ್ಲ. ನಿದ್ರಾವಸ್ಥೆಯಲ್ಲಿ ವಿಷಯಪದಾರ್ಥಗಳ ಸಂಬಂಧವಿದ್ದರೂ ಯಾರಿಗೂ ಸುಖದುಃಖವಾಗುವುದಿಲ್ಲ. ವಿಷಯಪದಾರ್ಥದ ಸಂಪರ್ಕದ ಜೊತೆಗೆ ಅಭಿಮಾನವಿದ್ದಾಗ ಮಾತ್ರ ನಮಗೆ ದುಃಖವುಂಟಾಗುವುದು. ನಮ್ಮ ಮನೆಯು ಸುಡುವಾಗ ಆಗುವ ದುಃಖವು ಇನ್ನೊಬ್ಬರ ಮನೆಯು ಸುಡುವಾಗ ಆಗುವುದಿಲ್ಲ. ನಮ್ಮ ಮನೆಯೆಂಬ ಅಭಿಮಾನವೇ ಇದಕ್ಕೆ ಕಾರಣ. ಆ ಅಭಿಮಾನವನ್ನು ತೊರೆದಾಗ ಯಾವ ಸನ್ನಿವೇಶದಲ್ಲಿಯೂ ನಮಗೆ ದುಃಖವುಂಟಾಗಲಾರದು. ಅಭಿಮಾನವನ್ನು ತೊರೆಯುವುದೇ ದುಃಖಪರಿಹಾರದ ಉಪಾಯವಾಗಿದೆ. ವಸ್ತುತಃ ನಮ್ಮ ಮನಸ್ಸಿನಲ್ಲಿ

ಉಂಟಾಗುವ ಸುಖದುಃಖಜ್ಞಾನಗಳು ಅಂತಃಕರಣದ ವಿಕೃತಿಯೇ ಹೊರತು ಆತ್ಮನ ಧರ್ಮವಲ್ಲ. ಈ ಸುಖದುಃಖ ವೇದನೆಗಳ ಅನುಭವದ ಹೊರತು ಆತ್ಮನಿಗೂ ಇವುಗಳಿಗೂ ಬೇರೆ ಸಂಬಂಧವೇ ಇಲ್ಲ. ಹೀಗಿರುವಾಗ ಮನಸ್ಸಿನ ವಿಕೃತಿಗಳಿಗಾಗಿ ಆತ್ಮನು ಯಾಕೆ ಕಂಗೆಡಬೇಕು ?

ಆದುದರಿಂದ ಶರೀರದಲ್ಲಿದ್ದರೂ ಪುರುಷನು ಅಭಿಮಾನವನ್ನು ತ್ಯಜಿಸಿ ಸುಖ ದುಃಖಗಳನ್ನು ಗೆಲ್ಲಬೇಕು. ಇಲ್ಲಿ ಪುರುಷರೆಂದರೆ ಬರೇ ಗಂಡಸರೆಂದು ಅರ್ಥವಲ್ಲ. ಶರೀರದಲ್ಲಿ ನೆಲೆಸಿರುವ ಸ್ತ್ರೀ-ಪುರುಷರಿಬ್ಬರನ್ನೂ ಇಟ್ಟುಕೊಳ್ಳಬೇಕೆಂದು ಶ್ರೀಮಧ್ವಾಚಾರ್ಯರು ವಿವರಿಸಿದ್ದಾರೆ, ಸಾಧನೆಯಲ್ಲಿ ಪುರುಷರಂತೆ ಸ್ತ್ರೀಯರಿಗೂ ಅವಕಾಶವಿದೆಯೆಂದು ಅವರ ಅಭಿಮತವಾಗಿದೆ.

''ನಾಸತೋ ವಿದ್ಯತೇ ಭಾವಃ''

''ನಾಸತೋ ವಿದ್ಯತೇ ಭಾವಃ ನಾಭಾವೋ ವಿದ್ಯತೇ ಸತಃ'' ಮುಂತಾದ ಶ್ಲೋಕಗಳಿಗೆ ಶ್ರೀಮಧ್ವಾಚಾರ್ಯರು ಎರಡು ರೀತಿಯಿಂದ ಅರ್ಥವನ್ನು ವಿವರಿಸಿದ್ದಾರೆ. ಪರಮಾತ್ಮನಂತೆ ಅನಾದಿಯಾದ ಜೀವಾತ್ಮನೂ ನಿತ್ಯನು. ಆದುದರಿಂದ ಜೀವನಾಶದ ಭಯವಿಲ್ಲ ಎಂಬುದನ್ನು ವಿವರಿಸುವ ಸಂದರ್ಭದಲ್ಲಿ ಅನಾದಿ ನಿತ್ಯಗಳಾದ ಇನ್ನೂ ಅನೇಕ ಪದಾರ್ಥಗಳನ್ನು ಇಲ್ಲಿ ವಿವರಿಸುತ್ತಾರೆ. ಜಗತ್ತಿಗೆ ಕಾರಣವಾದ ಅವ್ಯಕ್ತವಾದ ಪ್ರಕೃತಿಯನ್ನು ಅಸತ್ ಎಂಬುದಾಗಿ ಶಾಸ್ತ್ರದಲ್ಲಿ ಕರೆಯುತ್ತಾರೆ. ಈ ಜಡಪ್ರಕೃತಿಯು, ಎಲ್ಲಾ ಕಡೆಯಲ್ಲಿ ವ್ಯಾಪಿಸಿರುವ ದೇಶ, ಕಾಲ ಮುಂತಾದವುಗಳೂ ಅನಾದಿಯಾಗಿವೆ. ಅವುಗಳಿಗೆ ನಾಶವಿಲ್ಲ. ಹೀಗೆ ಅನಾದಿಯಾದ ಜಡಗಳಿಗೇ ನಾಶವಿಲ್ಲದಿರುವಾಗ ಚೇತನನಾದ ಜೀವಾತ್ಮನಿಗೆ ನಾಶವು ಹೇಗೆ ? ಕಣ್ಣಿಗೆ ಕಾಣುವ ದೇಹಕ್ಕೆ ಮಾತ್ರ ನಾಶ. ಕನ್ನಡಿ ಒಡೆದಾಗ ಪ್ರತಿಬಿಂಬ ನಾಶವಾಗುವಂತೆ ದೇಹವು ಭಗ್ನವಾದಾಗ ಜೀವನಿಗೂ ನಾಶವಿದೆಯೆಂದು ಭ್ರಮಿಸಬಾರದು. ಪ್ರತಿಬಿಂಬಕ್ಕೆ ಕನ್ನಡಿಯು ಉಪಾಧಿಯಾಗಿರುವಂತೆ ಜೀವಾತ್ಮನಿಗೆ ದೇಹವು ಉಪಾಧಿಯಾಗಿರುತ್ತದೆ. ಆದರೆ ಅಪ್ರಾಕೃತವಾದ, ಚೇತನಾತ್ಮಕವಾದ ಸ್ವರೂಪದೇಹವೇ ಜೀವನಿಗೆ ಉಪಾಧಿ. ಭಗವಂತನೇ ಬಿಂಬನು. ಉಪಾಧಿಯಾದ ಕನ್ನಡಿಯು ಒಡೆದಾಗ ಅಥವಾ ಬಿಂಬವಾದ ಮುಖವು ಆಚೆ ಸರಿದಾಗ ಮಾತ್ರ ಪ್ರತಿಬಿಂಬವು ಮರೆಯಾಗುವುದನ್ನು ನಾವು ಲೋಕದಲ್ಲಿ ನೋಡುತ್ತೇವೆ. ಆದರೆ ಜೀವಾತ್ಮನ ಉಪಾಧಿಯಾದ ಸ್ವರೂಪದೇಹಕ್ಕೂ ನಾಶವಿಲ್ಲ. ಬಿಂಬರೂಪಿಯಾದ ಸರ್ವವ್ಯಾಪಕನಾದ ಭಗವಂತನಿಂದ ಜೀವನು ದೂರವಿರಲೂ ಸಾಧ್ಯವಿಲ್ಲ. ಆದ್ದರಿಂದ ಪರಮಾತ್ಮನ ಪ್ರತಿಬಿಂಬನಾದ ಜೀವಾತ್ಮನು ನಾಶಹೊಂದುವುದು ಹೇಗೆ ? ಎಂಬುದಾಗಿ ಈ ಶ್ಲೋಕಗಳು ಜೀವಾತ್ಮನು ನಿತ್ಯನೆಂಬುದನ್ನು ಸಮರ್ಥಿಸುತ್ತವೆಂಬುದು ಒಂದು ವಿವರಣೆಯಾಗಿದೆ.

ಯುದ್ಧದಿಂದ ನರಕಾದ್ಯನರ್ಥವು ಇದೆಯೆಂಬ ಭಯವೂ ಬೇಡ. ಸತ್ಕಾರ್ಯದಿಂದ ದುಃಖವಿಲ್ಲ. ಅಸತ್ಕಾರ್ಯದಿಂದ ಸುಖವು ದೊರೆಯಲಾರದು. ದುಷ್ಟನಿಗ್ರಹ ರೂಪವಾದ ಯುದ್ಧವು ಸತ್ಕಾರ್ಯವೇ ಆಗಿದೆ. ಇದರಿಂದ ಯಾವುದೇ ಪಾರಲೌಕಿಕ ಅನರ್ಥವುಂಟಾಗಲಾರದು. ಆದರೆ ಈ ಎಲ್ಲಾ ಸತ್ಕಾರ್ಯವನ್ನು ಸ್ವತಂತ್ರನೂ ಸರ್ವಸ್ವಾಮಿಯೂ ಆದ ಭಗವಂತನ ಪೂಜಾರೂಪವಾಗಿ ಮಾಡಬೇಕು. ಭಗವಂತನು ಜೀವರಿಗಿಂತ ಎಲ್ಲಾ ರೀತಿಯಲ್ಲಿಯೂ ಶ್ರೇಷ್ಠನಾಗಿದ್ದಾನೆ. ಜೀವರು ದೇಹಸಂಬಂಧದ ಪ್ರಯುಕ್ತವಾಗಿ ಜನನ -ಮರಣವುಳ್ಳವರೂ, ಅಪೂರ್ಣರೂ ಆಗಿದ್ದಾರೆ. ಪರಿಪೂರ್ಣನೂ ಸರ್ವವ್ಯಾಪಕನೂ ಆದ ಪರಮಾತ್ಮನಿಗೆ ಯಾವುದೇ ದೇಹಸಂಬಂಧ ವಿಕೃತಿಗಳಿಲ್ಲ. ಆದ್ದರಿಂದ ಸರ್ವೋತ್ತಮನಾದ ಭಗವಂತನ ಸೇವಾರೂಪವಾಗಿ ನಾವು ಸಕಲ ಸತ್ಕಾರ್ಯಗಳನ್ನು ಮಾಡಬೇಕು ಎಂಬುದು ಈ ಶ್ಲೋಕಗಳ ಇನ್ನೊಂದು ಅರ್ಥ.

ಇಲ್ಲದಿದ್ದ ವಸ್ತುವಿಗೆ ಹುಟ್ಟು ಇಲ್ಲ; ಇದ್ದ ವಸ್ತುವಿಗೆ ನಾಶವಿಲ್ಲ ಎಂದು ಈ ಶ್ಲೋಕಕ್ಕೆ ಕೆಲವರು ಅರ್ಥಮಾಡುತ್ತಾರೆ. ಇದು ನಮ್ಮ ಪ್ರತ್ಯಕ್ಷಕ್ಕೆ ವಿರೋಧವಾಗುತ್ತದೆ. ಹುಟ್ಟುವುದಕ್ಕಿಂತ ಮುಂಚೆ ವಸ್ತುವು ಇದೆಯೆಂದು ಯಾರೂ ಹೇಳುವುದಿಲ್ಲ. ಮೊದಲು ಸ್ಥೂಲರೂಪದಲ್ಲಿ ಇಲ್ಲದ ವಸ್ತುವೇ ಮತ್ತೆ ಹುಟ್ಟುವುದು. ಇದ್ದ ವಸ್ತುವಿಗೇ ಮತ್ತೆ ನಾಶವು ಸಂಭವಿಸುತ್ತದೆ. ಆದುದರಿಂದ ಲೋಕಾನುಭವಕ್ಕೆ ವಿರುದ್ಧವಾದ ಈ ಅರ್ಥವು ಸರಿಯಲ್ಲ.

ಅಸತ್ಯದ ಜ್ಞಾನವು ಉಂಟಾಗಲಾರದು. ಸತ್ಯ ವಸ್ತುವಿಗೆ ಬಾಧವೂ ಬರಲಾರದು. ಜಗತ್ತಿನ ಜ್ಞಾನವೂ ನಮಗೆ ಇದೆ. ಅದಕ್ಕೆ ಬಾಧವೂ ಇದೆ. ಆದುದರಿಂದ ಜಗತ್ತು ಸತ್ಯವೂ ಅಲ್ಲ ಅಸತ್ಯವೂ ಅಲ್ಲ. ಮಿಥ್ಯೆಯೆಂಬ ಹೊಸ ಪ್ರಕಾರವು ಜಗತ್ತಿಗೆ ಇದೆ ಎಂದು ಈ ಶ್ಲೋಕದಿಂದ ಅರ್ಥವನ್ನು ಎಳೆಯುವ ಪ್ರಯತ್ನವನ್ನು ಕೆಲವರು ಮಾಡಿದ್ದಾರೆ. ಇದೂ ಸರಿಯಲ್ಲ. ಸತ್ಯವೂ ಅಸತ್ಯವೂ ಅಲ್ಲದ ವಸ್ತುವನ್ನು ಎಲ್ಲಿಯೂ ನಾವು ಕಾಣಲಾರೆವು . ಚಿಪ್ಪಿಯಲ್ಲಿ ನಮಗೆ ತೋರುವ ಬೆಳ್ಳಿಯೂ ಅಸತ್ಯವೇ ಆಗಿದೆ. ಅಸತ್ಯದ ಜ್ಞಾನವೇ ಇಲ್ಲ ಎಂಬ ನಿಯಮವಿಲ್ಲ. ಅಸತ್ಯದ ಜ್ಞಾನವು ಇಲ್ಲದಿದ್ದರೆ ''ಅದು ಅಸತ್ಯವಲ್ಲ, ಅಸತ್ತಿನ ಜ್ಞಾನವಿಲ್ಲ'' ಎಂದಾದರೂ ನಾವು ಹೇಳುವುದು ಹೇಗೆ, ಅಸತ್ಯವನ್ನು ತಿಳಿಯುವುದರಿಂದಲೇ ನಾವು ಅದನ್ನು ಭ್ರಮೆಯೆಂದು ಕರೆಯುತ್ತೇವೆ. ಇಲ್ಲದಿದ್ದ ವಸ್ತುವಿನ ಜ್ಞಾನವೇ ಭ್ರಾಂತಿಯೆನಿಸುತ್ತದೆ. ಆದುದರಿಂದ ಅಸತ್ಯದ ಜ್ಞಾನವೂ ಇದೆ. ಚಿಪ್ಪಿಯಲ್ಲಿ ತೋರುವ ಬೆಳ್ಳಿಯು ಅಸತ್ಯವಾದರೆ ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ಸಿದ್ಧವಾದ ಜಗತ್ತು ಸತ್ಯವಾಗಿದೆ. ಸತ್ಯವೂ ಅಸತ್ಯವೂ ಅಲ್ಲದ ಪದಾರ್ಥವೇ ಇಲ್ಲ.

ಭಗವಂತನ ಪ್ರತಿಬಿಂಬನಾದ ಜೀವನಿಗೆ ಅನಿತ್ಯವಾದ ಭೌತಿಕ ದೇಹವು ಉಪಾದಿಯಲ್ಲ. ನಿತ್ಯವಾದ ಅಪ್ರಾಕೃತವಾದ ಸ್ವರೂಪದೇಹವೇ ಉಪಾಧಿ ಎಂದು ಹಿಂದೆ ಹೇಳಿದೆ. ಜೀವನಿಗೆ ಪ್ರತ್ಯಕ್ಷ ಸಿದ್ಧವಾದ ಭೌತಿಕ ದೇಹಕ್ಕಿಂತ ಬೇರೆಯಾದ ಅಪ್ರಾಕೃತವಾದ ದೇಹವಿದೆ ಎಂಬುದಕ್ಕೆ ಏನು ಆಧಾರವಿದೆಯೆಂದು ಕೆಲವರು ಪ್ರಶ್ನಿಸುತ್ತಾರೆ. ಭಾಗವತದಲ್ಲಿ ಇದರ ಉಲ್ಲೇಖವಿದೆ. ಸತ್ವ, ರಜಸ್ಸು ಮತ್ತು ತಮೋಗುಣವಿಲ್ಲದ ಮಾಯೆಯ ಸಂಬಂಧವೇ ಇಲ್ಲದ ಭಗವಂತನ ಸ್ಥಾನದಲ್ಲಿ ಸುಂದರ, ಮಂಗಲ ವಿಗ್ರಹಧಾರಿಗಳಾಗಿ ಭಗವಂತನ ಅನುಯಾಯಿಗಳಾಗಿ ಮುಕ್ತ ಜೀವರು ವಿಹರಿಸುವುದುದನ್ನು ವರ್ಣಿಸಲಾಗಿದೆ. ಮಾಯೆ ಮತ್ತು ಗುಣತ್ರಯವಿಲ್ಲದ ಜಾಗದಲ್ಲಿ ಮಾಯಿಕವೂ ಪ್ರಾಕೃತವೂ ಆದ ದೇಹವು ಇರಲು ಹೇಗೆ ಸಾಧ್ಯ ? ಆದ್ದರಿಂದ ಜೀವರಿಗೆ ಪ್ರಾಕೃತವಲ್ಲದ ಚೈತನ್ಯಾತ್ಮಕವಾದ ದೇಹವಿದೆಯೆಂದು ಸಿದ್ಧವಾಗುತ್ತದೆ.

ವೇದ ಮತ್ತು ಜೀವ ಬ್ರಹ್ಮೈಕ್ಯ

ಕೆಲವರು, ನಿಜವಾದ ಮುಕ್ತಿಯಲ್ಲಿ ಜೀವ -ಪರಮಾತ್ಮರಿಗೆ ಭೇದವಾಗಲೀ ಇಲ್ಲ. ಭಾಗವತದಲ್ಲಿ ಮಾಡಿದ, ವರ್ಣಿಸಿದ ರೀತಿಯ ನಿಜವಾದ ಮುಕ್ತಿಯಲ್ಲ. ಇದು ಮುಕ್ತಿಯ ಪೂರ್ವಾವಸ್ಥೆಯೆನಿಸಿದ ಅಮುಖ್ಯವಾದ ಮುಕ್ತಿಯಾಗಿದೆಯೆಂದು ವಾದಿಸುತ್ತಾರೆ. ಆದರೆ ಪ್ರಕೃತಿ ಮತ್ತು ಮಾಯೆಯ ಸಂಬಂಧ ಇಲ್ಲದಿದ್ದಾಗ ಅದು ನಿಜವಾದ ಪ್ರಧಾನವಾದ ಮುಕ್ತಿಯೇ ಆಗಿರಬೇಕು. ಮಾತ್ರವಲ್ಲದೆ ಪುರಾಣೋಪನಿಷತ್ತುಗಳಲ್ಲಿ ಪ್ರಧಾನವಾದ ಮುಕ್ತಿಯಲ್ಲಿಯೇ ಜೀವಪರಮಾತ್ಮರ ಭೇದವನ್ನು ಪ್ರತಿಪಾದಿಸುವ ಅನೇಕಾನೇಕ ವಾಕ್ಯಗಳಿವೆ. ಪರಬ್ರಹ್ಮನ ಸಾಕ್ಷಾತ್ಕಾರವನ್ನು ಪಡೆದು ಪುಣ್ಯಪಾಪಗಳನ್ನು ದಾಟಿದ ಜ್ಞಾನಿಗಳು ಪರಮಾತ್ಮನಿಂದ ಭಿನ್ನರಾಗಿಯೇ ಪರಮಾತ್ಮನ ಜೊತೆಗೆ ಮತ್ತು ಮುಕ್ತ ಜೀವರ ಜೊತೆಗೆ ವಿಹರಿಸುವುದನ್ನು ಆ ವಾಕ್ಯಗಳಲ್ಲಿ ವರ್ಣಿಸಿದ್ದಾರೆ. ಮುಕ್ತಿಯಲ್ಲಿ ಜೀವನು ಪರಮಾತ್ಮನಾಗುವುದಿಲ್ಲ. ''ಜ್ಞಾನಾನಂದರೂಪವನ್ನು ಪಡೆದು ಪರಮಾತ್ಮನಿಗೆ ಸದೃಶನಾಗುವನು'' ಎಂದು ಮುಂತಾಗಿ ಸ್ಪಷ್ಟವಾಗಿ ಭಿನ್ನತೆಯನ್ನು ಮತ್ತು ಭಿನ್ನ ಭಿನ್ನ ರೀತಿಯ ಸಾಧನೆಗಳನ್ನು ಮಾಡಿ ಮೋಕ್ಷವನ್ನು ಪಡೆದ ಜೀವರಲ್ಲಿ ತಾರತಮ್ಯವನ್ನು ಪ್ರತಿಪಾದಿಸಿದ್ದಾರೆ.

ತಾರತಮ್ಯವಿದ್ದರೂ ರಾಗದ್ವೇಷಾದಿ ದೋಷರಹಿತರಾದ ಅವರಲ್ಲಿ ಪರಸ್ಪರ ಮೈತ್ರಿ ಇರುವುದನ್ನೂ ವಿವರಿಸಿದ್ದಾರೆ.

ಆದರೆ ''ಯತ್ರ ತ್ವಸ್ಯ ಸರ್ವಮತ್ಮೈವಾಭೂತ್'' ಎಂಬ ವೇದವಾಕ್ಯದಲ್ಲಿ ಮುಕ್ತಿಯಲ್ಲಿ ಆತ್ಮ ಒಂದೇ ಇರುವುದು ಎಂದು ಅಭೇದವನ್ನು ಹೇಳಿದಂತೆ ತೋರುತ್ತದೆ. ಆದರೆ ಆ ವಾಕ್ಯಕ್ಕೆ ಅರ್ಥವೇ ಬೇರೆಯಾಗಿದೆ. ಅದು ಮುಕ್ತಿಯಲ್ಲಿಯೂ ಭೇದವಿದೆಯೆಂಬುದನ್ನು ಸಮರ್ಥಿಸುವ ವಾಕ್ಯವಾಗಿದೆ. ಜ್ಞಾನವುಂಟಾಗಲು ಜ್ಞಾತೃಜ್ಞೇಯ ಮುಂತಾದ ಅನೇಕ ವಸ್ತುಗಳು ಬೇಕು, ಮುಕ್ತಿಯಲ್ಲಿ ಆತ್ಮವೊಂದೇ ಇದ್ದು ಬೇರೆ ವಸ್ತುವೇ ಇಲ್ಲವಾದರೆ ಜ್ಞಾನವೇ ಉಂಟಾಗಲಾರದು. ಜ್ಞಾನವೇ ಇಲ್ಲದ ಈ ಅವಸ್ಥೆಯು ಮುಕ್ತಿಯಾದರೆ ಮುಕ್ತಿಯನ್ನು ಯಾರು ಬಯಸುವರು ? ಮುಕ್ತಿಯಲ್ಲಿಯೂ ಅನೇಕ ವಸ್ತುಗಳಿವೆ, ಭೇದವಿದೆ, ಜ್ಞಾನವಿದೆ ಎಂಬುದನ್ನೇ ಈ ವಾಕ್ಯವು ಪ್ರತಿಪಾದಿಸುತ್ತದೆ.

''ನ ತು ತತ್ ದ್ವಿತೀಯಮಸ್ತಿ'' ಎಂಬ ವಾಕ್ಯವೂ ಜೀವ ಬ್ರಹ್ಮರ ಭೇದವನ್ನು ನಿಷೇಧಿಸಲು ಹೊರಟಿಲ್ಲ. ಭಗವಂತನ ಅನೇಕ ಅವತಾರ ರೂಪಗಳಲ್ಲಿ ಪರಸ್ಪರ ಭಿನ್ನತೆಯಿಲ್ಲ ಎಂಬುದನ್ನೇ ಅದು ಪ್ರತಿಪಾದಿಸುತ್ತದೆ. ಭ್ರಾಂತಿಯ ಲವಲೇಶವೂ ಇಲ್ಲದ ಸರ್ವಜ್ಞನೂ, ನಿರ್ದೋಷನೂ ಆದ ಭಗವಂತನು ಜೀವ ಜಡಗಳನ್ನು ತನ್ನಿಂದ ಬೇರೆಯಾಗಿ ನೋಡುತ್ತಿದ್ದಾನೆ. ಆದ್ದರಿಂದ ಅಲ್ಲಿ ವಾಸ್ತವವಾದ ಭಿನ್ನತೆಯಿದೆ. ಆದರೆ ತನ್ನ ಅವತಾರ ರೂಪಗಳನ್ನು ತನ್ನಿಂದ ಬೇರೆಯೆಂದು ಭಗವಂತನು ತಿಳಿಯದಿದ್ದುದರಿಂದ ಆ ಅವತಾರಗಳೆಲ್ಲ ಭಗವಂತನ ಸ್ವರೂಪಗಳೇ ಆಗಿವೆ ಎಂಬುದೇ ಈ ವಾಕ್ಯದ ಅರ್ಥವಾಗಿದೆ.

''ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ'' ಎಂಬ ವಾಕ್ಯವು ''ಪರಬ್ರಹ್ಮನ ಜ್ಞಾನದಿಂದ ಜೀವನು ಪರಬ್ರಹ್ಮನಾಗುವುದಿಲ್ಲ. ಅವನು ಬ್ರಹ್ಮನಾಗುವನು ಅಂದರೆ ಪೂರ್ಣತ್ವವನ್ನು ಮಾತ್ರ ಪಡೆಯುವನು ಎಂಬುದಾಗಿದೆ. ಮುಕ್ತಿಯಲ್ಲಿಯೂ ಜೀವ ಬ್ರಹ್ಮರಿಗೆ ಭೇದವನ್ನೇ ಹೇಳಿದೆ. ಜೀವನು ಸ್ವತಃ ಪರಬ್ರಹ್ಮನಾಗಿದ್ದರೆ ಸಂಸಾರದಲ್ಲಿ ತಾತ್ಕಾಲಿಕವಾಗಿಯಾದರೂ ಜೀವನಿಗೆ ದುಃಖ ಮತ್ತು ಅಪೂರ್ಣತೆ ಉಂಟಾಗುವುದು ಹೇಗೆ ? ''ಸ ಆತ್ಮಾ ತತ್ವ ಮಸಿ'' ಎಂಬ ವಾಕ್ಯದಲ್ಲಿ ಅಹಂಕಾರದಿಂದ ಸ್ತಬ್ಧನಾದ ಶ್ವೇತಕೇತುವಿಗೆ ಸರ್ವರಿಗೂ ಬಿಂಬರೂಪಿಯೂ ಸ್ವತಂತ್ರನೂ ಸರ್ವೋತ್ತಮನೂ ಆದ ಭಗವಂತನನ್ನು ತಿಳಿಸಿಕೊಟ್ಟು ಎಷ್ಟು ಜ್ಞಾನವನ್ನು ಪಡೆದರೂ ಭಗವಂತನನ್ನು ತಿಳಿಯದೆ ಅದೆಲ್ಲ ನಿರರ್ಥಕ ಎಂಬುದನ್ನು ಪ್ರತಿಪಾದಿಸಿ, ಅನೇಕ ದೃಷ್ಟಾಂತಗಳನ್ನು ಉದಾಹರಿಸಿ ಜೀವನು ಭಗವಂತನ ಅಧೀನನು ಎಂಬುದನ್ನೇ ಸಮರ್ಥಿಸಲಾಗಿದೆ. ಹೀಗೆ ಅಭೇದವನ್ನು ಪ್ರತಿಪಾದಿಸುವಂತೆ ತೋರುವ ವಾಕ್ಯಗಳ ಪೂರ್ವಾಪರ ಪರಿಶೀಲನೆಯನ್ನು ಮಾಡಿ ಅವುಗಳು ಭೇದವನ್ನೇ ಪ್ರತಿಪಾದಿಸುತ್ತವೆಂಬುದನ್ನು ಸಮರ್ಥಿಸಿ ವೇದ-ಪುರಾಣಗಳ ಅಪೂರ್ವ ದಾಖಲೆಗಳಿಂದ ಈ ವಾಕ್ಯಗಳ ವಿವರಣೆಯನ್ನೂ ಶ್ರೀಮಧ್ವಾಚಾರ್ಯರು ಮಾಡಿದ್ದಾರೆ. ವೇದಗಳಲ್ಲಿ ಅನೇಕ ದೇವತೆಗಳ ಉಲ್ಲೇಖವಿದ್ದರೂ, ''ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ'' ಮುಂತಾದ ಬಹಳಷ್ಟು ವಾಕ್ಯಗಳು ಬ್ರಹ್ಮರುದ್ರಾದಿ ದೇವತೆಗಳಿಗಿಂತ ಶ್ರೀಹರಿಯೇ ಉತ್ತಮನೆಂದು ಅತ್ಯಂತ ಸ್ಪಷ್ಟವಾಗಿ ತಿಳಿಸಿದ್ದರಿಂದ, ಅವನನ್ನೇ ಸರ್ವೋತ್ತಮನೆಂದು ತಿಳಿದು ನಮ್ಮ ಕರ್ತವ್ಯಾಚರಣೆಯಿಂದ ಪೂಜಿಸಬೇಕು.

''ನಾಯಂ ಹಂತಿ ನ ಹನ್ಯತೇ''

ಮುಂದೆ ಭಗವದ್ಗೀತೆಯಲ್ಲಿ ''ನಾಯಂ ಹಂತಿ ನ ಹನ್ಯತೇ'' ಮುಂತಾದ ಶ್ಲೋಕಗಳಿಂದ ಜೀವಾತ್ಮನ ಅಮರತ್ವವನ್ನೂ ಭಗವಂತನ ಸ್ವಾತಂತ್ರ್ಯವನ್ನೂ ಸಮರ್ಥಿಸಲಾಗಿದೆ. ಮೋಹ, ಅಹಂಕಾರಗಳೇ ಸಂಸಾರದಲ್ಲಿ ನಮಗಿರುವ ದೊಡ್ಡ ಪಿಡುಗುಗಳು. ಶರೀರಕ್ಕಿಂತ ಬೇರೆಯಾದ ನಿತ್ಯನಾದ ಆತ್ಮನನ್ನು

ಖಚಿತವಾಗಿ ತಿಳಿದುಕೊಳ್ಳದೇ ಶಾರೀರಿಕ ವ್ಯಾಮೋಹಕ್ಕೆ ನಾವು ಬಲಿಯಾಗುತ್ತೇವೆ. ಅದರಂತೆ ನಮಗಿಂತ ಭಿನ್ನನಾದ ಭಗವಂತನನ್ನು ತಿಳಿಯದೆ ನಾವೇ ಸ್ವತಂತ್ರರು, ನಾವೇ ಒಡೆಯರು ಎಂಬ ಭ್ರಮೆಗೆ ತುತ್ತಾಗಿ ಅಹಂಕಾರದಿಂದ ವರ್ತಿಸುತ್ತೇವೆ. ಈ ದೇಹದಿಂದಲೂ ಪರಮಾತ್ಮನಿಂದಲೂ ಭಿನ್ನವಾದ ತನ್ನ ನಿಜ ವ್ಯಕ್ತಿತ್ವವನ್ನು ಅರಿತಾಗಲೇ ಈ ವ್ಯಾಮೋಹ ಮತ್ತು ಅಹಂಕಾರಗಳ ನಿರಸನವಾಗುವುದು. ''ನಾಯಂ ಹಂತಿ ನ ಹನ್ಯತೇ'' ಎಂಬುದಾಗಿ ಗೀತೆಯು ಜೀವನು ಅಸ್ವತಂತ್ರನು, ಆದರೆ ನಿತ್ಯನು ಎಂಬುದಾಗಿ ಪ್ರತಿಪಾದಿಸಿ ಜೀವನ ನಿಜಸ್ವರೂಪವನ್ನು ತಿಳಿಸಿಕೊಟ್ಟಿದೆ. ಜೀವನು ಪರಮಾತ್ಮನ ಪ್ರತಿಬಿಂಬದಂತಿದ್ದಾನೆ. ಪ್ರತಿಬಿಂಬವು ಪೂರ್ತಿಯಲ್ಲದಿದ್ದರೂ ಅನೇಕ ಅಂಶಗಳಲ್ಲಿ ಬಿಂಬವನ್ನು ಹೋಲುತ್ತದೆ. ಜೀವನೂ ಬಿಂಬರೂಪಿಯಾದ ಭಗವಂತನಂತೆ ಜ್ಞಾನಾನಂದರೂಪಿಯಾಗಿ ಅನಾದಿ ನಿತ್ಯನಾಗಿದ್ದಾನೆ. ಆದ್ದರಿಂದ ಈ ಜಡವಾದ ದೇಹ-ಅಂತಃಕರಣಗಳೇ ತಾನಲ್ಲ, ಇದಕ್ಕಿಂತ ಭಿನ್ನವಾದ ಸನಾತನ ವ್ಯಕ್ತಿತ್ವ ತನಗಿದೆ ಎಂಬುದನ್ನು ಅರಿತು ಶೋಕ-ಮೋಹಗಳಿಗೆ ಗುರಿಯಾಗದೆ ನಾವು ಜಗತ್ತಿನಲ್ಲಿ ಬಾಳಬಹುದು. ಪ್ರತಿಬಿಂಬವು ಪೂರ್ತಿಯಾಗಿ ಬಿಂಬದ ಅಧೀನವಾಗಿರುವಂತೆ ನಾವೂ ಪರಮಾತ್ಮನ ಅವಲಂಬನೆಯಲ್ಲಿದ್ದೇವೆ ಎಂಬ ಭಾವನೆಯನ್ನು ಇದರ ಜೊತೆಗೆ ಬೆಳೆಸಿಕೊಂಡು ವಿನಯ, ನಿರಹಂಕಾರಗಳಿಂದ ಬದುಕುವುದನ್ನು ಕಲಿಯಬೇಕು. ಜೀವನು ಪರಮಾತ್ಮನ ಪ್ರತಿಬಿಂಬನೆಂಬ ತಾತ್ವಿಕ ದೃಷ್ಟಿಯು ನಾವು ನಿತ್ಯ ಚೈತನ್ಯಾತ್ಮಕರು, ಭಗವಂತನ ಅಧೀನರು ಎಂಬ ಭಾವನೆಯನ್ನು ಬಲಗೊಳಿಸಿ ಜಾಡ್ಯ, ಅಹಂಭಾವಗಳನ್ನು ನಿವಾರಿಸುವ ಅಮೃತ ಸಂಜೀವಿನಿಯಾಗಿದೆ. ಆದಕ್ಕಾಗಿ ಭಗವದ್ಗೀತೆಯು ಈ ಪ್ರಕರಣದಲ್ಲಿ ಜೀವನನ್ನೂ ಈಶ್ವರನನ್ನೂ ಜೊತೆ ಜೊತೆಯಾಗಿ ನಿರೂಪಿಸಿ ಜೀವನ ನಿತ್ಯತ್ವವನ್ನೂ ಈಶ್ವರನ ಸ್ವಾತಂತ್ರ್ಯವನ್ನೂ ಪ್ರತಿಪಾದಿಸಿದೆ. ಜೀವನು ನಿತ್ಯನಾಗಿದ್ದರೂ ಭೌತಿಕ ದೇಹದ ಸಂಬಂಧದಿಂದ ಜನನ ಮರಣಾದಿ ವಿಕಾರಗಳಿಗೆ ಒಳಗಾಗುವನು. ಆದರೆ ಭೌತಿಕ ದೇಹದ ಸಂಬಂಧವೇ ಇಲ್ಲದಿದ್ದರಿಂದ ಜನನ ಮರಣ ಮುಂತಾದ ವಿಕೃತಿಗಳನ್ನು ಮೀರಿದ ಜಗತ್ಕರ್ತನೂ, ಸರ್ವವ್ಯಾಪಕನೂ ಆದ ಪರಮಾತ್ಮನು ಸರ್ವಸ್ವತಂತ್ರನಾಗಿದ್ದಾನೆ. ಅವನ ಶಕ್ತಿಯಿಂದ ನಮ್ಮ ಎಲ್ಲಾ ವ್ಯವಹಾರಗಳು ನಡೆಯುವುದರಿಂದ ಪರಮಾತ್ಮನಂತೆ ತಾನೂ ನಿತ್ಯನೆಂದು ಅಹಂಕಾರಿಯಾಗದೆ ಪರಮಾತ್ಮನ ಸೇವಾರೂಪವಾಗಿ ಭಕ್ತಿಭಾವನೆಯಿಂದ ನಮ್ಮ ಕರ್ತವ್ಯದಲ್ಲಿ ತೊಡಗಬೇಕು ಎಂಬುದೇ ಈ ಪ್ರಕರಣದ ಮಥಿತಾರ್ಥವಾಗಿದೆ. ಜೀವರೂ ನಿತ್ಯರು, ಭಗವಂತನೂ ನಿತ್ಯ. ಆದರೂ ಭಗವಂತನಲ್ಲಿ ಇನ್ನೊಂದು ವಿಶಿಷ್ಟತೆ ಇದೆ. ನಾವು ನಿತ್ಯರಾಗಿದ್ದರೆ ಪರಮಾತ್ಮನು ನಿತ್ಯಗಳಿಗೂ ನಿತ್ಯನೆನಿಸಿದ್ದಾನೆ. ಪರಮಾತ್ಮನು ನಮ್ಮಲ್ಲಿ ರಕ್ಷಕನಾಗಿ ನೆಲೆಸಿದ್ದರಿಂದ ನಾವು ಅನಾದಿಕಾಲದಿಂದಲೂ ನಿತ್ಯರಾಗಿ ಇದ್ದೇವು. ಪದಾರ್ಥಗಳ ಸಹಜ ಧರ್ಮಗಳೂ ಭಗವಂತನ ಅಧೀನವೇ ಆಗಿವೆ. ನಿತ್ಯವಸ್ತುಗಳಾಗಿರಲಿ, ಅನಿತ್ಯ ಪದಾರ್ಥಗಳಾಗಿರಲಿ ಅವೆಲ್ಲವುಗಳ ಸಹಜ ಧರ್ಮ, ಶಕ್ತಿಗಳು ಭಗವಂತನಿಂದಾಗಿಯೇ ಅವುಗಳಲ್ಲಿವೆ. ಆದ್ದರಿಂದ ಭಗವಂತ ನಂತೆ ನಮ್ಮಲ್ಲಿಯೂ ನಿತ್ಯತೆಯಿರುವಾಗ ನಾವು ಯಾಕೆ ಭಗವಂತನನ್ನು ಆಶ್ರಯಿಸಬೇಕು ಎಂದು ಭಾವಿಸದೆ ಅವನ ಸೇವೆಯನ್ನು ನಾವು ಮಾಡಬೇಕು.

ಜೀವನನ್ನು ಪರಮಾತ್ಮನ ಬಿಂಬನೆಂದೂ ಪರಮಾತ್ಮನ ಅಂಶವೆಂದೂ ಅಲ್ಲಲ್ಲಿ ಪುರಾಣ-ಉಪನಿಷತ್ತುಗಳಲ್ಲಿ ಉಲ್ಲೇಖಿಸಲಾಗಿದೆ. ಜೀವನು ಪರಮಾತ್ಮನ ಪ್ರತಿಬಿಂಬನಾಗಿರುವುದರಿಂದ ಜೀವ ಮತ್ತು ಪರಮಾತ್ಮರು ಬೇರೆಯಲ್ಲವೆಂದು ಭಾವಿಸಬಾರದು. ಅದರಂತೆ ಜೀವನು ಪರಮಾತ್ಮನ ಅಂಶವೆಂದರೆ ಪರಮಾತ್ಮನದ್ದೇ ಒಂದು ಭಾಗ, ಒಂದು ತುಣುಕು ಎಂದೂ ತಿಳಿದುಕೊಳ್ಳಬಾರದು. ನೀರಿನಲ್ಲಿ ತೋರುವ ಸೂರ್ಯನ ಪ್ರತಿಬಿಂಬವು ಸೂರ್ಯನಿಗೆ ಅಧೀನವಾಗಿದೆ ಮತ್ತು ಸೂರ್ಯನಂತೆ ಕಾಣುತ್ತದೆ. ಅದರಂತೆ ಜೀವನು ಜ್ಞಾನಾನಂದ ಸ್ವರೂಪದಲ್ಲಿ ಪರಮಾತ್ಮನಂತೆ ಇದ್ದಾನೆ. ಪರಮಾತ್ಮನಿಗೆ ಅಧೀನನಾಗಿಯೇ ಇದ್ದಾನೆಂಬ ಅಭಿಪ್ರಾಯದಿಂದಲೇ ಜೀವನನ್ನು ಪರಮಾತ್ಮನ ಪ್ರತಿಬಿಂಬನೆಂದು ಕರೆಯಲಾಗಿದೆ. ಜೀವನು

ಪರಮಾತ್ಮನ ಅಂಶ ಎಂಬುದಕ್ಕೂ ಇದೇ ಅಭಿಪ್ರಾಯವಾಗಿದೆ. ಪರಮಾತ್ಮನಲ್ಲಿರುವ ಎಲ್ಲಾ ಶಕ್ತಿ, ಜ್ಞಾನ, ಗುಣಗಳು ಜೀವನಲ್ಲಿಲ್ಲ. ಕೆಲವು ಅಂಶದಲ್ಲಿ ಮಾತ್ರ ಭಗವಂತನ ಸಾದೃಶ್ಯವಿರುವುದರಿಂದ ಜೀವನು ಭಗವಂತನ ಅಂಶನಾಗಿದ್ದಾನೆ. ಭಗವಂತನು ಸಮುದ್ರನಾಗಿದ್ದರೆ ಜೀವನು ಬರೇ ಒಂದು ಕಣ ಮಾತ್ರ.

ಭಗವಂತನ ಮಹಿಮೆಗಳು ಅವನ ಸ್ವರೂಪ, ಕಾಲ್ಪನಿಕವಲ್ಲ

ಈ ಪ್ರಕರಣದಲ್ಲಿ ಭಗವಂತನನ್ನು ಸ್ಥಾಣು ಎಂಬುದಾಗಿ ಕರೆದಿದ್ದಾರೆ. ಸ್ಥಾಣು ಎಂದರೆ ಯಾವುದೇ ಕ್ರಿಯೆಯಿಲ್ಲದವನು ಎಂದು ಅರ್ಥ. ಜಗತ್ತೆಲ್ಲವನ್ನೂ ತಿಳಿದು ಅದರ ಸೃಷ್ಟಿ, ಸಂಹಾರಾದಿ ವ್ಯಾಪಾರವನ್ನು ಮಾಡುವ ಪರಮಾತ್ಮನು ನಿಷ್ಕ್ರಿಯನಾಗುವುದು ಹೇಗೆ ? ಸೃಷ್ಟಿ ಮುಂತಾದ ವ್ಯಾಪಾರವು ಕ್ರಿಯೆಯೇ ಅಲ್ಲವೇ ? ಎಂದು ಪ್ರಶ್ನಿಸಿ ಪರಮಾತ್ಮನ ಜಗತ್ಕರ್ತೃತ್ವವೇ ಕಾಲ್ಪನಿಕವೆಂದು ಕೆಲವರು ವಾದಿಸುತ್ತಾರೆ. ಇದು ಸರಿಯಲ್ಲ. ವೇದವು ಪ್ರತಿಪಾದಿಸಿದ ಜಗತ್ಕರ್ತೃತ್ವ ಮೊದಲಾದ ಭಗವಂತನ ಮಹಿಮೆಯು ಕಾಲ್ಪನಿಕವಾಗುವುದು ಹೇಗೆ ? ಭಗವಂತನ ಅನಂತ ಗುಣ, ಶಕ್ತಿ, ಮಹಿಮೆಗಳನ್ನು ನಿರೂಪಿಸಿ ಜೀವರಲ್ಲಿ ಭಗವದ್ಭಕ್ತಿಯನ್ನು ಪ್ರವರ್ಧಿಸಿ ಅವನ ಅನುಗ್ರಹವನ್ನು ಪಡೆದು ಜೀವರೆಲ್ಲರೂ ಅನಾದಿ ಭವಬಂಧನದಿಂದ ಬಿಡುಗಡೆ ಹೊಂದಬೇಕೆಂಬುದಾಗಿಯೇ ವೇದಗಳು ಹೊರಟಿವೆ. ಇದಕ್ಕೆ ವ್ಯತಿರಿಕ್ತವಾಗಿ ವೇದವು ಯಾವುದನ್ನೂ ಹೇಳಲಾರದು. ಭಗವಂತನ ಗುಣಮಹಿಮೆಗಳೆಲ್ಲ ಕಾಲ್ಪನಿಕವಾದರೆ ಜೀವರಿಗೆ ಅವನಲ್ಲಿ ಭಕ್ತಿ ಪ್ರಚೋದನೆಯಾಗುವುದು ಹೇಗೆ ? ಭಗವಂತನ ಅನುಗ್ರಹಕ್ಕೆ ಭಕ್ತಿಯೇ ಕಾರಣವಾಗಿದೆ. ಲೋಕದಲ್ಲಿಯೂ ನಾವು ಪ್ರೇಮದಿಂದಲೇ ಇನ್ನೊಬ್ಬರನ್ನು ಪ್ರಸನ್ನಗೊಳಿಸುತ್ತೇವೆ. ಹೀಗಿರುವಾಗ ಪ್ರೇಮವಿಲ್ಲದೆ ಭಗವಂತನನ್ನು ಪ್ರಸನ್ನೀಕರಿಸುವುದು ಹೇಗೆ ? ಭಗವತ್ಪ್ರೇಮವೇ ಭಕ್ತಿಯೆನಿಸಿದೆ. ಭಗವಂತನ ಗುಣಮಹಿಮೆಗಳೆಲ್ಲ ಮಿಥ್ಯೆಯೆಂಬುದು ಭಕ್ತಿಭಾವನೆಗೆ ವಿಸಂಗತವಾದುದರಿಂದ ವೇದದಲ್ಲಿ ಇಂತಹ ಮಾತುಗಳು ಇರಲಾರವು. ಆದ್ದರಿಂದ ಪರಮಾತ್ಮನ ಸೃಷ್ಟಿ, ಸಂಹಾರ ಮುಂತಾದ ವ್ಯಾಪಾರವೆಲ್ಲವೂ ಸತ್ಯವೇ ಆಗಿದೆ. ಅವನು ನಿಷ್ಕ್ರಿಯನೂ ಹೌದು. ಜಗತ್ಕರ್ತನೂ ಹೌದು. ನಿರ್ಗುಣನಾಗಿದ್ದರೂ ಅವನು ಗುಣಪೂರ್ಣನಾಗಿದ್ದಾನೆ. ಅವನ ಅಚಿಂತ್ಯ ಶಕ್ತಿಯ ಬಲದಿಂದ ಈ ವಿರೋಧಾಭಾಸವನ್ನೆಲ್ಲ ಹೊಂದಿಸಬಹುದು. ಅವನಲ್ಲಿ ಭೌತಿಕವಾದ ದೇಹವಿಲ್ಲದಿರುವಂತೆ ಜಡವಾದ ಕ್ರಿಯೆಯೂ ಇಲ್ಲ. ಅವನ ಗುಣ ಕ್ರಿಯೆಗಳೆಲ್ಲ ಚೈತನ್ಯಮಯವೇ. ಆದ್ದರಿಂದ ಸರ್ವಜಗತ್ಕರ್ತನಾಗಿದ್ದರೂ ಜಡವಾದ ಕ್ರಿಯೆಯಿಲ್ಲದಿರುವುದರಿಂದ ಅವನನ್ನು ನಿಷ್ಕ್ರಿಯ ನಿರ್ವಿಕಾರನೆಂದು ಹೇಳಬಹುದು. ಅವನ ಜ್ಞಾನ, ಬಲ, ಕ್ರಿಯಾದಿ ಶಕ್ತಿಗಳೆಲ್ಲ ಅವನ ಸ್ವರೂಪವೇ ಆಗಿವೆ. ಅವನಲ್ಲಿ ಅನಂತ ಗುಣಕ್ರಿಯೆಗಳಿವೆ ಎಂದು "ಪರಾಸ್ಯ ಶಕ್ತಿಃ ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ" ಮುಂತಾದ ಅನೇಕ ವಾಕ್ಯಗಳೂ ಹೇಳುತ್ತಿರುವಾಗ ಭಗವಂತನು ನಿಷ್ಕ್ರಿಯನಾಗಿರುವುದು ಹೇಗೆ ? ಅವನ ಕ್ರಿಯೆಗಳು ಅವನ ಸ್ವರೂಪವೇ ಆಗಿರುವಾಗ ಅದು ಮಾಯೆ ಅಥವಾ ಕಲ್ಪನೆ ಆಗಿರಲು ಸಾಧ್ಯವೇ ?

ಅದರಂತೆ ಭಗವಂತನಿಗೆ ಶರೀರವಿಲ್ಲವೆಂದೂ ವೇದವು ಹೇಳಿದೆ. ಅವನ ಸುಂದರ ಶರೀರ, ಅಂಗಾಂಗಗಳ ವರ್ಣನೆಯನ್ನೂ ಮಾಡಿದೆ. ಇವೆರಡೂ ಸರಿಯೇ. ಅವನಿಗೆ ಭೌತಿಕ ದೇಹವಿಲ್ಲದಿದ್ದರೂ ಅಪ್ರಾಕೃತವಾದ ಸುಂದರ ಚಿದಾನಂದಮಯ ವಿಗ್ರಹವಿರುವುದರಿಂದ ಈ ವಿರೋಧಾಭಾಸವನ್ನು ಪರಿಹರಿಸಬೇಕು. ಭಗವಂತನು ಒಬ್ಬನೇ ಆದರೂ ರಾಮ, ಕೃಷ್ಣ, ನರಸಿಂಹ ಮುಂತಾದ ಅನೇಕ ಅವತಾರ ರೂಪಗಳು ಅವನಿಗೆ ಇವೆ. ನಾನಾ ಪದಾರ್ಥಗಳಲ್ಲಿ ನಿಯಾಮಕನಾಗಿ ನೆಲೆಸಿರುವ ಅನಂತ ರೂಪಗಳೂ ಅವನಿಗೆ ಇವೆ. ಹೀಗೆ ಪರಮಾತ್ಮನು ಒಬ್ಬನೂ ಆಗಿರುವನು. ಅನೇಕ ಅನಂತನೂ ಆಗಿರುವನು. ಅವನಲ್ಲಿ ಅನಂತ ಗುಣಕ್ರಿಯಾಶಕ್ತಿಗಳಿವೆ. ಈ ಧರ್ಮಗಳೆಲ್ಲ ಅವನಿಂದ ಬೇರೆಯಲ್ಲ. ಈ ಗುಣಕ್ರಿಯೆಗಳೆಲ್ಲ

ಪರಮಾತ್ಮನಿಂದ ಬೇರೆಯಾದರೆ ಜಡವೂ ಅಸ್ವಾಭಾವಿಕವೂ ಆಗುತ್ತದೆ. ಪರಮಾತ್ಮನ ಮಹಿಮೆಗಳು ಜಡವೂ ಅಸ್ವಾಭಾವಿಕವೂ ಅನಿತ್ಯವೂ ಆಗಿರಲು ಸಾಧ್ಯವಿಲ್ಲ. ಆದ್ದರಿಂದ ಭಗವಂತನ ಗುಣಕ್ರಿಯಾದಿ ಮಹಿಮೆಗಳೆಲ್ಲ ಭಗವಂತನಿಂದ ಬೇರೆಯಲ್ಲ. ಭಗವಂತನ ಸ್ವರೂಪವೇ ಆಗಿವೆ ಎಂದು ವೇದವಾಕ್ಯಗಳು ಬೋಧಿಸುತ್ತವೆ. ಪರಮಾತ್ಮನ ಧರ್ಮಗಳನ್ನು ಪರಮಾತ್ಮನಿಂದ ಭಿನ್ನವೆಂದು ತಿಳಿದರೆ ಮಹಾ ಅನರ್ಥವಿದೆಯೆಂದೂ ಎಚ್ಚರಿಸಿವೆ. ಪರಮಾತ್ಮನೂ, ಅವನ ಸದ್ಗುಣಗಳೂ ಒಂದೇ ಆಗಿದ್ದರೂ ಅವನಲ್ಲಿ ಸದ್ಗುಣಗಳಿವೆ ಎಂದು ನಾವು ವ್ಯವಹರಿಸಬಹುದು. ತನ್ನಲ್ಲಿ ತಾನು ಇರಲಾರನು, ಆದರೆ ಭಗವಂತನದೇ ಆದ ಗುಣಕ್ರಿಯಾದಿಗಳು ಭಗವಂತನಲ್ಲಿ ಇವೆ. ವಿಶೇಷವೆಂಬ ವಸ್ತು ಶಕ್ತಿಯಿಂದ ಈ ವೈಚಿತ್ರ್ಯವನ್ನು ಕೂಡಿಸಬಹುದು. ಹೀಗೆ ಭಗವಂತನ ಏಕತೆಯಲ್ಲಿ ಅನೇಕತ್ವ, ಅವನ ಸ್ವರೂಪವೇ ಆದ ದೇಹ, ಗುಣ, ಕ್ರಿಯೆ ಮುಂತಾದವುಗಳ ಜೊತೆಗೆ ಇರುವ ಸಂಬಂಧ ಮುಂತಾದ ವೈಚಿತ್ರ್ಯವನ್ನು ಭಗವಂತನ ಅಚಿಂತ್ಯ ಶಕ್ತಿಯ ಬಲದಿಂದಲೇ ನಾವು ಕೂಡಿಸಬೇಕು.

ನಿಷ್ಕಾಮ ಕರ್ಮದ ಸ್ವರೂಪ

ಇಷ್ಟರವರೆಗೆ ಜೀವ ಮತ್ತು ಭಗವಂತನ ಸ್ವರೂಪವನ್ನು ಗೀತೆಯು ತಿಳಿಸಿ ಮೋಹ ಮತ್ತು ಅಹಂಕಾರವನ್ನು ಮೀರಿ ನಿಲ್ಲುವ ಬಗೆಯನ್ನು ತಿಳಿಸಿಕೊಟ್ಟಿದೆ. ಇನ್ನು ಮುಂದೆ ಭಗವಂತನ ಸಾಕ್ಷಾತ್ಕಾರಕ್ಕೆ ಸಾಧನವಾದ ಭಾಗವತ ಧರ್ಮವನ್ನು ಗೀತೆಯು ಪ್ರತಿಪಾದಿಸುತ್ತದೆ. ಜ್ಞಾನವನ್ನು ಸಾಂಖ್ಯವೆಂದೂ ಜ್ಞಾನಸಾಧನೆಯನ್ನು ಯೋಗವೆಂದೂ ಗೀತೆಯಲ್ಲಿ ಕರೆಯಲಾಗಿದೆ. ಸಾಂಖ್ಯ ಯೋಗಗಳೆಂದರೆ ಸಾಂಖ್ಯಮತ, ಯೋಗಮತಗಳೆಂದು ಅರ್ಥ ಮಾಡಬಾರದು.

ಭಗವಂತನ ಪೂಜೆಯ ಅನುಸಂಧಾನವಿಲ್ಲದ ಯಾವುದೇ ಪ್ರವೃತ್ತಿ, ನಿವೃತ್ತಿಗಳಲ್ಲಿ ತೊಡಗದೆ ತನಗೆ ಉಚಿತವಾದ ಕರ್ತವ್ಯವನ್ನು ಆಚರಿಸುವುದೇ ಭಾಗವತ ಧರ್ಮವೆನಿಸಿದೆ. ಭಗವಂತನು ಸರ್ವೋತ್ತಮನು, ಸರ್ವನಿಯಾಮಕನು ಎಂಬುದನ್ನು ಮರೆಯದೆ ಯಾವುದೇ ಫಲದ ಅಪೇಕ್ಷೆಯಿಲ್ಲದೇ ಭಗವಂತನ ಪ್ರೀತಿಯ ಕಾಮನೆಯಿಂದಲೇ ಎಲ್ಲಾ ವ್ಯವಹಾರವನ್ನೂ ನಡೆಸಬೇಕು. ಗೀತೆಯಲ್ಲಿ ಹೇಳಿದ ಕರ್ಮಯೋಗ ಇದೇ ಆಗಿದೆ. ಶ್ರೀಹರಿಯು ಸರ್ವೋತ್ತಮ ಎಂಬ ಜ್ಞಾನವಿದ್ದರೂ ನಾನಾ ಲೌಕಿಕ ಫಲಗಳಿಗಾಗಿ ಅನೇಕ ದೇವತೆಗಳನ್ನು ಪೂಜಿಸುವವರು ತ್ರೈವಿದ್ಯರು. ಇವರಿಗೆ ಭಗವಂತನ ಸ್ಮರಣೆ ನಿರಂತರವಾಗಿರುವುದಿಲ್ಲ. ಅಂತಃಕರಣದಲ್ಲಿ ವಿವಿಧ ಆಶೆಗಳನ್ನು ತುಂಬಿಕೊಂಡಿರುವ ಇವರು ಸತ್ಕರ್ಮಗಳಿಂದ ಸ್ವರ್ಗವನ್ನು ಪಡೆದರೂ ಪುನಃ ತಿರುಗಿ ಈ ಲೋಕದಲ್ಲಿ ಜನಿಸುವರು. ಇವರನ್ನು ಕಾಮ್ಯಕರ್ಮಿಗಳೆಂದೂ ಕರೆಯುತ್ತಾರೆ. ಇವರು ಹಂತ ಹಂತವಾಗಿ ಭಾಗವತ ಧರ್ಮದಲ್ಲಿ ತೊಡಗಿ ಕ್ರಮೇಣ ಮೋಕ್ಷವನ್ನು ಪಡೆಯುತ್ತಾರೆ. ಭಗವಂತನನ್ನು ಪೂರ್ಣವಾಗಿ ಮರೆತು ಸಾಂಸಾರಿಕ ಫಲಗಳಲ್ಲಿಯೇ ಮಗ್ನರಾಗಿ ಅದಕ್ಕಾಗಿ ನಾನಾ ರೀತಿಯ ಅಕೃತ್ಯಗಳಲ್ಲಿ ತೊಡಗುವವರು ಸ್ವರ್ಗವನ್ನಾಗಲೀ ಮೋಕ್ಷವನ್ನಾಗಲೀ ಪಡೆಯಲಾರರು. ಭಗವಂತನಿಂದ ದೂರ ಸರಿಯುವ ಇವರನ್ನು ಪಾಷಂಡರೆಂದು ಕರೆಯುವರು. ಹೀಗೆ ಭಾಗವತರು, ತ್ರೈವಿದ್ಯರು, ಪಾಷಂಡರೆಂದು ಮೂರು ರೀತಿಯಿಂದ ಜನರನ್ನು ವರ್ಗೀಕರಿಸಬಹುದು. ಅದರಲ್ಲಿ ನಿಷ್ಕಾಮ ಕರ್ಮವೆನಿಸಿದ ಭಾಗವತ ಧರ್ಮವನ್ನು ಆಚರಿಸಲು ಭಗವದ್ಗೀತೆಯು ಕರೆಯನ್ನು ನೀಡಿದೆ.

ವೇದದ ಅಂತಿಮ ಗುರಿ

ಸಾಧನೆಯ ವಿಷಯದಲ್ಲಿ ಅನೇಕ ವಿಭಿನ್ನ ವಾದಗಳು ನಮ್ಮ ಮುಂದಿವೆ. ಎಲ್ಲಾ ವಾದಗಳೂ ಸತ್ಯವೆಂದು ತಿಳಿದು ಅಂಧ ಶ್ರದ್ಧೆಯಿಂದ ನಾವು ವರ್ತಿಸಬಾರದು. ಸರಿಯಾಗಿ ವಿಮರ್ಶೆ ಮಾಡಿ

ನಿರ್ಣೀತವಾಗುವ ಮಾರ್ಗವೇ ಸರಿಯಾದದ್ದು. ಗೀತೆಯಲ್ಲಿ ಹೇಳಿದ ನಿಷ್ಕಾಮ ಕರ್ಮಯೋಗವೊಂದೇ ಅಂತಹ ಮಾರ್ಗ. ವೇದವನ್ನು ಓದಿದಾಗಲೂ ನಮಗೆ ಅಂತಹ ವಿಭಿನ್ನ ಮಾರ್ಗಗಳು ತೋರಬಹುದು. ನಾನಾ ರೀತಿಯ ಲೌಕಿಕ ಸ್ವಾರ್ಥ ಸಾಧನೆಗಾಗಿ ಈ ರೀತಿಯ ಕ್ರಿಯಾಕಲಾಪಗಳನ್ನು ವೇದವು ಹೇಳಿದೆಯೆಂದು ನಮಗೆ ತೋರಬಹುದು. ಆದರೆ ಇದು ವೇದದ ತಾತ್ಪರ್ಯವಲ್ಲ. ನಿಷ್ಕಾಮ ಕರ್ಮವೇ ವೈದಿಕ ಸಿದ್ಧಾಂತವಾಗಿದೆ. ಫಲಾಪೇಕ್ಷೆಯಿಂದ ನಾನಾ ಕರ್ಮಗಳಲ್ಲಿ ತೊಡಗುವುದು ವೇದವಾದವೇ ಹೊರತು ವೈದಿಕ ಸಿದ್ಧಾಂತವಲ್ಲ. ನಾವು ಸರಿಯಾಗಿ ವಿಮರ್ಶೆ ಮಾಡದೇ ಆಪಾತವಾಗಿ ವೇದದಿಂದ ತೋರುವ ವಿಚಾರವನ್ನು ವೇದವಾದವೆಂದು ಕರೆಯುತ್ತಾರೆ, ಇದು ವೇದದ ನಿಜಾರ್ಥವಲ್ಲ. ಮರದಲ್ಲಿ ಹೂವು ಉಂಟಾಗಿ ಹಣ್ಣು ದೊರೆಯುತ್ತದೆ. ಆದರೆ ಹಣ್ಣಿಗಾಗಿ ಕಾಯದೇ ಹೂವನ್ನೇ ಕಿತ್ತು ಉಪಯೋಗಿಸಿದರೆ ಹಣ್ಣನ್ನು ಕಳೆದುಕೊಳ್ಳಬೇಕಾಗುತ್ತದೆ. ಜೀವರ ಅಂತಿಮ ಸಿದ್ಧಿಯೆನಿಸಿದ ಮೋಕ್ಷವು ವೇದದ ಹಣ್ಣಾಗಿದ್ದರೆ ಲೌಕಿಕ ಫಲಗಳೆಲ್ಲ ಬರೇ ಹೂವುಗಳು. ಮೋಕ್ಷಕ್ಕಾಗಿ ಕಾಯದೇ ಲೌಕಿಕ ಫಲಗಳಿಂದ ನಾವು ತೃಪ್ತರಾಗಬಾರದು. ಮರವು ಹಣ್ಣಿಗಾಗಿ ಹೂವನ್ನು ನೀಡುವಂತೆ ವೇದವೂ ಹಂತ ಹಂತವಾಗಿ ಮೋಕ್ಷವನ್ನು ತಲುಪಲು ಲೌಕಿಕ ಫಲಗಳನ್ನೂ ನಮಗೆ ತಿಳಿಸಿಕೊಡುತ್ತದೆ. ಲೌಕಿಕ ಫಲವೇ ಅದರ ಅಂತಿಮ ಗುರಿಯಲ್ಲ. ಇದನ್ನು ತಿಳಿಯದೆ ಲೌಕಿಕ ಫಲವನ್ನು ಪಡೆಯುವುದರಲ್ಲಿಯೇ ಕೃತಾರ್ಥತೆಯನ್ನು ಕಂಡುಕೊಂಡು ಮೋಕ್ಷವನ್ನು ಅಲಕ್ಷಿಸುವುದು ಸರಿಯಲ್ಲ. ಈ ವೇದವಾದವನ್ನಾಗಲೀ ಪಾಷಂಡತನವನ್ನಾಗಲೀ ಅನುಸರಿಸದೆ ನಿಷ್ಕಾಮ ಕರ್ಮಾಚರಣೆಯ ಭಾಗವತ ಧರ್ಮದ ದಿವ್ಯ ಪಥದಲ್ಲಿ ನಡೆಯಬೇಕೆಂದು ಗೀತೆಯು ನಮಗೆ ಬೋಧಿಸಿದೆ. "ತ್ರೈಗುಣ್ಯ ವಿಷಯಾಃ ವೇದಾಃ ನಿಸ್ತ್ರೈಗುಣ್ಯೋ ಭವಾರ್ಜುನ" ಎಂಬ ವಾಕ್ಯದಲ್ಲಿ ವೇದವು ಸತ್ವ, ರಜಸ್ಸು, ತಮಸ್ಸುಗಳೆಂಬ ತ್ರಿಗುಣಗಳಿಗೆ ಸಂಬಂಧಿಸಿದ ಸ್ವರ್ಗ ಮುಂತಾದ ಲೌಕಿಕ ವಿಷಯವನ್ನು ತಿಳಿಸುತ್ತದೆ. ವೇದವು ಈ ವಿಚಾರವನ್ನು ತ್ಯಜಿಸಬೇಕು ಎಂಬುದಾಗಿ ಗೀತೆಯು ವೇದವನ್ನು ಖಂಡಿಸಿದಂತೆ ನಮಗೆ ಭ್ರಮೆಯುಂಟಾಗಬಹುದು. ಆದರೆ ಗೀತೆಯು ವೇದವನ್ನು ನಿರಾಕರಿಸುವುದಿಲ್ಲ. ವೇದವಾದವನ್ನು ಮಾತ್ರ ಖಂಡಿಸುತ್ತದೆ. ವೇದದಿಂದ ಮೇಲಿಂದ ಮೇಲೆ ತೋರುವ ಅರ್ಥವನ್ನು ಸ್ವೀಕರಿಸದೆ ವೇದದ ಅಂತರಂಗದ ಅರ್ಥವನ್ನು ಗ್ರಹಿಸಿ ನಿಷ್ಕಾಮ ಕರ್ಮವನ್ನೇ ಆಚರಿಸಬೇಕು ಎಂಬುದೇ ಗೀತೆಯ ಆಶಯವಾಗಿದೆ. ತಾಯಿಯು ಮಗುವಿಗೆ ಔಷಧವನ್ನು ಕೊಡುವ ಮುಂಚೆ ಸಕ್ಕರೆಯನ್ನು ಕೊಡುವಂತೆ ನಿಷ್ಕಾಮ ಕರ್ಮಾಚರಣೆಯ ಪ್ರಾರಂಭಿಕ ಹಂತವಾಗಿ ನಮಗೆ ಕಾಮ್ಯಕರ್ಮದ ಆಕರ್ಷಣೆಯನ್ನು ವೇದವು ನೀಡುತ್ತದೆಯಲ್ಲದೆ ಅದೇ ವೇದದ ಅಂತಿಮ ಗುರಿಯಲ್ಲ.

"ತ್ರೈಗುಣ್ಯವಿಷಾಯಾಃ ವೇದಾಃ" ಎಂಬ ವಾಕ್ಯಕ್ಕೆ ಇನ್ನೊಂದು ರೀತಿಯ ಅರ್ಥವೂ ಇದೆ. ತ್ರಿಗುಣಾತ್ಮಕವಾದ ಪ್ರಕೃತಿ, ಅದಕ್ಕೆ ಸಂಬಂಧಿಸಿದ ವಿಷಯಗಳೆಲ್ಲಾ ವಿಷದಂತಿವೆ. ಅದನ್ನು ದಾಟಿಸಿ ಮುಕ್ತಿಯೆಂಬ ಅಮೃತವನ್ನು ವೇದವು ನಮಗೆ ನೀಡುತ್ತದೆ. ವೇದದ ಉಪದೇಶದಂತೆ ಭೌತಿಕ ವಿಷಯಗಳ ಕಾಮನೆಯನ್ನು ನಾವು ತೊರೆಯಬೇಕು. ಈ ಅರ್ಥವನ್ನು ಇಟ್ಟುಕೊಂಡಾಗ ಗೀತೆ ಮತ್ತು ವೇದಗಳಿಗೆ ಆಪಾತವಾಗಿಯೂ ವಿರೋಧವು ತೋರಲಾರದು.

"ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ"

ಭೌತಿಕ ಸುಖಕಾಮನೆಯಿಂದ ಪ್ರವೃತ್ತಿಸುವವನಿಗೆ ಮೋಕ್ಷದ ಸುಖವಿಲ್ಲವಾದರೆ ಭಗವಂತನ ಸಾಕ್ಷಾತ್ಕಾರಕ್ಕಾಗಿ ಕಾಮನೆಯನ್ನು ತೊರೆದು ಸಾಧನೆ ಮಾಡುವ ಜ್ಞಾನಿಗಳಿಗೆ ಭೌತಿಕ ಸುಖವು ಇಲ್ಲ. ಹೀಗಾಗಿ ಇಬ್ಬರೂ ಒಂದೊಂದು ಸುಖಕ್ಕೆ ಎರವಾಗುವುದರಿಂದ ಜ್ಞಾನಿಗಳಿಗೆ ವೈಶಿಷ್ಟ್ಯವೇನು ? ಎಂಬ ಪ್ರಶ್ನೆಗೆ ಈ ಶ್ಲೋಕವು ಉತ್ತರಿಸುತ್ತದೆ. ಜ್ಞಾನಿಗಳಿಗೆ ದೊರೆಯುವ ಸುಖವು ಮಹಾಸಾಗರದಂತಿದ್ದರೆ ವಿವಿಧ

ಕಾಮನೆಯ ಬೆನ್ನು ಹತ್ತಿ ಓಡುವ ಲೌಕಿಕರಿಗೆ ದೊರೆಯುವ ಸುಖ ಬಾವಿಯ ನೀರಿನಂತೆ ಅತ್ಯಲ್ಪ. ಆದ್ದರಿಂದ ಈ ಎರಡೂ ಸುಖವನ್ನು ಸಮನಾಗಿ ತೂಗುವುದು ಸರಿಯಲ್ಲ.

ವೇದದ ಆಪಾತವಾದ ಅರ್ಥದಿಂದ ಭ್ರಮೆಗೊಳ್ಳದೆ ಅದರ ನಿಜಾರ್ಥವನ್ನು ತಿಳಿದು ಭಗವಂತನನ್ನು ನಿಷ್ಕಾಮ ಕರ್ಮದಿಂದ ಆರಾಧನೆ ಮಾಡುವವನಿಗೆ ಅತಿಶಯಿತ ಫಲವನ್ನೂ ಈ ಶ್ಲೋಕವು ಹೇಳುತ್ತದೆ. ಪ್ರಕೃತಿಯು ಜಲರೂಪವಾಗಿ ಆವರಿಸಿರುವ ಪ್ರಳಯಾವಸ್ಥೆಯಲ್ಲಿಯೂ ಅತ್ಯಂತ ಗುಣವೈಭವ ದಿಂದ ಮೆರೆಯುವ ಸರ್ವಸ್ವಾಮಿಯಾಗಿ ಪ್ರಳಯ ಕಾಲದಲ್ಲಿರುವ ನಿತ್ಯ ವಸ್ತುಗಳನ್ನೂ ನಿಯಂತ್ರಿಸುವ ಭಗವಂತನ ಅನುಗ್ರಹದಿಂದ ಪಡೆಯಬಹುದಾದ ಮಹಾಫಲವನ್ನು ನಾವು ಪಡೆಯಬೇಕಾದರೆ ವೇದದ ನಿಜವಾದ ಅಂತರಂಗವನ್ನು ನಾವು ತಿಳಿಯಬೇಕು. ವೇದ ಮತ್ತು ವೇದಾರ್ಥದ ಸರಿಯಾದ ಪರಿಜ್ಞಾನವಿಲ್ಲದೇ ಅಪಾರ್ಥವನ್ನು ಮಾಡಿ ತಪ್ಪು ದಾರಿಯಲ್ಲಿ ನಡೆದರೆ ಈ ಫಲವು ನಮಗೆ ದೊರೆಯಲಾರದು.

"ಕರ್ಮಣ್ಯೇವಾಧಿಕಾರಸ್ತೇ"

ಈ ಶ್ಲೋಕಕ್ಕೂ ಎರಡು ರೀತಿಯ ಅರ್ಥ ವಿವರಣೆಯಿದೆ. ಕರ್ತವ್ಯವನ್ನು ಆಚರಿಸುವುದರಲ್ಲಿ ಮಾತ್ರ ನಮಗೆ ಅಧಿಕಾರ. ಫಲದ ಮೇಲೆ ನಮಗೆ ಅಧಿಕಾರವಿಲ್ಲ ಅದು ಭಗವಂತನ ಕೈಯಲ್ಲಿ ಇದೆ. ನಾನು ಆಚರಿಸಿದ ಕರ್ಮಗಳ ಫಲವನ್ನು ನಾನೇ ದೊರಕಿಸಿಕೊಳ್ಳಬಲ್ಲೆನೆಂಬ ಅಹಂಕಾರ ಬೇಡ. ಇದರಿಂದ ಫಲವನ್ನು ಕೊಡಬಲ್ಲ ಭಗವಂತನೇ ತಾನೆಂದು ಭಾವಿಸಿದಂತಾಗುವುದು. ಇಂಥಹ ಭ್ರಮೆಗೆ ನಾವು ಅವಕಾಶ ಕೊಡಬಾರದು. ಫಲವು ನಮ್ಮ ಕೈಯಲ್ಲಿಲ್ಲವೆಂದು ನಿರಾಶಾಭಾವನೆಯಿಂದ ಕರ್ತವ್ಯವನ್ನೂ ತೊರೆಯಬಾರದು. ನಾವು ಮಾಡಬೇಕಾದ ಕರ್ತವ್ಯಗಳನ್ನು ನಿರ್ವಹಿಸದಿದ್ದರೂ ನಮಗೆ ಅನರ್ಥವಿದೆಯೆಂಬುದಾಗಿ ಈ ಶ್ಲೋಕವು ಅಹಂಕಾರ ಮತ್ತು ಕ್ರಿಯಾಶೂನ್ಯತೆಯ ಬಗ್ಗೆ ನಮಗೆ ಎಚ್ಚರಿಕೆ ನೀಡುತ್ತದೆ.

ವೇದವು ಬೇರೆ ಬೇರೆ ಕಾಮನೆಗಳನ್ನು ಪೂರೈಸಿಕೊಳ್ಳಲು ಅನೇಕ ಕರ್ಮಗಳನ್ನು ವಿಧಾನ ಮಾಡಿದೆ. ಹೀಗಾಗಿ ವೇದವು ಪರೋಕ್ಷವಾಗಿ ಕಾಮನೆಯನ್ನೂ ವಿಧಿಸಿದಂತಾಗಲಿಲ್ಲವೇ ? ವೇದವೇ ಕಾಮನೆಯನ್ನು ಬೋಧಿಸಿರುವಾಗ ಕಾಮನೆಯನ್ನು ಬಿಡಬೇಕೆಂದು ಉಪದೇಶಿಸಿರುವುದು ಏಕೆ ? ಎನ್ನುವ ಪ್ರಶ್ನೆಗೂ ಈ ಶ್ಲೋಕದಲ್ಲಿ ಉತ್ತರವಿದೆ. ವೇದವು ಯಾರಿಗೂ ಯಾವುದೇ ಫಲಕಾಮನೆಯನ್ನು ಮಾಡಬೇಕೆಂದು ವಿಧಿಸಿಲ್ಲ. ಬೇರೆ ಬೇರೆ ಬಯಕೆಯುಳ್ಳವರಿಗೂ ಅದನ್ನು ಪೂರೈಸಿಕೊಳ್ಳಲು ಬೇಕಾದ ಕ್ರಿಯೆಗಳನ್ನು ಮಾತ್ರ ಹೇಳಿದೆ. ಅದರಿಂದ ಕ್ರಮವಾಗಿ ಅಂತಃಕರಣ ಶುದ್ಧಿ , ಜ್ಞಾನ, ಭಕ್ತಿ , ಮುಕ್ತಿಗಳನ್ನು ಪಡೆಯಲಿ ಎಂಬುದೇ ವೇದದ ಉದ್ದೇಶವಾಗಿದೆ. ಆದರೆ ಕಾಮನೆಯನ್ನು ನಾವು ಮಾಡಲೇಬೇಕೆಂದು ವೇದವು ಎಲ್ಲಿಯೂ ಹೇಳಿಲ್ಲ. ಆದರೆ ಕರ್ತವ್ಯಗಳನ್ನು ಮಾಡಬೇಕೆಂದು ವೇದವು ಸ್ಪಷ್ಟವಾಗಿ ವಿಧಿಸಿದೆ. ಅದನ್ನು ಮಾಡದಿದ್ದರೆ ಅನಿಷ್ಟ ಪರಿಣಾಮವನ್ನೂ ತಿಳಿಸಿದೆ. ಹೀಗೆ ಕರ್ಮಾಚರಣೆ ಮತ್ತು ಫಲಕಾಮನೆಗಳಿಗಿರುವ ಅಂತರವನ್ನು ತಿಳಿದಾಗ ಎರಡೂ ವೇದವಿಹಿತವೆಂದು ಭಾವಿಸುವ ಸಂದರ್ಭವುಂಟಾಗಲಾರದು. ಆದುದರಿಂದ ಕರ್ಮವು ಮಾತ್ರ ವೇದವಿಹಿತವೆಂದು ತಿಳಿದು ಅದನ್ನು ಆಚರಿಸಬೇಕು. ವೇದವಿಹಿತವಾಗದಿರುವುದರಿಂದ ಫಲಕಾಮನೆಯನ್ನು ತ್ಯಜಿಸಲು ಪ್ರಯತ್ನಿಸಬೇಕು.

ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾತ್ರ ನಿಷ್ಕಾಮನೆಯಿಂದ ಮಾಡಬೇಕು. ಜ್ಯೋತಿಷ್ಟೋಮ ಮೊದಲಾದ ಯಾಗಗಳಿಗೆ ವೇದವೇ ಫಲವನ್ನು ಹೇಳಿದ್ದರಿಂದ ಅದನ್ನು ನಿಷ್ಕಾಮನೆಯಿಂದ ಮಾಡಬಾರದು. ನಿರ್ದಿಷ್ಟ ಫಲಕ್ಕಾಗಿಯೇ ಅವುಗಳನ್ನು ಮಾಡಬೇಕು. ಆದ್ದರಿಂದ ಎಲ್ಲಾ ಕರ್ಮವನ್ನು ಫಲಾಪೇಕ್ಷೆಯಿಲ್ಲದೆ ಮಾಡಬೇಕೆಂಬುದು ಸರಿಯಲ್ಲವೆಂದು ಕೆಲವರ ಅಭಿಪ್ರಾಯವಾಗಿದೆ. ಆದರೆ "ಏತಾನ್ಯಪಿತು ಕರ್ಮಾಣಿ ಸಂಗಂ ತ್ಯಕ್ತ್ವಾ ಮನೀಷಿಭಿಃ । ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಂ ॥" – ಸಾಮಾನ್ಯ

ಜನರು ಫಲ ಕಾಮನೆಯಿಂದ ಮಾಡುವ ಕರ್ಮಗಳನ್ನೇ ಜ್ಞಾನಿಗಳು ನಿಷ್ಕಾಮನೆಯಿಂದ ಮಾಡಬೇಕು ಎಂದು ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳಿದ್ದರಿಂದ ಎಲ್ಲಾ ಕರ್ಮಗಳನ್ನೂ ನಿಷ್ಕಾಮನೆಯಿಂದ ಮಾಡಬೇಕೆಂಬುದೇ ಗೀತೆಯ ಅಭಿಪ್ರಾಯವೆಂಬುದು ಸ್ಪಷ್ಟವಾಗುವುದು.

ಫಲ ಕಾಮನೆಯನ್ನೇ ಬಿಡುವುದಾದರೆ ನಿಷ್ಫಲವಾದ ಕರ್ಮಗಳನ್ನು ಆಚರಿಸಿ ಸುಮ್ಮನೆ ಕ್ಲೇಶ ಪಡುವುದು ಏಕೆ? ಎಂದು ಭಾವಿಸಬಾರದು. ಸ್ವರ್ಗ, ಸಾಂಸಾರಿಕ ಸುಖ ಮುಂತಾದುವುಗಳ ಕಾಮನೆಯನ್ನು ಪರಿತ್ಯಜಿಸಿದರೂ ಭಗವಂತನ ಜ್ಞಾನ, ಭಕ್ತಿ, ಅನುಗ್ರಹಗಳನ್ನು ನಾವು ಬಯಸಬಹುದು. ತುಚ್ಛ ಕಾಮನೆಗಳನ್ನು ತೊರೆದು ಉಚ್ಚ-ಉದಾತ್ತ ಆಕಾಂಕ್ಷೆಗಳನ್ನು ನಾವು ಮಾಡಬೇಕು. ಲೌಕಿಕ ಫಲಗಳು ದೊರೆಯದಿದ್ದರೂ ಭಗವಂತನ ಅನುಗ್ರಹವೆಂಬ ಮಹಾಫಲವು ದೊರೆಯುವುದರಿಂದ ನಮ್ಮ ಕರ್ಮ ಸಾಧನೆಯು ವ್ಯರ್ಥವಾಗುವುದಿಲ್ಲ. ಸ್ವಾರ್ಥಕ್ಕಾಗಿ ಕಾರ್ಯವನ್ನು ಮಾಡದೆ ಸೇವಾ ಭಾವನೆಯಿಂದ ಅದನ್ನು ಮಾಡುವವನನ್ನು ಜನ ಹೆಚ್ಚುಮೆಚ್ಚುವಂತೆ ಲೌಕಿಕ ಫಲದ ಬಯಕೆಯಿಲ್ಲದೆ ಭಗವಂತನ ಪ್ರೀತಿಗಾಗಿಯೇ ಕರ್ತವ್ಯ ಮಾಡುವವನು ವಿಶೇಷವಾಗಿ ಅವನ ಮೆಚ್ಚುಗೆಯನ್ನು ಪಡೆಯುವನು.

''ನಿಷ್ಕಾಮ ಕರ್ಮದ ಮುಖಾಂತರ ಜ್ಞಾನ ಮಾರ್ಗದಲ್ಲಿ ಮುನ್ನಡೆಯಬೇಕು'' ಎಂದು ಈ ಶ್ಲೋಕದ ಸಂದೇಶವಾಗಿದೆ. ಅದರ ಜೊತೆಗೆ ಭಕ್ತಿಯು ಅಜ್ಞಾನಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಜ್ಞಾನಾವಸ್ಥೆಯಲ್ಲಿಯೂ ಶರಣಾಗತಿ ಭಾವವಿರಲಿ. ಯಾವ ಸಂದರ್ಭದಲ್ಲಿಯೂ ಕರ್ಮಫಲದಾತನಾದ ಭಗವಂತನೇ ನಾನು ಎಂಬ ಭಾವನೆಗೆ ಅವಕಾಶ ಕೊಡದೇ ಜ್ಞಾನ ಮತ್ತು ಅಜ್ಞಾನ ಈ ಎರಡೂ ಸ್ಥಿತಿಗಳಲ್ಲಿಯೂ ಭಗವಂತನ ಭಕ್ತಿಯೋಗವು ಆವಶ್ಯಕ ಎಂಬುದನ್ನೂ ಈ ಶ್ಲೋಕವು ಪ್ರತಿಪಾದಿಸುತ್ತದೆ.

ಸಾಕ್ಷಾತ್ಕಾರ ಮತ್ತು ಪುಣ್ಯಕ್ಷಯ

ಸಾಕ್ಷಾತ್ಕಾರ ಪಡೆದವನು ಪುಣ್ಯಪಾಪಗಳೆರಡನ್ನೂ ಕಳೆದುಕೊಳ್ಳುವನು ಎಂದು ಭಗವದ್ಗೀತೆಯಲ್ಲಿದೆ. ಆದರೆ ''ನ ಹಾಸ್ಯ ಕರ್ಮ ಕ್ಷೀಯತೇ'' ಎಂದು ಉಪನಿಷತ್ತಿನಲ್ಲಿ ಜ್ಞಾನಿಗೆ ತಾನು ಗಳಿಸಿದ ಪುಣ್ಯದ ನಾಶವಿಲ್ಲವೆಂದು ಹೇಳಿದೆ. ಈ ಗೊಂದಲವನ್ನು ಶ್ರೀಮಧ್ವಾಚಾರ್ಯರು ಪರಿಹರಿಸಿದ್ದಾರೆ. ನಮ್ಮಲ್ಲಿ ಎರಡು ರೀತಿಯ ಪುಣ್ಯಗಳಿವೆ. ಕಾಮ್ಯಕರ್ಮವನ್ನು ಆಚರಿಸಿ ನಾವು ಪುಣ್ಯವನ್ನು ಸಂಪಾದಿಸುತ್ತೇವೆ. ಇದನ್ನು ಅನಿಷ್ಟಪುಣ್ಯವೆಂದು ಕರೆಯುವರು. ಇದರಿಂದ ಸಾಂಸಾರಿಕ ಸುಖವನ್ನು ನಾವು ಪಡೆಯಬಹುದು. ಉಪಾಸನೆ, ನಿಷ್ಕಾಮ ಕರ್ಮಗಳಿಂದಲೂ ನಾವು ಉತ್ತಮ ಪುಣ್ಯವನ್ನು ಹೊಂದಬಹುದು. ಇದು ಇಷ್ಟ ಪುಣ್ಯವೆನಿಸಿದೆ. ಇದು ಜ್ಞಾನಾದಿ ಗುಣ ವಿಕಾಸಕ್ಕೂ ಮುಕ್ತಿಯಲ್ಲಿ ಆನಂದಾತಿಶಯಕ್ಕೂ ಕಾರಣವಾಗುತ್ತದೆ. ಇಂಥಹ ಇಷ್ಟಪುಣ್ಯವು ಜ್ಞಾನದಿಂದ ನಾಶವಾಗುವುದಿಲ್ಲ. ಮುಕ್ತಿಗೆ ವಿರೋಧಿಯಾದ ಸಂಸಾರ ಸುಖಕ್ಕೆ ನಮ್ಮನ್ನು ತಳ್ಳುವ ಅನಿಷ್ಟ ಪುಣ್ಯವು ಮಾತ್ರ ಜ್ಞಾನದಿಂದ ನಾಶ ಹೊಂದುತ್ತದೆ. ಜ್ಞಾನದಿಂದ ನಾಶವಾಗದ ಈ ಉತ್ತಮ ಪುಣ್ಯದ ಪ್ರಭಾವದಿಂದಲೇ ಮುಕ್ತಿಯಲ್ಲಿಯೂ ಅಪ್ರಾಕೃತ ದಿವ್ಯ ವಿಗ್ರಹಧಾರಿಗಳಾಗಿ ತಮ್ಮ ಸ್ವರೂಪವೇ ಆಗಿರುವ ವಿಚಿತ್ರ ಅಲೌಕಿಕ ಆನಂದವನ್ನು ಅನುಭವಿಸುತ್ತಾರೆ. ಆದರೆ ಪಾಪವು ಎಲ್ಲವೂ ಅನಿಷ್ಟವೇ. ಇಷ್ಟವಾದ ಪಾಪವೆಂಬುದು ಇಲ್ಲವೇ ಇಲ್ಲ. ಆದ್ದರಿಂದ ಜ್ಞಾನಿಗಳು ಎಲ್ಲಾ ಪಾಪವನ್ನೂ ಕಳೆದುಕೊಳ್ಳುತ್ತಾರೆ. ಪುಣ್ಯದಲ್ಲಿ ಅನಿಷ್ಟವಾದ ಪುಣ್ಯವು ಮಾತ್ರ ನಾಶವಾಗುತ್ತದೆ.

''ತದಾ ಗಂತಾಸಿ ನಿರ್ವೇದಂ''

ಜ್ಞಾನವನ್ನು ಪಡೆದವನಿಗೆ ತನ್ನ ಇಷ್ಟರವರೆಗಿನ ಅಧ್ಯಯನ ಮುಂತಾದವುಗಳಲ್ಲಿ ವೈರಾಗ್ಯ ವುಂಟಾಗುತ್ತದೆ – ಎಂದು ಗೀತೆಯು ಹೇಳಿದಂತೆ ಭಾಸವಾಗುತ್ತದೆ. ಜ್ಞಾನಿಗಳಿಗೆ ತಮ್ಮ ಅಧ್ಯಯನದಲ್ಲಿ

ವೈರಾಗ್ಯವುಂಟಾಗಲು ಸಾಧ್ಯವೇ ? ಪರಮಾತ್ಮನ ನಿರಂತರ ಜ್ಞಾನ, ಪ್ರೇಮಗಳನ್ನು ಬೆಳೆಸಿಕೊಳ್ಳುತ್ತಾ ತಲ್ಲೀನತೆಯಲ್ಲಿಯೇ ಆನಂದವನ್ನು ಅನುಭವಿಸುವ ಜ್ಞಾನಿಗಳಿಗೆ ಪರಮಾತ್ಮನ ಮಹಿಮೆಯ ಅನುಸಂಧಾನ, ವಿಮರ್ಶೆಗಳಲ್ಲಿ ವೈರಾಗ್ಯವು ಎಂದಿಗೂ ಹುಟ್ಟಲಾರದು. ನಿರಂತರ ಉತ್ಸಾಹವೇ ಅವನಲ್ಲಿ ಹರಿಯುತ್ತದೆ. ಆದುದರಿಂದ ಈ ವಾಕ್ಯವನ್ನು ಹೊಂದಿಸುವುದು ಹೇಗೆಂದು ಸಂಶಯ ಬರಬಹುದು. ಈ ವಾಕ್ಯದಲ್ಲಿರುವ ನಿರ್ವೇದ ಎಂಬ ಪದದಿಂದ ಈ ಗೊಂದಲವುಂಟಾಗುತ್ತದೆ. ನಿರ್ವೇದವೆಂದರೆ ವೈರಾಗ್ಯವೆಂದೇ ಅರ್ಥವಲ್ಲ. "ಪಾಂಡಿತ್ಯಂ ನಿರ್ವಿದ್ಯ" ಎಂದು ಉಪನಿಷತ್ತುಗಳಲ್ಲಿ ವಿಶೇಷವಾಗಿ ಹೊಂದುವುದು ಎಂಬ ಅರ್ಥದಲ್ಲಿಯೂ ನಿರ್ವೇದ ಶಬ್ದವನ್ನು ಬಳಸಿದ್ದಾರೆ. ಜ್ಞಾನವನ್ನು ಪಡೆದು ಮೋಹ, ಅನ್ಯಥಾ ಜ್ಞಾನವನ್ನು ಕಳೆದುಕೊಂಡಾಗ ಅಧ್ಯಯನದ ಫಲವನ್ನು ನಾವು ವಿಶೇಷವಾಗಿ ಹೊಂದಿದಂತಾಗುವುದು ಎಂಬುದೇ ಈ ವಾಕ್ಯದ ಅರ್ಥವೆಂದು ಆಚಾರ್ಯರು ವಿಶ್ಲೇಷಿಸಿದ್ದಾರೆ.

ನಾವು ಮಾಡುವ ನಿಷ್ಕಾಮ ಕರ್ಮಗಳು ಬೇರೆ ಬೇರೆ ಹಂತಗಳಲ್ಲಿ ವಿಶಿಷ್ಟ ಫಲಗಳನ್ನು ನಮಗೆ ನೀಡುತ್ತವೆ. ವೇದಗಳಲ್ಲಿ ಪರಸ್ಪರ ವಿರೋಧದಂತೆ ತೋರುವ ಅನೇಕ ವಾಕ್ಯಗಳ ಗೊಂದಲದಿಂದ ನಮ್ಮಲ್ಲಿ ಅನೇಕ ರೀತಿಯ ತತ್ವಸಂದೇಹವುಂಟಾಗುತ್ತದೆ. ಈ ಸಂದೇಹವಿರುವಾಗ ಭಗವಂತನ ಉಪಾಸನೆಯು ಸಾಧ್ಯ ವಾಗುವುದಿಲ್ಲ. ಚಲವಿಚಲವಾದ ನೀರಿನಲ್ಲಿ ಸೂರ್ಯನ ಬಿಂಬವು ಮೂಡದಿರುವಂತೆ ಸಂಶಯದಿಂದ ಗಲಿಬಿಲಿಗೊಂಡ ಮನಸ್ಸಿನಲ್ಲಿ ಭಗವಂತನು ನಿಲ್ಲಲಾರ, ಕರ್ಮಯೋಗವು ನಮ್ಮ ಮಾನಸಿಕ ದೋಷವನ್ನು ಪರಿಹರಿಸಿ. ದೃಢವಾದ, ನಿಶ್ಚಲವಾದ ತತ್ವಜ್ಞಾನವು ಉಂಟಾಗಲು ಸಹಾಯಕವಾಗುವುದು. ಈ ತತ್ವಜ್ಞಾನದ ನಂತರ ನಾವು ಮಾಡುವ ಕರ್ಮಯೋಗವು ಏಕಾಗ್ರತೆಯಿಂದ ಭಗವಂತನ ಧ್ಯಾನ ಮಾಡಲು ಬೇಕಾದ ಮನೋಬಲವನ್ನು ನಮಗೆ ನೀಡುತ್ತದೆ. ಆಗ ಭಗವಂತನ ಸಾಕ್ಷಾತ್ಕಾರವುಂಟಾಗಿ ಹೊರಗಿನ ಪರಿವೆಯೇ ಇಲ್ಲದೆ ತನ್ಮಯತೆಯಿಂದ ಭಗವಂತನನ್ನು ಕಾಣಲು ಸಾಧಕನಿಗೆ ಶಕ್ಯವಾಗುತ್ತದೆ. ಈ ಸ್ಥಿತಿಯನ್ನು ತಲುಪಿದಾಗಲೇ ನಮ್ಮ ಅಧ್ಯಯನ ಮತ್ತು ಕರ್ಮಾಚರಣೆಯು ಪೂರ್ಣ ಸಾರ್ಥಕತೆಯನ್ನು ಪಡೆಯುತ್ತದೆ.

"ವಿಹಾಯ ಕಾಮಾನ್ ಯಃ ಸರ್ವಾನ್"

ಈ ಅಪರೋಕ್ಷ ಜ್ಞಾನಿಯನ್ನು ಭಗವದ್ಗೀತೆಯಲ್ಲಿ ವರ್ಣಿಸುತ್ತಾ ಆತನು ಎಲ್ಲಾ ಕಾಮನೆಗಳನ್ನು ಬಿಟ್ಟವನೆಂದು ಹೇಳಿದೆ. ಆದರೆ ಎಲ್ಲಾ ಅಪೇಕ್ಷೆಗಳನ್ನು ಬಿಡುವುದು ಅವ್ಯವಹಾರ್ಯ. ಯಾವ ಅಪೇಕ್ಷೆಯೂ ಇಲ್ಲದಿದ್ದರೆ ಭೋಜನ ಮುಂತಾದ ಯಾವುದೇ ವ್ಯವಹಾರವು ನಡೆಯದೆ ಜ್ಞಾನಿಗಳು ಜೀವಿಸುವುದು ಹೇಗೆ? ಜ್ಞಾನಿಗಳು ಅನೇಕ ರೀತಿಯ ಲೌಕಿಕ ವ್ಯವಹಾರವನ್ನು ನಡೆಸಿರುವ ವರ್ಣನೆಯೂ ಇದೆ. ಭಗವಂತನ ಭಕ್ತಿ, ಅನುಗ್ರಹವನ್ನಂತೂ ಜ್ಞಾನಿಗಳು ಬಯಸುತ್ತಾರೆ. ಆದ್ದರಿಂದ ಜ್ಞಾನಿಗಳಿಗೆ ಯಾವುದೇ ಕಾಮನೆಗಳಿಲ್ಲವೆಂದು ಗೀತೆಯಲ್ಲಿ ಹೇಳಿರುವುದು ಸಮಂಜಸವಲ್ಲ ಎಂಬ ಸಂದೇಹವುಂಟಾಗುತ್ತದೆ. ಶ್ರೀಮಧ್ವಾಚಾರ್ಯರು ಇದಕ್ಕೆ ಸರಿಯಾದ ವಿವರಣೆಯನ್ನು ನೀಡಿದ್ದಾರೆ. ಜ್ಞಾನಿಗಳು ಶಾಸ್ತ್ರನಿಷಿದ್ಧವಾದ ಕೆಟ್ಟ ಕಾಮನೆಗಳನ್ನು ಮಾಡುವುದಿಲ್ಲ. ಕೆಟ್ಟ ವಿಷಯಗಳ ಅಪೇಕ್ಷೆಯೇ ಕಾಮ. ತಮ್ಮ ಅಧ್ಯಾತ್ಮ ಪ್ರಗತಿಗೆ ವಿರೋಧಿಯಾದ ಈ ಕಾಮನೆಗಳನ್ನು ಜ್ಞಾನಿಗಳು ಮಾಡುವುದಿಲ್ಲ. ಇದಕ್ಕೆ ವಿರೋಧಿಯಲ್ಲದ ಲೌಕಿಕ ವಿಷಯ ಭೋಗವನ್ನು ಮಾಡಲು ಶಾಸ್ತ್ರದ ಅನುಮತಿಯಿದೆ. ಆದ್ದರಿಂದಲೇ ಸಮುದ್ರದಲ್ಲಿ ಎಲ್ಲಾ ಕಡೆಯಿಂದಲೂ ನದಿಗಳು ಸೇರಿದರೂ ಸಮುದ್ರವು ಒಂದೇ ರೀತಿಯಲ್ಲಿರುವಂತೆ ಜ್ಞಾನಿಯು ವಿಷಯ ಭೋಗದಿಂದ ಯಾವುದೇ ಉದ್ರೇಕವನ್ನು ಪಡೆಯುವುದಿಲ್ಲ ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಹೊಳೆಗಳು ಕಡಲಿನ ಕಡೆಗೆ ವೇಗದಿಂದ ಪ್ರವಹಿಸುತ್ತಿದ್ದರೂ ಕಡಲು ತನ್ನ ಮೇರೆಯನ್ನೂ ಮೀರುವುದಿಲ್ಲ. ಅದರಂತೆ ಜ್ಞಾನಿಯು ವಿಷಯಗಳನ್ನು ಅನುಭವಿಸಿದರೂ ಧರ್ಮದ ಮೇರೆಯನ್ನು ದಾಟುವುದಿಲ್ಲ.

ಆದ್ದರಿಂದ ಜ್ಞಾನಿಗೆ ಕಾಮನೆಗಳಿದ್ದರೂ ಅವನು ಕಾಮಿಯೆನಿಸುವುದಿಲ್ಲ. ವಿಷಯಭೋಗವಿದ್ದರೂ ಅವನಿಗೆ ಉದ್ರೇಕ ವಿಕಾರಗಳಿಲ್ಲ. ಜ್ಞಾನ, ಭಕ್ತಿ ಮುಂತಾದ ಮೋಕ್ಷಸಾಧನವನ್ನೂ, ಶಾಸ್ತ್ರ ನಿಷಿದ್ಧವಲ್ಲದ ಜೀವನಾವಶ್ಯಕ ವಿಷಯಗಳನ್ನು ಬಯಸಿದರೂ ಯಾವುದೇ ಕೆಟ್ಟ ವಿಷಯವನ್ನು ಬಯಸದ ಆತನು ನಿಷ್ಕಾಮಿಯೇ ಆಗಿರುವನು. ಅವನ ಅಂತಃಕರಣದಲ್ಲಿ ಭಗವಂತನ ಜ್ಞಾನವು ಇರುವಾಗ ಅದಕ್ಕೆ ವಿರೋಧಿಯಾದ ಕಾಮನೆಗಳು ಅವನಲ್ಲಿರುವುದು ಹೇಗೆ ? ಬೆಳಕು ಇರುವಾಗ ಕತ್ತಲೆಗೆ ಎಡೆಯುಂಟೆ ? ಬೆಳಕು ಮಸುಕಾದಾಗ ಕತ್ತಲೆಯು ಆವರಿಸುವಂತೆ ಕೆಲವೊಮ್ಮೆ ಅವನ ಜ್ಞಾನಕ್ಕೆ ಅಭಿಭವವುಂಟಾದಾಗ ಭಗವಂತನಿಗೆ ಅಸಮ್ಮತವಾದ ಕಾರ್ಯಗಳೂ ಅವನಿಂದ ನಡೆಯುವುದುಂಟು. ಆದ್ದರಿಂದ ದೇವತೆಗಳಿಂದಲೂ, ಋಷಿಗಳಿಂದಲೂ ಕೆಲವೊಮ್ಮೆ ಅನುಚಿತ ಘಟನೆಗಳು ನಡೆಯುತ್ತವೆ. ಆದರೆ ಇದು ತಾತ್ಕಾಲಿಕ. ತಮ್ಮ ಅಪರೋಕ್ಷಜ್ಞಾನದ ಶಕ್ತಿಯಿಂದ ಅವರು ಬೇಗನೇ ಅದನ್ನು ಸರಿಪಡಿಸಿಕೊಳ್ಳುತ್ತಾರೆ. ಅವರು ಲೌಕಿಕ ವಿಷಯ ಪದಾರ್ಥಗಳನ್ನು ಭೋಗಿಸುತ್ತಿದ್ದರೂ ಭಗವಂತನ ಗುಂಗಿನಲ್ಲೇ ಇರುತ್ತಾರೆ. ಅಧ್ಯಯನ-ಸಂಶೋಧನೆಗಳಲ್ಲಿಯೇ ನಿರತರಾಗಿರುತ್ತಾರೆ. ಊಟವನ್ನು ಮಾಡಿದರೂ ಅವರಿಗೆ ಅದರ ಪರಿವೆಯೇ ಇಲ್ಲದಂತೆ ಜ್ಞಾನಿಗಳೂ ವಿಶೇಷ ಆಸಕ್ತಿ, ಚಾಪಲ್ಯವಿಲ್ಲದೆ ವಿಷಯಗಳನ್ನು ಅನುಭವಿಸುತ್ತಾರೆ. ಆ ಸಂದರ್ಭದಲ್ಲಿಯೂ ಭಗವಂತನ ವಿಚಾರವೇ ಅವರಲ್ಲಿ ತುಂಬಿರುತ್ತದೆ. ವಿಷಯ ಭೋಗದಲ್ಲಿ ಜ್ಞಾನಿಗಳಿಗೂ ಅಜ್ಞಾನಿಗಳಿಗೂ ಇರುವ ಈ ಅಂತರವನ್ನು ನಾವು ಗಮನಿಸಬೇಕು. ಭಾಗವತದಲ್ಲಿ ಜ್ಞಾನಿಗಳ ವ್ಯವಹಾರವನ್ನು ಕುಡುಕನ ಬಾಹ್ಯವ್ಯಾಪಾರಕ್ಕೆ ಹೋಲಿಸಿದ್ದಾರೆ. ಕುಡುಕನು ತನ್ನ ಬಟ್ಟೆಬರೆಗಳು ಅಸ್ತವ್ಯಸ್ತವಾದರೂ ಅದರ ಪರಿವೆಯೇ ಇಲ್ಲದೆ ವ್ಯವಹರಿಸುವಂತೆ ಜ್ಞಾನಿಗಳು ಲೌಕಿಕ ವ್ಯವಹಾರದಲ್ಲಿ ತೊಡಗಿದ್ದರೂ ಅದರಲ್ಲಿ ವಿಶೇಷ ಆಸ್ಥೆ ವಹಿಸದೆ ಭಗವಂತನ ಗುಂಗಿನಲ್ಲಿಯೇ ಇರುವರು. ನಮಗೆ ಎಲ್ಲಿ ಎಚ್ಚರವೋ ಅಂತಹ ಬಾಹ್ಯ ವಿಷಯಗಳು ಜ್ಞಾನಿಗಳಿಗೆ ಕತ್ತಲೆಯಲ್ಲಿ ಇದ್ದ ವಸ್ತುಗಳಂತೆ ಅಲ್ಲಿ ಅವರು ವಿಶೇಷ ಗಮನವನ್ನೇ ಹರಿಸುವುದಿಲ್ಲ. ಜ್ಞಾನಿಗಳಿಗೆ ಎಲ್ಲಿ ಎಚ್ಚರವೋ ನಮಗೆ ಅಲ್ಲಿ ಕತ್ತಲೆ. ಭಗವಂತನಲ್ಲಿ ಮಗ್ನತೆಯ ಈ ಸ್ಥಿತಿಯಲ್ಲ ಮರಣವನ್ನಪ್ಪಿದವನು ಭಗವಂತನನ್ನು ಹೊಂದುತ್ತಾನೆ.

"ಸ್ಥಿತ್ವಾಸ್ಯಾಮಂತಕಾಲೇಽಪಿ"

ಆದರೆ ಸ್ಥಿತಪ್ರಜ್ಞರಾದ ಅಪರೋಕ್ಷ ಜ್ಞಾನಿಗಳಿಗೂ ಮರಣದ ಗಳಿಗೆಯಲ್ಲಿ ಭಗವಂತನ ಸ್ಮರಣೆಯಿರುವುದೆಂಬ ನಿಯಮವಿಲ್ಲ, ಜ್ಞಾನಿಗಳಿಗೂ ಕೊನೆಯ ಕ್ಷಣದಲ್ಲಿ ಭಗವಂತನ ಮಾಯೆಯಿಂದ ತಾತ್ಕಾಲಿಕವಾಗಿ ಭಗವಂತನ ವಿಸ್ಮರಣೆಯಾಗಬಹುದು. ಆಗ ಅವರು ಮತ್ತೆ ಜನ್ಮವನ್ನು ಪಡೆಯ ಬೇಕಾಗುತ್ತದೆ. ಅಂತಿಮ ಕ್ಷಣದಲ್ಲಿಯೂ ಪರಮಾತ್ಮನನ್ನು ಸ್ಮರಿಸಿಕೊಂಡು ಪ್ರಾಣತ್ಯಾಗ ಮಾಡುವ ಪ್ರಾರಬ್ಧ ಕರ್ಮವನ್ನು ಕಳೆದುಕೊಂಡು ಜ್ಞಾನಿಗಳು ಮಾತ್ರ ಈ ಸುಯೋಗವನ್ನು ಪಡೆಯುತ್ತಾರೆ. ನಮ್ಮ ಕರ್ಮರಾಶಿಯಲ್ಲಿ ಯಾವ ಕರ್ಮವನ್ನು ಅನುಭವಿಸಲು ಪ್ರಾರಂಭಿಸಿದ್ದೇವೆಯೋ ಅದನ್ನು ಪ್ರಾರಬ್ಧ ಕರ್ಮವೆಂದು ಕರೆಯುತ್ತಾರೆ. ನಾವು ಅನುಭವಿಸಲು ಪ್ರಾರಂಭಿಸಿದ ಈ ಪ್ರಾರಬ್ಧ ಕರ್ಮವನ್ನು ಮಾತ್ರ ಅದು ನಾಶ ಮಾಡುತ್ತದೆ. ಬಾಯಿಯಿಂದ ಹೊರಬಿದ್ದ ಮಾತನ್ನು ಹಿಂದೆ ಪಡೆಯಲು ಸಾಧ್ಯವಿಲ್ಲ. ಬಿಟ್ಟ ಬಾಣವನ್ನು ಹಿಂದಿರುಗಿಸಲು ಸಾಧ್ಯವಿಲ್ಲ. ಅದರಂತೆ ಕರ್ಮವನ್ನನುಭವಿಸಲು ಪ್ರಾರಂಭವಾದ ಮೇಲೆ ಅದನ್ನು ನಿಷ್ಕ್ರಿಯಗೊಳಿಸಲು ಸಾಧ್ಯವಿಲ್ಲ. ಅನುಭವದ ಪೂರ್ವಸ್ಥಿತಿಯಲ್ಲಿದ್ದ ಕ್ಯಾನ್ಸರ್ ಮುಂತಾದ ರೋಗವನ್ನು ಔಷಧದಿಂದ ನಿಷ್ಕ್ರಿಯಗೊಳಿಸಬಹುದು. ಆದರೆ ರೋಗವು ಅನುಭವಾಸ್ಥೆಗೆ ಬಂದಾಗ ಅದೇ ಔಷಧವು ಫಲಕಾರಿಯಾಗದಿರುವುದನ್ನು ನಾವು ನೋಡುತ್ತೇವೆ. ಅದರಂತೆ ಅನುಭವಿಸಲು ಪ್ರಾರಂಭಿಸದ ಸಂಚಿತ ಕರ್ಮವನ್ನು ಜ್ಞಾನವು ನಾಶಪಡಿಸಿದರೂ ಅನುಭವಿಸಲು ಆರಂಭಿಸಿದ ಪ್ರಾರಬ್ಧ ಕರ್ಮವನ್ನು ಅದು

ನಾಶಮಾಡಲಾರದು. ಅನೇಕ ಜನ್ಮಗಳಲ್ಲಿ ಪ್ರಾರಬ್ಧ ಕರ್ಮದ ನೋವು ನಲಿವುಗಳನ್ನು ಅನುಭವಿಸಿಯೇ ಜ್ಞಾನಿಯು ಮೋಕ್ಷವನ್ನು ಪಡೆಯುವನು. ಈ ಪ್ರಾರಬ್ಧ ಕರ್ಮಗಳ ಒತ್ತಡಕ್ಕೆ ಒಳಗಾದ ಜ್ಞಾನಿಗೆ ಅಂತ್ಯಕಾಲದಲ್ಲಿ ಭಗವಂತನ ವಿಸ್ಮರಣೆಯುಂಟಾಗಿ ಅವನು ಮತ್ತೊಂದು ಜನ್ಮವನ್ನು ಪಡೆಯುವನು. ಎಲ್ಲ ಕರ್ಮವನ್ನು ಅನುಭವಿಸಿ ಪ್ರಾರಬ್ಧ ಕರ್ಮದ ಗ್ರಹಣದಿಂದ ಮುಕ್ತನಾದ ಜ್ಞಾನಿಯು ಕೊನೇ ಗಳಿಗೆಯಲ್ಲಿಯೂ ಭಗವಂತನನ್ನು ಮರೆಯದೆ ಮುಕ್ತಿ ಸಾಮ್ರಾಜ್ಯವನ್ನು ಪಡೆಯುವನು.

"ಬ್ರಹ್ಮ ನಿರ್ವಾಣಮೃಚ್ಛತಿ"

ಗೀತೆಯ ಎರಡನೆಯ ಅಧ್ಯಾಯದ ಕೊನೆಯಲ್ಲಿ ಭಗವಂತನನ್ನು ನಿರ್ವಾಣನೆಂದು ಕರೆದಿದ್ದಾರೆ, ನಿರ್ವಾಣನೆಂದರೆ ಶರೀರವಿಲ್ಲದವನು ಎಂದು ಅರ್ಥ. ಭಗವಂತನನ್ನು ಪುರುಷ ಸೂಕ್ತದಲ್ಲಿ ಸಾವಿರ ಮುಖ, ಕೈ, ಕಾಲುಗಳುಳ್ಳವನೆಂದು ವರ್ಣಿಸಿದೆ. ಮಾಯೆಯ ಪ್ರವೇಶವೇ ಇಲ್ಲದ ಅವನ ಧಾಮದಲ್ಲಿ ಅವನ ಪರಮಮಂಗಲ ಸುಂದರ ಆಕೃತಿಯ ವರ್ಣನೆಯನ್ನು ಭಾಗವತ ಮುಂತಾದ ಗ್ರಂಥದಲ್ಲಿ ಕಾಣಬಹುದು. ಅರ್ಜುನನಿಗೆ ದಿವ್ಯದೃಷ್ಟಿಯಲ್ಲಿ ಭಗವಂತನ ದಿವ್ಯ ರೂಪದ ದರ್ಶನವಾಗಿದೆ. ಹೀಗೆ ಉಪನಿಷತ್ತು ಪುರಾಣಗಳಲ್ಲಿ ಅವನ ದಿವ್ಯ ಸುಂದರ ವಿಗ್ರಹದ ವರ್ಣನೆಯು ನೂರಾರು ಕಡೆ ಇರುವಾಗ ಭಗವಂತನು ನಿರಾಕಾರನಾಗುವುದು ಹೇಗೆ? ಅವನ ದೇಹವು ಅವನ ಚೈತನ್ಯಸ್ವರೂಪವೇ ಆಗಿದೆ. ನಮಗಿರುವಂತೆ ಅವನಿಗೆ ತನ್ನ ಸ್ವರೂಪಕ್ಕಿಂತ ಬೇರೆಯಾದ ಜಡದೇಹವಿಲ್ಲದಿರುವುದರಿಂದ ಅವನನ್ನು ಅಶರೀರ, ನಿರಾಕಾರ ಎಂದು ಮುಂತಾಗಿ ಕರೆಯಲಾಗಿದೆ. ನಮ್ಮ ಕಣ್ಣಿಗೆ ತೋರುವ ಆಕಾರವಿಲ್ಲದಿದ್ದುದರಿಂದಲೇ ಅವನನ್ನು ಈ ರೀತಿ ವರ್ಣಿಸಲಾಗಿದೆ.

ಗೀತೆಯ ಎರಡನೆಯ ಅಧ್ಯಾಯದ ಕೊನೆಯಲ್ಲಿ ಅಪರೋಕ್ಷ ಜ್ಞಾನಿಯನ್ನು ವರ್ಣಿಸುತ್ತಾ ಅಪರೋಕ್ಷ ಜ್ಞಾನಿಯ ಅನೇಕ ಲಕ್ಷಣಗಳನ್ನೂ ಉದಾಹರಿಸಿದ್ದಾರೆ. ಆತನು ಸುಖ - ದುಃಖಗಳಲ್ಲಿ ನಿರ್ವಿಕಾರನಾಗಿರುವನು. ಕೆಟ್ಟ ಕಾಮನೆಗಳು ಅವನ ಮನಸ್ಸಿನಲ್ಲಿ ಮೂಡಲಾರವು . ಇಂದ್ರಿಯಗಳಿಗೆ ಗುಲಾಮನಾಗದೇ ಅವುಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುತ್ತಾನೆ – ಎಂದು ಮುಂತಾಗಿ ಅಪರೋಕ್ಷ ಜ್ಞಾನಿಯೆನಿಸಿದ ಸ್ಥಿತಪ್ರಜ್ಞನನ್ನು ವರ್ಣಿಸಿದ್ದಾರೆ. ಸಾಧಕರಾದ ನಾವು ಕೂಡ ಈ ಲಕ್ಷಣಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಅಪರೋಕ್ಷ ಜ್ಞಾನಿಗಳಲ್ಲಿ ಈ ಗುಣಗಳು ಸಹಜವಾಗಿದ್ದರೆ ಸಾಧಕರು ಪ್ರಯತ್ನಪೂರ್ವಕವಾಗಿ ಸಾಧ್ಯವಾದಷ್ಟು ಈ ಗುಣಗಳನ್ನು ಸಂಪಾದಿಸಿ ಕೊಳ್ಳುವರು. ಅಪರೋಕ್ಷಜ್ಞಾನಿಯಿಂದ ಈ ಸ್ಫೂರ್ತಿಯನ್ನು ನಾವು ಪಡೆಯಬೇಕೆಂಬ ಉದ್ದೇಶದಿಂದಲೇ ಗೀತೆಯು ಅವನ ಲಕ್ಷಣಗಳನ್ನು ವಿವರಿಸಿದೆ.

"ಲೋಕೇऽಸ್ಮಿನ್ ದ್ವಿವಿಧಾ ನಿಷ್ಠಾ"

ನಮ್ಮ ಅಧ್ಯಯನ ಮತ್ತು ನಿಷ್ಕಾಮ ಕರ್ಮದ ಅಂತಿಮ ಫಲವು ಅಪರೋಕ್ಷ ಜ್ಞಾನವೇ ಆಗಿರುವಾಗ ಜ್ಞಾನ ಮಾರ್ಗದಲ್ಲಿಯೇ ನಾವು ಯಾಕೆ ನಡೆಯಬಾರದು ? ಈ ಕರ್ಮದ ಗೊಂದಲವೇಕೆ ? ನಿಷ್ಕಾಮ ಕರ್ಮವು ಜ್ಞಾನಕ್ಕೆ ಅನುಕೂಲವೆಂದಿಟ್ಟುಕೊಂಡರೂ ಕಾಮದ ಸೋಂಕೇ ಇಲ್ಲದ ಯತಿ ಧರ್ಮದಂತಹ ನಿಷ್ಕಾಮ ಕರ್ಮಗಳಿರುವಾಗ ಯುದ್ಧದಂಥಹ ಹೆಜ್ಜೆ-ಹೆಜ್ಜೆಗೂ ಕೋಪ, ಉದ್ರೇಕಗಳಿಗೆ ಅವಕಾಶವಿರುವ ಕರ್ಮಗಳನ್ನು ನಿಷ್ಕಾಮನೆಯಿಂದ ಮಾಡಬೇಕೆಂದು ಯಾಕೆ ಉಪದೇಶಿಸಬೇಕು ? ಈ ಪ್ರಶ್ನೆಗಳಿಗೆ ಕೃಷ್ಣನು ಪರಿಹಾರ ನೀಡುವನು.

ಜೀವರಿಗೆ ಅವರ ಮೂಲಭೂತ ಸ್ವಭಾವಕ್ಕೆ ಅನುಗುಣವಾಗಿ ಭಿನ್ನ ಭಿನ್ನ ರೀತಿಯ ಸಾಧನೆ ಮತ್ತು ಹೊಣೆಗಾರಿಕೆಗಳನ್ನು ಭಗವಂತನು ಏರ್ಪಡಿಸಿದ್ದಾನೆ. ಸನಕ, ಸನಾತನ ಮುಂತಾದ ಜ್ಞಾನಿಯೋಗಿಗಳು ಯತಿಧರ್ಮದಲ್ಲಿಯೇ ತಮ್ಮ ಸಾಧನೆಯನ್ನು ನಡೆಸಿದ್ದಾರೆ. ಜನಕ ಪ್ರಿಯವ್ರತ ಮೊದಲಾದ ರಾಜರ್ಷಿಗಳು ಲೋಕ ರಕ್ಷಣೆ ಮುಂತಾದ ಸಾಮಾಜಿಕ ಜವಾಬ್ದಾರಿಯ ನಿರ್ವಹಣೆಯಲ್ಲಿ ತಮ್ಮ ಸಾಧನೆಯನ್ನು ಕಂಡಿದ್ದಾರೆ. ಸನಕಾದಿಗಳನ್ನು ಜ್ಞಾನಯೋಗಿಗಳೆಂದೂ, ಜನಕಾದಿಗಳನ್ನು ಕರ್ಮಯೋಗಿಗಳೆಂದೂ ಕರೆದಿದ್ದಾರೆ. ಆದರೆ ಜ್ಞಾನಯೋಗ ಮತ್ತು ಕರ್ಮಯೋಗ ಇವೆರಡೂ ಇವರಲ್ಲಿವೆ. ಒಬ್ಬರಲ್ಲಿ ಜ್ಞಾನಯೋಗವು ಪ್ರಧಾನವಾಗಿದ್ದರೆ ಇನ್ನೊಬ್ಬರಲ್ಲಿ ಕರ್ಮಯೋಗವು ಪ್ರಧಾನವಾಗಿರುತ್ತದೆ. ಜ್ಞಾನಯೋಗಿಯು ಕರ್ಮವನ್ನು ಪೂರ್ತಿಯಾಗಿ ತ್ಯಜಿಸಿದ್ದಾನೆಂದು ನಾವು ಭಾವಿಸಬೇಕಾಗಿಲ್ಲ. ಒಬ್ಬನು ಯಾವುದೇ ಒಂದು ಶಾಸ್ತ್ರ, ವಿಜ್ಞಾನ ಮತ್ತು ವೈದ್ಯಕೀಯ ವಿಷಯದ ಒಂದು ವಿಷಯದಲ್ಲಿ ತಜ್ಞನಾಗಿದ್ದರೆ ಉಳಿದ ವಿಷಯದ ಪರಿಜ್ಞಾನವೇ ಅವನಿಗೆ ಇಲ್ಲವೆಂದು ಯಾರೂ ಭಾವಿಸುವುದಿಲ್ಲ. ಒಂದು ವಿಷಯವನ್ನು ಪ್ರಾಧಾನವಾಗಿ ತಿಳಿದುಕೊಂಡದ್ದರಿಂದ ಅವನನ್ನು ಆ ವಿಷಯದಲ್ಲಿ ತಜ್ಞನೆಂದು ಕರೆಯುತ್ತಾರೆ. ಅದರಂತೆ ಕರ್ಮಯೋಗಿಯಲ್ಲಿ ಜ್ಞಾನವೂ, ಜ್ಞಾನಯೋಗಿಯಲ್ಲಿ ಕರ್ಮವೂ ಇದ್ದೇ ಇದೆ. ಅರ್ಜುನನದು ಜನಕ, ಪ್ರಿಯವ್ರತ ಮುಂತಾದವರಂತಹ ವ್ಯಕ್ತಿತ್ವವಾಗಿದೆ. ಅವನಿಗೆ ಲೋಕ ರಕ್ಷಣೆಯ ಹೊಣೆಗಾರಿಕೆ ಇದೆ. ಆದ್ದರಿಂದ ಅವನು ಯತಿ ಧರ್ಮದಲ್ಲಿಯೇ ಮುಳುಗಿ ತನ್ನ ಸಾಮಾಜಿಕ ಜವಾಬ್ದಾರಿಯಲ್ಲಿ ಚ್ಯುತನಾಗಬಾರದು ಎಂಬುದೇ ಕೃಷ್ಣನ ಆಶಯವಾಗಿದೆ.

"ನ ಕರ್ಮಣಾಂ ಅನಾರಂಭಾತ್"

ಕರ್ಮವನ್ನು ಆಚರಿಸದೇ ಸುಮ್ಮನೇ ಇರುವುದರಿಂದ ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲ. ಹಾಗಿದ್ದರೆ ಈಗ ಯಾರೂ ಸಂಸಾರಿಗಳಾಗಿ ಉಳಿಯುತ್ತಿರಲಿಲ್ಲ. ಜೀವನು ಮರ ಗಿಡ ಮುಂತಾದ ಜನ್ಮಗಳಲ್ಲಿ ಯಾವ ಕರ್ಮವನ್ನೂ ಮಾಡದೇ ಸುಮ್ಮನಿರುತ್ತಾನೆ. ಆದ್ದರಿಂದ ಆ ಜನ್ಮಗಳಲ್ಲಿಯೇ ಮೋಕ್ಷವನ್ನು ಪಡೆಯಬೇಕಾಗಿತ್ತು. ಮನುಷ್ಯನಾಗಿ ಅವನು ಹುಟ್ಟಬೇಕಾದ ಸಂದರ್ಭವೇ ಬರುತ್ತಿರಲಿಲ್ಲ.

ಕರ್ಮವು ಸಂಸಾರದ ಬೀಜವಾಗಿದೆ. ರೋಗದ ಮೂಲವನ್ನು ಕಿತ್ತು ತೆಗೆದಾಗ ರೋಗವು ನಿವಾರಣೆಯಾಗುವಂತೆ ಸಂಸಾರದ ಬೀಜವಾದ ಕರ್ಮವನ್ನು ಪರಿತ್ಯಜಿಸಿದರೆ ತನ್ನಷ್ಟಕ್ಕೆ ಮೋಕ್ಷವು ದೊರೆಯುವುದೆಂಬ ಆಶೆಯು ಸರಿಯಲ್ಲ. ಕರ್ಮದಿಂದ ನಮಗೆ ಪೂರ್ತಿ ವಿಮೋಚನೆಯೇ ಅಸಾಧ್ಯ. ಒಂದು ಕರ್ಮವನ್ನು ಅನುಭವಿಸುವಾಗ ಹತ್ತು ಹೊಸ ಕರ್ಮಗಳನ್ನು ನಾವು ಮಾಡುತ್ತೇವೆ. ಅವುಗಳನ್ನು ಅನುಭವಿಸುವಾಗ ಪುನಃ ಹೊಸ ಕರ್ಮಗಳು ಸಿದ್ಧವಾಗುತ್ತವೆ. ಹೀಗೆ ಕರ್ಮಜಾಲದಿಂದ ಬಂಧಿತರಾಗುವ ನಮಗೆ ಕರ್ಮದಿಂದ ಬಿಡುಗಡೆ ಹೇಗೆ?

ನಿಷ್ಕಾಮ ಕರ್ಮಕ್ಕೆ ಫಲವಿಲ್ಲ. ಅದರಿಂದ ಮೋಕ್ಷವನ್ನು ಪಡೆಯುತ್ತೇವೆ. ಹೀಗೆ ಫಲವಿಲ್ಲದ ನಿಷ್ಕಾಮ ಕರ್ಮವನ್ನು ಆಚರಿಸಿ ಮೋಕ್ಷವನ್ನು ಪಡೆಯುವುದಕ್ಕಿಂತ ಏನೂ ಕರ್ಮವನ್ನು ಆಚರಿಸದೆ ಸುಮ್ಮನಿರುವುದರಿಂದಲೂ ಮೋಕ್ಷ ದೊರೆಯಲಾರದೇ ? ಅನಾವಶ್ಯವಾಗಿ ನಿಷ್ಕಾಮ ಕರ್ಮದ ಶ್ರಮ ವೇಕೆ? ಫಲವಿಲ್ಲದ ಶ್ರಮ ಮತ್ತು ನಿಷ್ಕ್ರಿಯತೆ ಇವೆರಡರ ಪರಿಣಾಮ ಒಂದೇ ಅಲ್ಲವೇ ? ಎಂದು ವಾದಿಸುವುದೂ ಸರಿಯಲ್ಲ. ಕರ್ಮವನ್ನು ಪರಿತ್ಯಜಿಸುವುದಕ್ಕೂ ನಿಷ್ಕಾಮ ಕರ್ಮವನ್ನು ಆಚರಿಸುವುದಕ್ಕೂ ತುಂಬಾ ವ್ಯತ್ಯಾಸವಿದೆ. ನಿಷ್ಕ್ರಿಯತೆಯಿಂದ ಯಾವ ಮಾನಸಿಕ ಪ್ರಗತಿಯನ್ನೂ ಸಾಧಿಸಲಾರೆವು, ಫಲಾಪೇಕ್ಷೆಯಿಲ್ಲದೆ ನಾವು ಆಚರಿಸುವ ಕರ್ಮವು ಮನಸ್ಸಿಗೆ ಹೊಸ ಶಕ್ತಿಯನ್ನು ನೀಡುತ್ತದೆ. ಮನಸ್ಸು ನಿರ್ಮಲವಾಗಿ ಉತ್ತಮ ಜ್ಞಾನವನ್ನು ಪಡೆಯಲು ಸಹಾಯವಾಗುತ್ತದೆ. ಏನೂ ಕರ್ಮವನ್ನು ಮಾಡದೇ

ಸುಮ್ಮನೆ ಇರುವುದರಿಂದ ಮನಸ್ಸಿಗೆ ಇಂತಹ ಸಂಸ್ಕಾರವು ಒದಗಲಾರದು.

ಕರ್ಮವನ್ನು ಪೂರ್ತಿಯಾಗಿ ತೊರೆದು ಜಗತ್ತಿನಲ್ಲಿ ಬದುಕಲಿಕ್ಕೂ ಯಾರಿಗೂ ಸಾಧ್ಯವಿಲ್ಲ. ಬದುಕಿನ ಉದ್ದಕ್ಕೂ ನಮ್ಮಲ್ಲಿ ಕ್ರಿಯೆಯು ನಡೆಯುತ್ತಲೇ ಇರುತ್ತದೆ. ಬಾಹ್ಯಕರ್ಮವನ್ನು ತೊರೆದರೂ ಮನಸ್ಸಿನಲ್ಲಿ ದೋಷಗಳಿದ್ದರೆ ಅವನಿಗೆ ಸಿದ್ಧಿಯಾಗಲಾರದು. ಆದುದರಿಂದ ಮನೋ ನಿಗ್ರಹವೇ ಮುಖ್ಯ. ಆತ್ಮ ನಿಗ್ರಹದಿಂದ ಮಾನಸಿಕ ವಿಕೃತಿಗಳನ್ನು ಕಿತ್ತೊಗೆದು ತನ್ನ ಕರ್ತವ್ಯದಲ್ಲಿ ತೊಡಗುವುದೇ ಸರಿಯಾದ ಮಾರ್ಗವಾಗಿದೆ.

ಜಗತ್ತು ಒಂದು ಚಕ್ರದಂತಿದೆ. ಈ ಪ್ರಪಂಚ ಚಕ್ರದ ಸರಿಯಾದ ಚಾಲನೆಯಾಗಬೇಕಿದ್ದರೆ ನಾವೆಲ್ಲರೂ ನಮ್ಮ ವೈಯಕ್ತಿಕ ಮತ್ತು ಸಮಾಜಿಕ ಪ್ರಯತ್ನಗಳನ್ನು ನಿರ್ವಹಿಸಬೇಕು. ನಾವು ನಮ್ಮ ವಿವಿಧ ಚಟುವಟಿಕೆಗಳಿಂದ ಭಗವಂತನಿಗೆ ಪ್ರೀತಿಕರವಾದ, ಸಮಾಜಕ್ಕೆ ಉಪಯುಕ್ತವಾದ ವಿವಿಧ ಕಾರ್ಯಗಳನ್ನು ಮಾಡಬೇಕು. ಈ ಸತ್ಕಾರ್ಯಗಳನ್ನೇ ಯಜ್ಞವೆಂದು ಕರೆಯುತ್ತಾರೆ. ಜಗತ್ತಿನ ಸಮೃದ್ಧಿಗೆ ಈ ಯಜ್ಞವೇ ಕಾರಣ. ಈ ಯಜ್ಞದಿಂದ ಸಮಾಜದ ಮೇಲೆ ಪ್ರಕೃತಿಯ ಮೇಲೆ ವ್ಯಕ್ತ ಮತ್ತು ಅವ್ಯಕ್ತವಾದ ಅನೇಕ ಪರಿಣಾಮಗಳಾಗಿ ಲೋಕವು ಸಮೃದ್ಧಿಯನ್ನು ಪಡೆಯುತ್ತದೆ, ಆದ್ದರಿಂದ ಲೋಕಕಲ್ಯಾಣ ಸಾಧನೆಗಾಗಿ ಜಗಚ್ಚಕ್ರ ಪ್ರವರ್ತನೆಗಾಗಿ ಪ್ರತಿಯೊಬ್ಬನೂ ಕರ್ತವ್ಯವನ್ನು ಮಾಡಲೇಬೇಕು, ಜಗಚ್ಚಕ್ರವನ್ನು ಈ ಕೆಳಗಿನಂತೆ ನಾವು ವಿಶ್ಲೇಷಿಸಬಹುದು.

ನಮಗೆ ವೇದದಿಂದ ಭಗವಂತನು ವ್ಯಕ್ತನಾಗುವನು. ಭಗವಂತನಿಂದ ನಮ್ಮಲ್ಲಿ ಚಟುವಟಿಕೆ ಯುಂಟಾಗುತ್ತದೆ. ಅದರಿಂದಲೇ ಸತ್ಕಾರ್ಯಗಳುಂಟಾಗಿ ಯಜ್ಞದ ನಿಷ್ಪತ್ತಿಯಾಗುವುದು. ಅದರಿಂದಲೇ ಮಳೆ - ಬೆಳೆ ಮುಂತಾದ ಸಮೃದ್ಧಿ , ಆಹಾರ ಮುಂತಾದ ಜೀವನಾವಶ್ಯಕ ಪದಾರ್ಥಗಳನ್ನು ಜೀವಿಗಳು ಪಡೆಯುತ್ತಾರೆ. ಆ ಜೀವರೇ ವೇದ ಮೊದಲಾದ ಪ್ರಮಾಣಗಳಿಂದ ಭಗವಂತನನ್ನು ಅರ್ಥಮಾಡಿ ಕೊಳ್ಳಬೇಕು. ಆ ಭಗವಂತನೇ ಈ ಎಲ್ಲಾ ಚಟುವಟಿಕೆಗಳ ಕೇಂದ್ರ ಶಕ್ತಿಯಾಗಿದ್ದಾನೆ. ಈ ಜಗಚ್ಚಕ್ರದಲ್ಲಿ ಕರ್ಮದ ಸ್ಥಾನವನ್ನು ನಾವು ಅರ್ಥಮಾಡಿಕೊಂಡಾಗ ನಾವು ಯಾಕೆ ಕರ್ಮವನ್ನು ಆಚರಿಸಬೇಕು ಎಂಬುದು ಸ್ಪಷ್ಟವಾಗುತ್ತದೆ. ಎಲ್ಲರೂ ಯಾವುದೇ ಒಂದು ರೀತಿಯ ಕರ್ಮವನ್ನು ಆಚರಿಸಲೇಬೇಕು. ಬ್ರಹ್ಮಚಾರಿ ಗಳು ಅಧ್ಯಯನ, ಗುರುಸೇವೆ ಮೊದಲಾದ ಕಾರ್ಯಗಳನ್ನು ಮಾಡಬೇಕು. ಗೃಹಸ್ಥರು ಯಜ್ಞಾದಿ ಸತ್ಕರ್ಮಗಳ ಆಚರಣೆ, ಅತಿಥಿ ಸತ್ಕಾರ, ಬಡವರಿಗೆ ಸಂಪತ್ತಿನ ವಿತರಣೆ ಮೊದಲಾದ ಕಾರ್ಯಗಳನ್ನು ಮಾಡಬೇಕು. ವಾನಪ್ರಸ್ಥನಾಗಿ ನಿವೃತ್ತ ಜೀವನವನ್ನು ನಡೆಸುವವನೂ ತನಗೆ ಶಕ್ಯವಿದ್ದ ಸತ್ಕಾರ್ಯಗಳನ್ನು ಮಾಡಬೇಕು. ಸನ್ಯಾಸಿಗಳು ಧ್ಯಾನ, ಪಾಠ -ಪ್ರವಚನ ಮುಂತಾದ ಕಾರ್ಯಗಳನ್ನು ವಿಶೇಷವಾಗಿ ಮಾಡ ಬೇಕು. ಜ್ಞಾನದಾನ, ಅಭಯದಾನ, ಪರೋಪಕಾರ ಮೊದಲಾದವುಗಳನ್ನು ಎಲ್ಲರೂ ಮಾಡಬಹುದು. ಶಾರೀರಿಕ, ಮಾನಸಿಕ, ವಾಚಿಕ, ತಪಸ್ಸನ್ನಂತೂ ಎಲ್ಲರೂ ಮಾಡಬೇಕು. ಕರ್ಮಾಚರಣೆಯು ಸಂಸಾರ ಬಂಧನಕ್ಕೆ ಕಾರಣವೆಂದು ನಾವು ಭಯಪಡಬೇಕಾಗಿಲ್ಲ. ಭಗವಂತನ ಸೇವಾರೂಪವಾಗಿ ಭಗವಂತನಿಗೆ ಪ್ರೀತಿಯಾಗಲೆಂಬ ಉದ್ದೇಶದಿಂದ ನಾವು ಆಚರಿಸಿದ ಕರ್ಮಗಳು ಬಂಧನದ ಬದಲು ಬಿಡುಗಡೆಗೆ ಕಾರಣವಾಗುತ್ತವೆ. ಮರಣಕ್ಕೆ ಕಾರಣವಾದ ವಿಷವೂ ವೈದ್ಯಕೀಯ ಸಂಸ್ಕಾರಕ್ಕೆ ಒಳಪಟ್ಟು ಔಷಧವಾಗಿ ಪರಿಣಮಿಸಿದಾಗ ಜೀವನಕ್ಕೆ ಕಾರಣವಾಗುವುದಿಲ್ಲವೇ ? ಅದರಂತೆ ಸ್ವಾರ್ಥದಿಂದ ಮಾಡಿದ ಕರ್ಮವು ಸಂಸಾರಕ್ಕೆ ಕಾರಣವಾಗುವುದಲ್ಲದೆ ನಿಷ್ಕಾಮನೆಯಿಂದ, ಭಗವತ್ ಸೇವಾ ಭಾವನೆಯಿಂದ ಮಾಡಿದಾಗ ಅದು ಮೋಕ್ಷಕ್ಕೆ ಕಾರಣವಾಗುತ್ತದೆ. ಹೀಗೆ ನಿಷ್ಕಾಮ ಕರ್ಮವನ್ನಾಚರಿಸಿಕೊಂಡು ಮೋಕ್ಷವನ್ನು ಪಡೆದ ಜನಕ ಮೊದಲಾದ ಅನೇಕ ಮಹಾತ್ಮರ ವರ್ಣನೆಗಳು ಪುರಾಣಗಳಲ್ಲಿ ದೊರೆಯುತ್ತವೆ. ನಿತ್ಯತೃಪ್ತನಾದ

ಪರಿಪೂರ್ಣನಾದ ಭಗವಂತನು ತನಗೆ ಪ್ರಯೋಜನವಿಲ್ಲದಿದ್ದರೂ ಲೋಕದ ಮಾರ್ಗದರ್ಶನಕ್ಕಾಗಿ, ಲೋಕ ರಕ್ಷಣೆಗಾಗಿ ಕರ್ಮವನ್ನು ಆಚರಿಸುತ್ತಾನೆ, ವಿಧಿ ನಿರ್ಬಂಧಗಳನ್ನು ಮೀರಿದ ಭಗವಂತನೇ ಕರ್ತವ್ಯವನ್ನು ಆಚರಿಸಿರುವಾಗ ನಾವು ಕರ್ತವ್ಯದಲ್ಲಿ ತೊಡಗದಿರುವುದು ಸರಿಯಲ್ಲ.

''ಯಸ್ತ್ವಾತ್ಮರತಿರೇವ ಸ್ಯಾತ್'' ಎಂಬುದಾಗಿ ಭಗವದ್ಗೀತೆಯಲ್ಲಿ ಹೇಳಿರುವ ವಾಕ್ಯಕ್ಕೆ ಮುಕ್ತನಿಗೆ ಕರ್ಮದ ನಿರ್ಬಂಧವಿಲ್ಲ. ಮುಕ್ತಿಯ ಹೊರತು ಉಳಿದೆಲ್ಲಾ ಅವಸ್ಥೆಗಳಲ್ಲಿಯೂ ಕರ್ತವ್ಯವನ್ನು ಮಾಡ ಬೇಕು ಎಂಬುದನ್ನು ಈ ಹಿಂದೆ ಹೇಳಿದ್ದೇವೆ. ಸಂಸಾರಾವಸ್ಥೆಯಲ್ಲಿಯೂ ಕೆಲವೊಮ್ಮೆ ಕರ್ತವ್ಯಾಚರಣೆಗೆ ವಿನಾಯಿತಿ ಇದೆ. ಹೊರಗಿನ ಪರಿವೆ ಇಲ್ಲದೆ ಸಮಾಧಿಸ್ಥನಾಗಿ ಭಗವಂತನ ಧ್ಯಾನಮಾಡುವ ಕಾಲ ದಲ್ಲಿಯೂ ಅವನಿಗೆ ಕರ್ತವ್ಯದ ಹೊಣೆಗಾರಿಕೆ ಇಲ್ಲ. ಎಚ್ಚರವಾದ ಮೇಲೆ ಮಾತ್ರ ಎಲ್ಲರಂತೆ ಅವನು ಕರ್ತವ್ಯವನ್ನು ಮಾಡಬೇಕು. ಇದು ಈ ಶ್ಲೋಕದ ಇನ್ನೊಂದು ಅರ್ಥವಾಗಿದೆ.

ಮೋಕ್ಷವನ್ನು ಪಡೆಯುವಲ್ಲಿ ಕರ್ಮದ ಪಾತ್ರ

ಕರ್ಮಾಚರಣೆಯಿಂದ ನೇರವಾಗಿ ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲ. ಕರ್ಮಾಚರಣೆಯಿಂದ ಅಂತಃಕರಣ ಶುದ್ಧಿಯನ್ನು ಪಡೆದು ಜ್ಞಾನ, ಸಾಕ್ಷಾತ್ಕಾರಗಳನ್ನು ಹೊಂದಿದ ನಂತರವೇ ಮೋಕ್ಷವು ದೊರೆಯುತ್ತದೆ. ಕೆಲವರು ಕರ್ಮಾಚರಣೆಯಿಂದಲೇ ನೇರವಾಗಿ ಮೋಕ್ಷವು ದೊರೆಯುದೆಂದು ಹೇಳುವವರಿದ್ದಾರೆ. ''ನಾನ್ಯಃ ಪಂಥಾ ಅಯನಾಯ ವಿದ್ಯತೇ'' ಎಂದು ಮುಂತಾದ ಅನೇಕ ಪ್ರಮಾಣ ಗಳಲ್ಲಿ ಜ್ಞಾನವಿಲ್ಲದೆ ಮೋಕ್ಷವು ದೊರೆಯಲಾರದೆಂದು ಸ್ಪಷ್ಟವಾಗಿ ಹೇಳಿದೆ. ಯಜ್ಞ ಯಾಗಾದಿಗಳಿಂದ ಮೋಕ್ಷವು ದೊರೆಯುವುದೆಂದು ಕೆಲವು ಕಡೆ ಹೇಳಿದ್ದರೂ ನೇರವಾಗಿ ಅದರಿಂದ ಮೋಕ್ಷ ದೊರೆಯುವುದೆಂದು ಅರ್ಥಮಾಡಬಾರದು. ಸತ್ಕರ್ಮಾಚರಣೆಯಿಂದ ನೇರವಾಗಿ ಅಂತಃಕರಣ ನೈರ್ಮಲ್ಯವುಂಟಾಗಿ ಆಮೇಲೆ ಮೋಕ್ಷ ದೊರೆಯುತ್ತದೆ ಎಂಬುದೇ ಅದರ ಆಶಯ. ರೈತನು ನೇಗಿಲಿನಿಂದ ಜೀವಿಸುತ್ತಾನೆಂದರೆ ನೇಗಿಲನ್ನೇ ತಿಂದು ಜೀವಿಸುತ್ತಾನೆಂದು ಯಾರು ಅರ್ಥ ಮಾಡುವುದಿಲ್ಲ. ನೇಗಿಲಿನಿಂದ ಉತ್ತು, ಬೆಳೆಸಿ ಬದುಕುವನು ಎಂದೇ ಅದರ ಅರ್ಥವಲ್ಲವೇ ? ಕರ್ಮಾಚರಣೆಯಿಂದ ಮೋಕ್ಷ ಎಂಬಲ್ಲಿಯೂ ಇದೇ ಕ್ರಮವನ್ನು ಅನುಸರಿಸಬೇಕು.

ಜ್ಞಾನಿ ಅಜ್ಞಾನಿಗಳ ಕ್ರಿಯೆಗಳಲ್ಲಿ ಅಂತರ

ಭಗವಂತನ ಸೇವಾರೂಪವಾಗಿ ಕರ್ಮವನ್ನು ಆಚರಿಸುವ ಬಗೆಯನ್ನು ನಾವು ತಿಳಿದುಕೊಳ್ಳಬೇಕು. ಜ್ಞಾನಿಗಳೂ, ಅಜ್ಞಾನಿಗಳೂ ಆಚರಿಸುವ ಕರ್ಮದ ಹೊರಮೈಯಲ್ಲಿ ನಮಗೆ ವ್ಯತ್ಯಾಸವು ತೋರಲಿಕ್ಕಿಲ್ಲ. ಆದರೆ ಈ ಎರಡು ಕರ್ಮಗಳ ಒಳ ಮೈಯಲ್ಲಿ ತುಂಬಾ ಅಂತರವಿದೆ. ನಾವು ವಿವಿಧ ಕಾರ್ಯಗಳನ್ನು ಮಾಡುತ್ತೇವೆ. ನಮ್ಮ ಈ ಕ್ರಿಯೆಗೆ ಪ್ರಕೃತಿ ಮುಂತಾದ ಜಡವಸ್ತುಗಳು ಕಾರಣ. ನಮ್ಮಲ್ಲಿ ಮತ್ತು ಜಡವಸ್ತುಗಳಲ್ಲಿರುವ ಈ ಎಲ್ಲಾ ಶಕ್ತಿಯು ಭಗವಂತನ ಅಧೀನ. ಈ ಜಡ - ಚೇತನ ವಸ್ತುಗಳ ಗುಣಧರ್ಮ ಗಳ ಮೇಲೆ ಭಗವಂತನ ಚೈತನ್ಯಾತ್ಮಕ ಶಕ್ತಿಯ ಪ್ರಭುತ್ವವಿದೆ. ನಾನು ಸ್ವತಂತ್ರವಾಗಿ ಯಾವುದನ್ನೂ ಮಾಡಲಾರೆ, ಭಗವಂತನೇ ಸ್ವತಂತ್ರಕರ್ತನು. ನಾನು ಮಾಡುವ ಎಲ್ಲಾ ಕರ್ಮಗಳೂ ಭಗವಂತನ ಪೂಜೆ. ಜ್ಞಾನಿಗಳು ಕರ್ಮವನ್ನಾಚರಿಸುವಾಗ ಈ ಎಚ್ಚರ, ಈ ಅನುಸಂಧಾನ ಇರುತ್ತದೆ. ಗೀತೆಯಲ್ಲಿ ಹೇಳಿದ ಕರ್ಮಸನ್ಯಾಸವೂ ಇದೇ ಆಗಿದೆ, ಕರ್ಮಸನ್ಯಾಸವೆಂದರೆ ಕರ್ಮಪರಿತ್ಯಾಗವಲ್ಲ, ಭಗವಂತನ ಶಕ್ತಿಯಿಂದಲೇ ತನ್ನ ಎಲ್ಲಾ ಕಾರ್ಯಗಳೂ ನಡೆಯುತ್ತವೆ ಎಂಬ ತಿಳುವಳಿಕೆಯಿಂದ ರಾಗ, ಅಹಂಭಾವವಿಲ್ಲದೇ ಕರ್ತವ್ಯವನ್ನಾಚರಿಸುವುದೇ ನಿಜವಾದ ಕರ್ಮಸನ್ಯಾಸವಾಗಿದೆ. ಅಜ್ಞಾನಿಗಳು ಭಗವಂತನನ್ನು ಮರೆತು ತಾವೇ

ಮಾಡುವೆವು ಎಂಬ ಭ್ರಮೆ ಮತ್ತು ಅಹಂಕಾರದಿಂದ ಕ್ರಿಯೆಗಳಲ್ಲಿ ತೊಡಗುತ್ತಾರೆ. ಜ್ಞಾನಿ ಮತ್ತು ಅಜ್ಞಾನಿಗಳು ಕರ್ಮಾಚರಣೆಯಲ್ಲಿದ್ದ ಅಂತರವು ಇದೇ ಆಗಿದೆ. ಭಗವಂತನು ವಿವಿಧ ಜೀವರ ಮೂಲಭೂತ ಸ್ವಭಾವಕ್ಕೆ ಅನುಗುಣವಾಗಿ ಯಾವುದೇ ಪಕ್ಷಪಾತ ವೈಷಮ್ಯ ಭಾವನೆಯಿಲ್ಲದೆ ಎಲ್ಲರಿಂದಲೂ ವಿವಿಧ ಕ್ರಿಯೆಗಳನ್ನು ನಡೆಸುತ್ತಾನೆ. ತತ್ವಜ್ಞಾನಿಯು ತಟಸ್ಥ ದೃಷ್ಟಿಯಿಂದ ಎಲ್ಲಾ ಜೀವರ ಹಿನ್ನಲೆಯಲ್ಲಿರುವ ಭಗವಂತನ ಈ ವ್ಯಾಪಾರವನ್ನು ಕಂಡು ಅವನ ಅದ್ಭುತ ಶಕ್ತಿಯ ದರ್ಶನದಿಂದ ಪುಲಕಿತನಾಗುತ್ತಾನೆ.

''ಕಾಮ ಏಷ ಕ್ರೋಧ ಏಷಃ''

ನಮ್ಮ ಎಲ್ಲಾ ದುಷ್ಕರ್ಮಗಳಿಗೆ ಪಾಪಾಚರಣೆಗಳಿಗೆ ನಮ್ಮ ಮನಸ್ಸಿನಲ್ಲಿ ಮೂಡುವ ಕೆಟ್ಟ ಕಾಮನೆಗಳೇ ಮೂಲಕಾರಣಗಳಾಗಿವೆ. ನಮ್ಮಲ್ಲಿ ಉಂಟಾಗುವ ಕೋಪ, ದ್ವೇಷ ಮುಂತಾದ ವಿಕೃತಿಗಳಿಗೂ ಈ ಕಾಮನೆಯೇ ಕಾರಣವಾಗಿದೆ. ಯಾವುದೇ ಅಪೇಕ್ಷೆಯಿಲ್ಲದ ಮನುಷ್ಯನಿಗೆ ಕೋಪವುಂಟಾಗಲಾರದು. ಹೀಗೆ ನಮ್ಮ ಎಲ್ಲಾ ಮನೋವಿಕಾರಗಳಿಗೂ, ದುಷ್ಕಾರ್ಯಗಳಿಗೂ ಕಾಮವೇ ಮೂಲವಾಗಿವೆ. ಆಸುರೀ ಶಕ್ತಿಯಿಂದಲೇ ನಮ್ಮಲ್ಲಿ ದುರ್ಗುಣಗಳ ಪ್ರಚೋದನೆಯಾಗುತ್ತದೆ. ಕಾಲನೇಮಿಯೇ ದುಷ್ಟ ಕಾಮನೆಗೆ ಪ್ರಚೋದಕನಾದ ದೈತ್ಯಶಕ್ತಿಯೆನಿಸಿದ್ದಾನೆ. ಈ ಕೆಟ್ಟ ಕಾಮನೆಯಿಂದಾಗಿ ಪ್ರಕಾಶರೂಪಿಯಾದ ಭಗವಂತನು ನಮಗೆ ಅಗೋಚರನಾಗುವನು. ಹೊಗೆ ಮುಚ್ಚಿದಾಗ ಬೆಂಕಿಯು ನಮಗೆ ತೋರುವುದಿಲ್ಲ. ಅದರಂತೆ ಕಾಮನೆಯು ಪರಂಜ್ಯೋತಿಯಾದ ಭಗವಂತನು ನಮಗೆ ಕಾಣದಂತೆ ಮಾಡುವುದು. ಕಾಮನೆಯಿಂದ ಮಲಿನವಾದ ನಮ್ಮ ಅಂತಃಕರಣವು ಕೊಳೆ ಹಿಡಿದ ಕನ್ನಡಿಯಂತೆ ತತ್ವವನ್ನು ಯಥಾವತ್ತಾಗಿ ತೋರಿಸಲಾರದು. ಗರ್ಭದಲ್ಲಿರುವ ಶಿಶುವು ಚರ್ಮದ ಹೊದಿಕೆಯಿಂದ ಬಂಧಿತವಾಗಿ ಕ್ಲೇಶಪಡುವಂತೆ ಕಾಮದ ಹಿಡಿತಕ್ಕೆ ಒಳಗಾದ ಜೀವನೂ ಸಂಸಾರದಲ್ಲಿ ತೊಳಲಾಡುವನು. ಹೀಗೆ ಕೆಟ್ಟ ಕಾಮನೆಯಿಂದಾಗಿ ನಾವು ಅನೇಕ ಅನಾಹುತಗಳಿಗೆ ಬಲಿಯಾಗುವೆವು. ಉತ್ತಮ ಜನರಿಗೆ ಕಾಮದ ಉಪದ್ರವವು ಕಡಿಮೆ. ಹೊಗೆಯು ಬೆಂಕಿಯನ್ನು ಪೂರ್ತಿಯಾಗಿ ಮುಚ್ಚಲಾರದು. ಅದನ್ನು ಬರೇ ಮುಸುಕುಗೊಳಿಸುಬಹುದು. ಅದರಂತೆ ಉತ್ತಮ ವ್ಯಕ್ತಿಗಳನ್ನು ಕಾಮವು ಪೂರ್ತಿಯಾಗಿ ಆಕ್ರಮಿಸಲಾರದು. ಎರಡನೇ ವರ್ಗದ ಜನರು ಮಣ್ಣು ಹಿಡಿದ ಕನ್ನಡಿಯಂತೆ ಕಾಮದ ಹೆಚ್ಚಿನ ಉಪದ್ರವಕ್ಕೆ ತುತ್ತಾಗುತ್ತಾರೆ. ಅಧಮ ಜೀವರನ್ನಂತೂ ಚರ್ಮದಂತೆ ಕಾಮವು ಪೂರ್ತಿಯಾಗಿ ಮುಚ್ಚಿಬಿಡಬಹುದು, ಆದ್ದರಿಂದ ಕಾಮದ ಆಕ್ರಮಣದ ಬಗ್ಗೆ ನಾವು ಹೆಚ್ಚು ಎಚ್ಚರದಿಂದಿರಬೇಕು.

ಈ ಕಾಲನೇಮಿ ಮುಂತಾದ ದುಷ್ಟ ಶಕ್ತಿಗಳ ಆಕ್ರಮಣವನ್ನು ಎದುರಿಸಬೇಕಾಗಿದ್ದರೆ ಭಗವಂತನ ಆಜ್ಞೆಯಂತೆ ಜಗತ್ತನ್ನು ನಿಯಂತ್ರಿಸುವ ದೈವೀಶಕ್ತಿಗಳ ಜ್ಞಾನ ಮತ್ತು ಅನುಗ್ರಹವನ್ನು ಪಡೆಯಬೇಕು, ಆ ದೇವತೆಗಳ ತಾರತಮ್ಯವನ್ನು ಅರಿತುಕೊಂಡು ಎಲ್ಲ ದೇವತೆಗಳನ್ನೂ ನಿರ್ದೇಶಿಸುವ ಭಗವಂತನ ಜ್ಞಾನವನ್ನು ಪಡೆದವರಿಗೆ ಕಾಮ ಮುಂತಾದ ದುಷ್ಟ ಶಕ್ತಿಗಳ ಭಯವೇ ಇಲ್ಲ. ಇಂದ್ರಿಯಾಭಿಮಾನಿಗಳಾದ ಇಂದ್ರಾದಿ ದೇವತೆಗಳಿಗಿಂತ ಮನೋಭಿಮಾನಿಯಾದ ರುದ್ರ, ಬುದ್ಧಿಗೆ ಅಭಿಮಾನಿನಿಯಾದ ಸರಸ್ವತೀ ಮಹತ್ತತ್ವಕ್ಕೆ ಅಭಿಮಾನಿಯಾದ ಬ್ರಹ್ಮದೇವರು, ಜಡಪ್ರಕೃತಿಗೆ ಅಭಿಮಾನಿನಿಯಾದ ಜಗನ್ಮಾತೆ ಲಕ್ಷ್ಮೀದೇವಿ. ಕೊನೆಗೆ ಸರ್ವಾಂತರ್ಯಾಮಿಯಾದ ಶ್ರೀಹರಿ – ಹೀಗೆ ಕ್ರಮವಾಗಿ ಈ ದೇವತೆಗಳ ಪಾರಮ್ಯವನ್ನು ತಿಳಿದು ಕೊಳ್ಳಬೇಕು. ಹೀಗೆ ಇಂದ್ರಿಯ, ಮನೋ ಬುದ್ಧಿ ಮುಂತಾದ ಜಡ ಪದಾರ್ಥಗಳಿಗೆ ಅಭಿಮಾನಿಗಳಾದ ದೇವತೆಗಳ ಮತ್ತು ಪರಮಾತ್ಮನ ಪರಿಜ್ಞಾನದಿಂದ ಇಂದ್ರಿಯ, ಮನೋಬುದ್ಧಿಗಳ ಮೇಲೆ ಸರಿಯಾದ ಹತೋಟಿ ಪಡೆದು ಕಾಮಕ್ರೋಧಾದಿ ಆಂತರಿಕ ಶಕ್ತಿಗಳನ್ನು ಎದುರಿಸಲು ನಾವು ಸಮರ್ಥರಾಗಬಲ್ಲೆವು .

"ಯೇ ಯಥಾ ಮಾಂ ಪ್ರಪದ್ಯಂತೇ"

ಪರಮಾತ್ಮನನ್ನು ಕೆಲವರು ನಿಷ್ಕಾಮನೆಯಿಂದ ಮುಕ್ತಿಯುಂತಹ ಶ್ರೇಷ್ಠ, ಉದಾತ್ತ ಫಲಕ್ಕಾಗಿ ಆರಾಧಿಸುತ್ತಾರೆ. ಕೆಲವರು. ಸ್ವರ್ಗ, ಸಂಪತ್ತು ಮುಂತಾದ ಗೌಣ ಫಲಕ್ಕಾಗಿ ಬೇರೆ ಬೇರೆ ದೇವತೆಗಳನ್ನು ಪೂಜಿಸುತ್ತಾರೆ, ಭೂತಾರಾಧನೆಯನ್ನೂ ಮಾಡುತ್ತಾರೆ. ಅವರವರ ಅಪೇಕ್ಷೆ, ಜ್ಞಾನ ಸೇವೆಗಳಿಗನುಸಾರ ವಾಗಿ ಭಗವಂತನೇ ಎಲ್ಲರಿಗೂ ಫಲವನ್ನು ನೀಡುವನು. ಬೇರೆ ಬೇರೆ ದೇವತೆಗಳಲ್ಲಿ ತಾನೊಬ್ಬನೇ ನೆಲೆಸಿಕೊಂಡು ಎಲ್ಲರಿಗೂ ಅವರವರ ಸೇವೆ -ಸಾಧನೆಗಳಿಗೆ ಅನುಗುಣವಾಗಿ ಫಲವನ್ನು ತಾನು ನೀಡುವು ದಾಗಿ ಶ್ರೀಕೃಷ್ಣನು ಹೇಳಿದ್ದಾನೆ. ಬೇರೆ ಬೇರೆ ನಾಮಗಳಿಂದ ದೇವತೆಗಳನ್ನು , ಭೂತಗಳನ್ನು ಆರಾಧಿಸಿದರೂ ಆ ಎಲ್ಲಾ ಶಬ್ದಗಳೂ ಸರ್ವಾಂತರ್ಯಾಮಿಯಾದ ಒಬ್ಬನೇ ಒಬ್ಬ ಪರದೈವವೆನಿಸಿದ ಶ್ರೀಕೃಷ್ಣನನ್ನೇ ಪ್ರತಿಪಾದಿಸುತ್ತದೆ. ಆದ್ದರಿಂದ ಯಾವುದೇ ನಾಮದಿಂದ ಎಲ್ಲಿ ಆರಾಧನೆ ಸಲ್ಲಿಸಿದರೂ ಅದು ಪರಬ್ರಹ್ಮ ನಾದ ಶ್ರೀಕೃಷ್ಣನಿಗೆ ಸಲ್ಲುತ್ತದೆ. ಅವನೇ ಎಲ್ಲರಿಗೂ ಫಲವನ್ನು ನೀಡುತ್ತಾನೆ. ಆದರೆ ಭಗವಂತನು ಫಲವನ್ನು ನೀಡುವಾಗ ಅವನ ಭಕ್ತಿ , ತತ್ವಜ್ಞಾನ, ಸಾಧನೆ, ಕಾಮನೆಗಳನ್ನು ಗಮನಿಸಿ ಅದಕ್ಕೆ ಅನುಗುಣವಾದ ಫಲಗಳನ್ನು ನೀಡುವನು. ಹೀಗೆ ಅನೇಕ ದೇವತೆಗಳ ಅಸ್ತಿತ್ವದ ಜೊತೆಗೆ ಎಲ್ಲಾ ಪೂಜೆ ಆರಾಧನೆಗಳನ್ನೂ ಸ್ವೀಕರಿಸುವ, ಎಲ್ಲಾ ಶಬ್ದಗಳಿಂದಲೂ ಪ್ರತಿಪಾದಿಸಲ್ಪಡುವ ಒಬ್ಬನೇ ಆದ ಪರಾತ್ಪರ ವಸ್ತುವನ್ನು ಭಗವದ್ಗೀತೆಯು ನಿರೂಪಿಸಿದೆ.

"ಚಾತುರ್ವರ್ಣ್ಯಂ ಮಯಾ ಸೃಷ್ಟಂ"

ಇಲ್ಲಿ ಹೇಳಿರುವ ಚಾತುರ್ವರ್ಣ್ಯವೆಂದರೆ ಪ್ರಚಲಿತವಾದ ಹುಟ್ಟನ್ನು ಆಧರಿಸಿದ ಜಾತಿವಿಭಾಗ ವಲ್ಲ. ಶಮ, ದಮ ಮುಂತಾದ ಆಂತರಿಕ ಗುಣ -ಪ್ರವೃತ್ತಿಗಳನ್ನು ಆಧರಿಸಿ ವಿಭಜಿಸಿದ ಸಜ್ಜನ ವೃಂದವನ್ನೆಲ್ಲ ಚಾತುರ್ವರ್ಣ್ಯವೆಂಬ ಶಬ್ದದಿಂದ ಸಂಗ್ರಹಿಸಲಾಗಿದೆ. ವಿಶ್ವದ ಸಜ್ಜನ ವೃಂದವನ್ನೆಲ್ಲ ಈ ಚಾತುರ್ವರ್ಣ್ಯ ವೆಂಬ ಶಬ್ದದಿಂದ ಸಂಗ್ರಹಿಸಲಾಗಿದೆ.ನಾವೆಲ್ಲ ನಮ್ಮನ್ನು ಸೃಜಿಸಿ, ಪೋಷಿಸಿ ಸಕಲ ಅನುಕೂಲತೆಗಳನ್ನೂ ಒದಗಿಸಿದ ಪರಮಾತ್ಮನ ಬಗ್ಗೆ ವಿಧೇಯರಾಗಿರಬೇಡವೇ ? ಅವನು ಏರ್ಪಡಿಸಿದ ನಿಯಮದಂತೆ ಅವನ ಆದೇಶದಂತೆ ಈ ಜಗತ್ತಿನಲ್ಲಿ ನಮ್ಮ ಕರ್ತವ್ಯವನ್ನು ನಿರ್ವಹಿಸಬೇಡವೇ ? ಸಮಸ್ತ ಜೀವ ವರ್ಗಕ್ಕೆ ತಂದೆಯಾಗಿ ಪರಮೋಪಕಾರಕನಾದ ಭಗವಂತನನ್ನು ಮರೆಯದೆ ಅವನಿಗೆ ಪ್ರೀತಿಕರವಾದ ಕರ್ತವ್ಯವನ್ನು ಈ ಜಗತ್ತಿನಲ್ಲಿ ನಾವು ನಡೆಸಬೇಕು. ಭಗವಂತನನ್ನು ಮರೆತು ನಾನಾ ರೀತಿಯ ಕ್ಷುದ್ರ ಫಲಗಳಿಗಾಗಿ ಬೇರೆ ಬೇರೆ ವ್ಯಕ್ತಿಗಳೆಡೆಗೆ ಧಾವಿಸಬಾರದು ಎಂಬುದೇ ಈ ಶ್ಲೋಕದ ಸಂದೇಶವಾಗಿದೆ.

"ಕರ್ಮಣ್ಯಕರ್ಮ ಯಃ ಪಶ್ಯೇತ್"

ಕರ್ಮದಲ್ಲಿ ಅಕರ್ಮವನ್ನೂ, ಅಕರ್ಮದಲ್ಲಿ ಕರ್ಮವನ್ನೂ ಕಾಣಬೇಕು – ಈ ಒಗಟಿನ ವಾಕ್ಯದಲ್ಲಿ ಜೀವನದ ಪ್ರಧಾನ ಸೂತ್ರವು ಅಡಗಿದೆ. ಇಲ್ಲಿ ಕರ್ಮವೆಂದರೆ ಕರ್ಮ ಬಂಧನಕ್ಕೆ ಒಳಗಾದ ಜೀವನೆಂದೂ, ಅಕರ್ಮವೆಂದರೆ ಈ ಬಂಧನವನ್ನು ಮೀರಿದ ಭಗವಂತನೆಂದೂ ಗ್ರಹಿಸಬೇಕು. ಜೀವನದಲ್ಲಿ ನಿಜವಾದ ಕರ್ತೃತ್ವ ಇಲ್ಲವೆಂದೂ ಪರಮಾತ್ಮನಲ್ಲಿಯೇ ಸರಿಯಾದ ಅರ್ಥದಲ್ಲಿ ಕರ್ತೃತ್ವ ಇದೆಯೆಂದು ನಾವು ತಿಳಿದುಕೊಳ್ಳಬೇಕು. ಜೀವನು ಅಸ್ವತಂತ್ರನೂ, ಭಗವಂತನು ಸ್ವತಂತ್ರನು ಎಂಬುದೇ ಇದರ ಒಟ್ಟು ಅರ್ಥವಾಗಿದೆ. ಈ ಶ್ಲೋಕಕ್ಕೆ ಇನ್ನೂ ಒಂದು ಅರ್ಥವಿದೆ. ನಾವು ವಿವಿಧ ವ್ಯಾಪಾರಗಳನ್ನು ಮಾಡಿದರೂ ನಾವೇ ಇದನ್ನು ಮಾಡುತ್ತಾ ಇಲ್ಲ. ಭಗವಂತನೇ ಇದನ್ನು ನಮ್ಮಿಂದ ನಡೆಸುತ್ತಾ ಇದ್ದಾನೆ ಎಂದು ನಮ್ಮ ಎಲ್ಲಾ

ಕ್ರಿಯೆಗಳಲ್ಲಿ ಭಗವಂತನ ವ್ಯಾಪಾರವನ್ನು ಕಾಣಬೇಕು. ಅದರಂತೆ ನಾವು ಯಾವುದೇ ಕ್ರಿಯೆಗಳಲ್ಲಿ ತೊಡಗದೆ ನಿದ್ರಾವಸ್ಥೆಯಲ್ಲಿ ಇರುವಾಗಲೂ ಭಗವಂತನ ವ್ಯಾಪಾರವು ನಡೆಯುತ್ತದೆ. ಅಲ್ಲಿಯೂ ಸ್ವಪ್ನದಲ್ಲಿ ವಿಚಿತ್ರ ಪದಾರ್ಥಗಳನ್ನು ಅವನು ತೋರಿಸುತ್ತಾನೆ. ನಮ್ಮ ಕ್ರಿಯೆಗಳಲ್ಲಿಯೂ ಭಗವಂತನ ಕ್ರಿಯೆಯನ್ನು ಕಾಣಬೇಕು. ನಮ್ಮ ನಿಷ್ಕ್ರಿಯಾವಸ್ಥೆಯಲ್ಲಿಯೂ ಭಗವಂತನ ಕ್ರಿಯೆಗಳನ್ನು ಕಾಣಬೇಕು. ಇದೇ ನಿಜವಾದ ತತ್ವಜ್ಞಾನವಾಗಿದೆ.

''ಬ್ರಹ್ಮಾರ್ಪಣಂ ಬ್ರಹ್ಮಹವಿಃ''

ಇಲ್ಲಿ ಯಜ್ಞಕ್ಕೆ ಸಂಬಂಧಿಸಿದ ಎಲ್ಲ ವಸ್ತುಗಳನ್ನೂ ಬ್ರಹ್ಮವೆಂದು ಕರೆದಿದೆ. ಜಡ ವಸ್ತುಗಳೂ, ಜಡಕ್ರಿಯೆಗಳೂ ಭಗವಂತನೇ ಆಗಿರಲು ಸಾಧ್ಯವಿಲ್ಲ. ಇದೆಲ್ಲವೂ ಭಗವಂತನ ಅಧೀನವೆಂದೇ ಈ ವಾಕ್ಯದ ಅರ್ಥವಾಗಿದೆ. ಲೋಕದಲ್ಲಿಯೂ ದೊಡ್ಡ ವ್ಯಕ್ತಿಯ ಮುಂದೆ ''ಇದೆಲ್ಲವೂ ನೀನೇ'' ಎಂದು ಹೇಳುತ್ತೇವೆ. ಎಲ್ಲವೂ ನಿನ್ನದು ಎಂಬ ಅರ್ಥದಲ್ಲಿ ಈ ಮಾತನ್ನಾಡುತ್ತೇವೆಂಬುದು ಎಲ್ಲರಿಗೂ ಗೊತ್ತಿದೆ. ಅದರಂತೆ ಯಜ್ಞಕ್ಕೆ ಸಂಬಂಧಿಸಿದ ವಸ್ತುಗಳೆಲ್ಲವೂ ಭಗವಂತನೆಂದರೆ ಪರಮಾತ್ಮನ ಅಧೀನವಾದ ಎಲ್ಲಾ ವಸ್ತು , ಗುಣ, ಕ್ರಿಯೆಗಳನ್ನು ಭಗವಂತನ ಸೇವೆಗಾಗಿ ನಾವು ಉಪಯೋಗಿಸಬೇಕು ಎಂದು ಯಜ್ಞತತ್ವದಲ್ಲಿ ಅಡಗಿದ ಅರ್ಪಣ ಮನೋಭಾವವನ್ನು ಸ್ಪಷ್ಟಪಡಿಸುತ್ತದೆ. ಗೀತೆಯಲ್ಲಿ ಯಜ್ಞದ ವಿವಿಧ ಪ್ರಕಾರಗಳನ್ನೂ ನಿರೂಪಿಸಲಾಗಿದೆ. ಯೋಗಿಗಳು ಮಾಡುವ ಭಗವದುಪಾಸನೆ, ಶ್ರೀಮಂತರು ಅಗ್ನಿಯಲ್ಲಿ ಮಾಡುವ ಹೋಮ ಹವನಗಳು, ಸಾಧಕರು ನಡೆಸುವ ಇಂದ್ರಿಯನಿಗ್ರಹ, ಉಪವಾಸ, ಪ್ರಾಣಾಯಾಮ ಮೊದಲಾದವುಗಳು, ವಿದ್ವಾಂಸರ ಪಾಠ ಪ್ರವಚನಗಳು, ಸಂಸಾರಿಗಳು ಇಂದ್ರಿಯಗಳಿಂದ ಮಾಡುವ ವಿಷಯೋಪಭೋಗಗಳು ಇವೆಲ್ಲವೂ ಯಜ್ಞಗಳೇ. ಇವೆಲ್ಲವನ್ನೂ ಭಗವಂತನ ಸೇವಾರೂಪವಾಗಿ, ಭಗವಂತನ ಪ್ರೀತಿಗಾಗಿ ಮಾಡಿದಾಗ ಈ ಕರ್ಮಾಚರಣೆಯಿಂದ ನಮಗೇನೂ ಭಯವಿಲ್ಲ. ಭಗವಂತನ ಭಕ್ತಿಯೆನ್ನುವ ದೋಣಿಯ ಆಸರೆಯಿರುವಾಗ ಈ ಕರ್ಮಪ್ರವಾಹದಲ್ಲಿ ಮುಳುಗುವ ಭಯವೇಕೆ ?

ಸನ್ಯಾಸಯೋಗ ಮತ್ತು ಕರ್ಮಯೋಗ

ಫಲಕಾಮನೆಯನ್ನು ತೊರೆದು ಪರಮಾತ್ಮನ ಸೇವಾಭಾವನೆಯಿಂದ ಕರ್ತವ್ಯವನ್ನು ಮಾಡಬೇಕು ಎನ್ನುವುದೇ ಗೀತೆಯಲ್ಲಿ ಹೇಳಿದ ನಿಷ್ಕಾಮ ಕರ್ಮಯೋಗವಾಗಿದೆ. ಕಾಮನೆ ಮುಂತಾದ ಮನೋವಿಕೃತಿಯನ್ನು ತೊರೆಯುವುದು, ಕರ್ತವ್ಯವನ್ನು ಆಚರಿಸುವುದು ಈ ಎರಡು ಅಂಶಗಳು ನಿಷ್ಕಾಮ ಕರ್ಮಯೋಗದಲ್ಲಿ ಅಡಗಿವೆ. ಇವುಗಳಲ್ಲಿ ಯಾವುದು ಶ್ರೇಷ್ಠ ಎಂದು ಅರ್ಜುನನ ಜಿಜ್ಞಾಸೆಯಾಗಿದೆ. ಕಾಮತ್ಯಾಗವೇ ಶ್ರೇಷ್ಠವಾಗಿದ್ದರೆ ಅದನ್ನು ಮಾತ್ರ ಮಾಡಬಹುದಲ್ಲವೇ ? ಕರ್ತವ್ಯವನ್ನು ಆಚರಿಸದಿದ್ದರೂ ತೊಂದರೆಯಿಲ್ಲ ಎಂದು ಅರ್ಜುನನ ಇಂಗಿತವಾಗಿದೆ. ಅದರಂತೆ ಸನ್ಯಾಸವು ಯತಿಗಳಿಗೆ ಸಂಬಂಧಿಸಿದ ಧರ್ಮವಾಗಿದೆ. ಕರ್ಮಯೋಗವು ಗೃಹಸ್ಥರು ಮಾಡಬಹುದಾದ ಧರ್ಮ. ಈ ಎರಡನ್ನೂ ಒಬ್ಬನೇ ಆಚರಿಸಲು ಸಾಧ್ಯವಿಲ್ಲ. ಸನ್ಯಾಸವೇ ಶ್ರೇಷ್ಠವಾಗಿದ್ದರೆ ಅದನ್ನೇ ಮಾಡೋಣ. ಕರ್ಮ ಯೋಗದ ಮಾರ್ಗವನ್ನೇ ಬಿಡಬಹುದಲ್ಲವೇ ಎನ್ನುವುದು ಅರ್ಜುನನ ಇನ್ನೊಂದು ವಿಚಾರವಾಗಿದೆ. ಐದನೆಯ ಅಧ್ಯಾಯದ ಪ್ರಾರಂಭದಲ್ಲಿ ಶ್ರೀಕೃಷ್ಣನು ಇದರ ಬಗ್ಗೆ ಸೂಕ್ತ ಮಾರ್ಗದರ್ಶನವನ್ನು ಮಾಡಿದ್ದಾನೆ. ಗೀತೆಯಲ್ಲಿ ಹೇಳಿದ ಸನ್ಯಾಸವೆಂದರೆ ಯತಿಧರ್ಮವೆಂದೂ, ಕರ್ಮಯೋಗವೆಂದರೆ ಗೃಹಸ್ಥ ಧರ್ಮವೆಂದೂ ತಿಳಿದುಕೊಳ್ಳಬಾರದು. ಕಾಮ, ದ್ವೇಷ ಮುಂತಾದ ಮನೋವಿಕಾರಗಳನ್ನು ತೊರೆಯುವುದೇ ಸನ್ಯಾಸವೆನಿಸಿದೆ. ಇದು ಕರ್ಮಯೋಗದ ಪೂರ್ವರಂಗವಾಗಿದೆ, ಕಾಮನೆ ಮುಂತಾದ

ಮನೋ ದೋಷವಿಲ್ಲದ ವ್ಯಕ್ತಿಯೇ ಭಗವತ್ ಸೇವಾ ಭಾವನೆಯಿಂದ ಮಾಡಬೇಕಾದ ಕರ್ಮಯೋಗಕ್ಕೆ ಅರ್ಹನಾಗುವನು. ಕಳೆಯನ್ನು ತೆಗೆದು ಎಲ್ಲವನ್ನು ಹದಗೊಳಿಸಿ ಅಲ್ಲಿ ಬೀಜವನ್ನು ಬಿತ್ತುವಂತೆ ಕಾಮನೆಯನ್ನು ತೊರೆದು ನಿರ್ಮಲ ಮನಸ್ಸಿನಿಂದ ಮಾಡಿದ ಸತ್ಕರ್ಮಗಳೇ ಉತ್ತಮ ಫಲವನ್ನು ನೀಡುವುವು. ''ಜ್ಞೇಯಃ ಸ ನಿತ್ಯಸನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತೇ'' ಎಂಬುದಾಗಿ ಗೀತೆಯ ಮುಂದಿನ ವಾಕ್ಯದಲ್ಲಿ ಕಾಮ-ಕ್ರೋಧ ಪರಿತ್ಯಾಗವೇ ಸನ್ಯಾಸವೆಂದು ಹೇಳಿದೆ. ಯತಿಗಳಿಗೂ ಗೃಹಸ್ಥರಿಗೂ ಎಲ್ಲರಿಗೂ ಅನ್ವಯವಾಗುವ ಸನ್ಯಾಸವಿದು. ಈ ಸನ್ಯಾಸವು ಕರ್ಮಯೋಗದ ಪೀಠಿಕೆಯಾಗಿರುವುದರಿಂದ ಕಾಮ -ಕ್ರೋಧಾದಿಗಳನ್ನು ಗೆದ್ದ ನಂತರ ಅಷ್ಟರಲ್ಲಿಯೇ ತೃಪ್ತನಾಗಿ ಮುಂದೆ ಕರ್ಮಯೋಗವನ್ನು ಆಚರಿಸದಿದ್ದರೆ ಅವನ ಪ್ರಾರಂಭದ ಸಾಹಸವೆಲ್ಲ ವ್ಯರ್ಥವಾಗಿ ಬರೀ ಶ್ರಮವೆನಿಸುವುದು. ತುಂಬಾ ಹಣವನ್ನು ವೆಚ್ಚ ಮಾಡಿ ಅಡಿಪಾಯವನ್ನು ನಿರ್ಮಿಸಿ ಮುಂದೆ ಕಟ್ಟಡವನ್ನು ಕಟ್ಟದಿದ್ದರೆ ಅವನ ಶ್ರಮವೆಲ್ಲ ವ್ಯರ್ಥವಾಗುವುದಿಲ್ಲವೇ ? ಮಾತ್ರವಲ್ಲದೆ ತಾನು ಮಾಡಬೇಕಾದ ಕರ್ತವ್ಯವನ್ನು ನಿರ್ವಹಿಸದೆ ಹೋದರೆ ಕರ್ತವ್ಯ ಭ್ರಷ್ಟತೆಯಿಂದ ಪಾರಲೌಕಿಕ ಅನರ್ಥಕ್ಕೂ ಅವನು ಭಾಗಿಯಾಗುವನು. ಆದ್ದರಿಂದಲೇ ಸನ್ಯಾಸಕ್ಕಿಂತ ಕರ್ಮಯೋಗವೇ ಶ್ರೇಷ್ಠವೆಂದು ಗೀತೆಯು ಹೇಳಿದೆ. ಇವೆರಡರ ಗುರಿಯೂ ಒಂದೇ ಆಗಿದೆ. ಕಾಮತ್ಯಾಗರೂಪವಾದ ಸನ್ಯಾಸದ ನಂತರ ಕರ್ಮಾಚರಣೆ ; ಅದರಿಂದ ಜ್ಞಾನ, ಸಾಕ್ಷಾತ್ಕಾರ ಮತ್ತು ಮೋಕ್ಷವನ್ನು ಕ್ರಮವಾಗಿ ನಾವು ಪಡೆಯುತ್ತೇವೆ. ಆದ್ದರಿಂದ ಸನ್ಯಾಸ ಮತ್ತು ಕರ್ಮಯೋಗವನ್ನು ಸ್ವತಂತ್ರವಾದ ಬೇರೆ ಬೇರೆ ಸಾಧನಗಳೆಂದು ನಾವು ತಿಳಿದುಕೊಳ್ಳಬಾರದು.

ಕೆಲವರು ಇಲ್ಲಿ ಹೇಳಿದ ಸನ್ಯಾಸವೆಂದರೆ ಯತಿಧರ್ಮವೆಂದೂ, ಕರ್ಮಯೋಗವೆಂದರೆ ಗೃಹಸ್ಥಧರ್ಮವೆಂದೂ ಭ್ರಮಿಸಿ ಸನ್ಯಾಸವೇ ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠವಾಗಿರುವಾಗ ಸನ್ಯಾಸಕ್ಕಿಂತಲೂ ಗೃಹಸ್ಥ ಧರ್ಮವೇ ಶ್ರೇಷ್ಠವೆಂದು ಶ್ರೀಕೃಷ್ಣನು ಹೇಗೆ ಹೇಳಿದನೆಂದು ಗೊಂದಲಕ್ಕೀಡಾಗುತ್ತಾರೆ. ನಾವು ಇಷ್ಟರವರೆಗೆ ನೀಡಿರುವ ವಿವರಣೆಯಿಂದ ಈ ಗೊಂದಲಕ್ಕೆ ಅವಕಾಶವಾಗುವುದಿಲ್ಲ. ಮಾತ್ರವಲ್ಲದೆ ಗೃಹಸ್ಥರಿಗೆ ಮಾತ್ರ ಕರ್ಮಾಚರಣೆ, ಯತಿಗಳಿಗೆ ಕರ್ಮಾಚರಣೆಯೇ ಇಲ್ಲ, ಗೃಹಸ್ಥರಿಗೆ ಜ್ಞಾನಯೋಗವೇ ಇಲ್ಲ ಎಂಬುದೂ ತಪ್ಪು ಕಲ್ಪನೆ. ಗೃಹಸ್ಥರಿಗೆ ಸನ್ಯಾಸಿಗಳಿಗಿಂತ ಜ್ಞಾನಸಾಧನೆ ಕಡಿಮೆ ಇರಬಹುದು. ಸನ್ಯಾಸಿಗಳಿಗಿಂತ ಗೃಹಸ್ಥರಿಗೆ ಕರ್ಮಾನುಷ್ಠಾನ ಹೆಚ್ಚು ಇರಬಹುದು. ಆದರೆ ಜ್ಞಾನ ಮತ್ತು ಕರ್ಮಗಳು ಇಬ್ಬರಿಗೂ ಅವಶ್ಯ. ಯತಿಗಳಿಗೂ ಗೃಹಸ್ಥರಿಗೂ, ಜ್ಞಾನಯೋಗಿಗಳಿಗೂ -ಕರ್ಮಯೋಗಿಗಳಿಗೂ ಅನ್ವಯವಾಗುವ ಸನ್ಯಾಸ ಮತ್ತು ಕರ್ತವ್ಯದ ಸಮನ್ವಯವನ್ನೇ ಶ್ರೀ ಕೃಷ್ಣನು ಈ ಭಾಗದಲ್ಲಿ ಹೇಳಿದ್ದಾನೆ. ಆದ್ದರಿಂದಲೇ ''ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ'' ಎಂದು ಶ್ರೀಕೃಷ್ಣನು ಹೇಳಿದ್ದಾನೆ. ಶಾಸ್ತ್ರಗಳಲ್ಲಿ ಕರ್ಮದ ನಿಂದನೆಯಿದ್ದರೆ ಅದು ಸ್ವರ್ಗ, ಸಂಸಾರ ಸುಖ ಮುಂತಾದ ಕ್ಷುದ್ರ ಫಲದ ಅಪೇಕ್ಷೆಯಿಂದ ಮಾಡಿದ ಕರ್ಮಕ್ಕೆ ಸಂಬಂಧಿಸಿದ್ದಾಗಿದೆ. ನಿಷ್ಕಾಮ ಕರ್ಮವಂತೂ ಸಾಕ್ಷಾತ್ಕಾರಕ್ಕೂ ಮೋಕ್ಷಕ್ಕೂ ಅತ್ಯಾವಶ್ಯಕವಾದ ಸಾಧನವಾಗಿದೆ.

ಕರ್ಮಸನ್ಯಾಸಕ್ಕೆ ಇನ್ನೊಂದು ರೀತಿಯ ವಿವರಣೆಯನ್ನು ಶ್ರೀಮಧ್ವಾಚಾರ್ಯರು ನೀಡಿದ್ದಾರೆ. ಕರ್ತವ್ಯವನ್ನು ತೊರೆಯುವುದು ಕರ್ಮಸನ್ಯಾಸವಲ್ಲ. ತಾನು ಮಾಡುತ್ತೇನೆಂಬ ಅಹಂಕಾರವನ್ನು ಬಿಡುವುದೇ ನಿಜವಾದ ಕರ್ಮಸನ್ಯಾಸವಾಗಿದೆ. ಜಗತ್ತಿನ ಪ್ರತಿಯೊಂದೂ ಕಾರ್ಯವೂ ಭಗವಂತನಿಂದಲೇ ನಡೆಯುತ್ತದೆ. ಅವನೇ ಸ್ವತಂತ್ರಕರ್ತನು. ಅವನ ಶಕ್ತಿ-ಪ್ರಭಾವಗಳಿಂದಲೇ ಅವನ ಅಧೀನರಾಗಿಯೇ ನಾವು ಕಾರ್ಯಗಳನ್ನು ಮಾಡಬೇಕು. ನಾವು ಅಸ್ವತಂತ್ರಕರ್ತರು. ನಮ್ಮ ಈ ಇತಿಮಿತಿಯನ್ನು ಮರೆತು ನಾವೇ ಸ್ವತಂತ್ರವಾಗಿ ವ್ಯವಹರಿಸುತ್ತೇವೆಂದು ಭ್ರಮಿಸುತ್ತೇವೆ. ಈ ಅಹಂಭಾವವನ್ನು ತ್ಯಜಿಸಿ ನಮ್ಮ ಪ್ರತಿಯೊಂದು ಕ್ರಿಯೆಗಳ ಹಿನ್ನಲೆಯಲ್ಲಿಯೂ ಭಗವಂತನ ಮಹಾಶಕ್ತಿಯನ್ನು ಅರಿತುಕೊಂಡು ನಮ್ಮ ಕರ್ತವ್ಯವನ್ನು

ಮಾಡಿದಾಗ ಕರ್ತವ್ಯಶೀಲರಾಗಿದ್ದರೂ ಕರ್ಮಸನ್ಯಾಸಿಗಳಾಗುತ್ತೇವೆ. ಕರ್ಮಯೋಗ - ಕರ್ಮ ಸನ್ಯಾಸಗಳ ಈ ಸಮನ್ವಯವು ನಮ್ಮಲ್ಲಿ ಕ್ರಿಯಾಶೀಲತೆಯ ಜೊತೆಗೆ ವಿನಯವನ್ನು ಜೋಡಿಸುತ್ತದೆ.

ಕೆಲವರು ಪರಮಾತ್ಮನಲ್ಲಿ ಯಾವ ಗುಣಧರ್ಮಗಳೂ ಇಲ್ಲದಿರುವಾಗ ಸ್ವಾತಂತ್ರ್ಯವಾಗಲೀ, ಕರ್ತೃತ್ವವಾಗಲೀ ಹೇಗೆ ಎಂದು ವಾದಿಸುತ್ತಾರೆ. ಯಾವುದೇ ಗುಣಧರ್ಮಗಳಿಲ್ಲದ ವಸ್ತುವನ್ನು ನಾವು ಆಲೋಚಿಸಲು ಸಾಧ್ಯವಿಲ್ಲ. ಪರಮಾತ್ಮನ ಅಸ್ತಿತ್ವವನ್ನಂತೂ ನಾವು ನಿರಾಕರಿಸಲು ಸಾಧ್ಯವಿಲ್ಲ. ಅಸ್ತಿತ್ವವೂ ಒಂದು ಧರ್ಮವೇ ಅಲ್ಲವೇ ? ಯಾವುದೇ ಗುಣಧರ್ಮಗಳಿಲ್ಲದ ಒಂದು ವಸ್ತುವನ್ನು ಯಾವ ಪ್ರಮಾಣಗಳಿಂದಲೂ ನಮಗೆ ತಿಳಿಯಲು ಸಾಧ್ಯವಿಲ್ಲ. ಪ್ರಮಾಣಗಳೆಲ್ಲವೂ ವಸ್ತುವನ್ನು ಒಂದು ವಿಶಿಷ್ಟ ಧರ್ಮದ ಜೊತೆಗೇ ನಮಗೆ ತಿಳಿಸಿಕೊಡುತ್ತದೆ. ಮಾತ್ರವಲ್ಲದೆ ಪರಮಾತ್ಮನಿಗೆ ಸ್ವಾಭಾವಿಕವಾದ ಜ್ಞಾನ, ಬಲ, ಶಕ್ತಿ, ಕ್ರಿಯೆಗಳಿವೆ, ಅವನಿಗೆ ಅನಂತ ಗುಣಗಳಿವೆ ಎಂಬುದನ್ನು ಪ್ರತಿಪಾದಿಸುವ ವೇದ, ಉಪನಿಷತ್, ಪುರಾಣ ಮೊದಲಾದ ವಾಕ್ಯಗಳಿರುವಾಗ ಪರಮಾತ್ಮನಲ್ಲಿ ಯಾವುದೇ ಗುಣಧರ್ಮಶಕ್ತಿಗಳು ಇಲ್ಲವೆನ್ನುವುದು ಸರಿಯಲ್ಲ.

''ಪಂಡಿತಾಃ ಸಮದರ್ಶಿನಃ''

ಜ್ಞಾನಿಗಳಲ್ಲಿರುವ ಸಮದೃಷ್ಟಿಯನ್ನು ಶ್ರೀಮಧ್ವಾಚಾರ್ಯರು ಆರನೆಯ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಸಜ್ಜನರನ್ನೂ, ದುರ್ಜನರನ್ನೂ, ವಿದ್ವಾಂಸರನ್ನೂ ಅಜ್ಞಾನಿಗಳನ್ನೂ ಒಂದೇ ದೃಷ್ಟಿಯಿಂದ ನೋಡುವುದು ಸಮದೃಷ್ಟಿಯೆನಿಸುವುದಿಲ್ಲ. ಜ್ಞಾನ, ಸದ್ಗುಣ, ಸತ್ಕಾರ್ಯಗಳಿಂದ ಶ್ರೇಷ್ಠರಾದವರನ್ನು ಉಳಿದವರಿಗಿಂತ ಮಿಗಿಲಾಗಿ ಗೌರವಿಸಬೇಕಾದುದು ನ್ಯಾಯವಾಗಿದೆ. ಹೀಗಿರುವಾಗ ಗೀತೆಯಲ್ಲಿ ಹೇಳಿದ ಸಮದೃಷ್ಟಿಯ ಅರ್ಥವೇನೆಂಬುದನ್ನು ನಾವು ವಿಮರ್ಶಿಸಬೇಕಾಗಿದೆ. ಪ್ರಪಂಚದಲ್ಲಿ ಎಷ್ಟೇ ವ್ಯತ್ಯಾಸ-ವೈಚಿತ್ರ್ಯಗಳಿದ್ದರೂ ಭಗವಂತನು ಮಾತ್ರ ಎಲ್ಲ ಕಡೆಗಳಲ್ಲಿ ಏಕ ರೂಪನಾಗಿದ್ದಾನೆ. ವಿದ್ಯಾವಿನಯ ಸಂಪನ್ನರಾದ ಸಜ್ಜನರಲ್ಲಿಯೂ, ಹಿಂಸಾಜೀವಿಗಳಾದ ಅನಾಗರಿಕ ಕ್ರೂರ ಮನುಷ್ಯರಲ್ಲಿಯೂ ನೆಲೆಸಿದ ಏಕಮೇವ ಭಗವಂತನನ್ನು ಜ್ಞಾನಿಗಳು ಕಾಣಬಲ್ಲರು. ಬಾಹ್ಯಪ್ರಪಂಚದ ಈ ವಿಕೃತಿ-ಸಂಸ್ಕೃತಿಗಳಿಂದ, ಏರುಪೇರುಗಳಿಂದ ಅಲ್ಲಿ ನೆಲೆಸಿದ ಭಗವಂತನ ಮೇಲೆ ಏನೂ ಪರಿಣಾಮವಾಗಲಾರದು. ಅವನು ಪರಿಪೂರ್ಣವಾಗಿ ಏಕರೀತಿಯಿಂದ ಇರುವನು. ಜ್ಞಾನಿಗಳಿಗೆ ಎಲ್ಲ ಕಡೆಗಳಲ್ಲಿಯೂ ಈ ಭಗವಂತನ ಸಮತೆಯ ದರ್ಶನವಾಗುವುದು.

ಪ್ರತ್ಯಕ್ಷ ಜಗತ್ತಿನಲ್ಲಿ ಬೇರೆ ಬೇರೆ ವ್ಯಕ್ತಿಗಳಲ್ಲಿ ನಮಗೆ ಕಂಡು ಬರುತ್ತಿರುವ ಸೌಜನ್ಯ , ದೌರ್ಜನ್ಯ , ಶತ್ರುತ್ವ, ಮಿತ್ರತ್ವ, ಬಾಂಧವ್ಯ ಮೊದಲಾದುವುಗಳು ವ್ಯಕ್ತಿಯ ಸಹಜವಾದ ಧರ್ಮಗಳಲ್ಲ. ಭಿನ್ನ ಭಿನ್ನ ಕಾಲದಲ್ಲಿ ಈ ಸಂಬಂಧಗಳು ಬದಲಾಗುತ್ತವೆ. ಸಹಜವಾಗಿ ಉತ್ತಮನಾದ ವ್ಯಕ್ತಿಯೇ ಬೇರೆ ಬೇರೆ ಸನ್ನಿವೇಶಗಳಿಂದ ಕೆಟ್ಟವನಾಗಿ ವರ್ತಿಸಬಹುದು. ಜೀವರಲ್ಲಿ ಸ್ವಾಭಾವಿಕವಾಗಿ ವಿಭಿನ್ನ, ವಿಚಿತ್ರ ವ್ಯಕ್ತಿತ್ವಗಳಿದ್ದರೂ ಬಾಹ್ಯ ಜೀವನದಲ್ಲಿ ಅದನ್ನೇ ನಾವು ಕಾಣಲಾರೆವು. ಪರಿಸ್ಥಿತಿಯ ಒತ್ತಡದಿಂದಾಗಿ ಅನೇಕ ಗುಣಧರ್ಮಗಳು ತಾತ್ಕಾಲಿಕವಾಗಿ ದೇಹ, ಅಂತಃಕರಣ ಮುಂತಾದ ಉಪಾಧಿಗಳಿಂದ ಜೀವರಲ್ಲಿ ಉಂಟಾಗುತ್ತದೆ. ಈ ದೇಹ ಅಂತಃಕರಣಗಳ ಧರ್ಮಗಳನ್ನೇ ಆತ್ಮನ ಧರ್ಮಗಳೆಂದು ನಾವು ಭ್ರಮಿಸುತ್ತೇವೆ. ಜ್ಞಾನಿಗಳಿಗೆ ಈ ಭ್ರಮೆ ಇರುವುದಿಲ್ಲ. ಆತ್ಮ , ದೇಹ, ಅಂತಃಕರಣ ಇವುಗಳನ್ನು ಸರಿಯಾಗಿ ವಿಶ್ಲೇಷಿಸಿಕೊಂಡು ಅವುಗಳ ಪ್ರತ್ಯೇಕತೆಯನ್ನು ಸ್ಪಷ್ಟವಾಗಿ ಅರಿತುಕೊಂಡಿರುವ ಜ್ಞಾನಿಗಳು ಜಡ ಮತ್ತು ಚೇತನಗಳ ಧರ್ಮವನ್ನು ಕಲಸುಮೇಲೋಗರ ಮಾಡಿಕೊಂಡು ಗೊಂದಲಕ್ಕೆ ಇಳಿಯುವುದಿಲ್ಲ. ಜಡ ಧರ್ಮಗಳನ್ನು ಚೇತನದಲ್ಲಿ ಆರೋಪಿಸುವುದಿಲ್ಲ. ಸಹಜ ಮತ್ತು ಔಪಾಧಿಕ ಧರ್ಮಗಳ ಅಂತರವನ್ನು

ಸರಿಯಾಗಿ ತಿಳಿದುಕೊಂಡಿರುತ್ತಾರೆ. ಇದನ್ನೇ ಸಮದೃಷ್ಟಿಯೆಂದು ಶ್ರೀಮಧ್ವಾಚಾರ್ಯರು ಆರನೆಯ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಭಗವಂತನು ಎಲ್ಲರಲ್ಲಿಯೂ ಏಕರೂಪವಾಗಿ ಕಾಣುವುದು ಒಂದು ಸಮದೃಷ್ಟಿಯಾಗಿದ್ದರೆ ಜೀವರನ್ನು ಜಡಧರ್ಮಗಳಿಂದ ಪ್ರತ್ಯೇಕಿಸಿ ಗುರುತಿಸಿಕೊಳ್ಳುವುದು ಇನ್ನೊಂದು ರೀತಿಯ ಸಮದೃಷ್ಟಿಯಾಗಿದೆ.

''ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ''

ಸಾಧಕನಿಗೆ ಅಪರೋಕ್ಷ ಜ್ಞಾನವುಂಟಾಗುವವರೆಗೆ ಕರ್ಮಾಚರಣೆಯ ಆವಶ್ಯಕತೆ ಇದೆ. ಅಪರೋಕ್ಷ ಜ್ಞಾನವನ್ನು ಪಡೆದ ನಂತರ ಅದರ ಉಪಶಮವು ಬೇಕು. ಅಂದರೆ ಜ್ಞಾನವನ್ನು ಪಡೆದ ನಂತರ ಕರ್ಮಾಚರಣೆಯು ಬೇಡ ಎಂದು ಗೀತೆಯು ಹೇಳಿದಂತೆ ನಮಗೆ ಭಾಸವಾಗುತ್ತದೆ. ಆದರೆ ಗೀತೆಯಲ್ಲಿ ಐದನೆಯ ಅಧ್ಯಾಯದಲ್ಲಿಯೂ ಬೇರೆ ಕಡೆಗಳಲ್ಲಿಯೂ ಜ್ಞಾನಿಯು ಎಲ್ಲಾ ಕರ್ತವ್ಯಗಳನ್ನೂ, ಎಲ್ಲಾ ವ್ಯವಹಾರಗಳನ್ನೂ ನೀರಿನಲ್ಲಿರುವ ತಾವರೆಯಂತೆ ನಿರ್ಲಿಪ್ತತೆಯಿಂದ, ಸಮರ್ಪಣ ಭಾವದಿಂದ ಮಾಡುತ್ತಾನೆಂದು ಹೇಳಿರುವಾಗ ಜ್ಞಾನಿಗೆ ಕರ್ಮದ ಉಪಶಮನವನ್ನು ಹೇಳಿರುವುದು ಸಮಂಜಸವೆನಿಸದು. ಇದರ ಸರಿಯಾದ ವಿವರಣೆಯನ್ನು ಶ್ರೀಮಧ್ವಾಚಾರ್ಯರು ಮಾಡಿದ್ದಾರೆ. ಇಲ್ಲಿ ಶಮವೆಂದರೆ ಕರ್ತವ್ಯದ ಉಪಶಮ, ಕರ್ಮಪರಿತ್ಯಾಗವೆಂದು ಅರ್ಥವಲ್ಲ. ಸಮಾಧಿಸ್ಥರಾಗಿ ಭಗವಂತನ ಧ್ಯಾನ ಮಾಡುವುದನ್ನೇ ಇಲ್ಲಿ ಶಮವೆಂದು ಕರೆಯಲಾಗಿದೆ. ಅಪರೋಕ್ಷ ಜ್ಞಾನಕ್ಕಿಂತ ಮೊದಲು ಸಾಧಕರು ಹೆಚ್ಚಾಗಿ ಕರ್ಮಾಚರಣೆಯಲ್ಲಿ ತೊಡಗಿರುತ್ತಾರೆ. ಆದರೆ ಭಗವದ್ದರ್ಶನವನ್ನು ಪಡೆದ ಭಕ್ತನು ಹೆಚ್ಚಾಗಿ ಸಮಾಧಿಯಲ್ಲಿಯೇ ಮುಳುಗಿರುತ್ತಾನೆ. ಸಮಾಧಿ ಅವಸ್ಥೆಯಿಂದ ಹೊರಗೆ ಬಂದಾಗ ಮಾತ್ರ ಅವನು ಪ್ರವಚನ ಮುಂತಾದ ಕರ್ಮಗಳನ್ನು ಆಚರಿಸುತ್ತಾನೆ. ಕರ್ಮಾಚರಣೆಗಿಂತ ಸಮಾಧಿ ಸ್ಥಿತಿಯೇ ಅವನಿಗೆ ಹೆಚ್ಚು ಎಂಬುದನ್ನೇ ''ಶಮಃ ಕಾರಣಮುಚ್ಯತೇ'' ಎಂಬ ವಾಕ್ಯದಲ್ಲಿ ಹೇಳಿದ್ದಾರೆ.

ಇದಕ್ಕೆ ಇನ್ನೊಂದು ವಿವರಣೆಯನ್ನೂ ಆಚಾರ್ಯರು ನೀಡಿದ್ದಾರೆ. ಅಪರೋಕ್ಷ ಜ್ಞಾನಕ್ಕಿಂತ ಮೊದಲು ಜಿಜ್ಞಾಸುವು ತನ್ನ ಸಾಧನಾನುಷ್ಠಾನಗಳ ಜೊತೆಗೆ ನಾನಾ ಜನರ ಸೇವೆಯನ್ನು, ಪರೋಪಕಾರಾದಿ ಕಾರ್ಯಗಳನ್ನು ಮಾಡಲೇಬೇಕು. ಈ ನಾನಾ ಜನಸೇವೆಯು ಸರಕಾರಕ್ಕೆ ಕಂದಾಯ ಕೊಡುವಂತೆ, ಕಡ್ಡಾಯವಾಗಿ ಭಗವಂತನಿಗೆ ಸಲ್ಲಿಸಬೇಕಾದ ಕರ್ತವ್ಯವಾಗಿದೆ. ಕರ್ಮ ಎಂಬ ಶಬ್ದದಲ್ಲಿ ಈ ಅರ್ಥವು ಅಡಗಿದೆ. ''ಕರ''ವೆಂದರೆ ಕಂದಾಯವೆಂದು ಅರ್ಥ. ''ಕರ''ದಂತೆ -ಕಂದಾಯದಂತೆ ತಿಳಿಯಲ್ಪಟ್ಟ ಕಡ್ಡಾಯವಾಗಿರುವ ಜನಸೇವೆಯನ್ನು ಕರ್ಮವೆಂದು ಇಲ್ಲಿ ಗೀತೆಯಲ್ಲಿ ಹೇಳಿದೆ. ಅಪರೋಕ್ಷಜ್ಞಾನವನ್ನು ಪಡೆಯುವವರೆಗೆ ಜನಸೇವೆಯು ಅನಿವಾರ್ಯ. ಸಾಕ್ಷಾತ್ಕಾರವನ್ನು ಪಡೆದ ಮಹಾಯೋಗಿಗಳಿಗೆ ಈ ಜನಸೇವೆಯ ನಿರ್ಬಂಧವಿಲ್ಲ. ಅವರು ಲೋಕಸೇವೆಯನ್ನು ತೊರೆದು ಕೇವಲ ಭಗವಂತನ ಆರಾಧನೆಯಲ್ಲಿಯೇ ಮುಳಗಬಹುದು. ಈ ಅಭಿಪ್ರಾಯದಲ್ಲಿಯೇ ಜ್ಞಾನಿಗೆ ಕರ್ಮದ ಉಪಶಮವನ್ನು ಗೀತೆಯಲ್ಲಿ ಹೇಳಿದೆ. ನಾನಾ ಜನರ ಸೇವೆಯ ಹೊರತು ಇತರ ಕರ್ತವ್ಯಗಳನ್ನು ಸಮಾಧಿ ಅವಸ್ಥೆಯಲ್ಲಿ ಇಲ್ಲದಿರುವಾಗ ಅಪರೋಕ್ಷ ಜ್ಞಾನಿಯು ಮಾಡಲೇಬೇಕು. ಅಪರೋಕ್ಷ ಜ್ಞಾನಕ್ಕಿಂತ ಮೊದಲಿನ ಸ್ಥಿತಿಯಲ್ಲಂತೂ ನಾನಾ ಜನರ ಸೇವೆಯನ್ನೂ, ಇತರ ಕರ್ತವ್ಯವನ್ನೂ ನಾವು ಆಚರಿಸಲೇಬೇಕು.

''ಉದ್ಧರೇದಾತ್ಮನಾऽऽತ್ಮಾನಂ''

ನಮ್ಮ ಶ್ರೇಯಸ್ಸಿಗೂ ದುರಂತಕ್ಕೂ ಮನಸ್ಸೇ ಕಾರಣ. ಅದು ನಮ್ಮ ಸ್ನೇಹಿತನೂ ಹೌದು, ಶತ್ರುವೂ ಆಗಬಲ್ಲದು, ನಮ್ಮ ನಿಯಂತ್ರಣದಲ್ಲಿರುವ ವಾಹನವು ನಮಗೆ ಸಹಕಾರಿಯಾಗಿದ್ದರೆ, ನಿಯಂತ್ರಣ

ತಪ್ಪಿದಾಗ ಅದೇ ಮಾರಕವೂ ಆಗಬಲ್ಲದು. ನಮ್ಮ ಹತೋಟಿಯಲ್ಲಿರುವ ಮನಸ್ಸು ನಮಗೆ ಬಂಧು ವಾಗಿದ್ದರೆ, ಅಂಕೆ ತಪ್ಪಿದಾಗ ಅದು ನಮಗೆ ಶತ್ರುವಾಗಿ ಪರಿಣಮಿಸುತ್ತದೆ.

ಈ ಶ್ಲೋಕವು ಭಗವಂತನಿಗೂ ನಮಗೂ ಇರುವ ಸಂಬಂಧವನ್ನು ವಿವರಿಸುತ್ತದೆ. ಭಗವಂತನು ನಮಗೆ ಸ್ನೇಹಿತನೂ ಬಂಧುವೂ ಆಗಿರುವನು. ಈ ಬಂಧನದಿಂದ ಬಿಡುಗಡೆಗೆ ; ನಮ್ಮ ಶ್ರೇಯಸ್ಸಿಗೆ ಅವನೇ ಕಾರಣನು, ನಮ್ಮ ಜ್ಞಾನ ಮತ್ತು ಸದ್ವರ್ತನೆಯಿಂದ ಅವನನ್ನು ಪ್ರಸನ್ನಗೊಳಿಸಿದಾಗ ಅವನು ಮಿತ್ರನಾಗಿ ನಮಗೆ ಅನುಗ್ರಾಹಕನಾಗುವನು. ನಾವು ನಮ್ಮ ದುಷ್ಟ ವರ್ತನೆಯಿಂದ ಭಗವಂತನನ್ನು ಅಸಮಾಧಾನ ಗೊಳಿಸಿದರೆ ಅವನು ನಮಗೆ ವಿರೋಧಿಯಾಗಿ ನಮ್ಮ ನಿಗ್ರಹವನ್ನು ಮಾಡುವನು. ಹೀಗೆ ಪರಮಾತ್ಮನು ಪ್ರಸನ್ನ ನಾದಾಗ ನಮಗೆ ಬಂಧುವಾಗಿದ್ದರೆ ಅಪ್ರಸನ್ನನಾದಾಗ ಬಂಧಕನಾಗುವನು.

ಮುಂದೆ ಧ್ಯಾನದ ಸ್ವರೂಪ, ಆಗ ಉಂಟಾಗುವ ವಿಶಿಷ್ಟ ಆನಂದದ ಅನುಭವ, ಧ್ಯಾನಕ್ಕಾಗಿ ಮನಸ್ಸಿನ ಏಕಾಗ್ರತೆಯನ್ನು ಸಾಧಿಸಲು ಮಾಡಬೇಕಾದ ಪ್ರಯತ್ನ, ಮನಸ್ಸಿಗೆ ಚಾಂಚಲ್ಯವನ್ನು ಇದಿರಿಸುವ ಅವಧಾನ ಮುಂತಾದ್ದನ್ನು ವಿವರಿಸಿದ್ದಾರೆ. ಭಗವಂತನನ್ನು ಎಲ್ಲ ಕಡೆಗಳಲ್ಲಿಯೂ ಜ್ಞಾನಿಗಳು ಕಾಣುತ್ತಾರೆ. ಭಗವಂತನು ಎಲ್ಲ ವಸ್ತುಗಳಲ್ಲಿ ಅಂತರ್ಯಾಮಿಯಾಗಿಯೂ, ಎಲ್ಲ ವಸ್ತುಗಳಿಗೆ ಆಧಾರವಾಗಿಯೂ ಇದ್ದಾನೆಂಬುದನ್ನು ಜ್ಞಾನಿಗಳು ಕಂಡುಕೊಳ್ಳುತ್ತಾರೆ. ಅದರಂತೆ ಉಪಾಸನೆಯನ್ನೂ ಮಾಡುವರು.

ಪರಮಾತ್ಮನ ಅದ್ಭುತ ಕರ್ತೃತ್ವ

ಏಳನೆ ಅಧ್ಯಾಯವು ಭಗವಂತನ ವಿಶೇಷ ಮಹಿಮೆಯ ದರ್ಶನವನ್ನು ನಮಗೆ ಮಾಡಿಸುತ್ತದೆ. ನಮ್ಮ ಕಣ್ಣ ಮುಂದಿರುವ ಮನೆ, ಮಡಿಕೆ, ಮಂಚ ಮುಂತಾದ ವಸ್ತುಗಳನ್ನು ನಿರ್ಮಿಸುವ ವ್ಯಕ್ತಿಯಂತೆ ಭಗವಂತನು ಜಗತ್ತನ್ನು ಸೃಜಿಸುವುದಿಲ್ಲ. ಈ ಮಾನವ ವ್ಯಕ್ತಿಗಳಿಗೆ ತಾವು ನಿರ್ಮಿಸುವ ವಸ್ತುಗಳ ಗುಣಧರ್ಮಗಳ ಮೇಲೆ ಏನೂ ಪ್ರಭುತ್ವವಿಲ್ಲ. ಮಣ್ಣು , ಮರ ಮುಂತಾದ ಮೂಲವಸ್ತುಗಳಿಂದ ಅವರು ವಸ್ತುಗಳನ್ನು ನಿರ್ಮಿಸ ಬಲ್ಲರು. ಆದರೆ ಮೂಲವಸ್ತುವಿನ ಗುಣಧರ್ಮಗಳನ್ನು ಅವರು ನಿರ್ಮಿಸಲಾರರು. ಆದರೆ ಭಗವಂತನು ಪ್ರತಿಯೊಂದು ಪದಾರ್ಥ, ಅವುಗಳ ಮೂಲ ದ್ರವ್ಯ ಮತ್ತು ಇವುಗಳ ಸ್ವಭಾವ ಗುಣಧರ್ಮಗಳನ್ನು ನಿಯಂತ್ರಿಸುತ್ತಾನೆ. ಕುಂಬಾರನು ತಾನು ನಿರ್ಮಿಸುವ ವಸ್ತುವಿನಿಂದ ಪ್ರತ್ಯೇಕವಾಗಿ ಹೊರಗೆ ಇದ್ದು ಆ ಪದಾರ್ಥಗಳನ್ನು ಸೃಜಿಸುತ್ತಾನೆ. ಆದರೆ ಭಗವಂತನು ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿದ್ದು ಈ ಜಗತ್ತಿನ ಸೃಷ್ಟಿ ಮಾಡುವುದಲ್ಲ. ಎಲ್ಲಾ ವಸ್ತುಗಳ ಒಳಗೆ ಅಂತರ್ಯಾಮಿಯಾಗಿದ್ದು ಆ ಪದಾರ್ಥಗಳ ಗುಣಧರ್ಮಗಳ ಮೇಲೆ ನಿಯಾಮಕನಾಗಿ ಹೊರಗೂ ಒಳಗೂ ಇದ್ದು ಜಗತ್ತನ್ನು ನಿರ್ಮಿಸುತ್ತಾನೆ. ಇಂಥಹ ಅದ್ಭುತ ವಿಚಿತ್ರ ಮಹಿಮೆಯನ್ನು ಪರಮಾತ್ಮನ ಸೃಷ್ಟಿಯಲ್ಲಿ ನಾವು ಕಾಣಬಹುದು.

ಪರಮಾತ್ಮನು ಸೃಷ್ಟಿಯ ಕಾರ್ಯಕ್ಕೆ ಜಡ ಪ್ರಕೃತಿಯನ್ನೂ ಚೇತನ ಪ್ರಕೃತಿಯನ್ನೂ ಉಪಯೋಗಿಸಿ ಕೊಳ್ಳುತ್ತಾನೆ. ಪಂಚಭೂತಗಳು, ಅದಕ್ಕೂ ಮೂಲಭೂತವಾದ ಜಡತತ್ವಗಳನ್ನೂ ಜಡ ಪ್ರಕೃತಿಯೆಂದು ಕರೆಯಲಾಗಿದೆ. ಇವುಗಳಿಗೆ ಅಭಿಮಾನಿನಿಯಾದ ಚೈತನ್ಯ ರೂಪಿಣಿಯಾದ ಲಕ್ಷ್ಮೀದೇವಿಯು ಚೇತನ ಪ್ರಕೃತಿಯಾಗಿದ್ದಾಳೆ. ತಂದೆ, ತಾಯಿ ಮತ್ತು ಜಡವಾದ ಶರೀರವೆಂಬ ಮಗುವು ಜನಿಸುವಂತೆ ಜೀವವರ್ಗದ ಸೃಷ್ಟಿಗೂ ಜಗತ್‌ಪಿತನಾದ ಶ್ರೀಹರಿ, ಜಗನ್ಮಾತೆಯಾದ ಲಕ್ಷ್ಮೀದೇವಿ ಜಡವಾದ ಪ್ರಕೃತಿ-ಈ ಮೂರರ ಅವಶ್ಯಕತೆ ಇದೆ. ಆದರೆ ಸಾಧಾರಣ ತಂದೆಯಂತೆ, ಭಗವಂತನು ಜಗತ್ತನ್ನು ಸೃಜಿಸುವುದಲ್ಲ. ಸಾಮಾನ್ಯ ರಾಜನಂತೆ ಈ ಜಗತ್ತನ್ನು ಆಳುವುದೂ ಅಲ್ಲ . ತನ್ನ ಸಹಕಾರೀ ವಸ್ತುಗಳ ಮೇಲೆ ಪೂರ್ಣ ಅಧಿಕಾರ ಮತ್ತು ಹತೋಟಿಯನ್ನಿಟ್ಟುಕೊಂಡು ಜಗತ್ತಿನ ಸೃಷ್ಟಿ -ಸಂರಕ್ಷಣೆಗಳನ್ನು ಭಗವಂತನು ಮಾಡುತ್ತಾನೆ. ನಮಗೆ

ಭಗವಂತನು ತಂದೆಯೂ ಹೌದು, ರಾಜನು ಹೌದು. ಇಬ್ಬರಿಗಿಂತಲೂ ಮಿಗಿಲಾದ ಕಲ್ಪನಾತೀತವಾದ ಅದ್ಭುತ ವ್ಯಕ್ತಿತ್ವವು ಅವನದಾಗಿದೆ.

ವಿಶಿಷ್ಟ ವಸ್ತುಗಳಲ್ಲಿ ಭಗವಂತನ ಉಪಾಸನೆ

ಪರಮಾತ್ಮನ ಅಧೀನವಾದ ವಸ್ತು ಮತ್ತು ಅದರ ಗುಣಧರ್ಮಗಳನ್ನು ಭಗವಂತನ ಪ್ರತಿಮೆಗಳೆಂದೂ ನಾವು ಕರೆಯಬಹುದು. ಸುಂದರವಾದ ಮೂರ್ತಿಯಲ್ಲಿ ನಾವು ಭಗವಂತನನ್ನು ಕಾಣುವಂತೆ ಭಗವಂತನು ನಿರ್ಮಿಸಿದ ಈ ವಿವಿಧ ವಿಚಿತ್ರ ವಸ್ತುಗಳಲ್ಲಿಯೂ ನಾವು ಭಗವಂತನನ್ನು ಕಾಣಬಹುದು. ಪ್ರಪಂಚದ ಈ ವಿಶಿಷ್ಟ ಉತ್ತಮ ವಸ್ತುಗಳನ್ನೇ ಭಗವಂತನ ಪ್ರತಿಮೆಗಳೆಂದು ನಾವು ಆರಿಸಿ ಅಲ್ಲಿ ಭಗವಂತನನ್ನು ಧ್ಯಾನಮಾಡಬಹುದು. ಉದಾಹರಣೆಗೆ ಪಾರ್ಥಿವ ವಸ್ತುಗಳಲ್ಲಿರುವ ಪವಿತ್ರ ಸುಗಂಧದಲ್ಲಿ ಭಗವಂತನ ವಿಶಿಷ್ಟ ಶಕ್ತಿಯನ್ನು ಕಂಡು ಅದನ್ನೇ ಭಗವಂತನ ಪ್ರತೀಕವೆಂದು ಭಾವಿಸಿ ಭಗವಂತನನ್ನು ಧ್ಯಾನ ಮಾಡಬಹುದು. ಸಾಂಸಾರಿಕ ಕಾಮನೆಯು ನಮ್ಮನ್ನು ಕೆಳಕ್ಕೆ ತಳ್ಳುವುದಾದರೆ ಭಗವಂತನ ಕಾಮನೆಯು ನಮ್ಮ ಉನ್ನತಿಗೆ ಕಾರಣವಾಗುತ್ತದೆ. ಇಂತಹ ಶ್ರೇಷ್ಠವಾದ ಉದಾತ್ತವಾದ ಕಾಮನೆಯು ಭಗವಂತನ ಪ್ರತಿಮೆಯಾಗಿದೆ. ಇಂಥಹ ಶ್ರೇಷ್ಠ ವಸ್ತುಗಳಲ್ಲಿಯೂ, ಉದಾತ್ತ ಗುಣಗಳಲ್ಲಿಯೂ ಭಗವಂತನನ್ನು ಚಿಂತಿಸಿ ಧ್ಯಾನ ಮಾಡಬೇಕು. ಕೆಟ್ಟ ವಸ್ತುಗಳು ಭಗವಂತನ ಪ್ರತೀಕಗಳಾಗಲಾರವು. ಈ ಪರಮಾತ್ಮನಿಗಿಂತ ಸರ್ವೋತ್ತಮವಾದ ವಸ್ತು ಇನ್ನೊಂದು ಇಲ್ಲ.

ಇಲ್ಲಿ ಭಗವಂತನಲ್ಲಿ ರಸ, ಪ್ರಭೆ, ಗಂಧ, ಕಾಮ ಮುಂತಾದ ಶಬ್ದಗಳನ್ನು ಪ್ರಯೋಗಿಸಲಾಗಿದೆ. ಭೌತಿಕವಾದ ಗುಣಧರ್ಮಗಳೇ ಭಗವಂತನೆಂದು ಇದರ ಅರ್ಥವಲ್ಲ, ಚೈತನ್ಯರೂಪಿಯಾದ ಭಗವಂತನೂ ಜಡ ವಿಕಾರಗಳಾದ ಈ ಗುಣಗಳೂ ಒಂದೇ ಆಗಲು ಹೇಗೆ ಸಾಧ್ಯ? ರಸ, ಗಂಧ ಮುಂತಾದ ಗುಣಗಳಲ್ಲಿ ಅಧಿಷ್ಠಿತನಾಗಿ ಅವುಗಳ ಪ್ರೇರಕನಾಗಿ ಇರುವ ಭಗವಂತನನ್ನು ಅದೇ ಶಬ್ದದಿಂದ ನಾವು ಕರೆಯಬಹುದು. ಹಸು, ಹಾವು ಮುಂತಾದ ಜಡ ದೇಹಗಳಲ್ಲಿರುವ ಜೀವಾತ್ಮನನ್ನೂ ಅದೇ ಶಬ್ದಗಳಿಂದ ಕರೆಯುವಂತೆ ಎಲ್ಲಾ ವಸ್ತುಗಳಿಗೂ ನಿಯಾಮಕನಾದ ಪರಮಾತ್ಮನಿಗೂ ಆ ವಸ್ತುಗಳ ಹೆಸರಿನಿಂದಲೇ ಕರೆಯಲಾಗುತ್ತದೆ. ಈ ರೀತಿಯಾಗಿ ಈ ಅಧ್ಯಾಯವು ಪರಮಾತ್ಮನ ಲೋಕವಿಲಕ್ಷಣವಾದ ಮಹಿಮಾತಿಶಯವನ್ನು ತಿಳಿಸಿ ನಮಗೆ ಭಕ್ತಿ ಪ್ರಚೋದನೆಯನ್ನು ಮಾಡುತ್ತದೆ.

ಸಾಧಕನು ತಿಳಿಯಬೇಕಾದ ವಸ್ತುಗಳು

ಎಂಟನೇ ಅಧ್ಯಾಯದಲ್ಲಿ ಬ್ರಹ್ಮ, ಅಧಿಯಜ್ಞ, ಅಧ್ಯಾತ್ಮ, ಕರ್ಮ, ಅಧಿಭೂತ, ಅಧಿದೈವಗಳ ಸ್ವರೂಪವನ್ನು ಗೀತೆಯು ತಿಳಿಸುತ್ತದೆ. ಮೋಕ್ಷಸಾಧನೆಗೆ ಈ ವಸ್ತುಗಳ ಸಾಧನೆಯು ಅವಶ್ಯವಾಗಿದೆ. ಬ್ರಹ್ಮ ಮತ್ತು ಅದಿಯಜ್ಞ ಭಗವಂತನದ್ದೇ ಬೇರೆ ಬೇರೆ ರೂಪಗಳು. ಬ್ರಹಾಂಡದಲ್ಲಿ ವ್ಯಾಪಿಸಿರುವ ಭಗವಂತನನ್ನು ಬ್ರಹ್ಮನೆಂದು ಕರೆಯುವುದಾದರೆ ದೇಹದಲ್ಲಿ ಜೀವನಿಗೆ ನಿಯಾಮಕನಾಗಿರುವ ಭಗವಂತನೇ ಅಧಿಯಜ್ಞನಾಗಿದ್ದಾನೆ. ಪರಮಾತ್ಮನ ಅಚಿಂತ್ಯ ಸ್ವಭಾವ ಮಹಿಮೆಯನ್ನು ಅಧ್ಯಾತ್ಮವೆಂದೂ, ಅವನ ಅದ್ಭುತವಾದ ಜಗತ್‌ಸೃಷ್ಟಿ ಕ್ರಿಯೆಯನ್ನು ಕರ್ಮವೆಂದೂ ಇಲ್ಲಿ ಹೇಳಿದೆ. ಅಧಿಭೂತವೆಂದರೆ ಜೀವವರ್ಗ ವೆಂದೂ, ಅಧಿದೈವವೆಂದರೆ ವಿಶ್ವದ ಮೂಲವಾದ ಜಡಪ್ರಕೃತಿಗೆ ನಿಯಾಮಕಳಾದ ಚಿತ್‌ಪ್ರಕೃತಿಯೆಂದೂ ತಿಳಿದುಕೊಳ್ಳಬೇಕು. ಒಳಗೂ ಹೊರಗೂ ವ್ಯಾಪಿಸಿರುವ ಭಗವಂತನನ್ನು ಅವನ ವ್ಯಾಪಾರ ಮತ್ತು ಸ್ವಭಾವ ಗಳನ್ನು, ಸಕಲ ಜೀವವರ್ಗವನ್ನು, ಸಕಲ ಜೀವರಿಗೂ ಮಾತೆಯಾದ ಚಿತ್ ಪ್ರಕೃತಿಯಾದ ಲಕ್ಷ್ಮೀದೇವಿ ಯನ್ನು ನಾವು ಅರಿತುಕೊಳ್ಳಬೇಕೆಂಬುದೇ ಇದರ ತಾತ್ಪರ್ಯವಾಗಿದೆ.

ಜೀವರು ಅಥವಾ ಜೀವರ ಆಧ್ಯಾತ್ಮಿಕ, ಭೌತಿಕ ವ್ಯವಹಾರಕ್ಕೆ ಉಪಯುಕ್ತಗಳಾದ ಶರೀರ, ಇಂದ್ರಿಯ ಮುಂತಾದ ಪಾಂಚಭೌತಿಕ ವಸ್ತುಗಳನ್ನು ಆಧ್ಯಾತ್ಮವೆಂದು ಇಲ್ಲಿ ಇಟ್ಟುಕೊಳ್ಳಬಹುದು. ಕಾರ್ಯ ಪ್ರಪಂಚವನ್ನು ಅಧಿಭೂತವೆಂದೂ ನಾವು ಗ್ರಹಿಸಿಕೊಳ್ಳಬಹುದು. ಪುರುಷನೆಂದರೆ ಸಕಲ ಜೀವರಿಗೂ ಅಭಿಮಾನಿಯಾದ ಜೀವೋತ್ತಮನಾದ ಬ್ರಹ್ಮದೇವರು. ಪರಮಾತ್ಮನನ್ನೂ ಅವನ ಜಗತ್ಸರ್ಜನ ಕ್ರಿಯೆಯನ್ನೂ ಪರಮಾತ್ಮನ ಮುಖ್ಯ ಸಹಾಯಕರಾದ ಬ್ರಹ್ಮದೇವರನ್ನೂ, ಜೀವರೂ ಅವರಿಗೆ ಬೇಕಾದ ಶರೀರ ಮುಂತಾದ ಉಪಕರಣಗಳು ಮತ್ತು ಕಾರ್ಯಪ್ರಪಂಚವನ್ನು ಸಾಧಕನು ತಿಳಿದುಕೊಳ್ಳಬೇಕು ಎಂಬುದು ಇದರ ಇನ್ನೊಂದು ಅಭಿಪ್ರಾಯವಾಗಿದೆ.

ಕೊನೆಯ ಪಯಣ

ಜೀವನದ ಕೊನೆಯ ಗಳಿಗೆಯಲ್ಲಿ ಭಗವಂತನ ಸ್ಮರಣೆ ಮಾಡಬೇಕೆಂದು ಭಗವದ್ಗೀತೆ ಹೇಳಿದೆ. ಇದರಿಂದ ಜೀವನದುದ್ದಕ್ಕೂ ಭಗವಂತನ ಸ್ಮರಣೆಯ ಅವಶ್ಯಕತೆ ಇಲ್ಲ ಎಂದು ನಾವು ತಿಳಿದುಕೊಳ್ಳಬಾರದು. ನಿರಂತರವಾಗಿ ಭಗವಂತನ ಸ್ಮರಣೆಯನ್ನು ಮಾಡಿದಾಗ ಮಾತ್ರ ಆ ಸಂಸ್ಕಾರವು ದೃಢವಾಗಿ ಅಂತ್ಯ ಕಾಲ ದಲ್ಲಿಯೂ ಭಗವಂತನ ಸ್ಮರಣೆಯುಂಟಾಗಲು ಅವಕಾಶವಾಗುತ್ತದೆ. ಜೀವನವಿಡಿ ಬಾಹ್ಯ ವಿಷಯ ದಲ್ಲಿಯೇ ಮಗ್ನರಾಗಿದ್ದರೆ, ಕೊನೆಯ ಗಳಿಗೆಯಲ್ಲಿ ಭಗವಂತನ ಸ್ಮರಣೆಯುಂಟಾಗಲಾರದು. ಆದ್ದರಿಂದ ಭಗವಂತನ ಸ್ಮರಣೆಯನ್ನು ಅಂತ್ಯಕಾಲಕ್ಕೆ ಮಾತ್ರ ಸೀಮಿತಗೊಳಿಸದೆ ನಿರಂತರವಾಗಿ ಆ ಪ್ರಯತ್ನವನ್ನು ನಡೆಸಬೇಕು.

ಬ್ರಹ್ಮದೇವರ ಎರಡು ಪರಾರ್ಧಗಳಷ್ಟು ದೀರ್ಘಕಾಲವು ಭಗವಂತನಿಗೆ ಹಗಲು. ಆಗ ಭಗವಂತನಿಂದ ಸೃಷ್ಟಿ ಮುಂತಾದ ವ್ಯಾಪಾರವು ನಡೆಯುವುದು. ಅಷ್ಟೇ ದೀರ್ಘವಾದ ಕಾಲದಲ್ಲಿ ಜಗತ್ತಿನ ಯಾವುದೇ ವ್ಯಾಪಾರವನ್ನು ನಡೆಸದೆ ಪರಮಾತ್ಮನು ವಿಶ್ರಾಂತಿಯನ್ನು ಪಡೆಯುವನು. ಇದು ಭಗವಂತನಿಗೆ ರಾತ್ರಿಯೆನಿಸುತ್ತದೆ. ಹೀಗೆ ಭಗವಂತನ ಹಗಲು ರಾತ್ರಿಗಳನ್ನೂ, ಅವನು ಮಾಡುವ ಸೃಷ್ಟಿ-ಪ್ರಳಯ ವ್ಯವಹಾರಗಳನ್ನೂ ನಾವು ಅರಿತುಕೊಳ್ಳಬೇಕು. ಇಂಥಹ ಮಹಾಮಹಿಮಶಾಲಿಯಾದ ಭಗವಂತನನ್ನು ನೋಡುವವನು ಜನನ-ಮರಣಗಳನ್ನು ದಾಟಿ ಶಾಶ್ವತ ಸ್ಥಾನವನ್ನು ಪಡೆಯುವನು. ವಿವಿಧ ಲೌಕಿಕ ಫಲಗಳಿಗಾಗಿ ಯಜ್ಞ, ಯಾಗಾದಿ ಕಾಮ್ಯ ಕರ್ಮಗಳನ್ನು ಮಾಡುವವರು ಮತ್ತು ಇದಕ್ಕಾಗಿ ಬೇರೆ ಬೇರೆ ದೇವತೆಗಳನ್ನು ಪೂಜಿಸುವವರು ಸ್ವರ್ಗ ಮೊದಲಾದ ತಾತ್ಕಾಲಿಕ ಸುಖವನ್ನು ಪಡೆದು ಪುನಃ ಸಂಸಾರಕ್ಕೆ ಹಿಂದಿರುಗ ಬೇಕಾಗುತ್ತದೆ. ಅವರು ಹೊಗೆ, ಕತ್ತಲು ಮುಂತಾದವುಗಳಿಗೆ ಅಭಿಮಾನಿಗಳಾದ ದೇವತೆಗಳು ನೆಲೆಸಿರುವ ಸ್ಥಾನದಲ್ಲಿ ಕ್ರಮಿಸಿ ಕೆಲಕಾಲ ಸುಖವನ್ನು ಪಡೆದು ಪುನಃ ಭೂಲೋಕಕ್ಕೆ ಇಳಿಯುತ್ತಾರೆ. ನಿಷ್ಕಾಮ ಕರ್ಮ, ಜ್ಞಾನ, ಸಾಕ್ಷಾತ್ಕಾರದ ಸಾಧನೆಯನ್ನು ಮಾಡಿದವರು ಬೆಳಕು, ಹಗಲು ಮುಂತಾದವುಗಳಿಗೆ ಅಭಿಮಾನಿಗಳಾದ ದೇವತೆಗಳು ನೆಲೆಸಿದ ದಾರಿಯಲ್ಲಿ ಮುನ್ನಡೆದು ಭಗವಂತನನ್ನು ಹೊಂದುತ್ತಾರೆ. ಅವರು ತಿರುಗಿ ಜಗತ್ತಿಗೆ ಬರುವ ಭಯವಿಲ್ಲ. ನಿಷ್ಕಾಮ ಕರ್ಮಗಳಿಗೂ ಸಂಬಂಧಿಸಿದ ಈ ಎರಡು ಮಾರ್ಗಗಳನ್ನೇ ಶುಕ್ಲ-ಕೃಷ್ಣ-ಮಾರ್ಗಗಳೆಂದು ಹೆಸರಿಸಲಾಗಿದೆ. ನಿಷ್ಕಾಮ ಕರ್ಮಯೋಗಿಗಳ ಮಾರ್ಗವು ರಾಗ, ದ್ವೇಷ, ಪಾಪಗಳಿಂದ ಮುಕ್ತವಾದ ಶುದ್ಧ ಮಾರ್ಗವಾಗಿದ್ದರೆ, ಕಾಮ್ಯಕರ್ಮಿಗಳ ಮಾರ್ಗವು ಸ್ವಾರ್ಥಮಲಿನವಾದ ದಾರಿಯಾಗಿದೆ. ಹಗಲು, ಶುಕ್ಲಪಕ್ಷ ಮುಂತಾದ ಸಮಯದಲ್ಲಿ ಮೃತನಾದವನು ಮೋಕ್ಷವನ್ನೂ, ರಾತ್ರಿ, ಕೃಷ್ಣಪಕ್ಷ ಮೊದಲಾದ ಕಾಲದಲ್ಲಿ ಕೊನೆಯುಸಿರೆಳೆಯುವವನು ತಿರುಗಿ ಸಂಸಾರಕ್ಕೆ ಬರುವನು ಎಂಬುದಾಗಿ ಈ ಗೀತೆಯ ವಾಕ್ಯಗಳಿಗೆ ಕೆಲವರು ತಪ್ಪು ಅರ್ಥವನ್ನು ಮಾಡಿಕೊಂಡಿದ್ದಾರೆ. ಮೋಕ್ಷವನ್ನು ಪಡೆಯಲು

ಅಂತಃಕರಣಶುದ್ಧಿ, ಜ್ಞಾನ, ಭಕ್ತಿಗಳೇ ಪ್ರಧಾನವಾಗಿದೆಯಲ್ಲದೆ ಕಾಲವು ಗೌಣವಾಗಿದೆ. ಇಂತಹ ತಪ್ಪು ಕಲ್ಪನೆಗೆ ಅವಕಾಶವಾಗದಂತೆ ಶ್ರೀಮಧ್ವಾಚಾರ್ಯರು ಇದರ ಅರ್ಥವಿವರಣೆಯನ್ನು ಮಾಡಿದ್ದಾರೆ.

ಭಗವಂತನ ನಿರ್ಲಿಪ್ತತೆ

ಗೀತೆಯಲ್ಲಿ ಒಂಬತ್ತನೆಯ ಅಧ್ಯಾಯದಲ್ಲಿ ಭಗವಂತನು ''ಮತ್ಸ್ಥಾನಿ ಸರ್ವಭೂತಾನಿ'' ಎಲ್ಲಾ ಜೀವ ಜಡವರ್ಗಗಳೂ ನನ್ನಲ್ಲಿವೆ ಎಂದು ಹೇಳುತ್ತಾ ಜೊತೆಗೆ ''ನ ಚ ಮತ್ಸ್ಥಾನಿ ಭೂತಾನಿ'' – ಎಲ್ಲಾ ಜೀವ ಜಡ ವರ್ಗವು ನನ್ನಲ್ಲಿಲ್ಲ ಎಂಬುದಾಗಿಯೂ ಹೇಳಿದ್ದಾನೆ. ಈ ವಿರೋಧಾಭಾಸದ ವಿವರಣೆಯನ್ನು ಶ್ರೀಮಧ್ವಾಚಾರ್ಯರು ಮಾಡಿದ್ದಾರೆ. ಪರಮಾತ್ಮನು ಸಕಲ ವಸ್ತುಗಳಿಗೆ ಆಧಾರನಾಗಿದ್ದರೂ ದೋಷಗಳು ತುಂಬಿದ ಆ ವಸ್ತುಗಳ ಸಂಪರ್ಕದಿಂದ ಪರಮಾತ್ಮನಲ್ಲಿಯೂ ಕೆಲ ಮಟ್ಟಿಗೆ ದೋಷ ಸಂಬಂಧವಿದೆಯೆಂದು ಭಾವಿಸಬಾರದು. ಭಗವಂತನಿಗೆ ಎಲ್ಲ ವಸ್ತುಗಳ ಸಂಬಂಧವಿದ್ದರೂ ಅವನು ನಿರ್ಲಿಪ್ತನೂ, ನಿರ್ವಿಕಾರನೂ ಆಗಿದ್ದಾನೆ. ಆ ವಸ್ತುವಿನ ಗುಣ-ಧರ್ಮಗಳು ಅವನಿಗೆ ಉಂಟಾಗುವುದಿಲ್ಲ. ಅದುದರಿಂದ ಎಲ್ಲ ಪದಾರ್ಥಗಳೂ ಅವನಲ್ಲಿದ್ದರೂ ಇಲ್ಲದಂತೆ. ಆ ವಸ್ತುಗಳ ಸಂಬಂಧದಿಂದ ಪರಮಾತ್ಮನಲ್ಲಿ ಯಾವುದೇ ವಿಕೃತಿಯಾಗುವುದಿಲ್ಲ ಎಂಬುದೇ ಈ ವಾಕ್ಯದ ಆಶಯವಾಗಿದೆ. ಇದನ್ನು ಸಮರ್ಥಿಸಲು ಆಕಾಶ ಮತ್ತು ಗಾಳಿಯ ಉದಾಹರಣೆಯನ್ನು ಕೊಟ್ಟಿದ್ದಾರೆ, ಗಾಳಿ ಮತ್ತು ಆಕಾಶಗಳಿಗೆ ಎಲ್ಲ ವಸ್ತುಗಳ ಸಂಪರ್ಕವಿದ್ದರೂ ಲೇಪವಿಲ್ಲದಿರುವಂತೆ ಸರ್ವವ್ಯಾಪ್ತನಾದ ಭಗವಂತನೂ ನಿರ್ಲಿಪ್ತನಾಗಿದ್ದಾನೆ.

''ಪ್ರಕೃತಿಂ ಸ್ವಾಮವಷ್ಟಭ್ಯ''

ಭಗವಂತನು ಜಗತ್ತನ್ನು ಸೃಜಿಸುವಾಗ ಪ್ರಕೃತಿಯನ್ನು ತನ್ನ ಸಹಕಾರಿಯನ್ನಾಗಿ ಉಪಯೋಗಿಸಿ ಕೊಳ್ಳುತ್ತಾನೆಂದು ಹೇಳಿದೆ. ಸರ್ವಶಕ್ತನಾದ ಭಗವಂತನಿಗೆ ಪ್ರಕೃತಿಯ ಸಹಕಾರ ಬೇಕೇ ? ಎನ್ನುವ ಪ್ರಶ್ನೆ ಬರಬಹುದು. ಸಮರ್ಥನಾದ ವ್ಯಕ್ತಿಯೂ ತಾನು ಸಂಚರಿಸುವಾಗ ವಿನೋದಕ್ಕಾಗಿ ಕೋಲನ್ನು ಹಿಡಿದು ಕೊಂಡು ನಡೆಯುವಂತೆ ಭಗವಂತನು ಸ್ವಯಂ ಸಮರ್ಥನಾದರೂ ಲೀಲಾರೂಪವಾಗಿ ಪ್ರಕೃತಿಯನ್ನು ಬಳಸಿಕೊಳ್ಳುತ್ತಾನೆ. ಪ್ರಕೃತಿಯನ್ನು ಉಪಯೋಗಿಸಿಕೊಳ್ಳುವುದರಿಂದ ಭಗವಂತನ ಮಹತ್ವವು ಕಡಿಮೆಯಾಗುವುದಿಲ್ಲ. ಅವನ ವೈಭವಕ್ಕೆ ಅದೊಂದು ನಿದರ್ಶನವೇ ಆಗುವುದು.

ದ್ವೇಷದ ನೆಲೆಯ ಏಕಾಗ್ರತೆಯಿಂದ ಮೋಕ್ಷವಿಲ್ಲ

ಭಗವಂತನಲ್ಲಿ ಭಕ್ತಿಯನ್ನು ಮಾಡುವುದೇ ಮುಕ್ತಿಗೆ ಸಾಧನ. ಭಗವಂತನ ಅವತಾರನಾಗಿರುವ ರಾಮಕೃಷ್ಣಾದಿ ರೂಪಗಳಲ್ಲಿಯೂ ದ್ವೇಷ-ತಿರಸ್ಕಾರವನ್ನು ಮಾಡದೆ ಮೂಲರೂಪಕ್ಕೂ ಈ ಅವತಾರ ರೂಪಕ್ಕೂ ಏಕತ್ವವನ್ನು ತಿಳಿದು ಸಮಗ್ರವಾಗಿ ಭಗವಂತನನ್ನು ಪ್ರೀತಿಸಬೇಕೆಂದು ಭಗವದ್ಗೀತೆಯು ಪ್ರತಿಪಾದಿಸುತ್ತದೆ. ಆದರೆ ಕೆಲವೆಡೆ ಶಿಶುಪಾಲ ಮುಂತಾದವರು ದ್ವೇಷ ಭಾವನೆಯಿಂದ ಪರಮಾತ್ಮನಲ್ಲಿ ಏಕಾಗ್ರತೆಯನ್ನು ಸಾಧಿಸಿ ಮೋಕ್ಷವನ್ನು ಪಡೆದಿದ್ದರೆಂದು ಅರ್ಥ ಬರುವ ವಾಕ್ಯಗಳು ಕಾಣುತ್ತಿವೆ. ಆದುದರಿಂದ ಭಕ್ತಿಯ ಅವಶ್ಯಕತೆ ಏನು ಎಂಬ ಸಂದೇಹ ಬರಬಹುದು. ಆದರೆ ಆ ವಾಕ್ಯಗಳ ಅಂತರ್ಯವನ್ನು ನಾವು ಅರ್ಥಮಾಡಿಕೊಳ್ಳಬೇಕು. ಭಗವಂತನಲ್ಲಿ ನಾವು ಮಾಡಬೇಕಾದ ಏಕಾಗ್ರತೆಗೆ ಒತ್ತು ಕೊಡುವುದೇ ಆ ವಾಕ್ಯಗಳ ಉದ್ದೇಶವಾಗಿದೆ. ಭಗವಂತನ ದ್ವಾರಕಪಾಲಕರಾಗಿದ್ದ ಶಿಶುಪಾಲನಂಥವರು ಮೂಲತಃ ಸಜ್ಜನರೇ ಆಗಿದ್ದಾರೆ. ಆದರೆ ಯಾವುದೋ ದುಷ್ಟ ಆವೇಶಕ್ಕೆ ಒಳಗಾಗಿ ಅವರಿಂದ ದುಷ್ಟ ಕೃತ್ಯಗಳು ನಡೆದಿವೆ. ತನ್ನ ಭಕ್ತರ ಅಂತರಂಗದ ಒಳ್ಳೆತನವನ್ನು ಗ್ರಹಿಸಿ ಅವರು ಮಾಡಿದ

ತಾತ್ಕಾಲಿಕ ಅಪರಾಧವನ್ನು ಮನ್ನಿಸಿ ಅನುಗ್ರಹಿಸುವ ಭಗವಂತನ ಔದಾರ್ಯವನ್ನು ಕೊಂಡಾಡುವುದೇ ಆ ವಾಕ್ಯಗಳ ಆಶಯವಾಗಿದೆ. ಭಗವಂತನನ್ನು ವಿರೋಧಿಸಿ ಅವನ ಆದೇಶಗಳನ್ನು ಮೀರಿ ದೌರ್ಜನ್ಯದಿಂದ ವರ್ತಿಸಿದ ದುಷ್ಟರನ್ನು ಶಿಕ್ಷಿಸಿದ ಅನೇಕ ಉದಾಹರಣೆಗಳನ್ನು ನಾವು ಕಾಣುತ್ತೇವೆ. ದ್ವೇಷ, ದೌರ್ಜನ್ಯಗಳ ನೆಲೆಯಲ್ಲಿ ಮಾಡುವ ಧ್ಯಾನ - ಏಕಾಗ್ರತೆಗಳಿಗೆ ಭಗವಂತನು ಖಂಡಿತ ಒಲಿಯಲಾರನು, ಧ್ಯಾನದ ಹಿನ್ನೆಲೆಯಲ್ಲಿರುವ ಪ್ರೇಮ - ಸೌಜನ್ಯಗಳಿಗೆ ಮಾತ್ರ ಭಗವಂತನು ಮೆಚ್ಚುವನು.

''ಅಪಿ ಚೇತ್ ಸುದುರಾಚಾರಃ''

ಭಕ್ತಿಯ ಜೊತೆಗೆ ದುಷ್ಟ ಚಾರಿತ್ರ್ಯವಿದ್ದರೆ ಅವನನ್ನು ಭಕ್ತನೆಂದು ಭಗವಂತನು ಪರಿಗ್ರಹಿಸುವುದಿಲ್ಲ. ಭಕ್ತಿಯ ಜೊತೆಗೇ ದುರಾಚಾರವನ್ನು ನಡೆಸುತ್ತಿರುವವನನ್ನು ಡಾಂಭಿಕ ವರ್ಗದಲ್ಲ ಸೇರಿಸಿಕೊಳ್ಳಬಹುದು. ಕೆಲವೊಮ್ಮೆ ಸಜ್ಜನರೂ ಆಕಸ್ಮಿಕವಾಗಿ ದುಷ್ಟ ಆಚಾರದಲ್ಲಿ ತೊಡಗುವುದುಂಟು. ಒಂದು ಮಿತಿಗಿಂತ ಹೆಚ್ಚು ಹಣ ಗಳಿಸಿದವರ ಮೇಲೆ ಸರಕಾರವು ಕ್ರಮವನ್ನು ಕೈಗೊಳ್ಳುವಂತೆ ತನ್ನ ಸ್ವರೂಪದ ಅಳತೆಯನ್ನೂ ಮೀರಿ ಪುಣ್ಯವನ್ನು ಗಳಿಸಿದ ಸಜ್ಜನರ ಪುಣ್ಯವು ಈ ತಾತ್ಕಾಲಿಕ ಅನಾಚಾರದಿಂದ ಕರಗಿ ಹೋಗಿ ಅವರು ತಮ್ಮ ಸ್ವರೂಪದ ನಿಜವಾದ ಅಂತಸ್ತನ್ನು ಪಡೆಯಲು ಅನುಕೂಲವಾಗುವುದು. ಇಂತಹ ಸಜ್ಜನರು ಕೆಲವೊಮ್ಮೆ ಇಂತಹ ಅಪರಾಧವನ್ನು ಗೈದರೂ ಬೇಗನೇ ಪಶ್ಚಾತ್ತಾಪ ಮತ್ತು ಭಕ್ತಿಯಿಂದ ತಮ್ಮನ್ನು ಸರಿಪಡಿಸಿಕೊಂಡು ಭಕ್ತರಾಗುವರು. ಅಂತೂ ಭಕ್ತಿಯ ಜೊತೆಗೆ ಚಾರಿತ್ರ್ಯವೂ ಇರಲೇಬೇಕು.

ಗೀತೆಯ ಒಂಬತ್ತನೆಯ ಅಧ್ಯಾಯದ ಕೊನೆಗೆ ಬ್ರಾಹ್ಮಣರು ಮತ್ತು ರಾಜರ್ಷಿಗಳನ್ನು ಪುಣ್ಯಾತ್ಮರೆಂದೂ, ಸ್ತ್ರೀ - ವೈಶ್ಯ - ಶೂದ್ರರನ್ನು ಪಾಪಯೋನಿಗಳೆಂದು ಹೇಳಿದೆ. ಆದರೆ ''ಸತ್ತ್ವಾಧಿಕಃ ಪುಲ್ಕಸೋಪಿ ಯಸ್ತು ಭಾಗವತಃ ಸದಾ'' ಎಂಬುದಾಗಿ ಭಗವದ್ಭಕ್ತನಾದ ಅಂತ್ಯಜನೂ ಪುಣ್ಯಾತ್ಮನೇ ಆಗಿದ್ದಾನೆಂದು ಹೇಳಿರುವಾಗ ಗೀತೆಯ ಈ ಮಾತು ಸಮಂಜಸವಲ್ಲವೆಂದು ನಮಗೆ ತೋರಬಹುದು. ಶ್ರೀಮಧ್ವಾಚಾರ್ಯರು ತಮ್ಮ ವ್ಯಾಖ್ಯಾನದಲ್ಲಿ ಈ ಸಂದೇಹವನ್ನು ಪರಿಹರಿಸಿದ್ದಾರೆ. ಇಲ್ಲಿಯ ಬ್ರಾಹ್ಮಣ, ರಾಜ, ವೈಶ್ಯ, ಶೂದ್ರ ಮುಂತಾದ ಪದಗಳು ಹುಟ್ಟನ್ನಾಧರಿಸಿದ ಪ್ರಚಲಿತ ಜಾತಿಯನ್ನು ನಿರೂಪಿಸುತ್ತಿಲ್ಲ. ಆತ್ಮರಲ್ಲಿಯೇ ಅವರ ಸಹಜ ಸ್ವಭಾವಕ್ಕೆ ಅನುಗುಣವಾದ ವಿಭಿನ್ನ ಮಟ್ಟದ ವ್ಯಕ್ತಿತ್ವಗಳಿವೆ. ವ್ಯಕ್ತಿಯು ತನ್ನ ಕೆಟ್ಟಕೆಲಸಗಳಿಂದ ತನ್ನ ಸಹಜ ಸ್ವಭಾವಕ್ಕೆ ವ್ಯತಿರಿಕ್ತವಾದ ಹೀನಸ್ಥಿತಿಯನ್ನು ಪಡೆಯಬಹುದು. ಕೆಲವೊಮ್ಮೆ ತನ್ನ ಸತ್ಕಾರ್ಯಗಳಿಂದ ತನ್ನ ಸಹಜಯೋಗ್ಯತೆಗೂ ಮೀರಿದ ಉತ್ತಮ ಸ್ಥಿತಿಯನ್ನೂ ಪಡೆಯಬಹುದು. ಹೀಗೆ ಚೇತನರ ಸ್ವಾಭಾವಿಕ ವ್ಯಕ್ತಿತ್ವಕ್ಕೆ ವ್ಯತಿರಿಕ್ತವಾದ ಏಳುಬೀಳುಗಳನ್ನು ವರ್ಣಿಸಿದೆಯಲ್ಲದೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಸ್ತ್ರೀಯರಲ್ಲಿ ಕೆಲವು ವರ್ಗವು ಪುಣ್ಯಯೋನಿಯೆಂದೂ, ಕೆಲವು ವರ್ಗವು ಪಾಪಯೋನಿಯೆಂದೂ ಈ ವಾಕ್ಯವು ಪ್ರತಿಪಾದಿಸುತ್ತಿಲ್ಲ.

ಭಗವಂತನ ವಿಭೂತಿಗಳು

ಹತ್ತನೆಯ ಅಧ್ಯಾಯದಲ್ಲಿ ಜಗತ್ತಿನ ವಿಶಿಷ್ಟ ವಸ್ತುಗಳಲ್ಲಿ ನೆಲೆಸಿರುವ ಭಗವಂತನ ವಿಶೇಷ ರೂಪಗಳನ್ನು ವರ್ಣಿಸಿರುವುದರ ಜೊತೆಗೆ ವಿಶ್ವದ ಶ್ರೇಷ್ಠ ವ್ಯಕ್ತಿಗಳೆನಿಸಿದ ದೇವತೆಗಳಿಗೂ ಋಷಿಗಳಿಗೂ ಭಗವಂತನು ಜನಕನಾಗಿದ್ದಾನೆಂದು ಅವನ ವಿಶೇಷ ಮಹಿಮೆಯನ್ನು ನಿರೂಪಿಸಲಾಗಿದೆ. ಸಪ್ತರ್ಷಿಗಳಿಗೂ ನಾಲ್ಕು ಮನುಗಳಿಗೂ ಭಗವಂತನು ಕಾರಣನೆಂದು ಇಲ್ಲಿ ಹೇಳಿದೆ. ಹದಿನಾಲ್ಕು ಮನುಗಳಿರುವಾಗ ನಾಲ್ಕು ಮನುಗಳೆಂದು ಏಕೆ ಹೇಳಿದ್ದಾರೆಂದು ನಮಗೆ ಕುತೂಹಲವುಂಟಾಗಬಹುದು. ಹದಿನಾಲ್ಕು ಮನುಗಳಲ್ಲಿ ಪ್ರಧಾನರಾದ ಮೊದಲನೆಯ ನಾಲ್ಕು ಮನುಗಳನ್ನು ಉಲ್ಲೇಖಿಸಿದ್ದಾರೆಂಬುದು ಒಂದು ವಿವರಣೆ.

ಮನನಶೀಲರಾದ, ಜ್ಞಾನಿಗಳಾದ ದೇವತೆಗಳನ್ನೇ ಇಲ್ಲಿ ಮನುಗಳೆಂದು ಕರೆಯಲಾಗಿದೆ. ದೇವತೆಗಳ ವಿಭಿನ್ನ ಗುಣ ಸ್ವಭಾವಗಳನ್ನು ಆಧರಿಸಿ ಅವರನ್ನು ನಾಲ್ಕು ರೀತಿಯಿಂದ ವರ್ಗೀಕರಿಸಿ ನಾಲ್ಕು ಮನುಗಳೆಂದು ಕರೆಯಲಾಗಿದೆ ಎಂಬುದು ಇನ್ನೊಂದು ವಿವರಣೆಯಾಗಿದೆ.

ಭಗವಂತನನ್ನು ದೇವತೆಗಳಲ್ಲಿ ವಾಸವನೆಂದೂ ಇಂದ್ರಿಯಗಳಲ್ಲಿ ಮನಸ್ಸೆಂದೂ ಯಕ್ಷ ರಾಕ್ಷಸರಲ್ಲಿ ಕುಬೇರನೆಂದೂ ಪರ್ವತಗಳಲ್ಲಿ ಮೇರುವೆಂದೂ ಜಲಾಶಯಗಳಲ್ಲಿ ಸಾಗರವೆಂದೂ ಎಲ್ಲಾ ಮರಗಳಲ್ಲಿ ಅಶ್ವತ್ಥನೆಂದೂ ಅನೇಕ ಶಬ್ದಗಳಿಂದ ವರ್ಣಿಸಿದ್ದಾರೆ. ಈ ಎಲ್ಲಾ ಜಡ - ಚೇತನ ಪದಾರ್ಥಗಳೆಲ್ಲ ಪರಮಾತ್ಮನೇ ಎಂದು ಇದಕ್ಕೆ ಅರ್ಥವಲ್ಲ. ಒಬ್ಬ ವ್ಯಕ್ತಿಯಾಗಲೀ ಒಂದು ವಸ್ತುವಾಗಲೀ ತನ್ನ ಗುಂಪಿನ ಇತರ ಪದಾರ್ಥಗಳಿಂದ ವಿಶಿಷ್ಟತೆಯನ್ನು ಪಡೆಯಲು ಭಗವಂತನ ವಿಶೇಷ ರೂಪದ ಸನ್ನಿಧಾನವೇ ಕಾರಣವಾಗಿದೆ. ಮರಗಳಲ್ಲಿ ಅಶ್ವತ್ಥವೃಕ್ಷವು ಶ್ರೇಷ್ಠವೆನಿಸಬೇಕಾದರೆ ಉಳಿದ ಮರಗಳಿಗಿಂತ ಹೆಚ್ಚು ಭಗವಂತನ ಸನ್ನಿಧಾನವಿದೆಯೆಂದು ನಾವು ತಿಳಿದುಕೊಳ್ಳಬೇಕು. ಹೀಗೆ ಆಯಾವ ವಸ್ತುಗಳ ವಿಶಿಷ್ಟತೆಗೆ ಕಾರಣವಾಗಿ ಅಲ್ಲಿ ನೆಲೆಸಿರುವ ಭಗವಂತನನ್ನೂ ಅದೇ ಶಬ್ದದಿಂದ ಕರೆಯಬೇಕು. ಎಲ್ಲಾ ನದಿಗಳಿಗಿಂತ ವಿಶಿಷ್ಟತೆಯನ್ನು ಪಡೆದ ಗಂಗಾನದಿಯಲ್ಲಿ ನೆಲೆಸಿದ ಭಗವಂತನನ್ನೂ ಗಂಗೆಯೆಂಬ ಶಬ್ದದಿಂದಲೇ ಕರೆಯುತ್ತೇವೆ. ವಸ್ತುವಿನ ಬಾಹ್ಯರೂಪಕ್ಕೆ ಅಂಟಿಕೊಂಡ ಹೆಸರೇ ಅದರ ಅಸ್ತಿತ್ವ ಮತ್ತು ವಿಶಿಷ್ಟತೆಗೆ ಕಾರಣವಾದ ಅಂತರ್ಯಾಮಿಯಾದ ಪರಮಾತ್ಮನಿಗೂ ಅನ್ವಯಿಸುತ್ತದೆ. ಆದುದರಿಂದ ಗೀತೆಯ ವಿಭೂತಿಯೋಗದಲ್ಲಿ ಆಯಾವ ಗುಂಪಿನ ಶ್ರೇಷ್ಠ ವಸ್ತುವನ್ನು ಹೆಸರಿಸುವ ಶಬ್ದಗಳಿಂದಲೇ ಭಗವಂತನನ್ನು ವರ್ಣಿಸಿದ್ದಾರೆ. ರಾಮ, ಕೃಷ್ಣ ಮುಂತಾದ ಜಗತ್ತಿನ ಮಹಾವ್ಯಕ್ತಿಗಳು ಸಾಕ್ಷಾತ್ ಭಗವಂತನೇ ಆಗಿದ್ದಾರೆ. ಉಳಿದ ಶ್ರೇಷ್ಠ ವ್ಯಕ್ತಿಗಳಲ್ಲಿ ಭಗವಂತನ ಸನ್ನಿಧಾನವಿದೆಯೆಂಬುದನ್ನು ತಿಳಿದುಕೊಳ್ಳಬಹುದು.

ವಿಶ್ವರೂಪದರ್ಶನ

ಹನ್ನೊಂದನೆಯ ಅಧ್ಯಾಯದಲ್ಲಿ ಭಗವಂತನು ಅರ್ಜುನನಿಗೆ ತೋರಿಸಿದ ವಿಶ್ವರೂಪದ ವರ್ಣನೆಯನ್ನು ಮಾಡಲಾಗಿದೆ. ಅರ್ಜುನನು ಕಂಡ ಈ ವಿಶ್ವರೂಪವು ಜಡವಾದ ರೂಪವಲ್ಲ. ''ದರ್ಶಯಾತ್ಮಾನಮವ್ಯಯಮ್'' ಎಂಬುದಾಗಿ ಇದನ್ನು ಭಗವಂತನ ಸ್ವರೂಪವೆಂದೇ ವರ್ಣಿಸಿದ್ದಾರೆ. ಆದುದರಿಂದ ವಿಶ್ವರೂಪವು ಅಪ್ರಾಕೃತವೂ ನಿತ್ಯವೂ ಚೈತನ್ಯಮಯವೂ ಆಗಿದೆ. ವಿಶ್ವರೂಪ ಎಂಬ ಶಬ್ದವನ್ನು ಕೇಳಿ ವಿಶ್ವವೆ ಭಗವಂತನ ರೂಪವೆಂಬ ಗೊಂದಲವುಂಟಾಗಬಹುದು. ಆದರೆ ''ಮಮ ದೇಹೇ ಗುಡಾಕೇಶ'', ''ಪಶ್ಯಾದಿತ್ಯಾನ್ ವಸೂನ್ ರುದ್ರಾನ್'' ಮುಂತಾದ ವಾಕ್ಯಗಳಲ್ಲಿ ಸಕಲ ದೇವತೆಗಳೂ ಭಗವಂತನ ಈ ವಿಶ್ವರೂಪದ ದೇಹದಲ್ಲಿ ನೆಲೆಸಿವೆಯೆಂದು ವರ್ಣಿಸಿದ್ದರಿಂದ ಈ ಜಗತ್ತು ಮತ್ತು ದೇವತೆಗಳೇ ವಿಶ್ವರೂಪವಲ್ಲ. ಈ ಜಗತ್ತಿಗೆ ಆಶ್ರಯನಾದ ಪರಮಾತ್ಮನೇ ವಿಶ್ವರೂಪನೆಂದು ಸ್ಪಷ್ಟವಾಗುತ್ತದೆ.

''ಪಶ್ಯ ಮೇ ಪಾರ್ಥ ರೂಪಾಣಿ'' ಎಂಬುದಾಗಿ ಭಗವಂತನ ಸಹಸ್ರಾರು ರೂಪಗಳ ದರ್ಶನವು ಅರ್ಜುನನಿಗೆ ಆಗಿದೆ. ಭಗವಂತನು ಒಬ್ಬನೇ ಆಗಿದ್ದರೂ ಅವನಲ್ಲಿ ಅನೇಕತ್ವವಿದೆ. ಒಂದೇ ವಸ್ತುವಿನಲ್ಲಿ ಏಕತ್ವ ಮತ್ತು ಅನೇಕತ್ವ ವಿಚಿತ್ರವೆಂದು ನಮಗೆ ತೋರಬಹುದು, ವಸ್ತು ಒಂದೇ ಆಗಿದ್ದರೂ ಭಿನ್ನ ವಸ್ತುಗಳಂತೆ ಅವುಗಳನ್ನು ವ್ಯವಹರಿಸುವ ಅನೇಕ ಉದಾಹರಣೆಗಳನ್ನು ನಾವು ಜಗತ್ತಿನಲ್ಲಿ ನೋಡಬಹುದು. ಸಕ್ಕರೆಯಲ್ಲಿ ಸಿಹಿಯು ಇದೆ. ಆ ಸಿಹಿಯು ಸಕ್ಕರೆಯಿಂದ ಬೇರೆಯಲ್ಲ. ಸಕ್ಕರೆ ಮತ್ತು ಸಿಹಿ ಒಂದೇ ಆಗಿದ್ದರೂ ಸಕ್ಕರೆಯಲ್ಲಿ ಸಿಹಿ ಇದೆ ಎಂದು ನಾವು ವ್ಯವಹರಿಸುತ್ತೇವೆ. ತನ್ನಲ್ಲಿ ತಾನಿರಲು ಶಕ್ಯವಿಲ್ಲ. ಸಕ್ಕರೆ ಮತ್ತು ಸಿಹಿ ಒಂದೇ ಆಗಿದ್ದರೂ ಸಕ್ಕರೆಯಲ್ಲಿ ಸಿಹಿಯಿದೆಯೆಂದು ನಾವು ಕರೆಯುವುದು ಹೇಗೆ? ವಸ್ತುಗಳ ನೈಸರ್ಗಿಕ ಶಕ್ತಿಯಿಂದಾಗಿ ವಸ್ತುವಿನಲ್ಲಿ ಏಕತೆಯಿದ್ದರೂ ಭಿನ್ನತೆಯ ವ್ಯವಹಾರವು ಉಂಟಾಗುತ್ತದೆ. ಇದನ್ನೇ

ವಿಶೇಷವೆಂದು ಶಾಸ್ತ್ರದಲ್ಲಿ ವ್ಯವಹರಿಸಲಾಗಿದೆ. ವಸ್ತುಗಳಲ್ಲಿರುವ ಈ ವಿಶೇಷವೆಂಬ ಸ್ವಾಭಾವಿಕ ಶಕ್ತಿಯಿಂದಲೇ ಒಬ್ಬನೇ ಆದ ಭಗವಂತನಲ್ಲಿ ಅನೇಕ ರೂಪಗಳನ್ನು ನಾವು ಕೂಡಿಸಬಹುದು.

ಕೆಲವೆಡೆ ವಸ್ತುಗಳಲ್ಲಿ ಅಭೇದ ಮತ್ತು ಭೇದ ಇವೆರಡನ್ನೂ ಅಂಗೀಕರಿಸಬೇಕಾಗುತ್ತದೆ. ನೂಲುಗಳಿಗಿಂತ ಬೇರೆ ಬಟ್ಟೆಯಿಲ್ಲ. ನೂಲುಗಳಿಂದ ಪ್ರತ್ಯೇಕಿಸಿದ ಬಟ್ಟೆನ್ನು ಯಾರೂ ನೋಡಿಲ್ಲ, ಆದರೆ ಬಿಡಿ ಬಿಡಿಯಾದ ನೂಲು ಇದ್ದಾಗ ಬಟ್ಟೆಯೇ ಇರುವುದಿಲ್ಲ. ಆ ನೂಲುಗಳನ್ನು ಜೋಡಿಸಿದಾಗ ಮಾತ್ರ ನಮಗೆ ಬಟ್ಟೆಯ ದರ್ಶನವಾಗುತ್ತದೆ. ಆದ್ದರಿಂದ ನೂಲು ಬಟ್ಟೆಯಿಂದ ಬೇರೆಯೂ ಆಗಿದೆ, ಒಂದೂ ಆಗಿದೆ. ನೂಲು ಬಿಡಿ ಬಿಡಿಯಾಗಿರುವಾಗ ಬಟ್ಟೆ ತೋರದಿರುವುದರಿಂದ ನೂಲು ಮತ್ತು ಬಟ್ಟೆ ಪೂರ್ತಿಯಾಗಿ ಒಂದೆನಿಸಲಾರದು. ಇವುಗಳಿಗೆ ಭೇದ ಮತ್ತು ಅಭೇದ ಇವೆರಡೂ ಇವೆ.

ಪರಮಾತ್ಮನು ಅಪರಿಮಿತನು. ಅವನ ರಾಮ, ಕೃಷ್ಣ ಮೊದಲಾದ ಒಂದೊಂದು ರೂಪಗಳಿಗೂ ಮಿತಿ, ಅಳತೆ, ಪರಿಚ್ಛಿನ್ನತೆಗಳಿಲ್ಲ. ಎಲ್ಲವೂ ವ್ಯಾಪಕ ಮತ್ತು ಅಪರಿಚ್ಛಿನ್ನಗಳಾಗಿವೆ. ರಾಮ, ಕೃಷ್ಣ ಮುಂತಾದ ರೂಪಗಳಿಗೆ ಒಂದು ನಿರ್ದಿಷ್ಟ ಅಳತೆಯು ನಮಗೆ ಕಂಡು ಬಂದರೂ ಆ ರೂಪಗಳೂ ಅಳತೆಯನ್ನು ಮೀರಿವೆ. ಒಂದೇ ರೂಪಕ್ಕೆ ಅಳತೆ ಮತ್ತು ಅನಂತತೆ ಇವೆರಡೂ ಹೇಗೆ ಎಂಬ ಸಂದೇಹ ನಮ್ಮನ್ನು ಕಾಡಬಹುದು. ಭಗವಂತನ ಅಚಿಂತ್ಯ , ಅದ್ಭುತ, ಶಕ್ತಿಯಿಂದಲೇ ಈ ವಿರೋಧ, ವೈಚಿತ್ರ್ಯಗಳ ಸಂಯೋಜನೆಯಾಗುತ್ತದೆ. ''ಅಣೋರಣೀಯಾನ್ ಮಹತೋ ಮಹೀಯಾನ್'' ಮುಂತಾದ ವೇದವಾಕ್ಯಗಳ ಆಧಾರದಿಂದ ಬೇರೆ ಕಡೆಯಲ್ಲಿ ವಿರೋಧವಾಗಿ ತೋರಿಬರುವ ಧರ್ಮಗಳನ್ನು ಭಗವಂತನಲ್ಲಿ ಸಮನ್ವಯ ಗೊಳಿಸಬೇಕು.

''ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ'' ಎಂಬುದಾಗಿ ಗೀತೆಯ ವಾಕ್ಯವಿದೆ. ಭಗವಂತನನ್ನು ಸರ್ವ ಎಂದು ನಾವು ಕರೆಯಬಹುದು. ಸರ್ವನೆಂದರೆ ಭಗವಂತನು ಜಡಚೇತನಾತ್ಮಕ ವಸ್ತುವೆಂದು ಅರ್ಥವಲ್ಲ. ಜಡಚೇತನಾತ್ಮಕ ಪ್ರಪಂಚವನ್ನು ಪರಮಾತ್ಮನು ವ್ಯಾಪಿಸಿರುವುದರಿಂದಲೇ ಅವನಿಗೆ ಸರ್ವ ಎಂಬುದಾಗಿ ಹೆಸರು. ಈ ವಿವರಣೆಯಿಂದಾಗಿ ಅಲ್ಲಲ್ಲಿ ವೇದವಾಕ್ಯಗಳಲ್ಲಿ ''ಸರ್ವಂ ಖಲ್ವಿದಂ ಬ್ರಹ್ಮ'' ''ಪುರುಷ ಏವ ಇದಂ ಸರ್ವಂ'' ಮುಂತಾದ ವಾಕ್ಯಗಳ ಬಗ್ಗೆ ಇರುವ ಗೊಂದಲ ಪರಿಹಾರವಾಗುವುದು. ಈ ಜಡವಾದ ಪ್ರಪಂಚವೇ ಪರಮಾತ್ಮನಲ್ಲ. ದುಃಖ ದೋಷಗಳಿಂದ ತುಂಬಿದ ಜೀವರೇ ದೇವರಲ್ಲ. ಈ ಜೀವ ಜಗತ್ತುಗಳಲ್ಲಿ ಭಗವಂತನು ತುಂಬಿಕೊಂಡಿರುವುದರಿಂದ ಜಗದ್ವ್ಯಾಪಿ ಎಂಬ ಅರ್ಥದಲ್ಲಿಯೇ ಜಗತ್ತೆಲ್ಲವೂ ಪರಮಾತ್ಮ ಎಂಬುದಾಗಿ ವೇದಗಳು ವರ್ಣಿಸಿವೆ ಎಂಬ ಸ್ಪಷ್ಟೀಕರಣವನ್ನು ಈ ಗೀತಾವಾಕ್ಯವು ನೀಡುತ್ತದೆ.

ಶ್ರೀಕೃಷ್ಣನ ಉಪಾಸನೆ ಮತ್ತು ಅವ್ಯಕ್ತ ಉಪಾಸನೆ

ಶ್ರೀಕೃಷ್ಣನೇ ಪರಬ್ರಹ್ಮನು. ''ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್'' ಎಂಬುದಾಗಿ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಪರಬ್ರಹ್ಮನೆಂದು ಸ್ಪಷ್ಟವಾಗಿ ಹೇಳಿದೆ. ಭಾಗವತ ಮುಂತಾದ ಗ್ರಂಥಗಳಲ್ಲಿಯೂ ಶ್ರೀಕೃಷ್ಣನನ್ನೇ ಭಗವಂತನೆಂದು ಹೇಳಿದೆ. ಈ ಪರಬ್ರಹ್ಮನಾದ ಶ್ರೀಕೃಷ್ಣನನ್ನು ಉಪಾಸನೆ ಮಾಡಬೇಕೇ ಅಥವಾ ಜಗನ್ಮಾತೆಯಾದ ಅವ್ಯಕ್ತವಾದ ಶ್ರೀತತ್ವವನ್ನು ಉಪಾಸನೆ ಮಾಡಬೇಕೇ ? ಎನ್ನುವ ವಿಚಾರವನ್ನು ಹನ್ನೆರಡನೆಯ ಅಧ್ಯಾಯದ ಆರಂಭದಲ್ಲಿ ಮಾಡಿದ್ದಾರೆ. ಶ್ರೀತತ್ವದ ಉಪಾಸನೆಯಿಂದ ಮುಕ್ತಿಯು ದೊರೆಯುವುದೆಂದು ಅನೇಕ ವೇದವಾಕ್ಯಗಳಿವೆ. ಆದರೂ ಶ್ರೀತತ್ವದ ಉಪಾಸನೆಯಿಂದ ನೇರವಾಗಿ ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲ. ಜಗತ್ಪಿತನಾದ ಭಗವಂತನನ್ನು ಧ್ಯಾನ ಮಾಡದೇ ಕೇವಲ ತನ್ನಲ್ಲಿ ಮಾತ್ರ ಭಕ್ತಿ ಮಾಡಿದರೆ ಜಗನ್ಮಾತೆಯಾದ ಲಕ್ಷ್ಮೀದೇವಿಗೆ ಸಮಾಧಾನವಿಲ್ಲ. ಲಕ್ಷ್ಮೀ

ಉಪಾಸನೆಯನ್ನು ಮಾಡಿದ ಮೇಲೂ ಭಗವಂತನ ಉಪಾಸನೆಯನ್ನು ಮಾಡಲೇಬೇಕಾಗುತ್ತದೆ. ಹೀಗೆ ಸ್ವತಂತ್ರವಾಗಿ ಇಬ್ಬರ ಉಪಾಸನೆಯನ್ನು ಮಾಡುವ ಬದಲು ನೇರವಾಗಿ ಲಕ್ಷ್ಮೀಪತಿಯಾದ ಶ್ರೀಹರಿಯನ್ನು ಉಪಾಸನೆ ಮಾಡುವುದು ಸುಲಭ ಮಾರ್ಗವೆಂದು ಗೀತೆಯ ಆಶಯವಾಗಿದೆ.

ಕೆಲವರು ಕೃಷ್ಣನೆಂದರೆ ಸಗುಣ ಸಾಕಾರ ಬ್ರಹ್ಮನೆಂದೂ ಅವ್ಯಕ್ತೋಪಾಸನೆಯೆಂದರೆ ನಿರ್ಗುಣ ನಿರಾಕಾರ ಪರಬ್ರಹ್ಮೋಪಾಸನೆಯೆಂದೂ ಅರ್ಥಮಾಡುವರು. ಇದು ಸರಿಯಲ್ಲ. ಶ್ರೀಕೃಷ್ಣನೇ ಪರಬ್ರಹ್ಮನೆಂದು ಈಗಾಗಲೇ ಸಮರ್ಥಿಸಿದ್ದೇವೆ. ಹೀಗಿರುವಾಗ ಶ್ರೀಕೃಷ್ಣನಿಗಿಂತ ಭಿನ್ನವಾದ ಪರಬ್ರಹ್ಮವೊಂದಿದ್ದೆ, ಅದರ ಉಪಾಸನೆಯೇ ಅವ್ಯಕ್ತೋಪಾಸನೆಯೆಂದು ಹೇಳುವುದು ಸರಿಯಲ್ಲ. ಮಾತ್ರವಲ್ಲದೆ ಸಹಸ್ರಶೀರ್ಷಾ ಪುರುಷಃ ಮುಂತಾದ ವಾಕ್ಯಗಳಿಂದ ಪರಮಾತ್ಮನ ಗುಣ ಆಕಾರಗಳನ್ನೆಲ್ಲಾ ವರ್ಣಿಸಿ ''ತಮೇವಂ ವಿದ್ವಾನ್'' ಎಂಬುದಾಗಿ ಇಂಥಹ ಗುಣ ಮತ್ತು ಆಕಾರಗಳಿಂದ ಕೂಡಿದ ಪರಮಾತ್ಮನ ಉಪಾಸನೆಯನ್ನು ಮಾಡಿ ಅವನ ಸಾಕ್ಷಾತ್ಕಾರವನ್ನು ಪಡೆಯಬೇಕು. ಆದರಿಂದಲೇ ಮೋಕ್ಷ ಎಂಬುದಾಗಿ ವೇದವು ಹೇಳಿದೆ. ಮೋಕ್ಷಕ್ಕಾಗಿ ನಿರ್ಗುಣ-ನಿರಾಕಾರ ಉಪಾಸನೆಯು ಬೇಕಾಗಿಲ್ಲ. ನಿರ್ಗುಣವಾದ ಪರಬ್ರಹ್ಮವೇ ಪರಮ ಸತ್ಯವಾಗಿದ್ದರೆ ಅವ್ಯಕ್ತೋಪಾಸನೆಗಿಂತ ತನ್ನ ಉಪಾಸನೆಯೇ ಶ್ರೇಷ್ಠವೆಂದು ಕೃಷ್ಣನು ಹೇಳುವ ಮಾತನ್ನು ನಾವು ಅಲ್ಲಗಳೆಯಬೇಕಾಗುತ್ತದೆ. ಆದುದರಿಂದ ಇಲ್ಲಿ ಸುಗುಣ-ನಿರ್ಗುಣಗಳ ಗೊಂದಲವನ್ನು ತರಬಾರದು. ಅನಂತ ಕಲ್ಯಾಣ ಗುಣ ಸಂಪನ್ನನಾದ ಶ್ರೀಕೃಷ್ಣನು ಪ್ರಕೃತಿಯ ತ್ರಿಗುಣಗಳಿಂದ ಅತೀತನಾಗಿರುವುದರಿಂದ ನಿರ್ಗುಣನೂ ಆಗಿದ್ದಾನೆ. ಅವನಿಗೆ ಭೌತಿಕ ಆಕಾರವಿಲ್ಲದಿದ್ದರೂ ಜ್ಞಾನಾನಂದಮಯವಾದ ಆಕಾರವಿದೆ. ಅಂತೂ ಶ್ರೀಕೃಷ್ಣನೇ ಪರಬ್ರಹ್ಮನು. ಅವನೇ ಸಗುಣನೂ ನಿರ್ಗುಣನೂ ಸಾಕಾರನೂ ನಿರಾಕಾರನೂ ಆಗಿದ್ದಾನೆ. ಜಗನ್ಮಾತೆಯಾದ ಶ್ರೀತತ್ವದ ಉಪಾಸನೆಗಿಂತ ಜಗತ್ಪಿತನಾದ ಶ್ರೀಕೃಷ್ಣನ ಉಪಾಸನೆಯೇ ಶ್ರೇಷ್ಠ ಎಂಬುದೇ ಗೀತೆಯ ಈ ಭಾಗದ ತಾತ್ಪರ್ಯವಾಗಿದೆ.

ಸಾಧನೆಯ ವಿಭಿನ್ನ ಹಂತಗಳು

ಸಾಕ್ಷಾತ್ಕಾರಕ್ಕೆ ಭಗವಂತನನ್ನು ಏಕಾಗ್ರತೆಯಿಂದ ಧ್ಯಾನ ಮಾಡುವುದು ಮುಖ್ಯವಾದ ಸಾಧನ. ಅಖಂಡವಾದ ಭಕ್ತಿ, ದೃಢವಾದ ವಿಷಯ ವೈರಾಗ್ಯವಿದ್ದರೆ ಮಾತ್ರ ಈ ಏಕಾಗ್ರತೆಯು ಸಾಧ್ಯ. ಇಂಥಹ ಅಖಂಡವಾದ ಧ್ಯಾನವು ನಮಗೆ ಸಾಧ್ಯವಿಲ್ಲದಿದ್ದಲ್ಲಿ ಅದರ ಅಭ್ಯಾಸರೂಪವಾದ ಪ್ರಯತ್ನವನ್ನು ನಿರಂತರವಾಗಿ ಮಾಡಬಹುದು. ಇದೂ ಸಾಧ್ಯವಿಲ್ಲದಿದ್ದಾಗ ನಿರಂತರ ಭಗವದನುಸಂಧಾನದ ಜೊತೆಗೆ ನಿಷ್ಕಾಮನೆಯಿಂದ ಸಮರ್ಪಣ ಭಾವನೆಯಿಂದ ಕರ್ತವ್ಯವನ್ನು ಆಚರಿಸಬೇಕು. ಇದು ನಮಗೆ ಅಶಕ್ಯವಾದಲ್ಲಿ ಕಾಮನೆಗಳನ್ನು ತೊರೆದು ಪದೇ ಪದೇ ಭಗವಂತನನ್ನು ಸ್ಮರಿಸಿಕೊಂಡು ಕರ್ತವ್ಯದಲ್ಲಿ ತೊಡಗಬೇಕು ಎಂಬುದಾಗಿ ಸಾಧಕನಿಗೆ ನಾಲ್ಕು ಹಂತಗಳನ್ನು ತಿಳಿಸಿದ್ದಾರೆ.

ಅಭ್ಯಾಸ, ಪ್ರಯತ್ನಗಳಿಂದ ಜ್ಞಾನವನ್ನು ಪಡೆಯಬೇಕು. ಈ ಜ್ಞಾನದ ಜೊತೆಗೆ ಏಕಾಗ್ರತೆಯಿಂದ ಧ್ಯಾನವನ್ನು ಮಾಡಬೇಕು. ಫಲಾಪೇಕ್ಷೆಯಿಂದ ಮಾಡುವ ಧ್ಯಾನಕ್ಕಿಂತ ಕರ್ಮಫಲ ತ್ಯಾಗದಿಂದ ಕೂಡಿದ ನಿಷ್ಕಾಮವಾದ ಧ್ಯಾನವು ಶ್ರೇಷ್ಠ. ಈ ಧ್ಯಾನದಿಂದ ಸಾಕ್ಷಾತ್ಕಾರವನ್ನು ಹೊಂದಿ ಮೋಕ್ಷವನ್ನು ಪಡೆಯಬಹುದು.

ಈ ಭಾಗದ ಶ್ಲೋಕಗಳಲ್ಲಿ ಪೂರ್ವಾಪರ ವಿರೋಧವಿದ್ದಂತೆ ನಮಗೆ ಭಾಸವಾಗುವುದು. ಸರ್ವಕರ್ಮ ಫಲ ತ್ಯಾಗವು ಧ್ಯಾನದ ಮೊದಲನೇ ಮೆಟ್ಟಿಲೆಂದು ಮೊದಲು ಹೇಳಿದ್ದರೆ ಧ್ಯಾನಕ್ಕಿಂತಲೂ ಕರ್ಮಫಲ ತ್ಯಾಗವೇ ಶ್ರೇಷ್ಠವೆಂದು ಮುಂದಿನ ವಾಕ್ಯದಲ್ಲಿ ಹೇಳಿದ್ದಾರೆ. ಹೀಗೆ ನಮಗೆ ತೋರುವ ವಿಸಂಗತಿಯನ್ನು ಎರಡು ರೀತಿಯಿಂದ ಪರಿಹರಿಸಲಾಗಿದೆ. ಚಿಕ್ಕವರನ್ನೂ ಕೆಲವೊಮ್ಮೆ ವಿಶಿಷ್ಟ ಸಂದರ್ಭದಲ್ಲಿ

ದೊಡ್ಡವರಿಗಿಂತಲೂ ಮಿಗಿಲಾಗಿ ಪ್ರಶಂಸಿಸುವುದುಂಟು. ಫಲದ ಆಸೆಯನ್ನು ತೊರೆಯುವುದು ಕರ್ಮಯೋಗ ಧ್ಯಾನಯೋಗಗಳಿಗೆಲ್ಲ ಪೀಠಿಕೆಯಾಗಿ ಮೊದಲನೇ ಮೆಟ್ಟಿಲಾಗಿದ್ದರೂ ಅದು ನಮಗೆ ಅತ್ಯಂತ ಅವಶ್ಯಕವೆಂದು ಪ್ರಶಂಸಿಸುವ ಭರದಲ್ಲಿ ಅದನ್ನು ಧ್ಯಾನಕ್ಕಿಂತಲೂ ಶ್ರೇಷ್ಠವಾಗಿದೆಯೆಂದು ಹೊಗಳಿದ್ದಾರೆ. ವಾಸ್ತವವಾಗಿ ಅದು ಧ್ಯಾನದ ಮತ್ತು ಕರ್ಮಯೋಗದ ಅಂಗವೇ ಆಗಿದೆ. ಆದ್ದರಿಂದಲೇ ಈ ಹಿಂದೆ ಕರ್ಮಸನ್ಯಾಸಕ್ಕಿಂತಲೂ ಕರ್ಮಯೋಗವೇ ಶ್ರೇಷ್ಠವೆಂದು ಶ್ರೀಕೃಷ್ಣನು ಹೇಳಿದ್ದಾನೆ.

ಇದಕ್ಕೆ ಇನ್ನೊಂದು ರೀತಿಯಿಂದಲೂ ವಿವರಣೆಯನ್ನು ನೀಡಬಹುದು. ಸರ್ವಕರ್ಮ ಪರಿತ್ಯಾಗವೆಂದರೆ ಬರೇ ಕಾಮನೆಯನ್ನು ಬಿಡುವುದೆಂದು ಅರ್ಥವಲ್ಲ, ಕಾಮನೆಯಿಲ್ಲದ ಧ್ಯಾನವನ್ನೇ ಇಲ್ಲಿ ಹೇಳಿದ್ದಾರೆ. ಕಾಮನೆಯಿಂದ ಒಡಗೂಡಿದ ಧ್ಯಾನಕ್ಕಿಂತ ನಿಷ್ಕಾಮವಾದ ಧ್ಯಾನವೇ ಶ್ರೇಷ್ಠವೆಂದು ಈ ವಾಕ್ಯದ ಆಶಯವಾಗಿದೆ.

ಮುಂದಿನ ಭಾಗದಲ್ಲಿ ಕರ್ತವ್ಯಾಚರಣೆಯ ಜೊತೆಗೆ ಸಾಧಕನಲ್ಲಿ ಅವಶ್ಯವಾಗಿ ಇರಬೇಕಾದ ದ್ವೇಷ, ಮೈತ್ರಿ, ಕರುಣೆ, ನಿರಹಂಕಾರಭಾವ ಮುಂತಾದ ಸದ್ಗುಣಗಳನ್ನು ನಿರೂಪಿಸಿದ್ದಾರೆ. ಸಾಧಕನನ್ನು ಸರ್ವಾರಂಭಪರಿತ್ಯಾಗಿ ಎಂದು ಕರೆದಿದ್ದಾರೆ. ಎಲ್ಲಾ ಕಾರ್ಯಗಳನ್ನು ಬಿಟ್ಟವನೆಂದು ಇದಕ್ಕೆ ಅರ್ಥವಲ್ಲ. ಎಲ್ಲಾ ಕರ್ತವ್ಯಗಳನ್ನು ಭಗವಂತನ ಸೇವಾರೂಪವಾಗಿಯೇ ಮಾಡಿಕೊಂಡು ಕೇವಲ ಲೌಕಿಕ ದೃಷ್ಟಿಯ ಕಾರ್ಯವನ್ನು ಬಿಡುವುದೇ ಸರ್ವಾರಂಭಪರಿತ್ಯಾಗದ ಕಾರ್ಯವಾಗಿದೆ. ಕಾರ್ಯವನ್ನು ಮಾಡುವಾಗ ತಾನು ಮಾಡಿದ್ದೇನೆಂಬ ಅಭಿಮಾನವನ್ನು ತೊರೆದು ಫಲದ ಕಾಮನೆಯನ್ನು ಬಿಸುಟು ಎಲ್ಲ ಕರ್ಮಗಳನ್ನು ಭಗವಂತನಿಗೇ ಅರ್ಪಿಸುವುದೇ ಸರ್ವಾರಂಭ ಪರಿತ್ಯಾಗವೆನಿಸಿದೆ. ಆದ್ದರಿಂದ ಈ ವಾಕ್ಯವು ನಿರಾರಂಭ ನಿಷ್ಕ್ರಿಯತೆಯನ್ನು ಬೋಧಿಸುತ್ತದೆಂದು ತಿಳಿಯಬಾರದು. ಅದರಂತೆ ಸಾಧಕರಿಗೆ ಸುಖ-ದುಃಖಗಳೆರಡೂ ಸಮಾನ. ''ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ'' ಎಂಬುದಾಗಿ ಸಾಧಕನಿಗೆ ಶೋಕ ಹರ್ಷಗಳೆರಡೂ ಇಲ್ಲ ಎಂದು ತಿಳಿಸಿದ್ದಾರೆ. ಈ ಸಂಸಾರದಲ್ಲಿ ಸುಖ, ದುಃಖಗಳೆರಡನ್ನೂ ಪೂರ್ತಿಯಾಗಿ ತೊರೆಯಲು ಸಾಧ್ಯವಿಲ್ಲದಿರುವುದರಿಂದ ಇದು ಅವ್ಯವಹಾರ್ಯವೆಂದು ನಮಗೆ ತೋರಬಹುದು. ಕೆಲವರನ್ನು ಅಜ್ಞಾನಿಗಳೆಂದು ಕರೆಯುತ್ತೇವೆ. ಕೆಲವರನ್ನು ದರಿದ್ರರೆಂದೂ ಅವರಲ್ಲಿ ಹಣವೇ ಇಲ್ಲವೆಂದೂ ಹೇಳುತ್ತೇವೆ. ದರಿದ್ರನಲ್ಲಿಯೂ ಅತ್ಯಲ್ಪ ಹಣ ಇರಬಹುದು. ಅಜ್ಞಾನಿಯಲ್ಲಿಯೂ ಸ್ವಲ್ಪ ಜ್ಞಾನ ಇದ್ದೇ ಇರುತ್ತದೆ. ಆದರೂ ಹೆಚ್ಚಿನ ಜ್ಞಾನ ಮತ್ತು ಸಂಪತ್ತು ಇಲ್ಲದಿರುವುದರಿಂದ ಅವರನ್ನು 'ಅಜ್ಞಾನಿ', 'ನಿಷ್ಕಿಂಚನ', 'ದರಿದ್ರ' ಎಂದು ಮುಂತಾಗಿ ಕರೆಯುತ್ತೇವೆ. ಅದರಂತೆ ಸಾಧಕನಿಗೆ ಸುಖ ದುಃಖಗಳ ಕಿಂಚಿತ್ ವಿಕೃತಿಯಿದ್ದರೂ ಸುಖ - ದುಃಖಗಳಿಂದ ವಿಶೇಷ ಉದ್ರೇಕ ಆಘಾತಗಳು ಇಲ್ಲದಿರುವುದರಿಂದ ಅವರು ಸುಖ - ದುಃಖಗಳಲ್ಲಿ ಸಮಾನರಾಗಿದ್ದಾರೆ ಎಂದು ಮುಂತಾಗಿ ಕರೆಯಬಹುದು.

ತತ್ವಗಳ ವಿವೇಚನೆ

ಹದಿಮೂರನೆಯ ಅಧ್ಯಾಯದಲ್ಲಿ ಕ್ಷೇತ್ರ ಕ್ಷೇತ್ರಜ್ಞ, ಪ್ರಕೃತಿ-ಪುರುಷ, ಜ್ಞೇಯವಸ್ತು ಮತ್ತು ಜ್ಞಾನ ಸಾಧನಗಳ ವಿವೇಚನೆಯನ್ನು ಮಾಡಿದ್ದಾರೆ. ಈ ಜಗತ್ತೇ ಕ್ಷೇತ್ರವಾಗಿದೆ. ಭಗವಂತನು ನೆಲೆಸುವ ಸ್ಥಾನವನ್ನು ನಾವು ಕ್ಷೇತ್ರವೆಂದು ಕರೆಯುತ್ತೇವೆ. ಇಡೀ ವಿಶ್ವವೇ ಭಗವಂತನ ನೆಲೆಯಾಗಿರುವುದರಿಂದ ಅದನ್ನೂ ಕ್ಷೇತ್ರವೆಂದು ಕರೆಯಬಹುದು. ಪ್ರಕೃತಿ, ಮಹತ್ತತ್ವ, ಅಹಂಕಾರ ತತ್ವ, ಪಂಚಭೂತಗಳು, ದಶೇಂದ್ರಿಯ ಗಳು, ಸುಖ, ಜ್ಞಾನ, ಇಚ್ಛಾ ಮುಂತಾದ ಗುಣಗಳು ಇವೆಲ್ಲವುಗಳಿಗೂ ಲಕ್ಷ್ಮೀ, ಬ್ರಹ್ಮ, ಇಂದ್ರ, ಸ್ಕಂದ, ಚಂದ್ರಾದಿ ದೇವತೆಗಳು ಅಭಿಮಾನಿಗಳು. ಈ ದೇವ ದೈತ್ಯರಿಂದ ನಿಯಮಿಸಲ್ಪಟ್ಟ ಈ

ಜಗತ್ತು ಭಗವಂತನ ಆವಾಸ ಸ್ಥಾನವಾಗಿ ಕ್ಷೇತ್ರವೆನಿಸಿದೆ. ಈ ಜಗತ್ತನ್ನು ಪೂರ್ತಿಯಾಗಿ ತಿಳಿದವನು ಭಗವಂತನೊಬ್ಬನೇ. ಆದುದರಿಂದ ಅವನೇ ಕ್ಷೇತ್ರಜ್ಞನು. ಅವನೇ ಜಗತ್ತಿಗೆ ಮುಖ್ಯ ನಿಯಾಮಕನು.

ಕೆಲವರು ''ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ'' ಎಂಬ ವಾಕ್ಯದ ಸರಿಯಾದ ಭಾವವನ್ನು ಗ್ರಹಿಸದೆ ಈ ಶರೀರವೇ ಕ್ಷೇತ್ರವೆಂದೂ ಜೀವನೇ ಕ್ಷೇತ್ರಜ್ಞನೆಂದೂ ''ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ'' ಎಂಬುದಾಗಿ ಆ ಜೀವನೇ ತಾನಾಗಿರುವೆನೆಂದು ಭಗವಂತನು ಹೇಳಿರುವುದಾಗಿ ಭ್ರಮಿಸಿದ್ದಾರೆ. ಗೀತೆಯಲ್ಲಿಯೇ ಕ್ಷೇತ್ರ ಶಬ್ದದ ವಿವರಣೆಯನ್ನು ನೀಡುತ್ತಾ ಪ್ರಕೃತಿ, ಪಂಚಭೂತ ಮೊದಲಾದ ಸಮಗ್ರ ಪ್ರಪಂಚವೇ ಕ್ಷೇತ್ರವೆಂದು ಹೇಳಿದೆ. ಈ ಜೀವನು ಸಮಗ್ರವಾದ ಈ ಜಗತ್ತನ್ನು ತಿಳಿದಿದ್ದಾನೆಯೇ ? ತನ್ನ ಪುಟ್ಟ ಶರೀರವನ್ನು ಪೂರ್ತಿಯಾಗಿ ತಿಳಿಯದ ಈ ಬಡಪಾಯಿ ಜೀವನು ಕ್ಷೇತ್ರಜ್ಞನು ಹೇಗೆ ಆಗಬಲ್ಲನು ? ಭಾಗವತದಲ್ಲಿ ಶ್ರೀಮನ್ನಾರಯಣನೇ ಕ್ಷೇತ್ರಜ್ಞನೆಂದು ಸ್ಪಷ್ಟವಾಗಿ ಹೇಳಿದೆ. ಆದುದರಿಂದ ಇಲ್ಲಿ ಕೃಷ್ಣನು ತನಗೂ ಜೀವರಿಗೂ ಐಕ್ಯವನ್ನು ಹೇಳುತ್ತಾನೆಂದು ಭಾವಿಸುವುದು ಸರಿಯಲ್ಲ.

ಪರಮಾತ್ಮನೇ ಪರಮಜ್ಞೇಯನಾಗಿದ್ದಾನೆ. ಮುಖ್ಯವಾಗಿ ಜಗತ್ತಿನಲ್ಲಿ ತಿಳಿಯಬೇಕಾದ ವಸ್ತುವೂ ಅವನೇ ಆಗಿದ್ದಾನೆ. ಎಲ್ಲೆಡೆಯಲ್ಲಿಯೂ ಅವನ ಕೈಕಾಲುಗಳಿವೆ. ಅರ್ಥಾತ್ ಅವನು ಸರ್ವವ್ಯಾಪಕನಾಗಿದ್ದಾನೆ. ಅವನ ಒಂದೊಂದು ಇಂದ್ರಿಯ ಅವಯವಗಳು ಎಲ್ಲಾ ಇಂದ್ರಿಯ ಮತ್ತು ಅವಯವಗಳ ಕಾರ್ಯವನ್ನು ಮಾಡುತ್ತವೆ. ಎಲ್ಲಾ ಇಂದ್ರಿಯ ವಿಷಯಗಳನ್ನು ನಮಗೆ ಭಗವಂತನು ತಿಳಿಸಿಕೊಡುತ್ತಾನೆ ಮತ್ತು ತಾನೂ ತಿಳಿದಿದ್ದಾನೆ. ಆದರೆ ಅವನಿಗೆ ಇಂದ್ರಿಯಗಳು ಇಲ್ಲ. ಚೈತನ್ಯಸ್ವರೂಪಗಳಾದ ಇಂದ್ರಿಯಗಳಿದ್ದರೂ ಪ್ರಾಕೃತ ಇಂದ್ರಿಯಗಳು ಅವನಿಗೆ ಇಲ್ಲ. ಸರ್ವವ್ಯಾಪಕನಾದ ಭಗವಂತನು ದೂರದಲ್ಲಿಯೂ ಇದ್ದಾನೆ, ಸಮೀಪದಲ್ಲಿಯೂ ನೆಲೆಸಿದ್ದಾನೆ.

ಇಂತಹ ಭಗವಂತನ ಜ್ಞಾನವನ್ನು ಪಡೆಯಲು ಆತ್ಮಶ್ಲಾಘನೆ ಮತ್ತು ದಂಭವನ್ನು ಬಿಡಬೇಕು. ತನ್ನ ಅಲ್ಪತನವು ಗೊತ್ತಿದ್ದರೂ ಇಲ್ಲದೇ ಇದ್ದ ಮಹತ್ವವನ್ನು ಪ್ರದರ್ಶಿಸುವುದೇ ದಂಭವಾಗಿದೆ. ಬಾಹ್ಯ-ಆಂತರಿಕ ಶುದ್ಧಿ , ಸನ್ಮಾರ್ಗಾಚರಣೆಯಲ್ಲಿ ತ್ರಿಕರಣಗಳಲ್ಲಿಯೂ ಏಕರೂಪತೆ, ಸಹನೆ, ಗುರುಸೇವೆ, ಸ್ವಧರ್ಮನಿಷ್ಠೆ , ಮನೋನಿಗ್ರಹ, ಮನೆ -ಮಡದಿ -ಮಕ್ಕಳಲ್ಲಿ ಆಸಕ್ತಿಯನ್ನು ತೊರೆಯುವುದು, ಸಂಸಾರದಲ್ಲಿರುವ ದೋಷದ ಬಗ್ಗೆ ಎಚ್ಚರ, ಸುಖದುಃಖಗಳಲ್ಲಿ ಸಮಚಿಂತನೆ, ತನ್ನಲ್ಲಿ ಇಲ್ಲದ ಗುಣದ ಬಗ್ಗೆ ಅಭಿಮಾನಪಟ್ಟು ಮೈಮರೆಯದಿರುವುದು, ಭಗವಂತನಲ್ಲಿ ಅನನ್ಯಭಕ್ತಿ ಮುಂತಾದವುಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳಬೇಕು. ಇವೇ ಜ್ಞಾನದ ಸಾಧನಗಳಾಗಿವೆ.

ಪ್ರಕೃತಿ -ಪುರುಷರ ವಿವೇಚನೆಯನ್ನೂ ಈ ಅಧ್ಯಾಯದಲ್ಲಿ ಮಾಡಿದ್ದಾರೆ. ಪ್ರಕೃತಿಯೆಂದರೆ ಜಗತ್ತಿಗೆ ಕಾರಣವಾದ ಜಡಪ್ರಕೃತಿ ಮತ್ತು ಅದಕ್ಕೆ ಅಭಿಮಾನಿನಿಯಾದ ಚಿತ್ ಪ್ರಕೃತಿ. ಪುರುಷನೆಂದರೆ ಪರಮಾತ್ಮನಾಗಿದ್ದಾನೆ. ಪರಮಾತ್ಮನೂ ಚಿತ್‌ಪ್ರಕೃತಿಯೂ ಸರ್ವಕಾರಣರಾಗಿದ್ದಾರೆ. ಆದರೂ ಜೀವರ ದೇಹೇಂದ್ರಿಯ ಸಂಬಂಧದಲ್ಲಿ ಚಿತ್ ಪ್ರಕೃತಿಯು ವಿಶೇಷ ಪಾತ್ರವನ್ನು ನಿರ್ವಹಿಸುತ್ತದೆ. ಜೀವರ ಸುಖ -ದುಃಖ ಭೋಗಗಳಿಗೆ ಪರಮಾತ್ಮನೇ ಮುಖ್ಯ ಕಾರಣನಾಗಿದ್ದಾನೆ. ದೇಹೇಂದ್ರಿಯಾದಿ ವಿಕಾರಗಳಿಗೆ ಜಡ ಪ್ರಕೃತಿಯು ಕಾರಣವಾಗಿದ್ದರೆ ಈ ದೇಹದಲ್ಲಿ ಸುಖ -ದುಃಖಗಳನ್ನು ಅನುಭವಿಸುವವನು ಜೀವನೇ ಆಗಿದ್ದಾನೆ. ಜಡವಾದ ಪ್ರಕೃತಿ, ಸಂಸಾರದಲ್ಲಿ ಸುಖ -ದುಃಖಗಳನ್ನು ಅನುಭವಿಸುವ ಜೀವರು - ಇವರಿಬ್ಬರಿಗಿಂತಲೂ ಭಿನ್ನನಾಗಿ ಇವರಿಗೆ ಪ್ರೇರಕನಾಗಿ ಸರ್ವೋತ್ತಮನಾಗಿ ಇನ್ನೊಬ್ಬ ಪುರುಷನಿದ್ದಾನೆ. ಅವನೇ ಪರಮ ಪುರುಷನಾದ ಭಗವಂತನು ಎಂಬುದಾಗಿ ಗೀತೆಯು ನಿಸ್ಸಂದಿಗ್ಧವಾಗಿ ಜೀವ ಜಡರಿಂದ ಭಿನ್ನನಾದ ಪರಮಾತ್ಮನನ್ನು ಪ್ರತಿಪಾದಿಸುತ್ತದೆ. ''ಪರಮಾತ್ಮೇತಿ ಚಾಪ್ಯುಕ್ತಃ ದೇಹೇಽಸ್ಮಿನ್ ಪುರುಷಃ ಪರಃ''.

ಸತ್ವ - ರಜ - ತಮಸ್ಸುಗಳು

ಪರಮಾತ್ಮನು ಜಡ ಪ್ರಕೃತಿಯನ್ನು ಉಪಯೋಗಿಸಿಕೊಂಡು ಈ ಜೀವ ವರ್ಗವನ್ನು ಸೃಷ್ಟಿಸಿದ್ದಾನೆ. ಜಡ ಪ್ರಕೃತಿಗೆ ಅಭಿಮಾನಿನಿಯಾದ ಲಕ್ಷ್ಮೀದೇವಿಯು ನಮಗೆ ತಾಯಿಯಾಗುವಂತೆ ಪರಮಾತ್ಮನು ತಂದೆಯೆನಿಸುತ್ತಾನೆ.

ಸತ್ವ, ರಜಸ್ಸು, ತಮಸ್ಸು ಇವುಗಳ ಅಭಿಮಾನಿನಿಯಾದ ಚಿತ್‌ಪ್ರಕೃತಿಗೆ ಶ್ರೀ, ಭೂ ಮತ್ತು ದುರ್ಗಾ ಎಂಬ ಮೂರು ರೂಪಗಳಿವೆ. ಈ ಮೂರು ರೂಪಗಳು ಸಕಲ ಜೀವ ವರ್ಗಗಳನ್ನು ಬಂಧನಕ್ಕೆ ಒಳಪಡಿಸುತ್ತವೆ. ಈ ಸಂಸಾರದಲ್ಲಿ ಜ್ಞಾನ, ಸುಖ, ರಾಗ , ಪ್ರಮಾದ, ಆಲಸ್ಯ ಮುಂತಾದ ನಾನಾ ರೀತಿಯ ಭಾವಗಳು ಜೀವರಿಗೆ ಈ ಚಿತ್‌ಪ್ರಕೃತಿಯಿಂದ ಉಂಟಾಗುತ್ತವೆ. ಜಡ ಪ್ರಕೃತಿಯ ನಿಯಂತ್ರಣಕ್ಕೆ ಒಳಪಟ್ಟ ಸತ್ವ, ರಜ, ತಮೋ ಗುಣವನ್ನು ದಾಟಿದಾಗಲೇ ನಮಗೆ ಅಮೃತತ್ವದ ಪ್ರಾಪ್ತಿಯಾಗುತ್ತದೆ.

ಸತ್ವ, ರಜಸ್ಸು, ತಮಸ್ಸುಗಳು ಸ್ಥೂಲ ಸೂಕ್ಷ್ಮ ಎಂದು ಎರಡು ವಿಧವಾಗಿದೆ. ಸ್ಥೂಲ ಗುಣಗಳಿಂದ ಬಾಹ್ಯ ಪ್ರಪಂಚಕ್ಕೆ ಸಂಬಂಧಿಸಿದ ಜ್ಞಾನ, ಪ್ರವೃತ್ತಿ , ಮೋಹಗಳು ಉಂಟಾಗುತ್ತವೆ. ಸೂಕ್ಷ್ಮ ಗುಣಗಳಿಂದ ಭಗವಂತನ ವಿಷಯದ ಜ್ಞಾನಪ್ರವೃತ್ತಿ ಮುಂತಾದವುಗಳು ಉಂಟಾಗುತ್ತವೆ. ಈ ಮೂರು ಗುಣಗಳನ್ನು ಮೆಟ್ಟನಿಂತ ಜ್ಞಾನಿಯು ಸ್ಥೂಲಗುಣಗಳಿಂದುಟಾಗುವ ಪ್ರಾಪಂಚಿಕ ಜ್ಞಾನ, ಉದ್ಯೋಗ , ಮೋಹಗಳನ್ನು ಹೆಚ್ಚಾಗಿ ಬಯಸುವುದಿಲ್ಲ. ಆದರೆ ಸೂಕ್ಷ್ಮ ಗುಣಗಳಿಂದ ಭಗವಂತನ ವಿಷಯದಲ್ಲಿ ಜ್ಞಾನ ಪ್ರವೃತ್ತಿಗಳನ್ನು ಬಯಸುತ್ತಾನೆ. ಭಗವಂತನ ವಿಷಯದಲ್ಲಿ ಮೋಹವನ್ನು ವಿರೋಧಿಸುತ್ತಾನೆ. ಗೀತೆಯಲ್ಲಿ ತ್ರಿಗುಣಗಳನ್ನು ದಾಟಿದ ವ್ಯಕ್ತಿಗೆ ಇಚ್ಛಾದ್ವೇಷಗಳೇನೂ ಇಲ್ಲ ಎಂಬುದಾಗಿ ಹೇಳಿದ್ದರೂ ಭಗವಂತನ ವಿಷಯಕ್ಕೆ ಸಂಬಂಧಿಸಿದ ಇಚ್ಛಾದ್ವೇಷಗಳು ಅವನಿಗೆ ಇದ್ದೇ ಇರುತ್ತದೆ. ಪರಮಾತ್ಮನ ವಿಷಯದಲ್ಲಿ ಜ್ಞಾನ, ಪ್ರೇಮ ಪ್ರವೃತ್ತಿಗಳನ್ನು ಅವನು ಬಯಸುತ್ತಾನೆ. ಭಗವಂತನ ವಿಷಯದಲ್ಲಿ ಬರಬಹುದಾದ ಅಜ್ಞಾನ ಭ್ರಾಂತಿಗಳನ್ನು ಅವನು ಸಹಿಸುವುದಿಲ್ಲ. ಸೂಕ್ಷ್ಮ ಸತ್ವಗುಣಗಳನ್ನು ಅವನು ಖಂಡಿತವಾಗಿಯೂ ಬಯಸುವನು. ಆದುದರಿಂದಲೇ ಸತ್ವಸ್ಥನೆನಿಸಿ ಮೋಕ್ಷವನ್ನು ಪಡೆಯಬಲ್ಲನು. ಗೀತೆಯಲ್ಲಿ ತ್ರಿಗುಣಗಳನ್ನು ದಾಟಿದವನಿಗೆ ಇಚ್ಛಾದ್ವೇಷಗಳಿಲ್ಲವೆಂದು ಹೇಳಿದರೂ ಈ ಸೂಕ್ಷ್ಮ ವಿವೇಚನೆಯನ್ನು ನಾವಿಟ್ಟುಕೊಳ್ಳಬೇಕು. ಸೂಕ್ಷ್ಮ ಸತ್ವಾದಿಗುಣಗಳ ಪ್ರಭಾವವನ್ನು ನಾವದರಲ್ಲಿ ಅಂಗೀಕರಿಸಬೇಕು.

ಜಗತ್ತು ಮತ್ತು ಪರಮಾತ್ಮ

ಈ ಜಗತ್ತೆಂಬುದು ದೊಡ್ಡ ಮರದಂತೆ. ಈ ವಿಶ್ವದಲ್ಲಿ ಸರ್ವೋತ್ತಮನಾದ ಭಗವಂತನು ಜೀವ ವರ್ಗದಲ್ಲಿ ಉತ್ತಮಳೂ ಜಡಪ್ರಕೃತಿಯ ಅಭಿಮಾನಿನಿಯೂ ಆದ ಲಕ್ಷ್ಮೀದೇವಿ ಮತ್ತು ಜಡವರ್ಗದಲ್ಲಿ ಪ್ರಧಾನವಾದ ಪ್ರಕೃತಿ ಎಂಬ ಈ ಮೂರು ವಸ್ತುಗಳು ಜಗತ್ತಿಗೆ ಮೂಲಕಾರಣವಾಗಿದೆ. ಮಣ್ಣು ಮರವಾಗಿ ಪರಿಣಮಿಸುವುದರಿಂದ ಮಣ್ಣು ಮರಕ್ಕೂ ಕಾರಣವಾಗಿದೆ. ಅದರಂತೆ ಜಗತ್ತಾಗಿ ಪರಿಣಮಿಸುವ ಪ್ರಕೃತಿಯು ಜಗತ್ತಿಗೆ ಕಾರಣವಾಗಿದೆ. ಮರಕ್ಕೆ ಆಧಾರವಾದ ಭೂಭಾಗವು ಮರದಿಂದ ಬೇರೆಯೂ ಹೌದು. ಮರಕ್ಕೆ ಕಾರಣವೂ ಆಗಿದೆ. ಅದರಂತೆ ಪ್ರಕೃತಿಯ ಅಭಿಮಾನಿನಿಯಾದ ಚಿತ್ ಪ್ರಕೃತಿಯೂ ಜಗತ್ ಕಾರಣಳಾಗಿದ್ದಾಳೆ. ಈ ಸಮಗ್ರ ಭೂಮಿಯ ಅಭಿಮಾನಿನಿಯಾದ ಭೂಮಾತೆಯಂತೆ ವಿಶ್ವದಿಂದ ಭಿನ್ನನಾಗಿ ಅಂತರ್ಯಾಮಿಯಾಗಿ ಪರಮಾತ್ಮನು ಮುಖ್ಯ ಕಾರಣನಾಗಿದ್ದಾನೆ. ಹೀಗೆ ವಿಶ್ವದ ಮೂರು ಮೂಲವಸ್ತುಗಳನ್ನು ನಾವು ಅರಿತುಕೊಳ್ಳಬೇಕು.

ಮಹತ್ತತ್ವ, ಅಹಂಕಾರತತ್ವ, ಪಂಚಭೂತಗಳು ಇವುಗಳ ಅಭಿಮಾನಿದೇವತೆಗಳು ಈ ಜಗತ್ತಿನ ಅವಾಂತರ ಕಾರಣಗಳಾಗಿ ಕೊಂಬೆ ರೆಂಬೆಗಳೆನಿಸಿವೆ. ಈ ಶಾಖೆಗಳು ಮೂಲ ಕಾರಣವಾದ ಪ್ರಕೃತಿಯಲ್ಲಿ

ಮತ್ತು ಕಾರ್ಯ ಪ್ರಪಂಚವಾದ ಶರೀರ ಮೊದಲಾದವುಗಳಲ್ಲಿಯೂ ವ್ಯಾಪಿಸಿದೆ. ಆಕರ್ಷಕವಾದ ವಿಷಯ ಪದಾರ್ಥಗಳೇ ಈ ಮರದ ಚಿಗುರೆಲೆಗಳು. ಈ ಜೀವನದ ಮುಖ್ಯ ಫಲವಾದ ಮೋಕ್ಷ ಮತ್ತು ಇತರ ಪುರುಷಾರ್ಥಗಳೆಂಬ ಫಲವನ್ನು ನೀಡುವ ವೇದಗಳೇ ಈ ಮರದ ಎಲೆಗಳಾಗಿವೆ. ಎಲೆಗಳಿಲ್ಲದ ಮರಗಳಿಂದ ಹಣ್ಣು ದೊರೆಯಲಾರದು. ವೇದಗಳಿಲ್ಲದಿದ್ದರೆ ಈ ಜೀವನದ ಅಮೃತ ಫಲವನ್ನು ನಾವು ಪಡೆಯಲಾರೆವು. ಭಗವಂತನ ರೂಪಗಳು ಆಮೂಲಾಗ್ರವಾಗಿ ಈ ಜಗದ್‌ವೃಕ್ಷವನ್ನು ವ್ಯಾಪಿಸಿಕೊಂಡು ಜೀವರ ಕರ್ಮ ಯೋಗ್ಯತೆಗಳಿಗನುಗುಣವಾಗಿ ಈ ವಿಶ್ವದ ಬೆಳವಣಿಗೆಗೆ ಕಾರಣವಾಗಿವೆ. ಇಂತಹ ವಿಶ್ವವನ್ನು ನಾವು ಸರಿಯಾಗಿ ತಿಳಿದುಕೊಳ್ಳಲಾರೆವು . ಇದರ ಆದಿ ಮಧ್ಯಾಂತಗಳಲ್ಲಿ ಪ್ರವಹಿಸುತ್ತಿರುವ ಭಗವಂತನ ಮಹಾಶಕ್ತಿಯನ್ನು ನಾವರಿಯಲಾರೆವು. ಈ ಜಗತ್ತು ನಾನಾ ರೀತಿಯ ವಿಕೃತಿಗೆ ಒಳಪಡುತ್ತದೆ. ಅಶಾಶ್ವತವೂ ಆಗಿದೆ. ಆದರೂ ಪ್ರವಾಹರೂಪವಾಗಿ ನಿರಂತರವಾಗಿದೆ. ಜ್ಞಾನದಿಂದ ಈ ವಿಶ್ವವನ್ನು ವಿಮರ್ಶಿಸಬೇಕು. ಜ್ಞಾನದ ಹರಿತವಾದ ಚೂರಿಯಿಂದ ಜಗತ್ತನ್ನು ಬಿಡಿಸಿ ಬಿಡಿಸಿ ನೋಡಬೇಕು. ವಿಷಯಾಸಕ್ತಿಯಿಂದ ಮೊಂಡಾದ ಬುದ್ಧಿಯು ಜಗತ್ತನ್ನು ಪೃಥಕ್ಕರಿಸಿ ನೋಡಲಾರದು, ವಿಷಯ ಸಂಬಂಧವಿರದ ಹರಿತವಾದ ಬುದ್ಧಿಯಿಂದ ಜಗತ್ತನ್ನು ವಿಶ್ಲೇಷಿಸಿ ಜೀವ ಜಡ ಪರಮಾತ್ಮರನ್ನು ಬಿಡಿ ಬಿಡಿಯಾಗಿ ಮಾರ್ಪಡಿಸಿ ಭಗವತ್ತತ್ವವನ್ನು ಅರಿಯಬೇಕು. ಈ ಜ್ಞಾನವನ್ನು ಪಡೆಯಲು ಭಗವಂತನ ಅನುಗ್ರಹಬೇಕು. ಈ ಎಲ್ಲ ವಿಷಯಗಳಲ್ಲಿಯೂ ನಾವು ಈ ಜೀವನದಲ್ಲಿ ಭಗವಂತನಿಗೆ ಶರಣಾಗಬೇಕು.

ಈ ಅಧ್ಯಾಯದಲ್ಲಿ ಜೀವನನ್ನು ಪರಮಾತ್ಮನ ಅಂಶವೆಂದು ಹೇಳಲಾಗಿದೆ. ಜೀವನು ಪರಮಾತ್ಮನ ಒಂದು ತುಣುಕು ಎಂದು ನಾವು ಭಾವಿಸಬಾರದು. ಭಗವಂತನೆಂಬ ಮಹಾಸಿಂಧುವಿನ ಮುಂದೆ ಜೀವನು ಬರೇ ಬಿಂದು ಎಂಬುದಾಗಿ ಜೀವ ಪರಮಾತ್ಮರಿಗಿರುವ ಭಾರೀ ಅಂತರವನ್ನು ತಿಳಿಸುವುದೇ ಈ ವಾಕ್ಯದ ಉದ್ದೇಶವಾಗಿದೆ. ಜೀವರ ಎಲ್ಲ ಪ್ರವೃತ್ತಿ ವ್ಯವಹಾರಗಳಿಗೆ ಪರಮಾತ್ಮನು ಕಾರಣನಾಗಿದ್ದಾನೆ. ಭಗವಂತನು ನಮ್ಮಲ್ಲಿ ನೆಲೆಸಿ ಸತ್ಕರ್ಮಗಳನ್ನು, ಸದ್ಗುಣಗಳನ್ನು ಸ್ವೀಕರಿಸಿ ಅನುಗ್ರಹಿಸುವನು. ನಾವು ಮಾಡುವ ಸತ್ಕರ್ಮಗಳೇ ಭಗವಂತನಿಗೆ ನಾವು ಅರ್ಪಿಸಬಹುದಾದ ಭಕ್ಷ್ಯಭೋಜ್ಯ ನೈವೇದ್ಯವಾಗಿದೆ . ದುಷ್ಕರ್ಮವನ್ನು ಮಾತ್ರ ಭಗವಂತನು ಸ್ವೀಕರಿಸುವುದಿಲ್ಲ.

ಈ ಜಗತ್ತನ್ನು ಕ್ಷರ ಪುರುಷ ಅಕ್ಷರ ಪುರುಷಗಳೆಂದು ವಿಂಗಡಿಸಬಹುದು, ಸಕಲ ಜೀವರೂ ಕ್ಷರ ಪುರುಷರಾಗಿದ್ದಾರೆ. ಪ್ರಕೃತಿಗೆ ಅಭಿಮಾನಿನಿಯಾಗಿ ಜಗನ್ಮಾತೆಯೆನಿಸಿದ ಲಕ್ಷ್ಮೀದೇವಿಯು ಅಕ್ಷರ ಪುರುಷಳು. ಇವರಿಬ್ಬರನ್ನು ಮೀರಿ ನಿಂತ ಸರ್ವೋತ್ತಮನಾದ ಶ್ರೀಕೃಷ್ಣನೇ ಪುರುಷೋತ್ತಮನು ಎಂಬುದಾಗಿ ಸಮಗ್ರ ಶಾಸ್ತ್ರದ ಸಾರವನ್ನು ಇಲ್ಲಿ ತಿಳಿಸುತ್ತದೆ.

ದೈವ ಮತ್ತು ಆಸುರ ಸಂಪತ್ತು

ಶ್ರೀಕೃಷ್ಣನು ದೈವೀಸಂಪತ್ತು ಮತ್ತು ಆಸುರೀ ಸಂಪತ್ತಿನ ವಿವರಣೆಯನ್ನು ನೀಡಿದ್ದಾನೆ. ಜಗತ್ತಿಗೆ ಸ್ವಾಮಿಯಾದ ಪರಮಾತ್ಮನನ್ನು ಅಲಕ್ಷಿಸಿ ಭಗವಂತನ ಬದಲು ತನ್ನನ್ನೇ ಜೀವನದ ಕೇಂದ್ರವೆಂದು ಭಾವಿಸಿಕೊಂಡು ಪರಮಾತ್ಮನು ಏರ್ಪಡಿಸಿದ ನಿಯಮ ನಿರ್ಧಾರಗಳನ್ನು ಅತಿಕ್ರಮಿಸಿ ರಾಗ-ದ್ವೇಷಾದಿ ದುರ್ಗುಣಗಳಿಗೆ ಒಳಗಾಗಿ ಸ್ವಚ್ಛಂದ ಜೀವನವನ್ನು ನಡೆಸಲು ಕಾರಣವಾಗುವ ಆಸುರೀ ಪ್ರವೃತ್ತಿಯನ್ನು ವಿವರಿಸಿ ಅದರಿಂದಾಗುವ ದುರಂತ ಅನಿಷ್ಟವನ್ನು ತಿಳಿಸಿಕೊಡುತ್ತಾನೆ. ಜಗತ್ತು ಮತ್ತು ಪರಮಾತ್ಮನ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದೇ ಎಲ್ಲ ಅನಿಷ್ಟಗಳಿಗೆ ಕಾರಣ. ಸರ್ವನಿಯಾಮಕನಾದ ಪರಮಾತ್ಮನನ್ನು ತಿಳಿದುಕೊಂಡು ಪರಮಾತ್ಮನಲ್ಲಿ ಭಕ್ತಿಯ ಜೊತೆಗೆ ಅವನು ನಿರ್ಮಿಸಿದ ಜಗತ್ತನ್ನು ಸತ್ಯವೆಂದು ತಿಳಿದುಕೊಂಡು ಅವನ ಶಾಸನವೆನಿಸಿದ ಶಾಸ್ತ್ರದ ನಿಯಮಗಳನ್ನು ಪಾಲಿಸಿಕೊಂಡು ಕಾಮ,

ಕ್ರೋಧಾದಿ ದೋಷಗಳನ್ನು ತೊರೆದು ಸದ್ಗುಣ ಸಂಪನ್ನನಾಗಿ ಕರ್ತವ್ಯ ನಿರತನಾಗಿ ಜೀವಿಸುವುದೇ ದೈವೀ ಸಂಪತ್ತು ಎಂಬುದೇ ಈ ಉಪದೇಶದ ಸಾರವಾಗಿದೆ.

ಸಾತ್ವಿಕ ಆಹಾರ

ನಮ್ಮ ಬುದ್ಧಿಗೆ ಅನುಸಾರವಾಗಿ ನಮ್ಮಲ್ಲಿ ವಿವಿಧ ಪ್ರವೃತ್ತಿಗಳು ಉಂಟಾಗುತ್ತವೆ. ನಮ್ಮ ದಾನ, ತಪಸ್ಸು, ಆರಾಧನೆ, ಇವುಗಳನ್ನು ಸಾತ್ವಿಕ, ರಾಜಸ, ತಾಮಸಗಳೆಂದು ವರ್ಗೀಕರಿಸಿ ತೋರಿಸಲಾಗಿದೆ. ಈ ಸಂದರ್ಭದಲ್ಲಿ ಖಾರ, ಹುಳಿ ಉಪ್ಪು ಮುಂತಾದ ಆಹಾರಗಳು ರಾಜಸಗಳೆಂದು ಸಿಹಿಯಾದ ಪದಾರ್ಥಗಳೆಲ್ಲ ಸಾತ್ವಿಕವೆಂದೂ ತಿಳಿಸಲಾಗಿದೆ. ಇದರ ವಿತರಣೆಯನ್ನು ಮಾಡುವಾಗ ಶ್ರೀಮಧ್ವಾಚಾರ್ಯರು ಶರೀರದ ಆರೋಗ್ಯಕ್ಕೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಆರೋಗ್ಯವಿದ್ದ ಶರೀರವಿದ್ದರೆ ಮಾತ್ರ ನಮ್ಮ ಸಾಧನೆ, ಸತ್ಕರ್ಮಾಚರಣೆ, ಜ್ಞಾನ-ದಾನಗಳು ನೆರವೇರಲು ಸಾಧ್ಯವಾಗುತ್ತದೆ. ಯಾವ ಆಹಾರಗಳು ದೇಹದ ಆರೋಗ್ಯದ ದೃಷ್ಟಿಯಿಂದ ಹಿತಕರವಾಗುತ್ತವೋ ಅವುಗಳನ್ನು ಸಾತ್ವಿಕವೆಂದು ತಿಳಿದುಕೊಳ್ಳಬೇಕು. ಸಿಹಿರೋಗವುಳ್ಳವನು ಸಿಹಿ ಪದಾರ್ಥವನ್ನು ಸಾತ್ವಿಕವೆಂದು ಚೆನ್ನಾಗಿ ಸ್ವೀಕರಿಸಿ ಅನಾರೋಗ್ಯಕ್ಕೆ ತುತ್ತಾಗಬಾರದೆಂದು ಎಚ್ಚರಿಸಿದ್ದಾರೆ. ಸಿಹಿ, ಖಾರ ಮುಂತಾದ ಎಲ್ಲ ಪದಾರ್ಥಗಳನ್ನು ಅವರವರ ದೈಹಿಕ ಆರೋಗ್ಯ ದೃಷ್ಟಿಯ ಹಿನ್ನೆಲೆಯಲ್ಲಿ ಸಾತ್ವಿಕ, ರಾಜಸಗಳೆಂದು ವಿಭಜಿಸಬೇಕು ಎಂಬ ವ್ಯವಹಾರ್ಯವಾದ ನಿಲುವನ್ನು ಶ್ರೀಮಧ್ವಾಚಾರ್ಯರು ತೋರಿದ್ದಾರೆ.

ಜೀವನ ಕರ್ತೃತ್ವ

ನಮ್ಮ ಎಲ್ಲ ವಿಭಿನ್ನ ಪ್ರವೃತ್ತಿಗಳಿಗೆ ಮನಸ್ಸು ಕಾರಣವಾಗಿರುವಂತೆ ಅದಕ್ಕೂ ಮೂಲಭೂತವಾದ ಇನ್ನೊಂದು ಕಾರಣವನ್ನು ನಾವು ತಿಳಿದುಕೊಳ್ಳಬೇಕು. ಚೇತನದ ಸ್ವಭಾವಕ್ಕನುಗುಣವಾಗಿಯೇ ಜಗತ್ತಿನಲ್ಲಿ ಎಲ್ಲ ವ್ಯವಹಾರಗಳು ನಡೆಯುತ್ತವೆ. ಅವರ ವ್ಯಕ್ತಿತ್ವ, ಅವರ ಸಹಜ ಇಚ್ಛೆ ಆಕಾಂಕ್ಷೆ ಸ್ವಭಾವಗಳೇ ಜನರಲ್ಲಿ ಕಂಡುಬರುತ್ತಿರುವ ವೈವಿಧ್ಯ ವೈಚಿತ್ರಗಳಿಗೆ ಕಾರಣವಾಗಿವೆ. ಜನರ ಬಾಹ್ಯವರ್ತನೆಯಿಂದ ಅವರ ಆತ್ಮದ ನಿಜರೂಪವನ್ನು ನಾವು ಸಾಮಾನ್ಯವಾಗಿ ಗುರುತಿಸಬಹುದು, ಕೆಲವೊಮ್ಮೆ ವಿಶಿಷ್ಟ ಕಾರಣಗಳಿಂದಾಗಿ ನಮ್ಮಂತರಂಗ ಸ್ವರೂಪಕ್ಕೆ ವ್ಯತಿರಿಕ್ತವಾಗಿ ಬಾಹ್ಯಕ್ರಿಯೆಗಳು ನಡೆಯಬಹುದಾಗಿದ್ದರೂ ಹೆಚ್ಚಾಗಿ ನಮ್ಮ ಬಾಹ್ಯಕ್ರಿಯೆಗಳಿಂದ ನಮ್ಮ ಆಂತರಿಕ ವ್ಯಕ್ತಿತ್ವವನ್ನು ಊಹಿಸಿಕೊಳ್ಳಲು ಸಾಧ್ಯವಾಗುವುದು. ನಾವು ಮಾಡುವ ಕ್ರಿಯೆಗಳಿಗೆ ಕಾರಣಗಳು ಅನೇಕವಿವೆ. ಶರೀರ, ಇಂದ್ರಿಯ, ವಿವಿಧ ಶಾರೀರಿಕ ಕ್ರಿಯೆಗಳು, ಪುಣ್ಯ-ಪಾಪ ಇವುಗಳಿಲ್ಲದೆ ಯಾವ ಕ್ರಿಯೆಯೂ ಘಟಿಸಲಾರದು. ಆದರೆ ನಾವು ಇದನ್ನೆಲ್ಲ ಮರೆತು ನಾನೊಬ್ಬನೇ ಮಾಡಿದೆನೆಂದು ಭ್ರಮಿಸುತ್ತೇವೆ. ಕರ್ತೃತ್ವದ ಈ ಅಹಂಕಾರವನ್ನು ನಾವು ತೊರೆಯಬೇಕು.

ಭಗವಂತನೇ ಸರ್ವಕರ್ತನಾಗಿದ್ದರೆ ಜೀವರಿಗೆ ಶಾಸ್ತ್ರದ ವಿಧಿ ನಿಷೇಧಗಳು ಏಕೆ ಎಂಬ ಪ್ರಶ್ನೆ ಉಂಟಾಗಬಹುದು. ಭಗವಂತನ ಇಚ್ಛೆಯಿಂದ ವಿವಿಧ ಭೌತಿಕ ಪದಾರ್ಥಗಳ ಸಹಕಾರದಿಂದ ಜೀವರಲ್ಲಿ ಜ್ಞಾನ, ಇಚ್ಛಾ ಪ್ರವೃತ್ತಿಗಳು ಹುಟ್ಟುತ್ತವೆ. ಜೀವನು ಮನೆ, ಮಡಿಕೆಯಂತೆ ಜಡವಸ್ತುವೇನೂ ಅಲ್ಲ. ವಿವಿಧ ಕಾರಣಗಳ ಪರಿಣಾಮವಾಗಿ ತನ್ನಲ್ಲಿ ಉಂಟಾಗುವ ಜ್ಞಾನ ಇಚ್ಛೆಗಳಿಂದ ವಿವಿಧ ಕಾರ್ಯಗಳಲ್ಲಿ ತೊಡಗಲು ಅವನಿಗೆ ಅವಕಾಶವಿದೆ. ಆದರೆ ತಾನೇ ಸ್ವತಂತ್ರಕರ್ತನು ತನ್ನ ಮೇಲೆ ಯಾರ ನಿಯಂತ್ರಣವೂ ಇಲ್ಲ ಎಂಬ ಅಹಂಕಾರದಿಂದ ವರ್ತಿಸಬಾರದೆಂಬುದೇ ಗೀತೆಯ ಆಶಯವಾಗಿದೆ. ನಮಗೆ ಕರ್ತೃತ್ವವೇ ಇಲ್ಲ ಎಂಬುದಾಗಿ ಭಾವಿಸಿ ನಿಷ್ಕ್ರಿಯರಾಗಬಾರದು.

ಕರ್ಮತ್ಯಾಗ ಮತ್ತು ಕರ್ಮಯೋಗಗಳ ಸಮನ್ವಯ

ಯಜ್ಞ, ದಾನ ತಪಸ್ಸುಗಳನ್ನು ಎಲ್ಲರೂ ಕಡ್ಡಾಯವಾಗಿ ಮಾಡಲೇಬೇಕು. ಯಾರೂ ಅದನ್ನು ಪರಿತ್ಯಜಿಸಬಾರದು. ''ಯಜ್ಞ ದಾನ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್'' ಎಂಬುದಾಗಿ ಗೀತೆಯಲ್ಲಿ ಹೇಳಿದೆ. ಆದರೆ ವಿರಕ್ತರಾದ ಪರಿವ್ರಾಜಕರಾದ ಸನ್ಯಾಸಿಗಳಿಗೆ ಯಾವ ಸೊತ್ತು ಇರಲು ಸಾಧ್ಯವಿಲ್ಲ. ಅವರು ದಾನ ಮಾಡುವುದು ಹೇಗೆ ? ಯಜ್ಞದಲ್ಲಂತೂ ಅವರಿಗೆ ಅಧಿಕಾರವೇ ಇಲ್ಲ. ಹೀಗಿರುವಾಗ ಯಜ್ಞ, ಯಾಗಾದಿಗಳು ಎಲ್ಲರಿಗೂ ಕಡ್ಡಾಯವಾಗುವುದು ಸಾಧ್ಯವಿಲ್ಲವೆಂದು ನಮಗೆ ಅನಿಸಬಹುದು. ಆದರೆ ಗೀತೆಯಲ್ಲಿ ಯಜ್ಞದ ಅನೇಕ ಪ್ರಕಾರಗಳನ್ನು ನಿರೂಪಿಸಲಾಗಿದೆ. ಭಗವಂತನಿಗೆ ಪ್ರೀತಿಕರವಾದ ಎಲ್ಲ ಸತ್ಕಾರ್ಯವು ಯಜ್ಞವೆ ಆಗಿದೆ. ಧ್ಯಾನ, ಪ್ರವಚನ ಮುಂತಾದ ಯಜ್ಞಗಳಿವೆ. ಅಭಯದಾನ ಮುಂತಾದ ದಾನಗಳಿವೆ. ಆದುದರಿಂದ ಸಂನ್ಯಾಸಿಗಳು ಯಜ್ಞದಾನಾದಿಗಳನ್ನು ಅವಶ್ಯವಾಗಿ ಮಾಡಬೇಕು.

ಕರ್ಮವನ್ನು ತ್ಯಜಿಸಬೇಕೆಂದು ಶಾಸ್ತ್ರ ವಾಕ್ಯಗಳಿದ್ದರೆ ಆಸಕ್ತಿ , ಫಲದ ಅಪೇಕ್ಷೆ ಸ್ವಾತಂತ್ರ್ಯಾಭಿಮಾನ ವನ್ನು ತೊರೆಯಬೇಕೆಂದೇ ಅರ್ಥವಲ್ಲದೇ ಕರ್ತವ್ಯವನ್ನೇ ಬಿಡಬೇಕೆಂದು ಭಾವಿಸಬಾರದು. ಹೀಗೆ ಕರ್ಮತ್ಯಾಗ ಮತ್ತು ಕರ್ಮಯೋಗದ ಸಮನ್ವಯವನ್ನು ಭಗವದ್ಗೀತೆಯು ನಮಗೆ ತಿಳಿಸಿ ಕೊಟ್ಟಿದೆ.

ಸಾತ್ವಿಕ ಜ್ಞಾನ

ಗೀತೆಯು ಸಾತ್ವಿಕ, ರಾಜಸ, ತಾಮಸ ಜ್ಞಾನಗಳನ್ನು ವಿಶ್ಲೇಷಣೆ ಮಾಡಿ ವಿವರಿಸಿದೆ. ಈ ಜಗತ್ತಿನಲ್ಲಿರುವ ಜೀವ ಜಡ ಪದಾರ್ಥಗಳೆಲ್ಲ ಭಿನ್ನ ಭಿನ್ನವಾಗಿದೆ. ಇವುಗಳಲ್ಲಿ ನೆಲೆಸಿರುವ ಪರಮಾತ್ಮನು ಒಬ್ಬನೇ ಆಗಿದ್ದಾನೆ. ಹೀಗೆ ವಸ್ತುಗಳ ಭಿನ್ನತೆಯಲ್ಲಿ ಈ ಎಲ್ಲ ವಸ್ತುಗಳಿಂದ ಭಿನ್ನವಾದ ಇವುಗಳಲ್ಲಿ ವ್ಯಾಪಿಸಿರುವ ಸರ್ವೋತ್ತಮನಾದ ಪರಮಾತ್ಮನ ಏಕತೆಯನ್ನು ತಿಳಿಯುವುದೇ ಸಾತ್ವಿಕವಾದ ಜ್ಞಾನವಾಗಿದೆ, ಪರಮಾತ್ಮನನ್ನು ತಿಳಿಯದೆ ಉಳಿದ ವಸ್ತುಗಳನ್ನು ಮಾತ್ರ ತಿಳದುಕೊಳ್ಳುವುದು ರಾಜಸ ಜ್ಞಾನವಾಗಿದೆ. ನಾನಾ ವಿಧವಾದ ಭೌತಿಕ ವಸ್ತುಗಳ ಸಂಶೋಧನಾತ್ಮಕವಾದ ಆಧುನಿಕ ವಿಜ್ಞಾನವನ್ನು ರಾಜಸ ಜ್ಞಾನದಲ್ಲಿ ಪರಿಗಣಿಸಬಹುದು. ಜೀವನನ್ನಾಗಲೀ, ಪರಮಾತ್ಮನನ್ನಾಗಲೀ ಜಡವಸ್ತುಗಳನ್ನಾಗಲೀ ತಪ್ಪಾಗಿ ತಿಳಿದುಕೊಳ್ಳುವ ವಿಪರೀತ ಜ್ಞಾನವನ್ನು ತಾಮಸ ಜ್ಞಾನವೆಂದು ಕರೆಯಬಹುದು. ಪ್ರತ್ಯಕ್ಷ ಗೋಚರವಾದ ಜಡ ಪದಾರ್ಥಗಳನ್ನು ಮಾತ್ರ ಸತ್ಯವೆಂದು ತಿಳಿದು ಅತೀಂದ್ರಿಯ ವಸ್ತುಗಳನ್ನು, ಆತ್ಮನನ್ನು ಅಲ್ಲಗಳೆಯುವ ನಾಸ್ತಿಕ್ಯವಾದವು ಏಕದೇಶ ಜ್ಞಾನವಾಗಿದೆ. ನಾವು ಅನುಭವಿಸುತ್ತಿರುವ ಆತ್ಮನನ್ನು ಮಾತ್ರ ಸತ್ಯವೆಂದು ಭಾವಿಸಿ ಉಳಿದ ಪದಾರ್ಥವನ್ನೆಲ್ಲ ಅಲ್ಲಗಳೆಯುವುದನ್ನು ಏಕದೇಶ ಜ್ಞಾನವೆಂದು ಕರೆಯಬಹುದು. ಹೀಗೆ ನಾವು ತಿಳಿದು ಕೊಂಡಿರುವ ಏಕದೇಶವನ್ನೇ ಸಮಗ್ರವೆಂದು ಭಾವಿಸುವ ಜ್ಞಾನವು ತಾಮಸ ಜ್ಞಾನವೆನಿಸಿದೆ. ಜಡಜೀವ ಪರಮಾತ್ಮರ ಅಸ್ತಿತ್ವವನ್ನು, ಭಿನ್ನತೆಯನ್ನು ಒಪ್ಪಿ ಸರ್ವೋತ್ತಮನಾದ ಒಬ್ಬನೇ ಒಬ್ಬನಾದ ಭಗವಂತನನ್ನು ಅಂಗೀಕರಿಸುವುದೇ ಸರಿಯಾದ ಜ್ಞಾನ ಇದನ್ನೇ ಸಾತ್ವಿಕ ಜ್ಞಾನವೆಂದು ಗೀತೆಯು ಕರೆದಿದೆ.

ಗೀತೆಯು ಹೇಳಿದ ವರ್ಣಧರ್ಮ

ಶಮದಮಾದಿಗಳು ಬ್ರಾಹ್ಮಣನ ಗುಣವೆಂದು ಗೀತೆಯಲ್ಲಿ ಹೇಳಿದೆ. ಆದರೆ ಬ್ರಾಹ್ಮಣರಲ್ಲಿಯೂ ಶಮದಮಾದಿಗಳು ಕಡಿಮೆ ಇರುವುದನ್ನು ನಾವು ನೋಡುತ್ತೇವೆ. ಬ್ರಾಹ್ಮಣೇತರಲ್ಲಿಯೂ ಶಮದ ಮಾದಿಗಳು ವಿಶೇಷವಾಗಿರುತ್ತವೆ. ಹೀಗಿರುವಾಗ ಶಮಾದಿ ಗುಣಗಳನ್ನಾಧರಿಸಿ ಜಾತಿ ವಿಭಾಗವನ್ನು ಗೀತೆಯು ಮಾಡಿರುವುದು ಸರಿಯೇ ? ಎಂಬ ಆಕ್ಷೇಪವನ್ನು ಶ್ರೀಮಧ್ವಾಚಾರ್ಯರು ಪರಿಹರಿಸಿದ್ದಾರೆ.

ಗೀತೆಯು ಮಾಡಿದ ವರ್ಣ ವಿಭಾಗವು ಹುಟ್ಟನ್ನು ಆಧರಿಸಿದ ಪ್ರಚಲಿತವಾದ, ಶಾರೀರಿಕವಾದ ಜಾತಿ ವಿಭಾಗವಲ್ಲ. ಆತ್ಮನ ಮೂಲಭೂತವಾದ ಸದ್ಗುಣ ಮತ್ತು ವ್ಯಕ್ತಿತ್ವವನ್ನು ಅವಲಂಬಿಸಿ ಸಜ್ಜನರನ್ನು ಈ ನಾಲ್ಕು ರೀತಿಯಾಗಿ ವಿಭಾಗಿಸಲಾಗಿದೆ. ಬ್ರಾಹ್ಮಣೇತರಲ್ಲಿ ಶಮಾದಿಗುಣಗಳು ಹೆಚ್ಚಿದ್ದರೆ ಅವರು ಆಂತರಿಕ ವ್ಯಕ್ತಿತ್ವದಿಂದ ಬ್ರಾಹ್ಮಣರಾಗಿರುತ್ತಾರೆಂದೇ ತಿಳಿಯಬೇಕು. ಬ್ರಾಹ್ಮಣರಲ್ಲಿ ಈ ಗುಣಗಳು ಕಡಿಮೆ ಇದ್ದರೆ ಅವರು ಆಂತರಿಕವಾಗಿ ಬ್ರಾಹ್ಮಣರೆನಿಸುವುದಿಲ್ಲ. ಜೀವಾತ್ಮರ ಶ್ರೇಷ್ಠತೆ ಮತ್ತು ನಿಕೃಷ್ಟತೆಯನ್ನು ಅವರ ಹುಟ್ಟಿನಿಂದಲೇ ತಿಳಿದುಕೊಳ್ಳದೆ ಆಂತರಿಕ ಗುಣಗಳಿಂದಲೇ ನಿರ್ಧರಿಸಬೇಕು. ಅದರಿಂದಲೇ ಅವನ ಸಜ್ಜನಿಕೆಯನ್ನು ನಾವು ಗುರುತಿಸಬೇಕು.

ಆದುದರಿಂದ ಬ್ರಾಹ್ಮಣರಲ್ಲಿ ಹೇಳಿದ ಶಮದಮಾದಿ ಗುಣಗಳನ್ನು ಬ್ರಾಹ್ಮಣರಲ್ಲಿ ಮಾತ್ರ ಸೀಮಿತಗೊಳಿಸದೆ ಎಲ್ಲರೂ ತಮಗೆ ಸಾಧ್ಯವಿದ್ದ ರೀತಿಯಲ್ಲಿ ಆ ಗುಣವನ್ನು ಬೆಳೆಸಲು ಪ್ರಯತ್ನ ಮಾಡಬೇಕು. ಅದರಂತೆ ಸಮಾಜದ ವ್ಯವಸ್ಥೆಗಾಗಿ ಅನುವಂಶಿಕವಾಗಿ ಏರ್ಪಡಿಸಲಾದ ವರ್ಣಾಶ್ರಮೋಚಿತ ಕರ್ತವ್ಯಗಳನ್ನೂ ನಾವು ಆಚರಿಸಬೇಕು. ನಮ್ಮ ನಮ್ಮ ಕರ್ತವ್ಯಗಳಿಂದ ಭಗವಂತನನ್ನು ಆರಾಧನೆ ಮಾಡಬೇಕೆಂಬುದನ್ನೂ ಗೀತೆಯು ಒತ್ತಿ ಹೇಳಿದೆ.

ಶರಣಾಗತಿ

''ಸರ್ವಧರ್ಮಾನ್ ಪರಿತ್ಯಜ್ಯ'' ಎಂಬುದಾಗಿ ಹೇಳಿದ ಸರ್ವಧರ್ಮ ಪರಿತ್ಯಾಗವೆಂದರೆ ಕರ್ತವ್ಯದ ತ್ಯಾಗವಲ್ಲ, ಫಲ ಮತ್ತು ಆಸಕ್ತಿಯ ತ್ಯಾಗವೆಂದು ಈಗಾಗಲೇ ವಿಶದೀಕರಿಸಲಾಗಿದೆ. ಎಲ್ಲ ಧರ್ಮಗಳನ್ನು ತೊರೆದು ನನ್ನಲ್ಲಿ ಶರಣಾಗತನಾಗು ಎಂದು ಇಲ್ಲಿ ಹೇಳಲಾಗಿದೆ. ಭಗವಂತನನ್ನು ಶರಣಾಗುವುದು ಕೂಡ ಒಂದು ಧರ್ಮವಲ್ಲವೆ ? ಈ ಹಿನ್ನೆಲೆಯಲ್ಲಿ ಭಾಗವತ ಧರ್ಮದ ಹೊರತು ಇತರ ಧರ್ಮಗಳನ್ನು ಬಿಡಬೇಕು. ಭಗವತ್ ಪ್ರಜ್ಞೆ ಇಲ್ಲದೆ ಮಾಡುವ ಲೌಕಿಕ ಸ್ವಾರ್ಥಪೂರ್ಣ ಕಾರ್ಯವನ್ನು ಬಿಡಬೇಕು ಎಂದೇ ಅರ್ಥವಾಗುತ್ತದೆ. ಭಗವತ್ ಸೇವಾರೂಪವಾದ ಕರ್ತವ್ಯವನ್ನು ಬಿಡಬೇಕೆಂದು ಅರ್ಥವಾಗುವುದಿಲ್ಲ.

ಶರಣಾಗತಿ ಎಂದರೆ ಏನು ಎಂಬುದನ್ನು ಆಚಾರ್ಯರು ವಿವರಿಸಿದ್ದಾರೆ. ಭಗವಂತನು ಸರ್ವೋತ್ತಮನೆಂದು ತಿಳಿದು ಅವನಲ್ಲಿ ಅತ್ಯಂತ ಪ್ರೇಮಭಾವದಿಂದ ಸಕಲ ಕರ್ತವ್ಯಗಳನ್ನು ಅರ್ಪಿಸಬೇಕು. ಮಾನಸಿಕವಾಗಿಯೂ ಶಾರೀರಿಕವಾಗಿಯೂ ವಾಚಿಕವಾಗಿಯೂ ಅಖಂಡವಾಗಿ ಸಹಜವಾಗಿ ಭಗವಂತನನ್ನು ಪೂಜಿಸಬೇಕು. ಭಗವಂತನು ನಮಗೆ ಸ್ವಾಮಿ, ನಾನು ಭಗವಂತನಿಗೆ ಸೇರಿದವನು, ಪರಮಾತ್ಮನು ನಮ್ಮನ್ನು ಖಂಡಿತವಾಗಿಯೂ ರಕ್ಷಿಸುವನು ಎಂಬ ದೃಢ ವಿಶ್ವಾಸದಿಂದ ವರ್ತಿಸುವುದೇ ಶರಣಾಗತಿ ಎನಿಸಿದೆ. ಇದೇ ಭಗವದ್ಗೀತೆಯ ಮುಖ್ಯ ಸಂದೇಶವಾಗಿದೆ. ಈ ಶಾಸ್ತ್ರಸಾರವನ್ನು ಹೇಳಿ ಶ್ರೀಕೃಷ್ಣನು ಉಪಸಂಹಾರ ಮಾಡಿದ್ದಾನೆ.

ಸ್ವವಿಹಿತವೃತ್ತ್ಯಾ ಭಕ್ತ್ಯಾ ಭಗವದಾರಾಧನಂ ಪರಮೋ ಧರ್ಮಃ । (ಗಿ.ತಾ.)

ಎಂದು ಒಂದು ಮಾತಿನಲ್ಲಿ ಶ್ರೀಮಧ್ವಾಚಾರ್ಯರು ಗೀತೆಯ ಉಪದೇಶದ ಸಾರವನ್ನು ಅರುಹಿದ್ದಾರೆ. ''ವಿಹಿತ ವೃತ್ತಿಯಿಂದ ಭಕ್ತಿಯಿಂದ ಭಗವಂತನನ್ನು ಆರಾಧಿಸುವುದೇ ಮಾನವರ ಪರಮ ಧರ್ಮವಾಗಿದೆ,'' ಸಂಸಾರ ಪಾಶದಲ್ಲಿ ಸಿಲುಕದಿರಲು ಮತ್ತು ಪ್ರಕೃತಿಬಂಧನದಿಂದ ಪೂರ್ಣ ವಿಮೋಚನೆ ಪಡೆಯಲು ಇದೇ ಜೀವನಿಗಿರುವ ಏಕಮಾತ್ರ ಉಪಾಯವಾಗಿದೆ. ಪ್ರಕೃತಿಗೆ ಹೆದರಿಯಾಗಲೀ ಉದಾಸೀನತೆಯಿಂದಾಗಲೀ ಕರ್ತವ್ಯವನ್ನು ತ್ಯಜಿಸುವುದರಿಂದ ನಾವು ಯಾವ ಪುರುಷಾರ್ಥವನ್ನೂ ಪಡೆಯಲಾರೆವು. ಅದರಂತೆ ಲೌಕಿಕ ಸುಖದ ಬಯಕೆಯಿಂದ ಸ್ವಾರ್ಥಪರಾಯಣರಾಗಿ ಕಾಮ್ಯ ಕೃತಿಗಳನ್ನೇ ನಡೆಸಿ ಪ್ರಾಕೃತ ಸುಖವನ್ನು ಸವಿಯುತ್ತಿದ್ದರೆ ಆ ಪ್ರಕೃತಿಯೇ ನಮ್ಮನ್ನು ಕಬಳಿಸಬಹುದು.

ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ।

ನಮ್ಮ ಕರ್ತವ್ಯಗಳನ್ನು ಹರಿಪೂಜೆಯೆಂದು ಭಾವಿಸಿ ನಿಷ್ಕಾಮನೆಯಿಂದ ಅದನ್ನು ಆಚರಿಸಬೇಕು. ವಿಷಯ ಸುಖದ ಮೇಲಿನ ವಿರಕ್ತಿಯಿಂದ ಈ ನಿಷ್ಕಾಮನೆಯನ್ನು ನಾವು ಅಳವಡಿಸಿಕೊಳ್ಳಬಹುದು. ಹರಿಭಕ್ತಿ ಮತ್ತು ವಿಷಯಾವಿರಕ್ತಿ ಇವೆರಡೂ ನಮ್ಮ ಪ್ರತಿಯೊಂದು ಕರ್ತವ್ಯದಲ್ಲಿಯೂ ಅಡಕವಾಗಿದ್ದಲ್ಲಿ ನಾವು ನಿರ್ಭೀತಿಯಿಂದ ಯಾವ ವಿಪ್ಲವಕ್ಕೂ ಗುರಿಯಾಗದಂತೆ ಜಗತ್ತಿನಲ್ಲಿ ನಡೆಯಲು ಸಾಧ್ಯವಾಗುವುದು. ಸಂಸಾರವನ್ನು ಈಸಿ ಅದನ್ನು ಜಯಿಸಲು ನಮಗೆ ಏನೂ ಪ್ರಯಾಸವಾಗಲಾರದು. ಪ್ರಾಪಂಚಿಕ ಜೀವನದಿಂದ ನಾವು ವಿಮುಖರೂ ಆಗಬಾರದು, ಪ್ರಪಂಚದಲ್ಲಿಯೇ ತಲ್ಲೀನರೂ ಆಗಬಾರದು. ಇಂದು ಈ ಎರಡು ವಿಧದ ಪ್ರವೃತ್ತಿಗಳನ್ನು ಎಲ್ಲೆಡೆಗಳಲ್ಲಿಯೂ ನೋಡುತ್ತಿರುವೆವು , ಆಲಸ್ಯ , ಕರ್ತವ್ಯ ಭ್ರಷ್ಟತೆಗಳು ಒಂದೆಡೆ ವ್ಯಾಪಿಸಿದ್ದರೆ, ಸಂಪತ್ತು ಅಧಿಕಾರಗಳ ಮೇಲಿನ ಮೋಹದಿಂದ ಸ್ವಾರ್ಥ ಪ್ರವೃತ್ತಿಗಳಲ್ಲಿ ಪೂರ್ಣವಾಗಿಮಗ್ನವಾಗಿರುವ ಜನ ಇನ್ನೊಂದೆಡೆ ; ಜಗತ್ತು ಮಾಯೆಯೆಂದಾಗಲೀ ಬಂಧನವೆಂದಾಗಲೀ ಭಾವಿಸಿ ಕರ್ತವ್ಯವನ್ನು ತೊರೆಯುವುದು ಮತ್ತು ಈಶ್ವರನನ್ನು ಮರೆತು ಅಥವಾ ಅಲಕ್ಷಿಸಿ ರಾಗದ್ವೇಷಪೂರ್ಣ ಕೃತಿಗಳಲ್ಲಿಯೇ ಆಸಕ್ತರಾಗಿರುವುದು, ಈ ಎರಡು ತರದ ಜೀವನ ರೀತಿಗಳು ನಮ್ಮ ಮುಂದಿದ್ದು ಇವೆರಡೂ ನಮ್ಮ ಪ್ರಗತಿಗೆ ಪ್ರತಿರೋಧಗಳಾಗಿವೆ. ನಮಗೆ ಜೀವನದಿಂದ ವಿಮುಖವಾದ ಧರ್ಮವೂ ಬೇಡ. ಧರ್ಮದಿಂದ ವಿಮುಖವಾದ ಜೀವನವೂ ಸಲ್ಲದು. ಧರ್ಮ ಭಕ್ತಿಗಳನ್ನು ಅಳವಡಿಸಿಕೊಂಡು ಉದಾತ್ತ ಜೀವನ ರೀತಿಯನ್ನು ನಾವಿಂದೂ ರೂಪಿಸಿಕೊಳ್ಳಬೇಕು. ತಾಮಸ, ರಾಜಸ ಪ್ರವೃತ್ತಿಗಳಿಗೆ ನಾವೆಂದೂ ತಲೆ ಬಾಗದೆ ನಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಪರಮಾತ್ಮನ ಭಕ್ತಿಯ ಹಿನ್ನೆಲೆಯಲ್ಲಿ ಆಚರಿಸುವುದರಿಂದಲೇ ಜೀವನದ ಮಹೋನ್ನತ ಶ್ರೇಯಸ್ಸನ್ನು ನಾವು ಪಡೆಯಬಲ್ಲೆವು. ಗೀತೆಯು ಮಾನವ ಜಗತ್ತಿಗೆ ಸಾರಿದ ಮಂಗಲಮಯ ಸಂದೇಶವೇ ಇದಾಗಿದೆ.

ಪರಮಾತ್ಮನ ಮುಖದಿಂದ ಹೊರಟ ಉಪದೇಶದ ಅಮೃತಧಾರೆಯಿಂದ ಅರ್ಜುನನ ಅಂತಃಕರಣ ಪಟಲದಲ್ಲಿ ಅಂಟಿದ ಮೋಹ ಮಲಗಳೆಲ್ಲ ಪೂರ್ತಿಯಾಗಿ ಕೊಚ್ಚಿ ಹೋದವು. ಅವನ ಹೃದಯದಲ್ಲಿ ಸುಪ್ತವಾಗಿದ್ದ ಜ್ಞಾನದ ದಿವ್ಯಾಂಕುರವು ಚಿಗುರಿ ವಿಕಸಿತವಾಯಿತು.

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ ಪ್ರಸಾದಾನ್ಮಯಾಚ್ಯುತ ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥

''ನನ್ನ ಮೋಹದ ನಿರಸನವಾಗಿದೆ. ಮೋಹದಿಂದ ಉಂಟಾದ ಅಭಿಭವದಿಂದ ಕಳೆದು ಹೋದಂತಿರುವ ಜ್ಞಾನದ ನಿಧಿಯನ್ನು ನಿನ್ನ ಅನುಗ್ರಹದಿಂದ ತಿರುಗಿ ಪಡೆದೆ. ನನ್ನ ಸಂದೇಹ ಸಮಸ್ಯೆಗಳ ನಿವಾರಣೆಯಾಗಿದೆ. ನಿನ್ನ ಆಜ್ಞೆಯಂತೆ ಕರ್ತವ್ಯ ರಂಗಕ್ಕೆ ಧುಮುಕುವೆ'' ಎಂದು ಅರ್ಜುನನು ಪ್ರಸನ್ನ ಹೃದಯದಿಂದ ಭಕ್ತಿ ಉತ್ಸಾಹಗಳಿಂದ ಪರಮಾತ್ಮನಲ್ಲಿ ನಿವೇದಿಸುತ್ತಾನೆ. ಅರ್ಜುನನಿಗೆ ಬಂದಿರುವ ಸಂದರ್ಭ ಸನ್ನಿವೇಶಗಳು ನಮ್ಮೆಲ್ಲರ ಜೀವನದಲ್ಲಿಯೂ ಅನುದಿನವೂ ಸಂಭವಿಸುತ್ತವೆ. ಗೀತೆಯ ಸಂದೇಶವು ಅರ್ಜುನನಿಗೆ ಮಾತ್ರ ಸೀಮಿತವಲ್ಲ. ಜಗತ್ತಿನ ಮಾನವರೆಲ್ಲರ ಜೀವನದ ಗೊಂದಲ ವಿಪ್ಲವಗಳನ್ನು ಪರಿಹರಿಸಿ ಉದಾತ್ತ ರೀತಿಯ ಕರ್ತವ್ಯದ ಸ್ಫೂರ್ತಿಯನ್ನು ಗೀತೆಯು ನಮಗೆ ನೀಡುತ್ತಿದೆ. ಭಾರತದ ಮಹಾ ಯುದ್ಧದಲ್ಲಿ ಒಂದೇ ರಥದಲ್ಲಿ ಅರ್ಜುನನ ಜೊತೆಗೆ ಶ್ರೀಕೃಷ್ಣನು ಸಾರಥಿಯಾಗಿದ್ದು ಹೆಜ್ಜೆ ಹೆಜ್ಜೆಗೂ ಸ್ಫೂರ್ತಿದಾತನಾಗಿ ಅವನನ್ನು ಮುನ್ನಡೆಸಿದ್ದಾನೆ. ಅರ್ಜುನನು ನರನಾಗಿದ್ದರೆ ಶ್ರೀಕೃಷ್ಣನು ನಾರಾಯಣನಾಗಿದ್ದಾನೆ. ಈ ನರ -ನಾರಾಯಣರ ಜೊತೆಯಿಂದಲೇ ಅಲ್ಲಿ ವಿಜಯ ಭೂತಿ ನೀತಿಗಳ ಸಮಾವೇಶವಾಗಿದೆ.

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿಃ ಧ್ರುವಾ ನೀತಿರ್ಮತಿರ್ಮಮ ॥

ನಮ್ಮ ಜೀವನದ ಯುದ್ಧರಂಗದಲ್ಲಿಯೂ ಈ ನರರಿಗೆ ನಾರಾಯಣನೇ ಸಾರಥಿಯಾಗಿರಬೇಕು. ನರರಿಗೆ ತಮ್ಮ ಜೀವನದಲ್ಲಿ ನಾರಾಯಣನ ವಿಯೋಗವಾದುದರಿಂದಲೇ ಇಂದು ಎಲ್ಲೆಡೆಗಳಲ್ಲಿಯೂ ಅನೀತಿ ಮತ್ತು ಆರ್ಥಿಕ ಸಂಕಟದ, ದುಃಖದ ದೃಶ್ಯವನ್ನು ನಾವು ನೋಡುತ್ತಿರುವೆವು. ನಮ್ಮ ಜೀವನದಲ್ಲಿ ನರ - ನಾರಾಯಣರ ಸಮಾಗಮವಾಗಬೇಕು. ಭಗವಂತನನ್ನು ನಾವು ನಮ್ಮ ಸಾರಥಿ, ಸ್ಫೂರ್ತಿದಾತ ಹಾಗೂ ಮಾರ್ಗದರ್ಶಕನನ್ನಾಗಿ ಆರಿಸಬೇಕು. ಆಗಲೇ ನಮ್ಮ ಜೀವನವು ದೈವೀ ಸಂಪತ್ತಿನ ಆಗರವಾಗುವುದು.

(ಶ್ರೀ ಸರ್ವಮೂಲ ಗ್ರಂಥಗಳು, ಸಂಪುಟ – ೧. ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯ. ಅನುವಾದಕರು – ಹಯವದನ ಪುರಾಣಿಕ, ಎ. ಹರಿದಾಸ ಭಟ್ಟ, ೧೯೯೩. ಪ್ರ – ಅಖಿಲ ಭಾರತ ಮಾಧ್ವ ಮಹಾಮಂಡಲ, ಆನಂದತೀರ್ಥ ಪ್ರತಿಷ್ಠಾನ, ಬೆಂಗಳೂರು. ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರು ಬರೆದಿರುವ 'ಗೀತಾಂಜಲಿ' ಎಂಬ ಕಿರುಹೊತ್ತಗೆ ಈ ಗ್ರಂಥದಲ್ಲಿದೆ. ನೋಡಿ – ೩–೨೯. 'ಭಗವದ್ಗೀತೆ' ಯ ಮೇಲಿನ ಶ್ರೀ ವಿಶ್ವೇಶತೀರ್ಥರ ಸುದೀರ್ಘ ವ್ಯಾಖ್ಯಾನ 'ಗೀತಾಸಾರೋದ್ಧಾರ' ಗ್ರಂಥದಲ್ಲಿದೆ – ಸಂ.)

●

೩ - ೧೪

ಕೃಷ್ಣಾಮೃತ ಮಹಾರ್ಣವ

ಪುರಾಣಗಳಲ್ಲಿರುವ ಅನೇಕ ಮಹರ್ಷಿಗಳ ವಾಕ್ಯಗಳನ್ನು ಸಂಗ್ರಹಿಸಿ ಹರಿಭಕ್ತಿಯ ಮಹಿಮೆಯನ್ನು ಶ್ರೀಮಧ್ವಾಚಾರ್ಯರು 'ಕೃಷ್ಣಾಮೃತ ಮಹಾರ್ಣವ'ದಲ್ಲಿ ವಿವರಿಸಿದ್ದಾರೆ.

''ಸಂಸಾರವಿಷಪಾನೇನ ಯೇ ಮೃತಾಃ ಪ್ರಾಣಿನೋ ಭುವಿ ।
ಅಮೃತಾಯ ಸ್ಮೃತಸ್ತೇಷಾಂ ಕೃಷ್ಣಾಮೃತಮಹಾರ್ಣವಃ ॥ ''

ಶ್ರೀಕೃಷ್ಣನೆಂಬ ಅಮೃತಸಮುದ್ರ ಸಂಸಾರವೆಂಬ ವಿಷವನ್ನು ಪರಿಹರಿಸಬಲ್ಲದು. ಈ ಅಮೃತವನ್ನು ಪಾನಮಾಡಬೇಕಿಲ್ಲ. ಶ್ರೀಕೃಷ್ಣನೆಂಬ ಅಮೃತಸಮುದ್ರದ ಸ್ಮರಣೆಯಿಂದಲೇ ಸಂಸಾರವಿಷವು ಪರಿಹಾರ ಗೊಂಡು ಅಮೃತತ್ವವನ್ನು ಪಡೆಯಬಹುದು.

''ಇಂದ್ರಿಯಗಳು ಸುದೃಢವಾಗಿರುವಾಗಲೇ ಭಗವಂತನ ಸ್ಮರಣೆಯನ್ನು ನಾವು ಮಾಡಬೇಕು. ವಯಸ್ಸಾದ ಮೇಲೆ ವಾರ್ಧಕ್ಯದಲ್ಲಿ ದೇವರ ಸ್ಮರಣೆಯನ್ನು ಮಾಡೋಣವೆಂದು ಭಾವಿಸಿ ಈಗ ಭಗವಂತ ನನ್ನು ಮರೆತು ಭೋಗದಲ್ಲಿಯೇ ಕಾಲ ಕಳೆಯಬಾರದು. ವಯಸ್ಸಾದಾಗ, ಇಂದ್ರಿಯಗಳು ದುರ್ಬಲ ಗೊಂಡಾಗ ಭಗವಂತನ ಸ್ಮರಣೆಯು ಸಾಧ್ಯವಾಗುವುದೇ? ಹೀಗಾಗಿ ಯೌವನದಲ್ಲಿಯೂ ವಾರ್ಧಕ್ಯ ದಲ್ಲಿಯೂ ದೇವರ ಸ್ಮರಣೆಯಿಲ್ಲದೆ ನಮ್ಮ ಜೀವನವೇ ವ್ಯರ್ಥವಾಗಬಹುದು. ಆದುದರಿಂದ ಕಾಲವನ್ನು ತಳ್ಳದೆ, ವಿಳಂಬ ಮಾಡದೆ, ಬಾಲ್ಯದಿಂದಲೇ ನಾವು ಧಾರ್ಮಿಕ ಸಾಧನೆಯನ್ನು ಮಾಡಬೇಕು. ಶರೀರ ಸ್ವಾಸ್ಥ್ಯ, ಇಂದ್ರಿಯಗಳ ಪಾಟವವಿರುವಾಗಲೇ ಆಧ್ಯಾತ್ಮಿಕ ಸಾಧನೆಯಲ್ಲಿ ನಾವು ತೊಡಗಬೇಕು. ''

''ಒಂದು ಅತ್ಯಾಶ್ಚರ್ಯವಾದ ಸಂಗತಿಯನ್ನು ಈ ಪ್ರಪಂಚದಲ್ಲಿ ನಾವು ನೋಡುತ್ತಿದ್ದೇವೆ. 'ನಾರಾಯಣ' ಎನ್ನುವ ದಿವ್ಯಮಂತ್ರವಿದೆ. ಅದನ್ನು ಉಚ್ಚರಿಸಲು ನಾಲಗೆಗೆ ಏನೂ ಕಷ್ಟವಿಲ್ಲ. ಹೀಗೆ ಹರಿನಾಮೋಚ್ಚಾರದಂತಹ ಸುಲಭ ಸಾಧನೆಯಿದ್ದರೂ ಅದನ್ನು ನಡೆಸದೆ ನರಕದ ದಾರಿಯಲ್ಲಿ ಜನರು ಸಾಲು ಹಿಡಿದು ಸಾಗುವುದನ್ನು ಕಂಡು ಆಶ್ಚರ್ಯವಾಗುತ್ತದೆ .''

''ಹೃದಯದಲ್ಲಿ ಶ್ರೀಹರಿಯ ರೂಪವನ್ನು, ಬಾಯಲ್ಲಿ ಭಗವಂತನ ಮಧುರನಾಮವನ್ನು ಉದರದಲ್ಲಿ ಭಗವಂತನ ದಿವ್ಯ ಪ್ರಸಾದವನ್ನು, ಮಸ್ತಕದಲ್ಲಿ ಅವನ ನಿರ್ಮಾಲ್ಯ, ಪಾದೋದಕಗಳನ್ನು ಧರಿಸಿದರೆ ಅವನಿಗೆ ಜೀವನದಲ್ಲಿ ಪತನವೇ ಇಲ್ಲ. ನಿರಂತರ ಉನ್ನತಿಯನ್ನೇ ಅವನು ಪಡೆಯುತ್ತಾನೆ. ''

''ಪಶ್ಚಾತ್ತಾಪದೊಂದಿಗೆ ನಾವು ಮಾಡುವ ಗೋವಿಂದಸ್ಮರಣೆಯಿಂದ ನಾಶವಾಗದ ಪಾಪವಿದೆಯೇ? ಹತ್ತಿಯನ್ನು ಸುಡಲು ಬೆಂಕಿಗೆ ಪ್ರಯಾಸವೇ? ಹತ್ತಿಯ ರಾಶಿ -ರಾಶಿಯನ್ನು ಬೆಂಕಿಯು ಸುಟ್ಟು ಬೂದಿ ಮಾಡುವಂತೆ ಪಾಪಗಳ ಭಾರೀ ಬೆಟ್ಟವನ್ನೇ ಪಶ್ಚಾತ್ತಾಪ ಪೂರ್ವಕವಾದ 'ಹರಿನಾಮ ಸ್ಮರಣೆ'ಯು ಕ್ಷಣಾರ್ಧದಲ್ಲಿ ನಾಶಮಾಡುತ್ತದೆ.''

''ಭಗವಂತನನ್ನು ಪೂಜಿಸಲು ಹೆಚ್ಚಿನ ವೈಭವದ ಆವಶ್ಯಕತೆಯಿಲ್ಲ. ದೂರ್ವಾಂಕುರಗಳಿಂದ, ಕೇವಲ ನೀರಿನಿಂದಲೂ ಭಕ್ತಿಯಿಂದ ಪೂಜಿಸಿದರೆ ಭಗವಂತನು ಅತಿಶಯಫಲವನ್ನು ನೀಡುತ್ತಾನೆ. ವಾಸುದೇವನ ಆರಾಧನೆಯಿಲ್ಲದೆ ಮೋಕ್ಷವನ್ನು ಪಡೆಯಲು ಪ್ರಯತ್ನಿಸುವುದೆಂದರೆ ಬರೇ ಕೈಗಳಿಂದ ಮಹಾಸಮುದ್ರವನ್ನು ದಾಟಲು ಪ್ರಯತ್ನಿಸಿದಂತೆ. ಶ್ರೀಹರಿಯ ಆರಾಧನೆಯಿಂದಲೇ ಜೀವನದ ಪರಮಸಿದ್ಧಿಯಾದ ಮುಕ್ತಿಯನ್ನು ನಾವು ಪಡೆಯಬಲ್ಲೆವು. ಅವನೊಬ್ಬನೇ ಮೋಕ್ಷದಾತನು .''

ಹೀಗೆ ಅನೇಕ ಪುರಾಣ ವಾಕ್ಯಗಳನ್ನು ಉದಾಹರಿಸಿ, ಹರಿಭಕ್ತಿಯಿಲ್ಲದೆ ನಾವು ಆಧ್ಯಾತ್ಮಿಕ ಸಿದ್ಧಿಯನ್ನು ಪಡೆಯಲಾರೆವು, ಭಕ್ತಿ ಸಾಧನೆಯು ಅತ್ಯಂತ ಸರಳವಾದುದು. ಈ ಸುಲಭ ಮಾರ್ಗದಿಂದ ಭಾರೀ ಫಲವನ್ನು ನಾವು ಪಡೆಯಬಲ್ಲೆವು ಮುಂತಾದ ವಿಷಯಗಳನ್ನು ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಈ ಗ್ರಂಥದಲ್ಲಿ ನಿರೂಪಿಸಲಾಗಿದೆ.

ಈ ಗ್ರಂಥದಲ್ಲಿ ಏಕಾದಶೀ ವ್ರತದ ಮಹತ್ವವನ್ನು ವಿಶೇಷವಾಗಿ ಆಚಾರ್ಯರು ವರ್ಣಿಸಿದ್ದಾರೆ.

''ರಟಂತೀಹ ಪುರಾಣಾನಿ ಭೂಯೋ ಭೂಯೋ ವರಾನನೇ ।
ನ ಭೋಕ್ತವ್ಯಂ ನ ಭೋಕ್ತವ್ಯಂ ಸಂಪ್ರಾಪ್ತೇ ಹರಿವಾಸರೇ ॥''

ಏಕಾದಶೀ ದಿನದಲ್ಲಿ ಭೋಜನವನ್ನು ಮಾಡಬಾರದೆಂದು ಪುರಾಣಗಳು ಸಾರಿ ಸಾರಿ ಹೇಳಿದ್ದಾವೆಂದು ಆಚಾರ್ಯರು ಎಚ್ಚರಿಸುತ್ತಾರೆ. ಎಲ್ಲ ಭೋಗ ಪದಾರ್ಥಗಳನ್ನು ತ್ಯಜಿಸಿ, ಪರಮಾತ್ಮನ ಸೇವೆಗೇ ತನ್ನನ್ನು ಅರ್ಪಿಸಿಕೊಳ್ಳುವ ಮಹಾಸಾಧನೆಗೆ ಸರಿಯಾದ ತರಬೇತಿಯನ್ನು ಏಕಾದಶೀ ಉಪವಾಸ ವ್ರತದಿಂದಲೇ ನಾವು ಪಡೆಯಬಲ್ಲೆವು.

ದೈವಜ್ಞರ ಸಹಾಯದಿಂದ ಸರಿಯಾದ ತಿಥಿಯನ್ನು ತಿಳಿದು ಏಕಾದಶಿಯನ್ನು ಆಚರಿಸಬೇಕು. ಈ ಏಕಾದಶೀ ವ್ರತವು ಬ್ರಾಹ್ಮಣರಿಗೆ ಮಾತ್ರ ಸೀಮಿತವಲ್ಲ. ಸಕಲ ವರ್ಣದವರೂ ಈ ಏಕಾದಶೀ ಉಪವಾಸವನ್ನು ಆಚರಿಸಬೇಕು. ವಿಷ್ಣುಭಕ್ತಿ, ವಿಷ್ಣುದೀಕ್ಷೆ, ವಿಷ್ಣುವ್ರತಗಳು ಒಂದು ಜಾತಿಗೆ ಮಾತ್ರ ಸೀಮಿತವಲ್ಲವೆಂದು ಆಚಾರ್ಯರು ಸ್ಪಷ್ಟವಾಗಿ ಘೋಷಿಸಿದ್ದಾರೆ.

''ಊರ್ಧ್ವಪುಂಡ್ರಮೃಜುಂ ಸೌಮ್ಯಂ ಲಲಾಟೇ ಯಸ್ಯ ವಿದ್ಯತೇ ।
ಸ ಚಂಡಾಲೋಽಪಿ ಶುದ್ಧಾತ್ಮಾ ಪೂಜ್ಯ ಏವ ನ ಸಂಶಯಃ ॥''

ಊರ್ಧ್ವಪುಂಡ್ರಧಾರಿಯಾದ ವಿಷ್ಣುಭಕ್ತನಾದ ಒಬ್ಬ ದಲಿತನೂ ಪರಿಶುದ್ಧ ವ್ಯಕ್ತಿಯೆನಿಸಿ ಗೌರವಾರ್ಹನಾಗುತ್ತಾನೆಂದು ವಿಷ್ಣುಭಕ್ತಿಯ ಮಹತ್ವವನ್ನು ಆಚಾರ್ಯರು ವರ್ಣಿಸಿದ್ದಾರೆ.

ಹೀಗೆ ಕೃಷ್ಣಾಮೃತಮಹಾರ್ಣವದಲ್ಲಿ ಏಕಾದಶೀ ವ್ರತ, ಗೋಪೀಚಂದನ - ಧಾರಣೆಯ ಮಹತ್ವದ ವರ್ಣನೆಯೊಂದಿಗೆ ಹರಿಭಕ್ತಿಯ ನಾನಾ ಮುಖಗಳನ್ನು ತನ್ನ ಭಕ್ತರ ಅಭ್ಯುನ್ನತಿಗಾಗಿ ಆಚಾರ್ಯರು ವಿವರಿಸಿದ್ದಾರೆ.

೩ - ೧೫ ತಂತ್ರಸಾರ ಸಂಗ್ರಹ

ತಂತ್ರಸಾರಸಂಗ್ರಹವು ಶ್ರೀಮಧ್ವಾಚಾರ್ಯರು ರಚಿಸಿದ ಒಂದು ಅಪೂರ್ವ ಕೃತಿಯಾಗಿದೆ. ಭಗವನ್ಮಂತ್ರಗಳ ಜಪ, ಭಗವನ್ಮೂರ್ತಿಯ ಸ್ಥಾಪನೆ, ಪೂಜಾವಿಧಾನ, ದೇವಾಲಯ ನಿರ್ಮಾಣ ಮುಂತಾದ ಎಲ್ಲ ವಿಷಯಗಳನ್ನೂ ಸಂಕ್ಷಿಪ್ತವಾಗಿ ಅಧಿಕಾರಯುತವಾಗಿ ನಿರೂಪಿಸುವ ಈ ಪುಟ್ಟ ಗ್ರಂಥವು ವೈಷ್ಣವಾಗಮಗಳ ಸಾರಗ್ರಂಥವಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಷ್ಟಮಹಾಮಂತ್ರಗಳ ನಿರೂಪಣೆ ಮತ್ತು ಪೀಠ ಪೂಜೆ, ಆವರಣ ಪೂಜೆಯ ವಿವರಣೆಯೊಂದಿಗೆ ಭಗವಂತನ ಪೂಜಾಕ್ರಮವನ್ನು ತಿಳಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕಲಶ ಪೂಜೆ ಮತ್ತು ಕಲಶಾಭಿಷೇಕದ ವಿಧಾನವನ್ನು ನಿರೂಪಿಸಿದ್ದಾರೆ. ಕಲಶದಲ್ಲಿ ಚಿಂತಿಸಬೇಕಾದ ಭಗವದ್ರೂಪಗಳನ್ನೂ ತಿಳಿಸಿದ್ದಾರೆ. ಪ್ರತಿಮೆಯಲ್ಲಿ ಭಗವಂತನ ವಿಶೇಷ ಸನ್ನಿಧಾನಕ್ಕೆ ಈ ಕಲಶಾಭಿಷೇಕವು ಆವಶ್ಯಕವಾಗಿರುವಂತೆ ಶಿಷ್ಯನಿಗೆ ಸನ್ಯಾಸ ದೀಕ್ಷೆಯನ್ನು ನೀಡುವಾಗಲೂ ಅವನಲ್ಲಿ ಹೆಚ್ಚಿನ ಆಧ್ಯಾತ್ಮಿಕ ಶಕ್ತಿಯನ್ನು ತುಂಬಲು ಈ ಕಲಶಾಭಿಷೇಕವನ್ನು ಮಾಡಬೇಕು. ಅದರಂತೆ ಈ ಅಧ್ಯಾಯದಲ್ಲಿ ಹೋಮಕುಂಡದ ಲಕ್ಷಣ-ಪರಿಮಾಣಗಳೊಂದಿಗೆ ಹೋಮದ ವಿಧಾನವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಮೂರನೆಯ ಅಧ್ಯಾಯದಲ್ಲಿ ಪ್ರತಿಮೆಯ ರಚನೆ ಮತ್ತು ದೇವಾಲಯದ ನಿರ್ಮಾಣದ ರೀತಿಯನ್ನು ವಿಸ್ತಾರವಾಗಿ ವಿವೇಚಿಸಿದ್ದಾರೆ. ಶಿಲ್ಪಶಾಸ್ತ್ರಕ್ಕೆ ಇದೊಂದು ಶ್ರೀಮಧ್ವಾಚಾರ್ಯರ ಕೊಡುಗೆಯೆಂದೇ ಹೇಳಬಹುದು. ಪ್ರತಿಮೆಯ ನಿರ್ಮಾಣ, ದೇವಾಲಯದ ವಿನ್ಯಾಸಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಿ ನಿರೂಪಿಸಿರುವ ಆಚಾರ್ಯರ ಪಾಂಡಿತ್ಯ, ಪ್ರತಿಭೆಗಳಿಗೆ ನಾವು ತಲೆಬಾಗಬೇಕು. ವಿಗ್ರಹಗಳ ಆಗಮೋಕ್ತ ಪ್ರತಿಷ್ಠಾ ವಿಧಾನವನ್ನೂ ಈ ಅಧ್ಯಾಯದಲ್ಲಿ ವ್ಯವಸ್ಥಿತವಾಗಿ ನಿರೂಪಿಸಲಾಗಿದೆ. ಅನೇಕ ತಂತ್ರಮಾರ್ಗಗಳಿದ್ದರೂ ಅವುಗಳಲ್ಲಿ ಸುಲಭ ವಿಧಾನವನ್ನು ತಾನಿಲ್ಲಿ ನಿರೂಪಿಸಿದ್ದಾಗಿ ಶ್ರೀಮಧ್ವಾಚಾರ್ಯರು ಸ್ಪಷ್ಟಪಡಿಸಿದ್ದಾರೆ. ತಂತ್ರಮಾರ್ಗದಲ್ಲಿ ಬಹಳ ವಿಸ್ತಾರ ರೀತಿಗಳಿದ್ದರೂ ಕರ್ಮಾನುಷ್ಠಾನದಲ್ಲಿ ಯಾವುದೇ ಚ್ಯುತಿಯಾಗದಂತೆ ಅದರ ಪೂರ್ಣತೆಗೆ ಭಂಗ ಬಾರದಂತೆ ಅತ್ಯಾವಶ್ಯಕವಾದುದನ್ನು ಮಾತ್ರ ತಾನಿಲ್ಲಿ ನಿರೂಪಿಸಿರುವುದಾಗಿ ಆಚಾರ್ಯರು ಹೇಳಿದ್ದಾರೆ.

''ಯಾವತೋ ಹ್ಯನನುಷ್ಠಾನೇ ಕರ್ಮಪೂರ್ತಿರ್ನ ವಿದ್ಯತೇ ।
ತಾವತ್ ಸಮಸ್ತಂ ಕಥಿತಂ ಅಸ್ಮಿನ್ ತಂತ್ರೇ ಯಥಾವಿಧಿ ॥''

ಹೀಗೆ ವಿಸ್ತಾರವಾದ ಕರ್ಮಜಾಲದ ಕೋಲಾಹಲವಿಲ್ಲದ, ಯಾವುದೇ ಕರ್ಮಲೋಪಕ್ಕೂ ಅವಕಾಶವಿಲ್ಲದ ಸುವರ್ಣ ಮಾಧ್ಯಮವನ್ನು ಈ ಗ್ರಂಥದಲ್ಲಿ ಶ್ರೀಮಧ್ವಾಚಾರ್ಯರು ತೋರಿಸಿದ್ದಾರೆ.

ನಾಲ್ಕನೆಯ ಅಧ್ಯಾಯದಲ್ಲಿ ಅನೇಕ ಮಂತ್ರಗಳು, ಅವುಗಳ ಧ್ಯಾನಗಳು, ಅಂಗನ್ಯಾಸ ಮುಂತಾದವುಗಳ ವಿವರಣೆಯಿದೆ. ಮೊದಲನೆಯ ಅಧ್ಯಾಯದಲ್ಲಿ ಅಷ್ಟಮಹಾಮಂತ್ರಗಳನ್ನು ನಿರೂಪಿಸಿದ್ದಾರೆ. ಈ ಅಧ್ಯಾಯದಲ್ಲಿ ಉಳಿದ ವಿಶೇಷ ಶಕ್ತಿಯುಳ್ಳ ಮಹಾಮಂತ್ರಗಳನ್ನು ತಿಳಿಸಿಕೊಡಲಾಗಿದೆ. ಈ ಮಂತ್ರಗಳು ವಿಶೇಷ ಆಧ್ಯಾತ್ಮಿಕ ಶಕ್ತಿಯುಳ್ಳವುಗಳಾದುದರಿಂದ ಪಾರಲೌಕಿಕ ಪ್ರಯೋಜನವನ್ನು, ಅದೃಷ್ಟಫಲವನ್ನುನೀಡುವುದರ ಜೊತೆಗೆ ಪ್ರತ್ಯಕ್ಷವಾದ ಲೌಕಿಕಫಲವನ್ನೂ ನೀಡುತ್ತವೆ. ಆದರೆ ಲೌಕಿಕಫಲವನ್ನು ಉದ್ದೇಶಿಸಿ ಮಾಡುವ ಮಂತ್ರಜಪ, ಹೋಮಗಳಿಗಿಂತಲೂ ಆ ಫಲೋದ್ದೇಶವಿಲ್ಲದೆ ನಿರಪೇಕ್ಷೆಯಿಂದ, ಕೇವಲ ಭಗವಂತನ ಪ್ರೀತಿ ಕಾಮನೆಯಿಂದ ಮಾಡಿದಾಗ ಅದಕ್ಕಿಂತಲೂ ಅಧಿಕವಾಗಿ ಅಮಿತಫಲವನ್ನು ಪಡೆಯಬಹುದು.

"ಸಕಾಮೇಭ್ಯೋಽಮಿತಗುಣಾ ಹ್ಯಕಾಮೈಸ್ತು ಕೃತಾ ಕ್ರಿಯಾ ।
ತಸ್ಮಾದಕಾಮ ಏವಾಲಂ ಭಜೇದ್ ವಿಷ್ಣುಂ ಸನಾತನಮ್ ॥"

ವಿವಿಧ ಮಂತ್ರಜಪಗಳನ್ನು ಮಾಡಿ ಅವುಗಳಿಂದ ಲೌಕಿಕಫಲವನ್ನು ಪಡೆಯಲು ಬೇರೆ ಬೇರೆ ದ್ರವ್ಯಗಳಿಂದ ಹೋಮಗಳನ್ನು ಮಾಡುವ ವಿಧಾನವನ್ನು ತಿಳಿಸಿ, ಕೊನೆಗೆ ಇಂತಹ ಯಾವ ಕ್ರಿಯಾವಿಧಾನಗಳನ್ನೂ ಮಾಡದೆ ಕೇವಲ ಭಕ್ತಿಯಿಂದ ನಿರಪೇಕ್ಷವಾಗಿ ಭಗವಂತನನ್ನು ಈ ಮಂತ್ರಗಳಿಂದ ಭಜಿಸಿದರೂ ಈ ಎಲ್ಲ ಫಲಗಳನ್ನೂ ಇದಕ್ಕಿಂತಲೂ ಅತಿಶಯಿತವಾಗಿ ಪಡೆಯಬಲ್ಲನೆಂದೂ ಸಾರಿದ್ದಾರೆ –

"ಅಕುರ್ವಂಶ್ಚ ಕ್ರಿಯಾ ಭಕ್ತ್ಯಾನಿರಪೇಕ್ಷೋ ಭಜನ್ ಹರಿಮ್ ।
ಸರ್ವಮೇತದವಾಪ್ನೋತಿ ವಿಶೇಷೇಣ ನ ಸಂಶಯಃ ॥"

ಹೀಗೆ ಕ್ರಿಯಾಕಲಾಪಗಳಿಗಿಂತಲೂ ಭಕ್ತಿಗೇ ಹೆಚ್ಚಿನ ಪ್ರಾಧಾನ್ಯವನ್ನು ಆಚಾರ್ಯರು ನೀಡಿದ್ದಾರೆ.

ತಂತ್ರಸಾರದಲ್ಲಿ ಹೇಳಿದ ಈ ಜಪ, ಪೂಜಾದಿಗಳು ಮೋಕ್ಷಸಾಧನೆಗೆ ಅಂಗವೆನಿಸಿವೆ. ಭಗವಂತನ ರೂಪವನ್ನು ಪ್ರತ್ಯಕ್ಷವಾಗಿ ಕಾಣುವುದನ್ನೇ-ಭಗವಂತನ ಸಾಕ್ಷಾತ್ಕಾರವನ್ನೇ-ಅಪರೋಕ್ಷ ಜ್ಞಾನವೆಂದು ಶಾಸ್ತ್ರದಲ್ಲಿ ಕರೆಯುತ್ತಾರೆ. ಈ ಅಪರೋಕ್ಷ ಜ್ಞಾನದಿಂದಲೇ ಪರಮಭಕ್ತಿ, ಪರಮಾನುಗ್ರಹದ ಮುಖಾಂತರವಾಗಿ ನಾವು ಮುಕ್ತಿಯನ್ನು ಪಡೆಯುವುದರಿಂದ ಮುಕ್ತಿಗೆ ಅಪರೋಕ್ಷ ಜ್ಞಾನವೇ ಮುಖ್ಯ ಸಾಧನವಾಗಿದೆ. ಈ ಅಪರೋಕ್ಷ ಜ್ಞಾನವನ್ನು ಪಡೆಯಲು ಏಕಾಗ್ರತೆಯಿಂದ ನಿರಂತರವಾಗಿ ಭಗವಂತನ ರೂಪವನ್ನು ಚಿಂತಿಸಬೇಕು. ಭಗವಂತನ ರೂಪದ ಹೊರತು ಮೇರೆ ಯಾವ ವಿಷಯವೂ ನಮ್ಮ ಮನಸ್ಸಿನಲ್ಲಿ ಸುಳಿಯಬಾರದು. ಈ ರೀತಿಯಲ್ಲಿ ಏಕಾಗ್ರತೆಯಿಂದ ಭಗವಂತನನ್ನು ಧ್ಯಾನಿಸಬೇಕಾದರೆ ಭಗವಂತನ ಬಗ್ಗೆ ಸರಿಯಾದ ಪರಿಜ್ಞಾನವಿರಬೇಕು. ಅಲ್ಲೋಲಕಲ್ಲೋಲವಾದ ನೀರಿನಲ್ಲಿ ಸೂರ್ಯನ ಪ್ರತಿಬಿಂಬವನ್ನು ಕಾಣಲಾರೆವು. ಅದರಂತೆ ಭ್ರಮೆ, ಸಂಶಯಗಳ ಗೊಂದಲಕ್ಕೊಳಗಾದ ಮನಸ್ಸಿನಲ್ಲಿ ಭಗವಂತನ ರೂಪವೂ ಮೂಡಲಾರದು. ಆದುದರಿಂದ ಧ್ಯಾನಕ್ಕೆ ಭಗವಂತನ ತತ್ವನಿಶ್ಚಯವು ಆವಶ್ಯಕ. ಅದಕ್ಕಾಗಿ ಶಾಸ್ತ್ರದ ಅಧ್ಯಯನವನ್ನು ಮಾಡಬೇಕು. ಇದನ್ನೇ ಶ್ರವಣವೆಂದು ಕರೆಯಲಾಗಿದೆ. ಈ ಶ್ರವಣದಿಂದ ತತ್ವಜ್ಞಾನವನ್ನು ಪಡೆದರೂ ಅನೇಕ ಯುಕ್ತಿಗಳಿಂದ, ವಿವಿಧ ದರ್ಶನಗಳ ಅವಲೋಕನದಿಂದ ಮತ್ತು ಶಾಸ್ತ್ರವಾಕ್ಯಗಳಲ್ಲಿ ಕಂಡುಬರುವ ವಿರೋಧಾಭಾಸದಿಂದ ನಮಗೆ ಭಗವಂತನ ವಿಷಯದಲ್ಲಿ ನಾನಾ ರೀತಿಯಲ್ಲಿ ಸಂದೇಹ ಉಂಟಾಗುತ್ತದೆ. ಇದನ್ನು ಪರಿಹರಿಸಲು ಮನನದ ಆವಶ್ಯಕತೆಯಿದೆ. ಯುಕ್ತಿಗಳ ನೆಲೆಯಲ್ಲಿ ಶಾಸ್ತ್ರಾರ್ಥವನ್ನು ವಿಮರ್ಶಿಸಿ ತತ್ವದ ಸರಿಯಾದ ನಿಶ್ಚಯವನ್ನು ಪಡೆದ ಮೇಲೆ ಪರತತ್ವದ ಧ್ಯಾನವನ್ನು ಮಾಡಲು ಸಾಧ್ಯವಾಗುತ್ತದೆ. ಏಕಾಗ್ರತೆಯಿಂದ ಧ್ಯಾನವನ್ನು ಮಾಡುವಂತೆ ನಿರಂತರ ಶಾಸ್ತ್ರವಿಮರ್ಶೆಯೂ ಧ್ಯಾನದಂತೆ ಮುಕ್ತಿಗೆ ಸಾಧನವಾಗುತ್ತದೆ. ಶಾಸ್ತ್ರವಿಮರ್ಶೆ ಮತ್ತು ವಾದ-ಪ್ರವಚನಗಳಲ್ಲಿಯೂ ನಮ್ಮ ಮನಸ್ಸು ಇತರ ವಿಷಯಗಳನ್ನು ಮರೆತು ಏಕಾಗ್ರತೆಯನ್ನು ಸಾಧಿಸುತ್ತದೆ. ಹೀಗೆ ಧ್ಯಾನ ಮತ್ತು ಶಾಸ್ತ್ರ-ವಿಮರ್ಶೆಗಳಲ್ಲಿ ಏಕಾಗ್ರತೆಯಿರುವುದರಿಂದ ಇವೆರಡನ್ನೂ ಉಪಾಸನೆ ಅಥವಾ ನಿದಿಧ್ಯಾಸನವೆಂದು ಹೇಳಿದ್ದಾರೆ. ಧ್ಯಾನದಿಂದಲೂ ಶಾಸ್ತ್ರ ವಿಮರ್ಶೆಯಿಂದಲೂ ಏಕಾಗ್ರತೆಯ ನಿರಂತರ ಭಗವಚ್ಚಿಂತನದಿಂದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು. ಧ್ಯಾನದಲ್ಲಿಯೂ ಧಾರಣೆ, ಧ್ಯಾನ, ಸಮಾಧಿಗಳೆಂದು ಮೂರು ಹಂತಗಳಿವೆ. ಭಗವಂತನನ್ನು ನಿರಂತರವಾಗಿ ಚಿಂತಿಸಲು ಸಾಧ್ಯವಾಗದೆ ಸ್ವಲ್ಪ ಹೊತ್ತು ಭಗವಂತನ ಕಡೆಗೆ ಲಕ್ಷ್ಯವಿದ್ದರೂ ನಮಗೆ ತಿಳಿಯದೆ ಬೇರೆ ಕಡೆಗೂ ಮನಸ್ಸು ಹರಿದಾಗ ಅದನ್ನು ಎಳೆದು ಪುನಃ ಭಗವಂತನ ಕಡೆಗೆ ಜೋಡಿಸುವಂತಹ ಖಂಡಖಂಡವಾದ ಭಗವಂತನ ಸ್ಮರಣೆಯನ್ನು ಧಾರಣೆಯೆಂದು ಹೇಳಲಾಗಿದೆ. ಮೇರೆ ವಸ್ತುಗಳ ಕಡೆಗೆ ಮನಸ್ಸು ಸುಳಿಯದೆ ಅಖಂಡವಾಗಿ ಈ ಭಗವಂತನ ಸ್ಮರಣೆಯು ನಡೆದಾಗ ಅದು ಧ್ಯಾನವೆನಿಸುತ್ತದೆ. ಧ್ಯಾನದ ಹಿನ್ನೆಲೆಯಲ್ಲಿ ಬಹಳ ಪರಿಶ್ರಮವಿರುತ್ತದೆ. ಸಾಧಕನು, ತನ್ನ ಮನಸ್ಸು

ಭಗವಂತನನ್ನು ತೊರೆದು ಇತರ ವಿಷಯಗಳ ಕಡೆಗೆ ಓಡದಂತೆ ತುಂಬ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಇಂತಹ ಯಾವ ಪ್ರಯತ್ನವೂ ಇಲ್ಲದೆ ಸುಲಭವಾಗಿ, ಸಹಜವಾಗಿ ಪರಮಾತ್ಮನನ್ನು ಏಕಾಗ್ರತೆಯಿಂದ ಧ್ಯಾನಮಾಡುವಂತಾದರೆ ಅದನ್ನು ಸಮಾಧಿ ಎನ್ನುತ್ತೇವೆ -

"ಖಂಡಾ ಸ್ಮೃತಿಃ ಧಾರಣಾ ಸ್ಯಾತ್ ಅಖಂಡಾ ಧ್ಯಾನಮುಚ್ಯತೇ ।
ಅಪ್ರಯತ್ನಾತ್ ಸಮಾಧಿಶ್ಚ...॥"

ಇಂತಹ ದೀರ್ಘಕಾಲದ ಸಮಾಧಿ ಅಥವಾ ನಿರಂತರ ಶಾಸ್ತ್ರವಿಮರ್ಶೆಯಿಂದ ಭಗವಂತನ ಸಾಕ್ಷಾತ್ಕಾರವು ದೊರೆಯುತ್ತದೆ. ಶಾಸ್ತ್ರಾರ್ಥಶ್ರವಣ, ಮನನ, ಧ್ಯಾನ, ಸಾಕ್ಷಾತ್ಕಾರ ಇವೆಲ್ಲವುಗಳ ಹಿನ್ನೆಲೆಯಲ್ಲಿ ಭಗವಂತನ ಯಥಾರ್ಥಜ್ಞಾನ ಮತ್ತು ಭಗವತ್ಪ್ರೇಮರೂಪವಾದ ಭಕ್ತಿಯು ಇರಲೇಬೇಕು. ಅದಿಲ್ಲದೆ ಇವೆಲ್ಲವೂ ವ್ಯರ್ಥ.

ಇಂತಹ ಸಾಧನೆಗೆ ಪ್ರಾರಂಭದ ಹಂತದಿಂದಲೂ ಯಮ, ನಿಯಮ, ಆಸನ, ಪ್ರಾಣಾಯಾಮಗಳು ಅವಶ್ಯಕವಾಗಿವೆ. ನಮ್ಮಲ್ಲಿ ಯಾವಾಗಲೂ ಇರಬೇಕಾದ ಉತ್ತಮ ಗುಣಗಳನ್ನು 'ಯಮ' ಎಂದು ಗುರುತಿಸಲಾಗಿದೆ. ಅಹಿಂಸೆ, ಸತ್ಯ, ಇಂದ್ರಿಯ ನಿಗ್ರಹ, ದಯೆ, ಹರಿಭಕ್ತಿ ಮುಂತಾದ ಗುಣಗಳು ನಮ್ಮ ಜೀವನದಲ್ಲಿ ನಿರಂತರವಾಗಿ ಇರಬೇಕು. ಯಾವಾಗಲೋ ಒಮ್ಮೆ, ಇಚ್ಛೆ ಬಂದಾಗ ಸತ್ಯವನ್ನು ಹೇಳಿದರೆ, ಅಹಿಂಸೆಯನ್ನು ಆಚರಿಸಿದರೆ ಸಾಲದು. ನಮ್ಮ ಬದುಕಿನಲ್ಲಿ ಯಾವಾಗಲೂ ಈ ಗುಣಗಳು ಇರಬೇಕಾಗುತ್ತದೆ. ನಿರ್ದಿಷ್ಟ ಸಮಯದಲ್ಲಿ ಶಾಸ್ತ್ರದ ವಿಧಾನದಂತೆ ಮಾಡಬೇಕಾದ ಕ್ರಿಯೆಗಳನ್ನು 'ನಿಯಮ' ಎಂದು ಹೇಳಲಾಗಿದೆ. ಸಂಧ್ಯಾವಂದನೆ, ದೇವರ ಪೂಜೆ, ಗ್ರಂಥಗಳ ಅಧ್ಯಯನ ಇವೆಲ್ಲವೂ 'ನಿಯಮ'ದಲ್ಲಿ ಸೇರಿವೆ. ಪೂಜೆ, ಜಪ, ಧ್ಯಾನಗಳಲ್ಲಿ ಸ್ಥಿರತೆ, ಏಕಾಗ್ರತೆಗೆ ಅನುಕೂಲವಾಗುವಂತೆ ನಾವು ಕುಳಿತುಕೊಳ್ಳಬೇಕಾದ ಪದ್ಮ, ಸ್ವಸ್ತಿಕ ಮುಂತಾದ ಆಸನಗಳು, ರೇಚಕ, ಪೂರಕ, ಕುಂಭಕವೆಂದು ಮೂರು ವಿಧವಾದ ಪ್ರಾಣಾಯಾಮಗಳು ಸಾಧನೆಗೆ ಅಂಗಗಳಾಗಿವೆ.

ಪೂಜಾಪದ್ಧತಿ, ಮಂತ್ರಜಪ ಮುಂತಾದವುಗಳ ಬಗ್ಗೆ ಹೆಚ್ಚಿನ ಬೆಳಕು ನೀಡಿ ನಿಯಮಗಳ ಪರಿಚಯವನ್ನು ತಂತ್ರಸಾರವು ನಮಗೆ ವಿಶೇಷವಾಗಿ ನೀಡಿದೆ. ಹೀಗೆ ಶ್ರೀಮಧ್ವಾಚಾರ್ಯರು ಸಾಧನೆಯ ದೃಷ್ಟಿಯಲ್ಲಿ ಅತ್ಯಂತ ಮಹತ್ವವಾದ ತಂತ್ರಸಾರಕೃತಿರತ್ನವನ್ನು ನಮಗೆ ಅನುಗ್ರಹಿಸಿದ್ದಾರೆ.

೩ - ೧೬ ಸದಾಚಾರಸ್ಮೃತಿ

ಸದಾಚಾರಸ್ಮೃತಿಯು ನಮ್ಮ ದೈನಂದಿನ ಧರ್ಮಾಚರಣೆಯ ಮಾಹಿತಿಯನ್ನು ಸಂಕ್ಷಿಪ್ತವಾಗಿ ನೀಡಲು ಶ್ರೀಮಧ್ವಾಚಾರ್ಯರು ರಚಿಸಿದ ಪುಟ್ಟ ಕೃತಿಯಾಗಿದೆ. ಬೆಳಗ್ಗಿನಿಂದ ಸಂಜೆಯವರೆಗೆ ಕ್ರಮವಾಗಿ ಸ್ನಾನ, ಸಂಧ್ಯಾವಂದನ, ಜಪ, ಪೂಜೆ, ಅಧ್ಯಯನ, ಪ್ರವಚನ, ಭಗವತ್ ಸ್ಮರಣಾದಿಗಳನ್ನು ಮಾಡಿಕೊಂಡು ನಮ್ಮ ಸಮಯವನ್ನು ಸಾರ್ಥಕವಾಗಿ ಹೇಗೆ ಕಳೆಯಬೇಕೆಂಬುದನ್ನು ಈ ಗ್ರಂಥದಲ್ಲಿ ತಿಳಿಸಿದ್ದಾರೆ. ಗಾಯತ್ರೀ ಮಂತ್ರದಿಂದ ಸ್ತ್ರೀದೇವತೆಯ ಧ್ಯಾನದ ಪರಿಪಾಠವನ್ನು ಅನೇಕ ಕಡೆ ನೋಡುತ್ತಿದ್ದೇವೆ. ಸರಸ್ವತೀದೇವಿಯೇ ಗಾಯತ್ರೀ ಮಾತೆಯು. ಅವಳು ಮಂತ್ರದ ಅಧಿಷ್ಠಾತ್ರಿ ಮತ್ತು ಅಭಿಮಾನಿ ದೇವತೆಯೂ ಆಗಿದ್ದಾಳೆ. ಮಂತ್ರದಿಂದ ಫಲವನ್ನು ಪಡೆಯಲು ಮಂತ್ರಕ್ಕೆ ಅವಳು ಶಕ್ತಿ ನೀಡುತ್ತಾಳೆ. ಆದರೆ ಮಂತ್ರದ ದೇವತೆಯು ಸಾಕ್ಷಾತ್ ಶ್ರೀಮನ್ನಾರಾಯಣನೇ ಆಗಿರುವನು. ಸೂರ್ಯಮಂಡಲದಲ್ಲಿ ನೆಲೆಸಿರುವ ನಾರಾಯಣನನ್ನೇ ಗಾಯತ್ರೀಮಂತ್ರವು ಪ್ರತಿಪಾದಿಸುತ್ತದೆ. ಅವನೇ ಗಾಯತ್ರೀ ಮಂತ್ರದ ಫಲಪ್ರದನು. ಗಾಯತ್ರಿ

ಮಂತ್ರವನ್ನು ಜಪಿಸುವಾಗ ಆ ಭಗವಂತನನ್ನೇ ಸ್ಮರಿಸಬೇಕು. ಗಾಯತ್ರೀ ಮಂತ್ರಕ್ಕಿಂತ ಮೂರು ಪಟ್ಟು ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸಬೇಕು. ಶ್ರೀಹರಿಯೇ ಸರ್ವೋತ್ತಮನೆಂಬ ದೃಢನಿಷ್ಠೆಯಿಂದ ನಮ್ಮ ಸಕಲ ಕಾರ್ಯಗಳನ್ನು ಆಚರಿಸಬೇಕು. ನಮ್ಮದೆಲ್ಲವೂ ಭಗವಂತನಿಂದಲೇ ನಮಗೆ ದೊರೆತದ್ದಾಗಿದೆ. ನಮ್ಮ ಮನೆ, ಮಕ್ಕಳು ಮಡದಿ, ಹೆಚ್ಚೇಕೆ? ನಮ್ಮ ಅಚ್ಚುಮೆಚ್ಚಿನ ಪ್ರಾಣವನ್ನೂ ಭಗವಂತನಿಗೇ ಸಮರ್ಪಿಸಬೇಕು. ನಮ್ಮ ಸಕಲೈಶ್ವರ್ಯವೂ ಭಗವಂತನ ಅಧೀನವೆನ್ನುವ ಎಚ್ಚರ ನಿರಂತರವಾಗಿರಬೇಕು –

"ದಾರಾನ್ ಸುತಾನ್ ಪ್ರಿಯಾನ್ ಪ್ರಾಣಾನ್ ಪರಸ್ಮೈ ಸನ್ನಿವೇದಯೇತ್"

ಶ್ರೀಹರಿಯನ್ನು ಎಂದಿಗೂ ಮರೆಯಬಾರದು. ಯಾವಾಗಲೂ ಅವನನ್ನು ಸ್ಮರಿಸುತ್ತಿರಬೇಕು. ಹರಿಯನ್ನು ಮರೆತಾಗಲೇ ಮೈಮರೆತು ಅಧರ್ಮ, ಅನೀತಿಗಳ ಕೃತ್ಯವು ನಮ್ಮಿಂದ ನಡೆಯುತ್ತದೆ. ಭಗವಂತನ ಎಚ್ಚರವಿರುವಾಗ ಕೆಟ್ಟ ಕೃತ್ಯಗಳು ನಮ್ಮಿಂದ ನಡೆಯುವುದಿಲ್ಲ. ನಿಜವಾದ ಭಗವಂತನ ಭಕ್ತನು ಪರಮಾತ್ಮನ ಆದೇಶವನ್ನು ಮೀರಿ ನಡೆಯುವುದಿಲ್ಲ. ಭಗವಂತನ ಭಕ್ತಿ ಮತ್ತು ಅವನ ಬಗ್ಗೆ ಎಚ್ಚರವೇ ಶಾಸ್ತ್ರದ ಎಲ್ಲ ವಿಧಿ ನಿಷೇಧಗಳ ಆಧಾರವೆನಿಸಿದೆ. ಭಗವಂತನ ಎಚ್ಚರವಿದ್ದರೆ ಎಲ್ಲ ಧರ್ಮಾಚರಣೆ, ನೀತಿ, ನಿಯಮಗಳು ಇರುತ್ತವೆ. ಅದಿಲ್ಲದಿದ್ದರೆ ಈ ಯಾವ ನಿಯಮಗಳೂ ಉಳಿಯದೆ ಜೀವನದಲ್ಲಿ ಸ್ವಚ್ಛಂದತೆಯೇ ನೆಲೆಸುತ್ತದೆಯೆಂಬುದನ್ನೂ ಇಲ್ಲಿ ಸಾರಿದ್ದಾರೆ –

"ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋ ನ ಜಾತುಚಿತ್ ।
ಸರ್ವೇ ವಿಧಿನಿಷೇಧಾಃ ಸ್ಯುಃ ಏತಯೋರೇವ ಕಿಂಕರಾಃ ॥"

ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಯತಿಗಳು ಮಾಡುವ ಧಾರ್ಮಿಕ ಅನುಷ್ಠಾನಗಳಲ್ಲಿರುವ ವ್ಯತ್ಯಾಸವನ್ನು ತಿಳಿಸುತ್ತ, ಯತಿಗಳಿಗೆ ಮಾತ್ರ ಸ್ವಂತವಾದ ಧನವು ಯಾವುದೂ ಇರಬಾರದು. ಜನರು ನೀಡಿದ ಕಾಣಿಕೆಗಳನ್ನು ತನ್ನ ಸ್ವಂತ ಆಸ್ತಿಯೆಂದು ಭಾವಿಸಬಾರದೆಂದು ಎಚ್ಚರಿಸಿದ್ದಾರೆ –

"ಏವಮೇವ ಯತೇಃ ಸ್ವೀಯವಿತ್ತೇನ ತು ವಿನಾ ಸದಾ"

ಈ ಎಲ್ಲ ದೈನಂದಿನ ಧರ್ಮಾಚರಣೆಗಳಿಂದ ನಾವು ಅಂತಃಕರಣ ನೈರ್ಮಲ್ಯವನ್ನು ಪಡೆಯುತ್ತೇವೆ; ಆತ್ಮಶಕ್ತಿಯನ್ನೂ ಬೆಳೆಸುತ್ತೇವೆ. ಕರ್ಮಾಚರಣೆ, ಅಧ್ಯಯನಾದಿಗಳಿಂದ ಸರಿಯಾದ ಜ್ಞಾನವನ್ನು ಪಡೆದು ಭಗವಂತನ ಸಾಕ್ಷಾತ್ಕಾರ ಹಾಗೂ ಅವನ ಅನುಗ್ರಹದಿಂದಲೇ ಪರಮ ಸಿದ್ಧಿಯನ್ನೂ ನಾವು ಪಡೆಯಬಲ್ಲೆವು. ಕೇವಲ ಕರ್ಮಾನುಷ್ಠಾನದಿಂದ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿ ಈ ಗ್ರಂಥವನ್ನು ಶ್ರೀಮಧ್ವಾಚಾರ್ಯರು ಉಪಸಂಹರಿಸಿದ್ದಾರೆ. ಸದಾಚಾರಸ್ಮೃತಿಯು ನಮ್ಮ ದೈನಂದಿನ ಧಾರ್ಮಿಕ ಜೀವನಕ್ಕೆ ಕೈಗನ್ನಡಿಯೆನಿಸಿದೆ.

೩ - ೧೭ ಯತಿಪ್ರಣವಕಲ್ಪ

ಯತಿಪ್ರಣವಕಲ್ಪ ಎಂಬ ಚಿಕ್ಕ ಕೃತಿಯಲ್ಲಿ ಶ್ರೀಮಧ್ವಾಚಾರ್ಯರು ಸಂಕ್ಷಿಪ್ತವಾಗಿ ಯತಿಧರ್ಮವನ್ನು ನಿರೂಪಿಸಿದ್ದಾರೆ. ಯತಿಗಳು ಮುಖ್ಯವಾಗಿ ಜಪಿಸಬೇಕಾದ ಪ್ರಣವಮಂತ್ರದಿಂದ ಭಗವಂತನನ್ನು ಧ್ಯಾನಿಸುವ ಪ್ರಕಾರವನ್ನೂ ಹೇಳಿದ್ದಾರೆ. ಪ್ರಣವಮಂತ್ರದ ವರ್ಣ, ಸ್ವರ, ನಾದಗಳಲ್ಲಿರುವ ಭಗವಂತನ ರೂಪದ ವಿವರಣೆಯನ್ನೂ ಈ ಗ್ರಂಥದಲ್ಲಿ ಕಾಣಬಹುದು. ಮುಖ್ಯವಾಗಿ ಯತಿಗಳು ವಿಷ್ಣುನಿಷ್ಠೆಯ ಶಪಥವನ್ನು ಸ್ವೀಕರಿಸಬೇಕು. ಶ್ರೀಹರಿಯ ಸರ್ವೋತ್ತಮತ್ವದಲ್ಲಿ ದೃಢನಿಶ್ಚಯವನ್ನು ಪಡೆದು ಅದರಂತೆ ನಡೆಯಬೇಕು. ಭಾಗವತಧರ್ಮಕ್ಕೆ ವಿರುದ್ಧವಾಗಿ ವರ್ತಿಸಬಾರದು. ವೈಷ್ಣವಧರ್ಮಕ್ಕೆ ವಿರೋಧಿಯಾದ

ಯಾವುದೇ ವ್ಯವಹಾರದಲ್ಲಿ ಶಾಮೀಲಾಗಬಾರದು. ಇಂತಹ ದೃಢವಾದ ವಿಷ್ಣುಭಕ್ತಿಯ ನಿಷ್ಠೆಯನ್ನು ಯತಿಗಳು ವಿಶೇಷವಾಗಿ ಬೆಳೆಸಿಕೊಳ್ಳಬೇಕು. ಇಂತಹ ಭಗವನ್ನಿಷ್ಠೆಯು ಎಲ್ಲರಿಗೂ ಅವಶ್ಯವಾಗಿದ್ದರೂ ಸಿದ್ಧಾಂತ ಪ್ರಚಾರವೇ ದೀಕ್ಷೆಯಾಗಿರುವ ಯತಿಗಳಲ್ಲಿ ಇದು ಅತಿಶಯಿತವಾಗಿರಬೇಕು. ವಿಷ್ಣುಭಕ್ತಿಯ ನಿಷ್ಠೆಯೆಂದರೆ ಇತರ ದೇವತೆಗಳನ್ನು ಅಸಡ್ಡೆ ಮಾಡುವುದಾಗಲೀ ವಿರೋಧ ಮಾಡುವುದಾಗಲೀ ಸರ್ವಥಾ ಅಲ್ಲ. ನಮಗಿಂತ ಅತ್ಯಂತ ಶ್ರೇಷ್ಠರಾದ, ನಮ್ಮ ಶರೀರ, ಇಂದ್ರಿಯ, ಪಂಚಭೂತಗಳು ಮುಂತಾದ ನಮ್ಮ ಜೀವನದ ಅವಿಭಾಜ್ಯ ಅಂಗಗಳಿಗೆ ಅಭಿಮಾನಿಗಳಾಗಿ ನಿಯಾಮಕರಾದ ಎಲ್ಲ ದೇವತೆಗಳ ಅನುಗ್ರಹವೂ ನಮಗೆ ಅತ್ಯವಶ್ಯ. ತಾರತಮ್ಯಕ್ಕೆ ಅನುಗುಣವಾಗಿ ಗಣಪತಿ, ಸೂರ್ಯ, ಸ್ಕಂದ, ಪಾರ್ವತೀ, ರುದ್ರ, ಭಾರತೀ, ವಾಯು ಮುಂತಾದ ಎಲ್ಲ ದೇವತೆಗಳ ಭಕ್ತರಾಗಿ ಈ ಎಲ್ಲ ದೇವತೆಗಳ ನಾಮಗಳಿಂದ ಪ್ರತಿಪಾದ್ಯನೂ ಎಲ್ಲರ ಅಂತರ್ಯಾಮಿಯೂ ಅನಂತಗುಣಪೂರ್ಣನೂ ಸಕಲ ದೋಷರಹಿತನೂ ಆದ ಶ್ರೀವಿಷ್ಣುವು ಸರ್ವೋತ್ತಮನೆಂಬ ದೃಢನಿಷ್ಠೆಯಿಂದ, ಸಕಲರೂ ವಿಶೇಷವಾಗಿ ಯತಿಗಳೂ, ಅವನನ್ನು ಆರಾಧಿಸಬೇಕು.

''ವಿಷ್ಣೋಃ ಸರ್ವೋತ್ತಮತ್ವಂ ಚ ಸರ್ವದಾ ಪ್ರತಿಪಾದಯ''

ಶ್ರೀಹರಿಯ ಸರ್ವೋತ್ತಮತ್ವವನ್ನು ನಿರಂತರವಾಗಿ ಯತಿಗಳು ಪ್ರತಿಪಾದಿಸುತ್ತಿರಬೇಕು. ಸಿದ್ಧಾಂತ ಪ್ರಚಾರವೇ ಯತಿಗಳ ಮುಖ್ಯ ಕಾರ್ಯವೆಂದು ಆಚಾರ್ಯರು ಆದೇಶಿಸಿದ್ದಾರೆ. ಜಿಜ್ಞಾಸುಗಳಿಗೆ ಪಾಠ-ಪ್ರವಚನ, ಉಪನ್ಯಾಸ, ಗ್ರಂಥರಚನೆ ಮುಂತಾದ ರೀತಿಯಿಂದ ಸಿದ್ಧಾಂತದ ಪ್ರಸಾರ ಕಾರ್ಯಗಳನ್ನು ಯತಿಗಳು ವಿಶೇಷವಾಗಿ ನಡೆಸಬೇಕೆಂದು ಒತ್ತಿಹೇಳಿ ಶ್ರೀಮಧ್ವಾಚಾರ್ಯರು ಈ ಗ್ರಂಥವನ್ನು ಮುಕ್ತಾಯಗೊಳಿಸಿದ್ದಾರೆ.

೩ - ೧೮ ದ್ವಾದಶಸ್ತೋತ್ರಗಳು

ಶ್ರೀಮಧ್ವಾಚಾರ್ಯರು ಭಗವಂತನನ್ನು ಭಕ್ತಿಯಿಂದ ಸ್ತುತಿಸಿ ಪಾಡಿದ ಹನ್ನೆರಡು ಸ್ತೋತ್ರಗಳು ''ದ್ವಾದಶಸ್ತೋತ್ರ''ಗಳೆಂದು ಪ್ರಸಿದ್ಧಗಳಾಗಿವೆ. ಇವುಗಳಲ್ಲಿ ಭಕ್ತಿಯ ಮಾಧುರ್ಯದ ಜೊತೆಗೆ ಕವಿತೆಯ ಸೌಂದರ್ಯವನ್ನೂ ಕಾಣಬಹುದು. ಸಂಗೀತ, ಸಾಹಿತ್ಯಗಳ ಸುಂದರ ಸಮ್ಮಿಲನವು ಇವುಗಳಲ್ಲಿ ಇದೆ. ಮೊದಲನೆಯ ಅಧ್ಯಾಯದಲ್ಲಿ ಭಗವಂತನ ಚಿದಾನಂದಮಯವಾದ ಎಲ್ಲ ಅವಯವಗಳ ವರ್ಣನೆಯಿದೆ. ಪರಮಾತ್ಮನ ಪಾದಕಮಲದಿಂದ ಆರಂಭಿಸಿ ಅವನ ಮುಖದ ಮಂದಹಾಸ, ಭಕ್ತರ ಮೇಲಿನ ದಯಾದೃಷ್ಟಿ, ಕಾರುಣ್ಯದ ಕಟಾಕ್ಷದವರೆಗಿನ ಎಲ್ಲ ಅಂಶಗಳನ್ನೂ ಮನೋಜ್ಞವಾಗಿ ವರ್ಣಿಸಿದ್ದಾರೆ. ನಮ್ಮ ಜೀವನದಲ್ಲಿ ನಿರಂತರವಾಗಿ ಭಗವಂತನನ್ನು ಚಿಂತಿಸಬೇಕು. ಬದುಕಿನುದ್ದಕ್ಕೂ ಭಗವಂತನನ್ನು ಸ್ಮರಿಸಿದರೆ ಮಾತ್ರ ಈ ಸಂಸ್ಕಾರವು ದೃಢವಾಗಿ, ಜೀವನದ ಕೊನೆಯ ಘಳಿಗೆಯಲ್ಲಿಯೂ ಭಗವಂತನನ್ನು ನಾವು ಸ್ಮರಿಸಬಲ್ಲೆವು ಎಂಬ ಸಂದೇಶವನ್ನೂ ಆಚಾರ್ಯರು ಇಲ್ಲಿ ನೀಡಿದ್ದಾರೆ.

ಎರಡನೆಯ ಅಧ್ಯಾಯದಲ್ಲಿ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಕರ್ತನೂ ಸ್ವತಂತ್ರನೂ ಆದ ಭಗವಂತನನ್ನೂ ಅವನ ಮಹಿಮೆಯನ್ನೂ ಹೊಗಳಿದ್ದಾರೆ. ಭಗವಂತನು ಭಕ್ತಜನಸಮುದಾಯವೆನ್ನುವ ಸಮುದ್ರಕ್ಕೆ ಪೂರ್ಣಚಂದ್ರನಾಗಿ ಅವರಲ್ಲಿ ಹರ್ಷೋದ್ರೇಕವನ್ನು ನಿರ್ಮಿಸುತ್ತಾನೆ. ಅಧ್ಯಾತ್ಮ ಯಾತ್ರೆಗೆ ಹೊರಟ ಭಕ್ತಪಥಿಕರಿಗೆ ಅವನೇ ಆಶ್ರಯ ನೀಡುವ ದೇವಸ್ಥಾನ. ಆಚಾರ್ಯರಿಗೆ ಭಗವಂತನು ಅತ್ಯಂತ ಇಷ್ಟನೆನಿಸಿದ್ದಾನೆ. ನಾವು ಎಲ್ಲ ವಸ್ತುಗಳನ್ನು ಸುಖಕ್ಕಾಗಿ ಬಯಸುತ್ತೇವೆ. ಆದರೆ ಸುಖವು ಇನ್ನೊಂದಕ್ಕಾಗಿ

ಇಲ್ಲ. ಅದೇ ಸ್ವಯಂ ಪುರುಷಾರ್ಥ. ಅದರಂತೆ ಆಚಾರ್ಯರಂತಹ ಏಕಾಂತ ಭಕ್ತರಿಗೆ ಭಗವಂತನೇ ಸ್ವಯಂ ಇಷ್ಟನಾಗಿದ್ದಾನೆ. ಉಳಿದವರಿಗೆ ಮುಕ್ತಿ ಅಥವಾ ಇತರ ಇಷ್ಟಾರ್ಥಗಳಿಗಾಗಿ ದೇವರು ಬೇಕಿದ್ದರೆ, ಆಚಾರ್ಯರಿಗೆ ದೇವರನ್ನು ಪಡೆಯುವುದಕ್ಕಾಗಿ ಮುಕ್ತಿಯಲ್ಲದೆ, ಮೋಕ್ಷಕ್ಕಾಗಿ ದೇವರಲ್ಲ. ಭಗವಂತನೇ ಅವರಿಗೆ ಸ್ವಯಂ ಪುರುಷಾರ್ಥ. ಹೀಗೆ ತನಗೂ ಭಗವಂತನಿಗೂ ಇರುವ ವಿಶಿಷ್ಟ ಪ್ರೀತಿ ಸಂಬಂಧವನ್ನು 'ಅಸ್ಮದಿಷ್ಟೈಕಕಾರ್ಯಾಯ' ಎಂದು ಸೂಚಿಸಿದ್ದಾರೆ.

ಮೂರನೆಯ ಅಧ್ಯಾಯದಲ್ಲಿ ''**ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದವಿನಮ್ರಧಿಯಾ ಸತತಂ**'' ಎಂಬುದಾಗಿ ಜೀವನಸಂದೇಶವನ್ನೇ ಆಚಾರ್ಯರು ನೀಡಿದ್ದಾರೆ. ನಿಮ್ಮ ಕರ್ತವ್ಯವನ್ನು ಆಚರಿಸಿರಿ. ಅದರ ಫಲವನ್ನು ಅನುಭವಿಸಿರಿ. ಆದರೆ ಕರ್ತವ್ಯವನ್ನು ಮಾಡುವಾಗಲೂ ಫಲವನ್ನು ಭೋಗಿಸುವಾಗಲೂ ಪರಮಾತ್ಮನನ್ನು ಮರೆಯದಿರಿ. ನಾವು ಭಗವಂತನ ನಮ್ರ ಸೇವಕರೆಂಬುದನ್ನು ನೆನೆದುಕೊಂಡೇ ಇವೆಲ್ಲವನ್ನೂ ನಡೆಸಬೇಕು. ಜಗತ್ತಿನಲ್ಲಿ ಭಗವಂತನೇ ಸರ್ವೋತ್ತಮನು. ಅವನೇ ನಮ್ಮ ಸರ್ವಸ್ವ, ಅವನೇ ನಮಗೆ ತಂದೆ, ತಾಯಿ, ಪತಿ, ಗುರು ಎಲ್ಲವೂ ಆಗಿರುವನು. ಭಗವಂತನ ಪ್ರಜ್ಞೆಯು ನಮಗೆ ಇದ್ದರೆ ಕರ್ತವ್ಯದಲ್ಲಿ ದಾರಿ ತಪ್ಪಲಾರೆವು. ಫಲ-ಭೋಗದಲ್ಲಿ ಸ್ವಚ್ಛಂದತೆಯೂ ಬರಲಾರದು.

''ತದಲಂ ಬಹುಲೋಕ ವಿಚಿಂತನಯಾ
ಪ್ರಣವಂ ಕುರು ಮಾನಸಮೀಶಪದೇ''

ಅನುಪಯುಕ್ತ ಲೌಕಿಕ ಚಿಂತನೆಯನ್ನು ತೊರೆದು ಭಗವಂತನ ಚರಣದಲ್ಲಿ ಮನಸ್ಸು ಮಗ್ನಗೊಳ್ಳುವಂತೆ ಪ್ರಯತ್ನಿಸಿರಿ. ಭಗವಂತನ ಧ್ಯಾನ, ಅವನ ಅಖಂಡ ಚಿಂತನವನ್ನು ಮಾಡಬೇಕು. ಅದು ಸಾಧ್ಯವಿಲ್ಲದಿದ್ದರೆ ಅವನ ಸ್ಮರಣೆಗಾಗಿ ಪ್ರಯತ್ನವನ್ನಾದರೂ ಮಾಡಿರಿ. ಇದರಿಂದಲೂ ಸಕಲ ಪಾಪ ಪರಿಹಾರವಾಗುವುದೆಂದು ಉದಾರಹೃದಯದಿಂದ ಆಚಾರ್ಯರು ಬೋಧಿಸಿದ್ದಾರೆ. ಹರಿಸ್ಮರಣೆಯ ಈ ಪ್ರಯತ್ನವನ್ನೂ ಮಾಡದೆ ಅಸಡ್ಡೆ, ಆಲಸ್ಯಗಳಿಂದ ಭೋಗಪರಾಯಣರಾಗಿ ನಾವು ಕಾಲ ಕಳೆಯಬಾರದು.

ಶ್ರೀಹರಿಯು ಸರ್ವಜಗನ್ನಿಯಾಮಕನು. ಸಕಲ ಜೀವ-ಜಡರ ಮೇಲೆ ಅವನ ಪ್ರಭುತ್ವವು ಅಬಾಧಿತವಾಗಿ ಸರ್ವದಾ ಇರುತ್ತದೆ. ಸಂಸಾರದಲ್ಲಿ ಮಾತ್ರ ನಮಗೂ ಪರಮಾತ್ಮನಿಗೂ ಭೇದವಿದ್ದು ಅವನು ನಮಗೆ ಸ್ವಾಮಿಯಾಗಿರುತ್ತಾನೆ. ಮುಕ್ತಿಯಲ್ಲಿ ನಾವು ಅವನದಲ್ಲಿ ಐಕ್ಯವನ್ನು ಹೊಂದುತ್ತೇವೆಂದು ಭಾವಿಸಬಾರದು. ಜೀವನಿಗೂ ಭಗವಂತನಿಗೂ ಸಂಸಾರದಲ್ಲಿ ಮಾತ್ರ ಸೀಮಿತವಾದ ಅಸ್ವಾಭಾವಿಕವಾದ ಭೇದವಲ್ಲ, ಮುಕ್ತಿಯಲ್ಲಿಯೂ ಇರುವಂತಹ, ಸಹಜ ಪಾರಮಾರ್ಥಿಕ ಭೇದವಾಗಿದೆ. ಸಂಸಾರದಲ್ಲಿಯೂ ಮುಕ್ತಿಯಲ್ಲಿಯೂ ಭಗವಂತನು ನಮಗೆ ಪ್ರಭುವಾಗಿರುತ್ತಾನೆ. ವಿಶ್ವದ ಸಾರ್ವಭೌಮನಾಗಿರುವ ಅವನ ನಿಯಂತ್ರಣದಲ್ಲಿ ಜಗತ್ತಿನ ಎಲ್ಲ ವಸ್ತುಗಳೂ ಇರುವುದರಿಂದ ಅವನಿಗೆ ಯಾವ ಕೊರತೆಯೂ ಇರಲಾರದು. ಅವನು ಪರಿಪೂರ್ಣನೂ ಆನಂದಭರಿತನೂ ಆಗಿದ್ದಾನೆ. ಆದುದರಿಂದ ಅವನೇ ಸರ್ವೋತ್ತಮನೆಂದು ವೇದ -ಶಾಸ್ತ್ರಗಳು ಸಾರಿ ಸಾರಿ ಹೇಳುತ್ತಿವೆಯೆಂದು ಈ ಅಧ್ಯಾಯದಲ್ಲಿ ಆಚಾರ್ಯರು ಪ್ರತಿಪಾದಿಸಿದ್ದಾರೆ.

ನಾಲ್ಕನೆಯ ಅಧ್ಯಾಯದ ಆರಂಭದಲ್ಲಿ ಪರಮಾತ್ಮನು ಜ್ಞಾನರೂಪಿಯೂ ಆನಂದರೂಪಿಯೂ ಎಂಬುದನ್ನು ಸಮರ್ಥಿಸಲಾಗಿದೆ. ನಾವು ನಿದ್ದೆಯಲ್ಲಿ ಮಾತ್ರ ನೈಜ ಆನಂದವನ್ನು ಅನುಭವಿಸುತ್ತೇವೆ. ಎಚ್ಚರದಲ್ಲಿ ನಾವು ಅನುಭವಿಸುವ ಆನಂದವು ಭೌತಿಕವಾಗಿದೆ. ಆದರೆ ಭಗವಂತನು ಎಂದೆಂದಿಗೂ ದಿವ್ಯ ಅಪ್ರಾಕೃತ ಆನಂದವನ್ನೇ ಅನುಭವಿಸುತ್ತಾನೆ. ಭೌತಿಕ ಸುಖದ ಸ್ಪರ್ಶವೇ ಅವನಿಗಿಲ್ಲ. ಆದುದರಿಂದ ಕೇವಲ ಅಪ್ರಾಕೃತ ಆನಂದಸ್ವರೂಪಿಯಾಗಿದ್ದಾನೆ.

ಭಗವಂತನ ಬುದ್ಧಿ ಮತ್ತು ಆಲೋಚನಾಶಕ್ತಿಯಿಂದಲೇ ಈ ವಿಶಾಲ ವಿಶ್ವವು ನಿರ್ಮಾಣ ಗೊಂಡಿದೆ. ಇಂತಹ ವಿಸ್ತಾರಪೂರ್ಣವಾದ ಜಗತ್ತಿನ ರಚನೆಯ ಹಿನ್ನೆಲೆಯಲ್ಲಿರುವ ಆತನ ಜ್ಞಾನವನ್ನು ನಾವು ಅಳೆಯಲು ಸಾಧ್ಯವೇ? ಆದುದರಿಂದಲೇ ಅವನು ಸರ್ವಜ್ಞನೂ ಪರಿಪೂರ್ಣಜ್ಞಾನಸ್ವರೂಪನೂ ಆಗಿರುವನೆಂದು ನಾವು ನಿರ್ಧರಿಸಬಹುದು. ವಿಶ್ವದ ವಿಸ್ತಾರ, ಅದರ ವೈಚಿತ್ರ್ಯ, ವೈವಿಧ್ಯಗಳನ್ನು ಪರಿಶೀಲಿಸಿದಾಗ ಇಂತಹ ಅದ್ಭುತ ವಿಶ್ವವನ್ನು ರಚಿಸಿದ ಅವನ ಅಪಾರಶಕ್ತಿಯನ್ನು ನಾವು ಊಹಿಸ ಬಹುದಾಗಿದೆ. ಇಂತಹ ಅನಂತಗುಣಸಂಪನ್ನನಾದ, ಪರಮಾನಂದರೂಪಿಯಾದ ಭಗವಂತನ ಸ್ಮರಣೆ ಯಿಂದ ಮನಸ್ಸು ಮತ್ತು ಇಂದ್ರಿಯಗಳನ್ನು ನಿರ್ಮಲಗೊಳಿಸಬೇಕು. ನಮ್ಮ ಅಂತಃಕರಣವನ್ನು ಆಕ್ರಮಿಸುವ ಕಲಿಯನ್ನು ಎದುರಿಸಲು ನಮ್ಮ ಮನಸ್ಸೇ ನಮಗೆ ಆಯುಧ. ಶಾಸ್ತ್ರವೆಂಬ ಸಾಣೆಕಲ್ಲಿನಲ್ಲಿ ಸರಿಯಾಗಿ ತಿಕ್ಕಿದ ನಮ್ಮ ಮನಸ್ಸೆನ್ನುವ ಖಡ್ಗಗಳಿಂದ ಕಲಿಯನ್ನು ಹೊಡೆದೋಡಿಸಿ ಭಗವಂತನ ಉಪಾಸನೆಯನ್ನು ಕೈಗೊಳ್ಳಿರಿ. ಇದು ನಾಲ್ಕನೆಯ ಸ್ತೋತ್ರದ ಸಂದೇಶವಾಗಿದೆ.

ಐದನೆಯ ಸ್ತೋತ್ರವು ಪ್ರಾಸಬದ್ಧವಾಗಿ ಅರ್ಥಪೂರ್ಣವಾಗಿ ಭಗವಂತನ ವಾಸುದೇವ ಮೊದಲಾದ ಹನ್ನೊಂದು ರೂಪಗಳನ್ನು ವರ್ಣಿಸುತ್ತ ಭಗವಂತನ ಮಹಿಮೆಗಳನ್ನು ಹಾಡುತ್ತದೆ.

ಆರನೆಯ ಸ್ತೋತ್ರವು ಮತ್ಸ್ಯ ಮೊದಲಾದ ಶ್ರೀಹರಿಯ ದಶಾವತಾರಗಳ ವರ್ಣನೆಯೊಂದಿಗೆ ಶ್ರೀಕೃಷ್ಣನ ವಿಶೇಷ ಸ್ತುತಿಯನ್ನು ಮಾಡುತ್ತದೆ.

ಏಳನೆಯ ಸ್ತೋತ್ರವು ಜಗನ್ಮಾತೆಯಾದ ಲಕ್ಷ್ಮೀ ದೇವಿಯ ವಿಶೇಷ ವರ್ಣನೆಯೊಂದಿಗೆ ಜಡಪ್ರಕೃತಿಗೆ ಅಭಿಮಾನಿನಿಯಾಗಿ ವಿಶ್ವದ ಆಗುಹೋಗುಗಳಿಗೆ ಕಾರಣಳಾಗಿ ಬ್ರಹ್ಮರುದ್ರಾದಿ ದೇವತೆಗಳು ನಡೆಸುತ್ತಿರುವ ವಿಶ್ವವ್ಯಾಪಾರಕ್ಕೆ ಶಕ್ತಿದಾತ್ರಿಯಾದ, ಅವರೆಲ್ಲರನ್ನೂ ನಿಯಮಿಸುತ್ತಿರುವ ಆ ಮಹಾ ದೇವಿಗೂ ಆಶ್ರಯನಾಗಿರುವ ಭಗವಂತನ ಮಹಾಮಹಿಮೆಯನ್ನು ವರ್ಣಿಸುತ್ತದೆ.

''**ಪ್ರೀಣಯಾಮೋ ವಾಸುದೇವಂ**'' – ಎಂಬ ಎಂಟನೆಯ ಸ್ತೋತ್ರವು, ''ಸಮಗ್ರ ದೇವತಾಸಮಾಜಕ್ಕೆ ದಿವ್ಯಶೋಭೆಯನ್ನು ನೀಡುವ ದೇವದೇವೋತ್ತಮನಾದ ಭಗವಂತನನ್ನು ಪ್ರಸನ್ನಪಡಿಸೋಣ'' ಎಂದು ಭಕ್ತಜನತೆಗೆ ಕರೆಯನ್ನು ನೀಡುತ್ತದೆ. ಅದರಿಂದಲೇ ಅವನಿಗೆ ಸಂಪ್ರೀತಿ. ಅಂತಹ ಉತ್ತಮ ಜೀವನವನ್ನು ನಡೆಸಿ ಭಗವಂತನನ್ನು ನಾವು ಸಂತೋಷಪಡಿಸಬೇಕೆಂದು ಆಚಾರ್ಯರು ಸಜ್ಜನರಿಗೆ ಆದೇಶವನ್ನು ನೀಡುವ ಅತ್ಯಂತ ಮಧುರ ಸ್ತೋತ್ರವಿದು. ಅರ್ಥದ ಔನ್ನತ್ಯವೂ ಪದಗಳ ಲಾಲಿತ್ಯವೂ ಪ್ರಾಸದ ವೈಭವವೂ ಇಲ್ಲಿ ಜೊತೆಗೂಡಿದೆ. ಭಗವಂತನು ದುಷ್ಟರಿಗೆ ಬಹುದೂರನು. ಆದರೆ ಜ್ಞಾನಿಗಳಿಗೆ ಅತಿಸಮೀಪನು. ಅವರ ಹೃದಯದಲ್ಲಿಯೇ ನೆಲೆಸಿ ಅವರಿಗೆ ದರ್ಶನ ನೀಡುವನು. ಸ್ವತಂತ್ರನಾಗಿದ್ದರೂ ಸ್ವೇಚ್ಛೆಯಿಂದಲೇ ಭಕ್ತರಿಗೆ, ಸಜ್ಜನರಿಗೆ ವಶನಾಗಿರುವನು. ಬ್ರಹ್ಮರುದ್ರಾದಿಗಳೂ ಅವನನ್ನು ಕಾಣಲು ಕಾತುರರಾಗಿ ಅವನ ಕೈಂಕರ್ಯವನ್ನು ಕೈಗೊಳ್ಳುತ್ತಾರೆ. ಅವನ ದರ್ಶನವು ದುಃಖರಾಶಿಯನ್ನೇ ನಿರ್ಮೂಲಗೊಳಿಸಬಲ್ಲದು. ಅವನು ಅನಂತಗುಣಗಳ ಸಾಕಾರರೂಪಿಯು. ಅವನ ಗುಣಗಳಿಗೆ ಚ್ಯುತಿಯೇ ಇಲ್ಲ. ಅವನು ಅಚ್ಯುತನು. ಆದರೆ ಸಕಲದೋಷಗಳಿಂದ ಪ್ರಚ್ಯುತನು. ದೋಷದ ಲೇಶವೂ ಆತನಲ್ಲಿ ಇಲ್ಲ. ಅವನು ವಿಶ್ವಧಾರಕನೂ ಭಕ್ತರ ದುಃಖ-ಪರಿಹಾರಕನೂ ಸರ್ವಕಾರಕನೂ ಆಗಿರುವನು. ಅವನಲ್ಲಿ ಸಮರ್ಪಿಸಿದ ಸಕಲ ಸತ್ಕರ್ಮಗಳೂ ಅಕ್ಷಯ ಫಲವನ್ನು ನೀಡುವವು. ಜಗನ್ಮಾತೆಯಾದ ಶ್ರೀಲಕ್ಷ್ಮೀದೇವಿಯು ತನ್ನ ಪ್ರೇಮದ ಕಡೆಗಣ್ಣ ನೋಟದಿಂದ ಅವನಿಗೆ ನಿರಂತರವಾಗಿ ಮಂಗಲನೀರಾಜನವನ್ನೇ ಮಾಡುತ್ತಿದ್ದಾಳೆ ಎಂದು ಮುಂತಾಗಿ ಮಧುರ ಕವಿತೆಯಿಂದ ಭಗವಂತನನ್ನು ಆಚಾರ್ಯರು ಇಲ್ಲಿ ಸ್ತುತಿಸಿದ್ದಾರೆ.

ಒಂಭತ್ತನೆಯ ಸ್ತೋತ್ರದಲ್ಲಿ ಭಗವಂತನ ದಶಾವತಾರಗಳನ್ನು ವರ್ಣಿಸಿ ಅವನಲ್ಲಿ ಶರಣಾಗತಿ

ಯನ್ನು ಕೋರಲಾಗಿದೆ. ಪರಮಾತ್ಮನು ಪ್ರತಿಯೊಂದು ಅವತಾರಗಳಲ್ಲಿಯೂ ನಡೆಸಿದ ಅದ್ಭುತಲೀಲೆಯನ್ನು ಒಂದೆರಡು ಪದಗಳಿಂದ ಇಲ್ಲಿ ವರ್ಣಿಸಲಾಗಿದೆ. ಭಗವಂತನು ನಮ್ಮ ಅಜ್ಞಾನದ ಬೆಟ್ಟವನ್ನೇ ನುಚ್ಚುನೂರಾಗಿಸಬಲ್ಲನು. ಅನಂತಗುಣಗಳು ಮತ್ತು ಅಪರಿಮಿತ ಸುಖವು ಮೈವೆತ್ತು ಭಗವಂತನ ರೂಪದಲ್ಲಿ ಇದೆ ಎಂದು ಮುಂತಾಗಿ ಭಗವಂತನನ್ನು ಸ್ತುತಿಸಿದ್ದಾರೆ.

ಹತ್ತನೆಯ ಸ್ತೋತ್ರದಲ್ಲಿ 'ಕರುಣಾಪೂರ್ಣನೂ ಅಭೀಷ್ಟಪ್ರದನೂ ಆದ ಭಗವಂತನೇ! ನಿನ್ನ ಮಹಿಮೆಯನ್ನು ನನಗೆ ಇನ್ನೂ ಹೆಚ್ಚೆಚ್ಚು ತೋರಿಸಿಕೊಡು' ಎಂಬುದಾಗಿ ಭಗವಂತನ ನಿರಂತರ ದರ್ಶನವನ್ನು ಪಡೆದಿರುವ ಆಚಾರ್ಯರು ಅವನ ವಿಶೇಷ ಜ್ಞಾನವನ್ನು ಭಕ್ತರಿಗಾಗಿ ಪ್ರಾರ್ಥಿಸಿದ್ದಾರೆ. ಪುನಃ ಭಗವಂತನ ಪಾದಗಳಿಂದಾರಂಭಿಸಿ ಅವನ ಮುಖದವರೆಗಿನ ಅವಯವಗಳ ಸುಂದರ ವರ್ಣನೆಯನ್ನು ಮಾಡಿದ್ದಾರೆ. 'ಅವನ ಉಗುರುಗಳು ಪದ್ಮರಾಗ ಮಣಿಗಳಂತಿದ್ದರೆ, ಮೊಣಕಾಲುಗಳು ಕಾಮನಬಿಲ್ಲಿನಂತಿವೆ. ತೊಡೆಗಳನ್ನು ಆನೆಯ ಸೊಂಡಿಲಿಗೆ ಹೋಲಿಸಬಹುದು. ಬ್ರಹ್ಮದೇವರೇ ಉದ್ಭವಿಸಿದ ಜಗದ್ರೂಪವಾದ ಕಮಲವು ಅವನ ನಾಭಿಯಲ್ಲಿದ್ದರೆ ಅವನ ಉದರವು ವಿಶ್ವವನ್ನೇ ತನ್ನಲ್ಲಿ ತುಂಬಿಕೊಳ್ಳುತ್ತದೆ. ಜಗನ್ಮಾತೆಯಾದ ಲಕ್ಷ್ಮಿಗೆ ಅವನ ವಕ್ಷಸ್ಥಳವು ಆವಾಸಸ್ಥಾನವಾಗಿದೆ. ಉದರದಲ್ಲಿ ಇಡೀ ಬ್ರಹ್ಮಾಂಡವನ್ನು, ನಾಭಿಯಲ್ಲಿ ಬ್ರಹ್ಮನನ್ನು, ಹೃದಯದಲ್ಲಿ ಲಕ್ಷ್ಮಿಯನ್ನು ಧರಿಸಿದ ಅವನ ಮಹಾತ್ಮ್ಯವನ್ನು ಏನು ಬಣ್ಣಿಸಲಿ ? ಅವನ ಮುಖದಿಂದ ಜ್ಞಾನಧಾರೆಯೇ ಹರಿಯುತ್ತಿದೆ. ಅವನ ದೃಷ್ಟಿ ಪಾಪರಾಶಿಯನ್ನು ಸುಟ್ಟು ಪರಮಾನಂದ ವನ್ನು ನೀಡುತ್ತದೆ. ಜೀವರಾಶಿಗೆ ಮರಣ, ಪ್ರಾಣ ಇವೆರಡನ್ನೂ ನೀಡಬಲ್ಲ ಆತನು ಸಂಸಾರಸಾಗರವನ್ನು ದಾಟಿಸಬಲ್ಲ ನಾವೆಯೂ ಆಗಿರುವನು. ಅಜ್ಞಾನದ ಕತ್ತಲೆಯನ್ನು ನಾಶಪಡಿಸಿ ಆನಂದದ ಅಮೃತಧಾರೆ ಯನ್ನು ಸುರಿಸುವ ಭಗವಂತನೇ ನಿನಗೆ ಶರಣು' ಎಂಬುದಾಗಿ ಅತ್ಯಂತ ಭಕ್ತಿಭರಿತ ಅಮೃತಮಯ ನುಡಿಗಳಿಂದ ಭಗವಂತನನ್ನು ಸ್ತುತಿಸಿದ್ದಾರೆ.

ಹನ್ನೊಂದನೆಯ ಸ್ತೋತ್ರದಲ್ಲಿ ಆಚಾರ್ಯರು, ಬ್ರಹ್ಮರುದ್ರಾದಿಗಳಿಂದ ವಂದಿತನು, ಸರ್ವೋತ್ತಮನು ಎಂದು ಪರಮಾತ್ಮನನ್ನು ವರ್ಣಿಸಿ ಅವನ ಆನಂದಮಯ ರೂಪವನ್ನು ಪುನಃಪುನಃ ನಮಸ್ಕರಿಸುತ್ತಾರೆ. ಭಗವಂತನ ಈ ಆನಂದಸ್ವರೂಪವು ಭಕ್ತರಿಗೆ ಅಮೃತಧಾರೆಯನ್ನೇ ಹರಿಸುತ್ತಿದೆ. ದೇವತೆಗಳಿಗೆ ಮಹಾ ಐಶ್ವರ್ಯವನ್ನೂ, ಪರಮಮುಕ್ತಿಯನ್ನೂ ನೀಡುವ ಭಗವಂತನು ಭಕ್ತರಿಗೆ ಇಹ ದಲ್ಲಿಯೂ ಪರದಲ್ಲಿಯೂ ಮಹಾ ಇಷ್ಟಾರ್ಥವನ್ನು ನೀಡುವನೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಭಗವಂತನು ನಮಗೆ ಅತಿದೂರನೂ ಅಹುದು; ಅತಿ ಸಮೀಪನೂ ಅಹುದು. ನಾವು ಮರೆತಾಗ ಅತಿದೂರ ದಲ್ಲಿರುವ ಅವನನ್ನು ಭಕ್ತಿಯಿಂದ ನಮ್ಮ ಅತ್ಯಂತ ಸನಿಹಕ್ಕೆ ತರಿಸಬಹುದು ಎಂದು ಮುಂತಾಗಿ ಇಲ್ಲಿ ಪರಮಾತ್ಮನನ್ನು ಸ್ತುತಿಸಿದ್ದಾರೆ.

ಹನ್ನೆರಡನೆಯ ಸ್ತೋತ್ರದಲ್ಲಿ ಆನಂದಮಯನಾದ ಮುಕುಂದನನ್ನು ಆನಂದತೀರ್ಥರಾದ ತಮಗೆ ಪರಮಾನಂದವನ್ನು ನೀಡುವವನೆಂದು ಸ್ತುತಿಸಿದ್ದಾರೆ. ಭಗವಂತನು ಭಕ್ತರಿಗೆ ಆನಂದದ ಬೆಳದಿಂಗಳನ್ನು ಚೆಲ್ಲುವನು. ಭಗವಂತನ ಮಂದಿರದಲ್ಲಿ ಓಡಾಡುವ ಸೇವೆ ಸಲ್ಲಿಸುವ ಭಕ್ತರಿಗೆ ಕರುಣಾಮೃತವನ್ನು ಹರಿಸುತ್ತಾನೆ.

ಹೀಗೆ ಈ ಹನ್ನೆರಡು ಸ್ತೋತ್ರಗಳಲ್ಲಿ ಅನುಪಮ ಕಾವ್ಯಶೈಲಿಯಲ್ಲಿ ಸುಂದರ-ಬಂಧುರ ಪದಗಳಿಂದ ಭಗವಂತನ ಗುಣಗಾನವನ್ನು ಅತ್ಯಂತ ಹೃದ್ಯವಾಗಿ ಆಚಾರ್ಯರು ಮಾಡಿದ್ದಾರೆ. ಭಕ್ತಿಯಿಂದ ಪ್ರತಿದಿನ ಇದರ ಪಠನ-ಪಾರಾಯಣಗಳನ್ನು ಮಾಡಬಹುದಲ್ಲದೆ ಸಂಗೀತವನ್ನು ಜೋಡಿಸಿ ಲಯಬದ್ಧವಾಗಿ ಹಾಡಲೂ ಇದು ಅನುಕೂಲವಾಗಿದೆ.

೩ - ೧೯ ಕಂದುಕಸ್ತುತಿ

ಆಚಾರ್ಯರು ಬಾಲ್ಯದಲ್ಲಿ ಚೆಂಡಾಟವಾಡುತ್ತಿದ್ದಾಗ ಹಾಡಿದ ಪದ್ಯವಿದೆಂಬುದಾಗಿ ಪ್ರಸಿದ್ಧಿಯಾಗಿದೆ. ಓದಲು ಮತ್ತು ಹಾಡಲು ಇದು ಅನುಕೂಲವಾಗಿದೆ. ಇಲ್ಲಿರುವ ಪದಗಳ ಲಾಲಿತ್ಯ ಮತ್ತು ಸಂಯೋಜನವು ಅತ್ಯಂತ ಹೃದಯಹಾರಿಯಾಗಿದೆ. ಕಾಲಿನಿಂದ ಶಕಟಾಸುರನನ್ನು ಒದ್ದು ನಾಶ ಪಡಿಸಿದವನು ಎನ್ನುವುದನ್ನು "**ಪದತಲ ವಿದಲಿತ ಗುರುತರಶಕಟಃ**" ಎಂದು ಅತ್ಯಂತ ಸುಲಲಿತವಾಗಿ ನಿರೂಪಿಸಿದ್ದಾರೆ. ವಾಯುವೇಗದ ಗರುಡನನ್ನು ಏರಿದವನು ಎಂಬುದನ್ನು "**ಸತತಗ ಸಮಜವ ಖಗಪತಿ ನಿರತಃ**" ಎಂದು ಬಣ್ಣಿಸಿದ್ದಾರೆ. ತಾವರೆಯ ಕಣ್ಣಿನವನು ಎಂಬುದಕ್ಕೆ "**ಸರಸಿಜ ನವದಲ ವಿಕಸಿತ ನಯನಃ**" ಎನ್ನುವ ಪದವನ್ನು ಬಳಸಿದ್ದಾರೆ. ಶತ್ರು ಸಂಕುಲವನ್ನು ತನ್ನ ಶರಗಳಿಂದ ನಿರ್ಭೇದಿಸಿದ್ದಾನೆ ಎಂಬ ಸಂಗತಿಯನ್ನು "**ಶರಶತ ಶಕಲಿತ ರಿಪುಶತನಿವಹಃ**" ಎನ್ನುವ ಅತ್ಯಂತ ಮನೋಹಾರಿ ಪದಗಳಿಂದ ವರ್ಣಿಸಿ ದ್ದಾರೆ.

ಒಂದು ಚರಣದಲ್ಲಿ ನೀಲಮೇಘಶ್ಯಾಮ ಎಂಬರ್ಥ ಬರುವ "**ಕಾಲ ಘನಾಲೀ ಕರ್ಬುರಕಾಯಃ**" ಎಂದು ಮುಂತಾಗಿ ಗುರು ಹಾಗೂ ಕಠಿಣ ಶಬ್ದಗಳನ್ನೊಳಗೊಂಡ ಪದಗಳನ್ನು ಬಳಸಿದರೆ ಇನ್ನೊಂದು ಚರಣದಲ್ಲಿ "**ಪದತಲ ವಿದಲಿತ ಗುರುತರ ಶಕಟಃ**" ಎಂದು ಮುಂತಾಗಿ ಪೂರ್ತಿಯಾಗಿ ಲಘು ಲಲಿತ ಶಬ್ದಗಳನ್ನೊಳಗೊಂಡ ಪದಗಳನ್ನೇ ಜೋಡಿಸಲಾಗಿದೆ. ಕಾವ್ಯದ ಪದಮಾಧುರ್ಯ ಹಾಗೂ ಸಂಯೋಜನೆಗೆ ಈ ಶ್ಲೋಕವು ಅತ್ಯುತ್ತಮ ಉದಾಹರಣೆಯಾಗಿದೆ.

೩ - ೨೦ ನರಸಿಂಹಸ್ತುತಿ

ಎರಡು ಪದ್ಯಗಳ ಈ ಸ್ತೋತ್ರದಲ್ಲಿ ಗಂಭೀರ ಶೈಲಿಯಲ್ಲಿ ಹೃದ್ಯವಾಗಿ ಭಗವಂತನನ್ನು ಮತ್ತು ಅವನು ನರಸಿಂಹ ರೂಪದಲ್ಲಿ ಹಿರಣ್ಯಕಶಿಪುವಿನ ಹೃದಯವನ್ನು ಭೇದಿಸಿದ ಪ್ರಖರ ನಖಗಳನ್ನು ಸ್ತುತಿಸಲಾಗಿದೆ. ಲಕ್ಷ್ಮೀಪತಿಯಾದ ಶ್ರೀಹರಿಗಿಂತ ಉತ್ತಮ ವಸ್ತುವು ಈ ಜಗತ್ತಿನಲ್ಲಿಯೇ ಇಲ್ಲ. ಲೋಕದಲ್ಲಿ ಭೋಜನದಲ್ಲಿ ಆರು ರಸಗಳನ್ನು ಮಾತ್ರ ನಾವು ಆಸ್ವಾದಿಸುತ್ತೇವೆ. ಏಳನೆಯ ರಸವನ್ನು ಯಾರೂ ಅನುಭವಿಸಿಲ್ಲ. ಎಂಟನೆಯ ರಸವಂತೂ ಇಲ್ಲವೇ ಇಲ್ಲ. ಅದರಂತೆ ಭಗವಂತನಿಗೆ ಸಮನಾದವನು ಇಲ್ಲ. ಅವನಿಗಿಂತ ಉತ್ತಮವಾದ ವಸ್ತುವು ಸರ್ವಥಾ ಇಲ್ಲ. ಬ್ರಹ್ಮಾದಿ ಸಕಲ ದೇವತೆಗಳೂ ಭಗವಂತನ ಅಧೀನ. ದೈತ್ಯ ಮದಗಜಗಳನ್ನು ಮರ್ದಿಸಬಲ್ಲ ಭಗವಂತನ ನರಸಿಂಹಾವತಾರದ ವಜ್ರತುಲ್ಯನಖಗಳ ಪ್ರಖರ ಪ್ರಕಾಶದಿಂದ ದೇವತೆಗಳ ಕಷ್ಟದ ಕತ್ತಲೆಯು ಕರಗಿಹೋಗಿ ಶಾಂತಪ್ರಸನ್ನ ಮನಸ್ಸಿನಿಂದ ಅವರೆಲ್ಲರೂ ಈ ನಖಗಳನ್ನು ಧ್ಯಾನಿಸುತ್ತಾರೆ. ಇದು ಈ ಎರಡು ಪದ್ಯಗಳ ಭಾವಾರ್ಥವಾಗಿದೆ. "ಪಾಂತ್ವಸ್ಮಾನ್" ಈ ಪದ್ಯ ದಲ್ಲಿ ಪೂರ್ವಾರ್ಧವು "ಶಾರ್ದೂಲ ವಿಕ್ರೀಡಿತ" ಎನ್ನುವ ಹತ್ತೊಂಭತ್ತು ಅಕ್ಷರಗಳ ವೃತ್ತದಲ್ಲಿ ರಚಿಸಲ್ಪಟ್ಟಿ ದ್ದರೆ, ಉತ್ತರಾರ್ಧವು ಇಪ್ಪತ್ತೊಂದು ಅಕ್ಷರಗಳ "ಸ್ರಗ್ಧರಾ" ವೃತ್ತದಲ್ಲಿ ರಚಿತವಾಗಿದೆ. ಎರಡು ಛಂದಸ್ಸು ಗಳ ಈ ವಿಚಿತ್ರ ಸಂಯೋಜನೆಯು ಕಾವ್ಯದ ಸಂಪ್ರದಾಯಕ್ಕೆ ವಿರುದ್ಧವೆಂದು ಆಕ್ಷೇಪಿಸಬಹುದು. ಆದರೆ ಭಗವಂತನ ನರಸಿಂಹಾವತಾರವೇ ವಿಚಿತ್ರ ಸಂಯೋಜನೆಯಾಗಿದೆ. ಸಿಂಹ ಮತ್ತು ಮಾನವನ ವಿಚಿತ್ರ ಸಮಾವೇಶವು ನರಸಿಂಹ ರೂಪದಲ್ಲಿದೆ. ಇದನ್ನು ಧ್ವನಿತಗೊಳಿಸಲು ಈ ಶ್ಲೋಕದಲ್ಲಿ ಆಚಾರ್ಯರು ಎರಡು ಛಂದಸ್ಸುಗಳನ್ನು ಜೋಡಿಸಿದ್ದಾರೆ.

೩ - ೨೧ ಜಯಂತೀ ನಿರ್ಣಯ

ಕಲಿಯುಗದಲ್ಲಿ ಭಕ್ತರನ್ನು ವಿಶೇಷ ರೀತಿಯಿಂದ ಅನುಗ್ರಹಿಸಲು ಒಂದು ರೂಪದಿಂದ ಈ ನೆಲದಲ್ಲಿ ನೆಲಸಿದ ಶ್ರೀಕೃಷ್ಣನು ಭಕ್ತವರ್ಗಕ್ಕೆ ಅತ್ಯಂತ ಸನಿಹದವನು. ಅವನ ಜಯಂತಿಯನ್ನು ಉಪವಾಸ, ಉತ್ಸವಗಳಿಂದ ನಡೆಸುವ ವಿಧಾನವನ್ನು ತಿಳಿಸುವುದಕ್ಕಾಗಿಯೇ ಆಚಾರ್ಯರು ಜಯಂತೀಕಲ್ಪವನ್ನು ರಚಿಸಿದ್ದಾರೆ. ರೋಹಿಣೀ, ಮಧ್ಯರಾತ್ರಿ, ಕೃಷ್ಣಪಕ್ಷ, ಅಷ್ಟಮೀ ಈ ನಾಲ್ಕು ಸೇರಿದಾಗ ಅದನ್ನು ಜಯಂತಿಯೆಂದು ಕರೆಯುತ್ತಾರೆ. ಇದು ದೊರೆಯದಾಗ ಸಿಂಹ ಅಥವಾ ಶ್ರಾವಣಮಾಸಗಳ ಬಹುಳ ಅಷ್ಟಮಿಯನ್ನು ಕೃಷ್ಣಜನ್ಮಾಷ್ಟಮಿಯೆಂದು ಆಚರಿಸಲಾಗುವುದು. ಅಂದು ಬೆಳಗ್ಗಿನಿಂದ ಮಧ್ಯರಾತ್ರಿ ಯವರೆಗೂ ಮಾಡಬೇಕಾದ ಕಾರ್ಯಗಳನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸಿದ್ದಾರೆ. ಶ್ರೀಕೃಷ್ಣನಿಗೂ ಚಂದ್ರನಿಗೂ ಅರ್ಘ್ಯಪ್ರಧಾನದ ಕಾರ್ಯವನ್ನು ವಿವರಿಸಿ ಮರುದಿನ ಮಾಡಬೇಕಾದ ಪೂಜಾಪಾರಣಾದಿ ಗಳನ್ನೂ ಬೋಧಿಸಿದ್ದಾರೆ. ಶ್ರೀಕೃಷ್ಣನ ಜನ್ಮದಿನದಲ್ಲಿ ಉಪವಾಸವನ್ನು ಅವಶ್ಯವಾಗಿ ಮಾಡಬೇಕೆಂದು ವಿಧಿಸಿದ್ದಾರೆ.

೩ - ೨೨ ಯಮಕ ಭಾರತ

'ಯಮಕಭಾರತ' ಆಚಾರ್ಯರ ಶಬ್ದಸಂಪತ್ತಿಗೆ ನಿದರ್ಶನವಾದ ಒಂದು ಕೃತಿ. 'ಯಮಕ' ಶಬ್ದಾಲಂಕಾರ. ಒಗಟಿನಂತಿರುವ ಕ್ಲಿಷ್ಟ ಶಬ್ದಗಳನ್ನು ಬಿಡಿಸಿ ಅದರಲ್ಲಿ ಹುದುಗಿದ ತತ್ವಗಳನ್ನು ಅರಿತುಕೊಳ್ಳುವುದೇ ಒಂದು ಆನಂದ. 'ಯಮಕ' ಕಾವ್ಯದ ಗುಣವಾದರೂ ಈ ಕೃತಿ ಕೇವಲ ಕಾವ್ಯರಸವನ್ನಷ್ಟೇ ಸುರಿಸುತ್ತಿಲ್ಲ. ಮಹಾಭಾರತದ ಕಥೆಯಲ್ಲಿ ಅಡಗಿದ ಅನೇಕ ಸೂಕ್ಷ್ಮ ತತ್ತ್ವಗಳನ್ನು ಆಚಾರ್ಯರು ಇಲ್ಲಿ ತಿಳಿಸಿಕೊಟ್ಟಿದ್ದಾರೆ. ಭೀಮನ ಭಾಗವತನಿಷ್ಠೆ, ದ್ರೌಪದಿಯ ಪಾತಿವ್ರತ್ಯ ಮೊದಲಾದ ವಿಷಯಗಳ ಬಗ್ಗೆ ಬರುವ ಸಂಶಯವನ್ನು ಆಚಾರ್ಯರು ಇಲ್ಲಿ ಪರಿಹರಿಸಿದ್ದಾರೆ. ಶ್ರೀಕೃಷ್ಣನ ಅವತಾರ, ಬಾಲ್ಯಲೀಲೆಗಳು, ಅಸುರಸಂಹಾರ ಮೊದಲಾದ ಕಥೆಗಳು ಒಗಟಿನ ರೂಪದಲ್ಲಿ ಶಬ್ದ ಸೌಂದರ್ಯದೊಂದಿಗೆ ಇಲ್ಲಿ ಮೂಡಿಬಂದಿದೆ. 'ಭ' ಎಂಬ ಒಂದೇ ಅಕ್ಷರದಿಂದ ಅರ್ಥವತ್ತಾದ ಒಂದು ಶ್ಲೋಕದ ರಚನೆ, ಕೊನೆಯಿಂದ ಓದಿಕೊಂಡು ಬರುವಾಗ ಒಂದು ಅರ್ಥವನ್ನು ನೀಡಿದರೆ ಮೊದಲಿನಿಂದ ಕೊನೆಯ ವರೆಗೆ ಓದಿಕೊಂಡು ಹೋದಾಗ ಬೇರೆಯೇ ಅರ್ಥವನ್ನು ನೀಡುವ ವಿಚಿತ್ರ ಶ್ಲೋಕದ ರಚನೆ ವೇದಾಂತಿಗಳಾದ ಆಚಾರ್ಯರ ಶಬ್ದಪಾಂಡಿತ್ಯಕ್ಕೆ ಅಚ್ಚರಿಪಡುವಂತಿದೆ.

(ಶ್ರೀ ಸರ್ವಮೂಲ ಗ್ರಂಥಗಳು, ಸಂಪುಟ – ೭, ಸಂಕೀರ್ಣ ಗ್ರಂಥಗಳು. ಅನುವಾದಕರು – ಆನಂದತೀರ್ಥ ನಾಗಸಂಪಿಗೆ, ಎ. ಹರಿದಾಸ ಭಟ್ಟ, ಅನಂತ ತಂತ್ರಿ, ರಾಮವಿಟ್ಠಲ ಆಚಾರ್ಯ, ಹಯವದನ ಪುರಾಣಿಕ, ೧೯೭೮. ಅಖಿಲ ಭಾರತ ಮಾಧ್ವ ಮಹಾಮಂಡಲ, ಆನಂದತೀರ್ಥ ಪ್ರತಿಷ್ಠಾನ, ಬೆಂಗಳೂರು.)

೩-೨೩

ಖಂಡನತ್ರಯ – ತತ್ತ್ವೋದ್ಯೋತ

ಪ್ರಕರಣವೆಂದರೆ

ಮಾಯಾವಾದಖಂಡನ, ಉಪಾಧಿಖಂಡನ, ಮಿಥ್ಯಾತ್ವಾನುಮಾನಖಂಡನ ಮತ್ತು ತತ್ತ್ವೋದ್ಯೋತ ಈ ನಾಲ್ಕು ಪ್ರಕರಣಗಳಲ್ಲಿ ವಿಶ್ವದ ಸತ್ಯತೆ ಮತ್ತು ಜೀವ, ಜಡ ಮತ್ತು ಪರಮಾತ್ಮರಲ್ಲಿರುವ ಭೇದದ ಯಥಾರ್ಥತೆಯನ್ನು ಅನೇಕ ಪ್ರಮಾಣಗಳಿಂದ ಸಮರ್ಥಿಸಿ ಅದರ ಮೇಲೆ ಉಂಟಾಗುವ ಸಂಶಯ ಆಕ್ಷೇಪಗಳನ್ನು ಸಂಕ್ಷೇಪವಾಗಿ ಪರಿಹರಿಸಲಾಗಿದೆ. ಶಾಸ್ತ್ರದ ನಿರ್ದಿಷ್ಟ ಗುರಿಗೆ ಅನುಕೂಲವಾಗುವಂತೆ ಶಾಸ್ತ್ರದಲ್ಲಿ ಹೇಳಿದ ಕೆಲವಂಶಗಳನ್ನು ಸಮರ್ಥನೆ ಮಾಡುವುದೇ ಪ್ರಕರಣದ ಲಕ್ಷಣವಾಗಿದೆ. ಭಗವಂತನು ಸರ್ವೋತ್ತಮನೆಂದು ಪ್ರತಿಪಾದಿಸಿ ಅವನಲ್ಲಿ ಭಕ್ತಿಯನ್ನು ಮೂಡಿಸಿ ಅವನ ಅನುಗ್ರಹದಿಂದ ಜೀವರಿಗೆ ಮುಕ್ತಿಯನ್ನು ದೊರಕಿಸುವುದೇ ಶಾಸ್ತ್ರದ ಗುರಿ. ಆದರೆ ಈ ಪ್ರಪಂಚವೇ ಮಿಥ್ಯೆಯಾಗಿ ಅದಕ್ಕೆ ಅಸ್ತಿತ್ವವೇ ಇಲ್ಲದಿದ್ದರೆ ಪರಮಾತ್ಮನು ಸರ್ವೋತ್ತಮನೆನಿಸುವುದು ಹೇಗೆ? ಈ ವಿಶ್ವಕ್ಕಿಂತ ದೇವನು ಬೇರೆಯಲ್ಲದಿದ್ದರೆ ಅವನು ಹೇಗೆ ವಿಶ್ವದ ಸ್ವಾಮಿಯಾಗಬಲ್ಲನು? ಆದ್ದರಿಂದ ಪರಮಾತ್ಮನು ಸರ್ವೋತ್ತಮನಾಗಬೇಕಾದರೆ ಜಗತ್ತು ಮತ್ತು ಭೇದ ಪ್ರಪಂಚವು ಸತ್ಯವೆಂದು ಸಿದ್ಧವಾಗಲೇಬೇಕಾಗುತ್ತದೆ. ಹೀಗೆ ಶಾಸ್ತ್ರದ ಉದ್ದೇಶಸಿದ್ಧಿಗಾಗಿ ವಿಶ್ವ ಮತ್ತು ಭೇದದ ಸತ್ಯತೆಯನ್ನು ಪ್ರತಿಪಾದಿಸುವುದರಿಂದ ಇವುಗಳು ಪ್ರಕರಣ ಗಳೆನಿಸಿವೆ.

ಜಗತ್ತು ಸತ್ಯ

ಜಗತ್ತು ಸತ್ಯವೆಂಬುದು ಅನೇಕ ಪ್ರಮಾಣಗಳಿಂದ ಸಿದ್ಧವಾಗಿರುವಾಗ ಅದನ್ನು ಅಲ್ಲಗಳೆಯುವುದು ಸರಿಯಲ್ಲವೆಂದು ಆಚಾರ್ಯರು ಪ್ರತಿಪಾದಿಸಿದ್ದಾರೆ. 'ವಿಶ್ವಂ ಸತ್ಯಂ' 'ಯಥಾತಥ್ಯತೋಽರ್ಥಾನ್ ವ್ಯದಧಾತ್' ಮುಂತಾದ ವೇದವಾಕ್ಯಗಳು ಸುಸ್ಪಷ್ಟವಾಗಿ ಜಗತ್ತಿನ ಸತ್ಯತ್ವವನ್ನು ಪ್ರತಿಪಾದಿಸುತ್ತವೆ. 'ಅಸತ್ಯಮಪ್ರತಿಷ್ಠಂ ತೇ' ಎಂಬುದಾಗಿ ಗೀತಾವಾಕ್ಯವೂ ಜಗತ್ತು ಅಸತ್ಯವೆಂದು ಹೇಳುವುದನ್ನು ಉಗ್ರವಾಗಿ ಖಂಡಿಸಿದೆ. ಮಾತ್ರವಲ್ಲದೆ, ವಿಶ್ವದ ಇರುವಿಕೆಯನ್ನು ನಾವು ಪ್ರತ್ಯಕ್ಷವಾಗಿ ಅನುಭವಿಸುತ್ತಿದ್ದೇವೆ. ಪ್ರತ್ಯಕ್ಷಗೋಚರವಾದ ವಿಷಯವನ್ನು ಬರೇ ಯುಕ್ತಿ ಮತ್ತು ವಾಕ್ಯಗಳ ಆಧಾರದಿಂದ ನಿರಾಕರಿಸುವುದು

ಸರಿಯಲ್ಲ. ಅತೀಂದ್ರಿಯನಾದ ವಿಷಯಗಳ ಬಗ್ಗೆ ವೇದವು ಅಧಿಕೃತ ಪ್ರಮಾಣವಾಗಬಹುದಾದರೂ ಪಂಚೇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳ ಬಗ್ಗೆ ಪ್ರತ್ಯಕ್ಷವೇ ಅಂತಿಮ ಪ್ರಮಾಣವಾಗಿದೆ. ಪ್ರತ್ಯಕ್ಷದಿಂದ ವಿಶ್ವದ ಪ್ರತಿಯೊಂದು ವಸ್ತುವಿನ ಅಸ್ತಿತ್ವವು ಸಿದ್ಧವಾಗುತ್ತಿರುವಾಗ ಇತರ ಯಾವ ಪ್ರಮಾಣಗಳೂ ಅದನ್ನು ಅಲ್ಲಗಳೆಯಲಾರವು.

ಇಲ್ಲಿ ಒಂದು ಪ್ರಶ್ನೆ. ಪ್ರತ್ಯಕ್ಷದಿಂದ ಚಂದ್ರಮಂಡಲವು ಅಂಗೈಯಗಲವಾಗಿ ಚಿಕ್ಕದಾಗಿ ಕಾಣಿಸುತ್ತದೆ. ಆದರೂ ತರ್ಕದ ಆಧಾರದಿಂದ ಚಂದ್ರಮಂಡಲವು ಬಹಳ ದೊಡ್ಡದೆಂದು ನಾವು ನಿರ್ಧರಿಸುತ್ತೇವೆ. ಇಲ್ಲಿ ತರ್ಕವು ಪ್ರತ್ಯಕ್ಷದಿಂದಲೂ ಪ್ರಬಲವಾಗಲಿಲ್ಲವೇ? ಪ್ರತ್ಯಕ್ಷಕ್ಕೆ ಯಾವ ಪ್ರಮಾಣವೂ ಎದುರಲ್ಲವೆಂಬ ಮಾತನ್ನು ನಾವು ಹೇಗೆ ಒಪ್ಪುವುದು ?

– ಇದಕ್ಕೆ ಆಚಾರ್ಯರು ಹೀಗೆ ಸಮಾಧಾನವನ್ನು ಹೇಳಿದ್ದಾರೆ. ಇಲ್ಲಿ ಪ್ರತ್ಯಕ್ಷವು ಆರಂಭದಲ್ಲಿಯೇ ಡೋಲಾಯಮಾನವಾಗಿ ಜನಿಸಿದೆ. ದೂರದ ವಸ್ತುವನ್ನು ಗ್ರಹಿಸುವಾಗ ಅದರ ಅಳತೆಯು ತಪ್ಪಾಗಿ ತೋರುತ್ತದೆ ಎಂಬುದನ್ನು ಎಲ್ಲರೂ ಬಲ್ಲರು. ದೂರದ ಬೆಟ್ಟದ ಮೇಲೆ ದೊಡ್ಡ ಮರಗಳು ಬಹಳ ಚಿಕ್ಕದಾಗಿ ಕಾಣುವುದು ಸಣ್ಣ ಮಕ್ಕಳಿಗೂ ಗೊತ್ತಿದೆ. ಆದುದರಿಂದ ಚಂದ್ರಮಂಡಲವನ್ನು ಚಿಕ್ಕದಾಗಿ ಗ್ರಹಿಸುವ ಪ್ರತ್ಯಕ್ಷವು ಹುಟ್ಟುವಾಗಲೇ ಸ್ವಯಂ ಬಾಧಿತವಾಗಿರುತ್ತದೆ. ಅದು ದೃಢವಾದ ಪ್ರತ್ಯಕ್ಷವೇ ಅಲ್ಲ. ಆದುದರಿಂದ ತರ್ಕವು ಅದನ್ನು ಬಾಧಿಸಬಲ್ಲುದು. ಆದರೆ ಜಗತ್ತಿನ ಅಸ್ತಿತ್ವವನ್ನು ಗ್ರಹಿಸುವ ಪ್ರತ್ಯಕ್ಷವು ದುರ್ಬಲವೇನೂ ಅಲ್ಲ. ಅದು ಆವಾವ ಪದಾರ್ಥಗಳ ಇರುವಿಕೆಯನ್ನು ಅತ್ಯಂತ ದೃಢವಾಗಿ ಗ್ರಹಿಸುತ್ತದೆ. ಇಂತಹ ಪ್ರತ್ಯಕ್ಷಕ್ಕೆ ವಿರೋಧವಾಗಿ ಇತರ ಯಾವ ಪ್ರಮಾಣಗಳೂ ಜಗತ್ತು ಮಿಥ್ಯೆಯೆಂದು ಸಾಧಿಸಲಾರವು. ಹೀಗೆ ವೇದ ಮತ್ತು ಪ್ರತ್ಯಕ್ಷದ ಆಧಾರಗಳಿಂದ ಜಗತ್ತು ಸತ್ಯವೆಂಬುದನ್ನು ಸಿದ್ಧಪಡಿಸಲಾಗಿದೆ.

ಜಗತ್ತು ಅಸತ್ಯ ಎನ್ನುವ ಯುಕ್ತಿ ಸರಿಯಲ್ಲ

ಜಗತ್ತು ಸತ್ಯವಲ್ಲವೆಂದು ಪ್ರತಿಪಾದಿಸುವವರು ಹೇಳುವ ಯುಕ್ತಿಯು ಹೀಗಿದೆ. ಜ್ಞಾನಕ್ಕೆ ಗೋಚರವಾಗವ ವಸ್ತುಗಳೆಲ್ಲಾ ಸುಳ್ಳೆಂದು ನಾವು ಅನೇಕ ಕಡೆಗಳಲ್ಲಿ ನೋಡುತ್ತಿದ್ದೇವೆ. ಹಗ್ಗವನ್ನು ಹಾವೆಂದೂ ಚಿಪ್ಪಿಯನ್ನು ಬೆಳ್ಳಿಯೆಂದೂ ಭ್ರಮಿಸಿದಾಗ ಜ್ಞಾನಗೋಚರವಾದ ಆ ವಸ್ತುಗಳೆಲ್ಲವೂ ಸುಳ್ಳಾಗಿವೆ. ಸ್ವಪ್ನದಲ್ಲಿ ನಮಗೆ ತೋರುವ ಪದಾರ್ಥಗಳೂ ಮಿಥ್ಯೆಯೇ ಆಗಿವೆ. ಅದರಂತೆ ನಮಗೆ ಕಾಣುವ ಈ ದೃಶ್ಯ ಪ್ರಪಂಚವೂ ಸತ್ಯವಲ್ಲವೆಂಬುದು ಅವರ ಪ್ರತಿಪಾದನೆಯಾಗಿದೆ. ಆದರೆ ಜ್ಞಾನಗೋಚರವಾದದ್ದೆಲ್ಲಾ ಸುಳ್ಳೆಂಬ ನಿಯಮವನ್ನು ಒಪ್ಪಲು ಸಾಧ್ಯವಿಲ್ಲ. ಆ ರೀತಿ ಹೇಳುವುದಾದರೆ ಪರಮಾತ್ಮನನ್ನೂ ಸತ್ಯವೆಂದು ಒಪ್ಪಲು ಸಾಧ್ಯವಾಗಲಾರದು. ವೇದ ಮುಂತಾದ ವಾಕ್ಯಗಳಿಂದ ನಾವು ಅವನನ್ನು ತಿಳಿಯುತ್ತೇವೆ. ಜ್ಞಾನಿಗಳಿಗಂತೂ ಅಪರೋಕ್ಷ ಜ್ಞಾನಕ್ಕೆ ಅವನು ವಿಷಯನಾಗಿದ್ದಾನೆ. ಪರಮಾತ್ಮನ ಜ್ಞಾನವೇ ಇಲ್ಲದಿದ್ದರೆ ಸಂಸಾರಕ್ಕೆ ಮೂಲವಾದ ಈ ಅಜ್ಞಾನದ ವಿನಾಶವು ಹೇಗೆ? ಭಗವಂತನ ಅಜ್ಞಾನದಿಂದಲೇ ಈ ಸಂಸಾರ, ಅವನ ಜ್ಞಾನದಿಂದಲೇ ಇದರ ಬಿಡುಗಡೆ. ಆದುದರಿಂದ ಪರಮಾತ್ಮನನ್ನು ಜ್ಞಾನಗೋಚರನೆಂದು ನಾವು ಒಪ್ಪಲೇಬೇಕಾಗುತ್ತದೆ. ಜ್ಞಾನಗೋಚರವಾದುದೆಲ್ಲವೂ ಅಸತ್ಯವೇ ಆದಲ್ಲಿ ಈ ಪರಮಾತ್ಮನನ್ನು ಅಸತ್ಯದ ವರ್ಗದಲ್ಲಿ ಪರಿಗಣಿಸಬೇಕಾಗುತ್ತದೆ. ಹೀಗೆ ಇಂತಹ ಟೊಳ್ಳು ನಿಯಮದ ಆಧಾರದಿಂದ ಜಗತ್ತನ್ನು ಅಸತ್ಯವೆಂದು ಸಾಧಿಸುವುದು ಸರಿಯಲ್ಲ.

ಮಾತ್ರವಲ್ಲದೆ, ಪ್ರತ್ಯಕ್ಷಕ್ಕೆ ವಿರುದ್ಧವಾಗಿ ಕೇವಲ ತರ್ಕದ ಆಧಾರದಿಂದ ಯಾವುದನ್ನೂ ನಾವು ಸಾಧಿಸಲಾರೆವು. ಜಿಂಕೆ, ಹಸು ಮುಂತಾದ ಪ್ರಾಣಿಗಳಿಗೆ ಕೋಡುಗಳಿವೆ ಎಂಬ ಕಾರಣದಿಂದ ಪ್ರಾಣಿಗಳಾದ ಬೆಕ್ಕು ನಾಯಿಗಳಿಗೂ ಕೋಡುಗಳಿವೆಯೆಂದು ಸಾಧಿಸಲು ಹೊರಟರೆ ಅದು ಬರೇ ಅಪಹಾಸದ

ವಿಷಯವಾಗುತ್ತದೆ. ಅದರಂತೆ ಜಗತ್ತು ಸತ್ಯವೆಂದು ಪ್ರತ್ಯಕ್ಷದಿಂದ ಸಿದ್ಧವಾಗುವಾಗ ಬರೇ ಯುಕ್ತಿಯನ್ನು ಆಧರಿಸಿ ಅದನ್ನು ಅಲ್ಲಗಳೆಯುವುದು ಸರಿಯಲ್ಲ. ಯಾವುದೇ ವಸ್ತುವನ್ನು ಅಸತ್ಯವೆಂದು ನಿರ್ಧರಿಸಲು ಅದು ಪ್ರಮಾಣವಿರುದ್ಧವೇ? ಎಂಬುದನ್ನು ನಾವು ಪರಿಶೀಲಿಸಬೇಕಲ್ಲದೆ ನಮಗೆ ಅದು ತೋರುತ್ತದೆ ಯೆಂಬ ಇಷ್ಟೆ ಕಾರಣದಿಂದ ಅದನ್ನು ಮಿಥ್ಯೆಯೆಂದು ಹೇಳುವುದಲ್ಲ. ವಸ್ತುವಿನ ಅಸ್ತಿತ್ವದಲ್ಲಿ ನಮಗೆ ಸಂದೇಹವಿದ್ದಾಗ ಸ್ವತಃ ನಾವು ಕಣ್ಣಿನಿಂದ ನೋಡಿ ಅದು ಇದೆಯೆಂದು ನಿರ್ಧರಿಸುತ್ತೇವೆ. ಹೀಗಿರುವಾಗ ನಮ್ಮ ಕಣ್ಣಿಗೆ ತೋರುತ್ತಿರುವುದರಿಂದ ಜಗತ್ತು ಇಲ್ಲವೆಂದು ಹೇಳುವುದು ಎಷ್ಟು ಅಸಂಬದ್ಧವೆಂಬುದನ್ನು ನಾವು ಊಹಿಸಬಹುದು.

ಜಗತ್ತು ಅನಿರ್ವಚನೀಯವಲ್ಲ

ಜಗತ್ತು ಮಿಥ್ಯೆಯೆಂದರೆ ಯಾರಿಗೂ ಎಲ್ಲಿಯೂ ಪ್ರತೀತಿಗೋಚರವಾಗದ ಮೊಲದ ಕೋಡಿನಂತೆ ಅತ್ಯಂತ ಅಸತ್ಯವೆಂದು ಅರ್ಥವಲ್ಲ. ಬ್ರಹ್ಮನಂತೆ ಸತ್ಯವೂ ಅಲ್ಲದ ಮೊಲದ ಕೋಡಿನಂತೆ ಅಸತ್ಯವೂ ಅಲ್ಲದ ಅನಿರ್ವಚನೀಯ ವಸ್ತುವೇ ಈ ಜಗತ್ತು. ಸತ್ಯವೂ ಅಸತ್ಯವೂ ಅಲ್ಲದ ಮೂರನೇ ಪ್ರಕಾರವನ್ನು ಈ ಜಗತ್ತಿಗೆ ಅಂಗೀಕರಿಸುವುದಾಗಿ ಮಾಯಾವಾದಿಗಳು ಹೇಳುತ್ತಾರೆ. ಆದರೆ ಇಂತಹ ಸತ್ಯವೂ ಅಸತ್ಯವೂ ಅಲ್ಲದ ಅನಿರ್ವಚನೀಯ ವಸ್ತುವನ್ನು ಯಾರೂ ಎಲ್ಲಿಯೂ ನೋಡಿಲ್ಲ. ವಸ್ತುವು ಒಂದೋ ಸತ್ಯವಾಗಿರುತ್ತದೆ ಅಥವಾ ಅಸತ್ಯವಾಗಿರುತ್ತದೆ. ಎರಡೂ ಅಲ್ಲದ ವಸ್ತುವು ಯಾರ ಅನುಭವಕ್ಕೂ ಗೋಚರವಾಗಿಲ್ಲ. ಕಲ್ಪನೆಗೂ ನಿಲುಕದ ವಸ್ತುವನ್ನು ತರ್ಕದ ಬಲದಿಂದ ಸಾಧಿಸಲು ಶಕ್ಯವೇ ? ಬೆಟ್ಟದಲ್ಲಿ ಬಂಗಾರದ ಬೆಂಕಿಯನ್ನು ಸಾಧಿಸಲು ಹೊರಟವನು ಅಪಹಾಸ್ಯಕ್ಕೀಡಾಗುವುದಿಲ್ಲವೇ ?

''ಹಗ್ಗದಲ್ಲಿ ಹಾವನ್ನು ಭ್ರಮಿಸುತ್ತೇವೆ. ಪರಿಶೀಲಿಸಿದ ನಂತರ ಇದು ಹಾವಲ್ಲವೆನ್ನುವ ಬಾಧಾಜ್ಞಾನ ವುಂಟಾಗುವುದರಿಂದ ಇದನ್ನು ಸತ್ಯವೆಂದು ಹೇಳಲಾರೆವು. ಭ್ರಮೆಯ ಸಮಯದಲ್ಲಿ ಹಾವಿನ ಪ್ರತೀತಿಯೂ ನಮಗೆ ಬರುತ್ತದೆ. ಅಸತ್ಯವು ಜ್ಞಾನಗೋಚರವಾಗಲಾರದು. ಆದುದರಿಂದ ಭ್ರಮೆಯಲ್ಲಿ ತೋರುವ ಹಾವು ಅರ್ಥಾತ್ ಸತ್ಯವೂ ಅಸತ್ಯವೂ ಅಲ್ಲದ ವಸ್ತುವೆಂದು ಹೇಳಬೇಕಾಗುತ್ತದೆ. ಅದರಂತೆ ಈಗ ನಮಗೆ ಜ್ಞಾನಗೋಚರವಾಗಿದ್ದರೂ ಬ್ರಹ್ಮಜ್ಞಾನದ ನಂತರ ಇಲ್ಲವಾಗುವುದರಿಂದ ಈ ಜಗತ್ತು ಸತ್ಯವೂ ಅಸತ್ಯವೂ ಅಲ್ಲದೆ ಅನಿರ್ವಚನೀಯ ವಸ್ತು'' ಎಂದು ಮಾಯಾವಾದಿಗಳ ಸಮರ್ಥನೆಯಾಗಿದೆ.

ಇದೂ ಸರಿಯಲ್ಲ. ಹಗ್ಗದಲ್ಲಿ ಕಾಣುವ ಹಾವು ವಿಮರ್ಶೆಯ ನಂತರ ಇಲ್ಲವೆಂದು ತೋರುವುದರಿಂದ, ಬಾಧಿತವಾದ ಅದು ಸತ್ಯವಲ್ಲವೆಂದು ಹೇಳುವುದು ಸರಿ. ಆದರೆ ಭ್ರಮೆಯಲ್ಲಿ ತೋರುವುದರಿಂದ ಅದು ಅಸತ್ಯವೂ ಅಲ್ಲವೆಂದು ಹೇಳುವುದು ಸರ್ವಥಾ ಅನುಚಿತ. ಇಲ್ಲದೆ ಇದ್ದುದನ್ನು ಗ್ರಹಿಸುವುದರಿಂದಲೇ ಅದು ಭ್ರಮೆಯೆನಿಸುತ್ತದೆ. ಅಸತ್ಯವಾದದ್ದು ಭ್ರಮೆಯಲ್ಲಿಯೂ ತೋರ ಬಾರದೆಂದು ನಾವು ಖಂಡಿತವಾಗಿಯೂ ನಿರ್ಬಂಧಿಸಲಾರೆವು. ಅಸತ್ತಿನ ಜ್ಞಾನವೇ ಇಲ್ಲದಿದ್ದರೆ ಇದು ಅಸತ್ಯವಲ್ಲವೆನ್ನುವುದನ್ನೂ ನಾವು ತಿಳಿಯಲಾರೆವು. ವಸ್ತುವನ್ನು ನಿಷೇಧಿಸಬೇಕಾದರೂ ಅದರ ಜ್ಞಾನ ಬೇಡವೇ ? ಆದುದರಿಂದ ಹಗ್ಗದಲ್ಲಿ ತೋರುವ ಹಾವು ಜ್ಞಾನಗೋಚರವಾದರೂ ಅಸತ್ಯವೆನ್ನಲು ಯಾವ ಅಡ್ಡಿಯೂ ಇಲ್ಲ. ಆದ್ದರಿಂದ ಆ ಹಾವು ಸತ್ಯವೂ ಅಲ್ಲದ ಅಸತ್ಯವೂ ಅಲ್ಲದ ಅನಿರ್ವಚನೀಯ ವಸ್ತುವಲ್ಲ.

ಬ್ರಹ್ಮಜ್ಞಾನದ ನಂತರ ವಿಶ್ವವು ಇಲ್ಲವೆನಿಸುವುದರಿಂದ ಜಗತ್ತು ಮಿಥ್ಯೆ ಎಂದು ಹೇಳುವುದು ಬರೇ ಕಲ್ಪನೆ. ಬ್ರಹ್ಮಜ್ಞಾನದ ನಂತರ ಜಗತ್ತು ಇಲ್ಲವಾಗುವುದೆಂಬುದನ್ನು ಯಾರಾದರೂ ಕಂಡಿದ್ದಾರೆಯೇ? ಹಾಗೆ ಕಂಡಿದ್ದರೆ ಅದನ್ನು ಅವರು ಉಳಿದವರಿಗೆ ಹೇಗೆ ತಿಳಿಸಿದರು ? ಮಾತು ಮತ್ತು ಅದಕ್ಕೆ ಬೇಕಾದ ದೇಹ

ಇಂದ್ರಿಯಗಳು ಕೇಳುವ ವ್ಯಕ್ತಿಗಳೂ ಇಲ್ಲದೆ ಬ್ರಹ್ಮಜ್ಞಾನದಿಂದ ಜಗತ್ತು ಇಲ್ಲವಾಗಿದೆಯೆಂದು ಅವರು ಹೇಗೆ ತಿಳಿಸಬಲ್ಲರು ? ಏನೂ ಆಧಾರವಿಲ್ಲದೆ ಇಂತಹ ಕಲ್ಪನೆಯನ್ನು ಮಾಡುವುದು ಸರಿಯಲ್ಲ. ಹೀಗಾಗಿ ಸತ್ಯವೂ ಅಸತ್ಯವೂ ಅಲ್ಲದ ವಸ್ತುವನ್ನು ಸಿದ್ಧಪಡಿಸಲು ಯಾವ ಆಧಾರವೂ ದೊರೆಯಲಾರದು.

ಅನಿರ್ವಚನೀಯಕ್ಕೆ ವೇದದ ಆಧಾರವೂ ಇಲ್ಲ

ಸತ್ಯವೂ ಅಸತ್ಯವೂ ಅಲ್ಲದ ಅನಿರ್ವಚನೀಯ ವಸ್ತುವಿದೆಯೆಂಬುದನ್ನು ಸಾಧಿಸಲು ವೇದವಾಕ್ಯವೊಂದನ್ನು ಉದಾಹರಿಸಲಾಗುತ್ತದೆ. 'ನಾಸದಾಸೀತ್ ನೋ ಸದಾಸೀತ್ ತದಾನೀಂ' ಎನ್ನುವ ವಾಕ್ಯದಲ್ಲಿ ಪ್ರಳಯಕಾಲದಲ್ಲಿ ಸತ್ಯವೂ ಇರಲಿಲ್ಲ, ಅಸತ್ಯವೂ ಇರಲಿಲ್ಲವೆಂದು ಉಲ್ಲೇಖಿಸಿ 'ತಮ ಆಸೀತ್' ಎಂಬುದಾಗಿ ತಮಸ್ಸಿನ ಅರ್ಥಾತ್ ಅವಿದ್ಯೆಯ ಅಸ್ತಿತ್ವವನ್ನು ನಿರೂಪಿಸಿದೆ.

ಸತ್ಯವೂ ಅಸತ್ಯವೂ ಇಲ್ಲದ ಕಾಲದಲ್ಲಿ ಅವಿದ್ಯೆಯು ಇರಬೇಕಾದರೆ ಅದು ಸದಸತ್ತುಗಳಿಗಿಂತ ಬೇರೆಯೆಂದೆ ಒಪ್ಪಬೇಕಾಗುತ್ತದೆ. ಇದೇ ಅನಿರ್ವಚನೀಯ ವಸ್ತುವಿನ ವಿಷಯದಲ್ಲಿ ಆಧಾರವೆಂದು ಹೇಳಲಾಗುತ್ತದೆ. ಈ ವಾಕ್ಯದ ಆಧಾರದಿಂದ ಅವಿದ್ಯೆಯನ್ನು ಸದಸತ್ತುಗಳಿಗಿಂತ ಭಿನ್ನವಾದ ಅನಿರ್ವಚನೀಯ ವಸ್ತುವೆಂದು ಹೇಳುವುದಾದರೆ ಪಾರಮಾರ್ಥಿಕ ವಸ್ತುವೆಂದು ಅಂಗೀಕರಿಸಲಾದ ಪರಮಾತ್ಮನನ್ನೂ ಇದೇ ಸಾಲಿನಲ್ಲಿ ಸೇರಿಸಬೇಕಾಗುತ್ತದೆ. ಆಗ ಅವಿದ್ಯೆಯಂತೆ 'ಆನೀದವಾತಂ ಸ್ವಧಯಾ ತದೇಕಂ' ಎಂದು ಬ್ರಹ್ಮನ ಅಸ್ತಿತ್ವವನ್ನೂ ವೇದವು ಹೇಳಿದೆ.

ಸತ್‌ಅಸತ್‌ಗಳು ಇಲ್ಲದಾಗ ಇರುವ ಬ್ರಹ್ಮನೂ ಅವಿದ್ಯೆಯಂತೆ ಸದಸತ್ತುಗಳಿಗಿಂತ ಬೇರೆಯಾದ ಅನಿರ್ವಚನೀಯ ವಸ್ತುವೆಂದು ಅನರ್ಥಕ್ಕೆ ಅವಕಾಶವಾಗುತ್ತದೆ. ಆದುದರಿಂದ ಈ ವಾಕ್ಯಗಳಿಗೆ ನಾವು ಬೇರೆಯೇ ಅರ್ಥವನ್ನು ಮಾಡಬೇಕು. ''ಮೂರ್ತಂ ಸದಿತಿ ಸಂಪ್ರೋಕ್ತಂ'' ಮುಂತಾದ ವಾಕ್ಯಗಳನ್ನು ಆಚಾರ್ಯರು ಉದಾಹರಿಸಿ ಪಂಚಭೂತಗಳಲ್ಲಿ ಸೇರಿದ ಪೃಥಿವೀ, ಜಲ, ತೇಜಸ್ಸುಗಳೆಂಬ ಮೂರ್ತವಸ್ತುಗಳನ್ನು ಸತ್ ಎಂಬುದಾಗಿ ವರ್ಗೀಕರಿಸಿ ವಾಯು, ಆಕಾಶಗಳೆಂಬ ಅಮೂರ್ತ ವಸ್ತುಗಳನ್ನು ಅಸತ್ ಎಂಬುದಾಗಿ ವಿಂಗಡಿಸಿ ತಮಸ್ಸು (ಪ್ರಕೃತಿ) ಪಂಚ ಭೂತಗಳಿಗಿಂತ ಬೇರೆ. ಅದರಂತೆ ಪರಬ್ರಹ್ಮನೂ ಪಂಚ ಭೂತಗಳಿಗಿಂತ ವಿಲಕ್ಷಣನು ಎನ್ನುವ ಅರ್ಥವನ್ನು ಈ ವಾಕ್ಯಕ್ಕೆ ತೋರಿಸಿದ್ದಾರೆ. ಈ ಅರ್ಥವನ್ನು ಸ್ವೀಕರಿಸಿದರೆ ಯಾವ ಪೂರ್ವಾಪರ ವಿರೋಧಗಳೂ ಇರುವುದಿಲ್ಲ. ಅಂತೂ ವೇದವಾಕ್ಯಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿದರೆ ಸದಸತ್‌ಗಳಿಗಿಂತ ಭಿನ್ನವಾದ ಅನಿರ್ವಚನೀಯ ವಸ್ತುವಿನ ವಿಷಯದಲ್ಲಿ ಯಾವ ಆಧಾರವೂ ದೊರೆಯಲಾರದು. ಆದುದರಿಂದ ಪ್ರತ್ಯಕ್ಷ, ವೇದವಾಕ್ಯ ಮತ್ತು ಯುಕ್ತಿಗಳ ಆಧಾರದಿಂದ ವಿಶ್ವವು ಸತ್ಯವೆಂದೇ ನಾವು ಒಪ್ಪಬೇಕು.

ಅದ್ವೈತವಾದದಲ್ಲಿ ಅಜ್ಞಾನವೆಂಬ ತತ್ತ್ವವನ್ನು ಸಾಧಿಸಲಾಗದು

ವಿಶ್ವವನ್ನು ಅಸತ್ಯವೆಂದು ಹೇಳುವವರು ಅದನ್ನು ಅಜ್ಞಾನದ ಕಲ್ಪನೆಯನ್ನುತ್ತಾರೆ. ವಸ್ತುವು ಇದ್ದ ಸ್ಥಿತಿಗಿಂತ ವ್ಯತ್ಯಾಸವಾಗಿ ತೋರಲು ಅಜ್ಞಾನವೇ ಕಾರಣ. ಆದರೆ ವಿಶ್ವದ ಕಲ್ಪನೆಗೆ ಕಾರಣವಾಗಿ ಒಂದು ಅಜ್ಞಾನವನ್ನು ನಿರೂಪಿಸಲು ಸಾಧ್ಯವಾಗುವುದಿಲ್ಲ. ಅಜ್ಞಾನ ಇದ್ದ ವಸ್ತುವನ್ನು ಮರೆಮಾಡಿ ಇಲ್ಲದ ವಸ್ತುವನ್ನು ನಮಗೆ ತೋರಿಸುತ್ತದೆ. ಜಗತ್ತಿನ ಕಲ್ಪನೆಗೆ ಮೂಲವಾದ ಅಜ್ಞಾನದಿಂದ ಮರೆಯಾಗುವಂತಹ ಸತ್ಯವಸ್ತುವು ಯಾವುದಿದೆ ? ಆತ್ಮನಂತೂ ಸ್ವಯಂಪ್ರಕಾಶ. ಅವನು ಸದಾ ನಮಗೆ ಗೋಚರನಾಗಿರುತ್ತಾನೆ. ಆದ್ದರಿಂದ ಅಜ್ಞಾನವು ಆತ್ಮನನ್ನು ಮರೆಮಾಡಲಾರದು. ಆತ್ಮನ ಹೊರತು ಉಳಿದುದೆಲ್ಲಾ ಅಸತ್ಯವೇ ಆಗಿದೆ. ಆದುದರಿಂದ ಅಜ್ಞಾನವು ಯಾರಿಗೆ, ಯಾವುದರ ಬಗ್ಗೆ ಎಂಬುದನ್ನೇ ನಿರೂಪಿಸಲು

ಸಾಧ್ಯವಾಗುವುದಿಲ್ಲ. ಹೀಗಾಗಿ ಅಜ್ಞಾನದ ಆಧಾರದ ಮೇಲೆ ಹೆಣೆಯುವ ವಿಶ್ವಮಿಥ್ಯಾತ್ವವಾದವು ನೆಲೆಯೇ ಇಲ್ಲದೆ ಕುಸಿದು ಹೋಗುತ್ತದೆ.

ಜೀವಾಭೇದ ಯುಕ್ತಿವಿರುದ್ಧ

ಈ ಪ್ರಕರಣಗಳಲ್ಲಿ ಜೀವ ಮತ್ತು ಪರಮಾತ್ಮರಿಗೆ ಭೇದವೇ ಇಲ್ಲ. ಅವರಿಬ್ಬರೂ ಮೂಲತಃ ಒಂದೇ ಎನ್ನುವ ಅದ್ವೈತವಾದವನ್ನು ವಿಶೇಷವಾಗಿ ವಿಮರ್ಶಿಸಲಾಗಿದೆ. ಎಲ್ಲಾ ಆತ್ಮರೂ ಒಂದೇ ಆಗಿದ್ದರೆ ಒಬ್ಬನು ಅನುಭವಿಸುವ ಸುಖದುಃಖಗಳ ಅನುಭವವು ಎಲ್ಲರಿಗೂ ಏಕೆ ಆಗುವುದಿಲ್ಲವೆನ್ನುವ ಸರಳ ಪ್ರಶ್ನೆಯನ್ನು ಆಚಾರ್ಯರು ಮುಂದಿಟ್ಟಿದ್ದಾರೆ. ಶರೀರದ ವಿಭಿನ್ನ ಅಂಗಗಳಲ್ಲೆಲ್ಲಾ ಒಬ್ಬನೇ ಆತ್ಮನು ಅನುಸ್ಯೂತನಾಗಿರುವನು. ಆದುದರಿಂದ ದೇಹದ ಯಾವುದೇ ಭಾಗಗಳಲ್ಲಿ ಆದ ನೋವಿನ ಸಂವೇದನೆಯು ನಮಗೆ ಆಗುತ್ತದೆ. ಕಾಲಿನಲ್ಲಿ ಆಗುವ ನೋವಿನ ಪರಿಹಾರಕ್ಕೆ ಕೈಗಳು ಧಾವಿಸುತ್ತವೆ. ಹಿಂದಿನ ಕಾಲದಲ್ಲಿ ಯೋಗಿಗಳು ಅನೇಕ ದೇಹಗಳನ್ನು ಧರಿಸಿ ಆ ಎಲ್ಲಾ ದೇಹಗಳಲ್ಲಿಯೂ ಸುಖದುಃಖಗಳನ್ನು ಅನುಭವಿಸಿ ತಮ್ಮ ಪ್ರಾರಬ್ಧಕರ್ಮಗಳನ್ನು ಕಳೆದುಕೊಂಡ ಉಲ್ಲೇಖವು ಪುರಾಣಗಳಲ್ಲಿ ಇದೆ. ಆತ್ಮವು ಒಂದೇ ಆಗಿದ್ದರೆ ದೇಹ ಅವಯವಗಳ ಭಿನ್ನತೆಯಿದ್ದರೂ ಈ ಎಲ್ಲಾ ದೇಹ, ಅವಯವಗಳಲ್ಲಿಯೂ ಒಬ್ಬನಿಗೇ ಸುಖದುಃಖಗಳ ಅನುಭವವಾಗಬೇಕು. ಜೀವರ ಎಲ್ಲಾ ಸುಖದುಃಖಗಳನ್ನು ಪರಮಾತ್ಮನೂ ಅನುಭವಿಸಬೇಕಾಗುತ್ತದೆ. ಆದರೆ ಇಂತಹ ಅನುಭವವು ನಮಗೆ ಯಾರಿಗೂ ಆಗುವುದಿಲ್ಲ. ಆದುದರಿಂದ ಈ ಎಲ್ಲಾ ದೇಹಗಳಲ್ಲೂ ಒಬ್ಬನೇ ಆತ್ಮನು ಇರುವನೆಂಬ ನಮ್ಮ ಅನುಭವಕ್ಕೆ ತೀರಾ ವಿಸಂಗತವಾದ ಸಂಗತಿಯನ್ನು ನಾವು ಹೇಗೆ ಒಪ್ಪುವುದು ?

ಜೀವಭೇದ ಔಪಾಧಿಕವಲ್ಲ

ಒಬ್ಬನೇ ಆದ ಅಖಂಡ ಆತ್ಮನಲ್ಲಿ ದೇಹ ಮನಸ್ಸು ಮುಂತಾದ ಉಪಾಧಿಗಳಿಂದಾಗಿ ಭೇದವು ನಿರ್ಮಾಣವಾಗುತ್ತದೆ. ಅದು ಸಹಜವಲ್ಲ, ಕೃತಕ. ಅಭೇದವೇ ಸ್ವಾಭಾವಿಕವೆಂದು ಹೇಳುವ ವಾದದಲ್ಲಿ ಇನ್ನೂ ಒಂದು ದೊಡ್ಡದಾದ ಹುಳುಕನ್ನು ಎತ್ತಿ ತೋರಿಸಬಹುದು. ಯಾವುದೇ ಒಂದು ಉಪಾಧಿಯು ವಸ್ತುವನ್ನು ವಿಂಗಡಿಸಿ ಭೇದವನ್ನು ತೋರಿಸಬೇಕಾದರೆ ಆ ಉಪಾಧಿಯು ಆ ವಸ್ತುವಿನ ಒಂದು ಭಾಗದಲ್ಲಿ ಇದ್ದುಕೊಂಡು ಈ ವಿಭಜನೆಯನ್ನು ಮಾಡಬೇಕು. ಬಟ್ಟೆಯ ಒಂದು ಭಾಗದಲ್ಲಿರುವ ಬಣ್ಣವು ಆ ಭಾಗವನ್ನು ಬೇರೆ ಭಾಗಗಳಿಂದ ಪ್ರತ್ಯೇಕಗೊಳಿಸುತ್ತದೆ. ಬಟ್ಟೆಯ ಯಾವುದೇ ಭಾಗದಲ್ಲಿ ಇರದ ಬಣ್ಣವು ಬಟ್ಟೆಯನ್ನು ಪ್ರತ್ಯೇಕಿಸಲಾರದು. ಅದರಂತೆ ಒಂದು ವಿಶಾಲವಾದ ಕೊಠಡಿಯನ್ನು ಮಧ್ಯದಲ್ಲಿ ಗೋಡೆಯನ್ನು ನಿರ್ಮಿಸಿ ಬೇರ್ಪಡಿಸುತ್ತೇವೆ. ಕೊಠಡಿಯನ್ನು ಪೂರ್ತಿಯಾಗಿ ಮಣ್ಣಿನಲ್ಲಿ ಮುಚ್ಚಿದರೆ ಅದನ್ನು ಎರಡು ಭಾಗವಾಗಿ ಮಾಡಲಾರೆವು. ಕೊಠಡಿಯ ಒಂದು ಭಾಗದಲ್ಲಿ ಗೋಡೆಯಿದ್ದರೆ ಮಾತ್ರ ಅದನ್ನು ಎರಡು ಕೋಣೆಯನ್ನಾಗಿ ವಿಭಜಿಸಬಹುದು. ಅದರಂತೆ ಒಂದು ಅಖಂಡ ಆತ್ಮವನ್ನು ಅನೇಕ ಆತ್ಮರನ್ನಾಗಿ ವಿಭಜಿಸಬೇಕಾದರೆ ಅದಕ್ಕೆ ಕಾರಣವಾದ ಉಪಾಧಿಯೂ ಆತ್ಮನ ಒಂದು ಭಾಗದಲ್ಲಿ ಇರಬೇಕಾಗುತ್ತದೆ. ಉಪಾಧಿಯಿಂದ ಕೃತಕ ಭೇದವುಂಟಾಗುವ ಮೊದಲು ಅಖಂಡ ಆತ್ಮನಲ್ಲಿ ಭಾಗವೆಲ್ಲಿದೆ? ಹೀಗಿರುವಾಗ ಆತ್ಮನ ಒಂದು ಭಾಗದಲ್ಲಿ ಉಪಾಧಿಯು ಇರಲು ಹೇಗೆ ಸಾಧ್ಯ ? ವಸ್ತುವಿನಲ್ಲಿ ಭಾಗವಿದ್ದರೆ ಮಾತ್ರ ಅಲ್ಲಿ ಉಪಾಧಿಯ ಸಂಬಂಧವುಂಟಾಗುತ್ತದೆ. ಆ ಉಪಾಧಿಯ ಸಂಬಂಧದಿಂದಲೇ ವಸ್ತುವಿನಲ್ಲಿ ಭಾಗವು ನಿರ್ಮಾಣಗೊಳ್ಳುತ್ತದೆ. ಹೀಗೆ ಪರಸ್ಪರ ಅವಲಂಬನ ಇರುವಾಗ ಆತ್ಮನಲ್ಲಿ ಉಪಾಧಿಸಂಬಂಧವನ್ನಾಗಲೀ ಭಾಗವನ್ನಾಗಲೀ ಹೇಗೆ ಕೂಡಿಸಲು ಸಾಧ್ಯ ?

ಐಕ್ಯಸಿದ್ಧಾಂತದಲ್ಲಿ ಶಾಸ್ತ್ರ ವ್ಯರ್ಥ

ಆತ್ಮವು ಒಂದೇ ಸತ್ಯ, ಆತ್ಮನಿಗಿಂತ ಭಿನ್ನವಾದುದೆಲ್ಲಾ ಕಾಲ್ಪನಿಕವೆನ್ನುವ ಅದ್ವೈತವಾದದ ಮೇಲೆ ಇನ್ನೊಂದು ಪ್ರಬಲ ಆಕ್ಷೇಪವನ್ನು ಆಚಾರ್ಯರು ಮಾಡಿದ್ದಾರೆ. ಶಾಸ್ತ್ರವು ಐಕ್ಯವನ್ನು ಪ್ರತಿಪಾದಿಸುತ್ತದೆಯೆಂದು ಅದ್ವೈತವಾದಿಗಳು ಪ್ರತಿಪಾದಿಸಿದ್ದಾರಷ್ಟೇ. ಆತ್ಮ ಮತ್ತು ಅಲ್ಲಿರುವ ಐಕ್ಯ ಇವೆರಡನ್ನೂ ವಿಭಿನ್ನವೆಂದು ಹೇಳಿದರೆ ಎರಡು ಸತ್ಯವಸ್ತುಗಳನ್ನು ಅಂಗೀಕರಿಸುವುದರಿಂದ ಅದ್ವೈತವಾದಕ್ಕೆ ಧಕ್ಕೆಯಾಗುವುದು. ಆತ್ಮನಿಗಿಂತ ವ್ಯತಿರಿಕ್ತವಾದ ವಸ್ತುವು ಸತ್ಯವಾಗಿರಲು ಸಾಧ್ಯವಿಲ್ಲವೆಂದು ಅದ್ವೈತದ ಸಿದ್ಧಾಂತ. ಐಕ್ಯವನ್ನು ಆತ್ಮನಿಂದ ಬೇರೆಯೇ ಎಂದು ಒಪ್ಪಿಕೊಂಡು ಅದನ್ನು ಅಸತ್ಯವೆಂದು ಹೇಳಲು ಸಾಧ್ಯವಿಲ್ಲ. ಶಾಸ್ತ್ರವು ಮುಖ್ಯವಾಗಿ ಬೋಧಿಸುವ ಐಕ್ಯವು ಅಸತ್ಯವಾದರೆ ಶಾಸ್ತ್ರವು ಪ್ರಮಾಣವಾಗುವುದು ಹೇಗೆ ? ಐಕ್ಯವು ಆತ್ಮನಿಗಿಂತ ಬೇರೆಯಲ್ಲ, ಆತ್ಮಸ್ವರೂಪವೇ ಆಗಿದೆ. ಸತ್ಯವೂ ಆಗಿದೆ. ಅದು ಸತ್ಯವಾಗಿದ್ದರೂ ಆತ್ಮನಿಗಿಂತ ಬೇರೆಯಾಗದೆ ಇರುವುದರಿಂದ ಸತ್ಯವು ಒಂದೇ ಎಂಬ ಸಿದ್ಧಾಂತಕ್ಕೂ ಭಂಗಬರುವುದಿಲ್ಲವೆಂದು ಹೇಳಿಯೂ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ. ಆತ್ಮನು ಸ್ವಪ್ರಕಾಶ. ಅವನ ಜ್ಞಾನವು ಎಲ್ಲರಿಗೂ ಯಾವಾಗಲೂ ಇದೆ. ಅವನ ಸ್ವರೂಪದ ಹೊರತು ಅವನಲ್ಲಿ ತಿಳಿಯಬೇಕಾದ ಬೇರೆ ಯಾವ ಧರ್ಮಗಳೂ ಆತನಲ್ಲಿ ಇಲ್ಲ. ಸ್ವಪ್ರಕಾಶನಾದ ಆತ್ಮನು ನಮಗೆ ಗೋಚರನಾದಾಗ ಆತನ ಸ್ವರೂಪವೇ ಆಗಿರುವ ಐಕ್ಯವು ನಮಗೆ ಸಹಜವಾಗಿ ತೋರಲೇಬೇಕಷ್ಟೆ. ಹೀಗಿರುವಾಗ ಶಾಸ್ತ್ರದಿಂದ ನಾವು ತಿಳಿಯಬೇಕಾದ ವಿಷಯವೇನಿದೆ? ಐಕ್ಯವನ್ನು ತಿಳಿದುಕೊಳ್ಳಲು ನಮಗೆ ಶಾಸ್ತ್ರ ಯಾಕೆ ಬೇಕು ? ಆತ್ಮನ ಜ್ಞಾನವು ನಮಗೆ ನಿರಂತರವೂ ಇದೆ. ಅದರ ಹೊರತು ನಾವು ತಿಳಿಯದ ಸತ್ಯ ವಸ್ತುವೇ ಇಲ್ಲ. ಹೀಗಾಗಿ ಶಾಸ್ತ್ರದಿಂದ ಏನು ತಿಳಯಬೇಕು? ಯಾವ ಅಜ್ಞಾನವನ್ನು ಕಳೆದುಕೊಳ್ಳಬೇಕು? ಮುಂತಾದ ಪ್ರಶ್ನೆಗಳಿಗೆ ಉತ್ತರವೇ ದೊರೆಯದೆ ಜಿಜ್ಞಾಸುಗಳು ಗೊಂದಲದಲ್ಲಿ ಸಿಲುಕಬೇಕಾಗುತ್ತದೆ.

ಅಖಂಡಾರ್ಥವಾದ

ಪರಮಾತ್ಮನಿಗೆ ಜೀವ ಮತ್ತು ಜಡರಿಂದ ಭೇದವೇ ಇಲ್ಲ. ಬ್ರಹ್ಮನೊಬ್ಬನೇ ಅಖಂಡವಸ್ತು. ಅವನಲ್ಲಿ ಯಾವ ಗುಣಗಳಾಗಲೀ ಧರ್ಮಗಳಾಗಲೀ ಇರುವುದಿಲ್ಲ. ಅವನಿಂದ ಬೇರೆಯಾಗಿ ಈ ಬಾಹ್ಯಪ್ರಪಂಚವೂ ಇಲ್ಲ. ಅಖಂಡವೂ ನಿರ್ಗುಣವೂ ಆದ ಪರಬ್ರಹ್ಮವಸ್ತುವೊಂದೇ ಸತ್ಯ. ನಮ್ಮ ಅನುಭವಕ್ಕೆ ಗೋಚರವಾಗುವ ಈ ಭೇದಪ್ರಪಂಚವು ಬರೇ ಕಾಲ್ಪನಿಕ. ಸ್ವಪ್ನದಲ್ಲಿ ವೈವಿಧ್ಯಪೂರ್ಣವಾದ ಹೊಸ ಪ್ರಪಂಚವೇ ನಮಗೆ ತೋರುತ್ತದೆ. ಆದರೆ ಎಚ್ಚರವಾದಾಗ ಇದೆಲ್ಲವೂ ಮಾಯವಾಗುವುದು. ಅದರಂತೆಯೇ ಈ ದೃಶ್ಯವಾದ ಭೇದಪ್ರಪಂಚದ ಸ್ಥಿತಿಯೂ ಆಗಿದೆ. ಈ ಕಾಡು ಮೋಡ ಗಿರಿನಗರಗಳು ಈ ಜೀವರಾಶಿ ವಿಚಿತ್ರ ಸೃಷ್ಟಿ ವೈಭವಗಳೆಲ್ಲವೂ ನಮಗೆ ಸ್ವಪ್ನದಂತೆ ಈಗ ಮಾತ್ರ ಕಾಣಿಸುತ್ತವೆ. ಬ್ರಹ್ಮನ ಸಾಕ್ಷಾತ್ಕಾರವಾದ ಕೂಡಲೇ ಇವುಗಳು ಯಾವುವೂ ಉಳಿಯುವುದಿಲ್ಲ. ಇವೆಲ್ಲವೂ ಹಗ್ಗದಲ್ಲಿ ಕಾಣುವ ಹಾವಿನಂತೆ ತಾತ್ಕಾಲಿಕ ಸತ್ಯ. ಪಾರಮಾರ್ಥಿಕವಲ್ಲ. ನಿರ್ಗುಣ ಬ್ರಹ್ಮನೊಬ್ಬನೇ ಪರಮಾರ್ಥಸತ್ಯ. ಅದ್ವೈತವೇದಾಂತದ ಈ ಪ್ರಧಾನ ಅಂಶವನ್ನು ತತ್ತ್ವೋದ್ಯೋತದಲ್ಲಿ ಶ್ರೀಮಧ್ವಾಚಾರ್ಯರು ವಿಮರ್ಶಿಸಿದ್ದಾರೆ. ಅವರು ಒಂದು ಸರಳವಾದ ವಿಚಾರವನ್ನು ಮುಂದಿಟ್ಟು ಈ ವಾದದ ಮೂಲವನ್ನು ಅಲುಗಾಡಿಸಿದ್ದಾರೆ.

ಸಾಕ್ಷಾತ್ಕಾರವನ್ನು ಹೊಂದಿ ಮುಕ್ತಿಯನ್ನು ಪಡೆದ ಜೀವರಿಗೂ ಮುಕ್ತನಾಗಿಯೇ ಇದ್ದು ನಮ್ಮೆಲ್ಲ ಧ್ಯಾನ ಸಾಕ್ಷಾತ್ಕಾರ ಮುಂತಾದ ಸಾಧನೆಗಳಿಗೆ ಕೇಂದ್ರಬಿಂದುವಾದ ಪರಬ್ರಹ್ಮನಿಗೂ ಈ ಸಂಸಾರಿಗಳಾದ ಜೀವರಿಂದ ಭೇದವನ್ನು ನಾವು ಒಪ್ಪಲೇಬೇಕು. ಇಲ್ಲದಿದ್ದರೆ ನಮ್ಮಂತೆ ಬ್ರಹ್ಮನೂ ಮುಕ್ತಜೀವರೂ ಈ

ಸಾಂಸಾರಿಕ ಸುಖದುಃಖಗಳಿಗೆ ಒಳಗಾಗಬೇಕಾಗುತ್ತದೆ. ಮುಕ್ತಿ ಮತ್ತು ಸಂಸಾರಗಳಲ್ಲಿರುವ ಆತ್ಮನು ಒಂದೇ ಆಗಿದ್ದರೆ ಇಲ್ಲಿ ದೇಹ, ಅಂತಃಕರಣ, ದುಃಖ ವಿಕೃತಿಗಳು ಇರುವಾಗ ಇದೇ ಸಮಯದಲ್ಲಿ ಆತ್ಮನಿಗೆ ಮುಕ್ತಿಯಲ್ಲಿ ಈ ಯಾವ ವಿಕಾರಗಳೂ ಇಲ್ಲವೆನ್ನುವುದು ತೀರ ಅಸಂಬದ್ಧವೆನಿಸುವುದಿಲ್ಲವೇ ? ಒಬ್ಬನೇ ಆತ್ಮನಿಗೆ ಏಕಕಾಲದಲ್ಲಿ ಈ ವ್ಯತ್ಯಾಸಗಳು ಹೇಗೆ ಸಂಭವಿಸುತ್ತವೆ ? ಆದುದರಿಂದ ಮುಕ್ತಿಯನ್ನು ಅನುಭವಿಸುತ್ತಿರುವ ಆತ್ಮನು ಈ ಸಂಸಾರಿಗಳಿಂದ ಭಿನ್ನವೆಂಬುದನ್ನು ನಾವು ಒಪ್ಪಲೇಬೇಕು. ಮುಕ್ತಿಯಲ್ಲಿರುವ ಈ ಭೇದವು ಕಾಲ್ಪನಿಕವಾಗಿರಲೂ ಸಾಧ್ಯವಿಲ್ಲ. ವಸ್ತುವಿನ ಕಲ್ಪನೆಗೆ ಅಜ್ಞಾನವೇ ಮೂಲ. ಅಜ್ಞಾನವೇ ಇಲ್ಲದ ಮುಕ್ತಿಯಲ್ಲಿ ಕಲ್ಪನೆಗಾದರೂ ಅವಕಾಶವೆಲ್ಲಿ ? ಅಂತೂ ಸಂಸಾರ ಮತ್ತು ಮುಕ್ತಿ ಎಂಬುದಾಗಿ ಎಲ್ಲಾ ಅಧ್ಯಾತ್ಮವಾದಿಗಳು ಒಪ್ಪಿದ ವ್ಯವಸ್ಥೆಯನ್ನು ಕೂಡಿಸುವುದಕ್ಕಾಗಿ ಮುಕ್ತಿಯಲ್ಲಿ ಸ್ವಾಭಾವಿಕವಾದ ಭೇದವನ್ನು ಒಪ್ಪಲೇಬೇಕೆಂದು ಬಹಳ ಸುಲಭವಾದ ರೀತಿಯಲ್ಲಿ ಜೀವಬ್ರಹ್ಮಭೇದದ ತಾತ್ತ್ವಿಕತೆಯನ್ನು ಆಚಾರ್ಯರು ಮಂಡಿಸಿದ್ದಾರೆ.

ಯಾವ ಗುಣಧರ್ಮಗಳೂ ಇಲ್ಲದ ಅಖಂಡ ಆತ್ಮವಸ್ತುವಿದೆಯೆಂಬುದಕ್ಕೆ ಆಧಾರವೇನು ? ನಿರ್ಗುಣವಸ್ತುವಿದೆಯೆಂಬುದು ಯಾರ ಪ್ರತ್ಯಕ್ಷ ಅನುಭವಕ್ಕೂ ವೇದ್ಯವಲ್ಲ. ಪ್ರಮಾಣಗಳೆಲ್ಲವೂ ವಸ್ತುವನ್ನು ಗುಣಧರ್ಮಗಳ ಜೊತೆಗೇ ತಿಳಿಸುತ್ತವೆ. ಇಂದ್ರಿಯಗಳು ಪದಾರ್ಥಗಳನ್ನು ರೂಪ, ಆಕಾರ, ಅಳತೆಯೊಂದಿಗೇ ತಿಳಿಸುತ್ತವೆ. ಹೊಗೆಯನ್ನು ನೋಡಿ ಬೆಟ್ಟದಲ್ಲಿ ಬೆಂಕಿಯಿದೆಯೆಂಬುದಾಗಿ ಎರಡು ವಸ್ತುಗಳ ಸಂಬಂಧವನ್ನು ಯುಕ್ತಿಯಿಂದ ನಾವು ತಿಳಿದುಕೊಳ್ಳುತ್ತೇವೆ. ಅದರಂತೆ ಹಿರಿಯರ ಮಾತಿನಿಂದ ದೇವರು, ಧರ್ಮ, ಮುಂತಾದ ಹೊಸವಸ್ತುಗಳನ್ನು ನಮ್ಮ ಕಣ್ಣಿಗೆ ತೋರುವ ವಸ್ತುಗಳಲ್ಲಿ ಇಲ್ಲದ ಹೊಸ ಧರ್ಮ, ಲಕ್ಷಗಳಿಂದಲೇ ಗುರುತಿಸುತ್ತೇವೆ. ಯಾವ ಗುಣಧರ್ಮಗಳೂ ಇಲ್ಲದ ವಸ್ತುವನ್ನು ಪ್ರಮಾಣಗಳಿಂದ ತಿಳಿಯಲು ಸಾಧ್ಯವೇ ಇಲ್ಲ. ಆದುದರಿಂದ ಅಖಂಡಬ್ರಹ್ಮವನ್ನು ಪ್ರಮಾಣದಿಂದ ಸಿದ್ಧಪಡಿಸುವುದು ಹೇಗೆಂದು ಆಚಾರ್ಯರು ಪ್ರಶ್ನಿಸುತ್ತಾರೆ.

ಅಖಂಡ ಬ್ರಹ್ಮನನ್ನು ಸಾಧಿಸಲು ವೇದವೇ ಪ್ರಮಾಣವೆಂದು ಅಖಂಡವಾದಿಗಳು ಪ್ರತಿಪಾದಿಸುತ್ತಾರೆ. ಬ್ರಹ್ಮನು ಯಾರು ಎಂಬ ಪ್ರಶ್ನೆಗೆ ಉತ್ತರವಾಗಿ ''ಸತ್ಯಂ ಜ್ಞಾನಮನಂತಂ ಬ್ರಹ್ಮ'' ಮುಂತಾದ ವೇದವಾಕ್ಯವು ಬ್ರಹ್ಮನನ್ನು ತಿಳಿಸುತ್ತದೆ. ಬ್ರಹ್ಮನ ಪ್ರಶ್ನೆಗೆ ಉತ್ತರವಾಗಿ ಬ್ರಹ್ಮನ ಸ್ವರೂಪವನ್ನು ಮಾತ್ರ ಹೇಳಬೇಕಲ್ಲದೆ (ಬ್ರಹ್ಮನನ್ನೆ ಹೇಳಬೇಕಲ್ಲದೆ) ಆತನ ಗುಣಗಳು ಮಹಿಮೆ ಮುಂತಾದ ಇತರ ವಿಷಯಗಳನ್ನು ಹೇಳುವುದು ಅಪ್ರಸ್ತುತವಾಗುತ್ತದೆ. ಆದುದರಿಂದ ವೇದವು ಬ್ರಹ್ಮನ ಸ್ವರೂಪದ ಹೊರತು ಬೇರೆ ಯಾವ ವಿಷಯವನ್ನೂ ಹೇಳುವುದಿಲ್ಲ. ಯಾವ ಗುಣಧರ್ಮಗಳಿಲ್ಲದ ಅಖಂಡ ವಸ್ತುವನ್ನು ಮಾತ್ರ 'ಬ್ರಹ್ಮನು ಯಾರು ?' ಎಂಬ ಪ್ರಶ್ನೆಗೆ ಉತ್ತರವಾಗಿ ವೇದವು ಹೇಳುತ್ತದೆಯೆಂದು ಅವರ ವಾದವಾಗಿದೆ. ಆದರೆ ಒಂದು ವಸ್ತುವಿನ ಬಗ್ಗೆ ಪ್ರಶ್ನೆಗೆ ಉತ್ತರಿಸುವಾಗ ಯಾವ ಗುಣಧರ್ಮ ಲಕ್ಷಣಗಳನ್ನೂ ಹೇಳದೆ ಬರೇ ವಸ್ತುಸ್ವರೂಪವನ್ನು ಮಾತ್ರ ಹೇಳುವುದನ್ನು ನಾವು ಎಲ್ಲಿಯಾದರೂ ಕಂಡಿದ್ದೇವೆಯೇ ? ಒಂದು ವಸ್ತುವನ್ನು ಕುರಿತು ಪ್ರಶ್ನಿಸುವುದೆಂದರೆ ಅದರ ವಿಶೇಷ ಧರ್ಮಗಳನ್ನು ಪ್ರಶ್ನಿಸುವುದು ಎಂದೇ ಅರ್ಥ. ಸಾಮಾನ್ಯವಾಗಿ ವಸ್ತುಸ್ವರೂಪದ ಅರಿವು ಇಲ್ಲದಿದ್ದರೆ ಅದರ ಬಗ್ಗೆ ಪ್ರಶ್ನೆ ಮಾಡಲು ಸಾಧ್ಯವಾಗಲಾರದು. ವಸ್ತುವಿನ ವಿಶೇಷ ಧರ್ಮವನ್ನು ತಿಳಿದುಕೊಳ್ಳುವುದಕ್ಕಾಗಿಯೇ ಅದರ ಬಗ್ಗೆ ನಾವು ಪ್ರಶ್ನಿಸುತ್ತೇವೆ. ಆದುದರಿಂದ ಯಾವ ವಿಶೇಷ ಧರ್ಮಗಳನ್ನು ನಿರೂಪಿಸದೆ ಬರೇ ವಸ್ತುವನ್ನು ತಿಳಿಸುವುದು ಅಸಂಗತವೂ ಅಸಾಧ್ಯವೂ ಆಗಿದೆ. ಆದುದರಿಂದ ಪರಮಾತ್ಮನ ಬಗ್ಗೆ ಪ್ರಶ್ನೆಗೆ ಉತ್ತರವಾಗಿ ವೇದಗಳು ಅವನ ಅನೇಕಾನೇಕ ಗುಣಮಹಿಮೆಗಳನ್ನು ಪ್ರತಿಪಾದಿಸುತ್ತವೆಯಲ್ಲದೆ ಕೇವಲ ಬ್ರಹ್ಮನ ಸ್ವರೂಪವನ್ನು ಬೋಧಿಸಲಾರವು.

೩-೨೪ ತತ್ತ್ವಸಂಖ್ಯಾನ – ತತ್ತ್ವವಿವೇಕ

ಈ ಎರಡು ಗ್ರಂಥಗಳಲ್ಲಿ ತತ್ತ್ವಗಳ ವಿವೇಚನೆಯಿದೆ. ''ಅನಾರೋಪಿತಂ ತತ್ತ್ವಮ್'' ಕಾಲ್ಪನಿಕವಲ್ಲದ ವಾಸ್ತವ ವಸ್ತುವೇ ತತ್ತ್ವ. ಕಣ್ಣಿಗೆ ಕಾಣುವ ಜಡಪ್ರಪಂಚವು ಮಾತ್ರ ಸತ್ಯ. ಅದರ ಹೊರತು ಬೇರೆ ಸತ್ಯವೇ ಇಲ್ಲವೆಂದು ಕೆಲವರು ಹೇಳಿದರೆ ಕಣ್ಣಿಗೆ ಗೋಚರವಾದ ಈ ಪ್ರಪಂಚವು ಬರೇ ಕಲ್ಪನೆ. ಇದರ ಆಚೆಗಿರುವ ಚೈತನ್ಯ ತತ್ತ್ವ ಮಾತ್ರ ಸತ್ಯವೆಂದು ಕೆಲವರು ವಾದಿಸುತ್ತಾರೆ. ಆದರೆ ಈ ದೃಶ್ಯ ಪ್ರಪಂಚ ಇದನ್ನು ಕಾಣುತ್ತಿರುವ ನಾವು ನಮ್ಮನ್ನೆಲ್ಲಾ ಮೀರಿ ನಿಂತಿರುವ ಮಹಾಚೈತನ್ಯ ಈ ಮೂರೂ ಸತ್ಯವೆಂದು ಶ್ರೀಮಧ್ವಾಚಾರ್ಯರು ಪ್ರತಿಪಾದಿಸಿದ್ದಾರೆ. ಪರಮಾತ್ಮನು ಪರಸತ್ಯನಾಗಿದ್ದರೆ ಈ ಭಾವ, ಅಭಾವ ಸ್ವರೂಪವಾದ ಈ ಜಡ ಚೇತನಾತ್ಮಕವಾದ ವಿಶ್ವವು ಅಪರಸತ್ಯವಾಗಿದೆ. ಭಗವಂತನು ಸ್ವತಂತ್ರ ತತ್ತ್ವವಾಗಿದ್ದರೆ ಉಳಿದ ವಸ್ತುಗಳು ಅವನ ಅಧೀನ ತತ್ತ್ವವಾಗಿವೆ. ಅಂತೂ ಇವೆಲ್ಲವೂ ಸತ್ಯ ಎಂಬ ವಾಸ್ತವಾಂಶವನ್ನು ಮಾತ್ರ ನಾವು ಮರೆಯಬಾರದು.

ಈ ಪದಾರ್ಥಗಳನ್ನು ನಿರೂಪಿಸುವ ಮತ್ತು ವಿಂಗಡಿಸುವ ರೀತಿಯಲ್ಲಿ ಆಚಾರ್ಯರು ವಿಶಿಷ್ಟ ಕ್ರಮವನ್ನು ಅನುಸರಿಸಿದ್ದಾರೆ. ತಾರ್ಕಿಕರು ಪದಾರ್ಥಗಳನ್ನು ನಿರೂಪಿಸುವಾಗ ದ್ರವ್ಯ, ಗುಣ ಮುಂತಾದ ಏಳು ವರ್ಗವಾಗಿ ಪದಾರ್ಥಗಳನ್ನು ವಿಂಗಡಿಸಿ ಅದರಲ್ಲಿ ದ್ರವ್ಯಗಳನ್ನು ಭೂಮಿ, ನೀರು ಮುಂತಾಗಿ ಒಂಭತ್ತು ವಿಧವಾಗಿ ವಿಭಜಿಸುತ್ತಾರೆ. ಆ ದ್ರವ್ಯದ ಒಂಭತ್ತು ಪ್ರಕಾರಗಳಲ್ಲಿ ಆತ್ಮರೂ ಒಂದು ಪ್ರಕಾರ. ಈ ಆತ್ಮರಲ್ಲಿ ಪರಮಾತ್ಮನೂ ಒಬ್ಬನು ಎಂಬುದಾಗಿ ಪದಾರ್ಥಗಳನ್ನು ನಿರೂಪಿಸುವಾಗ ಪರಮಾತ್ಮನಿಗೆ ವಿಶಿಷ್ಟ ಸ್ಥಾನವನ್ನು ನೀಡಿಲ್ಲ. ಆದರೆ ಶ್ರೀಮಧ್ವಾಚಾರ್ಯರು ಸ್ವತಂತ್ರತತ್ತ್ವ ಮತ್ತು ಅಸ್ವತಂತ್ರತತ್ತ್ವ ಎಂದು ಒಟ್ಟು ಪದಾರ್ಥಗಳು ಎರಡು ವಿಧ ಎಂದು ಹೇಳಿ ಪರಮಾತ್ಮನೇ ಸ್ವತಂತ್ರತತ್ತ್ವ, ಅವನೇ ಪರತತ್ತ್ವವೆಂದು ಪದಾರ್ಥ ನಿರೂಪಣೆಯಲ್ಲಿ ಪರಮಾತ್ಮನಿಗೆ ಅತಿ ಮುಖ್ಯ ಸ್ಥಾನವನ್ನು ನೀಡಿದ್ದಾರೆ. ಅಸ್ವತಂತ್ರ ತತ್ತ್ವಗಳನ್ನು ಭಾವ ವಸ್ತುಗಳೆಂದೂ ಅಭಾವ ವಸ್ತುಗಳೆಂದೂ ವಿಭಾಗಮಾಡಿ ಜೀವ, ಜಡ, ನಿತ್ಯ, ಅನಿತ್ಯ ಎಂದು ಮುಂತಾಗಿ ಅವುಗಳ ವೈವಿಧ್ಯವನ್ನು ನಮಗೆ ತಿಳಿಸಿಕೊಟ್ಟಿದ್ದಾರೆ. ಹೀಗೆ ವರ್ಗೀಕರಣದಲ್ಲಿಯೂ ಒಂದು ವಿಶಿಷ್ಟ ರೀತಿಯನ್ನು ಅನುಸರಿಸಿ ಈ ವಿಶ್ವದಲ್ಲಿ ಪರಮಾತ್ಮನ ಅತ್ಯುಚ್ಚ ಸ್ಥಾನವನ್ನು ನಮಗೆ ಎತ್ತಿ ತೋರಿಸಿದ್ದಾರೆ.

ನಿತ್ಯ ಅನಿತ್ಯಗಳನ್ನು ವಿಶ್ಲೇಷಿಸುವಾಗಲೂ ಅತ್ಯಂತ ಸೂಕ್ಷ್ಮದೃಷ್ಟಿ ಮತ್ತು ವೈಜ್ಞಾನಿಕತೆಯನ್ನು ಆಚಾರ್ಯರು ತೋರಿಸಿದ್ದಾರೆ. ಜೀವರು ಮೂಲಭೂತವಾಗಿ ನಿತ್ಯರೇ ಆಗಿದ್ದರೂ ದೇಹದ ಸಂಪರ್ಕ ಮತ್ತು ವಿನಾಶಗಳಿಂದ ಒಂದು ತೆರನಾದ ಅನಿತ್ಯತೆಯೂ ಜೀವರಿಗೆ ಇದೆ. ಅದರಂತೆ ಪಂಚಭೂತಗಳು ಸೂಕ್ಷ್ಮರೂಪವಾಗಿ ನಿತ್ಯವಾಗಿದ್ದರೂ ಇತರ ತತ್ತ್ವಗಳ ಮಿಶ್ರಣದಿಂದ ಸ್ಥೂಲತೆಯನ್ನು ಪಡೆಯುವುದರಿಂದ ಅನಿತ್ಯವೂ ಎನಿಸಿದೆ. ಆದರೆ ಪರಮಾತ್ಮನು ಇಂತಹ ಯಾವುದೇ ವಿಕೃತಿಗೆ ಒಳಗಾಗದೆ ಇರುವುದರಿಂದ ಅವನೊಬ್ಬನೇ ಪೂರ್ಣ ನಿತ್ಯನಾಗಿ 'ನಿತ್ಯೋ ನಿತ್ಯಾನಾಂ' ಎನಿಸಿದ್ದಾನೆ. ಹೀಗೆ ಜಗತ್ತಿನ ಪದಾರ್ಥಗಳ ಸುಸ್ಪಷ್ಟ ಹಾಗೂ ವ್ಯವಸ್ಥಿತ ಚಿತ್ರಣವನ್ನು ಈ ಎರಡು ಗ್ರಂಥಗಳು ನೀಡಿವೆ.

೩-೨೫ ಪ್ರಮಾಣಲಕ್ಷಣ

ಜಗತ್ತಿನ ವಿವಿಧ ಸತ್ಯ ವಿಷಯಗಳನ್ನು ತಿಳಿಯಲು ನಾವು ಪ್ರಮಾಣಗಳನ್ನೇ ಅವಲಂಬಿಸಬೇಕು. ಈ ಪ್ರಮಾಣಗಳ ಸ್ವರೂಪ ಮತ್ತು ಅವುಗಳ ವರ್ಗೀಕರಣದ ವಿಷಯದಲ್ಲಿ ದಾರ್ಶನಿಕರಲ್ಲಿ ತುಂಬಾ

ಮತಭೇದಗಳಿವೆ. ಪದಾರ್ಥದ ವಾಸ್ತವಿಕ ಸ್ಥಿತಿಯನ್ನು ತಿಳಿಸಿಕೊಡುವ ಜ್ಞಾನ ಮತ್ತು ಅದರ ಸಾಧನವನ್ನು ಪ್ರಮಾಣವೆಂದು ಕರೆಯಬೇಕೆಂದು ಆಚಾರ್ಯರು ತಿಳಿಸಿದ್ದಾರೆ. ನಮ್ಮ ಕಣ್ಣಿನ ಎದುರಿಗಿರುವ ಮರವು ಕಂಡಾಗ ಉಂಟಾಗುವ 'ಇದು ಮರ'ವೆನ್ನುವ ಜ್ಞಾನವು ಪ್ರಮಾಣ. ವಸ್ತುವು ಹೇಗಿದೆಯೋ ಅದೇ ರೀತಿಯಲ್ಲಿ ಅದನ್ನು ತಿಳಿಸಿಕೊಡುವುದರಿಂದ ಈ ಜ್ಞಾನವು ಪ್ರಮಾಣವಾಗುವುದು. ವಸ್ತುಸ್ಥಿತಿಗೆ ವ್ಯತಿರಿಕ್ತವಾಗಿ ಹಗ್ಗವನ್ನು ಹಾವೆಂದು ತಿಳಿದುಕೊಂಡಾಗ ಅಯಥಾರ್ಥವಾದ ಈ ಜ್ಞಾನವು ಪ್ರಮಾಣವಾಗಲಾರದು. ಅದರಂತೆ ಈ ವಾಸ್ತವ ಜ್ಞಾನವನ್ನುಂಟುಮಾಡುವ ಕಣ್ಣು ಮೊದಲಾದ ಜ್ಞಾನಸಾಧನಗಳನ್ನೂ ಪ್ರಮಾಣಗಳೆಂದು ಕರೆಯುತ್ತೇವೆ. ವೇದದಿಂದ ನಮಗೆ ಭಗವಂತನ ಜ್ಞಾನವು ಉದಯಿಸುತ್ತದೆ. ಆ ಜ್ಞಾನವು ಪ್ರಮಾಣವಾಗಿರುವಂತೆ ಅದಕ್ಕೆ ಸಾಧನವಾದ ವೇದಗಳು ಪ್ರಮಾಣವಾಗಿರುತ್ತದೆ.

ಈ ಪ್ರಮಾಣಗಳನ್ನು ಮೂರು ವಿಧವೆಂದು ಆಚಾರ್ಯರು ವರ್ಗೀಕರಿಸುತ್ತಾರೆ. ಇದು ಮಡಿಕೆ, ಇದು ಮರ, ಎಂದು ಮುಂತಾಗಿ ಪಂಚೇಂದ್ರಿಯಗಳಿಂದ ಬರುವ ಜ್ಞಾನ ಮತ್ತು ಅದರ ಸಾಧನವನ್ನು ಪ್ರತ್ಯಕ್ಷವೆಂದು ಕರೆಯುತ್ತಾರೆ. ಪರರ ನೋವು ನಲಿವುಗಳನ್ನು ಅವರ ಅಳು ಮತ್ತು ನಗೆಗಳಿಂದ ಊಹಿಸುವುದನ್ನೇ ಅನುಮಾನ ಪ್ರಮಾಣವೆಂದು ಹೇಳುವುದಾದರೆ ವೇದ ಮತ್ತು ಆಪ್ತವಾಕ್ಯ ಮತ್ತು ಅವುಗಳಿಂದ ಬರುವ ಜ್ಞಾನವನ್ನು ಆಗಮಪ್ರಮಾಣವೆಂದು ನಿರೂಪಿಸಲಾಗಿದೆ. ಹೀಗೆ ಪ್ರತ್ಯಕ್ಷ, ಅನುಮಾನ, ಆಗಮಗಳೆಂದು ಪ್ರಮಾಣಗಳನ್ನು ಮೂರು ವಿಧವಾಗಿ ಆಚಾರ್ಯರು ವರ್ಗೀಕರಿಸಿದ್ದಾರೆ.

ಅರ್ಥಾಪತ್ತಿ ಅನುಪಲಬ್ಧಿಗಳು ಪ್ರತ್ಯೇಕ ಪ್ರಮಾಣಗಳಲ್ಲ

ಬೇರೆ ಬೇರೆ ದಾರ್ಶನಿಕರು ಈ ವರ್ಗೀಕರಣವನ್ನು ಒಪ್ಪದೆ ನಾಲ್ಕು ಆರು ಮುಂತಾಗಿ ಬೇರೆ ಬೇರೆ ರೀತಿಗಳಿಂದ ಪ್ರಮಾಣಗಳನ್ನು ವಿಭಜಿಸಿದ್ದಾರೆ. ಆಚಾರ್ಯರು ಇವೆಲ್ಲವುಗಳನ್ನು ಅನುಭವ ಮತ್ತು ಯುಕ್ತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ಪ್ರಮಾಣಗಳ ಪ್ರಕಾರ ಮೂರೇ ಎಂಬುದನ್ನು ಸಮರ್ಥಿಸಿದ್ದಾರೆ.

ಒಂದೆರಡು ಉದಾಹರಣೆಗಳೊಂದಿಗೆ ಈ ವಿಷಯವನ್ನು ತುಸು ವಿಮರ್ಶಿಸೋಣ. ವಸ್ತುವಿನ ಅಭಾವವನ್ನು ಗ್ರಹಿಸಲು ಅನುಪಲಬ್ಧಿ ಎಂಬ ಪ್ರಮಾಣವನ್ನು ಕೆಲವರು ಸ್ವೀಕರಿಸುತ್ತಾರೆ. ಎದುರಿಗೆ ಇದ್ದರೆ ಕಾಣಬಹುದಾದ ವಸ್ತುವು ಕಾಣದಿದ್ದರೆ ಆ ವಸ್ತುವು ಇಲ್ಲವೆಂದು ತಿಳಿಯುತ್ತೇವೆ. ಎದುರಿಗೆ ಮನೆಯು ತೋರದಿದ್ದಾಗ ಅಲ್ಲಿ ಮನೆ ಇಲ್ಲವೆಂದು ನಿಶ್ಚೈಸುತ್ತೇವೆ. ಇದನ್ನೆ ಅನುಪಲಬ್ಧಿ ಪ್ರಮಾಣವೆಂದು ಉದಾಹರಿಸಲಾಗಿದೆ. ಇದ್ದರೆ ಕಣ್ಣಿಗೆ ತೋರಬಹುದಾದ ವಸ್ತುವು ತೋರದಿದ್ದಲ್ಲಿ ಅದು ಇಲ್ಲವೆಂಬುದನ್ನು ತಿಳಿದುಕೊಳ್ಳಲಿಕ್ಕೆ ಬೇರೆ ಪ್ರಮಾಣವು ಬೇಕೆ ? ಎದುರಿಗೆ ಇದ್ದಲ್ಲಿ ಕಾಣಿಸಲೇಬೇಕಾದ ವಸ್ತುವು ತೋರದಿದ್ದಲ್ಲಿ ಅದು ಇಲ್ಲವೆನ್ನುವ ಲೋಕಸಿದ್ಧವಾದ ನಿಯಮವನ್ನು ಅವಲಂಬಿಸಿ ಯುಕ್ತಿಯಿಂದಲೇ ವಸ್ತುವಿನ ಅಭಾವವನ್ನು ತಿಳಿದುಕೊಳ್ಳುವುದರಿಂದ ಇದು ಅನುಮಾನ ಪ್ರಮಾಣದಲ್ಲಿ ಸೇರಿದೆ. ಕೆಲವೊಮ್ಮೆ ಬೆಳಕಿನಲ್ಲಿ ಯಾವ ಊಹಾಪೋಹವೂ ಇಲ್ಲದೆ ವಸ್ತುವಿನ ಅಭಾವವನ್ನು ಪ್ರತ್ಯಕ್ಷದಿಂದಲೇ ತಿಳಿದುಕೊಳ್ಳುತ್ತೇವೆ. ಹೀಗೆ ಪ್ರತ್ಯಕ್ಷ ಅನುಮಾನಗಳ ಹೊರತು ವಸ್ತುವಿನ ಅಭಾವವನ್ನು ತಿಳಿದುಕೊಳ್ಳಲು ಬೇರೆ ಪ್ರಮಾಣದ ಅಗತ್ಯವಿಲ್ಲ.

ಒಬ್ಬ ವ್ಯಕ್ತಿಯು ತಾನು ಉಪವಾಸವನ್ನು ಮಾಡುವುದಾಗಿ ಘೋಷಿಸಿದ್ದಾನೆ. ಆತನು ಹಗಲು ಆಹಾರವನ್ನು ಸ್ವೀಕರಿಸದೆ ಇರುವುದು ಖಾತ್ರಿಯಾಗಿದೆ. ಆದರೂ ಹೃಷ್ಟಪುಷ್ಟನಾಗಿ ಕಾಣಿಸುತ್ತಾನೆ. ಇದರಿಂದ ಅವನು ರಾತ್ರಿಯಲ್ಲಿ ಗುಟ್ಟಾಗಿ ಆಹಾರವನ್ನು ಸ್ವೀಕರಿಸುತ್ತಾನೆಂದು ತೀರ್ಮಾನಿಸುತ್ತೇವೆ. ಇದು ಅರ್ಥಾಪತ್ತಿ ಎನ್ನುವ ಪ್ರತ್ಯೇಕ ಪ್ರಮಾಣವೆಂದು ಕೆಲವು ದಾರ್ಶನಿಕರ ಸಿದ್ಧಾಂತವಾಗಿದೆ. ವ್ಯಕ್ತಿಯು ಹಗಲು

ಉಪವಾಸ ಮಾಡಿಕೊಂಡಿದ್ದರೂ ಬಳಲಿಕೆಯಿಲ್ಲದೆ ಗಟ್ಟಿಮುಟ್ಟಾಗಿದ್ದರೆ ಅವನು ರಾತ್ರಿ ಆಹಾರವನ್ನು ಸ್ವೀಕರಿಸುತ್ತಾನೆಂಬುದನ್ನು ಊಹಿಸಲು ನಮಗೇನೂ ಕಷ್ಟವಾಗಲಾರದು. ಹೀಗೆ, ಇದೂ ಅನುಮಾನ ಪ್ರಮಾಣವೆನ್ನುವುದು ಸುಸ್ಪಷ್ಟ. ಹೊಗೆಯಿದ್ದಲ್ಲಿ ಬೆಂಕಿ ಇದೆ ಎಂಬಂತಹ ಲೋಕಸಿದ್ಧ ನಿಯಮದ ಆಧಾರದಿಂದ ವಸ್ತುವನ್ನು ಊಹಿಸುವುದೇ ಅನುಮಾನವೆನಿಸುತ್ತದೆ. ಹೀಗೆ ಅರ್ಥಾಪತ್ತಿಯೆಂಬ ಬೇರೆ ಪ್ರಮಾಣದ ಅಗತ್ಯವಿಲ್ಲ. ಆದುದರಿಂದ ವಸ್ತುಗಳನ್ನು ಸಿದ್ಧಮಾಡಲು ಈ ಮೂರು ಪ್ರಮಾಣಗಳಿಗಿಂತ ಹೆಚ್ಚಿನ ಪ್ರಮಾಣಗಳ ಅಗತ್ಯವಿಲ್ಲವೆನ್ನುವುದನ್ನು ಶ್ರೀಮಧ್ವಾಚಾರ್ಯರು ಈ ಗ್ರಂಥದಲ್ಲಿ ವೈಜ್ಞಾನಿಕವಾಗಿ ಪ್ರತಿಪಾದಿಸಿದ್ದಾರೆ.

ನಾವು ಅನೇಕ ವಿಷಯಗಳನ್ನು ಹಿಂದೆ ಅವುಗಳನ್ನು ನೋಡಿದ ನೆನಪಿನಿಂದ ತಿಳಿದುಕೊಳ್ಳುತ್ತೇವೆ. ಇದನ್ನು ಸ್ಮೃತಿಪ್ರಮಾಣವೆಂದು ಕರೆಯುತ್ತೇವೆ. ಕಣ್ಣು ಮುಂತಾದ ಇಂದ್ರಿಯಗಳಿಂದ ಬರುವ ಪ್ರತ್ಯಕ್ಷದಂತೆ ಸ್ಮೃತಿಯು ಮನಸ್ಸಿನಿಂದ ಬರುವ ಆಂತರಿಕ ಪ್ರತ್ಯಕ್ಷವಾಗಿದೆ. ಕೆಲವು ದಾರ್ಶನಿಕರು ಈ ಸ್ಮೃತಿಯನ್ನು ಪ್ರಮಾಣವೇ ಅಲ್ಲವೆಂದು ವಾದಿಸುತ್ತಾರೆ. ಹಿಂದೆ ನಡೆದ ಘಟನೆಯನ್ನು ಯಥಾವತ್ತಾಗಿ ನಾವು ನೆನಪಿಸಿಕೊಂಡಾಗ ಅದು ಅಪ್ರಮಾಣವಾಗುವುದು ಹೇಗೆಂದು ಆಚಾರ್ಯರು ಪ್ರಶ್ನಿಸುತ್ತಾರೆ. ಜ್ಞಾನದ ಯಥಾರ್ಥತೆಯೇ ಪ್ರಾಮಾಣ್ಯದ ಮಾನದಂಡ. ಯಥಾರ್ಥವಾದ ಸ್ಮರಣೆಯನ್ನು ಪ್ರಮಾಣವಲ್ಲವೆನ್ನುವುದು ಅನುಭವಕ್ಕೆ ವ್ಯತಿರಿಕ್ತವಾಗುತ್ತದೆಯೆಂದು ಆಚಾರ್ಯರು ತೋರಿಸಿಕೊಟ್ಟಿದ್ದಾರೆ. ಹೀಗೆ ಪ್ರಮಾಣದ ನಿಜವಾದ ಸ್ವರೂಪವನ್ನು ಮತ್ತು ಅದರ ಸರಿಯಾದ ವಿಭಜನೆಯನ್ನೂ ಈ ಗ್ರಂಥದಲ್ಲಿ ಮಾಡಲಾಗಿದೆ.

೩-೨೬ ವಿಷ್ಣುತತ್ತ್ವವಿನಿರ್ಣಯ

ತತ್ತ್ವನಿರ್ಣಯವು ಶ್ರೀಮಧ್ವಾಚಾರ್ಯರ ಸಿದ್ಧಾಂತವನ್ನು ಸಂಗ್ರಹವಾಗಿ ನಿರೂಪಿಸುವ ಅಪೂರ್ವ ಗ್ರಂಥವಾಗಿದೆ. ಎಲ್ಲಾ ದರ್ಶನಗಳ ವಿಮರ್ಶೆಯ ಜೊತೆಗೆ ಪ್ರಮಾಣ ಪ್ರಮೇಯಗಳ ವಿವೇಚನೆಯನ್ನೂ ಈ ಗ್ರಂಥದಲ್ಲಿ ಕಾಣಬಹುದು. ಉಪನಿಷತ್ತಿನ ವಾಕ್ಯಗಳ ವಿಮರ್ಶೆಯನ್ನು ನಡೆಸಿ ''ಸ ಆತ್ಮಾ ತತ್ತ್ವಮಸಿ'' ಮುಂತಾದ ವಾಕ್ಯಗಳ ನಿಜವಾದ ಅಭಿಪ್ರಾಯವನ್ನು ಇಲ್ಲಿ ನಿರೂಪಿಸಲಾಗಿದೆ. ಈ ಗ್ರಂಥವನ್ನು ಆಚಾರ್ಯರ ಸಿದ್ಧಾಂತದ ಕೈಗನ್ನಡಿಯೆಂದು ಹೇಳಬಹುದು.

ಪ್ರಪ್ರಥಮವಾಗಿ ಭಗವಂತನು ಧರ್ಮ, ಅಧರ್ಮ, ಮುಂತಾದ ಅತೀಂದ್ರಿಯ ವಸ್ತುಗಳನ್ನು ನಿರಾಕರಿಸುವ ಚಾರ್ವಾಕರ ಕೇವಲ ಭೌತಿಕ ವಾದವನ್ನು ನಿರಾಕರಿಸಿ ಅದರಿಂದ ಸಮಾಜಕ್ಕೆ ಆಗಬಹುದಾದ ಅನರ್ಥಗಳನ್ನು ವಿವರಿಸಿ ಸಮಾಜದ ಶಾಂತಿ ಸುವ್ಯವಸ್ಥೆಗಳಿಗೆ ಧರ್ಮವು ಅತ್ಯಾವಶ್ಯಕವೆಂದು ಪ್ರತಿಪಾದಿಸಲಾಗಿದೆ. ಆದರೆ ಕೇವಲ ಮತಾಚಾರ್ಯರ ವಾಕ್ಯಗಳಿಂದ ಈ ಅತೀಂದ್ರಿಯ ತತ್ತ್ವಗಳನ್ನು ತಿಳಿಯಲು ಸಾಧ್ಯವಿಲ್ಲ. ವ್ಯಕ್ತಿಯು ಎಷ್ಟೇ ದೊಡ್ಡವನಾಗಿದ್ದರೂ ಮಾನವ ಸಹಜವಾದ ದೋಷ ದೌರ್ಬಲ್ಯಗಳಿಂದ ಅವನು ಅತೀತನಾಗಲಾರನು. ಮಾತ್ರವಲ್ಲದೇ ಈ ಮತಾಚಾರ್ಯರು ರಚಿಸಿದ ಮತಗಳಲ್ಲಿಯೇ ಪರಸ್ಪರ ವಿರೋಧವಿರುವಾಗ ನಾವು ಯಾರ ಮಾತಿನಲ್ಲಿ ವಿಶ್ವಾಸವಿಡಬೇಕು? ಆದುದರಿಂದ ವ್ಯಕ್ತಿಯ ರಚನೆಗೆ ಒಳಗಾಗದ ಕೇವಲ ಭಗವಂತನ ಬುದ್ಧಿಯಲ್ಲಿ ನೆಲೆಸಿರುವ ಅಪೌರುಷೇಯ ವೇದವಾಕ್ಯಗಳಿಂದಲೇ ಅತೀಂದ್ರಿಯ ತತ್ವಗಳನ್ನು ಅರಿಯಬೇಕು ಎಂಬುದಾಗಿ ಆಧ್ಯಾತ್ಮಿಕ ತತ್ತ್ವಜ್ಞಾನದ ತಳಹದಿಯಾಗಿ ವೇದದ ಅಪೌರುಷೇಯತ್ವವನ್ನು ಬಲವಾಗಿ ಸಮರ್ಥಿಸಿ ವೇದ, ಉಪನಿಷತ್ ಮತ್ತು ಅದಕ್ಕೆ ಅನುಗುಣಗಳಾದ ಗ್ರಂಥಗಳ ಆಧಾರದಿಂದ ಭಗವಂತನನ್ನೂ ಉಳಿದ ಆಧ್ಯಾತ್ಮಿಕ ವಿಷಯಗಳನ್ನೂ ತಿಳಿದುಕೊಳ್ಳಬೇಕೆಂದು ಸಮರ್ಥಿಸಿದ್ದಾರೆ.

ವೇದವು ಏನು ತಿಳಿಸುತ್ತದೆಯೆಂಬ ಬಗ್ಗೆಯೂ ದಾರ್ಶನಿಕರಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿವೆ. ಕೆಲವರು ಸ್ವರ್ಗಸುಖಕ್ಕೆ ಕಾರಣವಾದ ಯಾಗವೇ ಮೊದಲಾದ ಕ್ರಿಯೆಗಳಲ್ಲಿ ನಮ್ಮನ್ನು ತೊಡಗಿಸುವುದೇ ವೇದದ ಉದ್ದೇಶವಾಗಿದೆ. ಕ್ರಿಯೆಯನ್ನು ಬೋಧಿಸದೆ, ಸಿದ್ಧವಸ್ತುವಾದ ಪರಮಾತ್ಮನನ್ನು ಹೇಳಲು ವೇದವು ಹೊರಟಿಲ್ಲವೆಂದು ಪ್ರತಿಪಾದಿಸುತ್ತಾರೆ.

ಕೆಲವರು ಅಖಂಡನೂ ನಿರ್ಗುಣನೂ ಆದ ಪರಬ್ರಹ್ಮವೊಂದೇ ಸತ್ಯ. ಜೀವಪರಮಾತ್ಮರಲ್ಲಿರುವ ಈ ಭೇದ ಕಾಲ್ಪನಿಕ. ಜೀವ ಪರಮಾತ್ಮರು ಮೂಲತಃ ಒಂದೇ ಆಗಿದ್ದಾರೆ. ಈ ಅದ್ವೈತವನ್ನೇ ಶಾಸ್ತ್ರವು ಪ್ರತಿಪಾದಿಸುತ್ತದೆ. ಸರ್ವಜ್ಞನೂ ಗುಣಪೂರ್ಣನೂ ಆದ ಬ್ರಹ್ಮನು ದುಃಖದೋಷಾದಿಗಳಿಂದ ತುಂಬಿದ ಈ ಜೀವನೂ ಒಂದೇ ಆಗಿರುವುದು ಹೇಗೆ? ಎಂಬುದನ್ನು ಪ್ರಶ್ನಿಸಿಕೊಂಡು ನಾವು ಕಾಣುತ್ತಿರುವ ಈ ಜಗತ್ತು, ಸಂಸಾರ, ಸುಖ-ದುಃಖ, ಇವೆಲ್ಲವೂ ಬರೇ ಕಾಲ್ಪನಿಕ. ವಿಶ್ವವೆಲ್ಲವೂ ಸ್ವಪ್ನದಂತೆ ಮಿಥ್ಯೆಯೇ ಆಗಿದೆ. ಇರುವುದೊಂದೇ ಆತ್ಮತತ್ತ್ವ. ಆದುದರಿಂದ ಈ ಕಾಲ್ಪನಿಕವಾದ ವೈವಿಧ್ಯಗಳನ್ನು ನೋಡಿ ಜೀವಬ್ರಹ್ಮರ ಐಕ್ಯವನ್ನು ಅಲ್ಲಗಳೆಯಬಾರದೆಂದು ಪ್ರತಿಪಾದಿಸಿದ್ದಾರೆ.

ವಾಕ್ಯವು ಕ್ರಿಯೆಯನ್ನೇ ಬೋಧಿಸಬೇಕು, ಸಿದ್ಧವಸ್ತುವನ್ನು ಬೋಧಿಸಬಾರದೆಂಬ ವಾದವನ್ನು ಆಚಾರ್ಯರು ಅನೇಕ ಉದಾಹರಣೆಗಳೊಂದಿಗೆ ಲೋಕಾನುಭವದ ನೆಲೆಯಲ್ಲಿ ನಿರಾಕರಿಸಿ, ವೇದಗಳು ನಮಗೆ ಅತ್ಯಂತ ಇಷ್ಟವಾದ ಪರಮಾತ್ಮನನ್ನು ತಿಳಿಸಬಲ್ಲವು. ತಂದೆಯನ್ನು ಅಗಲಿದ ಮಗುವಿಗೆ ಆತನನ್ನು ತೋರಿಸುವ ಆಪ್ತಬಂಧುವಿನಂತೆ ಸಾತ್ತ್ವಿಕ ಭಕ್ತವೃಂದಕ್ಕೆ ಭಗವಂತನನ್ನು ತೋರಿಸಿಕೊಡುವುದೇ ವೇದದ ಉದ್ದೇಶವೆಂದು ಸಾರಿದ್ದಾರೆ.

ವೇದವು ಜಗತ್ತಿನ ಅಸ್ತಿತ್ವವನ್ನು ನಿರಾಕರಿಸಿ ನಿರ್ಗುಣ ಬ್ರಹ್ಮನ ಜೊತೆಗೆ ಜೀವನಿಗೆ ಐಕ್ಯವನ್ನು ಹೇಳಲು ಪ್ರವೃತ್ತವಾಗಿದೆಯೆಂಬುದನ್ನೂ ಈ ಗ್ರಂಥದಲ್ಲಿ ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಮಾಣ ವಿಮರ್ಶೆ ಮಾಡುವ ಪದ್ಧತಿಯನ್ನು ವಿವೇಚಿಸಿದ್ದಾರೆ. ವೇದವಾಕ್ಯಗಳಲ್ಲಿ ಪರಸ್ಪರ ವಿರೋಧವು ತೋರಿದಾಗ, ವೇದವಾಕ್ಯಕ್ಕೂ ಪ್ರತ್ಯಕ್ಷಕ್ಕೂ ವಿರೋಧವು ತೋರಿದಾಗ ನಾವು ವೇದದ ಅರ್ಥವನ್ನು ನಿರ್ಣಯಿಸುವ ರೀತಿ ಹೇಗಿರಬೇಕು? ಪ್ರಮಾಣಗಳಲ್ಲಿ ಪರಸ್ಪರ ವಿರೋಧವು ಕಂಡಾಗ ಯಾವುದು ಪ್ರಬಲ ಯಾವುದು ಟೊಳ್ಳು ಎಂದು ಅವುಗಳ ಬಲಾಬಲಗಳನ್ನು ಹೇಗೆ ಕಂಡುಹಿಡಿಯಬೇಕು ? ಎಂಬುದನ್ನು ಬಹಳ ಚೆನ್ನಾಗಿ ವಿಮರ್ಶಿಸಲಾಗಿದೆ. ಸ್ವಾನುಭವವೇ ಎಲ್ಲಕ್ಕಿಂತ ಮಿಗಿಲಾದ ಪ್ರಮಾಣ. ಅದಕ್ಕೆ ವಿರುದ್ಧವಾಗಿ ವೇದವೂ ಹೇಳಲಾರದು. ಪ್ರತ್ಯಕ್ಷವನ್ನು ಅವಲಂಬಿಸಿಕೊಂಡು ಹೊರಟ ವೇದವು ಅವುಗಳಿಗೆ ವಿರುದ್ಧವಾಗಿ ನಮ್ಮ ಬಗ್ಗೆಯಾಗಲೀ ಜಗತ್ತಿನ ಬಗ್ಗೆಯಾಗಲೀ ಹೇಳಲಾರದು. ಅವುಗಳಿಗೆ ವಿರೋಧವಾಗದಂತೆ ಮತ್ತು ವೇದವಾಕ್ಯಗಳಿಗೂ ಪರಸ್ಪರ ವಿರೋಧವಾಗದಂತೆ ವೇದವನ್ನು ಅರ್ಥೈಸಬೇಕು. ಆ ನೆಲೆಯಲ್ಲಿ ಪರಿಶೀಲಿಸಿದಾಗ ಈ ಸತ್ಯವಾದ ಪ್ರಪಂಚದ ಜನ್ಮಾದಿ ಕಾರಣನೂ ಅನಂತ ಗುಣವೈಭವ ಸಂಪನ್ನನೂ ಸಕಲ ಜೀವ ನಿಯಾಮಕನೂ ಆದ ಪರಮಾತ್ಮನನ್ನು ವೇದವು ಪ್ರತಿಪಾದಿಸುತ್ತದೆಯೆಂಬುದು ನಮಗೆ ಸ್ಪಷ್ಟವಾಗುತ್ತದೆ. ವೇದವಾಕ್ಯಗಳಲ್ಲಿ ಪರಸ್ಪರ ವಿರೋಧವು ತೋರಿದಾಗ ಅವುಗಳ ಹಿಂದೆ ಮುಂದೆ ಇರುವ ವಾಕ್ಯಗಳನ್ನು ನೋಡಿ ಅದರ ಆಧಾರದಿಂದ ವೇದದ ಅರ್ಥವನ್ನು ತಿಳಿಯಲು ಪ್ರಯತ್ನಿಸಬೇಕು. ''ಸ ಆತ್ಮಾ ತತ್ತ್ವಮಸಿ'' ಎಂಬ ವಾಕ್ಯದ ಪೂರ್ವಾಪರ ವಾಕ್ಯಗಳು ಅಲ್ಲಿ ನೀಡಿದ ಒಂಬತ್ತು ಉದಾಹರಣೆಗಳು ಮುಂತಾದವುಗಳನ್ನು ತೋರಿಸಿ ಈ ವಾಕ್ಯಗಳು ಅದ್ವೈತವನ್ನು ಪ್ರತಿಪಾದಿಸುವುದಿಲ್ಲವೆಂಬುದನ್ನು ಮನದಟ್ಟಾಗುವಂತೆ ವಿಷದೀಕರಿಸಿದ್ದಾರೆ.

''ನ ಚಾಭೇದೇ ಕಶ್ಚಿದಾಗಮಃ । ಸಂತಿ ಚ ಭೇದೇ ಸರ್ವಾಗಮಾಃ'' ಅದ್ವೈತದ ಬಗ್ಗೆ ವೇದಗಳಲ್ಲಿ

ಒಂದು ವಾಕ್ಯವೂ ದೊರೆಯಲಾರದು. ವೇದದ ವಾಕ್ಯಗಳೆಲ್ಲವೂ ದ್ವೈತವನ್ನೇ ಹೇಳುತ್ತವೆಯೆಂದು ಸಾರಿದ್ದಾರೆ.

ಇದರ ಜೊತೆಗೆ ಅನೇಕ ಯುಕ್ತಿಗಳನ್ನೂ ನಿರೂಪಿಸಿ ಈ ಜಗತ್ತಿನ ಸತ್ಯತೆಯನ್ನೂ ಜೀವಬ್ರಹ್ಮರ ಭೇದವನ್ನೂ ಈ ಗ್ರಂಥದಲ್ಲಿ ಪ್ರತಿಪಾದಿಸಲಾಗಿದೆ. ಉದಾಹರಣೆಗಾಗಿ ಒಂದು ಯುಕ್ತಿಯನ್ನು ನಿರೂಪಿಸುತ್ತೇವೆ.

ಅಖಂಡ ಆತ್ಮನು ಒಬ್ಬನೇ ಆಗಿ ಬೇರೆ ವಸ್ತುವೇ ಇಲ್ಲದಿದ್ದರೆ ಈ ವಿಶ್ವದಲ್ಲಿ ಕಾಣುವ ವೈಚಿತ್ರ್ಯಕ್ಕೆ ಕಾರಣವೇನು ? ಆತ್ಮನನ್ನೇ ಜಗತ್ತಾಗಿ ಕಲ್ಪಿಸುವಾಗ ನಮ್ಮ ಈ ಭ್ರಮೆಗೆ ಆತ್ಮವೇ ಮೂಲ. ಹಗ್ಗವನ್ನು ಹಾವಾಗಿ ಭ್ರಮಿಸುವಾಗ ಹಗ್ಗದಲ್ಲಿ ಇರುವ ಆಕಾರವು ಹಾವಿನ ಕಲ್ಪನೆಗೆ ಕಾರಣವಾಗುತ್ತದೆ. ವಿಶ್ವದ ಈ ವೈಚಿತ್ರ್ಯದ ಕಲ್ಪನೆಗೆ ಮೂಲ ಅಧಿಷ್ಠಾನವಾದ ಬ್ರಹ್ಮನಲ್ಲಿ ಯಾವ ಧರ್ಮ, ಆಕಾರಗಳೂ ಇಲ್ಲದಿರುವಾಗ ಈ ವಿಶ್ವದಲ್ಲಿ ಈ ವೈವಿಧ್ಯದ ಕಲ್ಪನೆ ಹೇಗೆ ? ಒಂದು ದೀಪವು ಬೇರೆ ಬೇರೆ ಕನ್ನಡಿಗಳ ನೆಲೆಯಲ್ಲಿ ಅನೇಕ ವಾಗಿ ತೋರುವುದುಂಟು. ಆದರೆ ಅಲ್ಲಿ ಕನ್ನಡಿಯೆಂಬ ವಾಸ್ತವವಾದ ಉಪಾಧಿಯಿರುವಂತೆ ಜಗತ್ತಿನ ಭ್ರಮೆಯಲ್ಲಿ ಅಂತಹ ಯಾವುದೇ ಉಪಾಧಿಯಿಲ್ಲದಿರುವಾಗ ಈ ನಾನಾರೂಪಗಳೆಲ್ಲ ಹೇಗೆ ತೋರುತ್ತವೆ ?

ಇಂತಹ ಅನೇಕ ಯುಕ್ತಿಗಳ ಜೊತೆಗೆ ವೇದ ಮತ್ತು ಪ್ರತ್ಯಕ್ಷದ ಆಧಾರದಿಂದ ಭಗವಂತನ ಸರ್ವೋತ್ತಮತ್ವ ಮತ್ತು ಪರಿಪೂರ್ಣತೆಯನ್ನು ಈ ಗ್ರಂಥದಲ್ಲಿ ಬಹಳ ಸುಂದರವಾಗಿ ಪ್ರತಿಪಾದಿಸಲಾಗಿದೆ.

೩-೨೭ ಕಥಾಲಕ್ಷಣ

ತಾತ್ತ್ವಿಕ ವಿಷಯಗಳಲ್ಲಿ ನಡೆಯುವ ಚರ್ಚೆಯ ಪ್ರಕಾರಗಳನ್ನು ಕಥಾಲಕ್ಷಣ ಗ್ರಂಥವು ತಿಳಿಸುತ್ತದೆ.

ವಾದ, ಜಲ್ಪ, ವಿತಂಡಾಗಳೆಂದು ಕಥೆಯ ಮೂರು ಪ್ರಕಾರಗಳು. ಕೇವಲ ತತ್ತ್ವನಿರ್ಣಯಕ್ಕಾಗಿ ಗುರುಶಿಷ್ಯರು ನಡೆಸುವ ಸೌಹಾರ್ದಪೂರ್ಣ ಚರ್ಚೆಯು 'ವಾದ'ವಾಗಿದೆ. ಗುರುಶಿಷ್ಯರು ಮಾತ್ರವಲ್ಲದೇ ಸಜ್ಜನರೊಳಗೆ ಬರೇ ತತ್ತ್ವನಿರ್ಣಯದ ಉದ್ದೇಶದಿಂದ ನಡೆಯುವ ಚರ್ಚಾಗೋಷ್ಠಿಯೂ 'ವಾದ'ವೆನಿಸುತ್ತದೆ. ವಿಜಯ, ಪ್ರಸಿದ್ಧಿ, ಮುಂತಾದ ಉದ್ದೇಶಗಳಿಂದ ನಡೆಯುವ ಚರ್ಚೆಯನ್ನು 'ಜಲ್ಪ' 'ವಿತಂಡಾ'ಗಳೆಂದು ಎರಡು ಪ್ರಕಾರವಾಗಿ ವಿಭಜಿಸಲಾಗಿದೆ. ಅದರಲ್ಲಿಯೂ ತನ್ನ ಸಿದ್ಧಾಂತವನ್ನು ಪ್ರಕಟ ಪಡಿಸದೇ ತನ್ನ ಸಿದ್ಧಾಂತದ ಸಮರ್ಥನೆಗೂ ಇಳಿಯದೇ ಎದುರಾಳಿಯ ವಾದವನ್ನು ಮಾತ್ರ ಖಂಡಿಸುವ ಚಮತ್ಕಾರವನ್ನು ವಿತಂಡಾವಾದವೆಂದು ಕರೆಯಲಾಗುವುದು. ವಾದಿ - ಪ್ರತಿವಾದಿಗಳಲ್ಲಿ ಒಬ್ಬನ ಪರಾಜಯ ವಾಗುವವರೆಗೆ ಜಲ್ಪ, ವಿತಂಡಾಗಳು ನಡೆಯುತ್ತವೆ. ಸೋಲು, ಗೆಲುವಿನ ಪ್ರಶ್ನೆಯಿಲ್ಲದೆ ತತ್ತ್ವನಿರ್ಣಯ ವಾಗುವವರೆಗೆ 'ವಾದ' ಕಥೆಯು ನಡೆಯುತ್ತದೆ. ವಾದ ಕಥೆಯಲ್ಲಿ ಮಧ್ಯಸ್ಥರು, ಸಭಾಪತಿಗಳು, ನಿರ್ಣಾಯಕರು ಮುಂತಾದವರ ಆವಶ್ಯಕತೆಯಿಲ್ಲ, ಗುರುಶಿಷ್ಯರಾಗಲೀ ನೆರೆದ ಸಜ್ಜನರಾಗಲೀ ಯಾವುದೇ ಘರ್ಷಣೆ ಅಥವಾ ವಿವಾದಕ್ಕೆ ಅವಕಾಶವಿಲ್ಲದೇ ಚರ್ಚೆಯನ್ನು ನಡೆಸುವರು. ಆದರೆ ಜಲ್ಪ ವಿತಂಡಾಗಳಲ್ಲಿ ಸೋಲು ಗೆಲುವುಗಳ ಬಗ್ಗೆ ಯಾವುದೇ ತಿಕ್ಕಾಟ ಸಂಭವಿಸದಂತೆ ವ್ಯವಸ್ಥೆಯನ್ನು ಮಾಡಲು ಸಭಾಪತಿ, ಪ್ರಾಶ್ನಿಕ, ಸಭ್ಯ ಮುಂತಾದವರ ಅವಶ್ಯಕತೆ ಇದೆ. ವಿವಾದವುಂಟಾದಾಗ ಪ್ರಾಶ್ನಿಕರು ಮತ್ತು ಸಭ್ಯರು ನಿರ್ಣಯವನ್ನು ನೀಡಬೇಕು. ಪ್ರಾಶ್ನಿಕರು ವಿಷಮಸಂಖ್ಯೆಯಲ್ಲಿದ್ದು ಬಹುಮತದಿಂದ ಅವರು ನಿರ್ಣಯ ವನ್ನು ಸಾರುವರು. ವಿಶಿಷ್ಟಜ್ಞಾನಸಂಪನ್ನನಾದ ಒಬ್ಬ ಪ್ರಾಶ್ನಿಕನಾಗಿ ನಿರ್ಣಾಯಕನಾಗಬಹುದು. ಅಂತೂ ನಿರ್ಣಯ ನೀಡುವ ಇವರೆಲ್ಲರೂ ರಾಗದ್ವೇಷರಹಿತರೂ ಪಕ್ಷಪಾತಶೂನ್ಯ ಭಗವದ್ಭಕ್ತರೂ ಆಗಿರಬೇಕು.

ತತ್ತ್ವನಿರ್ಣಯಕ್ಕಾಗಿ ಗುರುಶಿಷ್ಯರೂ ಸಜ್ಜನರೂ ನಡೆಸುವ ವಾದದಲ್ಲಿ ಚರ್ಚೆಯು ಶಾಸ್ತ್ರದ ಆಧಾರದಿಂದ ನಡೆಯಬೇಕು. ವಾದಿಪ್ರತಿವಾದಿಗಳಿಬ್ಬರೂ ಪ್ರಮಾಣವಾಕ್ಯಗಳನ್ನು ಮುಂದಿಟ್ಟುಕೊಂಡೇ ತಮ್ಮ ವಿಚಾರವನ್ನು ಮಂಡಿಸಬೇಕು. ಅದರ ಸಮರ್ಥನೆಗಾಗಿ ಯುಕ್ತಿಗಳನ್ನೂ ನಿರೂಪಿಸಬಹುದು. ಹೀಗೆ ವಾದ, ವಿಚಾರಸಂಕಿರಣದ ಬಗ್ಗೆ ಇಂದಿನ ಜನತೆಗೂ ಮಾರ್ಗದರ್ಶನ ನೀಡುವ ಅನೇಕ ವಿಚಾರಗಳನ್ನು ಈ ಗ್ರಂಥದಲ್ಲಿ ನಾವು ಕಾಣಬಹುದು.

೩-೨೮ ಕರ್ಮನಿರ್ಣಯ

ಕರ್ಮನಿರ್ಣಯ ಗ್ರಂಥವನ್ನು ಶ್ರೀಮಧ್ವಾಚಾರ್ಯರು ಒಂದು ವಿಶಿಷ್ಟವಾದ ಸಂದರ್ಭದಲ್ಲಿ ನಿರ್ಮಿಸಿದ್ದಾರೆ. ಒಂದು ಕಡೆ ಆ ಊರಿನ ವಿದ್ವಾಂಸರೆಲ್ಲರೂ ಶ್ರೀಮಧ್ವಾಚಾರ್ಯರ ಜೊತೆಗೆ ವಾದಕ್ಕೆ ಆಗಮಿಸಿದರು. ಸಾಮಾನ್ಯವಾಗಿ ಯತಿಗಳ ಜೊತೆಗೆ ವೇದಾಂತ ನ್ಯಾಯಶಾಸ್ತ್ರಗಳಲ್ಲಿ ವಾದವನ್ನು ಹೂಡುವ ಬದಲು ಈ ವಿದ್ವಾಂಸರು ಸನ್ಯಾಸಿಗಳಿಗೆ ಯಜ್ಞದ ಪರಿಚಯವಿಲ್ಲದಿರುವುದರಿಂದ ಆ ಭಾಗದಲ್ಲಿ ಪ್ರಶ್ನೆಯನ್ನು ಕೇಳಿ ಆಚಾರ್ಯರನ್ನು ನಿರುತ್ತರಗೊಳಿಸಬೇಕೆಂದು ಭಾವಿಸಿ, ಯಜ್ಞಕ್ಕೆ ಸಂಬಂಧಿಸಿದ ಒಂದು ವಿಶಿಷ್ಟ ವೇದಭಾಗದ ಅರ್ಥವನ್ನು ಆಚಾರ್ಯರಲ್ಲಿ ಪ್ರಶ್ನಿಸಿದರು. ಶ್ರೀಮಧ್ವಾಚಾರ್ಯರು ಲೀಲಾಜಾಲವಾಗಿ ಅದನ್ನು ಉತ್ತರಿಸಿದಾಗ ಈ ಪಂಡಿತರು ಅಪ್ರತಿಭರಾದರು. ಪುನಃ ಆ ಪಂಡಿತರೆಲ್ಲರೂ ಐತರೇಯಾರಣ್ಯಕದ ಮಹಾನಾಮ್ನೀ ಮಂತ್ರಗಳ ಅರ್ಥದ ಬಗ್ಗೆ ಪ್ರಶ್ನೆ ಮಾಡಿದಾಗ ಅವುಗಳನ್ನೂ ಉತ್ತರಿಸಿ, ಅವುಗಳನ್ನು ಗ್ರಂಥರೂಪದಲ್ಲಿ ಬರೆದರು. ಇದೇ ಕರ್ಮನಿರ್ಣಯ ಗ್ರಂಥವೆನಿಸಿದೆ. ಈ ವೇದ ಮಂತ್ರಗಳು ಯಜ್ಞಪುರುಷನಾದ ಭಗವಂತನ ಮಹಿಮೆಯನ್ನು ಹೇಗೆ ಪ್ರತಿಪಾದಿಸುತ್ತವೆಯೆಂಬುದನ್ನು ಆಚಾರ್ಯರು ವಿವರಿಸಿದ್ದಾರೆ. ಅನಂತ ಗುಣಪೂರ್ಣನಾದ ಭಗವಂತನು ಮಹಾನ್ ಆಗಿದ್ದಾನೆ. ಅವನನ್ನು ಸ್ತುತಿಸುವುದರಿಂದಲೇ ಈ ಋಕ್‌ಗಳು 'ಮಹಾನಾಮ್ನಿ' ಎನಿಸಿವೆ. ಪರಮಾತ್ಮನನ್ನು ವೇದಮಂತ್ರಗಳು ಸರ್ವಜ್ಞ, ಸರ್ವಕರ್ತಾ, ಸತ್ಯ, ಜ್ಞಾನ, ಅನಂತ ಎಂದು ಮುಂತಾಗಿ ಅನೇಕ ಗುಣಗಳಿಂದ ಸ್ತುತಿಸುತ್ತಿರುವಾಗ ಅವನನ್ನು ನಿರ್ಗುಣ ನಿರ್ವಿಶೇಷ ಎಂಬುದಾಗಿ ಹೇಳುವುದು ಸರಿಯಲ್ಲ. ''ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾಂತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ'' ಎಂಬುದಾಗಿ ಪರಮಾತ್ಮನನ್ನು ನಿರ್ಗುಣನೆಂದೂ ವೇದವು ಹೇಳುವುದಿಲ್ಲವೇ? ಎಂದು ಪ್ರಶ್ನಿಸಬಹುದು. ಆದರೇ ಅದೇ ಮಂತ್ರದಲ್ಲಿ ಕರ್ಮಾಧ್ಯಕ್ಷನೆಂದೂ, ಸರ್ವಭೂತಾಂತರಾತ್ಮನೆಂದೂ ದೇವನೆಂದೂ ಭಗವಂತನ ಅನೇಕ ಗುಣಗಳನ್ನು ಹೇಳಿ ಕೊನೆಗೆ ನಿರ್ಗುಣನೆಂದು ಹೇಳಲು ಹೇಗೆ ಸಾಧ್ಯ ? ಒಂದೇ ವಾಕ್ಯದಲ್ಲಿ ದೇವರಲ್ಲಿ ಅನೇಕ ಗುಣಗಳನ್ನು ನಿರೂಪಿಸುವುದರ ಜೊತೆಗೆ ಗುಣಗಳೇ ಇಲ್ಲವೆಂದು ಪರಸ್ಪರ ವಿರೋಧವಾಗಿ ಹೇಳುವುದು ಹೇಗೆ? ಆದುದರಿಂದ ಭಗವಂತನಲ್ಲಿ ಅನಂತ ಕಲ್ಯಾಣಗುಣಗಳು ಇವೆ. ಪ್ರಕೃತಿಗೆ ಸಂಬಂಧಿಸಿದ ಸತ್ತ್ವ, ರಜ, ತಮೋಗುಣಗಳು ಇಲ್ಲವೆಂಬ ರೀತಿಯಲ್ಲಿ ಈ ಪದಗಳ ವಿರೋಧವನ್ನು ಪರಿಹರಿಸ ಬೇಕು. ನಿರ್ವಿಶೇಷವೆನ್ನುವ ವಸ್ತುವು ಅನುಭವವೇದ್ಯವೂ ಅಲ್ಲ, ಯಾವ ಶಬ್ದಗಳೂ ಅಂತಹ ವಸ್ತುವನ್ನು ನಿರೂಪಿಸಲಾರವು. ಯಾವುದೇ ಪ್ರಮಾಣವಾಗಲೀ ವಸ್ತುವನ್ನು ಅದರ ಧರ್ಮದ ಜೊತೆಗೆ ತಿಳಿಸುತ್ತವೆ. ಯಾವ ಧರ್ಮವೂ ಇಲ್ಲದೆ ವಸ್ತುವನ್ನು ಪ್ರಮಾಣಗಳು ಹೇಗೆ ಬೋಧಿಸಲಿ? ಎಂದು ಮುಂತಾಗಿ ಈ ಗ್ರಂಥದ ಆರಂಭದಲ್ಲಿ ವೇದಗಳು ಯಾವ ಗುಣಮಹಿಮೆಗಳೂ ಇಲ್ಲದ ಅಖಂಡ ವಸ್ತುವನ್ನು ಪ್ರತಿಪಾದಿಸಲಾರವೆಂಬುದನ್ನು ತರ್ಕಬದ್ಧವಾಗಿ ಸಮರ್ಥಿಸಲಾಗಿದೆ.

ಅದರಂತೆ, ವೇದವು ಬ್ರಹ್ಮವಸ್ತುವನ್ನು ಬೋಧಿಸದೇ ವಿವಧ ಯಜ್ಞಯಾಗಾದಿಗಳನ್ನು ಮಾಡಬೇಕೆಂದು ಕೇವಲ ಕಾರ್ಯವನ್ನೇ ಬೋಧಿಸುತ್ತದೆಯೆಂಬ ಮೀಮಾಂಸಕರ ವಾದದ ಖಂಡನೆಯನ್ನೂ ಗುಣಪೂರ್ಣನಾದ ಭಗವಂತನನ್ನೇ ವೇದವು ಪ್ರತಿಪಾದಿಸುತ್ತದೆಯೆನ್ನುವ ಬಗ್ಗೆ ವಿಮರ್ಶಾ ಪೂರ್ಣವಾದ ಭೂಮಿಕೆಯನ್ನೂ ಈ ಗ್ರಂಥದ ಆರಂಭದಲ್ಲಿ ನಾವು ಕಾಣುತ್ತೇವೆ. ಮುಂದೆ ಈ ಮಂತ್ರಗಳ ಸುಂದರ ಅರ್ಥನಿರೂಪಣೆಯನ್ನೂ ಆಚಾರ್ಯರು ಮಾಡಿದ್ದಾರೆ. ಎಲ್ಲ ವೇದಮಂತ್ರಗಳೂ ಪರಮಾತ್ಮನ ಮಹಿಮೆಯನ್ನೇ ಪಾಡುತ್ತವೆ. ಗೆಜ್ಜೆಯ ಝಣ ಝಣ ನಾದ, ಹಕ್ಕಿಯ ಕಲರವ, ಆನೆಯ ಘೀಳಿಡುವ ಗರ್ಜನೆ, ಇವೆಲ್ಲವುಗಳಲ್ಲಿ ಪರಮಾತ್ಮನ ಗುಣಗಾನವನ್ನೇ ಜ್ಞಾನಿಗಳು ಕಾಣುವರು. ಹಲ್ಲಿಯ 'ಚಿಚಿ' ಎನ್ನುವ ದನಿಯಲ್ಲಿಯೂ ಭಗವಂತನ ಅದ್ಭುತತೆಯ ಧ್ವನಿಯಿದೆ. ಎಲ್ಲಾ ಮಾತುಗಳೂ, ಧ್ವನಿಗಳೂ ಭಗವಂತನ ಸ್ತೋತ್ರವೇ ಆಗಿವೆ ಎಂದು ಈ ಗ್ರಂಥದಲ್ಲಿ ಆಚಾರ್ಯರು ಪ್ರತಿಪಾದಿಸಿದ್ದಾರೆ.

(ಶ್ರೀ ಸರ್ವಮೂಲಗ್ರಂಥಗಳು, ಸಂಪುಟ – ೬, ದಶಪ್ರಕರಣಗಳು, ಸಂ – ಹಯವದನ ಪುರಾಣಿಕ, ೧೯೬೪. ಪ್ರ-ಅಖಿಲ ಭಾರತ ಮಾಧ್ವ ಮಹಾಮಂಡಲ, ಆನಂದತೀರ್ಥ ಪ್ರತಿಷ್ಠಾನ, ಬೆಂಗಳೂರು.)

●

೩ - ೨೯
ಗೀತಾಂಜಲಿ

ಸ್ಥಿತಪ್ರಜ್ಞನ ಲೋಕವ್ಯವಹಾರ

ಅಪರೋಕ್ಷಜ್ಞಾನಿಗಳಿಗೂ ಉಳಿದವರಿಗೂ ಇರುವ ಅಂತರವನ್ನು ಒಂದು ಚುಟುಕಾದ ಮಾತಿನಿಂದ ಪರಮಾತ್ಮನು ತಿಳಿಸುತ್ತಾನೆ:

ಯಾ ನಿಶಾ ಸರ್ವಭೂತಾನಾಂ
ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ
ಸಾ ನಿಶಾ ಪಶ್ಯತೋ ಮುನೇಃ ॥

''ಸಾಮಾನ್ಯ ಜನರಿಗೆ ಎಲ್ಲಿ ಕತ್ತಲೋ ಅಲ್ಲಿ ಜ್ಞಾನಿಗಳಿಗೆ ಹಗಲು; ಅವರಿಗೆ ಹಗಲಾದದ್ದು ಸಾಮಾನ್ಯ ಜನರಿಗೆ ಕತ್ತಲು.''

ನಮಗೆ ಪ್ರಪಂಚದಲ್ಲಿ ಅತ್ಯಾಸಕ್ತಿ ಇರುವುದರಿಂದ ಅದನ್ನೇ ಯೋಚಿಸುತ್ತಿರುವೆವು. ಅದರಲ್ಲೇ ತಲ್ಲೀನರಾಗಿರುವೆವು. ಹೀಗೆ ನಾವು ಯಾವ ಜಗತ್ತಿನ ಬಗ್ಗೆ ಎಚ್ಚರದಿಂದಿರುವೆವೋ, ಆ ಪ್ರಪಂಚದ ಕಡೆಗೆ ಸ್ಥಿತಪ್ರಜ್ಞರು ಗಮನವನ್ನೇ ಕೊಡುವುದಿಲ್ಲ; ವಿಷಯಪದಾರ್ಥಗಳ ಕಡೆಗೆ ಅವರಿಗೆ ಏನೂ ಆಕರ್ಷಣೆ ಇಲ್ಲ. ಅವರಿಗೆ ಆಕರ್ಷಣೆ ಇರುವುದು ಪರಮಾತ್ಮನ ಕಡೆಗೆ. ಅವನನ್ನು ತುಂಬಿದ ಹೃದಯದಿಂದ ಧ್ಯಾನಿಸುವವರು. ಇತರ ಭೋಗ ಪದಾರ್ಥಗಳ ಪರಿಚಯವೇ ಅವರಿಗಿಲ್ಲ. ಯಾವ ಭಗವಂತನ ವಿಷಯದಲ್ಲಿ, ಜ್ಞಾನಿಗಳು ಸದಾ ಜಾಗ್ರತವಿರುವರೋ ಆ ಪರಮಾತ್ಮನ ಕಡೆಗೆ ನಮಗೆ ಗಮನವೇ ಇಲ್ಲ. ಆ ಪರವಸ್ತುವನ್ನು ಚಿಂತಿಸಬೇಕೆಂದು ಪ್ರವೃತ್ತಿಸಿ ಧ್ಯಾನ, ಜಪಗಳಿಗೆ ಕುಳಿತರೂ ಇತರ ಪದಾರ್ಥಗಳ ಕಡೆಗೇ ನಮ್ಮ ಮನಸ್ಸು ಹರಿಯುತ್ತದೆ. ಒಂದೇ ಮಾತಿನಲ್ಲ ಹೇಳುವುದಾದರೆ, ಸ್ಥಿತಪ್ರಜ್ಞರು ಪರಮಾತ್ಮನಲ್ಲಿ ಭಕ್ತಿಯನ್ನೂ ಪ್ರಪಂಚದಲ್ಲಿ ವೈರಾಗ್ಯವನ್ನೂ ಅಳವಡಿಸಿಕೊಂಡಿದ್ದಾರೆ; ನಾವು ಪ್ರಪಂಚದಲ್ಲಿ ಭಕ್ತಿಯನ್ನೂ ಪರಮಾತ್ಮನಲ್ಲಿ ವೈರಾಗ್ಯವನ್ನೂ ಸಾಧಿಸಿಕೊಂಡಿದ್ದೇವೆ.

ಹೀಗೆ ಲೌಕಿಕ ವಸ್ತುಗಳ ಅಪೇಕ್ಷೆಯಿಲ್ಲದೇ ಭಗವಂತನಲ್ಲೇ ತಲ್ಲೀನವಾದ ಜೀವನವನ್ನು ನಡೆಸಿದ ಈ ಸ್ಥಿತಪ್ರಜ್ಞನಿಗೆ ಪ್ರಪಂಚದ ಭೋಗ ಭಾಗ್ಯಗಳೇನೂ ಇಲ್ಲವೇ? ಊಟ-ಉಡುಗೆಗಳಿಲ್ಲದೆ, ಅವನು

ಹೇಗೆ ಜೀವಿಸುವನು? ಎನ್ನುವ ಪ್ರಶ್ನೆ ಬರುವುದು. ಇದಕ್ಕೆ ಪರಮಾತ್ಮನು ಹೀಗೆ ಸಮಾಧಾನ ನೀಡುವನು:

ಆಪೂರ್ಯಮಾಣಮಚಲಪ್ರತಿಷ್ಠಂ
ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ
ಸ ಶಾಂತಿಮಾಪ್ನೋತಿ ನ ಕಾಮಕಾಮೀ ॥

ಸಮುದ್ರದಲ್ಲಿ ನದಿಯ ನೀರು ಪ್ರವೇಶಿಸುವಂತೆ ಜ್ಞಾನಿಯು ವಿಷಯ ಪದಾರ್ಥಗಳನ್ನು ಸ್ವೀಕರಿಸುವನು. ಸಮುದ್ರಕ್ಕೆ ನದಿಯ ನೀರು ಬಂದರೂ ಅಷ್ಟೆ, ಬಾರದಿದ್ದರೂ ಅಷ್ಟೆ; ಸಮುದ್ರದಲ್ಲಿ ಯಾವುದೇ ಉದ್ರೇಕವಾಗಲಾರದು. ಅದು ಏಕರೂಪವಾಗಿಯೇ ಇರುವುದು. ಸ್ಥಿತಪ್ರಜ್ಞನು ವಿಷಯ ಪದಾರ್ಥಗಳನ್ನು ಸ್ವೀಕರಿಸಿದರೂ ಅವನಲ್ಲಿ ಏನೂ ವಿಕಾರವಾಗಲಾರದು. ಅದು ಇಲ್ಲದಿದ್ದರೂ ಅವನು ಕೊರಗಲಾರನು. ಸಮುದ್ರದಂತೆ ಆತ ಅಚಲ ಪ್ರತಿಷ್ಠನಾಗಿರುವನು.

ಭುಂಜಾನೋಽಪಿ ಹಿ ಯಃ ಕಾಮಾನ್
ಮರ್ಯಾದಾಂ ನ ತರೇತ್ ಕ್ವಚಿತ್ ।
ಸಮುದ್ರವತ್ ಧರ್ಮಮಯೀಂ
ನಾಸೌ ಕಾಮೀ ಸ ಉಚ್ಯತೇ ॥

– ಗೀತಾತಾತ್ಪರ್ಯ

''ಎಷ್ಟೇ ನೀರಿದ್ದರೂ ಸಮುದ್ರ ತನ್ನ ದಡ ಬಿಟ್ಟು ಮೇಲೆ ಬರುವುದಿಲ್ಲ. ಅದರಂತೆ ವೈಷಯಿಕ ವಸ್ತುಗಳನ್ನು ಭೋಗಿಸಿದರೂ ಧರ್ಮದ ಎಲ್ಲೆಯನ್ನು ಮೀರಿ ಜ್ಞಾನಿಯು ನಡೆಯಲಾರ.'' ಆತನು ಭಗವಂತನ ಶಿಸ್ತಿನ ಸೇವಕ. ಭಗವಂತನ ಆದೇಶ, ನೀತಿ, ನಿಯಮಗಳನ್ನು ಮೀರದೆ, ಪ್ರಾಪಂಚಿಕ ವಸ್ತುಭೋಗಗಳನ್ನು ಪಡೆದರೂ ಅದರಿಂದ ಅತೀತವಾಗಿರುವ ನಿರ್ವಿಕಾರ, ಸಂತೃಪ್ತ ಜೀವನಪದ್ಧತಿಯನ್ನು ಜ್ಞಾನಿಯು ಅಳವಡಿಸಿಕೊಂಡಿರುತ್ತಾನೆ. ಆತನು ಬಯಸದೆ ಇದ್ದರೂ ಸಕಲ ಲೌಕಿಕ ವಸ್ತುಗಳು ತಮ್ಮಷ್ಟಕ್ಕೇ ಅವನ ಕಾಲ ಬುಡಕ್ಕೆ ಬಂದು ಬೀಳುತ್ತವೆ. ಸಮುದ್ರವು ಬಯಸದೆ ಇದ್ದರೂ ಎಲ್ಲ ಭಾಗಗಳಿಂದ ನೀರು ಸಮುದ್ರದ ಕಡೆಗೆ ಧಾವಿಸಿ ಬರುವಂತೆ ಪ್ರಪಂಚದ ಎಲ್ಲ ಭೋಗಗಳನ್ನು ಅವನು ಸಹಜವಾಗಿ ಪಡೆಯಬಲ್ಲ. ನಾವು ನೆರಳನ್ನು ಮುಟ್ಟಬೇಕೆಂದು ಪ್ರಯತ್ನಿಸಿದರೂ ಅದು ನಮ್ಮ ಕೈಗೆ ಸಿಗಲಾರದು. ನಾವು ಓಡಿದಂತೆ ಅದೂ ದೂರ ಓಡುವುದು. ಆದರೆ ಅದರ ಆಶೆಯನ್ನು ಬಿಟ್ಟು ಸೂರ್ಯನ ಕಡೆ ಮುಖ ತಿರುಗಿಸಿದರೆ ನೆರಳು ನಾವು ಓಡುವಷ್ಟೇ ವೇಗದಿಂದ ನಮ್ಮನ್ನು ಹಿಂಬಾಲಿಸುವುದು. ವಿಷಯಸುಖವೂ ಇದೇ ತರಹ. ಅದನ್ನು ಬೆಂಬತ್ತಿ ನಾವು ಓಡಿದರೆ ನಮಗೆ ಅದು ಕೊನೆಯ ವರೆಗೂ ಸಿಗುವುದಿಲ್ಲ, ಅದರ ಆಶೆಯನ್ನು ತೊರೆದು ಪರಮಾತ್ಮನ ಕಡೆಗೆ ಓಡುವಾಗ ಸಹಜವಾಗಿ ನಮ್ಮ ಬೆನ್ನ ಹಿಂದೆ ಅವೆಲ್ಲ ಭೋಗ ಪದಾರ್ಥಗಳು ಓಡಿ ಬರುವುವು. ಜ್ಞಾನಿಯು ಅವುಗಳನ್ನು ಪಡೆಯಲು ಏನೂ ಶ್ರಮಿಸಬೇಕಿಲ್ಲ. ಅಪ್ರಾರ್ಥಿತವಾಗಿಯೇ ಅವು ಆತನ ಬಳಿ ಸೇರುವುವು.

ವಿಭೀಷಣನು ಬ್ರಹ್ಮನಲ್ಲಿ ಏನೂ ವರವನ್ನು ಬೇಡಲಿಲ್ಲ. ರಾವಣ, ಕುಂಭಕರ್ಣರಾದರೋ ಜಗತ್ತನ್ನೇ ಗೆಲ್ಲುವ ಮಹಾಶಕ್ತಿಯನ್ನು ಪಡೆದು ತಮ್ಮ ಸ್ವೇಚ್ಛಾಪ್ರವೃತ್ತಿಗಳನ್ನು ಅಬಾಧಿತವಾಗಿ ನಡೆಸಬೇಕೆಂದು ಹವಣಿಸಿ ಬ್ರಹ್ಮನನ್ನು ಕುರಿತು ತಪಸ್ಸು ನಡೆಸಿದರು. ಯಾರಿಂದಲೂ ತಮ್ಮ ವಧೆಯಾಗದಂತಹ ಶಕ್ತಿಯನ್ನು ಹೊಂದಬೇಕೆಂದು ಅವರ ಆಶೆ. ಕುಂಭಕರ್ಣನು ತನ್ನ ಎದುರು ಪ್ರತ್ಯಕ್ಷನಾದ ಬ್ರಹ್ಮನಲ್ಲಿ ಯಾವದನ್ನೋ ಕೇಳ ಬಯಸಿ ಮತ್ತೇನನ್ನೋ ತಪ್ಪಿ ಕೇಳಿ ನಿದ್ರಾತುರನೇ ಆದನು. ಸಕಲ ದೈತ್ಯ, ದೇವತೆಗಳಿಂದ ತಾನು ಅಜೇಯನೂ ಅವಧ್ಯನೂ ಆಗಬೇಕೆಂದು ರಾವಣನು ಬೇಡಿದ. ಈ ವರವನ್ನೇನೋ ಆತ ಪಡೆದ. ಆದರೆ

ತನ್ನ ಅಪೇಕ್ಷೆಯಂತೆ ಬದುಕಿ ಉಳಿಯುವುದಾಗಲಿಲ್ಲ. ಮಾನವರೂಪಿಯಾದ ಭಗವಂತನಿಂದ ಆತ ಮರಣವನ್ನು ಅಪ್ಪಿದನು. ಆದರೆ ವಿಭೀಷಣನು ಬ್ರಹ್ಮದೇವನಿಂದ ತನ್ನ ಲೌಕಿಕ ಆಶೆಯನ್ನು ತಣಿಸಲು ಬಯಸಲಿಲ್ಲ. ಧರ್ಮನಿಷ್ಠೆ ಮತ್ತು ಭಗವದ್‌ಭಕ್ತಿಯನ್ನು ಮಾತ್ರ ಬ್ರಹ್ಮದೇವನಲ್ಲಿ ಆತ ಬೇಡಿದ. ಇಂತಹ ನಿರಪೇಕ್ಷ ಭಾವನೆಯ ಭಕ್ತನನ್ನು ಕಂಡು ಬ್ರಹ್ಮದೇವರು ಬಹಳ ಸಂತುಷ್ಟರಾದರು. ಉಳಿದವರಿಬ್ಬರಿಗೂ ದೊರೆಯದ ಮಹಾ ಭಾಗ್ಯವು ವಿಭೀಷಣನಿಗೆ ದೊರೆಯಿತು. "ಚಿರಂಜೀವಿಯಾಗಿ ನೀನು ಈ ಜಗತ್ತಿನಲ್ಲಿ ಮೆರೆ" ಎಂದು ಬ್ರಹ್ಮ ದೇವರು ಅನುಗ್ರಹಿಸಿದರು. ಇಂದಿಗೂ ಚಿರಂಜೀವಿಗಳಲ್ಲಿ ವಿಭೀಷಣನ ಹೆಸರನ್ನು ಉಚ್ಚರಿಸುತ್ತೇವೆ. ಉಳಿದ ಇಬ್ಬರೂ ಬಯಸಿದರೂ ಅವರಿಂದ ಪಡೆಯಲಾಗದಿದ್ದ ಮರಣದ ಮೇಲಿನ ವಿಜಯವು ಅದನ್ನು ಆಶಿಸದ ವಿಭೀಷಣನ ಕರಗತವಾಯಿತು. ನಿಷ್ಕಾಮನಾದ ಜ್ಞಾನಿಯು ತಾನು ಬಯಸದಿದ್ದರೂ ಸಕಲ ಭೋಗಗಳನ್ನು ಹೀಗೆ ಅನಾಯಾಸವಾಗಿ ಪಡೆಯುವನು.

ಈ ರೀತಿಯಾಗಿ ಭಗವಂತನ ದರ್ಶನವನ್ನು ಪಡೆದ ವ್ಯಕ್ತಿಯು ಭೋಗಲಾಲಸೆಯಿಂದ ಅತೀತವೂ ಭಾಗ್ಯಸಂಪನ್ನವೂ ಪ್ರಸನ್ನವೂ ಆದ ಭಗವನ್ನಿಷ್ಠ ಜೀವನವನ್ನು ನಡೆಸುವನು. ಇದೇ ಬ್ರಾಹ್ಮೀ ಸ್ಥಿತಿ ಎಂದೆನಿಸುವುದು. ಸತ್ಕರ್ಮಾಚರಣೆಯಿಂದ ಪಡೆದ ಅಂತಃಕರಣ ಶುದ್ಧಿಯ ಬಾಗಿಲಿನಿಂದ ಧ್ಯಾನಸಾಕ್ಷಾತ್ಕಾರಗಳ ಮಾರ್ಗದಲ್ಲಿ ನಡೆದು ಬ್ರಾಹ್ಮೀಸ್ಥಿತಿಯನ್ನು ಹೊಂದಬಹುದು.

ಪರಸ್ಪರಂ ಭಾವಯಂತಃ

ತ್ಯಾಗ-ಸೇವೆಗಳ ಸಮನ್ವಯರೂಪವಾದ ಯಜ್ಞದೃಷ್ಟಿಯಿಂದ ಈ ಕರ್ತವ್ಯಗಳನ್ನು ಮಾನವರು ಅವಶ್ಯವಾಗಿ ಆಚರಿಸಲೇಬೇಕೆಂಬುದನ್ನು ಪರಮಾತ್ಮನು ವಿವರಿಸುತ್ತಾನೆ. ಕೃತಜ್ಞತಾದೃಷ್ಟಿಯ ಸಂಕೇತವಾಗಿಯೂ ಜಗಚ್ಚಕ್ರದ ಪ್ರವರ್ತನೆಯ ಉದ್ದೇಶದಿಂದಲೂ ಈ ಕರ್ತವ್ಯವನ್ನು ಜಗತ್ತಿನಲ್ಲಿ ಹುಟ್ಟಿದ ಮಾನವನು ಅವಶ್ಯವಾಗಿ ಆಚರಿಸಲೇ ಬೇಕಾಗುವುದು. ನಾವು ಪ್ರತಿಕ್ಷಣದಲ್ಲಿ ಪರಮಾತ್ಮನಿಂದ ಹಾಗೂ ದೇವತೆಗಳಿಂದ ಉಪಕೃತರಾಗಿದ್ದೇವೆ. ಭೂಮಿ, ನೀರು, ತೇಜಸ್ಸು, ಗಾಳಿ, ಆಕಾಶ ಮುಂತಾದ ಭಗವಂತನು ಒದಗಿಸಿದ ವಸ್ತುಗಳನ್ನು ನಾವು ಅವಲಂಬಿಸಿಕೊಂಡಿರುತ್ತೇವೆ. ಈ ಸೃಷ್ಟಿಯ ಅಭಿಮಾನಿ ಹಾಗೂ ಅಂತರ್ಯಾಮಿ ದೇವತೆಗಳನ್ನು ಆಧರಿಸಿಯೇ ನಮ್ಮ ಆಹಾರ, ವ್ಯವಹಾರ ಮೊದಲಾದ ಎಲ್ಲ ಪ್ರವೃತ್ತಿಗಳೂ ನಡೆದಿವೆ. ಹೀಗೆ ಜಗನಿಯಾಮಕನಾದ ಆ ಪರಾತ್ಪರ ಶಕ್ತಿಯಿಂದ ಪ್ರತಿ ಕ್ಷಣವೂ ಪ್ರಯೋಜನವನ್ನು ಪಡೆಯುತ್ತಿರುವಾಗ, ಅವನಿಗಾಗಿ ಅವನ ಸೇವಾರೂಪವಾಗಿ ಮಾಡಬೇಕಾದ ಕರ್ತವ್ಯಗಳೂ ನಮಗಿವೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಈ ಜಗತ್ತಿನ ಒಡೆತನ ಯಾರಿಗಿದೆ? ಯಾವ ವ್ಯಕ್ತಿಗೂ ಸಮಾಜಕ್ಕೂ ಈ ಜಗತ್ತಿನ ಮೇಲೆ ಪ್ರಭುತ್ವವಿಲ್ಲ.

ಈಶಾವಾಸ್ಯಮಿದಂ ಸರ್ವಮ್ ।

-ಈಶೋಪನಿಷತ್ತು

ಈ ಜಗತ್ತಿಗೆಲ್ಲ ಒಬ್ಬನೇ ಮಹಾಪ್ರಭು. ಅವನೇ ಶ್ರೀಹರಿ. ಇದೆಲ್ಲವೂ ಅವನ ಸೊತ್ತು. ಅವನ ಸೇವಾರೂಪವಾದ ಕರ್ತವ್ಯವನ್ನು ಮಾಡದೆ ಜಗತ್ತಿನ ವಸ್ತುಗಳನ್ನು ಇಚ್ಛಾನುಸಾರವಾಗಿ ನಾವು ಹೇಗೆ ಭೋಗಿಸಬಲ್ಲೆವು? ಆಗರ್ಭ ಶ್ರೀಮಂತನಾದರೂ ಇಂತಹ ಸೇವಾರೂಪವಾದ ಕರ್ತವ್ಯಗಳನ್ನು ಮಾಡದೆ ಆತನಿಗೆ ಈ ವಿಶ್ವದ ವಸ್ತುಗಳನ್ನು ಸ್ವೀಕರಿಸಲು ಅಧಿಕಾರವಿಲ್ಲ. ಕಡುಬಡವನಾದರೂ ಕರ್ತವ್ಯನಿಷ್ಠನಾದರೆ ಅವನಿಗೆ ತನ್ನ ಜೀವನಕ್ಕೆ ಆವಶ್ಯಕವಾದುದನ್ನು ಪಡೆಯಲು ಅಧಿಕಾರವಿದೆ. ಇದನ್ನೇ ಈಶಾವಾಸ್ಯೋಪನಿಷತ್ತಿನಲ್ಲಿ ಹೇಳಿದೆ:

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ।

ಸೊತ್ತು ವ್ಯಕ್ತಿಗತವಾಗಿದ್ದರೆ ಆತನು ಅದನ್ನು ತನಗಾಗಿ, ಮತ್ತು ತನ್ನ ಪರಿವಾರದವರಿಗಾಗಿಯೇ ಉಪಯೋಗಿಸುತ್ತಾನೆ. ತನ್ನ ಸಂಚಯವನ್ನು ಹೆಚ್ಚಿಸಲು ಇತರರನ್ನು ಶೋಷಣೆ ಮಾಡಲು ಆತನು ಹಿಂಜರಿಯುವುದಿಲ್ಲ. ಪಕ್ಷದ ಹಾಗೂ ಒಂದು ಗುಂಪಿನ ಸರ್ವಾಧಿಕಾರವು ಬೆಳೆದು ವ್ಯಕ್ತಿತ್ವದ ದಮನ ಮತ್ತು ಪ್ರಜೆಗಳ ಶೋಷಣೆಯು ನಡೆಯಲು ಅವಕಾಶವಿದೆ. ಎಲ್ಲ ವಸ್ತುಗಳ ಒಡೆತನ ವ್ಯಕ್ತಿಯದೂ ಅಲ್ಲ, ಸರಕಾರದ್ದೂ ಅಲ್ಲ; ಅವೆಲ್ಲವೂ ಪರಮಾತ್ಮನವು ಎಂಬ ಭಾವವು ರೂಢಮೂಲವಾದರೆ ವ್ಯಕ್ತಿತ್ವ ಹಾಗೂ ರಾಷ್ಟ್ರ ಇವೆರಡರ ಪ್ರಗತಿಯು ಸಾಧ್ಯವಾಗುವುದು. ವಿಶ್ವದಲ್ಲಿ ಸತ್ ಪ್ರವೃತ್ತಿಗಳು ಬೆಳೆಯುವುವು. ಜಗತ್ತಿಗೆಲ್ಲ ದೇವರೇ ಒಡೆಯನೆಂದು ಭಾವಿಸುವವನು ಆ ವಿಶ್ವಚಾಲಕ ಶಕ್ತಿಯ ನಿಷ್ಠಾವಂತ ನಾಗರಿಕನಾಗಿ ವರ್ತಿಸಲು ಪ್ರಯತ್ನಿಸುವನು. ಅಂತಹ ವ್ಯಕ್ತಿಯು ಭಗವಂತನ ನಿಯಮ-ಆದೇಶಗಳಿಗನುಸಾರವಾಗಿ ದೇವರಿಗೆ ಪ್ರತೀಕಾರವೂ ಲೋಕಹಿತಕಾರಿಯೂ ಆದ ಕರ್ತವ್ಯಮಾರ್ಗದಲ್ಲಿ ಸ್ವಲ್ಪವೂ ವಿಚಲಿತವಾಗದೆ ಮುನ್ನಡೆಯುವನು, ಇಂತಹ ಸತ್ಕರ್ಮಗಳೇ ದೇವರಿಗೆ ನಾವು ಕೊಡಬಹುದಾದ ಆಹಾರ. ಭಗವಂತನಿಂದ ನಾವು ಆಹಾರವನ್ನು ಪಡೆಯುತ್ತಿರುವಾಗ ಪ್ರತಿಯಾಗಿ ನಾವೂ ಅವನಿಗೆ ಪ್ರಿಯವಾದ ಭೋಜ್ಯ ವಸ್ತುವನ್ನು ಕೊಡಬೇಡವೆ? ಲೋಕದಲ್ಲಿ ಧರ್ಮ, ಕರ್ಮಗಳು ಲೋಪವಾದಾಗ ದೇವತೆಗಳು ಬಡವಾಗುತ್ತಾರೆಂದು ಪುರಾಣಗಳಲ್ಲಿ ವರ್ಣಿಸಲಾಗಿದೆ. ಇದರ ಅರ್ಥವೇನು? ನಾವು ಮಾಡುವ ಸತ್ಕರ್ಮಗಳನ್ನು ಪರಮಾತ್ಮನು ಸ್ವೀಕರಿಸುವನು, ದೇವತೆಗಳು ಸ್ವೀಕರಿಸುವರು. ಹಾಗಾಗಿ ಇಂತಹ ಸತ್ಕರ್ಮಗಳನ್ನು ನಾವು ಮಾಡುವುದರಿಂದಲೇ ದೇವತೆಗಳಿಗೆ ನಾವು ಆಹಾರ ಒದಗಿಸಿದಂತಾಗುವುದು. ಉತ್ತಮ ಧರ್ಮ, ಕರ್ಮಗಳಿಂದಲೇ ಲೋಕದಲ್ಲಿ ದೈವೀಶಕ್ತಿಯು ಪ್ರವರ್ಧಮಾನವಾಗುವುದು. ಇಂತಹ ಸತ್ಕರ್ಮಗಳು ಲೋಕದಲ್ಲಿ ಶಿಥಿಲವಾದರೆ ದೈವೀಶಕ್ತಿಗೆ ಆಹಾರ ಸಿಗದಂತಾಗಿ ಅದರ ಪೋಷಣೆಯು ನಿಂತುಹೋಗಿ ಲೋಕದಲ್ಲಿ ಆ ಶಕ್ತಿಯು ಕುಂಠಿತವಾಗುವುದು. ಇದರಿಂದ ಲೋಕಕ್ಕೆ ತೀವ್ರ ಹಾನಿ ಇದೆ. ಆದುದರಿಂದ ದೇವತೆಗಳಿಂದ ಉಪಕೃತರಾದ ನಾವು ಅವರಿಗೆ ಇಷ್ಟವಾದ ಆಹಾರವನ್ನು ಸಮರ್ಪಿಸುವುದು ನಮ್ಮ ಕರ್ತವ್ಯವಾಗಿದೆ. ಭಗವಂತನ ಉದ್ದೇಶದಿಂದ ಮಾಡುವ ಸತ್ಕರ್ಮವೇ ಯಜ್ಞವಾಗಿದ್ದು ಇದೇ ದೇವತೆಗಳಿಗೆ ನಾವು ನೀಡಬಹುದಾದ ಪರಮ ಪವಿತ್ರ ನೈವೇದ್ಯವಾಗಿದೆ. ಇದರಿಂದಲೇ ಲೋಕದಲ್ಲಿ ದೈವೀಶಕ್ತಿಯು ವಿಜೃಂಭಿತವಾಗಿ ಹಿತ ವಾತಾವರಣದ ನಿರ್ಮಾಣವಾಗುವುದು:

ಪರಸ್ಪರಂ ಭಾವಯಂತಃ
ಶ್ರೇಯಃ ಪರಮವಾಪ್ಸ್ಯಥ ।

ಜ್ಞಾನಿ-ಅಜ್ಞಾನಿಗಳ ಅಂತರ

ಅಜ್ಞಾನಿಗಳಂತೆ ಜ್ಞಾನಿಗಳು ಕರ್ತವ್ಯವನ್ನು ಆಚರಿಸಿದ್ದರೂ ಅವರಿಬ್ಬರ ಕಾರ್ಯದಲ್ಲಿ ಬಹಳ ಅಂತರವಿರುವುದು. ಪರಮಾತ್ಮನ ಪರಮ ಸುಂದರ, ಮಂಗಳಮಯ ರೂಪವನ್ನು ಕಂಡ ಜ್ಞಾನಿಗಳಿಗೆ ಬೇರೆ ವಸ್ತುಗಳಲ್ಲಿ ಪ್ರೀತಿ, ಕಾಮನೆಗಳೇ ಉದಯಿಸಲಾರವು. ಅವರ ಪ್ರೇಮವೆಲ್ಲಾ ಪರಮಾತ್ಮನಲ್ಲೇ ಕೇಂದ್ರೀಕೃತವಾಗಿರುವುದು. ಆದುದರಿಂದ ಆಸಕ್ತಿ, ಕಾಮನೆಗಳು ಅವರ ಬಳಿ ಸುಳಿಯಲು ಸಾಧ್ಯವೇ ಇಲ್ಲ. ಹೀಗೆ ಅವರು ಪರಿಪೂರ್ಣ ರೀತಿಯಿಂದ ನಿಷ್ಕಾಮಕರ್ಮವನ್ನು ಆಚರಿಸಬಲ್ಲರು. ಹೊರಗಿನಿಂದ ನೋಡುವಾಗ ಜ್ಞಾನಿ, ಅಜ್ಞಾನಿಗಳ ಕರ್ಮದಲ್ಲಿ ಭೇದವೇ ತೋರಲಾರದು. ಒಳಹೊಕ್ಕು ನೋಡಿದರೆ ಅವುಗಳಿಗೆ ವಿಶೇಷ ಅಂತರವಿರುವುದನ್ನು ಕಾಣಬಲ್ಲೆವು. ಎರಡು ಸರೋವರಗಳು ಮೇಲಿನಿಂದ ನೋಡುವಾಗ ಒಂದೇ ರೀತಿ ಇರಬಹುದು. ಆದರೆ ಒಳಗೆ ಇಳಿದರೆ ಒಂದರಲ್ಲಿ ನೀರಿಗಿಂತ ಹೆಚ್ಚು ಕೆಸರೇ

ಇರಬಹುದು. ಇನ್ನೊಂದು ಆಳವಾದ ನೀರಿನಿಂದ ಸ್ವಚ್ಛ ಗಂಭೀರವಾಗಿ ಇರಬಹುದು. ಜ್ಞಾನಿ, ಅಜ್ಞಾನಿಗಳ ಸ್ಥಿತಿಯೂ ಹೀಗೆಯೇ. ಬಾಹ್ಯ ದೃಷ್ಟಿಯಲ್ಲಿ ಇಬ್ಬರ ಕ್ರಿಯೆಗಳಲ್ಲಿ ಹೋಲಿಕೆ ಇರಬಹುದು. ಈ ಹೊರಗಿನ ಕ್ರಿಯೆಯಿಂದ ಒಬ್ಬನ ವ್ಯಕ್ತಿತ್ವವನ್ನು ಅಳೆಯಲು ಸಾಧ್ಯವಿಲ್ಲ. ಒಳಗೆ ಮನಸ್ಸಿನಲ್ಲಿ ಕೆಸರೇ ತುಂಬಿದ್ದರೆ ಬರಿಯ ಈ ಬಾಹ್ಯ ಕರ್ಮಗಳಿಂದ ಆತ ಮಹತ್ತ್ವವನ್ನು ಪಡೆಯಲಾರ. ಎಷ್ಟು ಕಾರ್ಯ ಮಾಡಿದೆವೆನ್ನುವುದಕ್ಕಿಂತ ಹೇಗೆ ಮಾಡಿದ್ದೇವೆ ಎಂಬುದು ಹೆಚ್ಚು ಮಹತ್ತ್ವದ್ದು. ದೊಡ್ಡ ಪ್ರಮಾಣದಿಂದ ದಾನದ ಸಂಭ್ರಮವನ್ನು ನಡೆಸುವ ಶ್ರೀಮಂತನಿಗಿಂತ ತನ್ನಲ್ಲಿರುವ ಅಲ್ಪ ಪದಾರ್ಥವನ್ನು ಶುದ್ಧ ಭಾವದಿಂದ ನೀಡುವ ಬಡವನ ದಾನವೇ ಹೆಚ್ಚು ತ್ಯಾಗಪೂರ್ಣವಾಗಬಲ್ಲುದು. ವ್ಯಕ್ತಿಯ ಬಾಹ್ಯ ವ್ಯಾಪಾರಕ್ಕಿಂತ ಅವನ ಮನಸ್ಸಿನ ಹಿನ್ನೆಲೆಯನ್ನು ನೋಡಿ ಅವನ ಕರ್ಮವನ್ನು ನಾವು ಅಳೆಯಬೇಕು.

ಮಹಾಭಾರತದಲ್ಲಿ ಒಂದು ಮನೋಜ್ಞವಾದ ಕಥೆ ಇದೆ. ದುರ್ಭಿಕ್ಷೆಯ ಕಾಲದಲ್ಲಿ ಒಮ್ಮೆ ಆಹಾರದ ಕೊರತೆ ವಿಶೇಷವಾಗಿತ್ತು. ಆಗ ನಾಲ್ಕು ಜನರಿದ್ದ ಒಂದು ಬಡ ಕುಟುಂಬದ ಯಜಮಾನನು ಅನೇಕ ದಿನಗಳ ಉಪವಾಸದ ನಂತರ ಸ್ವಲ್ಪ ಹಿಟ್ಟನ್ನು ಸಂಗ್ರಹಿಸಿ ಒಂದು ದಿನ ಭೋಜನಕ್ಕೆ ಅಣಿಯಾಗಿದ್ದನು. ಆಗ ಧರ್ಮದೇವತೆಯು ಇವನ ನಿಷ್ಠೆಯನ್ನು ಪರೀಕ್ಷಿಸಲು ಅತಿಥಿಯಾಗಿ ಇವನ ಮನೆಗೆ ಆಗಮಿಸಿದನು. ಯಜಮಾನನು ಅವನನ್ನು ಸ್ವಾಗತಿಸಿ ಭೋಜನಕ್ಕೆ ಆಮಂತ್ರಿಸಿದನು. ಮನೆಯವರೆಲ್ಲರೂ ತಮ್ಮ ಉಪವಾಸ ಶ್ರಮವನ್ನು ಗಣನೆಗೆ ತಾರದೆ ತಮ್ಮೆಲ್ಲರ ಪಾಲಿನ ಅನ್ನವನ್ನೂ ಸನ್ಮಾನ್ಯ ಅತಿಥಿಗೆ ಅಹಮಹಮಿಕೆಯಿಂದ, ಸಂತೋಷದಿಂದ ಸಮರ್ಪಿಸಿದರು. ಧರ್ಮದೇವತೆಯು ಈ ಬಡ ಕುಟುಂಬದ ತ್ಯಾಗವನ್ನು ಕಂಡು ಸುಪ್ರಸನ್ನನಾಗಿ ಇವರನ್ನು ಅನುಗ್ರಹಿಸಿದನು. ಅವರು ಈ ಹಿಟ್ಟನ್ನು ದಾನ ಮಾಡುವಾಗ ಬಿಟ್ಟಿರುವ ನೀರಿನಲ್ಲಿ ತನ್ನ ಮೈಯನ್ನು ಅದ್ದಿಕೊಂಡಾಗ ಒಂದು ಮುಂಗುಸಿಯ ಅರ್ಧ ಭಾಗವು ಬಂಗಾರವಾಯಿತು. ಉಳಿದ ಅರ್ಧ ಭಾಗವು ಬಂಗಾರವಾಗಬೇಕೆಂದು ರಾಜ, ಮಹಾರಾಜರು ಮಾಡಿದ ಯಜ್ಞಗಳ ಅವಭೃಥದ ನೀರಿನಲ್ಲಿ ಮಿಂದರೂ ಆ ಭಾಗವು ಬಂಗಾರವಾಗಲಿಲ್ಲವಂತೆ. ಕರ್ಮದ ಬಾಹ್ಯ ಪ್ರಮಾಣಕ್ಕಿಂತಲೂ ಒಳಗಿನ ತ್ಯಾಗ ಹಾಗೂ ಶುದ್ಧ ಭಾವಗಳಿಂದಲೇ ಕರ್ಮದ ಮಹತ್ತ್ವವು ಹೆಚ್ಚುವುದು ಎನ್ನುವುದಕ್ಕೆ ಈ ಕಥೆಯು ನಿದರ್ಶನವಾಗಿದೆ. ಜ್ಞಾನಿಗಳು ಮಾಡುವ ಕರ್ಮವು ಸಾಮಾನ್ಯ ಜನರ ಕಾರ್ಯಗಳಿಗಿಂತ ಎಷ್ಟೋ ಪಾಲು ಮಿಗಿಲಾಗಿರುವುದು. ಜ್ಞಾನಿ, ಅಜ್ಞಾನಿಗಳ ಈ ಅಂತರವನ್ನು ತಿಳಿದುಕೊಂಡು ನಾವು ಜ್ಞಾನಿಗಳ ದಾರಿಯಲ್ಲಿ ನಡೆಯಲು ತುಂಬು ಹೃದಯದ ಪ್ರಯತ್ನವನ್ನು ಮಾಡಬೇಕು.

ಕಾಮ ಆತ್ಮದ ಪ್ರಬಲ ವೈರಿ

ಕರ್ತವ್ಯಾಕರ್ತವ್ಯ ವಿಷಯದಲ್ಲಿ ಅರ್ಜುನನ ಸಂಶಯಗಳಿಗೆಲ್ಲ ಪರಿಹಾರ ದೊರಕಿದೆ. ಈ ಕರ್ತವ್ಯದ ಜ್ಞಾನವಿದ್ದರೂ ಪಾಪಕೃತ್ಯವನ್ನು ಮಾಡಬಾರದೆಂದು ತಿಳಿದಿದ್ದರೂ ಜನರು ಆ ಕಡೆ ಯಾಕೆ ಎಳೆಯಲ್ಪಡುತ್ತಾರೆ? ಇಚ್ಛೆಯಿಲ್ಲದಿದ್ದರೂ ಯಾವುದೋ ಒಂದು ಪ್ರಬಲ ಶಕ್ತಿಯ ಒತ್ತಡಕ್ಕೆ ಮಣಿದು ದುಷ್ಟ ಕಾರ್ಯಗಳು ನಮ್ಮಿಂದ ಸಂಭವಿಸುತ್ತವೆ. ಹೀಗೆ ನಮ್ಮನ್ನು ಬಲಾತ್ಕಾರದಿಂದ ಅಧೋಗತಿಗಿಳಿಸುವ ಆ ದುಷ್ಟ ಶಕ್ತಿ ಯಾವುದು ಎಂದು ಅರ್ಜುನನು ಕೇಳುವನು:

ಅಥ ಕೇನ ಪ್ರಯುಕ್ತೋಽಯಂ
ಪಾಪಂ ಚರತಿ ಪೂರುಷಃ ।

ನಮ್ಮೆಲ್ಲರ ಪರವಾಗಿ ಅರ್ಜುನನು ಈ ಪ್ರಶ್ನೆಯನ್ನು ಮಾಡುತ್ತಿರುವನೆಂದು ನಮಗನಿಸುತ್ತದೆ. ತಿಳಿದೂ ತಿಳಿದೂ ನಾವು ಯಾಕೆ ಅಕೃತ್ಯವನ್ನು ಮಾಡುತ್ತಿರುವೆವೆಂಬುದನ್ನು ಪರಿಶೀಲಿಸಿ ನಮ್ಮ ಮೇಲೆ

ಆಕ್ರಮಣವನ್ನು ಎಸಗುವ ದುಃಶಕ್ತಿಯ ಪರೀಕ್ಷಣವನ್ನು ಮಾಡುವುದರಿಂದ ಅದನ್ನು ಎದುರಿಸುವ ಶಕ್ತಿಯು ನಮಗೆ ಪ್ರಾಪ್ತವಾಗುವುದು. ಕಾಮವೇ ಈ ಪ್ರಬಲ ದುಃಶಕ್ತಿಯಾಗಿದ್ದು ಅದೇ ನಮ್ಮ ಪರಮಶತ್ರುವಾಗಿದೆ ಎಂದು ಶ್ರೀಕೃಷ್ಣನು ನಿರೂಪಿಸುತ್ತಾನೆ. ಇಲ್ಲಿ ಕಾಮವೆಂದರೆ ನಮ್ಮನ್ನು ಜೀವನದ ಉತ್ತುಂಗ ಶಿಖರಕ್ಕೆ ಏರಿಸಬಲ್ಲ ಉದಾತ್ತ ಆಕಾಂಕ್ಷೆಯಲ್ಲ. ನಮ್ಮನ್ನು ಸಂಸಾರದ ಕತ್ತಲ ಗುಹೆಯಲ್ಲಿ ಕೆಡಹಬಲ್ಲ ತುಚ್ಛ ಆಶೆ-ಲಾಲಸೆಗಳನ್ನು ಇಲ್ಲಿ 'ಕಾಮ' ಎನ್ನುವ ಶಬ್ದದಿಂದ ಕರೆಯಲಾಗಿದೆ. ನಮ್ಮ ಎಲ್ಲರ ದುಷ್ಟ ವೃತ್ತಿಗಳಿಗೆ ಈ ಕಾಮವೇ ಮೂಲವಾಗಿದೆ. ಕಾಮ ಮತ್ತು ಅದರಿಂದ ಉದ್ಭವಿಸುವ ಕ್ರೋಧ ಇವೆರಡರಿಂದಲೇ ಎಲ್ಲ ಅವ್ಯವಹಾರಗಳೂ ನಡೆಯುವುವು. ತಮ್ಮ ದುರಾಶೆಗಳನ್ನು ಪೂರೈಸಲು ಸುಖ-ಸಂಪತ್ತುಗಳ ಲಾಲಸೆಯಿಂದ ಹೀನಕೃತ್ಯಗಳನ್ನು ಜನರು ಎಸಗುವರು. ಈ ಲಾಲಸೆಯನ್ನು ಪೂರೈಸಲು ಅಡೆತಡೆಯಾದಾಗ ಕೋಪವು ಉಕ್ಕಿ ಬಂದು ಅದರ ಆವೇಶದಲ್ಲಿ ಹಿಂಸಾಕೃತ್ಯಗಳನ್ನು ನಡೆಸುವರು. ಪ್ರತಿಯೊಂದು ದುರ್ವ್ಯವಹಾರದ ಹಿಂದೆ ಕಾಮದ ಕೈವಾಡ ಇದ್ದೇ ಇರುವುದು. ಸ್ವಕರ್ತವ್ಯದ ಕಡೆಗೆ ಆಸ್ಥೆ ಇರುವವನು ಈ ಮಹಾವೈರಿಯನ್ನು ನಿಗ್ರಹಿಸಲು ಸರ್ವ ಪ್ರಯತ್ನ ಮಾಡಬೇಕು.

ಪ್ರತಿಹತವಾದ ಕಾಮವು ಕ್ರೋಧಕ್ಕೆ ಕಾರಣವಾಗುವುದರಿಂದ

ಕಾಮ ಏಷ ಕ್ರೋಧ ಏಷ ।

ಎಂಬುದಾಗಿ ಕಾಮವನ್ನು ಕ್ರೋಧವೆಂದೇ ಕರೆದಿದ್ದಾರೆ. ಅಪೇಕ್ಷಿಸಿದ ಭೋಗ್ಯ ವಸ್ತುಗಳನ್ನು ಬೇಕಾದಂತೆ ಪೂರೈಸಿ ಕಾಮವನ್ನು ತಣಿಸಲು ಸಾಧ್ಯವಿಲ್ಲ. ಇದು

ಮಹಾಶನೋ ಮಹಾಪಾಪ್ಮಾ ।

ಎಷ್ಟು ನೀಡಿದರೂ ಅದನ್ನು ಸ್ವಾಹಾಕಾರ ಮಾಡಿ ಇನ್ನೂ ಹೆಚ್ಚು ಪ್ರಜ್ವಲಿತವಾಗುವುದು. ಕಟ್ಟಿಗೆಯನ್ನು ಹಾಕಿ ಬೆಂಕಿಯನ್ನು ತಣಿಸಲು ಶಕ್ಯವಾಗಬಹುದೇ?

ನ ಜಾತು ಕಾಮಃ ಕಾಮಾನಾ

ಮುಪಭೋಗೇನ ಶಾಮ್ಯತಿ ।

''ಕಾಮೋಪಭೋಗವೆಷ್ಟು ಮಾಡಿದರೂ ಅದರಿಂದ ನಮ್ಮ ಕಾಮನೆ ತಣಿಯುವುದಿಲ್ಲ.''

ದೀರ್ಘಕಾಲದ ವರೆಗೆ ಸುಖಭೋಗದ ಪರಮಾವಧಿಯನ್ನು ಅನುಭವಿಸಿದ ಯಯಾತಿ ರಾಜನ ಉದ್ಗಾರವಿದು! ಮುಪ್ಪು ಹೊಂದಿದ ಮೇಲೂ ಪುನಃ ತಾರುಣ್ಯವನ್ನು ಪಡೆದು ಬಹುಕಾಲದ ವರೆಗೆ ರಾಜಭೋಗವನ್ನು ಪಡೆದರೂ ತನ್ನ ಕಾಮನೆಯು ಹಿಂಗದೆ ಮತ್ತಷ್ಟು ಪ್ರವೃದ್ಧವಾಗಿರುವುದನ್ನೇ ಆತನು ಕಂಡನು. ಕಾಮದ ಉಪಾಸನೆಯಿಂದಲ್ಲ, ಅದರ ನಿಗ್ರಹದಿಂದಲೇ ನಾವು ಅದನ್ನು ಹಿಡಿತದಲ್ಲಿ ಇಟ್ಟು ಕೊಳ್ಳ ಬಲ್ಲೆವೆಂಬ ಸತ್ಯವು ಅವನಿಗೆ ಗೋಚರವಾಯಿತು.

ಮುಂಬಯಿ ನಗರದಲ್ಲಿ ಹೋದ ವರ್ಷ ದಂಪತಿಗಳಿಬ್ಬರು ಆತ್ಮಹತ್ಯೆ ಮಾಡಿಕೊಂಡರು. ಮನೆ, ಸಂಬಳ ಎಲ್ಲವೂ ಅನುಕೂಲವಿತ್ತು. ಅವರು ತಮ್ಮ ಆತ್ಮಹತ್ಯೆಗೆ ಕೊಟ್ಟ ಕಾರಣವಿಂತಿದೆ: ತಮಗೆ...... ಕೋಣೆಯನ್ನು ಕಟ್ಟಿಕೊಳ್ಳಲು ಬೇಕಾದ ಆರ್ಥಿಕ ಅನುಕೂಲತೆಯಿಲ್ಲವೆಂಬ ನಿರಾಶೆಯಿಂದ ತಮಗೆ ಜೀವನದಲ್ಲಿ ಜುಗುಪ್ಸೆ ಉಂಟಾಗಿ ತಾವು ಆತ್ಮಹತ್ಯೆ ಮಾಡಿಕೊಳ್ಳುವೆವೆಂದು ಅವರು ಬರೆದಿಟ್ಟಿದ್ದರು. ವಿಷಯಭೋಗ ಸೌಕರ್ಯಗಳು ಹೆಚ್ಚಿದಷ್ಟು ನಮ್ಮ ಸುಖಲೋಲುಪತೆಯು ಹೆಚ್ಚಿ ನಾವು ಎಷ್ಟು ಅತೃಪ್ತಿ, ದುರ್ಬಲತೆಯನ್ನು ಹೊಂದಬಲ್ಲೆವು ಎಂಬುದಕ್ಕೆ ಇದು ಸರಿಯಾದ ನಿದರ್ಶನ. ಈ ಆತ್ಮಹತ್ಯೆಯು ೨೦ನೇ ಶತಮಾನದ ಜನರ ಮನಃಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಭೋಗಾನುಭವದ ಬಗ್ಗೆ ವೈಜ್ಞಾನಿಕ ಸೌಕರ್ಯಗಳು ಹೆಚ್ಚಿದಷ್ಟೂ ನಮ್ಮ ಆಶೆ-ಅಪೇಕ್ಷೆಗಳು ಮತ್ತೂ ವಿಸ್ತಾರಗೊಳ್ಳುತ್ತ ಜೀವನದಲ್ಲಿ ಅತೃಪ್ತಿ ಅಶಾಂತಿಗಳು ನೆಲೆಸುವುವು. ಪಾಶ್ಚಾತ್ಯ ದೇಶದಲ್ಲಿ ಒಬ್ಬ ರಾಜನಿದ್ದನು. ದಿನದಲ್ಲಿ ಎಷ್ಟು ಸಲ ತಿಂದರೂ ಅವನಿಗೆ ತೃಪ್ತಿ

ಇಲ್ಲ, ಇನ್ನೂ ತಿನ್ನಬೇಕೆಂಬ ಆಶೆ. ಪರಿಮಿತವಾದ ಹೊಟ್ಟೆಗೆ ಅವನ ಆಶೆಯನ್ನು ಪೂರೈಸಲು ಆಗಲಿಲ್ಲ. ಕೊನೆಗೆ ವೈದ್ಯರ ಸಹಾಯವನ್ನು ಪಡೆದು ದಿನವೂ ಇಪ್ಪತ್ತು, ಮೂವತ್ತು ಸಲ ತಾನು ಉಂಡದ್ದನ್ನು ವಾಂತಿ ಮಾಡಿಸಿ ತಿರುಗಿ ತಿನ್ನುತ್ತಿದ್ದನಂತೆ. ಕಾಮನೆಯ ಚಾಪಲ್ಯವು ನಮ್ಮನ್ನು ಈ ರೀತಿ ಕುಣಿಸುತ್ತದೆ. ಒಂದು ಪ್ರಸಿದ್ಧ ವಚನವಿದೆ. ಮೊದಲು ಮನುಷ್ಯನು ಮದ್ಯವನ್ನು ಕುಡಿಯಲು ಉಪಕ್ರಮಿಸುತ್ತಾನೆ. ಆಮೇಲೆ ಮದ್ಯವೇ ಮನುಷ್ಯನನ್ನು ಕುಡಿಯುತ್ತದೆ. ಅರ್ಥಾತ್ ಅಂತಹ ದುಶ್ಚಟಕ್ಕೆ ತಾನು ಪೂರ್ಣ ಬಲಿಯಾಗಿ ತನ್ನ ಸ್ವಾತಂತ್ರ್ಯವನ್ನೇ ಕಳೆದುಕೊಳ್ಳುತ್ತಾನೆ. ಹೀಗೆ ನಮ್ಮ ಅಪೇಕ್ಷೆಯನ್ನೆಲ್ಲ ಪೂರೈಸಿಕೊಂಡು ನಾವು ನಮ್ಮ ಕಾಮವನ್ನು ಹಿಂಗಿಸಿಕೊಳ್ಳಬಹುದೆಂದು ಸರ್ವಥಾ ಭಾವಿಸಬಾರದು. ವಿಷಯಭೋಗಗಳಿಂದ ಕಾಮವು ಮತ್ತೂ ಪೆಡಂಭೂತವಾಗಿ ಕೊಬ್ಬಿ ನಮ್ಮನ್ನು ಪೂರ್ಣವಾಗಿ ಪಾದಾಕ್ರಾಂತಗೊಳಿಸುವುದು. ಆಹಾರವನ್ನು ನೀಡಿ ಉದರಾಗ್ನಿಯನ್ನು ತಣಿಸಬಹುದಾದರೂ ಕಾಮಾಗ್ನಿಯನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ. ಆದ್ದರಿಂದಲೇ-

ದುಷ್ಪೂರೇಣಾನಲೇನ ಚ ।

ಎಂದು ಗೀತೆಯಲ್ಲಿ ಕಾಮವನ್ನು ವರ್ಣಿಸಲಾಗಿದೆ.

ಜ್ಞಾನವು ಕಾಮನಿಗ್ರಹದ ಸಾಧನ

ಇಂದ್ರಿಯ, ಮನಸ್ಸುಗಳಂತಹ ದುರ್ಗಗಳಲ್ಲಿ ನಿಂತು ನಮ್ಮ ಮೇಲೆ ಅಭಿಯೋಗವನ್ನು ನಡೆಸುವ ಕಾಮ, ಕ್ರೋಧಗಳನ್ನು ಹತ್ತಿಕ್ಕಲು ಇಂದ್ರಿಯಗಳನ್ನು ಮೊದಲಾಗಿ ನಾವು ಸ್ವಾಧೀನಪಡಿಸಿಕೊಳ್ಳಬೇಕು. ಕಾಮ, ಕ್ರೋಧಗಳನ್ನು ಉಚ್ಚಾಟನೆಗೊಳಿಸುವುದಕ್ಕೆ ಇಂದ್ರಿಯಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದೇ ಪ್ರಥಮೋಪಾಯವಾಗಿದೆ. ಇಂದ್ರಿಯಗಳನ್ನು ಗೆದ್ದು ಕಾಮ, ಕ್ರೋಧಗಳನ್ನು ನಿರ್ನಾಮಗೊಳಿಸುವ ಈ ಆಧ್ಯಾತ್ಮಿಕ ಯುದ್ಧದಲ್ಲಿ ಜ್ಞಾನವೇ ಆಯುಧವಾಗಿರುವುದು. ಶಾಸ್ತ್ರೀಯವಾದ ಜ್ಞಾನದಿಂದ ನಮ್ಮ ವ್ಯಕ್ತಿತ್ವ ಹಾಗೂ ಇತಿಮಿತಿಗಳ ಅರಿವುಂಟಾಗಿ ನಮ್ಮ ಕರ್ತವ್ಯಗಳ ಸ್ಮರಣೆಯುಂಟಾಗಿ ಕ್ರಮಕ್ರಮವಾಗಿ ಇಂದ್ರಿಯದ ಮೇಲೆ ಪ್ರಭುತ್ವವನ್ನು ಸ್ಥಾಪಿಸಲು ನಮಗೆ ಸಾಧ್ಯವಾಗುವುದು. ಬುದ್ಧಿ, ಮನಸ್ಸನ್ನು ಕೆರಳಿಸುವುದು. ಮನಸ್ಸು ಇಂದ್ರಿಯವನ್ನು ಕೆರಳಿಸುವುದು. ಇದರಿಂದ ಕಾಮ, ಕ್ರೋಧಾದಿರೂಪಗಳಾದ ವಿವಿಧ ಪ್ರವೃತ್ತಿಗಳು ಉಂಟಾಗುವುವು. ಈ ಇಂದ್ರಿಯ, ಮನಸ್ಸು, ಬುದ್ಧಿಗಳಿಗೂ ಅವುಗಳಿಗೆ ಮೂಲವಾದ ಪ್ರಕೃತಿ ಮುಂತಾದ ತತ್ತ್ವಗಳಿಗೂ ಪ್ರಚೋದಕ ಶಕ್ತಿಗಳಾದ ದೇವತೆಗಳನ್ನು ಅರಿತುಕೊಂಡು ಆ ಎಲ್ಲ ದೈವೀಶಕ್ತಿಗಳಿಗೂ ನಿಯಾಮಕನಾದ, ಸರ್ವೋತ್ತಮನಾದ ಪರಮಾತ್ಮನನ್ನು ಅರಿತುಕೊಂಡರೆ ಇಂದ್ರಿಯಗಳನ್ನು ಗೆಲ್ಲುವುದು ನಮಗೆ ಲೀಲಾಜಾಲವಾಗುವುದು. ಆವಾವ ಪದಾರ್ಥಗಳ ಮೂಲಭೂತ ಶಕ್ತಿಯನ್ನು ಅರಿತುಕೊಂಡಿರುವುದರಿಂದಲೇ ಮಾನವನಿಗೆ ಪ್ರಕೃತಿಯ ಮೇಲೆ ವಿಶೇಷ ಹಿಡಿತವಿದೆ. ತನಗೆ ಬೇಕಾದಂತೆ ಪ್ರಕೃತಿಯನ್ನು ಬಳಸಲು ಆತನು ಸಮರ್ಥನಾಗಿದ್ದಾನೆ. ಈ ಪ್ರಕೃತಿ ಹಾಗೂ ಇಂದ್ರಿಯಗಳ ಪ್ರಚೋದಕವಾದ ಮೂಲಭೂತ ಚೇತನ ಶಕ್ತಿಗಳನ್ನು ನಾವು ಅರಿತುಕೊಳ್ಳುವುದರಿಂದ ಪ್ರಕೃತಿ ಹಾಗೂ ಇಂದ್ರಿಯಗಳ ಮೇಲೆ ವಿಶೇಷ ಅಧಿಕಾರವನ್ನು ಚಲಾಯಿಸಲು ನಮಗೆ ಸಾಧ್ಯವಾಗುವುದು. ಪ್ರಕೃತಿ ಹಾಗೂ ಇಂದ್ರಿಯಗಳಲ್ಲಿ ಸಾಕಷ್ಟು ವಿಧಾಯಕ ಶಕ್ತಿಯು ಹುದುಗಿದೆ. ಆದರೆ ಅದು ವ್ಯರ್ಥವಾಗಿ ಹರಿದು ಹೋಗುವುದೇ ಹೆಚ್ಚು. ಪ್ರಾಕೃತಿಕ ಸಂಪತ್ತಿನ ಅಪವ್ಯಯದಂತೆ ನಮ್ಮ ಇಂದ್ರಿಯ ಶಕ್ತಿಯ ಅಪವ್ಯಯವೂ ದೊಡ್ಡದಾದ ಸಾರ್ವಜನಿಕ ಹಾನಿಯೆಂದೇ ಭಾವಿಸಬೇಕು. ಹರಿದು ಹೋಗುತ್ತಿರುವ ನೀರಿನ ಸದುಪಯೋಗವಾಗಲು ಅಣೆಕಟ್ಟುಗಳನ್ನು ಕಟ್ಟಿ ನೀರಿನ ಪ್ರವಾಹವನ್ನು ನಿಯಂತ್ರಿಸಿ ಅದನ್ನು ಯೋಗ್ಯ

ರೀತಿಯಿಂದ ಬಳಸುವ ಪ್ರಯತ್ನ ನಡೆಯುವಂತೆ ನಮ್ಮ ಐಂದ್ರಿಯಿಕ ಶಕ್ತಿಗಳ ನಿಯಂತ್ರಣದ ಕಡೆಗೂ ನಾವು ಗಮನ ನೀಡಬೇಕು. ಅವುಗಳನ್ನು ನಾವು ಸರಿಯಾಗಿ ನಿಯಂತ್ರಿಸಿ ನಮ್ಮ ಶಾರೀರಿಕ ಹಾಗೂ ಮಾನಸಿಕ ಶಕ್ತಿಗಳ ಕಣಕಣಗಳೂ ಯೋಗ್ಯ ವಿಧಾಯಕ ಕಾರ್ಯದಲ್ಲಿ ಉಪಯೋಗಿಸಲ್ಪಡುವಂತಹ ಕ್ರಮಬದ್ಧ ಜೀವನವು ನಮ್ಮದಾಗಿರಬೇಕು.

ಪ್ರತಿಯೊಂದು ಜಡವಸ್ತುವಿನಿಂದಲೂ ಅದರದರ ಪ್ರಾಕೃತಿಕ ಸ್ವಭಾವಕ್ಕನುಗುಣವಾಗಿ ವಿವಿಧ ಕಾರ್ಯಗಳು ನಡೆಯಲು ಎರಡು ತರದ ಜೀವನಶಕ್ತಿಗಳು ಆ ಪದಾರ್ಥಗಳ ಒಳಗೆ ಇದ್ದು ಪ್ರಚೋದಕ ಗಳಾಗಿವೆ. ದೇವತೆಗಳು ಹಾಗೂ ಸರ್ವೋತ್ತಮನಾದ ಪರಮಾತ್ಮ ಇವೇ ಆ ಎರಡು ತತ್ತ್ವಗಳು. ಎಲ್ಲಾ ಜಡ ಪದಾರ್ಥಗಳ ಒಳಗೆ ಇದ್ದು ಜಗಚ್ಚಾಲಕನಾದ ಶ್ರೀಹರಿಯ ನಿಯಂತ್ರಣದಲ್ಲಿ ಆವಾವ ವಸ್ತುಗಳಿಗೆ ಕಾರ್ಯಚಾಲನೆಯನ್ನು ನೀಡುವ ಈ ದೇವತೆಗಳನ್ನು ಅಭಿಮಾನಿಗಳೆಂದೂ ಜಗತ್ತಿನ ಮುಖ್ಯ ಸೂತ್ರಚಾಲಕನಾಗಿ, ಸರ್ವವ್ಯಾಪಕನಾಗಿ ಈ ದೇವತೆಗಳ ಹಾಗೂ ಸಕಲ ಜಡಜೀವರ ಚಾಲನ-ಪಾಲನಗಳನ್ನು ನಡೆಸುವ ಶ್ರೀಮನ್ನಾರಾಯಣನನ್ನು ಅಂತರ್ಯಾಮಿ ದೇವತೆಯೆಂದೂ ತಿಳಿದು ಅವರನ್ನು ಒಲಿಸಿಕೊಳ್ಳುವುದರಿಂದ ಜಗತ್ತಿನ ಮೇಲೆಯೇ ಯೋಗ್ಯ ಹಿಡಿತವನ್ನು ನಾವು ಸಾಧಿಸಿಕೊಳ್ಳಬಹುದು. ಚಂದ್ರ, ಸೂರ್ಯ, ವರುಣ, ಯಮ, ಇಂದ್ರ, ಶಿವ, ವಾಯು, ಬ್ರಹ್ಮ ಮುಂತಾದ ದೇವತೆಗಳ ಶಕ್ತಿ, ಗುಣ, ಸ್ವರೂಪಗಳನ್ನೂ ಅವರಲ್ಲಿ ಪರಸ್ಪರವಾಗಿ ಇರುವ ಅಂತರ ಹಾಗೂ ಒಂದು ದೈವೀಶಕ್ತಿ ಇನ್ನೊಂದು ದೈವೀಶಕ್ತಿಯನ್ನು ನಿಯಂತ್ರಿಸುವ ವಿಧಾನವನ್ನೂ ಅರಿತುಕೊಳ್ಳಬೇಕು. ಇದನ್ನೇ ದೇವತಾ ತಾರತಮ್ಯವೆಂದು ಹೇಳಲಾಗಿದೆ. ಪ್ರಾಕೃತಿಕ ವಸ್ತುಗಳಲ್ಲಿರುವ ಅನ್ಯೋನ್ಯ ಸಂಬಂಧಕ್ಕೆ ಒಳಗಿರುವ ದೈವೀಶಕ್ತಿಗಳ ಪರಸ್ಪರ ಸಂಬಂಧವೂ ಕಾರಣವಾಗಿದೆ. ಒಂದು ಜಡವಸ್ತುವಿನಿಂದ ಇನ್ನೊಂದು ಪದಾರ್ಥವು ಹುಟ್ಟುವುದು. ಒಂದು ಇನ್ನೊಂದನ್ನು ನಿಯಂತ್ರಿಸುವುದು. ಇವುಗಳಿಗೆಲ್ಲ ಆವಾವ ಪದಾರ್ಥ ಸ್ವಭಾವಗಳು ಕಾರಣವಾದಂತೆ ಒಳಗಿರುವ ಅಭಿಮಾನಿ ದೇವತೆಗಳ ಶಕ್ತಿ ತಾರತಮ್ಯ ಹಾಗೂ ಪರಸ್ಪರ ಸಂಬಂಧಗಳೂ ಕಾರಣವಾಗಿವೆ. ನಮ್ಮ ಜೀವನವು ವ್ಯವಸ್ಥಿತವಾಗಲು ವಿಷಯಪದಾರ್ಥಗಳು, ನಮ್ಮ ಶರೀರ, ಇಂದ್ರಿಯ, ಬುದ್ಧಿ, ಮನಸ್ಸು ಮುಂತಾದವುಗಳಲ್ಲಿ ಹುದುಗಿರುವ ದೇವತಾ ತತ್ತ್ವಗಳನ್ನೂ ಅವುಗಳ ತಾರತಮ್ಯಗಳನ್ನೂ ಅಂತರ್ಯಾಮಿಯಾದ ಸರ್ವೋತ್ತಮ ವಸ್ತುವನ್ನೂ ಅರಿತು ಅವುಗಳನ್ನು ಒಲಿಸಿಕೊಳ್ಳಬೇಕು. ಆಗ ಬುದ್ಧಿಯು ಮನಸ್ಸನ್ನೂ ಮನಸ್ಸು ಇಂದ್ರಿಯಗಳನ್ನೂ ಕೆರಳಿಸಲಾರವು. ಈ ದೈವೀಶಕ್ತಿಗಳ ಅನುಗ್ರಹ, ಸಹಕಾರಗಳಿಂದಲೇ ಕಾಮಕ್ರೋಧಾದಿ ಅಸುರೀ ಶಕ್ತಿಗಳನ್ನು ಬಲವಾಗಿ ಎದುರಿಸಿ ಸದೆಬಡಿಯಲು ನಾವು ಸಮರ್ಥರಾಗುವೆವು. ಈ ಪರಾಪರ ದೇವತಾ ತತ್ತ್ವಜ್ಞಾನವೇ ಕಾಮಕ್ರೋಧಾದಿ ದುಃಶಕ್ತಿಗಳ ದಮನಕ್ಕಾಗಿ ನಾವು ಉಪಯೋಗಿಸಬೇಕಾದ ದಿವ್ಯಾಯುಧವಾಗಿದೆ. ಈ ಭೂತ, ಭೌತಿಕ ವಸ್ತುಗಳನ್ನು ನಿಯಂತ್ರಿಸುವ ದಿವ್ಯ ಚೇತನ ಜ್ಞಾನ, ಭಕ್ತಿ ಹಾಗೂ ಅವರ ಒಲವನ್ನು ಹೊಂದಿ ವಿಶಿಷ್ಟವಾದ ಆತ್ಮಬಲ ಹಾಗೂ ಕರ್ತವ್ಯದ ಪ್ರಜ್ಞೆಯನ್ನು ನಾವು ಪಡೆದರೆ ಕಾಮಕ್ರೋಧಾದಿ ಶತ್ರುಗಳು ನಮ್ಮ ಮೇಲೆ ಹೇಗೆ ಅಭಿಯೋಗ ಮಾಡಬಲ್ಲವು? ದೇವತೆಗಳ ಜ್ಞಾನ, ಭಕ್ತಿಗಳಿಲ್ಲದೆಯೇ ಕಣ್ಣಮುಂದೆ ಇರುವ ಜಡವಸ್ತುಗಳನ್ನು ಮಾತ್ರ ನಂಬಿ ನೀತಿ, ಸದ್ಗುಣ, ಸದಾಚಾರ, ಕರ್ತವ್ಯಗಳಿಂದ ನಾವು ಬಾಹಿರರಾಗಿ ಸುಲಭವಾಗಿ ನಮ್ಮ ಆಂತರಿಕ ಶತ್ರುಗಳಿಗೆ ಬಲಿಯಾಗುತ್ತಿರುವೆವು.

ಏವಂ ಬುದ್ಧೇಃ ಪರಂ ಬುದ್ಧ್ವಾ
ಸಂಸ್ತಭ್ಯಾತ್ಮಾನಮಾತ್ಮನಾ
ಜಹಿ ಶತ್ರುಂ ಮಹಾಬಾಹೋ
ಕಾಮರೂಪಂ ದುರಾಸದಮ್ ॥

ದೇವತೆಗಳ ಹಾಗೂ ಭಗವಂತನ ತತ್ತ್ವಜ್ಞಾನದ ದಿವ್ಯಾಯುಧದಿಂದ ನಮ್ಮ ಆಂತರಿಕ ಶತ್ರುಗಳ ಜೊತೆಗೆ ಹೋರಾಟ ನಡೆಸಿ ನಾವು ವಿಜಯಿಗಳಾಗಿ ನಮ್ಮ ಸ್ವಧರ್ಮಗಳನ್ನೆಲ್ಲ ಸರಿಯಾಗಿ ತಿಳಿದು ಭಗವತ್ ಜ್ಞಾನಪೂರ್ವಕವಾಗಿ ಈ ಕರ್ತವ್ಯಮಾರ್ಗದಲ್ಲಿ ಮುನ್ನಡೆಯಲೇ ಬೇಕೆಂದು ಈ ಮೂರನೆಯ ಅಧ್ಯಾಯದಲ್ಲಿ ಭಗವಂತನು ವಿವರಿಸಿದ್ದಾನೆ.

ಜ್ಞಾನಿಯು ಲೋಕವಿಮುಖನಲ್ಲ

ಸರ್ವಕರ್ಮಾಣಿ ಮನಸಾ
ಸಂನ್ಯಸ್ಯಾಸ್ತೇ ಸುಖಂ ವಶೀ ।

ಜ್ಞಾನಯೋಗಿಯಲ್ಲಿ ಕರ್ಮದ ಸಂಬಂಧವೇ ಇರುವುದಿಲ್ಲ ಎಂದು ಕೆಲವರ ಅಭಿಪ್ರಾಯವಿದೆ. ಕರ್ಮಯೋಗವು ಸಾಧಕನ ಪೂರ್ವಾವಸ್ಥೆಯಾಗಿದ್ದರೆ ಜ್ಞಾನಯೋಗವು ಅವನ ಕೊನೆಯ ಹಂತವಾಗಿದೆ. ಏಕಕಾಲದಲ್ಲಿ ಇವೆರಡೂ ಸಾಧಕನಲ್ಲಿ ಮೇಳಯಿಸಲಾರವು. ಈ ಕ್ರಿಯೆ, ಕ್ರಿಯಾಫಲ ಸಂಬಂಧ ಹಾಗೂ ಇವುಗಳ ಕಾರಣಗಳೆನಿಸಿದ ಈ ಪ್ರಪಂಚ ಮಾಯಾಮಯವೆನಿಸಿದ್ದು ನಿದ್ದೆಯಿಂದ ಎಚ್ಚೆತ್ತವನಿಗೆ ಸ್ವಪ್ನರಾಜ್ಯದ ವಿಭ್ರಮ ವಿಲಾಸಗಳೆಲ್ಲ ಕ್ಷಣಮಾತ್ರದಲ್ಲಿ ಅದೃಶ್ಯವಾಗುವಂತೆ ಜ್ಞಾನವನ್ನು ಪಡೆದವನ ಪಾಲಿಗೆ ಈ ಪ್ರಪಂಚವೆಲ್ಲ ಬರಿ ಕನಸೇ ಆಗಿರುವುದು. ಹಗ್ಗವನ್ನು ಸರಿಯಾಗಿ ನೋಡಿದವನು ಅಲ್ಲಿ ತಾನು ಕಲ್ಪಿಸಿಕೊಂಡ ಹಾವನ್ನು ಮತ್ತೆ ಕಾಣಲಾರನಷ್ಟೆ! ಅದರಂತೆ ಆತ್ಮಜ್ಞಾನವನ್ನು ಪಡೆದ ಮೇಲೆ ಅದರ ಅಧಿಷ್ಠಾನದಲ್ಲಿಯೇ ಕಲ್ಪನೆಗೊಂಡಿರುವ ಮಾಯಿಕವಾದ ಜಗತ್ತಿನ ದರ್ಶನವು ಜ್ಞಾನಿಗೆ ಆಗುವುದಿಲ್ಲ. ಇಂತಹ ದಶೆಯಲ್ಲಿ ಅವನು ಕರ್ಮವನ್ನು ಹೇಗೆ ಮಾಡಲಿ? ಅದುದರಿಂದ ಯಜ್ಞರೂಪವಾದ ಸತ್ಕರ್ಮದ ಅನುಷ್ಠಾನವು ಅಜ್ಞಾನದಲ್ಲಿ ತೊಳಲಾಡುವ ವ್ಯಕ್ತಿಗಳಿಗೆ ಮಾತ್ರ ಮೀಸಲಾದುದು. ಬ್ರಹ್ಮಜ್ಞಾನವನ್ನು ಪಡೆದ ವ್ಯಕ್ತಿಯು ಜ್ಞಾನ ಹಾಗೂ ಕರ್ಮ ಸಂನ್ಯಾಸದಲ್ಲಿ ಮಾತ್ರ ಅಧಿಕೃತನು. ಅವನು ತನ್ನ ಶರೀರ ರಕ್ಷಣೆಗೆ ಮಾತ್ರ ಅವಶ್ಯಕವೆನಿಸುವ ಕಾರ್ಯಗಳನ್ನು ನಿರ್ಲಿಪ್ತತೆಯಿಂದ ನಿರ್ವಹಿಸುವನು. ಇತರ ನಿತ್ಯ ನೈಮಿತ್ತಿಕ ಧಾರ್ಮಿಕ ಸಾಮಾಜಿಕವೆನಿಸುವ ಯಾವ ಕಾರ್ಯಗಳನ್ನೂ ಜ್ಞಾನಿಯಾದವನು ಮಾಡಲಾರನೆಂದು ಶ್ರೀ ಶಂಕರಾಚಾರ್ಯ ಮೊದಲಾದವರು ಪ್ರತಿಪಾದಿಸಿ ಇದರ ಸಮರ್ಥನೆಗಾಗಿ,

ಸರ್ವಕರ್ಮಾಣಿ ಮನಸಾ
ಸಂನ್ಯಸ್ಯಾಸ್ತೇ ಸುಖಂ ವಶೀ ।

ನ ಕರ್ತೃತ್ವಂ ನ ಕರ್ಮಾಣಿ ।

ನೈವ ಕುರ್ವನ್ ನ ಕಾರಯನ್ ।

ಶಾರೀರಂ ಕೇವಲಂ ಕರ್ಮ ।

ಮುಂತಾದ ಶ್ಲೋಕಗಳನ್ನು ಉದಾಹರಿಸಿರುತ್ತಾರೆ. ಈ ವಾಕ್ಯಗಳನ್ನು ಪರಾಮರ್ಶಿಸುವಾಗಲೇ ಇವರು ಹೇಳುವ ಕರ್ಮಸನ್ಯಾಸವು ಗೀತೆಗೆ ಸಮ್ಮತವಲ್ಲವೆಂದು ಸ್ಪಷ್ಟವಾಗುವುದು. ಸರ್ವ ಕರ್ಮಗಳ ಕಾಯಿಕ ತ್ಯಾಗವನ್ನು ಹೇಳಿರದೆ ಮಾನಸಿಕ ತ್ಯಾಗವನ್ನಷ್ಟೇ ಇಲ್ಲಿ ವಿಧಾನ ಮಾಡಲಾಗಿದೆ. ''ಸರ್ವ ಕರ್ಮಾಣಿ ಮನಸಾ ಸಂನ್ಯಸ್ಯ'' ಈ ವಾಕ್ಯದಲ್ಲಿ ಮಾನಸಿಕವಾಗಿ ಯಾವ ಫಲಾಭಿಲಾಷೆಯನ್ನೂ ಮಾಡಲಾಗದು ಮತ್ತು ತಾನು ಕರ್ತಾ ಎಂಬ ಸ್ವಾತಂತ್ರ್ಯದ ಅಭಿಮಾನವೂ ಮನಸ್ಸಿನಲ್ಲಿರಬಾರದು ಎಂಬ ಆಶಯವೇ ವ್ಯಕ್ತವಾಗುತ್ತದೆ. ''ಮನಸಾ'' ಎಂಬ ಪದವು ಇಲ್ಲಿ ಅರ್ಥಪೂರ್ಣವಾಗಿದೆ.

ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್
ಅಶ್ನನ್ ಗಚ್ಛನ್ ಸ್ವಪನ್ ಶ್ವಸನ್ ।
ಪ್ರವದನ್ ವಿಸೃಜನ್ ಗೃಹ್ಣನ್
ಉನ್ಮಿಷನ್ ನಿಮಿಷನ್ನಪಿ ॥

ಎಂದು ಜ್ಞಾನಿಗೆ ಸಕಲ ವ್ಯವಹಾರಗಳನ್ನು ನಿರೂಪಿಸಿ ಜ್ಞಾನಿಯು ಬ್ರಹ್ಮಾರ್ಪಣ ಬುದ್ಧಿಯಿಂದ ಪರಮಾತ್ಮನ ಸ್ವತಂತ್ರ ಕ್ರಿಯಾಶಕ್ತಿಯ ನಿರಂತರ ಅನುಸಂಧಾನದ ಜತೆಗೆ ಅನಾಸಕ್ತಿಯಿಂದ ಈ ಎಲ್ಲ ವ್ಯವಹಾರಗಳನ್ನೂ ನಿರ್ವಹಿಸುವನೆಂದು ಹೇಳಿರುವುದರಿಂದ ಕಾಯಿಕವಾಗಿ ಕರ್ಮಗಳ ಪರಿತ್ಯಾಗವನ್ನು ಇಲ್ಲಿ ಪ್ರತಿಪಾದಿಸಿಲ್ಲ ವೆಂದು ಸುಸ್ಪಷ್ಟವಾಗುವುದು. ಅಹಂಕಾರ ಮತ್ತು ಫಲಾಶೆಗಳ ಪರಿವರ್ಜನೆಯೇ ಕರ್ಮದ ಮಾನಸಿಕ ತ್ಯಾಗವೆನಿಸಿದೆ. ಕಾಮ್ಯಕರ್ಮಗಳ ವರ್ಜನವೇ ಸನ್ಯಾಸವೆಂದೂ ಸರ್ವ ಲೌಕಿಕ ಫಲಗಳನ್ನು ಬಿಡುವುದೇ ತ್ಯಾಗವೆಂದೂ ಹದಿನೆಂಟನೆಯ ಅಧ್ಯಾಯದಲ್ಲಿ ವರ್ಣಿಸಲಾಗಿದೆ. ಪ್ರಪಂಚವು ಕಾಲ್ಪನಿಕವಾಗಿದ್ದು ಜ್ಞಾನಿಯಾದವನಿಗೆ ಈ ಜಗತ್ತು ಕಾಣುವುದೇ ಇಲ್ಲವಾದರೆ ತನ್ನ ರಕ್ಷಣೆಗಾಗಿ ಉಪಯುಕ್ತವಾದ ಕಾರ್ಯಗಳನ್ನಾದರೂ ಅವನು ಹೇಗೆ ಮಾಡಬಲ್ಲನು? ಶರೀರ ಹಾಗೂ ಇತರ ಆಹಾರದ ಪದಾರ್ಥಗಳೂ ಜಗತ್ತಿನ ಜೊತೆಗೆ ನಿವೃತ್ತಿ ಹೊಂದಿರುವುದರಿಂದ ಅವನು ಯಾವ ಕ್ರಿಯೆ ಯನ್ನೂ ಮಾಡಲಾರನಷ್ಟೆ. ಹೀಗಿರುವಾಗಿ ನಿತ್ಯಜೀವನೋಪಯುಕ್ತ ಕಾರ್ಯಗಳ ಮಟ್ಟಿಗೆ ಅವನಿಗೆ ಅವಕಾಶವನ್ನು ಸಲ್ಲಿಸಿರುವುದು ಅತ್ಯಂತ ಅರ್ಥಶೂನ್ಯವಾಗಿದೆ. ಲೋಕಾನುಗ್ರಹಕಾರಕವೂ ಆತ್ಮೋನ್ನತಿ ಪೋಷಕವೂ ಆದ ವಿಸ್ತಾರವಾದ ಶ್ರೇಷ್ಠ ಕರ್ತವ್ಯಗಳನ್ನೆಲ್ಲಾ ದೂರ ಸರಿಸಿ ಉದರ ಪೋಷಣೆಗೆ ಅವಶ್ಯವೆನಿಸಿದ ಕಾರ್ಯಗಳ ಮಟ್ಟಿಗೆ ಜ್ಞಾನಿಯ ಕರ್ತವ್ಯವನ್ನು ಮೊಟಕುಗೊಳಿಸುವುದರಿಂದ ಜ್ಞಾನಿಯ ಮಟ್ಟವನ್ನೇ ಕೆಳಗಿಳಿಸಿದಂತಾಗುವುದು, ಬ್ರಹ್ಮಜ್ಞಾನಿಯಾದ ಉದಾರ, ವಿಶಾಲ ಮನಸ್ಸಿನ ಮಹಾಪುರುಷನು ಈ ಜಗತ್ತಿನಲ್ಲಿ ಶರೀರ ಹಾಗೂ ಅದಕ್ಕೆ ಸಂಬಂಧಿಸಿದ ವಸ್ತುಗಳನ್ನು ಮಾತ್ರ ಕಾಣುವನು. ಉಳಿದ ಪ್ರಪಂಚವೆಲ್ಲ ಅವನಿಗೆ ಶೂನ್ಯವೆನ್ನುವುದು. ಅರ್ಥರಹಿತವಾದ ವಿಚಾರವೆನಿಸುವುದು. ಜಗತ್ತು ಮಾಯಿಕವಾದುದರಿಂದ, ಬ್ರಹ್ಮಜ್ಞಾನಿಗೆ ಇದು ಗೋಚರವಾಗುವುದಿಲ್ಲವೆನ್ನುವುದರಿಂದ, ಆಧ್ಯಾತ್ಮಿಕ ಪ್ರಪಂಚ ಹಾಗೂ ಜಗತ್ತಿನ ಸಂಬಂಧವನ್ನೇ ಕಡಿದು ಹಾಕಿದಂತೆ. ಬ್ರಹ್ಮದರ್ಶನವನ್ನು ಹೊಂದಿದ ಮಹಾನುಭಾವನಿಂದಲೇ ಲೋಕದ ಜನರು ಪರಮಾತ್ಮನ ವಿಚಾರವನ್ನರಿಯಬೇಕು. ಬ್ರಹ್ಮಜ್ಞಾನಿಯಾದ ಜೀವನ್ಮುಕ್ತನಿಗೆ ಈ ಜಗತ್ತೇ ಕಾಣದಾದರೆ ಭಗವಂತನ ಸಂದೇಶವನ್ನು ಲೋಕಕ್ಕೆ ನೀಡುವವರು ಬೇರೆ ಯಾರು? ಪರಮಾತ್ಮನನ್ನೂ ಅಜ್ಞಾನಿ ಜನತೆಯನ್ನೂ ಜೋಡಿಸುವ ಸೇತುವೆಯೇ ಬ್ರಹ್ಮಜ್ಞಾನಿಯಾಗಿದ್ದು ಅವನ ಲೋಕದರ್ಶನವನ್ನೇ ಅಲ್ಲಗಳೆದರೆ ಋಷಿಗಳ ಸಾಕ್ಷಾತ್ಕಾರದ ಪ್ರತಿಧ್ವನಿಗಳೂ ಅವರ ಅನುಭವದ ಉದ್ಗಾರಗಳೂ ಎನಿಸಿದ, ಈಗ ದೊರೆಯುವ ಶಾಸ್ತ್ರೀಯ ಉಪದೇಶಗಳೆಲ್ಲ ಅಜ್ಞಾನಿಗಳಾದ ಸಾಧಕರ, ಅನುಭವದ ಹಿನ್ನೆಲೆಯಿಲ್ಲದ, ಅಪ್ರಗಲ್ಭ ವಿಚಾರಗಳೆನಿಸುವುವು. ಜ್ಞಾನಿಗಳೂ ಅಜ್ಞಾನಿಗಳೂ ಎಲ್ಲರೂ ಈ ಲೋಕದಲ್ಲಿ ಸ್ವಕರ್ತವ್ಯವನ್ನು ಮಾಡಲೇ ಬೇಕೆಂದು ಬೋಧಿಸುವ ಗೀತೆಗೆ ಈ ವಾದವು ಸರ್ವಥಾ ಸಮ್ಮತಲ್ಲ.

ಬ್ರಹ್ಮಣ್ಯಾಧಾಯ ಕರ್ಮಾಣಿ
ಸಂಗಂ ತ್ಯಕ್ತ್ವಾ ಕರೋತಿ ಯಃ ।

ಎಂದು ಗೀತೆಯಲ್ಲಿ ನಿರೂಪಿಸಿದಂತೆ ಅಸಂಗ ಮತ್ತು ಬ್ರಹ್ಮಾರ್ಪಣ ಬುದ್ಧಿಯಿಂದ ಸ್ವಕರ್ತವ್ಯಾಚರಣೆ ಹಾಗೂ ಲೋಕವ್ಯವಹಾರ ಇವೆರಡೂ ಬ್ರಹ್ಮಜ್ಞಾನಿಗಳಲ್ಲೂ ಇವೆ ಎಂಬುದನ್ನು ಅರಿತುಕೊಂಡು ಅವರು ತೋರಿಸಿದ ಹಾದಿಯಲ್ಲಿ ಅವರು ನಡೆಯುವ ರೀತಿಯಲ್ಲಿ ಹೆಜ್ಜೆ ಇಡಲು ನಾವು ಪ್ರಯತ್ನಿಸಬೇಕು.

ಆಧ್ಯಾತ್ಮಿಕ ಸುಖದ ವೈಶಿಷ್ಟ್ಯ

ಆತ್ಮದರ್ಶನದಿಂದ ದೊರೆಯುವ ಈ ದಿವ್ಯ ಆನಂದವು ಜೀವನದಲ್ಲಿ ನಾವು ಪಡೆಯಬಹುದಾದ ಉಳಿದ ಎಲ್ಲ ಸುಖಗಳಿಗಿಂತ ಶ್ರೇಷ್ಠವೂ ಪವಿತ್ರವೂ ಆಗಿದೆ. ಸಾಂಸಾರಿಕ ಸುಖಭೋಗದಿಂದ ನಮಗೆ ದೊರೆಯುವ ಅಲ್ಪ ಸುಖಕ್ಕಿಂತ ಮಿಗಿಲಾದ, ಪವಿತ್ರವಾದ, ಸಾತ್ವಿಕಾನಂದವನ್ನು ಭೋಗಪದಾರ್ಥಗಳ ತ್ಯಾಗದಿಂದ ನಾವು ಪಡೆಯಬಲ್ಲೆವು. ಭೋಗದ ಆನಂದಕ್ಕಿಂತಲೂ ತ್ಯಾಗದ ಆನಂದದ ಸವಿಯೇ ಹೆಚ್ಚು. ತನ್ನ ಪದಾರ್ಥಗಳನ್ನು ಭೋಗಿಸುವುದರಲ್ಲಿ ಸಹಜವಾಗಿ ನಾವು ಸುಖವನ್ನು ಅನುಭವಿಸುತ್ತೇವೆ. ಇದು ಪ್ರಾಕೃತಿಕವಾದ, ಸಾಮಾನ್ಯ ಜನರು ಪಡೆಯುವ ಸುಖ. ಇನ್ನು, ಮತ್ತೊಬ್ಬರ ವಸ್ತುಗಳನ್ನು ಕಸಿದು ತಾನು ಪಡೆಯುವ ಸುಖವು ವಿಕೃತವಾದ ತಾಮಸ ಸುಖವೆನಿಸುವುದು. ತನ್ನ ಲಾಲಸೆಯನ್ನು ಹತ್ತಿಕ್ಕಿ ತನ್ನ ಪ್ರೀತಿಯ ವಸ್ತುಗಳನ್ನೇ ಮತ್ತೊಬ್ಬರಿಗೆ ನೀಡಿ ತಾನು ಪಡೆಯುವ ಆನಂದವೇ ನಿಜವಾದ ಸುಸಂಸ್ಕೃತವಾದ ಸಾತ್ತ್ವಿಕ ಆನಂದವೆನಿಸುವುದು. ನಮ್ಮ ಮೂಲಭೂತವಾದ ಚೈತನ್ಯರೂಪೀ ಆನಂದವನ್ನೇ ನಾವು ತ್ಯಾಗದ ಆನಂದದಲ್ಲಿ ಕಾಣುವೆವೆಂದು ಶ್ರೀಮಧ್ವಚಾರ್ಯರು ಅಪ್ಪಣೆ ಕೊಡಿಸಿದ್ದಾರೆ. ಹೀಗೆ ಪ್ರಾಕೃತಿಕ ಭೋಗಕ್ಕಿಂತ ಶ್ರೇಷ್ಠವಾದ ಸ್ವರೂಪಸುಖವನ್ನು ವೈಷಯಿಕ ಪದಾರ್ಥಗಳ ಹಾಗೂ ಆಂತರಿಕ ಕಾಮನೆಯ ತ್ಯಾಗದಲ್ಲಿ ತಾನು ಅನುಭವಿಸಬಹುದಾದರೂ ಅದು ಸ್ಥಿರವಾಗಿ ನಮ್ಮಲ್ಲಿ ನೆಲೆನಿಲ್ಲಲು ಪರಮಾತ್ಮನ ಧ್ಯಾನದ ಆಸರೆಯು ಆವಶ್ಯಕವಾಗಿದೆ. ತ್ಯಾಗದಿಂದ ತಾತ್ಕಾಲಿಕವಾದ ಸಾತ್ತ್ವಿಕ ಆನಂದವು ದೊರಕಬಹುದಾದರೂ ಧ್ಯಾನಯೋಗದಲ್ಲಿ ಪರಮಾತ್ಮನಲ್ಲಿ ನಮ್ಮ ಬುದ್ಧಿಯನ್ನು ಕೇಂದ್ರೀಕರಿಸುವುದರಿಂದ ಸ್ಥಿರವಾದ ಅಕ್ಷಯವಾದ ಆನಂದವು ದೊರಕುವುದು. ಆದುದರಿಂದ ತ್ಯಾಗ ಯೋಗಗಳ ಸಮನ್ವಯದಿಂದಲೇ ಶಾಶ್ವತ ಸುಖದ ಅನುಭವವನ್ನು ನಾವು ಹೊಂದಬಲ್ಲೆವು.

ವಿಷಯ ಸಂಪರ್ಕದಿಂದ ಪಡೆಯುವ ಸುಖ ಹಾಗೂ ತ್ಯಾಗಧ್ಯಾನಾದಿಗಳಿಂದ ಪಡೆಯುವ ಆತ್ಮಾನಂದ ಇವುಗಳಿಗೆ ಬಹಳ ಅಂತರವಿದೆ. ಭೌತಿಕ ಸುಖವನ್ನು ಪಡೆಯುವಾಗ ಅದರಲ್ಲಿ ಬಹಳ ಆತುರತೆ ಆಸಕ್ತಿಗಳು ಮೂಡುವುವು. ಅದನ್ನು ಪಡೆಯಲು ನಮ್ಮ ಮನಸ್ಸು ಅತಿಯಾಗಿ ಚಡಪಡಿಸುತ್ತದೆ. ಇದೆಲ್ಲ ಲವಲವಿಕೆ ಅದನ್ನು ಪಡೆಯುವ ವರೆಗೆ ಮಾತ್ರ. ಪಡೆದ ಮೇಲೆ ಅದರಲ್ಲಿ ಅಷ್ಟೇ ಜುಗುಪ್ಸೆ, ತಿರಸ್ಕಾರಬುದ್ಧಿ ಉಂಟಾಗುತ್ತದೆ. ಆರಂಭದಲ್ಲಿ ತಾತ್ಕಾಲಿಕ ಸುಖವು ದೊರೆತರೂ ವಿಷಯಪದಾರ್ಥಗಳ ಸೇವನೆಯು ದುಃಖ ಜುಗುಪ್ಸೆಗಳನ್ನೇ ಮುಂದೆ ನಿರ್ಮಿಸುವುದು. ಕಜ್ಜಿ ತುರಿಸುವಾಗ ತಾತ್ಕಾಲಿಕವಾಗಿ ದೊರೆಯುವ ತಾಮಸ ಆನಂದದಂತೆ ಈ ವೈಷಯಿಕ ಸುಖ ಇದೆ. ಕಜ್ಜಿ ತುರಿಸಿದ ನಂತರ ಆಗುವ ಕ್ಲೇಶವಿಕಾರದಂತೆ ಭೌತಿಕ ಸುಖವನ್ನು ಅನುಭವಿಸಿದ ನಂತರದ ಪಾಡೂ ಶೋಚನೀಯವೇ ಆಗುವುದು.

ಕಂಡೂಯನೇನ ಕರಯೋರಿವ ದುಃಖ ದುಃಖಂ ।

– ಭಾಗವತ

ಆಧ್ಯಾತ್ಮಿಕ ಸುಖದ ಸ್ಥಿತಿಯು ಇದಕ್ಕಿಂತ ತೀರ ವ್ಯತಿರಿಕ್ತವಾಗಿದೆ. ಈ ಸುಖವನ್ನು ಪಡೆಯುವ ಮೊದಲು ಇದಕ್ಕಾಗಿ ತ್ಯಾಗ ತಪಸ್ಸು ಕ್ಲೇಶಗಳ ಆವಶ್ಯಕತೆಯು ಬಹಳ ಶ್ರಮವೆನಿಸಬಹುದಾದರೂ ಈ ಆಧ್ಯಾತ್ಮಿಕ ಸಾಧನೆಯ ನಂತರ ನಾವು ಪಡೆಯಬಹುದಾದ ತೃಪ್ತಿ ಆನಂದಗಳು ಅನುಪಮವಾದುದು. ಆ ಪವಿತ್ರವಾದ ಸಾತ್ತ್ವಿಕ ಆನಂದದ ಮುಂದೆ ಪ್ರಪಂಚದ ಮಿಕ್ಕ ಸಮಸ್ತ ಭೋಗೈಶ್ವರ್ಯಗಳ ಆನಂದವು ತುಚ್ಛ ಹಾಗೂ ಕ್ಷುದ್ರಮವೆನಿಸುವುವು. ಪ್ರಾರಂಭದಲ್ಲಿ ಕಷ್ಟ, ಅನಾಸ್ಥೆಗಳಿಗೆ ಅವಕಾಶವಿದ್ದರೂ ಪರಿಣಾಮದಲ್ಲಿ ನಮಗೆ ಪೂರ್ಣತೆಯ ಅನುಭವವನ್ನು ನೀಡಬಲ್ಲ ಈ ಆಧ್ಯಾತ್ಮಿಕ ಸಿದ್ಧಿಗಾಗಿ ಪ್ರಯತ್ನಿಸುವುದೇ ನಮ್ಮ ಜೀವನದ ಮುಖ್ಯ ಸಾಧನೆಯಾಗಿರಬೇಕು. ಈ ವಿಚಾರವನ್ನು –

ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ
ವಿಂದತ್ಯಾತ್ಮನಿ ಯತ್ ಸುಖಂ ।

ಸ ಬ್ರಹ್ಮಯೋಗಯುಕ್ತಾತ್ಮಾ
ಸುಖಮಕ್ಷಯ್ಯಮಶ್ನುತೇ ।

ಯೇ ಹಿ ಸಂಸ್ಪರ್ಶಜಾ ಭೋಗಾ
ದುಃಖಯೋನಯ ಏವ ತೇ ।

ಮುಂತಾದ ಶ್ಲೋಕಗಳಲ್ಲಿ ವಿವರಿಸಲಾಗಿದೆ.

ಹೀಗೆ ಜೀವನದಲ್ಲಿ ತಾನು ತ್ಯಾಗ ಮತ್ತು ಕರ್ಮಯೋಗ ಇವೆರಡನ್ನೂ ಅಳವಡಿಸಿಕೊಂಡು ಧ್ಯಾನದ ಮಾರ್ಗದಲ್ಲಿ ಮುನ್ನಡೆದು ಸ್ಥಿರವಾದ ಆತ್ಮಿಕ ಆನಂದವನ್ನು ಪಡೆಯಬೇಕೆನ್ನುವುದನ್ನು ಐದನೆಯ ಅಧ್ಯಾಯದಲ್ಲಿ ಸಮರ್ಥಿಸಲಾಗಿದೆ.

ಕರ್ಮಯೋಗಿಗೆ ಲೋಕಸೇವೆ ಅನಿವಾರ್ಯ

ಧ್ಯಾನಯೋಗದ ಮೊದಲು ನಾವು ಮಾಡುವ ಕರ್ಮಗಳೆಂದರೆ ಜಪ, ಪೂಜೆ ಹಾಗೂ ಇತರ ವರ್ಣಾಶ್ರಮೋಚಿತ ಕರ್ತವ್ಯಗಳೆಂದು ಮಾತ್ರ ನಾವು ಭಾವಿಸಿದ್ದೇವೆ. ಪಾಠ-ಪ್ರವಚನ ಮುಂತಾದ ಆಯಾಯ ವರ್ಣಗಳು ಮಾಡುವ ವಿಶೇಷ ಧರ್ಮಗಳು ಮಾತ್ರವಲ್ಲದೆ ಎಲ್ಲ ವರ್ಣದವರೂ ಮಾಡಬೇಕಾದ, ಸರ್ವಸಾಧಾರಣವೆನಿಸುವ ಒಂದು ಶ್ರೇಷ್ಠ ಕರ್ತವ್ಯವೂ ಇದೆ. ಅದೇ ನಾನಾ ಜನ ಶುಶ್ರೂಷೆ. ಈ ಜಗತ್ತಿನಲ್ಲಿರುವ ಅನೇಕ ಬಗೆಯ ಜನತೆಯ ಸೇವೆಯೂ ಸಾಧಕನು ಅನುಷ್ಠಿಸಬೇಕಾದ ಮುಖ್ಯ ಕರ್ತವ್ಯಗಳಲ್ಲಿ ಒಂದೆನಿಸಿದೆ. ಎಲ್ಲಿ ದುಃಖ, ರೋಗ, ಹಸಿವುಗಳಿವೆಯೋ ಅಂತಹ ಆರ್ತಜನರಿಗಾಗಿ ನಮ್ಮ ಹೃದಯ ಮಿಡುಕಬೇಕು. ಎಲ್ಲ ಜನರಲ್ಲಿರುವ ಹರಿಯನ್ನು ಸ್ಮರಿಸಿ ಸ್ವಾರ್ಥಭಾವನೆಯನ್ನು ತ್ಯಜಿಸಿ ಜನಸೇವೆಯನ್ನು ಕೈಗೊಳ್ಳುವುದರಿಂದ ಭಗವಂತನು ಪ್ರೀತಿಪಾತ್ರನಾಗುವನು.

ತಸ್ಯ ಪ್ರಾಣ್ಯುಪಕಾರೇಣ
ಪ್ರೀತೋ ಭವತಿ ಕೇಶವ ।

– ಗೀತಾತಾತ್ಪರ್ಯ

ಸಾಕ್ಷಾತ್ಕಾರವನ್ನು ಪಡೆಯುವ ವರೆಗೆ ತನ್ನ ಜಪ ಪೂಜಾದಿಗಳ ಜತೆಗೆ ಸಾಧಕನು ಈ ಜನಶುಶ್ರೂಷೆಯ ಕಾರ್ಯವನ್ನೂ ಕೈಗೊಳ್ಳಬೇಕು. ಇದು ಐಚ್ಛಿಕವಲ್ಲ. ಕಡ್ಡಾಯವಾಗಿ ಈ ಸೇವೆಯನ್ನು ನಾವು ಆಚರಿಸಲೇಬೇಕು. ಸರಕಾರಕ್ಕೆ ಕರ, ಕಂದಾಯಗಳನ್ನು ಕೊಡುವುದು ಹೇಗೆ ಅನಿವಾರ್ಯವೋ ಅದರಂತೆ ನಾನಾ ಜನಸೇವೆಯು ಭಗವಂತನು ನಮಗೆ ವಿಧಿಸಿದ ಕಡ್ಡಾಯದ ಕರ್ತವ್ಯವಾಗಿದೆ. ಇದು ಜಗತ್ತಿನ ಅಧಿದೇವತೆಗೆ ನಾವು ಸಲ್ಲಿಸಬಹುದಾದ ಕಂದಾಯವೆನಿಸಿದೆ. ಕರಕಂದಾಯಗಳನ್ನು ಕೊಡಲು ತಪ್ಪಿದಲ್ಲಿ ಅವನು ರಾಷ್ಟ್ರದ ಯೋಗ್ಯ ನಾಗರಿಕನಾಗಬಲ್ಲನೇ? ಅದರಂತೆ ವಿಶ್ವರಾಜ್ಯದ ಏಕಮೇವ ಸಾರ್ವಭೌಮನೆನಿಸಿದ ಭಗವಂತನಿಗಾಗಿ ದೀನದಲಿತರ ಸೇವೆಯನ್ನು ನಡೆಸದಿದ್ದರೆ ನಾವು ಹೇಗೆ ವಿಶ್ವದ ಯೋಗ್ಯ ಪ್ರಜೆಗಳೆನಿಸಬಲ್ಲೆವು?

ನಾನಾಜನಸ್ಯ ಶುಶ್ರೂಷಾ
ಕರ್ತವ್ಯಾ ಕರವನ್ಮತೇಃ ।

– ಗೀತಾತಾತ್ಪರ್ಯ

ಲೋಕಸೇವೆಯ ಅನಿವಾರ್ಯತೆಯನ್ನೂ ಅದರ ಹಿಂದಿರುವ ಪವಿತ್ರವಾದ ಭಾವವನ್ನೂ ಇದು ವಿವರಿಸುತ್ತದೆ. ಶ್ರೀಮಧ್ವಾಚಾರ್ಯರು ಜನಸೇವೆಯು ಸಾಧಕನಿಗೆ ಆವಶ್ಯಕವೆಂದು ಪ್ರತಿಪಾದಿಸಲು ಗೀತಾತಾತ್ಪರ್ಯದಲ್ಲಿ ಉದಾಹರಿಸಿದ ಶ್ಲೋಕವಿದು. ಇದು ನಮಗೆ ಪ್ರಿಯವಾದ ಧ್ಯೇಯ ವಾಕ್ಯವೆನಿಸಿದೆ. ಕರ್ಮಾಚರಣೆಯು ಆವಶ್ಯಕವೆಂದು ಭಾವಿಸಿ ತಮ್ಮ ವೈಯಕ್ತಿಕ ಧರ್ಮಕರ್ಮಗಳನ್ನು ಮಾತ್ರ ಆಚರಿಸಿ ಸಮಾಜದ ಬಗ್ಗೆ ಉದಾಸೀನವಾಗಿರುವ ಪ್ರವೃತ್ತಿಯನ್ನೇ ನಾವು ಹೆಚ್ಚಾಗಿ ಕಾಣುತ್ತೇವೆ. ಸಮಾಜದ ಸೇವೆಯೆಂದರೆ ಅದೊಂದು ಲೌಕಿಕಕಾರ್ಯವೆಂದೂ ಅದನ್ನು ತೊರೆದು ದಿನವಿಡೀ ಜಪತಪ ಮೊದಲಾದ ವೈಯಕ್ತಿಕವಾದ ಆಧ್ಯಾತ್ಮಿಕ ಕಾರ್ಯಗಳಲ್ಲಿ ತೊಡಗುವವನೇ ಕಟ್ಟಾ ಧಾರ್ಮಿಕನೆಂದೂ ಒಂದು ಭಾವನೆಯು ಪ್ರಚಲಿತವಿದೆ. ಗೀತೆಯಲ್ಲಿ ಹೇಳಿದ ಕರ್ಮದ ಸಂದೇಶವನ್ನು ವರ್ಣಾಶ್ರಮ ಪದ್ಧತಿಯಿಂದ ಬಂದ ನಮ್ಮ ನಮ್ಮ ವೃತ್ತಿ ಹಾಗೂ ಜಪಪೂಜಾದಿಗಳಲ್ಲೇ ನಾವು ಪರಿಮಿತಗೊಳಿಸಿದ್ದೇವೆ. ನಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಆರ್ತಜನತೆಯ ಸೇವೆಯೂ ಒಂದು ಪ್ರಧಾನವಾದ ಅಂಶವಾಗಿದೆಯೆಂದೂ ಸಾಧಕನು ತನ್ನ ನಿತ್ಯಾನುಷ್ಠಾನಗಳ ಜತೆಗೆ ಈ ಸೇವಾಕಾರ್ಯವನ್ನೂ ಆಚರಿಸಬೇಕೆನ್ನುವುದು ಗೀತೆಯ ಆದೇಶವೆಂದೂ ಶ್ರೀಮಧ್ವಾಚಾರ್ಯರು ಪ್ರತಿಪಾದಿಸಿದ್ದಾರೆ. ವೇದಾಂತವು ಸಮಾಜ ವಿಮುಖವಾದ ದೃಷ್ಟಿಯನ್ನು ನಮಗೆ ನೀಡದೆ ವೈಯಕ್ತಿಕ ಹಾಗೂ ಸಮಾಜದ ಉನ್ನತಿಗೆ ಪೋಷಕವಾದ ವಿಧಾಯಕವಾದ ಮಾರ್ಗವನ್ನು ಹೇಗೆ ತೋರಿಸುತ್ತದೆ ಎಂಬುದನ್ನು ಇದರಿಂದ ನಾವು ಮನಗಾಣಬಹುದು.

ಲೋಕದಲ್ಲಿ ಎರಡು ಬಗೆಯ ಜನರಿರುವರು. ಜಪಾನುಷ್ಠಾನ ನಿರತರಾಗಿ ಸಾಮಾಜಿಕ ಕಾರ್ಯವನ್ನು ತೊರೆಯುವವರು ಕೆಲವರು. ಸಮಾಜ ಸೇವೆಯಲ್ಲಿಯೇ ನಿರತರಾಗಿ ದೇವರನ್ನೇ ಮರೆಯುವವರು ಕೆಲವರು. ಈ ಎರಡು ಬಗೆಯ ಜನರ ಜೀವನವೂ ಅಪೂರ್ಣವೆನಿಸುತ್ತದೆ. ಸಮಾಜ ಸೇವೆಯಿಲ್ಲದ ನಿತ್ಯಕರ್ಮಗಳು ಪೂರ್ಣ ಧರ್ಮವೆನಿಸಲಾರವು. ಪರಮಾತ್ಮನ ಭಕ್ತಿಪೂಜೆಗಳಿಲ್ಲದ ಸಮಾಜಸೇವೆಯೂ ಪರಿಪೂರ್ಣ ಸೇವೆ ಎನಿಸಲಾರದು. ಧರ್ಮದ ಒಂದು ಮುಖವನ್ನು ಮಾತ್ರ ಪರಿಗ್ರಹಿಸಿ ಇನ್ನೊಂದು ಭಾಗವನ್ನು ಅಲಕ್ಷಿಸಿದರೆ ನಮ್ಮ ಧರ್ಮವು ಪರಿಪೂರ್ಣವೆನಿಸಲಾರದು. ಆನೆಯ ಒಂದೊಂದು ಭಾಗವನ್ನು ಮಾತ್ರ ಮುಟ್ಟಿ ಕುರುಡರು ತಾವು ಆನೆಯನ್ನು ಅರಿತೆವೆಂದು ಭಾವಿಸಿಕೊಂಡಂತೆ ನಮ್ಮ ಪರಿಸ್ಥಿತಿಯಾಗುವುದು. ಆನೆಯ ಬಾಲವನ್ನು ಮಾತ್ರ ಮುಟ್ಟಿ ಆನೆಯು ಹಗ್ಗದಂತಿದೆ ಎಂದು ಆ ಕುರುಡರು ಹೇಳಿದರಂತೆ. ಅದರಂತೆ ಧರ್ಮದ ಒಂದು ಭಾಗವೆನಿಸುವ ನಿತ್ಯಕರ್ಮಾನುಷ್ಠಾನವನ್ನು ಮಾತ್ರ ಆಚರಿಸಿ ಇನ್ನೊಂದು ಭಾಗವೆನಿಸುವ ಲೋಕಸೇವೆಯನ್ನು ಪರಿತ್ಯಜಿಸಿದರೆ ನಮ್ಮ ಧರ್ಮವು ಅಪೂರ್ಣವಾಗುವುದು. ಆದುದರಿಂದ ಧಾರ್ಮಿಕರೆನಿಸುವವರು ಸಮಾಜಸೇವೆಯ ಮಹತ್ತ್ವವನ್ನೂ ಸಾಮಾಜಿಕ ಕಾರ್ಯಕರ್ತರು ನಿಃಸ್ವಾರ್ಥಸೇವಾಭಾವದ ಸ್ಫೂರ್ತಿಗೆ ಆಧಾರವೆನಿಸಿದ ಭಗವದ್ಭಕ್ತಿಯನ್ನೂ ಅರಿತುಕೊಂಡು ಅವೆರಡನ್ನೂ ತಮ್ಮ ಜೀವನದಲ್ಲಿ ಸಮ್ಮಿಲಿತಗೊಳಿಸಬೇಕು.

ಆದರೆ ಲೋಕಸೇವೆಯನ್ನು ಮಾಡುವಾಗಲೂ ಅಲ್ಲಿ ಪರಮಾತ್ಮನ ವಿಸ್ಮರಣೆಯು ಸಲ್ಲದು. ಯಾವದೇ ಕಾರ್ಯಕ್ಕೆ ಹಿನ್ನೆಲೆಯಾಗಿ ಒಂದು ಉದ್ದೇಶವು ಇರಲೇಬೇಕಾಗುವುದು. ಭಗವಂತನನ್ನು ಮರೆತು ಅವನ ಪ್ರೀತಿಯ ಉದ್ದೇಶವಿಲ್ಲದೆ ಪ್ರವರ್ತಿಸಿದಾಗ ಸಹಜವಾಗಿ ಇತರ ಲೌಕಿಕ ಕಾಮನೆಗಳ ಉದಯವಾಗುವುದು ಅನಿವಾರ್ಯ. ಲೋಕಸೇವೆಯನ್ನು ಮಾಡುವಾಗಲೂ ಲೋಕದ ಅಂತರಂಗದಲ್ಲಿ ನೆಲಸಿದ ಭಗವಂತನ ಸೇವಾಭಾವನೆ ಇಲ್ಲದಿದ್ದರೆ ಅಲ್ಲಿಯೂ ಸ್ವಾರ್ಥಪ್ರವೃತ್ತಿಯ ಪ್ರವೇಶವಾಗಿ ಕೀರ್ತಿ, ಪ್ರತಿಷ್ಠೆ, ಅಧಿಕಾರ ಮೊದಲಾದವುಗಳ ಆಕಾಂಕ್ಷೆಯಿಂದ ಆ ಸೇವೆಯಲ್ಲಿ ಕೃತ್ರಿಮತೆಯು ನೆಲಸುವುದು. ಭಗವತ್ಪ್ರೀತ್ಯರ್ಥವಲ್ಲದ ಸ್ವಾರ್ಥಪೂರ್ಣ ಕಾರ್ಯಗಳೆಲ್ಲ ಎಷ್ಟೇ ಪರೋಪಕಾರಗಳಾಗಿದ್ದರೂ ಇವೆಲ್ಲ

ಇಷ್ಟಾಪೂರ್ತಗಳಾಗಿದ್ದು ತಾತ್ಕಾಲಿಕ ಫಲಕಾರಿಗಳಾಗಿವೆ. ಆದುದರಿಂದ ಲೋಕಸೇವೆಯನ್ನು ಮಾಡುವಾಗಲೂ ಭಗವತ್ಸೇವಾದೃಷ್ಟಿ ಜಾಗ್ರತವಾಗಿರಬೇಕು.

ಉದ್ಧರೇದಾತ್ಮನಾಽತ್ಮಾನಂ

ಅಂತೂ ಗೀತೆಯಲ್ಲಿ ಇಷ್ಟರವರೆಗೆ ಹೇಳಿದ ರೀತಿಯಲ್ಲಿ ಕರ್ಮಯೋಗವನ್ನಾಚರಿಸಿದ ವ್ಯಕ್ತಿಯೇ ಧ್ಯಾನಯೋಗಕ್ಕೆ ಅಧಿಕಾರಿ ಎನಿಸುವನು. ಈ ಧ್ಯಾನಯೋಗವೇ ಮುಂದೆ ಅಪರೋಕ್ಷಜ್ಞಾನದ ಮೂಲಕ ಮುಕ್ತಿಸುಖಕ್ಕೆ ಕಾರಣವಾಗಿರುವುದರಿಂದ ಮನಸ್ಸನ್ನು ಸ್ವಾಧೀನಗೊಳಿಸಿ ಈ ಧ್ಯಾನಯೋಗದ ಬಗ್ಗೆ ವಿಶೇಷ ಅಭಿನಿವೇಷದಿಂದ ನಾವು ಪ್ರವೃತ್ತರಾಗಬೇಕು. ನಮ್ಮ ಉದ್ಧಾರದ ಕೀಲಿಕೈಯು ನಮ್ಮಲ್ಲಿಯೇ ಇದೆ.

ನಮಗೆ ಅತ್ಯಂತ ಪ್ರಿಯವಾದ ಆತ್ಮವಸ್ತುವನ್ನು ಸಾಂಸಾರಿಕ ಕ್ಲೇಶವಿದೂರವನ್ನಾಗಿ, ಪರಮಸುಖ ಭಾಜನವನ್ನಾಗಿ ಮಾಡುವದು ನಮ್ಮ ಆದ್ಯ ಕರ್ತವ್ಯವಾಗಿದೆ. ನಮ್ಮ ಮನಸ್ಸಿನ ಮೂಲಕವೇ ನಾವು ಇದನ್ನು ಸಾಧಿಸಬೇಕು.

ಮನ ಏವ ಮನುಷ್ಯಾಣಾಂ
ಕಾರಣಂ ಬಂಧಮೋಕ್ಷಯೋಃ ।

ನಮ್ಮ ಉದ್ಧಾರ ಹಾಗೂ ಅವನತಿಯ ಮೂಲವು ನಮ್ಮ ಮನಸ್ಸೇ ಆಗಿರುವದು. ಆ ಮನಸ್ಸು ನಮ್ಮ ಶತ್ರುವೂ ಆಗಬಲ್ಲದು, ಮಿತ್ರನಾಗಿ, ಬಂಧುವಾಗಿ ನಮಗೆ ಆತ್ಯಂತಿಕ ಉಪಕಾರವನ್ನೂ ಮಾಡಬಲ್ಲದು. ಪೆಟ್ಟಿಗೆಯನ್ನು ಮುಚ್ಚಲೂ ತೆರೆಯಲೂ ಸಹಾಯಕವಾಗುವ ಬೀಗದ ಕೈಯಂತೆ ಮನಸ್ಸೇ ಬಂಧಮೋಕ್ಷಗಳಿಗೆ ಕಾರಣ. ಹೀಗೆ ನಮ್ಮ ಉದ್ಧಾರದ ಕೀಲಿಕೈಯು ನಮ್ಮಲ್ಲಿಯೇ ಇರುವಾಗ ನಾವು ಉತ್ಸಾಹದಿಂದ ಮುಕ್ತಿಸಾಧನೆಯ ಬಗ್ಗೆ ಏಕೆ ಮುನ್ನಡೆಯಬಾರದು? ಆದರೆ ಈ ಮನಸ್ಸು ದೊಡ್ಡ ಆನೆಯಂತೆ ಇದೆ. ಪಳಗಿದ ಆನೆಯಿಂದ ನಾವು ಬೇಕಾದ ಕೆಲಸಗಳನ್ನು ಸಾಧಿಸಬಹುದು. ಆದರೆ ಆನೆ ಪಳಗಿರದಿದ್ದರೆ ಅದೇ ನಮಗೆ ಮಾರಕವೂ ಆಗಬಹುದು. ಮನಸ್ಸಿನ ಮೇಲೆ ನಿಯಂತ್ರಣವನ್ನು ಸಾಧಿಸಿದಲ್ಲಿ ಅದು ನಮಗೆ ಪರಮಮಿತ್ರವಾಗಿ ಪರಿಣಮಿಸುವುದು. ಆದರೆ ಪಳಗದಿರುವ ಅನಿಯಂತ್ರಿತ ಮನಸ್ಸು ಮಹಾಶತ್ರುವಾಗಿ ಸಂಸಾರದ ಪ್ರಪಾತದಲ್ಲಿ ನಮ್ಮನ್ನು ಒಗೆಯಬಹುದು. ಈ ವಿಷಯದಲ್ಲಿ ನಾವು ಬಹಳ ಜಾಗರೂಕರಾಗಿ ವರ್ತಿಸಬೇಕು.

ನಮ್ಮ ಶತ್ರುಮಿತ್ರರಿಬ್ಬರೂ ನಮ್ಮಲ್ಲೇ ಇರುವರು. ನಮ್ಮ ಶತ್ರುಗಳು ಹೊರಗಿರುವರೆಂದು ಹೊರಗಿನ ಜನರಲ್ಲಿ ನಾವೇಕೆ ದ್ವೇಷಾಸೂಯೆಗಳನ್ನು ಮಾಡಬೇಕು? ಸ್ವಾರ್ಥಿ ಭಕ್ತನೊಬ್ಬನು, ''ದೇವಾ, ನಿನ್ನ ಆಯುಧಗಳು ನನ್ನ ಶತ್ರುಗಳ ಮೇಲೆ ಎರಗಲಿ!'' ಎಂದು ದೇವರನ್ನು ಪ್ರಾರ್ಥಿಸಿದ. ಆಯುಧಗಳು ಅವನ ಮೇಲೆಯೇ ಬೀಳಲು ಅಣಿಯಾದಾಗ ಗಾಬರಿಯಿಂದ ಆ ಭಕ್ತನು ''ಭಗವನ್, ನನ್ನ ಶತ್ರುಗಳ ಮೇಲೆ ಪ್ರಯೋಗಿಸಬೇಕೆಂದು ನಾನು ಕೇಳಿರುವಾಗ ನನ್ನ ಮೇಲೆಯೇ ಈ ಆಯುಧಗಳ ಪ್ರಯೋಗವೇಕೆ ನಡೆದಿದೆ ನಿನ್ನ ಗುರಿ ತಪ್ಪಿದೆಯೆ?'' ಎಂದು ಪ್ರಶ್ನಿಸಿದನು. ''ನನ್ನ ಗುರಿ ಏನೂ ತಪ್ಪಿಲ್ಲ. ನಿನ್ನ ಮೊದಲ ಶತ್ರುವು ನಿನ್ನಲ್ಲಿಯೇ ಇರುವನು. ಅದಕ್ಕಾಗಿ ನಿನ್ನ ಪ್ರಾರ್ಥನೆಯಂತೆ ನಿನ್ನ ಮೇಲೆಯೇ ಈ ಶಸ್ತ್ರದ ಪ್ರಹಾರ''ವೆಂದು ಭಗವಂತನು ಉತ್ತರಿಸಿದನಂತೆ. ಅರ್ಥಾತ್ ನಮ್ಮ ಶತ್ರುವು ನಮ್ಮಲ್ಲಿಯೇ ಅಡಗಿರುವನೆಂದು ಭಾವಿಸಿ ನಮ್ಮನ್ನು ಸುಧಾರಿಸಿಕೊಳ್ಳಲು ನಾವು ಪ್ರಯತ್ನಿಸಬೇಕಲ್ಲದೆ ದ್ವೇಷಜರ್ಜರಿತರಾಗಿ ಶತ್ರುಗಳೆಂದು ಬೇರೆ ಜನರಲ್ಲಿ ಪ್ರತೀಕಾರಭಾವನೆಯನ್ನು ಬೆಳೆಸಿ ನಮ್ಮ ಅಮೂಲ್ಯ ಜೀವನವನ್ನು ಹಾಳುಗೆಡವಬಾರದು. ನಮ್ಮ ಪ್ರಥಮ ಶತ್ರುವೆನಿಸಬಹುದಾದ ಮನಸ್ಸಿನ ಮೇಲೆ ವಿಜಯ ಸಾಧಿಸಿ ಜೀವನದಲ್ಲಿ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸುವುದೇ ನಮ್ಮ ಪರಮ ಕರ್ತವ್ಯವಾಗಿದೆ.

ಧ್ಯಾನಯೋಗದಲ್ಲಿ ಯಶಸ್ವಿಯಾಗಲು ಮನೋನಿಗ್ರಹವು ಆವಶ್ಯಕವಿರುವಂತೆ ಭಗವಂತನ ಅನುಗ್ರಹವೂ ಬೇಕು. ನಾವು ಭಕ್ತಿ, ಸ್ವಕರ್ತವ್ಯಗಳಿಂದ ಅವನನ್ನು ಪ್ರಸನ್ನಗೊಳಿಸಿದರೆ ಮಾತ್ರ ಧ್ಯಾನಕ್ಕೆ ಅವಶ್ಯವೆನಿಸಿದ ಮಾನಸಿಕ ಬಲವನ್ನು ಅವನು ನೀಡುವನು. ಅವನ ಅನುಗ್ರಹವಿಲ್ಲದೆ ಕೇವಲ ಸ್ವಪ್ರಯತ್ನದಿಂದಲೇ ಅವನನ್ನು ಧ್ಯಾನಿಸಲೂ ಸಾಕ್ಷಾತ್ಕರಿಸಲೂ ಸಾಧ್ಯವಿಲ್ಲ.

ಯಮೇವೈಷ ವೃಣುತೇ ತೇನ ಲಭ್ಯಃ ।

- ಕಠೋಪನಿಷತ್

ಎಂದು ಉಪನಿಷತ್ತಿನಲ್ಲಿ, ಅವನ ಅನುಗ್ರಹದಿಂದಲೇ ನಮಗೆ ಅವನ ದರ್ಶನ ಲಾಭವೆಂದು ಹೇಳಲಾಗಿದೆ. ನಮ್ಮ ಭಕ್ತಿ, ಧರ್ಮಗಳಿಗೊಲಿದು ನಮಗೆ ಮೋಕ್ಷದಾತನಾಗಬಹುದಾದ ಪರಮಾತ್ಮನು ನಮ್ಮ ಸ್ವೇಚ್ಛಾವೃತ್ತಿ ಹಾಗೂ ಲೋಕಘಾತಕ ಪ್ರವೃತ್ತಿಯಿಂದ ಮುನಿದರೆ ನಮಗೆ ಆತನು ಮಿತ್ರನಾಗಿ ಉಳಿಯಲಾರ. ಭಗವಂತನಿಂದ ನಾವು ಘೋರ ಶಿಕ್ಷೆಯನ್ನೇ ಅನುಭವಿಸಬೇಕಾಗುತ್ತದೆ. ಆದುದರಿಂದ ಭಗವಂತನ ಒಲವನ್ನು ಪಡೆಯಲು ಅವನು ಜಗತ್ತಿನ ಹಿತಕ್ಕಾಗಿ ಏರ್ಪಡಿಸಿದ ನಿಯಮ ಶಿಸ್ತುಗಳನ್ನು ನಿಷ್ಠೆಯಿಂದ ಅನುಸರಿಸುವುದೂ ಆತ್ಮದ ಪ್ರಗತಿಗೆ ಅವಶ್ಯವಾಗಿದೆ.

ಹೀಗೆ, ಕರ್ತವ್ಯನಿಷ್ಠೆ, ಮನೋನಿಗ್ರಹ, ಹರಿಪ್ರಸಾದ ಈ ತ್ರಿವಿಧ ಸಾಧನೆಗಳಿಂದ ಧ್ಯಾನಯೋಗದ ಮಾರ್ಗದಲ್ಲಿ ನಡೆಯಲು ಉಪಕ್ರಮಿಸಬೇಕು.

ಧರ್ಮಾಚರಣೆಯಲ್ಲಿ ವಿಲಂಬ ಸಲ್ಲದು

ಈ ಆಧ್ಯಾತ್ಮಿಕ ಸಾಧನೆಯ ವಿಷಯದಲ್ಲಿ ಒಂದು ರೀತಿಯ ವಿಲಂಬಿತ ಪ್ರವೃತ್ತಿಯು ಜನರಲ್ಲಿ ಕಂಡುಬರುತ್ತದೆ. ಧರ್ಮ, ಆಧ್ಯಾತ್ಮಚಿಂತನ ಇವುಗಳೆಲ್ಲಾ ವೃದ್ಧರಿಗೆ ಸಂಬಂಧಿಸಿದ ವಿಷಯಗಳಾಗಿವೆ. ನಿವೃತ್ತರಾದ ನಂತರವೇ ಈ ಜಟಿಲ ಧಾರ್ಮಿಕ ವ್ಯವಹಾರಗಳನ್ನು ಕೈಕೊಂಡರೆ ಸಾಕು. ಚಿಕ್ಕ ವಯಸ್ಸಿನಿಂದಲೇ ನಮ್ಮ ಮಕ್ಕಳನ್ನು ಧರ್ಮದ ಜಂಜಾಟದಲ್ಲಿ ದೂಡುವುದೇಕೆಂದು ಪ್ರಶ್ನಿಸುವವರು ಬಹಳ ಮಂದಿ ಇರುವರು. ಬಾಲ್ಯ ತಾರುಣ್ಯಗಳನ್ನು ಕೇವಲ ಲೌಕಿಕ ವ್ಯವಹಾರದಲ್ಲಿಯೇ ಕಳೆದು ಜೀವನದ ಸಕಲ ಭೋಗಗಳನ್ನನುಭವಿಸಿ ಅನಂತರವೇ ಆಧ್ಯಾತ್ಮದ ವ್ಯವಹಾರವನ್ನು ಆರಂಭಿಸುವುದು ಸೂಕ್ತವೆಂದು ಇವರ ಅಭಿಪ್ರಾಯವಾಗಿದೆ.

ನಾವು ಕೈಕೊಳ್ಳಬೇಕಾದ ಆಧ್ಯಾತ್ಮಿಕ ಸಾಧನೆಯ ಕಾರ್ಯಕ್ರಮವನ್ನು ಮುಂದೂಡುತ್ತ ಹೋಗುವ ಈ ಧೋರಣೆಯು ಸಮಂಜಸವಲ್ಲ. ಶಕ್ತಿ, ಹುಮ್ಮಸ್ಸುಗಳಿಂದ ತುಂಬಿರುವ ಚೈತನ್ಯಭರಿತವಾದ ಬಾಲ್ಯ ತಾರುಣ್ಯಗಳನ್ನು ನಮ್ಮ ಆತ್ಮದ ಆತ್ಯಂತಿಕ ಕಲ್ಯಾಣಸಾಧನೆಗೆ ಉಪಯೋಗಿಸದೆ ಆ ಸಮಯವನ್ನು ಕೇವಲ ಭೋಗಜೀವನದಲ್ಲಿಯೇ ಕಳೆಯುವುದು ನಮಗೆ ನಾವು ಮಾಡಿಕೊಳ್ಳುವ ದೊಡ್ಡ ಅಪಚಾರವೆನಿಸುವುದು. ಪರಮಾತ್ಮನೂ ಪ್ರಕೃತಿಯೂ ನಮಗೆ ಕೊಡಮಾಡಿದ ಶಕ್ತಿಸ್ರೋತಸ್ಸುಗಳ ತುಂಬಿದ ಪ್ರವಾಹವನ್ನು ಜೀವನದ ವರ್ಷಾಕಾಲದಲ್ಲಿ ವೃಥಾ ಹರಿಯಬಿಟ್ಟು ವಾರ್ಧಕ್ಯದ ಬೇಸಿಗೆಯಲ್ಲಿ ಆಧ್ಯಾತ್ಮದ ಕೃಷಿಯನ್ನು ಕೈಗೊಳ್ಳುವುದು ಎಂತಹ ಅಪಹಾಸದ ಸಂಗತಿ ಎನಿಸುವುದು! ಆದುದರಿಂದಲೇ

ಕೌಮಾರ ಆಚರೇತ್ ಪ್ರಾಜ್ಞೋ
ಧರ್ಮಾನ್ ಭಾಗವತಾನಿಹ ।

- ಭಾಗವತ

ಎಂದು ಪ್ರಹ್ಲಾದನು ತನ್ನ ಒಡನಾಡಿಗಳಾದ ದೈತ್ಯ ಬಾಲಕರಿಗೆ ಬಾಲ್ಯ ವಯಸ್ಸಿನಿಂದಲೇ ಧರ್ಮಾಚರಣೆಯ

ಸಾಹಸವನ್ನು ಆರಂಭಿಸಬೇಕೆಂದು, ಕರೆಯಿತ್ತಿದ್ದಾನೆ. ಚಿಕ್ಕಮಕ್ಕಳು ದೇವರ ಪೂಜೆ ಸಂಧ್ಯಾವಂದನೆಗಳನ್ನೂ ಏಕಾದಶೀ ಉಪವಾಸವನ್ನೂ ಕೈಗೊಂಡಾಗ ಇಷ್ಟು ಚಿಕ್ಕ ವಯಸ್ಸಿನಲ್ಲಿ ಇದನ್ನೆಲ್ಲ ಮಾಡಬಾರದೆಂದು ಅವರನ್ನು ಜರೆಯುವ ಹಿರಿಯರನ್ನು ನಾವು ನೋಡಿದ್ದೇವೆ. ಮಕ್ಕಳ ಮನಸ್ಸಿನಲ್ಲಿ ಮೂಡುವ ಆಧ್ಯಾತ್ಮಿಕ ಉತ್ಸಾಹದ ಚಿಗುರನ್ನು ಚಿವುಟುವ ಈ ಪ್ರವೃತ್ತಿ ಖಂಡನೀಯವೇ ಆಗಿದೆ. ಬಾಲ್ಯದಿಂದಲೇ ಮಕ್ಕಳ ಧರ್ಮಪ್ರವೃತ್ತಿಗೆ ಉತ್ತೇಜನ ನೀಡಿ ಧರ್ಮದ ಸಂಸ್ಕಾರವು ಅವರ ಜೀವನದಲ್ಲಿ ಬಲವತ್ತರವಾಗಿ ನೆಲೆಸುವಂತೆ ಮಾಡುವುದು ಹಿರಿಯರ ಕರ್ತವ್ಯವಾಗಿದೆ.

ಗೃಹೀತ ಇವ ಕೇಶೇಷು
ಮೃತ್ಯುನಾ ಧರ್ಮಮಾಚರೇತ್ ।

ಮೃತ್ಯು ಬಾಯ್ತೆರೆದು ನಿಂತಿದೆ ಎಂದು ಭಾವಿಸಿ. ನಾವು ಮಾಡಬೇಕೆಂದಿರುವ ಸತ್ಕಾರ್ಯಗಳನ್ನು ಮುಂದೂಡದೆ ತ್ವರಿತದಿಂದ ಆಚರಿಸಬೇಕು. ಯಾವಾಗ ಮೃತ್ಯುವಿನ ಕರೆಯು ಬಂದರೂ ಅದನ್ನು ಸ್ವೀಕರಿಸಲು ಸಿದ್ಧರಾಗಿರುವಂತಹ ಸಡಗರವು ನಮ್ಮಲ್ಲಿರಬೇಕು. ತನ್ನಲ್ಲಿ ಸಹಾಯವನ್ನು ಯಾಚಿಸಿ ಬಂದ ಬ್ರಾಹ್ಮಣನನ್ನು ನಾಳೆ ಬಾ ಎಂದು ಧರ್ಮರಾಯನು ಹಿಂತಿರುಗಿ ಕಳುಹಿದ. ಹಣದ ವಿಶೇಷ ಆತುರತೆ ಇದ್ದ ಆ ಬ್ರಾಹ್ಮಣನು ಭೀಮಸೇನನ ಬಳಿ ಬಂದು ಬೇಡಿದಾಗ ತಕ್ಷಣವೇ ಆತನು ತನ್ನ ಕೈಲಿದ್ದ ಆಭರಣವನ್ನು ಅವನಿಗೆ ನೀಡಿ ನಗರದಲ್ಲಿ ಸಂತೋಷದ ಸುದ್ದಿಯನ್ನು ಸಾರುವ ನಗಾರಿಯನ್ನು ಬಾರಿಸಲು ಆಜ್ಞಾಪಿಸಿದನು. ನಗಾರಿಯ ಶಬ್ದವನ್ನು ಕೇಳಿ ಅದರ ಕಾರಣವನ್ನು ಧರ್ಮರಾಯನು ಭೀಮನಲ್ಲಿ ವಿಚಾರಿಸಿದನು. ''ನಾಳೆ ದಾನವನ್ನು ಕೊಡುವೆನೆಂದು ಬ್ರಾಹ್ಮಣನನ್ನು ನೀನು ಹಿಂತಿರುಗಿಸಬೇಕಾದರೆ ನಾಳೆಯ ವರೆಗೆ ತಾನು ಜೀವಿಸಿರುವೆನೆಂಬ ದಿವ್ಯಜ್ಞಾನವನ್ನು ನೀನು ಪಡೆದಂತಾಯಿತು. ಇದು ದೊಡ್ಡ ಪವಾಡವಲ್ಲವೆ? ಅದಕ್ಕಾಗಿ ಸಂತೋಷದ ಸಂಕೇತವಾದ ನಗಾರಿಯನ್ನು ಬಾರಿಸಲಾಗಿದೆ'' ಎಂದು ಭೀಮನು ಉತ್ತರಿಸಿದಾಗ ಧರ್ಮರಾಜನು ತನ್ನ ತಪ್ಪನ್ನು ಅರಿತುಕೊಂಡನು. ಸತ್ಕಾರ್ಯವನ್ನು ಮುಂದಿನ ದಿನಗಳಿಗೆ ಮುಂದೂಡುವ ನಮ್ಮ ಪ್ರವೃತ್ತಿಯ ಬಗ್ಗೆ ಎಚ್ಚರಿಕೆಯನ್ನು ಕಟುಹಾಸ್ಯದ ಜೊತೆಗೆ ಸ್ವಾರಸ್ಯಕರ ರೀತಿಯಲ್ಲಿ ಈ ಕಥೆಯು ನೀಡುತ್ತದೆ.

ವಿಭೂತಿಯೋಗದ ಸಂದೇಶ

ನಮ್ಮ ಹೃದಯವೂ ಪರಮಾತ್ಮನ ವಿಭೂತಿಯ ಅಧಿಷ್ಠಾನವಾಗುವಂತೆ ಪ್ರಯತ್ನಿಸಬೇಕೆನ್ನುವುದೇ ಈ ಹತ್ತನೆಯ ಅಧ್ಯಾಯದಿಂದ ನಾವು ಕಲಿಯಬೇಕಾದ ಸಂಗತಿಯಾಗಿದೆ. ನಮ್ಮ ಹೃದಯವು ಭಗವಂತನ ನೃತ್ಯ ಮಂದಿರವಾಗಬೇಕಾದರೆ ಪರಮಾತ್ಮನಿಗೆ ಪ್ರಿಯವಾದ ಸದ್ಗುಣಗಳಿಂದ ಇದನ್ನು ಸಿಂಗರಿಸಬೇಕು. ಮಗುವಿಗೆ ಬೇಕಾದ ತಿಂಡಿ ಮಿಠಾಯಿಗಳು, ಸುಂದರ ಆಟಿಕೆಗಳು ನಮ್ಮಲ್ಲಿದ್ದರೆ ಮಗುವು ನಮ್ಮ ಕಡೆ ಓಡಿಬರುವುದು. ಹೊಲಸು ಪದಾರ್ಥಗಳಿಂದ ತುಂಬಿದ ಜಾಗವು ಕ್ರಿಮಿಕೀಟಗಳ ಆವಾಸಸ್ಥಾನವೇ ಆಗುವದು. ಸದ್ಗುಣ, ಸತ್ಕೃತಿಗಳಿಂದ ತುಂಬಿದ ನಮ್ಮ ಹೃದಯವು ಬಾಲಕೃಷ್ಣನ ಕ್ರೀಡಾಭೂಮಿಯಾಗುವುದಾದರೆ, ಅದೇ ದುರ್ಗುಣಗಳಿಂದ ದೂಷಿತವಾದಾಗ ಆಸುರೀ ಶಕ್ತಿಗಳ ರುದ್ರತಾಂಡವ ಭೂಮಿಯೆನಿಸಬಹುದು. ನಮ್ಮ ಮನಸ್ಸು ಬಾಲಗೋಪಾಲ ನೃತ್ಯಮಂದಿರವಾಗುವಂತೆ ಸದ್ಗುಣ ಸದ್ವಿಚಾರಗಳಿಂದ ಅಲಂಕೃತಗೊಳಿಸುವ. ನಾವು ಮಾಡುವ ಸತ್‌ಕರ್ಮಗಳೇ ಭಗವಂತನು ನಮ್ಮಿಂದ ಸ್ವೀಕರಿಸಬಹುದಾದ ಅಮೂಲ್ಯ ನೈವೇದ್ಯವಾಗಿದೆ.

ಋತಂ ಪಿಬಂತೌ ಸುಕೃತಸ್ಯ ಲೋಕೇ ।
- ಕಠೋಪನಿಷತ್

ಶುಭಂ ಪಿಬತ್ಯಸೌ ನಿತ್ಯಂ
ನಾಶುಭಂ ಸ ಹರಿಃ ಪಿಬೇತ್ ।
- ಬ್ರಹ್ಮಸೂತ್ರಭಾಷ್ಯ

ನಮ್ಮ ಒಳಗೆ ನೆಲಸಿ ನಾವು ಮಾಡುವ ಶುಭಕರ್ಮಗಳನ್ನು ಮಾತ್ರ ಪರಿಗ್ರಹಿಸಿ ನಮ್ಮನ್ನು ಶ್ರೀಹರಿಯು ಅನುಗ್ರಹಿಸುತ್ತಾನೆ. ನಾವು ಸಮರ್ಪಿಸುವ ಶುಭಕರ್ಮಗಳೆಂಬ ಪ್ರಿಯ ಭೋಜ್ಯಗಳನ್ನು ಸ್ವೀಕರಿಸಲು ನಮ್ಮ ಹೃದಯಕ್ಕೆ ಭಗವಂತನು ಓಡಿಬರುವನು. ದುಷ್ಕರ್ಮಗಳನ್ನಾಚರಿಸಿ ನಾವು ಆ ಹರಿಯನ್ನು ನಮ್ಮಿಂದ ದೂರ ಓಡಿಸುತ್ತಿದ್ದೇವೆ. ಹಿರಿಯನಾದ ದಕ್ಷ ಪ್ರಜಾಪತಿಯನ್ನು ಅವನು ಬಂದಾಗ ಎದ್ದುನಿಂತು ಏಕೆ ಗೌರವಿಸಲಿಲ್ಲವೆಂದು ಸತಿಯು ಶಿವನನ್ನು ಪ್ರಶ್ನಿಸಿದಾಗ ಶಿವನು ನೀಡುವ ಉತ್ತರವು ಮಾರ್ಮಿಕವಾಗಿದೆ. ಉತ್ಥಾನ, ಅಭಿವಾದನ ಮುಂತಾದ ಗೌರವಗಳನ್ನು ನಾವು ವ್ಯಕ್ತಿಗೆ ಸಲ್ಲಿಸುತ್ತಿರದೆ ವ್ಯಕ್ತಿಯೊಳಗಿರುವ ಭಗವತ್ ಶಕ್ತಿಗೆ ಆ ಗೌರವ ಸಮರ್ಪಣೆಯಾಗಿದೆ. ಗೌರವವನ್ನು ಸಲ್ಲಿಸುವವನೂ ಪಡೆಯುವವನೂ ಇದನ್ನು ಅರಿತುಕೊಂಡಿರಬೇಕು. ಅಧಿಕಾರದ ಉನ್ಮಾದದಿಂದ ಗರ್ವಿತನಾದ ದಕ್ಷ ಪ್ರಜಾಪತಿಯಲ್ಲಿ ಆ ಪ್ರಜ್ಞೆಯೇ ಇರಲಿಲ್ಲ. ದರ್ಪಾಹಂಕಾರಗಳಿಂದ ದೂಷಿತವಾದ ಅವನ ಹೃದಯದಲ್ಲಿ ಪರಮಾತ್ಮನನ್ನೆಷ್ಟು ಅರಸಿದರೂ ಅವನು ಕಾಣಲೊಲ್ಲನು. ಪರಮಾತ್ಮನ ಸನ್ನಿಧಾನವನ್ನೇ ಕಳೆದುಕೊಂಡ ಕಲಾಹೀನ ದೂಷಿತ ಪ್ರತಿಮೆಯನ್ನು ನಾನೇಕೆ ಗೌರವಿಸಲಿ ಎಂದು ಮಹಾದೇವನು ಪ್ರಶ್ನಿಸುತ್ತಾನೆ. ಅಸತ್ಯ ಅಸದ್ವಿಚಾರಗಳಿಂದ ನಮ್ಮ ಒಳಗಿರುವ ದೇವಮಂದಿರವನ್ನು ನಾವು ಕೆಡಹುತ್ತಿದ್ದೇವೆ. ನಮ್ಮ ಜೀವನವನ್ನು ಅಪವಿತ್ರ ಗೊಳಿಸುವಂತಹ ಇಂತಹ ದುಷ್ಕೃತ್ಯಗಳ ಬಗ್ಗೆ ಎಚ್ಚರದಿಂದಿದ್ದು ನಮ್ಮಲ್ಲಿ ಪರಮಾತ್ಮನನ್ನು ಅಭಿವ್ಯಕ್ತ ಗೊಳಿಸಬಹುದಾದಂತಹ ಉತ್ತಮ ಕೃತಿಗಳಿಂದ ನಮ್ಮ ಜೀವನವನ್ನು ಉದಾತ್ತಗೊಳಿಸಬೇಕೆಂಬುದೇ ಹತ್ತನೆಯ ಅಧ್ಯಾಯದ ಸಂದೇಶವಾಗಿದೆ.

ನಿತ್ಯಜೀವನದಲ್ಲಿ ವಿಶ್ವರೂಪ ಪ್ರಜ್ಞೆ

ಅರ್ಜುನನ ಈ ವಿಶ್ವರೂಪದೃಷ್ಟಿಯನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪರಮಾತ್ಮನಿಗೆ ಅನಂತ ರೂಪಗಳಿವೆ, ಒಂದೊಂದು ವಸ್ತುವಿನಲ್ಲಿಯೂ ಪರಮಾತ್ಮನ ಒಂದೊಂದು ಚಿನ್ಮಯ ರೂಪವಿದೆ. ಅನಂತ ಕಣ್ಣುಗಳಿಂದ ಅನಂತ ಮುಖಗಳಿಂದ ಅವನು ಜಗತ್ತನ್ನು ವ್ಯಾಪಿಸಿರುವನು ಎಂಬ ತಿಳುವಳಿಕೆಯು ನಮ್ಮಲ್ಲಿ ಜಾಗರೂಕತೆಯನ್ನು ಸತ್‌ಪ್ರವೃತ್ತಿಯನ್ನೂ ಬೆಳೆಸುತ್ತದೆ. ಸರಕಾರವನ್ನು ವಂಚಿಸಬಹುದು. ಕಾಯಿದೆಯಿಂದ ತಪ್ಪಿಸಿಕೊಳ್ಳಬಹುದು. ಆದರೆ ವಿಶ್ವತೋಮುಖನೂ ವಿಶ್ವಚಕ್ಷುವೂ ಆದ ದೇವನ ದೃಷ್ಟಿಯನ್ನು ತಪ್ಪಿಸಿ ನಮ್ಮಿಂದ ಏನನ್ನು ಮಾಡಲೂ ಸಾಧ್ಯವಿಲ್ಲವೆಂಬ ಪ್ರಜ್ಞೆಯು ಜಾಗೃತವಾದಲ್ಲಿ ನಮ್ಮದು ಧನ್ಯಪಾವನ ಜೀವನವೆನಿಸಬಲ್ಲುದು. ಕನಕದಾಸನಿಗೆ ಬಾಳೆಹಣ್ಣನ್ನು ಗುಟ್ಟಾಗಿ ತಿನ್ನಲು ಏಕಾಂತವಾದ ಜಾಗವೇ ದೊರೆಯಲಿಲ್ಲವಂತೆ! ಲೋಕದ ಎಲ್ಲೆಡೆಯಲ್ಲಿಯೂ ಅವನಿಗೆ ಶ್ರೀಹರಿಯ ದರ್ಶನವಾಗುತ್ತಿತ್ತು. ಈ ರೀತಿಯಿಂದ ಭಗವಂತನನ್ನು ತಿಳಿದುಕೊಂಡವನಿಗೆ ಕುಕೃತ್ಯವನ್ನು ಮಾಡಿ ಅಡಗಿಸಲು ರಹಸ್ಯ ಪ್ರದೇಶವೇ ದೊರೆಯಲಾರದು. ಅವನ ಜೀವನವು ತೆರೆದ ಪುಸ್ತಕದಂತೆ ನಿರ್ಮಲವಾದೀತು.

ನ ರಾಜ್ಯಂ ನ ಚ ರಾಜಾಸೀತ್
ನ ದಂಡೋ ನ ಚ ದಾಂಡಿಕಃ ।
ಧರ್ಮೇಣೈವ ಪ್ರಜಾಃ ಸರ್ವಾಃ
ರಕ್ಷಂತಿ ಸ್ಮ ಪರಸ್ಪರಂ ॥
- ಮಹಾಭಾರತ

ಕೃತಯುಗದಲ್ಲಿ ಕಾಯಿದೆ, ಅಧಿಕಾರಿಗಳು ಮತ್ತು ರಾಜನ ಆವಶ್ಯಕತೆಯಿಲ್ಲದೆ ಸ್ವಯಂಪ್ರೇರಣೆಯಿಂದ ಧರ್ಮಶೀಲರಾಗಿ ಸುವ್ಯವಸ್ಥಿತವಾಗಿ ಪ್ರಜೆಗಳು ಬಾಳುತ್ತಿದ್ದರು. ಎಷ್ಟು ಕಾಯಿದೆಗಳನ್ನು ಮಾಡಿದರೂ ಎಷ್ಟು ಅಧಿಕಾರಿಗಳನ್ನು ನೇಮಿಸಿದರೂ ಧರ್ಮನೀತಿಗಳ ಸ್ವಯಂಪ್ರಜ್ಞೆಯ ಆಧಾರ ಭೂಮಿ ಇಲ್ಲದೆ ಸಮಾಜವು ಕುಸಿದುಬೀಳುತ್ತದೆ ಎಂಬುದನ್ನು ಇಂದಿನ ಸನ್ನಿವೇಶಗಳಿಂದ ನಾವು ತಿಳಿದುಕೊಳ್ಳಬಹುದು. ಹನ್ನೊಂದನೆಯ ಅಧ್ಯಾಯದಲ್ಲಿ ಕಂಡುಬರುವ ಈ ವಿಶ್ವರೂಪದೃಷ್ಟಿಯು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಅದೇ ನಮ್ಮ ಸಮಾಜರಚನೆಯ ತಳಹದಿಯೆನಿಸಬೇಕು.

ಸಾಧನ ಶೀಲಸಂವರ್ಧನೆ

ಸಾಧಕನು ನಿಷ್ಕಾಮಕರ್ಮಾಚರಣ, ವೈರಾಗ್ಯ ಮತ್ತು ಪ್ರಯತ್ನಗಳ ಜೊತೆಗೆ ತನ್ನಲ್ಲಿ ಸದ್ಗುಣಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಬೇಕು. ನಮ್ಮಲ್ಲಿ ಸದ್ಗುಣಗಳನ್ನು ವಿಕಸಿತಗೊಳಿಸುವುದೂ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಅವಶ್ಯವಾಗಿದೆ. ಮುಕ್ತಿಯನ್ನು ಹೊಂದಲಿರುವ ಆತ್ಮರೆಲ್ಲರೂ ಸ್ವತಃ ಸದ್ಗುಣರೂಪಿಗಳೇ ಆಗಿರುವರು. ಅಜ್ಞಾನದಿಂದ ಆವೃತವಾದ ಆದರೆ ಸ್ವಾಭಾವಿಕವಾಗಿ ಸದ್ಗುಣಾತ್ಮಕವಾದ ತಮ್ಮ ಚೈತನ್ಯವನ್ನು ಆವಿಷ್ಕಾರಗೊಳಿಸುವುದೇ ಮುಕ್ತಿ ಎಂದು ಶಾಸ್ತ್ರಗಳಲ್ಲಿ ಹೇಳಿದೆ. ಹೀಗೆ ನಮ್ಮ ಮೂಲಭೂತ ಸದ್ಗುಣಗಳ ಅಭಿವ್ಯಕ್ತಿಯಾಗಲು ಅದಕ್ಕೆ ಅನುಕೂಲವೆನಿಸುವ ಪ್ರವೃತ್ತಿಗಳೇ ನಮ್ಮ ಜೀವನದಲ್ಲಿ ವ್ಯಾಪಿಸಿಕೊಂಡಿರಬೇಕು. ಆತ ಸ್ವಾಭಾವಿಕ ಧರ್ಮಗಳೆನಿಸಿದ ಸತ್ಯ, ಜ್ಞಾನ, ದಯೆ, ತ್ಯಾಗ ಮುಂತಾದ ಸ್ವರೂಪ ಸದ್ಗುಣಗಳಿಗೆ ತೀರ ವ್ಯತಿರಿಕ್ತವೂ ವಿರೋಧಿಯೂ ಆದ ಪ್ರವೃತ್ತಿಯನ್ನು ನಮ್ಮಲ್ಲಿ ರೂಢಿಸಿಕೊಂಡಲ್ಲಿ ನಮ್ಮ ಆತ್ಮವು ಇನ್ನೂ ಹೆಚ್ಚು ಘನವಾದ ಆವರಣಕ್ಕೆ ಒಳಪಟ್ಟಂತಾಗುವುದು. ಅಸತ್ಯ, ಕ್ರೌರ್ಯ, ಹಿಂಸೆ, ವಂಚನೆ ಮೊದಲಾದ ದುರ್ಗುಣಗಳು ಆತ್ಮಸ್ವರೂಪಕ್ಕೆ ತೀರ ವಿಸಂಗತಗಳಾದ ವಿರೋಧಿ ಭಾವಗಳಾಗಿವೆ. ಇಂತಹ ದುರ್ಗುಣಗಳಿಗೆ ನಮ್ಮ ಜೀವನದಲ್ಲಿ ಅವಕಾಶ ದೊರೆಯುವುದರಿಂದ ನಮ್ಮ ಆತ್ಮವನ್ನು ಕುಗ್ಗಿಸಿ ಅಜ್ಞಾನ ಪ್ರಕೃತಿಗಳ ವಿಜೃಂಭಣೆಯನ್ನು ಇನ್ನೂ ಹೆಚ್ಚಿಸಿದಂತಾಗುತ್ತದೆ.

ಅದರಂತೆ ನಮ್ಮಲ್ಲಿ ದುರ್ಗುಣಗಳು ಹೆಚ್ಚಿದರೆ ಅನಂತಗುಣರೂಪಿಯಾದ ಭಗವಂತನ ಧ್ಯಾನ ಸಾಕ್ಷಾತ್ಕಾರಗಳನ್ನು ಪಡೆಯುವ ಅರ್ಹತೆಯನ್ನೇ ನಾವು ಕಳೆದುಕೊಂಡಂತಾಗುವುದು. ನಮ್ಮ ನಿತ್ಯವ್ಯವಹಾರಗಳೆಲ್ಲವೂ ದುರ್ಗುಣ ದುರಾಚಾರಗಳಿಂದ ದೂಷಿತವಾಗಿದ್ದರೆ ಸುಗುಣಮೂರ್ತಿಯಾದ ಪರಮಾತ್ಮನ ಸಾಮ್ಯಪ್ರಾಪ್ತಿಯೆನ್ನಲಾಗುವ ಮುಕ್ತಿಯನ್ನು ಪಡೆಯಲು ನಾವು ಹೇಗೆ ಅರ್ಹರಾಗಬಲ್ಲೆವು? ಆದುದರಿಂದ ನಮ್ಮ ಮೂಲಭೂತ ಸ್ಥಿತಿಯೆನಿಸಿದ ನಮ್ಮ ಆತ್ಮದ ಸ್ವಾಭಾವಿಕ ಗುಣಧರ್ಮಗಳಿಗೂ ನಮ್ಮ ಪರಮಪ್ರಾಪ್ಯ ಸ್ಥಾನವಾಗಿರುವ ಪರಮಾತ್ಮ ಸ್ವರೂಪಗುಣಗಳಿಗೂ ತೀರ ವಿರೋಧಿಯಾದ ಮನೋಧರ್ಮಗಳಿಗೆ ನಮ್ಮ ಜೀವನದಲ್ಲಿ ಸರ್ವಥಾ ಅವಕಾಶವಿರಬಾರದು. ಇದರಿಂದ ಭಗವಂತನಿಂದ ನಾವು ಇನ್ನೂ ಹೆಚ್ಚು ದೂರ ಉಳಿಯುವ ಮತ್ತು ಆತ್ಮವಿಕಾಸಕ್ಕೆ ಅಡಚಣೆಯಾಗುವ ದುರಂತ ಸನ್ನಿವೇಶವು ಒದಗುವುದು. ಆದುದರಿಂದ ಅನಂತ ಗುಣಮೂರ್ತಿಯಾದ ಪರಮಾತ್ಮನ ಸಾಕ್ಷಾತ್ಕಾರದಿಂದ ನಮ್ಮಲ್ಲಿಯೇ ಸಹಜವಾಗಿ ಹುದುಗಿರುವ ಚೇತನಾತ್ಮಕ ಸದ್ಗುಣಪ್ರಭೆಗಳಿಂದ ನಾವು ಬೆಳಗಬೇಕಾದರೆ ನಮ್ಮ ಲೌಕಿಕ ಜೀವನವು ನೀತಿಶೀಲಸಂಪನ್ನವಾಗಿರಬೇಕು. ನಮ್ಮ ವ್ಯವಹಾರಗಳೆಲ್ಲ ಸದ್ಗುಣಮಯವಾಗಿರಬೇಕು. ಸಾಧಕನು ತನ್ನಲ್ಲಿ ಅಳವಡಿಸಿಕೊಳ್ಳಬೇಕಾದ ಈ ಗುಣಗಳ ಯಾದಿಯನ್ನು ಹನ್ನೆರಡನೆಯ ಅಧ್ಯಾಯದ ಕೊನೆಯಲ್ಲಿ ಬರುವ,

ಅದ್ವೇಷ್ಟಾ ಸರ್ವಭೂತಾನಾಂ
ಮೈತ್ರಃ ಕರುಣ ಏವ ಚ ।

ಮುಂತಾದ ಶ್ಲೋಕಗಳಲ್ಲಿ ನಾವು ಕಾಣಬಹುದು. ಅದ್ವೇಷ, ಮೈತ್ರಿ, ಕರುಣೆ, ನಿರ್ಮಮತೆ, ನಿರಹಂಕಾರ, ಸಹನೆ, ಅಲಂಬುದ್ಧಿ ಮೊದಲಾದುವುಗಳೇ ನಮ್ಮಲ್ಲಿ ಅಳವಡಿಸಿಕೊಳ್ಳಬೇಕಾದ ಸದ್ಗುಣಗಳಾಗಿವೆ. ಭಕ್ತನಲ್ಲಿ ಈ ಗುಣಗಳು ತುಂಬಿರುತ್ತವೆ. ಇಂತಹ ಗುಣಶಾಲಿಯೇ ತನಗೆ ಅತ್ಯಂತ ಪ್ರೀತಿಪಾತ್ರನೆಂದು ಸ್ವಾಮಿಯು ಅರುಹಿದ್ದಾನೆ. ಲೋಕದ ಯಾವುದೇ ವ್ಯವಹಾರದಿಂದ ಉದ್ವಿಗ್ನನಾಗದೆ, ಯಾರಿಗೂ ಹೆದರದೆ ಭಕ್ತನು ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾನೆ. ಅದರಂತೆ ಅವನಿಂದಲೂ ಜನರಿಗೆ ಯಾವ ಭಯ, ಅಪಾಯ ಉಪದ್ರವಗಳೂ ಇಲ್ಲ. ಸರ್ವರಿಗೂ ಅಭಯ ನೀಡಿ ತಾನೂ ನಿರ್ಭಯನಾಗಿ ಉಳಿದವರೂ ನಿರುದ್ವಿಗ್ನರಾಗಿರುವಂತಹ ಸನ್ನಿವೇಶವನ್ನು ಭಕ್ತನು ನಿರ್ಮಿಸುತ್ತಾನೆ. ಆತನು 'ಸರ್ವಾರಂಭ ಪರಿತ್ಯಾಗಿ' ಅಂದರೆ ಪರಮಾತ್ಮನಿಗೆ ಪ್ರೀತಿಕರವಾದ ಕೇವಲ ಸ್ವಫಲಾಪೇಕ್ಷೆಯ ಕರ್ಮಗಳಿಂದ ದೂರವಾಗಿರುತ್ತಾನೆ. ಅವನಿಗೆ ಸುಖದುಃಖಗಳೆರಡರಲ್ಲಿಯೂ ಸಮದೃಷ್ಟಿ ಇರುತ್ತದೆ. ಸುಖದಂತೆ ದುಃಖವೂ ಅವನಿಗೆ ಅಪೇಕ್ಷಿತವೇ. ತನ್ನ ದುಷ್ಕೃತ್ಯಗಳ ಫಲರೂಪವಾದ ದುಃಖತಾಪಗಳನ್ನು ಅನುಭವಿಸಿ ತನ್ನ ಪಾತಕಗಳನ್ನು ಪರಿಹರಿಸಿಕೊಳ್ಳಲು ಭಕ್ತನು ತವಕಿಸುತ್ತಾನೆ. ತನ್ನ ಆತ್ಮಶುದ್ಧಿಗೆ ಸಹಾಯಕವೆಂದು ದುಃಖದ ಸನ್ನಿವೇಶವನ್ನು ಸಂತೋಷದ ಸಮಾರಂಭವೆಂಬಂತೆ ಉತ್ಸಾಹದಿಂದ ಆತನು ಸ್ವಾಗತಿಸುತ್ತಾನೆ. ಅದರಂತೆ ಭಕ್ತನು ದುಃಖದಂತೆ ಸುಖವನ್ನೂ ಉಪೇಕ್ಷಾಬುದ್ಧಿಯಿಂದ ನೋಡುವನು. ದುಃಖವು ಕ್ಲೇಶರೂಪವಾಗಿರುವಂತೆ ಸುಖವೂ ಅನಂತ ಕ್ಲೇಶಕರವಾಗಿದೆ. ಒಂದು ಸುಖದ ತುಣುಕಿಗಾಗಿ ಮಾನವನು ಅದೆಷ್ಟು ದೈನ್ಯ ಸಂಕಟಗಳನ್ನು ಅನುಭವಿಸುತ್ತಾನೆ! ಭಕ್ತನ ದೃಷ್ಟಿಯಲ್ಲಿ ವೈಷಯಿಕ ಸುಖ ಹಾಗೂ ಸಾಂಸಾರಿಕ ಕ್ಲೇಶ ಇವೆರಡಕ್ಕೂ ಒಂದೇ ಬೆಲೆ. ಎರಡನ್ನೂ ಹೇಯಭಾವನೆಯಿಂದಲೇ ಆತನು ನಿರೀಕ್ಷಿಸುತ್ತಿರುವುದರಿಂದ ಆತನು ಸಮದುಃಖನೆನಿಸುತ್ತಾನೆ. ಸ್ತುತಿನಿಂದೆಗಳೆರಡರಲ್ಲಿಯೂ ನಿರ್ವಿಕಾರನಾಗಿರುವುದೂ ಒಂದು ಅಪೂರ್ವವಾದ ಮಹತ್ವದ ಗುಣವಾಗಿದೆ. ಉಳಿದ ಎಲ್ಲಾ ಗುಣಗಳಿದ್ದರೂ ಸ್ತುತಿನಿಂದೆಗಳಿಂದ ವಿಕಾರವಶನಾಗದ ವ್ಯಕ್ತಿಯು ದೊರೆಯುವುದು ವಿರಳ. ಸರ್ವಸಂಗಪರಿತ್ಯಾಗಿಗಳಿಗೂ ನಿಃಸ್ಪೃಹ ಸೇವಾಜೀವಿಗಳಿಗೂ ಸ್ತುತಿಯ ಮೋಹವನ್ನು ಮೀರಿ ನಿಲ್ಲಲಾಗುವುದಿಲ್ಲ. ತನ್ನ ತ್ಯಾಗ ಸೇವೆಗಳನ್ನು ಸ್ತುತಿಸುವಾಗ ಎಂತಹ ತ್ಯಾಗ ತಪಸ್ವಿಯ ಮುಖವೂ ಅರಳುತ್ತದೆ. ಫಲಾಶೆ ಇಲ್ಲದೆ ಕೇವಲ ಹರಿ ಪ್ರೀತಿಯ ಅಪೇಕ್ಷೆಯಿಂದ ಸ್ವಕರ್ತವ್ಯಬುದ್ಧಿಯಿಂದ ನಡೆಯುವ ಕರ್ಮಯೋಗಿಯಾದ ಭಕ್ತನಿಗೆ ಸ್ತುತಿನಿಂದೆಗಳೆರಡೂ ಸಮಾನವೇ ಆಗುವುವು. ಇಂತಹ ದಿವ್ಯ ಸದ್ಗುಣಗಳನ್ನೆಲ್ಲ ಪಡೆಯಲು ಸಾಧಕನು ಪ್ರಯತ್ನಿಸಿದಲ್ಲಿ ಆಧ್ಯಾತ್ಮನಿಧಿಯು ಅವನ ಹಸ್ತಗತವಾಗುವುದರಲ್ಲಿ ವಿಲಂಬವಾಗುವುದಿಲ್ಲ.

ಯೇ ತು ಧರ್ಮಾಮೃತಮಿದಂ
ಯಥೋಕ್ತಂ ಪರ್ಯುಪಾಸತೇ ।

ಈ ಸದ್ಗುಣಗಳು ಧರ್ಮ ಹಾಗೂ ಅಮೃತಗಳಾಗಿವೆ.

ಜೀವನದಲ್ಲಿ ಗುಣತ್ರಯದ ಪ್ರಭಾವ

ಪ್ರಕೃತಿಯು ತನ್ನ ಗುಣತ್ರಯದಿಂದ ಜೀವರ ಮೇಲೆ ಮಾಡುವ ಪರಿಣಾಮವೂ ಒಂದೇ ರೀತಿ ಇರುವುದಿಲ್ಲ. ತಮೋಗುಣದ ಪ್ರಾಬಲ್ಯವು ಆಲಸ್ಯ, ಪ್ರಮಾದ, ವ್ಯಾಮೋಹ ಮೊದಲಾದ ದುರ್ಗುಣಗಳಿಗೆ ದಾರಿಯಾದರೆ ಬಯಕೆ ಬವಣೆಗಳಿಂದಲೂ ಕೋಪ ತಾಪಗಳಿಂದಲೂ ಉದ್ರಿಕ್ತವಾದ ಜೀವನವೇ ರಜೋಗುಣದ ಕೊಡುಗೆಯಾಗಿದೆ. ಜ್ಞಾನ, ವಿವೇಕ, ಶೀಲಗಳ ನೆಲೆಯಾದ ಸತ್ತ್ವಗುಣವೇ ನಮ್ಮ ಬಾಳಿನ ಬೆಳಕಾಗಿ ನಮ್ಮನ್ನು ಗುಣಾತೀತವಾದ ನಮ್ಮ ನೈಜಪೂರ್ಣತೆಯ ಕಡೆಗೆ ಒಯ್ಯುವ ಕೈದೀವಿಗೆಯಾಗಿದೆ. ರಜಸ್ಸು, ತಮಸ್ಸುಗಳನ್ನು ಮೆಟ್ಟಿನಿಂತವನೆ ಸತ್ತ್ವದ ಎತ್ತರದ ಮಟ್ಟವನ್ನು ಮುಟ್ಟಬಲ್ಲನು. ತಮೋಗುಣದಿಂದ

ಕರ್ತವ್ಯದಲ್ಲಿ ಅನಾಸಕ್ತಿಯುಂಟಾಗುವುದಾದರೆ, ರಜೋಗುಣದಿಂದ ಕ್ಷುದ್ರಾಶೆ ವ್ಯಾಮೋಹಗೊಳಗಾಗಿ ಕಾರ್ಯಗಳನ್ನೆಸಗುವನು. ಸತ್ತ್ವಗುಣದ ಬಲದಿಂದಲೇ ನಿಷ್ಕಾಮನೆಯಿಂದ ಸ್ವಕರ್ತವ್ಯವನ್ನು ಆಚರಿಸುವ ಸತ್‌ಪ್ರವೃತ್ತಿಯುಂಟಾಗುವುದು. ಜಡತತ್ತ್ವದ ಈ ಪರಿಣಾಮದ ವಿಶೇಷಗಳನ್ನು ಅರಿತುಕೊಂಡು ಅದರಿಂದಲೂ ಒಳ್ಳೆಯದನ್ನು ಸಾಧಿಸಿ ಪರಮಾತ್ಮನನ್ನು ಮುಟ್ಟಲು ಸೇತುವೆಯನ್ನಾಗಿ ಪ್ರಕೃತಿಯನ್ನು ಯೋಗ್ಯ ರೀತಿಯಿಂದ ನಾವು ಬಳಸಿಕೊಳ್ಳಬೇಕು. ಪ್ರಕೃತಿಯನ್ನು ಯೋಗ್ಯ ರೀತಿಯಿಂದ ಉಪಯೋಗಿಸಿದರೆ ಪ್ರಕೃತಿಬಂಧವಿಮೋಚನೆಯ ಕಾರ್ಯವು ಅತ್ಯಂತ ಸುಗಮವಾಗುವುದು.

ಇಂದು ರಜೋಗುಣ, ತಮೋಗುಣಗಳ ಅತಿರೇಕವನ್ನೇ ನಾವು ಎಲ್ಲೆಡೆಗಳಲ್ಲಿಯೂ ನೋಡುತ್ತಿದ್ದೇವೆ. ಜನತೆಯನ್ನು ಇಂದು ಎರಡು ವಿಧವಾಗಿ ವಿಂಗಡಿಸಬಹುದು. ಒಂದು ರಾವಣವರ್ಗ, ಇನ್ನೊಂದು ಕುಂಭಕರ್ಣ ವರ್ಗ. ಅಧಿಕಾರ ಸಂಪತ್ತಿಗಾಗಿ ಹಾತೊರೆಯುವ ಜನರನ್ನು ನೋಡುವಾಗ ರಾವಣನ ಸ್ಮರಣೆಯೇ ನಮಗೆ ಆಗುತ್ತದೆ. ತ್ರೈಲೋಕ್ಯದಲ್ಲಿರುವ ಸುಂದರವಾದ ಅಪೂರ್ವವಾದ ವಸ್ತುಗಳೆಲ್ಲ ತನ್ನವಾಗಬೇಕೆಂಬುದು ರಾವಣನ ಲವಲವಿಕೆ. ಅದಕ್ಕಾಗಿ ಬಲಪ್ರಯೋಗ ಮತ್ತು ತನ್ನ ಪಾಶವೀಶಕ್ತಿಯ ಪ್ರದರ್ಶನವನ್ನು ಅವ್ಯಾಹತವಾಗಿ ರಾವಣನು ನಡೆಸಿದ್ದ. ಕೊನೆಯವರೆಗೂ ಅಧಿಕಾರಕ್ಕೆ ಅಂಟಿಕೊಳ್ಳುವ ದುರಾಶೆ ಮತ್ತು ಅಧಿಕಾರ ಸಂಪತ್ತುಗಳನ್ನು ಗಳಿಸುವ ಕುತಂತ್ರ ವಾಮಾಚಾರಗಳನ್ನು ಇಂದಿನ ಜನರಲ್ಲಿ ಧಾರಾಳವಾಗಿ ನಾವು ನೋಡುತ್ತಿದ್ದೇವೆ. ಪ್ರತಿಯೊಬ್ಬರಲ್ಲಿಯೂ ರಾವಣನ ಈ ಕಾರ್ಯಭಾರವು ಸ್ವಚ್ಛಂದವಾಗಿ ನಡೆದಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಇಂದು ನಡೆಯುತ್ತಿರುವ ಅನೈತಿಕ ಸ್ಪರ್ಧೆಗಳು ನಮ್ಮ ಜನರಲ್ಲಿ ಬೀಡು ಮಾಡಿರುವ ರಜೋಗುಣದ ಅತಿರೇಕವನ್ನು ವ್ಯಕ್ತಪಡಿಸುತ್ತವೆ. ಹೀಗೆ ರಾಜಸ ಪ್ರವೃತ್ತಿಯ ರಾವಣನು ಒಂದು ಕಡೆಯಿದ್ದರೆ, ತಮೋಗುಣದ ಪ್ರತೀಕದ ಆಲಸ್ಯ ಪ್ರತಿಮೂರ್ತಿಗಳೆನಿಸಿದ ಕುಂಭಕರ್ಣರು ಇನ್ನೊಂದೆಡೆ. ನಮ್ಮ ಸನಾತನೀ ಮನೋವೃತ್ತಿಯ ಧಾರ್ಮಿಕ ಜನರನ್ನು ಈ ಗುಂಪಿನಲ್ಲಿ ಸೇರಿಸಬಹುದು. ವೈದಿಕ ಧರ್ಮದ ಮೇಲೆ ಇಡೀ ದೇಶದಲ್ಲಿ ಪ್ರಬಲ ಆಘಾತವಾಗುತ್ತಿದ್ದರೂ ಇದರ ಪರಿಹಾರದ ಬಗ್ಗೆ ತಮ್ಮ ಕರ್ತವ್ಯವಿದೆ ಎಂಬುದನ್ನು ಲಕ್ಷಿಸದೆ ತಮ್ಮ ಪಾಡಿಗೆ ತಾವು ಎಂಬ ಭಾವನೆಯಿಂದ, ಉದಾಸೀನ ವೃತ್ತಿಯಿಂದ ಇರುವ ಧಾರ್ಮಿಕ ಮುಖಂಡರನ್ನೂ ಕುಂಭಕರ್ಣರ ಗುಂಪಿಗೆ ಸೇರಿಸಬೇಕಾಗಿದೆ. ಆಲಸ್ಯವೇ ಸಕಲ ದುರ್ಗುಣಗಳಿಗೆ ಮೂಲವಾಗಿದೆ. ತನ್ನ ಕಾಲನ್ನು ಪೂರ್ತಿಯಾಗಿ ಸರಿಯಾಗಿ ತೊಳೆಯಲು ನಳ ಮಹಾರಾಜನು ಅಜಾಗರೂಕತೆಯನ್ನು ತೋರಿದಾಗಲೇ ಅವನಲ್ಲಿ ಕಲಿಯ ಪ್ರವೇಶವಾಯಿತು. ಅನೇಕ ದಿನಗಳಿಂದ ನಳ ಮಹಾರಾಜನನ್ನು ಆಕ್ರಮಿಸಲು ಕಲಿಯು ಹೊಂಚುಹಾಕುತ್ತಿದ್ದನು. ಧರ್ಮಮೂರ್ತಿಯಾದ ಆ ಮಹಾರಾಜನ ಛಿದ್ರರಹಿತವಾದ ಸುಭದ್ರ ಜೀವನದಲ್ಲಿ ಕಲಿಗೆ ಪ್ರವೇಶ ಪಡೆಯಲು ಸ್ವಲ್ಪವೂ ಅವಕಾಶ ದೊರೆಯಲಿಲ್ಲ. ಕಾಲನ್ನು ತೊಳೆಯುವ ಸಂದರ್ಭದಲ್ಲಿ ನಳನು ತೋರಿದ ಆಲಸ್ಯವೇ ಕಲಿಯ ಪ್ರವೇಶದ್ವಾರವಾಯಿತು. ಮುಂದೆ ಕಲಿಯು ಅವನ ಇಡೀ ಜೀವನವನ್ನು ಆಕ್ರಮಿಸುವಂತಾಯಿತು. ಆಲಸ್ಯಕ್ಕೆ ನಮ್ಮ ಜೀವನದಲ್ಲಿ ಅಣುಮಾತ್ರವಾದರೂ ಪ್ರವೇಶ ದೊರಕಿದರೆ ಸಕಲ ದುರ್ಗುಣಗಳಿಗೂ ಆಹ್ವಾನ ಬಂದಂತೆ. ಹೀಗೆ ಅಲಸ್ಯ ದುರಾಶೆಗಳಿಂದ ತುಂಬಿದ ಈ ರಾವಣ ಕುಂಭಕರ್ಣರ ರಾಜ್ಯದಲ್ಲಿ ವಿಭೀಷಣನಂತಹ ಸಾತ್ತ್ವಿಕ ಶಕ್ತಿಯು ನಮಗೆ ಎಲ್ಲಿಯೂ ಗೋಚರಿಸುವುದಿಲ್ಲ. ಈ ರಜೋಗುಣ ತಮೋಗುಣಗಳ ದಮನವಾಗಿ ಪ್ರಕೃತಿಯಲ್ಲಿರುವ ಸತ್ತ್ವಗುಣದ ವಿಜೃಂಭಣೆಯು ಈಗ ಲೋಕದಲ್ಲಿ ನಡೆಯಬೇಕಾದ ಮುಖ್ಯ ಕಾರ್ಯವಾಗಿದೆ. ಪ್ರಕೃತಿಯು ಬಂಧಕವಾದರೂ ಅದರಲ್ಲಿ ಅಡಕವಾದ ಸತ್ತ್ವಗುಣದ ಸರಿಯಾದ ಲಾಭವನ್ನು ಪಡೆದು ಈ ಸತ್ತ್ವಗುಣದ ಸೇತುವೆಯಲ್ಲಿ ಪರಮಾತ್ಮನ ಕಡೆಗೆ ಸಾಗುವ ಸಾಹಸಪೂರ್ಣ ಯಾತ್ರೆಯನ್ನು ಜೀವನು ಕೈಕೊಳ್ಳಬೇಕು. ಹದಿನಾಲ್ಕನೆಯ ಅಧ್ಯಾಯವು ಈ ರೀತಿಯಾಗಿ ಜೀವನ ಮೇಲೆ ಆಗುವ ಪ್ರಕೃತಿಯ ಪರಿಣಾಮ

ಪ್ರಭಾವಗಳನ್ನು ವಿಶ್ಲೇಷಿಸಿ, ಜೀವಪ್ರಕೃತಿಗಳ ಪರಸ್ಪರ ಸಂಬಂಧವನ್ನು ವಿವರಿಸಿ, ಸತ್ತ್ವಗುಣದ ಸಹಾಯದಿಂದ ಜೀವನು ಪ್ರಕೃತಿಯನ್ನು ಗೆದ್ದು ಗುಣಾತೀತನಾಗಿ ಹೇಗೆ ಪರಮಸಿದ್ಧಿಯನ್ನು ಪಡೆಯಬಹುದೆಂಬುದನ್ನು ಪ್ರತಿಪಾದಿಸಿದೆ.

ಈಶ್ವರ ನಿಷ್ಠೆಯ ಆವಶ್ಯಕತೆ

ಇಂತಹ ಆಸ್ತಿಕಭಾವನೆಯೇ ಇಲ್ಲದ ರಾಷ್ಟ್ರಗಳಲ್ಲಿಯೂ ತಕ್ಕಮಟ್ಟಿಗೆ ನೀತಿ ಶಿಸ್ತುಗಳ ಪರಿಪಾಲನೆಯಾಗುತ್ತಿಲ್ಲವೆ? ದೇವರನ್ನು ಒಪ್ಪುವ ರಾಷ್ಟ್ರಗಳಿಗಿಂತ ನಿರೀಶ್ವರವಾದೀ ದೇಶಗಳು ಲೌಕಿಕ ಸುವ್ಯವಸ್ಥೆಯಲ್ಲಿ ಏನೂ ಹಿಂದೆ ಬಿದ್ದಿಲ್ಲ. ಆದುದರಿಂದ ಸಮಾಜದಲ್ಲಿ ನೀತಿನಿಯಮಗಳನ್ನು ಕಾಪಾಡಲು ಧಾರ್ಮಿಕ ಭಾವನೆಯು ಅನಿವಾರ್ಯವೇನೂ ಅಲ್ಲವೆನ್ನುವ ಆಕ್ಷೇಪಗಳನ್ನು ಕೆಲವರು ಮುಂದೆ ಮಾಡಬಹುದು. ನಿಜ, ಇಂದು ಕಾಯದೆ ಸುವ್ಯವಸ್ಥೆಗಳ ವಿಷಯದಲ್ಲಿ ಆಸ್ತಿಕನಾಸ್ತಿಕ ರಾಷ್ಟ್ರಗಳಲ್ಲಿ ಅಂತಹ ಅಂತರವೇನೂ ಕಾಣಸಿಗುವುದಿಲ್ಲ. ಶೀಲ, ನೀತಿ, ಸದ್ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮ್ಮ ಕರ್ತವ್ಯವೆಂಬ ಹಳೆಯ ಸಂಸ್ಕಾರ ಪ್ರಭಾವಕ್ಕೆ ಎಲ್ಲ ಮಾನವರೂ ಒಳಗಾದವರೇ. ಈ ಸಂಸ್ಕಾರದ ಮೂಲವೇನು? ಈ ನೀತಿ ಸದ್ಗುಣಗಳನ್ನು ಏಕೆ ಅನುಸರಿಸಬೇಕು? ಎನ್ನುವ ಸ್ವತಂತ್ರ ಜಿಜ್ಞಾಸೆಯನ್ನು ಯಾರೂ ಮಾಡಿದಂತಿಲ್ಲ. ಭೌತಿಕ ದೃಷ್ಟಿಯಿಂದ ಕೇವಲ ತರ್ಕದ ಬಲದಿಂದ ವಿಚಾರ ಮಾಡಿದಲ್ಲಿ ಈ ರೂಢಿ ಸಂಸ್ಕಾರಗಳೆಲ್ಲ ಛಿನ್ನಭಿನ್ನಗಳಾಗುವುವು. ಈಗ ಈ ಮಾನವೀಯವಾದ ಸುಸಂಸ್ಕಾರದ ಬಲದಿಂದ ಒಂದು ರೀತಿಯ ನೀತಿ ವ್ಯವಸ್ಥೆಗಳನ್ನು ತಕ್ಕಮಟ್ಟಿಗೆ ಕಾಪಾಡಲು ಎಲ್ಲ ದೇಶಗಳೂ ಶಕ್ತಗಳಾಗಿದ್ದರೂ ಈಶ್ವರೀಯ ಭಾವನೆಯಿಲ್ಲದೆ ಇದು ಭದ್ರವಾಗಿ ನೆಲೆನಿಲ್ಲಲಾರದು. ಕುತರ್ಕದ ಕೋಲಾಹಲದಿಂದ ಈ ಸಂಸ್ಕಾರ ಭಾವನೆಗಳು ಅಸ್ತವ್ಯಸ್ತಗೊಂಡರೆ ಸಮಾಜದ ಸುವ್ಯವಸ್ಥೆ ಎಲ್ಲಾ ಬುಡಮೇಲಾಗಬಹುದು. ಈಶ್ವರ ನಿಷ್ಠೆಯ ತಳಹದಿ ಇಲ್ಲದೆಯೂ ಕಂಡುಬರುತ್ತಿರುವ ಲೋಕ ವ್ಯವಸ್ಥೆಯು ಬರೀ ತಾತ್ಕಾಲಿಕವಾಗಿದ್ದು ಅದನ್ನು ದೃಢಮೂಲವೆಂದು ನಾವು ಭಾವಿಸಲಾಗದು. ಉಸುಕಿನ ಮನೆಗಳಂತೆ ಅದು ಯಾವಾಗಲಾದರೂ ಕುಸಿದು ಬೀಳಬಹುದು. ಅದಕ್ಕಾಗಿಯೇ ಈಶ್ವರ ನಿಷ್ಠೆಯು ನಮ್ಮ ಜೀವನದ ಸುದೃಢ ತಳಹದಿಯಾಗ ಬೇಕೆಂದು ಗೀತೆಯು ಕರೆಯಿತ್ತಿದೆ.

ಇಲ್ಲಿ ಇನ್ನೂ ಒಂದು ಪ್ರಶ್ನೆ ಉದ್ಭವಿಸುತ್ತದೆ. ಪರಮಾತ್ಮನಲ್ಲಿ ಭಕ್ತಿಭಾವನೆಯು ಇದ್ದಲ್ಲಿ ಎಲ್ಲವೂ ಸರಿಹೋಗುವುದೆಂದು ನಂಬಲು ಸಾಧ್ಯವಿಲ್ಲ. ಧಾರ್ಮಿಕರಾದವರೂ ಬೇಕಾದಷ್ಟು ಅಕೃತ್ಯ ಮಾಡುವದನ್ನು ನಾವು ನೋಡುತ್ತ ಇರುವೆವು. ಬಾಯಿಯಲ್ಲಿ ರಾಮಮಂತ್ರವಿದ್ದರೂ ಕೃತಿಯಲ್ಲಿ ಕುತಂತ್ರವೇ ವ್ಯಾಪಿಸಿರುವ ಜನರನ್ನು ಸಾಕಷ್ಟು ಸಂಖ್ಯೆಯಲ್ಲಿ ನಾವು ಕಾಣಬಹುದು. ಪೂಜಾ ಜಪ ಪಾರಾಯಣಗಳಲ್ಲಿಯೇ ಹೆಚ್ಚು ವೇಳೆಯನ್ನು ಕಳೆಯುವವರೂ ದ್ರೋಹ ವಂಚನೆಗಳಿಂದ ಪರರ ಸೊತ್ತನ್ನು ಎತ್ತಿಹಾಕುವ ನಿದರ್ಶನಗಳು ಕಡಿಮೆ ಇಲ್ಲ. ಹೀಗಿರುವಾಗ ದೈವೀ ಭಾವನೆಯಿಂದ ಸಮಾಜದ ನೈತಿಕ ಸುಧಾರಣೆಯಾಗುವುದೆಂಬುದನ್ನು ಹೇಗೆ ಒಪ್ಪಲಿ?

ಈ ಆಕ್ಷೇಪವು ವಾಸ್ತವವಿದೆ. ಆದರೆ ಕೆಲವು ಧಾರ್ಮಿಕಂಮನ್ಯರ ಕೃತಿಗಳಿಂದಲೇ ಧರ್ಮದ ಆವಶ್ಯಕತೆಯನ್ನು ಪ್ರಶ್ನಿಸುವುದು ಉಚಿತವಾಗದು. ನಿಜವಾದ ಧರ್ಮನಿಷ್ಠೆಯ ಅಭಾವದಿಂದಲೇ ಈ ಆಭಾಸಗಳು ನಡೆದಿವೆ. ನಿಜವಾದ ಭಗವದ್ಭಕ್ತನು ಎಂದಿಗೂ ಹೇಯ ಕೃತಿಗಿಳಿಯಲಾರ. ಭಕ್ತಿ ಮತ್ತು ಧರ್ಮನಿಷ್ಠೆಯನ್ನು ಕೇವಲ ಬಾಹ್ಯ ಪ್ರದರ್ಶನಗಳಿಂದ ನಿರ್ಧರಿಸಲಾಗದು. ಪೂಜಾಪಾರಾಯಣಗಳಿಂದಲೇ ಒಬ್ಬನ ಆಂತರಂಗಿಕ ಭಕ್ತಿಯನ್ನು ಅಳೆಯಲು ಸಾಧ್ಯವಿಲ್ಲ. ಧರ್ಮದ ಸೋಗಿನಲ್ಲಿ ತಮ್ಮ ಅವ್ಯವಹಾರಗಳನ್ನು

ಮುಚ್ಚಲು ಪ್ರಯತ್ನಿಸುವ ಡಾಂಭಿಕರಿಂದ ಕೂಡಿದ ಪ್ರಪಂಚದಲ್ಲಿ ನಿಜವಾದ ಧಾರ್ಮಿಕರನ್ನು ಗುರುತಿಸುವುದು ಕಠಿಣವೇ ಆಗಿದೆ. ಮನೆಯಲ್ಲಿ ಯಾರಾದರೂ ಮೃತರಾದರೆ ಅಳುವುದು ಕೆಲವು ಸಮಾಜಗಳಲ್ಲಿ ರೂಢಿ ಇದೆ. ಅದಕ್ಕಾಗಿ ಕೆಲವು ಜನರಿಗೆ ಹೊಟ್ಟೆ ತುಂಬ ಊಟ ಹಾಕಿ ಕೂಲಿ ಕೊಟ್ಟು ಅಳಿಸುತ್ತಾರೆ. ಅದು ಹೃದಯದಿಂದ ಉಕ್ಕಿ ಬರುವ ನಿಜವಾದ ಅಳುವಲ್ಲ. ಕೆಲವರ ಧರ್ಮಾಚರಣೆಯೂ ಇದೇ ಬಗೆಯದು. ಕೂಲಿಯ ಅಳುವಿನಂತೆ, ದೇಶಾವರಿ ನಗುವಿನಂತೆ ಇವರದು ಧರ್ಮದ ವಿಡಂಬನೆ ಮಾತ್ರ. ಇದನ್ನೇ ನಿಜವಾದ ಧರ್ಮನಿಷ್ಠೆ ಎಂದು ನಾವು ಭಾವಿಸಬಾರದು. ಯಾರ ಹೃದಯಾಂತರಾಳದಲ್ಲಿ ಪರಮಾತ್ಮ ಭಕ್ತಿಯು ನಿಗೂಢವಾಗಿದೆಯೋ, ಯಾರ ಜೀವನವ್ಯವಹಾರವು ಧಾರ್ಮಿಕ ಭಾವನೆಯಿಂದ ಓತಪ್ರೋತ ವಾಗಿದೆಯೋ ಅಂತಹ ನಿಜವಾದ ಧರ್ಮಶೀಲನ ಜೀವನವು ಪರಿಶುದ್ಧವೂ ಸದ್ಗುಣಸಂಪನ್ನವೂ ಆಗಿರುತ್ತದೆ. ಈಶ್ವರನನ್ನು ನಾವು ಒಪ್ಪಿಕೊಂಡಿದ್ದರೂ ಆ ನಿಷ್ಠೆಯು ದೃಢವಾಗಿ ನಮ್ಮ ಅಂತರಂಗದಲ್ಲಿ ಬೇರೂರಿರುವುದರಿಂದ ನಾಸ್ತಿಕ್ಯ ವಿಚಾರದ ಸ್ವಚ್ಛಂದ ವೃತ್ತಿಯು ನಮ್ಮ ಜೀವನದಲ್ಲಿ ಕಂಡುಬರುತ್ತಿದೆ. ನಿಜವಾದ ಭಗವದ್ಭಕ್ತಿಯು ದೇಶದಲ್ಲಿ ಹಬ್ಬಿದರೆ ಜನಜೀವನದ ರೀತಿನೀತಿಗಳಲ್ಲಿಯೇ ಕ್ರಾಂತಿಕಾರಕ ಪರಿವರ್ತನವಾಗುವುದರಲ್ಲಿ ಸಂದೇಹವಿಲ್ಲ. ಈಗ ಸಾಧಾರಣ ಸ್ಥಿತಿಯಲ್ಲಿರುವ ಭಕ್ತಿಭಾವನೆಯೂ ಜನರ ಹೃದಯದಲ್ಲಿ ನೈತಿಕ ಮೂಲ್ಯಾಂಕನ ಮಾಡಿ ಆಸುರೀ ವೃತ್ತಿಯ ವೇಗವನ್ನು ಕುಂಠಿತಗೊಳಿಸಲು ಎಷ್ಟೋ ಸಹಾಯಕವಾಗಿದೆ.

ಈ ಭಕ್ತಿಭಾವನೆಯನ್ನೇ ಬೆಳೆಸಿ ಅದರಲ್ಲಿ ನೈಜತೆಯನ್ನೂ ದೃಢತೆಯನ್ನೂ ನಿರ್ಮಿಸಿದಲ್ಲಿ ಅದರ ಸತ್ಪರಿಣಾಮವೇ ಅನ್ಯಾದೃಶವಾಗುವುದು.

ಪರಮಾತ್ಮನನ್ನು ತಿರಸ್ಕರಿಸಿ ಲೋಕವ್ಯವಸ್ಥೆಯ ಭಂಜಕರಾಗಿ ನಡೆಯುವ ಆಸುರೀ ವೃತ್ತಿಯ ಜನರಿಗೆ ಒದಗುವ ದುರ್ಗತಿಯನ್ನು ಪರಮಾತ್ಮನು ವಿವರಿಸುತ್ತಾನೆ :

ಆಸುರೀ ಯೋನಿಮಾಪನ್ನಾ
ಮೂಢಾ ಜನ್ಮನಿ ಜನ್ಮನಿ।
ಮಾಮಪ್ರಾಪ್ಯೈವ ಕೌಂತೇಯ
ತತೋ ಯಾಂತ್ಯಧಮಾಂ ಗತಿಮ್॥

ತಮ್ಮ ದುಷ್ಕೃತಿಗಳಿಂದ ಪರಮಾತ್ಮನಿಂದ ಹೆಚ್ಚೆಚ್ಚು ದೂರ ಸರಿಯುವ ಈ ಅಧಮಾತ್ಮರು ಅವನತಿಯ ದಾರಿಯಲ್ಲಿಯೇ ನಡೆದು ಕೊನೆಗೂ ಪರಮಾತ್ಮನನ್ನು ಹೊಂದುವ ಸಂಭವವನ್ನೇ ಪೂರ್ಣವಾಗಿ ಕಳೆದುಕೊಳ್ಳುತ್ತಾರೆ. ತಮ್ಮ ಆತ್ಮವನ್ನೇ ಗಹನ ಅಂಧಕಾರದಲ್ಲಿ ಕೆಡಹುತ್ತಾರೆ. ಆಸುರೀ ಪ್ರವೃತ್ತಿಯ ಜನರ ಈ ರೀತಿಯಾಗಿ ಪರಮಾತ್ಮನ ಅವಕೃಪೆಗೆ ಗುರಿಯಾಗಿ ಅಧಃಪಾತದ ಚರಸೀಮೆಯನ್ನು ಪಡೆಯುವಂತೆ ದೈವೀ ಸಂಪತ್ತನ್ನು ಗಳಿಸಿದ ಸಾತ್ತ್ವಿಕವೃತ್ತಿಯ ಸಜ್ಜನ ಸಮಾಜವು ಆಧ್ಯಾತ್ಮಿಕ ಸೋಪಾನಪಥದಲ್ಲಿ ಕ್ರಮಕ್ರಮವಾಗಿ ಮುಂದುವರಿದ ಪರಮಾತ್ಮನ ಪ್ರಸಾದದ ಮಹೋನ್ನತ ಪ್ರಾಸಾದದಲ್ಲಿ ಮುಕ್ತಿಯ ಮಹಾನಂದವನ್ನು ಅನುಭವಿಸುವುದು. ಸಜ್ಜನ ದುರ್ಜನರಿಗೆ ಒದಗುವ ಈ ಗತಿವೈವಿಧ್ಯ, ಪರಮಾತ್ಮನ ಈ ಅಬಾಧಿತ ಶಾಸನದಲ್ಲಿ ದುಷ್ಕೃತಿಗಳಿಗೆ ದೊರೆಯುವ ನಿಗ್ರಹದ ನಿಯಮ ಮತ್ತು ಶಿಷ್ಟಕೃತಿಗಳಿಗೆ ನಿಶ್ಚಯವಾಗಿ ದೊರೆಯುವ ಅನುಗ್ರಹದ ಆಶ್ವಾಸನೆ ಇವುಗಳು ಮಾನವನ ಭೌತಿಕ ಪ್ರವೃತ್ತಿ ಮತ್ತು ಕಾಮನೆಗಳಿಗೆ ಒಂದು ಮೇರೆಯನ್ನು ಹಾಕಿ, ಲೋಕದ ಪ್ರಗತಿ ಪ್ರವರ್ತನೆಗಳಿಗೆ ಅನುಕೂಲವಾಗುವಂತೆ ಅವುಗಳ ಗತಿವಿಧಿಯನ್ನು ಏರ್ಪಡಿಸಿ ಸುವ್ಯವಸ್ಥಿತವೂ ಸುನಿಯಂತ್ರಿತವೂ ಆದ ಜೀವನ ಯೋಜನೆಯನ್ನು ರೂಪಿಸಿವೆ.

ಧರ್ಮ ಮತ್ತು ನಿತ್ಯವ್ಯವಹಾರ

ಸತ್ತ್ವ, ರಜಸ್ಸು, ತಮಸ್ಸುಗಳು ನಮ್ಮ ಜೀವನ ವ್ಯವಹಾರಗಳಲ್ಲಿ ಬೀರುವ ಪ್ರಭಾವದ ವಿವರಣೆಯನ್ನು ಹದಿನೇಳನೆಯ ಅಧ್ಯಾಯದಲ್ಲಿ ಮಾಡಿದೆ. ಆತ್ಮನ ಮೂಲಭೂತ ಸ್ವಭಾವಕ್ಕನುಸರಿಸಿ ನಮ್ಮ ಪ್ರವೃತ್ತಿಗಳಲ್ಲಿಯೂ ವೈವಿಧ್ಯವುಂಟಾಗುತ್ತದೆ.

ಸತ್ತ್ವಾನುರೂಪಾ ಸರ್ವಸ್ಯ
ಶ್ರದ್ಧಾ ಭವತಿ ಭಾರತಃ

ನಮ್ಮ ಈ ಬಾಹ್ಯ ವಿಚಾರ ವರ್ತನೆ ನಂಬಿಕೆಗಳಿಗೆ ಆತ್ಮನ ವ್ಯಕ್ತಿತ್ವವೇ ಮೂಲಕಾರಣವಾಗಿದೆ. ರಾಜಸ, ತಾಮಸ ವೃತ್ತಿಗಳಿಂದ ನಮ್ಮ ವ್ಯವಹಾರಗಳೆಲ್ಲವೂ ದೂಷಿತವಾಗುವುವು. ನಮ್ಮ ಲೌಕಿಕ ಹಾಗೂ ಧಾರ್ಮಿಕ ವ್ಯವಹಾರಗಳೆರಡರಲ್ಲಿಯೂ ಸತ್ತ್ವ, ರಜಸ್ಸು, ತಮಸ್ಸುಗಳು ತಮ್ಮ ಮುದ್ರೆಯನ್ನು ಒತ್ತಬಲ್ಲವು. ಲೌಕಿಕ ವ್ಯವಹಾರಗಳಲ್ಲಿಯೂ ತಾತ್ತ್ವಿಕ ವೃತ್ತಿಯು ಅನುಸ್ಯೂತವಾದಾಗ ಅವು ಧರ್ಮಗಳೇ ಎನಿಸುವವು. ಧರ್ಮಾಚಾರಗಳೂ ರಾಜಸ, ತಾಮಸ ಭಾವನೆಗಳಿಂದ ಕಲುಷಿತಗೊಂಡರೆ ಅವೇ ಅಧರ್ಮಗಳಾಗಬಲ್ಲವು. ತುಲಾಧಾರ, ಧರ್ಮವ್ಯಾಧರು ನಡೆಸಿದ ವ್ಯಾಪಾರ-ವ್ಯವಹಾರಗಳು ಧರ್ಮವೆನಿಸಿದ್ದರೆ ರಾವಣ, ಜರಾಸಂಧರಂತಹರು ಮಾಡಿದ ತಪಸ್ಸೂ ಅಧರ್ಮವಾಗಿದೆ.

ಧರ್ಮೋ ಭವತ್ಯಧರ್ಮೋಽಪಿ
ಕೃತೋ ಭಕ್ತೈಸ್ತವಾಚ್ಯುತ ।
ಪಾಪಂ ಭವತಿ ಧರ್ಮೋಽಪಿ
ಯೋ ನ ಭಕ್ತೈಃ ಕೃತೋ ಹರೇ॥

–ಸದಾಚಾರಸ್ಮೃತಿ

''ಭಗವದ್ಭಕ್ತರಾದ ಸಜ್ಜನರು ಮಾಡಿದ ಧರ್ಮಭಿನ್ನವಾದ ವ್ಯವಹಾರವೂ ಧರ್ಮವಾಗಬಲ್ಲದು. ಅಭಕ್ತರಾದ ದುಷ್ಟ ಜನರು ಆಚರಿಸಿದ ಧರ್ಮವೂ ಪಾತಕವಾಗುವುದು.'' ತುಲಾಧಾರರಂತಹರು ಮಾಡಿದ ವ್ಯಾಪಾರವೂ ಧರ್ಮವಾಗಿದ್ದರೆ ಇಂದು ಜನರು ಲೋಭವೃತಿಯಿಂದ ಮಾಡುವ ವ್ಯಾಪಾರವೇ ಅಧರ್ಮವಾಗುತ್ತದೆ. ನಮ್ಮ ಭೋಜನಾದಿ ವ್ಯವಹಾರಗಳೂ ದಾನ, ತಪಸ್ಸು, ಯಜ್ಞಗಳೂ ಸತ್ತ್ವ, ರಜ, ತಮಗಳಿಂದ ವೈವಿಧ್ಯವನ್ನು ಪಡೆಯುವವು. ಆಹಾರ, ನಿದ್ರೆ, ಕಾಮ ವ್ಯವಹಾರಗಳು ಪಶುಗಳಿಗಿರುವಂತೆ ಮಾನವನಿಗೂ ಇವೆ. ಅವನ್ನು ಮಾನವನು ಬಿಡಲೂ ಸಾಧ್ಯವಿಲ್ಲ, ಧಾರ್ಮಿಕನಾಗಲು ಈ ವ್ಯವಹಾರಗಳನ್ನು ಬಿಡಬೇಕೆಂದು ಇಲ್ಲ. ಪಶುಗಳು ಯಾವುದೇ ನೀತಿ ನಿರ್ಬಂಧಗಳಿಲ್ಲದೆ ಸ್ವಚ್ಛಂದವಾಗಿ ಆಹಾರ-ನಿದ್ರಾದಿಗಳನ್ನು ಸೇವಿಸುವುವು. ಅವೇ ವ್ಯವಹಾರಗಳಲ್ಲಿ ಒಂದು ಶಿಸ್ತನ್ನು, ಒಂದು ನಿಯಮವನ್ನು ಜೋಡಿಸಿದಾಗಲೇ ನಾವು ಧಾರ್ಮಿಕರಾಗುವೆವು. ಧರ್ಮವೆಂದರೆ ಲೌಕಿಕ ವ್ಯವಹಾರಗಳ ಪರಿವರ್ಜನೆಯಲ್ಲ. ಪಶುಗಳೂ ನಡೆಸುವಂತಹ ಈ ವ್ಯವಹಾರಗಳಲ್ಲಿ ಧರ್ಮನೀತಿಗಳನ್ನು ಜೋಡಿಸಿದಾಗಲೆ ನಾವು ಮಾನವರಾಗಬಲ್ಲೆವು. ಡಾರ್ವಿನ್‌ವಾದದಂತೆ ಪಶುಗಳೇ ವಿಕಾಸವನ್ನು ಹೊಂದಿ ಮಾನವರಾಗಿ ಪರಿವರ್ತಿತರಾಗಿರುವರೆಂದು ವಿಜ್ಞಾನಿಗಳು ಹೇಳುತ್ತಿದ್ದರೆ ಮಾನವರೇ ಪಶುಗಳಾಗಿ ಪರಿವರ್ತನೆಗೊಂಡು ಡಾರ್ವಿನ್ ವಾದವು ತಿರುವುಮುರುವು ನಡೆದಿದೆಯೇನೋ ಎನ್ನುವ ರೀತಿಯ ಕಪಿಚೇಷ್ಟೆ ಪಶುವರ್ತನೆಗಳನ್ನು ಜಗತ್ತಿನಲ್ಲಿ ನಾವು ಎಲ್ಲೆಡೆಗಳಲ್ಲಿಯೂ ನೋಡುತ್ತಿರುವೆವು.

ಆಹಾರ

ಮದ್ಯ-ಮಾಂಸಗಳಂತಹ ದುಷ್ಟ ಖಾದ್ಯಪೇಯಗಳನ್ನು ಪರಿತ್ಯಜಿಸಿ ಶರೀರ ಮನಸ್ಸುಗಳಿಗೆ

ಹಿತಕರವಾದ ಶುಚಿ ಆಹಾರವನ್ನು ಸೇವಿಸುವುದು ಭೋಜನ ವ್ಯವಹಾರದಲ್ಲಿ ನಾವು ಅಳವಡಿಸಬೇಕಾದ ಶಿಸ್ತು ನಿಯಮಗಳಾಗಿವೆ. ಅದನ್ನು ನಿಯತವೇಳೆಯಲ್ಲಿ ಸ್ವೀಕರಿಸುವದು, ಭಗವಂತನಿಗೆ ಸಮರ್ಪಿಸಿ ಅವನ ಪ್ರಸಾದವೆಂದು ಪರಿಗ್ರಹಿಸುವುದು ಮೊದಲಾದ ನೀತಿ ನಿಯಮಗಳನ್ನು ಜೋಡಿಸಿದಾಗಲೇ ನಮ್ಮದು ಸಾತ್ತ್ವಿಕ ಭೋಜನವಾಗುವುದು. ನಿದ್ರೆ, ಕಾಮವ್ಯವಹಾರಗಳಲ್ಲಿಯೂ ಇಂತಹದೇ ನೀತಿ ನಿರ್ಬಂಧಗಳನ್ನು ಸಮಾವೇಶಗೊಳಿಸಿದಲ್ಲಿ ಅವುಗಳಲ್ಲಿಯೂ ಸಾತ್ತ್ವಿಕತೆಯು ತುಂಬುವುದು.

ನಾವು ಸ್ವೀಕರಿಸಿದ ಆಹಾರವೇ ನಮ್ಮ ಮನೋಬುದ್ಧಿಗಳಾಗಿ ಪರಿಣತಿಗೊಳ್ಳುವುದು. ನಾವು ಸೇವಿಸಿದ ಆಹಾರವು ಮೂರು ರೀತಿಯಲ್ಲಿ ವಿಭಕ್ತವಾಗುವುದು. ಅದರ ಒಂದು ಸೂಕ್ಷ್ಮಭಾಗವೇ ನಮ್ಮ ಮನಸ್ಸಾಗಿ ಪರಿಣತಗೊಳ್ಳುವುದು ಎಂದು ಛಾಂದೋಗ್ಯೋಪನಿಷತ್ತಿನಲ್ಲಿ ಉಲ್ಲೇಖವಿದೆ. ನಾವು ಸ್ವೀಕರಿಸುವ ಆಹಾರದ ಗುಣಧರ್ಮಗಳನ್ನನುಸರಿಸಿಯೇ ನಮ್ಮ ಮನಸ್ಸಿನಲ್ಲಿ ವಿಕೃತಿ, ಸಂಸ್ಕೃತಿಗಳಿವೆ. ಶರೀರಕ್ಕೆ ಪೋಷಕವಾಗಿರುವ ಮಾಂಸಾಹಾರವನ್ನು ಏಕೆ ಸ್ವೀಕರಿಸಬಾರದೆಂದು ಕೆಲವರು ಹೇಳುವುದುಂಟು. ಅದರಿಂದ ನಮ್ಮ ಶರೀರವೇನೋ ಉಬ್ಬಬಹುದು. ಆದರೆ ನಮ್ಮ ಆತ್ಮ, ಅಂತಃಕರಣಗಳು ಪೂರ್ತಿಯಾಗಿ ಕುಗ್ಗುವವು. ಇಂತಹ ಆಹಾರಗಳಿಂದ ಶರೀರವು ಪರಿಪುಷ್ಟವಾಗಿ ಬೆಳೆದರೂ ಸ್ವೇಚ್ಛಾಚಾರ, ವಿಲಾಸಪ್ರವೃತ್ತಿ, ದೌಷ್ಟ್ಯಗಳೂ ಅಂತಃಕರಣದಲ್ಲಿ ಅದೇ ಪ್ರಮಾಣದಲ್ಲಿ ವೃದ್ಧಿಹೊಂದುವುವು. ಸಾತ್ತ್ವಿಕ ಆಹಾರಗಳಿಂದಲೇ ಮನಸ್ಸು ಸಾತ್ತ್ವಿಕವಾಗಿ ಪರಿಣಮಿಸುವುದು. ನ್ಯಾಯವಾದ ಪದ್ಧತಿಯಿಂದ ಯೋಗ್ಯ ಆಹಾರವನ್ನು ಗಳಿಸಿ ಭಗವಂತನಿಗೆ ನಿವೇದಿಸಿ ಸ್ವೀಕರಿಸುವುದೇ ವಿಹಿತವಾದ ಸಾತ್ತ್ವಿಕ ಭೋಜನದ ರೀತಿಯಾಗಿದೆ. ಇದರಿಂದಲೇ ನಮ್ಮ ಶರೀರವೂ ಮನಸ್ಸೂ ಪುನೀತವಾಗುವುವು.

ಆಹಾರದಿಂದ ನಮ್ಮ ಮನಸ್ಸಿನ ಮೇಲೆ ಆಗುವ ಪರಿಣಾಮದ ಬಗ್ಗೆ ಒಂದು ಮನೋರಂಜಕವಾದ ಕಥೆಯು ಪ್ರಚಲಿತವಿದೆ. ಮಹಾಭಾರತದ ಯುದ್ಧವು ಮುಗಿದ ಮೇಲೆ ಧರ್ಮರಾಜನ ಮನಃಶಾಂತಿಗಾಗಿ ಭೀಷ್ಮರು ವಿವಿಧ ಧರ್ಮಗಳನ್ನು ವಿಸ್ತಾರವಾಗಿ ಬೋಧಿಸುವರು. ಇದನ್ನು ಕೇಳಿದ ದ್ರೌಪದಿಯು ಪ್ರಶ್ನಿಸುವಳು: ''ಧರ್ಮದ ಬಗ್ಗೆ ಧಾರಾಳವಾಗಿ ಉಪದೇಶ ಮಾಡುವ ತಾವು ನನ್ನ ಮಾನಹರಣವನ್ನು ದುರ್ಯೋಧನ ದುಃಶ್ಯಾಸನರು ನಡೆಸಿದಾಗ ಅನ್ಯಾಯವನ್ನು ಪ್ರತಿಭಟಿಸದೇ ಏಕೆ ತಟಸ್ಥರಾದಿರಿ? ಆಗ ಧರ್ಮಪ್ರಜ್ಞೆಯು ಏಕೆ ಜಾಗೃತವಾಗಲಿಲ್ಲ?'' ಇದಕ್ಕೆ ಭೀಷ್ಮರು ನೀಡಿದ ಉತ್ತರವಿದು: ''ದ್ರೌಪದಿ, ಅಂದು ನಾನು ದುರ್ಯೋಧನನು ನೀಡಿದ ಅನ್ನವನ್ನು ಸ್ವೀಕರಿಸುತ್ತಿದ್ದೆ. ಆ ಪಾಪದ ಅನ್ನವನ್ನು ಉಂಡು ಕೊಬ್ಬಿದ ಈ ದೇಹದಲ್ಲಿ ಧರ್ಮಪ್ರಜ್ಞೆಯ ಸುಳಿವೇ ಇರಲಿಲ್ಲ. ದುಷ್ಟ ಆಹಾರದ ಪರಿಣಾಮವಾದ ತಾಮಸವೃತ್ತಿಯ ಅಬ್ಬರದಲ್ಲಿ ಧರ್ಮದ ದನಿಯೇ ಆಗ ಕೇಳಿಸದಂತಿತ್ತು. ಆದರೆ ಮಹಾಯುದ್ಧದಲ್ಲಿ ಅರ್ಜುನನ ಬಾಣವರ್ಷಗಳಿಂದ ನನ್ನ ಶರೀರದಿಂದ ರಕ್ತಧಾರೆಯೆಲ್ಲ ಹೊರಗೆ ಹರಿದಿದೆ. ದುರ್ಯೋಧನನು ನೀಡಿದ ಆಹಾರವನ್ನು ಸೇವಿಸಿ ಸಿದ್ಧವಾದ ರಕ್ತಧಾರೆ ಹರಿದುಹೋಗಿ ಅಸ್ಥಿಮಾತ್ರವಾದ ನನ್ನ ಶರೀರವು ಈಗ ಪರಿಶುದ್ಧವಿದೆ. ಆ ದುಷ್ಟ ಆಹಾರದ ಪರಿಣಾಮ ವಿಕೃತಿಗಳಾವವೂ ಈಗ ನನ್ನಲ್ಲಿ ಕಂಡುಬರುವುದಿಲ್ಲ. ಈಗ ಸ್ವಾಭಾವಿಕವಾಗಿ ಧರ್ಮಪ್ರಜ್ಞೆಯು ಜಾಗೃತವಾದುದರಿಂದಲೇ ಈ ವಿಸ್ತಾರವಾದ ಉಪದೇಶವನ್ನು ನಾನು ನೀಡುವಂತಾಗಿದೆ.''

ಆದುದರಿಂದಲೇ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಆಹಾರ ಸೇವನೆಯ ಬಗ್ಗೆ ವಿಶಿಷ್ಟ ಹಾಗೂ ಹಿತಕರ ನಿರ್ಬಂಧಗಳಿಗೆ ಪ್ರಾಶಸ್ತ್ಯವನ್ನು ನೀಡಲಾಗಿದೆ. ಮಾಂಸಾಹಾರವನ್ನು ಪೂರ್ತಿಯಾಗಿ ಪರಿತ್ಯಜಿಸಿ ಶಾಖಾಹಾರವನ್ನೇ ಸ್ವೀಕರಿಸುವ ನಮ್ಮ ಭಾರತೀಯ ಪರಂಪರೆಯನ್ನು ಕಂಡು ವಿದೇಶೀಯರು ಅಚ್ಚರಿಪಟ್ಟಿದ್ದಾರೆ. ಶತಮಾನ ಶತಮಾನಗಳಿಂದ ಆಹಾರದ ಈ ಸಾತ್ತ್ವಿಕ ನಿಯಮಗಳು ಸಹಜವಾಗಿ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ನಮ್ಮ ಭಾರತೀಯ ಸಂಸ್ಕೃತಿಯು ದೊಡ್ಡ ಪವಾಡವನ್ನೇ ಮಾಡಿದೆ.

ಯಜ್ಞ, ದಾನ, ತಪಸ್ಸುಗಳನ್ನು ದುರಭಿಸಂಧಿಯಿಂದ, ಪ್ರತಿಫಲಾಪೇಕ್ಷೆಯಿಂದ, ಪ್ರದರ್ಶನ ಮನೋಭಾವದಿಂದ, ಅಸಡ್ಡೆ, ಅಹಂಕಾರಗಳಿಂದ ನಡೆಸಿದರೆ ಲೋಕಕ್ಕೆ ಹಾನಿ ಉಪಪ್ಲವಗಳೇ ಆಗುವವು. ರಾಜಸ, ತಾಮಸಗಳಾದ ಈ ಧಾರ್ಮಿಕ ವ್ಯವಹಾರಗಳೆಲ್ಲವೂ ಅಧರ್ಮವೆಂದೇ ಪರಿಗಣಿಸಲ್ಪಟ್ಟಿದೆ. ಧರ್ಮದ ಈ ವಿಕೃತರೂಪವನ್ನು ಇಂದು ನಾವು ಲೋಕದಲ್ಲಿ ಹೆಚ್ಚಾಗಿ ಕಾಣುತ್ತಿದ್ದೇವೆ.

ದಾನ

ದಾನವು ಭಗವಂತನು ಮಾನವರಿಗೆ ನೀಡಿದ ಶ್ರೇಷ್ಠ ಕೊಡುಗೆ. ದೇವ, ಅಸುರ, ಮಾನವರಿಗೆ ಸೃಷ್ಟಿಕರ್ತರಿಂದ 'ದ' ಎಂಬ ಉಪದೇಶವನ್ನು ಕೊಡಲಾಯಿತು. ಅಹಂಕಾರಕ್ಕೆ ವಶರಾದ ದೇವತೆಗಳಿಗೆ ದಮ ಅರ್ಥಾತ್ ಆತ್ಮನಿಗ್ರಹದ ಸಂದೇಶವು ಇದರಿಂದ ದೊರಕಿದರೆ ಹಿಂಸಾವೃತ್ತಿಯ ಕ್ರೂರ ಅಸುರರು ದಯೆಯ ಪಾಠವನ್ನು ಈ ಉಪದೇಶದಿಂದ ಪಡೆದರು; ಲೋಭ ವೃತ್ತಿಯ ಮಾನವರು ಈ 'ದ' ದಿಂದ ದಾನವ ಸ್ಫೂರ್ತಿಯನ್ನು ಪಡೆದರು ಎಂದು ಉಪನಿಷತ್ತಿನಲ್ಲಿ ಕಥೆ ಇದೆ. ಮಾನವರು ತಮ್ಮಲ್ಲಿದ್ದುದ್ದನ್ನೆಲ್ಲ ಭಗವಂತನ ಸೇವಾವೃತ್ತಿಯಿಂದ ಸಮಾಜಕ್ಕೆ ನೀಡುವ ಉದಾರತೆಯನ್ನು ಪಡೆದು ಆದರ್ಶ ಮಾನವರಾಗಲು ಪ್ರಯತ್ನಿಸಬೇಕು. ಈ ದಾನದಲ್ಲಿಯೂ ರಾಜಸ, ತಾಮಸ ಭಾವದ ಪ್ರವೇಶಕ್ಕೆ ಅವಕಾಶವಿದೆ. ಪ್ರತ್ಯುಪ ಕಾರದ ಅಪೇಕ್ಷೆಯಿಂದ, ಕುಹಕ ದೃಷ್ಟಿಯಿಂದ ಮಾಡಿದ ದಾನವು ತನ್ನ ಪವಿತ್ರತೆಯನ್ನು ಕಳೆದುಕೊಳ್ಳುವುದು. ದಾಕ್ಷಿಣ್ಯಕ್ಕೆ ಒಳಗಾಗಿ ಪರಿಕ್ಲೇಶದಿಂದ ನೀಡುವ ದಾನವು ಇಂತಹುದೇ. ತಮ್ಮ ಅಧಿಕಾರ ಹಂಗುಗಳನ್ನು ಸ್ಥಾಪಿಸುವ ಕುತಂತ್ರದಿಂದ ಪ್ರಬಲ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಿಗೆ ನೀಡುವ ದುರುದ್ದೇಶಪೂರ್ಣವಾದ ದಾನವೈಖರಿಯು ಅಂತಾರಾಷ್ಟ್ರೀಯ ರಂಗದಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದೆ. ಅಧಿಕಾರದ ಬಲವನ್ನು ಉಪಯೋಗಿಸಿ ಶ್ರೀಮಂತರಿಂದ ದಾನವನ್ನು ಪಡೆಯುವದಂತೂ ವಾಡಿಕೆಯ ಸಂಗತಿಯೇ ಆಗಿದೆ. ಹೀಗೆ ನಾನಾ ರೀತಿಯ ದಾನದ ಆಭಾಸಗಳು ಈಗ ಜಗತ್ತಿನಲ್ಲಿ ಪ್ರಚಲಿತವಾಗಿವೆ. ಎಲ್ಲೆಲ್ಲಿಯೂ ಇಂತಹ ದಾನದ ಅಸಾತ್ತ್ವಿಕ ದೃಶ್ಯಗಳೇ ಕಂಡುಬರುತ್ತವೆ. ಮಾನವೀಯ ಅನುಕಂಪದಿಂದ ಪ್ರೇರಿತವಾದ ಸ್ವಾರ್ಥ ನಿರಪೇಕ್ಷವಾದ ಪುಣ್ಯತಮ ಸಾತ್ತ್ವಿಕ ದಾನವು ಇಂದು ಅಪೂರ್ವವೇ ಆಗಿದೆ. ಪ್ರತಿಯೊಂದು ದಾನದ ಹಿನ್ನೆಲೆಯಲ್ಲಿಯೂ ಏನಾದರೂ ಕುಹಕ ಕುತಂತ್ರಗಳು ಅಡಕವಾಗಿರುತ್ತವೆ.

ದಾನದ ಪವಿತ್ರತೆಯ ಬಗ್ಗೆ ಶಿಬಿರಾಜನ ಕತೆಯನ್ನು ಭಾರತದಲ್ಲಿ ಉದಾಹರಿಸಲಾಗಿದೆ. ಒಮ್ಮೆ ನಾರದರು ಕ್ಷತ್ರಿಯರಾದ ಶಿಬಿ, ವಸುಮಂತ, ಪ್ರತರ್ದನ, ಅಷ್ಟಕರೊಡನೆ ಧರ್ಮಚರ್ಚೆಯನ್ನು ನಡೆಸುತ್ತಿದ್ದಾಗ ಒಂದು ಪ್ರಶ್ನೆಯು ಉದ್ಭವಿಸಿತು. ಈ ಐದು ಜನರು ಸ್ವರ್ಗವನ್ನು ಏರುವ ಸಂದರ್ಭದಲ್ಲಿ ಮೊದಲು ಕೆಳಗೆ ಇಳಿಯುವ ಪ್ರಸಂಗವು ಇವರಲ್ಲಿ ಯಾರಿಗೆ ಬರುವುದು ಎಂದು. ಅಷ್ಟಕನೇ ಮೊದಲು ಕೆಳಗಿಳಿಯುತ್ತಾನೆಂದು ನಾರದರೆಂದರು. ''ಅಷ್ಟಕನು ಸಾಕಷ್ಟು ದಾನ ನೀಡಿ ಕೀರ್ತಿ ಗಳಿಸಿದ್ದಾನೆ. ಆದರೆ ಒಮ್ಮೆ ನಾನು ಆತನೊಡನೆ ಸಂಚರಿಸುತ್ತಿದ್ದಾಗ ಒಂದೆಡೆ ನೂರಾರು ಗೋವುಗಳನ್ನು ನೋಡಿ ಇವು ಯಾರವು? ಎಂದು ನಾನು ಕೇಳಿದರೆ, ತಾನು ಬ್ರಾಹ್ಮಣರಿಗೆ ದಾನ ಮಾಡಿದ ಗೋವುಗಳಿವು ಎಂದು ಹೆಮ್ಮೆಯಿಂದ ಅಷ್ಟಕನು ನುಡಿದನು. ದಾನದ ಜೊತೆಗೆ ಈ ಅಹಂಭಾವ ಹೆಗ್ಗಳಿಕೆಗಳು ಬೆರೆತಿರುವುದರಿಂದ ಅಷ್ಟಕನೇ ಮೊದಲು ಕೆಳಗಿಳಿಯುತ್ತಾನೆ.'' ಅವನ ನಂತರ ಪ್ರತರ್ದನನೇ ಕೆಳಗಿಳಿಯುವನೆಂದು ನಾರದರು ನುಡಿದರು. ''ಪ್ರತರ್ದನನು ರಥದಲ್ಲಿ ಸಂಚರಿಸುತ್ತಿದ್ದಾಗ ಬ್ರಾಹ್ಮಣನೊಬ್ಬನು ಅವನಲ್ಲಿ ದಾನವನ್ನು ಬೇಡಿದನು. ಮತ್ತೆ ಕೊಡುವೆನೆಂದರೂ ಈಗಲೇ ಕೊಡಬೇಕೆಂದು ಬ್ರಾಹ್ಮಣನು ಅವಸರಪಡಿಸಿದಾಗ ತನ್ನ ರಥದ ಒಂದು ಕುದುರೆಯನ್ನು ಅಲ್ಲಿಯೇ ನೀಡಿದನು. ಹೀಗೆಯೇ ಒತ್ತಾಯಪಡಿಸಿ ಬೇಡಿದ ಸಾಧು ಸಂತರಿಗೆ ತನ್ನ ರಥದ ಒಂದೊಂದು ಭಾಗವನ್ನು ನೀಡುತ್ತ ಎಲ್ಲಾ ಭಾಗಗಳನ್ನೂ ಕೊಟ್ಟು ಮುಗಿಸಿದನು.

ಇನ್ನು ತನ್ನಲ್ಲಿ ಬೇಡಲು ಸಾಧುಗಳಿಗೆ ಏನೂ ಇಲ್ಲವೆಂದು ಸಾಧುಗಳನ್ನು ಅಣಕಿಸಿ ಆ ಸಂದರ್ಭದಲ್ಲಿ ಪ್ರತರ್ದನನು ಮಾತಾಡಿದ್ದಾನೆ. ಇಷ್ಟು ಉದಾರವಾಗಿ ನಿರ್ಲೋಭದಿಂದ ದಾನಮಾಡಿದರೂ ಅದರ ಜೊತೆಗೆ ಈ ಕೊಂಕುನುಡಿಯನ್ನು ಆಡಿದುದರಿಂದ ಪ್ರತರ್ದನನು ಕೆಳಗಿಳಿಯುವನು'' ಎಂದು ನಾರದರು ಸಮರ್ಥಿಸಿದರು. ''ಆಮೇಲೆ ಕೆಳಗಿಳಿಯುವ ಸರದಿ ವಸುಮಂತನದು. ಒಂದು ಸುಂದರವಾದ ಪುಷ್ಪರಥದ ಸ್ವಸ್ತಿವಾಚನದ ಸಂದರ್ಭದಲ್ಲಿ ಆ ರಥವನ್ನು ಪ್ರಶಂಸೆ ಮಾಡಿದ ಬ್ರಾಹ್ಮಣನಿಗೆ ಆ ರಥವನ್ನೇ ಉದಾರತೆಯಿಂದ ವಸುಮಂತನು ದಾನ ಮಾಡಿದನು. ಇನ್ನೊಂದು ಸಂದರ್ಭದಲ್ಲಿಯೂ ರಥವನ್ನು ಪ್ರಶಂಸಿಸಿದ ಆ ವ್ಯಕ್ತಿಗೇ ಪುನಃ ರಥವನ್ನು ದಾನಮಾಡಿದನು. ಮೂರನೆಯ ಪ್ರಸಂಗದಲ್ಲಿ ಆ ವ್ಯಕ್ತಿಯು ಇಂತಹ ಸಂದರ್ಭದಲ್ಲಿಯೇ ರಥದ ಪ್ರಶಂಸೆಯನ್ನು ಮಾಡಿದಾಗ ಈ ರಾಜನು ಆತನನ್ನು ಸ್ವಲ್ಪ ಮೂದಲಿಸಿ ವಿನೋದವಾಗಿ ಮಾತಾಡಿದನು. ದಾನದ ಜೊತೆಗಿರುವ ಈ ಅಪಸ್ವರದಿಂದಾಗಿ ವಸುಮಂತನು ಕೆಳಗಿಳಿಯುತ್ತಾನೆ.'' ಮುಂದಿನ ಇಬ್ಬರಲ್ಲಿ ಮೊದಲು ಕೆಳಗಿಳಿಯುವವರಾರು ಎಂದು ಪ್ರಶ್ನಿಸಿದಾಗ ತಾವೇ ಕೆಳಗಿಳಿಯುವುದಾಗಿಯೂ ಶಿಬಿರಾಜನೇ ಮುಂದೆ ಸಾಗುವುದಾಗಿಯೂ ನಾರದರು ಹೇಳಿದರು. ''ಶಿಬಿರಾಜನ ಶುದ್ಧ ಮನೋಭಾವದ ತ್ಯಾಗದ ಮುಂದೆ ಎಲ್ಲರೂ ಅಲ್ಪರೆನಿಸುತ್ತಾರೆ. ಶರಣಾಗತವಾದ ಪಾರಿವಾಳವನ್ನು ಉಳಿಸುವುದಕ್ಕಾಗಿ ತನ್ನ ಸಮಗ್ರ ಜೀವನವನ್ನೇ ಸಮರ್ಪಿಸಿದ, ಆಸಕ್ತಿ ಮಮತೆಗಳ ಲೇಶವೂ ಇಲ್ಲದ ವಿನಯ ತ್ಯಾಗಗಳ ಪ್ರತಿಮೂರ್ತಿಯಾಗಿ ನಿರಪೇಕ್ಷ ಬುದ್ಧಿಯ ದಾನಶೀಲನಾದ ಶಿಬಿರಾಜನ ಮುಂದೆ ನಾನೇ ನನ್ನ ಸೋಲನ್ನೊಪ್ಪಬೇಕಾಗುವುದು. ಅವನ ನಿರ್ಮಲ ಕೃತಿಯಲ್ಲಿ ಕಲೆ ಕಲಂಕಗಳು ಎಲ್ಲಿಯೂ ಕಾಣಸಿಗವು'' ಎಂದ ನಾರದರು ಶಿಬಿರಾಜನ ತ್ಯಾಗವನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಜಗತ್ತಿನಲ್ಲಿ ದಾತೃಗಳು ವಿಪುಲ ಸಂಖ್ಯೆಯಲ್ಲಿ ಇರಬಹುದು. ಆದರೆ ಆ ಔದಾರ್ಯದ ಹಿನ್ನೆಲೆಯಲ್ಲಿ ಹೆಮ್ಮೆ ಪರಿಹಾಸ ಕುಹಕಗಳು ಏನೂ ಇಲ್ಲದೆ ನಮ್ರತೆ ಹಾಗೂ ಪವಿತ್ರ ಭಾವವನ್ನು ಕಾಣುವದು ಬಹಳ ವಿರಳ. ಇಂತಹ ದಾನವನ್ನು ಸಾತ್ತ್ವಿಕವೆಂದು ಗೀತೆಯು ಕರೆದಿದೆ.

ತಪಸ್ಸು

ತಪಸ್ಸಿಗೂ ಸಾಧಕರು ಪ್ರಾಮುಖ್ಯದ ಸ್ಥಾನವನ್ನು ನೀಡುವರು. ಜೀವನದ ಪರಮ ಸುಖವನ್ನು ನಾವು ಶರೀರದ ಆರಾಧನೆಯಿಂದಲೇ ಪಡೆಯಲಾರೆವು. ಕಬ್ಬನ್ನು ಅಭಿಷೇಕ, ಆರತಿಗಳಿಂದ ಪೂಜಿಸಿದರೆ ಆದರ ರಸವು ದೊರಕದು. ಹಿಂಡಿದಾಗಲೇ ಅದರ ಮಧುರ ರಸವನ್ನು ಆಸ್ವಾದಿಸಲು ಸಾಧ್ಯವಾಗುವದು. ಜೀವನದ ಅಮೂಲ್ಯ ರಸವೂ ಶರೀರಕ್ಕೆ ನಾವು ಮಾಡುವ ಷೋಡಶೋಪಚಾರಗಳಿಂದ ದೊರೆಯದು. ನಮ್ಮ ಶರೀರ ಮನಸ್ಸುಗಳಿಗೆ ತಪಸ್ಸಿನ ಸಂಸ್ಕಾರವನ್ನು ನೀಡಿದರೆ ಜ್ಞಾನ ಸುಖಗಳ ಅಮೃತಧಾರೆಯು ಜೀವನದಲ್ಲಿ ಹರಿಯುವುದನ್ನು ನಾವು ಕಾಣಬಲ್ಲೆವು. ನಮ್ಮ ವಾಕ್, ಕಾಯ, ಮನಸ್ಸುಗಳನ್ನು ತಪಸ್ಸಿನಿಂದ ಪವಿತ್ರಗೊಳಿಸಬೇಕು. ಅನುದ್ವೇಗಕರವಾದ, ಸತ್ಯವೂ ಮಧುರವೂ ಆದ ಮಾತೇ ನಮ್ಮ ನಾಲಿಗೆಯಲ್ಲಿರಬೇಕು.

ಸ್ಮಿತಪೂರ್ವಾಭಿಭಾಷೀ ಚ

ಎಂದು ರಾಮಾಯಣದಲ್ಲಿ ಶ್ರೀರಾಮನನ್ನು ವರ್ಣಿಸಲಾಗಿದೆ. ಯಾವಾಗಲೂ ನಗುಮೊಗದ ಮಾತುಗಳಿಂದ ಶ್ರೀರಾಮನು ಜನರ ಹೃದಯವನ್ನು ಸೂರೆಗೊಳ್ಳುತ್ತಿದ್ದನಂತೆ. ಮಾತಿನಲ್ಲಿ ಸೌಂದರ್ಯ ಸೌಜನ್ಯಗಳು ತುಂಬಿರಬೇಕು. ಒರಟು, ಕಠೋರ ಭಾಷೆಯನ್ನು ಬಳಸಬಾರದು. ಇದು ವಾಙ್ಮಯ ತಪಸ್ಸು. ಶಾಸ್ತ್ರದ ಅಭ್ಯಾಸ ಹಾಗೂ ಪ್ರವಚನವನ್ನೂ ವಾಙ್ಮಯ ತಪಸ್ಸೆಂದು ಕರೆಯಲಾಗುವುದು. ಉತ್ತಮ ನಡತೆ, ಇಂದ್ರಿಯನಿಗ್ರಹ, ಅಹಿಂಸೆ, ಪರಮಾತ್ಮನ ಮತ್ತು ಹಿರಿಯರ ಸೇವೆಯನ್ನು ಮಾಡುವುದು ಇವು ಶರೀರ ತಪಸ್ಸು ಎಂದೆನಿಸಿದರೆ ಆತ್ಮನಿಗ್ರಹ, ಮನೋನೈರ್ಮಲ್ಯಗಳೇ ಮಾನಸ ತಪಸ್ಸೆಂದು ಪರಿಗಣಿತವಾಗಿದೆ.

ಇಲ್ಲಿಯೂ ದಂಭ, ದರ್ಪ, ದುರಭಿ ಸಂಧಿಗಳಿಗೆ ಪ್ರವೇಶ ದೊರೆತರೆ ಅದರ ಪಾವಿತ್ರ್ಯ ಹಾಗೂ ಸಾತ್ತ್ವಿಕತೆಯು ಭ್ರಷ್ಟವಾಗುವುದು.

ಜ್ಞಾನ

ಹೀಗೆಯೇ ನಮ್ಮ ಜ್ಞಾನ, ಕೃತಿ, ಸುಖ ಮುಂತಾದ ಎಲ್ಲ ದೈಹಿಕ, ಮಾನಸಿಕ ವ್ಯಾಪಾರಗಳನ್ನು ನಮ್ಮ ಮಾನಸಿಕ ಗುಣದೋಷಗಳ ಹಿನ್ನೆಲೆಯಿಂದ ಸಾತ್ತ್ವಿಕ, ರಾಜಸ, ತಾಮಸಗಳೆಂದು ವರ್ಗೀಕರಿಸಬೇಕು. ಈ ವಿಭಾಗದಿಂದ ಪ್ರತಿಯೊಂದು ಕೃತಿಯನ್ನೂ ಅದರ ಬಾಹ್ಯ ಪರಿಮಾಣಗಳಿಂದ ಅಳೆಯದೆ ಆಂತರಿಕ ಭಾವ ಶುದ್ಧಿಯ ಆಧಾರದಿಂದ ಸತ್, ಅಸತ್ ಕೃತಿಗಳನ್ನು ತೂಗಿನೋಡುವ ವಿವೇಕಶಕ್ತಿಯು ನಮ್ಮಲ್ಲಿ ಬೆಳೆಯುವುದು. ನಾವು ಎಷ್ಟೋ ಧರ್ಮಕೃತಿಗಳನ್ನು ಮಾಡುತ್ತಿದ್ದರೂ ಅವು ಹೇಗೆ ನಮ್ಮ ಮನೋದೋಷಗಳಿಂದ ಕಲುಷಿತವಾಗಿರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಗೀತೆಯು ಮಾಡಿದ ಈ ವಿವೇಚನೆಯು ನಮಗೆ ಸಹಾಯಕವಾಗಿದೆ.

ನಮ್ಮ ಜ್ಞಾನವು ಪ್ರಪಂಚದ ತತ್ತ್ವಗಳನ್ನು ಅವುಗಳ ಯಥಾರ್ಥ ರೂಪದಲ್ಲಿ ಗ್ರಹಿಸಲು ಶಕ್ತವಾದಾಗಲೇ ಅದು ಸಾತ್ತ್ವಿಕವಾಗುವುದು. ಸರ್ವ ವಸ್ತುಗಳಲ್ಲಿಯೂ ಅನುಸ್ಯೂತನಾಗಿರುವ ಸರ್ವೋತ್ತಮನಾದ ಪರಬ್ರಹ್ಮನ ತಿಳಿವಳಿಕೆಯೇ ಸಾತ್ತ್ವಿಕ ಜ್ಞಾನವು.

ಸರ್ವಭೂತೇಷು ಯೇನೈಕಂ
ಭಾವಮವ್ಯಯಮೀಕ್ಷತೇ
ಅವಿಭಕ್ತಂ ವಿಭಕ್ತೇಷು
ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್ ॥

ಕೆಲವರು ಅದ್ವೈತ ಜ್ಞಾನವೇ ಸಾತ್ತ್ವಿಕ ಜ್ಞಾನವೆಂದೂ ದ್ವೈತಜ್ಞಾನವು ರಾಜಸ, ತಾಮಸ ವರ್ಗದಲ್ಲಿ ಅಂತರ್ಗತವಾಗಿದೆಯೆಂದೂ ಇಲ್ಲಿ ವ್ಯಾಖ್ಯಾನವನ್ನು ಬರೆದಿರುವರು. ಇಲ್ಲಿರುವ,

ಅವಿಭಕ್ತಂ ವಿಭಕ್ತೇಷು

ಎನ್ನುವ ವಾಕ್ಯವನ್ನು ಪರಿಶೀಲಿಸುವಲ್ಲಿ ಇಂತಹ ಭ್ರಮೆಗೆ ಅವಕಾಶವಾಗದು. ವಸ್ತುಗಳಲ್ಲಿ ಭೇದವಿದೆ. ಜೀವ ಜಡವರ್ಗದಲ್ಲಿ ಅನೇಕ ರೀತಿಯ ಪರಿಭೇದ ವೈವಿಧ್ಯಗಳಿವೆ. ಈ ಅನಂತ ಭೇದಗಳುಳ್ಳ ಪ್ರಪಂಚವನ್ನು ಏಕಸೂತ್ರಿತಗೊಳಿಸುವ ಪರಮಾತ್ಮನು ಒಬ್ಬನೇ. ಜಗತ್ತಿನಲ್ಲಿರುವ ಭಿನ್ನತೆ ವಿಕಾರಗಳಿಂದ ಅದರೊಳಗೆ ನೆಲೆಸಿರುವ ಭಗವಂತನ ರೂಪಗಳು ಬೇರ್ಪಡುವುದಿಲ್ಲ. ಯಾವ ವಿಕಾರಗಳೂ ಒಳಪಡುವುದಿಲ್ಲ. ಪ್ರತಿ ಶರೀರದಲ್ಲಿ ಜೀವರು ಬೇರೆ ಬೇರೆ ಇರಬಹುದು. ಆದರೆ ವಸ್ತುವಸ್ತುಗಳಲ್ಲಿ ಅವುಗಳ ನಿಯಮನ ಮಾಡಲು ನೆಲಸಿರುವ ಭಗವಚ್ಚೈತನ್ಯವನ್ನು ವಸ್ತು ವಿಭಾಗದಿಂದ ವಿಭಜಿಸಲಾರೆವು. ಅದು ಅಖಂಡವಾಗಿ ಸರ್ವವ್ಯಾಪಿಯಾಗಿ ಏಕಮೇವಾದ್ವಿತೀಯವಾಗಿ ಪರಿಗಣಿತವಾಗಿದೆ. ಈ ಜ್ಞಾನವನ್ನೇ ಇಲ್ಲಿ ಸಾತ್ತ್ವಿಕವೆಂದು ವರ್ಣಿಸಿರುವುದಾಗಿದೆ. ವಸ್ತುಗಳ ಭೇದ, ವೈವಿಧ್ಯಗಳನ್ನು 'ವಿಭಕ್ತೇಷು' ಎಂದು ಸ್ಪಷ್ಟವಾಗಿ ಹೇಳಿ ಅದರೊಳಗಿರುವ ಪರಮಾತ್ಮನ 'ಅವಿಭಕ್ತ' ರೂಪದ ಜ್ಞಾನವನ್ನು ಇಲ್ಲಿ ಸಾತ್ತ್ವಿಕವೆಂದು ಹೇಳಿದೆ.

ಈ ದೃಶ್ಯಪ್ರಪಂಚವನ್ನೂ ಅದರ ಭೇದ ವೈಚಿತ್ರ್ಯವನ್ನೂ ಗ್ರಹಿಸಿದರೂ ಅದರೊಳಗಿನ ಭಗವತ್ತತ್ತ್ವದ ಬಗ್ಗೆ ಮಾತ್ರ ಉದಾಸೀನವೂ ಸಂಶಯಗ್ರಸ್ತವೂ ಆದ ತಿಳುವಳಿಕೆಯೇ ರಾಜಸವಾದ ಜ್ಞಾನವು. ಭೌತಿಕ ವಿಜ್ಞಾನದಿಂದ ಈ ರಾಜಸ ಜ್ಞಾನವೇ ಹೆಚ್ಚಾಗಿ ಬೆಳೆಯುತ್ತದೆ. ಪರಮಾತ್ಮನನ್ನು ಹೊರತು ಉಳಿದ ವಸ್ತುಗಳ ಅಭ್ಯಾಸ ಸಂಶೋಧನೆಗಳು ತೀವ್ರಗತಿಯಿಂದ ನಡೆದಿರುವುದರಿಂದ ವಿಶ್ವದಲ್ಲಿಯ ಸತ್ಯಗಳ

ಅರಿವು ಹೆಚ್ಚುತ್ತಿದ್ದರೂ ಪ್ರಧಾನಸತ್ಯವಾದ ಪರಮಾತ್ಮನನ್ನು ಕಡೆಗಣಿಸಿ ಗೌಣವಸ್ತುಗಳ ಪರಿಜ್ಞಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗುತ್ತದೆ. ಇದು ರಾಜಸ ವೃತ್ತಿಯೇ ಆಗಿದೆ.

ಇನ್ನು ಕಾರ್ಯವಾದ ಈ ದೃಶ್ಯಪ್ರಪಂಚವನ್ನು ಮಾತ್ರ ಒಪ್ಪಿ ಆದರ ಕಾರಣವಾದ ಪರಮಾತ್ಮನನ್ನು ನಿರಾಕರಿಸುವ ನಾಸ್ತಿಕ ವಿಚಾರವು ತಾಮಸ ಜ್ಞಾನವಾಗಿದೆ.

ಯತ್ತು ಕೃತ್ಸ್ನವದೇಕಸ್ಮಿನ್
ಕಾರ್ಯೇ ಸಕ್ತಮಹೈತುಕಮ್ ॥

ಜಗತ್ತಿನ ಒಂದು ಭಾಗವನ್ನು ಪರಿಪೂರ್ಣವಾದ ಜಗತ್ತೆಂದು ಭಾವಿಸಿ ಉಳಿದುದನ್ನು ನಿರಾಕರಿಸುವ ಏಕದೇಶ ಜ್ಞಾನವು ನಮ್ಮನ್ನು ತಪ್ಪುದಾರಿಗೆ ಎಳೆಯುವ ತಾಮಸಜ್ಞಾನವಾಗಿದೆ. ಜೀವವನ್ನು ಮಾತ್ರ ಅಂಗೀಕರಿಸಿ ಅವನಿಂದ ವ್ಯತಿರಿಕ್ತವಾದ ಬ್ರಹ್ಮವಸ್ತುವನ್ನು ನಿರಾಕರಿಸುವ, ಜಗದೀಶ್ವರನನ್ನು ಅಲ್ಲಗಳೆದು ದೃಶ್ಯಜಗತ್ತು ಮಾತ್ರ ಸತ್ಯವೆನ್ನುವ ಬ್ರಹ್ಮನನ್ನು ಮಾತ್ರ ಒಪ್ಪಿ ಜಗತ್ತನ್ನು ಮಿಥ್ಯೆ ಎಂದು ಗ್ರಹಿಸುವ, ಏಕದೇಶವನ್ನೇ ಸರ್ವಜ್ಞವೆಂದು ಭಾವಿಸುವ ಜ್ಞಾನಗಳೆಲ್ಲವೂ ತಾಮಸಜ್ಞಾನದ ಪ್ರಭೇದಗಳೇ.

ಸುಖ

ಸುಖವೂ ಇದೇ ರೀತಿಯಲ್ಲಿ ಅನೇಕ ಬಗೆಯದಾಗಿವೆ. ಸುಖವನ್ನು ಪಡೆಯಲು ನಾವು ಬಳಸುವ ಸಾಮಗ್ರಿಯನ್ನನುಸರಿಸಿ ಸುಖದ ವಿಭಾಗವನ್ನು ಮಾಡಬೇಕು. ವೈಷಯಿಕ ಪದಾರ್ಥಗಳಿಂದ ತಾತ್ಕಾಲಿಕ ಆನಂದವು ದೊರಕಿದರೂ ಮುಂದೆ ಕ್ಲೇಶದ ಅನುಭವವಾಗುವುದರಿಂದ ವೈಷಯಿಕ ಸುಖವು ರಾಜಸವಾಗಿದೆ. ನಮ್ಮಲ್ಲಿ ಆತ್ಮವಿಸ್ಮೃತಿಯನ್ನು ನಿರ್ಮಿಸಿ ಕತ್ತಲಲ್ಲಿ ಕೆಡಹುವ ವಿಕೃತ ಸುಖವು ಕೊಲೆ, ಸುಲಿಗೆ, ಮದ್ಯಪಾನಗಳಂತಹ ದುಷ್ಟವ್ಯವಹಾರಗಳಲ್ಲಿ ದೊರಕುವುದು. ಇವೆಲ್ಲವೂ ತಾಮಸ ಸುಖದ ಸಾಲಿನಲ್ಲಿ ಸೇರುವುವು. ಆರಂಭದಲ್ಲಿ ಕ್ಲೇಶ ಕಷ್ಟಗಳೊದಗಿದರೂ ಚಿರಕಾಲದ ತೃಪ್ತಿ ಪ್ರಸನ್ನತೆಗಳನ್ನು ನೀಡುವ ತಾತ್ತ್ವಿಕಸುಖವೇ ನಮ್ಮ ಲಕ್ಷ್ಯವಾಗಿರಬೇಕು. ಇದು ಭಗವಂತನ ಜ್ಞಾನ, ಧ್ಯಾನ, ಪ್ರಸಾದಗಳಿಂದಲೇ ದೊರೆಯುವುದು. ಇಂತಹ ನೈಜವಾದ ಸುಖದ ಬದಲು ವೈಷಯಿಕವಾದ ಕೃತ್ರಿಮ ಸುಖವೇ ಮಹತ್ತರವೆಂದು ಅದಕ್ಕಾಗಿ ಜನ ಚಡಪಡಿಸುತ್ತದೆ. ನಿಜವಾದ ಹಾಲಿನ ರುಚಿಯನ್ನೇ ತಿಳಿಯದ ಅಶ್ವತ್ಥಾಮನು ತನಗೂ ಹಾಲು ಬೇಕೆಂದು ತಾಯಿಯಲ್ಲಿ ಹಠಹಿಡಿಯುವನು. ಆದರೆ ತಮ್ಮ ಬಡತನದಲ್ಲಿ ಅಶ್ವತ್ಥಾಮನಿಗೆ ಹಸುವಿನ ಹಾಲನ್ನು ಅವಳು ಎಲ್ಲಿಂದ ಒದಗಿಸುವಳು? ಹಿಟ್ಟಿನ ನೀರನ್ನೇ ಹಾಲೆಂದು ಅವಳು ನೀಡಿದಾಗ ಅದನ್ನು ಕುಡಿದು ತಾನೂ ಹಾಲನ್ನು ಕುಡಿದೆನೆಂಬ ಸಂತಸದಿಂದ ಅಶ್ವತ್ಥಾಮನು ಕುಣಿದಾಡುವನು. ನಮ್ಮ ಆತ್ಮದಲ್ಲಿಯೇ ಇರುವ ನೈಜ ಸುಖದ ಸವಿಯನ್ನು ಅರಿತುಕೊಳ್ಳದೆ ಸಂಸಾರದ ಮೋಹಕವಾದ ಕೃತ್ರಿಮ ಸುಖಕ್ಕಾಗಿ ಬಾಯಿಬಿಡುವ ನಮ್ಮ ಚೇಷ್ಟೆಗಳನ್ನು ನೋಡುವಾಗ ಈ ಅಶ್ವತ್ಥಾಮನ ಕತೆಯು ನೆನಪಾಗುತ್ತದೆ.

ಈ ಲೌಕಿಕವಾದ ಅಲ್ಪ ಸುಖವೇ ಸಂಸಾರದ ಸರ್ವಸ್ವವೆಂದು ಭಾವಿಸುವ ಜನರ ಮೌಢ್ಯ ಅವಿವೇಕಗಳನ್ನು ಮಹಾಭಾರತದಲ್ಲಿ ಬಹು ಸುಂದರವಾಗಿ ಚಿತ್ರಿಸಿದ್ದಾರೆ. ಕಾಡಿನಲ್ಲಿ ನಡೆಯುತ್ತಿದ್ದ ಒಬ್ಬನು ಓಡಿಬರುತ್ತಿರುವ ಹುಲಿಗೆ ಹೆದರಿ ಧಾವಿಸುವ ಭರದಲ್ಲಿ ಪೊದರುಗಳಿಂದ ತುಂಬಿದ ಒಣಬಾವಿಯಲ್ಲಿ ತಲೆಕೆಳಗಾಗಿ ಬಿದ್ದು ಪೊದರಿನಲ್ಲಿ ಸಿಲುಕಿ ಮಧ್ಯದಲ್ಲಿಯೇ ಜೋತಾಡುತ್ತಿದ್ದಾನೆ. ಕೆಳಗೆ ಬಾವಿಯ ಪ್ರಪಾತ, ಮೇಲೆ ಹುಲಿಯು ಇವನಿಗಾಗಿ ಹೊಂಚುಹಾಕುತ್ತಿದೆ. ಬಾವಿಯಲ್ಲಿಯ ಒಂದು ಹಾವು ಇವನನ್ನು ಕಚ್ಚಲು ಮೇಲೇರಿ ಬರುತ್ತಿದೆ. ಇವನು ಆಧರಿಸಿದ ಪೊದರುಗಳೂ ಶಿಥಿಲವಾಗುತ್ತಿವೆ. ಇವನು ಬೀಳುವ ಭರದಲ್ಲಿ ಅಲ್ಲಿಯೇ ಇದ್ದ ಜೇನುನೊಣಗಳ ಗೂಡು ಒಡೆದು ಆ ನೊಣಗಳೆಲ್ಲ ಈತನನ್ನು ಕಚ್ಚುತ್ತಿವೆ. ಇಂತಹ

ಸನ್ನಿವೇಶದಲ್ಲಿ ಜೇನುಗೂಡಿನಿಂದ ಜೇನುತುಪ್ಪದ ತುಂತುರು ಹನಿಗಳು ಇವನ ಬಾಯೊಳಗೆ ಬಿದ್ದಾಗ ಈ ಗಂಡಾಂತರ ಸ್ಥಿತಿಗಳೆಲ್ಲವನ್ನೂ ಮರೆತು ಜೇನು ಬಹು ರುಚಿಯಾಗಿದೆ ಎಂದು ಬಾಯಿ ಚಪ್ಪರಿಸುತ್ತಿದ್ದನಂತೆ. ಇದೇ ಮೂಢತನವನ್ನು ಈ ಸಂಸಾರದಲ್ಲಿ ನಾವು ತೋರಿಸುತ್ತಿದ್ದೇವೆ. ಒಂದು ಕಡೆ ಮುಪ್ಪು, ಇನ್ನೊಂದು ಕಡೆ ಮೃತ್ಯು, ಹಾವು ಹುಲಿಗಳಂತೆ ನಮ್ಮನ್ನು ಆಕ್ರಮಿಸುತ್ತಿದ್ದರೂ ಆಯುಷ್ಯದ ಪೊದರು ಕ್ಷೀಣಿಸುತ್ತಿದ್ದರೂ ಸಂಸಾರ ತಾಪತ್ರಯಗಳು ನೊಣಗಳಂತೆ ಸಾವಿರಾರು ಕಡೆಗಳಿಂದ ನಮ್ಮನ್ನು ಕಾಡುತ್ತಿದ್ದರೂ ಮಧುವಿನ ಚಿಕ್ಕ ಹನಿಗಳಂತಿರುವ ಸಂಸಾರದ ಅಲ್ಪ ಸುಖಗಳನ್ನೇ ಮೆಲುಕು ಹಾಕುತ್ತ ಅದರ ಸವಿಯಲ್ಲಿಯೇ ನಮ್ಮ ಮುಂದಿರುವ ಗಂಡಾಂತರವನ್ನು ಮರೆಯುವ ಅವಿವೇಕವನ್ನು ನಾವು ತೋರುತ್ತಿದ್ದೇವೆ ಎಂದು ಮಹಾಭಾರತವು ನಮ್ಮ ಭೌತಿಕ ಸುಖದ ಲವಲವಿಕೆಯನ್ನು ಮೂದಲಿಸಿದೆ. ಇಂತಹ ರಾಜಸ, ತಾಮಸ ಸುಖಗಳ ಆಕರ್ಷಣೆಗೆ ಒಳಗಾಗದೆ ಧ್ಯಾನ ಸಾಕ್ಷಾತ್ಕಾರಗಳಿಂದ ಪಡೆಯಬಹುದಾದ ನೈಜ ಸುಖದ ಕಡೆಗೆ ನಮ್ಮ ಗಮನವನ್ನು ಕೇಂದ್ರೀಕರಿಸಬೇಕು.

ತ್ಯಾಗ ಮತ್ತು ಸನ್ಯಾಸ

ನಮ್ಮ ಪ್ರತಿಯೊಂದು ಕ್ರಿಯೆಯಲ್ಲಿಯೂ ಸತ್ತ್ವ, ರಜ, ತಮಗಳ ಈ ಗತಿವಿಧಿಯನ್ನು ಪರಿಶೀಲಿಸಿದಷ್ಟೂ ನಮ್ಮ ಎಲ್ಲ ಕೃತಿಗಳನ್ನೂ ವಿಶ್ಲೇಷಿಸಿ ಆತ್ಮನಿರೀಕ್ಷಣೆ ಮಾಡಲು ಅನುಕೂಲವಾಗುತ್ತದೆ.

ನ ತದಸ್ತಿ ಪೃಥಿವ್ಯಾಂ ವಾ
ದಿವಿ ದೇವೇಷು ವಾ ಪುನಃ।

ಜಗತ್ತಿನ ಪ್ರತಿಯೊಬ್ಬರೂ ಈ ಮೂರು ಗುಣಗಳ ಪ್ರಭಾವಕ್ಕೆ ಸಿಲುಕಿದವರೇ. ಈ ತ್ರಿಗುಣಗಳಿಂದಾಗಿ ನಾವು ಮಾಡುತ್ತಿರುವ ಧರ್ಮಾಚಾರಗಳೆಲ್ಲ ಎಂತಹ ವಿಕೃತ ರೂಪವನ್ನು ತಳೆಯುತ್ತವೆ ಎಂಬ ಪರಿವೆಯೂ ಇಲ್ಲದೆ ನಮ್ಮ ವ್ಯವಹಾರಗಳನ್ನು ಸಾಗಿಸುತ್ತಿರುವೆವು. ಧರ್ಮಾಚರಣೆಯಲ್ಲಿ ರಜಸ್ಸು, ತಮಸ್ಸುಗಳಿಂದ ಸಂಭವಿಸಬಹುದಾದ ವಿಕೃತಿಯನ್ನು ಕಂಡಾಗ ಈ ಧರ್ಮಾಚರಣೆಯೇ ಬೇಡವೆಂದೂ ನಮಗೆ ಅನಿಸಬಹುದು. ಎಷ್ಟು ಜಾಗರೂಕತೆಯಿಂದ ಕರ್ಮಗಳನ್ನು ಆಚರಿಸಿದರೂ ಈ ಪ್ರಕೃತಿಗುಣಗಳಿಂದಾಗಿ ಅಲ್ಲಿ ದೋಷಗಳು ನುಸುಳುವುದಿಲ್ಲ. ಈ ದೋಷಯುಕ್ತವಾದ ಕರ್ಮವನ್ನು ಆಚರಿಸುವುದಕ್ಕಿಂತ ಅದನ್ನು ಸರ್ವಾತ್ಮನಾ ತೊರೆಯುವುದೇ ಲೇಸೆಂಬ ಭಾವನೆಯುಂಟಾಗುವ ಅವಕಾಶವೂ ಇದೆ.

ತ್ಯಾಜ್ಯಂ ದೋಷವದಿತ್ಯೇಕೇ
ಕರ್ಮ ಪ್ರಾಹುರ್ಮನೀಷಿಣಃ।

ದೋಷಯುಕ್ತವಾದ ಈ ಕರ್ಮವನ್ನು ಬಿಡಬೇಕೆಂದು ಕೆಲ ಮುನೀಷಿಗಳು ಹೇಳಿದ್ದಾರೆ.

ಯಜ್ಞದಾನತಪಃಕರ್ಮ
ನ ತ್ಯಾಜ್ಯಮಿತಿ ಚಾಪರೇ।

ಜೀವನದ ಪಾವನತೆಗೆ ಸಾಧನಗಳಾದ ಯಜ್ಞ, ದಾನ, ತಪಸ್ಸುಗಳನ್ನು ಸರ್ವಥಾ ತೊರೆಯಬಾರದೆಂಬ ಆದೇಶವನ್ನು ಕೆಲವರು ನೀಡಿರುವರು. ವಿರುದ್ಧವಾದ ಇವೆರಡು ವಿಚಾರಗಳಲ್ಲಿ ನಾವು ಯಾವುದನ್ನು ಆರಿಸಬೇಕೆನ್ನುವುದೇ ನಮ್ಮ ಮುಂದಿರುವ ಪ್ರಶ್ನೆಯಾಗಿದೆ.

ನ ಹಿ ದೇಹಭೃತಾ ಶಕ್ಯಂ
ತ್ಯಕ್ತುಂ ಕರ್ಮಾಣ್ಯಶೇಷತಃ।

ಆದರೆ ಜೀವಿಗಳಿಗೆ ಕರ್ತವ್ಯವನ್ನು ಪೂರ್ತಿಯಾಗಿ ತೊರೆಯಲು ಸಾಧ್ಯವೇ? ಆಹಾರ ವ್ಯವಹಾರಾದಿಗಳಿಗೆ

ಅವಶ್ಯವೆನಿಸಿದ ಕರ್ಮಗಳನ್ನು ಬಿಟ್ಟಿರಲು ಯಾರಿಂದಲೂ ಸಾಧ್ಯವಿಲ್ಲ. ಕರ್ಮಗಳಲ್ಲಿ ದೋಷವಿದೆ, ಅದನ್ನು ತೊರೆಯಬೇಕೆನ್ನುವ ಆತುರ ಸ್ನಾನ, ಸಂಧ್ಯಾವಂದನ, ದೇವರ ಪೂಜೆ, ಸಮಾಜ ಸೇವೆಯಂತಹ ಲೋಕೋಪಯುಕ್ತ ಕಾರ್ಯಗಳನ್ನು ಪರಿತ್ಯಜಿಸುವುದರಲ್ಲಿಯೇ ಪರ್ಯವಸಾನ ಹೊಂದುವುದು. ಲೌಕಿಕ ಜೀವನೌಪಾಯಿಕ ಕಾರ್ಯಗಳನ್ನಂತೂ ಬಿಡಬೇಕೆಂದರೂ ಬಿಡಲು ಸಾಧ್ಯವೇ ಇಲ್ಲ. ಸುಲಭವಾಗಿ ಪರಿತ್ಯಜಿಸಬಹುದಾದ ಕಾರ್ಯಗಳೆಂದರೆ ಆತ್ಮನ ಉನ್ನತಿಗೆ ಕಾರಣಗಳಾಗುವ ಪುಣ್ಯಕೃತಿಗಳು ಮಾತ್ರ. ಇತರ ಭೋಗಕಾರ್ಯಗಳನ್ನೆಲ್ಲ ಮಾಡಿಕೊಂಡು ಧರ್ಮಾಚರಣೆಯನ್ನು ಮಾತ್ರ ಬಿಡುವುದರಲ್ಲಿ ಏನರ್ಥವಿದೆ? ಹೀಗೆ ನಮ್ಮ ಮನಸ್ಸು ಕರ್ಮದ ಪರಿತ್ಯಾಗ ಹಾಗೂ ಆಚರಣೆಯ ನಡುವೆ ತೂಗುಯ್ಯಾಲೆಯಲ್ಲಿ ಹೊಯ್ದಾಡುತ್ತಿದೆ. ಗೀತೆಯು ಈ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಿದೆ. ಕರ್ಮಾಚರಣೆ ಬೇಡ, ಬೇಕು ಎನ್ನುವ ಎರಡು ವಾದಗಳ ಸಮನ್ವಯವನ್ನು ಗೀತೆಯು ಮಾಡಿದೆ. ಕರ್ಮವನ್ನು ತ್ಯಜಿಸುವುದೆಂದರೆ ಅದರಲ್ಲಿ ದೋಷವು ತಗಲದಂತೆ ಆಸಕ್ತಿ ಮತ್ತು ಫಲಾಪೇಕ್ಷೆಯನ್ನು ತೊರೆಯುವುದೇ ಆಗಿದೆ ಎನ್ನುವ ಆಶಯವನ್ನು ಗೀತೆಯು ವಿವರಿಸಿದೆ. ಸಾಮಾನ್ಯ ಜನರು ಕರ್ಮ ಮತ್ತು ಅದರ ಲೌಕಿಕ ಫಲ ಇವೆರಡರಲ್ಲಿಯೂ ದೃಷ್ಟಿಯನ್ನಿಟ್ಟಿದ್ದರೆ ಅವುಗಳಲ್ಲಿ ಕರ್ಮವನ್ನು ಮಾತ್ರ ಪರಿಗ್ರಹಿಸಿ ಫಲವನ್ನು ಪರಿತ್ಯಜಿಸುವುದೇ ಕರ್ಮತ್ಯಾಗ ಹಾಗೂ ಕರ್ಮಾನುಷ್ಠಾನದಲ್ಲಿ ಈ ತ್ಯಾಗವೃತ್ತಿಯನ್ನಾಗಲೀ ಸನ್ಯಾಸ ವೃತ್ತಿಯನ್ನಾಗಲೀ ಜೋಡಿಸುವುದರಿಂದ ಕರ್ಮಗಳನ್ನು ಆಚರಿಸಿದರೂ ಅದರ ದೋಷ ಬಂಧನಗಳಿಗೆ ನಾವು ಗುರಿಯಾಗುವುದಿಲ್ಲ.

ತ್ಯಾಗ ಸನ್ಯಾಸಗಳಲ್ಲಿರುವ ಅಂತರವನ್ನೂ ನಾವು ಇಲ್ಲಿ ಪರಿಶೀಲಿಸಬೇಕಾಗಿದೆ. ತನಗಾಗಿ ಲೌಕಿಕ ಫಲವನ್ನು ಬಯಸದಿದ್ದರೂ ಪರರ ಲೌಕಿಕ ಸುಖಕ್ಕಾಗಿ ಸ್ವಂತದ ಅಪೇಕ್ಷೆಯಿಲ್ಲದೆ ಮಾಡುವ ಕರ್ತವ್ಯದಲ್ಲಿ ತ್ಯಾಗ ವೃತ್ತಿಯಿದೆ. ತನ್ನಂತೆಯೇ ಪರರಿಗೂ ಲೌಕಿಕ ಸುಖವನ್ನು ಅಪೇಕ್ಷಿಸದೆ ಅವರಿಗೂ ಜ್ಞಾನ ಭಕ್ತಿ ಹರಿಪ್ರಸಾದಗಳನ್ನು ಮಾತ್ರ ಬಯಸಿ ಉನ್ನತ ಭಾವನೆಯಿಂದ ಮಾಡುವ ಕರ್ಮದಲ್ಲಿ ಸನ್ಯಾಸವೃತ್ತಿಯು ಅಡಕವಾಗಿದೆ. ಈ ತ್ಯಾಗ ಸನ್ಯಾಸಗಳೆರಡರಲ್ಲಿಯೂ ಕರ್ಮಾಚರಣೆಯು ಅನಿವಾರ್ಯವೇ. ಅನ್ಯರ ಸುಖಕ್ಕಾಗಿ ಹಾತೊರೆದು ಅನುಕಂಪ ಭಾವದಿಂದ ಸ್ವಸುಖನಿರಪೇಕ್ಷವಾಗಿ ಪ್ರವರ್ತಿಸುವ ಕರ್ಮಯೋಗಿಯ ತ್ಯಾಗದಲ್ಲಿ ಹಿರಿತನವಿದ್ದರೂ ತನ್ನಂತೆಯೇ ಅನ್ಯರ ಆಧ್ಯಾತ್ಮಿಕ ಉನ್ನತಿಯನ್ನೇ ಬಯಸುವ ಸನ್ಯಾಸಿಯ ಮನೋಭಾವವು ಹೆಚ್ಚು ಉದಾತ್ತವಾದುದು. ಇವರಿಬ್ಬರ ಆಚರಣೆಗಳೂ ಕರ್ಮದ ದೋಷಗಳನ್ನು ದಾಟಿ ನಿಂತಿವೆ. ವೈರಾಗ್ಯ, ಭಕ್ತಿಗಳ ಧಾರೆಯಲ್ಲಿ ತೊಳೆದು ಸಿದ್ಧಗೊಳಿಸಿದ ಈ ಕರ್ಮದ ಪಕ್ವಾನ್ನದಲ್ಲಿ ಆಸಕ್ತಿಯುಕ್ತ ಕರ್ಮಗಳಲ್ಲಿರುವ ಕಹಿ ದುರ್ಗಂಧಗಳು ಕಾಣಸಿಗವು. ಇಂತಹ ಕರ್ಮವನ್ನು ಸಾತ್ತ್ವಿಕವೆಂದು ಗೀತೆಯು ನಿರ್ದೇಶಿಸಿದೆ.

ಶರಣಾಗತಿ

ಈ ವರೆಗಿನ ವಿಸ್ತೃತ ನಿರೂಪಣೆಯಿಂದ ಅರ್ಜುನನ ಪ್ರಶ್ನೆಗಳಿಗೆಲ್ಲ ಸರಿಯಾದ ಸಮಾಧಾನವು ದೊರೆತಿದೆ . ಆತ್ಮ, ಪರಮಾತ್ಮ ಹಾಗೂ ಪ್ರಾಕೃತ ಜಡಪದಾರ್ಥಗಳ ಪರಸ್ಪರ ಸಂಬಂಧ ಮತ್ತು ಪ್ರಪಂಚದಲ್ಲಿ ಅವುಗಳ ಕಾರ್ಯವಿಭಾಗ ಹಾಗೂ ಶಕ್ತಿ ಸ್ವಭಾವಗಳ ಸವಿಸ್ತರ ವಿವೇಚನೆಯಾಗಿದೆ. ಇದರಿಂದ ಜಗತ್ತಿನಲ್ಲಿ ವ್ಯಕ್ತಿಯ ಪಾತ್ರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಅವಕಾಶವಾಗಿದೆ. ಪ್ರಕೃತಿಯ ಸಂಬಂಧವು ಅನಾದಿ ಕಾಲದಿಂದ ಜೀವರಿಗೆ ಇದೆ. ಎಷ್ಟು ಕಾಲದಿಂದ ಜೀವರಿರುವರೋ ಅಷ್ಟು ಕಾಲದಿಂದಲೂ ಪ್ರಕೃತಿಯ ಆವರಣವು ಅವರನ್ನು ನಿರ್ಬಂಧಿಸಿದೆ. ಬೇಡವೆಂದರೂ ಪ್ರಕೃತಿಸಂಬಂಧವಿರುವವರೆಗೆ ಅದರ ಕಾರ್ಯಪರಿಣಾಮಗಳಿಗೆ ನಾವು ಒಳಗಾಗಲೇಬೇಕು. ಈ

ಪ್ರಕೃತಿಯಿಂದ ಅತೀತರಾಗುವುದೇ ನಮ್ಮ ಗುರಿಯಾಗಿದ್ದರೂ ಈ ಪ್ರಾಕೃತ ಜಗತ್ತಿನಲ್ಲಿ ಇರುವವರೆಗೆ ನಮ್ಮಲ್ಲಿರುವ ಸಾಧನಸಾಮಗ್ರಿಯನ್ನೂ ಪ್ರಕೃತಿಯ ಶಕ್ತಿಯನ್ನೂ ಯೋಗ್ಯ ರೀತಿಯಿಂದ ಬಳಸಿಕೊಂಡು ನಮ್ಮ ಗುರಿಯನ್ನು ಮುಟ್ಟುವ ದಾರಿಯಲ್ಲಿ ನಡೆಯಬೇಕು. ಪ್ರಕೃತಿಯ ಸಂಬಂಧದಿಂದ ಮಾನವನಿಗೆ ಈ ಸಂಸಾರದ ಕ್ಲೇಶ ತಾಪಗಳೊದಗಿವೆ ಎಂದು ಅದರ ಮೇಲಿನ ದ್ವೇಷದಿಂದ ಈ ಜಗತ್ತಿನ ಯಾವ ವ್ಯವಹಾರಗಳೂ ಬೇಡವೆಂದು ನಿಷ್ಕ್ರಿಯರಾಗಿ ಕುಳಿತುಕೊಳ್ಳುವುದರಿಂದ ನಾವು ಏನನ್ನೂ ಸಾಧಿಸಿದಂತಾಗುವುದಿಲ್ಲ. ಪ್ರಕೃತಿಯ ಬಂಧನದಲ್ಲಿ ನಾವಿರುವೆವೆಂಬ ವಸ್ತುಸ್ಥಿತಿಯನ್ನು ಅರಿತು ಶಿಸ್ತು ಸಂಯಮಗಳಿಂದ ಇಲ್ಲಿ ವರ್ತಿಸಿ ಈ ಕಾರಾಗೃಹದಿಂದ ಬಿಡುಗಡೆಯಾಗಬೇಕೆಂಬುದನ್ನು ನಾವು ತಿಳಿದಿರಬೇಕು. ಪ್ರಕೃತಿಯನ್ನು ದ್ವೇಷಿಸಿ ಜಗತ್ತಿನ ಕರ್ತವ್ಯಗಳಲ್ಲಿ ಪಾಲುಗೊಳ್ಳದಿರುವುದರಿಂದ ನಮ್ಮ ಪ್ರಕೃತಿಗೇ ನಾವು ತಡೆಯನ್ನುಂಟುಮಾಡಿಕೊಂಡಂತಾಗುವುದು. ಈ ಪ್ರಕೃತಿಯ ಸಾಗರವನ್ನು ದಾಟಬೇಕೆನ್ನುವುದು ನಮ್ಮ ಅದಮ್ಯ ಆಕಾಂಕ್ಷೆಯಾಗಿದ್ದರೆ ನಾವು ಪ್ರಕೃತಿಯ ಈಚೆಯ ದಡದಲ್ಲಿಯೇ ಕುಳಿತು ಸಾಗರದಲ್ಲಿ ಇಳಿಯಬೇಕೇ ಬೇಡವೇ ಎಂದು ದೋಲಾಯಮಾನ ಚಿತ್ತದಿಂದ ಸಂಶಯಾಸ್ಕಂದಿತ ಮನಸ್ಕರಾಗಿ ಕಾಲಹರಣಮಾಡುವುದರಿಂದ ಏನು ಸಾಧಿಸಿದಂತಾಗುವುದು? ಧೈರ್ಯದಿಂದ ಈ ಸಂಸಾರಸಾಗರದಲ್ಲಿ ನಾವು ಧುಮುಕಲೇಬೇಕು.

ಈಸಬೇಕು ಇದ್ದು ಜೈಸಬೇಕು।

-ಶ್ರೀ ಪುರಂದರದಾಸರು

ಈ ಪ್ರವಾಹದಲ್ಲಿ ಇಳಿದರೂ ಅದರಲ್ಲಿ ಮುಳುಗದೆ ಈಸಿ ಜೈಸುವ ಕಲೆಯನ್ನು ಗೀತೆಯು ನಮಗೆ ಹೇಳಿದೆ. ಆಸಕ್ತಿ, ಮೋಹಗಳ ಪಾಶವನ್ನು ಬಿಗಿದುಕೊಂಡು ಈ ಜಗತ್ತಿನಲ್ಲಿ ಇಳಿದರೆ ನಾವು ಇದರಿಂದ ಪಾರಾಗುವ ಸಂಭವವೇ ಇಲ್ಲ. ಅನಾಸಕ್ತಿಯಿಂದ ವಿಹಿತ ಕರ್ತವ್ಯಗಳನ್ನು ಆಚರಿಸಿಕೊಂಡಿದ್ದರೆ ಜಗತ್ತಿನ ಈ ಕರ್ಮ ಪ್ರವಾಹದಲ್ಲಿದ್ದರೂ ಅದರ ಯಾವ ಸೆಳೆತ ಸುಳಿಯೊಳಗೆ ಸಿಲುಕದೆ ಸಾಗಲು ನಮಗೆ ಸಾಧ್ಯವಾಗುವುದು.

ಜಗತ್ತಿನಲ್ಲಿದ್ದರೂ ಅದರ ಬಂಧವು ಬಿಗಿಯಾಗದಂತೆ ಅದರ ಸೆಳೆತದಲ್ಲಿ ಕೊಚ್ಚಿಹೋಗದಂತೆ ನಾವು ಎಷ್ಟು ಎಚ್ಚರ ವಹಿಸಿದರೂ ಸಾಲದು. ಈ ಬಂಧನದಿಂದ ಪೂರ್ಣವಾಗಿ ಬಿಡುಗಡೆ ಹೊಂದುವ ಬಗೆಯನ್ನು ಆಲೋಚಿಸಬೇಕು. ಅನಾದಿಯಿಂದ ಈ ಪ್ರಕೃತಿಬಂಧದ ವಿಮೋಚನೆಯು ನಮ್ಮ ಶಕ್ತಿಗೆ ಮೀರಿದುದಾಗಿದೆ. ಇದು ನಮ್ಮ ಶಕ್ತಿಗೆ ಒಳಪಡುತ್ತಿದ್ದರೆ, ಇದನ್ನು ಅಡಗಿಸುವ ತೇಜಸ್ಸು ನಮ್ಮಲ್ಲಿ ಸ್ವಯಂಸಿದ್ಧವಾಗಿದ್ದರೆ ಈ ಕ್ಲೇಶ ವಿಪ್ಲವಗಳಿಗೆ ನಾವು ಈಡಾಗುತ್ತಿರಲಿಲ್ಲ. ಇದಕ್ಕಾಗಿ ಪ್ರಕೃತಿ ಜೀವರನ್ನೆಲ್ಲ ಮೀರಿಸುವ ವಿಶ್ವದ ಮಹಾಶಕ್ತಿಯ ಆಸರೆಯನ್ನು ಪಡೆಯಬೇಕು.

ತ್ವಮೇವ ಶರಣಂ ಗಚ್ಛ
ಸರ್ವಭಾವೇನ ಭಾರತ।

ಅವನಲ್ಲಿ ಶರಣಾಗತರಾಗದೆ, ಅವನಲ್ಲಿ ಅನನ್ಯಭಕ್ತಿಯಿಂದ ನಡೆಯದೆ ಇದ್ದರೆ ನಮ್ಮ ಜೀವನದ ಈ ಮಹಾ ಲಕ್ಷ್ಯವನ್ನು ಮುಟ್ಟಲಾರೆವು. ಮಗುವಿನ ಕೈಯಲ್ಲಿ ಮೂಸಂಬಿಯನ್ನು ಇತ್ತಂತೆ ನಮ್ಮ ಸ್ವರೂಪಾನಂದದ ನಿಧಿಯು ನಮ್ಮ ಕೈಯಲ್ಲೇನೋ ಇದೆ. ಮೂಸಂಬಿಯ ಹೊರ ಸಿಪ್ಪೆಯನ್ನು ತೆಗೆಯಲು ಮಗುವಿಗೆ ಸಾಧ್ಯವಾಗುವುದೇ? ತಾಯಿಯೇ ಅದನ್ನು ಮಗುವಿಗೆ ಸುಲಿದು ನೀಡಬೇಕು. ಅದರಂತೆ ನಮ್ಮ ಸ್ವರೂಪಾನಂದದ ಹೊರಗಿನ ಪ್ರಕೃತಿಯ ಆವರಣವನ್ನು ಕಿತ್ತೊಗೆಯಲು ಸಾಧ್ಯವಾಗದೆ ನಮಗೆ ಈ ಆನಂದದ ನಿಧಿಯು ಇದ್ದರೂ ಇಲ್ಲದಂತೆ. ಭಗವಂತನೇ ತಾಯಿಯ ಮಮತೆಯಿಂದ ಈ ಹೊರ ಆವರಣವನ್ನು ಬಿಡಿಸಬೇಕು.

ಅಜ್ಞಾನಾಂ ಜ್ಞಾನದೋ ವಿಷ್ಣುಃ
ಜ್ಞಾನಿನಾಂ ಮೋಕ್ಷದಶ್ಚ ಸಃ।
-ಅನುವ್ಯಾಖ್ಯಾನ

ನಮಗೆ ಜ್ಞಾನ, ಬಂಧನಿವೃತ್ತಿ ಮುಂತಾದ ಎಲ್ಲಾ ವಿಕಾಸ ಬೆಳವಣಿಗೆಗಳು ಪರಮಾತ್ಮನಿಂದಲೇ ಆಗಬೇಕು. ನಮ್ಮ ಜೀವನದ ಎಲ್ಲಾ ಆಗುಹೋಗುಗಳಿಗೂ ಅವನು ಕಾರಣನು. ಅವನ ಶಕ್ತಿ ಅನುಗ್ರಹಗಳಿಲ್ಲದೆ ನಮ್ಮಿಂದ ಏನೂ ನಡೆಯದೆಂಬುದನ್ನು ಅರಿತು ಸರ್ವಾತ್ಮನಾ ಭಗವಂತನನ್ನು ಆಶ್ರಯಿಸಿಕೊಂಡು ಭಕ್ತಿಪೂರ್ಣ ಮನೋಭಾವದಿಂದ ನಮ್ಮ ಕರ್ತವ್ಯವನ್ನು ಆಚರಿಸಬೇಕು, ಭಕ್ತಿಯೇ ಕರ್ಮದ ಅಂತಃಸತ್ತ್ವವು. ಆ ಸತ್ತ್ವವು ಇಲ್ಲದ ಕರ್ಮಗಳು ರಾಶಿರಾಶಿಯಾಗಿದ್ದರೂ ಅವೆಲ್ಲವೂ ನಿರ್ಜೀವ ಹಾಗೂ ನಿಷ್ಪ್ರಯೋಜನವೇ.

ಸರ್ವಧರ್ಮಾನ್ ಪರಿತ್ಯಜ್ಯ
ಮಾಮೇಕಂ ಶರಣಂ ವ್ರಜ ।

ದೈವೀಭಾವನೆಯಿಲ್ಲದ, ಪರಮಾತ್ಮನ ಕಡೆಗೆ ನಮ್ಮನ್ನು ಒಯ್ಯದ ಕರ್ಮಗಳೆಲ್ಲವೂ ವ್ಯರ್ಥವಾಗಿದೆ, ಅವೆಲ್ಲವನ್ನೂ ನಾವು ಬಿಡಬೇಕು. ಭಗವಂತನಿಗೆ ಸಂಬಂಧಿಸಿದ ಕರ್ಮಗಳನ್ನು ಮಾತ್ರ ಮಾಡಬೇಕು. ಸರ್ವಧರ್ಮಗಳ ತ್ಯಾಗವೆನ್ನುವುದರ ಭಾವವು ಇದೇ ಆಗಿದೆ. ಅಥವಾ ಫಲಾಪೇಕ್ಷೆಯನ್ನು ತ್ಯಜಿಸುವದೇ ಸರ್ವಧರ್ಮಗಳ ತ್ಯಾಗವೆಂದೂ ನಾವು ಭಾವಿಸಬಹುದು.

ಯಸ್ತು ಕರ್ಮಫಲತ್ಯಾಗೀ
ಸ ತ್ಯಾಗೀತ್ಯಭಿಧೀಯತೇ ।

ಎಂಬುದಾಗಿ ಫಲವನ್ನು ತೊರೆಯುವುದೇ ಕರ್ಮದ ನಿಜವಾದ ತ್ಯಾಗವೆಂದು ಗೀತೆಯಲ್ಲಿ ಹಿಂದೆ ಹೇಳಿದೆ. ಕೆಲವರಂತೂ

ಸರ್ವಧರ್ಮಾನ್ ಪರಿತ್ಯಜ್ಯ
ಮಾಮೇಕಂ ಶರಣಂ ವ್ರಜ।

ಎನ್ನುವ ಪದ್ಯವನ್ನು ತಮ್ಮ ಮತೀಯ ವಿಚಾರದ ಕಡೆಗೆ ಬಲಾತ್ಕಾರದಿಂದ ಎಳೆದು ವಿಚಿತ್ರವಾದ ಅರ್ಥವನ್ನು ಮಾಡುವರು. ಈ ವರೆಗೆ ಕರ್ಮಾಚರಣೆ ಹಾಗೂ ಭಕ್ತಿಯ ಬಗ್ಗೆ ಹೆಚ್ಚಿನ ಪ್ರಾಧಾನ್ಯವನ್ನು ಕೊಟ್ಟು ನೀಡಿದ ಉಪದೇಶಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾದ ಮಾತನ್ನು ಅವರು ಪರಮಾತ್ಮನಿಂದ ಹೊರಡಿಸುತ್ತಾರೆ. ಸರ್ವಕರ್ಮಗಳನ್ನು ಪೂರ್ಣವಾಗಿ ಪರಿತ್ಯಜಿಸಲು ತಾನೇ ಪರಮಾತ್ಮನೆಂಬ ಅದ್ವೈತಭಾವದಿಂದ ನಡೆಯಬೇಕೆನ್ನುವುದು ಅವರ ದೃಷ್ಟಿಯಲ್ಲಿ ಈ ಶ್ಲೋಕದ ಅರ್ಥವಾಗಿದೆ. ಅದ್ವೈತಭಾವ ಮತ್ತು ಶರಣಾಗತಿ ಇವೆರಡೂ ಪರಸ್ಪರ ವಿರೋಧಿ ವಿಚಾರಗಳಾಗಿವೆ. ಇದರ ಹಿಂದಿನ ಶ್ಲೋಕದಲ್ಲಿಯೇ ಶ್ರೀಕೃಷ್ಣನು ಅರ್ಜುನನನ್ನು ತನಗೆ ಪರಮ ಇಷ್ಟನೆಂದು ಕರೆದು ಅವನಿಗಾಗಿ ಅತ್ಯಂತ ಪ್ರಧಾನವಾದ ಸಂದೇಶವನ್ನು ಕೊಡುವುದಾಗಿ ಘೋಷಿಸಿ

ಮನ್ಮನಾ ಭವ ಮದ್ಭಕ್ತೋ
ಮದ್ಯಾಜೀ ಮಾಂ ನಮಸ್ಕುರು।

ಎಂಬುದಾಗಿ ಪರಮಾತ್ಮನ ಪ್ರೀತಿಯ ಉದ್ದೇಶದಿಂದ ಮಾಡುವ ಯಜ್ಞರೂಪವಾದ ಕರ್ಮ, ಭಕ್ತಿ ನಮಸ್ಕಾರಗಳನ್ನು ಆಚರಿಸಬೇಕೆಂದೂ ಇವು ಪರಮಶ್ರೇಯಸ್ಸಿಗೆ ಸಾಧನವೆಂದೂ ಹೇಳಿ ಮುಂದಿನ ಶ್ಲೋಕದಲ್ಲಿಯೇ ಅವುಗಳಿಗೆ ಪೂರ್ಣ ವಿರೋಧಿ ಮಾತುಗಳನ್ನು ಕೃಷ್ಣನಿಂದ ನುಡಿಸುವುದು ವಿಸಂಗತಿಯ ಪರಮಾವಧಿಯಾಗುವುದು. 'ಅದ್ವೈತಸಿದ್ಧಿ'ಕಾರರಾದ ಮಧುಸೂದನ ಸರಸ್ವತಿಯವರು ಇದು ಕ್ಲಿಷ್ಟಕಲ್ಪನೆಯೆಂದು ಈ ಅರ್ಥದ ಅಸ್ವಾರಸ್ಯವನ್ನು ತೋರಿಸಿರುವರು. ಇಲ್ಲಿ ಶ್ರೀಕೃಷ್ಣನು ಭಕ್ತಿಯ

ಪರಮೋಚ್ಛ್ರಾಯದಶೆಯಾದ ಶರಣಾಗತಿಯನ್ನು ಉಪದೇಶಿಸಿರುವನು. ಸರ್ವಭಾವದಿಂದ ಪರಮಾತ್ಮನನ್ನು ಆಶ್ರಯಿಸಿ ಪರಮಭಕ್ತಿಯಿಂದ ಕರ್ತವ್ಯಗಳನ್ನು ಆಚರಿಸುವದೊಂದೇ ನಮ್ಮ ಈ ಅನರ್ಥ ವಿಪ್ಲವಗಳ ಏಕಮಾತ್ರ ಪರಿಹಾರೋಪಾಯವಾಗಿದೆ. ಈ ಶರಣಾಗತಿಯ ಭಾವವು ನಮ್ಮ ಪ್ರತಿಯೊಂದು ಕೃತಿಯಲ್ಲಿ ಅನುಸ್ಯೂತವಾಗಿರಬೇಕು.

ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ
ಹರಿಪಾದವಿನಮ್ರಧಿಯಾ ಸತತಮ್।

-ದ್ವಾದಶಸ್ತೋತ್ರ

ಕರ್ಮವನ್ನು ಆಚರಿಸುವಾಗಲೂ ಅದರ ಫಲವನ್ನು ಭೋಗಿಸುವಾಗಲೂ ಹರಿಯ ಸ್ಮರಣೆಯು ನಿರಂತರವಾಗಿರಬೇಕು. ನಮ್ಮ ಶರೀರದ ಅಂಗಾಂಗಗಳಲ್ಲಿ ಚೇತನವು ಹರಿಯುವುದು ಅವಶ್ಯವಿರುವಂತೆ ನಮ್ಮ ಪ್ರತಿಯೊಂದು ಕರ್ಮದಲ್ಲಿ ನಿರಂತರವಾಗಿ ಹರಿಭಕ್ತಿಯು ಹರಿಯಬೇಕು. ಗೀತೆಯಲ್ಲಿ ಸರ್ವ ಪ್ರಧಾನ ವೆಂದು ಉಲ್ಲೇಖಿಸಿ ಅಂತಿಮವಾಗಿ ಬಂದಿರುವ ಈ ಉಪದೇಶವೇ ಗೀತೆಯ ಸಾರ ಸಂದೇಶವಾಗಿದೆ.

ಉಪಸಂಹಾರ

ಸ್ವವಿಹಿತವೃತ್ತ್ಯಾ ಭಕ್ತ್ಯಾ
ಭಗವದಾರಾಧನಂ ಪರಮೋ ಧರ್ಮಃ।

-ಗೀತಾಭಾಷ್ಯ

ಎಂದು ಒಂದು ಮಾತಿನಲ್ಲಿ ಶ್ರೀಮಧ್ವಾಚಾರ್ಯರು ಗೀತೆಯ ಉಪದೇಶದ ಸಾರವನ್ನು ಅರುಹಿದ್ದಾರೆ. ''ವಿಹಿತ ವೃತ್ತಿಯಿಂದ, ಭಕ್ತಿಯಿಂದ ಭಗವಂತನನ್ನು ಆರಾಧಿಸುವುದೇ ಮಾನವರ ಪರಮಧರ್ಮವಾಗಿದೆ.'' ಸಂಸಾರ ಪಾಶದಲ್ಲಿ ಸಿಲುಕದಿರಲು ಮತ್ತು ಪ್ರಕೃತಿಬಂಧದಿಂದ ಪೂರ್ಣ ವಿಮೋಚನೆ ಪಡೆಯಲು ಇದೇ ಜೀವನಿಗಿರುವ ಏಕಮಾತ್ರ ಉಪಾಯವಾಗಿದೆ. ಪ್ರಕೃತಿಗೆ ಹೆದರಿಯಾಗಲೀ ಉದಾಸೀನತೆಯಿಂದಾಗಲೀ ಕರ್ತವ್ಯವನ್ನು ತ್ಯಜಿಸುವುದರಿಂದ ನಾವು ಯಾವ ಪುರುಷಾರ್ಥವನ್ನೂ ಪಡೆಯಲಾರೆವು, ಅದರಂತೆ ಲೌಕಿಕ ಸುಖದ ಬಯಕೆಯಿಂದ ಸ್ವಾರ್ಥಪರಾಯಣರಾಗಿ ಕಾಮ್ಯಕೃತಿಗಳನ್ನೇ ನಡೆಸಿ ಪ್ರಾಕೃತಸುಖವನ್ನು ಸವಿಯು ತ್ತಿದ್ದರೆ ಆ ಪ್ರಕೃತಿಯೇ ನಮ್ಮನ್ನು ಕಬಳಿಸಬಹುದು.

ಸ್ವಕರ್ಮಣಾ ತಮಭ್ಯರ್ಚ್ಯ
ಸಿದ್ಧಿಂ ವಿಂದತಿ ಮಾನವಃ।

ನಮ್ಮ ಕರ್ತವ್ಯಗಳನ್ನು ಹರಿಪೂಜೆಯೆಂದು ಭಾವಿಸಿ ನಿಷ್ಕಾಮನೆಯಿಂದ ಅದನ್ನು ಆಚರಿಸಬೇಕು. ವಿಷಯಸುಖದ ಮೇಲಿನ ವಿರಕ್ತಿಯಿಂದ ಈ ನಿಷ್ಕಾಮನೆಯನ್ನು ನಾವು ಅಳವಡಿಸಿಕೊಳ್ಳಬಹುದು. ಹರಿಭಕ್ತಿ ಮತ್ತು ವಿಷಯವಿರಕ್ತಿ ಇವೆರಡೂ ನಮ್ಮ ಪ್ರತಿಯೊಂದು ಕರ್ತವ್ಯದಲ್ಲಿಯೂ ಅಡಕವಾಗಿದ್ದಲ್ಲಿ ನಾವು ನಿರ್ಭೀತಿಯಿಂದ ಯಾವ ವಿಪ್ಲವಕ್ಕೂ ಗುರಿಯಾಗದಂತೆ ಜಗತ್ತಿನಲ್ಲಿ ನಡೆಯಲು ಸಾಧ್ಯವಾಗುವುದು. ಸಂಸಾರವನ್ನು ಈಸಿ ಅದನ್ನು ಜಯಿಸಲು ನಮಗೆ ಏನೂ ಪ್ರಯಾಸವಾಗಲಾರದು. ಪ್ರಾಪಂಚಿಕ ಜೀವನ ದಿಂದ ನಾವು ವಿಮುಖರೂ ಆಗಬಾರದು. ಪ್ರಪಂಚದಲ್ಲಿಯೇ ತಲ್ಲೀನರೂ ಆಗಬಾರದು. ಇಂದು ಈ ಎರಡು ವಿಧದ ಪ್ರವೃತ್ತಿಗಳನ್ನು ಎಲ್ಲೆಡೆಗಳಲ್ಲಿಯೂ ನೋಡುತ್ತಿರುವೆವು. ಆಲಸ್ಯ, ಕರ್ತವ್ಯಭ್ರಷ್ಟತೆಗಳು ಒಂದೆಡೆ ವ್ಯಾಪಿಸಿದ್ದರೆ ಸಂಪತ್ತು ಅಧಿಕಾರಗಳ ಮೇಲಿನ ಮೋಹದಿಂದ ಸ್ವಾರ್ಥ ಪ್ರವೃತ್ತಿಗಳಲ್ಲಿ ಪೂರ್ಣ ವಾಗಿ ಮಗ್ನವಾಗಿರುವ ಜನ ಇನ್ನೊಂದೆಡೆ. ಜಗತ್ತು ಮಾಯೆಯೆಂದಾಗಲೀ ಬಂಧನವೆಂದಾಗಲೀ ಭಾವಿಸಿ ಕರ್ತವ್ಯವನ್ನು ತೊರೆಯುವುದು ಮತ್ತು ಈಶ್ವರನನ್ನು ಮರೆತು ಅಥವಾ ಅಲಕ್ಷಿಸಿ ರಾಗ, ದ್ವೇಷಪೂರ್ಣ

ಕೃತಿಗಳಲ್ಲಿಯೇ ಆಸಕ್ತರಾಗಿರುವುದು, ಈ ಎರಡು ತರದ ಜೀವನ ರೀತಿಗಳು ನಮ್ಮ ಮುಂದಿದ್ದು ಇವೆರಡೂ ನಮ್ಮ ಪ್ರಗತಿಗೆ ಪ್ರತಿರೋಧಗಳಾಗಿವೆ. ನಮಗೆ ಜೀವನದಿಂದ ವಿಮುಖವಾದ ಧರ್ಮವೂ ಬೇಡ. ಧರ್ಮದಿಂದ ವಿಮುಖವಾದ ಜೀವನವೂ ಸಲ್ಲದು. ಧರ್ಮ ಭಕ್ತಿಗಳನ್ನು ಅಳವಡಿಸಿಕೊಂಡ ಉದಾತ್ತ ಜೀವನ ರೀತಿಯನ್ನು ನಾವಿಂದು ರೂಪಿಸಿಕೊಳ್ಳಬೇಕು. ತಾಮಸ, ರಾಜಸ ಪ್ರವೃತ್ತಿಗಳಿಗೆ ತಲೆಬಾಗದೆ ನಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಪರಮಾತ್ಮನ ಭಕ್ತಿಯ ಹಿನ್ನೆಲೆಯಲ್ಲಿ ಆಚರಿಸುವುದರಿಂದಲೇ ಜೀವನದ ಮಹೋನ್ನತ ಶ್ರೇಯಸ್ಸನ್ನು ನಾವು ಪಡೆಯಬಲ್ಲೆವು. ಗೀತೆಯು ಮಾನವ ಜಗತ್ತಿಗೆ ಸಾರಿದ ಮಂಗಲಮಯ ಸಂದೇಶವೇ ಇದಾಗಿದೆ.

ಪರಮಾತ್ಮನ ಮುಖದಿಂದ ಹೊರಟ ಉಪದೇಶದ ಅಮೃತಧಾರೆಯಿಂದ ಅರ್ಜುನನ ಅಂತಃಕರಣಪಟಲದಲ್ಲಿ ಅಂಟಿದ ಮೋಹಮಲಗಳೆಲ್ಲ ಪೂರ್ತಿಯಾಗಿ ಕೊಚ್ಚಿಹೋದವು. ಅವನ ಹೃದಯದಲ್ಲಿ ಸುಪ್ತವಾಗಿದ್ದ ಜ್ಞಾನದ ದಿವ್ಯಾಂಕುರವು ಚಿಗುರಿ ವಿಕಸಿತವಾಯಿತು.

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ
ತ್ವತ್‌ಪ್ರಸಾದಾನ್ಮಯಾಚ್ಯುತ।
ಸ್ಥಿತೋಽಸ್ಮಿ ಗತಸಂದೇಹಃ
ಕರಿಷ್ಯೇ ವಚನಂ ತವ॥

"ನನ್ನ ಮೋಹದ ನಿರಸನವಾಗಿದೆ. ಮೋಹದಿಂದ ಉಂಟಾದ ಅಭಿಭವದಿಂದ ಕಳೆದುಹೋದಂತಿರುವ ಜ್ಞಾನದ ನಿಧಿಯನ್ನು ನಿನ್ನ ಅನುಗ್ರಹದಿಂದ ತಿರುಗಿ ಪಡೆದೆ. ನನ್ನ ಸಂದೇಹ ಸಮಸ್ಯೆಗಳ ನಿವಾರಣೆಯಾಗಿದೆ. ನಿನ್ನ ಆಜ್ಞೆಯಂತೆ ಕರ್ತವ್ಯರಂಗಕ್ಕೆ ಧುಮುಕುವೆ" ಎಂದು ಅರ್ಜುನನು ಪ್ರಸನ್ನ ಹೃದಯದಿಂದ ಭಕ್ತಿ ಉತ್ಸಾಹಗಳಿಂದ ಪರಮಾತ್ಮನಲ್ಲಿ ನಿವೇದಿಸುತ್ತಾನೆ. ಅರ್ಜುನನಿಗೆ ಬಂದಿರುವ ಸಂದರ್ಭ ಸನ್ನಿವೇಶಗಳು ನಮ್ಮೆಲ್ಲರ ಜೀವನದಲ್ಲಿಯೂ ಅನುದಿನವೂ ಸಂಭವಿಸುತ್ತವೆ. ಗೀತೆಯ ಸಂದೇಶವು ಅರ್ಜುನನಿಗೆ ಮಾತ್ರ ಪರಿಸೀಮಿತವಲ್ಲ. ಜಗತ್ತಿನ ಮಾನವರೆಲ್ಲರ ಜೀವನದ ಗೊಂದಲ ವಿಪ್ಲವಗಳನ್ನು ಪರಿಹರಿಸಿ ಉದಾತ್ತ ರೀತಿಯ ಕರ್ತವ್ಯದ ಸ್ಫೂರ್ತಿಯನ್ನು ಗೀತೆಯು ನಮಗೆ ನೀಡುತ್ತದೆ. ಭಾರತದ ಮಹಾ ಯುದ್ಧದಲ್ಲಿ ಒಂದೇ ರಥದಲ್ಲಿ ಅರ್ಜುನನ ಜೊತೆಗೆ ಶ್ರೀಕೃಷ್ಣನು ಸಾರಥಿಯಾಗಿದ್ದು ಹೆಜ್ಜೆ ಹೆಜ್ಜೆಗೂ ಸ್ಫೂರ್ತಿದಾತನಾಗಿ ಅವನನ್ನು ಮುನ್ನಡೆಸಿದ್ದಾನೆ. ಅರ್ಜುನನ್ನು ನರನಾಗಿದ್ದರೆ ಶ್ರೀಕೃಷ್ಣನು ನಾರಾಯಣನಾಗಿದ್ದಾನೆ. ಈ ನರ-ನಾರಾಯಣರ ಜತೆಯಿಂದಲೇ ಅಲ್ಲಿ ವಿಜಯ ಭೂತಿ ನೀತಿಗಳ ಸಮಾವೇಶವಾಗಿದೆ.

ಯತ್ರ ಯೋಗೇಶ್ವರಃ ಕೃಷ್ಣೋ
ಯತ್ರ ಪಾರ್ಥೋ ಧನುರ್ಧರಃ।
ತತ್ರ ಶ್ರೀರ್ವಿಜಯೋ ಭೂತಿಃ
ಧ್ರುವಾ ನೀತಿರ್ಮತಿರ್ಮಮ॥

ನಮ್ಮ ಜೀವನದ ಯುದ್ಧರಂಗದಲ್ಲಿಯೂ ಈ ನರರಿಗೆ ನಾರಾಯಣನೇ ಸಾರಥಿಯಾಗಿರಬೇಕು. ನರರಿಗೆ ತಮ್ಮ ಜೀವನದಲ್ಲಿ ನಾರಾಯಣನ ವಿಯೋಗವಾದುದರಿಂದಲೇ ಇಂದು ಎಲ್ಲೆಡೆಗಳಲ್ಲಿಯೂ ಅನೀತಿ ಮತ್ತು ಆರ್ಥಿಕ ಸಂಕಟದ, ದುಃಖದ ದೃಶ್ಯವನ್ನು ನಾವು ನೋಡುತ್ತಿರುವೆವು. ನಮ್ಮ ಜೀವನದಲ್ಲಿ ನರ-ನಾರಾಯಣರ ಸಮಾಗಮವಾಗಬೇಕು. ಭಗವಂತನನ್ನು ನಾವು ನಮ್ಮ ಸಾರಥಿ, ಸ್ಫೂರ್ತಿದಾತ ಹಾಗೂ ಮಾರ್ಗದರ್ಶಕನನ್ನಾಗಿ ಆರಿಸಬೇಕು. ಆಗಲೇ ನಮ್ಮ ಜೀವನವು ದೈವೀ ಸಂಪತ್ತಿನ ಆಗರವಾಗುವುದು.

('ಗೀತಾಂಜಲಿ', ೧೯೬೧. ಪ್ರ – ಕೇಂದ್ರ ಉತ್ಸವ ಸಮಿತಿ, ಬೆಂಗಳೂರು.)

●

೩-೩೦

ಶ್ರೀಮಧ್ವಾಚಾರ್ಯರ ತತ್ತ್ವಜ್ಞಾನ

– ೧ –

ಭಾರತಭೂಮಿಯು, ವಿವಿಧ ಮತಧರ್ಮಗಳ ತವರುನಾಡು. ನೂರಾರು ಮತಗಳು ಇಲ್ಲಿ ಪ್ರಾದುರ್ಭಾವ ಪಡೆದಿವೆ, ಬೆಳೆದಿವೆ, ಆಶ್ರಯ ಪಡೆದಿವೆ. ಪ್ರಪಂಚದ ಬೇರೆ ಕಡೆಗಳಲ್ಲಿ ಒಂದು ರಾಷ್ಟ್ರದಲ್ಲಿ ಸಾಮಾನ್ಯವಾಗಿ ಒಂದು ಧರ್ಮವೇ ಪ್ರಚಾರದಲ್ಲಿದ್ದರೆ ಈ ದೇಶದಲ್ಲಿ ಅನೇಕ ಮತಗಳ ಅನುಯಾಯಿಗಳು ವಿಶೇಷ ಸಂಖ್ಯೆಯಲ್ಲಿ ನೆಲೆಸಿರುವರು. ಒಂದು ಹಿಂದೂ ಧರ್ಮದಲ್ಲೇ ಆತ್ಯಂತಿಕ ಭಿನ್ನತೆಗಳುಳ್ಳ ಅನೇಕ ಶಾಖೆಗಳು ಬೆಳೆದಿವೆ. ಹೀಗೆ ಅನೇಕ ಮತಗಳಿರುವುದು ರಾಷ್ಟ್ರದ ಅನೈಕ್ಯ ಹಾಗೂ ಅಸಂಘಟನೆಯ ಪ್ರತೀಕವೆಂದೂ ಹೇಳುವವರಿದ್ದಾರೆ. 'ಹಿಂದೂ ಜನತೆ, ಹಾಗೂ ಅದರ ಧುರೀಣರು ಈ ಮತೀಯ ಕಚ್ಚಾಟದ ಕಾರಣವಾಗಿ ಸಾಮೂಹಿಕ ಮನೋಭಾವ ಹಾಗೂ ಸಂಘಟಿತ ಶಕ್ತಿಯನ್ನು ಹೊಂದದೆ ರಾಷ್ಟ್ರವು ಪರಕೀಯ ಸಾಮ್ರಾಜ್ಯ ಲಾಲಸೆಗೆ ಆಹುತಿಯಾಗುವಂತಾಯಿತು. ದೇಶದಲ್ಲಿ ಐಕ್ಯ ಹಾಗೂ ಸ್ವಾತಂತ್ರ್ಯದ ಉಪದೇಶವು ಬೇಕಾಗುವಂತಹ ಗಂಭೀರ ಪ್ರಸಂಗದಲ್ಲಿ ರಾಷ್ಟ್ರವು ವಿದೇಶೀಯ ಆಕ್ರಮಣಕ್ಕೆ ಗುರಿಯಾಗುತ್ತಿರುವ ವಿಷಮ ಸನ್ನಿವೇಶದಲ್ಲಿ ನಮ್ಮ ಮತಾಚಾರ್ಯರುಗಳು ಕಾಲೋಚಿತವಾದ ಧೀರವೃತ್ತಿಯನ್ನು ಅವಲಂಬಿಸದೆ, ಈ ಮತಗಳ ಒಣ ಚರ್ಚೆಗಳಲ್ಲೇ ಆಸಕ್ತರಾಗಿ, ರಾಷ್ಟ್ರವನ್ನು ಪ್ರಪಾತದಲ್ಲಿ ನೂಕಿದರು. ರಾಷ್ಟ್ರದಲ್ಲಿ ಪರಕೀಯ ಧಾಳಿಯಾಗುತ್ತಿರುವ ವೇಳೆಯಲ್ಲಿ ಶಿವನು ಸರ್ವೋತ್ತಮನೇ? ವಿಷ್ಣುವೇ ? ಎಂಬಂತಹ ಚರ್ಚೆಯಲ್ಲಿ ಇವರು ತೊಡಗಿದ್ದರು.'- ಎಂಬಂತಹ ಆಪಾದನೆಗಳು ನಮ್ಮ ಪೂರ್ವಾಚಾರ್ಯರ ಬಗ್ಗೆ ಕೆಲವು ಕಡೆ ಕೇಳಿಬರುತ್ತಿವೆಯಲ್ಲದೆ ಈ ಮತಗಳ ಅನೇಕತೆಯೇ ನಮ್ಮಲ್ಲಿಯ ಅನೈಕ್ಯಕ್ಕೆ ಮೂಲ ಕಾರಣವಾಗಿದೆ ಎಂದು ಕೆಲವು ಜನ ಭಾವಿಸಿದ್ದಾರೆ.

ವಸ್ತುತಃ ಐಕ್ಯಮತ್ಯವು ಜನಾಂಗದಲ್ಲಿ ಕೃತ್ರಿಮವಾಗಿರಬಾರದು. ಬಲಾತ್ಕಾರದಿಂದ ಜನರ ಮೇಲೆ ಹೇರಿಸಲಾದ ಐಕ್ಯಮತವು ಅವಲಕ್ಷಣ ಹಾಗೂ ಅವನತಿಯ ಸಂಕೇತವಾಗುವುದು. ಜನರ ಮನಸ್ಸುಗಳನ್ನು ಜಡ ಯಂತ್ರಗಳಂತೆ ಭಾವಿಸಿ ಐಕ್ಯಮತ್ಯದ ಹೆಸರಿನಿಂದ ಅವುಗಳಲ್ಲಿ ಉದ್ಭವಿಸಬಹುದಾದ ಹೊಸ ಹೊಸ ವಿಚಾರಗಳನ್ನು ಹತ್ತಿಕ್ಕುವುದರಿಂದ ಜನಾಂಗದ ವಿಕಾಸವನ್ನೇ ತಡೆಹಿಡಿದಂತಾಗುವುದು. ಸ್ಮಶಾನ ದಲ್ಲಿರುವಂತಹ ಶಾಂತಿ, ಸರ್ವಾಧಿಕಾರಿ ರಾಷ್ಟ್ರಗಳಲ್ಲಿರುವ ರಾಜಕೀಯ ಐಕ್ಯ ಇಂತಹವುಗಳನ್ನು ಯಾವ ಜನಾಂಗವೂ ಬಯಸಲಾರದು. ನಮ್ಮ ದೇಶದಲ್ಲಿ ನೆಲೆಸಿರುವ ಅನೇಕ ಮತಗಳು ಇಲ್ಲಿಯ ವಿಚಾರ

ಸ್ವಾತಂತ್ರ್ಯದ ಹೆಗ್ಗುರುತುಗಳಾಗಿವೆ. ಪ್ರತಿಯೊಬ್ಬರಿಗೂ ತಮ್ಮ ವಿಚಾರಗಳನ್ನು ಅವು ಅತ್ಯಂತ ಕ್ರಾಂತಿಕಾರಿಗಳಾಗಿದ್ದರೂ ಪ್ರಕಟಿಸಲು ಅವಕಾಶವು ಈ ದೇಶದಲ್ಲಿತ್ತು. ತಮಗೆ ತೋರಿದ ವಿಚಾರಗಳ ಅನುಯಾಯಿಗಳಾಗಿರಲು ಎಲ್ಲರಿಗೂ ಸ್ವಾತಂತ್ರ್ಯವಿತ್ತು. ಬೇರೆ ದೇಶಗಳಲ್ಲಿ ಅಧಿಕಾರದಲ್ಲಿರುವ ಒಂದು ಮತೀಯರು ಇನ್ನೊಂದು ಮತೀಯರನ್ನು ಜೀವಂತವಾಗಿ ಸುಡುತ್ತಿರುವ ಕಾಲದಲ್ಲಿ ಈ ದೇಶದಲ್ಲಿ ರಾಜರುಗಳು ತಮ್ಮ ರಾಜ್ಯದ ಹಿಂದೂ ಪ್ರಜೆಗಳಿಗಾಗಿ ದೇವಾಲಯಗಳನ್ನೂ ಬೌದ್ಧ ಪ್ರಜೆಗಳಿಗಾಗಿ ವಿಹಾರಗಳನ್ನೂ ಕಟ್ಟಿಸಿಕೊಡುತ್ತಿದ್ದರು. ಬೇರೆ ದೇಶಗಳಲ್ಲಿ ಇನ್ನೊಂದು ಮತೀಯರನ್ನು ಅತ್ಯಂತ ಅಸಹನೆಯಿಂದ ಹಿಂಸಾಚಾರದಿಂದ ನಡೆಸಿಕೊಳ್ಳುತ್ತಿದ್ದರೆ, ಈ ದೇಶದಲ್ಲಿ ದೇವರೇ ಇಲ್ಲವೆಂದು ಹೇಳುವ ನಾಸ್ತಿಕ ಮತವೂ ಹುಟ್ಟುವುದಕ್ಕೆ ಅವಕಾಶಕೊಡಲಾಯಿತು. ಇನ್ನೊಬ್ಬರ ವಿಚಾರ ಸ್ವಾತಂತ್ರ್ಯವನ್ನು ಒಪ್ಪಿ, ಅವನು ತನಗೆ ಒಪ್ಪುವ ಮತವನ್ನು ಸ್ವೀಕರಿಸುವುದು ಹಾಗೂ ಪ್ರಚಾರಪಡಿಸುವುದಕ್ಕೆ ಅವಕಾಶ ನೀಡುವ ಈ ಉದಾರ ಮನೋವೃತ್ತಿಯ ಪ್ರತೀಕವಾಗಿಯೇ ನೂರಾರು ಮತಗಳು ನಮ್ಮ ದೇಶದಲ್ಲಿ ನೆಲೆಸಿವೆ. ಆದ್ದರಿಂದ ಭಾರತದೇಶದ ಈ ಅನೇಕ ಮತಗಳ ಬಗ್ಗೆ ನಾವು ನಾಚಿಕೆಪಡತಕ್ಕದ್ದು ಏನೂ ಇರದೆ, ನಮ್ಮ ಪ್ರಾಚೀನ ಪರಂಪರೆಯ ಬಗ್ಗೆ ಅಭಿಮಾನ ಪಡಬೇಕಾದ ಸಂಗತಿಯನ್ನೇ ಇಲ್ಲಿ ನಾವು ಕಾಣಬಹುದಾಗಿದೆ.

ಇನ್ನು ದೇಶದ ರಾಜಕೀಯ ವಿಪ್ಲವ ಕಾಲದಲ್ಲಿ ನಮ್ಮ ದೇಶದ ಧಾರ್ಮಿಕ ಧುರೀಣರು ರಾಜಕೀಯ ಸ್ವಾತಂತ್ರ್ಯದ ಬಗ್ಗೆ ಮಹತ್ವದ ಪಾತ್ರವನ್ನು ವಹಿಸಿರಲಿಕ್ಕಿಲ್ಲ. ಆದರೆ ಅವರ ಕಾರ್ಯ ಹಾಗೂ ಪ್ರಭಾವದಿಂದಾಗಿ ರಾಜಕೀಯ ಪರಾಭವದ ಜೊತೆಗೆ ನಮ್ಮ ಸಂಸ್ಕೃತಿಯೇ ನಾಮಾವಶೇಷವಾಗಬಹುದಾದಂತಹ ಪ್ರಸಂಗವು ತಪ್ಪಿಹೋದದ್ದನ್ನೂ ನಾವು ಗಮನಿಸಬೇಕಾಗಿದೆ. ಈಜಿಪ್ಟ್ ಮುಂತಾದ ಅನೇಕ ದೇಶಗಳ ಪ್ರಾಚೀನ ಸಂಸ್ಕೃತಿಗಳು ಪರಕೀಯ ಆಕ್ರಮಣದ ಜೊತೆಗೆ ಹೇಳಹೆಸರಿಲ್ಲದೆ ಮಾಯವಾಗಿರುವಾಗ ಸಹಸ್ರಾರು ವರ್ಷಗಳ ನಿರಂತರ ಆಕ್ರಮಣಗಳನ್ನೂ ದೀರ್ಘಕಾಲದ ದಾಸ್ಯ ಬಂಧನವನ್ನೂ ಎದುರಿಸಿ ನಮ್ಮ ರಾಷ್ಟ್ರೀಯ ಸಂಸ್ಕೃತಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ನಿಂತಿರುವುದು ಮಹಾ ಸಾಧನೆ ಎಂದು ಎಲ್ಲರೂ ಬಲ್ಲರು. ನಮ್ಮ ಧಾರ್ಮಿಕ ಧುರೀಣರ ಧಾರ್ಮಿಕ ಪ್ರಸಾರದ ಬಹುಮುಖ ಕಾರ್ಯಕ್ರಮಗಳಿಂದ ದೇಶದಲ್ಲಿ ಆಧ್ಯಾತ್ಮಿಕ ಜಾಗ್ರತಿ ಹಾಗೂ ನಿಷ್ಠೆಯು ಬಲವಾಗಿ ಬೇರೂರಿದ್ದು ಈ ರಾಜಕೀಯ ಸುಂಟರಗಾಳಿಯಿಂದಲೂ ಅದು ವಿಚಲಿತವಾಗಲಿಲ್ಲ. ಹೀಗೆ ಪ್ರಬಲ ರಾಜಕೀಯ ಸತ್ತೆಗಳು ಬುಡಮೇಲಾಗಿ ಬೀಳುವಂತೆ, ನಮ್ಮ ದೇಶವನ್ನೇ ನಡುಗಿಸಿದ ಭೀಕರ ಬಿರುಗಾಳಿಯು ಬೀಸಿದ ಆ ಅಂಧಕಾರ ಯುಗದಲ್ಲಿಯೂ ನಮ್ಮ ಆಧ್ಯಾತ್ಮಿಕ ಸಂಸ್ಕೃತಿಯ ದಿವ್ಯ ದೀಪವು ನಂದಿಹೋಗದಂತೆ ಎಚ್ಚರಿಕೆಯಿಂದ ಅದನ್ನು ಕಾಪಾಡಿ ಬೆಳಗಿಸುತ್ತಿದ್ದ ನಮ್ಮ ಪ್ರಾಚೀನ ಧಾರ್ಮಿಕ ಧುರೀಣರು ದೇಶಕ್ಕೆ ಸಲ್ಲಿಸಿದ ಸೇವೆ ಅಮೋಘವಾಗಿದೆ. ರಾಷ್ಟ್ರೀಯ ಸ್ವಾತಂತ್ರ್ಯದ ಜೊತೆಗೆ ನಮ್ಮ ರಾಷ್ಟ್ರೀಯ ಸಂಸ್ಕೃತಿಯು ನಾಶವಾಗದಂತೆ ಅವರು ಮಾಡಿರುವ ಸಾಧನೆಯು ಎಂದಿಗೂ ಭಾವೀ ಜನಾಂಗದ ಕೃತಜ್ಞತೆಗೆ ಪಾತ್ರವಾಗಿದೆ.

ಹೀಗೆ ನಮ್ಮ ದೇಶದಲ್ಲಿ ಹಾಗೂ ಪ್ರಪಂಚದಲ್ಲಿ ಬೆಳೆದಿರುವ ನೂರಾರು ಮತಗಳನ್ನು ಪೂರ್ವಗ್ರಹ ದುರಾಗ್ರಹಗಳಿಲ್ಲದೆ ಚಿಕಿತ್ಸಕ ದೃಷ್ಟಿಯಿಂದ ಪರಿಶೀಲಿಸಬೇಕು. ನಮ್ಮ ಪೂರ್ವಜರು ಅನೇಕ ಅನೇಕ ಮತಗಳನ್ನು ಜಗತ್ತಿನಲ್ಲಿ ವಿನ್ಯಾಸ ಮಾಡಿದರೂ ಅವೆಲ್ಲವೂ ಯಥಾರ್ಥಗಳೆಂದು ನಾವು ತಿಳಿಯಬಾರದು. ತಮ್ಮ ತಮ್ಮ ಪ್ರಯತ್ನ, ಸಂಶೋಧನೆ, ಅಧ್ಯಯನಗಳಿಂದ ಎಲ್ಲ ಮತಾಚಾರ್ಯರೂ ಜನರಿಗೆ ಸತ್ಯವನ್ನು ತಿಳಿಸಲು ಯತ್ನಿಸಿದ್ದರೂ ಎಲ್ಲರೂ ಸತ್ಯವನ್ನೇ ಬೋಧಿಸುವುದರಲ್ಲಿ ಯಶಸ್ವಿಗಳಾಗಿದ್ದಾರೆಂದು ನಾವು ತಿಳಿಯಬಾರದು. ಹಾಗಿದ್ದರೆ ಆ ಮತಗಳಲ್ಲಿ ಅಂತಹ ತೀವ್ರ ಭಿನ್ನತೆ ಹಾಗೂ ಮೂಲಭೂತ ವಿರೋಧಗಳು ತಲೆಯೆತ್ತುತ್ತಿರಲಿಲ್ಲ.

''ಸತ್ಯವು ಏಕಾಂಗಿಯಲ್ಲ. ಅದು ಬಹುಮುಖವಾಗಿದೆ. ಒಬ್ಬೊಬ್ಬರೂ ಆ ಸತ್ಯದ ವಿರಾಡ್ರೂಪದ ಒಂದೊಂದು ಅಂಶವನ್ನು ಮಾತ್ರ ಸಾಕ್ಷಾತ್ಕರಿಸಿ ಬೋಧಿಸಿದ್ದರಿಂದ ಈ ವಿರೋಧವು ಕಂಡುಬರುತ್ತಿದೆ. ಎಲ್ಲರೂ ಹೇಳಿರುವುದು ಸತ್ಯವೆ. ಆದರೆ ಅವರೆಲ್ಲ ಸತ್ಯದ ಬೇರೆ ಬೇರೆ ಮುಖಗಳನ್ನು ಹೇಳಿದ್ದಾರೆ. ಆದ್ದರಿಂದಲೇ ಮತಗಳಲ್ಲಿ ವ್ಯತ್ಯಾಸವನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಮತಗಳ ಬಗ್ಗೆ ಹೆಚ್ಚಿನ ಚರ್ಚೆ, ಜಿಜ್ಞಾಸೆ ಹಾಗೂ ಪರಿಶೀಲನದ ಅವಶ್ಯಕತೆಯಿಲ್ಲ. ಯಾವ ಮತಗಳನ್ನು ನಾವು ಹಿಡಿದರೂ ಸತ್ಯವನ್ನು ಮುಟ್ಟಬಲ್ಲೆವೆಂದು'', ಈ ಮತಗಳಲ್ಲಿರುವ ಅಸಾಮರಸ್ಯ ಹಾಗೂ ವಿರೋಧಗಳ ಬಗ್ಗೆ ಕೆಲವರು ಸಮಾಧಾನ ಹೇಳುವರು.

ಇಂತಹ ಉಪಪಾದನೆಗಳಿಂದ ಒಂದು ವಸ್ತುವಿನಲ್ಲಿ ಹಲವು ವೈಚಿತ್ರ್ಯಗಳನ್ನು ಕೂಡಿಸಬಹುದು, ಹೊರತು ಮೂಲಭೂತ ವಿರೋಧಗಳನ್ನು ಒಂದುಗೂಡಿಸಲು ಸಾಧ್ಯವಾಗಲಾರದು. ಒಬ್ಬನಲ್ಲಿ ಭಿನ್ನ ಭಿನ್ನ ಆಕಾರಗಳುಳ್ಳ ಅನೇಕ ಅವಯವಗಳೂ ಬೇರೆ ಬೇರೆ ಶಕ್ತಿ ಸ್ವಭಾವಗಳುಳ್ಳ ಅನೇಕ ಇಂದ್ರಿಯಗಳೂ ಇರಬಹುದು. ಒಬ್ಬನು ಒಂದು ಭಾಗವನ್ನು ವರ್ಣಿಸಿದರೆ, ಇನ್ನೊಬ್ಬನು ಮತ್ತೊಂದು ಅಂಗವನ್ನು ವಿವರಿಸಿದರೆ ಅವೆರಡೂ ಸತ್ಯವಾಗಿರಬಹುದು. ಆದರೆ ಒಬ್ಬನು ಯಾವ ವಸ್ತುವನ್ನು ಇದೆಯೆಂದು ಪ್ರತಿಪಾದಿಸುವನೋ ಅದನ್ನೇ ಇನ್ನೊಬ್ಬನು ಇಲ್ಲವೆಂದು ಹೇಳಿದರೆ ಅವೆರಡೂ ಏಕಕಾಲದಲ್ಲಿ ಸತ್ಯವಾಗಿರಲಾರವು. ಜಗತ್ತು, ಆತ್ಮ ಮುಂತಾದ ವಸ್ತುಗಳ ಸ್ವರೂಪ ಧರ್ಮಗಳ ಬಗ್ಗೆ ಇಂತಹ ತೀವ್ರವಾದ ವಿರೋಧಗಳು ದರ್ಶನಗಳಲ್ಲಿ ಕಂಡುಬರುತ್ತಿರುವಾಗ ಅವೆಲ್ಲವೂ ಸತ್ಯದ ತುಣುಕುಗಳೆಂದು ಹೇಳುವುದು ಸತ್ಯದ ಅಪಹಾಸವಾಗುವುದು. ಒಂದರಲ್ಲಿ ಹಲವು ವೈಚಿತ್ರ್ಯಗಳು ಇರಬಹುದಾದರೆ ಹಲವು ವಿರೋಧಗಳು ಇರಲಾರವು. ಒಂದು ವಸ್ತುವಿನಲ್ಲಿರುವ ಅನೇಕ ಅಂಶಗಳನ್ನು ಮತ್ತು ಅನೇಕ ಗುಣಧರ್ಮಗಳನ್ನು ಬಿಡಿಬಿಡಿಯಾಗಿ ಹೇಳುವ ಬೇರೆ ಬೇರೆ ವಾಕ್ಯಗಳೆಲ್ಲವೂ ಯಥಾರ್ಥವಾದುವುಗಳು ಎಂದು ಹೇಳಿದರೆ ಅದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಒಂದೇ ವಸ್ತುವನ್ನು ಇದೆ ಮತ್ತು ಇಲ್ಲವೆಂದು ಹೇಳುವ ಎರಡು ಮತಗಳೂ ಪ್ರಮಾಣಗಳೆಂದು ಹೇಳಿದರೆ ಅದು ಅರ್ಥವಾಗಲಾರದು. ಒಂದೇ ಮಾವಿನಹಣ್ಣಿನ ಬೇರೆ ಬೇರೆ ಭಾಗವನ್ನು ತಿಂದ ಇಬ್ಬರು ತಮ್ಮ ಭಾಗವನ್ನು ಸಿಹಿಯೆಂದೂ, ಹುಳಿಯೆಂದೂ ಹೇಳಿದರೆ ಆ ಎರಡೂ ಮಾತುಗಳೂ ಸರಿಯೇ. ಆದರೆ ಇದು ಮಾವಿನಹಣ್ಣು ಅಲ್ಲ, ಹೌದು ಈ ಎರಡೂ ಮಾತುಗಳೂ ಸರಿಯೆನಿಸಲಾರವು.

ಹೀಗೆ ಎಲ್ಲ ಮತಾಚಾರ್ಯರುಗಳು ಹೇಳಿರತಕ್ಕ ವಿಷಯಗಳೆಲ್ಲಾ ಸತ್ಯವೆನಿಸಲಾರದಿದ್ದರೂ ಸತ್ಯಾನ್ವೇಷಕರೆಂದು ಅವರಿಗೆ ಗೌರವವು ಸಲ್ಲತಕ್ಕದ್ದೇ. ಬೇರೆ ಬೇರೆ ಕಾಲದಲ್ಲಿ ಹುಟ್ಟಿದ ವಿಜ್ಞಾನಿಗಳು ಸಂಶೋಧಿಸಿದ ವಿಷಯಗಳು ತಪ್ಪೆಂದು ಮುಂದಿನ ವಿಜ್ಞಾನಿಗಳಿಂದ ಸಿದ್ಧಮಾಡಲಾಗಿದ್ದರೂ ಪ್ರಕೃತಿಯ ಸತ್ಯವನ್ನು ಕಂಡುಹುಡುಕಲು ಪ್ರಯತ್ನಿಸಿದವರೆಂಬ ಗೌರವವು ಎಲ್ಲ ವಿಜ್ಞಾನಿಗಳಿಗೆ ಸಲ್ಲುವುದು, ಅದರಂತೆ ಎಲ್ಲ ವಿಜ್ಞಾನಿಗಳಲ್ಲೂ ಕುರುಡು ಶ್ರದ್ಧೆಯನ್ನು ಇಟ್ಟುಕೊಳ್ಳದೆ ಎಲ್ಲವನ್ನೂ ಒರೆಗೆ ಹಚ್ಚಿ ಯಾವುದು ಸರಿ ಯಾವುದು ಸರಿಯಲ್ಲವೆಂಬುದನ್ನು ನಿರ್ಧರಿಸಿ, ಅಸತ್ಯ ಸಿದ್ಧಾಂತಗಳನ್ನು ತೆಗೆದುಹಾಕುತ್ತೇವೆ. ವೈಜ್ಞಾನಿಕ ರಂಗದಲ್ಲಿರುವ ಈ ಉದಾರ ದೃಷ್ಟಿ ಹಾಗೂ ಸತ್ಯಾನ್ವೇಷಣ ತತ್ಪರತೆಯನ್ನೇ ತತ್ತ್ವಜ್ಞಾನದ ರಂಗದಲ್ಲೂ ಅನ್ವಯಿಸಬೇಕೆಂಬುದು ನಮ್ಮ ಪ್ರತಿಪಾದನೆಯಾಗಿದೆ. ದೇಶದ ಎಲ್ಲ ಮತಾಚಾರ್ಯರುಗಳು ಹೇಳಿದ್ದೆಲ್ಲಾ ಸತ್ಯವೇ ಎಂಬ ಅಂಧಶ್ರದ್ಧೆಯನ್ನಿಟ್ಟುಕೊಳ್ಳದೆ ಎಲ್ಲರೂ ತತ್ತ್ವಾನ್ವೇಷಣೆಗಾಗಿ ಹೊರಟವರೆಂಬ ಗೌರವ ಬುದ್ಧಿಯನ್ನು ಮಾತ್ರ ಇಟ್ಟುಕೊಂಡು ಪೂರ್ವಗ್ರಹ ದೂಷಿತವಾದಾಗ ಮನಸ್ಸಿನಿಂದ ಎಲ್ಲ ಮತಾಚಾರ್ಯರ ಬೋಧನೆಗಳನ್ನೂ ಪರಿಶೀಲಿಸಿ, ಅವುಗಳನ್ನು ತುಲನಾತ್ಮಕ ದೃಷ್ಟಿಯಿಂದ ವಿಮರ್ಶಿಸಿ, ಅವುಗಳಲ್ಲಿ ಯಥಾರ್ಥಗಳಾವುವು? ಎಲ್ಲಿ ಸತ್ಯವು ಅಡಕವಾಗಿದೆ? ಎಂಬುದನ್ನು ನಮ್ಮ ಮಾನಸಿಕ ಶಕ್ತಿಯನ್ನೆಲ್ಲಾ

ನಿರ್ವಿಕಾರ ದೃಷ್ಟಿಯಿಂದ ಉಪಯೋಗಿಸಿ, ನಮ್ಮ ಬುದ್ಧಿ ಮತ್ತು ಹೃದಯಕ್ಕೆ ಒಪ್ಪುವಂತಹ ಆಧ್ಯಾತ್ಮಿಕ ತತ್ತ್ವಗಳನ್ನು ನಾವು ಸ್ವೀಕರಿಸಬೇಕು. ಇಂತಹ ಮಾನಸಿಕ ಪ್ರವೃತ್ತಿಯುಳ್ಳ ಹಿತಕರ ಆವರಣವೇ ದೇಶದಲ್ಲಿ ಆಧ್ಯಾತ್ಮಿಕ ಉನ್ನತಿಯನ್ನು ಸೃಜಿಸಬಲ್ಲುದು. ಇಂತಹ ಹಿತಕರ ತತ್ತ್ವಪರಿಶೀಲನೆಯಿಂದ ಪರಸ್ಪರ ರಾಗ, ದ್ವೇಷ, ವೈರಸ್ಯ, ವೈಷಮ್ಯಗಳಿಗೆ ಎಡೆಯೇ ಇಲ್ಲ. ಈ ರೀತಿಯ ಸತ್ಯಾನ್ವೇಷಣ ದೃಷ್ಟಿಯಿಂದ ಎಲ್ಲ ಮತಗಳನ್ನೂ ಪರಿಶೀಲಿಸಿ, ಪ್ರಪಂಚದ ಗೂಢತತ್ತ್ವಗಳನ್ನು ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸುವುದು ಅವಶ್ಯವಿದೆ.

– ೨ –

ನಮ್ಮ ವೈದಿಕಧರ್ಮದ ಮಹಾಸಾಗರವು ಅನೇಕ ವರ್ಷಗಳಿಂದ ಏಕರೂಪವಾಗಿ ಒಂದು ಸ್ತಿಮಿತ ರೀತಿಯಿಂದ ಇತ್ತು. ಬೌದ್ಧ ಧರ್ಮಕ್ರಾಂತಿಯ ಉತ್ಪಾತದ ಪರಿಣಾಮವಾಗಿ ಒಮ್ಮೆಲೆ ಪ್ರಕ್ಷುಬ್ಧವಾಗಿ ಅಲ್ಲೋಲ ಕಲ್ಲೋಲವಾಗಿ ತನ್ನ ಮೊದಲಿನ ಆಕಾರವನ್ನೇ ಬದಲಾಯಿಸಿಕೊಂಡು ಅಸ್ತವ್ಯಸ್ತವಾಗಿ ಹರಿದಂತೆ ನಮಗೆ ತೋರುತ್ತದೆ. ಇಂದಿಗೂ ಬೌದ್ಧಧರ್ಮದ ಆಘಾತದಿಂದ ಚೇತರಿಸಿಕೊಂಡು ತನ್ನ ಹಿಂದಿನ ರೂಪದಿಂದ ಜನತೆಯ ಮನಸ್ಸಿನಲ್ಲಿ ಹಿಂದಿನ ಪ್ರಮಾಣದಲ್ಲೇ ನೆಲೆನಿಲ್ಲಲು ವೈದಿಕಧರ್ಮವು ಸಮರ್ಥವಾಗಿಲ್ಲ. ಹಿಂದುಗಳಲ್ಲಿ ಬಹುಸಂಖ್ಯಾಕರು ಅನುಸರಿಸಿಕೊಂಡಿರುವ ವೈದಿಕ ತತ್ತ್ವಜ್ಞಾನದಲ್ಲಿ ಬೌದ್ಧಧರ್ಮದ ಪ್ರಭಾವವು ವಿಶೇಷ ಪ್ರಮಾಣದಿಂದ ಕಂಡುಬರುತ್ತಿದೆ. ಹೀಗೆ ಬಹುಸಂಖ್ಯಾಕ ಹಿಂದುಗಳಲ್ಲಿ ಹಿಂದೂಧರ್ಮವು ತನ್ನ ಹಿಂದಿನ ರೂಪವನ್ನು ಉಳಿಸಿಕೊಂಡಿರದೆ ಬಾಹ್ಯ ಧರ್ಮ ಪ್ರಭಾವಕ್ಕೊಳಪಟ್ಟು ವಿಶೇಷವಾದ ಬದಲಾವಣೆಯನ್ನು ಪಡೆದಿರುವುದು ಸ್ಪಷ್ಟವಿದೆ. ಹೀಗೆ ಬೌದ್ಧಧರ್ಮವು ಹಿಂದೂ ಧರ್ಮದ ಮೇಲೆ ಮಾಡಿರುವ ಪರಿಣಾಮವು ಅಸಾಧಾರಣವಾಗಿರುವುದು. ವೈದಿಕಧರ್ಮದ ಪುನರುತ್ಥಾನಕ್ಕಾಗಿ ಮಹಾಸಾಹಸದಿಂದ ಪ್ರಯತ್ನಿಸಿದ ಶ್ರೀ ಕುಮಾರಿಲಭಟ್ಟರೂ ಬೌದ್ಧಧರ್ಮದಿಂದ ಎಷ್ಟರ ಮಟ್ಟಿಗೆ ಪ್ರಭಾವಿತರಾಗಿದ್ದರೆಂದರೆ ಪ್ರಪ್ರಥಮವಾಗಿ ದೇಶದಲ್ಲಿ ನಿರೀಶ್ವರ ವೈಧಿಕಧರ್ಮವನ್ನು ಅವರೇ ಸ್ಥಾಪಿಸಿರುವರು. ವೇದಪ್ರಾಮಾಣ್ಯ ಮತ್ತು ಕರ್ಮಕಲಾಪವನ್ನು ಆಧರಿಸಿ ನಿಂತಿರುವ ಭಾಟ್ಟ ಮತವೂ ಈಶ್ವರನನ್ನು ಅಲ್ಲಗೆಳೆಯಬೇಕಾದರೆ ಇದು ನಿರೀಶ್ವರವಾದಿ ಬೌದ್ಧಮತದ ಪ್ರಭಾವವೇ ಎಂಬುದು ಸ್ಪಷ್ಟವಿದೆ.

ಶ್ರೀಶಂಕರಾಚಾರ್ಯರು ಬೌದ್ಧಧರ್ಮದ ವಿರುದ್ಧವಾಗಿ ವೈದಿಕಧರ್ಮವನ್ನು ಸ್ಥಾಪಿಸಲು ಪ್ರವರ್ತಿಸಿದರೂ ಅವರಿಗೂ ಈ ಬೌದ್ಧಮತದ ಪ್ರಭಾವಲಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬೌದ್ಧಮತ ಕ್ರಾಂತಿಯ ವಾತಾವರಣದ ಪ್ರಭಾವವು ಶ್ರೀಶಂಕರಾಚಾರ್ಯರ ಅದ್ವೈತಮತದಲ್ಲಿ ಒಡಮೂಡಿದೆ. ಬೌದ್ಧಕ್ರಾಂತಿಯ ಪೂರ್ವದ ವೈದಿಕಧರ್ಮದ ಶುದ್ಧ ರೂಪವನ್ನು ಎತ್ತಿ ತೋರಿಸಲು ಅವರು ಅಸಮರ್ಥರಾದುದು ಕಂಡುಬರುತ್ತಿದೆ. ಹೀಗೆ ಶ್ರೀಶಂಕರಾಚಾರ್ಯರು ಬೌದ್ಧಧರ್ಮದ ಅನೇಕಾನೇಕ ಮುಖ್ಯ ವಿಷಯಗಳನ್ನು ಬಳಸಿಕೊಂಡದ್ದರಿಂದ ಬೌದ್ಧಧರ್ಮವನ್ನೇ ವೈದಿಕಧರ್ಮದ ಮುಖವಾಡದಿಂದ ಅವರು ಜನತೆಯ ಮುಂದೆ ಇಟ್ಟರು, ಎಂದು ಅವರ ಬಗ್ಗೆ ಅಂದಿನಿಂದಲೂ ಅನೇಕ ಗ್ರಂಥಕಾರರು ಹೇಳಲು ಅವಕಾಶವಾಯಿತು. ಹೀಗೆ ಶ್ರೀಶಂಕರಾಚಾರ್ಯರು ಪ್ರತಿನಿಧೀಕರಿಸಿದ ವೈದಿಕಧರ್ಮವು ಒಂದು ಕಲಸು ಮೇಲೋಗರದಂತೆ ಇದ್ದರೂ ಹಿಂದೂ ಧರ್ಮದ ಮೂಲಾಧಾರವಾದ ವೇದದಿಂದ ವಿಮುಖವಾದ ಭಾರತೀಯರ ದೃಷ್ಟಿಯನ್ನು ಪುನಃ ವೇದದ ಕಡೆಗೆ ತಿರುಗಿಸಿದ ಶ್ರೇಯಸ್ಸು ಶ್ರೀಶಂಕರಾಚಾರ್ಯರಿಗೆ ಸಲ್ಲುವುದು, ಈ ಬಗ್ಗೆ ವೈದಿಕಧರ್ಮದ ಅನುಯಾಯಿಗಳೆಲ್ಲರೂ ಶ್ರೀಶಂಕರಾಚಾರ್ಯರಿಗೆ ಕೃತಜ್ಞರಾಗಿರಬೇಕಾಗಿದೆ. ಅದ್ಭುತ ಪ್ರತಿಭಾಚಾತುರ್ಯ ಸಂಪನ್ನರೂ ಅಪ್ರತಿಮ ವಾಗ್ಮಿಗಳೂ ವಿಲಕ್ಷಣ ತರ್ಕಶಕ್ತಿಯುಳ್ಳವರೂ ಆದ ಶ್ರೀ ಶಂಕರಾಚಾರ್ಯರು ತಮ್ಮ ಮತಪ್ರಚಾರದಲ್ಲಿ

ತೋರಿಸಿದ ಚಾಕಚಕ್ಯವು ಇತಿಹಾಸದಲ್ಲೇ ಒಂದು ಚಮತ್ಕಾರವಾಗಿದೆ. ಅವರ ಕಾಲದಲ್ಲಿ ಬೌದ್ಧಮತಕ್ಕೂ ಕುಮಾರಿಲಭಟ್ಟರ ನಿರೀಶ್ವರ ವೈದಿಕಮತಕ್ಕೂ ಪ್ರಬಲ ಘರ್ಷಣವೇರ್ಪಟ್ಟಿತ್ತು. ಶ್ರೀಶಂಕರಾಚಾರ್ಯರು ಈ ಸಂಧಿಯ ಉಪಯೋಗ ಪಡೆದು ಈ ಘರ್ಷಣೆಯಲ್ಲಿ ಪ್ರವೇಶಿಸಿ ಭಾಟ್ಟಮತದ ಕೆಲವು ಪ್ರತಿಕ್ರಿಯೆಗಳನ್ನು ಸ್ವೀಕರಿಸಿ, ಬೌದ್ಧಮತದ ಅನೇಕ ತತ್ತ್ವಗಳನ್ನು ಸೇರಿಸಿ, ಒಂದು ನೂತನ ಸಮ್ಮಿಶ್ರ ಧರ್ಮವನ್ನು ಜನತೆಯ ಮುಂದಿಟ್ಟರು. ತಮ್ಮ ತಾರ್ಕಿಕ ಸರಣಿ, ಹಾಗೂ ಪ್ರತಿಪಾದನ ಶೈಲಿಯಿಂದ ಅದಕ್ಕೆ ವಿಶೇಷವಾದ ಮೆರುಗನ್ನು ಕೊಟ್ಟರು. ಅದರ ಪರಿಣಾಮವು ಎಷ್ಟು ಅದ್ಭುತವಾಯಿತೆಂದರೆ ಹಿಂದುಸ್ಥಾನದಲ್ಲಿ ಭಾಟ್ಟಮತ ಮತ್ತು ಬೌದ್ಧಧರ್ಮ ಇವೆರಡೂ ಹೇಳಹೆಸರಿಲ್ಲದೆ ಪಲಾಯನ ಸೂತ್ರವನ್ನು ಪಠಿಸಬೇಕಾಯಿತು. ಇಂದಿಗೂ ಭಾರತದಲ್ಲಿ ಬೌದ್ಧಧರ್ಮಕ್ಕೆ ಮತ್ತು ಭಾಟ್ಟಮತಕ್ಕೆ ಒಬ್ಬನೇ ಒಬ್ಬ ಅನುಯಾಯಿಗಳಿಲ್ಲದಿರುವದು ಶ್ರೀ ಶಂಕರಾಚಾರ್ಯರ ಈ ಅದ್ಭುತ ಕಾರ್ಯವನ್ನು ಸೂಚಿಸುತ್ತದೆ. ಇದೊಂದು ಐತಿಹಾಸಿಕ ಚಮತ್ಕಾರವೇ ಸರಿ. ಹೀಗೆ ಶಂಕರರು ಮಂಡಿಸಿದ ವೈದಿಕಧರ್ಮದಲ್ಲಿ ಭಾಟ್ಟ ಹಾಗೂ ಬೌದ್ಧಮತಗಳ ರೂಪಾಂತರವನ್ನು ಕಾಣಬಹುದಾಗಿದೆ. ಆದ್ದರಿಂದಲೇ ''ವ್ಯವಹಾರೇ ಭಾಟ್ಟನಯಃ'' ಎಂಬ ಸಂಪ್ರದಾಯವು ಅದ್ವೈತಮತದಲ್ಲಿ ಬರಲು ಅವಕಾಶವಾಯಿತು. ಬೌದ್ಧಮತದ ಅನೇಕ ಕ್ರಿಯೆಗಳು ಶಬ್ದಾಂತರಗಳಿಂದ ಅದ್ವೈತದಲ್ಲಿ ಅಡಕವಾದವು. ಆಧುನಿಕರಾದ ಅದ್ವೈತವಾದದ ಪ್ರಬಲ ನಿಷ್ಠಾವಂತ ಸಮರ್ಥಕರಾದ ಶ್ರೀ ವಿನೋಬಾಜಿ ಮುಂತಾದವರೂ ಶ್ರೀ ಶಂಕರಾಚಾರ್ಯರ ವೈದಿಕಧರ್ಮ ಹಾಗೂ ಬೌದ್ಧಧರ್ಮಗಳ ಸುಸ್ಪಷ್ಟ ಸಾಮ್ಯವನ್ನೊಪ್ಪಿ ಅದನ್ನು ಸಮರ್ಥಿಸಿಕೊಂಡಿರುವರು. ಒಟ್ಟು ಸಂಕ್ಷಿಪ್ತವಾಗಿ ಹೇಳುವುದಾದರೆ ಶಂಕರಾಚಾರ್ಯರು ಬೌದ್ಧಧರ್ಮವನ್ನು ಖಂಡಿಸಿ ಗೆದ್ದು ಅದಕ್ಕೆ ಸೋಲುವಂತಾದರು ಎನ್ನಬಹುದು.

ಹೀಗೆ ಬೌದ್ಧಧರ್ಮ ಮತ್ತು ಅದ್ವೈತಮತಗಳು ಜಗತ್ತಿಗೆ ಸಾಧಾರಣವಾಗಿ ಒಂದು ವಿಧವಾದ ಸಂದೇಶವನ್ನು ನೀಡಿದೆ. ಪರಿದೃಶ್ಯಮಾನವಾದ ಪ್ರಪಂಚವೆಲ್ಲಾ ಮಾಯಿಕವಾಗಿದ್ದು ಇದೆಲ್ಲ ಕೇವಲ ಅಸತ್ಯ ಪ್ರತಿಭಾಸವಾಗಿದೆ. ಈ ಜಗತ್ತಿನ ಬುಡದಲ್ಲಿ ಒಂದೇ ಒಂದಾದ ನಿರ್ವಿಶೇಷವಾದ ನಿರ್ಗುಣವಾದ ಸದ್ವಸ್ತು ಇದೆಯೆಂಬುದು ಈ ಎರಡೂ ವಾದಗಳ ಸಾರವಾಗಿದೆ. ಈ ವಾದವು ಜಗತ್ತಿನ ಮನಸ್ಸಿಗೆ ಎಷ್ಟರಮಟ್ಟಿಗೆ ಹಿಡಿಯಬಹುದೆಂಬುದನ್ನೂ, ಇದು ಎಷ್ಟರಮಟ್ಟಿಗೆ ತರ್ಕಶುದ್ಧವೂ ಪ್ರಮಾಣಬದ್ಧವೂ ಆಗಿದೆಯೆಂಬುದನ್ನೂ ನಾವು ಆಲೋಚಿಸಬೇಕಾಗಿದೆ. ಜಗತ್ತು ಶಾಶ್ವತವಲ್ಲ. ಜಗತ್ತಿನಲ್ಲಿ ಅನೇಕ ವಿಧಗಳಾದ ಭ್ರಮೆಗಳಿಗೆ ಅವಕಾಶವಿದೆಯೆಂಬುದನ್ನು ಎಲ್ಲರೂ ಒಪ್ಪುವುದಾದರೂ ಅದ್ವೈತ ಹಾಗೂ ಬೌದ್ಧಮತಗಳಲ್ಲಿ ಯಾವ ಅರ್ಥದಲ್ಲಿ ಜಗತ್ತು ಮಿಥ್ಯವೆಂದು ಪ್ರತಿಪಾದಿಸಲ್ಪಟ್ಟಿದೆಯೋ ಆ ಅರ್ಥದಲ್ಲಿ ಅದನ್ನು ಮಿಥ್ಯವೆಂದು ಒಪ್ಪಲು ಇಂದಿನ ವೈಜ್ಞಾನಿಕ ಯುಗದಲ್ಲಿ ಜಗತ್ತು ಸಿದ್ಧವಿಲ್ಲ. ಜಗತ್ತಿನ ಪ್ರತಿಯೊಂದು ವಸ್ತುವಿನಲ್ಲಿರುವ ನೂರಾರು ವ್ಯವಸ್ಥಿತ ನಿಯಮಗಳಿಂದ ಸೃಷ್ಟಿಯಲ್ಲಿ ವಿಚಿತ್ರ ಕಾರ್ಯಗಳು ಕ್ರಮಬದ್ಧ ರೀತಿಯಿಂದ ನಡೆಯುತ್ತಿರುವುದನ್ನು ಹೊಸ ಹೊಸ ರೀತಿಯಿಂದ ಅನ್ವೇಷಿಸಿ ಕಂಡುಹಿಡಿಯುತ್ತಿರುವ ವಿಜ್ಞಾನವು ಪ್ರತಿ ನಿಮಿಷದಲ್ಲಿಯೂ ಜಗತ್ತು ಮಿಥ್ಯವೆಂಬ ವಾದವು ಅರ್ಥವಿಲ್ಲದ್ದು ಎಂಬುದನ್ನು ತೋರಿಸುತ್ತದೆ. ಹೀಗಿರುವಾಗ ಇಂದಿನ ವೈಜ್ಞಾನಿಕ ಪ್ರಪಂಚದಲ್ಲಿ ಜಗತ್ತಿನ ಮಾಯಿಕತ್ವದ ಕಾಲ್ಪನಿಕ ಪ್ರಕ್ರಿಯೆಗಳು ''ಅರೇಬಿಯನ್ ನೈಟ್ಸ್'' ಕಥೆಗಳಂತೆಯೇ ತೋರಬಲ್ಲವು.

ವ್ಯವಹಾರದಲ್ಲಿ ಹೊಂದಿಕೆಯಾಗದಂತಹ ಸಿದ್ಧಾಂತಗಳು ಜನತೆಯ ಮನಸ್ಸನ್ನು ಆಕರ್ಷಿಸಲಾರವು. ವ್ಯವಹಾರದಲ್ಲಿ ತರಲು ಆಗದಂತಹ ಧ್ಯೇಯ ಹಾಗೂ ಧ್ಯೇಯಕ್ಕೆ ವಿಸಂಗತವಾದ ವ್ಯವಹಾರ, ಇವುಗಳನ್ನೊಳಗೊಂಡ ತತ್ತ್ವಜ್ಞಾನವು, ಜಿಜ್ಞಾಸು ಹಾಗೂ ಸಾಧಕರ ಮನಸ್ಸನ್ನು ತಣಿಸಲಾರದು. ಅದ್ವೈತ ಮತದಲ್ಲಿ ಈ ಕೊರತೆಯು ಎದ್ದು ಕಾಣುತ್ತಿದೆ. ಅದನ್ನು ಈಗಿನ ಜಗತ್ತಿಗೆ ಅನ್ವಯಿಸಲು ಇದು ದೊಡ್ಡ

ಅಡಚಣೆಯಾಗಿದೆ. ವೈದಿಕ ತಳಹದಿಯಲ್ಲಿ ಸ್ಥಾಪಿತವೆಂದು ಹೇಳಿಕೊಳ್ಳುವ ಅದ್ವೈತದಲ್ಲಿ, ವೇದ-ಪುರಾಣಗಳಲ್ಲಿ ಪ್ರತಿಪಾದಿತವಾದ ಭಕ್ತಿ, ಕರ್ಮಾಚರಣೆಗಳಿಗೆ ವಿಶಿಷ್ಟವಾದ ಸ್ಥಾನವನ್ನು ಕೊಡಲಾಗಿದೆ. ಭಗವದಾರಾಧನೆ, ಪೂಜೆ, ಕರ್ಮಾನುಷ್ಠಾನಗಳು ಇವುಗಳಿಗೆ ವ್ಯಾವಹಾರಿಕ ಜೀವನದಲ್ಲಿ ವಿಶೇಷ ಸ್ಥಾನವನ್ನು ಕೊಡಲಾಗಿದೆ. ಆದರೆ ಅದ್ವೈತಮತದಲ್ಲಿಯ ಅಂತಿಮ ಸಿದ್ಧಿ ಹಾಗೂ ಸತ್ಯದ ನಿಜರೂಪಕ್ಕೂ ಇಂತಹ ಆಚರಣೆಗಳಿಗೂ ಏನು ಹೊಂದಿಕೆಯಿದೆ? ವಾಸ್ತವಿಕ ದೃಷ್ಟಿಯಲ್ಲಿ ಇವೆಲ್ಲ ಭಾರೀ ಆಡಂಬರದ ಪ್ರದರ್ಶನವೆಂದು ತಾತ್ಸಾರ ಭಾವವೇ ಬರಲು ಸಾಧ್ಯವಿದೆ. ಪರಮೇಶ್ವರನಾದ, ಸರ್ವಗುಣಪೂರ್ಣವಾದ ವಸ್ತುವು ಬರೇ ಕಲ್ಪನೆಯಾಗಿದ್ದು ವಿಶ್ವದಲ್ಲಿ ನಿರ್ಗುಣ ನಿರ್ವಿಕಾರ ವಸ್ತುವೊಂದೇ ಇರುವುದೆಂಬುದನ್ನು ತಿಳಿದುಕೊಂಡು ಕಾಲ್ಪನಿಕ ರೂಪದಲ್ಲಿ ಭಕ್ತಿಯನ್ನು ಆಹಾರ್ಯವಾಗಿ ಹುಟ್ಟಿಸಲು ಮಾಡುವ ಪ್ರಯತ್ನವೂ ಎಷ್ಟರಮಟ್ಟಿಗೆ ಫಲಕಾರಿಯಾಗಬಲ್ಲುದು? ಜಗತ್ತೆಲ್ಲಾ ಮಾಯಿಕವಾಗಿದ್ದು ಚಿಪ್ಪಿಯಲ್ಲಿ ಬೆಳ್ಳಿಯನ್ನು ನೋಡಿದಂತೆ ಆಕಾಶದಲ್ಲಿ ನೀಲಬಣ್ಣವನ್ನು ನೋಡುವಂತೆ ಬರೆ ಭ್ರಮೆಯೆಂದು ಗೊತ್ತುಮಾಡಿಕೊಂಡರೆ ಕರ್ಮಾಚರಣೆಯ ಬಗ್ಗೆ ನಿಷ್ಠಾಪೂರ್ವಕವಾದ ಹೃದಯ ಪೂರ್ಣವಾದ ಪ್ರವೃತ್ತಿಯಾಗಲು ಸಾಧ್ಯವಿದೆಯೇ? ಇವೆಲ್ಲಾ ಬರೀ ಬೂಟಾಟಿಕೆಯಾಗಿದ್ದು ತಿಳಿದೂ ತಿಳಿದೂ ಅರ್ಥವಿಲ್ಲದ ಸತ್ಯದ ನೆಲೆಯಿಲ್ಲದ ಆಚಾರಗಳ ಕಡೆಗೆ ಸಾಗುತ್ತಿರುವ ಬಗ್ಗೆ ನಮ್ಮ ಮೇಲೆಯೇ ನಮಗೆ ಅಸಂತುಷ್ಟಿ ಹಾಗೂ ಜುಗುಪ್ಸೆಯ ಭಾವನೆಯು ನಿರ್ಮಿತವಾಗುವುದು. ಹೀಗೆ ವ್ಯವಹಾರಕ್ಕೂ ಅಂತಿಮ ಲಕ್ಷ್ಯಕ್ಕೂ ಹೊಂದಾಣಿಕೆಯಿಲ್ಲದಿರುವ ತತ್ತ್ವಜ್ಞಾನವು ಜೀವನದ ಮೇಲೆ ಯಾವ ಪ್ರಭಾವವನ್ನೂ ನಿರ್ಮಿಸಲಾರದು. ಅದ್ವೈತದಲ್ಲಿ ಎತ್ತಿ ತೋರುವಂತಹ ಈ ಕೊರತೆಯು ಹಿಂದೂಧರ್ಮದ ಬಹುಸಂಖ್ಯಾಕರು ಪರಂಪರೆಯ ಪ್ರಭಾವದಿಂದ ಅದರ ಬಗ್ಗೆ ಗೌರವವನ್ನು ತೋರಿಸಿದರೂ ಅದನ್ನು ಹೃದಯದಿಂದ ಒಪ್ಪಿಕೊಳ್ಳದಂತೆ ಮಾಡಿದೆ. ಇದರಿಂದ ತತ್ತ್ವಜ್ಞಾನವು ಜೀವನಕ್ಕೆ ಸಂಬಂಧಿಸಿದ್ದಾಗಿರದೆ ಅದು ಕೇವಲವಾಗಿ ಒಂದು ಗೌರವದ ವಸ್ತುವಾಗಿದೆಯೆಂಬ ಭಾವನೆಯು ಬೆಳೆಯುವಂತಾಗಿದೆಯಲ್ಲದೆ ನಿತ್ಯಜೀವನದ ಭಗವದ್ಭಕ್ತಿ: ಸ್ವಕರ್ತವ್ಯನಿಷ್ಠೆ, ಸದ್ಗುಣಶಾಲಿತ್ವ, ಒಳ್ಳೆಯ ನಡತೆ, ಇವುಗಳೆಲ್ಲಾ ಕಾಲ್ಪನಿಕ ಪ್ರಪಂಚದಲ್ಲಿ ಅರ್ಥರಹಿತವಾಗಿ ಉಳಿಯುತ್ತಿವೆಯೆಂಬ ಮನೋವೃತ್ತಿ ಜನರಲ್ಲಿ ಪ್ರತಿಷ್ಠಿತವಾಗ ಬಹುದಾಗಿದೆ. ಇದರ ಪರಿಣಾಮವೇನು? ಎಂಬುದನ್ನು ಹೆಚ್ಚು ವಿವರಿಸಬೇಕಾಗಲಾರದು. ಅಂತೂ ಇಂದು ನಮಗೆಲ್ಲರಿಗೂ ವ್ಯವಹಾರ್ಯವಾದ ಒಂದು ತತ್ತ್ವಜ್ಞಾನವು ಬೇಕು ಎಂಬುದು; ಇಷ್ಟೆಲ್ಲಾ ಪರಿಶೀಲನೆಯ ಮಥಿತಾರ್ಥವಾಗಿದೆ.

ಇನ್ನು ಬೌದ್ಧ, ಅದ್ವೈತ ಪ್ರಕ್ರಿಯೆಗಳ ಪ್ರಕಾರ, ಜಗತ್ತಿನ ಸೃಷ್ಟಿಯು ನಿರುದ್ದೇಶ್ಯಕವಾಗಿರುವುದಲ್ಲದೆ, ಈ ಸೃಷ್ಟಿಯು ಹೇಗಾಯಿತು? ಎಂಬ ಮಹತ್ವದ ಪ್ರಶ್ನೆಯು ಉತ್ತರವಿಲ್ಲದೆ ಹಾಗೆ ಉಳಿಯುತ್ತದೆ. ಸದ್ವಸ್ತುವು ನಿರ್ಗುಣವಾಗಿದ್ದು ಅದು ಯಾವ ರೀತಿಯ ವಿಕಾರ ಹಾಗೂ ಪರಿಣಾಮವನ್ನೂ ಹೊಂದಲಾರದೆಂಬುದರ ಜೊತೆಗೆ ಅದು ಯಾವ ವಸ್ತುವಿನ ಮೇಲೂ ಪ್ರಭಾವವನ್ನೂ ಉಂಟುಮಾಡಲಾರದು ಮತ್ತು ಯಾವ ಬಾಹ್ಯ ವಸ್ತುವಿನ ಪ್ರಭಾವವಿಲ್ಲದೆ ಸ್ವಯಂಶಕ್ತಿಯಿಂದ ಪ್ರತಿಭಾಸವನ್ನು ನಿರ್ಮಿಸಲಾರದು ಎಂಬ ವಿಷಯವನ್ನು ನಾವು ಗ್ರಹಿಸಿದರೆ ನಿರ್ಗುಣ ವಸ್ತುವಿನಿಂದ ಜಗತ್ ಸೃಷ್ಟಿಯು ಊಹಾತೀತವಾಗಿದೆ. ಒಂದು ಆತ್ಮದಲ್ಲಿ ಪ್ರಪ್ರಥಮವಾಗಿ ಅನೇಕತ್ವದ ಕಲ್ಪನೆ ಹೇಗೆ ಉದಯವಾಯಿತು? ಒಂದು ಆತ್ಮದಲ್ಲಿ ವಿಚಿತ್ರರೂಪವಾದ ವಿಶ್ವವು ಹೇಗೆ ಪ್ರತಿಭಾಸ ಹೊಂದಿತು? ಎಂಬುದು ಅದ್ವೈತ ಮತದಲ್ಲಿ ಎಂದಿಗೂ ಪ್ರಶ್ನೆಯಾಗಿಯೇ ಉಳಿಯುತ್ತದೆ. ಅದ್ವೈತ ಪ್ರಕ್ರಿಯೆಗನುಸಾರವಾಗಿ ಆತ್ಮನಿಂದ ಜಗತ್‌ಸೃಷ್ಟಿಯನ್ನೂ ಉಪಪಾದಿಸಲು ಒಂದು ಉದಾಹರಣೆಯನ್ನು ಕೊಡಲಾಗುತ್ತದೆ. ಒಂದೇ ದೀಪವಿದ್ದರೂ ಸುತ್ತಲೂ ನೂರಾರು ಕನ್ನಡಿಗಳಿದ್ದರೆ ಅದರಲ್ಲಿ ಈ ದೀಪವು

ಪ್ರತಿಬಿಂಬಿತವಾಗಿ ಒಂದು ದೀಪವೇ ಅನೇಕವಾಗಿ ತೋರುತ್ತದೆ. ಅದರಂತೆ ಒಂದೇ ಸದ್ವಸ್ತುವು ಅನೇಕವಾಗಿ ಭಾಸವಾಗಬಹುದು ಎಂದು ಸಮರ್ಥಿಸಲಾಗುತ್ತದೆ. ಇದು ಸಮರ್ಪಕವಿರುವುದಿಲ್ಲ. ದೀಪವು ಅನೇಕವಾಗಿ ತೋರಲು ಬರೇ ಒಂದು ದೀಪವು ಕಾರಣವಾಗಿರದೆ ದೀಪದಂತೆಯೇ ಪ್ರತ್ಯೇಕವಾದ ಅಸ್ತಿತ್ವವುಳ್ಳ ನೂರಾರು ಕನ್ನಡಿಗಳು ಕಾರಣವಾಗಿವೆ. ದೀಪದಿಂದ ಬೇರೆಯಾದ ಕನ್ನಡಿಯ ಅಸ್ತಿತ್ವ ಮತ್ತು ಅದರ ಪ್ರಭಾವದಿಂದಾಗಿ ಅನೇಕತ್ವವು ತೋರಿದರೂ ನಿರ್ಗುಣವಾದ ಏಕಮಾತ್ರ ಸದ್ವಸ್ತುವಿನಲ್ಲಿ ಇಂತಹ ಅನೇಕತ್ವ ಹಾಗೂ ವೈಚಿತ್ರ್ಯದ ಕಲ್ಪನೆಯನ್ನು ತರಲು ಪ್ರಭಾವಕಾರಿಯಾದ ಬೇರೆ ವಸ್ತುವೇ ಇಲ್ಲದಿರುವುದು ಆತ್ಮನಲ್ಲಿ ಜಗತ್ತಿನ ಪ್ರತಿಭಾಸವನ್ನು ಕೂಡಿಸಲು ದೊಡ್ಡ ತೊಡಕಾಗಿದೆ. ಮಾಯೆಯಿಂದಾಗಿ ಆತ್ಮನಲ್ಲಿ ಪ್ರಪಂಚದ ಕಲ್ಪನೆಯು ಕೂಡಬಹುದೆಂದು ಕೆಲವರ ಸಮರ್ಥನೆಯಿದೆ. ಆದರೆ ಆತ್ಮನಿಂದ ಬೇರೆಯಾಗಿ ಮಾಯೆಗೆ ಅಸ್ತಿತ್ವವಿಲ್ಲ. ಹೀಗಿರುವಾಗ ಮಾಯೆಯ ಪ್ರಪ್ರಥಮ ಕಲ್ಪನೆಯು ಹೇಗೆ ಉತ್ಪನ್ನವಾಯಿತು? ಎಂಬ ಪ್ರಶ್ನೆ ಹಾಗೆಯೇ ಉಳಿಯುವುದಿಲ್ಲ. ಏಕಮಾತ್ರ ಸದ್ವಸ್ತುವಿನ ಹೊರತು ಉಳಿದೆಲ್ಲಾ ಪದಾರ್ಥಗಳನ್ನು ಅಲ್ಲಗಳೆದು ಪ್ರಪಂಚ ಸೃಷ್ಟಿಯನ್ನು ಉಪಪತ್ತಿಗೊಳಿಸಲು ಸಾಧ್ಯವಾಗಲಾರದು. ಹೀಗೆ ಯಾವ ಗುಣಧರ್ಮ ಸ್ವಭಾವವೂ ಇಲ್ಲದ ಶುದ್ಧ ಸತ್ ಪದಾರ್ಥವು ಯಾವ ಬಾಹ್ಯ ಪ್ರಭಾವವಿಲ್ಲದೆ ಯಾವ ಉದ್ದೇಶವೂ ಇಲ್ಲದೆ ಅನೇಕವಾಗಿ, ವಿಶ್ವವಾಗಿ ತೋರಲು ಆರಂಭವಾಯಿತು ಎಂಬ ವಿಶ್ವಸೃಷ್ಟಿಯ ಅದ್ವೈತ ಪ್ರತಿಕ್ರಿಯೆಯು ಯಾರಿಗೂ ಸಮಾಧಾನಕರವಾಗಲಾರದು. ಈ ರೀತಿಯಿಂದ ಅದ್ವೈತ ಹಾಗೂ ಬೌದ್ಧಮತಗಳ ವಿಚಾರಧಾರೆಗಳಿಂದ ಜಗತ್ತಿನ ತಟಸ್ಥ ನಾಗರಿಕನಿಗೆ ಹಾಗೂ ಪ್ರಾಮಾಣಿಕ ಜಿಜ್ಞಾಸುವಿಗೆ ತೃಪ್ತಿಕರವಾದ ಮಾರ್ಗದರ್ಶನವು ದೊರಕಲು ಈ ಕೆಲವು ತೊಡಕುಗಳು ಇರುವುದನ್ನು ನಾವು ಇಷ್ಟರವರೆಗೆ ನಿರೂಪಿಸಿರುವೆವು.

ಇನ್ನು ಜಗತ್ತಿನ ಹಾಗೂ ಗುಣಪೂರ್ಣನಾದ ಪರಮಾತ್ಮನ ಅಸ್ತಿತ್ವವನ್ನು ಒಪ್ಪಿಕೊಳ್ಳುವ ದರ್ಶನಗಳನ್ನು ಪರ್ಯಾಲೋಚಿಸುವಾ. ಈ ದರ್ಶನಗಳಂತೆ ದೇವರೇ ಲೀಲೆಯಿಂದ ಜಗತ್ತಿನ ರೂಪವನ್ನು ಪಡೆದಿರುತ್ತಾನೆ. ಬ್ರಹ್ಮನ ಒಂದು ಪರಿಣಾಮ, ರೂಪಾಂತರವೇ ಜಗತ್ತು, ಜೀವರೆಂದರೆ ಪರಮಾತ್ಮನ ತುಣುಕುಗಳು. ಉಪಾಧಿಗಳಿಂದಾಗಿ ಪರಮಾತ್ಮನಿಂದ ಬೇರ್ಪಡಿಸಲ್ಪಟ್ಟ ಅವನ ಭಾಗಗಳು. ಪೂರ್ಣ ಬ್ರಹ್ಮನೇ ಪೂರ್ಣತ್ವಕ್ಕೆ ಇಳಿದು ಜೀವನಾಗುವನು. ಸ್ವೇಚ್ಛೆಯಿಂದ ಬ್ರಹ್ಮನೇ ಜಗತ್ತಾಗಿ ಪರಿಣಮಿಸಿದ್ದರಿಂದ ಜಗತ್ತೂ ಸತ್ಯವೇ ಇದೆ. ಪರಮಾತ್ಮನಿಂದ ಬೇರ್ಪಡಿಸಲ್ಪಟ್ಟ ಜೀವರು ಕೊನೆಗೆ ಪರಮಾತ್ಮನಲ್ಲಿ ಐಕ್ಯವನ್ನು ಪಡೆಯುತ್ತಾರೆ. ಭಾಸ್ಕರರು ಮತ್ತು ವಲ್ಲಭರು ಹೆಚ್ಚು ಕಡಿಮೆ ಒಂದೇ ರೀತಿಯಾಗಿ ಈ ತತ್ತ್ವವನ್ನು ಪ್ರತಿಪಾದಿಸಿರುವರು. ಇತ್ತೀಚೆಗೆ ಅರವಿಂದರು ಈ ದರ್ಶನವನ್ನೇ ಅನುಸರಿಸಿದ್ದುದು ಕಂಡುಬರುತ್ತದೆ.

ಜಿಜ್ಞಾಸುಗಳಿಗೆ ಈ ವಾದದಿಂದಲೂ ಆತ್ಮಸಮಾಧಾನವು ದೊರೆಯಲಾರದು. ಬ್ರಹ್ಮನೇ ಪ್ರಪಂಚವಾಗಿ ವಿಕಾರಗೊಳ್ಳುವುದಾದರೆ ಸೃಷ್ಟಿಯ ಉದ್ದೇಶವೇನು? ಅದ್ವೈತಮತದಲ್ಲಿಯಾದರೋ ನಿರ್ಗುಣ ಬ್ರಹ್ಮನಲ್ಲಿ ಮಾಯೆಯಿಂದಾಗಿ ಪ್ರಪಂಚದ ಕಲ್ಪನೆಯಾಗುವುದರಿಂದ ಸೃಷ್ಟಿಯ ಉದ್ದೇಶವನ್ನು ಅದು ವಿವರಿಸದಿದ್ದರೆ ದೊಡ್ಡ ಪ್ರಮಾದವಾಗಲಾರದು. ಆದರೆ ಈ ವಾದದಲ್ಲಿ ಪರಿಪೂರ್ಣನಾದ ಪರಮಾತ್ಮನು ಸ್ವೇಚ್ಛೆಯಿಂದ ಜಗತ್ತಾಗಿ ಪರಿಣಮಿಸುವಂತಹ ಹಾಗೂ ತನ್ನಿಂದಲೇ ಅಪೂರ್ಣವಾದ ಜೀವಭಾಗಗಳನ್ನು ಏರ್ಪಡಿಸುವಂತಹ ಗೊಂದಲಕ್ಕೆ ಇಳಿಯುವಂತಹ ಆವಶ್ಯಕತೆ ಏನು? ಪರಮಾತ್ಮನು ತಾನು ಅಪೂರ್ಣತ್ವಕ್ಕೆ ಇಳಿದು, ದುಃಖದುಮ್ಮಾನಗಳ ಆಗರವಾದ ವಿಶ್ವದ ರೂಪದಿಂದ ಇರುವುದು ಅವನ ಕ್ರೀಡೆಯಾಗಿರಲು ಸಾಧ್ಯವೆ? ಇನ್ನು ಪರಮಾತ್ಮನು ಸ್ವೇಚ್ಛೆಯಿಂದ ಅನಂತ ಜೀವರಾಗಿ ವಿಭಾಗ ಹೊಂದಿದ್ದರೆ ಇವೆಲ್ಲಾ ನಾಟಕದ ವೇಷಾಂತರಗಳಾಗುವವು. ಆಗ ಮುಕ್ತಿಗಾಗಿ ಜೀವರು ಚಡಪಡಿಸುವುದು, ಅದಕ್ಕಾಗಿ ವಿವಿಧ ಕ್ಲೇಶಯುಕ್ತವಾದ ಅತಿ ಕಠಿಣವಾದ ಸಾಧನ ಮಾರ್ಗವನ್ನು ಅನುಸರಿಸುವುದು ಇವೆಲ್ಲಾ

ಅರ್ಥಶೂನ್ಯವಾಗುವುವು. ಸೃಷ್ಟಿಯು ನಿರುದ್ದೇಶಕವೂ ಕೇವಲ ಲೀಲೆಯೂ ಆಗಿರುವುದರಿಂದ ಎಲ್ಲಾ ಸಾಧನಾನುಷ್ಠಾನಗಳೂ ಕೇವಲ ನಾಟಕೀಯ ಸ್ವರೂಪವನ್ನು ತಾಳುವುದರಿಂದ ಅವುಗಳ ಆಚರಣೆಗೆ ಸಮುಚಿತವಾದ ಪ್ರಚೋದನೆಯು ದೊರೆಯಲಾರದು.

ಪರಮಾತ್ಮನಿಂದ ದೈವವಶಾತ್ ಅಕಸ್ಮಾತ್ ಬೇರ್ಪಡೆಯಾದ ಅವನ ಅಂಶಗಳು ಪುನಃ ಅವನಲ್ಲಿ ಐಕ್ಯವನ್ನು ಹೊಂದದೆ ತೃಪ್ತಿಯನ್ನೂ ಶಾಂತಿಯನ್ನೂ ಪಡೆಯಲಾರವು. ಈ ಚಡಪಡಿಸುವಿಕೆಯೇ ಈ ಪೂರ್ಣತ್ವದ ಆಶೆಯೇ ಜೀವರನ್ನು ಸಾಧನ ಹಾಗೂ ಕರ್ತವ್ಯಗಳ ಬಗ್ಗೆ ಪ್ರಚೋದಿಸುತ್ತದೆ ಎಂದು ಹೇಳುವುದಾದರೆ, ಪರಮಾತ್ಮನೇ ಕ್ರೀಡೆಯಿಂದಾಗಿ ಪ್ರಪಂಚ ರೂಪವನ್ನು ಧರಿಸಿ ಈ ನಾಟಕ ಮಾಡುತ್ತಿರುವವನು ಎಂಬುದನ್ನು ಬಿಡಬೇಕಾಗುವದು. ಮತ್ತು ಪೂರ್ಣ ವಸ್ತುವು ಹೀಗೆ ಪರವಶತೆಯಿಂದ ಅಪೂರ್ಣತ್ವಕ್ಕೆ ಇಳಿಯಬೇಕಾದರೆ ಅದರ ಪೂರ್ಣತ್ವದಲ್ಲಿಯೇ ಒಂದು ಲೋಪವಿದೆಯೆನ್ನ ಬೇಕಾಗುವುದು. ಮತ್ತು ಬ್ರಹ್ಮನಲ್ಲಿ ಈ ಅನಪೇಕ್ಷಿತವಾದ ಬದಲಾವಣೆಯಾಗಬೇಕಾದರೆ ಬ್ರಹ್ಮನನ್ನು ಮೀರಿದ ಒಂದು ಬೇರೆ ಶಕ್ತಿಯ ಒತ್ತಡವು ಇದಕ್ಕೆ ಕಾರಣವೆನ್ನಬೇಕಾಗುವುದು. ಆಗ ಬ್ರಹ್ಮನ ಶ್ರೇಷ್ಠತ್ವವನ್ನೇ ಅವನ ಪರಿಪೂರ್ಣತ್ವವನ್ನೇ ಅಲ್ಲಗಳೆದಂತಾಗುವುದು. ಈ ದರ್ಶನದಲ್ಲಿ ಬ್ರಹ್ಮನನ್ನು ಬಿಟ್ಟು ಬೇರೆ ವಸ್ತುವೇ ಇಲ್ಲದಿರುವುದರಿಂದ ಬ್ರಹ್ಮನಲ್ಲಿ ಬದಲಾವಣೆಯನ್ನು ತರಬಲ್ಲ ಯಾವ ಬಾಹ್ಯ ಶಕ್ತಿಯನ್ನೂ ಕೂಡಿಸಲು ಬರಲಾರದು. ಹೀಗೆ ವಿಶ್ವವನ್ನು ಪರಬ್ರಹ್ಮನ ಸ್ವೇಚ್ಛೆಯ ಲೀಲಾರೂಪಾಂತರವೆಂದಾಗಲೀ ಪರಮಾತ್ಮನಲ್ಲಿ ಆಗಿರುವ ಅನಿರೀಕ್ಷಿತ, ಆಕಸ್ಮಿಕ ದುರ್ಘಟನೆಯೆಂದಾಗಲೀ ಹೇಳುವುದಾದರೆ ಈ ತೆರನಾದ ಅಸಾಂಗತ್ಯಗಳು ಕಾಣುತ್ತವೆ.

ಮಾತ್ರವಲ್ಲದೆ ಬದ್ಧರೂ ಅಪೂರ್ಣರೂ ದುಃಖಾದಿ ಬಾಧೆಗಳಿಗೆ ಒಳಗಾದವರೂ ಆದ ಜೀವರು ಬ್ರಹ್ಮನ ಭಾಗಗಳೆಂದು ಹೇಳುವುದು ಅವನ ಪೂರ್ಣತ್ವದ ನಿರಾಕರಣೆಯೇ ಸರಿ. पूर्णमदः पूर्णमिदं पूर्णात्पूर्णमुदच्यते। पूर्णस्य पूर्णमादाय पूर्णमेवावशिष्यते ಪೂರ್ಣದ ಒಂದು ಭಾಗವು ಅಪೂರ್ಣವೂ ದೋಷಯುಕ್ತವೂ ಆಗಿದ್ದರೆ ಆ ವಸ್ತುವು ಪೂರ್ಣವೆನಿಸಲಾರದು.

ಜಗತ್ತಿನಲ್ಲಿ ಅನೇಕ ರೀತಿಯ ಗುಣಧರ್ಮಗಳು ತೋರಿಬರುತ್ತಿದ್ದು ಇವು ಮೂಲತಃ ಬ್ರಹ್ಮನಲ್ಲಿ ಇಲ್ಲ. ರಾಗ, ದ್ವೇಷ, ದುಃಖ, ಅಜ್ಞಾನ, ಸ್ಥೌಲ್ಯ ಮುಂತಾದ ಜೀವ ಜಡರಲ್ಲಿ ತೋರುವ ವಿಕಾರಗಳು ಬ್ರಹ್ಮನ ಗುಣಧರ್ಮಗಳಲ್ಲ, ಜಗತ್ತಿನ ಗುಣಧರ್ಮಗಳೆಲ್ಲಾ ಬ್ರಹ್ಮನ ಚಿನ್ಮಯ ಸ್ವರೂಪದಿಂದ ಅತ್ಯಂತ ವಿಲಕ್ಷಣಗಳಾಗಿವೆಯಲ್ಲದೆ ಕೇವಲ ವಿರುದ್ಧಗಳಾಗಿವೆ. ಹೀಗಿರುವಾಗ ಬ್ರಹ್ಮನೇ ಸ್ಥೂಲ ಜಗತ್ತಿನ ರೂಪದಲ್ಲಿ ಪರಿಣಾಮ ಹೊಂದಿರುವನು ಎಂಬ ವಾದವು ಎಷ್ಟರಮಟ್ಟಿಗೆ ಸುಸಂಬದ್ಧವೆನಿಸಬಲ್ಲದು? ಬ್ರಹ್ಮನಲ್ಲಿ ಇಲ್ಲದ ಗುಣಧರ್ಮಗಳು ಜಗತ್ತಿನಲ್ಲಿ ಎಲ್ಲಿಂದ ಸೇರಿಕೊಂಡವು? ಬ್ರಹ್ಮಮಯವಾದ ಪ್ರಪಂಚದಲ್ಲಿ ಇಷ್ಟು ಕಷ್ಟ ದುಃಖದುಮ್ಮಾನಗಳೇಕೆ ಕಾಣಸಿಗುತ್ತವೆ? ಎಂಬ ಜಿಜ್ಞಾಸೆಗೆ ಈ ದರ್ಶನದಲ್ಲಿ ಉತ್ತರವೇ ದೊರೆಯುವುದಿಲ್ಲ.

ಇಂತಹ ಪ್ರಶ್ನೆಗಳೇ ಕ್ರೈಸ್ತ ಮತ್ತು ಇಸ್ಲಾಂ ದರ್ಶನಗಳ ಬಗ್ಗೆಯೂ ಏಳುವುವು. ಈ ದರ್ಶನಗಳಲ್ಲಿ ಜಗತ್ತು ಸತ್ಯವೂ ಗುಣಪೂರ್ಣನಾದ ಪರಮಾತ್ಮನಿಂದ ಭಿನ್ನವಾದದ್ದೂ ಎಂಬ ಮುಖ್ಯ ಅಂಶವು ಅಂಗೀಕರಿಸಲ್ಪಟ್ಟಿದ್ದರೂ ಜಗತ್ತಿನ ಉತ್ಪತ್ತಿಯನ್ನು ಅಸಂಗತ ಹಾಗೂ ಅವೈಜ್ಞಾನಿಕ ರೀತಿಯಲ್ಲಿ ಪ್ರತಿಪಾದಿಸಲಾಗಿದೆ. ಇವರು ಪರಮಾತ್ಮನೇ ಜಗತ್ತಾಗಿ ಪರಿಣಮಿಸಿದ್ದು ಎನ್ನುವುದಿಲ್ಲ. ಪರಮಾತ್ಮನು ತನ್ನ ಇಚ್ಛೆಯಿಂದ ಒಮ್ಮಿಂದೊಮ್ಮೆಲೆ ಯಾವ ಮೂಲ ವಸ್ತುವೂ ಇಲ್ಲದ ಜಗತ್ತನ್ನು ಸೃಜಿಸಿದ್ದಾನೆ ಎನ್ನುತ್ತಾರೆ. ಇದು ವೈಜ್ಞಾನಿಕ ದೃಷ್ಟಿಯಲ್ಲಿ ಅಸಂಬದ್ಧವೆನಿಸುವುದು. ಯಾವ ಮೂಲ ವಸ್ತುವೂ ಇಲ್ಲದೆ ಈ ಸ್ಥೂಲ ಜಗತ್ತು ಅದರ ವೈಚಿತ್ರ ಹಾಗೂ ಅನಂತ ಗುಣಧರ್ಮಗಳು ಸ್ಪಷ್ಟವಾಗಿರುವವೆಂದೂ ಈ ಸೃಷ್ಟಿಯ ಮುಂಚೆ

ಪರಮಾತ್ಮನನ್ನು ಬಿಟ್ಟು ಸೃಷ್ಟಿಗೆ ಮೂಲವಾದ ಯಾವ ಜಡವಸ್ತುವೂ ಇರಲಿಲ್ಲವೆಂದು ಎನ್ನುವುದು ತರ್ಕಕ್ಕೆ ನಿಲ್ಲದ ಹಾಗೂ ಬುದ್ಧಿಗೆ ಒಪ್ಪದ ಮಾತು. ಹೀಗೆ ಆಳವಾಗಿ ಮಥಿಸಿರದ ಇಂತಹ ಅಪ್ರಗಲ್ಭ ಆಧ್ಯಾತ್ಮ ದರ್ಶನಗಳಿಂದಾಗಿಯೇ ಪಾಶ್ಚಾತ್ಯ ದೇಶಗಳಲ್ಲಿ ವಿಜ್ಞಾನವು ಆಧ್ಯಾತ್ಮವನ್ನು ಅಲಕ್ಷಿಸಲು ಹಾಗೂ ವಿರೋಧಿಸಲು ಪ್ರವರ್ತಿಸಿದ್ದಾಗಿದೆ. ಜಗತ್ತಿನ ಅಸ್ತಿತ್ವ, ಪರಮಾತ್ಮನ ಸರ್ವೋತ್ತಮತ್ವ ಹಾಗೂ ಗುಣಪೂರ್ಣತ್ವ ಮುಂತಾದ ಜೀವನಕ್ಕೆ ಅವಶ್ಯಕಗಳೂ ಸತ್‌ಪ್ರಭಾವಶಾಲಿಗಳೂ ಆದ ಸುಂದರ ವಿಚಾರಗಳನ್ನು ಕ್ರೈಸ್ತ ಮತ್ತು ಮುಸ್ಲಿಂ ಧರ್ಮಗಳು ಒಳಗೊಂಡಿದ್ದರೂ ಅವುಗಳನ್ನು ತರ್ಕಬದ್ಧ ವೈಜ್ಞಾನಿಕ ಸರಣಿಯಿಂದ ಜಗತ್ತಿನ ಮುಂದೆ ಇಡಲು ಅಸಮರ್ಥಗಳಾಗಿದ್ದರಿಂದ ಮುಂದಿನ ವೈಜ್ಞಾನಿಕ ಪ್ರಪಂಚದ ಎದುರು ಇವು ಬಹುಕಾಲ ನಿಲ್ಲಲಾರವು. ಇವು ಕೇವಲವಾಗಿ ಜನರ ನಂಬಿಕೆಯ ಬಲದಿಂದ ನಿಂತಿವೆಯಲ್ಲದೆ ಆಧುನಿಕ ಸುಶಿಕ್ಷಿತರ ಹೃದಯ ಮತ್ತು ಬುದ್ಧಿಯನ್ನು ಸೆಳೆಯಲು ಅಕ್ಷಮಗಳಾಗಿವೆ. ಯಾವ ಮೂಲ ವಸ್ತುವೂ ಇಲ್ಲದೆ ಪರಮಾತ್ಮನು ಶೂನ್ಯದಿಂದಲೇ ಈ ಸತ್ಯ ಪ್ರಪಂಚವನ್ನು ಸೃಷ್ಟಿಸಿದನು ಎನ್ನುವುದಕ್ಕಿಂತ ಜಗತ್ತು ಬರೀ ಭ್ರಮೆ, ಕಲ್ಪನೆ, ಸ್ವಪ್ನ ಸೃಷ್ಟಿಯೆನ್ನುವ ಅದ್ವೈತವಾದದ ಪ್ರಕ್ರಿಯೆಯೇ ಹೆಚ್ಚು ಅರ್ಥವತ್ತಾಗಿ ತೋರಬಹುದು. ಏನೇ ಇರಲಿ ಜೀವರು ಪರಮಾತ್ಮನ ಸೇವಕರು ಅವನು ಜಗತ್ತಿಗೆ ಸ್ವಾಮಿ ಎಂಬ ವಿಚಾರಗಳನ್ನು ಪ್ರಚಾರಪಡಿಸಿ, ಪರಮಾತ್ಮನಲ್ಲಿ ಭಕ್ತಿಭಾವದ ಆವಶ್ಯಕತೆಯನ್ನು ಒಪ್ಪಿ, ಆ ಮೂಲಕವಾಗಿ ಸದ್ಗುಣಾಸಕ್ತಿ ಮತ್ತು ಕರ್ತವ್ಯ ನಿಷ್ಠೆಯನ್ನು ಬೆಳಗಿಸಲು ಅನೇಕ ವಿಷಯಗಳಲ್ಲಿ ಸತ್ಯಕ್ಕೆ ಸಮೀಪವಾಗಿರುವ ಈ ಕ್ರೈಸ್ತ ಮತ್ತು ಮುಸ್ಲಿಂ ಧರ್ಮಗಳು ಸತ್ಯಶೋಧನೆಯಲ್ಲಿ ಬಹಳವಾಗಿ ಮುಂದುವರಿದಿವೆಯೆಂದು ಇವುಗಳನ್ನು ಅಭಿನಂದಿಸಬಹುದು.

ಆದರೆ ಜಗತ್ತಿನ ಸೃಷ್ಟಿಯ ಉದ್ದೇಶವೇನು? ಜಗತ್ತು ಯಾಕೆ ಆಗಿದೆ? ಎನ್ನುವುದರ ಜೊತೆಗೆ ಜಗತ್ತು ಹೀಗೆಯೇ ಏಕೆ ಆಗಿದೆ? ಎಂಬ ಪ್ರಶ್ನೆಗಳನ್ನು ಈ ಮತಗಳು ಎದುರಿಸಬೇಕಾಗಿದೆ. ಪರಿಪೂರ್ಣನಾದ ದೇವನು ಒಮ್ಮಿಂದೊಮ್ಮೆಲೇ ಈ ಜೀವ, ಜಡ ಪ್ರಪಂಚವನ್ನು ಯಾಕೆ ಸೃಷ್ಟಿಸಿದ, ಏನನ್ನೂ ಸೃಜಿಸದೆ ಆತ್ಮಾರಾಮದಿಂದ, ಪೂರ್ಣಸ್ವಾನಂದದಿಂದ ಅವನು ಸುಮ್ಮನೇ ಯಾಕಿರಬಾರದಾಗಿತ್ತು? ಈ ಸೃಷ್ಟಿಯ ವೃಥಾ ಕಾಷ್ಠವ್ಯಸನ ಯಾಕೆ? ಅನವಶ್ಯಕವಾಗಿ ಜೀವರನ್ನು ಸೃಷ್ಟಿಸಿ ಅವರಿಗೆ ಸಂಸಾರ, ಮೋಕ್ಷ, ನಿಯಮ, ನಿರ್ಬಂಧಗಳ ಏರ್ಪಾಡುಗಳನ್ನು ಯಾಕೆ ಮಾಡಬೇಕಾಗಿದೆ? ಸೃಷ್ಟಿಯ ಪೂರ್ವದಲ್ಲಿದ್ದ ಹಾಗೆ ಯಾವ ಜೀವ, ಜಡ ಪ್ರಪಂಚಗಳೂ ಇಲ್ಲದೆ ದೇವನೊಬ್ಬನೇ ಸದಾ ವಿಹರಿಸಬಹುದಿತ್ತು. ಇನ್ನು ಸೃಷ್ಟಿಯಲ್ಲಿಯೂ ವ್ಯಕ್ತಿವ್ಯಕ್ತಿಗಳಲ್ಲಿ ವ್ಯತ್ಯಾಸವೇಕೆ? ದಯಾಳುವೂ ಸರ್ವಶಕ್ತನೂ ಆಗಿ ವ್ಯರ್ಥವಾಗಿ ಜೀವರನ್ನು ದುಃಖದಲ್ಲಿ ತೊಳಲಾಡಿಸುವುದೇಕೆ? ಈ ಬೇನೆ ಬೇಸರಿಕೆ, ನರಳಾಟ, ತೊಳಲಾಟಗಳ ಜಗತ್ತನ್ನು ದೇವರು ಯಾಕೆ ಸೃಜಿಸಿದನು? ಆನಂದಮಯ ದಿವ್ಯ ಸುಂದರ ವಿಶ್ವವನ್ನು ಅವನು ರಚಿಸಲಾರದಾದನೇ? ಎಲ್ಲ ಜೀವರೂ ಒಂದೇ ರೀತಿಯಿಂದ ನಕ್ಕುನಲಿಯುವಂತೆ ಅವರನ್ನು ನಿರ್ಮಿಸದೆ, ವ್ಯಕ್ತಿ ವ್ಯಕ್ತಿಗಳ ಜೀವನದಲ್ಲಿ ಈ ವ್ಯತ್ಯಾಸವನ್ನು ಯಾಕೆ ಏರ್ಪಡಿಸಿದನು? ಇಂತಹ ಜಗತ್ತನ್ನು ನಿರ್ಮಿಸಿದ ಪರಮಾತ್ಮನು ಪರಿಪೂರ್ಣನೂ, ದಿವ್ಯಗುಣಶಾಲಿಯೂ, ಸರ್ವಶಕ್ತನೂ ಎನ್ನಬಹುದೇ? ಈ ಅಪೂರ್ಣವಾದ ಜಗತ್ತು ಪರಿಪೂರ್ಣನಾದ ದೇವರ ಅಸ್ತಿತ್ವಕ್ಕೇ ದೊಡ್ಡ ಆಹ್ವಾನವಾಗಿದೆ. ಇಂತಹ ಆಧುನಿಕ ಅನೇಕ ಪ್ರಶ್ನೆಗಳ ಮುಂದೆ ಈ ಕ್ರೈಸ್ತ ಹಾಗೂ ಮುಸ್ಲಿಂ ತತ್ತ್ವಜ್ಞಾನಗಳು ಎಡವಿ ಬೀಳುವುದು ಸಹಜವಿದೆ. ಯಾಕೆಂದರೆ ಈ ಮತಗಳು ಕೇವಲ ಭಾವನಾತ್ಮಕ ವಾತಾವರಣದಲ್ಲಿ ಜನ್ಮ ತಾಳಿವೆಯೇ ಹೊರತು ತತ್ತ್ವಜ್ಞಾನಿಯ ದೃಷ್ಟಿ, ಹಾಗೂ ಬುದ್ಧಿವಾದೀ ಮನೋವೃತ್ತಿಯ ಮೇಲೆ ಸ್ಥಾಪಿತಗಳಾಗಿಲ್ಲ. ಆದ್ದರಿಂದಲೇ ಇಂತಹ ತರ್ಕಪ್ರತಿಭೆ ಹಾಗೂ ವಾದಜಾಲದ ಜೊತೆಗೆ ಅವು ಸೆಣಸಾಟವಾಡಲಾರವು.

ಶ್ರೀವೈಷ್ಣವಮತದ ಸ್ಥಾಪಕರಾದ ಶ್ರೀರಾಮಾನುಜಾಚಾರ್ಯರು ಈ ದಿಶೆಯಲ್ಲಿ ಬಹಳಷ್ಟು

ಮುಂದುವರಿದಿದ್ದಾರೆ. ಇವರು ಜಗತ್ತಿನ ಸತ್ಯತ್ವವನ್ನೂ ಜೀವನಿಗೆ, ಬ್ರಹ್ಮನಿಂದ ಬೇರೆಯಾದ ಅಸ್ತಿತ್ವವನ್ನೂ, ಸಮರ್ಥಿಸಿರುವರಲ್ಲದೆ ಅನಂತ ಗುಣಪೂರ್ಣನಾದ ಭಗವಂತನಲ್ಲಿ ಭಕ್ತಿಗೆ ವಿಶೇಷ ಮಹತ್ವವನ್ನು ನೀಡಿ ಅದರಿಂದ ಜೀವನದಲ್ಲಿ ಸ್ಫೂರ್ತಿ ಹಾಗು ಒಳ್ಳೆತನವನ್ನು ತುಂಬಲು ಪ್ರಯತ್ನಿಸಿದ್ದಾರೆ. ಜಗತ್ತಿಗೆ ಮೂಲ ವಸ್ತುವಾದ ಪ್ರಕೃತಿಯು ಅನಾದಿಯೆಂದೂ ಇದೂ ಜೀವ ವರ್ಗವೂ ಪ್ರಪಂಚವೂ ಪರಮಾತ್ಮನ ಶರೀರವೆಂದೂ ಕರೆದಿರುವರು. ಇವರಾದರೂ ಆಗಿನ ಅದ್ವೈತದ ಭಾಷೆಯನ್ನು ತಮ್ಮ ತತ್ತ್ವಜ್ಞಾನಕ್ಕೆ ವಿರೋಧವಾಗದಂತೆ ಹೊಂದಿಸಿಕೊಂಡು ಬಳಸಿರುವರು. ಬ್ರಹ್ಮನೇ ಜಗತ್ತಿಗೆ ನಿಮಿತ್ತವೂ ಉಪಾದಾನವೂ ಆಗಿದ್ದಾನೆ ಎಂಬ ಭಾಸ್ಕರ ಮತ್ತು ಶಂಕರರ ವಾದವನ್ನು ಶ್ರೀರಾಮಾನುಜರು ಒಮ್ಮೆಲೇ ತಿರಸ್ಕರಿಸದೆ ಜಗತ್ತಿನ ಸತ್ಯತ್ವಕ್ಕೂ ಬ್ರಹ್ಮ ಹಾಗೂ ಜಗತ್ತಿನ ಪ್ರತ್ಯೇಕತೆಗೂ ಬಾಧಕವಾಗದಂತೆ ಬ್ರಹ್ಮನು ಜಗತ್ತಿಗೆ ಉಪದಾನ ಎಂಬುದನ್ನು ಹೊಸ ಹಾಗೂ ಕ್ಲಿಷ್ಟ ರೀತಿಯಲ್ಲಿ ಉಪಪಾದಿಸಲು ಪ್ರಯತ್ನಿಸಿ ಬ್ರಹ್ಮನಿಗೆ ಉಪಾದಾನತ್ವವನ್ನು ಅಂಗೀಕರಿಸಿರುವುದೂ, ಅದ್ವೈತ ಶಬ್ಧವನ್ನೂ ಬಿಡದೆ ಅದನ್ನೂ ಹೊಸ ಅರ್ಥದಲ್ಲಿ ಪ್ರಯೋಗಿಸಿರುವುದೂ ಶ್ರೀರಾಮಾನುಜಾಚಾರ್ಯರಿಗೆ ಅದ್ವೈತದ ಪ್ರಭಾವವನ್ನು ಎದುರಿಸಲು ಎಷ್ಟು ತೊಡಕುಗಳು ಇದ್ದವು ಎಂಬುದನ್ನು ಸೂಚಿಸುತ್ತವೆ. ಅಂತೂ ಬೌದ್ಧಕ್ರಾಂತಿಯ ನಂತರ ಹುದುಗಿಹೋಗಿದ್ದ ವೈದಿಕಧರ್ಮದ ಅನೇಕ ಭಾಗವನ್ನು ಪುನಃ ಶುದ್ಧರೂಪದಲ್ಲಿ ಬೆಳಕಿಗೆ ತರುವ ಮಹಾ ಸಾಹಸದ ಕಾರ್ಯವನ್ನು ಶ್ರೀರಾಮನುಜರು ಆರಂಭಿಸಿದ್ದರೆಂದು ಹೇಳಬಹುದು. ಅಂದಿನ ಯುಗದಲ್ಲಿ ಇದು ಎಂತಹ ಕಷ್ಟಕರ ಕಾರ್ಯವೆಂಬುದನ್ನು ನೆನೆದಾಗ ಶ್ರೀರಾಮಾನುಜರ ಬಗ್ಗೆ ನಮ್ಮಲ್ಲಿ ಗೌರವದ ಭಾವಗಳು ಇಮ್ಮಡಿಯಾಗುವುದು ಸಹಜ. ಅಂತೂ ಅಪೌರುಷೇಯವಾದ, ವೇದದಲ್ಲಿ ಪ್ರತಿಪಾದಿತವಾದ ವಿಷಯಗಳ ಬಗ್ಗೆ ಇಷ್ಟರ ವರೆಗೆ ವಿಮರ್ಶಿಸಿದ ಎಲ್ಲ ಮತಗಳಿಂದ ಶ್ರೀರಾಮಾನುಜಾಚಾರ್ಯರ ವಿಚಾರಸರಣಿಯು ಹೆಚ್ಚು ಸಮೀಪದಲ್ಲಿದೆಯೆಂಬುದನ್ನು ನಾವು ಗಮನಿಸಬಹುದು.

ಆದರೂ ಪರಮಾತ್ಮನು ಜಗತ್ತನ್ನು ಹೀಗೇಕೆ ನಿರ್ಮಿಸಿದ್ದಾನೆ ಎಂಬ ಪ್ರಶ್ನೆಯು ಮಾತ್ರ ಹಾಗೆಯೇ ಉಳಿಯುವುದು. ವಿಶಿಷ್ಟಾದ್ವೈತದ ತತ್ತ್ವಜ್ಞಾನದಂತೆ ಈ ಜೀವರನ್ನು ಪರಮಾತ್ಮನು ನಿರ್ಮಿಸಿರದೆ ಇವು ಅನಾದಿಗಳಾಗಿದ್ದರೂ ಮೂಲತಃ ಜೀವಾತ್ಮರ ಸ್ವರೂಪ ಹಾಗೂ ವ್ಯಕ್ತಿತ್ವಗಳು ಸಮಾನವಾಗಿವೆ. ಹೀಗಿದ್ದರೆ ಪ್ರಪಂಚದಲ್ಲಿ ಈ ವ್ಯತ್ಯಾಸಗಳು ಎಲ್ಲಿಂದ ಬಂದವು? ಎಲ್ಲ ಜೀವರನ್ನೂ ಒಂದೇ ರೀತಿಯಿಂದ ಸುಖಿಗಳಾಗಿ ಒಂದೇ ತರದ ಮೇಲ್ಮಟ್ಟದ ಗುಣನಡತೆಗಳುಳ್ಳವರನ್ನಾಗಿ ದೇವರು ಯಾಕೆ ಮಾಡಲಿಲ್ಲ? ಒಬ್ಬಿಬ್ಬರಲ್ಲಿ ಒಂದೊಂದು ರೀತಿಯ ವ್ಯತ್ಯಾಸಗಳನ್ನು ಯಾಕೆ ದೇವರು ಮಾಡಿದ್ದಾನೆ, ಎಂಬ ಪ್ರಶ್ನೆಗಳು ಮರುಕಳಿಸುತ್ತವೆ. ಜೀವಸ್ವರೂಪದಲ್ಲಿ, ಅವರ ವ್ಯಕ್ತಿತ್ವದಲ್ಲಿ ಇಲ್ಲದೆ ಇದ್ದ ವ್ಯತ್ಯಾಸ, ವೈವಿಧ್ಯಗಳು ಪ್ರಪಂಚದಲ್ಲಿ ಕಾಣಸಿಗಬೇಕಾದರೆ ಈಶ್ವರನೇ ಇವುಗಳನ್ನು ವಿಧಿಸಿದ್ದಾನೆ ಎನ್ನಬೇಕಾಗುವದು. ಕರುಣಾಶೀಲನೂ, ಸರ್ವಸಮನೂ ಆದ ಪರಮಾತ್ಮನು ನಿಷ್ಕಾರಣವಾಗಿ ಯಾವ ತಳಹದಿಯೂ ಇಲ್ಲದೆ ಪ್ರಪಂಚದಲ್ಲಿ ಇಂತಹ ವ್ಯತ್ಯಾಸ ವೈಚಿತ್ರ್ಯಗಳನ್ನು ಯಾಕೆ ನಿರ್ಮಿಸಿದ್ದಾನೆ? ಇದು ಪರಮಾತ್ಮನ ಪೂರ್ಣತ್ವಕ್ಕೆ ಹೊಂದುವಂತಹುದಲ್ಲವೆಂದು ಸ್ವಾಭಾವಿಕವಾಗಿ ಅನಿಸುತ್ತದೆ. ಈವತ್ತು ಭೌತಿಕ ವಾದವು ಆಧ್ಯಾತ್ಮದ ಹಾಗೂ ಈಶ್ವರವಾದದ ಮೇಲೆ ಹಾಕುತ್ತಿರುವ ಸವಾಲು ಇದೇ ಆಗಿದೆ. ಪರಿಪೂರ್ಣನಾದ ದೇವನೊಬ್ಬನಿದ್ದರೆ ಜಗತ್ತು ಅಪೂರ್ಣವೂ ವ್ಯತ್ಯಾಸಯುಕ್ತವೂ ಯಾಕೆ ಆಯಿತು? ಎಂಬ ಪ್ರಶ್ನೆಯನ್ನೇ ಆಧ್ಯಾತ್ಮಿಕ ತತ್ತ್ವಜ್ಞಾನಗಳೆಲ್ಲ ಎದುರಿಸಬೇಕಾಗಿದೆ. ಕರ್ಮಗಳಿಂದಾಗಿ ಈ ವ್ಯತ್ಯಾಸವು ನಿಷ್ಪನ್ನವಾಗುವುದೆನ್ನುವುದಾದರೆ, ಆ ಕರ್ಮಗಳ ವ್ಯತ್ಯಾಸಕ್ಕೂ ಕಾರಣನೆಂಬ ಪ್ರಶ್ನೆ ಏಳುವುದು ಎಲ್ಲ ಆತ್ಮರಲ್ಲಿ ಮೂಲತಃ ಸಮಾನತೆ ಹಾಗೂ ಏಕವಿಧತೆಯನ್ನು ಸಾರಿದ ಶ್ರೀರಾಮಾನುಜ ಮತವು ಈ ವಿಷಯದಲ್ಲಿ ಅಪ್ರತಿಭವಾದದ್ದು ಕಂಡುಬರುವುದು. ಹೆಚ್ಚಾಗಿ ಪ್ರಚಲಿತ ಆಸ್ತಿಕ್ಯವಾದಗಳಿಗೆಲ್ಲಾ ಈ ಸಮಸ್ಯೆಯು ಕಬ್ಬಿಣದ ಕಡಲೆಯಂತಿದ್ದು

ಎಟಕಲಾರದ ವಿಷಯವಾಗಿದೆ. ನಿರೀಶ್ವರವಾದಿಗಳು ಈ ಪ್ರಶ್ನೆಯನ್ನು ಹೊಸ ಹೊಸ ಚಮತ್ಕಾರದ ರೀತಿಯಿಂದ ಎತ್ತಿ ಆಸ್ತಿಕ್ಯವಾದಿಗಳನ್ನು ನಿರುತ್ತರಗೊಳಿಸುತ್ತಿದ್ದಾರೆ.

ಜಗತ್ತಿನ ಸತ್ವವನ್ನು ಒಪ್ಪಿದ್ದರೂ ಜೀವ ಮತ್ತು ಈಶ್ವರರಿಗೆ ಐಕ್ಯವನ್ನು ಪ್ರತಿಪಾದಿಸುವ ಶೈವ ತತ್ತ್ವಜ್ಞಾನವೂ ಶಿವನು ಜೀವನಾಗಿ ಅಪೂರ್ಣತ್ವಕ್ಕೆ ಹೇಗೆ ಇಳಿದನು? ಶಿವ-ಜೀವರಲ್ಲಿ ಭೇದವನ್ನು ಕಲ್ಪಿಸುವ ಈ ಸೃಷ್ಟಿಯ ಉದ್ದೇಶವೇನು? ಮೂಲತಃ ಒಂದೇ ಆತ್ಮವಿರುವಾಗ ಈ ಸೃಷ್ಟಿಯಲ್ಲಿ ಜೀವರಲ್ಲಿ ವೈಚಿತ್ರ್ಯಗಳು ಹೇಗೆ ಬಂದವು? ಪರಿಪೂರ್ಣನಾದ ಶಿವನ ಮೇಲೂ ಪ್ರಭಾವ ಬೀರಿ ಈ ಸತ್ಯವಾದ ದುಃಖಬಂಧಗಳನ್ನು ಅವನಲ್ಲಿ ನಿರ್ಮಿಸಬಹುದಾದಂತಹ ಇನ್ನೊಂದು ಶಕ್ತಿಯು ಇರಲು ಸಾಧ್ಯವೇ? ಮುಂತಾದ ಪ್ರಶ್ನೆಗಳು ಬಂದಾಗ ಅವುಗಳನ್ನು ಉತ್ತರಿಸಲು ನಾವು ಈವರೆಗೆ ಪ್ರತಿಪಾದಿಸಿದ ಸರಣಿಯಿಂದಲೇ ಅಸಮರ್ಥವಾಗಿದೆ.

ಹೀಗೆ ಈವರೆಗೆ ನಾವು ಪರ್ಯಾಲೋಚಿಸಿದ ಪ್ರಚಲಿತ ತತ್ತ್ವಜ್ಞಾನಗಳಲ್ಲಿ ಪ್ರತಿಯೊಂದ ರಲ್ಲಿಯೂ ಒಂದೊಂದು ರೀತಿಯ ವೈಶಿಷ್ಟ್ಯಗಳಿದ್ದರೂ ಅಭಿಮಾನ ಹಾಗೂ ಆಗ್ರಹವಿಲ್ಲದೆ ಇವುಗಳನ್ನು ವಿಮರ್ಶಿಸಿರುವವರಿಗೆ ಮನಸ್ಸಿನಲ್ಲಿ ಸಹಜವಾಗಿ ಉದ್ಭೂತವಾಗುವ ಅನೇಕ ಜಿಜ್ಞಾಸೆಗಳಿಗೆ ಪರಿಹಾರವು ದೊರಕದಿರುವುದು ಎದ್ದು ಕಾಣುತ್ತದೆ. ಆತ್ಮದ ಸ್ವರೂಪ, ಈಶ್ವರ ಮತ್ತು ಜಗತ್ತಿನ ಸಂಬಂಧ, ಆಧ್ಯಾತ್ಮ ಮತ್ತು ಜೀವನಗಳಿಗೆ ಇರುವ ಸಾಮರಸ್ಯ ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸರಿಯಾದ ಉತ್ತರವು ದೊರೆಯದಿದ್ದರೆ ಸತ್ಯಾನ್ವೇಷಕನಿಗೆ ಹಸಿವು ಹಿಂಗಲಾರದು; ಮಾತ್ರವಲ್ಲದೆ ತತ್ತ್ವಜ್ಞಾನ ಪಥದಲ್ಲಿ ನಿಶ್ಚಿತ ರೀತಿಯಿಂದ ಮುಂದುವರಿಯಲೂ ಶಕ್ಯವಾಗಲಾರದು.

ಹೀಗೆ ಅನೇಕ ಮಹತ್ತ್ವದ ವಿಷಯಗಳಲ್ಲಿ ಕೆಲವೊಂದು ವ್ಯತ್ಯಾಸ, ನ್ಯೂನತೆ ಹಾಗೂ ಅಸಮಗ್ರತೆಗಳು ಇವುಗಳಲ್ಲಿ ಕಂಡುಬರುವುದರಿಂದ ಸತ್ಯದ ಸಮಗ್ರ ದರ್ಶನವನ್ನು ಇವುಗಳಿಂದ ನಿರೀಕ್ಷಿಸಲಾಗದು. ಇಂತಹ ಕೊರತೆ ಲೋಪಗಳನ್ನು ತುಂಬುವ ಪರಿಪೂರ್ಣತೆಯುಳ್ಳ ಪ್ರಮಾಣಬದ್ಧವೂ ವ್ಯವಹಾರ್ಯವೂ ವೈಜ್ಞಾನಿಕವೂ ಆಗಿರುವ ನಮ್ಮ ಮಾನಸಿಕ ಸಮಸ್ಯೆಗಳನ್ನು ಪರಿಹರಿಸಬಲ್ಲ ಸತ್ಯಸಿದ್ಧಾಂತವನ್ನು ಶ್ರೀಮಧ್ವಾಚಾರ್ಯರ ಗ್ರಂಥಗಳಲ್ಲಿ ಕಾಣಬಹುದೆಂಬುದು ಆ ಗ್ರಂಥಗಳನ್ನೂ ಉಳಿದ ಗ್ರಂಥಗಳನ್ನೂ ತುಲನಾತ್ಮಕ ದೃಷ್ಟಿಯಿಂದ, ನಿರ್ವಿಕಾರ ಮನಸ್ಸಿನಿಂದ ನಮ್ಮ ಪ್ರಜ್ಞೆಗನುಗುಣವಾಗಿ ಪರ್ಯಾಲೋಚಿಸಿದಾಗ ನಮಗೆ ಸ್ಪಷ್ಟವಾಗುವುದು. ಯಾವ ವಿಮರ್ಶಕನೂ ನಿಷ್ಪಕ್ಷಪಾತವಾಗಿ ಪರಿಶೀಲಿಸಿದರೆ ಈ ಸತ್ಯವನ್ನು ಮನಗಾಣದಿರಲಾರನು. ಬೌದ್ಧ ಕ್ರಾಂತಿಯಿಂದ ಆರಂಭಿಸಿ ಬೇರೆ ಬೇರೆ ರೂಪಗಳಲ್ಲಿ ಬದಲಾವಣೆ ಹೊಂದಿದ ಆಧ್ಯಾತ್ಮಿಕ ತತ್ತ್ವಜ್ಞಾನವು ಶ್ರೀಮಧ್ವಾಚಾರ್ಯರಿಂದ ಒಂದು ಘಟ್ಟಕ್ಕೆ ಬಂದಂತಾಗಿ ಹಳೆಯ ದಿವ್ಯ ಹಾಗೂ ಶುದ್ಧ ರೂಪದಲ್ಲಿ ಸಮಗ್ರ ರೀತಿಯಿಂದ ಅದನ್ನು ಪುನಃ ಕಂಡುಕೊಳ್ಳಲು ನಮಗೆ ಸಾಧ್ಯವಾಗುವಂತಾಯಿತು. ಬುದ್ಧಮತದ ಸ್ಥಾಪನೆಯ ಕಾಲದಿಂದ ಮರೆಯಾದ ಈ ವೈದಿಕಧರ್ಮದ ಪೂರ್ಣದರ್ಶನವನ್ನು ಪೂರ್ಣಪ್ರಜ್ಞರೇ ಪುನಃ ಜನತೆಗೆ ಮಾಡಿಸಿಕೊಟ್ಟಿರುವರು. ಇವರ ದರ್ಶನದಿಂದ ಇಷ್ಟರ ವರೆಗೆ ವಿವರಿಸಲಾದ ಪ್ರಶ್ನೆಗಳಿಗೆ ಹೇಗೆ ನಾವು ಉತ್ತರವನ್ನು ಪಡೆಯಬಹುದು ಎಂಬುದನ್ನು ಇನ್ನೂ ಸಂಕ್ಷಿಪ್ತವಾಗಿ ವಿಮರ್ಶಿಸೋಣ.

— ೩ —

ಶ್ರೀಮಧ್ವಾಚಾರ್ಯರ ಸಿದ್ಧಾಂತದಂತೆ ಶ್ರೀನಾರಾಯಣನು ಸರ್ವೋತ್ತಮನೂ, ಅಶೇಷ ಗುಣಪೂರ್ಣನೂ, ದೋಷರಹಿತನೂ, ಆಗಿರುವನು. ಪ್ರಕೃತಿ, ಜೀವ, ಜಡಾತ್ಮಕವಾದ ಪ್ರಪಂಚವು ಅವನಿಂದ ಸರ್ವಕಾಲದಲ್ಲೂ ಅತ್ಯಂತ ಭಿನ್ನವೂ ಸತ್ಯವೂ ಆಗಿದ್ದು, ಅವನ ಅಧೀನವಾಗಿದೆ. ಅದರ ಸಕಲ

ವ್ಯಾಪಾರಗಳೂ ನಾರಾಯಣನಿಂದಲೇ ನಡೆಯುವವು. ಅವನು ಎಂದಿಗೂ ಸ್ವತಂತ್ರನಾಗಿರುವನು. ಲಕ್ಷ್ಮೀದೇವಿಯಿಂದ ಆರಂಭಿಸಿ ಎಲ್ಲ ದೇವತೆಗಳಿಗೂ ಜೀವರಿಗೂ ಭಿನ್ನ ಭಿನ್ನ ಸ್ವರೂಪಭೂತ ವ್ಯಕ್ತಿತ್ವಗಳಿದ್ದು ಅವರಲ್ಲಿ ತಾರತಮ್ಯವೂ ಇದೆ. ಮುಕ್ತಿಯಲ್ಲೂ ಈ ಭಿನ್ನ ವ್ಯಕ್ತಿತ್ವಗಳು ಹೋಗಲಾರವು.

अशेषगुणपूर्णत्वं सर्वदोषसमुज्झितिः ।
विष्णोरन्यच्च तत्तंत्रमिति सम्यग् विनिर्णयः ॥
स्वतंत्रत्वं सदा तस्य तस्य भेदश्च सर्वतः ।
मुक्तानामपि भेदश्च......
निर्दोषत्वं रमायाश्च तदनंतरता तथा ।
ब्रह्मा सरस्वती वींद्रशेषरुद्राश्च ततूस्त्रियः ॥
शक्रकामौ तदन्ये च क्रमात् मुक्तावपीति च ।
सत्सिद्धांत इति ज्ञेयो निर्णीतो हरिणा स्वयम् ॥

ಇದೇ ಪರಮಾತ್ಮನಿಂದಲೇ ನಿರ್ಧಾರಿತವಾದ ಸತ್‌ಸಿದ್ಧಾಂತವೆಂದು ಶ್ರೀಮಧ್ವಾಚಾರ್ಯರು ನಿರೂಪಿಸಿದ್ದಾರೆ. ಈ ಸಿದ್ಧಾಂತದಲ್ಲಿ ಈವರೆಗಿನ ಎಲ್ಲ ಪ್ರಶ್ನೆಗಳಿಗೂ ಉತ್ತರಗಳು ದೊರಕುವವು.

ಈ ಸಿದ್ಧಾಂತದಂತೆ ಪರಮಾತ್ಮನು ಜೀವವರ್ಗದ ನಿಜಸ್ವರೂಪದ ಅಭಿವ್ಯಕ್ತಿಗಾಗಿ ಸತ್‌ಚೇತನರ ಆತ್ಮವಿಕಾಸಕ್ಕಾಗಿ ಜಗತ್ತನ್ನು ಸೃಷ್ಟಿಸಿದ್ದಾನೆ. ಈ ಜಗತ್ ಸೃಷ್ಟಿ ವ್ಯಾಪಾರವು ಪರಮಾತ್ಮನ ಕರುಣೆಯೇ ಆಗಿದೆ ಮತ್ತು ಅವನ ವಿಹಾರವೂ ಆಗಿದೆ. ಜೀವಾತ್ಮರು ಸಾಧನಗಳನ್ನು ನಡೆಸಿ ಆತ್ಮ ವಿಕಾಸ ಹಾಗೂ ಆತ್ಮಸಾಕ್ಷಾತ್ಕಾರವನ್ನು ಪಡೆಯಲು ಅನುಕೂಲವಾಗಲೆಂದೇ ಜೀವವರ್ಗವು ತನ್ನ ಈ ಅನಾದಿಬಂಧನದಿಂದ ವಿಮೋಚನೆ ಹೊಂದಲೆಂಬ ಉದ್ದೇಶದಿಂದಲೇ ಚೇತನವರ್ಗದ ಮೇಲಿನ ಕರುಣೆಯಿಂದಾಗಿಯೇ ಭಗವಂತನು ಜಗತ್‌ಸೃಷ್ಟಿಗೆ ಕೈಹಾಕಿದ್ದಾನೆ.

''जीवा एव तु दुःखिनः ।
तेषां दुःखप्रहाणाय श्रुतिरेषा प्रवर्तते'' ॥

ಎಂದು ಭಗವಂತನ ಸಂದೇಶದಂತಿರುವ ಶ್ರುತಿಯೂ ಜೀವನ ವಿಮೋಚನೆಗಾಗಿಯೇ ಹೊರಟಿದೆ. ಯಾವ ವಿಧ, ನಿರ್ಬಂಧನಗಳಿಗೆ ಒಳಗಾಗದ ಪೂರ್ಣನೂ ನಿತ್ಯತೃಪ್ತನೂ ಆದ ಪರಮಾತ್ಮನು ಚೇತನರ ಬಂಧ ವಿಮುಕ್ತಿ ಹಾಗೂ ಆತ್ಮಾನಂದ ಪ್ರಾಪ್ತಿಗಾಗಿಯೇ ಕೇವಲ ದಯಾಮಯನಾಗಿ ವಿಶ್ವ ಸೃಷ್ಟಿಯನ್ನೂ ಕೈಗೊಂಡಿರುವನು.

''स्त्रक्ष्येहि चेतनगणान् सुखदुःख मध्य संप्राप्तये...
तनुभृत्स्वभाव संभूयते...॥'' -ತಾತ್ಪರ್ಯ ನಿರ್ಣಯ

ಆನಂದಮೂರ್ತಿಯಾದ ಪರಮಾತ್ಮನಿಗೆ ಈ ಸೃಷ್ಟಿವ್ಯಾಪಾರವೆಂಬುದು ಏನೂ ಪ್ರಯಾಸವಾಗಿರದೆ ಅದು ಅವನ ಕ್ರೀಡೆಯೇ ಆಗಿದೆ.

सोऽयं विहार इह मे - ತಾತ್ಪರ್ಯನಿರ್ಣಯ

ಹೀಗೆ ಸೃಷ್ಟಿಯು ಉದ್ದೇಶಯುಕ್ತವೂ ಆಗಿದ್ದು ಭಗವಂತನ ವಿಹಾರವೂ ಆಗಿದೆ.

ಪರಮಾತ್ಮನ ಈ ಸೃಷ್ಟಿಯು ಮಾಯಿಕವಾಗಿರದೆ ಯಥಾರ್ಥವಾಗಿದೆ. ಆದ್ದರಿಂದ ಸಾಧನಭೂಮಿಯಾದ, ಸತ್ಯವಾದ ಈ ಪ್ರಪಂಚದಲ್ಲಿ ಪರಮಾತ್ಮ ನಿಷ್ಠೆಯ ತಳಹದಿಯಲ್ಲಿ ಸತ್ ಕರ್ತವ್ಯಗಳನ್ನು ಅನುಷ್ಠಾನ ಮಾಡಿಕೊಂಡು ಸತ್ಯ, ದಯ, ತ್ಯಾಗ, ಪರೋಪಕಾರ, ಅಹಿಂಸಾ,

ಅದ್ರೋಹ ಮುಂತಾದ ಜಗತ್ತಿನ ಹಾಗೂ ಮಾನವತೆಯ ಧಾರಕಗಳಾದ ಸದ್ಗುಣಗಳನ್ನು ಬೆಳೆಸಿಕೊಂಡು ನಿಷ್ಕಾಮನೆಯಿಂದ, ಪರಮಾತ್ಮ ಸೇವಾದೃಷ್ಟಿಯಿಂದ ಸ್ವಕರ್ಮ ಮತ್ತು ಸಮಾಜಸೇವೆಗಳನ್ನು ನಡೆಸಿಕೊಂಡು, ಹಂತ ಹಂತವಾಗಿ ಮೇಲ್ಮಟ್ಟಕ್ಕೆ ಬಂದು, ಅಂತಃಕರಣಶುದ್ಧಿಯನ್ನು ಹೊಂದಿ ಶ್ರವಣ, ಮನನ ಹಾಗೂ ನಿಧಿಧ್ಯಾಸನಗಳಿಂದ ಭಗವದೇಕನಿಷ್ಠೆಯನ್ನು ದೃಢವಾಗಿ ಬೆಳೆಸಿ ನಮ್ಮ ಬಿಂಬ ರೂಪಿಯಾದ ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದಿ, ಅವನ ಪರಮಾನುಗ್ರಹದಿಂದ ದಿವ್ಯ ಸ್ವರೂಪಾನಂದವನ್ನು ನಾವು ಪಡೆಯಬೇಕು. ಹೀಗೆ ಜೀವಾತ್ಮರ ಅಂತಿಮ ಸಿದ್ಧಿ ಮತ್ತು ಜೀವ-ಪರಮಾತ್ಮರ ನಿಜವಾದ ಸ್ವರೂಪ ಹಾಗೂ ಅವರುಗಳ ಪರಸ್ಪರ ಸಂಬಂಧದ ತಾತ್ವಿಕ ಸಿದ್ಧಾಂತಕ್ಕೂ ಭಗವದ್ ಭಕ್ತಿ, ಸದ್ಗುಣನಿಷ್ಠೆ, ಸ್ವಕರ್ತವ್ಯ ಪರಾಯಣತೆಯನ್ನೊಳಗೊಂಡ ವ್ಯಾವಹಾರಿಕನ ಜೀವನ ಹಾಗೂ ಸಾಧನಾನುಷ್ಠಾನಗಳಿಗೂ ಪರಸ್ಪರ ವಿಸಂಗತಿಯಿಲ್ಲದಿರುವುದು ಸುವೇದ್ಯವಿದೆ. ಜಗತ್ತು ಸತ್ಯವಾಗಿರುವುದರಿಂದ ಜಗತ್ತಿನಿಂದ ವಿಮುಖವಾಗಿ ಇಲ್ಲಿ ಮಾಡಬೇಕಾದ ಕರ್ತವ್ಯಗಳಲ್ಲಿ ಅಲಕ್ಷ್ಯಭಾವವನ್ನು ತಳೆಯಬೇಕಾಗಿಲ್ಲ. ಹೀಗಾಗಿ ಈ ಸಿದ್ಧಾಂತದಲ್ಲಿ ಕರ್ಮಯೋಗವನ್ನು ಅವಿದ್ಯೆಯ ಭೂಮಿಕೆಯಲ್ಲಿ ತಳ್ಳಿದರೆ, ಸತ್ಯದ ಶ್ರೇಷ್ಠ ಭೂಮಿಯಲ್ಲಿ ಜ್ಞಾನದ ಹಿನ್ನೆಲೆಯಲ್ಲಿ, ಸ್ಥಾಪಿಸಲಾಗಿದೆ. ಈ ಸಿದ್ಧಾಂತದಲ್ಲಿ ಕರ್ತವ್ಯಾಚರಣೆಯು ಕೇವಲವಾಗಿ ಅವಿದ್ಯೆಯ ಅಂತಸ್ಥಿನಲ್ಲಿ ಮಾಡಬೇಕಾಗುವಂತಹ ಅಲಕ್ಷಿಸಿ ಬಿಡಬಹುದಾದಂತಹ ವಿಷಯವಲ್ಲ. ಸತ್ಯವಾದ ಜಗತ್ತಿನಲ್ಲಿ ಮುಮುಕ್ಷುವು ಆಚರಿಸಲೇಬೇಕಾದ, ಆವಶ್ಯಕವಾದ ಸಾಧನವಾಗಿದೆ. ಸಮಾಜ ಸೇವೆಯೂ ಕೂಡ ಮೋಕ್ಷಕ್ಕೆ ಸಾಧನವಾದ ಅತ್ಯಾವಶ್ಯಕವಾದ ಒಂದು ಕಾರ್ಯವೆಂದು ಈ ಸಿದ್ಧಾಂತದಲ್ಲಿ ಪರಿಗಣಿಸಲಾಗಿದೆ.

नानाजनस्य शुश्रूषा कर्माख्या करवन्मिते ॥ - ಗೀತಾತಾತ್ಪರ್ಯ

ಎಂದು ನಾನಾ ಜನತೆಯ ಸೇವಾತ್ಮಕವಾದ ಕರ್ತವ್ಯವನ್ನು ಮೋಕ್ಷಾರ್ಥಿಯಾದವನು ಮಾಡಲೇಬೇಕೆಂದೂ ಇದು ಐಚ್ಛಿಕವಾಗಿರದೆ ರಾಜನಿಗೆ ಕಂದಾಯನ್ನು ಕೊಡುವಂತೆ ಇದು ಕಡ್ಡಾಯದ್ದಾಗಿದೆಯೆಂದೂ ಈ ಸಿದ್ಧಾಂತದಲ್ಲಿ ವಿವರಿಸಲಾಗಿದೆ. ವೇದಾಂತದಲ್ಲಿ ಸಮಾಜಸೇವೆಗೆ ಇಷ್ಟು ಮಹತ್ವವನ್ನು ಶ್ರೀಮಧ್ವಾಚಾರ್ಯರನ್ನು ಬಿಟ್ಟು ಮತ್ತೆ ಯಾರೂ ಕೊಟ್ಟಿರುವುದಿಲ್ಲ. ಹೀಗೆ ಬೌದ್ಧ ಧರ್ಮದ ಪೂರ್ವದಲ್ಲಿದ್ದ ವೇದ-ಪುರಾಣಗಳಲ್ಲಿ ಹೆಜ್ಜೆಹೆಜ್ಜೆಗೂ ವರ್ಣಿತವಾಗಿರುವ ಭಕ್ತಿಯೋಗ ಮತ್ತು ಕರ್ಮ ಯೋಗಗಳು ಬೌದ್ಧಧರ್ಮದ ನಂತರ ಪ್ರಚಾರವಾದ ಮಾಯಾವಾದ ಹಾಗೂ ಬ್ರಹ್ಮೈಕ್ಯವಾದಗಳ ಪ್ರಭಾವದಿಂದಾಗಿ ನಿರ್ಜೀವತೆಯನ್ನೂ ಒಂದು ರೀತಿಯ ಅಸಾಂಗತ್ಯವನ್ನೂ ಪಡೆದಿದ್ದಾಗ ಅವುಗಳಿಗೆ ಶ್ರೀಮಧ್ವಾಚಾರ್ಯರ ಸಿದ್ಧಾಂತವು ಪುನಃ ಪ್ರಾಣಪ್ರತಿಷ್ಠೆಯನ್ನು ನೀಡಿದೆ. ಇದರಿಂದ ಸಿದ್ಧಿ ಮತ್ತು ಸಾಧನಗಳಲ್ಲಿ ಸುಸಂಗತಿಯುಳ್ಳ ವ್ಯವಹಾರ್ಯವಾದ ವೈದಿಕ ತತ್ತ್ವಜ್ಞಾನವನ್ನು ಪುನಃ ನಾವು ಪಡೆಯುವಂತಾಯಿತು. ಹೀಗೆ ಜೀವರ ಭಿನ್ನತ್ವ ಮತ್ತು ಜಗತ್ತಿನ ಸತ್ಯತ್ವವನ್ನು ಸ್ವೀಕರಿಸಿದ್ದರಿಂದ ಸೃಷ್ಟಿಯ ಉದ್ದೇಶ ಮತ್ತು ಅದರ ಸಾರ್ಥಕತೆಯನ್ನೂ ಸಾಧನಾನುಷ್ಠಾನಗಳಿಗೆ ಉಚಿತವಾದ ಮಹತ್ವ ಹಾಗೂ ಸರಿಯಾದ ಹಿನ್ನೆಲೆಯನ್ನೂ ನಾವು ಅರ್ಥಮಾಡಿಕೊಳ್ಳುವಂತಾಗಿದೆ.

ಪರಮಾತ್ಮನು ತಾನೇ ಜಗತ್ತಾಗಿ ಪರಿಣಾಮ ಹೊಂದಲೂ ಇಲ್ಲ ಮತ್ತು ಏನೂ ಮೂಲ ದ್ರವ್ಯವಿಲ್ಲದೆ ಬರೇ ಶೂನ್ಯದಿಂದ ಜಗತ್ತನ್ನು ಪರಮಾತ್ಮನು ನಿರ್ಮಿಸಿರುವುದೂ ಅಲ್ಲವೆಂಬುದನ್ನು ಶ್ರೀಮಧ್ವಾಚಾರ್ಯರು ತಮ್ಮ ಸಿದ್ಧಾಂತದಲ್ಲಿ ನಿರೂಪಿಸಿದ್ದಾರೆ. ಜಗತ್ತಿಗೆ ಪರಮಾತ್ಮನು ಕರ್ತನೂ, ಪ್ರಕೃತಿಯೂ ಮೂಲ ದ್ರವ್ಯವೂ (ಉಪಾದಾನ) ಆಗಿದೆ. ಸೂಕ್ಷ್ಮವಾದ ಪ್ರಕೃತಿ ತತ್ತ್ವದಲ್ಲಿ ಪರಮಾತ್ಮ ಅನುಪ್ರವಿಷ್ಟನಾಗಿ ತನ್ನ ಚೇತನ ಶಕ್ತಿಯಿಂದ ಅದರಲ್ಲಿಯ ಸ್ವಭಾವ ಶಕ್ತಿಗಳನ್ನು ಅಭಿವ್ಯಂಜಿಸಿ ಆ ಮೂಲಕವಾಗಿ ಸ್ಥೂಲ ದೃಶ್ಯಪ್ರಪಂಚವನ್ನು ಸೃಜಿಸಿದ್ದಾನೆ. ಈ ಸೃಷ್ಟಿ ಪ್ರಕ್ರಿಯೆಯಲ್ಲಿ ಯಾವ

ಅವೈಜ್ಞಾನಿಕತೆಯೂ ಅಸಂಬದ್ಧತೆಯೂ ತೋರಿಬರುವುದಿಲ್ಲ. ಭೂತ ಸೂಕ್ಷ್ಮವೆನಿಸಬಹುದಾದ ಭೌತ ಜಗತ್ತಿನ ಅತ್ಯಂತ ಸೂಕ್ಷ್ಮವಸ್ತುವಿನಲ್ಲಿ ಅವ್ಯಾಹತವಾಗಿ ಒಂದು ಅಖಂಡ ಶಕ್ತಿಯು ಹೊರಹೊಮ್ಮುತ್ತಿದ್ದು ಅದು ಚೈತನ್ಯ ವಸ್ತುವೇ ಆಗಿರಬೇಕೆಂದು ಇತ್ತೀಚಿನ ಅನೇಕ ಸಂಶೋಧನೆಗಳಿಂದ ವಿಜ್ಞಾನಿಗಳು ಅಭಿಪ್ರಾಯಪಟ್ಟಿರುವರು. ಜಗತ್ತಿಗೆ ಮೂಲ ಉಪಾದಾನವಾದ ಪ್ರಕೃತಿ ತತ್ತ್ವವು ಅನಾದಿಯಾಗಿದ್ದು ಪರಮಾತ್ಮನೂ ಅದನ್ನು ಸ್ವರೂಪತಃ ಸೃಷ್ಟಿಸಿರದೆ ಅವನ ಶಕ್ತಿ ವಿಶೇಷದ ಅಯಪ್ರವೇಶದಿಂದ ಆ ಪ್ರಕೃತಿಯು ಜಗತ್ತಿನ ರೂಪದಲ್ಲಿ ವಿಕೃತಗೊಳ್ಳುವುದು. ಹೀಗೆ ಸೃಷ್ಟಿ ಪ್ರಕ್ರಿಯೆಯನ್ನು ಸೋಪಪತ್ತಿಕವಾಗಿ ಯೋಜಿಸಲಾಗಿದೆ.

ಇನ್ನು ಜೀವನದಲ್ಲಿ ಕಾಣುತ್ತಿರುವ ವೈವಿಧ್ಯ, ವೈಚಿತ್ರ್ಯಗಳನ್ನೂ ಸಮಂಜಸ ರೀತಿಯಿಂದ ಈ ಸಿದ್ಧಾಂತದಲ್ಲಿ ವಿವರಿಸಲಾಗಿದೆ. ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿದ್ದಂತೆ ಜೀವರನ್ನೂ ಪರಮಾತ್ಮನ ಸೃಷ್ಟಿಯೆಂದು ಒಪ್ಪಿಕೊಳ್ಳಲಾಗುವುದಿಲ್ಲ, ದೇವರೇ ಜೀವರನ್ನು ನಿರ್ಮಿಸುವುದಾದರೆ ಎಲ್ಲರನ್ನೂ ಒಂದೇ ರೀತಿಯಿಂದ ಯಾಕೆ ತಯಾರಿಸಬಾರದು? ಜೀವರನ್ನು ಸೃಷ್ಟಿ ಮಾಡುವ ಉದ್ದೇಶವೇನು ? ಮುಂತಾದ ಆಕ್ಷೇಪಗಳು ಬರಬಹುದಾಗಿವೆ. ಜೀವರು ಅನಾದಿಗಳಾಗಿದ್ದು ಪರಮಾತ್ಮನ ಸೃಷ್ಟಿಗೆ ಒಳಪಟ್ಟವರಾಗಿದ್ದಾರೆ. ಇವರ ವ್ಯಕ್ತಿತ್ವ ಸ್ವಭಾವಗಳು ಇವರಿಂದ ಬೇರ್ಪಡಿಸಲಾರದ ಇವರ ಅವಿಭಾಜ್ಯ ಧರ್ಮಗಳಾಗಿದ್ದು ಇವೂ ಅನಾದಿಗಳೇ ಆಗಿವೆ. ದೀಪ ಮತ್ತು ಅದರ ಪ್ರಕಾಶಗಳೂ ಹೇಗೆ ಬೇರೆಯಲ್ಲವೋ ಅದರಂತೆ ಆತ್ಮ ಮತ್ತು ಅವನ ವ್ಯಕ್ತಿತ್ವಗಳೂ ಒಂದೇ ಆಗಿವೆ. ಈ ಜೀವರ ಈ ವ್ಯಕ್ತಿತ್ವ ಹಾಗೂ ಸ್ವಭಾವಗಳೂ ಭಿನ್ನ ಭಿನ್ನ ರೀತಿಯವುಗಳಾಗಿದ್ದು ಒಬ್ಬೊಬ್ಬರಲ್ಲಿ ಒಂದೊಂದು ಪ್ರಕಾರದಲ್ಲಿವೆ. ಅವುಗಳೇ ಜೀವರ ಭೌತಿಕ ಜೀವನದ ಗತಿಯ ಚುಕ್ಕಾಣಿಗಳಾಗಿವೆ. ಆ ಭಿನ್ನ ಭಿನ್ನ ಮೂಲಭೂತ ವ್ಯಕ್ತಿತ್ವಗಳನ್ನು ಅನುಸರಿಸಿ ಜೀವರು ನಾನಾ ಪ್ರಕಾರದ ಏರಿಳಿತಗಳುಳ್ಳ ಸಿಹಿಕಹಿಯ ಜೀವನವನ್ನು ಅನುಭವಿಸುವರು. ಪರಮಾತ್ಮನು ಜೀವರ ಮೂಲಭೂತ ಸ್ವಭಾವವನ್ನು ಪ್ರಚೋದಿಸುತ್ತಾ ಆ ಸ್ವಭಾವಕ್ಕನುಗುಣವಾದ ವಿವಿಧ ಪ್ರವೃತ್ತಿಗಳಿಗೆ ಶಕ್ತಿ, ಸ್ಫೂರ್ತಿಯನ್ನೀಯುತ್ತಿದ್ದು ಜೀವರಲ್ಲಿರುವ ಈ ವ್ಯತ್ಯಾಸಗಳ ಬಗ್ಗೆ ತಟಸ್ಥನಾಗಿರುವನು. ಜಗತ್ತಿನ ಎಲ್ಲ ಆಗುಹೋಗುಗಳಿಗೆ ಪರಮಾತ್ಮನ ಶಕ್ತಿಯೇ ಕಾರಣವಾಗಿರುವಂತೆ ಇದಕ್ಕೂ ಪರಮಾತ್ಮನು ನಿಮಿತ್ತವಾದರೂ ಈ ವ್ಯತ್ಯಾಸದ ಹೊಣೆ ಅವನ ಮೇಲಿಲ್ಲ, ಜೀವಾತ್ಮರ ಮೂಲಭೂತ ವ್ಯಕ್ತಿತ್ವವೇ ಅದಕ್ಕೆ ತಳಹದಿಯಾಗಿದ್ದು ಅವುಗಳ ಪ್ರತಿಬಿಂಬವಾಗಿಯೇ ಈ ವೈಚಿತ್ರ್ಯವನ್ನು ನಾವು ಜಗತ್ತಿನಲ್ಲಿ ಕಾಣುತ್ತಿರುವೆವು. ಹೀಗೆ ಜೀವರೊಳಗೆ ಸಹಜವಾದ ಪರಮಾತ್ಮನಿಂದಲೂ ನಿರ್ಮಿತವಾಗಿರದ ಈ ಭಿನ್ನ ಭಿನ್ನ ವ್ಯಕ್ತಿತ್ವ ಹಾಗೂ ಅವುಗಳ ಅಸಮಾನತೆಯನ್ನು ಸಮರ್ಥಿಸಿ ಶ್ರೀಮಧ್ವಾಚಾರ್ಯರು ಜಗತ್ತಿನ ರಚನೆಯ ಬಗ್ಗೆ ವೇದಾಂತದಲ್ಲಿ ಇರುವ ಮಹತ್ತಾದ ತೊಡಕನ್ನೂ ಬಿಡಿಸಿರುವರು. ಹೀಗಿದ್ದರೆ ಈ ಸೃಷ್ಟಿವ್ಯಾಪಾರದಲ್ಲಿ ದೇವರ ಸ್ಥಾನವೇನು? ಅವುಗಳ ವ್ಯಕ್ತಿತ್ವದಂತೆ ಎಲ್ಲವೂ ನಡೆಯುವುದಾದರೆ ದೇವರು ಯಾಕೆ ಬೇಕು? ಎಂಬ ಪ್ರಶ್ನೆ ಬರಬಹುದು. ಅದರ ಸಮಾಧಾನವು ಹೀಗಿದೆ. ಜೀವಾತ್ಮರ ಸ್ವಭಾವ, ಶಕ್ತಿಗಳೂ ಜೀವಸ್ವರೂಪದಲ್ಲೇ ಅಡಕವಾಗಿದ್ದರೂ ಅವುಗಳ ತಳಹದಿಯಿಂದ ಪ್ರವೃತ್ತಿಯು ನಡೆಯಬೇಕಾದರೆ ಪರಮಾತ್ಮನ ಶಕ್ತಿಯ ಅನುಪ್ರವೇಶ ಹಾಗೂ ಪ್ರಚೋದನೆ ಅಗತ್ಯ. ಪರಮಾತ್ಮನಿಲ್ಲದಿದ್ದರೆ ಇವೆಲ್ಲಾ ನಿಶ್ಚೇಷ್ಟವಾಗುವವು. ಆದ್ದರಿಂದ ಈ ಸೃಷ್ಟಿವೈಚಿತ್ರ್ಯಕ್ಕೆ ದೇವರು ಹೊಣೆಗಾರನಲ್ಲದಿದ್ದರೂ ಅವನಿಲ್ಲದೆ ಇದು ನಡೆಯದು. ಆದ್ದರಿಂದ ಜಗತ್ ವ್ಯಾಪಾರಕ್ಕೆ ದೇವರ ಆವಶ್ಯಕತೆಯಿದೆ ಎಂದು ಆಚಾರ್ಯರು ಪ್ರತಿಪಾದಿಸಿದ್ದಾರೆ.

ಇಷ್ಟರವರೆಗಿನ ವಿವೇಚನೆಯಿಂದ ಶ್ರೀಮಧ್ವಾಚಾರ್ಯರ ತತ್ತ್ವಜ್ಞಾನವು ಆಧ್ಯಾತ್ಮದ ಬಗ್ಗೆ ನಮ್ಮಲ್ಲಿ ಮಾಡಬಹುದಾದ ಪ್ರತಿಯೊಂದು ಪ್ರಶ್ನೆಗಳಿಗೂ ಸಮರ್ಪಕ ಪರಿಹಾರವನ್ನು ಒದಗಿಸುತ್ತಿರುವುದು ವೇದ್ಯವಾಗದಿರಲಾರದು. ಎಲ್ಲ ಮತಗಳಿಂದಲೂ ಬಗೆಹರಿಯದ ಸಮಸ್ಯೆಗಳಿಗೆ ಇಲ್ಲಿ ಪರಿಹಾರ

ದೊರಕುತ್ತದೆ. ತರ್ಕಬದ್ಧವಾದ ವೈಜ್ಞಾನಿಕ ಸಂಗತಿಗಳಿಂದಲೇ ಈ ಮತವು ಹೆಣೆಯಲ್ಪಟ್ಟಿದೆ. ಆದರೆ ಶ್ರೀಮಧ್ವಾಚಾರ್ಯರು ಪರಿಸ್ಥಿತಿಗೆ ತಕ್ಕಂತೆ ತಮ್ಮ ಸ್ವಕಲ್ಪನೆಯಿಂದ ಆವಶ್ಯಕ ಪರಿಷ್ಕಾರಗಳನ್ನು ಮಾಡಿ ಜನರನ್ನೂ ಆಕರ್ಷಿಸಲು ಅನುಕೂಲವಾಗುವಂತಹ ಅಂಶಗಳನ್ನು ಜೋಡಿಸಿ ಮಾರಾಟಕ್ಕೆ ಇಟ್ಟ ವಸ್ತುವಿನಂತೆ ಈ ಮತವನ್ನು ತಯಾರಿಸಲಿಲ್ಲ. ಹಳೆಯದಾದ ವೈದಿಕ ಮತವನ್ನೇ ಅದೇ ಸ್ವರೂಪದಲ್ಲಿ ಪುನಃ ಜಗತ್ತಿಗೆ ಎತ್ತಿ ತೋರಿಸಲು ಇವರು ಪ್ರಾಮಾಣಿಕ ಪ್ರಯತ್ನವನ್ನು ನಡೆಸಿರುವರು ಎಂಬುದು ಇವರ ಗ್ರಂಥಗಳ ಅವಲೋಕನದಿಂದ ಸ್ಪಷ್ಟವಾಗುವುದು. ಶ್ರೀಮಧ್ವಾಚಾರ್ಯರು ಎಲ್ಲಿಯೂ ಸ್ವಕಲ್ಪನೆಯ ಅಂಶವನ್ನು ತೋರಿಸಲಿಲ್ಲ. ವೇದಗಳಿಗೆ ಅರ್ಥವನ್ನು ಮಾಡುವಾಗಲೂ ತಮ್ಮ ಕಲ್ಪನಾಶಕ್ತಿಯನ್ನು ಪ್ರದರ್ಶಿಸಲಿಲ್ಲ. ಸಂದಿಗ್ಧವಾದ ಸ್ಥಳದಲ್ಲಿ ವೇದ ಹಾಗೂ ಉಪನಿಷತ್ತಿನ ವಾಕ್ಯಗಳ ಅರ್ಥವನ್ನು ಅವರು ಇನ್ನೊಂದು ಕಡೆಯ ಅಸಂದಿಗ್ಧಾರ್ಥದ ವೇದವಾಕ್ಯಗಳಿಂದಲೇ ವಿವರಿಸಿದ್ದಾರೆ. ಹೀಗಾಗಿ ಬೌದ್ಧಮತದ ತರುವಾಯ ವಿಶೇಷವಾಗಿ ತಿರೋಭೂತವಾದ ವೈದಿಕ ಸಿದ್ಧಾಂತವನ್ನು ಬೌದ್ಧಮತದ ತರುವಾಯ ಸಮ್ಮಿಶ್ರ ಹಾಗೂ ವಿಕ್ಷಿಪ್ತ ವಾತಾವರಣದ ಹಿನ್ನೆಲೆಯಲ್ಲಿ ವೀಕ್ಷಿಸದೆ ವಿವಿಧ ರೀತಿಯ ಕಾಲ್ಪನಿಕ ಹಾಗೂ ಊಹಾಪೋಹಾತ್ಮಕ ವಿಚಾರಗಳಿಂದ ಪ್ರಭಾವಿತವಾಗಿರಬಹುದಾದ ತತ್ಕಾಲೀನ ಜನರ ಹಾಗೂ ಶಾಸ್ತ್ರಕಾರರ ವಿಚಾರಧಾರೆಯನ್ನವಲಂಬಿಸದೆ ಬೌದ್ಧಮತದಿಂದಲೂ ಪ್ರಾಚೀನಗಳಾದ ಶುದ್ಧ ವೈದಿಕಧರ್ಮದ ವಾತಾವರಣದಲ್ಲಿ ನಿರ್ಮಿತಗಳಾದ ಪುರಾಣಗಳಿಂದಲೂ ಅಪೌರುಷೇಯಗಳಾದ ವೇದಗಳ ಸ್ಪಷ್ಟ ಭಾಗಗಳಿಂದಲೂ ವೇದಗಳ ಅರ್ಥಗಳನ್ನು ನಿರ್ಧರಿಸಲು ಹೊರಟು ಶ್ರೀಮಧ್ವಾಚಾರ್ಯರು ನಿಜವಾದ ವೈದಿಕ ಧರ್ಮವನ್ನು ಹೊರಗೆಡಹಿದ್ದಾರೆ. ಪ್ರತಿಯೊಂದು ಕಡೆಗಳಲ್ಲೂ ಹೆಜ್ಜೆ ಹೆಜ್ಜೆಗೂ ವೇದ ಹಾಗೂ ಸ್ಮೃತಿ ಗ್ರಂಥಗಳ ಆಧಾರಗಳನ್ನು ಅವರು ಕಲ್ಪನೆಯ ಅಂಶವು ಯಾವುದೂ ಸೇರಿಲ್ಲವೆಂದೂ ವೈದಿಕ ತತ್ತ್ವಜ್ಞಾನವು ಶುದ್ಧರೂಪದಲ್ಲಿ ಅದರಲ್ಲಿ ಇದೆಯೆಂದೂ ಸ್ಪಷ್ಟವಾಗುವುದು. ಶ್ರೀಮಧ್ವಾಚಾರ್ಯರು ವೇದವನ್ನು ಅದರ ನಿಜವಾದ ಅರ್ಥದಲ್ಲಿ ಪ್ರಚಾರಪಡಿಸುವುದಕ್ಕಾಗಿ ದೇಶದೇಶಗಳಲ್ಲಿ ತಿರುಗಿ ಸಾವಿರಾರು ಅಪೂರ್ವ ಹಾಗೂ ಸುಪ್ರಸಿದ್ಧಗಳಾದ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಅವುಗಳ ನಾನಾ ಪ್ರತಿಗಳನ್ನು ಬೇರೆ ಬೇರೆ ಕಡೆಗಳಲ್ಲಿ ಹುಡುಕಿ ಶುದ್ಧ ಪ್ರತಿಗಳನ್ನು ಪಡೆದು ಆ ಗ್ರಂಥಗಳಲ್ಲಿಯ ಆಧಾರಗಳನ್ನು ಉಲ್ಲೇಖಿಸಿ ವೇದ, ಉಪನಿಷತ್ತುಗಳ ವಿವರಣೆ ಮಾಡಿದ್ದಾರೆ. ಶ್ರೀಅಪ್ಪಯ್ಯ ದೀಕ್ಷಿತರು ಅವರ ಈ ಅಪೂರ್ವ ಗ್ರಂಥಗಳನ್ನು ತನಗೆ ಹುಡುಕಿ ನೋಡಲು ಸಾಧ್ಯವಾಗದೆ ಅಪ್ರಸಿದ್ಧ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಮಧ್ವಾಚಾರ್ಯರು ಪ್ರವಂಚನೆ ಮಾಡಿದ್ದಾರೆಂದು ಆರೋಪಿಸಿರುವರು. ಆದರೆ ಶ್ರೀ ಮಧ್ವಾಚಾರ್ಯರ ಸಮಕಾಲದಲ್ಲಿ ಆಗಲೀ ಸಮೀಪಕಾಲದಲ್ಲಾಗಲೀ ಇಲ್ಲದ ಸಲ್ಲದ ಕಲ್ಪಿತ ಗ್ರಂಥಗಳನ್ನು ಆಧಾರವಾಗಿ ಅವರು ಉಪಯೋಗಿಸುತ್ತಿದ್ದಾರೆಂದು ಯಾರೂ ಆಕ್ಷೇಪಿಸಲಿಲ್ಲ. ೩೦೦ ವರ್ಷಗಳ ತರುವಾಯ ಅಪ್ಪಯ್ಯ ದೀಕ್ಷಿತರು ಈ ಆಕ್ಷೇಪವನ್ನು ಮಾಡಿರುವರು ಎಂಬುದು ಗಮನಾರ್ಹವಾಗಿದ್ದು ಇದರಲ್ಲಿ ಏನೂ ಹುರುಳಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಶ್ರೀಮಧ್ವಾಚಾರ್ಯರು ತಮ್ಮ ಮತಪ್ರಚಾರದ ಕ್ರಾಂತಿಕಾಲದಲ್ಲಿ ತಮ್ಮ ಆಧಾರ ಗ್ರಂಥಗಳನ್ನು ತೋರಿಸಲು ಅಸಮರ್ಥರಾಗುತ್ತಿದ್ದರೆ ಈ ಅಪ್ರಸಿದ್ಧ ಗ್ರಂಥಗಳನ್ನು ಆಕ್ಷೇಪಿಸಿ ಆಗ ದೊಡ್ಡ ಗೊಂದಲವೇ ಏಳುತ್ತಿತ್ತು. ಆದರೆ ಆ ಕಾಲದಲ್ಲಾಗಲೀ ಅವರು ಉಲ್ಲೇಖಿಸಿದ ಆಧಾರಗ್ರಂಥಗಳ ಬಗ್ಗೆ ಎಲ್ಲಿಯೂ ಅಂತಹ ಆಕ್ಷೇಪಗಳು ಕಂಡುಬರುತ್ತಿಲ್ಲ. ವೇದಗಳಿಗೆ ಸಹ ಭಾಷ್ಯ ಬರೆದ ಷಟ್‌ಶಾಸ್ತ್ರ ಪಂಡಿತರಾದ ಶ್ರೀ ವಿದ್ಯಾರಣ್ಯರು ಸಹ ಇಂತಹ ಆಪಾದನೆಗೈಯಲಿಲ್ಲವೆಂಬುದನ್ನೂ ಇಲ್ಲಿ ಲಕ್ಷಿಸಬೇಕು. ಮಾತ್ರವಲ್ಲದೆ ಶ್ರೀಮಧ್ವಾಚಾರ್ಯರು ಒಂದು ದೊಡ್ಡ ಗ್ರಂಥಾಲಯವನ್ನು ಇಟ್ಟುಕೊಂಡಿದ್ದರೆಂದೂ ಅವರ ವಿರೋಧಿಗಳು ಈ ಗ್ರಂಥಾಲಯದ ಮೇಲೂ ಕಣ್ಣು ಇಟ್ಟುಕೊಂಡಿದ್ದು ಅನೇಕ ಬಾರಿ ಅದನ್ನು

ಅಪಹರಿಸಿದ್ದರೆಂದೂ ಶ್ರೀಮಧ್ವಾಚಾರ್ಯರ ಚರಿತ್ರೆಯಲ್ಲಿ ಉಲ್ಲೇಖವಿದೆ. ಅಂದರೆ ತಾವು ದೇಶದಲ್ಲೆಲ್ಲಾ ಸಂಚರಿಸಿ ಸಂಗ್ರಹಿಸಿದ ಪ್ರಾಚೀನ ಅಪೂರ್ವ ಗ್ರಂಥಗಳ ಸಂಗ್ರಹಾಲಯ ಆಚಾರ್ಯರು ಏರ್ಪಡಿಸಿದ್ದು, ಅದರ ಮೂಲಕವಾಗಿ ತಮ್ಮ ವೇದವ್ಯಾಖ್ಯಾನಕ್ಕೆ ಸರಿಯಾದ ಆಧಾರಗ್ರಂಥಗಳನ್ನು ತೋರಿಸುತ್ತಿದ್ದರು. ಹೀಗಾಗಿ ಆ ಪುಸ್ತಕಾಲಯದ ಬಗ್ಗೆ ವಿರೋಧಿಗಳು ವಿಶೇಷವಾಗಿ ಕಣ್ಣಿಟ್ಟುಕೊಂಡಿದ್ದು ಅದನ್ನು ವಶಪಡಿಸಿಕೊಂಡು ಅವರ ಆಧಾರ ಗ್ರಂಥಗಳಾದ ಅಪೂರ್ವ ಪುಸ್ತಕಗಳನ್ನೆಲ್ಲಾ ಅಪಹರಿಸಿಕೊಳ್ಳಬೇಕೆಂಬ ಯೋಜನೆಯನ್ನು ಮಾಡಿದ್ದರು. ಹೀಗೆ ಅವರ ಚರಿತ್ರೆಯಲ್ಲಿ ಕಾಣುವ ಗ್ರಂಥಾಲಯ ಅಪಹಾರದ ಯೋಜನೆಯ ರಹಸ್ಯವನ್ನು ಈ ರೀತಿಯಾಗಿ ನಾವು ಗ್ರಹಿಸಿಕೊಳ್ಳಬಹುದು. ಅಂತೂ ಇದರಿಂದ ಶ್ರೀಮಧ್ವಾಚಾರ್ಯರ ಅಪೂರ್ವ ಗ್ರಂಥಗಳ ದೊಡ್ಡ ಸಂಗ್ರಹಾಲಯವಿತ್ತೆಂಬುದು ಸ್ಪಷ್ಟವಾಗುವುದು. ಅವರ ಗ್ರಂಥದಲ್ಲಿ ಆ ಗ್ರಂಥಗಳ ಹೆಸರು ಮತ್ತು ಆಧಾರ ವಾಕ್ಯಗಳು ಪುಟಪುಟಗಳಲ್ಲಿ ತುಂಬಿವೆ. ಹೀಗೆ ಶ್ರೀಮಧ್ವಾಚಾರ್ಯರನ್ನು ನೂತನ ಮತಸ್ಥಾಪಕರೆನ್ನದೆ ವೇದೋಪನಿಷತ್ತುಗಳ ಅದ್ಭುತ ಸಂಶೋಧಕರೆನ್ನುವುದು ಸೂಕ್ತವಾಗುವುದು. ಶ್ರೀಮಧ್ವಾಚಾರ್ಯರು ಮರೆಯಾಗಿರುವ ವೈದಿಕ ಧರ್ಮವನ್ನೇ ತಮ್ಮ ಅಮೋಘ ಸಂಶೋಧನೆಯಿಂದ ಪುನಃ ಪ್ರಕಾಶಕ್ಕೆ ತಂದು ಅದನ್ನು ಮುಚ್ಚಿರುವ ಅನೇಕ ಹೊಸ ವಾದಗಳನ್ನು ತಮ್ಮ ತರ್ಕಬದ್ಧ ಹಾಗೂ ಪ್ರಮಾಣಸಿದ್ಧ ವಿಚಾರಸರಣಿಯಿಂದ ಹೊಡೆದೋಡಿಸಿ ವೈದಿಕ ಸಿದ್ಧಾಂತವನ್ನು ಪ್ರಜ್ವಲಿತಗೊಳಿಸಿದ್ದಾರೆ.

ಮಧ್ವಾಚಾರ್ಯರ ಈ ಸಿದ್ಧಾಂತವನ್ನು ''ದ್ವೈತವಾದ'' ಎಂದು ಕರೆಯಲಾಗುತ್ತದೆ. ಜಗತ್ತಿನಲ್ಲಿ ಸ್ವತಂತ್ರ ಮತ್ತು ಅಸ್ವತಂತ್ರವೆಂಬುದಾಗಿ ಎರಡು ತತ್ತ್ವಗಳಿವೆಯೆಂದು ವಿಭಜಿಸಿ, ಆ ತಳಹದಿಯಿಂದಲೇ ವಸ್ತುವಿನ ನಿರೂಪಣೆಯನ್ನು ಈ ಸಿದ್ಧಾಂತದಲ್ಲಿ ಮಾಡಿರುವುದರಿಂದ ಈ ಹೆಸರು ಬಂದಿದೆ. ಆದರೆ ಈ ಹೆಸರು ಇತ್ತೀಚೆಗೆ ಬಂದುದೆಂದೂ ಮೊದಲು ಇದನ್ನು ''ತತ್ತ್ವವಾದ'' ಎಂಬ ಹೆಸರಿನಿಂದ ಕರೆಯುತ್ತಿದ್ದರೆಂದೂ ತಿಳಿದುಬರುವುದು. ಈ ಸಿದ್ಧಾಂತಕ್ಕೆ ''ದ್ವೈತವಾದ' ಎಂಬ ಹೆಸರಿದೆಯೆಂದು ಯಾವ ಗ್ರಂಥದಲ್ಲೂ ಉಲ್ಲೇಖವಿಲ್ಲ.

योविप्रलंभविपरीतमतिप्रभूतान् । वादान् निरस्य
कृतवान् भूवितत्ववादम् ॥ तत्वविदो वदंति

ಎಂಬ ಪ್ರಸಿದ್ಧ ಶ್ಲೋಕದಲ್ಲಿ ಶ್ರೀ ಮಧ್ವಾಚಾರ್ಯರು ''ತತ್ತ್ವವಾದ''ವನ್ನು ಮಾಡಿದ್ದಾರೆ ಎಂದು ಅವರ ಸಿದ್ಧಾಂತವನ್ನು ಈ ಹೆಸರಿನಲ್ಲೇ ಉಲ್ಲೇಖಿಸಲಾಗಿದೆ. ಶ್ರೀನ್ಯಾಯಸುಧೆಯಲ್ಲಿ ತತ್ವವಾದ ಎಂದೇ ಈ ಮತ ಪ್ರಕ್ರಿಯೆಯನ್ನು ಶ್ರೀಟೀಕಾಕೃತ್ಪಾದರು (ಶ್ರೀ ಜಯತೀರ್ಥರು) ನಿರೂಪಿಸಿದ್ದಾರೆ.

''परे च तत्ववादेऽस्मिन् गरीयसि भरोमम ॥''

ಎಂದು ವಾದಿರಾಜ ಸ್ವಾಮಿಗಳೂ ತತ್ತ್ವವಾದವೆಂದೇ ಇದನ್ನು ಕರೆದಿರುವರು. ಇನ್ನೊಂದು ಕಡೆಯಲ್ಲಿ ಶ್ರೀವಾದಿರಾಜರು ಈ ಸಿದ್ಧಾಂತಕ್ಕೆ ತತ್ತ್ವವಾದ ಎಂಬ ಹೆಸರೇ ಇದೆ ಎಂದು ಸ್ಪಷ್ಟವಾಗಿ ಬರೆದಿರುವರು.

''नाम्ना चात्थुल्ल संत्यासीत् वल्लीते युक्तिमल्लिके''

ಶಂಕರಾಚಾರ್ಯರ ಮತ್ತು ಮಧ್ವಾಚಾರ್ಯರ ಮತಗಳನ್ನು ತುಲನಾತ್ಮಕ ದೃಷ್ಟಿಯಿಂದ ಬೇರೆ ಬೇರೆ ವಿಷಯಗಳಲ್ಲಿ ಸಮೀಕ್ಷೆ ಮಾಡಿ ಕೊನೆಗೆ ಹೆಸರಿನಿಂದಲೂ ಮಧ್ವಾಚಾರ್ಯರ ಸಿದ್ಧಾಂತವು ತನ್ನ ಮನಸ್ಸಿಗೆ ಹಿಡಿದಿದೆ ಎಂದು ಬರೆದಿರುವರು. ತತ್ತ್ವವಾದ ಎಂಬ ಹೆಸರಿನಿಂದ ಈ ಸಿದ್ಧಾಂತವು ಉಲ್ಲಸಿತವಾಗಿದೆಯೆಂದು ಮೇಲಿನ ಶ್ಲೋಕದಲ್ಲಿ ಹೇಳಿರುವುದರಿಂದ ಈ ಸಿದ್ಧಾಂತಕ್ಕೆ ಮೊದಲು ತತ್ತ್ವವಾದವೆಂಬ ಸುಂದರ ಹೆಸರು ಪ್ರಚಲಿತವಿತ್ತು ಎಂಬುದು ಸ್ಪಷ್ಟವಾಗುವುದು. ಮಧುಸೂದನ ಸರಸ್ವತಿಗಳೂ ತಮ್ಮ ಅದ್ವೈತ ಸಿದ್ಧಿ ಎಂಬ ಗ್ರಂಥದಲ್ಲಿ ಈ ಮತವನ್ನು ತತ್ತ್ವವಾದವೆಂದೇ ಕರೆದಿದ್ದಾರೆ.

ಶ್ರೀವಿಷ್ಣು ಸರ್ವೋತ್ತಮತ್ವ

ಶ್ರೀ ಮಧ್ವಾಚಾರ್ಯರು ವಿಷ್ಣುವಿನ ಸರ್ವೋತ್ತಮತ್ವವನ್ನೂ ಬಹು ಸಮರ್ಥ ರೀತಿಯಿಂದ ಪ್ರತಿಪಾದಿಸಿದ್ದಾರೆ. ಅವರ ಸಿದ್ಧಾಂತದಲ್ಲಿ ವಿಷ್ಣುವು ಸರ್ವೋತ್ತಮನು, ಸರ್ವಗುಣಪೂರ್ಣನು, ನಿರ್ದೋಷನು ಎಂಬುದು ಮುಖ್ಯ ತತ್ತ್ವವಾಗಿದೆ. ಉಳಿದ ವಿಷಯಗಳು ಆನುಷಂಗಿಕ ತತ್ತ್ವಗಳೆಂದು ಹೇಳಿರುವರು. ವಿಷ್ಣು ಸರ್ವೋತ್ತಮತ್ವವೇ ಸಮಸ್ತ ವೇದಗಳ ಮಥಿತಾರ್ಥವೆಂದೂ ಪರಮಾತ್ಮನ ದಿವ್ಯ ಚಿದಾತ್ಮಕ ಅನಂತ ಗುಣಗಳನ್ನು ನಿರೂಪಿಸುವುದಕ್ಕಾಗಿಯೇ ಶಾಸ್ತ್ರಗಳೆಲ್ಲ ಹೊರಟಿವೆ ಎಂಬುದನ್ನೂ ಅವರು ತೋರಿಸಿಕೊಟ್ಟಿರುವರು. ವೇದಗಳು ಸಜ್ಜೀವರ ಬಂಧನಿವೃತ್ತಿಗಾಗಿಯೇ ಹೊರಟಿವೆ ಎಂದು ಹಿಂದೆಯೇ ತಿಳಿಸಿರುವೆವು. ಈ ಬಂಧನಿವೃತ್ತಿ ಹಾಗೂ ಪರಮ ಪುರುಷಾರ್ಥವಾದ ಮೋಕ್ಷವು ನಿರಂತರವಾದ ಭಗವದ್ ಧ್ಯಾನ ಸಾಕ್ಷಾತ್ಕಾರಗಳಿಂದಲೇ ಸಾಧ್ಯ. ಧ್ಯಾನವನ್ನು ನಡೆಸಲು ಪರಮಾತ್ಮನಲ್ಲಿ ಚಿತ್ತೈಕಾಗ್ರತೆಯು ನೆಲಸಬೇಕಾದರೆ ಅವನಲ್ಲಿ ಅತ್ಯಂತ ಆದರವೂ ನಿರಂತರ ಪ್ರೇಮವೂ ಬೆಳೆದಿರಬೇಕು. ಒಂದು ವಸ್ತುವಿನಲ್ಲಿ ಪ್ರೀತಿ ಇದ್ದರೆ ಮಾತ್ರ ನಾವು ಅದನ್ನು ಏಕಾಗ್ರತೆಯಿಂದ ಆಲೋಚಿಸುತ್ತಿರುವುದು ಲೋಕಾನುಭವವಾಗಿದೆ. ದೇವರಲ್ಲಿ ನಿರಂತರ ಚಿತ್ತಪ್ರವಾಹವು ಹರಿಯಬೇಕಾದರೆ ಪರಮಾತ್ಮನ ಬಗ್ಗೆ ನಮ್ಮಲ್ಲಿ ಪ್ರೇಮಾದರಗಳು ಘನಿಷ್ಠವಾಗಿರಬೇಕಾದುದು ಅವಶ್ಯವಿದೆ. ಪರಮಾತ್ಮನ ಸದ್ಗುಣಗಳನ್ನು ಚಿಂತಿಸಿದಷ್ಟು ಅವನಲ್ಲಿ ಸಹಜವಾಗಿ ಪ್ರೇಮಾದರ ರೂಪವಾದ ಭಕ್ತಿಯು ಸುದೃಢವಾಗಿ ಬೆಳೆದು ಅವನ ನಿರಂತರ ಧ್ಯಾನವನ್ನು ಮಾಡಲು ಜೀವರು ಅರ್ಹತೆಯನ್ನು ಪಡೆಯುವರು. ಜೀವರಿಗೆ ಪರಮಾತ್ಮನ ಸಾಕ್ಷಾತ್ಕಾರವಾಗಿ ಬಂಧನಿವೃತ್ತಿಯಾಗಬೇಕೆಂದು ಹೊರಟ ವೇದಪುರುಷನು ಜೀವನಿಗೆ ಪರಮಾತ್ಮನ ಬಗ್ಗೆ ಪ್ರೇಮಾದರಗಳು ಹುಟ್ಟಲು ಅನುಕೂಲವಾಗುವಂತೆ ಪರಮಾತ್ಮನ ಮಹಿಮೆಯ ಹಾಗೂ ಅನಂತ ಗುಣಗಳ ತಿಳಿವಳಿಕೆಯನ್ನು ಜೀವರಿಗೆ ಹುಟ್ಟಿಸಲು ಹೊರಟಿದ್ದಾನೆ. ಹೀಗೆ ವೇದವು ಹೊರಟ ಉದ್ದೇಶವನ್ನು ಲಕ್ಷಿಸಿ ವೇದದ ತಾತ್ಪರ್ಯವನ್ನು ಪರ್ಯಾಲೋಚಿಸಿದರೆ ಪರಮಾತ್ಮನ ಸರ್ವೋತ್ತಮತ್ವವನ್ನು, ಅವನ ಗುಣಪೂರ್ಣತ್ವವನ್ನು ಏಕಪ್ರಕಾರವಾಗಿ ವರ್ಣಿಸಿ ಆ ಮೂಲಕವಾಗಿ ನಿರತಿಶಯವಾದ ಭಕ್ತಿ ಭಾವವನ್ನು ಪರಮಾತ್ಮನ ಬಗ್ಗೆ ಜೀವನದಲ್ಲಿ ಹುಟ್ಟಿಸಲು ಅದು ಪ್ರವೃತ್ತವಾಗಿದೆಯೆಂದು ಸಿದ್ಧವಾಗುತ್ತದೆ. ಆದ್ದರಿಂದ ಸಮಸ್ತ ಶಾಸ್ತ್ರಗಳ ತಾತ್ಪರ್ಯಾರ್ಥವು ಪರಮಾತ್ಮನ ಸರ್ವೋತ್ತಮತ್ವವೆಂದು ಶ್ರೀಮಧ್ವಾಚಾರ್ಯರ ಪ್ರತಿಪಾದನೆಯಾಗಿದೆ.

ಸರ್ವೋತ್ತಮನಾದ ಪರಮಾತ್ಮನು ಯಾರು ? ವಿಷ್ಣುವೇ, ಶಿವನೆ ? ಶಕ್ತಿಯೇ ? ಅಥವಾ ಬೇರೆ ಬೇರೆ ಮತಗಳಲ್ಲಿ ಹೇಳಲಾಗಿರುವ ಬೇರೆಬೇರೆ ದೇವರುಗಳೇ ? ಇದರ ಬಗ್ಗೆಯೂ ನಾವು ಒಂದು ಸಿದ್ಧಾಂತಕ್ಕೆ ಬರಬೇಕಾಗಿದೆ. ಪುರಾಣಗಳಲ್ಲೂ ವೇದಗಳಲ್ಲೂ ಒಂದೆಡೆ ವಿಷ್ಣುವೇ ಸರ್ವೋತ್ತಮನೆಂದೂ ಮತ್ತೊಂದೆಡೆ ಶಿವನೇ ಸರ್ವಶ್ರೇಷ್ಠನೆಂದೂ ಇನ್ನೊಂದೆಡೆ ಹಿರಣ್ಯಗರ್ಭನೊಬ್ಬನೇ ಸೃಷ್ಟಿಯ ಆದಿಯಲ್ಲಿದ್ದನೆಂದೂ ಹೀಗೆ ಸಾಮಾನ್ಯವಾಗಿ ವಿರುದ್ಧಗಳಂತೆ ಕಾಣುವ ವಾಕ್ಯಗಳು ತೋರುತ್ತವೆ. ಇವುಗಳ ಆಪಾತ ದೃಷ್ಟಿಯ ಅರ್ಥಗಳನ್ನೇ ನಾವು ಇಟ್ಟುಕೊಳ್ಳುವುದಾದರೆ ವೇದವಾಕ್ಯಗಳಿಗೆ ಏಕವಾಕ್ಯತೆಗಳಿಲ್ಲವೆಂದೂ ಅವು ಹುಚ್ಚರ ವಾಕ್ಯಗಳಂತೆ ಅಸಂಗತಗಳಾದ ಸತ್ಯವಲ್ಲದ ವಿಷಯಗಳನ್ನು ವಿಕ್ಷಿಪ್ತ ರೀತಿಯಿಂದ ವರ್ಣಿಸುತ್ತವೆ ಎಂದು ನಾವು ಗ್ರಹಿಸಬೇಕಾಗುವುದು. ಒಂದೆಡೆ ಶಿವನು ಸರ್ವೋತ್ತಮನೆಂದೂ ಇನ್ನೊಂದೆಡೆ ಶಿವನು ವಿಷ್ಣುವಿನ ಕಿಂಕರನೂ ಅವನ ಪರಮಭಕ್ತನೆಂದೂ ಮತ್ತೊಂದೆಡೆ ಶಿವನೂ ವಿಷ್ಣುವೂ ಒಂದೇ ಎಂಬ ಅರ್ಥ ಬರುವ ವಾಕ್ಯಗಳೂ ತೋರಿಬರುತ್ತವೆ. ಆಪಾತವಾಗಿ ಇವು ಪರಸ್ಪರ ವಿರುದ್ಧವಾಗಿದ್ದು ಈ ಎಲ್ಲ ಪ್ರಮೇಯಗಳನ್ನು ಏಕಕಾಲದಲ್ಲಿ ಒಪ್ಪಲು ಬರಲಾರದು. ಹಾಗಿದ್ದರೆ ಪುರಾಣಗಳಲ್ಲಿ ಇರುವ ಈ ತೆರವಾದ ವರ್ಣನೆಯ ಗೂಢವೇನು ? ಈ ಎಲ್ಲ ವಾಕ್ಯಗಳನ್ನೂ ಪರಸ್ಪರ ಸಮನ್ವಯ ಮಾಡಿ ನಾವು ನೋಡುವ ಬಗೆ

ಹೇಗೆ ? ವೇದಗಳಲ್ಲೂ ಅಗ್ನಿ, ಇಂದ್ರ ಮುಂತಾದವರನ್ನು ಸರ್ವಶ್ರೇಷ್ಠರೆಂದು ಬೇರೆ ಬೇರೆ ಭಾಗಗಳಲ್ಲಿ ವರ್ಣಿಸಲಾಗಿದೆ. ಇವುಗಳ ಏಕವಾಕ್ಯತೆಯನ್ನೂ ಇವುಗಳ ನಿಜಭಾವವನ್ನೂ ಅರ್ಥ ಮಾಡಿಕೊಳ್ಳಬಹುದಾದ ಒಂದು ಮೂಲಸೂತ್ರವನ್ನು ನಾವು ಕಂಡುಹಿಡಿಯಬೇಕಾಗಿದೆ.

ಶಂಕರಾಚಾರ್ಯರು ತಮ್ಮ ಸ್ತೋತ್ರಗಳಲ್ಲಿ ಈ ಬಗ್ಗೆ ಇನ್ನೂ ಗೊಂದಲವನ್ನು ನಿರ್ಮಿಸಿದ್ದಾರೆ. ಅವರ ಶಾಸ್ತ್ರದಲ್ಲಿ ಹೇಳಿರುವ ಸಗುಣ ನಿರ್ಗುಣಸ್ವರೂಪಕ ಸ್ತೋತ್ರದಲ್ಲಿ ಮಾಡಿರುವ ವರ್ಣನೆಗೂ ಅತ್ಯಂತ ವಿಸಂಗತಿಯು ಇದೆ. ಅವರು ಒಂದೆಡೆ - ''हरिब्रह्मादीनामपि निकटभाजामसुलभं शिव तव पदांभोजभजनं'' ಎಂದು ಶಿವಪದಕಮಲದ ಭಜನೆಯು ವಿಷ್ಣು ಬ್ರಹ್ಮರಿಗೂ ದುರ್ಲಭವೆಂದು ಶಿವನ ಮಹತ್ವವನ್ನು ಸಾರಿದ್ದಾರೆ. ಇನ್ನೊಂದೆಡೆ ''वेधा: पादतले पतत्ययमसौ विष्णुर्नमत्यग्रत: शंभु: देहि दृगंचलं'' ಬ್ರಹ್ಮನು ಪದತಲದಲ್ಲಿ ಬಿದ್ದಿರುವನು. ವಿಷ್ಣುವು ನಮಿಸುತ್ತಿದ್ದಾನೆ. ಶಿವನು ಮುಂದೆ ಇದ್ದಾನೆ. ಅವನ ಕಡೆಯೂ ಕರುಣದೃಷ್ಟಿಯನ್ನು ಇಡು ಎಂದು ತ್ರಿಪುರಸುಂದರಿಯನ್ನು ವರ್ಣಿಸಿದ್ದಾರೆ. ಮತ್ತೊಂದೆಡೆ- ''ब्रम्हेंद्ररुद्रमरुदर्ककिरीटकोटिसंघट्टितांघ्रिकमल'' ಎಂದು ಬ್ರಹ್ಮ, ರುದ್ರಾದಿಗಳ ಕಿರೀಟಗಳಿಂದ ವಿಷ್ಣುವಿನ ಪಾದವು ಸಂಘಟಿತವಾಗಿದೆಯೆಂದು ವಿಷ್ಣುವನ್ನು ಹೊಗಳಿದ್ದಾರೆ. ಈ ವಾಕ್ಯಗಳಿಂದ ಶಿವ, ವಿಷ್ಣು, ಬ್ರಹ್ಮ, ದುರ್ಗೆಗಳಿಗೆ ಐಕ್ಯವನ್ನು ಹೇಳಿದಂತಾಗಿರದೆ ಅನೇಕರಾದ ಸಗುಣ ಸರ್ವೋತ್ತಮ ದೇವತೆಗಳು ಇದ್ದು ತಮಗೆ ಬೇಕಾದವರಲ್ಲಿ ಭಕ್ತಿಮಾಡಬಹುದೆಂದೂ ಅವರನ್ನು ಸ್ತೋತ್ರ ಮಾಡುವಾಗ ಉಳಿದವರುಗಳಿಗಿಂತ ಉತ್ತಮವೆಂಬ ವ್ಯಾಹತ ಭಾವನೆಯನ್ನು ಮಾಡಬೇಕೆಂದೂ ಅರ್ಥವಾಗುವುದು. ಮುಸ್ಲಿಂ, ಕ್ರೈಸ್ತ ಧರ್ಮಗಳಲ್ಲಿ ಏಕದೇವವಾದವು ಹೇಳಲ್ಪಟ್ಟಿರುವಾಗ ಶ್ರೇಷ್ಠವಾದ ಹಿಂದೂ ಧರ್ಮದಲ್ಲಿ ಅರ್ಥವಿಲ್ಲದೆ ಈ ಅನೇಕ ದೇವವಾದವು ಬಂದಿರುವುದು ಈ ಧರ್ಮಕ್ಕೇ ಒಂದು ಅಪಹಾಸವಾಗಿದೆ. ಅನೇಕ ಸರ್ವೋತ್ತಮ ದೇವತೆಗಳನ್ನು ಕಲ್ಪಿಸಿ ಅವರಲ್ಲಿ ಭಕ್ತಿಮಾಡಿ ಉಳಿದವರನ್ನೆಲ್ಲಾ ಅವರಿಂದ ನಿಕೃಷ್ಟರೆಂದು ನಾವು ಭಾವಿಸುವಾಗ ಇದರಲ್ಲಿ ಪಾರಮಾರ್ಥಿಕ ಹಾಗೂ ವ್ಯಾವಹಾರಿಕ ಈ ಎರಡೂ ಸತ್ಯಗಳ ಹಿನ್ನೆಲೆಯೂ ಇಲ್ಲವೆಂದಾಗುವುದು. ಆದುದರಿಂದ ಈ ಅನೇಕ ದೇವವಾದವು ಹಿಂದೂಧರ್ಮಕ್ಕೆ ಕಲಂಕವಾಗಿರುವುದಲ್ಲದೆ ವೇದ-ಪುರಾಣಗಳ ನಿಜವಾದ ಭಾವವೂ ಇದು ಅಲ್ಲ.

ಈ ಬಗ್ಗೆಯೂ ಶ್ರೀಮಧ್ವಾಚಾರ್ಯರು ಸ್ಪಷ್ಟೀಕರಣ ನೀಡಿದ್ದಾರೆ. ಶ್ರೀವಿಷ್ಣುವೇ ಸರ್ವೋತ್ತಮನೆಂದು ವೇದ-ಪುರಾಣಗಳ ತಾತ್ಪರ್ಯಸಿದ್ಧವಾದ ಅರ್ಥವಾಗಿದೆ. ಅಲ್ಲಲ್ಲಿ ರುದ್ರ, ಹಿರಣ್ಯಗರ್ಭ ಮುಂತಾದವರು ಸರ್ವೋತ್ತಮರೆಂದು ಹೇಳಿದ್ದರೆ ಅದು ವಿಷ್ಣುವಿನ ನಾಮಾಂತರಗಳಾಗಿವೆ. ವಿಷ್ಣುವನ್ನೇ ರುದ್ರ, ಇಂದ್ರ ಮುಂತಾದ ಶಬ್ದಗಳಿಂದ ವೇದ, ಪುರಾಣಗಳಲ್ಲಿ ಕರೆಯಲಾಗಿದೆ. ವಿಷ್ಣುವಿನ ಭಕ್ತರೆಂದು ರುದ್ರ-ಬ್ರಹ್ಮಾದಿಗಳನ್ನು ಕರೆದಿರುವ ವಾಕ್ಯಗಳು ದೇವತೆಗಳ ವರ್ಗದಲ್ಲಿ ಸೇರಿದ ಶ್ರೇಷ್ಠ ಜೀವರನ್ನೂ ಸಂಬಂಧಿಸಿ ಬಂದಿವೆ. ಹೀಗೆ ಶಿವ, ವಿಷ್ಣುಗಳು ಒಂದೇ, ಶಿವನೂ ವಿಷ್ಣುವೂ ಸರ್ವೋತ್ತಮನು ಎಂದು ಮುಂತಾದ ವಾಕ್ಯಗಳನ್ನೂ ಶಿವ-ಬ್ರಹ್ಮಾದಿಗಳೂ ವಿಷ್ಣುವಿನ ದಾಸರು ಎಂದಿರುವ ವಾಕ್ಯಗಳನ್ನೂ ಬೇರೆ ಬೇರೆ ಅರ್ಥದಲ್ಲಿ ಸಮನ್ವಯಗೊಳಿಸಿ ರುದ್ರ, ಬ್ರಹ್ಮಾದಿ ಸಕಲ ದೇವತಾ ಶಬ್ದಗಳಿಂದ ಪ್ರತಿಪಾದ್ಯನಾದ ವಿಷ್ಣುವೇ ಸರ್ವೋತ್ತಮನೆಂದೂ ಬ್ರಹ್ಮ, ರುದ್ರಾದಿ ದೇವತೆಗಳು ಅವನ ಅಧೀನರಾದ ದೇವತಾ ಜೀವರೆಂದೂ ನಾವು ಸಂಗ್ರಹಿಸಿ ತಿಳಿದುಕೊಳ್ಳಬಹುದು. ''यो देवानां नामधा एक एव'' ಎಂದು ವೇದವಾಕ್ಯವು ಒಬ್ಬನೇ ಎಲ್ಲ ದೇವತೆಗಳ ನಾಮಗಳನ್ನು ಧರಿಸಿಕೊಂಡಿದ್ದಾನೆಂದು ಸರ್ವದೇವತೆಗಳ ಶಬ್ದಗಳಿಂದ ಪ್ರತಿಪಾದ್ಯನಾದವನು ಒಬ್ಬನೇ ಸರ್ವೋತ್ತಮನಾದ ದೇವನೆಂದು ಸ್ಪಷ್ಟವಾಗಿ ತಿಳಿಸಿದೆ. ಈ ಶ್ರುತಿಯು ''अजस्य नाभौ अध्येकमर्पितम्'' ಎಂದು ಇಲ್ಲಿ ಪದ್ಮನಾಭತ್ವವನ್ನು ಹೇಳಿರುವುದರಿಂದ ವಿಷ್ಣುವೇ ಸರ್ವ ದೇವತೆಗಳ ಶಬ್ದಗಳಿಂದ ಪ್ರತಿಪಾದ್ಯನು ಎಂಬುದು ಇದರ ಸ್ಪಷ್ಟ ಆಶಯವಾಯಿತು. ಈ ವೇದ

ವಾಕ್ಯದಿಂದ ಹೊರಡುವ ''ದೇವತೆಗಳ ಶಬ್ದಗಳೆಲ್ಲಾ ವಿಷ್ಣುವಿನಲ್ಲಿವೆ'' ಎಂಬ ಸೂತ್ರವನ್ನು ಇಟ್ಟುಕೊಂಡು ಎಲ್ಲ ವೇದ, ಪುರಾಣಗಳಿಗೆ ಪರಸ್ಪರ ವಿರೋಧ ಬಾರದಂತೆ ಅರ್ಥ ಮಾಡಬೇಕೆಂದೂ ಆಗ ವಿಷ್ಣುವೇ ಸರ್ವೋತ್ತಮನೆಂದು ಸರಳವಾಗಿ ನಿಷ್ಪನ್ನವಾಗುವುದು ಎಂದೂ ಆಚಾರ್ಯರು ಬಹು ಸುಲಭ ರೀತಿಯಿಂದ ತೋರಿಸಿರುವರು. ನಾರಾಯಣಸೂಕ್ತದಲ್ಲಿ ವಿಷ್ಣುವನ್ನು "स ब्रह्मा स शिवः सेंद्रः सोऽक्षरः परमः स्वराट्" ಎಂದು ದೇವತಾ ಶಬ್ದಗಳಿಂದ ಸ್ತೋತ್ರ ಮಾಡಲಾಗಿದೆ. ಬ್ರಹ್ಮಸೂತ್ರ ಭಾಷ್ಯದಲ್ಲಿ ಶ್ರೀಮಧ್ವಾಚಾರ್ಯರು ಮೊದಲನೇ ಅಧ್ಯಾಯದಲ್ಲಿ ವೇದಗಳ ದೇವತೆಗಳ ಎಲ್ಲ ಶಬ್ದಗಳು ಪರಮಾತ್ಮನಲ್ಲಿ ಸಮನ್ವಯ ಹೊಂದುವುದರಿಂದ ಅವನೇ ಸರ್ವೋತ್ತಮನೂ, ಗುಣಪೂರ್ಣನೂ ಆಗಿರುವನು ಎಂಬುದನ್ನು ವಿವರವಾಗಿ ಪ್ರತಿಪಾದಿಸಿರುವರು. ಹೀಗೆ ಶ್ರೀನಾರಾಯಣ ಸರ್ವೋತ್ತಮತ್ವವು ಎಲ್ಲ ವೇದಗಳ ಸಿದ್ಧಾಂತವೆಂಬುದು ಮೇಲಿನ ವಿಮರ್ಶೆಯಿಂದ ವ್ಯಕ್ತವಾಗುವುದು.

ಹೀಗೆ ಶ್ರೀಮಧ್ವಾಚಾರ್ಯರು ಏಕದೇವವಾದವನ್ನು ಸ್ಥಾಪಿಸಿರುವರು. ವಿಷ್ಣುವೇ ಪರಬ್ರಹ್ಮನೆಂದೂ ಅವನೇ ಸರ್ವೋತ್ತಮನೆಂದೂ ಪ್ರತಿಪಾದಿಸಿ ಅನೇಕರು ಸರ್ವೋತ್ತಮರಿರುವರೆಂಬ ಭಾವನೆಯನ್ನು ಹೊಡೆದುಹಾಕಿ ಅದರ ಹಿನ್ನೆಲೆಯಿಲ್ಲದ ಅನೇಕ ಅತಾತ್ವಿಕ ಸಂಪ್ರದಾಯಗಳನ್ನು ನಿರ್ಮೂಲಗೊಳಿಸಿದರು. ವೈಷ್ಣವ ಸಿದ್ಧಾಂತದ ಮತ್ತು ಏಕದೇವವಾದದ ವಿಜಯ ಪತಾಕೆಯನ್ನು ಹಾರಿಸಿದರು. ದೇವತೆಗಳು ಅನೇಕರಿದ್ದರೂ ಸರ್ವೋತ್ತಮದೇವನು ಒಬ್ಬನೇ ಎಂಬ ಅರ್ಥದಲ್ಲಿ ಈ ಏಕದೇವ ಶಬ್ದವನ್ನು ನಾನು ಇಲ್ಲಿ ಪ್ರಯೋಗಿಸುತ್ತಿದ್ದೇನೆ. ಅಥರ್ವಣೋಪನಿಷತ್ತಿನ ಭಾಷ್ಯದಲ್ಲಂತೂ ಕೃತಯುಗದ ಮೂಲ ತತ್ತ್ವಜ್ಞಾನವನ್ನು ಮತ್ತೂ ಚೆನ್ನಾಗಿ ವಿಶದೀಕರಿಸಿದ್ದಾರೆ.

काले कृतयुगे तदा, नैव चेन्द्रादि नामनि विष्णोरन्यत्र कुत्रचित् । ब्रह्मरुद्रेन्द्र पूर्वैं नामभिः प्रोच्यते हरिः । देवतात्वेन चेज्यः स ब्रह्माद्या मनुनामकाः । वक्तृत्वेन पितृन्वेन कारित्वेनैव चादरात् । इज्यंते देवताः सर्वां न तु देवतया क्वचित् ।।

ಕೃತಯುಗದಲ್ಲಿ ಬ್ರಹ್ಮರುದ್ರಾದಿ ನಾಮಗಳಿಂದ ವಿಷ್ಣುವೇ ಹೇಳಲ್ಪಡುತ್ತಿದ್ದನಲ್ಲದೆ ದೇವನೆಂದು ಅವನು ಮಾತ್ರ ಪೂಜಿಸಲ್ಪಡುತ್ತಿದ್ದನು. ಉಳಿದ ದೇವತೆಗಳನ್ನು ಗುರು, ಪಿತೃ ಎಂಬ ರೀತಿಯಿಂದ ಪೂಜಿಸುತ್ತಿದ್ದರಲ್ಲದೆ ದೇವನೆಂದು ಪೂಜಿಸುತ್ತಿರಲಿಲ್ಲವೆಂದು ಏಕದೇವವಾದವನ್ನು ಸ್ಪಷ್ಟಪಡಿಸಿದ್ದಾರೆ. ಹೀಗೆ ಹಿಂದೂಧರ್ಮದ ಬಗ್ಗೆ ಬಂದಿರುವ ಅನೇಕ ದೇವವಾದದ ಆರೋಪವನ್ನು ಶ್ರೀಮಧ್ವಾಚಾರ್ಯರು ಪರಿಹರಿಸಿದ್ದಾರೆ.

ಸರ್ವ ಶಬ್ದವಾಚ್ಯನಾದ ಪರಮಾತ್ಮನು ಸರ್ವ ದೇವತೆಗಳ ಆಕಾರವುಳ್ಳವನೂ ಆಗಿರುವನು. ಎಲ್ಲ ಜೀವರಲ್ಲೂ ದೇವತೆಗಳಲ್ಲೂ ಅದೇ ರೀತಿಯ ಚಿನ್ಮಯ ಆಕಾರದಿಂದ ಅಂತರ್ಯಾಮಿಯಾಗಿ ಭಗವಂತನು ಇರುವನು ಎಂಬುದನ್ನು ಆಚಾರ್ಯರು ಪ್ರಮಾಣಗಳಿಂದ ಸಮರ್ಥಿಸಿರುವರು. ಹೀಗೆ ಸರ್ವ ದೇವತೆಗಳ ಒಳಗೂ ಅಂತಹದೇ ಆದ ಕಾರಣಗಳಿಂದ ಇರುವ ಪರಮಾತ್ಮ ಸರ್ವಾಕಾರನಾಗಿರುತ್ತಾನೆ. ಎಲ್ಲ ತರದ ಆಕಾರಗಳೂ ಅವನಲ್ಲಿ ಇವೆ. ಹೀಗೆ ವಸ್ತುತಃ ಶ್ರೀಮಧ್ವಾಚಾರ್ಯರ ಸಿದ್ಧಾಂತದಲ್ಲಿ ಸರ್ವೋತ್ತಮನೂ, ಜಗಜನ್ಮಾದಿಕರ್ತನೂ ನಿರ್ದೋಷನೂ, ಸ್ವತಂತ್ರನೂ ಸರ್ವವ್ಯಾಪಿಯೂ ಆದ ಶ್ರೀಹರಿಯ ಹೆಸರು ಹಾಗೂ ಆಕಾರಗಳ ಬಗ್ಗೆ ಚರ್ಚೆಯ ಪ್ರಸಂಗವಿಲ್ಲ. ಪರಮಾತ್ಮನನ್ನು ಯಾವ ಹೆಸರಿನಿಂದಲೂ ಕರೆಯಬಹುದು; ಯಾವ ದೇವತೆಗಳ ಆಕಾರದಿಂದಲೂ ಭಾವಿಸಬಹುದು.

''ब्रह्मणि ब्रह्मरूपौऽसौ शिवरूपी शिवे स्थितः।''
''उद्दीपयन् देवगणान् स विष्णुर्देवेन रूपेण ।।''

ಮುಂತಾದ ಸ್ಮೃತಿಗಳಿಂದಲೂ ಎಲ್ಲ ದೇವತೆಗಳೂ ಜೀವರೂ ಪರಮಾತ್ಮನ ಪ್ರತಿಬಿಂಬಗಳಾಗಿದ್ದರಿಂದಲೂ ಎಲ್ಲ ದೇವತೆಗಳ ಸಮಾನವಾದ ಅಪ್ರಾಕೃತ ಆಕಾರಗಳು ಪರಮಾತ್ಮನಿಗಿವೆ.

"स्वशरीरांतर्गतविचित्र भगवदाकारसदृशाकारवत्वमात्रेण प्रतिबिंबत्वमुक्तम् "

-ವಾದಿರಾಜರು

ಹೀಗೆ ಶ್ರೀಹರಿಯನ್ನು ಎಲ್ಲ ನಾಮಗಳಿಂದ ವಿವಿಧ ಆಕಾರಗಳಿಂದ ಕರೆಯಬಹುದಾದರೂ ಅವನು ಸರ್ವೋತ್ತಮನೂ, ಗುಣಪೂರ್ಣನೂ ಮುಂತಾದ ಮೂಲಭೂತ ಮುಖ್ಯ ವಿಷಯಗಳ್ನು ಮಾತ್ರ ಮರೆತಿರಬಾರದು. ಇದು ಆಚಾರ್ಯರ ಸಿದ್ಧಾಂತದ ಒಂದು ವಿಶಿಷ್ಟತೆಯಾಗಿದೆ.

ಹೀಗೆ ಸರ್ವೋತ್ತಮನಾದ ವಿಷ್ಣುವನ್ನು ಬ್ರಹ್ಮ -ರುದ್ರಾದಿ ಸರ್ವ ಶಬ್ದಗಳಿಂದ ಕರೆಯಬಹುದು ಎಂದು ಇಷ್ಟರ ವರೆಗೆ ಹೇಳಿರುವೆವು. ಆದರೂ ವಿಷ್ಣು , ನಾರಾಯಣ ಶಬ್ದಗಳಿಗೆ ವಿಶೇಷ ಮಹತ್ವ ಹಾಗೂ ಪ್ರಸಿದ್ಧಿಯು ಬರಲು ಪರಮಾತ್ಮನನ್ನು ಹೇಳುವ ಸುಪ್ರಸಿದ್ಧ ಶಬ್ದಗಳಾದ ಓಂ, ಬ್ರಹ್ಮ ಈ ಶಬ್ದಗಳಿಗೆ ಪೂರ್ಣ ಅಥವಾ ಗುಣಪೂರ್ಣ ಎಂದು ಅರ್ಥವಾಗಿದ್ದರೆ ವಿಷ್ಣು , ನಾರಾಯಣ ಶಬ್ದಗಳಿಗೂ ವ್ಯಾಕರಣ ಹಾಗೂ ನಿರುಕ್ತ ರೀತಿಯಿಂದ ಅದೇ ಅರ್ಥವಾಗುವುದು. ಆದ್ದರಿಂದ ಈ ಶಬ್ದಗಳು ಪರಮಾತ್ಮನಿಗೆ ಅತ್ಯಂತ ಪ್ರಿಯಗಳಾಗಿವೆ.

ದೇವತಾ ತಾರತಮ್ಯ

ಹೀಗೆ ಸರ್ವಶಬ್ದ ವಾಚ್ಯನಾದ ಸರ್ವೋತ್ತಮನಾದ ಶ್ರೀ ಹರಿಯು ಜಗತ್ತಿನ ಅಂತರ್ಯಾಮಿಯಾಗಿ ಜಗದ್‌ವ್ಯಾಪಾರವನ್ನು ನಡೆಸುತ್ತಿದ್ದರೂ ಅವನ ಆಜ್ಞೆಯಂತೆ ಅನೇಕ ದೇವತೆಗಳು ಭೌತಿಕ ಪದಾರ್ಥಗಳ ಅಭಿಮಾನಿಗಳಾಗಿ ಜಗದ್‌ವ್ಯಾಪಾರದಲ್ಲಿ ಸಹಭಾಗಿಗಳಾಗಿರುವರು. ಈ ದೇವತೆಗಳು ಪರಮಾತ್ಮನ ಅಧೀನರಾಗಿ ಜಗತ್ತಿನ ಬೇರೆ ವಸ್ತುಗಳಲ್ಲಿ ಇದ್ದು ಅವುಗಳ ಅಭಿಮಾನಿಗಳೆಂದೇ ಕರೆಸಿಕೊಳ್ಳಲ್ಪಟ್ಟು ಅವುಗಳ ವಿವಿಧ ವ್ಯಾಪಾರಗಳಿಗೆ ಕಾರಣರಾಗಿರುವರು. ಲಕ್ಷ್ಮೀತತ್ತ್ವವು ಈ ದೇವತೆಗಳಲ್ಲಿ ಅತಿ ಮುಖ್ಯವಾಗಿದೆ. ಶ್ರೀಲಕ್ಷ್ಮೀದೇವಿಯೂ ಜಗನ್ಮಾತೆಯೂ ಪರಮಾತ್ಮನ ನಿತ್ಯಾವಿಯುಕ್ತ ಸಹಚಾರಿಣಿಯೂ ಪ್ರಕೃತಿ ತತ್ತ್ವದ ಅಭಿಮಾನಿಯೂ ನಿತ್ಯಮುಕ್ತಳೂ ಆಗಿದ್ದು ಜೀವವರ್ಗದಲ್ಲೇ ಸರ್ವೋತ್ತಮಳೆನಿಸಿದ್ದಾಳೆ. ಈ ಮಾತೆಯ ನಂತರ ಬ್ರಹ್ಮಾಂಡದ ಅಧಿಪತಿಗಳಾದ ಸಂಸಾರಿಗಳಲ್ಲೇ ಅತ್ಯುತ್ತಮರೆನಿಸಿದ ಜೀವೋತ್ತಮರೂ ಆಗಿರುವ ಬ್ರಹ್ಮ-ವಾಯುಗಳ ಸ್ಥಾನವಿದೆ. ಅವರು ಪರಮಾತ್ಮನ ಜಗತ್ ಸೃಷ್ಟಿಕಾಲದಲ್ಲಿ ಲಕ್ಷ್ಮಿಯ ನಂತರದ ಮುಖ್ಯ ಸಹಭಾಗಿಗಳಾಗಿರುವರು. ಇವರಲ್ಲಿ ಮುಖ್ಯಪ್ರಾಣನೆಂದು ಪ್ರಸಿದ್ಧರಾದ ವಾಯುದೇವರೇ ಶ್ರೀಮಧ್ವಾಚಾರ್ಯರಾಗಿ ಅವತರಿಸಿ, ವೈದಿಕಧರ್ಮದ ದಿವ್ಯ ಸಂದೇಶವನ್ನು ಪುನಃ ಜಗತ್ತಿನಲ್ಲಿ ಪ್ರಸಾರ ಮಾಡಿರುವರು. ಇವರ ನಂತರ ಸರಸ್ವತೀ, ಭಾರತೀ, ರುದ್ರ, ಶೇಷ, ಗರುಡ, ಪಾರ್ವತಿ, ಇಂದ್ರ ಮುಂತಾದ ಅಭಿಮಾನೀ ದೇವತೆಗಳು ಬರುವರು. ಇವರೆಲ್ಲ ಪರಮಾತ್ಮನ ಅಧೀನರಾಗಿ ಆವಾವ ಪದಾರ್ಥಗಳಲ್ಲಿ ಇದ್ದು ಅವುಗಳ ವ್ಯಾಪಾರಗಳನ್ನು ನಡೆಸಲು ಕಾರಣರಾಗುತ್ತಾರೆ. ಹೀಗೆ ಸೃಷ್ಟಿ ಹಾಗೂ ಜಗದ್‌ವ್ಯಾಪಾರದ ಹಿಂದೆ ಇರುವ ಈ ಎಲ್ಲ ಶಕ್ತಿಗಳು ಜ್ಞಾನ ಹಾಗೂ ಅನುಗ್ರಹವು ಈ ಜಗತ್ತಿನಿಂದ ಪರಮಾತ್ಮನ ಕಡೆಗೆ ಸಾಗಲು ನಮಗೆ ಸಹಾಯಕವಾಗುವುವು.

ಪಂಚಭೇದಗಳು

ಶ್ರೀಮಧ್ವಾಚಾರ್ಯರ ಸಿದ್ಧಾಂತದಂತೆ ಸರ್ವೋತ್ತಮನಾದ ಪರಮಾತ್ಮನೂ, ಅವನ ಸೇವಕರೂ ಸಾಧಕರೂ ಆದ ಜೀವರೂ ಸಾಧನ ಕ್ಷೇತ್ರವಾದ ಜಗತ್ತು ಈ ಮೂರೂ ಸತ್ಯವಾಗಿರುವುದರಿಂದ ಇವುಗಳನ್ನು

ಬಿಡಿಸಿ ತಿಳಿಯುವದು ಅವಶ್ಯವಾಗಿದೆ. ಹಾಗೆ ಪೃಥಕ್ಕರಿಸಿ ನೋಡಿದಾಗ ಒಟ್ಟು ಐದು ತರದ ಭೇದಗಳನ್ನು ಸಂಗ್ರಹಿಸಿ ಹೇಳಬಹುದು. ಪರಮಾತ್ಮನಿಗೂ ಜೀವರಿಗೂ ಇರುವ ಭೇದ, ಪರಮಾತ್ಮನಿಗೂ ಜಡಗಳಿಗೂ ಇರುವ ಭೇದ, ಜೀವರಿಗೂ ಜಡಗಳಿಗೂ ಇರುವ ಭೇದ, ಜೀವರಲ್ಲಿರುವ ಪರಸ್ಪರ ಭೇದ, ಜಡಗಳಲ್ಲಿರುವ ಪರಸ್ಪರ ಭೇದ ಹೀಗೆ ಐದು ಪ್ರಕಾರಗಳಿರುತ್ತವೆ. ಇವುಗಳು ಪಂಚಭೇದಗಳೆಂದು ಪ್ರಸಿದ್ಧವಾಗಿವೆ. ಈ ಭೇದಗಳ ಜ್ಞಾನವಿದ್ದರೆ ಮಾತ್ರ ವಿಶ್ವದ ಯಥಾವತ್ತಾದ ಪರಿಚಯವು ಆಗಲು ಸಾಧ್ಯ . ಈ ಭೇದಗಳ ಜ್ಞಾನದಿಂದ ಈಶ್ವರ, ಜೀವ, ಜಡಗಳನ್ನು ಪೃಥಕ್ಕರಿಸಿ ನೋಡಲು ಸಾಧ್ಯವಾಗಿ ಜಗತ್ತಿನ ನಿಜರೂಪವನ್ನು ತಿಳಿಯಲು ನಾವು ಸಮರ್ಥರಾಗುವೆವು. ಮಾತ್ರವಲ್ಲದೆ ಜೀವರು ತನ್ನದಾಗದಿದ್ದ ಜಡಗಳಾದ ಶರೀರ ಮನಸ್ಸುಗಳ ಅನೇಕ ಧರ್ಮಗಳನ್ನೂ ಪರಮಾತ್ಮನ ಸ್ವಾತಂತ್ರ್ಯಾದಿ ಧರ್ಮಗಳನ್ನೂ ತನ್ನವು ಎಂದು ಭ್ರಮಿಸಿ ಈ ಜಡ ಹಾಗೂ ಈಶರಿಂದ ತನ್ನಲ್ಲಿ ಒಂದು ರೀತಿಯ ಐಕ್ಯವನ್ನು ಭಾವಿಸಿಕೊಂಡಂತಿದ್ದು ಅದರಿಂದಾಗಿ ತಪ್ಪು ದಾರಿ ಹಿಡಿದು ನಡೆದಿರುವವರು ಈ ಪಂಚಭೇದಗಳ ಜ್ಞಾನದಿಂದ ತನ್ನನ್ನು ಜಡಗಳಾದ ಶರೀರ ಮನಸ್ಸುಗಳಿಂದಲೂ, ಈಶನಿಂದಲೂ ಪೃಥಕ್ಕಾಗಿ ಅನುಸಂಧಾನವನ್ನು ಮಾಡಿಕೊಂಡು ಪ್ರಪಂಚದಲ್ಲಿ ತನ್ನ ಸ್ಥಾನವನ್ನು ಈಶ್ವರ ಜಡಗಳಿಗೂ ತನಗೂ ಇರುವ ಸಂಬಂಧವನ್ನು ಅರ್ಥಮಾಡಿಕೊಂಡು ಯೋಗ್ಯ ಮಾರ್ಗದಲ್ಲಿ ನಡೆಯುವ ಪ್ರೇರಣೆಯನ್ನು ಪಡೆಯಬಲ್ಲನು. ಹೀಗೆ ಪಂಚಭೇದಗಳಿಗೆ ಮಧ್ವಸಿದ್ಧಾಂತದಲ್ಲಿ ವಿಶಿಷ್ಟ ಸ್ಥಾನವಿದೆ.

ಮುಕ್ತಿ ಮತ್ತು ತಾರತಮ್ಯ

ಮಧ್ವಸಿದ್ಧಾಂತದಲ್ಲಿ ಮುಕ್ತಿಯೆಂದರೆ, ಸಜ್ಜೀವರು ಪರಮಾತ್ಮನ ದರ್ಶನ ಹಾಗೂ ಪ್ರಸಾದದಿಂದ ತಮ್ಮ ಸ್ವರೂಪದಲ್ಲೇ ಜ್ಞಾನಾನಂದಾದಿ ಚಿದಾತ್ಮಕ ಸದ್ಗುಣಗಳನ್ನು ಅನುಭವಿಸುವುದು ಆಗಿದೆ. ಜೀವರು ತನಗಿಂತ ಭಿನ್ನವಾದ ಮನಸ್ಸಿನ ವಿಕಾರ ಹಾಗು ಧರ್ಮಗಳಾದ ರಾಗ, ದ್ವೇಷ, ಸುಖ, ದುಃಖ ಮೊದಲಾದವುಗಳನ್ನೂ ಅಜ್ಞಾನವನ್ನೂ ತನ್ನ ಧರ್ಮವೆಂದು ಭ್ರಮಿಸಿ ತನ್ನದಾಗದಿದ್ದುದನ್ನು ತನ್ನದೆಂದು ಹಚ್ಚಿಕೊಂಡು ಸಾಂಸಾರಿಕ ಕ್ಲೇಷ ವಿಕಾರಗಳಿಗೆ ಗುರಿಯಾಗಿರುವರು. ನಮ್ಮ ಈ ಮಹಾ ಪ್ರಮಾದವೇ ಸಂಸಾರವಾಗಿದೆ.

''प्रमादात्मकत्वात् बंधस्य'' -ಭಾಷ್ಯ

ಪರಮಾತ್ಮನ ಸಾಕ್ಷಾತ್ಕಾರದಿಂದ ತಮ್ಮ ನಿಜರೂಪದ ಅನುಭವ ಉಂಟಾಗಿ ಈ ಅನ್ಯಥಾ ಜ್ಞಾನದ ನಿವೃತ್ತಿಯಾಗಿ ಈ ಕ್ಲೇಶ ಅನರ್ಥಗಳಿಂದ ಜೀವರಿಗೆ ಬಿಡುಗಡೆಯಾಗುವುದು. ತನ್ನದಾಗದಿದ್ದುದನ್ನು ಹಚ್ಚಿಕೊಂಡು ತನ್ನದಾದ ಸ್ವರೂಪಾನಂದವನ್ನು ಮರೆತಿರುವ ಈ ಸಜ್ಜೀವನು ಭಗವತ್ ಸಾಕ್ಷಾತ್ಕಾರದಿಂದ ತನ್ನದಲ್ಲದ ಅನ್ಯಥಾ ರೂಪದಿಂದ ಬಿಡುಗಡೆ ಹೊಂದಿ ತನ್ನ ನಿಜ ರೂಪವನ್ನು , ತನ್ನ ಜ್ಞಾನಾನಂದಮಯ ಸುಂದರ ವ್ಯಕ್ತಿತ್ವವನ್ನು , ತನ್ನತನವನ್ನು ಪಡೆಯುತ್ತಾನೆ.

''मुक्तिर्हित्वान्यथारूपं स्वरूपेण व्यवस्थिति:'' ॥

ಬೂದಿಯಿಂದ ಮುಚ್ಚಿದ ಕೆಂಡವು ಗಾಳಿಯಿಂದ ಬೂದಿ ಹಾರಿ ಹೋದ ನಂತರ ತನ್ನ ನಿಜ ಶಕ್ತಿಯನ್ನು ಪ್ರಕಾಶಪಡಿಸುವಂತೆ ಬೂದಿ ಮುಚ್ಚಿದ ಕೆಂಡದಂತಿರುವ ಜೀವನು ಪರಮಾತ್ಮ ಪ್ರಸಾದವೆಂಬ ಗಾಳಿಯಿಂದ ಅಜ್ಞಾನರೂಪಿಯಾದ ಬೂದಿ ಹಾರಿಹೋದನಂತರ ತನ್ನದೇ ಆದ ನಿಜರೂಪ, ಶಕ್ತಿ ಪ್ರಕಾಶನಗಳನ್ನು ಪ್ರಕಟಪಡಿಸುತ್ತಾನೆ.

''मुक्तिर्नैजसुखानुभूतिरमला''

ಈ ಮುಕ್ತಿಗೆ ಪರಮಾತ್ಮನ ದರ್ಶನ ನಿರವಧಿಕ ಭಕ್ತಿ, ಪ್ರಸಾದಗಳೇ ಮುಖ್ಯ ಕಾರಣಗಳಾಗಿವೆ.

ಮುಕ್ತಿಯಲ್ಲಿ ಜೀವಾತ್ಮರು ಅನುಭವಿಸುವ ಅವರ ಸ್ವರೂಪಾನಂದವು ಎಲ್ಲರಲ್ಲೂ ಏಕ ರೀತಿ ಇರುವುದಿಲ್ಲ. ಜೀವರ ವ್ಯಕ್ತಿತ್ವಗಳು ಭಿನ್ನಭಿನ್ನಗಳೂ ಮೂಲತಃ ವ್ಯತ್ಯಾಸಗಳುಳ್ಳವೂ ಎಂದು ಮೊದಲೇ ಸಮರ್ಥಿಸಿದ್ದೇವೆ. ಮುಕ್ತಿಯಲ್ಲಿ ತಮ್ಮ ಮೂಲವ್ಯಕ್ತಿತ್ವಕ್ಕೆ ಬಂದಾಗಲೂ ಆ ವ್ಯತ್ಯಾಸಗಳನ್ನು ಅನುಭವಿಸುವುದು ಸಹಜವೇ ಆಗಿದೆ. ಅದರಂತೆ ಮುಕ್ತಿಯನ್ನು ಪಡೆದ ಜೀವರೆಲ್ಲರ ಸಾಧನಾನುಷ್ಠಾನಗಳು ಏಕರೀತಿಯಲ್ಲಿರಲು ಸಾಧ್ಯವೇ ಇಲ್ಲ. ಜೀವರ ಮೂಲ ವ್ಯಕ್ತಿತ್ವದಲ್ಲೂ ಅವರ ಸಾಧನಾನುಷ್ಠಾನಗಳಲ್ಲೂ ವ್ಯತ್ಯಾಸಗಳು ಇರುವಾಗ ಸಾಧ್ಯವಾದ ಮುಕ್ತಿಯ ಆನಂದದಲ್ಲಿ ಪೂರ್ಣ ಸಮಾನತೆಯಿರುವುದು ಸರ್ವಥಾ ಶಕ್ಯವಿಲ್ಲ. ಆದ್ದರಿಂದ ಮುಕ್ತಿಯಲ್ಲಿ ಎಲ್ಲ ಜೀವರಿಗೂ ಅವರ ವ್ಯಕ್ತಿತ್ವಗಳಿಗೂ ಅನುಗುಣವಾಗಿ ಆನಂದದಲ್ಲಿ ಅಂತರವಿದೆಯೆಂಬುದನ್ನು ಒಪ್ಪಬೇಕಾಗಿದೆ. ಅವರವರ ಕರ್ತವ್ಯಗಳನ್ನು ಅನುಸರಿಸಿ ಫಲವನ್ನು ನೀಡುವುದು ನಿಜವಾದ ಸಮತೆಯಾಗಿದೆ. ಹೀಗಿದ್ದರೂ ಮುಕ್ತಿಯಲ್ಲಿ ಯಾರಿಗೂ ಅಪೂರ್ಣತೆಯ ಅನುಭವವು ಬರಲಾರದು. ಬೇರೆ ಬೇರೆ ಸಣ್ಣ ದೊಡ್ಡ ಪಾತ್ರೆಗಳಲ್ಲಿ ತುಂಬಿರುವ ನೀರಿನಲ್ಲಿ ಅಂತರ ವಿದ್ದರೂ ಎಲ್ಲ ಪಾತ್ರೆಗಳೂ ಪೂರ್ಣವಿದ್ದಂತೆ. ಬೇರೆ ಬೇರೆ ಮುಕ್ತಾತ್ಮರ ಆನಂದದಲ್ಲಿ ತಾರತಮ್ಯವಿದ್ದರೂ ಎಲ್ಲರೂ ಪೂರ್ಣತೆಯನ್ನು ಪಡೆದು ತೃಪ್ತರಾಗಿರುವರು ಎನ್ನಲು ಅಭ್ಯಂತರವಿಲ್ಲ. ಹೀಗೆ ಈ ಸಿದ್ಧಾಂತದಲ್ಲಿ ಮುಕ್ತಿಯು ಅತ್ಯಂತ ಆಕರ್ಷಕವೂ, ಸಮಂಜಸವೂ, ತರ್ಕಬದ್ಧವೂ ಆದ ರೀತಿಯಲ್ಲಿ ವರ್ಣಿಸಲ್ಪಟ್ಟಿದೆ. ತಮ್ಮ ಈ ದಿವ್ಯ ಚಿದಾನಂದಮಯ ಸುಂದರ ಸ್ವರೂಪದ ಪ್ರಾಪ್ತಿಗಾಗಿ ವೈರಾಗ್ಯ ಭಕ್ತಿಗಳೆಂಬ ಎರಡು ರೆಕ್ಕೆಗಳಿಂದ ಭಗವಂತನೆಡೆಗೆ ಉತ್ಸಾಹದಿಂದ ಹಾರುವುದೇ ಜೀವ ಪಕ್ಷಿಗಳ ಮುಖ್ಯ ಲಕ್ಷ್ಯವಾಗಿರಬೇಕು.

ಉಪಸಂಹಾರ

ಅಂತೂ ಶ್ರೀಮಧ್ವಾಚಾರ್ಯರ ತತ್ತ್ವವಾದವನ್ನು ಸಂಕ್ಷಿಪ್ತವಾಗಿ ಈ ರೀತಿಯಾಗಿ ವಿವರಿಸ ಬಹುದು. ''ಸಕಲ ವೇದಗಳಿಂದ ಪ್ರತಿಪಾದ್ಯನಾದ ಶ್ರೀಹರಿಯು ಸರ್ವೋತ್ತಮನಾಗಿದ್ದು, ಅವನ ಲೀಲಾವಿಹಾರ ಕೇಂದ್ರವೂ ಜೀವಾತ್ಮರ ಸಾಧನ ಕ್ಷೇತ್ರವೂ ಆಗಿರುವ ಜಗತ್ತು ಸತ್ಯವಾಗಿದೆ. ಈ ಪರಾತ್ಪರ ಶಕ್ತಿಯ ಸೇವಕರೂ ಸಾಧಕರೂ ಆದ ಈ ಜೀವರು ಭಗವಂತನಿಂದ ಭಿನ್ನವಾಗಿದ್ದು ಮೂಲಭೂತವಾದ ಮತ್ತು ತನ್ನ ಕರ್ತವ್ಯಗಳಿಗೆ ಅನುಗುಣವಾದ ಸ್ವಾಭಾವಿಕವಾದ ಅಂತರವನ್ನು ಪಡೆದಿರುವರು. ಭಗವಂತನ ಅನುಗ್ರಹದಿಂದ ಪರಿಶುದ್ಧ ಭಕ್ತಿಯಿಂದ ತನ್ನ ದಿವ್ಯಸ್ವರೂಪ ಸಾಕ್ಷಾತ್ಕಾರವೇ ಸಾಧಕ ಜೀವರ ಗುರಿಯಾಗಿರಬೇಕು. ಈ ಪ್ರಮೇಯಗಳನ್ನು ಅಪೌರುಷೇಯ ವೇದ ಮತ್ತು ಇತರ ಶಾಸ್ತ್ರಗಳು ಹಾಗೂ ಪ್ರತ್ಯಕ್ಷ ಮತ್ತು ಯುಕ್ತಿಗಳಿಂದ ನಾವು ತಿಳಿದುಕೊಳ್ಳಬೇಕು.''

ಪೂರ್ಣಪ್ರಜ್ಞರ ಈ ತತ್ತ್ವವಾದವನ್ನು ನಾವು ಸರಿಯಾಗಿ ಅಭ್ಯಸಿಸಿ ಅವರ ಸರ್ವಶ್ರೇಷ್ಠತ್ವವನ್ನೂ ಇಡೀ ಜಗತ್ತಿಗೇನೇ ಮಾರ್ಗದರ್ಶನವನ್ನು ನೀಡಬಹುದಾದ ಅದರ ಉದಾರತೆಯನ್ನೂ ಮನಗಂಡು ಅದನ್ನು ಇಡೀ ವಿಶ್ವದಲ್ಲಿ ಪ್ರಚಾರಪಡಿಸಬೇಕೆಂದೂ ಜಗತ್ತಿನ ಸಜ್ಜನರೆಲ್ಲರೂ ಇದರಿಂದ ಆತ್ಮಕಲ್ಯಾಣ ಹಾಗೂ ಉನ್ನತಿಯನ್ನು ಪಡೆಯಬೇಕೆಂದೂ ಆಶಿಸುವೆವು.

॥ ಶ್ರೀ ಕೃಷ್ಣಾರ್ಪಣಮಸ್ತು ॥

(ಶ್ರೀಮಧ್ವಾಚಾರ್ಯರ ತತ್ತ್ವಜ್ಞಾನ, ೧೯೭೨, ಮಿಂಚಿನಬಳ್ಳಿ ಪ್ರಕಾಶನ, ಹುಬ್ಬಳ್ಳಿ)

ಶ್ರೀ ವಿಶ್ವೇಶತೀರ್ಥ ಶ್ರೀಪಾದರು
(ಸಂಗ್ರಹ– ರಾಮ ವಿಟ್ಠಲ)

೩ - ೩೧

ಮಹಾಭಾರತದ ಬೆಳಕು

ಮಹಾಭಾರತ ಪ್ರವಚನ ಸಂಗ್ರಹ

ಸಾರ್ಥಕ ಬಾಳು

ರಾಜರ್ಷಿ ಇಂದ್ರದ್ಯುಮ್ನನು ಸ್ವರ್ಗದಲ್ಲಿ ತನ್ನ ಪುಣ್ಯಫಲವನ್ನು ಅನುಭವಿಸುತ್ತಿದ್ದನು. ಇವನ ಸುಕೃತದ ರಾಶಿಯು ಕರಗಿತೆಂದು ಲೆಕ್ಕಾಚಾರಮಾಡಿ ಸ್ವರ್ಗಲೋಕದ ಅಧಿಕಾರಿಗಳು ಇಂದ್ರದ್ಯುಮ್ನನನ್ನು ಸ್ವರ್ಗದಿಂದ ಕೆಳಗೆ ತಳ್ಳಿದರು. ಸ್ವರ್ಗಚ್ಯುತನಾಗಿ ಭೂಮಿಗೆ ಉರುಳಿದ ಇಂದ್ರದ್ಯುಮ್ನನು ಮಾರ್ಕಂಡೇಯರ ಬಳಿಗೆ ಬಂದು ತಾನು ಇಂದ್ರದ್ಯುಮ್ನ ರಾಜನೆಂದು ತಿಳಿಸಿ ತನ್ನ ಹೆಸರು ಮತ್ತು ತಾನು ಮಾಡಿರುವ ಕೆಲಸದ ಪರಿಚಯ ವಿದೆಯೇ ? ಎಂದು ಪ್ರಶ್ನಿಸುವನು. ''ಭೌತಿಕ ವಿಷಯಗಳನ್ನು ಕಡೆಗಣಿಸಿ ಅಧ್ಯಾತ್ಮದಲ್ಲಿಯೇ ಮಗ್ನರಾಗಿ ದಿನಕ್ಕೊಂದು ಗ್ರಾಮದಲ್ಲಿ ವಾಸಿಸುತ್ತಾ ಪರಿವ್ರಾಜಕರಾಗಿರುವ ನಮ್ಮಂತಹವರಿಗೆ ನಿನ್ನಂತಹ ರಾಜನ ಪರಿಚಯವಿರಲು ಶಕ್ಯವಿಲ್ಲ ಬೇರೆ ಜನರನ್ನು ವಿಚಾರಿಸು'' ಎಂದು ಮಾರ್ಕಂಡೇಯರು ಉತ್ತರಿಸುವರು. ತಮಗಿಂತಲೂ ಹಳೆಯವರಾದ ವ್ಯಕ್ತಿಗಳು ಯಾರಾದರೂ ಇರುವರೇ ? ಎಂದು ಇಂದ್ರದ್ಯುಮ್ನನು ಪ್ರಶ್ನಿಸಲು ಹಿಮಾಲಯದಲ್ಲಿ ವಾಸಿಸುವ ಉಲೂಕ ಪಕ್ಷಿಯನ್ನು ವಿಚಾರಿಸುವಂತೆ ಮಾರ್ಕಂಡೇಯರು ಹೇಳುವರು. ರಾಜನು ಹಿಮಾಲಯಕ್ಕೆ ತೆರಳಿ ಉಲೂಕ ಪಕ್ಷಿಯನ್ನು ''ನನ್ನ ಪರಿಚಯವಿದೆಯೇ ?'' ಎಂದು ಕೇಳುವನು. ಅದು ತುಸು ಹೊತ್ತು ಆಲೋಚಿಸಿ ''ಇಂದ್ರದ್ಯುಮ್ನ ರಾಜನ ವಿಷಯವು ನನಗೆ ಜ್ಞಾಪಕ ವಾಗುವುದಿಲ್ಲ. ನನಗಿಂತಲೂ ಹಳೆಯವನಾದ ಇಂದ್ರದ್ಯುಮ್ನ ಸರೋವರದ ಬಳಿಯಲ್ಲಿರುವ ಬಕಪಕ್ಷಿ ಯನ್ನು ಕೇಳು'' ಎಂದು ಸೂಚಿಸಿತು. ಬಕಪಕ್ಷಿಯು ತನಗೆ ಇಂದ್ರದ್ಯುಮ್ನನ ವಿಚಾರ ಏನೂ ತಿಳಿದಿಲ್ಲವೆಂದು ಹೇಳಿ ಸರೋವರದಲ್ಲಿಯಿರುವ ಆಮೆಯನ್ನು ವಿಚಾರಿಸುವಂತೆ ಸಲಹೆ ನೀಡಿತು. ಇಂದ್ರದ್ಯುಮ್ನನು ಆಮೆಯ ಬಳಿಗೆ ಹೋಗಿ ''ನಿನಗೆ ಇಂದ್ರದ್ಯುಮ್ನ ರಾಜನ ಪರಿಚಯವಿದೆಯೇ ?'' ಎಂದು ಪ್ರಶ್ನಿಸಿದಾಗ ಆಮೆಯು ಕಣ್ಣೀರು ಸುರಿಸಿಕೊಂಡು ಭಾವಪರವಶೆಯಿಂದ ಕೈಮುಗಿದು ನುಡಿಯಿತು. ''ಇಂದ್ರದ್ಯುಮ್ನ ರಾಜನನ್ನು ನಾನು ಹೇಗೆ ಮರೆ ಯಲಿ ? ನಾನು ಬದುಕುವುದೇ ಅವನ ಕೃಪೆಯಿಂದ ನನ್ನ ವಾಸಭೂಮಿಯಾದ ಈ ಮಹಾಸರೋವರವು ಅವನ ಉದಾರ ಸೇವಾಯಜ್ಞದ ಸಂಕೇತವಾಗಿದೆ. ಅವನು ನಿರ್ಮಿಸಿದ ಈ ಸರೋವರವನ್ನು ಆಶ್ರಯಿಸಿ ಕೊಂಡು ಬದುಕಿರುವ ನಾನು ಅವನ ಈ ಮಹೋಪಕಾರವನ್ನು ಹೇಗೆ

ಮರೆಯಲಿ ? ಕೃತಜ್ಞತೆಯಂದ ಆಮೆ ಈ ಮಾತನ್ನು ನುಡಿಯುತ್ತಿದ್ದಂತೆಯೇ ಸ್ವರ್ಗಲೋಕದಿಂದ ವಿಮಾನವು ಕೆಳಗಿಳಿದು ಇಂದ್ರದ್ಯುಮ್ನನನ್ನು ಪುನಃ ಸ್ವರ್ಗಲೋಕಕ್ಕೆ ಎತ್ತಿಕೊಂಡು ಹೊರಟಿತು. ಇವನ ಪುಣ್ಯವೆಲ್ಲಾ ಖರ್ಚಾಗಿದೆಯೆಂದು ಸ್ವರ್ಗಲೋಕದ ಅಧಿಕಾರಿಗಳ ಲೆಕ್ಕಾಚಾರ ತಪ್ಪಾಗಿತ್ತು. ಭೂಲೋಕದಲ್ಲಿ ಒಂದು ಪ್ರಾಣಿಯು ಈಗಲೂ ಈ ರಾಜನನ್ನು ಕೃತಜ್ಞತೆಯಿಂದ ಸ್ಮರಿಸುತ್ತಿರುವಾಗ ಅವನು ಸ್ವರ್ಗದಿಂದ ಹೇಗೆ ಚ್ಯುತನಾಗಬಲ್ಲನು ? ನಾವು ಸಲ್ಲಿಸುವ ಉಪಕಾರವನ್ನು ಜನತೆ ನೆನೆಯುತ್ತಿರುವವರೆಗೆ ನಮ್ಮ ಪುಣ್ಯವು ಅಕ್ಷಯ ವಾಗಿಯೇ ಉಳಿಯುವುದು ಎಂಬುದಕ್ಕೆ ಇಂದ್ರದ್ಯುಮ್ನನ ಈ ಘಟನೆಯೇ ನಿದರ್ಶನವಾಗಿದೆ. ಜನ ನಮ್ಮನ್ನು ಚಿರಕಾಲ ನೆನೆಯುವಂತಹ ರೀತಿಯಲ್ಲಿ ನಾವು ಬಾಳಿದರೆ ಎಂತಹ ಅವನತಿಯನ್ನು ಎದುರಿಸಿ ನಾವು ಸ್ವರ್ಗ ಸಾಮ್ರಾಜ್ಯವನ್ನು ಪಡೆಯಬಲ್ಲೆವು ಎಂಬುದನ್ನು ಈ ಘಟನೆಯು ಚೇತೋಹಾರಿಯಾಗಿ ನಿರೂಪಿಸುತ್ತದೆ.

ಗುರುವಿನ ಗುಲಾಮನಾಗುವ ತನಕ ....

ಋಷಿ ಪುತ್ರನಾದ ಯವಕ್ರೀತನು ವೇದ, ಶಾಸ್ತ್ರಗಳಲ್ಲಿ ವೈದುಷ್ಯವನ್ನು ಪಡೆದಿರಲಿಲ್ಲ. ಅವನ ತಂದೆ ಭರದ್ವಾಜರೂ ವಿದ್ವಾಂಸರಾಗಿರಲಿಲ್ಲ. ಭರದ್ವಾಜರ ಸ್ನೇಹಿತ ರೈಭ್ಯ ಮುನಿಗಳ ಮಕ್ಕಳು ಮಹಾವಿದ್ವಾಂಸರಾಗಿ ಎಲ್ಲರ ಗೌರವಾದರಗಳಿಗೆ ಪಾತ್ರರೂ ಆಗಿದ್ದರು. ಅವರನ್ನು ಕಂಡು ಅಸೂಯೆಯಿಂದ ಪರಿತಪಿಸಿದ ಯವ ಕ್ರೀತನು ತಾನೂ ದೊಡ್ಡ ಪಂಡಿತನಾಗಬೇಕೆಂದು ಬಯಸಿದನು. ಆದರೆ ಗುರುಗಳ ಬಳಿಗೆ ಹೋಗಿ ಅವರ ಶುಶ್ರೂಷೆ ಮಾಡಿ ಅವರಲ್ಲಿ ಅಧ್ಯಯನ ಮಾಡಲು ಯವಕ್ರೀಧನಿಗೆ ಇಷ್ಟವಿಲ್ಲ. ಅಧ್ಯಯನ ಮಾಡದೆಯೇ ತಾನು ಮಹಾಪಂಡಿತನಾಗಬೇಕೆಂದು ಹುಚ್ಚು ಬಯಕೆ ಅವನದಾಗಿತ್ತು. ಅದಕ್ಕಾಗಿ ಗಂಗಾತೀರದಲ್ಲಿ ಘೋರ ತಪಸ್ಸನ್ನೇ ಆರಂಭಿಸಿದನು. ಇಂದ್ರನು ಅವನಿಗೆ ಕಾಣಿಸಿಕೊಂಡು ಅವನ ತಪಸ್ಸಿನ ಉದ್ದೇಶ ವೇನೆಂದು ಪ್ರಶ್ನಿಸಿದನು. ''ಅಧ್ಯಯನವಿಲ್ಲದೆಯೇ ಶಾಸ್ತ್ರಜ್ಞಾನವನ್ನು ಪಡೆಯಬೇಕೆಂಬುದೇ ನನ್ನ ಹಿರಿಯ ಆಸೆ. ತಪಸ್ಸಿನ ಬಲದಿಂದಲೇ ಜ್ಞಾನದ ನಿಧಿಯನ್ನು ಸೂರೆಗೊಳ್ಳಲು ಪ್ರಯತ್ನಿಸುತ್ತಿದ್ದೇನೆ'' ಎಂದು ಯವಕ್ರೀತನು ನುಡಿದನು. ''ಇದು ಸರಿಯಾದ ಮಾರ್ಗವಲ್ಲ. ದುಷ್ಟ ಹಠವನ್ನು ಮಾಡಬೇಡ. ಗುರುಗಳ ಬಳಿಗೆ ಹೋಗಿ ಅಧ್ಯಯನ ಮಾಡು'' ಎಂದು ಎಷ್ಟೇ ಪರಿಯಿಂದ ಇಂದ್ರನು ಸಲಹೆ ನೀಡಿದರೂ ಅದನ್ನು ಗಮನಿಸದೆ ಯವಕ್ರೀತನು ತನ್ನ ತಪಸ್ಸನ್ನೇ ಮುಂದುವರಿಸಿದನು. ಇಂದ್ರನು ಅವನಿಗೆ ತಿಳಿವಳಿಕೆಯನ್ನು ನೀಡುವುದಕ್ಕಾಗಿ ಮುನಿ ಬ್ರಾಹ್ಮಣನಾಗಿ ಅಲ್ಲಿಗೆ ಆಗಮಿಸಿದನು. ದಡದಿಂದ ಒಂದೊಂದೇ ಹಿಡಿ ಉಸುಕನ್ನು ತೆಗೆದು ಹೊಳೆಯಲ್ಲಿ ಹಾಕಲು ಉಪಕ್ರಮಿಸಿದನು. ಬೆಳಿಗ್ಗೆಯಿಂದ ಸಂಜೆಯವರೆಗೂ ಈ ಕಾರ್ಯಕ್ರಮವು ನಡೆದಿತ್ತು . ಈ ನಿರರ್ಥಕ ಚಟುವಟಿಕೆಗಳನ್ನು ಕಂಡು ಯವಕ್ರೀತನು ''ಯಾಕೆ ಈ ಹಗರಣ, ಇದರ ಉದ್ದೇಶವೇನು ?'' ಎಂದು ಕೇಳಿದನು. ''ನದಿಗೆ ಅಣೆಕಟ್ಟು ಕಟ್ಟಬೇಕಾಗಿದೆ. ಅದಕ್ಕಾಗಿ ಉಸುಕನ್ನು ಹಾಕಿ ನದಿಯ ಪ್ರವಾಹವನ್ನು ತಡೆಯುವ ಪ್ರಯತ್ನವನ್ನು ಮಾಡುತ್ತಿದ್ದೇನೆ'' ಎಂದು ಬಡಕಲು ದೇಹದ ರೋಗಗ್ರಸ್ತನಾದ ಆ ಮುದಿ ಬ್ರಾಹ್ಮಣನು ತಿಳಿಸಿದನು. ''ಸಾವಿರ ವರ್ಷಗಳವರೆಗೆ ಈ ಪ್ರಯತ್ನ ನಡೆಸಿದರೂ ಗಂಗಾಪ್ರವಾಹವನ್ನು ಈ ಹಿಡಿ ಉಸುಕುಗಳಿಂದ ತಡೆಯಲಾರೆ. ನೀನಾದರೋ ಈಗಾಗಲೇ ಹಣ್ಣು ಹಣ್ಣು ಮುದುಕನಾಗಿರುವೆ. ಹುಚ್ಚು ಸಾಹಸವನ್ನು ತೊರೆ'' ಎಂದು ಯವಕ್ರೀತನು ಉಪದೇಶಿಸಿದನು. ''ಏನೂ ಓದದೆ ಬರೇ ತಪಸ್ಸಿನಿಂದ ಒಬ್ಬನು ಮಹಾಪಂಡಿತನಾಗುವನಾದರೆ ನಾನು ಓಟಿ ಮಣ್ಣಿನಿಂದ ಅಣೆಕಟ್ಟನ್ನು ಯಾಕೆ ಕಟ್ಟಲಾರೆ ?'' ಎಂದು ಮುದುಕನು ಪ್ರಶ್ನಿಸಿದನು. ತನ್ನನ್ನೇ ಕುರಿತು ನೇರ ವಾಗಿ ನುಡಿದ ಈ ಮಾತಿನಿಂದ ಯವಕ್ರೀತನಿಗೆ ಜ್ಞಾನೋದಯವಾಯಿತು. ತನ್ನ ನಿರರ್ಥಕ ಸಾಹಸದ ಬಗ್ಗೆ ದೇವತೆಗಳು ಕೊಟ್ಟ ಎಚ್ಚರ ಇದು ಎಂಬುದನ್ನು ಆಗ ಯವಕ್ರೀತನು ಅರ್ಥಮಾಡಿಕೊಂಡನು.

ವಿದ್ಯಾರ್ಥಿಗಳು ಹರಕೆ, ಹಣ್ಣು ಕಾಯಿಗಳ ಬಲದಿಂದಲೇ ತಾವು ಪರೀಕ್ಷೆಯಲ್ಲಿ ಉತ್ತೀರ್ಣರಾಗ ಬಹುದೆಂದು ಭಾವಿಸದೆ ಅಧ್ಯಯನಶೀಲರಾಗಬೇಕೆಂದೇ ಈ ಆಖ್ಯಾಯಿಕೆಯು ನೀಡುವ ಸಂದೇಶ.

ಔದಾರ್ಯದ ಬೆಳಕಿನ ಅಡಿಯಲ್ಲಿರುವ ಕಪ್ಪು ನೆರಳುಗಳು

ಒಮ್ಮೆ ನಾರದರು ಕ್ಷತ್ರಿಯರಾದ ಶಿಬಿ, ವಸುಮಂತ, ಪ್ರತರ್ದನ, ಅಷ್ಟಕರೊಡನೆ ಧರ್ಮ ಚರ್ಚೆಯನ್ನು ನಡೆಸುತ್ತಿದ್ದಾಗ ಒಂದು ಪ್ರಶ್ನೆಯು ಉದ್ಭವಿಸಿತು. ಈ ಐದು ಜನರು ಸ್ವರ್ಗವನ್ನು ಏರುವ ಸಂದರ್ಭದಲ್ಲಿ, ಮೊದಲು ಕೆಳಗೆ ಇಳಿಯುವ ಪ್ರಸಂಗವು ಇವರಲ್ಲಿ ಯಾರಿಗೆ ಬರುವುದು ಎಂದು. ಅಷ್ಟಕನೇ ಮೊದಲು ಕೆಳಗಿಳಿಯುತ್ತಾನೆಂದು ನಾರದನೆಂದರು. ''ಅಷ್ಟಕನು ಸಾಕಷ್ಟು ದಾನ ನೀಡಿ ಕೀರ್ತಿ ಗಳಿಸಿದ್ದಾನೆ. ಆದರೆ ಒಮ್ಮೆ ನಾನು ಆತನೊಡನೆ ಸಂಚರಿಸುತ್ತಿದ್ದಾಗ ಒಂದೆಡೆ ನೂರಾರು ಗೋವುಗಳನ್ನು ನೋಡಿ ಇವು ಯಾರವು ? ಎಂದು ನಾನು ಕೇಳಿದರೆ, ತಾನು ಬ್ರಾಹ್ಮಣರಿಗೆ ದಾನ ಮಾಡಿದ ಗೋವುಗಳಿವು ಎಂದು ಹೆಮ್ಮೆಯಿಂದ ಅಷ್ಟಕನು ನುಡಿದನು. ದಾನದ ಜೊತೆಗೆ ಈ ಅಹಂಭಾವ ಹೊಗಳಿಕೆಗಳು ಬೆರೆತಿರುವುದರಿಂದ ಅಷ್ಟಕನೇ ಮೊದಲು ಕೆಳಗಿಳಿಯುತ್ತಾನೆ.'' ''ಅವನ ನಂತರ ಪ್ರತರ್ದನನು. ರಥದಲ್ಲಿ ಸಂಚರಿಸುತ್ತಿದ್ದಾಗ ಬ್ರಾಹ್ಮಣನೊಬ್ಬನು ಅವನಲ್ಲಿ ದಾನವನ್ನು ಬೇಡಿದನು. ಮತ್ತೆ ಕೊಡುವೆನೆಂದರೂ ಈಗಲೇ ಕೊಡಬೇಕೆಂದು ಬ್ರಾಹ್ಮಣನು ಅವಸರಪಡಿಸಿದಾಗ ತನ್ನ ರಥದ ಒಂದು ಕುದುರೆಯನ್ನು ಅಲ್ಲಿಯೇ ನೀಡಿದನು. ಹೀಗೆಯೇ ಒತ್ತಾಯ ಪಡಿಸಿ ಬೇಡಿದ ಸಾಧು ಸಂತರಿಗೆ ತನ್ನ ರಥದ ಒಂದೊಂದು ಭಾಗವನ್ನು ನೀಡುತ್ತ ರಥದ ಎಲ್ಲಾ ಭಾಗಗಳನ್ನು ಕೊಟ್ಟು ಮುಗಿಸಿದನು. ಇನ್ನು ತನ್ನಲ್ಲಿ ಬೇಡಲು ಸಾಧುಗಳಿಗೆ ಏನೂ ಇಲ್ಲವೆಂದು ಸಾಧುಗಳನ್ನು ಅಣಕಿಸಿ ಆ ಸಂದರ್ಭದಲ್ಲಿ ಪ್ರತರ್ದನನು ಮಾತಾಡಿದ್ದಾನೆ. ಇಷ್ಟು ಉದಾರ ವಾಗಿ ನಿರ್ಲೋಭದಿಂದ ದಾನ ಮಾಡಿದರೂ ಅದರ ಜೊತೆಗೆ ಈ ಕೊಂಕು ನುಡಿಯನ್ನು ಆಡಿದುದರಿಂದ ಪ್ರತರ್ದನನು ಕೆಳಗಿಳಿಯುವನು'' ಎಂದು ನಾರದರು ಸಮರ್ಥಿಸಿದರು. '' ಆಮೇಲೆ ಕೆಳಗಿಳಿಯುವ ಸರದಿ ವಸುಮಂತನದು. ಒಂದು ಸುಂದರವಾದ ಪುಷ್ಪರಥದ ಸ್ವಸ್ತಿವಾಚನದ ಸಂದರ್ಭದಲ್ಲಿ ಆ ರಥವನ್ನು ಒಬ್ಬನು ಬ್ರಾಹ್ಮಣನು ಪ್ರಶಂಸೆ ಮಾಡಿದನು. ಪ್ರಶಂಸೆ ಮಾಡಿದವನಿಗೆ ಆ ರಥವು ತನಗೆ ದೊರೆಯಲೆಂದು ಒಳಗಿನ ಆಸೆ ಇತ್ತು . ವಸುಮಂತನು ರಥವನ್ನು ಹೊಗಳಿದ ಆ ಬ್ರಾಹ್ಮಣನಿಗೆ ಈ ರಥ ತಮ್ಮದೇ ಆಗಿದೆಯೆಂದು ಔಪಚಾರಿಕವಾಗಿ ಹೇಳಿದನು. ಅವನ ತರಂಗದ ಆಸೆಯನ್ನು ರಾಜನು ಸೂಕ್ಷ್ಮವಾಗಿ ಗುರುತಿಸಿದರೂ ರಥ ವನ್ನು ಮಾತ್ರ ಅವನಿಗೆ ಕೊಡಲಿಲ್ಲ. ಬ್ರಾಹ್ಮಣನು ಬಾಯಿ ಬಿಟ್ಟು ರಥವನ್ನು ಕೇಳಲಿಲ್ಲ. ಹೀಗೆ ರಾಜನು ಪ್ರತ್ಯಕ್ಷವಾಗಿ ದಾನದ ನಿರಾಕರಣೆಯನ್ನು ಮಾಡದಿದ್ದರೂ ಅವನ ಔದಾರ್ಯದಲ್ಲಿ ಒಂದು ಚಿಕ್ಕ ಕೊರತೆ ಮಾಡಿದಂತಾಯಿತು. ಆದ್ದರಿಂದ ವಸುಮಂತನು ಕೆಳಗಿಳಿಯುತ್ತಾನೆ.'' ಮುಂದಿನ ಇಬ್ಬರಲ್ಲಿ ಮೊದಲು ಕೆಳಗಿಳಿಯುವವರು ಯಾರು ? ಎಂದು ಪ್ರಶ್ನಿಸಿದಾಗ – ತಾವೇ ಕೆಳಗಿಳಿಯುವುದಾಗಿಯೂ ಶಿಬಿರಾಜನೇ ಮುಂದೆ ಸಾಗುವುದಾಗಿಯೂ ನಾರದರು ಹೇಳಿದರು – ''ಶಿಬಿರಾಜನ ಶುದ್ಧ ಮನೋಭಾವದ ತ್ಯಾಗದ ಮುಂದೆ ಎಲ್ಲರೂ ಅಲ್ಪರೆನಿಸುತ್ತಾರೆ. ಶರಣಾಗತವಾದ ಪಾರಿವಾಳವನ್ನು ಉಳಿಸುವುದಕ್ಕಾಗಿ ತನ್ನ ಸಮಗ್ರ ಜೀವನವನ್ನೇ ಸಮರ್ಪಿಸಿದ, ಆಸಕ್ತಿ ಮಮತೆಗಳು ಲೋಭವೂ ಇಲ್ಲದೆ ವಿನಯ ತ್ಯಾಗಗಳ ಪ್ರತಿಮೂರ್ತಿ ಯಾಗಿ ನಿರಪೇಕ್ಷ ಬುದ್ಧಿಯ ದಾನಶೀಲನಾದ ಶಿಬಿರಾಜನ ಮುಂದೆ ನಾನೇ ನನ್ನ ಸೋಲನ್ನೊಪ್ಪಬೇಕಾಗು ವುದು. ಅವನ ನಿರ್ಮಲ ಕೃತಿಯಲ್ಲಿ ಕಲೆ ಕಲಂಕಗಳು ಎಲ್ಲಿಯೂ ಕಾಣಸಿಗವು '' ಎಂದ ನಾರದರು ಶಿಬಿರಾಜನ ತ್ಯಾಗವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. ಜಗತ್ತಿನಲ್ಲಿ ದಾತೃಗಳು ವಿಪುಲ ಸಂಖ್ಯೆಯಲ್ಲಿ ಇರಬಹುದು. ಆದರೆ ಆ ಔದಾರ್ಯದ ಹಿನ್ನೆಲೆಯಲ್ಲಿ ಹೆಮ್ಮೆ ಪರಿಹಾಸ ಕುಹಕಗಳು ಏನೂ ಇಲ್ಲದೆ ನಮ್ರತೆ ಹಾಗೂ ಪವಿತ್ರ ಭಾವವನ್ನು ಕಾಣುವುದು ಬಹಳ ವಿರಳ.

ಕತ್ತಲೆಯಲ್ಲಿ ಅರ್ಜುನನು ಕಂಡ ಬೆಳಕು

ದ್ರೋಣಾಚಾರ್ಯರು ರಾಜಕುಮಾರರಿಗೆ ಧನುರ್ವಿದ್ಯೆಯ ಶಿಕ್ಷಣವನ್ನು ನೀಡುತ್ತಿದ್ದರು. ಪಾಂಡವರನ್ನೊಳಗೊಂಡ ಕುರುಕುಲದ ಹಾಗೂ ದೇಶ ವಿದೇಶದ ರಾಜಕುಮಾರರೆಲ್ಲರೂ ಅವರ ಶಿಷ್ಯರಾಗಿದ್ದರು. ಒಮ್ಮೆ ಅರ್ಜುನನು ಭೋಜನ ಮಾಡುತ್ತಿರುವಾಗ ದೀಪವು ನಂದಿ ಹೋಯಿತು. ಆ ಕತ್ತಲೆಯಲ್ಲಿಯೂ ಭೋಜನವನ್ನು ಅರ್ಜುನನು ಮುಂದುವರಿಸಿದನು. ಅವನ ಕೈಯಲ್ಲಿರುವ ಅನ್ನದ ತುತ್ತು ಕತ್ತಲೆಯಲ್ಲಿಯೂ ಗುರಿ ತಪ್ಪದೆ ಬಾಯಿಯೊಳಗೆ ಪ್ರವೇಶಿಸುವುದನ್ನು ಕಂಡ ಅರ್ಜುನನ ತಲೆಯಲ್ಲಿ ಆಗ ವಿಚಾರವೊಂದು ಸುಳಿಯಿತು. ಕತ್ತಲೆಯಲ್ಲಿ ಕಾಣಿಸದಿದ್ದರೂ ಅಭ್ಯಾಸದ ಬಲದಿಂದ ಕೈಯಲ್ಲಿರುವ ತುತ್ತು ಬಾಯಿಗೆ ಸರಿಯಾಗಿ ತಲುಪುವುದಾದರೆ ನಾನು ಇದೇ ಅಭ್ಯಾಸವನ್ನು ಧನುರ್ವಿದ್ಯೆಯಲ್ಲಿಯೂ ಯಾಕೆ ಅಳವಡಿಸಿಕೊಳ್ಳಬಾರದು ? ಕೊನೆಗೆ ತೀವ್ರ ಪ್ರಯತ್ನ ಮತ್ತು ಅಭ್ಯಾಸವನ್ನು ಕೈಗೊಂಡು ಕೈಯಲ್ಲಿರುವ ಅನ್ನದ ತುತ್ತು ಬಾಯಿಯನ್ನು ತಪ್ಪದೆ ತಲುಪುವಂತೆ ಧನುರ್ವಿದ್ಯೆಯಲ್ಲಿಯೂ ತನ್ನ ಬಾಣವು ತಪ್ಪದೆ ಗುರಿಯನ್ನು ಮುಟ್ಟುವುದರಲ್ಲಿ ವಿಕ್ರಮವನ್ನು ಸ್ಥಾಪಿಸಿದನು. ಕತ್ತಲೆಯಲ್ಲಿಯೂ ಗುರಿಗೆ ಸರಿಯಾಗಿ ಬಾಣವನ್ನು ಪ್ರಯೋಗಿಸುವುದರಲ್ಲಿ ವಿಚಕ್ಷಣತೆಯನ್ನು ಪಡೆದನು.

ಒಮ್ಮೆ ತಮ್ಮ ಶಿಷ್ಯರನ್ನು ಪರೀಕ್ಷಿಸಲು ದ್ರೋಣಾಚಾರ್ಯರು ಒಂದು ಪ್ರಯೋಗವನ್ನು ನಡೆಸಿದರು. ಮರದ ಮೇಲೆ ಒಂದು ಕೃತಕ ಹಕ್ಕಿಯನ್ನು ನಿಲ್ಲಿಸಿ ಅದಕ್ಕೆ ಸರಿಯಾಗಿ ಗುರಿಯಿಟ್ಟು ಬಾಣವನ್ನು ಪ್ರಯೋಗಿಸಿ ಹಕ್ಕಿಯ ಶಿರಸ್ಸನ್ನು ತುಂಡರಿಸಬೇಕೆಂದು ಶಿಷ್ಯರಿಗೆ ಆಜ್ಞಾಪಿಸಿದರು. ದುರ್ಯೋಧನನು ಆ ಗುರಿಗೆ ಬಾಣವನ್ನು ಪ್ರಯೋಗಿಸಲು ಸಿದ್ಧನಾಗಿ ಮುಂದೆ ಬಂದನು. ''ಮರದ ಮೇಲೆ ಇರುವ ಕೃತಕ ಹಕ್ಕಿಯು ನಿನಗೆ ಕಾಣಿಸುತ್ತದೆಯೇ ?'' ಎಂದು ಅವನನ್ನು ದ್ರೋಣಾಚಾರ್ಯರು ಪ್ರಶ್ನಿಸುವರು. ''ಚೆನ್ನಾಗಿ ಕಾಣಿಸುತ್ತಿದೆ'' ಎಂದು ದುರ್ಯೋಧನನು ಉತ್ತರಿಸುವನು. ''ಹಕ್ಕಿಯ ಹೊರತು ಮತ್ತೇನು ಕಾಣಿಸುತ್ತದೆ ?'' ಎಂದು ದ್ರೋಣಾಚಾರ್ಯರು ಪ್ರಶ್ನಿಸಲು ''ಮರ, ಅಲ್ಲಿರುವ ಹಣ್ಣುಗಳು ಸುತ್ತುಮುತ್ತಲು ಇರುವ ರಾಜಕುಮಾರರು, ಇವೆಲ್ಲವೂ ಕಾಣಿಸುತ್ತವೆ'' ಎಂದನು ದುರ್ಯೋಧನನು. ಅಸಂತುಷ್ಟರಾದ ದ್ರೋಣಾಚಾರ್ಯರು ''ನೀನು ಈ ಪರೀಕ್ಷೆಯಲ್ಲಿ ಯಶಸ್ವಿಯಾಗಲಾರೆ. ಧನುಸ್ಸನ್ನು ಕೆಳಗಿಟ್ಟು ದೂರ ನಡೆ'' ಎಂದು ಆಜ್ಞಾಪಿಸಿದರು. ಯುಧಿಷ್ಠಿರ ಮೊದಲಾದವರು ಇದೇ ರೀತಿ ವರ್ತಿಸಿದಾಗ ಅವರನ್ನು ದೂರ ಸರಿಯಲು ದ್ರೋಣಾಚಾರ್ಯರು ಹೇಳುವರು. ನಂತರ ಅರ್ಜುನನ ಸರದಿಯು ಬಂತು. ''ನಿನಗೆ ಏನು ಕಾಣಿಸುತ್ತದೆ ?'' ಎಂದು ದ್ರೋಣಾಚಾರ್ಯರು ಪ್ರಶ್ನಿಸಿದಾಗ ''ನನ್ನ ಕಣ್ಣಿಗೆ ಹಕ್ಕಿಯ ಶಿರಸ್ಸು ಮಾತ್ರ ಗೋಚರಿಸುತ್ತುದೆ. ಮರವಾಗಲಿ, ಅದರ ಕೊಂಬೆಗಳಾಗಲಿ, ನೀವಾಗಲಿ, ರಾಜಕುಮಾರರಾಗಲಿ ಬೇರೆ ಯಾವುದೂ ನನಗೆ ಕಾಣಿಸುತ್ತಿಲ್ಲ'' ಎಂದನು. ಆನಂದಗದ್ಗದರಾಗಿ ದ್ರೋಣಾಚಾರ್ಯರು ''ನೀನೊಬ್ಬನೇ ಈ ಪರೀಕ್ಷೆಯಲ್ಲಿ ಯಶಸ್ವಿಯಾಗಬಲ್ಲೆ . ಗುರಿಯ ಹೊರತು ಬೇರೆ ಯಾವುದನ್ನೂ ಗಮನಿಸದಂತಹ ಏಕಾಗ್ರತೆಯನ್ನು ಸಾಧಿಸಿ ನೀನು ಈ ವಿದ್ಯೆಯಲ್ಲಿ ಸಿದ್ಧಿಯನ್ನು ಪಡೆದಿರುವಿ'' ಎಂದು ಅವನನ್ನು ಪ್ರೀತಿಯಿಂದ ಅಪ್ಪಿಕೊಂಡರು.

ಶಿಕ್ಷಣ ರಂಗದಲ್ಲಿಯೂ, ಜೀವನರಂಗದಲ್ಲಿಯೂ ನಮ್ಮ ಲಕ್ಷ್ಯದ ಕಡೆಗೆ ಏಕಾಗ್ರತೆಯನ್ನು ಸಾಧಿಸಿದರೆ ಮಾತ್ರ ನಾವು ಯಶಸ್ವಿಯಾಗಬಲ್ಲೆವು . ಇಂದು ನಾವು ಗುರಿಯನ್ನು ಬಿಟ್ಟು ಇತರ ಸಂಗತಿಗಳಲ್ಲಿಯೇ ಹೆಚ್ಚು ಗಮನ ಕೊಡುವುದರಿಂದ ನಮ್ಮ ಶಿಕ್ಷಣವು, ನಮ್ಮ ಜೀವನವು ವಿಕ್ಷಿಪ್ತ ರೀತಿಯಲ್ಲಿ ಸಾಗಿದೆ.

ಗುರುಕುಲದ ಅಗ್ನಿ ಪರೀಕ್ಷೆ

ಧೌಮ್ಯ ಋಷಿಗಳು ತಮ್ಮ ಗುರುಕುಲದಲ್ಲಿ ಇರುವ ಶಿಷ್ಯ ಉಪಮನ್ಯುವನ್ನು ಗೋಪಾಲನೆಯ

ಕೆಲಸದಲ್ಲಿ ನಿಯೋಗಿಸಿದರು. ಗುರುಕುಲದಲ್ಲಿ ವಿದ್ಯಾರ್ಥಿಗಳು ಅಧ್ಯಯನದ ಜೊತೆಗೆ ಕೃಷಿ, ಗೋರಕ್ಷಣೆ ಮುಂತಾದ ದೈಹಿಕ ಶ್ರಮದ ಕೆಲಸಗಳನ್ನು ಕೈಗೊಂಡು ಗುರುಕುಲದ ಸೇವೆಯನ್ನು ನಡೆಸುವುದು ಅಂದಿನ ಗುರುಕುಲದ ಶಿಕ್ಷಣ ಪದ್ಧತಿಯಲ್ಲಿ ಅಡಕವಾಗಿತ್ತು. ಉಪಮನ್ಯುವು ಗುರುಗಳ ಆಜ್ಞೆಯನ್ನು ನಿಷ್ಠೆಯಿಂದ ಪರಿಪಾಲಿಸುತ್ತಾ ಹಗಲೆಲ್ಲಾ ಗೋಸೇವೆಯನ್ನು ನಡೆಸಿ ಸಂಜೆ ಗುರುಗಳ ಮುಂದೆ ಬಂದು ನಮಸ್ಕರಿಸುತ್ತಿದ್ದನು. ಹಗಲಿಡೀ ದುಡಿಯುತ್ತಿರುವ ಅವನ ಆಹಾರದ ಬಗ್ಗೆ ಧೌಮ್ಯರು ಏನೂ ಏರ್ಪಾಡನ್ನು ಮಾಡಿರಲಿಲ್ಲ. ಆದರೂ ಸಂಜೆ ಬಂದು ನಮಸ್ಕರಿಸುತ್ತಿದ್ದ ಉಪಮನ್ಯುವಿನ ದೇಹಪುಷ್ಟಿಯನ್ನು ಕಂಡು "ಚೆನ್ನಾಗಿ ಬೆಳೆದಿರುವಿಯಲ್ಲಾ. ಏನು ಆಹಾರ ಸ್ವೀಕರಿಸುತ್ತಿರುವಿ ? ಎಂದು ಪ್ರಶ್ನಿಸಿದರು. ಭಿಕ್ಷೆ ಬೇಡಿ ಬಂದ ಅನ್ನವನ್ನು ಸ್ವೀಕರಿಸುತ್ತಿರುವೆ. ಎಲ್ಲರೂ ತುಂಬಾ ಪ್ರೀತಿಯಿಂದ ಭಿಕ್ಷೆಯನ್ನು ನೀಡುತ್ತಿದ್ದಾರೆ" ಎಂದನು. ಭಿಕ್ಷೆಯಿಂದ ಬಂದ ಅನ್ನವನ್ನು ನನಗೆ ನಿವೇದಿಸದೇ ಸ್ವೀಕರಿಸಬಾರದೆಂದು ಗುರುಗಳು ಆಜ್ಞಾಪಿಸಿದರು. ಅದರಂತೆ ಅವನು ಭಿಕ್ಷೆ ಬೇಡಿ ತಂದ ಅನ್ನವನ್ನು ಗುರುಗಳಿಗೆ ಅರ್ಪಿಸಿದಾಗ ಅವರು ಅವನಿಗಾಗಿ ಏನೂ ಉಳಿಸದೆ ಪೂರ್ತಿಯಾಗಿ ಸ್ವೀಕರಿಸಿದರು. ಕೆಲವು ದಿನಗಳು ಸಂದವು. ದಿನವೂ ನಮಸ್ಕರಿಸುತ್ತಿರುವ ಉಪಮನ್ಯುವು ಹಿಂದಿನಂತೆಯೇ ದೃಢಕಾಯನೂ ಪರಿಪುಷ್ಟನೂ ಆಗಿರುವುದನ್ನು ಕಂಡು ಆಶ್ಚರ್ಯ ಚಕಿತರಾಗಿ ಧೌಮ್ಯರು "ಈಗ ಏನು ಆಹಾರವನ್ನು ಸ್ವೀಕರಿಸುವಿ ?" ಎಂದು ಕೇಳಿದರು. ನಮಗೆ ಭಿಕ್ಷಾನ್ನವನ್ನು ನೀಡಿ ಪುನಃ ಎರಡನೆಯ ಸಲ ಭಿಕ್ಷೆಯನ್ನು ಬೇಡಿ ಜೀವನವನ್ನು ಸಾಗಿಸುತ್ತಿರುವೆ" ಎಂದನು ಉಪಮನ್ಯುವು. ಒಬ್ಬನೇ ಎರಡು ಸಲ ಭಿಕ್ಷೆಯನ್ನು ಬೇಡುವುದು ಸೂಕ್ತವೆನಿಸುವುದಿಲ್ಲ. ಭಿಕ್ಷೆಯಿಂದ ಜೀವಿಸುವ ಉಳಿದ ಋಷಿ ಮುನಿಗಳಿಗೆ ಇದರಿಂದ ತೊಂದರೆಯಾಗಬಹುದು. ಆದ್ದರಿಂದ ಎರಡನೆಯ ಸಲ ಭಿಕ್ಷೆಯನ್ನು ಬೇಡಬಾರದೆಂದು ಧೌಮ್ಯರು ಪ್ರತಿಬಂಧಿಸಿದರು. ಆದರೂ ಉಪಮನ್ಯುವು ಹಿಂದಿನಂತೆಯೇ ಮೈತುಂಬಿಕೊಂಡೇ ಇದ್ದನು. ಪುನಃ ಗುರುಗಳು ಪ್ರಶ್ನಿಸಲು, ಹಸುಗಳ ಹಾಲನ್ನು ಕುಡಿಯುತ್ತಿರುವುದಾಗಿ ತಿಳಿಸಿದನು. ಅದನ್ನೂ ಧೌಮ್ಯರು ನಿರ್ಬಂಧಿಸಿದರು. ನಂತರವೂ ಉಪಮನ್ಯುವು ಯಥಾಪ್ರಕಾರವಾಗಿ ದೃಢಕಾಯನೇ ಆಗಿದ್ದನು. ಕರುಗಳು ಹಾಲು ಕುಡಿಯುವಾಗ ಅವುಗಳ ಬಾಯಿಯಿಂದ ಬರುವ ನೊರೆಯನ್ನು ತಿಂದು ಜೀವಿಸುತ್ತಿದ್ದೇನೆ ಎಂದು ಧೌಮ್ಯರಲ್ಲಿ ಅರುಹಿದನು. ಇದೂ ಸರಿಯಲ್ಲ. ನಿನ್ನ ಮೇಲಿನ ಪ್ರೀತಿಯಿಂದ ಕರುಗಳು ಹೆಚ್ಚು ಹೆಚ್ಚು ನೊರೆಯನ್ನು ಬಿಡುವುದರಿಂದ ಅವುಗಳ ಆಹಾರವನ್ನು ನೀನು ಕಸಿದುಕೊಂಡಂತಾಗುವುದು. ಆದ್ದರಿಂದ ನೊರೆಯನ್ನೂ ಸ್ವೀಕರಿಸುವುದು ಬೇಡವೆಂದು ಧೌಮ್ಯರು ಆಜ್ಞಾಪಿಸಿದರು. ಹೀಗೆ ಅನ್ನವಿಲ್ಲದೆ, ಹಾಲು ಇಲ್ಲದೆ, ಹಾಲಿನ ನೊರೆಯೂ ಇಲ್ಲದೆ ಹಸಿವೆಯಿಂದ ಬಳಲಿದ ಉಪಮನ್ಯುವು ಕಾಡಿಗೆ ಯಾವುದೋ ಎಲೆಗಳನ್ನು ತಿಂದು ಕಣ್ಣು ಕಳೆದುಕೊಂಡು ಅಲೆಯುತ್ತಾ ಬಾವಿಯೊಂದರಲ್ಲಿ ಬಿದ್ದನು. ದಿನವೂ ಸಂಜೆಗೆ ಬಂದು ನಮಸ್ಕರಿಸುತ್ತಲಿದ್ದ ಉಪಮನ್ಯುವನ್ನು ಕಾಣದೆ ಧೌಮ್ಯರು ಗಾಬರಿಯಾಗಿ ಅವನನ್ನು ಕಾಡಿನಲ್ಲಿ ಹುಡುಕಾಡಿದರು. ಅವನ ಹೆಸರನ್ನು ಹಿಡಿದು ಗಟ್ಟಿಯಾಗಿ ಕೂಗಿದರು. ಹಸಿವೆಯಿಂದ ಬಳಲಿ ಎಲೆಗಳನ್ನು ತಿಂದು ಕಣ್ಣು ಕುರುಡಾಗಿ ಬಾವಿಗೆ ಬಿದ್ದ ಸಮಾಚಾರವನ್ನು ಉಪಮನ್ಯುವು ಗುರುಗಳಿಗೆ ಕೂಗಿ ಹೇಳಿದನು. ಧೌಮ್ಯರು ಅವನಿಗೆ ಅಶ್ವಿನೀ ದೇವತೆಗಳನ್ನು ಸ್ತೋತ್ರ ಮಾಡುವಂತೆ ಹೇಳಿದರು. ವೇದ ಮಂತ್ರಗಳಿಂದ ಭಕ್ತಿಪೂರ್ವಕವಾಗಿ ಅಶ್ವಿನೀಕುಮಾರರನ್ನು ಉಪಮನ್ಯುವು ಸ್ತೋತ್ರ ಮಾಡಲು ಅವರು ಪ್ರತ್ಯಕ್ಷರಾಗಿ ಬಂದು ಅಪೂರ್ವವಾದ ದಿವ್ಯ ಭಕ್ಷ್ಯವನ್ನು ನೀಡಿ ಇದನ್ನು ಸ್ವೀಕರಿಸಿದಲ್ಲಿ ಕೂಡಲೇ ಕಣ್ಣುಗಳನ್ನು ಮರಳಿ ಪಡೆಯುವೆಯೆಂದು ತಿಳಿಸಿದರು. ಆದರೆ ಉಪಮನ್ಯುವು ಅದನ್ನು ಸ್ವೀಕರಿಸಲು ಒಪ್ಪಲಿಲ್ಲ. "ಗುರುಗಳ ಆಜ್ಞೆಯಂತೆ ಅನ್ನ ಹಾಲುಗಳನ್ನು ತೊರೆದ ನಾನು ಅವರ ಆದೇಶವಿಲ್ಲದೆ ಈ ಭಕ್ಷ್ಯವನ್ನು ಹೇಗೆ ಸ್ವೀಕರಿಸಲಿ ?" ಎಂದು ಉಪಮನ್ಯುವು ಪ್ರಶ್ನಿಸಿದನು. "ನಿನ್ನ ಗುರುಗಳೇ ಇಂಥ ಪ್ರಸಂಗ ಬಂದಾಗ ತಮ್ಮ ಗುರುಗಳ ಅನುಮತಿಯನ್ನು ಪಡೆಯದೇ ಭಕ್ಷ್ಯವನ್ನು

ಸ್ವೀಕರಿಸಿದ್ದಾರೆ. ನೀನೂ ಸ್ವೀಕರಿಸಬಹುದು'' ಎಂದು ದೇವತೆಗಳು ಒತ್ತಾಯಪಡಿಸಿದರೂ ಉಪಮನ್ಯುವು ತನ್ನ ನಿಷ್ಠೆಯನ್ನು ಬಿಡಲಿಲ್ಲ. ಈ ವಿಧೇಯ ಶಿಷ್ಯನನ್ನು ಕಂಡು ಅಶ್ವಿನೀ ದೇವತೆಗಳು ಆಶ್ಚರ್ಯಗೊಂಡು ಸಂಪ್ರೀತರಾಗಿ ಅವನಿಗೆ ಕಣ್ಣುಗಳನ್ನು ದಯಪಾಲಿಸಿದರು. ಧೌಮ್ಯರಂತೂ ಆನಂದ ಪರವಶರಾಗಿ ಉಪಮನ್ಯುವನ್ನು ಅಪ್ಪಿಕೊಂಡು ಸಕಲ ವೇದ ಶಾಸ್ತ್ರಗಳ ದಿವ್ಯ ಜ್ಞಾನವನ್ನೂ ಅವನಿಗೆ ನೀಡಿದರು. ಹಿಂದಿನ ಯುಗದಲ್ಲಿ ಗುರುಗಳು ಶಿಷ್ಯರ ಮೇಲೆ ಎಷ್ಟೇ ಪ್ರೇಮ, ಕರುಣೆಗಳು ತುಂಬಿದ್ದರೂ ಅವರನ್ನು ಇಂತಹ ಅಗ್ನಿಪರೀಕ್ಷೆಗೆ ಒಳಪಡಿಸುತ್ತಿದ್ದರೆ ಸತ್ವಶಾಲಿಗಳಾದ ಶಿಷ್ಯರು ಅದರಿಂದ ತಮ್ಮ ವ್ಯಕ್ತಿತ್ವವನ್ನು ಬೆಳಗಿಸಿಕೊಳ್ಳುತ್ತಿದ್ದರು.

ಭೀಮಸೇನನ ತತ್ವ ನಿಷ್ಠೆ

ಪಾಂಡವರ ಚರಿತ್ರೆಯಲ್ಲಿ ನಡೆದ ಘಟನೆಯಿದು. ಮಹಾಭಾರತದ ಯುದ್ಧವು ಮುಗಿದಿತ್ತು. ಧರ್ಮರಾಜನು ಪಟ್ಟಾಭಿಷಿಕ್ತನಾಗಿ ಶ್ರೀಕೃಷ್ಣನ ಮಾರ್ಗದರ್ಶನದಲ್ಲಿ ಭೀಮಾರ್ಜುನರ ಸಹಾಯ ಬಲದಿಂದ ರಾಜ್ಯವನ್ನು ನಡೆಸುತ್ತಿದ್ದನು. ತನ್ನ ಪುತ್ರ ವ್ಯಾಮೋಹದಿಂದಾಗಿ ಕುರುಕ್ಷೇತ್ರದಲ್ಲಿ ಘೋರ ದುರಂತವು ನಡೆದ ನಂತರವೂ ಧೃತರಾಷ್ಟ್ರನ ಕಣ್ಣು ತೆರೆಯಲಿಲ್ಲ. ವೈರಾಗ್ಯ ಪಶ್ಚಾತ್ತಾಪಗಳಿಂದ ರಾಜ್ಯದ ವೈಭವವನ್ನು ತೊರೆದು ಅರಣ್ಯದಲ್ಲಿ ನೆಲೆಸುವ ಮನೋಭಾವವು ಇನ್ನೂ ಅವನಲ್ಲಿ ಮೂಡಿರಲಿಲ್ಲ. ಧರ್ಮರಾಜನಿಂದ ರಾಜೋಪಚಾರವನ್ನು ಪಡೆಯುತ್ತಾ ಇನ್ನೂ ರಾಜ್ಯದ ಸುಖಭೋಗಗಳಲ್ಲಿಯೇ ಮುಗ್ನನಾಗಿದ್ದನು. ಕೊನೆಗೆ ಭೀಮಸೇನನು ಅವನ ಹಿತ ದೃಷ್ಟಿಯಿಂದ ಹೂಡಿದ ತಂತ್ರ ಮತ್ತು ವಿದುರನ ಉಪದೇಶದ ಪರಿಣಾಮವಾಗಿ ಎಚ್ಚೆತ್ತು ಭೋಗ ವೈಭವಗಳನ್ನು ತ್ಯಜಿಸಿ ಹಿಂದಿನ ರಾಜ ಋಷಿಗಳ ಪರಂಪರೆಯಂತೆ ಅರಣ್ಯಕ್ಕೆ ಹೋಗಲು ಸಿದ್ಧನಾದನು. ಹೊರಡುವಾಗ ಯುದ್ಧದಲ್ಲಿ ಮಡಿದ ತನ್ನ ಮಕ್ಕಳಾದ ದುರ್ಯೋಧನ, ದುಃಶಾಸನ ಮೊದಲಾದವರಿಗೆ ಕೊನೆಯಬಾರಿ ವೈಭವದಿಂದ ಶ್ರಾದ್ಧವನ್ನು ನಡೆಸಬೇಕೆಂದು ಅವನಿಗೆ ಮನಸ್ಸಾಯಿತು. ಅದಕ್ಕಾಗಿ ಬೇಕಾದ ಹಣವನ್ನು ಕೊಡುವಂತೆ ಧರ್ಮರಾಜನಿಗೆ ಹೇಳಿ ಕಳುಹಿಸಿದನು. ಧರ್ಮರಾಜನು ಭೀಮನನ್ನು ಕರೆದು ರಾಜ್ಯದ ಕೋಶದಿಂದ ಧೃತರಾಷ್ಟ್ರನಿಗೆ ಈ ಶ್ರಾದ್ಧ ವಿಧಿ ನಡೆಸಲು ಬೇಕಾದ ಹಣವನ್ನು ಕೊಡುವಂತೆ ತಿಳಿಸಿದನು. ಆದರೆ ಭೀಮಸೇನನು ಹಣವನ್ನು ನೀಡಲು ಒಪ್ಪಲಿಲ್ಲ. ಧರ್ಮರಾಜನು ಭೀಮಸೇನನಲ್ಲಿ ಹಣವನ್ನು ಕೊಡುವಂತೆ ಪರಿಪರಿಯಿಂದ ಒತ್ತಾಯಿಸಿದನು. 'ಇನ್ನು ಮುಂದೆ ಧೃತರಾಷ್ಟ್ರನು ಏನೂ ಹಣವನ್ನು ಕೇಳಲಾರ. ಇದು ಅವನ ಕೊನೆಯ ಬೇಡಿಕೆಯಾಗಿದೆ. ಅವನ ಈ ಅಂತಿಮ ಇಚ್ಛೆಯನ್ನು ನಾವು ಪೂರೈಸೋಣ ಎಂದು ಮುಂತಾಗಿ ಧರ್ಮರಾಜನು ಎಷ್ಟು ಒತ್ತಾಯಿಸಿದರೂ ಭೀಮಸೇನನು ಕೊನೆಯವರೆಗೂ ಇದಕ್ಕೆ ಸಮ್ಮತಿಸಲಿಲ್ಲ. ''ಧರ್ಮದ ನೀತಿ ನಿಯಮಗಳನ್ನೆಲ್ಲಾ ಅತಿಕ್ರಮಿಸಿ ಸ್ವಚ್ಛಂದವಾಗಿ ವರ್ತಿಸಿ ಲೋಕದ ಅಶಾಂತಿಗೆ ಕಾರಣಪುರುಷರಾದ ದುಷ್ಟರ ಶ್ರಾದ್ಧ ಸಮಾರಂಭಕ್ಕೆ ರಾಜ್ಯದ ಬೊಕ್ಕಸದಿಂದ ಹಣವನ್ನು ನೀಡುವುದು ಉಚಿತವೇ ?'' ಎಂದು ಭೀಮಸೇನನು ಪ್ರಶ್ನಿಸಿದನು. ಪ್ರಜೆಗಳ ಕಲ್ಯಾಣ ಕಾರ್ಯಗಳಿಗಾಗಿ ಉಪಯೋಗಿಸಬೇಕಾದ ಹಣವನ್ನು ಜಗತ್ತನ್ನು ವಿನಾಶ ದಾರಿಯಲ್ಲಿ ತಳ್ಳಿದ ವ್ಯಕ್ತಿಯ ಕಾರ್ಯಕ್ಕೆ ಉಪಯೋಗಿಸುವುದು ಸರಿಯೇ ? ತಂದೆ ಧೃತರಾಷ್ಟ್ರನ ಮೇಲಿನ ಕನಿಕರದಿಂದ ಸರಕಾರದ ಹಣವನ್ನು ದುರುಪಯೋಗ ಪಡಿಸುವುದನ್ನು ನಾನು ವಿರೋಧಿಸುತ್ತೇನೆ, ಎಂದು ಭೀಮನು ತನ್ನ ನಿಲುಮೆಯನ್ನು ಸ್ಪಷ್ಟಪಡಿಸಿದನು. ತಮ್ಮ ಸ್ವಂತ ಹಣವನ್ನು ಧರ್ಮರಾಜ, ಅರ್ಜುನ ಮುಂತಾದವರು ಧೃತರಾಷ್ಟ್ರನ ಮೇಲಿನ ಪ್ರೀತಿಯಿಂದ ನೀಡಿದಾಗ ಮಾತ್ರ ಭೀಮಸೇನನು ಆಕ್ಷೇಪಿಸಲಿಲ್ಲ. ಸರಕಾರದ ಹಣಕ್ಕೂ ಸ್ವಂತ ಹಣಕ್ಕೂ ಇರಬೇಕಾದ ಅಂತರದ ಬಗ್ಗೆ ಭೀಮಸೇನನಿಗಿರುವ ಎಚ್ಚರವನ್ನು ಈ ಘಟನೆಯು ನಿದರ್ಶಿಸುತ್ತದೆ. ತನ್ನ ಸ್ವಂತ ಅಭಿರುಚಿ,

ಆಸಕ್ತಿಗಳಿಗನುಗುಣವಾಗಿ ಸಾರ್ವಜನಿಕ ಹಣವನ್ನು ಉಪಯೋಗಿಸಬಾರದೆಂಬುದನ್ನು ಎತ್ತಿ ತೋರಿಸುವ ಈ ಘಟನೆಯು ಈಗಿನ ದೇಶದ ಆಡಳಿತಗಾರರಿಗೆ, ರಾಜಕಾರಣಿಗಳಿಗೆ ಉತ್ತಮ ಪಾಠವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ತಕ್ಕಡಿಯು ಉಪದೇಶಿಸಿತು

ಬ್ರಾಹ್ಮಣ ಜಾಜಲಿಯು ಅನೇಕ ವರ್ಷಗಳ ಅತ್ಯಂತ ಕಠಿಣ ತಪಶ್ಚರ್ಯವನ್ನು ನಡೆಸುತ್ತಿದ್ದನು. ಅವನು ತಪಸ್ಸಿಗೆ ಆರಂಭಿಸಿದನೆಂದರೆ ಒಣಗಿದ ಮರದಂತೆ ಸ್ವಲ್ಪವೂ ಕದಲದೆ ನಿರಾಹಾರನಾಗಿ ದಿನಗಟ್ಟಲೆ ಕುಳಿತಿರುತ್ತಿದ್ದನು. ಹಕ್ಕಿಗಳು ಅವನ ಜಡೆಗಳಲ್ಲಿ ಗೂಡುಗಳನ್ನು ಕಟ್ಟಿ ವಾಸ ಮಾಡುತ್ತಿದ್ದವು. ಅವುಗಳಿಗೆ ಅನುಕೂಲವಾಗಬಾರದೆಂದು ಜಾಜಲಿಯು ಅಲುಗದೆ ಹಾಗೆಯೇ ನಿಂತು ತಪಸ್ಸನ್ನು ಮುಂದುವರಿಸಿದನು. ಹಕ್ಕಿಗಳು ತಮ್ಮ ಪರಿವಾರ ಸಮೇತವಾಗಿ ಅಲ್ಲಿಂದ ಬಿಡಾರ ಬಿಟ್ಟು ತೆರಳಿದ ಮೇಲೆಯೇ ಇವನು ತಪಸ್ಸಿನಿಂದ ಎದ್ದನು. ಭೂತಾನುಕಂಪ ಹಾಗೂ ಸಹನೆಯ ಈ ಪರೀಕ್ಷೆಯಲ್ಲಿ ತಾನು ತೇರ್ಗಡೆಯಾದೆನೆಂದು ಅವನಲ್ಲಿ ಅಹಂಭಾವವು ಉದಯಿಸಿತು. ತಾನೀಗ ಸಿದ್ಧಿಯನ್ನು ಪಡೆದಿರುವೆನೆಂದೂ ಧಾರ್ಮಿಕ ಸಾಧನೆಯಲ್ಲಿ ವಿಜಯಿಯಾಗಿರುವೆನೆಂದೂ ಜಾಜಲಿಯು ಘೋಷಿಸಿದನು. ಒಡನೆಯೇ ಆಕಾಶದಲ್ಲಿ ಅಶರೀರವಾಣಿಯು ಪ್ರತಿಧ್ವನಿಸಿತು. ''ಧರ್ಮದಲ್ಲಿ, ವಾರಣಾಸಿಯಲ್ಲಿರುವ ತುಲಾಧಾರನ ಅರ್ಹತೆಯನ್ನು ನೀನಿನ್ನೂ ಪಡೆದಿಲ್ಲ. ಆದರೂ ಅವನು ನಿನ್ನಂತೆ ಈ ಅಹಂಭಾವದ ನುಡಿಯನ್ನು ಆಡಲಾರನು'' ಎಂದು. ಈ ಮಾತಿನಿಂದ ಅವಮಾನಿತನಾಗಿ ತುಲಾಧಾರನನ್ನು ಕಾಣಲು ಜಾಜಲಿಯು ವಾರಣಾಸಿಗೆ ಧಾವಿಸಿದನು. ವಾರಣಾಸಿಯ ಪೇಟೆಯಲ್ಲಿ ಅಂಗಡಿ ವ್ಯವಹಾರವನ್ನು ನಡೆಸುತ್ತಿರುವ ತುಲಾಧಾರನನ್ನು ಕಂಡು ಈ ವ್ಯಾಪಾರಿಯ ಬಳಿ ತಾನೇನು ಉಪದೇಶ ಕೇಳುವುದೆಂದು ಅವನಲ್ಲಿಗೆ ಹೋಗಲು ಜಾಜಲಿಯು ಹಿಂದೆ ಮುಂದೆ ನೋಡುತ್ತಿದ್ದಾಗ, ತುಲಾಧಾರನೇ ಅವನನ್ನು ತನ್ನ ಬಳಿ ಕರೆಯುವನು. ಅವರ ಪೂರ್ವಾಪರಗಳನ್ನೆಲ್ಲಾ ಹೇಳಿ ಅವನ ಜಡೆಯಲ್ಲಿ ಹಕ್ಕಿಗಳು ಗೂಡು ಕಟ್ಟಿದ ಪ್ರಕರಣ, ಅಶರೀರವಾಣಿಯಿಂದ ಅವನಿಗೆ ಆದ ಅವಮಾನ ಇವೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದಂತೆ ತುಲಾಧಾರನು ವಿವರಿಸಿದಾಗ ಜಾಜಲಿಗೆ ಆಶ್ಚರ್ಯವಾಯಿತು. ಇವೆಲ್ಲವನ್ನೂ ತಿಳಿಯುವ ಸಿದ್ಧಿಯನ್ನು ನೀನು ಹೇಗೆ ಪಡೆದಿರುವಿ ? ನಿನ್ನ ಸಿದ್ಧಿಯ ಚಮತ್ಕಾರವೇನು ? ಎಂದು ಜಾಜಲಿಯು ಪ್ರಶ್ನಿಸಿದನು. ತುಲಾಧಾರನು ಜಾಜಲಿಗೆ ತನ್ನ ತಕ್ಕಡಿಯನ್ನು ತೋರಿಸುವನು. ''ನನ್ನ ಮುಂದಿರುವ ಈ ತಕ್ಕಡಿಯೇ ನನಗೆ ಮಾರ್ಗದರ್ಶಕವಾಗಿದೆ. ಯಾರೇ ಇರಲಿ, ತನ್ನವರಿರಲಿ, ಪರಕೀಯರಿರಲಿ ಎಲ್ಲರಿಗೂ ಒಂದೇ ರೀತಿಯಿಂದ ತೂಕವನ್ನು ತಕ್ಕಡಿ ತೋರಿಸುತ್ತದೆ. ತನ್ನವರಿಗೊಂದು ತೂಕ, ಉಳಿದವರಿಗೆ ಇನ್ನೊಂದು ಎನ್ನುವ ವ್ಯತ್ಯಾಸವನ್ನು ಈ ತಕ್ಕಡಿ ಮಾಡುವುದಿಲ್ಲ. ನನಗೆ ಪ್ರಾಮಾಣಿಕತೆಯ ಸಂದೇಶವನ್ನು ಈ ತಕ್ಕಡಿಯೇ ನೀಡಿದೆ. ನನ್ನ ವೃತ್ತಿಯನ್ನು ಇದೇ ಆದರ್ಶದಿಂದ ನಡೆಸುತ್ತಿದ್ದೇನೆ. ಸರ್ವಭೂತಗಳಲ್ಲಿ ಮೈತ್ರಿ, ಅದ್ರೋಹವೃತ್ತಿ ಇವೇ ನನ್ನ ಧಾರ್ಮಿಕ ಸಿದ್ಧಿಯ ರಹಸ್ಯ. ಪರರಿಗೆ ಸಾಧ್ಯವಾದಷ್ಟು ದ್ರೋಹವಾಗದಂತೆ ಎಚ್ಚರಿಕೆಯಿಂದ, ನಿಷ್ಠೆಯಿಂದ ನನ್ನ ವ್ಯವಹಾರವನ್ನು ನಡೆಸುತ್ತರುವುದರಿಂದಲೇ ಈ ದಿವ್ಯ ದೃಷ್ಟಿಯು ನನಗೆ ದೊರೆಯುವಂತಾಗಿದೆ.'' ತುಲಾಧಾರನ ಈ ಮಾತಿನಿಂದ ಜಾಜಲಿಗೆ ನಿಜವಾದ ಧರ್ಮದ ದರ್ಶನವಾಯಿತು. ತಾನು ವರ್ಷಗಟ್ಟಲೆ ಅರಣ್ಯದಲ್ಲಿ ಕಠಿಣ ತಪಸ್ಸನ್ನು ನಡೆಸಿದರೂ ದೊರೆಯದ ಸಿದ್ಧಿಯನ್ನು ನಗರದಲ್ಲಿ ವ್ಯವಹಾರವನ್ನು ನಡೆಸಿಕೊಂಡೇ ತುಲಾಧಾರನು ಪಡೆದುದರ ರಹಸ್ಯವನ್ನು ಜಾಜಲಿಯು ಅರಿತನು. ಧಾರ್ಮಿಕ ಸಿದ್ಧಿಗಾಗಿ ನಾಡನ್ನು ಬಿಟ್ಟು ಕಾಡಿಗೆ ಸೇರಬೇಕಾಗಿಲ್ಲ. ವ್ಯಾವಹಾರಿಕ ಜೀವನದಲ್ಲಿಯೇ ನಾವದನ್ನು ಹೇಗೆ ಸಾಧಿಸಬಹುದೆಂಬುದನ್ನು ತುಲಾಧಾರನ ಪ್ರಾಮಾಣಿಕ ಜೀವನವು ನಮಗೆ ತೋರಿಸಿಕೊಟ್ಟಿದೆ.

ಇಂದಿನ ರಾಜಕೀಯದ ಕಥೆ

ಕಣಿಕನು ದುರ್ಯೋಧನ ಮೊದಲಾದವರಿಗೆ ಕುಟಿಲ ರಾಜನೀತಿಯ ಕುತಂತ್ರಗಳನ್ನು ಉಪದೇಶಿಸುತ್ತಾ ಹೇಳಿದ ಕಥೆಯಿದು.

ಒಂದು ಕಾಡಿನಲ್ಲಿ ಹುಲಿ, ತೋಳ, ನರಿ, ಮುಂಗುಸಿ, ಇಲಿ ಈ ಐದು ಪ್ರಾಣಿಗಳು ಅನ್ಯೋನ್ಯವಾಗಿ ಸ್ನೇಹದಿಂದ ವಾಸಿಸುತ್ತಿದ್ದವು. ಒಮ್ಮೆ ಬಲಿಷ್ಠವಾದ ಸಿಂಹವೊಂದನ್ನು ಹಿಡಿದು ಕೊಲ್ಲಲು ಪ್ರಯತ್ನಿಸಿ ವಿಫಲರಾಗಿ ನಂತರ ಪರಸ್ಪರ ಸಮಾಲೋಚನೆಯಿಂದ ಅದನ್ನು ಹಿಡಿಯಲು ಒಂದು ತಂತ್ರವನ್ನು ಯೋಜಿಸಿದವು. ಸಿಂಹ ಮಲಗಿದಾಗ ಇಲಿಯು ಅದರ ಕಾಲನ್ನು ಕಚ್ಚಿ, ಪರಚಿ ಅದಕ್ಕೆ ಓಡಲು ಸಾಧ್ಯವಾಗದಂತೆ ಮಾಡಿತು. ಆಗ ಹುಲಿ ತೋಳಗಳಿಗೆ ಅದರ ಮೇಲೆ ಹಾರಿ ಕೊಲ್ಲಲು ಅನುಕೂಲವಾಯಿತು. ಹೀಗೆ ಸಿಂಹವನ್ನು ಕೊಂದದ್ದಾಯಿತು. ಅನಂತರ ನರಿಯು ಉಳಿದ ಪ್ರಾಣಿಗಳನ್ನು ಸ್ನಾನ ಮಾಡಿ ಬರುವಂತೆಯೂ ಅಲ್ಲಿಯವರೆಗೆ ತಾನು ಸತ್ತು ಬಿದ್ದ ಸಿಂಹದ ಶರೀರವನ್ನು ಕಾಯುವುದಾಗಿಯೂ ತಿಳಿಸಿತು. ಅದರಂತೆ ನರಿಯನ್ನು ಕಾಯಲು ಬಿಟ್ಟು ಉಳಿದ ಪ್ರಾಣಿಗಳೆಲ್ಲಾ ಸ್ನಾನ ಮಾಡಲು ಹೊರಟವು. ಆಗ ಆ ಸಿಂಹವನ್ನು ತಾನೊಬ್ಬನೇ ಪೂರ್ತಿ ಕಬಳಿಸಬೇಕೆಂಬ ದುರಾಲೋಚನೆಯು ನರಿಯ ಮನಸ್ಸಿನಲ್ಲಿ ಮೂಡಿತು. ಕೂಡಲೇ ಅದು ಒಂದು ಕುತಂತ್ರವನ್ನು ಸಿದ್ಧಪಡಿಸಿತು. ಹುಲಿಯು ಸ್ನಾನಮಾಡಿ ಬಂದಾಗ ನರಿಯು ಅತ್ಯಂತ ಚಿಂತಿತವಾದಂತೆ ಅಲ್ಲಿ ಕುಳಿತಿತ್ತು. ''ಸಿಂಹದ ಮಾಂಸವನ್ನು ತಿಂದು ನಾವೆಲ್ಲ ನಕ್ಕು ನಲಿಯಬೇಕಾದ ಈ ಸಂದರ್ಭದಲ್ಲಿ ನೀನೇಕೆ ಬೇಸರದಿಂದ ಚಿಂತಾತುರನಾಗಿ ಕುಳಿತಿರುವಿ ?'' ಎಂದು ಹುಲಿಯು ಪ್ರಶ್ನಿಸಿತು. ''ಇದೀಗ ಇಲಿಯು ಹೇಳಿದ ದರ್ಪದ ಮಾತುಗಳನ್ನು ಕೇಳಿ ನನಗೆ ಬಹಳ ಅವಮಾನವಾಗಿದೆ. ಹುಲಿಗೆ ಎಷ್ಟು ಬಲವಿದ್ದರೇನು ? ನನ್ನ ಸಹಾಯವಿಲ್ಲದೆ ಹುಲಿಗೆ ಸಿಂಹವನ್ನು ಕೊಲ್ಲಲು ಸಾಧ್ಯವಾಯಿತೇ ? ನನ್ನ ಪರಾಕ್ರಮವನ್ನು ಆಶ್ರಯಿಸಿ ಇಂದು ಹುಲಿಯು ತೃಪ್ತಿಯನ್ನು ಪಡೆಯಬೇಕಾಗಿದೆ. ಇಲಿಯ ಈ ಧಿಕ್ಕಾರದ ಮಾತನ್ನು ಕೇಳಿ ನನಗಂತೂ ಸಿಂಹದ ಮಾಂಸವನ್ನು ತಿನ್ನಲು ಮನಸ್ಸಿಲ್ಲ''. ನರಿಯ ಈ ಮಾತನ್ನು ಕೇಳಿ ಕೋಪಗೊಂಡ ಹುಲಿಯು ಈ ಕ್ಷುದ್ರ ಇಲಿಯ ಹಂಗಿನ ಆಹಾರ ನನಗೆ ಬೇಡ. ಬಾಹುಬಲದಿಂದಲೇ ಆಹಾರವನ್ನು ಆರಿಸಿಕೊಳ್ಳುವೆನು ಎಂದು ಹೇಳಿ ಹೊರಟು ಹೋಯಿತು. ನಂತರ ತೋಳವು ಅಲ್ಲಿಗೆ ಆಗಮಿಸಿತು. ಹೆದರಿದಂತೆ ಕುಳಿತ ನರಿಯನ್ನು ಕಂಡು ತೋಳವು ಭಯದ ಕಾರಣವನ್ನು ಪ್ರಶ್ನಿಸಿತು. ''ಹುಲಿರಾಯ ತನ್ನ ಬುದ್ಧಿಯನ್ನು ಬದಲಾಯಿಸಿದ್ದಾನೆ. ನಮ್ಮ ಮೈತ್ರಿಯನ್ನೆಲ್ಲಾ ಕಡೆಗಣಿಸಿ ತಾನೊಬ್ಬನೇ ತನ್ನ ಪರಿವಾರದೊಂದಿಗೆ ಈ ಮಾಂಸವನ್ನು ತಿನ್ನಲು ಆಲೋಚಿಸಿದ್ದಾನೆ. ಯಾರೂ ಇದನ್ನು ಮುಟ್ಟಬಾರದೆಂದು ಆಜ್ಞಾಪಿಸಿ ವ್ಯಾಘ್ರಿಣಿಯನ್ನು ಮತ್ತು ತನ್ನ ಮಕ್ಕಳನ್ನು ಕರೆದುಕೊಂಡು ಬರಲು ಹೋಗಿದ್ದಾನೆ.''

ಈ ಮಾತನ್ನು ಕೇಳಿ ತೋಳವು ಭಯವಿಹ್ವಲವಾಗಿ ಸಿಟ್ಟಿಗೆದ್ದ ಹುಲಿಯನ್ನು ತಾನು ಎದುರಿಸಲಾರೆನೆಂದು ಓಡಿ ಹೋಯಿತು. ಇನ್ನು ಮುಂಗುಸಿಯ ಸರದಿ. ''ಹುಲಿಯನ್ನೂ, ತೋಳವನ್ನು ಹೋರಾಟದಲ್ಲಿ ಗೆದ್ದು ಓಡಿಸಿದ್ದೇನೆ. ನಿನಗೆ ಧೈರ್ಯವಿದ್ದರೆ ನನ್ನೊಂದಿಗೆ ರಣರಂಗಕ್ಕೆ ಬಾ'' ಎಂದು ಮುಂಗುಸಿಗೆ ನರಿಯು ಆಹ್ವಾನ ಕೊಟ್ಟಿತು. ಹುಲಿ, ತೋಳಗಳನ್ನು ಸೋಲಿಸಿದ ನಿನ್ನ ಜೊತೆಗೆ ನಾನು ಹೋರಾಡಲಾರೆ ಎಂದು ಹೇಳಿ ಮುಂಗುಸಿಯು ಹೆದರಿ ಕಾಲಿಗೆ ಬುದ್ಧಿ ಹೇಳಿತು. ಹೀಗೆ ನರಿ ತಾನೊಬ್ಬನೇ ಎಲ್ಲವನ್ನೂ ಕಬಳಿಸಿತು. ರಾಜಕೀಯದಲ್ಲಿ ವಿರೋಧಿಗಳನ್ನು ಯಾವುದೇ ತಂತ್ರಗಳಿಂದ ದೂರ ಓಡಿಸಿ ಅಧಿಕಾರದ ಗದ್ದುಗೆಯನ್ನು ಏರಲು ನರಿಯ ಈ ನೀತಿಯನ್ನು ಅನುಸರಿಸಿದರೆ ಆತನು ಯಶಸ್ವಿ ರಾಜಕಾರಣಿಯಾಗುವನು.

ಇದು ಕಣಿಕನು ದುರ್ಯೋಧನನಿಗೆ ನೀಡಿದ ಉಪದೇಶ. ಇದೇ ದುರ್ಯೋಧನ ಸ್ವಾರ್ಥಪೂರಿತ

ರಾಜಕೀಯ ಜೀವನಕ್ಕೆ ಸ್ಫೂರ್ತಿ. ಇಂದಿನ ರಾಜಕಾರಣಿಗಳ ಕುಟಿಲ ಕುತಂತ್ರಗಳು ಈ ಕಥೆಯ ಪಡಿನೆರಳೇ ಆಗಿವೆ.

ನಾರದರ ಕುಶಲ ಪ್ರಶ್ನೆಗಳು

ಮಹಾಭಾರತ ಕೇವಲ ಅಣ್ಣ ತಮ್ಮಂದಿರ ಕಲಹದ ಕಥೆಯಲ್ಲ. ಅದು ಇಡೀ ಮಾನವ ಕುಲದ ಇತಿಹಾಸ. ಇಲ್ಲಿ ಬರುವ ವ್ಯಕ್ತಿಗಳು ಮಾನವರಲ್ಲಿಯ ಸದ್ಗುಣ ದುರ್ಗುಣಗಳನ್ನು ಪ್ರತಿನಿಧಿಸುವರು. ಪಾಂಡವರು ಸದ್ಗುಣಗಳ ಪ್ರತಿನಿಧಿಗಳಾದರೆ ಕೌರವರು ನಮ್ಮಲ್ಲಿರುವ ದುರ್ಗುಣಗಳ, ದುಷ್ಟ ಪ್ರವೃತ್ತಿಗಳ ಪ್ರತಿನಿಧಿಗಳು. ನಮ್ಮ ಹೃದಯವೇ ಕುರುಕ್ಷೇತ್ರ. ಪಾಂಡವರ ಮತ್ತು ಅವರ ಸೈನ್ಯದ ಸಂಖ್ಯೆ ಕಡಿಮೆ. ಕೌರವರ ಮತ್ತು ಅವರ ಸೈನ್ಯದ ಸಂಖ್ಯೆ ಹೆಚ್ಚು. ನಮ್ಮಲ್ಲಿ ಸದ್ಗುಣಗಳ ಸಂಖ್ಯೆ ಕಡಿಮೆ. ದುರ್ಗುಣಗಳ ಸಂಖ್ಯೆ ಹೆಚ್ಚು. ಸೈನ್ಯದ ಸಂಖ್ಯೆ ಕಡಿಮೆಯಿದ್ದರೂ ಜಯ ದೊರೆತದ್ದು ಪಾಂಡವರಿಗೇ, ಎಂದಿಗೂ ಸತ್ಯಧರ್ಮಕ್ಕೇ ಜಯ. ಆದರೆ ಇಂದಿನ ದುರಂತ ನಮ್ಮ ಜೀವನ ಕುರುಕ್ಷೇತ್ರದಲ್ಲಿ ಕೌರವರಿಗೇ ಜಯ. ನಮ್ಮ ಹೃದಯಲ್ಲಿ ದುರ್ಗುಣಗಳ ದಬ್ಬಾಳಿಕೆ ನಡೆಯುತ್ತಿದೆ. ಪ್ರತಿಯೊಂದು ಕೆಲಸದಲ್ಲಿ ಪ್ರವೃತ್ತಿ ಮಾಡುವಾಗಲೂ ಎರಡು ರೀತಿಯ ಪ್ರಜ್ಞೆಯ ಹೊಯ್ದಾಟವನ್ನು ನಾವು ಅನುಭವಿಸುತ್ತೇವೆ. ದುಷ್ಕೃತ್ಯವನ್ನೆಸಗುವಾಗ, ''ಇದು ತಪ್ಪು'' ಎಂದು ಒಂದು ಪ್ರಜ್ಞೆ ಎಚ್ಚರಿಸುತ್ತದೆ. ಅದೇ ಕಾಲದಲ್ಲಿ ಅದನ್ನು ಬೆಂಬಲಿಸುವ ದುಷ್ಟ ಪ್ರಜ್ಞೆಯೂ ನಮ್ಮಲ್ಲಿ ಮೂಡುತ್ತದೆ. ಆದರೆ ಇಂತಹ ಪ್ರಜ್ಞೆಗೆ ಜಯ ದೊರಕದಂತೆ ನಾವು ಜಾಗೃತರಾಗಬೇಕು. ಯಾವುದೇ ವ್ಯಕಿತಯೂ ತಪ್ಪೆಸಗುವಾಗ, ತಾನು ಮಾಡುತ್ತಿರುವುದು ಸರಿ ಎಂಬ ಧೈರ್ಯದಿಂದ ಪ್ರವೃತ್ತನಾಗವುದಿಲ್ಲ. ಅವನ ಮನಸ್ಸಿನಲ್ಲಿ ತಳಮಳ ಇದ್ದೇ ಇರುವುದು. ಇದೇ ಮಹಾಭಾರತದಲ್ಲಿ ನಡೆದ ಯುದ್ಧದ ಆಧ್ಯಾತ್ಮಿಕ ಸಂದೇಶ.

ಮಹಾಭಾರತದ ಈ ಅರ್ಥ ವ್ಯಾಪ್ತಿಯನ್ನು ವಿವರಿಸಿ ಪುರಾಣಗಳ ಅಧ್ಯಯನಕ್ಕೇ ಹೊಸ ಆಯಾಮ ನೀಡಿದ ಮಹಾಪುರುಷರು 13 ನೇ ಶತಮಾನದ ಶ್ರೀ ಮಧ್ವಾಚಾರ್ಯರು.

ಇದು ದೊಡ್ಡ ರಾಜಕೀಯ ಶಾಸ್ತ್ರವೂ ಹೌದು. ಇಲ್ಲಿ ಬರುವ ಕೆಲವು ರಾಜಕೀಯ ಸನ್ನಿವೇಶಗಳು, ದುರ್ಯೋಧನನಿಗೆ ಕಣಿಕನುಪದೇಶಿಸಿದ ರಾಜನೀತಿ, ಧರ್ಮರಾಜನಲ್ಲಿ ನಾರದರು ಕೇಳುವ ಪ್ರಶ್ನೆಗಳು ಇಂದಿನ ರಾಜಕೀಯವನ್ನು ಮಾರ್ಮಿಕವಾಗಿ ವಿಡಂಬನೆ ಮಾಡುವುದಲ್ಲದೇ ಉತ್ತಮ ರಾಜನೈತಿಕ ಸಂದೇಶವನ್ನೂ ನೀಡುತ್ತದೆ.

ಧರ್ಮರಾಜನು ಸುಖದಿಂದ ರಾಜ್ಯಭಾರ ನಡೆಸುತ್ತ ಮಯ ಸಭೆಯಲ್ಲಿ ಕುಳಿತಾಗ ಒಮ್ಮೆ ನಾರದರು ಅಲ್ಲಿಗೆ ಬರುತ್ತಾರೆ. ಧರ್ಮರಾಜನ ರಾಜ್ಯಭಾರವನ್ನುದ್ದೇಶಿಸಿ ಕೆಲವು ಕುಶಲ ಪ್ರಶ್ನೆಗಳನ್ನು ಕೇಳುತ್ತಾರೆ. ಸಭಾಪರ್ವದ ಪ್ರಾರಂಭದಲ್ಲಿರುವ ಈ ಭಾಗವನ್ನು ನಮ್ಮ ರಾಜಕಾರಣಿಗಳು ಪ್ರತಿನಿತ್ಯ ಪಾರಾಯಣ ಮಾಡುತ್ತಿದ್ದರೆ ಅವರ ವ್ಯಕ್ತಿತ್ವ ಯಾವ ಸ್ತರದಲ್ಲಿದೆ ಎನ್ನುವುದು ಅರ್ಥವಾಗುವುದು. ಪರಿವರ್ತನೆ ಹೊಂದಬಹುದಾದ ಹೃದಯವಿರುವ ರಾಜಕಾರಣಿಗಳಿಗೆ ತಮ್ಮ ಮೇಲೆಯೇ ಜುಗುಪ್ಸೆ ಬಂದರೂ ಆಶ್ಚರ್ಯವಿಲ್ಲ.

ಧರ್ಮರಾಜನಲ್ಲಿ ನಾರದರು ಕೇಳುವ ಕುಶಲ ಪ್ರಶ್ನೆಗಳು ಹೀಗಿವೆ - ನಿನ್ನ ರಾಜ್ಯದಲ್ಲಿ ಧರ್ಮ-ಅರ್ಥ-ಕಾಮಗಳು ಸಮನ್ವಯ ಸ್ಥಿತಿಯಲ್ಲಿವೆಯೇ ? ಪ್ರಜೆಗಳು ಅರ್ಥ ಕಾಮಗಳಿಗಾಗಿ ಧರ್ಮವನ್ನು ಬಲಿಕೊಟ್ಟು ಭೋಗಮಗ್ನರಾಗಿದ್ದಾರೆಯೇ ? ಅಥವಾ ಧರ್ಮದಿಂದ ಅರ್ಥವನ್ನು ಸಂಪಾದಿಸಿ ನಿಯತವಾದ ಯೋಗ್ಯವಾದ ಕಾಮವನ್ನು ಅನುಭವಿಸುವರೇ ?

ನಿನ್ನ ಅಧಿಕಾರಿಗಳು ಲೋಭವಿಲ್ಲದೆಯೇ ಪ್ರಾಮಾಣಿಕರಾಗಿ ರಾಷ್ಟ್ರದ ಹಿತಕಾರ್ಯಗಳಲ್ಲಿ

ತೊಡಗುವವರೋ ? ಅಥವಾ ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿ ಪುಸ್ತಕದಲ್ಲಿ ನಮೂದಿಸಿದ ಮಾತ್ರಕ್ಕೇ ಕಾರ್ಯ ಮುಗಿಸಿದಂತಾಯಿತೆಂದು ಭಾವಿಸುವವರೋ ? ಪ್ರಜೆಗಳು ಹೆದರಿ ತತ್ತರಿಸುವಂತಹ ಉಗ್ರ ಶಿಕ್ಷೆಗಳನ್ನು ನಿನ್ನ ಅಧಿಕಾರಿಗಳು ನೀಡುತ್ತಾರೆಯೇ ?

ಉಳಿದವರ ಮೇಲೆ ಕಾನೂನು ಶಾಸನಗಳನ್ನು ತರುವ ಮೊದಲು ನಿನ್ನ ಮೇಲೆ ಅನ್ವಯಿಸಿ ಕೊಳ್ಳಬೇಕು. ನಂತರ ಪ್ರಜೆಗಳ ಮೇಲೆ. ಆತ್ಮನಿಗ್ರಹ ಮಾಡಿಕೊಂಡು ರಾಜ್ಯಭಾರ ಮಾಡಬೇಕು. ಹೀಗೆ ನಡೆಯುತ್ತಿದೆಯೇ ?

ಸಮರ್ಥ, ಪ್ರಾಮಾಣಿಕ ಅಧಿಕಾರಿಗಳನ್ನು ತಪ್ಪಿಲ್ಲದಿದ್ದರೂ ಹಿಂದಕ್ಕೆ ತಳ್ಳುವುದು, ಕೆಲಸದಿಂದ ತೆಗೆದುಹಾಕುವುದು, ಅವರಿಗೆ ಸಿಗಬೇಕಾದ ಉಚಿತಸ್ಥಾನಗಳನ್ನು ನೀಡದಿರುವುದು, ಈ ರೀತಿ ನಡೆಯುತ್ತಿದೆಯೇ ?

ಕಾರ್ಮಿಕರಿಗೆ ಸರಿಯಾದ ಸಮಯಕ್ಕೆ ಸಂಬಳ ಮತ್ತು ಭತ್ಯೆಗಳನ್ನು (ಎರಡನ್ನೂ) ಕೊಟ್ಟು ಅವರು ಅತೃಪ್ತರಾಗದಂತೆ ಜಾಗ್ರತೆ ವಹಿಸಿರುವೆಯಾ ? ನಿನ್ನ ದೇಶದ ಪ್ರಜೆಗಳು ವಿದೇಶೀಯರ ಸಹಾಯದಿಂದ ರಾಷ್ಟ್ರದ್ರೋಹವೆಸಗದಂತೆ ಎಚ್ಚರಿಕೆ ಇರಿಸಿರುವೆಯಾ ?

ಒಳ್ಳೆಯ ಮನುಷ್ಯನ ಮೇಲೆ ದೋಷಾರೋಪಣೆ ಮಾಡಿ ಬಂಧಿಸುವ ಕ್ರಮವಿದೆಯೇ ?

ಸಾಕಷ್ಟು ಸಾಕ್ಷಿ ಪುರಾವೆಗಳು ದೊರೆತಿದ್ದು ತಪ್ಪಿತಸ್ಥನೆಂದು ಬಂಧಿಸಿದ್ದರೂ ಆ ವ್ಯಕ್ತಿಯನ್ನು ಅಧಿಕಾರಿಗಳಿಗೆ ಹಣಕೊಟ್ಟು ತಪ್ಪಿಸಿಕೊಳ್ಳಲು ಅವಕಾಶವಿದೆಯೇ ?

ನಿನ್ನ ರಾಜ್ಯದಲ್ಲಿ ಸ್ತ್ರೀಯರು ಸುರಕ್ಷಿತರಾಗಿದ್ದಾರೆಯೇ ? ನಿರ್ಭಯವಾಗಿ ಸ್ತ್ರೀಯರು ಸಂಚರಿಸಬಹುದೇ ?

ಎಲ್ಲ ಕಾಲದಲ್ಲಿಯೂ ಅಂಗವಿಕಲರನ್ನು ತಂದೆಯಂತೆ ಪ್ರೀತಿಯಿಂದ ರಕ್ಷಣೆ ಮಾಡುತ್ತಿರುವೆಯಾ ? (ಈಗ ಅಂಗವಿಕಲರ ವರ್ಷದಲ್ಲಿ ಮಾತ್ರ ಅವರ ವಿಚಾರದಲ್ಲಿ ನಮಗೆ ತೋರಿಕೆಯ ಆಸಕ್ತಿ. ಉಳಿದ ಸಮಯದಲ್ಲಿ ಅವರ ಸುದ್ದಿಗೆ ಹೋಗುವುದಿಲ್ಲ). ಪ್ರಜೆಗಳು ತಮಗಾದ ಅನ್ಯಾಯದ ಬಗ್ಗೆ ದೂರಿತ್ತಾಗ ನಿನ್ನ ಅಧಿಕಾರಿಗಳು ಶ್ರೀಮಂತರಿಂದ ಹಣಪಡೆದು ಬಡವರಿಗೆ ಅನ್ಯಾಯವಾಗದಂತೆ ತೀರ್ಪು ನೀಡುವರೇ ? ಜ್ಞಾನಿಗಳಿಗೆ, ಪ್ರಾಮಾಣಿಕರಿಗೆ, ದಕ್ಷರಿಗೆ ಸರಿಯಾದ ಗೌರವ ಪ್ರೋತ್ಸಾಹಗಳು ದೊರಕುತ್ತಿವೆಯೇ ? ರೈತರು ಕೃಷಿಗೆ ಮಳೆಯನ್ನು ಮಾತ್ರ ಅವಲಂಬಿಸುವಂತಿರಬಾರದು. ಕಾಲುವೆಗಳನ್ನು ನಿರ್ಮಿಸಿ ಕೃಷಿಗೆ ಅನುಕೂಲ ಮಾಡಿಕೊಡಬೇಕು. ಇದು ನಡೆದಿದೆಯೇ ?

ರೈತರಿಗೆ ಗೊಬ್ಬರ, ಬೀಜ ಮೊದಲಾದವುಗಳು ಸರಿಯಾಗಿ ದೊರಕುವಂತೆ ವ್ಯವಸ್ಥೆ ಇದೆಯೇ ? ಅವರಿಗೆ ಸರಿಯಾಗಿ ಸಾಲದ ವಿತರಣೆ ಮಾಡುತ್ತಿರುವೆಯಾ ? ಪ್ರತಿಯೊಂದು ಗ್ರಾಮದಲ್ಲಿಯೂ ೫ ಮಂದಿ ಅಧಿಕಾರಿಗಳನ್ನು ನೇಮಿಸಿ ಆ ಗ್ರಾಮದ ಜನರಿಗೆ ಶಿಕ್ಷಣ ಕೊಡಿಸುವುದು, ಅವರ ಸಮಸ್ಯೆಯನ್ನು ವಿಚಾರಿಸಿ ಪರಿಹಾರ ನೀಡುವುದು – ಈ ರೀತಿಯ ಪಂಚಾಯತಿನ ವ್ಯವಸ್ಥೆ ಚೆನ್ನಾಗಿದೆಯೇ ?

ಇವು ನಾರದರು ಕೇಳಿದ ಪ್ರಶ್ನೆಗಳು. ಅವರು ಕೇಳಿರುವ ಅನೇಕ ಪ್ರಶ್ನೆಗಳಲ್ಲಿ ಕೆಲವುಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಲಾಗಿದೆ.

ಧರ್ಮರಾಜನ ಉತ್ತರ

ಧರ್ಮ ಮಾರ್ಗದಲ್ಲಿಯೇ ರಾಜ್ಯಭಾರ ನಡೆಸುತ್ತಿದ್ದರೂ ಧರ್ಮರಾಜ, ನಾರದರ ಪ್ರಶ್ನೆಗಳಿಗೆ, ಈಗಿನ ಮಂತ್ರಿಗಳಂತೆ ನಮ್ಮ ರಾಜ್ಯಭಾರ ಬಹಳ ಚೆನ್ನಾಗಿದೆ. ನಮ್ಮ ರಾಷ್ಟ್ರ ಪ್ರಗತಿಪಥದಲ್ಲಿದೆ. ಭರದಿಂದ ಸಾಗಿದೆ. ಎಂದು ಬಡಾಯಿ ಕೊಚ್ಚಲಿಲ್ಲ, ಅವನು ವಿನಮ್ರನಾಗಿ ಹೇಳಿದ ಉತ್ತರ –

ನಾರದರೆ ! ನಿಮ್ಮ ಪ್ರಶ್ನೆಗಳಿಂದ ನನ್ನ ಪ್ರಜ್ಞೆ ಜಾಗೃತಗೊಂಡಿದೆ. ನೀವು ತಿಳಿದಂತೆ ಸರಿಯಾದ ಮಾರ್ಗದಲ್ಲಿ ರಾಜ್ಯಭಾರ ಮಾಡಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ.

ದೈವ ಪೌರುಷಗಳ ಸಮನ್ವಯ

ಪಾಂಡವರು ಅರಣ್ಯವಾಸದಲ್ಲಿದ್ದಾಗ ಒಮ್ಮೆ ದ್ರೌಪದೀ ದೇವಿಯು ಧರ್ಮರಾಜನಲ್ಲಿ ಪ್ರಶ್ನೆಯೊಂದನ್ನು ಕೇಳುತ್ತಾಳೆ–

ಕ್ಷಮೆ ಶ್ರೇಷ್ಠವೋ ? ಕ್ರೋಧ ಶ್ರೇಷ್ಠವೋ ?

ಇದೇ ಪ್ರಶ್ನೆಯನ್ನು ಬಲಿರಾಜ ಪ್ರಹ್ಲಾದನನ್ನು ಕೇಳಿದ್ದನು. ಆಗ ಕೆಲವೊಮ್ಮೆ ಕ್ಷಮೆ ಬೇಕು. ಕೆಲವೊಮ್ಮೆ ಕೋಪವೂ ಬೇಕು. ಯಾವಾಗಲೂ ಎಲ್ಲರಲ್ಲೂ ಕ್ಷಮೆ ತೋರಿದರೆ ಸುಲಭವಾಗಿ ಶತ್ರುಗಳು ನಮ್ಮನ್ನು ಆಕ್ರಮಿಸಿಯಾರು. ಯಾವಾಗಲೂ ಕೋಪವನ್ನೇ ತೋರಿದರೆ ಯಾರೂ ನಮ್ಮಲ್ಲಿ ಸ್ನೇಹ ಮಾಡುವುದಿಲ್ಲ. ಎಲ್ಲರೂ ದೂರವಾಗುತ್ತಾರೆ. ಆದ್ದರಿಂದ ಎರಡೂ ಬೇಕು ಎಂದು ಉತ್ತರಿಸಿದನು.

ಆರ್ಯ ಧರ್ಮರಾಜ ! ನಿನ್ನ ದೃಷ್ಟಿಯಲ್ಲಿ ಇವೆರಡರಲ್ಲಿ ಯಾವುದು ಉತ್ತಮ ? ಎನ್ನುತ್ತಾಳೆ ದ್ರೌಪದಿ. ದ್ಯೂತದಿಂದ ಪಾಂಡವರ ರಾಜ್ಯವನ್ನು ಅಪಹರಿಸಿದ್ದಾನೆ ದುರ್ಯೋಧನ. ದ್ಯೂತದಿಂದ ಯಾರ ವಸ್ತುವೂ ಮತ್ತೊಬ್ಬರದಾಗಲು ಸಾಧ್ಯವಿಲ್ಲ. ಇದನ್ನು ಯಾವ ಕಾನೂನು, ಶಾಸನವೂ ಸಮ್ಮತಿಸುವುದಿಲ್ಲ. ಆದ್ದರಿಂದ ನಾವೂ ಯುದ್ಧಮಾಡಿ ಅದನ್ನು ಪಡೆಯಬೇಕು. ಅನ್ಯಾಯದಿಂದ ಕೌರವರು ರಾಜ್ಯಾಪಹಾರ ಮಾಡಿದ್ದರೂ ಯುಧಿಷ್ಠಿರನು ಸ್ವಲ್ಪವೂ ಉದ್ವಿಗ್ನನಾಗದೆ ಶಾಂತಿ ಮಂತ್ರವನ್ನು ಉಚ್ಚರಿಸುತ್ತಿದ್ದಾನೆ. ಹೀಗೇ ಬಿಟ್ಟರೇ ೧೩ ವರ್ಷದ ವನವಾಸ ಅಜ್ಞಾತವಾಸಗಳು ಮುಗಿದ ಮೇಲೆಯೂ ರಾಜ್ಯವನ್ನು ಸ್ವೀಕರಿಸಲು ಪ್ರಯತ್ನಿಸದೇ ಹೀಗೆಯೇ ಕಾಡಿನಲ್ಲಿಯೇ ಸುಖವಾಗಿರೋಣ. ಏಕೆ ಯುದ್ಧ ? ಏಕೆ ರಾಜ್ಯ ? ಎನ್ನುವವನು ಯುಧಿಷ್ಠಿರ. ಆದ್ದರಿಂದ ಈಗಾಗಲೇ ಇವನನ್ನು ಪ್ರಚೋದಿಸಿ ವನವಾಸ ಅಜ್ಞಾತವಾಸಗಳು ಮುಗಿದ ಮೇಲೆಯಾದರೂ ಸಂಗ್ರಾಮದಲ್ಲಿ ತೊಡಗುವಂತೆ ಮಾಡಬೇಕು ಎಂಬ ಅಭಿಪ್ರಾಯದಿಂದ ದ್ರೌಪದಿಯು ಈ ಪ್ರಶ್ನೆಯನ್ನು ಕೇಳುತ್ತಿದ್ದಾಳೆ.

ಧರ್ಮರಾಜನು ಉತ್ತರಿಸುತ್ತಾನೆ–

ಎಂದಿಗೂ ಯಾರಲ್ಲಿಯೂ ಕೋಪ ಮಾಡುವುದು ಉಚಿತವಲ್ಲ. ಕ್ರೋಧವು ಮನುಷ್ಯರನ್ನು ಅಧೋಗತಿಗೆ ತಳ್ಳುವುದು. ದುರ್ಬಲನು ಬಲಿಷ್ಠರಲ್ಲಿ ಕ್ರೋಧ ಮಾಡಬಾರದು. ಅದರಿಂದ ಅವರಿಗೇ ಹಾನಿ. ದುರ್ಬಲರು ಕ್ರುದ್ಧರಾದರೂ ಬಲಿಷ್ಠರು ಸಹನೆಯಿಂದಲೇ ಇರಬೇಕು. ಇವರೂ ಕುಪಿತರಾದರೆ ಆ ದುರ್ಬಲನಿಗೂ ಇವರಿಗೂ ವ್ಯತ್ಯಾಸವೇನು ?

ಒಬ್ಬ ಸಾಧು ಸ್ನಾನ ಮಾಡುತ್ತಿದ್ದಾಗ, ಆ ನೀರಲ್ಲಿ ಬಿದ್ದು ದುಃಖಪಡುತ್ತಿದ್ದ ಚೇಳನ್ನು ಕಂಡು ಕರುಣೆಯಿಂದ ನೀರಿನಿಂದ ಮೇಲಕ್ಕೆ ಎತ್ತಿದನು. ಆದರೆ ಆ ಚೇಳು ಅವನನ್ನು ಕಚ್ಚಿತು. ಆ ನೋವಿಗೆ ಕೈ ಬಿಟ್ಟಾಗ ಆ ಚೇಳು ಪುನಃ ನೀರಲ್ಲಿ ಬಿದ್ದು ಒದ್ದಾಡಿತು. ಪುನಃ ಎತ್ತಿದ, ಕಚ್ಚಿಸಿಕೊಂಡು ಪುನಃ ಹಾಕಿ. ಪುನಃ ಎತ್ತಿದನು. ಇದನ್ನು ಕಂಡವನೊಬ್ಬ ಅವನಲ್ಲಿ ಕೇಳಿದನು - ಏಕೆ ಸುಮ್ಮನೇ ಆ ಹಿಂಸ್ರ ಪ್ರಾಣಿಯನ್ನು ಎತ್ತುವಿ. ನಿನ್ನನ್ನೇ ಕಚ್ಚುವುದು. ಆಗ ಸಾಧು - ಚೇಳು ಕಚ್ಚುತ್ತದೆ ಎಂದು ನಾನೂ ಅದಕ್ಕೆ ಕಷ್ಟಕೊಟ್ಟರೆ ನನಗೂ ಚೇಳಿಗೂ ವ್ಯತ್ಯಾಸವೇನು ? ಎಂದನಂತೆ. ಹೀಗೆ ಈ ಕಥೆಯನ್ನು ಉದಾಹರಿಸಿ ಕ್ರೋಧ ಮಾಡಲೇಬಾರದು ಸಹನೆಯಿಂದಲೇ ವರ್ತಿಸಬೇಕು.

ಧರ್ಮರಾಜನ ಈ ಉತ್ತರವನ್ನು ಕೇಳಿ ಬೇಸರಗೊಂಡ ದ್ರೌಪದಿಯು - ಕ್ಷಮೆಯ ಹೆಸರಿನಲ್ಲಿ ನಿನಗೆ ಇಂತಹ ವ್ಯಾಮೋಹವನ್ನು ಕೊಟ್ಟ ಆ ದೇವನಿಗೆ ದೊಡ್ಡ ನಮಸ್ಕಾರ, ಶತ್ರುಗಳಲ್ಲಿಯೂ

ದುರ್ಬಲನಂತೆ ವರ್ತಿಸುವೆಯಲ್ಲ ನೀನು.

ಯುಧಿಷ್ಠಿರ! ನ್ಯಾಯ, ಧರ್ಮ, ಕ್ಷಮೆ ಎಂದು ಜಪಿಸುತ್ತಿರುವ ನೀನು ಕಾಡಿನಲ್ಲಿ ಕಷ್ಟಪಡುತ್ತಿರುವಿ. ಯಾವುದೇ ಧರ್ಮ ಅನ್ಯಾಯಗಳ ನೀತಿಯಿಲ್ಲದೇ ಅನಾಚಾರ ನಿರತನಾದ ಆ ದುರ್ಯೋಧನ ಆರಾಮವಾಗಿ ರಾಜ್ಯವಾಳುತ್ತಿದ್ದಾನೆ. ಭೋಗ ಭಾಗ್ಯದಲ್ಲಿ ಮಗ್ನನಾಗಿದ್ದಾನೆ. ದೇವರನ್ನು ಧರ್ಮವನ್ನು ನಂಬಿದ ಜನಕ್ಕೆ ಕಷ್ಟ. ದೇವರನ್ನು ಧರ್ಮವನ್ನು ದೂರವಿಟ್ಟ ದುಷ್ಟರಿಗೆ ಭೋಗ. ಹೀಗಾದರೆ ಆ ದೇವರು ಧರ್ಮ ಏಕೆ ? ಅವುಗಳನ್ನು ನಂಬಿ ಫಲವೇನು... ಎಂದು ಪ್ರಶ್ನಿಸುತ್ತಿದ್ದಾಳೆ. ಅವಳಿಗೆ ಈ ರೀತಿಯ ಸಂಶಯ ವಿಪರ್ಯಯಗಳಿಲ್ಲ, ಆದರೂ ಜೀವನದಲ್ಲಿ ಒಳ್ಳೆಯವರಾಗಿ ಬಾಳಿ ದುಃಖವನ್ನು ಅನುಭವಿಸುವ ಜನರಿಗೆ ಸಹಜವಾಗಿ ಮೂಡುವ ಸಂಶಯವನ್ನು ದ್ರೌಪದಿಯು ನಮ್ಮೆಲ್ಲರ ಪ್ರತಿನಿಧಿಯಾಗಿ ವ್ಯಕ್ತಪಡಿಸುತ್ತಿದ್ದಾಳೆ.

ದ್ರೌಪದಿಯ ಈ ವಾದಕ್ಕೆ ಧರ್ಮರಾಜ ನೇರವಾಗಿ ಉತ್ತರಿಸುತ್ತಿದ್ದಾನೆ.

ದ್ರೌಪದಿ ನಾನು ಧರ್ಮಾಚರಣೆ ಮಾಡುವುದು ಕೀರ್ತಿಗಾಗಿ ಅಲ್ಲ. ದಾನಮಾಡಬೇಕು ಆದ್ದರಿಂದ ದಾನ ಮಾಡುತ್ತೇನೆ. ಯಾಗ ಮಾಡಬೇಕು ಆದ್ದರಿಂದ ಯಾಗ ಮಾಡುತ್ತೇನೆ. ಕರ್ತವ್ಯ ದೃಷ್ಟಿಯಿಂದ ನಾನು ಧರ್ಮಾಚರಣೆಯಲ್ಲಿ ಪ್ರವೃತ್ತನಾಗುವುದು. ಫಲವು ಬರಲಿ, ಬಿಡಲಿ, ಅದು ನನಗೆ ಮುಖ್ಯವಲ್ಲ. ಆದ ಕಾರಣ ಧರ್ಮನಿಷ್ಠನಾದರೂ ರಾಜ್ಯ ದೊರಕಲಿಲ್ಲವೆಂಬ ಬೇಸರ ನನಗಿಲ್ಲ.

ನಮ್ಮ ಒಂದು ಜನ್ಮ, ಜೀವನದ ಒಂದು ದಿವಸ. ಒಂದು ದಿವಸದ ಸುಖದುಃಖಗಳಿಂದ ಯಾವುದೇ ನಿರ್ಣಯ ಮಾಡಬಾರದು.

ಯಾಜ್ಞಸೇನಿ ! ಧರ್ಮ, ದೇವರು ಇದ್ದಾನೆಯೇ ? ಅದನ್ನೇಕೆ ನಂಬಬೇಕು ಎಂದು ಕೇಳುತ್ತಿರುವೆಯಲ್ಲ ! ನಿನಗೇ ಈ ಸಂಶಯ ಬಂತಲ್ಲ ಎಂದು ನನಗೆ ಆಶ್ಚರ್ಯವಾಗುತ್ತಿದೆ. ನಿನ್ನ ಉತ್ಪತ್ತಿಯನ್ನೇ ಗಮನಿಸು. ಧರ್ಮದ ಅತೀಂದ್ರಿಯ ಶಕ್ತಿಗೆ ಇದಕ್ಕಿಂತಲೂ ಬೇರೆ ನಿದರ್ಶನ ಬೇಕೆ ? ಯಜ್ಞದಿಂದಲ್ಲವೇ ನೀನು ಪ್ರಾದುರ್ಭವಿಸಿದ್ದು. ಧರ್ಮದ ಬಗ್ಗೆ ಕುತರ್ಕ ಬೇಡ. ನಿಂದೆ ಬೇಡ.

ಎಲ್ಲರಿಗೂ ಸುಖ ದುಃಖ ನೀಡುವವ ಆ ಭಗವಂತನು. ಅವನು ಎಲ್ಲರನ್ನೂ ಪ್ರೇರಿಸುವನು. ಆದ್ದರಿಂದ ನಮ್ಮ ಪ್ರಯತ್ನವೆಲ್ಲ ವ್ಯರ್ಥ. ಅವನ ಪ್ರೇರಣೆಯಂತೆ ಜಗತ್ತು ನಡೆಯುತ್ತಿರುವಾಗ ಯಾರ ಬಗ್ಗೆಯೂ ಕೋಪ ಅನಗತ್ಯ. ಕ್ಷಮೆಯೇ ಪರಮಧರ್ಮ. ಏನೇ ತಪ್ಪು ಮಾಡಿದರೂ ನಮ್ಮನ್ನು ನಾವು ಕ್ಷಮಿಸಿಕೊಳ್ಳುವಂತೆ ಇತರರನ್ನೂ ಕ್ಷಮಿಸಬೇಕು.

ಧರ್ಮರಾಜನ ಈ ಅತಿಯಾದ ದೈವವಾದವನ್ನು ಮೆಚ್ಚದ ದ್ರೌಪದೀ ಕೇಳುತ್ತಾಳೆ –

ಕ್ಷಮೆಯು ಪರಮಧರ್ಮವೆಂದು ದುಷ್ಟರಲ್ಲೂ ಕ್ಷಮೆ ತೋರುವುದು ಸರಿಯಲ್ಲ. ಹೀಗೆ ಎಲ್ಲರಲ್ಲೂ ಕ್ಷಮೆ ತೋರಿಸುತ್ತಾ ಹೋದರೆ ಶಾಸನ ಪೊಲೀಸ್ ವ್ಯವಸ್ಥೆಯೆಲ್ಲ ಏಕೆ ಬೇಕು ? ಲೋಕದಲ್ಲಿ ಅವ್ಯವಸ್ಥೆ ಉಂಟಾದೀತು. ದುಷ್ಟರ ಹಾವಳಿಯಿಂದ ಲೋಕನಾಶವೇ ಆದೀತು. ವಿಷ್ಣು ಸರ್ವಪ್ರೇರಣೆ ನಿಜ. ಆದರೂ ಪುರುಷ ಪ್ರಯತ್ನ ವ್ಯರ್ಥವಲ್ಲ. ಪುರುಷ ಪ್ರಯತ್ನಕ್ಕೆ ಅವಕಾಶವೇ ಇಲ್ಲವಾದರೆ ಶಾಸ್ತ್ರದ ವಿಧಿ ನಿಷೇಧಗಳಿಗೇನು ಅರ್ಥ.

ಅವುಗಳು ವ್ಯರ್ಥವಾದಂತಲ್ಲವೇ ! ಆದ್ದರಿಂದ ಪರಮಾತ್ಮನಿಗೆ ಅಧೀನನಾಗಿಯೇ ಪುರುಷ ಪ್ರಯತ್ನವನ್ನೂ ಮಾಡಬೇಕು.

ದ್ರೌಪದಿಯ ಈ ವಾದಕ್ಕೆ ಧರ್ಮರಾಜ ನಿರುತ್ತರನಾಗಿ ಅವಳನ್ನು ಗದರಿಸುತ್ತಾನೆ – ಹೀಗೆಲ್ಲ ಕುತರ್ಕದಿಂದ ಪರಮಾತ್ಮನಿಗೇ ಅಸ್ವಾತಂತ್ರ್ಯ ಸಾಧಿಸುವಂತೆ ವಾದ ಮಾಡುವುದು ಸರಿಯಲ್ಲ.

ಸ್ತ್ರೀಯರು ಹೆಚ್ಚು ಮಾತನಾಡಬಾರದೆಂದು ದ್ರೌಪದಿ ಮೌನವಹಿಸಿದಳು. ಆಗ ಭೀಮಸೇನ ಧರ್ಮರಾಜನಿಗೆ ಉತ್ತರಿಸುತ್ತಾನೆ.

ಪರಮಾತ್ಮನೊಬ್ಬನೇ ಸ್ವತಂತ್ರ, ಸರ್ವಕರ್ತಾ, ಸರ್ವಪ್ರೇರಕ ಉಳಿದುದೆಲ್ಲವೂ ಅವನ ಅಧೀನ. ಆದರೂ ನಮ್ಮ ಪ್ರಯತ್ನವನ್ನು ಕರ್ತವ್ಯವನ್ನು ಮಾಡಲೇಬೇಕು. ತಮ್ಮ ಕರ್ತವ್ಯ ಮಾಡಿ, ಇದು ಹರಿಯ ಪ್ರೇರಣೆ ಎಂದು ತಿಳಿಯಬೇಕು. ಯಾರು, ದೇವರು ಎಲ್ಲವನ್ನೂ ಮಾಡಿಸುವವನೆಂದು ತಮ್ಮ ಕರ್ತವ್ಯವನ್ನೇ ಮಾಡದೇ ನಿಷ್ಕ್ರಿಯರಾಗುವರೋ ಅವರು ತಾಮಸೀ ಗತಿಯನ್ನು ಹೊಂದುವರು. ಶಕ್ತಿ ಇದ್ದರೂ ದೈವವನ್ನೇ ಪ್ರಬಲವಾಗಿ ನಂಬಿ ಸ್ವಕರ್ತವ್ಯವನ್ನು ಮಾಡದಿರುವವನು ಅಜ್ಞ.

ಶ್ರೀಮದ್ಭಗವದ್ಗೀತೆಯಲ್ಲಿಯೂ ಇದು ನಿರೂಪಿತವಾಗಿದೆ -

''ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋಧನುರ್ಧರಃ । ತತ್ರಶ್ರೀಃ ವಿಜಯೋ ಭೂತಿಃ ಧ್ರುವಾನೀತಿರ್ಮತಿರ್ಮಮ '' ಅನುಗ್ರಹಶೀಲನಾದ ನಾರಾಯಣ, ಕರ್ತವ್ಯಶೀಲನಾದ ನರ, ಇವರಿಬ್ಬರಿರುವಲ್ಲಿ ಸಂಪತ್ತು ಜಯ ಲಭಿಸುವುದು. ಪ್ರತಿಯೊಂದು ಕಾರ್ಯಕ್ಕೂ ನಮ್ಮ ಪ್ರಯತ್ನ, ಭಗವಂತನ ಅನುಗ್ರಹ ಎರಡೂ ಬೇಕು. ದೇವರೆ ಮಾಡಿಸುತ್ತಾನೆಂದು ನಿಷ್ಕ್ರಿಯನೂ ಆಗಬಾರದು. ನಾವೇ ಮಾಡುತ್ತೇವೆ ಎಂಬ ಅಹಂಕಾರವೂ ಇರಬಾರದು. ಎಲ್ಲರಿಗೂ ಅವರವರ ಕರ್ತವ್ಯವಿದೆ. ಪರಮಾತ್ಮನ ಮುಖದಿಂದ ಹುಟ್ಟಿದ ಬ್ರಾಹ್ಮಣರು ಮುಖದ ಕಾರ್ಯ ಜಪ, ಉಪದೇಶಗಳನ್ನು ಮಾಡಬೇಕು. ನಾವೀಗ ಮಾಡುತ್ತಿರುವ ಮುಖದ ಕಾರ್ಯವೆಂದರೆ ಪ್ರಸಾದ ಸ್ವೀಕಾರ ಭೋಜನ ಮಾತ್ರ. ಇದು ತಪ್ಪು. ಶ್ರೀಹರಿಯ ಬಾಹುಗಳಿಂದ ಹೊರಬಂದ ಕ್ಷತ್ರಿಯರು, ಪ್ರಜಾಪಾಲನ, ದುಷ್ಟ ನಿಗ್ರಹಗಳನ್ನು ಮಾಡಬೇಕು. ತೊಡೆಯಿಂದ ಜನಿಸಿದ ವೈಶ್ಯರು ದೇಶವನ್ನು ಅಭಿವೃದ್ಧಿಗೊಳಿಸಬೇಕು. ಕೃಷಿ, ಗೋರಕ್ಷಣೆ, ವಾಣಿಜ್ಯ ವ್ಯವಹಾರಗಳನ್ನು ಮಾಡಬೇಕು. ಹರಿಯ ಪಾದದಿಂದ ಹುಟ್ಟಿದ ಶೂದ್ರರು ಸೇವೆ ಮಾಡಬೇಕು. ಹೀಗೆ ಕ್ಷತ್ರಿಯನಾದ ನೀನು ಕರ್ತವ್ಯವನ್ನು ಮಾಡಬೇಕು. ದುಷ್ಟರಾದ ಕೌರವರ ನಿಗ್ರಹಮಾಡಿ ಅನ್ಯಾಯ ಮಾರ್ಗದಿಂದ ಅವರು ಕಸಿದುಕೊಂಡಿರುವ ರಾಜ್ಯವನ್ನು ಪಡೆಯಬೇಕು.

ಭೀಮಸೇನನ ಮಾತು ಕೇಳಿದ ಧರ್ಮರಾಜ ಸ್ವಲ್ಪ ಬದಲಾವಣೆಯಾದನು. ಯುದ್ಧ ಮಾಡೋಣ ಆದರೆ ವನವಾಸ ಮುಗಿಯಲಿ ಎನ್ನುತ್ತಾನೆ.

ನಮ್ಮಲ್ಲಿಯೂ, ದೇವರ ಮೇಲೆ ಭಾರ ಹಾಕಿ ಕರ್ತವ್ಯ ವಿಮುಖರಾಗುವ ಮಂದಿ ಬಹಳ ಇದ್ದಾರೆ. ಮತ್ತೊಬ್ಬ ಕಷ್ಟದಿಂದ ನರಳುತ್ತಿದ್ದರೆ, ಭಗವತ್ಸಂಕಲ್ಪವೇ ಹಾಗಿದೆ. ನಾವು ಅದರ ಪರಿಹಾರಕ್ಕೆ ಪ್ರಯತ್ನಿಸಬಾರದು. ಪ್ರಯತ್ನಿಸಿದರೆ ಭಗವಂತನ ಇಚ್ಛೆಗೆ ವಿರುದ್ಧವಾಗಿ ನಡೆದಂತಾಗುವುದು ಎಂದು ತಮ್ಮ ಕರ್ತವ್ಯ ವಿಮುಖತೆಗೆ, ಔದಾಸೀನ್ಯಕ್ಕೆ ವೇದಾಂತದ ಮುಖವಾಡ ಹಾಕುತ್ತಾರೆ. ಆದರೆ ತಮಗೆ ಆಪತ್ತು ಬಂದಾಗ ವೈದ್ಯರ ಬಳಿ ಓಡುತ್ತಾರೆ. ಆಗಲೂ, ಇದು ಭಗವದಿಚ್ಛೆ ಎಂದು ಸುಮ್ಮನೇ ಕೂಡುವುದಿಲ್ಲ. ನಮಗೊಂದು ನ್ಯಾಯ, ಇನ್ನೊಬ್ಬರಿಗೊಂದು ನ್ಯಾಯ! ಇದು ಯಾವ ನ್ಯಾಯ ? ಇದು ಅನ್ಯಾಯ.

ಇತ್ತೀಚೆಗೆ ನಮ್ಮ ಹಿಂದುಗಳಲ್ಲಿ ಕೆಲವರು ಮತಾಂತರವಾಗುತ್ತಿದ್ದಾರೆ. ನಮ್ಮ ದೇಶದಲ್ಲಿಯೇ ಹಿಂದೂ ಧರ್ಮವನ್ನು ಉಳಿಸಿಕೊಳ್ಳಲು ಹೋರಾಡಬೇಕಾದ ದುರ್ದೈವ ಸಂದರ್ಭ ಬಂದಿದೆ. ಹೀಗಿದ್ದರೂ ಹಿಂದೂ ಧರ್ಮದ ರಕ್ಷಣೆಗೆ ಸ್ವಲ್ಪವೂ ಪ್ರಯತ್ನ ಮಾಡದೇ, ನಮ್ಮ ಧರ್ಮ ಸನಾತನ, ಎಂದಿಗೂ ಅದಕ್ಕೆ ನಾಶವಿಲ್ಲ. ಭಗವದಿಚ್ಛೆಗೆ ಬಂದಂತೆ ಆಗುವುದು. ಇದು ಮ್ಲೇಚ್ಛ ಭೂಮಿಯಾಗಬೇಕೆಂಬುದೇ ಭಗವತ್ಸಂಕಲ್ಪ. ಅದಕ್ಕೆ ವಿರುದ್ಧವಾಗಿ ನಾವು ಪ್ರಯತ್ನಿಸಿದರೆ ಭಗವದಿಚ್ಛೆಗೆ ವಿರುದ್ಧವಾಗಿ ನಡೆದಂತಾಗುವುದಲ್ಲದೇ ಕಲ್ಕಿ ಅವತಾರಕ್ಕೆ ಅವಕಾಶವೇ ಇಲ್ಲವೆಂದಾಗುವುದೆಂದು ದೇವರ ಇಚ್ಛೆಯನ್ನು ನಾವೇ ತೀರ್ಮಾನಿಸಿ ಕರ್ತವ್ಯ ವಿಮುಖರಾಗುವರು ನಾವು. ಇದೇ ಶುದ್ಧ ತಪ್ಪು.

ಶ್ರೀ ಮಧ್ವಾಚಾರ್ಯರು ಮಹಾಭಾರತದ ತಾತ್ಪರ್ಯ ನಿರ್ಣಯದಲ್ಲಿ ಹೇಳುತ್ತಾರೆ - ಭಗವಂತನೇ ಸರ್ವಪ್ರೇರಕನೆಂದು ಸ್ವಲ್ಪವೂ ಪ್ರಯತ್ನ ಮಾಡದೇ ಕರ್ತವ್ಯ ವಿಮುಖರಾಗುವವರು ತಾಮಸೀ

ಗತಿಯನ್ನು ಹೊಂದುವರು. ಪ್ರತಿಯೊಂದು ಕಾರ್ಯಕ್ಕೂ ದೇವರ ಅನುಗ್ರಹ, ನಮ್ಮ ಪ್ರಯತ್ನ ಎರಡೂ ಬೇಕು. ಮಹಾಪ್ರಯತ್ನ ವರ್ಜಿತಾಃ ಹರೇರನುಗ್ರಹೋಜ್ಝಿತಾಃ ಜನಾ ನ ಜಗ್ಮುರುನ್ನತಿಮ್ ॥

ದಾಸ್ಯವಿಮುಕ್ತಿ

ಒಮ್ಮೆ ವಿನತಾ ಮತ್ತು ಕದ್ರೂವಿಗೆ ವಾದ ಪ್ರಾರಂಭವಾಯಿತು. ಉಚ್ಚೈಶ್ರವಸ್ ಕುದುರೆಯು ಬಿಳಿಯದಾಗಿದೆ ಎಂದು ವಿನತೆಯ ವಾದವಾದರೆ, ಕುದುರೆಯು ಬಿಳಿಯಾದರೂ ಅದರ ಬಾಲ ಕಪ್ಪು ಎಂದು ಕದ್ರುವಿನ ವಾದ. ವಾದ ಬೆಳೆಯುತ್ತಾ ಹೋಯಿತು. ಸೋಲುವವರು ಗೆದ್ದವಳ ದಾಸಿಯಾಗ ಬೇಕೆಂದು ಒಪ್ಪಂದವನ್ನು ಮಾಡಿಕೊಂಡರು. ವಾದ ಕೊನೆಗಾಣದೇ ಕುದುರೆಯನ್ನು ನೋಡಲು ಹೊರಟರು.

ಕದ್ರೂ, ನಾನು ಸೋತರೆ ದಾಸಿಯಾಗಬೇಕಾಗುವುದು, ಆದ್ದರಿಂದ ಏನಾದರೂ ಮಾಡಿ ಬಾಲ ಕಪ್ಪಾಗುವಂತೆ ಮಾಡಬೇಕೆಂದು ಯೋಚಿಸಿದಳು. ತನ್ನ ಅಪೇಕ್ಷೆಯನ್ನು ಪೂರೈಸುವಂತೆ ಮಕ್ಕಳಲ್ಲಿ - ಸರ್ಪ ಗಳಲ್ಲಿ ಕೇಳಿಕೊಂಡಳು. ಇದಕ್ಕೆ ಅವುಗಳು ಒಪ್ಪದಿದ್ದಾಗ, ಬೆಂಕಿಯಲ್ಲಿ ಬಿದ್ದು ಸಾಯಿರಿ' ಎಂದು ಶಪಿಸಿದಳು.

ಆಮೇಲೆ ಈ ಸರ್ಪಗಳಿಗೆ ತಾಯಿಯ ಮಾತನ್ನೇಕೆ ಮೀರಬೇಕೆಂದೆನಿಸಿ ಎಲ್ಲವೂ ಕುದುರೆಯ ಸಮೀಪಕ್ಕೆ ಹೋಗಿ ಕಪ್ಪಾಗಿ ಕಾಣುವಂತೆ ಅದರ ಬಾಲಕ್ಕೆ ಸುತ್ತಿಕೊಂಡವು. ಕದ್ರುವಿನ ಜೊತೆಗೆ ಬಂದ ವಿನತೆ ಕುದುರೆಯ ಬಾಲ ಕಪ್ಪಗಿರುವುದನ್ನು ಕಂಡು ಸೋತು ಕದ್ರುವಿನ ದಾಸಿಯಾದಳು. ಅವಳು ಹೇಳುವ ಎಲ್ಲ ಕೆಲಸವನ್ನೂ ಮಾಡಬೇಕಾಯಿತು. ನಂತರ ಗರುಡ ಹುಟ್ಟಿದನು, ವಿನತೆಗೆ. ಹೀಗಾಗಿ ಗರುಡನು ಹುಟ್ಟು ವಾಗಲೇ ದಾಸನಾಗಬೇಕಾಯಿತು.

ಗರುಡನು ಬಾಲ್ಯದಿಂದಲೇ ಕದ್ರುವಿನ ಮಕ್ಕಳನ್ನು ಹೊತ್ತು ತಿರುಗುವಂತಾಯಿತು. ಈ ದಾಸ್ಯದಿಂದ ಬೇಸತ್ತ ಗರುಡನು ಒಮ್ಮೆ ತಾಯಿಯಲ್ಲಿ ದಾಸ್ಯದ ಕಾರಣವನ್ನು ಕೇಳಿದನಲ್ಲದೆ ಇದರ ವಿಮೋಚನೆ ಹೇಗೆ ಎಂದೂ ಪ್ರಶ್ನಿಸಿದನು. ''ಅಮೃತ ತಂದರೆ ದಾಸ್ಯದ ವಿಮುಕ್ತಿ'' - ಕದ್ರೂ ಉತ್ತರಿಸಿದಳು. ಕೂಡಲೇ ಗರುಡನು ಅಮೃತವನ್ನು ತರಲು ಸ್ವರ್ಗಕ್ಕೆ ಹೊರಟನು.

ಸ್ವರ್ಗದಲ್ಲಿ ಎಲ್ಲರನ್ನೂ ಸೋಲಿಸಿ ಅಮೃತಾಪಹಾರ ಮಾಡಿದನು. ದೇವರು ಅನುಗ್ರಹಿಸಿದನು. ಇಂದ್ರನು ಗರುಡನ ಮೈತ್ರಿ ಬೆಳೆಸಿ, ಲೋಕಕ್ಕೆಲ್ಲ ವಿಷ ಕಾರುವ ಸರ್ಪಗಳಿಗೆ ಅಮೃತ ದೊರಕಿದರೆ ಜಗತ್ತಿಗೇ ಹಾನಿಯೆಂದು ಭಾವಿಸಿ ಜಾಗ್ರತೆಯಾಗಿ ಹಿಂತಿರುಗಬೇಕೆಂದನು.

ಅಮೃತವನ್ನು ಹಿಡಿದು ಭೂಮಿಗೆ ಬಂದ ಗರುಡನು, ಸ್ನಾನಮಾಡಿಕೊಂಡು ಬನ್ನಿರಿ, ಅಮೃತವನ್ನು ಕುಡಿಯುವಿರಂತೆ ಎಂದು ಸರ್ಪಗಳಿಗೆ ತಿಳಿಸಿದನು. ಸ್ನಾನಕ್ಕಾಗಿ ಹೋದ ಸರ್ಪಗಳು ಸಾವಕಾಶವಾಗಿ ಹಿಂತಿರುಗುವಷ್ಟರಲ್ಲಿ ಇಂದ್ರನು ಬಂದು ಅಮೃತವನ್ನು ಅಪಹರಿಸಿದ.

ಸ್ನಾನ ಮುಗಿಸಿ ಸಾವಕಾಶವಾಗಿ ಹಿಂತಿರುಗಿದ ಸರ್ಪಗಳಿಗೆ, ಗರುಡನು - ಅಮೃತವನ್ನು ನಾನು ತಂದಿದ್ದೆ, ನೀವು ಬರುವುದು ತಡವಾಯಿತು. ಇಂದ್ರನು ಅಮೃತವನ್ನು ಅಪಹರಿಸಿದ್ದಾನೆ ಎಂದನು. ಅಮೃತ ಕಲಶವಿಟ್ಟಿದ್ದ ದರ್ಭೆಯನ್ನು ನೆಕ್ಕಿದ ಸರ್ಪಗಳ ನಾಲಗೆ ಎರಡಾಯಿತು. ಹೀಗೆ ಗರುಡನು ದಾಸ್ಯವಿಮೋಚನೆ ಗೈದನು.

ಇದು ಈ ಕಥೆಯ ಆಧ್ಯಾತ್ಮಿಕ ಸಂದೇಶ -

ಸೋದರಿಯಾದ ಕದ್ರೂವಿನ ವಂಚನೆಯಿಂದ ವಿನತೆಯು ಅವಳ ದಾಸಿಯಾಗಬೇಕಾಯಿತು. ಅನಾದಿ ಕಾಲದಿಂದ ನಮ್ಮೊಡನಿದ್ದು ಸಹೋದರಿಯಂತಿರುವ ಅವಿದ್ಯೆ - ಅಜ್ಞಾನದ ವಂಚನೆಗೆ ಬಲಿಯಾಗಿ, ಅಜ್ಞಾನದ ಸಂತಾನವಾದ ರಾಗ ದ್ವೇಷ ಕಾಮಾದಿಗಳಿಗೆ ನಾವೂ ದಾಸರಾಗಿದ್ದೇವೆ. ಈ ದಾಸ್ಯದ ವಿಮೋಚನೆಯಾಗಬೇಕಿದ್ದರೆ ಗರುಡನ ಬಲದಿಂದ ಅಮೃತವನ್ನು ಕಡೆಯಬೇಕು. ಮಹಾಪ್ರಯತ್ನ -

ಉತ್ಸಾಹಗಳ ಬಲದಿಂದ ತತ್ವಜ್ಞಾನ ಅಮೃತವನ್ನು ನಾವು ಪಡೆದರೆ ಈ ದಾಸ್ಯದ ವಿಮೋಚನೆ ಸಾಧ್ಯ.

ಅಸುರೀ ಶಕ್ತಿಯನ್ನೂ ಜೀರ್ಣಿಸಿಕೊಂಡ ಅಗಸ್ತ್ಯರು

ಅಗಸ್ತ್ಯ ಮುನಿಗಳು ವಿವಾಹವಾಗಬೇಕೆಂದು ಬಯಸಿ, ವದುವನ್ನು ಅರಸುತ್ತ ವಿದರ್ಭರಾಜನನ್ನು ಭೇಟಿಯಾಗಿ ''ರಾಜನ್ ! ನಿನ್ನ ಮಗಳು ಲೋಪಾಮುದ್ರೆಯನ್ನು ವಿವಾಹವಾಗಲು ಬಯಸುತ್ತೇನೆ'' ಎಂದಿದ್ದಾರೆ. ಲೋಪಾಮುದ್ರೆ ಒಪ್ಪಿದ್ದಾಳೆ. ವಿವಾಹ ನಡೆದಿದೆ. ಅರಮನೆಯಿಂದ ಆಶ್ರಮದೆಡೆಗೆ ಅಗಸ್ತ್ಯರನ್ನು ಅನುಸರಿಸಿದ್ದಾಳೆ ರಾಜಕುಮಾರಿ ಲೋಪಾಮುದ್ರೆ.

ತಂದೆಯ ಅರಮನೆಯ ಸುಖ ಸಮೃದ್ಧಿಯಲ್ಲಿ ತೋಲಾಡುತ್ತಿದ್ದ ಲೋಪಾಮುದ್ರೆ ಅಗಸ್ತ್ಯರಲ್ಲಿ ಯಾವುದೇ ಸುಖದ ಸಾಧನವನ್ನೂ ಅಪೇಕ್ಷೆ ಪಡಲಿಲ್ಲ. ಇವಳ ಸಂಯಮಕ್ಕೆ ಅಗಸ್ತ್ಯರು ಮೆಚ್ಚಿದರು. ಇಂತಹ ಉತ್ತಮ ಕನ್ಯೆ ತನ್ನ ಪತ್ನಿಯಾಗಿರುವುದಕ್ಕೆ ಅಗಸ್ತ್ಯರು ಹೆಮ್ಮೆಪಟ್ಟರು.

ಸ್ವಲ್ಪ ಸಮಯ ಕಳೆದಂತೆ ಲೋಪಾಮುದ್ರೆ ಅಗಸ್ತ್ಯರಲ್ಲಿ ಸ್ತ್ರೀ ಸಹಜವಾಗಿ ಉಡಲು ಒಳ್ಳೆಯ ಬಟ್ಟೆಯನ್ನೂ ತೊಡಲು ಆಭರಣವನ್ನೂ ಕೇಳಿದ್ದಾಳೆ. ''ಲೋಪಾಮುದ್ರೆ ! ಆಶ್ರಮದಲ್ಲಿ ಮೂಗು ಹಿಡಿದುಕೊಳ್ಳುವ ಈ ಮುನಿಗೆ ನಿನ್ನ ಬಯಕೆಯನ್ನು ಈಡೇರಿಸುವಷ್ಟು ಹಣ ಎಲ್ಲಿಂದ ಬರಬೇಕು - ಮೃದುವಾಗಿ ನುಡಿದಿದ್ದಾರೆ ಅಗಸ್ತ್ಯರು.

''ಪೂಜ್ಯರೇ ! ಎಲ್ಲ ಋಷಿಗಳಂತೆ ನೀವಲ್ಲ. ಏನು ಬೇಕಾದರೂ ಸೃಜಿಸಬಲ್ಲ ತಾಪಸಶಕ್ತಿ ತಮಗಿದೆ'' - ಎನ್ನುತ್ತಾಳೆ ಲೋಪಾಮುದ್ರೆ.

ಸತಿಯ ಮುಗ್ಧತೆ ಕಂಡು ಅಗಸ್ತ್ಯರಿಗೆ ಅನುಕಂಪ ಹುಟ್ಟಿದೆ. ''ಪ್ರಿಯೆ ! ಶ್ರಮದಿಂದ ಸಂಪಾದಿಸಿದ ತಪಸ್ಸಿನ ಫಲ ದೇಶಕ್ಕಾಗಿ, ಪರರಿಗಾಗಿ ಉಪಯೋಗಿಸಿದರೆ ಮಾತ್ರ ಅದು ಸಾರ್ಥಕ. ನಮ್ಮ ಸ್ವಾರ್ಥಕ್ಕಾಗಿ ಅದನ್ನು ಬಳಸುವುದು ದುರ್ವಿನಿಯೋಗವೆನಿಸುವುದು. ಹಾಗೆಂದು ನೀನು ಬೇಸರಿಸುವ ಅಗತ್ಯವಿಲ್ಲ. ಬೇರೆ ಯಾವುದಾದರೂ ಯೋಗ್ಯ ರೀತಿಯಲ್ಲಿ ನಿನ್ನ ಅಪೇಕ್ಷೆಯನ್ನು ಪೂರೈಸುತ್ತೇನೆ'' - ಎದಿದ್ದಾರೆ ಅಗಸ್ತ್ಯ ಮುನಿಗಳು.

ಅಗಸ್ತ್ಯರ ದೇಹ - ಕಾಷ್ಠಕಠೋರ; ಅದರೂ ಮನಸ್ಸು ಹೂವಿನಷ್ಟು ಮೃದು ಮಧುರ. ಎಲ್ಲ ಭೋಗ ಭಾಗ್ಯಗಳನ್ನೂ ಬದಿಗೊತ್ತಿ ಸ್ಥಿರವಾದ ನೆಲೆಯೂ ಇಲ್ಲದ ಒಬ್ಬ ಮುನಿಯನ್ನು ಸತಿಯಾಗಿ ಹಿಂಬಾಲಿಸಿರುವ ಲೋಪಾಮುದ್ರೆ, ಇದುವರೆಗೂ ಯಾವ ಲೌಕಿಕ ಸಂಪತ್ತನ್ನೂ ಅಗಸ್ತ್ಯರಿಂದ ಬೇಡಿಲ್ಲ, ಅಂತಹವಳ ಈ ಒಂದು ಸಣ್ಣ ಬಯಕೆಯನ್ನು ಪೂರೈಸಿದರೂ ಸಾಕು. ಅವಳಿಗಾಗುವ ಆನಂದ ಎಲ್ಲೆ ಮೀರುವುದು. ಇದನ್ನು ಅರ್ಥಮಾಡಿಕೊಂಡಿದ್ದರು ಅಗಸ್ತ್ಯರು. ಅಗಸ್ತ್ಯರು ತಾಪಸರಾದರೂ ಲೌಕಿಕ ತಿಳಿದವರು.

ಸತಿಯ ಬಯಕೆಯನ್ನು ಈಡೇರಿಸಲೋಸುಗ ನಿಧಿಸಂಗ್ರಹಕ್ಕೆ ಹೊರಟಿದ್ದಾರೆ ಅಗಸ್ತ್ಯರು ರಾಜರುಗಳಲ್ಲಿಗೆ. ಈ ಪ್ರವೃತ್ತಿ ಅವರಿಗೇನೂ ಅಪಮಾನವೆನಿಸಲಿಲ್ಲ. ಪ್ರಾಮಾಣಿಕವಾಗಿ ಬಾಳು ಸವೆಸುವ ಉತ್ತಮ ನಾಗರಿಕನಿಗೆ ತನಗೆ ಬೇಕಾದುದನ್ನು ಸಮಾಜದಿಂದ ಕೇಳಿ ಪಡೆಯುವ ಹಕ್ಕು ಇದ್ದೇ ಇದೆ. ಸತಿಯ ಪ್ರಾಮಾಣಿಕ ಆಕಾಂಕ್ಷೆಯನ್ನು ಪೂರೈಸುವುದು ಪತಿಯ ಕರ್ತವ್ಯ ಎಂಬ ದೃಷ್ಟಿಯಿಂದ ಇದರಲ್ಲಿ ಅಗಸ್ತ್ಯರು ತೊಡಗಿದ್ದಾರೆ ಹೊರತು ಕೇವಲ ಪತ್ನಿಯ ವ್ಯಾಮೋಹದಿಂದಲ್ಲ. ರಾಜರುಗಳಲ್ಲಿ ಹಣವನ್ನು ಕೇಳುವಾಗ ಅಗಸ್ತ್ಯರು ತೋರಿದ ಉತ್ತಮ ಆದರ್ಶ ಇದನ್ನು ಖಚಿತಪಡಿಸುವುದು.

ರಾಜರುಗಳೇ ! ನನ್ನ ಪತ್ನಿಯ ಆಕಾಂಕ್ಷೆಯನ್ನು ಪೂರೈಸಲು ಹಣ ಬೇಕಾಗಿದೆ. ಅದಕ್ಕಾಗಿ ಬಂದಿದ್ದೇನೆ. ತಾವುಗಳು ನನ್ನ ಅಭಿಲಾಷೆಯನ್ನು ಪೂರೈಸಬಹುದು. ಆದರೆ ಒಂದು ಕಿವಿಮಾತು - ನನಗೆ ಸಹಾಯ ನೀಡುವ ನಿಮಿತ್ತವಾಗಿ ಯಾವೊಬ್ಬ ಪ್ರಜೆಗೂ ಹಿಂಸೆಯಾಗಬಾರದು. ರಾಜ್ಯದ ಜಮಾ

ಖರ್ಚುಗಳನ್ನು ಗಮನಿಸಿ, ಉಳಿತಾಯದ ಹಣವಿದ್ದರೆ ಅದರಿಂದ ಮಾತ್ರ ನನ್ನ ಯಾಚನೆಯನ್ನು ಪೂರೈಸಿರಿ. ಇದು ಅಗಸ್ತ್ಯರು, ರಾಜರಿಂದ ತಮಗೆ ಸಹಾಯವನ್ನು ಬಯಸಿದ ರೀತಿ. ತೋರಿದ ನೀತಿ.

ಯಾರಿಗಾಗಿ ಮಾಡುವ ಸ್ವಲ್ಪ ತ್ಯಾಗವೂ ಅನಂತ ಫಲವನ್ನು ನೀಡಬಲ್ಲದೋ, ಆ ಮುನಿಯೇ ಮನೆಯ ಬಾಗಿಲಿಗೆ ಬಂದು ಕೇಳಿದಾಗ ರಾಜರಿಗೆ ಆದ ಆನಂದ ಹೇಳತೀರದು. ಆದರೆ ಮುನಿಯ ಕರಾರಿನಂತೆ ನಡೆದುಕೊಳ್ಳಲು, ತಮ್ಮ ಶೂನ್ಯವಾದ ಉಳಿತಾಯ ಠೇವಣಿಯನ್ನು ಗಮನಿಸಿದಾಗ ಆದ ಸಂಕೋಚವೂ ಹೇಳತೀರದು.

ಎಲ್ಲ ಪ್ರಜೆಗಳನ್ನು ಶೋಷಣೆಗೈದು ಸಂಪತ್ತನ್ನು ದೋಚಿಕೊಂಡಿದ್ದ ರಾಕ್ಷಸ ಇಲ್ವಲನು, ತನ್ನಲ್ಲಿ ಬಂದ ಅತಿಥಿಗೆ ತನ್ನ ತಮ್ಮ ವಾತಾಪಿಯ ಮಾಂಸವನ್ನೇ ಉಪಾಹಾರವಾಗಿ ನೀಡಿ; ಉಂಡ ಮೇಲೆ, ''ವಾತಾಪಿ ಹೊರ ಬಾ'' ಎಂದು ಅತಿಥಿಯ ಹೊಟ್ಟೆಯನ್ನು ಸೀಳಿಸಿ ಸಂತೃಪ್ತಿಯ ಅಟ್ಟಹಾಸಗೈಯುವ ರಕ್ಕಸ.

ಮುನಿಯ ಅಭೀಪ್ಸೆಯನ್ನು ಪೂರೈಸಲು ಅಸಮರ್ಥರಾಗಿ ವ್ಯಥೆಗೊಂಡ ರಾಜರಿಗೆ, ಇಲ್ವಲನ ಸಂಪತ್ತಿನ ಮೇಲೆ ಕಣ್ಣುಬಿತ್ತು. ''ಜನತೆಯನ್ನು ಶೋಷಿಸಿ ಶೇಖರಿಸಿದ ಇಲ್ವಲನ ಸಿರಿಯಿಂದ ನಿಮ್ಮ ಬಯಕೆಯನ್ನು ಈಡೇರಿಸಿಕೊಳ್ಳಬಹುದು'' - ಸಲಹೆ ಇತ್ತರು ರಾಜರು ಅಗಸ್ತ್ಯರಿಗೆ; ಅವನ ಆತಿಥ್ಯವನ್ನು ವಿವರಿಸಿದರೂ ಕೂಡ.

ಹೊರಟರು ಅಗಸ್ತ್ಯರು. ಸ್ವಾಗತ ಹೇಳಿದ ಇಲ್ವಲನು ವಾತಾಪಿಯ ಮಾಂಸವನ್ನು ಬಡಿಸಿದನು. ಉಂಡ ಅಗಸ್ತ್ಯರು ''ವಾತಾಪಿ ಜೀರ್ಣೋ ಭವ'' ಎಂದಾಗ ಇಲ್ವಲ ಬಡಬಡಿಸಿದನು ! ಅಗಸ್ತ್ಯರನ್ನೇ ಆಕ್ರಮಿಸಲು ಯತ್ನಿಸಿದನು. ಆದರೆ ಅಗಸ್ತ್ಯರ ಹುಂಕಾರಕ್ಕೆ ಇಲ್ವಲ ಬಲಿಯಾಗಿದ್ದಾನೆ. ಬೂದಿಯಾಗಿದ್ದಾನೆ. ಅಗಸ್ತ್ಯರು ಪತ್ನಿಯ ಬಯಕೆಯನ್ನು ಪೂರೈಸಿದ್ದಾರೆ. ತೃಪ್ತಿಪಟ್ಟಿದ್ದಾರೆ.

ಇದು ಇಲ್ಲಿಯ ಆಧ್ಯಾತ್ಮಿಕ ಸಂದೇಶ -

ಇಲ್ವಲನು ನೀಡಿದ ಮಾಂಸದ ಸವಿಯಲ್ಲಿ ಮೈಮರೆಯುತ್ತಿದ್ದರು ಅತಿಥಿಗಳು. ಅದು ಬರಿಯ ಆಹಾರವಲ್ಲ, ದೈತ್ಯ ವಾತಾಪಿಯೇ ಅದರ ಮೂಲಕ ಪ್ರವೇಶಿಸಿ ಅವರನ್ನು ಛಿನ್ನಭಿನ್ನಗೊಳಿಸುತ್ತಿದ್ದನು. ನಾವೂ ವಿಷಯ ಪದಾರ್ಥಗಳನ್ನು ಸವಿಯುವುದರಲ್ಲಿ ಮೈ ಮರೆಯುತ್ತೇವೆ. ಆದರೆ ಅದರೊಂದಿಗೇ, ಒಳಗೇ ಆಸುರೀ ಶಕ್ತಿಯೊಂದು ಜೀವಂತವಾಗಿ ಬೆಳೆದು ನಮ್ಮನ್ನೇ ಛಿನ್ನಗೊಳಿಸುವುದು. ಈ ಎಚ್ಚರ ನಮಗಿಲ್ಲ. ಆದರೆ ಕೆಲವರು ಮಾತ್ರ ಇದನ್ನು ಜೀರ್ಣಿಸಿಕೊಳ್ಳಬಹುದು. ಆಸುರೀ ಶಕ್ತಿಯನ್ನೂ ಜೀರ್ಣಿಸಿಕೊಳ್ಳುವ ಆ ಅಗಸ್ತ್ಯಶಕ್ತಿಯನ್ನು ನಾವು ಬೆಳೆಸಿಕೊಳ್ಳಬೇಕು. ಆಗ ಜೀವನಕ್ಕೆ ಅರ್ಥ. ಇಲ್ಲದಿದ್ದರೆ ಅಪಾರ್ಥ; ಅನರ್ಥ; ವ್ಯರ್ಥ.

ದ್ರೌಪದೀ ಸ್ವಯಂವರ

ದ್ರುಪದನ ರಾಜ್ಯದಲ್ಲಿ ದ್ರೌಪದೀ ಸ್ವಯಂವರ. ದುರ್ಯೋಧನಾದಿ ರಾಜಕುಮಾರರ ಆಗಮನ. ಬ್ರಾಹ್ಮಣ ವೇಷದಲ್ಲಿ ಉಪಸ್ಥಿತಿ. ಕೆಳಗಣ ಎಣ್ಣೆಯಲ್ಲಿ ಲಕ್ಷ್ಯವನ್ನು ಗುರುತಿಸಿ ಶರಸಂಧಾನ ಮಾಡಿ ಮತ್ಸ್ಯಯಂತ್ರ ಭೇದಿಸಿದವರಿಗೆ ದ್ರೌಪದೀ. ದುರ್ಯೋಧನಾದಿಗಳಿಗೆ ಪಣದಲ್ಲಿ ಸೋಲು. ಬ್ರಾಹ್ಮಣವೇಷದ ಅರ್ಜುನನಿಂದ ಸುಲಭವಾಗಿ ಮತ್ಸ್ಯಯಂತ್ರ ಭೇದನೆ. ದ್ರೌಪದಿಯಿಂದ ಸ್ವಯಂವರದ ಮಾಲೆ. ದ್ರೌಪದಿಯನ್ನು ಪಡೆದು ತೆರಳುವಷ್ಟರಲ್ಲಿಯೇ ಶತ್ರುಗಳಿಂದ ಆಕ್ರಮಣ. ಭೀಮನ ನೆರವಿನಿಂದ ಶತ್ರುಗಳ ಸಂಹಾರ. ಕುಂತಿಯ ಹೇಳಿಕೆಯಂತೆ ಪಂಚ ಪಾಂಡವರಿಗೂ ದ್ರೌಪದಿಯು ಭಾರ್ಯೆ. ದ್ರುಪದನ ಆಕ್ಷೇಪಕ್ಕೆ ವೇದವ್ಯಾಸರಿಂದ ಪರಿಹಾರ.

ಇದು ಇದರ ಆಧ್ಯಾತ್ಮಿಕ ಸಂದೇಶ -

ಪಂಚ ಪಾಂಡವರು - ಸದ್ಗುಣಗಳು. ದುರ್ಯೋಧನಾದಿಗಳು - ಅಜ್ಞಾನ, ವಿಪರೀತ ಜ್ಞಾನಾದಿಗಳು. ದ್ರೌಪದೀ ವಿದ್ಯಾಭಿಮಾನಿನೀ. ಪಾಂಡವರಿಗೆ ದ್ರೌಪದಿ ಸಹಯೋಗ. ಸದ್ಗುಣಗಳಿಗೆ ವಿದ್ಯೆಯ ಸಹಯೋಗ - ಒಂದು ಸುಯೋಗ. ಅರ್ಜುನನಿಂದ ದ್ರೌಪದೀ ಸಂಪಾದನೆ- ಅರ್ಜುನ- ಅಧ್ಯಯನ- ಅಧ್ಯಯನದಿಂದ ವಿದ್ಯೆ ಸಂಪಾದನೆ. ಅರ್ಜುನನು ದ್ರೌಪದಿಯನ್ನು ಪಡೆದ ಮೇಲೆ ಆಕ್ರಮಿಸಿದ ಶತ್ರುಗಳನ್ನು ಎದುರಿಸಿದವ ಭೀಮ. ಶಾಸ್ತ್ರಾಧ್ಯಯನ ನಡೆಸಿದಾಗ ಬರುವ ಅನೇಕ ಸಂಶಯ, ಕುತರ್ಕ, ವಿಪರೀತ ಜ್ಞಾನಗಳನ್ನು ಎದುರಿಸಲು ಬೇಕು ಭಕ್ತ್ಯಾದಿಗಳು. ಭೀಮಸೇನ - ಜ್ಞಾನ ಭಕ್ತಿ ವೈರಾಗ್ಯಗಳ ಪ್ರತಿನಿಧಿ.

ಸೌಗಂಧಿಕ ಪುಷ್ಪಾಹರಣ

ದ್ರೌಪದಿಯ ಅಪೇಕ್ಷೆಯಂತೆ ಸೌಗಂಧಿಕ ಪುಷ್ಪವನ್ನು ತರಲು ಹೊರಟಿದ್ದಾನೆ ಭೀಮಸೇನ. ದಾರಿಯಲ್ಲಿ ಹನುಮಂತನ ಬಾಲ ಅಡ್ಡ ಬಿದ್ದಿದೆ, ವೃದ್ಧ ಹನುಮಂತನ ಮಾತಿನಂತೆ ಬಾಲವನ್ನು ಬದಿಗೆ ಎತ್ತಿ ಹಾಕಲು ಪ್ರಯತ್ನ ನಡೆದಿದೆ, ಸಾಧ್ಯವಾಗಲಿಲ್ಲ. ಸಾಕ್ಷಾತ್ ವಾಯುದೇವರ ಅವತಾರವಾದ ಹನುಮ - ಭೀಮರು ಸಂಪೂರ್ಣ ಸಮಾನಬಲರಾದರೂ ಅಸುರಜನ ಮೋಹಾರ್ಥ ಈ ನಟನೆ.

ಇದು ಈ ನಟನೆಯಲ್ಲಿಯೂ ತಿಳಿಯುವ ಸಂದೇಶ:

ನಾವೂ ಭೀಮನಂತೆ, ಭೌತಿಕ ಜೀವನದಲ್ಲಿ ವೇಗದಿಂದ ಅಹಂಕಾರದಿಂದ ಮುನ್ನಡೆದಿದ್ದೇವೆ. ಸ್ವಚ್ಛಂದವಾಗಿ ಸಾಗಲು ನಮಗೆ, ಧರ್ಮ ದೂರ ಕುಳಿತಿದ್ದರೂ ಅವರ ಬಾಲ ಅಡ್ಡ ಇದೆ. ಅದನ್ನು ಎತ್ತಿ ಒಗೆಯೋಣ ಎಂದರೆ ಬಲು ದೃಢವಾಗಿದೆ. ಭೌತಿಕ ಬಲ ಏನಿದ್ದರೂ ಅಧ್ಯಾತ್ಮ ಶಕ್ತಿಯ ಎದುರು ದುರ್ಬಲ.

ಮುಂದೆ ಭೀಮಸೇನ, ಕ್ರೋಧವಶಾದಿ ದೈತ್ಯರನ್ನು ಸಂಹರಿಸಿ ಸೌಗಂಧಿಕ ಪುಷ್ಪವನ್ನು ತಂದು ದ್ರೌಪದಿಗೆ ಇತ್ತಿದ್ದಾನೆ.

ಇದು ಸೌಗಂಧಿಕ ಪುಷ್ಪಾಹರಣದ ಸಂದೇಶ:

ದ್ರೌಪದಿಯು ಪುಷ್ಪವನ್ನು ತರಲು ಹೇಳಿದಳು. ನಮಗೆ ಶಾಸ್ತ್ರ ಸರೋವರದಲ್ಲಿ ಜ್ಞಾನಪುಷ್ಪವನ್ನು ತರಲು ದ್ರೌಪದಿಯ ಸದ್ಬುದ್ಧಿಯು ಪ್ರೇರಿಸುತ್ತದೆ. ಜ್ಞಾನಪುಷ್ಪ ತರಲು ಹೊರಟಾಗ, ಕ್ರೋಧವಶಾದಿ ದೈತ್ಯರು- ದುಷ್ಟ ಶಾಸ್ತ್ರಗಳ ಮೂಲಕ ಬರುವ ಸಂಶಯ ವಿಪರ್ಯಯಗಳು ಎದುರಾಗುತ್ತವೆ. ಕ್ರೋಧವಶ ಮುಂತಾದ ಅಸುರರನ್ನು ಸಂಹರಿಸಿ- ಸಂಶಯ, ವಿಪರ್ಯಯ, ವಿಪರೀತ ಜ್ಞಾನವನ್ನು ಪರಿಹರಿಸಿಕೊಂಡು ತತ್ತ್ವಜ್ಞಾನ ಪುಷ್ಪವನ್ನು ಸಂಪಾದಿಸಬೇಕು.

ಸಂತಾನ ಏತಕ್ಕಾಗಿ ?

ಅದೊಂದು ಕಾಡು. ಅಲ್ಲೊಂದು ದೊಡ್ಡ ಮರ. ಅದರಲ್ಲೊಂದು ಬಳ್ಳಿ, ಅದರ ತುದಿಯಲ್ಲಿ ಕೆಲವರ ನೇತಾಟ. ಕೆಳಗೊಂದು ಹೊಂಡ. ಇಲಿಯಿಂದ ಆ ಬಳ್ಳಿಯ ಕಡಿತ. ಅಪಾಯದ ಅಂಚು. ಜೀವ ಉಳಿಯಲು ಹೊಂಚು.

ಕಾಡಿನಲ್ಲಿ ಜರತ್ಕಾರುವಿನ ಸಂಚಾರ. ಮೇಲಿನ ದೃಶ್ಯದ ಸಾಕ್ಷಾತ್ಕಾರ. ''ತನ್ನ ಪಿತೃಗಳಿಗೆ ಈ ದುರವಸ್ಥೆ ಏಕೆ ?''- ಜರತ್ಕಾರುವಿನ ಸಂದೇಹ. ಗೊಂದಲ, ಕೂಡಲೇ ವಿಚಾರಣೆ. ''ನಮ್ಮ ಪರಂಪರೆಯ ಏಕಮಾತ್ರ ಅವಶೇಷ ಜರತ್ಕಾರು. ಅವನೂ ಅವಿವಾಹಿತ. ಆ ಜರತ್ಕಾರೂ ಮೃತನಾದರೆ ವಂಶ ಸ್ಥಗಿತ. ನಮ್ಮ ಪ್ರಾಚೀನ ಅಧ್ಯಾತ್ಮ ಸಂಸ್ಕೃತಿಯ ಮುಂದಿನ ವಾರಸುದಾರನಾರು ? ಬಳ್ಳಿಯನ್ನು ತಿನ್ನುತ್ತಿರುವ ಈ ಇಲಿ- ಕಾಲನೇ ಆಗಿದ್ದಾನೆ. ಈ ಕಾಲ (ಯಮ) ಜರತ್ಕಾರುವನ್ನು ಕಬಳಿಸಿದರೆ ಮುಂದೆ ಈ ಹೊಂಡದಲ್ಲಿ- ನರಕದಲ್ಲಿ-

ನಮ್ಮೆಲ್ಲರ ಪತನ.''-ಪೂರ್ವಜರಿಂದ ಗಾಬರಿಯ ಉತ್ತರ.

ಜರತ್ಕಾರುವಿಗೆ ಪಶ್ಚಾತ್ತಾಪ. ''ಪಿತೃಗಳೇ! ನಾನೇ ಆ ಪಾತಕಿ. ಕ್ಷಮೆಯಿರಲಿ. ಇನ್ನು ಮದುವೆಯಾಗುವುದು ಖಂಡಿತ. ಸಂತಾನ ಪಡೆಯುವುದು ನಿಶ್ಚಿತ. ತಮ್ಮ ಈ ದುರವಸ್ಥೆಯ ಪರಿಹಾರ ಖಚಿತ''-ಜರತ್ಕಾರುವಿನ ಆಶ್ವಾಸನೆ. ದೃಢ ಸಂಕಲ್ಪ.

ಗೃಹಸ್ಥರಾಗಿ ಮಕ್ಕಳು ಪಡೆಯುವುದು ಕೇವಲ ಭೋಗಕ್ಕಾಗಿಯಲ್ಲ. ಪ್ರಾಚೀನ ಆಧ್ಯಾತ್ಮಿಕ, ಸಾಂಸ್ಕೃತಿಕ ಪರಂಪರೆ ಉಳಿಯಬೇಕು. ಉಳಿಸಬೇಕು-ಇದು ನಮ್ಮ ಜವಾಬ್ದಾರಿ.

''ನಾನು ಹೋದರೆ ನನ್ನ ಆಸ್ತಿಗೆ ಉತ್ತರಾಧಿಕಾರ ಯಾರು? ನಾನು ಗಳಿಸಿದ ಸಂಪತ್ತನ್ನು ಉಣ್ಣುವ ಮುಂದಿನ ವಾರಸುದಾರನಾರು?''-ಇದು ನಮ್ಮ ಚಿಂತೆ.

''ಧಾರ್ಮಿಕ ಪರಂಪರೆ ಉಳಿಯಬೇಕು. ಬೆಳೆಯಬೇಕು. ಮುಂದಿನ ಜನಾಂಗಕ್ಕೆ ನಮ್ಮ ಕಾಲದ ಧರ್ಮ ಸಂಸ್ಕೃತಿ ಮುಟ್ಟಬೇಕು''-ಇದು ಹಿಂದಿನವರ ಚಿಂತೆ.

''ಏಷ್ಟವ್ಯಾಃ ಬಹವಃ ಪುತ್ರಾಃ ಯದಿ-ಏಕೋಽಪಿ- ಗಯಾಂ ವ್ರಜೇತ್'' – ಇದು ಶಾಸ್ತ್ರದ ಉದ್ಗಾರ. ''ಬಹಳ ಮಕ್ಕಳನ್ನು ಪಡೆಯಬೇಕು. ಒಬ್ಬನಾದರೂ ಒಳ್ಳೆಯವನಾಗಿ ಗಯೆಗೆ ಹೋಗಿ ಶ್ರಾದ್ಧ ಮಾಡಿ ಪಿತೃಗಳನ್ನು ಉದ್ಧಾರ ಮಾಡಿಯಾನು'' – ಇದು ಇದರ ಭಾವ.

''ಏಷ್ಟವ್ಯಾಃ ಬಹವಃ ಪುತ್ರಾಃ ಯದಿ ಏಕೋಽಪಿಸುರಾಂ ಪಿಬೇತ್''-ಇದೂ ಶಾಸ್ತ್ರವೇ ಹೇಳಿದ ಮಾತು. ಬಹಳ ಮಕ್ಕಳನ್ನು ಬಯಸಬಾರದು. ಒಬ್ಬನಾದರೂ ಸುರಾಪಾನ ಮಾಡಿದರೆ ? ಇದು ಇದರ ಭಾವ.

''ಬಹಳ ಮಕ್ಕಳನ್ನು ಪಡೆಯಿರಿ ಎನ್ನುವುದೂ ಮುಖ್ಯವಲ್ಲ. ಕಡಿಮೆ ಮಕ್ಕಳನ್ನು ಪಡೆಯಿರಿ ಎನ್ನುವುದೂ ಮುಖ್ಯವಲ್ಲ . ಪಡೆದ ಮಕ್ಕಳು ಒಳ್ಳೆಯವರಾಗುವಂತೆ ಜಾಗ್ರತೆ ವಹಿಸಿರಿ''-ಎನ್ನುವುದು ಶಾಸ್ತ್ರದ ಎಚ್ಚರಿಕೆ.

ಮಕ್ಕಳು ಆದರೆ ಸಾಲದು. ಆದ ಮಕ್ಕಳು ಧಾರ್ಮಿಕರಾಗಿರಬೇಕು. ಅದಕ್ಕಾಗಿ ಮನೆಯಲ್ಲಿ ಧಾರ್ಮಿಕ ವಾತಾವರಣ ನಿರ್ಮಾಣವಾಗಬೇಕು. ಒಬ್ಬ ಕೆಟ್ಟವನಾದರೆ ಅವನ ಹಿಂದಿನ ಏಳು ತಲೆಯ ವರೆಗಿನ ಪಿತೃಗಳಿಗೆ ನರಕ. ಇದೇನು ? ತಪ್ಪು ಯಾರದೋ ? ಶಿಕ್ಷೆ ಯಾರಿಗೋ ?-ಆಶ್ಚರ್ಯ ಬೇಡ. ಮನೆಯಲ್ಲಿ ಉತ್ತಮ ವಾತಾವರಣ ನಿರ್ಮಿಸದಿದ್ದುದು ಈ ಹಿರಿಯರ ತಪ್ಪು. ಈ ದೇಹ ಭಂಗುರ. ದೇಹ ನಾಶವಾದ ಮೇಲೆಯೂ ಉಳಿಯುವುದು ಮೂರು. ''ವಿದ್ಯಾಕರ್ಮಸುತಾಃ'' ೧) ತತ್ತ್ವಜ್ಞಾನ, ೨) ಸತ್ಕರ್ಮ, ೩)ಸತ್ಪುತ್ರ. ಇದು ಮಹಾಭಾರತದಲ್ಲಿ ಭೀಮನಾಡಿದ ಮಾತು. ಉಳಿಯುವ ಈ ಮೂರನ್ನು ನಾವು ಬದುಕಿರುವಾಗಲೇ ಚೆನ್ನಾಗಿ ಸಿದ್ಧಪಡಿಸಿಕೊಂಡರೆ ಮುಂದೆ ನಮಗೆ ಸದ್ಗತಿ. ಇಲ್ಲದಿದ್ದರೆ ದುರ್ಗತಿ. ಆದ್ದರಿಂದ ಸತ್ಪುತ್ರರನ್ನು ಪಡೆದು ಅವರಿಗೆ ಉತ್ತಮ ಸಂಸ್ಕಾರ ಶಿಕ್ಷಣಗಳನ್ನು ಕೊಡುವುದು ಹಿರಿಯರ ಕರ್ತವ್ಯ. ಇದನ್ನು ನಡೆಸದ ಅಮ್ಮ ಮಗುವಿಗೆ ಶತ್ರು; ಅಪ್ಪ ವೈರಿ-ಇದು ಜರತ್ಕಾರು ಕಥೆಯ ಸಂದೇಶ. ಎಲ್ಲರೂ ಅರಿಯಬೇಕಾದ ಉಪದೇಶ. ಮಹಾಭಾರತ ನೀಡುವ ಆದೇಶ.

ರಾಮಾಯಣದಲ್ಲೂ ಇಂತಹದೇ ಒಂದು ಸಂದರ್ಭ. ಅವತಾರ ಕಾರ್ಯ ಸಮಾಪ್ತಿಯಾಗಿ ವೈಕುಂಠಕ್ಕೆ ಶ್ರೀರಾಮಚಂದ್ರನ ಪ್ರಯಾಣ. ತನ್ನ ಕಾಲದ ಯಾರು ಯಾರಿಗೆ ಯಾವ ಯಾವ ಗತಿ ? ರಾಮನು ಕೇಳಿದ, ಎಲ್ಲರ ಕುತೂಹಲ ಕೆರಳಿಸುವ ಪ್ರಶ್ನೆ-ಬ್ರಹ್ಮನಿಗೆ, ಬ್ರಹ್ಮನಿಂದ ವರದಿ ಸಲ್ಲಿಕೆ. ರಾಮಾಯಣ ಕಥೆಯ ಬೆಳವಣಿಗೆಗೆ ಮುಖ್ಯ ಕಾರಣರಾದ ಮೂವರು ಹೆಂಗಸರಲ್ಲಿ ಒಬ್ಬಳಾದ ಕೈಕೇಯಿಯ ಗತಿ ಏನು ? ಎಲ್ಲರಿಗೂ ಕುತೂಹಲ. ದುರ್ಗತಿಯ ಊಹೆ; ಅಪೇಕ್ಷೆ. ''ಕೈಕೇಯಿಗೆ ಸದ್ಗತಿ, ಉತ್ತಮ ಲೋಕ ಪ್ರಾಪ್ತಿ. ಸ್ವರ್ಗಸುಖ'' ಬ್ರಹ್ಮದೇವರ ಉತ್ತರ. ಎಲ್ಲರಿಗೂ ಆಶ್ಚರ್ಯ, ನಿರಾಶೆ. ಭಕ್ತಿಭರಿತನಾದ

ಭರತನಂತಹ ಸತ್ಪುತ್ರನನ್ನು ಪಡೆದ ಆ ತಾಯಿಗೆ ದುರ್ಗತಿಯೇ ? ಸರ್ವಥಾ ಅಸಾಧ್ಯ. ಬ್ರಹ್ಮದೇವರ ಸಮರ್ಥನೆ. ಎಲ್ಲರಿಗೂ ಒಪ್ಪಿಗೆ. ನೆನಪಿರಲಿ-ನೀವು ಕೈಕೇಯಿಯರಾಗಬೇಡಿ. ಭರತನ ತಾಯಂದಿರಾಗಿರಿ. ನಿಮ್ಮ ಮಗ ಭರತನಾಗಲಿ. ಭಾರನಾಗುವುದು ಬೇಡ.

ಮನಸ್ಸಿಲ್ಲದ ಮನಸ್ಸಿನಿಂದ ವಂಶೋದ್ಧಾರಕ್ಕಾಗಿ ಮದುವೆಗೆ ಒಪ್ಪಿದ ಜರತ್ಕಾರು ಹೀಗೆ ಯೋಚಿಸಿದ-''ಕನ್ಯೆಯು ನನ್ನ ಹೆಸರಿನವಳೇ ಆಗಿರಬೇಕು. ಅವಳ ರಕ್ಷಣೆಯ ಭಾರ ನನಗಿರಬಾರದು. ಸರಿಯಾಗಿ ನಡೆದುಕೊಳ್ಳದಿದ್ದರೆ ಅವಳ ಪಾಡು ಅವಳಿಗೆ. ನನ್ನ ಪಾಡು ನನಗೆ'' ಕಾಡಿನಲ್ಲಿ ಜರತ್ಕಾರುವಿನ ಘೋಷಣೆ. ಇವನ ಎಲ್ಲ (ತ)ಕರಾರಿಗೂ ಒಪ್ಪಿ ಬಂದವಳು ವಾಸುಕಿಯ ತಂಗಿ. ಪಾಣಿಗ್ರಹಣವಾಯಿತು. ಕೆಲವು ಕಾಲದ ಸುಖೀ ದಾಂಪತ್ಯ ಜೀವನ.

ಅದಾಗಲೇ ಸೂರ್ಯಾಸ್ತ. ಜರತ್ಕಾರು ನಿದ್ರೆಯಲ್ಲಿ. ಸತಿಯಿಂದ ಸೇವೆ.''ಎಬ್ಬಿಸಲೋ ಬೇಡವೋ ? ಸಂಧ್ಯಾಕಾಲವಾಗಿದೆ; ಮಲಗಿದ್ದಾರೆ. ಎಬ್ಬಿಸದಿದ್ದರೆ ಏಕೆ ಎಬ್ಬಿಸಲಿಲ್ಲ? ಎಂದು ಬೈದರೆ! ಎಬ್ಬಿಸಿದರೆ ನಿದ್ರೆ ಹಾಳಾಯಿತೆಂದು ಕುಪಿತರಾದರೆ...? ದ್ವಂದ್ವ ಪತ್ನಿಗೆ.

ಕೊನೆಗೂ ಧೈರ್ಯ ಮಾಡಿ ''ಸಂಧ್ಯಾಕಾಲ ಪ್ರಾಪ್ತವಾಗಿದೆ; ಏಳಬಹುದೇ ?'' ಮೃದು ಮಧುರ ವಾಗಿ ಕೇಳಿದ್ದಾಳೆ. ಜರತ್ಕಾರುವಿಗೆ ಎಚ್ಚರ! ಸಿಡಿಮಿಡಿ! ಕೋಪ. ನಾನು ಮಲಗಿದ್ದರೆ ಸೂರ್ಯಾಸ್ತವೇ ಆಗುವುದಿಲ್ಲ, ಎಂದು ಬಿರುನುಡಿ. ಸತಿಯ ಪರಿತ್ಯಾಗ.

''ಸಂತಾನ ಭಾಗ್ಯ ದಯಪಾಲಿಸದೇ ಹೀಗೆ ಮಧ್ಯದಲ್ಲಿ ಕೈಬಿಟ್ಟರೆ ಹೇಗೆ? ದಯವಿಟ್ಟು ಕ್ಷಮಿಸಿ''-ಸತಿಯ ಮೊರೆ.

ಮನ ಕರಗಿ, ''ನೀನು ಗರ್ಭಿಣಿಯಾಗಿದ್ದಿ, ಉತ್ತಮ ಸತ್ಪುತ್ರ ನಿನ್ನ ಉದರದಲ್ಲಿ ಬೆಳೆಯು ತ್ತಿದ್ದಾನೆ'' ಅನುಗ್ರಹಿಸಿ ಮಾಮೂಲಿನಂತೆ ಜರತ್ಕಾರು ವನ ಸಂಚಾರಕ್ಕೆ ತೆರಳಿದ್ದಾನೆ.

ಶ್ರೀಕೃಷ್ಣನ ರಾಜತಂತ್ರ

ಮಹಾಭಾರತದ ಅರಿವು ಇದ್ದವರಿಗೆಲ್ಲ ಶ್ರೀಕೃಷ್ಣನ ಪರಿಚಯ ಇದ್ದೇ ಇರುತ್ತದೆ. ಇಡೀ ಮಹಾಭಾರತ ಕಥೆಯ ಸೂತ್ರಧಾರನಾದ ಕೃಷ್ಣನನ್ನೇ ಮರೆತರೆ ಮಹಾಭಾರತವನ್ನೇ ಮರೆತಂತೆ. ಮಹಾಭಾರತದಲ್ಲಿ ಶ್ರೀಕೃಷ್ಣನ ವಿಶ್ವರೂಪವೇ ಅಡಗಿದೆ. ಪ್ರೀತಿಯ ಸ್ನೇಹಿತನಾಗಿ, ತಮ್ಮನಾಗಿ, ಪತಿಯಾಗಿ, ದುಷ್ಟರಿಗೆ ಸಿಂಹಸ್ವಪ್ನನಾಗಿ, ಸಾರಥಿಯಾಗಿ, ಉತ್ತಮ ತತ್ತ್ವಜ್ಞಾನಿಯಾಗಿ, ಅಸಾಧಾರಣ ರಾಜತಂತ್ರಜ್ಞನಾಗಿ ಕೃಷ್ಣ ಕಾಣಿಸಿಕೊಳ್ಳುತ್ತಾನೆ-ಮಹಾಭಾರತದಲ್ಲಿ. ಕಷ್ಟ ಪರಂಪರೆಯನ್ನೆಲ್ಲ ಧೈರ್ಯವಾಗಿ ಎದುರಿಸಿ ಶಾಶ್ವತ ಕೀರ್ತಿಯನ್ನು, ಉತ್ತಮ ಸ್ಥಾನವನ್ನು ಪಾಂಡವರು ಪಡೆದದ್ದು, ಸುಖದಲ್ಲೇ ಓಲಾಡುತ್ತಿದ್ದರೂ ಕೌರವರು ಸೋಲು ಉಂಡದ್ದೂ ಶ್ರೀಕೃಷ್ಣನ ಉತ್ತಮ ರಾಜತಂತ್ರದ ಪರಿಣಾಮ ವೆನ್ನುವುದು ಅತ್ಯಂತ ಸ್ಪಷ್ಟ.

ಎಲ್ಲ ಶಾಸ್ತ್ರಗಳೂ, ಪುರಾಣಗಳೂ ಧರ್ಮವನ್ನು ಸಾರಿ ಹೇಳುತ್ತಿದ್ದರೂ ಅದನ್ನು ಆಚರಿಸದೇ ಅಧರ್ಮನಿಷ್ಠರಾದ ನಾವು ಧರ್ಮಸಂಸ್ಥಾಪಕನಾದ ಶ್ರೀಕೃಷ್ಣನ ಧಾರ್ಮಿಕತೆ, ನೈತಿಕತೆಗಳಲ್ಲಿ ಸಂಶಯ ಪಡುವ 'ಬುದ್ಧಿಜೀವಿ'ಗಳು. ಇತಿಹಾಸದಿಂದ ಪಾಠ ಕಲಿಯುವ ಬುದ್ಧಿ ನಮಗೆ ಇದ್ದಿದ್ದರೆ ಖಂಡಿತ ವಾಗಿಯೂ ನಾವು ಯವನರ ಆಳ್ವಿಕೆಯ ಕಹಿಯನ್ನು ಅನುಭವಿಸುತ್ತಿರಲಿಲ್ಲ. ಶ್ರೀಕೃಷ್ಣನು ತೋರಿದ ರಾಜ ತಂತ್ರ ನಮ್ಮ ಇತಿಹಾಸದಲ್ಲಿ ಮರುಕಳಿಸಲೇ ಇಲ್ಲ. ಅಪವಾದವಾಗಿ ಶಿವಾಜಿಯೊಬ್ಬ ಅದನ್ನು ಬಳಸಿ ಯಶಸ್ವಿ ಯಾದನು.

ಅತ್ಯಂತ ಪ್ರಬಲನಾಗಿದ್ದ ಜರಾಸಂಧ ಮಧುರೆಯಂತಹ ಸಣ್ಣ ರಾಜ್ಯದ ಮೇಲೆ ಆಕ್ರಮಣ

ನಡೆಸಿದಾಗ ಶ್ರೀಕೃಷ್ಣ ತೋರಿದ ರಾಜತಂತ್ರ ಅನುಪಮ. ನಮ್ಮ 'ಬುದ್ಧಿಜೀವಿ'ಗಳಿಗೆ ಹೊಳೆಯದ ಉತ್ತಮ ತಂತ್ರ. ಮಧುರೆಯ ಮೇಲೆ ಜರಾಸಂಧನ ಮುತ್ತಿಗೆ ಅನೇಕ ಬಾರಿ. ಪ್ರತಿ ಬಾರಿಗೂ ಭಾರೀ ಸೈನ್ಯ. ಪ್ರತಿಸಲವೂ ಶ್ರೀಕೃಷ್ಣನಿಂದ ಪರಾಭವ, ಪಲಾಯನ. ಜನರಕ್ಷಣೆ. ಎಲ್ಲೆಲ್ಲೋ ಇದ್ದ ದುಷ್ಟರನ್ನೆಲ್ಲ ಗುಂಪು ಕಟ್ಟಿಕೊಂಡು ಕೃಷ್ಣನಲ್ಲಿಗೆ ಜರಾಸಂಧ ಬಂದಾಗ, ತನ್ನ ಭೂಭಾರ ಹರಣ ಕಾರ್ಯದಲ್ಲಿ ಜರಾಸಂಧನ ಈ ಸಹಕಾರವನ್ನು ಕಂಡು ಕೃಷ್ಣನಿಗೆ ಸರಿಬಂದಿರಬೇಕು. ಅದಕ್ಕೆಂದೇ ಅವನು ಜರಾಸಂಧನನ್ನು ಕೊಲ್ಲದೇ ಓಡಿಸುತ್ತಿದ್ದ. ೧೮ ಬಾರಿ ಆಕ್ರಮಣ ಮಾಡಿದಾಗಲೂ ಅವನನ್ನು ಸಂಹರಿಸಲಿಲ್ಲ. ಒಂದೊಂದು ಬಾರಿಗೂ ಒಂದೊಂದು ರೀತಿಯ ರಾಜತಂತ್ರ ಶ್ರೀಕೃಷ್ಣನದು.

ಒಮ್ಮೆ ಜರಾಸಂಧ ಬಂದಾಗ ಶ್ರೀಕೃಷ್ಣ ಗೋಮಾಂತಕ ಪರ್ವತಕ್ಕೆ ಓಡಿ ಬಂದು ಅಡಗಿ ಕುಳಿತನು. ಹಿಂದೆಯೇ ಓಡಿ ಬಂದ ಜರಾಸಂಧನಿಗೆ ಕೃಷ್ಣ ಕಾಣಲಿಲ್ಲ. ಗೋಮಾಂತಕ ಪರ್ವತವನ್ನೆಲ್ಲ ಹುಡುಕಿದ. ಅನೇಕ ದಿನಗಳವರೆಗೆ ಜರಾಸಂಧನ ಸೈನ್ಯ ಆ ಪರ್ವತಕ್ಕೆ ಮುತ್ತಿಗೆ ಹಾಕಿದವು. ಅದರಿಂದಾಗಿ ಆಹಾರ ಸಂಗ್ರಹ ಮುಂತಾದ ವ್ಯವಸ್ಥೆಗಳಿಗೆ ಸಂಚಕಾರ. ಹೀಗೆ ಅವ್ಯವಸ್ಥೆ ಉಂಟಾಗಲು ಹಠಾತ್ತನೆ ಶ್ರೀಕೃಷ್ಣ ಆಕ್ರಮಿಸಿದ. ಜರಸಂಧ ಕಂಗಾಲು, ಗೊಂದಲ, ಕಾಲುಕಿತ್ತ ಓಟ. ಇದೇ ರಾಜತಂತ್ರವನ್ನು ಮತ್ತೊಮ್ಮೆ ಅನುಸರಿಸಿ ಯಶಸ್ವಿಯಾದವನು ಶಿವಾಜಿ. ಔರಂಗಜೇಬನು ಆಕ್ರಮಣ ಮಾಡಿದಾಗ ರಾಯಗಡದ ಪರ್ವತದಲ್ಲಿ ಅಡಗಿ ಕುಳಿತಿದ್ದು ಒಮ್ಮೆಲೇ ದಂಡೆತ್ತಿ ಶತ್ರುಸೈನ್ಯವನ್ನು ಸದೆಬಡಿದನು- ಛತ್ರಪತಿ ಶಿವಾಜಿ.

ಕೃಷ್ಣನಿಂದ ಪರಾಭವಗೊಂಡ ಜರಾಸಂಧ ಗಾಂಧಾರ ದೇಶದ- ಈಗಿನ ಅಫಘಾನಿಸ್ಥಾನದ ದೊರೆಯಾಗಿದ್ದ ಕಾಲ ಯವನನನ್ನು ೩ ಕೋಟಿ ಸೈನ್ಯದೊಂದಿಗೆ ಬಂದು ಸಹಕರಿಸಬೇಕೇಂದು ಕೇಳಿಕೊಂಡ, ತನ್ನ ಸ್ವಾರ್ಥಕ್ಕಾಗಿ ದೇಶಪ್ರೇಮವನ್ನು ಬದಿಗೊತ್ತಿ ವಿದೇಶಿಯರ ಸಹಾಯ ಪಡೆದು ಮಾತೃಭೂಮಿಯನ್ನೇ ದೋಚಲು ಹೇಸದ ಮಹಾಪಾತಕಿಯಾದ ಜರಾಸಂಧ. ಪೃಥ್ವೀರಾಜನ ವಿರುದ್ಧ ಸೇಡು ತೀರಿಸಿಕೊಳ್ಳಲು ದೇಶಪ್ರೇಮವನ್ನು ಕಡೆಗಣಿಸಿ ವಿದೇಶೀ ರಾಜನ ಸಹಾಯ ಯಾಚಿಸಿದ ಜಯಚಂದ್ರನಂತೆ. ಸಣ್ಣ ಮಧುರೆಯ ಮೇಲೆ ಇಷ್ಟು ದೊಡ್ಡ ಸೈನ್ಯದ ಆಕ್ರಮಣ ! ಕೃಷ್ಣ ಉಪಾಯ ಹೂಡಿದ. ಸಾಗರದ ಮಧ್ಯೆ ವಿಶ್ವಕರ್ಮನಿಂದ ದ್ವಾರಕೆಯನ್ನು ಕಟ್ಟಿಸಿದ. ಮಧುರೆಯ ಎಲ್ಲ ಜನರನ್ನೂ ಅಲ್ಲಿಗೆ ರವಾನಿಸಿದ. ತಾನೊಬ್ಬನೇ ಮಧುರೆಯಲ್ಲಿ ಉಳಿದುಕೊಂಡ. ಈ ರೀತಿಯ ಅದ್ಭುತವಾದ ''ರಾಜಧಾನಿ'' ಬದಲಾವಣೆ ನಂತರದ ಇತಿಹಾಸದಲ್ಲಿ ಎಲ್ಲಿಯೂ ನಡೆದಿಲ್ಲ. ತೊಘಲಕನು ಈ ತಂತ್ರವನ್ನು ಬಳಸಲೆತ್ನಿಸಿದರೂ ವಿಫಲನಾದನು. ರಾಜಧಾನಿಯ ಬದಲಾವಣೆಯಿಂದ ಲಕ್ಷಾಂತರ ಜನರ ಸಂರಕ್ಷಣೆ. ಅಪಾರ ಸೈನ್ಯದ ಜೊತೆಗೆ ಬಂದ ಕಾಲಯವನನು ಶೂನ್ಯವಾಗಿದ್ದ ಮಧುರೆಯನ್ನು ಕಂಡು ನಿಬ್ಬೆರಗಾದ. ಯವನನು ಬರುವಾಗ ಕೃಷ್ಣ ಓಡಿದನು. ಇದನ್ನು ಕಂಡ ಯವನನು, ಕೃಷ್ಣನು ಹೆದರಿ ಪಲಾಯನ ಮಾಡುತ್ತಿದ್ದಾನೆ ಎಂದು ಭಾವಿಸಿ ಬೆಂಬಿಡದೇ ಓಡಿದನು. ಶ್ರೀಕೃಷ್ಣನು ಗುಹೆಯೊಂದನ್ನು ಹೊಕ್ಕಿ ಅಲ್ಲಿ ಮಲಗಿದ್ದ ಮುಚುಕುಂದನಿಂದ ಕಾಲಯವನನ್ನು ಸಂಹಾರಗೈದನು. ಸಂಹಾರದ ವಿಷಯ ತಿಳಿದ ಸೈನ್ಯ ಅಸ್ತವ್ಯಸ್ತಗೊಂಡಾಗ ಕೃಷ್ಣನಿಂದ ಹಠಾತ್ತನೆ ಆಕ್ರಮಣ. ಎಲ್ಲ ಸೈನ್ಯವೂ ಧ್ವಂಸ.

''ಕಂಟಕಂ ಕಂಟಕೇ ನೈವ'' ಎಂಬ ನ್ಯಾಯ ಶ್ರೀಕೃಷ್ಣನದು. ಅಧರ್ಮನಿಷ್ಠರಾದ ದುಷ್ಟರ ಸಂಹಾರ ಮಾಡುವಾಗ ಧಾರ್ಮಿಕತೆಯು ಬೇಡ. ವಿಧರ್ಮೀಯರು ನಮ್ಮ ದೇಶವನ್ನು ಆಕ್ರಮಿಸಿದಾಗ ನಮ್ಮ ದೇಶದ ರಜಪೂತರು ರಾಜನೈತಿಕ ತಂತ್ರ ಬಳಸದೇ ಅತಿಯಾದ ಧಾರ್ಮಿಕತೆಯನ್ನು ತೋರಿಸಿ ಅವರ ಆಳ್ವಿಕೆ ಅನುಭವಿಸುವಂತೆ ಮಾಡಿದರು. ರಣರಂಗದಲ್ಲಿ ನೆಲದಲ್ಲಿ ಹೂತಿದ್ದ ರಥದ ಚಕ್ರವನ್ನು ಎತ್ತುತ್ತಿರುವಾಗಲೇ ಕರ್ಣನ ಮೇಲೆ ಬಾಣ ಬಿಡುವಂತೆ ಕೃಷ್ಣ ಅರ್ಜುನನಿಗೆ ಆಜ್ಞೆ ಮಾಡಿದನು. ಧರ್ಮಸಂಸ್ಥಾಪಕ ಶ್ರೀಕೃಷ್ಣನು ಇಂತಹ ಅಧರ್ಮ ಪ್ರಚೋದನೆ ನೀಡುವುದೇ ? ಎಂದು ಕರ್ಣ ವ್ಯಂಗ್ಯವಾಡಿದಾಗ ಶ್ರೀಕೃಷ್ಣನು

ಕೇಳಿದನು - ''ಅಭಿಮನ್ಯುವನ್ನು ಹಿಂದಿನಿಂದ ಬಂದು ಕೊಲ್ಲುವಾಗ ಈ ಧರ್ಮಪ್ರಜ್ಞೆ ಎಲ್ಲಿ ಹೋಗಿತ್ತು ? ದುರುಳ ದುರ್ಯೋಧನನು ಸಭೆಯಲ್ಲಿ ದ್ರೌಪದಿಯ ಸೀರೆ ಸೆಳೆಸಿದಾಗ ನಿನ್ನ ಧರ್ಮ ಪ್ರಜ್ಞೆಗೆ ತುಕ್ಕು ಹಿಡಿದಿತ್ತೆ ? ಪಾರ್ಥ! ಇಂತಹ ಅಧರ್ಮಿಯನ್ನು ಅಧರ್ಮದಿಂದ ಕೊಲ್ಲುವುದರಲ್ಲಿ ಯಾವ ಅನ್ಯಾಯವೂ ಇಲ್ಲ. ಹೂಡು ಬಾಣ.'' ಅಪ್ಪಣೆಯಿತ್ತನು ಶ್ರೀಕೃಷ್ಣನು ಗಾಂಡೀವಿಗೆ.

ಕಳ್ಳನನ್ನು ಹಿಡಿಯುವಾಗ ಹಿಂದಿನಿಂದ ಹಿಡಿಯುವುದು ಅನ್ಯಾಯವೆಂದು ಭಾವಿಸಿ ಧರ್ಮಮಾರ್ಗವೆಂದು ಮುಂದಿನಿಂದ ಹೋದರೆ ಕಳ್ಳ ಸಿಗದೇ ಕರ್ತವ್ಯಲೋಪವಾಗುತ್ತದೆ. ಎಚ್ಚರಿಕೆ ! ಧಾರ್ಮಿಕರಲ್ಲಿ ಮಾತ್ರ ಧರ್ಮಮಾರ್ಗ ಅನುಸರಿಸಬೇಕು. ಅನ್ಯಾಯವನ್ನು ಮಾಡುವವರಿಗೆ ಅನ್ಯಾಯದಿಂದಲೇ ಉತ್ತರಿಸಬೇಕು. ಅಲ್ಲಿ ನ್ಯಾಯ ಹುಡುಕುತ್ತ ಕುಳಿತರೆ ಅಪರಾಧಿ ಪಾರಾಗುತ್ತಾನೆ.

ಖಾಂಡವ ದಹನ

ಶ್ವೇತಕಿ ಎಂಬ ರಾಜ ಹನ್ನೆರಡು ವರ್ಷಗಳ ಕಾಲ ದೊಡ್ಡ ಯಾಗ ನಡೆಸಿದ್ದಾನೆ. ಈ ದೀರ್ಘ ಯಾಗದಲ್ಲಿ ಒಂದೇ ಸಮನೇ ಹವಿಸ್ಸನ್ನು ಸ್ವೀಕರಿಸಿದ ಅಗ್ನಿಗೆ ಒಂದು ರೀತಿಯ ಜಾಡ್ಯ ಉಂಟಾಗಿದೆ. ಹೀಗಾಗಿ ಇತರ ಯಜ್ಞಗಳ ಹವಿಸ್ಸನ್ನು ಸ್ವೀಕರಿಸಲು ಸಾಧ್ಯವಾಗುತ್ತಿಲ್ಲ. ಆಗ ಬ್ರಹ್ಮನಲ್ಲಿ ಅಗ್ನಿದೇವ ಮೊರೆಯಿಟ್ಟಿದ್ದಾನೆ. ''ಖಾಂಡವ ವನವನ್ನು ದಹಿಸು; ಅಲ್ಲಿರುವ ಔಷಧದ ಮೂಲಿಕೆಗಳು, ಪ್ರಾಣಿಗಳ ಮೇಧಸ್ಸು ನಿನ್ನ ಒಳಗೆ ಹೋಗಿ, ನೀನು ಮೊದಲಿನ ಶಕ್ತಿ, ಪ್ರಕಾಶಗಳನ್ನು ಹೊಂದುವಿ ಎಂದು ಬ್ರಹ್ಮನ ಉಪದೇಶ.

ಆದರೆ ಆ ಖಾಂಡವ ವನದಲ್ಲಿ ಇಂದ್ರನ ಮಗನಾದ ತಕ್ಷಕನ ಗೆಳೆಯ ಅಶ್ವಸೇನನೂ ವಾಸವಾಗಿದ್ದಾನೆ. ಖಾಂಡವವನವನ್ನು ದಹಿಸಲು ತೊಡಗಿದಾಗ ಅಶ್ವಸೇನನ ರಕ್ಷಣೆಗಾಗಿ ಇಂದ್ರ ಮಳೆ ಗರೆದರೆ ? ಅಗ್ನಿಗೆ ಭೀತಿ. ಅದಕ್ಕಾಗಿ ಅರ್ಜುನನಲ್ಲಿ ಗಾಂಡೀವ ಧನುಸ್ಸನ್ನು ನೀಡಿ, ಇಂದ್ರನ ಮಳೆಯಿಂದ ರಕ್ಷಣೆ ಕೊಡಬೇಕು. ದಹನ ಕಾರ್ಯ ನಿರ್ವಿಘ್ನವಾಗಬೇಕೆಂದು ಪ್ರಾರ್ಥನೆ. ಕೃಷ್ಣನ ಸಹಾಯ, ಅನುಗ್ರಹದಿಂದ ಅರ್ಜುನನು ಗಾಂಡೀವ ಧನುಸ್ಸಿನಿಂದ ಬಾಣಗಳ ಛಾವಣಿಯನ್ನು ನಿರ್ಮಿಸಿ ಇಂದ್ರನ ಮಳೆಯಿಂದ ರಕ್ಷಣೆ ನೀಡಿ ಖಾಂಡವ ವನ ದಹನ ನಿರ್ವಿಘ್ನವಾಗಿಸಿದನು.

ಖಾಂಡವವನ ದಹನವೂ ಆಯಿತು. ಅಶ್ವಸೇನನೂ ರಕ್ಷಿತನಾದ.

ತನಗೆ ಉಪಕರಿಸಿದ ಕೃಷ್ಣ - ಅರ್ಜುನರಿಗೆ ಅಗ್ನಿದೇವ ಕೃತಜ್ಞನಾಗಿದ್ದಾನೆ.

ಅನಾದಿಯಾದ ಸಂಸಾರದಲ್ಲಿ ನಾವು ಸಂಪಾದಿಸಿಕೊಂಡಿರುವ ಕರ್ಮಗಳೇ ದೊಡ್ಡ ಖಾಂಡವ ವನ. ಇದರ ದಹನವೂ ಆಗಬೇಕು. ಆ ವನದಲ್ಲಿ ಅಸುರರೂ ಇದ್ದಂತೆ ನಮ್ಮಲ್ಲಿ ದುಷ್ಟ ಕರ್ಮಗಳೂ ತುಂಬಿವೆ. ಇದರ ದಹನವಾಗಲು ಕೃಷ್ಣ ಮತ್ತು ಅರ್ಜುನರ ಸಹಾಯ ಬೇಕು. ಅರ್ಜುನ - ನರ, ನಾವು ನರರು. ನರರಾದ ನಾವು ನಾರಾಯಣನ ಅನುಗ್ರಹದಿಂದ ತತ್ವಜ್ಞಾನವನ್ನು ಪಡೆಯಬೇಕು. ಆ ತತ್ವಜ್ಞಾನವೆಂಬ ಅಗ್ನಿಯು ಈ ಎಲ್ಲ ಕರ್ಮಗಳನ್ನೂ ನಾಶಗೊಳಿಸುತ್ತದೆ. ನಮ್ಮ ಪ್ರಯತ್ನ, ಭಗವಂತನ ಅನುಗ್ರಹದಿಂದ ತತ್ವಜ್ಞಾನವನ್ನು ಪಡೆದು ಕರ್ಮದ ಖಾಂಡವ ವನವನ್ನು ಭಸ್ಮಮಾಡಿ ಸಂಸಾರದಿಂದ ಪಾರಾಗಬೇಕು. ಇದನ್ನೇ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ನುಡಿದಿದ್ದಾನೆ : ''ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ಅರ್ಜುನ!''

ಧರ್ಮನ ಪ್ರಶ್ನೆ

ಬ್ರಾಹ್ಮಣನೊಬ್ಬ ಯಾಗಾಗ್ನಿಯನ್ನು ಉತ್ಪಾದಿಸುವ ಅರಣಿಯನ್ನು ಮರವೊಂದಕ್ಕೆ ಸಿಕ್ಕಿಸಿದ್ದಾನೆ.

ಜಿಂಕೆಯೊಂದು ಆ ಮರಕ್ಕೆ ತಲೆ ಉಜ್ಜಿಕೊಳ್ಳುತ್ತಿದೆ. ಆ ಅರಣಿಯ ಗಂಟು ಜಿಂಕೆಯ ಕೊಂಬೆಗೆ ಸಿಕ್ಕಿಕೊಂಡಿದೆ. ಅದರ ಸಹಿತ ಜಿಂಕೆ ಓಡಿದೆ. ವಿಹ್ವಲಗೊಂಡ ಬ್ರಾಹ್ಮಣ ಸಮೀಪದಲ್ಲಿದ್ದ ಪಾಂಡವರಲ್ಲಿ ಬಂದು, ಜಿಂಕೆಯಿಂದ ಅರಣಿಯನ್ನು ದೊರಕಿಸಿಕೊಡುವಂತೆ ಪ್ರಾರ್ಥಿಸಿದ್ದಾನೆ. ಪಾಂಡವರೈವರೂ ಧನುರ್ಧಾರಿಗಳಾಗಿ ಜಿಂಕೆಯನ್ನು ಬೆನ್ನಟ್ಟಿದ್ದಾರೆ. ಅತಿವೇಗದಲ್ಲಿ ಒಮ್ಮೊಮ್ಮೆ ಅದೃಶ್ಯವಾಗಿಯೂ ಜಿಂಕೆ ಓಡುತ್ತಿದೆ. ಅದನ್ನು ಹಿಂಬಾಲಿಸಿದ ಪಾಂಡವರು ಬಹಳ ದೂರ ಬಂದಿದ್ದಾರೆ. ಒಂದು ಮರದ ಬುಡಕ್ಕೆ ಬಂದು ನಿಂತಿದ್ದಾರೆ, ಬಳಲಿದ್ದಾರೆ, ಬಾಯಾರಿಕೆಯಾಗಿದೆ. ಸಹದೇವ ಮರದ ತುದಿಯೇರಿದಾಗ ದೂರದಲ್ಲಿ ಸರೋವರವೊಂದು ಕಂಡಿದೆ. ಅಣ್ಣಂದಿರಿಗೆ ನೀರು ತರಲು ಹೋದ ಸಹದೇವ. ಅವನನ್ನು ಹುಡುಕಲು ಮತ್ತೊಬ್ಬ. ಅವನನ್ನು ಹುಡುಕಲು ಇನ್ನೊಬ್ಬ; ಹೀಗೆ ಎಲ್ಲರೂ ಹೋಗಿದ್ದಾರೆ. ಹೋದವರಾರೂ ಹಿಂತಿರುಗದಿದ್ದಾಗ ಧರ್ಮರಾಜನೇ ಹೊರಟಿದ್ದಾನೆ, ಸರೋವರದೆಡೆಗೆ.

ಅಲ್ಲಿ ಹೃದಯ ವಿದ್ರಾವಕ ದೃಶ್ಯ ಕಂಡು ಯುಧಿಷ್ಠಿರ ಕಳವಳಗೊಂಡಿದ್ದಾನೆ. ಸರೋವರವನ್ನು ಸಮೀಪಿಸುತ್ತಿದ್ದಂತೆ ''ಕೇಳುವ ಪ್ರಶ್ನೆಗೆ ಉತ್ತರಿಸಿ ನೀರು ಕುಡಿ. ಇಲ್ಲದಿದ್ದರೆ ನಿನ್ನ ತಮ್ಮನವರ ಗತಿಯೇ ನಿನಗೂ'' - ಅಶರೀರವಾಣಿಯೊಂದು ಯುಧಿಷ್ಠಿರನನ್ನು ತಡೆಗಟ್ಟಿದೆ. ಬೆಚ್ಚಿ ಬಿದ್ದ ಧರ್ಮರಾಜ ಸ್ತಬ್ಧನಾಗಿದ್ದಾನೆ. ಯಕ್ಷನ ಪ್ರಶ್ನೆಯ ವೇಗದಲ್ಲಿಯೇ ಉತ್ತರವೂ ಬಂದಿದೆ - ಧರ್ಮರಾಜನಿಂದ.

''ಉತ್ತರಗಳಿಂದ ಪ್ರೀತನಾಗಿದ್ದೇನೆ. ಮೂರ್ಛೆಗೊಂಡ ಈ ನಾಲ್ವರು ತಮ್ಮಂದಿರಲ್ಲಿ ಯಾರನ್ನು ಬದುಕಿಸಲಿ ? - ಯಕ್ಷ ಕೇಳಿದ್ದಾನೆ.

''ನಕುಲನನ್ನು ಬದುಕಿಸು'' - ಧರ್ಮರಾಜನ ಉತ್ತರ.

ಮಹಾಪರಾಕ್ರಮಿಯಾದ ಭೀಮಸೇನನನ್ನೋ ಅತಿರಥನಾದ ಅರ್ಜುನನನ್ನೋ ಬದುಕಿಸುವಂತೆ ಕೇಳುತ್ತಾನೆಂದು ಊಹಿಸಿದ ಯಕ್ಷನಿಗೆ ಆಶ್ಚರ್ಯ.

ಕುಂತಿಯ ಮಗನಾಗಿ ನಾನಿರುವಾಗ ಮಾದ್ರಿಯ ಮಗನಾದ ನಕುಲ ಬದುಕುವುದು ನ್ಯಾಯಸಮ್ಮತ ಎನ್ನುವುದು ಧರ್ಮರಾಜನ ವಿಚಾರ.

ಕೂಡಲೇ ಯಕ್ಷರೂಪದಲ್ಲಿದ್ದ ಯಮಧರ್ಮರಾಜ ಪ್ರತ್ಯಕ್ಷ. ''ನಾನು ಮಾಡಿದ ಪರೀಕ್ಷೆಯಲ್ಲಿ ನೀನು ಉತ್ತೀರ್ಣ. ನಿನ್ನ ನಾಲ್ವರು ತಮ್ಮಂದಿರೂ ಎಚ್ಚರಗೊಳ್ಳಲಿ. ಆ ಸರಣಿಯನ್ನು ಕೊಂಡು ಹೋದ ಜಿಂಕೆ ನಾನೇ'' - ಯಮನ ಅನುಗ್ರಹ. ಧರ್ಮರಾಜನಿಗೆ ಸಂತಸ.

ವಿಷಯ ಪದಾರ್ಥಗಳೇ ಸುಂದರ ಸರೋವರ. ಬಾಯಾರಿದ ನಾವು ಇದರ ಸಮೀಪಕ್ಕೆ ಭೋಗಿಸಲು ಬಂದಿದ್ದೇವೆ. ಧರ್ಮದ ಪ್ರಶ್ನೆಗೆ ಉತ್ತರಿಸದೇ ಭೋಗದಲ್ಲಿ ಪ್ರವೃತ್ತರಾಗಿದ್ದೇವೆ. ನಕುಲಾದಿಗಳಂತೆ ಮೂರ್ಛೆ ಬಿದ್ದಿದ್ದೇವೆ. ಜ್ಞಾನ ಕಳೆದುಕೊಂಡಿದ್ದೇವೆ.

ಧರ್ಮರಾಜನಂತೆ ಧರ್ಮದ ಪ್ರಶ್ನೆಗೆ ಉತ್ತರಿಸಿದರೆ ನಾವು ಬದುಕುತ್ತೇವೆ. ಉಳಿದವರನ್ನೂ ಬದುಕಿಸುತ್ತೇವೆ.

ಮೂರು ಬಗೆಯವರು

ಚಿತ್ರಾಂಗದ, ವಿಚಿತ್ರವೀರ್ಯರು ತರುಣರಾಗಿದ್ದಾರೆ. ಭೀಷ್ಮನು ಅವರಿಗೆ ವಿವಾಹದ ನಿರ್ಧಾರ ನಡೆಸಿದ್ದಾನೆ. ಕಾಶೀರಾಜನ ಸ್ವಯಂವರಕ್ಕೆ ಪ್ರವೇಶ. ಪಣಗೆದ್ದು ಅವನ ಮಕ್ಕಳಾದ ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಕರೆತಂದಿದ್ದಾನೆ. ಸಾಲ್ವ ರಾಜನನ್ನು ವರಿಸಿದ್ದ ಅಂಬೆಯನ್ನು ಅವನಲ್ಲಿಗೇ ಕಳಿಸಿದ್ದಾನೆ. ಗಂಧರ್ವರಾಜನಿಂದ ಚಿತ್ರಾಂಗದ ಮೃತನಾಗಿದ್ದ ಪ್ರಯುಕ್ತ ವಿಚಿತ್ರವೀರ್ಯನಿಗೆ ಇಬ್ಬರನ್ನೂ ಕೊಟ್ಟಿದ್ದಾನೆ.

ನವ ವಧುಗಳೊಂದಿಗೆ ಮೋಹದಿಂದ ಅತಿ ಕಾಮಾಸಕ್ತನಾಗಿ ವಿಚಿತ್ರವೀರ್ಯ ಮೃತನಾದ.

ಮಕ್ಕಳಿಲ್ಲದೆ ವಿಧವೆಯರಾದರು ಅಂಬಿಕೆ, ಅಂಬಾಲಿಕೆಯರು.

ತಾಯಿ ಸತ್ಯವತೀ ರಾಜ್ಯಭಾರದ ನಿರ್ವಹಣೆಗಾಗಿ ಪುತ್ರನನ್ನು ಒಪ್ಪಿಸಿ ಪುತ್ರರಾದ ವೇದವ್ಯಾಸರನ್ನು ನೆನೆದಿದ್ದಾಳೆ.

ವೇದವ್ಯಾಸರು ಪ್ರತ್ಯಕ್ಷ. ಸತ್ಯವತಿಯ ನಿವೇದನೆ. ವೇದವ್ಯಾಸರಿಂದ ಒಪ್ಪಿಗೆ. ದರ್ಶನ ಮಾತ್ರದಿಂದ ಸಂತಾನ ಪ್ರಾಪ್ತಿ.

ಅಂಬಿಕೆ ವೇದವ್ಯಾಸರ ಕಂಡು ಹೆದರಿ ಕಣ್ಣು ಮುಚ್ಚಿದ್ದಾಳೆ. ಕುರುಡ ಧೃತರಾಷ್ಟ್ರ ಜನಿಸಿದ್ದಾನೆ.

ಅಂಬಾಲಿಕೆ ಹೆದರಿ ಬಿಳಿಚಿಕೊಂಡಿದ್ದಾಳೆ. ಬಿಳುಪಿನ ಪಾಂಡು ಹುಟ್ಟಿದ್ದಾನೆ.

ಸತ್ಯವತಿಯ ಒತ್ತಾಯಕ್ಕೆ ಮಣಿದ ಅಂಬಾಲಿಕೆ ದಾಸಿಯನ್ನು ಕಳುಹಿಸಿದ್ದಾಳೆ. ಭಕ್ತಿಭಾವದಿಂದ ದರ್ಶನ ಮಾಡಿದ ದಾಸಿಯಿಂದ ಧರ್ಮಿಷ್ಠ ವಿದುರ ಜನಿಸಿದ್ದಾನೆ.

ನಮ್ಮಲ್ಲಿ ಕೆಲವರು ದೇವರನ್ನು ನೋಡಲು ಸಿದ್ಧರೇ ಇಲ್ಲ. ಇವರು ತಾಮಸರು. ಧೃತರಾಷ್ಟ್ರನ ಹಾಗೆ.

ಕೆಲವರಂತೂ ದೇವರನ್ನು ಕಂಡು ಹೆದರುತ್ತಾರೆ. ಪ್ರೀತಿಸುವುದಿಲ್ಲ. ಇವರು ರಾಜಸರು. ಪಾಂಡುವಿನ ಹಾಗೆ.

ಕೆಲವರು ಭಕ್ತಿಯಿಂದ ಭಗವಂತನನ್ನು ಕಾಣುತ್ತಾರೆ. ಇವರು ಸಾತ್ವಿಕರು ವಿದುರನ ಹಾಗೆ.

ಇಂದು ಪಾಂಡು ಧೃತರಾಷ್ಟ್ರರ - ರಜಸ್ತಮೋಗುಣಗಳದೇ ಸಾಮ್ರಾಜ್ಯ. ಸತ್ವಗುಣ ವಿದುರನಂತೆ ದಾಸ್ಯಕ್ಕೆ ಬಿದ್ದಿದೆ.

ಚಿರಂಜೀವಿ ವಿಭೀಷಣ

ಮಹಾಭಾರತದಲ್ಲಿರದ ವಿಚಾರ ಬೇರೆಡೆ ಇಲ್ಲ. ಬೇರೆಡೆ ಇರುವ ಎಲ್ಲ ವಿಚಾರ ಮಹಾಭಾರತ ದಲ್ಲಿದೆ. ''ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ಕ್ವಚಿತ್''. ಮಹಾಭಾರತದಲ್ಲಿಯೂ ರಾಮಾಯಣ ಇದೆ.

ರಾಮಾಯಣದ ಪ್ರಸಿದ್ಧ ಖಳನಾಯಕರು ರಾವಣ, ಕುಂಭಕರ್ಣರು. ಲೋಕದ ಸಜ್ಜನರಿಗೆ ರಾವಣ ಕುಂಭಕರ್ಣರು ಸಹಿಸಲಾಗದ ವ್ಯಕ್ತಿಗಳು. ಸಮಾಜದ ಕ್ಯಾನ್ಸರ್. ಇದಕ್ಕೆ ಕಾರಣ ರಾವಣ, ಕುಂಭಕರ್ಣರಲ್ಲಿ ಸ್ವಾಭಾವಿಕವಾದ ದೈತ್ಯ ಶಕ್ತಿಯ ಜೊತೆಗೆ ಬ್ರಹ್ಮದೇವರ ವರದಿಂದ ಬಂದ ಅವಧ್ಯತ್ವ. ಬ್ರಹ್ಮದೇವರು ಪ್ರತ್ಯಕ್ಷರಾದಾಗ ರಾವಣ ಎಲ್ಲ ರೀತಿಯ ಮರಣಗಳಿಂದ ರಕ್ಷಣೆಯನ್ನು ಪಡೆದುಕೊಂಡ. ಆದರೆ ತನ್ನ ಶಕ್ತಿಯ ಮೇಲಿನ ದುರಭಿಮಾನದಿಂದ ಮಾನವರಿಂದ ಮರಣ ಬೇಡೆಂದು ಕೇಳಲುಪೇಕ್ಷಿಸಿದ. ಇದರ ಪರಿಣಾಮ, ಅವಧ್ಯತ್ವದ ವರ ಪಡೆದಿದ್ದರೂ ಮಾನವವೇಷದ ಶ್ರೀರಾಮನಿಂದ ಮರಣವನ್ನಪ್ಪಿದ. ಸಾವು ಬೇಡೆಂದು ವರ ಪಡೆದ ರಾವಣ ಸಾವಿಗೀಡಾದ.

ಕುಂಭಕರ್ಣನೂ ಏನನ್ನೋ ಕೇಳಲು ಹೋಗಿ ಸರಸ್ವತಿಯ ಚಾಣಾಕ್ಷತನದಿಂದ ನಾಲಿಗೆ ತೊದಲಿ ನಿದ್ರೆಯನ್ನು ಬೇಡಿಕೊಂಡ. ಅವನೂ ಮೃತ್ಯುವಿಗೆ ತುತ್ತಾದ.

ಇಂತಹವರಿಗೆ ಇವರ ವಿರುದ್ಧ ಸ್ವಭಾವದ ತಮ್ಮ ವಿಭೀಷಣ. ಹೆಸರು ಭೀಷಣವಾದರೂ ಇವನು ಸೌಮ್ಯದ ವ್ಯಕ್ತಿ. ಇವನೂ ತಪಸ್ಸು ಮಾಡಿ ಬ್ರಹ್ಮದೇವರನ್ನು ಕಂಡು ವರ ಕೇಳಿದನು. ''ತಾನು ಅಮರನಾಗ ಬೇಕು. ಅವಧ್ಯನಾಗಬೇಕು'' ಎಂದು ಕೇಳಲಿಲ್ಲ. ಆಯುಷ್ಯ ಇರುವತನಕ ದೇವರಲ್ಲಿ ಧರ್ಮದಲ್ಲಿ ಶ್ರದ್ಧೆ ನಿಷ್ಠೆಗಳು ಇರಲೆಂದು ಬೇಡಿದ. ಬ್ರಹ್ಮದೇವ ಈ ವರವನ್ನು ನೀಡುವುದರ ಜೊತೆಗೆ ಚಿರಂಜೀವಿಯಾಗು ಎಂದು ಹರಸಿದ. ವಿಭೀಷಣ ಚಿರಂಜೀವಿಗಳ ಗುಂಪಿಗೆ ಸೇರಿಕೊಂಡ. ಅಮರನಾದ. ರಾವಣ ಅವಧ್ಯತ್ವ ವನ್ನೇ ಬೇಡಿದರೂ ಅಮರನಾಗಲಿಲ್ಲ.

ನಾವೂ ಈ ರಾವಣ ಕುಂಭಕರ್ಣರಂತೆ ದೇವರಲ್ಲಿ ಏನೇನೋ ಬೇಡುತ್ತೇವೆ. ಆ ವರ ದೊರೆತರೂ ಉದ್ದೇಶ ನೆರವೇರುವುದಿಲ್ಲ. ಅಮರತ್ವ ಹೊಂದುವುದಿಲ್ಲ.

ನೆರಳನ್ನು ಹಿಡಿಯಲು ಎಷ್ಟು ಓಡಿದರೂ ಅದು ನಮ್ಮ ಕೈಗೆ ಎಟುಕದ ಮುಂದೆ ಉಳಿಯುತ್ತದೆ. ಅದಕ್ಕೆ ಬೆನ್ನುಹಾಕಿ ಸೂರ್ಯನೆಡೆಗೆ ಮುಖಮಾಡಿ ಓಡಿದರೆ ಆ ನೆರಳು ನಮ್ಮ ಹಿಂದೆಯೇ ಓಡಿ ಬರುತ್ತದೆ.

ಭಗವಂತನಿಗೆ ಬೆನ್ನು ಹಾಕಿ ಭೋಗಸಾಮಗ್ರಿಗಳೆಡೆಗೆ ಎಷ್ಟು ಓಡಿದರೂ ಅದು ಪೂರ್ಣ ಕೈಗೆ ಎಟಕುವುದಿಲ್ಲ. ತೃಪ್ತಿ ಸಿಗದು. ಭೋಗಸಾಮಗ್ರಿಗಳಿಗೆ ಬೆನ್ನು ಹಾಕಿ ಭಗವಂತನ ಕಡೆಗೆ ಮುಖಮಾಡಿ ಓಡಿದಾಗ ಆ ಎಲ್ಲಾ ಭೋಗ ಸಾಮಗ್ರಿಗಳೂ ನಮ್ಮನ್ನು ಹಿಂಬಾಲಿಸುತ್ತವೆ.

ರಾವಣ ಕುಂಭಕರ್ಣರು ನೆರಳನ್ನು ಹಿಡಿಯಲು ಓಡಿಹೋದರು. ವಿಭೀಷಣ ಸೂರ್ಯನ ಕಡೆಗೆ ಓಡಿದನು. ರಾವಣಾದಿಗಳು ಅತೃಪ್ತರಾಗಿ ಅಮರರಾಗದೇ ಮಡಿದರು. ವಿಭೀಷಣ ಸಂತೃಪ್ತನಾಗಿ ಚಿರಂಜೀವಿಯಾದ. ಅಮರನಾದ.

ದ್ರೌಪದೀ ವಸ್ತ್ರಾಪಹರಣ

ಮಯಸಭೆಯ ಶಿಲ್ಪಚಾತುರ್ಯ ದುರ್ಯೋಧನನ ಸ್ವಾಭಿಮಾನಕ್ಕೆ ಮಣ್ಣೆರಚಿತ್ತು. ಭ್ರಮೆಗೆ ಬಲಿಯಾಗಿ ದುರ್ಯೋಧನ ಅಪಮಾನಗೊಂಡಿದ್ದ. ಮಯಸಭೆಯಲ್ಲಿ ಭ್ರಮೆಯಿಂದ ಜಾರಿಬಿದ್ದ ದುರ್ಯೋಧನ, ಮುಂದೆ ಶಕುನಿಯ ವಂಚನೆಗೆ ಬಲಿಬಿದ್ದು, ಮೋಹದಿಂದ ಜೀವನದಲ್ಲಿಯೇ ಜಾರಿ ಬಿದ್ದಿದ್ದ; ಮತ್ತೇಳದವನಾಗಿದ್ದ.

ಮಾನಧನ ಸುಯೋಧನ ಮಯಸಭೆಯಲ್ಲಾದ ಅಪಮಾನದಿಂದ ಜೀವನದಲ್ಲಿ ನಿರಾಶೆಗೊಂಡಿದ್ದ. ನೀರನು ನೆಲವೆಂದು, ನೆಲವನ್ನು ನೀರೆಂದು ತಿಳಿದು ಮೋಸ ಹೋದಾಗ ದ್ರೌಪದಿಯ ಮುಖವು ಚೆಲ್ಲಿದ ನಗು ಹೃದಯಕ್ಕೆ ಶೂಲ ಚುಚ್ಚಿದಂತಿತ್ತು. ಅಂತರಾಳದ ಮೂಲೆ ಮೂಲೆಯಲ್ಲಿಯೂ ಅಲೆ ಅಲೆಯಾಗಿ ಆರ್ಭಟಿಸಿತ್ತು. ಮಾನಹೀನ ಜೀವನಕ್ಕಿಂತಲೂ ಸಾವು ಅತ್ಯಂತ ಪ್ರಿಯವೆನಿಸಿತ್ತು ದುರ್ಯೋಧನನಿಗೆ.

''ಎರಗಿ ಬರುವ ಆಪತ್ತನ್ನು ಬದುಕಿ ಎದುರಿಸುವುದು ಗಂಡಸುತನ. ಜೀವನದಲ್ಲಿ ಸಂಭವಿಸುವ ಘಟನೆಗಳಿಗೆ ಹೆದರಿ ಸಾಯುವುದು ಹೇಡಿತನ - ಶಕುನಿ ಸುಯೋಧನನಿಗೆ ಉಪದೇಶ ಮಾಡಿದ. ದ್ಯೂತವಾಡಿ ಪಾಂಡವರ ಪಟ್ಟದರಸಿ ಪಾಂಚಾಲಿಯನ್ನು ಸುಯೋಧನನ ಪಾದಚಾರಿಕೆಯಾಗಿಸುತ್ತೇನೆ ಎಂದು ಭರವಸೆ ನೀಡಿದನು ಶಕುನಿ.

ಅಪಾಯವನ್ನು ಅರಿಯದ ದುರ್ಯೋಧನ ಶಕುನಿಯ ಉಪಾಯಕ್ಕೆ ಒಪ್ಪಿಕೊಂಡ, ಧೃತರಾಷ್ಟ್ರ ನಿಂದ ಧರ್ಮರಾಜನಿಗೆ ಆಹ್ವಾನ ಕಳುಹಿಸಿದನು.

ಶಕುನಿಯ ಕುತಂತ್ರ, ಸುಯೋಧನನ ಮೌಢ್ಯ, ಧೃತರಾಷ್ಟ್ರನ ಮೋಹ, ಧರ್ಮರಾಜನ ಪ್ರತಿಜ್ಞೆ ಇವುಗಳನ್ನು ಅರಿತ ವಿದುರ ಧೃತರಾಷ್ಟ್ರನ ಬಳಿಗೆ ಬಂದ. ದ್ಯೂತದಿಂದ ಸಜ್ಜನರಾದ ಪಾಂಡವರಿಗೆ ಅನ್ಯಾಯ ಮಾಡುವುದು ಬೇಡೆಂದ.

''ಎಷ್ಟಾದರೂ ಮಕ್ಕಳು. ಪಾಪ; ಆಟವಾಡಲಿ. ಅಕಸ್ಮಾತ್ ಏನಾದರೂ ಆದರೆ ಅದು ಭಗವಂತನ ಇಚ್ಛೆ. ದೇವರ ಇಚ್ಛೆಯನ್ನು ತಡೆಯುವವರಾರು? - ವಿದುರನಿಗೆ ಧೃತರಾಷ್ಟ್ರನ ಉತ್ತರ. ಸ್ವಾರ್ಥಕ್ಕೆ ವೇದಾಂತದ ಮುಖವಾಡವನ್ನು ಮುಚ್ಚಿದ್ದ ಕುರುಡ ಧೃತರಾಷ್ಟ್ರ. ಪರರಿಗೆ ತೊಂದರೆ ಬಂದಾಗ ''ಭಗವಂತನ ಇಚ್ಛೆ'' ಎಂದು ಮಾತ್ರ ಹೇಳಿ ತಮಗೇ ಬಂದು ಆಪತ್ತಿಗೆ ಪರಿಹಾರೋಪಾಯವನ್ನು ಹುಡುಕುವ ನಮಗೆ ಧೃತರಾಷ್ಟ್ರ ಬಹಳ ಹತ್ತಿರದವನಲ್ಲವೇ?

ಅರಮನೆಯ ಸಕಲ ಸಿರಿ ಸೌಭಾಗ್ಯವನ್ನೇ ಪಣವಾಗಿಸಿ ಶಕುನಿಯ ಕುತಂತ್ರದಿಂದ ಸೋತ

ಯುಧಿಷ್ಠಿರ ಬಾಳಿನ ಸೌಭಾಗ್ಯ ದೇವತೆ - ದ್ರೌಪದಿಯನ್ನೂ ಪಣವಿಟ್ಟು ಪರಾಭವಗೊಂಡ.

ತನ್ನ ಅಭೀಷ್ಟ ಈಡೇರಿತೆಂದು ದುರ್ಯೋಧನ ತೃಪ್ತಿಪಟ್ಟ, ತನ್ನ ವಂಚನೆಯ ವೃಕ್ಷ ಫಲ ನೀಡಿತೆಂದು ಸಂತಸಪಟ್ಟ ಶಕುನಿ.

ಬಹಿಷ್ಠೆಯಾದ ದ್ರೌಪದಿಯನ್ನು ಸಭೆಗೆ ಎಳೆದು ತಂದು ದುರುಳ ದುಶ್ಶಾಸನ ಅವಳ ಸೀರೆಯನ್ನೇ ಸೆಳೆಯಲು ಉಪಕ್ರಮಿಸಿದ. ತೊಡೆ ತಟ್ಟಿ ಅಟ್ಟಹಾಸಗೈದ ದುರ್ಯೋಧನ.

ಕ್ರುದ್ಧವಾಗಿ ಎದ್ದು ನಿಂತ ಭೀಮನನ್ನು ಯುಧಿಷ್ಠಿರ ತಡೆದನು. 'ಪರಸತಿಮಾನಾಪಹರಣ ಮಹಾ ಅನ್ಯಾಯ' ಬೊಬ್ಬಿಟ್ಟು, ಸಭೆ ಬಿಟ್ಟ ವಿದುರ. ದುರ್ಯೋಧನನ ಉಪ್ಪಿನ ಋಣ ತಿಂದ ಭೀಷ್ಮ ದ್ರೋಣರು ತಲೆ ತಗ್ಗಿಸಿದರು.

ಸಭೆಯಲ್ಲಿ ಮಂಡಿಸಿದ್ದ ಧರ್ಮಮೂರ್ತಿಗಳೆಲ್ಲ ಕೈ ಚೆಲ್ಲಿ ಕುಳಿತರು : ಯಾರೂ ನ್ಯಾಯ ಭಿಕ್ಷೆಯನ್ನು ನೀಡಲಿಲ್ಲ. ಅನಾಥಳಾದ ಪಾಂಚಾಲಿ ಜಗನ್ನಾಥನನ್ನು ಮೊರೆಹೊಕ್ಕಳು. ''ಹಾ ಕೃಷ್ಣ ದ್ವಾರಕಾ ವಾಸಿನ್ ಕ್ವಾಸಿ ಯಾದವನಂದನ'' - ಉಚ್ಚಸ್ವರದಲ್ಲಿ ಎರಡೂ ಕೈಗಳನ್ನೆತ್ತಿ ಬೇಡಿದಳು. ದ್ರೌಪದಿಯ ಆಕ್ರಂದನ ಶ್ರೀಕೃಷ್ಣನ ಕಿವಿ ಮುಟ್ಟಿತು. ಕರುಣಾಳು ಶ್ರೀಕೃಷ್ಣ ಪ್ರಸನ್ನನಾದ. ಅಕ್ಷಯವಸನವಿತ್ತ. ಸೀರೆ ಸೆಳೆಸೆಳೆದು ಸೋತನು ದುಶ್ಶಾಸನ. ಸಭಾಸದರೆಲ್ಲ ಹುಬ್ಬೇರಿಸಿದರು.

ಈ ವಸ್ತ್ರಾಪಹರಣ ಸಾವಿರಾರು ವರ್ಷಗಳ ಹಿಂದೆ ಮಾತ್ರ ನಡೆದದ್ದಲ್ಲ. ಇಂದಿಗೂ ನಮ್ಮೆಲ್ಲರ ಜೀವನದಲ್ಲಿ ಪ್ರತಿನಿತ್ಯ ವಸ್ತ್ರಾಪಹರಣ ನಡೆಯುತ್ತಿದೆ. ದುಶ್ಶಾಸನನ ಸೆಳೆತಕ್ಕೆ ಸಿಲುಕಿದ ದ್ರೌಪದಿಯಂತೆ ನಮ್ಮ ವ್ಯಕ್ತಿತ್ವ, ವಿವೇಕಗಳನ್ನು, ಸ್ವಾತಂತ್ರ್ಯವನ್ನು ವಿಷಯಪದಾರ್ಥಗಳ ಸೆಳೆತದಿಂದ ಪಾರಾಗಬೇಕಿದ್ದರೆ ದ್ರೌಪದಿಯ ಆರ್ತಭಕ್ತಿ ಬೇಕು. ಅನನ್ಯ ಭಕ್ತಿಯಿಂದ ಶ್ರೀಕೃಷ್ಣನಿಗೆ ಶರಣಾಗಬೇಕು.

ದ್ರೌಪದಿಯ ಭಕ್ತಿಯಿಲ್ಲದೆ ಸುಮ್ಮನೇ ಅರಚಿದರೆ ನಮ್ಮ ಪ್ರಾರ್ಥನೆ ಸಫಲವಾಗದು. ಬ್ಯಾಂಕಿನಲ್ಲಿ ಹಣವಿಡದೇ, ಚೆಕ್ ಕೊಟ್ಟರೆ ಅದು ಕ್ಯಾಷ್ ಆಗಬಹುದೇ ?

ಅಶ್ವತ್ಥಾಮನ ಹಾಲು

ಕುರುಕುಲದ ರಾಜಕುಮಾರರೆಲ್ಲ ಆಟವಾಡುತ್ತಿದ್ದಾರೆ. ರಾಜಕುಮಾರರಿಗೆ ತಾಯಿ ಕೊಟ್ಟ ರುಚಿಯಾದ ಹಾಲು ಕುಡಿದ ಹುಮ್ಮಸ್ಸು. ಯಾರಲ್ಲಿಯೂ ಏನನ್ನೂ ಬೇಡದ ಬಡ ದ್ರೋಣಾಚಾರ್ಯರ ಪುತ್ರ ಅಶ್ವತ್ಥಾಮಗೆ, ರಾಜಕುಮಾರರು ಕುಡಿದ ಹಾಲಿನ ರುಚಿ ಏನು ಗೊತ್ತು ? ಆದರೆ ಅವರೆದುರು ತಾನೇನು ಕಮ್ಮಿ ? ತಾನೂ ಹಾಲು ಕುಡಿಯುತ್ತೇನೆ ಎಂಬ ಹಮ್ಮು, ಅದಮ್ಯ ಆಕಾಂಕ್ಷೆ.

ಮನೆಯಲ್ಲಿ ಬಡತನವಿದ್ದರೂ ಮಗನ ಕೋರಿಕೆಯನ್ನು ಪೂರೈಸಲು ತಾಯಿ ಹಿಂಜರಿಯಲಿಲ್ಲ. ಬಿಳಿ ಹಿಟ್ಟಿಗೆ ನೀರು ಬೆರೆಸಿ ಕೊಟ್ಟಿದ್ದಾಳೆ. ಹಾಲನ್ನೇ ಕಂಡರಿಯದ ಅಶ್ವತ್ಥಾಮನಿಗೆ ಇದೇ ಉತ್ತಮ ಹಾಲು. ಕುಡಿದೇ ಕುಡಿದ. ಹಿ ಹಿರಿ ಹಿಗ್ಗಿದ.

''ಈ ಬಡ ಋಷಿಕುಮಾರನಿಗೆ ಹಾಲು ಎಲ್ಲಿಂದ ? ಹಸುವನ್ನು ಕಾಣುವುದೇ ಇವನಿಗೆ ದೊಡ್ಡ ಭಾಗ್ಯ. ಹಾಲು ಕುಡಿಯುವ ಭಾಗ್ಯ ಎಲ್ಲಿಂದ ಬರಬೇಕು ?'' ರಾಜಕುಮಾರರಿಗೆ ಆಶ್ಚರ್ಯ ! ಸಂಶಯ.

ಅಶ್ವತ್ಥಾಮನ ಹಾಲಿನ ರಹಸ್ಯವನ್ನು ಅರಿಯುವ ತವಕ ರಾಜಕುಮಾರರಿಗೆ. ಒಮ್ಮೆ ತಾವು ಕುಡಿಯುತ್ತಿದ್ದ ಹಾಲನ್ನು ಕೊಟ್ಟಿದ್ದಾರೆ, ಅಶ್ವತ್ಥಾಮನಿಗೆ.

ಅಹೋ ! ಎಷ್ಟು ಮಧುರ ಈ ಹಾಲು ! ಇದರ ಮಾಧುರ್ಯ ಎಲ್ಲಿ ? ತಾನು ಕುಡಿಯುತ್ತಿದ್ದ ಹಾಲಿನ ರುಚಿ ಎಲ್ಲಿ ? ಹಾಗಾದರೆ ತಾಯಿ ನನಗೆ ಮೋಸ ಮಾಡಿದ್ದಾಳೆ. ಇನ್ನು ನಾನು ಆ ಹಾಲನ್ನು ಖಂಡಿತ ಕುಡಿಯಲಾರೆ.

ಎಂದಿನಂತೆ ತಾಯಿ ಹಾಲು ಕೊಟ್ಟಿದ್ದಾಳೆ. ಸಿಡಿಮಿಡಿಯಾದ ಅಶ್ವತ್ಥಾಮ ಹಾಲನ್ನು ಚೆಲ್ಲಿದ್ದಾನೆ. ರಾಜಕುಮಾರರು ಕುಡಿಯುವ ಹಾಲೇ ಬೇಕು. ಸಾಕು ಈ ವಂಚನೆ. ತಾಯಿ ತಬ್ಬಿಬ್ಬಾಗಿದ್ದಾಳೆ. ಅಶ್ವತ್ಥಾಮ ಹಟ ಹಿಡಿದಿದ್ದಾನೆ.

ಅಶ್ವತ್ಥಾಮನಿಗೆ ಹಾಲು ಬೇಕು. ಆದರೆ ಯಾವುದು ಹಾಲು ? ತಿಳಿದಿಲ್ಲ. ನಿಜವಾದ ಹಾಲಿನ ರುಚಿ ತಿಳಿದಾಗ ಈ ಹಾಲು ಬೇಡೆಂದ. ಉತ್ತಮ ಹಾಲೇ ಬೇಕೆಂದ. ಹಟ ಹಿಡಿದ.

ನಮಗೂ ಸುಖ ಬೇಕು. ಯಾವುದು ಸುಖ ? ತಿಳಿದಿಲ್ಲ. ದುಃಖ ಮಿಶ್ರಿತವಾದ ಸಂಸಾರದ ಸುಖವನ್ನೇ ನಿಜವಾದ ಸುಖವೆಂದು ಭ್ರಮಿಸಿದ್ದೇವೆ. ದುಃಖದ ಸೋಂಕೂ ಇಲ್ಲದ ಮೋಕ್ಷರೂಪವಾದ ಉತ್ತಮ ಸುಖದ ರುಚಿ ಗೊತ್ತಿಲ್ಲ. ಆ ಆತ್ಮಸ್ವರೂಪವಾದ ಸುಖದ ಅನುಭವವಾದರೆ ಈ ಸಾಂಸಾರಿಕ ಸುಖದ ಕಡೆ ದೃಷ್ಟಿ ಹಾಯಿಸುವುದಿಲ್ಲ. ಮೋಕ್ಷವೇ ಬೇಕೆಂಬ ಛಲ ಹುಟ್ಟುತ್ತದೆ.

ಅಲ್ಪರಿಗೆ ಅಧಿಕಾರ ಬೇಡ

ಋಷಿಯೊಬ್ಬ ತಪಸ್ಸು ಮಾಡುತ್ತಾ ಕುಳಿತಿದ್ದನು. ಅವನ ಉಗ್ರ ತಪಸ್ಸಿಗೆ ಹೆದರಿ ಆ ಅರಣ್ಯದಲ್ಲಿ ಅವನ ಹತ್ತಿರದಲ್ಲಿ ಯಾವ ಪ್ರಾಣಿಯೂ ಸುಳಿಯುತ್ತಿರಲಿಲ್ಲ. ಆದರೆ ಒಂದು ನಾಯಿ ಮಾತ್ರ ಯಾವಾಗಲೂ ಅವನ ಬಳಿ ಇರುತ್ತಿತ್ತು. ಆ ನಾಯಿಯ ಮುಗ್ಧ ಮುಖ ಋಷಿಗೆ ಅನುಕಂಪ ಹುಟ್ಟಿಸಿತ್ತು.

ಒಮ್ಮೆ ಭಯಾನಕ ಹುಲಿಯೊಂದು ಘರ್ಜನೆ ಮಾಡುತ್ತ ಬರಲು ನಾಯಿ ಹೆದರಿ ಋಷಿಯಲ್ಲಿ ಮೊರೆಯಿಟ್ಟಿತು. ಶಾಪಾನುಗ್ರಹ ಶಕ್ತನಾದ ಋಷಿ, ''ಹೆದರಬೇಡ ! ನೀನೂ ಹುಲಿಯಾಗು'' ಎಂದ. ನಾಯಿಯು ಹುಲಿಯಾಯಿತು.

ಮತ್ತೊಮ್ಮೆ ಬೃಹದಾಕಾರದ ಬಲಿಷ್ಠ ಕಾಡಾನೆ ಬಂತು. ಈ ಹುಲಿಯಾದ ನಾಯಿ ಋಷಿಯಲ್ಲಿ ಶರಣಾಯಿತು. ''ಅಂಜಬೇಡ, ನೀನೂ ಕಾಡಾನೆಯಾಗು'' - ಎಂದು ವರ ನೀಡಿದ. ಹುಲಿಯಾದ ನಾಯಿ ಕಾಡಾನೆಯಾಯಿತು.

ಇನ್ನೊಮ್ಮೆ ದೊಡ್ಡ ಭಯಂಕರ ಸಿಂಹದ ಆಗಮನ. ಯಥಾಪ್ರಕಾರ ಕಾಡಾನೆಯಾದ ನಾಯಿಯ ಮೊರೆ - ಋಷಿಯಲ್ಲಿ. ''ನೀನೂ ಸಿಂಹನಾಗು'' - ಋಷಿಯ ಅನುಗ್ರಹ. ಇದೂ ಸಿಂಹ.

ಮಗದೊಮ್ಮೆ ಸಿಂಹಕ್ಕಿಂತಲೂ ಪ್ರಬಲವಾದ ಶರಭ ಬಂತು. ಈ ಬಾರಿಯೂ ಋಷಿಯಲ್ಲಿ ಶರಣು. ಸಿಂಹರೂಪ ತಾಳಿದ್ದ ನಾಯಿ ಈಗ ಶರಭ. ಶರಭ ಕಾಡಿಗೆಲ್ಲ ಪ್ರಬಲ ಪ್ರಾಣಿ. ಈ ಶರಭಕ್ಕೆ ತಾನೇ 'ವನರಾಜ'ನೆಂಬ ಹಮ್ಮು. ಋಷಿಯನ್ನು ಹೆದರಿಸುವ ಮದ.

''ಬಡ ನಾಯಿಯಾಗಿದ್ದ ನಾನು ಋಷಿಗೆ ಪ್ರಿಯನಾದೆ. ಅದೊಂದು ವಿಧಿಯ ನಂಟು. ಹುಲಿ ಬಂದಾಗ ಹುಲಿಯಾದೆ. ಕಾಡಾನೆಯ ಆಕ್ರಮಣದ ಸಂದರ್ಭದಲ್ಲಿ ನಾನೂ ಕಾಡಾನೆಯಾದೆ. ಸಿಂಹ ನುಗ್ಗಿಬರಲು ಸಿಂಹನಾದೆ. ಶರಭ ಧಾಳಿಯಿಡಲು ನಾನೂ ಶರಭನಾದೆ. ಋಷಿಯ ವರದಿಂದ ಬೇಗ ಬೇಗ ಪ್ರಮೋಷನ್ ದೊರೆಯಿತು. ಹೀಗೇ ಮತ್ತೊಮ್ಮೆ ಹಕ್ಕಿ ಮುಂತಾದ ಸಣ್ಣ ಪ್ರಾಣಿಯಿಂದ ಆಪತ್ತು ಬಂದಾಗ ''ಹಕ್ಕಿಯಾಗು'' ಎಂದು ಋಷಿ ಗೊಣಗಿದರೆ ! ಅನಾಯಾಸವಾಗಿ ಈ ಶರಭದ ಬಲ ಬಂದಿರುವಾಗ, ವನರಾಜನೆನಿಸಿರುವಾಗ ಹಕ್ಕಿಯಾಗಿ ಬಿಟ್ಟರೆ! ಆದರೆ ಹಕ್ಕಿ ಆಗುವುದು ಹೇಗೆ ? ಋಷಿಯ ಅನುಗ್ರಹಿಸಿದರಲ್ಲವೇ ? ಋಷಿಯನ್ನೇ ಮುಗಿಸಿಬಿಟ್ಟರೆ ? ಇದೇ ಸರಿಯಾದ ಉಪಾಯ.''

ಹೀಗೆ ಬಹುದೂರದ ದುರಾಲೋಚನೆಯನ್ನು ನಡೆಸಿದ ನಾಯಿ ಋಷಿಯ ಮೇಲೆ ಹಾರಿತು !

''ಮೊದಲಿನಂತೆ ನಾಯಿಯೇ ಆಗಿಬಿಡು'' - ಋಷಿ ಕೂಡಲೇ ಶಾಪನೀಡಿದ. ಶರಭ ನಾಯಿಯಾಯಿತು. ಋಷಿ ಪಾರಾದ.

ಅಲ್ಪ ಬುದ್ಧಿಯವರಿಗೆ ಎಷ್ಟು ದೊಡ್ಡ ಸ್ಥಾನ ದೊರೆತರೇನು ? ಅವರ ಅಲ್ಪತನ ಬಿಡುವುದಿಲ್ಲ. ಶರಭನಾದ ನಾಯಿ ತನ್ನ ನಾಯಿತನವನ್ನು ಬಿಟ್ಟಿತೇ ? ವ್ಯಕ್ತಿಯನ್ನು ನೋಡುವುದಲ್ಲ. ವ್ಯಕ್ತಿತ್ವವನ್ನು ನೋಡಬೇಕು. ಅಲ್ಪರಿಗೆ ಅಧಿಕಾರ ದೊರೆತರೆ ಅಧಿಕಾರ ಕೊಟ್ಟವರೇ ಅವರ ಕುತಂತ್ರಕ್ಕೆ ಮೊದಲ ಬಲಿ!

ಪ್ರವಾಹಕ್ಕೆ ಎದುರಾಗುವುದು ಸಲ್ಲ

ದಡದ ಎರಡೂ ಬದಿಯಲ್ಲಿರುವ ಗಿಡಮರಗಳನ್ನೆಲ್ಲ ಕೊಚ್ಚಿಕೊಂಡು ವೇಗದಿಂದ ಪ್ರವಹಿಸುತ್ತ ನದಿಗಳು ಸಮುದ್ರವನ್ನು ಸೇರುತ್ತಿವೆ.

ಒಮ್ಮೆ ಸಮುದ್ರ ನದಿಗಳನ್ನು ಕೇಳಿತು - ನದಿಗಳೇ ! ನೀವೆಲ್ಲ ಎಲ್ಲಿಯೋ ಹುಟ್ಟಿ, ಎಲ್ಲೆಲ್ಲಿಯೋ ಹರಿದು ಬಂದು ನನ್ನನ್ನು ಸೇರುತ್ತೀರಿ. ಬರುವಾಗ ನೀವೊಬ್ಬರೇ ಬರುವುದಿಲ್ಲ. ದೊಡ್ಡ ದೊಡ್ಡ ಮರಗಳನ್ನು ಸೆಳೆದುಕೊಂಡು, ಕೊಚ್ಚಿಕೊಂಡು ಬರುವಿರಿ. ಅಚ್ಚರಿ ಎಂದರೆ ಅಷ್ಟು ದೊಡ್ಡ ದೊಡ್ಡ ಮರಗಳನ್ನು ಪ್ರವಾಹದಲ್ಲಿ ಕೊಚ್ಚಿಕೊಂಡು ತರುವ ನೀವು ಅತ್ಯಂತ ಮೃದುವಾಗಿರುವ, ತೀರದಲ್ಲಿಯೇ ಬೆಳೆಯುವ ಹುಲ್ಲುಗಳನ್ನು ಮಾತ್ರ ತರುವುದಿಲ್ಲ. ಮರಗಳು ಪ್ರವಾಹದಲ್ಲಿ ತೇಲಿ ಬರುತ್ತವೆಯೇ ಹೊರತು ದಡದಲ್ಲಿ ಬೆಳೆಯುವ ಹುಲ್ಲುಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಬರುವುದಿಲ್ಲ. ಈ ವೈಷಮ್ಯಕ್ಕೆ ಏನು ಕಾರಣ ?

''ರಭಸದಲ್ಲಿ ಪ್ರವಾಹ ಬರುತ್ತಿದ್ದರೂ ಈ ಮರಗಳು ತಲೆಬಾಗದೇ ಸೆಟೆದು ನಿಂತಿರುತ್ತವೆ. ಈ ಅವಿಧೇಯತೆಯನ್ನು ಸಹಿಸದೇ, ಅದಕ್ಕೆ ತಕ್ಕ ಬುದ್ಧಿ ಕಲಿಸಬೇಕೆಂದು ಅವುಗಳನ್ನು ಸಮೂಲಘಾತ ಮಾಡಿ ಕೊಚ್ಚಿಕೊಂಡು ಬರುತ್ತೇವೆ. ಆದರೆ ಆ ಹುಲ್ಲುಗಳು ಪ್ರವಾಹ ಬಂದಾಗ ಅವಿಧೇಯತೆ ತೋರದೇ ತಲೆಬಾಗಿಸಿ ವಿನಯ ತೋರುತ್ತವೆ. ಪ್ರವಾಹ ಹೋದನಂತರ ತಲೆಯೆತ್ತುತ್ತವೆ. ಆದುದರಿಂದ ಆ ವಿನೀತ ಹುಲ್ಲುಗಳನ್ನು ಅಲ್ಲಿಯೇ ಬಿಡುತ್ತೇವೆ. ಸೆಳೆಯುವುದಿಲ್ಲ'' - ಎಂದು ನದಿಗಳು ಉತ್ತರಿಸಿದವು.

ಇದು ಬುದ್ಧಿವಂತರ ಲಕ್ಷಣ. ಪ್ರವಾಹಕ್ಕೆ ಎದುರಾಗಿ ನಿಂತು ನಾಶ ಹೊಂದುವುದಕ್ಕಿಂತಲೂ ಪ್ರವಾಹಕ್ಕೆ ಶಿರಬಾಗಿ ಪ್ರವಾಹ ಹೋದಮೇಲೆ ನಿರಾತಂಕವಾಗಿ ತಲೆಯೆತ್ತುವುದು ಬುದ್ಧಿವಂತಿಕೆ ಯಲ್ಲವೇ ?

ಇದು ವ್ಯಾಸರು ನಮಗೆ ನೀಡಿರುವ ಉಪದೇಶ ಅಥವಾ ಎಚ್ಚರಿಕೆ.

ಆಲಸ್ಯದಿಂದ ಆಪತ್ತು

ಒಂದು ಒಂಟೆ ಬ್ರಹ್ಮದೇವರನ್ನು ಕುರಿತು ತಪಸ್ಸನ್ನು ಮಾಡಿತು. ಒಂಟೆಯ ಉಗ್ರ ತಪಸ್ಸಿಗೆ ಬ್ರಹ್ಮದೇವ ಒಲಿದು ಪ್ರತ್ಯಕ್ಷನಾದ.

ಬ್ರಹ್ಮದೇವ – ನಿನ್ನ ತಪಸ್ಸು ಮೆಚ್ಚುಗೆಯಾಗಿದೆ ಏನು ನಿನ್ನ ಬಯಕೆ ?

ಒಂಟೆ – ಬ್ರಹ್ಮನ್ ! ಅಂಥ ದೊಡ್ಡ ಬಯಕೆಯೇನೂ ಅಲ್ಲ. ನನಗೆ ಆಹಾರಕ್ಕಾಗಿ ಕಾಡೆಲ್ಲ ಸುತ್ತಿ ಸುತ್ತಿ ಆಯಾಸವಾಗಿದೆ. ಇನ್ನು ಮೇಲೆ ಕುಳಿತಲ್ಲೇ ಆಹಾರ ಸ್ವೀಕಾರ ಮಾಡುವ ಅನುಕೂಲತೆ ಬೇಕು. ಅಂದರೆ ಆಹಾರ ಪದಾರ್ಥ ಎಷ್ಟೇ ದೂರ ಇರಲಿ ಕುಳಿತಲ್ಲಿಂದಲೇ ಅದನ್ನು ತಿನ್ನಲು ಅನುಕೂಲವಾಗುವಂತೆ ನನ್ನ ಕುತ್ತಿಗೆಯನ್ನು ಬಹಳ ಉದ್ದವಾಗಿಸಬೇಕು.

ಬ್ರಹ್ಮ – ತಥಾಸ್ತು.

ಅಂದಿನಿಂದ ಒಂಟೆಗೆ ಆಹಾರ - ಅನ್ವೇಷಣೆ ಪ್ರಯಾಸ ತಪ್ಪಿತು. ಕುಳಿತ ಸ್ಥಳದಿಂದಲೇ ತನ್ನ ಕುತ್ತಿಗೆ ಯನ್ನು ಕಾಡೆಲ್ಲ ಚಾಚಿ ಆಹಾರ ಸ್ವೀಕಾರ ಮಾಡಲು ಪ್ರಾರಂಭಿಸಿತು. ಇದರಿಂದಾಗಿ ದೇಹಕ್ಕೆ ಯಾವ ಶ್ರಮ, ವ್ಯಾಯಾಮಗಳೂ ಇಲ್ಲದೇ ಬರಬರುತ್ತ ಉದಾಸೀನದ ಮುದ್ದೆಯಾಯಿತು ಒಂಟೆ.

ಒಮ್ಮೆ ಆ ಒಂಟೆಗೆ ಗ್ರಹಚಾರ ಕೆಟ್ಟಿತ್ತು. ಅದೊಂದು ದಿನ ಸಮೀಪದಲ್ಲಿ ಎಲ್ಲಿಯೂ ಆಹಾರ ದೊರಕಲಿಲ್ಲ. ಬೆಳೆದ ಉದ್ದ ಕುತ್ತಿಗೆ ಕಾಡಲೆಲ್ಲ ಆಹಾರಕ್ಕಾಗಿ ತಡಕಾಡಿತು. ಬಹಳ ದೂರದವರೆಗೆ ಆಹಾರಕ್ಕಾಗಿ ಕುತ್ತಿಗೆ ಚಾಚಿತ್ತು. ಇದೇ ಸಂದರ್ಭದಲ್ಲಿ ಕಾಡಿನ ದೊಡ್ಡ ಮೃಗವೊಂದು ಆಹಾರ ಹುಡುಕುತ್ತಾ ಬಂತು. ದಾರಿಗೆ ಅಡ್ಡಲಾಗಿ ಬಿದ್ದಿದ್ದ ಒಂಟೆಯ ಕುತ್ತಿಗೆಯಿತ್ತು. ಮಾಂಸಾಹಾರಿಯಾದ ಆ ಮೃಗ ಯಾವುದೋ ಪ್ರಾಣಿ ದೊರಕಿತೆಂಬ ಸಂತೋಷದಿಂದ ಆ ಕುತ್ತಿಗೆಗೆ ಬಾಯಿ ಹಾಕಿತು. ಇದನ್ನು ತಿಳಿದ ಒಂಟೆ ಕೂಡಲೇ ಕುತ್ತಿಗೆಯನ್ನು ಹಿಂತೆಗೆದುಕೊಳ್ಳಲು ಪ್ರಯತ್ನಿಸಿತು. ಆದರೆ ಬಹಳ ದೂರ ಚಾಚಿದ್ದ ಆ ಕುತ್ತಿಗೆ ಅಷ್ಟರಲ್ಲಿ ಆ ಕಾಡು ಮೃಗದ ಆಕ್ರಮಣದಿಂದಾಗಿ ಮಧ್ಯದಲ್ಲಿಯೇ ತುಂಡಾಯಿತು.

ಒಂಟೆಗೆ, ''ಈ ಗ್ರಹಚಾರಕ್ಕೆ ತಪಸ್ಸು ಮಾಡಿ ಬ್ರಹ್ಮನಿಂದ ವರ ಪಡೆದೆನಲ್ಲ! ದೇವರು ಕೊಟ್ಟಷ್ಟೇ ಸಾಕು ಎಂದು ಸುಮ್ಮನಿರಬೇಕಿತ್ತು'' ಎಂದೆನಿಸಿತು.

ಆಲಸ್ಯ ಎಂದಿಗೂ ಸಲ್ಲದು. ನಾವೆಲ್ಲ ಈ ಒಂಟೆಯಂತೆಯೇ. ಯಾವ ಪ್ರಯತ್ನ, ಪರಿಶ್ರಮಗಳನ್ನೂ ಮಾಡದೇ ಕುಳಿತಲ್ಲಿಯೇ ಉಂಡು ನಿದ್ರಿಸಬೇಕು ಎಂದು ಬಯಸುವವರು. ಈ ಆಲಸ್ಯತನದಿಂದಲೇ ಒಂಟೆಗೆ ಆ ಗತಿ ಬಂದದ್ದು, ಅದಕ್ಕೆಂದೇ ಆಲಸ್ಯವು ಮನುಷ್ಯನ ದೊಡ್ಡ ಶತ್ರು ಎನ್ನುವುದು.

ಇಂದೂ ದೇವರು ಪ್ರತ್ಯಕ್ಷರಾದರೆ, ಆಹಾರ ಪದಾರ್ಥಗಳಿಗಾಗಿ ಪೇಟೆಯೆಲ್ಲ ಸುತ್ತಾಡಿ ಆಯಾಸಗೊಂಡಿರುವ ನಾವು ಒಂಟೆ ಕೇಳಿದ ವರವನ್ನೇ ಕೇಳಬಹುದೇನೋ!

('ಮಹಾಭಾರತದ ಬೆಳಕು', ಸಂಗ್ರಾಹಕರು –ರಾಮ ವಿಟ್ಠಲ, ೧೯೮೪. ಪ್ರ: ಅಖಿಲ ಭಾರತ ಮಾಧ್ವ ಮಹಾಮಂಡಲ, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು – ೫೬೦ ೦೨೮.)

●

ಶ್ರೀ ವಿಶ್ವೇಶತೀರ್ಥ ಶ್ರೀಪಾದರು
(ಸಂಗ್ರಹ – ಸಗ್ರಿ, ರಾಘವೇಂದ್ರ, ಉಪಾಧ್ಯಾಯ)

೩-೩೨

ವಿಶ್ವೇಶ ವಾಣಿ

'ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮ ನಾಮ್' ಮಹಾತ್ಮರ ಮನಸ್ಸಿನಲ್ಲಿ ಏನಿರುತ್ತದೆಯೋ ಅದೇ ಮಾತಲ್ಲಿ ಹೊರಹೊಮ್ಮುತ್ತದೆ. ಇದೇ ಕೃತಿಯ ರೂಪವನ್ನು ತಾಳುತ್ತದೆ. ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಇಂತಹ ಮಹಾತ್ಮರಲ್ಲಿ ಒಬ್ಬರು. ಮನಸ್ಸಲ್ಲಿದ್ದದ್ದನ್ನೇ ಮಾತಲ್ಲಿ ಹೇಳುವವರೂ ಮಾತಲ್ಲಿ ಹೇಳಿದ್ದನ್ನೇ ಕೃತಿಯಲ್ಲಿ ಮಾಡುವವರೂ ಅವರು. ಹೀಗೆ ಅವರ ಮನಸ್ಸು ಹಾಗೂ ಕೃತಿಗಳ ನಡುವಿರುವ ಅವರ ಮಾತು ಅವರ ಮನಸ್ಸಲ್ಲಿ ತುಂಬಿರುವ ಶ್ರದ್ಧೆ, ವಿಶ್ವಾಸ, ನಿಷ್ಠೆ ಮೊದಲಾದುವನ್ನೂ ಅವರು ಸಾಧಿಸಿರುವ, ಸಾಧಿಸಲಿರುವ ಸಾಧನೆಗಳ ಹಿಂದಿರುವ ಧ್ಯೇಯ ಧೋರಣೆ, ಆದರ್ಶಾದಿಗಳನ್ನೂ ಪರಿಚಯಿಸಿಕೊಡಬಲ್ಲದು. ಈ ಮೂಲಕ ನಾವು ಹೇಗೆ ಹೆಜ್ಜೆಗಳನ್ನಿಡಬೇಕೆಂಬುದನ್ನೂ ಸಂದೇಶಿಸಬಲ್ಲದು. ಈ ದೃಷ್ಟಿಯಿಂದ ಶ್ರೀ ವಿಶ್ವೇಶತೀರ್ಥರ ವಾಣಿಗಳನ್ನು ನೂರಕ್ಕೂ ಮಿಕ್ಕಿ ಸಂಗ್ರಹಿಸಲು ಯತ್ನಿಸಲಾಗಿದೆ. ಬೇರೆ ಬೇರೆ ಸಭೆ, ಸಮಾರಂಭಗಳಲ್ಲೂ ಹಾಗೂ ಗೀತಾಸರೋದ್ಧಾರ, ತತ್ವಾಂಜಲಿ, ಮೊದಲಾದ ಕೃತಿಗಳಲ್ಲೂ ಅವರಿಂದ ಹೊರಹೊಮ್ಮಿರುವ ನುಡಿಮುತ್ತುಗಳು ಇವು. ಇವುಗಳ ಚಿಂತನ, ಮನನಾದಿಗಳಿಗೆ ಅನುಕೂಲವಾಗಲೆಂದು ದೇವರು ಮೊದಲಾದ ಹತ್ತು ವಿಭಾಗಗಳನ್ನು ಮಾಡಿ ಆಯಾಯ ವಿಭಾಗಕ್ಕೆ ಸಂಬಂಧಿಸಿದಂತೆ ಮಾತುಗಳನ್ನು ಪೋಣಿಸಲಾಗಿದೆ.

೧. ದೇವರು

ದೇವರೆಂದರೆ

ದೇವರೆಂದರೆ ಆಕಾಶದಾಚೆ ಸ್ವರ್ಗದ ಭವ್ಯ ಅರಮನೆಯ ಸುಂದರ ಸಿಂಹಾಸನದಲ್ಲಿ ಕುಳಿತುಕೊಂಡು ಜಗತ್ತಿನ ಕಾರುಬಾರು ನಡೆಸುವ ಒಬ್ಬ ರಾಜನಲ್ಲ. ನಮ್ಮ ಹೊಗಳಿಕೆಯಿಂದ ಉಬ್ಬುವ ನಮ್ಮ ತೆಗಳಿಕೆಯಿಂದ ಸಿಟ್ಟಿಗೇಳುವ, ಕೋಪತಾಪಗಳಿಗೆ ಒಳಗಾಗುವ ಒಬ್ಬ ಸರ್ವಾಧಿಕಾರಿ ವ್ಯಕ್ತಿಯಲ್ಲ. ಎಂತಹ ಸಮಾಜಘಾತುಕ ಅವ್ಯವಹಾರಗಳನ್ನು ನಡೆಸಿದರೂ ಕಾಣಿಕೆ ಉಪಹಾರಗಳನ್ನು ಸ್ವೀಕರಿಸಿ ಅವುಗಳನ್ನು ನಾವು ದಕ್ಕಿಸಿಕೊಳ್ಳುವಂತೆ ಮಾಡುವ ಭ್ರಷ್ಟ ರಾಜಕಾರಣಿಯೂ ಅಲ್ಲ. ನಮ್ಮ ಸುತ್ತಮುತ್ತಲಿರುವ ಈ ಸಾಧಾರಣ ಪ್ರಭುಗಳ ಜೊತೆಗೆ ಹೋಲಿಸಿಕೊಂಡು ದೇವರನ್ನು ಆ ರೀತಿಯಲ್ಲಿ ನಾವು ಕಲ್ಪಿಸಿಕೊಳ್ಳ

ಬಾರದು. ಈ ಎಲ್ಲಾ ಕಲ್ಪನೆಗಳನ್ನು ಮೀರಿ ನಿಂತು ವಿಶ್ವದ ಎಲ್ಲ ಆಗುಹೋಗುಗಳ ಮೂಲಶಕ್ತಿ ಸ್ರೋತವೆನಿಸಿದ ಮಹಾಚೈತನ್ಯವೇ ದೇವರು.

ಜಗತ್ತಿನ ಅದ್ಭುತ ರಚನೆಯ ಹಿನ್ನಲೆಯಲ್ಲಿರುವ ಮಹಾ ಚೈತನ್ಯ ಶಕ್ತಿ

ನಾವು ನೋಡುವ ವಿಶ್ವದಲ್ಲಿ ಎಲ್ಲೆಲ್ಲಿಯೂ ಒಂದು ವ್ಯವಸ್ಥೆಯನ್ನೂ ಉಪಯುಕ್ತತೆಯನ್ನೂ ಕಾಣಬಹುದು. ನಾವು ಅನುಭವಿಸುವ ಪ್ರತಿಯೊಂದು ವಸ್ತುವಿನ ರಚನೆ ಮತ್ತು ಬೆಳವಣಿಗೆಯಲ್ಲಿ ಪ್ರಕೃತಿಯ ಸಾವಿರಾರು ನಿಯಮಗಳು ಕೆಲಸ ಮಾಡುವುದನ್ನು ಗುರುತಿಸಬಹುದು. ಇದರಲ್ಲಿ ಒಂದು ಕೊಂಡಿ ತಪ್ಪಿದರೂ ಆ ವಸ್ತುವಿಗೆ ಅಸ್ತಿತ್ವ ಇರಲಾರದು. ನಮ್ಮ ಶರೀರ ಇಂದ್ರಿಯಗಳು, ಮರಗಿಡಗಳು, ಸೂರ್ಯ, ಚಂದ್ರ, ನಕ್ಷತ್ರಗಳು, ಹೀಗೆ ಎಲ್ಲೆಲ್ಲಿ ನೋಡಿದರೂ ನಮಗೆ ಉಪಯುಕ್ತವಾಗುವಂತೆ ಪ್ರಕೃತಿಯ ಸಹಸ್ರಾರು ನಿಯಮಗಳ ಸಂಯೋಜನೆಯನ್ನು ನಾವು ಗಮನಿಸಬಹುದು. ಇಂತಹ ಅದ್ಭುತ ಸಂಯೋಜನೆಯನ್ನು ಆಕಸ್ಮಿಕವೆಂದು ಪರಿಗಣಿಸಲು ಸಾಧ್ಯವಿಲ್ಲ. ಒಬ್ಬ ಟೈಪಿಸ್ಟ್ ಉದ್ದೇಶವಿಲ್ಲದೆ ನೂರಾರು ವರ್ಷ ಟೈಪು ಮಾಡುತ್ತಿದ್ದರೂ ಕಾಳಿದಾಸನ ನಾಟಕ ನಿರ್ಮಾಣವಾಗಲಾರದು. ಇಂತಹ ವ್ಯವಸ್ಥಿತವಾದ ವಿಶಾಲ ವಿಶ್ವದ ರಚನೆಯು ಆಕಸ್ಮಿಕವಾಗಿ ಆಗಿದೆಯೆಂಬುದೂ ಅಷ್ಟೇ ಅಸಂಬದ್ಧವಾಗಿದೆ. ಜಗತ್ತಿನ ಈ ಅದ್ಭುತ ರಚನೆಯ ಹಿನ್ನಲೆಯಲ್ಲಿರುವ ಮಹಾ ಚೈತನ್ಯ ಶಕ್ತಿಯೇ ದೇವರೆಸಿದ್ದಾರೆ.

'ಕಣ್ಣಿಗೆ ಎವೆಯಂದದಿ'

ಕಣ್ಣಿಗೆ ರೆಪ್ಪೆಯು ಅತಿ ಸಮೀಪದಲ್ಲಿದ್ದು , ಹೇಗೆ ಕಣ್ಣಿನ ರಕ್ಷಣೆಯಲ್ಲೇ ತಲ್ಲೀನವಾಗಿರುವುದೋ ಅಂತೆಯೇ ಭಗವಂತನೂ ನಮ್ಮ ಸಮೀಪದಲ್ಲೆ ಇದ್ದು ಸದಾಕಾಲ ನಮ್ಮನ್ನು ಕಾಪಾಡುತ್ತಿರುತ್ತಾನೆಂಬುದಾಗಿ 'ಕಣ್ಣಿಗೆ ಎವೆಯಂದದಿ' ಎಂಬ ಮಾತಲ್ಲಿ ಸಂದೇಶಿಸಿರುವರು ಶ್ರೀಜಗನ್ನಾಥದಾಸರು.

ಈ ದೃಷ್ಟಾಂತದಿಂದ ನಾವು ಮತ್ತೊಂದು ಅಂಶವನ್ನೂ ಗಮನಿಸಿಕೊಳ್ಳಬೇಕು. ಉಳಿದ ಪದಾರ್ಥಗಳನ್ನೆಲ್ಲ ಕಾಣುವ ಕಣ್ಣು ತನ್ನ ಅತಿ ಸಮೀಪದಲ್ಲೇ ಇದ್ದು , ಸದಾಕಾಲ ತನಗೆ ಉಪಕರಿಸುತ್ತಿರುವ ರೆಪ್ಪೆಯನ್ನು ಮಾತ್ರ ಕಾಣಲಾರದು – ನಮ್ಮದೂ ಇದೇ ಪರಿಸ್ಥಿತಿ. ಅತಿ ಸಮೀಪವರ್ತಿಯಾಗಿದ್ದು, ಸದಾ ಉಪಕಾರಕನಾದ ಭಗವಂತನನ್ನೇ ನಾವು ಗುರುತಿಸಲಾರೆವು.

ಮುಗಿದಾಗ ಬರುವವನು

ಈಜು ಕಲಿಸಲು ಹೊರಟವನು ಈಜುವವನು ಮಾಮೂಲಾಗಿ ಈಜುತ್ತಿದ್ದಲ್ಲಿ ಬರೇ ನೋಡುತ್ತಿದ್ದು, ಅವನು ನೀರಲ್ಲಿ ಮುಳುಗಿದನೆಂದರೆ ಮಾತ್ರ ಅವನನ್ನು ಮೇಲೆತ್ತಲು ಧಾವಿಸಿ ಬರುವನು. ಅಂತೆಯೇ ಶ್ರೀಹರಿಯು. ಜಗತ್ತು ಮಾಮೂಲಾಗಿ ನಡೆಯುತ್ತಿರುವಾಗ ನೋಡುತ್ತಾ ಇರುವ ಅವನು ಧರ್ಮಗ್ಲಾನಿ ಸಂಭವಿಸಿತೆಂದರೆ ಧಾವಿಸಿ ಬರುವನು ; ಅವತರಿಸುವನು.

ಭಗವಂತನ ಪರಿತ್ರಾಣವೆಂದರೆ.....

ಭಗವಂತನು ಮಾಡುವ ಪರಿತ್ರಾಣ (ರಕ್ಷಣೆ) ಎಂದರೆ ಭೌತಿಕ ಶರೀರದ ರಕ್ಷಣೆ ಮಾತ್ರವಾಗಿರದೆ ಆತ್ಮದ ಕಲ್ಯಾಣ ಹಾಗೂ ಉನ್ನತಿಯೂ ಆಗಿದೆ. ಅವರವರ ಕರ್ಮಗಳಿಗನುಸಾರವಾಗಿ ಶಿಕ್ಷೆರಕ್ಷೆಗಳನ್ನೂ ಸುಖದುಃಖಗಳನ್ನೂ ನೀಡಿ ಭಗವಂತನು ಸಜ್ಜನರ ವ್ಯಕ್ತಿತ್ವವನ್ನು ಪುಟಕ್ಕಿಟ್ಟ ಚಿನ್ನದಂತೆ ಉಜ್ವಲಗೊಳಿಸುವನು.

ಆದ್ದರಿಂದ ಭಗವಂತನ ಪರಿತ್ರಾಣಕ್ಕೊಳಗಾದವರೂ ಸಾಯಬಾರದೆಂದಾಗಲೀ ತಾತ್ಕಾಲಿಕ ದುಃಖ, ನೋವುಗಳನ್ನು ಕಾಣುವಂತಾಗಬಾರದೆಂದಾಗಲೀ ಇಲ್ಲ.

ಸಿಹಿ ನೀರನ್ನು ಕರುಣಿಸುವನಂತೆ ಸೂರ್ಯ

ಸೂರ್ಯನು ಸಮುದ್ರದ ಉಪ್ಪು ನೀರನ್ನು ಹೀರಿಕೊಂಡು ಅವನೆಲ್ಲ ಸಿಹಿನೀರನ್ನಾಗಿ ಮಾರ್ಪಡಿಸಿ ಮಳೆಯ ಮೂಲಕ ನಮಗೆ ಅನುಗ್ರಹಿಸುವನು. ಭಗವಂತನೂ ಹೀಗೆಯೇ. ನಾವು ಭಕ್ತಿಯಿಂದ ಅರ್ಪಿಸುವ ಅಶಾಶ್ವತ , ಕ್ಷುಲ್ಲಕ ಪದಾರ್ಥಗಳನ್ನೆಲ್ಲ ಸ್ವೀಕರಿಸಿ ನಮಗೆ ಸುಂದರ , ಶಾಶ್ವತ ಸುಖವನ್ನು ಕರುಣಿಸುವನು.

ಮಾತೃ ಹೃದಯ

ತಾಯಿಗೆ ತನ್ನ ಮಕ್ಕಳಲ್ಲಿಯೂ ಬಹಳ ನೊಂದವರು, ರೋಗಿಗಳು, ಅಂಗವಿಕಲರು – ಮೊದಲಾದವರ ಬಗ್ಗೆ ಹೆಚ್ಚು ಗಮನ ಹರಿಸಿ , ಕನಿಕರ ತೋರುವವರೆಂದರೆ ಬಹಳ ಪ್ರಿಯರು. ಅಂತೆಯೇ ಭಗವಂತನಿಗೂ. ತನ್ನ ಮಕ್ಕಳಲ್ಲಿ ಬಡವರು, ರೋಗಿಗಳು, ಅಂಗವಿಕಲರು – ಆದ ಪ್ರಜೆಗಳ ಕುರಿತು ದುಡಿಯುತ್ತಿರುವವರನ್ನು ಕಂಡರೆ ಅವನಿಗೆ ಬಲು ಪ್ರೀತಿ.

ಭಗವಂತನ ಸರ್ಕಾರದ ವೈಶಿಷ್ಟ್ಯ

ನಮ್ಮ ಸರ್ಕಾರದಲ್ಲಿ ಅನ್ಯಾಯ ಎಸಗಿದವನು ಅಧಿಕಾರಿಗಳ ಕಣ್ಣಿಂದ ತಪ್ಪಿಸಿಕೊಳ್ಳಬಹುದು. ಆದರೆ ಭಗವಂತನ ಸರ್ಕಾರದಲ್ಲಿ ಮಾತ್ರ ಹೀಗೆ ಆಗುವುದಿಲ್ಲ. ಯಾಕೆಂದರೆ ಆ ಸರಕಾರದ ಅಧಿಕಾರಿ – ವಿಶ್ವತಶ್ಚಕ್ಷು 'ಎಲ್ಲೆಡೆ ಕಣ್ಣುಗಳುಳ್ಳ' ಭಗವಂತ. ಇಂತಹವನ ಕಣ್ಣಿಂದ ಯಾರು ತಾನೆ ತಪ್ಪಿಸಿಕೊಳ್ಳಲು ಸಾಧ್ಯ ?

ಅನ್ಯಾಯವನ್ನೆಸಗಿದವರೂ ತಾತ್ಕಾಲಿಕವಾಗಿ ಸುಖವನ್ನೇ ಹೊಂದುತ್ತಿದ್ದರೂ ಅವರಿಗೆ ಅನ್ಯಾಯಕ್ಕೆ ತಕ್ಕ ಫಲ ಒಂದಲ್ಲ ಒಂದು ದಿನ ತಪ್ಪಿದ್ದಲ್ಲ .

ಊರ್ಧ್ವ ಮುಖದ ಆಕರ್ಷಣೆ

ಜಡವಾದ ಭೂಮಿಯಲ್ಲಿ ಆಕರ್ಷಣ ಶಕ್ತಿ ಇದೆ. ಮೇಲೆ ಎಸೆದ ಯಾವ ಪದಾರ್ಥವನ್ನೇ ಆಗಲಿ, ಅದು ತನ್ನೆಡೆಗೆ ಸೆಳೆದುಕೊಂಡು ಕೆಳಗೆ ಬೀಳುವಂತೆ ಮಾಡುವುದು. ಜಡಗಳಾದ ವಿಷಯ – ಪದಾರ್ಥಗಳಲ್ಲಿರುವ ಆಕರ್ಷಣ ಶಕ್ತಿಯೂ ಈ ತೆರನಾದುದೇ. ವಿಷಯ –ಪದಾರ್ಥಗಳು ಉನ್ನತ – ಪಥಕ್ಕೆ ಏರಲಪೇಕ್ಷಿಸುವ ವ್ಯಕ್ತಿಗಳನ್ನು ಸೆಳೆದು ಕೆಳಕ್ಕೆ ತಳ್ಳುವುವು .

ಭಗವಂತನಲ್ಲೂ ಆಕರ್ಷಣಶಕ್ತಿ ಇದೆ. ಆದರೆ ಈ ಅಕರ್ಷಣ ಶಕ್ತಿ ವಿಷಯಪದಾರ್ಥಗಳ ಆಕರ್ಷಣ ಶಕ್ತಿಗಿಂತ ವಿಲಕ್ಷಣವಾದದು. ವಿಷಯ ಪದಾರ್ಥಗಳ ಆಕರ್ಷಣೆ ಅಧೋಮುಖವಾಗಿದ್ದರೆ, ಭಗವಂತನ ಆಕರ್ಷಣೆ ಊರ್ಧ್ವಮುಖವಾದದ್ದು. ವಿಷಯ ಪದಾರ್ಥಗಳು ವ್ಯಕ್ತಿಗಳನ್ನು ಕೆಳಗೆ ತಳ್ಳುತ್ತಿದ್ದರೆ , ಭಗವಂತ ಮೇಲಕ್ಕೆತ್ತುವನು. ಪ್ರಗತಿ – ಪಥದೆಡೆಗೆ ಸಾಗುವಂತೆ ಅನುಗ್ರಹಿಸುವನು. ಇಂತಹ ಭಗವಂತನ ಆಕರ್ಷಣೆಗೊಳಗಾದಾಗಲೇ ಮಾನವನ ಜೀವನ ಸಾರ್ಥಕವೆನಿಸುವುದು.

ಬಂಧಿಸುವಿಕೆಯ ಉದ್ದೇಶ

ಅಪರಾಧಿಗಳನ್ನು ಬಂಧಿಸುವ ಉದ್ದೇಶ – ಶಿಕ್ಷಿಸುವುದಕ್ಕಿಂತಲೂ ಹೆಚ್ಚಾಗಿ ಅವರಿಗೆ ತಮ್ಮ ಅಪರಾಧದ ಅರಿವು ಮೂಡಿ ಸರಿಯಾದ ತಿಳುವಳಿಕೆ ಬರಲೆಂದು.

ಭಗವಂತನು ನಮ್ಮನ್ನು ಸಂಸಾರ – ಬಂಧನದಲ್ಲಿಟ್ಟಿರುವುದರ ಉದ್ದೇಶವೂ ಇದೇ. ಜೀವಾತ್ಮನು ಭಗವಂತನ ಬಗ್ಗೆ, ಸರಿಯಾದ ವಿವೇಕವನ್ನು ಹೊಂದುವಂತಾಗಲೆಂದು.

ಮಕ್ಕಳಲ್ಲಿ ದೇವರು

ಪರಿಶುದ್ಧವಾದ ಪ್ರದೇಶದಲ್ಲಿ ಹೆಚ್ಚು ಸನ್ನಿಹಿತನಾಗುವ ಭಗವಂತ ಮಕ್ಕಳ ಹೃದಯದಲ್ಲಿ ಉಳಿದವರ ಹೃದಯಗಳಿಗಿಂತ ಹೆಚ್ಚಾಗಿ ಸನ್ನಿಹಿತನಾಗಿರುವನು. ಆ ಪುಟ್ಟ ಹೃದಯಗಳಲ್ಲಿ ಮಾನವ ದೋಷಗಳು ಇನ್ನೂ ಪ್ರವೇಶಿಸಿರುವುದಿಲ್ಲವಾದ್ದರಿಂದ ಅವು ಹೆಚ್ಚು ಪರಿಶುದ್ಧಗಳಾಗಿರುತ್ತವೆ.

ಶಾಶ್ವತ ಹಾಗೂ ಸಕಲ ಬಂಧು

ತಂದೆ, ತಾಯಿ ಮೊದಲಾದ ನಮ್ಮ ಬಂಧುಗಳು ಒಂದೊಂದು ಜನ್ಮಕ್ಕಷ್ಟೇ ಸಿಮೀತರಾದವರು. ಆದ್ದರಿಂದ ಇವರೆಲ್ಲ ಅಶಾಶ್ವತ ಬಂಧುಗಳು. ಜನ್ಮಜನ್ಮಾಂತರಕ್ಕೂ, ಶಾಶ್ವತವಾಗಿ ಬಂಧುವಾಗಿರುವವನೆಂದರೆ ಭಗವಂತನೊಬ್ಬನೇ.

ಅಲ್ಲದೆ, ಉಳಿದ ಬಂಧುಗಳ ಬಾಂಧವ್ಯ ಏಕಮುಖವಾಗಿರುವಂತಹದ್ದು. ಅಂದರೆ ಪತಿಯಾಗಿರುವವನು ಪತಿತ್ವ ಸಂಬಂಧದ ಮೂಲಕವಷ್ಟೇ ನಮ್ಮ ಬಂಧು ಹೊರತು ಅವನು ಪುತ್ರಾದಿ ಬಂಧು ಆಗಲಾರ. ಹೀಗೆಯೇ ಪುತ್ರನಾಗಿರುವವನು ಪುತ್ರತ್ವ – ಬಾಂಧವ್ಯದ ಮೂಲಕವಷ್ಟೇ ಬಂಧು; ಅವನಲ್ಲಿ ಇತರ ಬಾಂಧವ್ಯ ಇಲ್ಲ. ಹೀಗೆ ಪ್ರತಿಯೊಬ್ಬ ಬಂಧುವೂ ಒಂದೇ ರೀತಿಯ ಬಾಂಧವ್ಯವನ್ನಷ್ಟೇ ಹೊಂದಿದ್ದರೆ, ಭಗವಂತ ಮಾತ್ರ ತಂದೆ, ತಾಯಿ, ಪತಿ, ಪುತ್ರ ಹೀಗೆ ಎಲ್ಲ ಬಂಧುವೂ ಆಗಿರುವನು.

ಭಗವಂತ ಸ್ವೀಕರಿಸಬೇಕಾದರೆ

ಭಗವಂತನು ತನ್ನ ನಡೆನುಡಿಗಳಿಂದ ನೀಡಿದ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳದೆ, ಎಷ್ಟೆಷ್ಟು ಪೂಜೆ ಪುನಸ್ಕಾರಾದಿಗಳನ್ನು ಸಮರ್ಪಿಸಿದರೂ ಅವನ್ನು ಮುಟ್ಟಲಾರ.

ಹಸ್ತಿನಾವತಿಪುರಕ್ಕೆ ಸಂಧಾನಕ್ಕಾಗಿ ಹೋಗಿದ್ದ ಶ್ರೀಕೃಷ್ಣ - ದುರ್ಯೋಧನಾದಿಗಳು ಅವನನ್ನು ತಮ್ಮ ಪಕ್ಷಕ್ಕೆ ಎಳೆದುಕೊಳ್ಳಬೇಕೆಂದು ಏನೇನೋ ಉಪಚಾರಗಳನ್ನು ವ್ಯವಸ್ಥೆಗೊಳಿಸಿದ್ದರು. ಆದರೆ ಶ್ರೀಕೃಷ್ಣನು ತಾನು ಯಾವ 'ಶಾಂತಿ ಸಂದೇಶ' ವನ್ನು ಹೊತ್ತು ತಂದಿರುವನೋ ಅದನ್ನು ಸ್ವೀಕರಿಸಲು ಸಿದ್ಧರಿಲ್ಲದ ಅವರ ಯಾವುದೇ ಉಪಚಾರ ಸತ್ಕಾರಗಳನ್ನು ಸ್ವೀಕರಿಸಿಲ್ಲ.

೨. ದೇಗುಲ, ವಿಗ್ರಹ

ವಿಶ್ರಾಂತಿಧಾಮ

ಮನೆಗಳಲ್ಲಿ ಕ್ಷಣಕ್ಷಣಕ್ಕೂ ಸಾಂಸಾರಿಕ ತಾಪತ್ರಯಗಳಿಂದ ಬೆಂದು ಬಳಲುತ್ತಿರುವ ನಾವು ಸ್ವಲ್ಪ ಹೊತ್ತಾದರೂ ಶಾಂತಿ ಪಡೆಯಬೇಕೆಂದರೆ, ನೆಮ್ಮದಿಯಿಂದಿರಬೇಕಾದರೆ ದೇವಾಲಯದಷ್ಟು ಸಮರ್ಪಕ ಸ್ಥಳ ಬೇರೊಂದಿರಲಾರದು. ಅದು ಸಂಸಾರದ ತಾಪಸಂತಾಪಗಳಿಂದ ದೂರನಾದ ಭಗವಂತನ

ತಾಣವಾಗಿರುವುದರಿಂದ ಅಲ್ಲಿ ಸಂಸಾರದ ತಾಪಗಳು ನುಸುಳಲಾರವು. ಬಿಸಿಲಿನ ಬೇಗೆಗೆ ಬಳಲಿ ನೆರಳನ್ನರಸುತ್ತಿರುವವರು ಬಿಸಿಲಿನ ಸೋಂಕೂ ತಾಗದ ಸ್ಥಳವನ್ನೇ ಆರಿಸಿಕೊಳ್ಳುವುದು ಉಚಿತವಲ್ಲವೇ ?

ಸಂಪರ್ಕ ಸಾಧನ

ದೇವರು ಎಲ್ಲೆಡೆ ವ್ಯಾಪ್ತನಾದರೂ ಅಲ್ಲೆಲ್ಲ ಅವನನ್ನು ಕಾಣುವ ಶಕ್ತಿ ನಮ್ಮ ಕಣ್ಣಿಗೆ ಇಲ್ಲ. ವಿಶ್ವ ತುಂಬ ಹಬ್ಬಿರುವ ಧ್ವನಿತರಂಗಗಳನ್ನು ಗ್ರಹಿಸುವ ಸಾಮರ್ಥ್ಯ ಕಿವಿಗೆ ಇಲ್ಲದಂತೆ. ಆ ಧ್ವನಿತರಂಗಗಳನ್ನು ಗ್ರಹಿಸುವುದಕ್ಕಾಗಿಯೇ ಸಂಪರ್ಕ ಸಾಧನವಾಗಿ ರೇಡಿಯೋವನ್ನು ಬಳಸಿಕೊಳ್ಳುವೆವು . ಅಂತೆಯೇ ವಿಶ್ವ ತುಂಬ ತುಂಬಿರುವ ಭಗವಂತನನ್ನು ಕಾಣುವುದಕ್ಕೆ ಸಂಪರ್ಕ ಸಾಧನವಾಗಿ ದೇವಾಲಯಗಳು ; ಅಲ್ಲಿಯ ಪ್ರತಿಮೆಗಳು ಅತ್ಯಾವಶ್ಯಕ. ಆದರೆ ಸಂಪರ್ಕ ಸಾಧನವಾದ ರೇಡಿಯೋ ಕೆಟ್ಟರೆ ಅಪಸ್ವರವೇ ಕೇಳಿಸುವುದು. ಹೀಗೆಯೇ ಅಪಸ್ವರ ದೇವಾಲಯಗಳಿಂದ ಹೊರ ಹೊಮ್ಮದಂತೆ ಎಚ್ಚರ ವಹಿಸಿಕೊಳ್ಳಬೇಕು.

ದೀಪಸ್ತಂಭ

ಸಾಗರದಲ್ಲಿ ಚಲಿಸುವ ಹಡಗುಗಳು ದಾರಿ ತಪ್ಪದೆ ಮುನ್ನಡೆಯುವಂತೆ ದೀಪಸ್ತಂಭಗಳು (Light-house) ಮಾರ್ಗದರ್ಶನ ಮಾಡಿಸುತ್ತವೆ. ಮಠ, ದೇವಾಲಯಗಳ ಪಾತ್ರವೂ ಇದೇ. ಸಂಸಾರ - ಸಾಗರದಲ್ಲಿ ಪಯಣಿಸುವವರು ಅಡ್ಡದಾರಿ ಹಿಡಿಯದೆ ಸನ್ಮಾರ್ಗದಲ್ಲಿ ಮುನ್ನಡೆಯುವಂತೆ ಬೆಳಕು ಬೀರಬಲ್ಲವುಗಳು ಅವು .

ದೇವಾಲಯ ದೇವಾಲಯವಾಗಿಯೇ ಉಳಿಯಬೇಕು

ಮನೆಯನ್ನೋ ಅಂಗಡಿಯನ್ನೋ ಅಥವಾ ಇನ್ನಾವ ಉದ್ಯಮ ಕ್ಷೇತ್ರವನ್ನೇ ಆಗಲಿ ದೇವಾಲಯವನ್ನಾಗಿ ಮಾರ್ಪಡಿಸಿಕೊಳ್ಳಬಹುದು. ಆದರೆ ದೇವಾಲಯವನ್ನು ಮಾತ್ರ ಆ ಯಾವ ಕಾರ್ಯಕ್ಷೇತ್ರವನ್ನಾಗಿಯೂ ಬದಲಾಯಿಸಿಕೊಳ್ಳಬಾರದು. ಉಳಿದ ಯಾವ ಕಾರ್ಯಕ್ಷೇತ್ರದ ಕೆಟ್ಟ ವಾತಾವರಣವೂ ಅಲ್ಲಿಗೆ ಸುಳಿಯಬಾರದು. ದೇವಾಲಯ ದೇವಾಲಯವಾಗಿಯೇ ಉಳಿಯಬೇಕು. ಹಾಗಾದರೆ ಮಾತ್ರ ದೇವಾಲಯ ಯಾವ ಮುಖ್ಯ ಉದ್ದೇಶಕ್ಕಾಗಿ ನಿರ್ಮಿತವಾಗಿರುತ್ತದೆಯೋ ಆ ಉದ್ದೇಶ ಈಡೇರಲು ಸಾಧ್ಯ .

ಭಕ್ತಿ ಭ್ರಮೆಯಲ್ಲಿ ಪರ್ಯವಸಾನವಾಗದಿರಲಿ

ಪ್ರತಿಮೆ ದೇವರನ್ನು ಕಾಣುವ ಸಾಧನವೇ ಹೊರತು ಅದೇ ದೇವರಲ್ಲ. ಅದರಲ್ಲಿ ಸನ್ನಿಹಿತನಾದ ದೇವರಿಗೆ ಭಕ್ತಿ ಗೌರವಾದಿಗಳನ್ನು ಅರ್ಪಿಸಬೇಕು .

ಇದರ ಬದಲು ಪ್ರತಿಮೆಯೇ ದೇವರೆಂದು ಬಗೆದಲ್ಲಿ ಚಿದಾನಂದ ಸ್ವರೂಪಿಯಾದ ಭಗವಂತನಿಗೆ ಜಾಡ್ಯವನ್ನು ಆರೋಪಿಸಿದಂತಾದೀತು ! ಹೀಗೆ ಭಕ್ತಿಭ್ರಮೆಯಲ್ಲಿ ಪರ್ಯಾವಸಾನಗೊಳ್ಳದಂತೆ ಎಚ್ಚರ ವಹಿಸಬೇಕು.

ಪ್ರತೀಕವಷ್ಟೇ

ಒಂದು ತುಂಡು ಬಟ್ಟೆಯಾದ ರಾಷ್ಟ್ರಧ್ವಜವನ್ನು ರಾಷ್ಟ್ರದ ಪ್ರತೀಕವನ್ನಾಗಿಟ್ಟುಕೊಂಡು ಇಡೀ ರಾಷ್ಟ್ರಕ್ಕೆ ಸಲ್ಲಿಸಬೇಕಾದ ಭಕ್ತಿ ಗೌರವವನ್ನು ಅದರ ಮುಂದೆ ಸಲ್ಲಿಸುತ್ತೇವೆ. ಪ್ರತಿಮೆಯ ಮುಂದೆ ತಲೆ ಬಾಗಿಸುವ

ನೀತಿಯೂ ಈ ತರಹದ್ದೇ. ಪ್ರತಿಮೆಯನ್ನು ಜಗದೊಡೆಯನಾದ ಭಗವಂತನ ಪ್ರತೀಕವನ್ನಾಗಿರಿಸಿಕೊಂಡಿರುತ್ತೇವಷ್ಟೇ.

ಪಾತ್ರೆಯ ಪಾತ್ರ

'ನೀರು ತಾ' ಅಂದಾಗ ಬರೇ ನೀರು ತರದೆ, ನೀರನ್ನು ಪಾತ್ರೆಯಲ್ಲಿ ಸಂಗ್ರಹಿಸಿ ತರುತ್ತೇವೆ. ಅಂತೆಯೇ ನಾವು ಋಷಿಮುನಿಗಳಲ್ಲೂ 'ದೇವರನ್ನು ಕೊಡಿ' ಎಂದು ಕೇಳಿದಾಗ ಅವರು ಪ್ರತಿಮೆಯನ್ನು ಕಡೆದು ಕೊಟ್ಟರು. ಪಾತ್ರೆಯಿಂದ ಪ್ರತ್ಯೇಕಿಸಿ ನೀರನ್ನು ಮಾತ್ರ ಗ್ರಹಿಸುವಂತೆ, ಪ್ರತಿಮೆಯಿಂದ ಪ್ರತ್ಯೇಕಿಸಿ ಭಗವಂತನನ್ನು ಕಾಣುವುದು ನಮಗೆ ಬಿಟ್ಟದ್ದು.

೩. ಧರ್ಮ

ಧರ್ಮ ಮತ್ತು ಶಾಸ್ತ್ರ

ವಿಶ್ವದ ವ್ಯವಸ್ಥಿತವಾದ ಪ್ರವರ್ತನೆ ಮತ್ತು ಪ್ರಗತಿಗೆ ಕಾರಣವಾದ ನೀತಿನಿಯಮಗಳೇ ಧರ್ಮ. ಇದನ್ನು ಯಾವುದೇ ವಿಕೃತಿಯಿಲ್ಲದೆ ನಿಜಸ್ಥಿತಿಯಲ್ಲಿ ತೋರಿಸುವ ಕೈಗನ್ನಡಿಯೇ ಶಾಸ್ತ್ರ. ಇದು ಧರ್ಮವನ್ನು ಸತ್ಯದ ನೆಲೆಯಲ್ಲಿ ಅಧಿಕಾರವಾಣಿಯಿಂದ ಬೋಧಿಸಬಲ್ಲದು.

ಸಮಾಜ ವ್ಯವಸ್ಥೆಯ ಪ್ರೇರಕ ಶಕ್ತಿ

ಧರ್ಮ ಮತ್ತು ದೇವರ ಪ್ರಜ್ಞೆಯು ಸಮಾಜದಲ್ಲಿ ಒಂದು ರೀತಿಯ ಸುವ್ಯವಸ್ಥೆಯನ್ನು ಕಾಪಾಡಿದೆ – ಎಂಬುದನ್ನು ಧರ್ಮಾಧರ್ಮಗಳನ್ನು ಅಲ್ಲಗಳೆಯುವವರೂ ಒಪ್ಪಲೇಬೇಕಾಗಿದೆ. ನೀತಿ ಸದ್ಗುಣಗಳೇ ನಮ್ಮ ಸಾಮಾಜಿಕ ಜೀವನದ ಪೋಷಕ ದ್ರವ್ಯಗಳು. ಸಮಾಜದ ತಳಹದಿಯಾದ ಸತ್ಯ, ಪ್ರಾಮಾಣಿಕತೆ, ಪ್ರೇಮ, ಪರೋಪಕಾರ, ತ್ಯಾಗ ಮುಂತಾದ ಸದ್ಗುಣಗಳಿಲ್ಲದಿದ್ದರೆ ಹಿಂಸೆ, ಅಸತ್ಯ ವಚನಗಳಿಂದ ಜನಜೀವನವೇ ಅಸ್ತವ್ಯಸ್ತವಾಗುವುದೆಂಬುದೂ ನಿರ್ವಿವಾದ. ಧರ್ಮ ಮತ್ತು ಭಗವದ್ಭಕ್ತಿಯೇ ಈ ಎಲ್ಲಾ ನೀತಿ ಸದ್ಗುಣಗಳಿಗೆ ಪ್ರೇರಕ ಶಕ್ತಿಯಾಗಿದೆ.

ಸ್ವಚ್ಛಂದ ವ್ಯವಹಾರಗಳ ನಿಯಂತ್ರಕ

ಶತ ಶತಮಾನಗಳಿಂದ ಧಾರ್ಮಿಕ ಪುರುಷರು ಜನ ಮಾನಸದಲ್ಲಿ ಧರ್ಮ ಮತ್ತು ಭಕ್ತಿಯ ಸಂಸ್ಕಾರಗಳನ್ನು ಬಿತ್ತಿದ ಪರಿಣಾಮವಾಗಿ ಒಂದು ರೀತಿಯ ನೈತಿಕ ಸಂಪ್ರದಾಯಗಳು ನಮ್ಮ ಜೀವನದಲ್ಲಿ ಕೂಡಿಕೊಂಡಿವೆ. ದೇವರಿಲ್ಲವೆನ್ನುವವರೂ ತಮಗೆ ತಿಳಿಯದೆಯೇ ಧರ್ಮವು ಮೂಡಿಸಿದ ಈ ನೈತಿಕ ಸಂಸ್ಕಾರಗಳ ಪ್ರಭಾವಕ್ಕೆ ಒಳಗಾಗಿದ್ದಾರೆ. ಆಸ್ತಿಕರೆನಿಸಿಕೊಳ್ಳುವವರೂ ಸ್ವಾರ್ಥದ ಒತ್ತಡಗಳಿಗೆ ಮಣಿದು ಅನೈತಿಕ ವ್ಯವಹಾರಗಳಿಗೆ ಒಂದು ರೀತಿಯ ನಿಯಂತ್ರಣವನ್ನು ಸಾಧಿಸಿದೆ. ಧರ್ಮಪ್ರಜ್ಞೆಯು ಜನರ ಮನದಲ್ಲಿ ಬಲವಾಗಿ ಬೇರೂರಿಸಿದ ಈ ನೈತಿಕ ಸಂಸ್ಕಾರಗಳಿಂದಾಗಿ ಒಂದು ರೀತಿಯ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲು ಅನುಕೂಲವಾಗಿದೆ.

ಆದರ್ಶಗಳಿಗೆ ಸ್ಥಾನವೆಲ್ಲಿ ?

ಜಗತ್ತನ್ನೆಲ್ಲ ಕೇವಲ ಭೌತಿಕ ದೃಷ್ಟಿಯಿಂದಲೇ ನೋಡುವ ಲೌಕಿಕ ಜೀವನದಲ್ಲಿ ಸತ್ವ, ಕರುಣೆ, ತ್ಯಾಗ ಮುಂತಾದ ಆದರ್ಶಗಳಿಗೆ ಸ್ಥಾನವೆಲ್ಲಿ ? ಪರರ ಸುಖಕ್ಕಾಗಿ ತನ್ನ ಜೀವನದ ಸುಖ, ಸಂಪತ್ತನ್ನು,

ಕೊನೆಗೆ ತನ್ನನ್ನೂ ಕೂಡ ಬಲಿ ಕೊಡುವ ಪ್ರೇರಣೆಯನ್ನು ನಾವು ಭೌತಿಕ ವಾದದಲ್ಲಿ ಕಾಣಲು ಸಾಧ್ಯವಿದೆಯೇ ? ತನ್ನ ಸ್ವಾರ್ಥ ಸಾಧನೆಯಾಗುವುದಾದರೆ ದ್ರೋಹ, ವಂಚನೆಗಳಿಗೆ ತಾನೇಕೆ ಇಳಿಯಬಾರದೆಂಬ ಮಾನವನ ಸಹಜ ಪ್ರವೃತ್ತಿಯನ್ನು ತಡೆಯುವ ಬಗೆ ಯಾವುದು ?

ಆದ್ದರಿಂದ ಆತ್ಮನ ಅಮರತ್ವ, ಭಗವಂತನ ನ್ಯಾಯಬದ್ಧ ಶಾಸನದ ಭಾವನೆಯೇ ಎಲ್ಲ ನೈತಿಕ ಪ್ರಜ್ಞೆಯ ಮೂಲ ಪ್ರೇರಣೆಯಾಗಿದೆ ಎಂದು ಒಪ್ಪಲೇಬೇಕು.

ಸಾಪೇಕ್ಷ್ಯ ಸನಾತನ

ನಮ್ಮ ಧರ್ಮ ಸನಾತನ ; ಸದಾತನ. ಅಂದರೆ ಯಾವತ್ತೂ ಇರುವಂತಹದ್ದು. ಹಾಗಂತ ನಾವು ಅದರ ರಕ್ಷಣೆಯ ಬಗ್ಗೆ ಉದಾಸೀನರಾಗಬಾರದು . ಆತ್ಮನು ನಿತ್ಯನಾದರೂ ತನ್ನ ಉನ್ನತಿಗಾಗಿ, ವಿಕಸನಕ್ಕಾಗಿ ಅವನು ದೇಹದ ಆಸರೆ ಪಡೆಯುವಂತೆ ಧರ್ಮವೂ ತನ್ನ ವಿಕಾಸಕ್ಕೆ ನಮ್ಮ ನೆರವನ್ನು ಕೇಳುತ್ತಲೇ ಇರುತ್ತದೆ. ಧರ್ಮ-ವೃಕ್ಷಕ್ಕೆ ನಾವು ಎಲೆಗಳಿರುವಂತೆ. ಮರ ತನ್ನ ಇರುವಿಕೆಗೆ ಎಲೆಯನ್ನು ಅಪೇಕ್ಷಿಸುವಂತೆ ಎಲೆಗಳು ಮರವಿಲ್ಲದಿದ್ದಲ್ಲಿ ಇರಲು ಸಾಧ್ಯವಿಲ್ಲ – ಎಂಬುದನ್ನು ಗಮನಿಸದಿರಬಾರದು.

ಕಣ್ಣಪಟ್ಟಿ

ವಿಜ್ಞಾನವನ್ನು ಕುದುರೆಗೆ ಹೋಲಿಸಬಹುದಾದರೆ, ಧರ್ಮವನ್ನು ಕುದುರೆಯ ಕಣ್ಣಪಟ್ಟಿಗೆ ಹೋಲಿಸಬಹುದು. ಕಣ್ಣಪಟ್ಟಿಯನ್ನು ಕಳಗೊಂಡ ಕುದುರೆ ಹುಚ್ಚಾಪಟ್ಟೆ ಓಡಿ ಓಡಿ ಕೊನೆಗೆ ತನ್ನ ಬೆನ್ನ ಮೇಲಿರುವವನಿಂದೊಡಗೂಡಿಯೆ ಪ್ರಪಾತಕ್ಕೆ ಬೀಳುವುದು. ಧರ್ಮದಿಂದ ದೂರವಾದ ವಿಜ್ಞಾನದ ಗತಿಯೂ ಇದೇ ಆದೀತು !

ಅಲ್ಲದೆ, ಕುದುರೆಗೆ ಹೆಚ್ಚೆಚ್ಚು ಓಡಲು ಹುಮ್ಮಸ್ಸು ಬಂದಂತೆ, ಅದರ ಕಣ್ಣಪಟ್ಟಿಯ ಆವಶ್ಯಕತೆಯೂ ಹೆಚ್ಚಾಗುವುದು. ವಿಜ್ಞಾನ – ಕುದುರೆಗೂ ಈಗ ವೇಗದಿಂದ ಧಾವಿಸುವ ಹುರುಪಿದೆ. ಧಾವಿಸುತ್ತಲೂ ಇದೆ. ಆದ್ದರಿಂದ ಅದಕ್ಕೆ ಧರ್ಮದ ಕಣ್ಣಪಟ್ಟಿಯನ್ನು ಭದ್ರವಾಗಿ ತೊಡಿಸುವುದು ಆವಶ್ಯಕ.

ಐಶ್ವರ್ಯವಂತನೇ ಸಾಧಕನಾಗಬೇಕಿಲ್ಲ

ಐಶ್ವರ್ಯವಂತನಷ್ಟೇ ಸಾಧಿಸಬಹುದೆಂಬ ನಿಯಮವೇನೂ ಇಲ್ಲ. ಏನೂ ಐಶ್ವರ್ಯ ವಿಲ್ಲದವನೂ 'ನಿಃಸ್ವೋ ಭಕ್ತ್ಯಾ ಸಮಾಪಯೇತ್' ಎಂದಿರುವಂತೆ ಕೇವಲ ಭಕ್ತಿಯಿಂದ ಸತ್ಕರ್ಮಗಳನ್ನು ಆಚರಿಸಿ ಶ್ರೇಯಸ್ಸನ್ನು ಪಡೆಯಬಹುದು. ತನಗೆ ದೊರಕಿದ ಸಂಪತ್ತನ್ನು ಯೋಗ್ಯ ರೀತಿಯಿಂದ ವಿನಿಯೋಗಿಸಬೇಕಷ್ಟೇ.

ಬೆಳಕಂತೆ ಹರಡಿಸಿಕೊಳ್ಳಬೇಕು

ಮನೆಯಲ್ಲಿ ಬೇರೆ ಬೇರೆ ಪದಾರ್ಥಗಳನ್ನಿಡಲು ಪ್ರತ್ಯೇಕವಾದ ಒಂದೊಂದು ಸ್ಥಳವಿರುವುದು. ಆದರೆ ಬೆಳಕಿಗೆ, ಗಾಳಿಗೆ ಮಾತ್ರ ಪ್ರತ್ಯೇಕವಾದ ಒಂದು ಜಾಗವಿಲ್ಲ . ಎಲ್ಲ ಪದಾರ್ಥಗಳನ್ನಿಡುವ ಸ್ಥಳಗಳೂ ಅವುಗಳಿಗೆ ಸೇರಿದವು. ಅವು ಆ ಎಲ್ಲ ಸ್ಥಳಗಳಲ್ಲೂ ವ್ಯಾಪಿಸಿಕೊಂಡಿರುವವು. ದಿನದ ಬೇರೆ ಬೇರೆ ಅವಧಿಯನ್ನು ಆಯಾಯ ಚಟುವಟಿಕೆಗಾಗಿ ಮೀಸಲಾಗಿರಿಸುವ ನಾವು ಧರ್ಮಾಚರಣೆಗೂ ಯಾವುದಾದರೂ ಒಂದು ಅವಧಿಯನ್ನಷ್ಟೇ ನಿಗದಿ ಪಡಿಸಿದೆ, ಧರ್ಮವು ಪ್ರತಿಯೊಂದು

ಚಟುವಟಿಕೆಯಲ್ಲೂ ನಡೆಯುತ್ತಿರುವಂತೆ, ಪ್ರತಿಯೊಂದು ಚಟುವಟಿಕೆಯ ಅವಧಿಯೂ ಧಾರ್ಮಿಕ ವ್ಯವಹಾರದ ಅವಧಿಯಾಗಿರುವಂತೆ ಅರ್ಥಾತ್ ಪ್ರತಿಯೊಂದು ಚಟುವಟಿಕೆಯೂ ಧರ್ಮಕ್ಕೆ ಪೋಷಕವಾಗಿರುವಂತೆ ನಡೆದುಕೊಳ್ಳಬೇಕು.

ನಾಲ್ಕು ಅಂಶಗಳ ಆಧ್ಯಾತ್ಮಿಕ ಸೂತ್ರ

ಆಧ್ಯಾತ್ಮಿಕ ಪ್ರಗತಿಯನ್ನು ಪಡೆಯಬಯಸುವವರು ಬೆಳಗಿಂದ ರಾತ್ರಿಯವರೆಗೆ ಏನೇನು ಮಾಡಬೇಕು ? ಏನೇನನ್ನು ಮಾಡಬಾರದು ? ಅಂತೆಲ್ಲ ಶಾಸ್ತ್ರಗಳು ವಿಧಿನಿಷೇಧ ರೂಪದಲ್ಲಿ ವಿಧಿಸಿವೆ. ಈ ಕಾಲದಲ್ಲಿ ಎಲ್ಲ ವಿಧಿನಿಷೇಧಗಳನ್ನು ಪೂರ್ಣವಾಗಿ ಪಾಲಿಸಲಿಕ್ಕಾಗಲಿಕ್ಕಿಲ್ಲ. ಆದರೆ ಕನಿಷ್ಠ ಮಟ್ಟದ ಅನುಷ್ಠಾನವನ್ನಾದರೂ ಇಟ್ಟುಕೊಳ್ಳಬೇಕು. ಕನಿಷ್ಠ ಮಟ್ಟದ ಅನುಷ್ಠಾನವೆಂದರೆ ಯಾವುದು ? ಅದರಲ್ಲಿ ಯಾವ ಯಾವ ಆಚರಣೆಗಳನ್ನು ಸೇರಿಸಿಕೊಳ್ಳಬೇಕು ಎಂಬುದನ್ನು ನಾಲ್ಕು ಅಂಶಗಳನ್ನೊಳಗೊಂಡ ಆಧ್ಯಾತ್ಮಿಕ ಸೂತ್ರವೊಂದು ಹೀಗೆ ಕ್ರೋಢೀಕರಿಸಿದೆ – ಗ, ಗಾ, ಗೀ, ಗೋ ಇಲ್ಲಿ 'ಗ' – ಎಂದರೆ ಗಂಗಾ ಸ್ನಾನ. ದಿನನಿತ್ಯ ಸ್ನಾನ ಮಾಡುವಾಗ ಗಂಗೆಯನ್ನು ನೆನೆದುಕೊಂಡು ಆಕೆ ನೀರಲ್ಲಿ ಸನ್ನಿಹಿತಳಾಗುವಂತೆ ಮಾಡಿಕೊಂಡು, ಆ ನೀರಿನಿಂದ ಸ್ನಾನ ಮಾಡಬೇಕು. 'ಗಾ' ಎಂದರೆ ಗಾಯತ್ರೀ ಜಪ. ಸ್ನಾನ ಮಾಡಿದವರೇ ಲೌಕಿಕ ಕಾರ್ಯಗಳಲ್ಲಿ ತೊಡಗದೆ ಭಗವಂತನ ಸರ್ವ ವ್ಯಾಪಿತ್ವ, ಸರ್ವ ಕರ್ತೃತ್ವ, ಗುಣಪೂರ್ಣತ್ವ, ರಕ್ಷಕತ್ವ, ಬುದ್ಧಿ ಪ್ರೇರಕತ್ವಾ ಗುಣಗಳನ್ನು ಪ್ರತಿಪಾದಿಸುತ್ತಿರುವ ಗಾಯತ್ರೀ ಮಂತ್ರವನ್ನು ತಪ್ಪದೆ ಜಪಿಸಬೇಕು. 'ಗೀ' ಅಂದರೆ 'ಗೀತಾಪಾರಾಯಣ'. ಸಾಧ್ಯವಾದಷ್ಟು ಅರ್ಥಾನುಸಂಧಾನ ಪೂರ್ವಕವಾಗಿ ಭಗವದ್ಗೀತೆಯನ್ನು ಪಠಿಸಬೇಕು. 'ಗೋ' ಎಂದು ಗೋವಿಂದನನ್ನು ಪೂಜಿಸಬೇಕು. ಉಳಿದೆಲ್ಲ ಸಮಯದಲ್ಲಿ ಲೌಕಿಕ ಕಾರ್ಯಗಳನ್ನು ನಡೆಸುತ್ತಿರುವಾಗಲೂ ಆಯಾಯ ಕಾರ್ಯಗಳನ್ನು ನಡೆಸಲು ಬುದ್ಧಿ, ಶಕ್ತ್ಯಾದಿಗಳನ್ನು ಪ್ರಚೋದಿಸುತ್ತಿರುವ ಗೋವಿಂದನ್ನು ಸ್ಮರಿಸುತ್ತಿರಬೇಕು.

ಹೀಗೆ ನಾಲ್ಕು ಅಂಶಗಳನ್ನೊಳಗೊಂಡ ಈ ಆಧ್ಯಾತ್ಮಿಕ ಸೂತ್ರದಲ್ಲಿ ಶಾಸ್ತ್ರದ ಆದೇಶ, ಉಪದೇಶಗಳ ಸರ್ವಸ್ವವೂ ಅಡಗಿದೆ.

ದಾನಿಯೇ ಹೆಚ್ಚು ಲೋಭಿ

ಏನನ್ನೂ ದಾನಮಾಡದೆ, ಗಂಟು ಕಟ್ಟಿಡುವ ಲೋಭಿಗಿಂತಲೂ ತನ್ನಲ್ಲಿರುವುದನ್ನೆಲ್ಲ ದಾನ ಮಾಡುವ ದಾನಿಯೇ ಹೆಚ್ಚು ಲೋಭಿ. ಅವನು ಈಗಿಂದೀಗಲೇ ಪರಲೋಕದ ಸುಖಕ್ಕಾಗಿಯೂ ಸ್ಟಾಕ್ ಮಾಡುತ್ತಿರುವನು. ತಾನು ಹೋಗುವ ಮುಂಚೆಯೇ ಪರಲೋಕಕ್ಕೆ ಸಾಗಿಸುವನು. ಆದರೆ ಲೋಭಿಯಾದರೂ ಯಾರಿಗೂ ದಾನ ಮಾಡದೆ ತಾನೂ ತಿನ್ನದೆ ಎಲ್ಲವನ್ನೂ ಪರರಿಗಾಗಿಯೇ ಬಿಟ್ಟು ಹೋಗುವನು ತಾನೇ ?

ಕೆಟ್ಟ ಹಣವನ್ನು ಒಳ್ಳೆಯದನ್ನಾಗಿಸುವಿಕೆ

ಸಂತೆಯಲ್ಲಿ ಬೇರೆ ಬೇರೆ ಪದಾರ್ಥಗಳನ್ನು ಕೊಂಡುಕೊಳ್ಳುವಾಗ, ಒಳ್ಳೆಯ ಹಣ್ಣು, ಒಳ್ಳೆಯ ತರಕಾರಿ – ಹೀಗೆ ಒಳ್ಳೆಯವುಗಳನ್ನೇ ಆರಿಸಿಕೊಂಡು ಸ್ವೀಕರಿಸುವೆವು. ಆದರೆ ಹಣವನ್ನು ಸಂಪಾದಿಸುವಾಗ ಮಾತ್ರ ಈ ನೀತಿಯನ್ನು ಅನುಸರಿಸಲಾರೆವು. ಒಳ್ಳೆಯದು, ಕೆಟ್ಟದು ಎಂಬ ಭೇದ ಮಾಡದೆ ಹಣದ ಸಂಪಾದನೆಯಲ್ಲಿ ತೊಡಗುವೆವು. ಹೀಗೆ ಸಂಚಯಿಸಿದ ಕೆಟ್ಟ ಹಣವನ್ನು ಒಳ್ಳೆಯದನ್ನಾಗಿ ಮಾರ್ಪಡಿಸಿ ಕೊಳ್ಳಬೇಕೆಂದರೆ ಆ ಹಣವನ್ನು ಸತ್ಕಾರ್ಯಗಳಿಗಾಗಿ ವಿನಿಯೋಗಿಸಬೇಕು.

ಯಾರಿಗೆ ದಾನ ಮಾಡಬೇಕು ?

ಸದಾಚಾರಿಗಳೂ ವಿದ್ವಾಂಸರೂ ಆದ ವ್ಯಕ್ತಿಗಳಿಗೆ ದಾನ ಮಾಡಬೇಕಾದಂತೆ ಅಂಗವಿಕಲರೂ ಬಡವರೂ ಆದ ಸಾಮಾನ್ಯ ಜನರಿಗೂ ದಾನ ಮಾಡಬೇಕು. 'ಸಕಲ ಪ್ರಾಣಿಗಳಿಗೂ ಉಪಕಾರ ಮಾಡಬೇಕು. ಇದರಿಂದ ಭಗವಂತ ಪ್ರೀತನಾಗುವನು' – ಎಂದು ಶ್ರೀಮಧ್ವಾಚಾರ್ಯರು ಸಂದೇಶಿಸಿರುವರು. ಆದರೆ ಸದಾಚಾರಿಗಳಿಗೆ, ಜ್ಞಾನಿಗಳಿಗೆ ನೀಡುವ ದಾನ ವಿಶೇಷ ಫಲದಾಯಕ.

ಪರಲೋಕದ ಚಲಾವಣೆಯಲ್ಲಿರುವ ನಾಣ್ಯ

ನಾವು ದೇಶಾಂತರಕ್ಕೆ ತೆರಳುವಾಗ ಅಲ್ಲಿ ಚಲಾವಣೆಗಾಗಿ ನಮ್ಮ ನಾಣ್ಯಗಳನ್ನು ಅಲ್ಲಿಯ ನಾಣ್ಯಗಳನ್ನಾಗಿ ಪರಿವರ್ತಿಸಿಕೊಳ್ಳಬೇಕು. ಅಂತೆಯೇ ಪರಲೋಕದ ಚಲಾವಣೆಯಲ್ಲಿರುವ ಒಂದೇ ಒಂದು ನಾಣ್ಯ –ಪುಣ್ಯ . ಆದ್ದರಿಂದ ನಾವು ನಮ್ಮಲ್ಲಿರುವ ಇಲ್ಲಿಯ ನಾಣ್ಯಗಳನ್ನೆಲ್ಲ ಸತ್ಕರ್ಮಗಳಿಗೆ ವಿನಿಯೋಗಿಸಿ ಆದಷ್ಟು ಹೆಚ್ಚು ಪ್ರಮಾಣದಲ್ಲಿ ಪರಲೋಕದ ನಾಣ್ಯ – ಸಂಗ್ರಹ ಕಾರ್ಯದಲ್ಲಿ ತೊಡಬೇಕು.

ಮಂತ್ರಿ ಪದವಿಯಷ್ಟೇ ಅಶಾಶ್ವತ

ಮಂತ್ರಿ ಪದವಿಯಲ್ಲಿರುವಾಗ ಬೇಕು ಬೇಕಾದಂತೆ ಮೆರೆಯಬಹುದಾದರೂ ಒಂದಲ್ಲ ಒಂದು ದಿನ ಆ ಪದವಿಯಿಂದ ಇಳಿಯಲೇ ಬೇಕು. ಸಾಮಾನ್ಯ ನಾಗರಿಕನಾಗಲೇ ಬೇಕು. ಸ್ವರ್ಗ ಪದವಿಯೂ ಇಷ್ಟೇ ಅಶಾಶ್ವತ. 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' ಸ್ವರ್ಗಕ್ಕೇರಿಸಿದ ಪುಣ್ಯ ಖರ್ಚಾಗುತ್ತಲೇ ಮರುಕ್ಷಣವೇ ಸ್ವರ್ಗ ಪದವಿಯನ್ನು ಖಾಲಿಮಾಡಬೇಕು. ಆದ್ದರಿಂದಲೇ ಇಂತಹ ತಾತ್ಕಾಲಿಕ ಸುಖಕ್ಕೆ ಬಾಯೊಡ್ಡಿ ಕಾಮ್ಯಕರ್ಮಗಳನ್ನಾಚರಿಸುವ ಬದಲು ಶಾಶ್ವತ ಸುಖಕ್ಕೆ ಕಾರಣವಾದ ನಿಷ್ಕಾಮಕರ್ಮಗಳನ್ನು ಆಚರಿಸುವುದೇ ಉತ್ತಮ.

ಜನ್ಮಾಂತರೀಯ ಕರ್ಮಗಳ ಫಲವಷ್ಟೇ

ಕೆಲವೊಮ್ಮೆ ದೇವರು, ಧರ್ಮ ಮೊದಲಾದವುಗಳಲ್ಲಿ ನಂಬಿಕೆಯಿಟ್ಟು, ಸಾತ್ವಿಕ ರೀತಿಯಿಂದ ಜೀವಿಸುತ್ತಿರುವವರು ಕಷ್ಟಕೋಟಲೆಗೆ ಒಳಗಾಗಬೇಕಾಗುವುದು.

ಹಾಗೆಯೇ ಇದಾವುದನ್ನೂ ನಂಬದೆ ದುಷ್ಟರಾಗಿ ಬಾಳುವವರೂ ಸುಖಿಗಳಾಗಿದ್ದಿರಬಹುದು. ಇಷ್ಟು ಮಾತ್ರದಿಂದ ನಾವು ಧರ್ಮಾಧಿಗಳಲ್ಲಿ ವಿಶ್ವಾಸವನ್ನು ಕಳೆದುಕೊಳ್ಳಬಾರದು.

ಯಾವ ಪುರಾಣವನ್ನು ಪರಿಶೀಲಿಸಿದರೂ ಭಗವದ್ಭಕ್ತರೂ ಮಹಾತ್ಮರೂ ನಮಗಿಂತ ಹೆಚ್ಚು ಕಷ್ಟಗಳನ್ನು ಎದುರಿಸಿದ ಸಂಗತಿಗಳನ್ನೇ ನಾವು ಓದುತ್ತೇವೆ. ನಮ್ಮ ಸುಖದುಃಖಗಳು ಈ ಜನ್ಮದ ಸುಕೃತದುಷ್ಕೃತಗಳ ಫಲಗಳೆಂದು ಭಾವಿಸುವುದರಲ್ಲಿಯೇ ನಾವು ತಪ್ಪಿದ್ದೇವೆ. ನಾವು ಈ ಜನ್ಮದಲ್ಲಿ ಪುಣ್ಯ ಕರ್ಮಗಳನ್ನೇ ಆಚರಿಸುತ್ತಿದ್ದರೂ ಹಿಂದಿನ ಜನ್ಮಗಳಲ್ಲಿ ಪಾಪಗಳನ್ನು ಎಸಗಿದ್ದು ಅವುಗಳ ಫಲಗಳನ್ನು ಈಗ ಉಣ್ಣಬಾರದೇಕೆ? ಹಾಗೆಯೇ ದುಷ್ಟರು ಹಿಂದಿನ ಜನ್ಮದ ಪುಣ್ಯದ ಫಲವಾಗಿ ಮೆರೆಯುತ್ತಿರಬಹುದು.

ಆದ್ದರಿಂದ ಜೀವನದಲ್ಲಿ ಬರುವ ದುಃಖದುಮ್ಮಾನಗಳಾಗಿ ಧರ್ಮಾದಿಗಳಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುವುದರಲ್ಲಿ ಅರ್ಥವಿಲ್ಲ.

ಹನುಮ –ಭೀಮರ ಸಮಾಗಮ

ಸೌಗಂಧಿಕಾಪುಷ್ಪವನ್ನು ತರಲು ಹೊರಟ ಭೀಮಸೇನ ದಾರಿಯಲ್ಲಿ ತನ್ನದೇ ರೂಪಾಂತರವಾದ

ವೃದ್ಧ ಹನುಮಂತನನ್ನು ಭೆಟ್ಟಿಯಾಗಿ, ಅವನ್ನು ಪರಿಚಯಿಸಿಕೊಳ್ಳಲಾರದವನಂತೆ ನಟಿಸಿ, ಅವನ ಜೊತೆಗೆ ಹೋರಾಟ ನಟನೆಯನ್ನು ಮಾಡಿ ಕೊನೆಗೆ ರಾಜಿಯಾಗಿರುವ ಘಟನೆ ಮಹಾಭಾರತದಲ್ಲಿ ನಿರೂಪಿಸ ಲಾಗಿದೆ.

ಎದುರು ಬಂದ ಮರ, ಗಿಡ, ಬೆಟ್ಟಗಳನ್ನೆಲ್ಲ ಲೆಕ್ಕಿಸದೆ ನೆಲಸಮ ಮಾಡುತ್ತ ಸಾಗುತ್ತಿದ್ದ ಅಂದಿನ ಭೀಮಸೇನನಂತೆಯೇ ಇಂದು ವಿಜ್ಞಾನವೂ ರಭಸದಿಂದ ಮುನ್ನಡೆಯುತ್ತಿದೆ. ಭೀಮಸೇನನಿಗೆ ದಾರಿಯಲ್ಲಿ ವೃದ್ಧ ಹನುಮಂತನ ಬಾಲ ಮಾತ್ರ ಅಡ್ಡ ಬಂತು. ಅದನ್ನೂ ಸರಿಸಲಾಗದವನಾದ ಭೀಮಸೇನ. ಹನುಮಂತ ತನ್ನ ರೂಪಾಂತರವೇ ಆಗಿದ್ದರೂ ಯುಗ ಯುಗಕ್ಕೆ ಹೇಗೆ ವ್ಯಕ್ತಿಗಳಲ್ಲಿ ಶಕ್ತಿ-ಹ್ರಾಸವಾಗುವುದೆಂಬುದನ್ನು ತೋರಿಸಿಕೊಡುವುದಕ್ಕಾಗಿಯಷ್ಟೇ ಹಾಗೆ ಭೀಮಸೇನ ನಟಿಸಿದ, ಈಗ ವಿಜ್ಞಾನವನ್ನು ವೃದ್ಧ ಹನುಮಂತನ ಸ್ಥಾನದಲ್ಲಿರುವ ಸನಾತನಧರ್ಮ, ಅದೂ ಬರೇ ಬಾಲದಿಂದಷ್ಟೇ ಪ್ರತಿಬಂಧಿಸುತ್ತಿದೆ. ಸನಾತನಧರ್ಮದ ಜೊತೆಗೆ ಹೋರಾಟಕ್ಕೆ ನಿಂತರೆ ವಿಜ್ಞಾನ ಮಹಾಗಂಡಾಂತರಕೊಳ್ಳಬೇಕಾದೀತು ! ಭೀಮ ಹಾಗೂ ಹನುಮಂತರು ಕೊನೆಗೆ ಪರಸ್ಪರವಾಗಿ ಅರಿತುಕೊಂಡು ಹೊಂದಿಕೊಂಡಂತೆ ಧರ್ಮ ಮತ್ತು ವಿಜ್ಞಾನಗಳೂ ಅನ್ಯೋನ್ಯವಾಗಿ ಹೊಂದಾಣಿಕೆಯನ್ನು ತಂದುಕೊಂಡರಷ್ಟೇ ಪ್ರಗತಿಯಾದೀತು !

ಕೃತಜ್ಞತೆಯ ಕುರುಹು

ಬದರಿ ಮೊದಲಾದ ಕ್ಷೇತ್ರಗಳಲ್ಲಿ ಶ್ರಾದ್ಧ ಮಾಡಿದುದರಿಂದ ಪಿತೃಗಳ ಸದ್ಗತಿ ಪಡೆದಿದ್ದರಬಹುದು. ಆದರೆ ಇಷ್ಟು ಮಾತ್ರಕ್ಕೆ , ಬದರಿಯಲ್ಲಿ ಶ್ರಾದ್ಧ ಮಾಡಿದವರು ಮುಂದೆ ತಮ್ಮ ಪಿತೃಗಳಿಗೆ ಶ್ರಾದ್ಧ ಮಾಡುವುದನ್ನೇ ನಿಲ್ಲಿಸಿಬಿಡಬಾರದು.

ಭಗವಂತನು ನಿತ್ಯತೃಪ್ತನಾಗಿರುವನು, ಅವನಿಗೆ ಪೂಜೆ, ನೈವೇದ್ಯ ಯಾಕೆಂದು ನಾವು ಪ್ರಶ್ನಿಸು ತ್ತೇವೆಯೇ ? ಭಗವಂತನನ್ನು ಪ್ರತಿನಿತ್ಯ ಪೂಜಿಸುವುದು ನಮ್ಮ ಕರ್ತವ್ಯವೆಂದು ನಮಗಾಗಿ ನಾವು ಅವನನ್ನು ಪೂಜಿಸುತ್ತೇವೆ. ಹೊರತು ಅವನಿಗಾಗಿ ಅಲ್ಲ. ಆದರಂತೆ ಪಿತೃಗಳು ಸದ್ಗತಿಯನ್ನು ಪಡೆದಿದ್ದರೂ ಅವರ ಬಗ್ಗೆ ಕೃತಜ್ಞತೆಯ ಕುರುಹಾಗಿ ಶ್ರಾದ್ಧದ ರೂಪದಲ್ಲಿ ಪ್ರತಿವರ್ಷ ಶ್ರದ್ಧಾಂಜಲಿಯನ್ನು ಅರ್ಪಿಸುವುದು ಕರ್ತವ್ಯವಾಗಿದೆ.

೪. ಸಂಸ್ಕೃತಿ

ಅಧ್ಯಾತ್ಮ ವಿದ್ಯೆಯಿಂದಲೇ ಆತ್ಮ ವಿಕಾಸ

ಎಷ್ಟೆಷ್ಟೋ ವಿದ್ಯೆಗಳನ್ನು ಕಲಿತು ನಾವು ಪಂಡಿತರೆನಿಸಿಕೊಳ್ಳಬಹುದು. ಕೀರ್ತಿಗಳಿಸಿಕೊಳ್ಳಬಹುದು; ಹಣ ಸಂಪಾದಿಸಿಕೊಳ್ಳಬಹುದು. ಆದರೆ ನಮ್ಮ ಆತ್ಮ - ವಿಕಾಸವಾಗಬೇಕಾದರೆ ಅಧ್ಯಾತ್ಮ ವಿದ್ಯೆಯ ಅಭ್ಯಾಸವೇ ಬೇಕು. ಅಧ್ಯಾತ್ಮ ವಿದ್ಯೆಯ ಬೆಳಕೊಂದೇ ನಮ್ಮ ಆತ್ಮನನ್ನು ಅರಳಿಸಬಲ್ಲಂತಹದ್ದು. ವಿದ್ಯುದ್ದೀಪ, ಗ್ಯಾಸ್‌ಲೈಟ್ ಮೊದಲಾದವನ್ನು ಹತ್ತಿಸಿಟ್ಟು ರಾತ್ರಿಯನ್ನು ಬೆಳಗಿಸಬಹುದು. ಆದರೆ ಇದರಿಂದ ಕಮಲ ಅರಳಲಾರದು. ಕಮಲ ಅರಳಬೇಕಾದರೆ ಸೂರ್ಯನೇ ಉದಯಿಸಬೇಕು; ಅವನ ಬೆಳಕೇ ಅದಕ್ಕೆ ತಲುಪಬೇಕಲ್ಲವೇ ?

'ಭ'ಕಾರವಿಲ್ಲದ ಭವನ

ಮನೆ ಭವನ ಎಂದೆನಿಸಬೇಕಾದರೆ, ಅಲ್ಲಿ ಭಗವದ್ಭಕ್ತಿ ಭಗವದ್ಭಜನೆ ಮೊದಲಾದವು

ನಡೆಯುತ್ತಿರಬೇಕು. ಹೀಗೆ ಭಗವಂತನ ಸಂಪರ್ಕವಿಲ್ಲದಿದ್ದಲ್ಲಿ, ಅದು ಭಕಾರವನ್ನು ಕಳಕೊಂಡು 'ವನ' ಎಂದೇ ಎನಿಸಿತು. ಅಲ್ಲಿರುವವರು ಭವನವಾಸಿಗಳಾದ ಮಾನವರಾಗುವ ಬದಲು ವನವಾಸಿಗಳಾದ ಪಶುಗಳೆಂದಾದಾರು!

ಕೆಟ್ಟ ಪುಷ್ಪಗಳನ್ನು ಅರ್ಪಿಸುವುದೇ!

ನಿಜ; ದೇವರಿಗೆ ಸಮರ್ಪಿಸಿದ್ದನ್ನೇ ಸ್ವೀಕರಿಸಬೇಕು. ಆದರೆ ನಾವು ಸ್ವೀಕರಿಸಬೇಕೆಂದು ಚಹಾ, ಕಾಫಿ ಮೊದಲಾದವನ್ನೂ ದೇವರಿಗೆ ಸಮರ್ಪಿಸಬಾರದು. ದೇವರಿಗೆ ಒಳ್ಳೆಯ ಪದಾರ್ಥಗಳನ್ನಷ್ಟೇ ಅರ್ಪಿಸಬೇಕು. ಪರಿಮಳವಿಲ್ಲದ ಪುಷ್ಪಗಳನ್ನು ದೇವರಿಗೆ ಅರ್ಪಿಸುವುದಿದೆಯೇ ? ಅಂತೆಯೇ ದುರ್ವ್ಯಸನಕ್ಕೆ ಸೇರಿದ ಕಾಫಿ, ಚಹಾದಿಗಳನ್ನು ದೇವರಿಗೆ ಅರ್ಪಿಸಬಾರದು. ಆದ್ದರಿಂದಲೇ ನಾವೂ ಅವುಗಳನ್ನು ಸ್ವೀಕರಿಲೇ ಬಾರದು.

ಇನ್ನೇನು, ಅವನ್ನು ಸ್ವೀಕರಿಸದೇ ಬದುಕಲೇ ಸಾಧ್ಯವಿಲ್ಲ ಎನ್ನುವಷ್ಟೂ ಅವುಗಳಿಗೆ ಈಗಾಗಲೇ ಗುಲಾಮರಾಗಿದಲ್ಲಿ, ದೇವರಿಗೆ ಸಮರ್ಪಿಸಿದ ಹಾಲು, ಸಕ್ಕರೆಗಳನ್ನು ಬೆರೆಸಿಯಾದರೂ ಅವನ್ನು ಸ್ವೀಕರಿಸಬೇಕು.

ಪಾಪಕರ್ಮಗಳ ಅರ್ಪಣೆ

ನಮ್ಮ ಎಲ್ಲ ಕ್ರಿಯೆಗಳೂ ಭಗವಂತನ ಶಕ್ತಿಯಿಂದಲೇ ನಡೆಯುತ್ತಿವೆ. ನಮ್ಮ ಸಹಜವಾದ ಸ್ವಭಾವ, ಗುಣಧರ್ಮಗಳಿಂದ ಪಾಪಪುಣ್ಯ ಕಾರ್ಯಗಳು ನಡೆದರೂ ಅವುಗಳಿಗೆ ಭಗವಂತನ ಉದ್ಬೋಧನೆ ಅತ್ಯಾವಶ್ಯಕ. ಆದ್ದರಿಂದ ನಮ್ಮ ಪಾಪ ಪುಣ್ಯ ಕರ್ಮಗಳೆರಡನ್ನೂ ಭಗವಂತನ ಅಧೀನಗಳೆಂದು ಭಾವಿಸಬೇಕು. ಇದೇ ಭಗವದರ್ಪಣವೆನಿಸುವುದು. ಈ ರೀತಿಯಾಗಿ ನಾವು ಸತ್ಕರ್ಮಗಳಂತೆ ಪಾಪಕರ್ಮಗಳನ್ನೂ ಭಗವಂತನಿಗೆ ಅರ್ಪಿಸಲೇಬೇಕು.

ಆದರೆ ನಾವು ಸಿದ್ಧಪಡಿಸಿದ ಉತ್ತಮ ನೈವೇದ್ಯವನ್ನು ಮಾತ್ರ ಭಗವಂತನು ಸ್ವೀಕರಿಸುವಂತೆ ನಮ್ಮ ಸತ್ಕರ್ಮಗಳನ್ನಷ್ಟೇ ಭಗವಂತನು ಸ್ವೀಕರಿಸುವನು. ಆದ್ದರಿಂದ ಅವನಿಗೆ ಇಷ್ಟವೆನಿಸಿರುವ ಸತ್ಕರ್ಮಗಳನ್ನಷ್ಟೇ ಅವನಿಗೆ ಅರ್ಪಿಸುವುದು ನಮ್ಮ ಕರ್ತವ್ಯ.

ಆದ್ದರಿಂದ ಒಂದು ಅರ್ಥದಲ್ಲಿ ಪುಣ್ಯ ಪಾಪ ಕರ್ಮಗಳೆರಡನ್ನೂ ಭಗವಂತನಿಗೆ ಅರ್ಪಿಸಬೇಕೆನ್ನುವುದೂ ಮತ್ತೊಂದು ಅರ್ಥದಲ್ಲಿ ಪುಣ್ಯಕಾರ್ಯಗಳನ್ನಷ್ಟೇ ಅವನಿಗೆ ಅರ್ಪಿಸಬೇಕೆನ್ನುವುದೂ ಕೂಡುವುದು.

ಭಗವಂತನನ್ನು ಮಲಗಿಸುವ ಉದ್ದೇಶ

ಭಗವಂತನಿಗೆ ನಿದ್ದೆಯಿಲ್ಲ ನಿಜ. ಅವನಿಗೆ ಹಸಿವೂ ಇಲ್ಲ. ಹೀಗಿದ್ದರೂ ಪರಿಪೂರ್ಣನಾದ ಅವನಿಗೆ ನಮ್ಮ ನೈವೇದ್ಯ ಕಾಣಿಕೆಗಳನ್ನೇಕೆ ಅರ್ಪಿಸುತ್ತೇವೆ ? ನಮ್ಮಲ್ಲಿ ಭಗವಂತನ ಬಗ್ಗೆ ಭಕ್ತಿಭಾವವು ಅಭಿವೃದ್ಧಿಯಾಗಲು ಇಂತಹ ಉಪಚಾರ ಆರಾಧನೆಗಳು ಅತ್ಯಾವಶ್ಯಕವಾಗಿದೆ. ಇವೆಲ್ಲ ನಮ್ಮ ಅಂತರಂಗದ ಸಾಧನೆಗಳು. ಸರ್ವರೀತಿಯಿಂದ ನಮಗೆ ಉಪಕಾರಕನಾದ ಭಗವಂತನನ್ನು ತಂದೆಯಾಗಿ, ತಾಯಿಯಾಗಿ, ಮಗುವಾಗಿ ವಿವಿಧ ಭಾವಗಳಿಂದ ಪ್ರೇಮೋಪಚಾರಗಳಿಂದ ಆರಾಧಿಸಿದೆವೆಂದರೆ ನಮ್ಮ ಅಂತಃಕರಣದಲ್ಲಿ ಉದಾತ್ತ ಸಂಸ್ಕಾರಗಳು ಮೂಡುವವು.

ಎಣ್ಣೆ ಹಾಕದ ದೀಪ

ಹೂಬತ್ತಿ ಎಷ್ಟೇ ಚೆನ್ನಾಗಿದ್ದರೂ ಅದಕ್ಕೆ ಎಣ್ಣೆ ಸುರಿಯದಿದ್ದರೆ, ಅದು ಹೇಗೆ ತಾನೆ ದೀಪವನ್ನು ಉರಿಸೀತು ?

ತಮ್ಮ ಪಾಲಿನ ಯತ್ನವನ್ನು ನಿರ್ವಹಿಸದೇ ಬರೇ ದೈವದಿಂದಲೇ ಕಾರ್ಯವಾಗಲೆಂದರೆ ಅದು ಹೇಗೆ ತಾನೇ ಸಾಧ್ಯ ?

ಖಂಡನೆ ಮಂಡನೆ ಬೇಕು; ಆದರೆ

ಖಂಡನೆ ಮಂಡನೆಗಳಿಲ್ಲದಿದ್ದಲ್ಲಿ ಜ್ಞಾನಧಾರೆ ಮುಂದುವರಿಯುವುದಿಲ್ಲ. ಆದ್ದರಿಂದ ಅವು ಬೇಕೇ ಬೇಕು. ಆದರೆ ಮಾತ್ರ ರಾಗದ್ವೇಷಾದಿಪೂರ್ವಕವಾಗಿ ಖಂಡನೆ ಮಂಡನೆಗಳು ನಡೆಯಬಾರದು.

ಮನೆಯ ಮಾಡು ಹಾರದಿರಲಿ

ನಮ್ಮ ಸಂಸ್ಕೃತಿಗೆ ಬೇರೆ ಬೇರೆ ಸಂಸ್ಕೃತಿಗಳ ಒಳ್ಳೆಯ ಅಂಶಗಳೆಲ್ಲ ಬಂದು ಸೇರಿಕೊಳ್ಳಲಿ. ಆದರೆ ಹೀಗೆ ನುಸುಳಿಕೊಳ್ಳಲು ಪ್ರಾರಂಭಿಸುವ ಆ ಎಲ್ಲ ಸಂಸ್ಕೃತಿಗಳು ನುಗ್ಗಿ ಕೊನೆಗೆ ನಮ್ಮ ಸಂಸ್ಕೃತಿಯನ್ನೇ ಹಾರಿಸಿಬಿಡಬಾರದಷ್ಟೇ.

ಮನೆಗೆ ನಾಲ್ಕು ದಿಕ್ಕುಗಳಿಂದಲೂ ಒಳ್ಳೆಯ ಗಾಳಿ ಬರಲಿ. ಆದರೆ ಹೀಗೆ ಬೀಸಲು ಪ್ರಾರಂಭಿಸುವ ಗಾಳಿ ಮನೆಯ ಮಾಡನ್ನೇ ಹಾರಿಸಲು ತೊಡಗಿದರೆ ಹೇಗೆ ?

ಸ್ವಾಮಿಯ ಅನುಕರಣೆ

ಶ್ರೀರಾಮನು ತನ್ನ ತಂದೆ ದಶರಥನ ವಾಕ್ಯ ಪರಿಪಾಲನೆಗಾಗಿ ರಾಜ್ಯವನ್ನೇ ಬಿಟ್ಟು ಕಾಡಿಗೆ ತೆರಳಿದರೆ, ಭಕ್ತ ಭೀಷ್ಮಾಚಾರ್ಯರು ತಂದೆಯಾದ ಶಂತನುವಿಗಾಗಿ ಜೀವನವಿಡೀ ಮದುವೆಯಾಗದೆ, ಬ್ರಹ್ಮಚಾರಿಯಾಗಿ ಇರಲು ನಿರ್ಧರಿಸಿಕೊಂಡ. ತ್ಯಾಗದಲ್ಲಿ ಸ್ವಾಮಿಯನ್ನು ಅನುಸರಿಸಲು ಹೊರಟ ಭಕ್ತ-ಭೀಷ್ಮಾಚಾರ್ಯರು.

ಜಾತಿ ಮತ್ತು ಮತ

ಜಾತಿ ಮತ್ತು ಮತಗಳಲ್ಲಿರುವ ಅಂತರವನ್ನು ನಾವು ಗುರುತಿಸಿಕೊಳ್ಳಬೇಕು. ಮತವು ಹೃದಯದ ಶ್ರದ್ಧೆಯನ್ನು ಅವಲಂಬಿಸಿದೆ. ಪ್ರತಿಯೊಬ್ಬನಿಗೂ ತನಗೊಪ್ಪುವ ಮತವನ್ನು ಸ್ವೀಕರಿಸುವ ಅಧಿಕಾರವಿದೆ. ಜಾತಿಯು ಜನ್ಮ ಮತ್ತು ಸಂಸ್ಕಾರಗಳನ್ನು ಅವಲಂಬಿಸಿಕೊಂಡಿದೆ. ಜನ್ಮತಃ ಅನ್ಯಜಾತೀಯನು ಬ್ರಾಹ್ಮಣ ಸಂಸ್ಕಾರಗಳನ್ನು ಅಳವಡಿಸಿಕೊಂಡ ಮಾತ್ರಕ್ಕೆ ಬ್ರಾಹ್ಮಣ್ಯವನ್ನು ಪಡಕೊಳ್ಳುವಂತಿಲ್ಲ. ಅಂತೆಯೇ ಜನ್ಮತಃ ಬ್ರಾಹ್ಮಣನಾದವನೂ ಮದ್ಯಮಾಂಸಾದಿಗಳನ್ನು ಸ್ವೀಕರಿಸುತ್ತಿದ್ದಲ್ಲಿ ಅವನು ಬ್ರಾಹ್ಮಣನಾಗಲಾರ.

ರೋಗಿಗೆ ಹೆಚ್ಚು ನಿಯಮಗಳು

ವಾಲಿ ಸತ್ತ ಮೇಲೆ ಅವನ ಪತ್ನಿ ತಾರಾಳನ್ನು ಸುಗ್ರೀವ ಸ್ವೀಕರಿಸಿದ. ಇದು ಈಗಿನ ಧಾರ್ಮಿಕ ಕಟ್ಟುಪಾಡಿಗೆ ವಿರುದ್ಧವಾದುದು. ಆದರೆ ಆ ಯುಗದ ಧಾರ್ಮಿಕ ನಿಯಮಕ್ಕೆ ವಿರುದ್ಧವಾಗಿದ್ದಿಲ್ಲ.

ಋಷಿಗಳು ಸಾಮಾಜಿಕ ಪರಿಸ್ಥಿತಿಗಳನ್ನು ಪರಿಶೀಲಿಸಿ ಆಯಾಯ ಯುಗಕ್ಕೆ ತಕ್ಕಂತೆ ಧರ್ಮವನ್ನು ಯೋಜಿಸಿರುವರು. ಆದ್ದರಿಂದಲೇ ಯುಗ ಯುಗಕ್ಕೆ ಕಾಲ ಕಾಲಕ್ಕೆ ಧಾರ್ಮಿಕ ಕಟ್ಟುಪಾಡಿನಲ್ಲಿ

ಬದಲಾವಣೆ ಆಗುತ್ತಿರುತ್ತವೆ. ಮನುಷ್ಯನ ದೌರ್ಬಲ್ಯ ಹೆಚ್ಚಿದಂತೆ ಧಾರ್ಮಿಕ ಕಟ್ಟುಪಾಡನ್ನು ಹೆಚ್ಚು ಬಿಗಿಗೊಳಿಸಲಾಗುವುದು. ಆರೋಗ್ಯವಂತನಿಗಿಂತಲೂ ರೋಗಿಯಾದವನು ಹೆಚ್ಚು ನಿಯಮಗಳನ್ನು ಪಾಲಿಸಬೇಕಾಗುವುದಲ್ಲವೇ ?

ಅವನ ಕಾರ್ಯ ವೈಭವ

ಯಂತ್ರದ ಕುದುರೆಯಲ್ಲಿ ಮಕ್ಕಳನ್ನು ತಿರುಗಿಸಿ ಆಡಿಸುವಂತೆ ಪರಮಾತ್ಮನು ಈ ಜಗಚ್ಚಕ್ರ ಚಾಲನೆಯನ್ನು ನಡೆಸುತ್ತಿರುತ್ತಾನೆ. ಸರ್ವಾಂತರ್ಯಾಮಿಯಾದ ಅವನ ಕಾರ್ಯ ವೈಭವವನ್ನು ತಿಳಿದವನು ಯಾವ ವಸ್ತುವಿನ ಮೇಲೂ ತನ್ನ ಒಡೆತನವನ್ನಾಗಲೀ ; ಅಧಿಕಾರವನ್ನಾಗಲೀ ಸ್ಥಾಪಿಸಬಯಸುವುದಿಲ್ಲ.

೫. ಸಾಹಿತ್ಯ

ವೇದದ ಸಾರ್ವತ್ರಿಕತೆ

ಯಾವುದಾದರೂ ಕೃತಿಗೆ ಒಂದು ಕಾಲದ ಅಥವಾ ದೇಶದ ಸಂಬಂಧ ಬಂದರೆ, ಅದು ಪ್ರತಿಪಾದಿಸುವ ವಿಚಾರ ಆಯಾಯ ಕಾಲ ದೇಶಗಳಿಗಷ್ಟೇ ಸಂಬಂಧಿಸಿದ್ದಾಗಿದ್ದು ಆ ಕೃತಿ ಸಾರ್ವತ್ರಿಕವೆನಿಸಲಾರದು. ಉಳಿದೆಲ್ಲ ಕೃತಿಗಳೂ ಈ ನ್ಯೂನತೆಗೊಳಗಾದವುಗಳೇ. ಅಪೌರುಷೇಯವೆನಿಸಿರುವ ವೇದ ಮಾತ್ರಈ ಕೊರತೆಯಿಂದ ಹೊರತಾಗಿರುವಂತಹದ್ದು. 'ಯಾವದ್ ಬ್ರಹ್ಮ ವಿಷ್ಠಿತಂ ತಾವತೀ ವಾಕ್' – ಬ್ರಹ್ಮ ಹೇಗೆ ಸನಾತನನೋ ಅಂತೆಯೇ ವೇದವಾಣಿಯೂ ಅಲ್ಲವೇ ?

ಮಾನವ ಕುಲದ ಸಂವಿಧಾನ

ವೇದವು ಮಾನವನು ಹೇಗೆ ಬದುಕಬೇಕೆಂಬುದನ್ನು ನಿರ್ದೇಶಿಸುತ್ತ ಇಡೀ ಮಾನವ ಕುಲಕ್ಕೆ ಸಂಬಂಧಿಸಿರುವ ಸಂವಿಧಾನ ಎನಿಸಿದೆ. ಭಗವದ್-ದ್ರಷ್ಟಾರರ ಉದ್ಗಾರವಿದು. ಅವರ ಸಹಜ ಸ್ಫೂರ್ತಿಯಿಂದ ಹೊರಹೊಮ್ಮಿರುವಂತಹದ್ದು.

ಮಾತೃ ಸಮ್ಮಿತೆ

ಸಾಹಿತ್ಯವನ್ನು ಪ್ರಭು ಸಮ್ಮಿತೆ, ಸುಹೃತ್ ಸಮ್ಮಿತೆ; ಹಾಗೂ ಕಾಂತಾ ಸಮ್ಮಿತೆ ಎಂಬುದಾಗಿ ಮೂರು ವಿಭಾಗವಾಗಿ ವಿಂಗಡಿಸಲಾಗಿದೆ. ಆದರೆ ಉಪನಿಷತ್-ಸಾಹಿತ್ಯ ಈ ಮೂರು ಪ್ರಕಾರಗಳಲ್ಲೂ ಸೇರುವುದಿಲ್ಲ. ಅದರದೊಂದು ಪ್ರತ್ಯೇಕ ಪ್ರಕಾರ –ಮಾತೃ ಸಮ್ಮಿತೆ ಎಂಬುದಾಗಿ. ಅದು ಓದುಗನ ಮೇಲೆ ತಾಯಿಯಂತೆ ಪ್ರಭಾವ ಬೀರುತ್ತಿರುವುದು; ಹೃದಯವನ್ನು ಮಾರ್ಪಡಿಸುವುದು.

ಹೃದಯ ಅರಳಿಸುವ ಸಾಹಿತ್ಯ

ಈಗೀಗ ಹೆಚ್ಚಾಗಿ ಉದಯಿಸುತ್ತಿರುವ ಸಾಹಿತ್ಯ ಹೃದಯವನ್ನು ಕೆರಳಿಸುವಂತಹದ್ದು. ಇಂತಹ ಸಾಹಿತ್ಯ ನಮಗೆ ಬೇಕಾಗಿಲ್ಲ. ನಮಗೆ ಬೇಕಾದುದು ಹೃದಯವನ್ನು ಅರಳಿಸಬಲ್ಲ ಸಾಹಿತ್ಯವಷ್ಟೇ.

ಎರಡರದ್ದೂ ಹಾಲೇ

ಒಂದು ಹಸು ಕೆಂಪಗಾಗಿದ್ದು , ಮತ್ತೊಂದು ಕಪ್ಪಾಗಿದ್ದರೇನಂತೆ ? ಆ ಎರಡು ಹಸುಗಳ ಹಾಲೂ ಬಿಳಿಯೇ ಆಗಿದ್ದು , ಗ್ರಾಹ್ಯವೇ ಆಗಿರುವುದಿಲ್ಲವೇ ? ಭಾಷಾ ವ್ಯತ್ಯಾಸದಿಂದಷ್ಟೇ 'ದಾಸ -ಸಾಹಿತ್ಯ', 'ವ್ಯಾಸ

ಸಾಹಿತ್ಯ' ಎಂಬುದಾಗಿ ಭಿನ್ನ ಭಿನ್ನವಾಗಿದ್ದರೂ ಆ ಎರಡು ಸಾಹಿತ್ಯ ಪ್ರಕಾರಗಳಿಂದಲೂ ಉಂಟಾಗುವ ತತ್ತ್ವಜ್ಞಾನ ಪರಿಶುದ್ಧವೇ ಆಗಿದ್ದು, ಗ್ರಾಹ್ಯವೇ ಆಗಿದೆ.

ಚಂದ್ರನ ಮೂಲಕ ಹಾದು ಬಂದ ಬೆಳಕಷ್ಟೇ

ಸಂಸ್ಕೃತ ಭಾಷೆಯಲ್ಲಿರುವ ವ್ಯಾಸ ಸಾಹಿತ್ಯದಿಂದ ಹೊರ ಹೊಮ್ಮುವ ತತ್ತ್ವಜ್ಞಾನವನ್ನು ಪಡಕೊಳ್ಳಲು ಎಲ್ಲರೂ ಸಮರ್ಥರಾಗಲಾರರು. ಕೆಲವರಿಗೆ ಅದು ಎಟಕಲಾರದು. ಆದರೆ ಅದೇ ತತ್ತ್ವಜ್ಞಾನ ಕನ್ನಡ ಭಾಷೆಯಲ್ಲಿ ಸರಳವಾಗಿರುವ ದಾಸಸಾಹಿತ್ಯದ ಮೂಲಕ ಮೂಡಿಬಂದಾಗ, ಅದು ಎಲ್ಲರಿಗೂ ಎಟಕಬಲ್ಲದು.

ಸೂರ್ಯನಿಂದ ನೇರವಾಗಿ ಹೊರಹೊಮ್ಮುವ ಬಿಸಿಲಿನ ಬೇಗೆಯನ್ನು ತಡಕೊಳ್ಳಲಾರದವರೂ ಅದೇ ಬಿಸಿಲು, ಈಗಿನ ವಿಜ್ಞಾನಿಗಳ ಪ್ರಕಾರ ಚಂದ್ರನ ಮೂಲಕ ಹರಿದು ಬೆಳದಿಂಗಳಾಗಿ ಬಂದಾಗ ಎಲ್ಲರಿಗೂ ಆಹ್ಲಾದಕರವೆನಿಸುವುದಲ್ಲವೇ ?

ಕನ್ನಡಕ ಮಾತ್ರ ಸಾಕೇ ?

'ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್'– ಎಂಬುದಾಗಿ ಮಹಾಭಾರತ ಪುರಾಣಾದಿಗಳಿಂದ ವೇದಾರ್ಥವನ್ನು ಪುಷ್ಟೀಕರಿಸಿಕೊಳ್ಳಬೇಕೆಂದಿರುವುದೇನೋ ನಿಜ. ಆದರೆ ನಮಗೆ ಮಹಾಭಾರತ ಪುರಾಣಾದಿಗಳೇ ಸಾಕು, ವೇದ ಬೇಡ ಎಂದು ಹೇಳುವಂತಿಲ್ಲ. ಕಣ್ಣು ಸರಿಯಾಗಿ ಪದಾರ್ಥಗಳನ್ನು ಕಾಣಿಸದಿದ್ದಾಗ ಅದಕ್ಕೆ ಸಹಕಾರಿಯಾಗಿ ಕನ್ನಡಕವನ್ನು ಬಳಸಿಕೊಳ್ಳುತ್ತೇವೆ. ಆದರೆ ಇಷ್ಟುಮಾತ್ರಕ್ಕೆ ಕಣ್ಣಿಗೆ ಸಹಕಾರಿಯಾದ ಕನ್ನಡಕ ಮಾತ್ರ ಸಾಕು; ಕಣ್ಣೇ ಬೇಡ ಎಂದು ವಾದಿಸಲಾಗುವುದೇ ? ಎಂತಹ ಕನ್ನಡಕವಿದ್ದರೂ ಕಣ್ಣಿಲ್ಲದಿದ್ದರೆ ಕುರುಡೇ ಆಗಿರುವಂತೆ, ಇತಿಹಾಸ ಪುರಾಣಾದಿಗಳನ್ನು ಎಷ್ಟೇ ಅಭ್ಯಸಿಸಿದರೂ ವೇದಾಧ್ಯಯನವಿಲ್ಲದಿದ್ದರೆ ಕುರುಡೇ.

೬. ಆದರ್ಶ

ಬಿಲ್ಲು ಬಾಣಗಳು ಬೆರೆಯಬೇಕು

ಯಾವುದಾದರೊಂದು ಗುರಿ ತಲುಪಲು ಬರೇ ಬಿಲ್ಲೂ ಸಾಲದು; ಬರೇ ಬಾಣವೂ ಸಾಲದು. ಬಿಲ್ಲುಬಾಣಗಳು ಒಂದಾಗಬೇಕು. ಬಾಣದ ಧಾವಿಸುವ ಶಕ್ತಿ ಬಿಲ್ಲಿನ ಮುಂದೂಡುವ ಸಾಮರ್ಥ್ಯದೊಂದಿಗೆ ಬೆರೆಯಬೇಕು. ಆಗ ಮಾತ್ರ ಬಾಣ ತನ್ನ ಗುರಿಯನ್ನು ತಲುಪೀತು. ಅಂತೆಯೇ ನಮ್ಮ ಸಮಾಜದಲ್ಲಿ ಯುವಶಕ್ತಿ ಹಾಗೂ ಹಿರಿಯರ ಅನುಭವಗಳು ಪರಸ್ಪರ ಬೆರೆಯಬೇಕು. ಯುವಕರಲ್ಲಿಯ ಉತ್ಸಾಹಕ್ಕೆ ಹಿರಿಯರ ಪ್ರೋತ್ಸಾಹ ಮಾರ್ಗದರ್ಶನಾದಿಗಳ ಹಿನ್ನೆಲೆಯಿಲ್ಲದಿದ್ದಲ್ಲಿ ಬಿಲ್ಲಿನ ಸಂಪರ್ಕವನ್ನೇ ಕಳಕೊಂಡ ಬಾಣದಂತಾಗುವುದು. ಅಂತೆಯೇ ಹಿರಿಯರ ಅನುಭವಾದಿಗಳಿಗೆ ಯುವಕರ ಉತ್ಸಾಹಾದಿಗಳ ಬೆಂಬಲವಿಲ್ಲದಿದ್ದಲ್ಲಿ ಬಾಣವಿಲ್ಲದ ಬಿಲ್ಲಿನಂತಾಗುವುದು.

ಏಕತಾನವಿರಬೇಕಷ್ಟೇ

ನಮ್ಮ ಆಚಾರ ವಿಚಾರಗಳಲ್ಲಿ ಸಂಪ್ರದಾಯಗಳಲ್ಲಿ, ವೈವಿಧ್ಯ, ಭಿನ್ನತೆಗಳಿವೆ. ಇರಲಿ. ಅವನ್ನೆಲ್ಲ

ನೆಲಸಮ ಮಾಡುವ ಸಾಹಸ ಬೇಡ. ಆದರೆ ಆ ಭಿನ್ನ ಭಿನ್ನ ಸಂಪ್ರದಾಯಗಳಲ್ಲೂ ಪರಸ್ಪರವಾಗಿ ಏಕತೆಯನ್ನು ತಂದುಕೊಳ್ಳಲು ಯತ್ನಿಸೋಣ. ಆಗ ಭಿನ್ನತೆಯೂ ಸಹ್ಯವೆನಿಸುವುದು.

ಬೇರೆ ಬೇರೆ ರೀತಿಯ ಅನೇಕ ವಾದ್ಯಗಳು ಪರಸ್ಪರ ಅಸಂಗತವಾಗಿ ಬಾರಿಸಲ್ಪಟ್ಟಾಗ ಕೇಳಲು ಅಸಹ್ಯವಾದ ಕಿರಿಚಾಟವೆನಿಸುವುದು. ಆದರೆ ಅನ್ಯೋನ್ಯವಾಗಿ 'ಏಕತಾನ'ವನ್ನು ಅಳವಡಿಸಿಕೊಂಡು ಬಾರಿಸಿದಲ್ಲಿ ಅವೆಲ್ಲ ಸೇರಿ ಸುಮಧುರ ಸಂಗೀತವಾಗಿ ಕೇಳಲು ಆಹ್ಲಾದಕರವಾಗುವುದು.

ಪ್ರವಾಹವಾಗಿ ಹರಿಯಬೇಕು

ನೀರು ಸದಾ ಹರಿಯುತ್ತಿರಬೇಕು. ಅದು ಬಿಟ್ಟು ಒಂದೆಡೆ ಮಡುಗಟ್ಟಿದಲ್ಲಿ ಕ್ರಮೇಣ ಕೊಳೆತು ನಾರಲು ಪ್ರಾರಂಭವಾಗುವುದು. ಅಂತೆಯೇ ಪ್ರೇಮಪ್ರವಾಹವೂ. ಅದು 'ನಾನು', 'ನನ್ನದು' ಎಂಬ ಹಳ್ಳದಲ್ಲಷ್ಟೇ ನಿಂತದ್ದಾಗಿರಬಾರದು. ಅಲ್ಲಿಂದ ಉಕ್ಕಿ ಸಮಾಜದ ಬಯಲಲ್ಲಿ ಹರಿಯಬೇಕು. ಹೀಗೆ ಸಾಗಿ ಸಾಗಿ ಕೊನೆಗೆ ಭಗವಂತ - ಸಾಗರಕ್ಕೆ ತಲುಪಬೇಕು. ಆಗ ಮಾತ್ರ ಅದು ಪವಿತ್ರವಾಗುವುದು.

ಸದುದ್ದೇಶಗಳ ಸಾಧನೆಗಾಗಿ

ಐದು ಬೆರಳುಗಳ ಸೇರುವಿಕೆಯನ್ನು ಸಮುದ್ರದಿಂದ ರತ್ನಗಳನ್ನು ಹೆಕ್ಕುವುದೇ ಮೊದಲಾದ ಉತ್ಕೃಷ್ಟ ಸಾಧನೆಗಳಿಗಾಗಿಯೂ ಬಳಸಿಕೊಳ್ಳಬಹುದು ; ಯಾರಿಗಾದರೂ ಹೊಡೆದು ಹಿಂಸಿಸುವುದಕ್ಕಾಗಿಯೂ ಉಪಯೋಗಿಸಿಕೊಳ್ಳಬಹುದು. ಅಂತೆಯೇ ವ್ಯಕ್ತಿಗಳ ಒಗ್ಗಟ್ಟೂ. ಇದನ್ನು ಸದುದ್ದೇಶಗಳ ಸಾಧನೆಗಾಗಿಯೂ ದುರುದ್ದೇಶಗಳ ಸಾಧನೆಗಾಗಿಯೂ ಬಳಸಿಕೊಳ್ಳಲು ಬರುವುದು. ಆದರೆ ವಿವೇಕಿಯಾದವನು ಒಗ್ಗಟ್ಟನ್ನು ಸದುದ್ದೇಶಗಳಿಗಾಗಿಯೇ ಬಳಸಿಕೊಳ್ಳಬೇಕು.

ಜರಡಿಯಾಗಬೇಕೇ ಹೊರತು ಮೊರವಲ್ಲ

ಮತ್ತೊಬ್ಬರ ಗುಣಗಳನ್ನೇ ಒಳ್ಳೆಯ ನಡತೆಗಳನ್ನೇ ಮೇಲೆತ್ತಿಟ್ಟು ಅವುಗಳ ಬಗ್ಗೆ ಪ್ರಶಂಸಿಸುವ ಸಜ್ಜನರು ಒಳ್ಳೆಯ ಧಾನ್ಯಗಳನ್ನಷ್ಟೇ ಮೇಲೆ ಉಳಿಸಿ ಅವುಗಳ ಜೊತೆಗೆ ಸೇರಿರುವ ಕಸಕಡ್ಡಿಗಳನ್ನೂ ಹಾಳಾದ ಧಾನ್ಯಗಳನ್ನೂ ಕೆಳಗೆ ತೂರಿಸಿ ಬಿಡುವ ಜರಡಿಯಾದರೆ, ಇನ್ನೊಬ್ಬರ ದುರ್ನಡತೆ, ಕೆಟ್ಟಗುಣಗಳನ್ನೇ ಸಾರುವ ದುರ್ಜನರು ಕಸಕಡ್ಡಿಗಳನ್ನೇ ಮೇಲಕ್ಕೆ ಹಾರಿಸುವ ಮೊರ. ನಾವು ಜರಡಿಯಾಗಬೇಕೇ ಹೊರತು ಮೊರವಲ್ಲ.

ಖಾಲೀಬಿಡಬಾರದು

ಜಾಗ ಖಾಲಿ ಇತ್ತೆಂದರೆ ಅದನ್ನು ಸರಕಾರ ವಶಪಡಿಸಿಕೊಳ್ಳುತ್ತದೆ. ಅದಕ್ಕೊಂದು ಕಾನೂನೇ ಇದೆ. ಅಂತೆಯೇ ನಮ್ಮ ಮನಸ್ಸೂ ಬರಿದಾಗಿತ್ತೆಂದರೆ ಅದನ್ನು ಕೆಟ್ಟ ಕೆಟ್ಟ ಯೋಚನೆಗಳು ವಿಚಾರಗಳು ಮುತ್ತಿಕೊಳ್ಳುವವು. ಇದಕ್ಕೆ ಅವಕಾಶ ನೀಡದಂತೆ ಮನಸ್ಸಲ್ಲಿ ಯಾವಾಗಲೂ ಸದ್ವಿಚಾರಗಳನ್ನು ಮೆಲುಕು ಹಾಕುತ್ತಲೇ ಇರಬೇಕು.

ಬಲಿ ಕೊಡಬೇಕಾಗಿಲ್ಲ

ಪತ್ನಿಯು ಪತಿಗಾಗಿ ತನ್ನ ಸುಖ, ಸಂತೋಷಗಳನ್ನು ತ್ಯಾಗ ಮಾಡಬಹುದು. ಆದರೆ ಪತಿಗಾಗಿ ತನ್ನ ಶ್ರದ್ಧೆ, ವಿಶ್ವಾಸಗಳನ್ನು ಬಲಿಕೊಡಬೇಕಾಗಿಲ್ಲ. ಸತಿಪತಿಗಳಿಬ್ಬರೂ ಪರಸ್ಪರ ಸ್ವಾತಂತ್ರ್ಯಕ್ಕೆ ಚ್ಯುತಿ ಬಾರದಂತೆ ತಮ್ಮ ಸ್ವಾತಂತ್ರ್ಯವನ್ನು ಚಲಾಯಿಸಬೇಕು.

ಜ್ಯೋತಿ ಆರಬಾರದು

ಧಾರ್ಮಿಕ ಸಂಘ ಸಂಸ್ಥೆಗಳಲ್ಲಿದ್ದೋ ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸಿಯೋ ಹೃದಯದಲ್ಲಿ ಹಚ್ಚಿಸಿಕೊಂಡು ಬಂದ ಧರ್ಮ-ಜ್ಯೋತಿಯಿಂದ ನೂರಾರು ಹೃದಯಗಳಲ್ಲಿ ಅಂತಹ ಜ್ಯೋತಿಗಳನ್ನು ಬೆಳಗಿಸಬೇಕು. ಹೊರತು ಆ ಧಾರ್ಮಿಕ ವಾತಾವರಣದಿಂದ ಹೊರ ಬಂದಾಕ್ಷಣ ಹೊರಗಿನ ಅಧಾರ್ಮಿಕ ಬಿರುಗಾಳಿಗೆ ಸಿಲುಕಿ ತಮ್ಮ ಹೃದಯದ ಧರ್ಮ-ಜ್ಯೋತಿಯೂ ಆರಿ ಹೋಗುವಂತಾಗಬಾರದು.

ತನ್ನ ಅನುಷ್ಠಾನಕ್ಕೆ ತಂದು ಬಳಿಕ ಪರೋಪದೇಶ

ರಾಜನೊಬ್ಬನು ತನ್ನ ಮಗನಿಗೆ ಕಾಫಿ ಕುಡಿಯುವುದನ್ನು ಬಿಡಲು ಉಪದೇಶಿಸುವಂತೆ ವಿದ್ವಾಂಸ ನೊಬ್ಬನಲ್ಲಿ ಕೇಳಿಕೊಳ್ಳುವನು. ಅದಕ್ಕೆ ಆ ವಿದ್ವಾಂಸ ಹದಿನೈದು ದಿನಗಳ ಬಳಿಕ ಉಪದೇಶಿಸುವುದಾಗಿ ಹೇಳಿ, ಅದರಂತೆಯೇ ಹದಿನೈದು ದಿನಗಳಾದ ಮೇಲೆ ಉಪದೇಶಿಸುವನು.

'ಇಷ್ಟೊಂದು ಉಪದೇಶಿಸುವುದಕ್ಕೆ ಯಾಕೆ ಹದಿನೈದು ದಿನಗಳ ಅವಧಿಯನ್ನು ಕೇಳಿಕೊಂಡಿ ?' ಎಂದು ರಾಜ ವಿದ್ವಾಂಸನನ್ನು ವಿಚಾರಿಸುವನು.

'ಪರರಿಗೆ ಉಪದೇಶಿಸುವ ಮುನ್ನ ನಾವು ನಮ್ಮ ಅನುಷ್ಠಾನದಲ್ಲಿ ತಂದುಕೊಳ್ಳಬೇಕು. ಹಾಗಾದಾಗಲೇ ನಮಗೆ ಉಪದೇಶಿಸುವ ಅರ್ಹತೆ ಸಿದ್ಧಿಸುವುದು. ಹದಿನೈದು ದಿನಗಳ ಮುಂಚೆ ನಿನ್ನ ಮಗನಿಗೆ ಕಾಫಿ ಕುಡಿಯುವುದನ್ನು ಬಿಡಲು ಉಪದೇಶಿಸೆಂದು ನೀನು ಕೇಳಿಕೊಂಡಾಗ ನಾನೂ ಕಾಫಿ ಕುಡಿಯುವವನಾಗಿದ್ದೆ. ಆಗ ನನಗೆ ಕಾಫಿ ಕುಡಿಯಬೇಡೆಂದು ಉಪದೇಶಿಸುವ ಅರ್ಹತೆ ಇದ್ದಿಲ್ಲ. ಹದಿನೈದು ದಿನಗಳ ಸತತ ಯತ್ನದಿಂದಾಗಿ ಕಾಫಿ ಕುಡಿಯುವ ಚಟವನ್ನು ಬಿಟ್ಟು ಅರ್ಹತೆಯನ್ನು ಗಳಿಸಿಕೊಂಡ ಮೇಲೆ ಉಪದೇಶಿಸಿದೆಯಷ್ಟೇ.'

ಪರೋಪದೇಶದಲ್ಲೇ ಹೆಚ್ಚಾಗಿ ತೊಡಗುತ್ತಿರುವ ನಾವೂ ಆ ವಿದ್ವಾಂಸನ ಮಾತಿನಂತೆ ನಡೆದುಕೊಳ್ಳಲು ಯತ್ನಿಸಬೇಕು.

ಜನಾರ್ದನನ ಸೇವೆಯಲ್ಲಿ ಪರ್ಯವಸಾನ

'ಜನಸೇವೆಯೇ ಜನಾರ್ದನನ ಸೇವೆ' ಎಂದರೆ ಜನರೇ ಜನಾರ್ದನನೆಂದು ಅರ್ಥವಲ್ಲ. ಪ್ರತಿಮೆಯನ್ನು ಪೂಜಿಸುವಾಗ ಶಿಲೆಯೇ ದೇವರೆಂದು ನಾವು ಭಾವಿಸಬೇಕೇ ? ರಾಷ್ಟ್ರ ಧ್ವಜವನ್ನು ಗೌರವಿಸುವಾಗ ಆ ಬಟ್ಟೆಯ ತುಂಡೇ ರಾಷ್ಟ್ರವೆಂದು ನಾವು ಭಾವಿಸುತ್ತೇವೆಯೇ ? ಜನ ಸಮುದಾಯವನ್ನು, ಸಮಾಜವನ್ನು ಭಗವಂತನ ಪ್ರತಿಮೆಯೆಂದು ಭಾವಿಸಿ, ಅಲ್ಲಿ ಜನಸೇವೆಯ ಮೂಲಕ ಭಗವಂತನನ್ನು ಸೇವಿಸಬೇಕು. ಜನಸೇವೆಯೂ ಜನಾರ್ದನನ ಸೇವೆಯಲ್ಲಿ ಪರ್ಯವಸಾನಗೊಳ್ಳುವಂತೆ ಮಾಡಬೇಕು.

೭. ಆಧ್ಯಾತ್ಮಿಕಾರ್ಥ

ಈಶಾವಾಸ್ಯೋಪನಿಷತ್ತಿಗೆ ಶರಣಾಗಬೇಕು

ರಾಕ್ಷಸರ ಆಕ್ರಮಣಕ್ಕೆ ಒಳಗಾದ ಮನು ಮಹಾರಾಜನನ್ನು ಪರಮಾತ್ಮನೇ ಪ್ರಸನ್ನನಾಗಿ ರಕ್ಷಿಸಿದನು. ರಾಕ್ಷಸರನ್ನು ಉಚ್ಚಾಟಿಸಿ ಮನುವನ್ನು ಪಾರುಮಾಡಿದನು. ಮನುವಂಶಜರಾದ ನಾವೂ ಇಂದು ಇದೇ ದುರ್ದಶೆಗೆ ಒಳಗಾಗಿದ್ದೇವೆ. ಭೌತಿಕ ಪ್ರಪಂಚದಲ್ಲಿ ರಾಕ್ಷಸೀ ಶಕ್ತಿಗಳು ನಮ್ಮನ್ನು ಕಬಳಿಸಲು

ಉಪಕ್ರಮಿಸಿವೆ. ನಮ್ಮ ಸುತ್ತಮುತ್ತಲಿರುವ ವಿಷಯಪದಾರ್ಥಗಳೇ ಅಸುರರು. ದೈತ್ಯ-ಶಕ್ತಿಯಿಂದ ಅಧಿಷ್ಠಿತಗಳಾದ ವಿಷಯ ಪದಾರ್ಥಗಳು ಅಧಃಪತನದ ದಾರಿಯಲ್ಲಿ ನಮ್ಮನ್ನು ಎಳದೊಯ್ಯುತ್ತವೆ. ವಿಷಯ ಪದಾರ್ಥಗಳನ್ನು ನಾವು ಆಸ್ವಾದಿಸುತ್ತಿದ್ದರೂ ವಾಸ್ತವವಾಗಿ ಅವುಗಳೇ ನಮ್ಮನ್ನು ನುಂಗುತ್ತಿವೆ; ಮದ್ಯವನ್ನು ನಾವು ಕುಡಿಯುತ್ತಿದ್ದರೂ ಕ್ರಮೇಣ ಮದ್ಯವೇ ನಮ್ಮನ್ನು ಕುಡಿಯುವಂತೆ. ವಿಷಯ ಪದಾರ್ಥಗಳ ಆಕ್ರಮಣಕ್ಕೆ ಒಳಗಾದ ನಾವು ನಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಈಶಾವಾಸ್ಯೋಪನಿಷತ್ತಿಗೆ ಶರಣಾಗಬೇಕು. ಈ ಉಪನಿಷತ್ತಿನ ಸಂದೇಶವನ್ನು ಮನನ ಮಾಡಿ, ತ್ಯಾಗ - ಕರ್ತವ್ಯ - ಭಗವತ್ಪ್ರೇಮಗಳಿಂದ ಬಾಳನ್ನು ಬಾಳಿದರೆ ಮಾತ್ರ ಈ ಅಸುರ ಶಕ್ತಿಯ ಆಘಾತದಿಂದ ನಮ್ಮನ್ನು ರಕ್ಷಿಸಿಕೊಳ್ಳಬಹುದು.

ಮೂವರು ಸಹೋದರರು

ವಿಭೀಷಣ, ಧರ್ಮ, ನೀತಿ ಮೊದಲಾದ ಸದ್ಗುಣಗಳಿಗೆ ಆಶ್ರಯನಾಗಿದ್ದು , ಸಾತ್ವಿಕ ಪ್ರಕೃತಿಯವನು. ರಾವಣ ರಾಜಸ ಪ್ರಕೃತಿಯವನಾಗಿದ್ದು ಅತ್ಯಾಚಾರ, ಹಿಂಸೆ ಮೊದಲಾದ ಕೆಡಕುಗಳಿಗೆ ಆಶ್ರಯನಾಗಿರುವವನು. ನಿದ್ರಾ, ಆಲಸ್ಯಾದಿಗಳಿಗೆ ಮಾರು ಹೋಗಿದ್ದ ಕುಂಭಕರ್ಣನು ತಾಮಸ ಪ್ರಕೃತಿಯವನು. ಹೀಗೆ ಈ ಮೂವರು ಬೇರೆ ಬೇರೆ ಪ್ರಕೃತಿಯವರಾದರೂ ಸಹೋದರರು. ಈ ಸಹೋದರರು ಲಂಕೆಯಲ್ಲಿ ಮಾತ್ರ ಇದ್ದುದಲ್ಲ. ನಮ್ಮಲ್ಲೂ ಸಾತ್ವಿಕ, ರಾಜಸ, ತಾಮಸ ಗುಣಗಳೆಂಬ ಹೆಸರಿಂದ ಇದ್ದಾರೆ. ರಾವಣ , ಕುಂಭಕರ್ಣರು ಸೇರಿ ವಿಭೀಷಣನನ್ನು ಹೊರದಬ್ಬಿದಂತೆ ನಮ್ಮಲ್ಲೂ ರಾಜಸ, ತಾಮಸ ಗುಣಗಳು ಸೇರಿ ಸಾತ್ವಿಕ ಗುಣವನ್ನು ಹೊರಗಟ್ಟಿ ತಮ್ಮದೇ ಸಾಮ್ರಾಜ್ಯ ನಡೆಸಲು ಯತ್ನಿಸುತ್ತಿರುತ್ತವೆ . ಆದರೆ ಕೊನೆಯಲ್ಲಿ ವಿಭೀಷಣನಿಗೆಯೇ ಪಟ್ಟಾಭಿಷೇಕವಾದಂತೆ ನಮ್ಮಲ್ಲೂ ಸಾತ್ವಿಕ ಗುಣವೇ ಗೆಲ್ಲಬೇಕು. ವಿಭೀಷಣ ಶ್ರೀರಾಮಚಂದ್ರನ ಸಹಾಯವನ್ನು ಗಳಿಸಿಕೊಂಡಿದ್ದರಿಂದಷ್ಟೇ ಸಾಮ್ರಾಜ್ಯವನ್ನು ಪಡಕೊಳ್ಳಲು ಸಮರ್ಥನಾದಂತೆ ನಮ್ಮ ಸಾತ್ವಿಕಗುಣವೂ ಭಗವಂತನ ನೆರವನ್ನು ಪಡಕೊಂಡರಷ್ಟೇ ಜಯಗಳಿಸೀತು!

ಶ್ರೀರಾಮನಲ್ಲಿಗೆ ತಲುಪಿಸುವವನು

ರಾಕ್ಷಸರ ಬೀಡಾದ ಲಂಕೆಯಲ್ಲಿದ್ದ ಸೀತಾದೇವಿ ಶ್ರೀರಾಮನನ್ನು ಸೇರಬೇಕಾದರೆ ಹನುಮಂತ ಸಂಯೋಜಕನಾದ . ನಾವೂ ಈಗ ಲಂಕೆಯಲ್ಲಿದ್ದೇವೆ. ಸಂಸಾರ-ಸಾಗರದಲ್ಲಿರುವ ನಮ್ಮ ಶರೀರವೇ ಲಂಕೆ. ಆ ಲಂಕೆ ಅನೇಕ ರಾಕ್ಷಸರಿಗೆ ಬೀಡಾಗಿದ್ದಂತೆ ನಮ್ಮ ಶರೀರದಲ್ಲೂ ಅನೇಕ ದುರ್ಗುಣಗಳು ದುಷ್ಪ್ರವೃತ್ತಿಗಳು ಇವೆ. ಇವುಗಳಿಂದೆಲ್ಲ ಪಾರಾಗಿ ಶ್ರೀರಾಮನನ್ನು ತಲುಪಬೇಕೆಂದರೆ ಗುರು ಆಂಜನೇಯನ ಅನುಗ್ರಹ ಅತ್ಯಾವಶ್ಯಕ.

ಸದ್ಭಕ್ತಿಯ ಮಾಲಾಧಾರಣೆ

ಮೊದಲು ವಾಲಿ ಸುಗ್ರೀವರು ಕಾದಾಡಿದಾಗ – ಭಗವಂತನಿಗೆ ಅವರಿಬ್ಬರಲ್ಲಿ ಯಾರು ಸುಗ್ರೀವ ? ಯಾರನ್ನೂ ಕಾಪಾಡಬೇಕು ? – ಎಂದೇ ತಿಳಿಯಲಿಲ್ಲವಂತೆ. ಮತ್ತೆ ಸುಗ್ರೀವನು ತಾನು ರಕ್ಷಣಾರ್ಹನು ಎಂದು ಪರಿಚಯಿಸಿಕೊಳ್ಳುವುದಕ್ಕಾಗಿ ಮಾಲಾಧಾರಣೆಯನ್ನು ಮಾಡಿಕೊಂಡಾಗ ಶ್ರೀರಾಮ ವಾಲಿಯನ್ನು ಸಂಹರಿಸಿ ಸುಗ್ರೀವನನ್ನು ಕಾಪಾಡಿದ.

ಸಂಸಾರದಲ್ಲೂ ಒಳ್ಳೆಯರು ಕೆಟ್ಟವರು ಬೆರೆತೇ ಇರುವರು. ಒಳ್ಳೆಯವರು ತಾವು ಒಳ್ಳೆಯವರೆಂದು ತೋರಿಸಿ ಕೊಡುವವರೆಗೆ ಭಗವಂತನು ಸುಮ್ಮನಿರುವನು. ಒಳ್ಳೆಯವರು ಭಗವದ್ಭಕ್ತಿಯ ಮಾಲೆಯನ್ನು,

ಸತ್ಕರ್ಮಾಚರಣೆಯ ಮಾಲೆಯನ್ನು ತೊಟ್ಟುಕೊಂಡು ತಾವು ಕೆಟ್ಟವರಲ್ಲ ಎಂದು ಖಚಿತಪಡಿಸಿದಾಕ್ಷಣ ಭಗವಂತ ಅವರ ರಕ್ಷಣೆಗೆ ಟೊಂಕಕಟ್ಟಿ ನಿಲ್ಲುತ್ತಾನೆ.

ಸದ್ಗುಣ ದುರ್ಗುಣಗಳ ಹೋರಾಟ

ಮಹಾಭಾರತ ಪಾಂಡವ ಕೌರವರ ನಡುವೆ ನಡೆದ ಹೋರಾಟದ ಕಥೆ ಮಾತ್ರವಲ್ಲ. ಅದು ಸಮಗ್ರ ಮಾನವಕುಲದ ಸದಾಕಾಲೀನ ಚರಿತ್ರೆಯೂ ಹೌದು. ಪಂಚಪಾಂಡವರೆಂದರೆ ಮಾನವನಲ್ಲಿಯ ಪಂಚಶೀಲಗಳು. ಧರ್ಮರಾಜನೆಂದರೆ ಧರ್ಮ, ಬುದ್ಧಿ. ಭೀಮ ಜ್ಞಾನ, ಭಕ್ತಿ, ವೈರಾಗ್ಯಗಳ ಪ್ರತೀಕ. ಅರ್ಜುನ ಜಿಜ್ಞಾಸೆಯ ಸಂಕೇತ. ನಕುಲ ಸಹದೇವರು ಶೀಲ, ಸಂಯಮಗಳ ಸಂಕೇತ. ಕಾಮಕ್ರೋಧಾದಿ ದುರ್ಗುಣಗಳ ಸಮುದಾಯವೇ ಕೌರವರು. ಶಕುನಿ ನಾಸ್ತಿಕತೆಯ ಸಂಕೇತ. ಹೇಗೆ ಕೌರವರು ಶಕುನಿಯ ಪ್ರೇರಣೆಯಿಂದಲೇ ದುಷ್ಟತನಕ್ಕೆ ಇಳಿದರೋ ಅಂತೆಯೇ ದುರ್ಗುಣಗಳ ಪ್ರವೃತ್ತಿಗೂ ನಾಸ್ತಿಕತೆಯೇ ಮೂಲ ಪ್ರೇರಕ. ಪಾಂಡವರ ಸೈನ್ಯಕ್ಕಿಂತಲೂ ಕೌರವಸೇನೆಯೇ ದೊಡ್ಡದಾಗಿದ್ದಂತೆ ಪಾಂಡವರು ಸಂಕೇತಿಸುವ ಸದ್ಗುಣಗಳಿಗಿಂತಲೂ ಕೌರವರು ಸಂಕೇತಿಸುವ ದುರ್ಗುಣಗಳ ಸಂಖ್ಯೆಯೇ ಹೆಚ್ಚು. ದುರ್ಗುಣಗಳ ಆಕ್ರಮಣಕ್ಕೆ ಒಳಗಾಗಿ ಸದ್ಗುಣಗಳು ಅರಣ್ಯವಾಸವನ್ನೋ ಅಜ್ಞಾತವಾಸವನ್ನೋ ಕೈಗೊಳ್ಳುವುದಿದೆ. ಹೀಗೆ ಅರಣ್ಯವಾಸಕ್ಕೋ ಅಜ್ಞಾತವಾಸಕ್ಕೋ ಒಳಗಾದ ಅವು ಅನೇಕರ ಪಾಲಿಗೆ ಮರಳಿ ಬರುವುದೂ ಇಲ್ಲ. ಹೀಗಾಗಲು ಅವಕಾಶ ನೀಡಬಾರದು. ತಾತ್ಕಾಲಿಕವಾಗಿ ಮರೆಯಾದರೂ ಕೊನೆಗಾದರೂ ಶ್ರೀಕೃಷ್ಣನ ಸಹಾಯ ಪಡೆದು ದುರ್ಗುಣಗಳ ವಿರುದ್ಧವಾಗಿ ಹೋರಾಡಿ ಸದ್ಗುಣಗಳು ಗೆಲ್ಲುವಂತೆ ಜಾಗ್ರತೆ ವಹಿಸಬೇಕು. ಇದೇ ಮಹಾಭಾರತದ ಸಂದೇಶ.

ಯತ್ರ ಪಾರ್ಥೋ ಧನುರ್ಧರಃ

ವಿಜಯ ಹಾಗೂ ಭೂತಿಗಳ ಸಮಾವೇಶವಾಗಬೇಕಾದರೆ ಯೋಗೇಶ್ವರನಾದ ಶ್ರೀಕೃಷ್ಣನಿರಬೇಕಾದಂತೆ ಧನುರ್ಧಾರಿಯಾದ ಅರ್ಜುನನೂ ಇರಬೇಕೆಂದು 'ಯತ್ರ ಪಾರ್ಥೋ ಧನುರ್ಧರಃ' ಎಂದು ಶ್ರೀವೇದವ್ಯಾಸರು ಸಂದೇಶಿಸಿರುವರು. ಪಾರ್ಥನಿಗೆ 'ಧನುರ್ಧರ' ಎಂಬ ವಿಶೇಷಣವನ್ನು ಕೊಟ್ಟು, ಬರೇ ದೈವನನ್ನು ನಂಬಿದ ಪಾರ್ಥನಿದ್ದರೆ ಸಾಲದು, ಆತ ಧನುರ್ಧಾರಿಯಾಗಿದ್ದಿರಬೇಕು; ಅರ್ಥಾತ್ ಕಾರ್ಯೋನ್ಮುಖನಾಗಿದ್ದಿರಬೇಕು – ಎಂಬುದಾಗಿ ಸೂಚಿಸಿರುವರು. ದೈವ ಭಕ್ತಿಯ ಜೊತೆಗೆ ಮಾನವನ ಯತ್ನವೂ ಅತ್ಯಾವಶ್ಯಕ ತಾನೇ ?

ಲಕ್ಷ್ಮೀನಾರಾಯಣರ ವಿವಾಹ

ಸಮುದ್ರಮಥನ ಕಾಲದಲ್ಲಿ ಸಮುದ್ರದಿಂದ ಆವಿರ್ಭವಿಸಿದ ಲಕ್ಷ್ಮೀದೇವಿಯು ತನ್ನನ್ನು ವಶಪಡಿಸಿಕೊಳ್ಳಲು ಆಸೆ, ಆಮಿಷಗಳನ್ನು ಒಡ್ಡುತ್ತಿದ್ದ ರಾಕ್ಷಸರನ್ನೆಲ್ಲ ಕಡೆಗಣಿಸಿ ನೇರವಾಗಿ ಶ್ರೀಮನ್ನಾರಾಯಣನಲ್ಲಿಗೆ ಹೋಗಿ ಅವನ ಕೊರಳಿಗೆ ಮಾಲೆ ಹಾಕಿದಳು. ಲಕ್ಷ್ಮೀನಾರಾಣರ ವಿವಾಹವಾಯಿತು. ಆದ್ದರಿಂದಲೇ ಲೋಕ ಕಲ್ಯಾಣವಾಯಿತು.

ನಮ್ಮ ಕೈಗೂ ಸಂಪತ್ತು ಬಂದಾಗ, ಅದನ್ನು ಕಸಿದುಕೊಳ್ಳಲು, ದೋಚಿಕೊಳ್ಳಲು, ನಾನಾ ರೂಪದ ದುಶ್ಶಟಗಳು ತಲೆ ಎತ್ತುತ್ತವೆ. ಅವಕ್ಕೆ ಮಾರು ಹೋಗದೆ ಸಂಪತ್ತೂ ಭಗವಂತನಿಗೇ ಸೇರುವಂತೆ ಅವನಿಗೆ ಪ್ರಿಯವಾದ ಚಟುವಟಿಕೆಗಳಿಗಷ್ಟೇ ಬಳಸಿಕೊಳ್ಳಬೇಕು, ಆಗ ಬಳಸಿಕೊಂಡವನಿಗಷ್ಟೇ ಅಲ್ಲದೆ, ಅದರಿಂದ ಲೋಕಕ್ಕೂ ಕಲ್ಯಾಣವಾಗುವುದು.

ನಮ್ಮನ್ನು ನಾವೇ ತಿದ್ದಿಕೊಳ್ಳಬೇಕು

ಆನೆಯ ಮುಖದ ವಿಘ್ನಾಧಿಪ ತನ್ನೊಂದು ಕೈಯಲ್ಲಿ ಅಂಕುಶವನ್ನು ಧರಿಸಿರುವನು. ಅಂಕುಶ ಆನೆಯ ಮೇಲೆ ಸವಾರಿ ಮಾಡುತ್ತಿರುವವನ ಕೈಯಲ್ಲಿರಬೇಕಾದುದು. ಆದರೆ ಗಜಮುಖದ ಗಣಪ ತಾನೇ ಅಂಕುಶವನ್ನು ಧರಿಸಿಕೊಂಡು ನಮಗೆ ಹೀಗೆ ಸಂದೇಶಿಸುತ್ತಾನೆ –ನಮ್ಮನ್ನು ನಾವೇ ತಿದ್ದಿಕೊಳ್ಳಬೇಕು. ಮತ್ತೊಬ್ಬರು ತಿದ್ದಬೇಕಾದ ಪರಿಸ್ಥಿತಿಗೆ ನಾವು ಒಳಗಾಗಬಾರದು ಎಂದು.

೮. ಸತ್ಸಿದ್ಧಾಂತ

ಕಂದರೆಂದೂ ಮುಕುಂದರಾಗಲಾರರು

ಸಸಿಯು ಬೆಳೆದು ಕಾಲಕ್ರಮೇಣ ಮರವಾಗಬಹುದು. ಆದರೆ, ಹಾಗೆಯೇ ಭಗವಂತನ ಕಂದರಾದ ಜೀವಾತ್ಮರು ಕ್ರಮೇಣ ಅಭಿವೃದ್ಧರಾಗಿ ಭಗವಂತರಾಗಬಹುದೆಂದು ಸಂದೇಹಿಸುವಂತಿಲ್ಲ, ಸಸಿ ಬೆಳೆದು ಮರವಾದಂತೆ ಭಗವಂತ ಅಪೂರ್ಣತೆಯಿಂದ ಪೂರ್ಣತೆಯ ಕಡೆಗೆ ಸಾಗಿದವನಲ್ಲ. ಅವನು ಎಂದೆಂದಿಗೂ ಪರಿಪೂರ್ಣನು. ಅವನ ಅಂತಸ್ಸತ್ವವೇ ಹಾಗಿದೆ. ಬೆಳವಣಿಗೆಯ ಕಡೆಗೆ ಸಾಗುತ್ತಿರುವ ಅಲ್ಪ ಸತ್ವರಾದ ಜೀವರು ಎಂದೆಂದೂ ಭಗವಂತನ ಎತ್ತರವನ್ನು ಮುಟ್ಟಲಾರರು. ಈ ಕಂದರು ಎಂದೂ ಮುಕುಂದ ರಾಗಲಾರರು.

ಅದ್ಭುತ ಸಂಶೋಧಕರು

ಶ್ರೀಮಧ್ವಾಚಾರ್ಯರನ್ನು ನೂತನ ಮತಸ್ಥಾಪಕರೆನ್ನದೆ ವೇದೋಪನಿಷತ್ತುಗಳ ಅದ್ಭುತ ಸಂಶೋಧಕರೆನ್ನುವುದು ಸೂಕ್ತ. ಅವರು ಮರೆಯಾಗಿರುವ ವೈದಿಕ ಧರ್ಮವನ್ನೇ ತಮ್ಮ ಅಮೋಘ ಸಂಶೋಧನೆಯಿಂದ ಪುನಃ ಪ್ರಕಾಶಕ್ಕೆ ತಂದರು. ವೈದಿಕ ಧರ್ಮವನ್ನು ಮುಚ್ಚಿರುವ ಅನೇಕ ಹೊಸ ವಾದಗಳನ್ನು ತಮ್ಮ ತರ್ಕಬದ್ಧ ಹಾಗೂ ಪ್ರಮಾಣಸಿದ್ಧ ವಿಚಾರ ಸರಣಿಯಿಂದ ಹೊಡೆದೋಡಿಸಿದರು. ವೈದಿಕ ಸಿದ್ಧಾಂತವನ್ನು ಪ್ರಜ್ವಲಿಸುವಂತೆ ಮಾಡಿದರು.

ಸಂಸಾರವೆಂದರೆ

ಜೀವರು ತಮಗಿಂತ ಭಿನ್ನವಾದ ಮನಸ್ಸಿನ ವಿಕಾರ ಹಾಗೂ ಧರ್ಮಗಳಾದ ರಾಗ , ದ್ವೇಷ , ಸುಖ, ದುಃಖ ಮೊದಲಾದವುಗಳನ್ನೂ ಅಜ್ಞಾನವನ್ನೂ ತನ್ನ ಧರ್ಮವೆಂದು ಭ್ರಮಿಸಿ ತನ್ನದಾಗದಿದ್ದುದನ್ನು ತನ್ನದೆಂದು ಹಚ್ಚಿಕೊಂಡು ಸಾಂಸಾರಿಕ ಕ್ಲೇಶ ವಿಕಾರಗಳಿಗೆ ಗುರಿಯಾಗುವರು. ಜೀವಾತ್ಮರ ಈ ಮಹಾ ಪ್ರಮಾದವೇ ಸಂಸಾರವಾಗಿದೆ 'ಪ್ರಮಾದಾತ್ಮ ಕತ್ವಾದ್ಬಂಧಸ್ಯ '.

'ಅದ್ವೈತಾಮೃತವರ್ಷಿಣೀ'

ಭಗವದ್ಗೀತೆಯನ್ನು 'ಅದ್ವೈತ ವರ್ಷಿಣೀ' ಎಂದು ವರ್ಣಿಸಲಾಗಿದೆ. ಅದು ಸುರಿಸುವ 'ಅದ್ವೈತಾಮೃತ'ವೆಂದರೆ ಜೀವೇಶ್ವರಾದ್ವೈತವಲ್ಲ. ಮತ್ತೆ ಭಾಗವತದಲ್ಲಿ ವರ್ಣಿಸಿರುವ ಭಾವಾದ್ವೈತ ಹಾಗೂ ದ್ರವ್ಯಾದ್ವೈತಗಳ ಸಂದೇಶಗಳ ಸುರಿಮಳೆಯನ್ನಷ್ಟೇ ಗೀತೆ ಸುರಿಸುವುದು.

ಎಲ್ಲ ಪದಾರ್ಥಗಳಲ್ಲೂ ಒಬ್ಬನೇ ಭಗವಂತ ಇರುವನೆಂದು ತಿಳಿದುಕೊಳ್ಳುವಿಕೆ ಭಾವಾದ್ವೈತ.

ಇದು ಭಗವದ್ಗೀತೆಯ 'ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ' ಇತ್ಯಾದಿ ಮಾತುಗಳಲ್ಲಿ ಸಂದೇಶಿಸಲಾಗಿದೆ.

ನಮ್ಮ ಎಲ್ಲ ಕ್ರಿಯೆಗಳೂ ಪರಮಾತ್ಮನಿಂದಲೇ ನಡೆಯುತ್ತಿವೆ ಎಂದು ಅರಿತುಕೊಳ್ಳುವುದೇ ಕ್ರಿಯಾದ್ವೈತ. 'ಕರ್ಮಣ್ಯ ಕರ್ಮಯಃ ಪಶ್ಯೇತ್ ಅಕರ್ಮಣಿ ಚ ಕರ್ಮಯಃ' – ಇತ್ಯಾದಿ ಭಗವದ್ಗೀತೆಯ ಮಾತುಗಳಲ್ಲಿ ಈ ಅದ್ವೈತದ ಸಂದೇಶವಿದೆ.

ಸಕಲ ವಸ್ತುಗಳೂ ಭಗವದಧೀನವಾಗಿವೆ ಎಂದು ತಿಳಿದುಕೊಳ್ಳುವುದೇ ದ್ರವ್ಯಾದ್ವೈತವೆನಿಸಿದೆ. ಭಗವದ್ಗೀತೆಯ 'ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ' ಇತ್ಯಾದಿ ಮಾತುಗಳು ಈ ಅದ್ವೈತವನ್ನೇ ಸಾರುತ್ತಿವೆ.

ಈ ರೀತಿಯಾಗಿ ಭಗವದ್ಗೀತೆ ಸಂದೇಶಿಸುತ್ತಿರುವ ಅದ್ವೈತ - ಭಗವಂತನ ಸರ್ವೋತ್ಕರ್ಷಕ್ಕೆ ಪೋಷಕವಾದುದು.

ಜಗತ್ತು ಶಾಶ್ವತವಲ್ಲ ; ಆದರೆ ಸತ್ಯ

ಒಮ್ಮೆಯಾದರೂ ಅಸ್ತಿತ್ವದಲ್ಲಿದ್ದ ವಸ್ತು ಸತ್ಯವೆನಿಸಿದರೆ, ತ್ರಿಕಾಲದಲ್ಲೂ ಇರುವ ವಸ್ತು ಶಾಶ್ವತ ಅಥವಾ ಸನಾತನ ಎನಿಸುವುದು. ಜಗತ್ತು ಸನಾತನವಲ್ಲ ; ಆದರೆ ಸತ್ಯ. ಶಂಕರಾಚಾರ್ಯರು ಹಗ್ಗದಲ್ಲಿ ಆರೋಪಿಸಲಾದ ಹಾವಿನಂತೆ ಜಗತ್ತು ತ್ರಿಕಾಲದಲ್ಲಿಯೂ ಇಲ್ಲವೆಂದಿದ್ದಾರೆಯೇ ಹೊರತು ಕ್ಷಣ ಕ್ಷಣದಲ್ಲೂ ರೂಪಾಂತರಗೊಳ್ಳುತ್ತ ಇರುವುದೆಂಬ ಅರ್ಥದಲ್ಲಿ ಜಗತ್ತನ್ನು ಮಿಥ್ಯಾ ಎಂದಿಲ್ಲ. ಒಂದು ವೇಳೆ ರೂಪಾಂತರಗೊಳ್ಳುವುದು ಎಂಬ ಅರ್ಥದಲ್ಲೇ ಜಗತ್ತು ಮಿಥ್ಯಾ ಎನ್ನುವುದಾದರೆ ಅದನ್ನು ಮಾಧ್ವರೂ ಸಮ್ಮತಿಸುವರು.

ಅಪರಿಪೂರ್ಣನಾಗಬೇಕಿಲ್ಲ

ಭಗವಂತನ ಉಳಿದ ಹೆಸರುಗಳು ಅವನ ಒಂದೊಂದು ಗುಣವನ್ನು ಮಾತ್ರ ತಿಳಿಸಿದರೆ, ಪರಬ್ರಹ್ಮ, ವಿಷ್ಣು , ನಾರಾಯಣ ಇತ್ಯಾದಿ ನಾಮಗಳು ಅವನ ಎಲ್ಲ ಗುಣಗಳನ್ನು ಸಂಗ್ರಹವಾಗಿ ತಿಳಿಸಿ ಅವನ ಪೂರ್ಣತ್ವದ ಭಾವನೆಯನ್ನು ನಮಗೆ ನೀಡುತ್ತವೆ. ಉಳಿದ ಹೆಸರುಗಳು ಭಗವಂತನ ಕೆಲವು ಗುಣಗಳನ್ನೇ ತಿಳಿಸಿದರೂ ಅವನು ಅಪರಿಪೂರ್ಣನಾಗಬೇಕಿಲ್ಲ. ಪಾತ್ರೆಯು ಸಮುದ್ರದ ನೀರಿನ ಒಂದಂಶವನ್ನಷ್ಟೇ ಎತ್ತಿದರೂ ಸಮುದ್ರದಲ್ಲಿ ಅಷ್ಟೇ ನೀರಿರುವುದೆಂದಾಗುವುದೇ ?

ಎರಡೂ ಸತ್ಯ ; ಎರಡೂ ಬೇಕು

ಕೆಲವು ನಾಸ್ತಿಕರು ಜಗತ್ತೊಂದೇ ಸತ್ಯವೆಂದು ಭ್ರಮಿಸಿ ಅದರಲ್ಲೇ ಮುಳುಗಿದರೆ, ಕೆಲವು ಆಸ್ತಿಕರು ಬ್ರಹ್ಮವೊಂದೇ ಸತ್ಯವೆಂದು ನಂಬಿ ಆತನಲ್ಲೇ ಮಗ್ನರಾಗಿರುತ್ತಾರೆ. ಆದರೆ ಜಗತ್ತೂ ಸತ್ಯ ; ಬ್ರಹ್ಮನೂ ಸತ್ಯ ಎಂದು ಸಾರಿದ ಶ್ರೀಮಧ್ವಾಚಾರ್ಯರು ಆದ್ದರಿಂದಲೇ ಜಗತ್ತಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸಿಕೊಂಡು ಇರಬೇಕು; ಭಗವಂತನನ್ನು ಭಕ್ತಿಯಿಂದ ಸ್ಮರಿಸಿಕೊಂಡೂ ಇರಬೇಕು – 'ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದವಿನಮ್ರಧಿಯಾ ಸತತಮ್' ಎಂದು ಸಂದೇಶಿಸಿರುವರು.

ವೈರಾಗ್ಯ ಉಂಟಾಗಬೇಕಾದರೆ

ಪ್ರಾಪಂಚಿಕ ಸುಖವು ಅನಿತ್ಯ , ಅಸಾರ, ಅಲ್ಪ ಎನ್ನುವ ಭಾವನೆಯೇ ಸಾಂಸಾರಿಕ ಸುಖದಲ್ಲಿ

ಆಸಕ್ತಿಯನ್ನು ತೊಡೆದುಹಾಕಿ ವೈರಾಗ್ಯ-ಪ್ರವೃತ್ತಿಯನ್ನು ಬೆಳೆಸಬಲ್ಲದು. ಪ್ರಪಂಚದ ದುಃಖ - ಪರಂಪರೆಯನ್ನು ಪರಿಶೀಲಿಸುವುದರಿಂದಲೂ ಅದನ್ನು ತೊರೆದು ಶಾಶ್ವತ ಸುಖವನ್ನು ಪಡೆಯುವ ಹಂಬಲವು ನಮ್ಮಲ್ಲಿ ಮೂಡಬಲ್ಲದು. ವೈರಾಗ್ಯಕ್ಕಾಗಿ ಪ್ರಪಂಚವು ಮಿಥ್ಯೆ ಎಂದು ತಿಳಿಯುವ ಅವಶ್ಯಕತೆಯಿಲ್ಲ.

ಕರ್ತವ್ಯದ ಪ್ರೇರಣೆಯೇ ಇಲ್ಲದಂತಾದೀತು

ಜಗತ್ತು ಸುಳ್ಳೆಂಬ ತಿಳುವಳಿಕೆಯು ವೈರಾಗ್ಯದ ಜೊತೆಗೆ ಕರ್ತವ್ಯದ ಪ್ರೇರಣೆಯನ್ನೇ ಹಿಚುಕಿ ಹಾಕುವುದು. ಈ ಜಗತ್ತೆಲ್ಲ ಸ್ವಪ್ನದಂತೆ ಕೇವಲ ಭ್ರಮೆಯಂತೆ ಎಂಬ ಭಾವನೆಯಿರುವಾಗ ನಾವು ಕರ್ತವ್ಯದಲ್ಲಿ ಹೇಗೆ ತೊಡಗಬಲ್ಲೆವು ? ಸುತ್ತುಮುತ್ತಲಿನ ಜನರ ಸಂಕಟ ನಿವಾರಣೆಗಾಗಿ ನಾವು ಹೇಗೆ ಸ್ಪಂದಿಸಬಲ್ಲೆವು ? ವೈಯಕ್ತಿಕ ಮತ್ತು ಸಾಮಾಜಿಕ ಕರ್ತವ್ಯದ ಪ್ರಚೋದನೆಯ ಸೆಲೆಯೇ ಜಗತ್ತಿನಲ್ಲಿ ಇಲ್ಲದಂತಾಗುವುದು.

ಪ್ರತ್ಯೇಕ ಅಸ್ತಿತ್ವ ಬೇಕೇ ಬೇಕು

ಪರಮಾತ್ಮನು ಎಲ್ಲರಲ್ಲೂ ಇರುವನು; ಎಲ್ಲವು ಭಗವಂತನಲ್ಲಿದೆ ಎಂದು ಹೇಳಬೇಕೆಂದರೆ ಪರಮಾತ್ಮನಿಂದ ಬೇರೆಯಾಗಿ ಜಗತ್ತು ಇಲ್ಲ ಎಂದು ಹೇಳಲಾಗದು. ಮನೆಯಲ್ಲಿ ಬೆಳಕಿದೆ – ಎಂದರೆ ಮನೆಯಿಂದ ಪ್ರತ್ಯೇಕವಾಗಿ ಬೆಳಕೇ ಇಲ್ಲ ಎನ್ನಲಾದೀತೇ ? ಪರಮಾತ್ಮನು ಜಗತ್ತಲ್ಲಿ ಇರಬೇಕಿದ್ದರೂ ಜಗತ್ತು ಪರಮಾತ್ಮನಲ್ಲಿ ಇರಬೇಕಿದ್ದರೂ ಇಬ್ಬರಿಗೂ ಪ್ರತ್ಯೇಕ ಅಸ್ತಿತ್ವವು ಅನಿವಾರ್ಯವಾಗಿದೆ. ಆದ್ದರಿಂದ ಜಗತ್ತು ಮತ್ತು ಪರಬ್ರಹ್ಮ ಇವೆರಡೂ ಸತ್ಯವಾಗಿದೆ.

ಉಪವಾಸವಿರುವುದೇ ಲೇಸು

ಆಹಾರವಿಲ್ಲದೆ ಉಪವಾಸದಿಂದ ಬಳಲಿದಾಗ ನಮಗೆ ತುಂಬಾ ಕಷ್ಟವಾಗಬಹುದು. ಆದರೆ ಆಹಾರವನ್ನು ಸ್ವೀಕರಿಸುವ ಭರದಲ್ಲಿ , ಪರೀಕ್ಷಿಸದೆ ಸಿಕ್ಕಿದ ಆಹಾರವನ್ನೆಲ್ಲ ಉಪಯೋಗಿಸಿದರೆ ಹೆಚ್ಚು ಅನರ್ಥವಾಗುವುದಿಲ್ಲವೇ ? ಕೆಟ್ಟ ಆಹಾರವನ್ನು ಸ್ವೀಕರಿಸುವುದಕ್ಕಿಂತ ಉಪವಾಸವಿರುವುದೇ ಒಳಿತು. ಅದರಂತೆ ತತ್ತ್ವಜ್ಞಾನದ ಕ್ಷೇತ್ರದಲ್ಲೂ ವಿಮರ್ಶೆಯ ಅವಶ್ಯಕತೆಯಿದೆ. ಯಾವ ಮತವಾದರೇನು ? ಎಲ್ಲವೂ ಒಂದೇ ಎನ್ನುವ ದೃಷ್ಟಿಯು ವೈಚಾರಿಕ ಕ್ಷೇತ್ರಕ್ಕೆ ಸರಿಯೆನಿಸುವುದಿಲ್ಲ. ಸತ್ಯಾನ್ವೇಷಣೆಯೇ ಸಾಧಕನ ಮುಖ್ಯ ಗುರಿ. ಸತ್ಯ, ಅಸತ್ಯ ಇವೆರಡನ್ನೂ ಸಮಾನವಾಗಿ ನೋಡುವುದು ಸತ್ಯಾನ್ವೇಷಕನಾದ ತತ್ತ್ವಜ್ಞಾನಿಗೆ ಸರಿಯೆನಿಸದು.

ಅಪರಾಧವೇ ತಾನೇ

ತತ್ವಜ್ಞಾನವನ್ನು ಪಡೆಯುವಂತೆ ಜನರಲ್ಲಿ ಹುದುಗಿದ ವಿಪರೀತ ಜ್ಞಾನವನ್ನು ನಿವಾರಿಸುವುದೂ ಸಾಧಕನ ಕರ್ತವ್ಯವಾಗಿದೆ. ನಿಜವಾದ ತತ್ತ್ವಜ್ಞಾನಿಯು ಉಳಿದವರು ತಾನು ಕಂಡ ಸತ್ಯವನ್ನು ತಿಳಿಯದೆ ಭ್ರಾಂತಿಯ ಸುಳಿಯಲ್ಲಿ ಸಿಲುಕುವುದನ್ನು ನೋಡುತ್ತ ಮೂಕ ಪ್ರೇಕ್ಷಕನಾಗಿ ಸುಮ್ಮನೆ ಕುಳಿತಿರಲಾರ. ಅವರನ್ನು ಮುತ್ತಿರುವ ಭ್ರಾಂತಿಯ ಜಾಲವನ್ನು ಕಿತ್ತೆಸೆಯಲು ಪ್ರಯತ್ನಿಸಿಯೇ ತೀರುವನು. ಒಬ್ಬನು ಕಣ್ಣು ಕಾಣದೆ ಬಾವಿಯಲ್ಲಿ ಬೀಳುತ್ತಿರುವಾಗ ಗೊತ್ತಿದ್ದರೂ ಅದನ್ನು ತಡೆಯಲು ಪ್ರಯತ್ನಿಸದಿರುವುದು ಅಪರಾಧವೇ ತಾನೇ ?

ಎಂದಿಗೂ ಸತ್ಯವೆನಿಸಲಾರವು

ಭಿನ್ನ ಭಿನ್ನ ಆಹಾರಗಳೂ ಅವರವರ ಅಭಿರುಚಿಗೆ ತಕ್ಕಂತೆ ತೃಪ್ತಿಕರಗಳಾದರೂ ಎಲ್ಲ ಆಹಾರಗಳಿಂದಲೂ ಶರೀರದ ಮೇಲೆ ಒಂದೇ ರೀತಿಯ ಪರಿಣಾಮಗಳಾಗುವುದಿಲ್ಲ. ಆಹಾರದ ಗುಣಧರ್ಮಗಳಿಗನುಗುಣವಾಗಿ ಶರೀರದ ಮೇಲೆ ವಿಭಿನ್ನ ಪ್ರತಿಕ್ರಿಯೆ ಆಗಿಯೇ ತಿರುವುದು. ತಾತ್ವಿಕ ವಿಚಾರದಲ್ಲೂ ಇದೇ ಮಾತು ಬರುವುದು. ಪರಸ್ಪರ ವಿರೋಧಿ ವಿಚಾರಗಳು ಎಂದಿಗೂ ಸತ್ಯವೆನಿಸಾಲಾರವು. ಸತ್ಯ ಹಾಗೂ ಅಸತ್ಯ ವಿಚಾರಗಳಿಂದ ಆತ್ಮನ ಮೇಲೆ ಒಂದೇ ವಿಧವಾದ ಪರಿಣಾಮ ಹೇಗೆ ಆಗಬಹುದು ? ಅವು ಅವರವರ ಮನೋವೃತ್ತಿಗನುಗುಣವಾಗಿ ಮಾನಸಿಕ ಸಮಾಧಾನವನ್ನು ನೀಡಿದರೂ ಎಲ್ಲ ವಿಚಾರಗಳಿಂದ ಏಕ ವಿಧ ಪರಿಣಾಮವು ಆತ್ಮನ ಮೇಲೆ ಆಗಲಾರದು.

ಸದಾಚಾರ ಮತ್ತು ಸದ್ವಿಚಾರ

ನೀರಲ್ಲಿ ಸೂರ್ಯನ ಪ್ರತಿಬಿಂಬ ಕಾಣಬೇಕೆಂದರೆ, ಆ ನೀರು ಕೆಸರಿಂದ ಕಲುಷಿತವಾಗಿರಬಾರದು; ತರಂಗಗಳ ಏರುಪೇರು ನೀರಲ್ಲಿರಬಾರದು. ಅಂತೆಯೇ ಶ್ರೀಹರಿಯು ಅಂತಃಕರಣದಲ್ಲಿ ಕಾಣಿಸಿಕೊಳ್ಳಬೇಕೆಂದರೆ ಆ ಅಂತಃಕರಣ ಕಾಮಾದಿ ದೋಷದೂಷಿತವಾಗಿರಬಾರದು, ಸಂದೇಹಾದಿಗಳ ಏರುಪೇರಿನಿಂದ ಕೂಡಿದ್ದಿರಬಾರದು. ಹೀಗೆ ನಿರ್ಮಲ ಹಾಗೂ ನಿಶ್ಚಲವಾಗಿದ್ದಿರಬೇಕು. ಇದಕ್ಕಾಗಿಯೇ ಶ್ರೀಮಧ್ವಾಚಾರ್ಯರು ಸದಾಚಾರ ಮತ್ತು ಸದ್ವಿಚಾರಗಳಿಗೆ ಪ್ರಾಶಸ್ತ್ಯ ನೀಡಿರುವರು. ಅಂತಃಕರಣವನ್ನು ಶುದ್ಧೀಕರಿಸುವುದಕ್ಕೆ ಸದಾಚಾರ ಉಪಯುಕ್ತವಾದರೆ, ಸಂದೇಹಾದಿಗಳನ್ನು ನಿವಾರಿಸಿ ನಿಶ್ಚಲವನ್ನಾಗಿಸುವುದಕ್ಕೆ ಸದ್ವಿಚಾರ ಸಹಕಾರಿಯಾಗಿದೆ.

ಸಾದೃಶ್ಯದಲ್ಲೇ ದೃಷ್ಟಾಂತ

ತಾನೂ ಸಿಂಹವೇ ಆಗಿರುವೆನೆಂದು ಅರಿಯದ ಸಿಂಹದ ಮರಿಯೊಂದು ಮತ್ತೊಂದು ಸಿಂಹವನ್ನು ಕಂಡು ಆಸೆ ಪಡುತ್ತಿರುತ್ತದೆ – ತಾನೂ ಆ ಸಿಂಹದಂತೆಯೇ ಆಗಬೇಕೆಂದು. ಒಂದು ದಿನ ಅಕಸ್ಮಾತ್ತಾಗಿ ಆ ಸಿಂಹದ ಮರಿಗೆ ಬಾವಿಯೊಳಗೆ ಇಣಿಕಿ ನೋಡುವ ಪ್ರಸಂಗವೊಂದು ಒದಗಿ ಬರುವುದು. ಬಾವಿಯೊಳಗೆ ಇಣಿಕಿದಾಗ ಬಾವಿಯ ನೀರಲ್ಲಿ ತನ್ನ ಪ್ರತಿಬಿಂಬವನ್ನು ಕಂಡ ಆ ಸಿಂಹದ ಮರಿ ವಿವೇಚಿಸಿಕೊಳ್ಳುತ್ತದೆ – ತಾನೂ ಈಗಾಗಲೇ ಸಿಂಹನಾಗಿರುವೆನೆಂದು.

ತಾವು ಬ್ರಹ್ಮನಿಂದ ಭಿನ್ನರಾದವರೆಂದು ಭ್ರಮಿಸಿರುವ ಜೀವಾತ್ಮರ ಸ್ಥಿತಿಯೂ ಹೀಗೆಯೇ. ತಾವೂ ಬ್ರಹ್ಮರಾಗಬೇಕೆಂದು ಹವಣಿಸಿರುತ್ತಾರೆ ಅವರು. ಅವರಿಗೆ ಛಾಂದೋಗ್ಯೋಪನಿಷತ್ತು ಸಂದೇಶಿಸುತ್ತದೆ – 'ಸ ಆತ್ಮಾ ತತ್ವಮಸಿ' 'ನೀನು ಯಾವ ವ್ಯಕ್ತಿಯಾಗಬೇಕೆಂದು ಅಪೇಕ್ಷೆ ಪಡುತ್ತಿರುವಿಯೋ ಈಗಾಗಲೇ ಅಂತಹ ಬ್ರಹ್ಮನೇ ಆಗಿರುವಿ'. ಬಾವಿಯ ನೀರು ಆ ಸಿಂಹದ ಮರಿಗೆ ಸತ್ಯದರ್ಶನವನ್ನು ಮಾಡಿಸಿದಂತೆ ಉಪನಿಷತ್ತಿನ ಈ ವಾಕ್ಯವೂ ಜೀವಾತ್ಮರಿಗೆ ತಮ್ಮ ಅರಿವನ್ನು ಮೂಡಿಸುತ್ತದೆ.

ಆಧುನಿಕ ಅದ್ವೈತ ವೇದಾಂತಿಗಳು ತಮ್ಮ ಅದ್ವೈತವಾದದ ಮಂಡನೆಗಾಗಿ ಉದಾಹರಿಸುತ್ತಿರುವ ಈ ನಿದರ್ಶನ ಮೇಲ್ನೋಟಕ್ಕೆ ಅದ್ವೈತವಾದಕ್ಕೆ ಪೋಷಕವಾಗಿರುವಂತೆ ಕಂಡರೂ ಚೆನ್ನಾಗಿ ವಿಶ್ಲೇಷಿಸಿಕೊಂಡರೆ ದ್ವೈತವಾದಿಗಳ ಆ ವಾಕ್ಯದ ವ್ಯಾಖ್ಯಾನಕ್ಕೇ ಪೂರಕವಾಗಿರುವುದೆಂದು ತಿಳಿಯದಿರದು.

ನೀರಲ್ಲಿ ತನ್ನ ಪ್ರತಿಬಿಂಬವನ್ನು ಕಂಡ ಆ ಸಿಂಹದ ಮರಿ ತಾನೂ ಹಿಂದೆ ಕಂಡಂತಹ ಸಿಂಹದಂತೆಯೇ ಆಕಾರವುಳ್ಳ ಸಿಂಹ ಎಂಬುದಾಗಿ ಭಾವಿಸುವುದೇ ಹೊರತು ಆ ಸಿಂಹವೇ ತಾನಾಗಿದ್ದೇನೆಂದು

ಭ್ರಮಿಸಲಾರದು. ಒಂದು ವೇಳೆ ಆ ಕ್ಷಣದಲ್ಲಿ ಹಾಗೆ ಭ್ರಮಿಸಿಕೊಂಡರೂ ಮತ್ತೆ ಎಂದಾದರೂ ಆ ಸಿಂಹವನ್ನು ಕಂಡಿತೆಂದರೆ ಆಗಲಾದರೂ – ತಾನು ಆ ಸಿಂಹದಂತೆ ಸಿಂಹನಾಗಿರುವನೇ ಹೊರತು ಅದೇ ಸಿಂಹವಲ್ಲ – ಎಂದು ವಿವೇಚಿಸಿಕೊಳ್ಳದಿರಲಾರದು.

ಅಸಮಾನತೆಯಿದ್ದರೂ ಅಪೂರ್ಣತೆಯಿಲ್ಲ

ಜೀವಾತ್ಮರ ಮೂಲವ್ಯಕ್ತಿತ್ವದಲ್ಲೂ ಅವರ ಸಾಧನಾನುಷ್ಠಾನಗಳಲ್ಲಿಯೂ ವ್ಯತ್ಯಾಸಗಳು ಇರುವಾಗ, ಸಾಧ್ಯವೆನಿಸಿರುವ ಮುಕ್ತಿಯ ಆನಂದದಲ್ಲಿ ಸಮಾನತೆ ಹೇಗೆ ತಾನೇ ಇದ್ದೀತು ? ಅನ್ಯೋನ್ಯವಾಗಿ ಅಸಮಾನತೆಯೇ ಇದ್ದರೂ ಮುಕ್ತಿಯಲ್ಲಿ ಯಾರಿಗೂ ಅಪೂರ್ಣತೆಯ ಅನುಭವವು ಬರಲಾರದು. ಬೇರೆ ಬೇರೆ ಸಣ್ಣ ದೊಡ್ಡ ಪಾತ್ರೆಗಳಲ್ಲಿ ನೀರಿನಲ್ಲಿ ಅಂತರವಿದ್ದರೂ, ಎಲ್ಲ ಪಾತ್ರೆಗಳೂ ಪೂರ್ಣವಾಗಿಯೇ ಇರುವಂತೆ ಬೇರೆ ಬೇರೆ ಮುಕ್ತಾತ್ಮರ ಆನಂದದಲ್ಲಿ ತಾರತಮ್ಯವಿದ್ದರೂ ಎಲ್ಲರೂ ಪರಿಪೂರ್ಣರೇ ಆಗಿರುವರು.

೯. ಆತ್ಮಾವಲೋಕನ

ಸಕ್ಕರೆ ತುಂಬಿದ ಚೀಲ

ಸನ್ಯಾಸಿಗಳು, ಮಠಾಧಿಪತಿಗಳು ಸಕ್ಕರೆ ತುಂಬಿರುವ ಚೀಲಗಳಂತೆ. ಆ ಚೀಲಗಳಿಗೆ ತುಂಬ ಬೇಡಿಕೆ ಇದೆ. ಆದರೆ ಎಷ್ಟರವರೆಗೆ ? ಎಷ್ಟರವರೆಗೆ ಅವುಗಳಲ್ಲಿ ಸಕ್ಕರೆ ತುಂಬಿರುವುದೋ ಅಷ್ಟರವರೆಗೆ ಮಾತ್ರ. ಸನ್ಯಾಸಿಗಳಲ್ಲೂ ಭಗವದ್ಭಕ್ತಿ , ಭಗವದ್-ಜ್ಞಾನ, ವಿರಕ್ತ್ಯಾದಿ ಸದ್ಗುಣ –ಸಕ್ಕರೆ ತುಂಬಿರುವವರೆಗೆ ಮಾತ್ರ ಅವರಿಗೆ ಬೇಡಿಕೆ -ಮನ್ನಣೆ.

ಬರ್ನಾದ ಬಲ್ಬ್

ಎಲ್ಲ ಪದಾರ್ಥಗಳ ಮೇಲೆ ಬೆಳಕು ಚೆಲ್ಲಬಲ್ಲ ಬಲ್ಬಿಗೆ ಉಳಿದ ಪದಾರ್ಥಗಳಿಗಿಂತೆಲ್ಲ ಎತ್ತರದ ಸ್ಥಾನ ದೊರಕಬೇಕಾದದ್ದೇನೋ ನಿಜ. ಆದರೆ ಬಲ್ಬು ಎಷ್ಟರವರೆಗೆ ಇತರ ಪದಾರ್ಥಗಳನ್ನು ಬೆಳಗಿಸುತ್ತಿರುವುದೋ ಅದುವರೆಗೆ ಮಾತ್ರ ಅದಕ್ಕೆ ಎತ್ತರದ ಸ್ಥಾನ. ಎಂದು ಅದು ಸುಟ್ಟು ಹೋಗಿ (ಬರ್ನಾಗಿ) ಪ್ರಕಾಶಹೀನವಾದಾಗ ಇತರ ಪದಾರ್ಥಗಳ ಸಾಲಿಗೇ ಸೇರುವುದೋ ಅಂದಿನಿಂದ ಅದು ಇತರ ಪದಾರ್ಥಗಳ ಜೊತೆಗೇನೇ ಇರಬೇಕೇ ಹೊರತು ಎತ್ತರದ ಸ್ಥಾನದಲ್ಲಿ ವಿರಾಜಿಸುವಂತಿಲ್ಲ.

ಬ್ರಾಹ್ಮಣರಾದ ನಮ್ಮ ಈಗಿನ ಸ್ಥಿತಿಯೂ ಇದೇ ರೀತಿಯಾಗಿದೆ. ಹಿಂದೆ ಬ್ರಾಹ್ಮಣರು ಇತರ ವರ್ಣದವರಿಗೆಲ್ಲ ಉಪದೇಶಿಸುವ ಸಾಮರ್ಥ್ಯವನ್ನು ಪಡಕೊಂಡಿದ್ದರು; ಉಪದೇಶಿಸುತ್ತಿದ್ದರೂ ಕೂಡಾ. ಆಗ ಅವರಿಗೆ ಇತರರಿಂದೆಲ್ಲ ಗೌರವ ಮನ್ನಣೆ ಸಂದುತ್ತಿತ್ತು. ಆದರೆ ಈಗ ನಾವು ಆಚಾರ -ವಿಚಾರ ಭ್ರಷ್ಟರಾಗಿ ನಮ್ಮ ಅಂತಸ್ಸತ್ವವನ್ನೇ ಕಳಕೊಂಡಿದ್ದೇವೆ. ಹೀಗೆ ಆಚಾರ ವಿಚಾರಗಳಲ್ಲೆಲ್ಲ ಉಳಿದವರಂತೆಯೇ ಇದ್ದು , ಹೀಗಿದ್ದರೂ ಅವರು ನಮಗೆ ಹೆಚ್ಚಿನ ಮಾನ್ಯತೆ ನೀಡಬೇಕೆಂದು ನಿರೀಕ್ಷಿಸುವುದು ಸರಿಯೇ ? ಆದ್ದರಿಂದ ಹಿಂದಿನ ಗೌರವಾದಿಗಳನ್ನು ಮತ್ತೆ ಪಡಕೊಳ್ಳುವಂತಾಗಬೇಕೆಂದಿದ್ದರೆ, ಮೊದಲು ಹಿಂದಿನ ಬ್ರಾಹ್ಮಣರಂತೆಯೇ ಅಂತಃಸತ್ವವನ್ನು ಗಳಿಸಿಕೊಳ್ಳಲು ತೊಡಗಬೇಕು.

ಅದೆಷ್ಟು ವಿಶ್ವಾಸ !

'ನಾವು ಇಷ್ಟೆಲ್ಲ ಪೂಜೆ ಪುನಸ್ಕಾರಾದಿಗಳನ್ನು ಸಲ್ಲಿಸಿದರೂ ದೇವರು ಯಾಕೆ ಒಲಿಯುವುದಿಲ್ಲ ?'

ಎಂದು ಕೆಲವರ ಆಕ್ಷೇಪ. ಅಂತಹವರು ಸ್ವಲ್ಪ ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕು. ತಮಗೆ ದೇವರಲ್ಲಿ ಎಷ್ಟರಮಟ್ಟಿಗೆ ವಿಶ್ವಾಸವಿದೆ ಎಂದು.

ಒಬ್ಬ ಸಾಧಾರಣ ಮನುಷ್ಯನಾದ ಘೂರ್ಖ, ಬೇಡ ಸಾಮಾನ್ಯ ಪಶುವಾದ ನಾಯಿಯಲ್ಲಿರುವಷ್ಟು ವಿಶ್ವಾಸವಾದರೂ ನಮಗೆ ಜಗದೊಡೆಯನಲ್ಲಿದೆಯೇ ಎಂದಾದರೊಮ್ಮೆ ಮನೆಯನ್ನು ಬಿಟ್ಟು ಹೋಗ ಬೇಕಾದ ಸಂದರ್ಭದಲ್ಲಿ ಘೂರ್ಖ ಮನೆಯನ್ನು ಕಾಯುತ್ತಾನೆ; ನಾಯಿ ಮನೆಯನ್ನು ಕಾಪಾಡುತ್ತದೆ – ಎಂದು ಸಮಾಧಾನ ತಾಳುತ್ತೇವೆಯೇ ಹೊರತು ದೇವರು ಮನೆಯನ್ನು ಕಾಪಾಡುತ್ತಾನೆ – ಎಂಬ ವಿಶ್ವಾಸವನ್ನು ನಾವು ತಂದುಕೊಳ್ಳುವುದಿದೆಯೇ?

ನಾವೂ ದುರ್ಯೋಧನರೇ

ಅರ್ಜುನ ಮತ್ತು ದುರ್ಯೋಧನರಿಬ್ಬರೂ ಶ್ರೀಕೃಷ್ಣನಲ್ಲಿ ಸಹಾಯವನ್ನು ಕೇಳಲು ಹೋಗುವರು. ಇವರಲ್ಲಿ ಅರ್ಜುನ ಶ್ರೀಕೃಷ್ಣನನ್ನು ಆರಿಸಿಕೊಂಡರೆ ದುರ್ಯೋಧನ ಶ್ರೀಕೃಷ್ಣನನ್ನು ಹೊರತಾದ ಸೈನಿಕರನ್ನು ಆರಿಸಿಕೊಂಡ. ನಾವೂ ಇಂತಹ ದುರ್ಯೋಧನರೇ. ಒಂದೆಡೆ ಶ್ರೀಕೃಷ್ಣನನ್ನು ಮತ್ತೊಂದೆಡೆ ಭೌತಿಕ ಭೋಗಭಾಗ್ಯಗಳನ್ನೂ ಇಟ್ಟರೆ ನಾವು ಕೃಷ್ಣನನ್ನು ಹೊರತಾದ ಭೌತಿಕಭೋಗ ಭಾಗ್ಯಗಳನ್ನೇ ಆರಿಸಿಕೊಳ್ಳುವೆವು.

ನಾವೇನೂ ಕಮ್ಮಿಯವರಲ್ಲ

ವಾಲಿಯನ್ನು ನಿಗ್ರಹಿಸಿ ಕಿಷ್ಕಿಂಧೆಯನ್ನು ಕೊಡಿಸಿದ ಶ್ರೀರಾಮನ ಕಾರ್ಯವನ್ನು ಮರೆತು ಬರೀ ಭೋಗ ವಿಲಾಸಾದಿಗಳಲ್ಲಿ ಮಗ್ನನಾದ ಸುಗ್ರೀವನ ಕೃತಘ್ನತೆಯ ಬಗ್ಗೆ ನಾವು ಅಪಹಾಸ್ಯ ಮಾಡುತ್ತೇವೆ. ಆದರೆ ನಾವೇನೂ ಕೃತಘ್ನತೆಯಲ್ಲಿ ಸುಗ್ರೀವನಿಗಿಂತ ಕಮ್ಮಿಯವರಲ್ಲ. ಭೋಗಾದಿಗಳನ್ನು ಅನುಭವಿಸಲು ಶರೀರಾದಿಗಳನ್ನು ಅನುಗ್ರಹಿಸಿದ ಭಗವಂತನ 'ಜಗಚ್ಚಕ್ರ'ದ ಚಾಲನೆ ಕಾರ್ಯವನ್ನು ಸಾಂಸಾರಿಕ ಭೋಗಗಳಲ್ಲಿ ಮಗ್ನರಾದ ನಾವು ಅದೆಷ್ಟು ಮಟ್ಟದಲ್ಲಿ ನಡೆಸುತ್ತಿದ್ದೇವೆ?

ನಾಯಿಗಿಂತ ಕಡೆ

ನಾಯಿ ತನಗೆ ಒಂದೆರಡು ಬಾರಿ ಆಹಾರವನ್ನು ಎಸೆದ ಯಜಮಾನನಿಗೂ ತನ್ನ ಬಾಲವನ್ನು ಅಲ್ಲಾಡಿಸುತ್ತ ಕೃತಜ್ಞತೆಯ್ನು ತೋರಿಸುತ್ತದೆ. ಆದರೆ ಬುದ್ಧಿಜೀವಿ ಎಂದು ಪ್ರಸಿದ್ಧನಾದ ಮಾನವ ತನಗೆ ಅನುದಿನವೂ ಆಹಾರಗಳನ್ನು ಒದಗಿಸಿ ಕಾಪಾಡುತ್ತಿರುವ ಭಗವಂತನನ್ನು ಮರೆತು ಕೃತಘ್ನನಾಗಿರುತ್ತಾನೆ. ನಾಯಿಯನ್ನು ಕಂಡಾದರೂ ಅವನು ಕೃತಜ್ಞತೆಯ ಪಾಠ ಕಲಿಯಬೇಕು.

ಕಂಟ್ರಾಕ್ಟ್ ವ್ಯವಹಾರವಷ್ಟೇ

ನಮ್ಮ ದೈನಂದಿನದ ಪ್ರತಿಯೊಂದು ವ್ಯವಹಾರದಲ್ಲೂ ಧಾರ್ಮಿಕತೆ ಹರಿಯುತ್ತಿರಬೇಕು. ಆದರೆ ನಾವು ದಿನದ ಒಂದೆರಡು ಗಂಟೆ ಕಾಲ ಮಾತ್ರ ದೇವರ ಪೂಜೆ ಪುನಸ್ಕಾರಾದಿಗಳಿಗೆ ಮೀಸಲಿಡುತ್ತೇವೆ. ಆ ಅವಧಿ ಮುಗಿಯುತ್ತಲೇ ದೇವರನ್ನೂ ಧರ್ಮವನ್ನೂ ಮಡಚಿಟ್ಟು ಕಟ್ಟಿಹಾಕಿ ಮರುದಿನ ಬೆಳಗಿನವರೆಗೆ ದೇವರ ಹಾಗೂ ಧರ್ಮದ ಸಂಬಂಧವೇ ಇಲ್ಲದಂತೆ, ಅವುಗಳ ಗೋಜಿಗೇ ಹೋಗದೆ ಸ್ವಚ್ಛಂದ ವಾಗಿರುತ್ತೇವೆ. ಹೀಗೆ ಭಗವಂತನ ಜೊತೆಗೆ, ಧರ್ಮದ ಜೊತೆಗೆ ನಿರ್ದಿಷ್ಟವಾದ ಒಂದಿಷ್ಟು ಕಾಲ ಮಾತ್ರ

ಸಂಪರ್ಕವನ್ನಿಟ್ಟುಕೊಳ್ಳುವ ನಾವು ಒಂದು ರೀತಿಯಲ್ಲಿ 'ಕಂಟ್ರಾಕ್ಟ್ ವ್ಯವಹಾರ'ವನ್ನಷ್ಟೇ ನಡೆಸುತ್ತೇವೆ. ಇದು ನಮ್ಮ ನೈಜ ಧರ್ಮಾಚರಣೆ ಎನಿಸದು.

ಭಗವಂತನನ್ನು ದೂರೀಕರಿಸುವ ಬದುಕು ಸುಟ್ಟು ಹೋದೀತು !

ಮಹಾಭಾರತ ಯುದ್ಧವೆಲ್ಲ ಮುಗಿದ ಬಳಿಕ ರಥದಿಂದ ಅರ್ಜುನನನ್ನು ಮೊದಲು ಇಳಿಸಿ, ಆ ಮೇಲೆ ಸಾರಥಿಯಾದ ಕೃಷ್ಣ ಕೆಳಗಿಳಿದ. ಕೃಷ್ಣ ಕೆಳಗಿಳಿದಾಕ್ಷಣ ರಥ ಸುಟ್ಟು ಹೋಯಿತು. ಒಂದು ವೇಳೆ ಅರ್ಜುನನಿಗಿಂತ ಮೊದಲೇ ಕೃಷ್ಣ ಇಳಿದಿದ್ದಲ್ಲಿ ಅರ್ಜುನನಿಂದ ಕೂಡಿಯೇ ಆ ರಥ ಸುಟ್ಟು ಹೋಗುತ್ತಿತ್ತು. ಅದಕ್ಕಾಗಿಯೇ ಅರ್ಜುನನನ್ನು ಮೊದಲು ಇಳಿಸಿ ಮತ್ತೆ ಕೃಷ್ಣ ಇಳಿದನು ಎಂಬುದಾಗಿ ಕಥೆಯೊಂದಿದೆ. ಇದರಲ್ಲಿಯ ತಾತ್ವಿಕಾಂಶವನ್ನು ನಾವು ಗ್ರಹಿಸಬೇಕು. ನಮ್ಮ ಜೀವನ - ರಥ ನಡುವೆ ನಾಶವಾಗದೆ ಸುರಕ್ಷಿತವಾಗಿರಬೇಕೆಂದರೆ ಅದರಲ್ಲಿ ಭಗವಂತನಿರಬೇಕು. ಭಗವಂತನಿಲ್ಲದ ಬದುಕು ಶಾಂತಿ ನೆಮ್ಮದಿಗಳಿಲ್ಲದೆ ಸುಟ್ಟು ಹೋದಂತೆಯೇ. ಭಗವಂತನಿಗೆ ಸ್ಥಾನವಿಲ್ಲದ ಬದುಕಲ್ಲಿ ಶಾಂತಿ ನೆಮ್ಮದಿಗಳಿರಲು ಸಾಧ್ಯವೇ ಇಲ್ಲ ಎಂಬುದಾಗಿ ಶ್ರೀಮಧ್ವಾಚಾರ್ಯರು ಚೆನ್ನಾಗಿ ಸಂದೇಶಿಸಿರುವರು. ಭಗವಂತನನ್ನು ನಮ್ಮ ಬದುಕಿಂದ ಹೊರಹಾಕಲು ಯತ್ನಿಸುತ್ತಿರುವ ನಾವು ಈ ಕುರಿತು ಎಚ್ಚರ ವಹಿಸಬೇಕು.

ನಾವೆಷ್ಟು ಅವಿವೇಕಿಗಳು !

ಉರಿಯುತ್ತಿರುವ ಕಂದಿಲನ್ನು ಹಿಡಿದಿರುವವನೊಬ್ಬ ಬೆಂಕಿಯ ತುಂಡು ಕೆಂಡಕ್ಕಾಗಿ ಮತ್ತೊಬ್ಬರ ಮನೆಗೆ ಹೋಗಿ; ಅಲ್ಲಿ ಬಾಗಿಲನ್ನು ತಟ್ಟುತ್ತಾನೆಂದರೆ; ಅವನನ್ನು ಮಹಾ ಅವಿವೇಕಿ ಎಂದು ನಾವು ಅಣಕಿಸಿಯೇವು. ನಮ್ಮ ಅವಿವೇಕವೂ ಇದಕ್ಕಿಂತ ಕಮ್ಮಿಯದ್ದೇನಲ್ಲ. ಸುಖದ ನಿಧಿಯನ್ನೇ ಒಳಗೆ ಬಚ್ಚಿಕೊಂಡು ಕ್ಷುಲ್ಲಕ ಸುಖದ ತುಣುಕಿಗಾಗಿ ಹೆಣಗಾಡುತ್ತಿರುವವರು ನಾವು !

ಅದ್ವೈತಿಗಳು ಮತ್ತು ನಾವು

ವೇದವನ್ನು ಮೂರು ವಿಭಾಗಮಾಡಿ, ಅದರಲ್ಲಿ ಬ್ರಹ್ಮಕಾಂಡ ಮಾತ್ರ ತತ್ತ್ವಾವೇದಕವೆನ್ನುವ ಅದ್ವೈತಿಗಳಲ್ಲಾದರೂ ವೇದಾಧ್ಯಯನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಲಾಗುವುದು. ಅದೇ ನಾವು ವೇದದ ಅಕ್ಷರ ಅಕ್ಷರವೂ ಭಗವಂತನ ಮಹಿಮೆಯನ್ನು ಕೊಂಡಾಡುತ್ತಿದ್ದು , ವೇದದ ಪ್ರತಿಯೊಂದು ಭಾಗವೂ ಪರಮಪ್ರಮಾಣ ಎಂದು ಸಾರುವವರು. ಆದರೆ ನಮ್ಮಲ್ಲೇ ವೇದಾಧ್ಯಯನಕ್ಕೆ ಅಷ್ಟು ಪ್ರಾಶಸ್ತ್ಯ ನೀಡಲಾಗುತ್ತಿಲ್ಲ. ಇದು ವಿಷಾದನೀಯ.

ತಪ್ಪು ಹಾರದ್ದಲ್ಲ

ಹಾರವನ್ನು ಹಾವೆಂದು ಭ್ರಮಿಸಿ, ದೂರಕ್ಕೆ ಎಸೆದರೆ ಅದು ನಮ್ಮ ತಪ್ಪೇ ಹೊರತು ಹಾರದ ತಪ್ಪಲ್ಲ.

ಅಂತೆಯೇ ಪುರಾಣಾದಿಗಳು ದೇವರ ಬಗ್ಗೆ, ದೇವತೆಗಳ ಬಗ್ಗೆ, ಋಷಿಗಳ ಬಗ್ಗೆ ದುರ್ಭಾವನೆ ಮೂಡುವಂತೆ ಪ್ರತಿಪಾದಿಸುತ್ತಿರುವಂತೆ ಕಂಡರೆ ಅದು ವಾಚಕರಾದ ನಮ್ಮ ತಪ್ಪೇ ಹೊರತು ಪುರಾಣಾದಿಗಳದ್ದಲ್ಲ.

'ಪ್ರಮಾಣಮಂತಃಕರಣ ಪ್ರವೃತ್ತಯಃ' ?

ದುಷ್ಯಂತ, ಶಂತನು ಮೊದಲಾದ ಮಹಾತ್ಮರು ಕಾರ್ಯಾ ಕಾರ್ಯವಿವೇಚನೆಯಲ್ಲಿ ತಮ್ಮ

ಅಂತಃಕರಣವನ್ನೇ ಒರೆಗಲ್ಲಾಗಿ ಬಳಸಿಕೊಂಡರು. ರಾಗದ್ವೇಷಾದಿ ಕೊಳಕಿನ ಸಂಪರ್ಕವಿಲ್ಲದ ಅವರ ಅಂತಃಕರಣ ನಿರ್ಮಲವಾದ ನಿರ್ಣಾಯಕವಾದುದರಿಂದ ಅದರಿಂದ ನಿರ್ಣೀತವಾಗತಕ್ಕದ್ದೂ ನಿರ್ಮಲವೇ ಆದೀತು. ಆದರೆ ರಾಗದ್ವೇಷಾದಿ ಕೊಳಕಿಂದ ತುಂಬಿತುಳುಕುತ್ತಿರುವ ನಮ್ಮ ಅಂತಃಕರಣವನ್ನು ನಿರ್ಣಾಯಕವಾಗಿ ಬಳಸಿಕೊಂಡರೆ, ಅದರಿಂದ ಎಂತಹ ನಿರ್ಣಯ ದೊರಕೀತು !

೧೦. ಸಮಾಜದ ಓರೆಕೋರೆಗಳು

ಬಿಸಿಲಿಗೆ ಬೆಂದ ಹೊಯ್ಗೆ

ಸೂರ್ಯನ ಬಿಸಿಲನ್ನಾದರೂ ನಾವು ಸಹಿಸಿಕೊಳ್ಳುವೆವು. ಆದರೆ ಆ ಬಿಸಿಲಿನ ಬೇಗೆಗೆ ಬೆಂದ ಹೊಯ್ಗೆಯ ಮೇಲೆ ಮಾತ್ರ ಒಂದು ಕ್ಷಣಕಾಲವೂ ನಿಲ್ಲಲಾರೆವು.

ಪಾಶ್ಚಾತ್ಯರಿಂದಾರೂ ನಮ್ಮ ಸಂಸ್ಕೃತಿಗೆ ಅಷ್ಟೊಂದು ಅಪಾಯವಿಲ್ಲ. ಅಂತಹ ಪಾಶ್ಚಾತ್ಯರಿಂದ ಪ್ರಭಾವಿತರಾದ ನಮ್ಮವರಿಂದಲೇ ನಮ್ಮ ಸಂಸ್ಕೃತಿಗೆ ಹೆಚ್ಚು ಧಕ್ಕೆ

ಪಶ್ಚಿಮಕ್ಕೆ ತಿರುಗಿದ ಮುಖ

ಕನಕದಾಸ ಪೂರ್ವ ಕಡೆಗಿದ್ದ ಉಡುಪಿ ಶ್ರೀಕೃಷ್ಣನ ಮುಖವನ್ನು ಪಶ್ಚಿಮ ದಿಕ್ಕಿಗೆ ತಿರುಗಿಸಿದನೆಂದು ಕಥೆಯೊಂದು ಪ್ರಚಲಿತವಾಗಿದೆ.

ಈಗಲೂ ಇಂತಹದ್ದೊಂದು ಪವಾಡ ನಡೆಯಬೇಕಾಗಿದೆ. ಪೂರ್ವದ ಮುಖವನ್ನು ಪಶ್ಚಿಮಕ್ಕೆ ತಿರುಗಿಸುವುದಲ್ಲ. ಪಶ್ಚಿಮಕ್ಕೆ ತಿರುಗಿರುವ ಮುಖವನ್ನು ಪೂರ್ವಕ್ಕೆ ತಿರುಗಿಸಬೇಕಾಗಿದೆ. ನಮ್ಮ ಸಮಾಜದ ಮುಖ ಈಗ ಪಶ್ಚಿಮಕ್ಕೆ ತಿರುಗಿದೆ. ಭಾಷೆ, ಸಂಸ್ಕೃತಿ, ವೇಷಭೂಷಣಗಳಲ್ಲೆಲ್ಲ ಪಾಶ್ಚಿಮಾತ್ಯರನ್ನು ಅನುಕರಿಸುತ್ತಿದೆ. ಹೀಗೆ ವಾಲುತ್ತಿರುವ ಸಮಾಜದ ಮುಖವನ್ನು ಪೂರ್ವಕ್ಕೆ, ನಮ್ಮ ದೇಶದ ಕಡೆಗೆಯೇ ತಿರುಗುವಂತೆ ಮಾಡಬೇಕಾಗಿದೆ. ಅಂದು ಒಬ್ಬ ಕೃಷ್ಣನ ಮುಖವನ್ನು ತಿರುಗಿಸಲು ಒಬ್ಬ ಕನಕನೇ ಸಮರ್ಥನಾದ. ಆದರೆ ಇಂದು ಇಡೀ ಸಮಾಜವೇ ಆ ಕಡೆ ವಾಲುತ್ತಿದ್ದು ಅದನ್ನು ಪುನಃ ಈ ಕಡೆಗೆ ತಿರುಗಿಸಬೇಕೆಂದರೆ ಒಬ್ಬ ಕನಕ ಸಾಲದು. ಸಂಸ್ಕೃತ್ಯಭಿಮಾನಿಗಳೆಲ್ಲ ಸೇರಿ ನಡೆಸಬೇಕಾದ ಪವಾಡವಿದು.

ಗೋವಿನ ಸ್ಥಾನ ಮಾನ ನಾಯಿಗೆ !

ಹಿಂದೆ ನಮ್ಮಲ್ಲಿ ಗೋವಿಗೆ ಬಹಳ ಪ್ರಾಶಸ್ತ್ಯವನ್ನು ನೀಡಲಾಗುತ್ತಿತ್ತು. ಮನೆಗೆ ಭೂಷಣ ಎಂದು ಭಾವಿಸಲಾಗುತ್ತಿತ್ತು. ಗೋಸೇವೆ ಮನುಷ್ಯನ ಕರ್ತವ್ಯಗಳಲ್ಲೊಂದೆಂದು ಪರಿಗಣಿಸಲಾಗುತ್ತಿತ್ತು. ಗೋವಿನ ಪಾಲನೆ-ಪೋಷಣೆ ನಡೆಸಿದರೆ ಬದುಕು ಸಾರ್ಥಕವೆಂದು ತಿಳಿಯಲಾಗುತ್ತಿತ್ತು.

ಆದರೆ ಈಗ ಗೋವಿನ ಸ್ಥಾನಮಾನಗಳನ್ನು ನಾಯಿಗೆ ನೀಡಲಾಗುತ್ತಿದೆ. ಇಂದಿನವರ ದೃಷ್ಟಿಯಲ್ಲಿ ನಾಯಿ ಮನೆಗೆ ಭೂಷಣ. ಅದು ಶ್ರೀಮಂತಿಕೆಯ ಸಂಕೇತ. ನಾಯಿಯಿಲ್ಲದಿದ್ದರೆ ಅದು ಸ್ವಂತ ಮನೆ ಅಲ್ಲ ಅನ್ನುವಷ್ಟು ನಾಯಿಗೆ ಪ್ರಾಶಸ್ತ್ಯ. ಎಲ್ಲಿಗೇ ಹೋಗುವಾಗ ಬರುವಾಗಲೂ ನಾಯಿ ಪಕ್ಕದಲ್ಲೇ ಇರಬೇಕು. ಅದನ್ನು ತಬ್ಬಿಕೊಂಡೇ ಇರಬೇಕು. ನಾಯಿಯ ಲಾಲನೆ - ಪೋಷಣೆ ಮಾಡುವುದೆಂದರೆ ಎಲ್ಲಿಲ್ಲದ ಆಸಕ್ತಿ, ಉತ್ಸಾಹ. ಬೆಳಿಗ್ಗೆ ಎದ್ದಾಕ್ಷಣ ಅದನ್ನು ಬಹಿರ್ದೇಶಕ್ಕೆ ಕರೆದೊಯ್ಯುವಲ್ಲಿಂದ ಅದರ ಸೇವೆ ಪ್ರಾರಂಭ. ಅದಕ್ಕಾಗಿಯೇ ಒಂದು ಗೂಡು, ಒಂದು ತಟ್ಟೆ, ಹಾಸಿಗೆ ಇತ್ಯಾದಿ.

ಹಿಂದೆ ಮನೆಗಳೆದುರು ಹಾಕಲಾಗುತ್ತಿದ್ದ 'ಸ್ವಾಗತ', 'ಸುಸ್ವಾಗತ' ಇತ್ಯಾದಿ ಬೋರ್ಡುಗಳ

ಸ್ಥಾನದಲ್ಲಿ ಈಗ ರಾರಾಜಿಸುತ್ತಿರುವ ಬೋರ್ಡುಗಳು ನಾಯಿಗಳ ಉಲ್ಲೇಖದಿಂದ ಕೂಡಿದವು – ನಾಯಿಗಳಿವೆ ಎಚ್ಚರಿಗೆ! ಎಂಬುದಾಗಿ.

ನಮ್ಮ ಸಮಾಜ ಹಿಂದಿನ ಸಂಸ್ಕೃತಿಯಿಂದ ಎಷ್ಟು ದೂರ ಸರಿದಿದೆ ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

ಅಕ್ಷರಾಭ್ಯಾಸದ ಕ್ರಮಾನುಸರಣೆ

ಅಕ್ಷರಾಭ್ಯಾಸವನ್ನು ಪ್ರಾರಂಭಿಸುವ ಬಾಲ್ಯದಲ್ಲಿ ದೊಡ್ಡ ದೊಡ್ಡ ಅಕ್ಷರಗಳನ್ನು ತಿದ್ದಿ ಬರೆದು, ಕ್ರಮೇಣ ಅವನ್ನು ಚಿಕ್ಕದಾಗಿ ಬರೆಯಲು ತೊಡಗುವೆವು. ಆದರೆ ಧರ್ಮಾನುಷ್ಠಾನದಲ್ಲಿ ಹೀಗಾಗಬಾರದು. ಕಿರಿಯ ಪ್ರಾಯದಲ್ಲಿರುವ ಧರ್ಮಾಷ್ಠಾನದ ಪ್ರಮಾಣವನ್ನು ಕ್ರಮೇಣ ಹಿಗ್ಗಿಸಿಕೊಳ್ಳುತ್ತ ಹೋಗಬೇಕು. ಹೊರತು ಕುಗ್ಗಿಸಬಾರದು.

ಆದರೆ ಈಗ ಮಾತ್ರ ಹಾಗಾಗುತ್ತಿಲ್ಲ. ಅಕ್ಷರಾಭ್ಯಾಸದಂತೆ ಕ್ರಮೇಣ ಕಿರಿದಾಗುತ್ತ ಬರುತ್ತದೆ.

'ರೋಗೇಣಾಂತೇ ತನುತ್ಯಜಾಮ್'

ಹಿಂದಿನ ರಾಜರುಗಳಿಗೂ ಇಂದಿನ ರಾಜಕಾರಣಿಗಳಿಗೂ ಇಷ್ಟು ವ್ಯತ್ಯಾಸ – ಹಿಂದಿನ ರಾಜರು ತಮಗೆ ವಯಸ್ಸಾದ ಮೇಲೆ ರಾಜ್ಯವನ್ನು ತಮ್ಮ ಮಕ್ಕಳಿಗೆ ಬಿಟ್ಟುಕೊಟ್ಟು ಕಾಡಿಗೆ ತೆರಳಿ, ಅಲ್ಲಿ 'ಯೋಗೇನಾಂತೇ ತನುತ್ಯಜಾಮ್' ಎಂದಿರುವಂತೆ ಯೋಗದ ಮೂಲಕ ದೇಹವನ್ನು ತ್ಯಜಿಸುತ್ತಿದ್ದರು. ಈಗಿನ ರಾಜಕಾರಣಿಗಳಾದರೂ ಕೊನೆಯವರೆಗೂ ತಮ್ಮ ಸ್ಥಾನವನ್ನು ಬಿಟ್ಟುಕೊಡಲು ಮನಸ್ಸಿಲ್ಲದೆ, ಕೊನೆಗೆ 'ರೋಗೇಣಾಂತೇ ತನುತ್ಯಜಾಮ್'– ಯಾವುದಾದರೂ ರೋಗಕ್ಕೆ ಬಲಿಯಾಗಿ ದೇಹ ಬಿಡುವರು.

ಹಾಳಾದ ಗಡಿಯಾರ

ವಿದ್ಯಾರ್ಥಿಗಳು ಪ್ರತಿನಿತ್ಯ ಓದುತ್ತಿರಬೇಕು. ಇದು ಬಿಟ್ಟು, ಪರೀಕ್ಷೆ ಹತ್ತಿರ ಬಂತೆಂದರೆ ಆ ಅವಧಿಯಲ್ಲಿ ಮಾತ್ರ – ವರ್ಷಕ್ಕೆ ಒಂದೆರಡು ಬಾರಿ ಮಾತ್ರ ಓದುವುದು. ಅದೇನು ಮಹಾ ? ಹಾಳಾಗಿ ನಿಂತು ಹೋದ ಗಡಿಯಾರವೂ ಕೂಡಾ ದಿನಕ್ಕೆ ಎರಡು ಬಾರಿ ಸರಿಯಾದ ವೇಳೆಯನ್ನು ತೋರಿಸುವುದಿಲ್ಲವೇ ?

ಆಧುನಿಕ ಶಂಡಾಮರ್ಕರ ಪಾಠಶಾಲೆಗಳು

ಪ್ರಹ್ಲಾದನ ಅಪ್ಪ ಹಿರಣ್ಯಕಶಿಪು ಪಾಠ್ಯ-ವಿಷಯ (Syllabus)ದಿಂದ ಧರ್ಮ ಮತ್ತು ಮೋಕ್ಷ ಪುರುಷಾರ್ಥ ವಿಚಾರಗಳನ್ನು ತೆಗೆದುಹಾಕಿ ಬರೇ ಅರ್ಥ ಮತ್ತು ಕಾಮ ಪುರುಷಾರ್ಥಗಳ ಕುರಿತಷ್ಟೇ ಬೋಧನೆ ನೀಡಬೇಕೆಂದು ಆದೇಶ ನೀಡಿದ್ದ. ಅದರಂತೆ ನಡೆಯುತ್ತಿದ್ದ ಶಂಡಾಮರ್ಕರ ಪಾಠ ಶಾಲೆಗೆ ವಿರುದ್ಧವಾಗಿ ಪ್ರಹ್ಲಾದ ತಾನೊಂದು ಪಾಠಶಾಲೆಯನ್ನು ತೆರೆದು ಅದರಲ್ಲಿ ಧರ್ಮ ಮತ್ತು ಮೋಕ್ಷ ಪುರುಷಾರ್ಥಗಳ ಕುರಿತೇ ಶಿಕ್ಷಣ ನೀಡಿದೆ.

ಇಂದು ಪಾಶ್ಚಾತ್ಯ ಸಂಸ್ಕೃತಿಗೆ ಪೋಷಣೆ ನೀಡುತ್ತ ಅಲ್ಲಲ್ಲಿ ತಲೆ ಎತ್ತಿರುವ ಕಾನ್‌ವೆಂಟ್‌ಗಳೂ ಒಂದು ರೀತಿಯಲ್ಲಿ ಶಂಡಾಮರ್ಕರ ಪಾಠಶಾಲೆಗಳೇ. ಇವುಗಳಲ್ಲೂ ನಮ್ಮ ಮಕ್ಕಳಿಗೆ ಆಚಾರ ವಿಚಾರದ ವಾಸನೆ ಸುಳಿಯದಂತೆ ಕ್ರಮ ಕೈಗೊಳ್ಳಲಾಗುವುದು, ಹಿಂದೂ ಸಂಸ್ಕೃತಿಯಲ್ಲಿ ಶ್ರದ್ಧೆ ಕುಸಿಯುವಂತೆ ಯತ್ನಿಸಲಾಗುವುದು.

ಇಂತಹ ಪಾಠಶಾಲೆಗಳಿಂದ ನಮ್ಮ ಮಕ್ಕಳನ್ನು ಪಾರು ಮಾಡಲು ಪ್ರಹ್ಲಾದರೇ ಸಮರ್ಥರು. ಅವರು ಶ್ರೀರಾಘವೇಂದ್ರ ಗುರುಗಳ ರೂಪದಲ್ಲಿ ಅಲ್ಲಲ್ಲಿ ಇರುವ ಶ್ರೀರಾಘವೇಂದ್ರ ಸ್ವಾಮಿ ಮಠಗಳಲ್ಲಿ ಪಾಠಶಾಲೆಗಳು ತೆರೆಯಲ್ಪಟ್ಟು, ಅವುಗಳಲ್ಲಿ ನಮ್ಮ ಆಚಾರ ವಿಚಾರಗಳ ಕುರಿತು ಶಿಕ್ಷಣ ನೀಡುವಂತಾಗಬೇಕು. ಆಧುನಿಕ ಶಂಡಾಮರ್ಕರ ಪಾಠಶಾಲೆಗಳಿಗೆ ವಿರುದ್ಧವಾದ ಆ ಪಾಠಶಾಲೆಗಳು ಆಧುನಿಕ ಪ್ರಹ್ಲಾದ ಪಾಠ ಶಾಲೆಗಳಾಗಿರಬೇಕು.

ಶ್ವೇತಕೇತುವನ್ನು ಜ್ಞಾಪಿಸಿಕೊಡುವವರು

ಶ್ವೇತಕೇತು ಹನ್ನೆರಡು ವರ್ಷಗಳ ಕಾಲ ವಿದ್ಯಾಭ್ಯಾಸ ನಡೆಸಿದನಾದರೂ ಆ ವಿದ್ಯೆ ಆತನಲ್ಲಿ 'ವಿದ್ಯಾ ದದಾತಿ ವಿನಯಂ' ಎಂದಿರುವಂತೆ ವಿನಯವನ್ನು ಸಂಪಾದಿಸಿಕೊಟ್ಟಿರಲಿಲ್ಲ. ಇದಕ್ಕೆ ಬದಲಾಗಿ ತಾನು ದೊಡ್ಡ ವಿದ್ವಾಂಸನಾಗಿದ್ದೇನೆಂದು ಸ್ತಬ್ಧನಾಗಿ, ಅಹಂಕಾರಿಯಾಗಿ ಅವನು ಗುರುಕುಲದಿಂದ ಹಿಂತಿರುಗುವನು ಅಷ್ಟು ಅಹಂಕಾರ ಪಡುವುದಕ್ಕೆ ಬೇಕಾಗುವಷ್ಟು ಜ್ಞಾನವನ್ನಾದರೂ ಸಂಪಾದಿಸಿ ಕೊಂಡಿದ್ದನೇ? ಅದೂ ಇಲ್ಲ. ಅವನ ತಂದೆ ಉದ್ದಾಲಕರು 'ಯೇನಾಶ್ರುತಂ ಶ್ರುತಂ ಭವತಿ....' ಇತ್ಯಾದಿಯಾಗಿ ಯಾವೊಂದು ತತ್ತ್ವದ ಜ್ಞಾನದಿಂದ ಉಳಿದೆಲ್ಲವುಗಳ ಜ್ಞಾನವೂ ಬಂದಂತಾಗುವುದೋ ಅಂತಹ ತತ್ತ್ವವನ್ನು ತಿಳಿದುಕೊಂಡಿದ್ದಿಯಾ ? ಎಂದು ಕೇಳಿದ ಪ್ರಶ್ನೆಗೆ ಉತ್ತರಿಸುವುದು ಬಿಟ್ಟು, ಪ್ರಶ್ನೆಯನ್ನು ಅರ್ಥಮಾಡಿಕೊಳ್ಳುವುದಕ್ಕೇ ಅಸಮರ್ಥನಾಗುವನು. ಆದ್ದರಿಂದಲೇ 'ಅಂತಹ ತತ್ತ್ವವಾದರೂ ಯಾವುದು ?' ಎಂದಾದರೂ ಕೇಳುವ ಬದಲು, 'ಕಥಂ ಸ ಆದೇಶೋ ಭವತಿ ?' 'ನಿನ್ನ ಆ ಹೇಳಿಕೆ ಹೇಗೆ ಕೂಡುತ್ತೇ ?' ಎಂಬುದಾಗಿ ಪ್ರಶ್ನೆಯ ಮೇಲೆಯೇ ಸಂದೇಹಿಸುವನು.

ಈಗಿನ ಶಾಲಾ ಕಾಲೇಜ್‌ಗಳ ವಿದ್ಯಾರ್ಥಿಗಳೂ ಶ್ವೇತಕೇತುವನ್ನು ಜ್ಞಾಪಿಸಿಕೊಡುತ್ತಾರೆ. ಸಾಮಾನ್ಯವಾಗಿ ಅವರ ಜ್ಞಾನದ ಮಟ್ಟ ಅತಿ ಕೆಳಗಿನದಾಗಿರುತ್ತದೆ. ಅಲ್ಲದೆ ವಿದ್ಯಾಭ್ಯಾಸ ಅವರಲ್ಲಿ ವಿನಯವನ್ನಾಗಲೀ ಧರ್ಮ ನೀತಿಗಳನ್ನಾಗಲೀ ಇವುಗಳಿಗೆ ಕೇಂದ್ರಬಿಂದುವಿನಂತಿರುವ ಭಗವತ್ಪ್ರಜ್ಞೆ ಯನ್ನಾಗಲೀ ಹುಟ್ಟಿಸದೇ ಮತ್ತೂ ಮತ್ತೂ ಅಹಂಕಾರ, ಗರ್ವ, ದುರ್ನಡತೆಗಳನ್ನೇ ಹೆಚ್ಚಾಗಿಸುತ್ತಿದೆ!

ಗೊರಟು ಸಿಪ್ಪೆಗಳನ್ನಷ್ಟೇ ಮೇಯಿಸುವಿಕೆ

ಮಾವಿನ ಹಣ್ಣಿನ ಗೊರಟೆ, ಸಿಪ್ಪೆಗಳನ್ನು ಬಿಟ್ಟು ಬರೇ ಒಳಗಿನ ಸಾರವನ್ನು ತಿಂದರೂ ಇಡೀ ಹಣ್ಣನ್ನು ತಿಂದೆವೆಂದು ವ್ಯವಹಾರವಿದೆ. ಅಂತೆಯೇ ಸಾರಭೂತನಾದ ಭಗವಂತನನ್ನು ತಿಳಿದ ಮಾತ್ರಕ್ಕೆ ಎಲ್ಲನ್ನೂ ತಿಳಿದಂತಾಗುತ್ತದೆ.

ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಮಕ್ಕಳಿಗೆ ಇಂತಹ ಸಾರವನ್ನು ತಿನ್ನಿಸುವುದನ್ನು ಬಿಟ್ಟು ಬರೇ ಗೊರಟು ಸಿಪ್ಪೆಗಳನ್ನಷ್ಟೇ ಮೇಯಿಸಲಾಗುವುದು.

ಚಳವಳಿಯ ಉದ್ದೇಶ

ವಿದ್ಯಾರ್ಥಿ ಚಳವಳಿಗಾರರಲ್ಲೆಲ್ಲ ಮೊಟ್ಟ ಮೊದಲಿನವನೆಂದರೆ ಪ್ರಹ್ಲಾದ. ಆದರೆ ಅವನು ಶಿಕ್ಷಣ-ವಿಷಯದಲ್ಲಿ ಧರ್ಮ ಹಾಗೂ ಮೋಕ್ಷ ಪುರುಷಾರ್ಥಗಳಿಗೆ ಸಂಬಂಧಿಸಿದ ವಿಚಾರಗಳನ್ನೂ ಸೇರಿಸಬೇಕೆಂಬುದರ ಬಗ್ಗೆ ಚಳವಳಿ ಹೂಡಿದನೇ ಹೊರತು ಈಗಿನ ವಿದ್ಯಾರ್ಥಿಗಳಂತೆ 'ಗ್ರೇಸ್ ಮಾರ್ಕ್ ಕೊಡಬೇಕು; ಪರೀಕ್ಷೆ ಕೂಡದೇನೇ ಪಾಸು ಮಾಡಬೇಕು' ಇತ್ಯಾದಿ ರೀತಿಯಾಗಿ ಅನೈತಿಕ ಬೇಡಿಕೆಗಳಿಗಾಗಿ ಚಳವಳಿಯನ್ನು ಕೈಗೊಂಡಿಲ್ಲ.

ಕೃಷ್ಣಾರ್ಪಣವೇ ಏಕೆ?

ಭಗವಂತನ ರೂಪಗಳಲ್ಲಿ ಪರಸ್ಪರವಾಗಿ ಸ್ವಲ್ಪವೂ ವ್ಯತ್ಯಾಸವಿಲ್ಲ. ಹೀಗಿದ್ದರೂ ನಮ್ಮ ಸತ್ಕರ್ಮಾದಿಗಳನ್ನು 'ಕೃಷ್ಣಾರ್ಪಣಮಸ್ತು' ಎಂದು ಭಗವಂತನಿಗೆ ಸಮರ್ಪಿಸುವ ಪದ್ಧತಿಯಷ್ಟೇ ನಮ್ಮಲ್ಲಿದೆ. ಹೊರತು 'ರಾಮಾರ್ಪಣಮಸ್ತು', 'ವಾಮನಾರ್ಪಣಮಸ್ತು' ಅಂತೆಲ್ಲ ಭಗವಂತನ ಇತರ ರೂಪಗಳನ್ನು ಉಲ್ಲೇಖಿಸಿ ಸಮರ್ಪಿಸುವ ಪರಿಪಾಠ ಇಲ್ಲ , ಯಾಕೆ?

ಬಹುಶಃ ಭಗವಂತ ಕೃಷ್ಣಾವತಾರದಲ್ಲಿ 'ಯತ್ಕರೋಷಿ... ತತ್ಕುರುಷ್ವ ಮದರ್ಪಣಮ್' ಎಂಬುದಾಗಿ ತನಗೆ ಅರ್ಪಿಸಲು ಸಂದೇಶಿಸಿರುವ ಪ್ರಯುಕ್ತ , ಆ ರೂಪವನ್ನೇ ಸ್ಮರಿಸಿಕೊಂಡು ಅರ್ಪಿಸುವ ಪದ್ಧತಿ ನಮ್ಮಲ್ಲಿ ಬಂದಿದ್ದಿರಬೇಕು.

(ವಿಶ್ವೇಶವಾಣಿ, ಸಂಗ್ರಾಹಕರು– ಸಗ್ರಿ ರಾಘವೇಂದ್ರ ಉಪಾಧ್ಯಾಯ, ೧೯೮೪)

●

೩-೩೩

ಪೇಜಾವರ ಶ್ರೀಗಳ ನುಡಿಮುತ್ತುಗಳು

ಭಗವಂತನ ಆರಾಧನೆ

- ಭಗವಂತ ಬಿಂಬ ನಾವು ಅವನ ಪ್ರತಿಬಿಂಬಗಳು. ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬ ಚೆನ್ನಾಗಿ ಕಾಣಬೇಕಾದರೆ ಕನ್ನಡಿಯನ್ನು ಅಲಂಕರಿಸುವುದಲ್ಲ. ನಮ್ಮನ್ನು ಅಲಂಕರಿಸಿಕೊಳ್ಳಬೇಕು. ಅದರಂತೆ ಭಗವಂತನ ಪ್ರತಿಬಿಂಬಗಳಾಗಿರುವ ನಮಗೆ ಜೀವನದಲ್ಲಿ ಸುಖ ಸಮೃದ್ಧಿಲಭಿಸಬೇಕಾದರೆ ಬಿಂಬದಂತಿರುವ ದೇವರ ಆರಾಧನೆ, ಶೋಡಷೋಪಚಾರ ಪೂಜೆ ನಡೆಯಬೇಕು. ಅದರಿಂದ ಮಾನವ ಸಮಾಜದ ಕಲ್ಯಾಣವಾಗುವುದು.
- ಒಂದು ಊರಿನ ದೇವಾಲಯ ಸುಸ್ಥಿತಿಯಲ್ಲಿದ್ದರೆ ಆ ಊರಿನ ಜನಜೀವನದ ಸ್ಥಿತಿ ಹೇಗಿರುತ್ತದೆಂಬ ಕಲ್ಪನೆ ಬರುತ್ತದೆ. ನಮ್ಮ 'ಬಿಂಬ'ವಾದ ದೇಗುಲಗಳನ್ನು ಸರಿಯಾಗಿಟ್ಟುಕೊಳ್ಳುವುದರಿಂದ ನಾವು ಸಮಾಜದಲ್ಲೂ ಸರಿಯಾಗಿ ನಡೆದುಕೊಳ್ಳಲು ಸಾಧ್ಯ. ಸಮಾಜದ ಎಲ್ಲ ಜನರ ದಾನದಿಂದ ಧಾರ್ಮಿಕ ಸಂಸ್ಥೆಗಳು ನವೀಕರಣವಾಗಬೇಕು. ಭಾರತದಲ್ಲಿ ಎಷ್ಟು ರೂಪಾಯಿ ಇದ್ದರೂ ಅದು ಅಮೇರಿಕದಲ್ಲಿ ಚಲಾವಣೆಯಾಗದು ಎಂದು ಡಾಲರಿಗೆ ಪರಿವರ್ತಿಸಿಕೊಂಡು ಹೋದಂತೆ ಇಹಲೋಕದಲ್ಲಿ ಎಷ್ಟೇ ಆಸ್ತಿ ಪಾಸ್ತಿ ಇದ್ದರೂ ಪರಲೋಕಕ್ಕೆ ಹೋಗುವಾಗ ಅವು ಚಲಾವಣೆಗೆ ಬರುವುದಿಲ್ಲ. ಹಾಗಾಗಿ ಅಲ್ಲಿನ ಅನುಕೂಲತೆಗಾಗಿ ಅವನ್ನು ಪುಣ್ಯರೂಪದಲ್ಲಿ ಪರಿವರ್ತಿಸಿಕೊಂಡು ಹೋಗಬೇಕು. ಅದಕ್ಕಾಗಿ ದೇವಾಲಯದ ಜೀರ್ಣೋದ್ಧಾರಕ್ಕೆ ಊರವರೆಲ್ಲ ಮುಂದೆ ಬಂದು ಸಹಕರಿಸಬೇಕು.
- ನಮ್ಮ ಭಾವಚಿತ್ರ ಅಥವಾ ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬವು ಚೆನ್ನಾಗಿ ಕಾಣಲು ಕನ್ನಡಿಯನ್ನು ಎಷ್ಟು ಅಲಂಕರಿಸಿದರೂ ಆಗದು ಬಿಂಬವಾದ ನಮ್ಮ ಶರೀರವನ್ನು, ನಮ್ಮ ಮುಖವನ್ನು ವೇಷ ಭೂಷಣಗಳಿಂದ ಪರಿಷ್ಕರಿಸಿದರೆ ನಮ್ಮ ಪ್ರತಿಬಿಂಬ ಅಥವಾ ಭಾವಚಿತ್ರ ಸುಂದರವಾಗಿ ಕಾಣಿಸುವುದು. ಅದರಂತೆ ನಮ್ಮನ್ನು ಅಲಂಕರಿಸಲು ನಮ್ಮ ಬಿಂಬರೂಪಿಯಾದ ಭಗವಂತನನ್ನು ಅನಂತ ಗುಣಗಳಿಂದ ಅಲಂಕರಿಸಿ ಪೂಜಿಸಿದಷ್ಟು ನಮ್ಮ ದಿವ್ಯ ವ್ಯಕ್ತಿತ್ವವೂ ಪ್ರಕಟವಾಗುವುದು.
- ಸೈನಿಕರಿಲ್ಲದೆ ಸೇನಾನಿ ಏನೂ ಸಾಧಿಸಲಾರ. ಅಂತೆಯೇ ಸಮಾಜದ ಬೆಂಬಲವಿಲ್ಲದೆ ಮಠಾಧಿಪತಿಗಳು ಏನೂ ಮಾಡಲಸಾಧ್ಯ. ಕಾಡಿಗೆ ಹುಲಿ ಸಿಂಹಗಳ ಅಗತ್ಯತೆ ಇರುವಂತೆ ಹುಲಿ

ಸಿಂಹಗಳೂ ಕಾಡಿಲ್ಲದೆ ವಾಸಮಾಡಲಾರವು. ಈ ರೀತಿ ಮಠ ಮತ್ತು ಸಮಾಜ ಸಂಯುಕ್ತ ದೃಷ್ಟಿಯಲ್ಲಿ ಕೆಲಸ ಮಾಡಬೇಕು. ಭಗವಂತನಲ್ಲಿ ಭಕ್ತಿ ಜೊತೆಗೆ ದೇಶ ಭಕ್ತಿಯೂ ಬೇಕು. ದೇವರು ಗುಡಿ ಮಂದಿರಗಳಲ್ಲಿ ಮಾತ್ರವಲ್ಲ ಎಲ್ಲ ಜನರ ಹೃದಯ ಮಂದಿರಗಳಲ್ಲಿರುವರು. ಮಾನವರೊಳಗಿನ ಭಗವಂತನನ್ನು ಪೂಜಿಸದಿದ್ದರೆ ಆ ಪೂಜೆ ನಿಷ್ಫಲವಾಗುತ್ತದೆ. ಮಾನವ ಹಿತಕಾರ್ಯಗಳನ್ನು ಮಾಡಿದರೆ ಪೂಜೆ ಪರಿಪೂರ್ಣವಾಗುತ್ತದೆ.

- ದೇವಸ್ಥಾನವು ಊರಿನವರ ಮನೆಯಾಗಿದೆ. ಭಕ್ತಿಯನ್ನು ದೇವಸ್ಥಾನದಲ್ಲಿ ನಡೆಯುವ ಪೂಜೆ ಉತ್ಸವಗಳ ವೈಭವದಿಂದ ಮಾತ್ರ ತೋರಿಸಿದರೆ ಸಾಲದು. ತಮ್ಮನ್ನು ಕಾರ್ಯದ ಹಿಂದೆ ಮೈಗೂಡಿಸಿಕೊಂಡು ಅಂತರಂಗ ಶುದ್ಧಿಯಿಂದ ಮಾಡಿದ ಕಾರ್ಯವು ಮಾತ್ರ ನಿಜವಾದ ಭಕ್ತಿಯನ್ನು ತೋರ್ಪಡಿಸುತ್ತದೆ.
- ನಾವು ಪ್ರತಿದಿನವೂ ಮೈ ಕೈ ತೊಳೆಯುತ್ತೇವೆ. ಬಟ್ಟೆಗಳನ್ನು ಒಗೆಯುತ್ತೇವೆ ಇಲ್ಲವಾದರೆ ಹೊಲಸು ನಾರುವುದೆಂಬ ಭಯ. ಆದರೆ ಅವಕ್ಕಿಂತಲೂ ಮಹತ್ವದ್ದಾದ ಹೃದಯ ಕಲ್ಮಶ ನಿವಾರಣೆಗೆ ಗಮನ ಹರಿಸುತ್ತಿಲ್ಲ. ಅದನ್ನು ಸುಲಭವಾಗಿ ನೀರು, ಸಾಬೂನುಗಳಿಂದ ತೊಳೆಯಲು ಸಾಧ್ಯವಿಲ್ಲ. ನಿರಂತರವಾದ ಪರಮಾತ್ಮನ ಪ್ರಾರ್ಥನೆಯಿಂದ ಸ್ವಾರ್ಥಾದಿ ಸಂಕುಚಿತ ಭಾವನೆಗಳು ತೊಲಗಿ ಹೃದಯವು ಪರಿಶುದ್ಧಗೊಳ್ಳುವುದು ಸಾಧ್ಯ. ಹೃದಯ ಸ್ವಚ್ಛವಾಗದ ಹೊರತು ನಿಜವಾದ ಮಾನವ ನೆನಿಸಲಾರನು. ಆದುದರಿಂದ ಪ್ರತಿಯೊಬ್ಬನೂ ಪ್ರತಿದಿನವೂ ಕೆಲಕಾಲ ಪ್ರಾರ್ಥನೆ ಮಾಡುವ ಪರಿಪಾಠ ಇಟ್ಟುಕೊಳ್ಳುವುದು ಅತ್ಯಗತ್ಯ.
- ಜೀವಿಯು ಇಹಪರಗಳಲ್ಲಿ ಸುಖಪ್ರಾಪ್ತಿ ಬಯಸುವಾಗ ಇಹಪರಗಳೆರಡೂ ಸತ್ಯವೆಂದೂ ತಿಳಿಯುತ್ತಿರಬೇಕು. ಇಹವೊಂದೇ ಸತ್ಯವೆಂದೂ ಪರವೊಂದೇ ಸತ್ಯವೆಂದು ಹೇಳುವುದೂ ವಿಹಿತವಲ್ಲ, ಇಹದಲ್ಲಿ ಯಥೋಚಿತ ಕಾರ್ಯಾಚರಣೆ, ದೇವರಲ್ಲಿ ಭಕ್ತಿಗಳಿದ್ದರೆ ಉಭಯ ಸುಖ ಸಿದ್ಧಿಯಾಗಬಲ್ಲುದು.
- ಅಂಗವಿಕಲರಿಗೆ ಕೊಟ್ಟ ದಾನ ದೇವರಿಗೆ ಅರ್ಪಿಸಿದ ಕಾಣಿಕೆ. ದೇವರು ನಮಗೆ ಕೊಟ್ಟುದುದರಲ್ಲಿ ಒಂದಂಶವನ್ನು ದೇವರೇ ಸೃಷ್ಟಿಸಿದ ಅಂಗವಿಕಲರಂಥ ಅಸಹಾಯಕರಿಗೆ ನೆರವು ನೀಡುವುದೇ ನಾವು ದೇವರಿಗೊಪ್ಪಿಸುವ ಪೂಜೆ.
- ಸಮುದ್ರದಲ್ಲಿ ಹಡಗುಗಳಿಗೆ ದಿಕ್ಕನ್ನು ಸೂಚಿಸಲು ಅಲ್ಲಲ್ಲಿ ದೀಪಸ್ತಂಭಗಳು ಇರುವ ಹಾಗೆ ನಮ್ಮ ಹಿಂದೂ ಸಮಾಜಕ್ಕೆ ದೇವಸ್ಥಾನಗಳು ದಿಕ್ಸೂಚಿಗಳು.
- ಸಂಸಾರ ಸಾಗರದಲ್ಲಿ ಅಲೆದಾಡುತ್ತಿರುವ ಜೀವನ ನೌಕೆಗಳಿಗೆ ದಾರಿ ತಪ್ಪದಂತೆ ಎಚ್ಚರಿಕೆ ನೀಡುವ ಪವಿತ್ರಕ್ಷೇತ್ರಗಳು ಲೈಟ್‌ಹೌಸ್ ಇದ್ದಂತೆ ಇರುತ್ತವೆ.
- ಸುಧಾಮನು ನೀಡಿದ ಹಿಡಿ ಅವಲಕ್ಕಿಗೆ ಭಗವಂತನು ಎಂತಹ ಪ್ರತಿಫಲವನ್ನು ನೀಡಿರುವನು. ಆ ಹಿಡಿ ಅವಲಕ್ಕಿಯ ಹಿಂದೆ ಅಂತಹ ಪವಿತ್ರ ಭಾವವಿತ್ತು. ಶುದ್ಧ ಭಾವದಿಂದ ಮಾಡುವ ಅತ್ಯಲ್ಪಕರ್ಮವೂ ಪರಮಶ್ರೇಯಸ್ಸಿಗೆ ಕಾರಣವೆನಿಸುವುದು.
- ಜನರಲ್ಲಿ ಧಾರ್ಮಿಕ, ಶೈಕ್ಷಣಿಕ ಮನೋಭಾವಗಳು ವೃದ್ಧಿಸಿದಷ್ಟೂ ಭದ್ರ ಸಮಾಜ ನಿರ್ಮಾಣಕ್ಕೆ ಬಹಳಷ್ಟು ಸಹಕಾರಿಯಾಗುತ್ತವೆ.

ಕರ್ಮ-ಧರ್ಮ-ಜ್ಞಾನ-ತ್ಯಾಗ

- ರಾಮಾಯಣದ ಆದರ್ಶ ವ್ಯಕ್ತಿಗಳ, ಪುರುಷೋತ್ತಮರ ಆದರ್ಶದಿಂದ ನಮಗೆ ಸರಿಯಾದ

ದಾರಿಯಲ್ಲಿ ನಡೆಯಲು ಬೇಕಾದ ಸ್ಫೂರ್ತಿ, ಶಕ್ತಿ ದೊರಕೀತು.

- ರಾಮಾಯಣ, ಭಾರತಗಳಂಥ ಗ್ರಂಥಗಳನ್ನು ಪೂರ್ವಾಗ್ರಹ ದೂಷಿತರಾಗಿ ನೋಡದೆ ಅವುಗಳಲ್ಲಿ ಇರುವ ಸಮಾಜಕ್ಕೆ ಪೋಷಕವಾದ ಉದಾತ್ತ ವಿಚಾರಗಳನ್ನು, ಅವುಗಳಲ್ಲಿ ಹುದುಗಿರುವ ಸತ್ಯ, ಸತ್ವಗಳನ್ನು ನಿರ್ವಿಕಾರ ಬುದ್ಧಿಯಿಂದ ತಿಳಿದುಕೊಳ್ಳಲು ಪ್ರಯತ್ನಿಸಬೇಕು.
- ಬಾಹ್ಯದ ಆವರಣ, ಆಡಂಬರಗಳನ್ನೆಲ್ಲ ಕಳಚಿ ಅಂತರಂಗ ಸ್ವರೂಪವನ್ನು ಬಾಹುಬಲಿ ಪ್ರತಿಬಿಂಬಿಸಿ ಲೋಕಕ್ಕೆ ಮಾರ್ಗದರ್ಶಕನಾಗಿದ್ದಾನೆ. ನಮ್ಮಲ್ಲಿ ಧರ್ಮಕ್ಕೆ ಭಿನ್ನತೆಗಳಿದ್ದಾಗ್ಯೂ, ತಾತ್ವಿಕ ಘರ್ಷಣೆಗಳು ನಡೆಯುತ್ತಾ ಬಂದಿದ್ದರೂ ಸಮನ್ವಯವಿದೆ. ಒಂದು ಧರ್ಮ ಇನ್ನೊಂದನ್ನು ಶ್ರೀಮಂತಗೊಳಿಸುತ್ತದೆ. ಇದಕ್ಕೆ ಕಾರಣ ಎಲ್ಲಾ ಧರ್ಮಗಳೂ ಜೀವನಕ್ಕೆ ಪ್ರೇರಕವಾದ ಸಚ್ಚಾರಿತ್ರ್ಯದ ಸಂದೇಶದ ಏಕತಾನವನ್ನು ಮಿಡಿಯುತ್ತವೆ. ನೀತಿ, ಸದ್ಗುಣಗಳ ಮೂಲದ್ರವ್ಯಗಳನ್ನು ಬೆಳೆಸುವ ಏಕಮುಖ ಪ್ರಯತ್ನ ಸಾಗಬೇಕು.
- ತಾಯಿಯು ಮಕ್ಕಳಿಗೆ ಕಹಿ ಔಷಧ ನೀಡಲು ಪ್ರಾರಂಭಿಕವಾಗಿ ಸಕ್ಕರೆಯನ್ನು ನೀಡುವಂತೆ ವೇದವೂ ಸ್ವರ್ಗದ ಆಮಿಷವನ್ನು ನಮ್ಮ ಮುಂದೆ ಇಡುವುದುಂಟು. ವೇದದ ಈ ಮಾತೃ ಹೃದಯದ ವಾತ್ಸಲ್ಯ ಭಾವವನ್ನು ನಾವು ಅರ್ಥಮಾಡಿಕೊಳ್ಳಬೇಕು.
- ಮೃತ್ಯುವು ಜೀವವನ್ನು ಹಿಡಿಯಬೇಕೆಂದು ಆತನನ್ನು ನೋಡಿದಾಗ ಆತನು ಬೆದರಿ ವೇದದ ಆಶ್ರಯವನ್ನು ಪಡೆಯುವನು. ಕಳ್ಳರು ತಮ್ಮ ನೆರಳಿಗೆ ಅಂಜುವಂತೆ ಜೀವನದಲ್ಲಿ ಅವ್ಯವಹಾರ ಮಾಡುವ ಕಳ್ಳರು ನೆರಳಿನಂತಿರುವ ಮರಣಕ್ಕೆ ಭಯ ಪಡುವರು. ಜ್ಞಾನಿಗಳಿಗೆ, ಉತ್ತಮ ವ್ಯಕ್ತಿಗಳಿಗೆ ಮರಣವು ಜೀವನ ಯಜ್ಞದ ಅವಭೃಥವೇ ಆಗಿದೆ.
- ಉದ್ಯಾನದಲ್ಲಿ ಹಳೇ ಪುಷ್ಪಗಳು ಉದುರಿ ಹೊಸ ಪುಷ್ಪಗಳನ್ನು ಸ್ವಾಗತಿಸುವಂತೆ ನಮ್ಮ ಜೀವನದಲ್ಲಿಯೂ ಅವಸ್ಥಾಂತರಗಳನ್ನು ನಾವು ಸ್ವಾಗತಿಸಬೇಕು.
- ಹೊಸದಾಗಿ ಮದುವೆಯಾದ ವಧುವಿಗೆ ಏನಾದರೂ ಕಾಹಿಲೆ, ತಲೆನೋವಾದಾಗ ಆಕೆಯ ಪ್ರಿಯತಮನು ಬಹಳ ಚಡಪಡಿಸುವನು. ಆದರೆ ಮದುವೆಯ ಮುಂಚೆ ಅದೇ ವ್ಯಕ್ತಿಗೆ ಯಾವ ಕಾಹಿಲೆ ಬಂದರೂ ಇವನು ಏನೂ ಆತುರನಾಗುವುದಿಲ್ಲ. ತನ್ನ ಮನೆ, ಮಡದಿ ಎಂಬ ಅಭಿಮಾನವೇ ವಿಹ್ವಲತೆಗೆ ಕಾರಣ ಎಂಬುದು ಸ್ಪಷ್ಟ.
- ಮೀನು ನೀರಲ್ಲಿದ್ದರೂ ಅದನ್ನು ಹಕ್ಕಿಯು ತನ್ನ ಉದ್ದನೆಯ ಕೊಕ್ಕಿನಿಂದ ಹಿಡಿಯುವಂತೆ ಮೃತ್ಯುವು ಬಂದಾಗ ಜೀವನು ಇನ್ನೂ ಒಳಗೊಳಗೇ ಸೇರಿಕೊಂಡು ಮೃತ್ಯುವಿನಿಂದ ಪಾರಾದಾನು, ನೀರಿನಲ್ಲಿ ಆಳವಾಗಿರುವ ಮೀನನ್ನು ಹಕ್ಕಿಯು ಏನೂ ಮಾಡಲಾರದು. ವೇದದಲ್ಲಿ ಮೇಲಿಂದ ಮೇಲೆ ಹರಿದಾಡಿದರೆ ಏನೂ ಪ್ರಯೋಜನವಾಗಲಾರದು, ವೇದದ ಒಳಹೊಕ್ಕು ಆಳವಾಗಿ ವಿಮರ್ಶಿಸಿ ಅಂತರಾರ್ಥವನ್ನು ತಿಳಿದರೆ ಮಾತ್ರ ನಾವು ಮೃತ್ಯುವಿನಿಂದ ಪಾರಾಗಿ ಅಮೃತತ್ವದ ಕಡೆಗೆ ಸಾಗಬಲ್ಲೆವು.
- ದಾಸಕೂಟ, ವ್ಯಾಸಕೂಟವೆಂಬ ವಿಂಗಡಣೆಯೇ ಸಲ್ಲದು, ಒಂದು ಕಪ್ಪು ಹಸು, ಮತ್ತೊಂದು ಬಿಳಿ ಹಸುವಾದರೇನಂತೆ? ಎರಡರ ಹಾಲೂ ಒಂದೇ ತಾನೇ? ವ್ಯಾಸ ಸಾಹಿತ್ಯ ಸಂಸ್ಕೃತದಲ್ಲಿದ್ದಿರಬಹುದು ದಾಸ ಸಾಹಿತ್ಯ ಕನ್ನಡದಲ್ಲಿದ್ದಿರಬಹುದು. ಆದರೆ ಎರಡರ ಪ್ರಮೇಯವೂ ಒಂದೇ ಅಲ್ಲವೇ?
- ಕಾಗದದ ನೂರಾರು ಹಾಳೆಗಳಿಗಿಂತಲೂ ರಾಷ್ಟ್ರ ಮುದ್ರೆಯಿರುವ ನೋಟಿಗೆ ಎಷ್ಟು ಬೆಲೆಯಿದೆ? ಭಕ್ತಿಯ ಜೀವಮುದ್ರೆಯಿಂದ ಅಲ್ಪ ಕರ್ಮವೂ ನೂರಾರು ಕರ್ಮಗಳಿಗಿಂತಲೂ ಮಿಗಿಲು.
- ಹಸಿವೆಯಾಗಿದೆಯೆಂದು ಸಿಕ್ಕಿದ್ದನ್ನು ತಿಂದು ದೇಹವನ್ನು ಕೆಡಿಸುವುದಕ್ಕಿಂತ ಉಪವಾಸವೇ ಒಳಿತು. ಜ್ಞಾನವು ಬೇಕೆಂದು ವಿಮರ್ಶಿಸದೆ ಭ್ರಾಂತ ಜ್ಞಾನವನ್ನು ನಡೆಸುವುದಕ್ಕಿಂತ ಅಜ್ಞಾನವೇ ಲೇಸು.
- ಹಿಂದಿನ ಆಚಾರ್ಯಪುರುಷರು ಧರ್ಮ ಮತ್ತು ಸಮಾಜಗಳು ಒಂದಕ್ಕೊಂದು ಪೂರಕವಾಗಿ

ನಡೆಯಲೋಸುಗ ಧರ್ಮಪೀಠಗಳನ್ನು ಸ್ಥಾಪಿಸಿದ್ದಾರೆ. ಸನ್ಯಾಸಿಗಳು ಆಧ್ಯಾತ್ಮಿಕದೊಂದಿಗೆ ಸಮಾಜದ ಕಲ್ಯಾಣ ಹಾಗೂ ಧಾರ್ಮಿಕ ಹಿತರಕ್ಷಣೆ ಮಾಡಬೇಕು. ಧಾರ್ಮಿಕ ಪೀಠಗಳಿಗೆ ಸಮಾಜದಲ್ಲಿ ಧರ್ಮವನ್ನು ಅಭಿವೃದ್ಧಿಗೊಳಿಸುವ ಹೊಣೆಗಾರಿಕೆ ಬೇಕು. ಮಠಾಧಿಪತಿಗಳು ಸಮಾಜ ಮತ್ತು ಧರ್ಮವನ್ನು ಹತ್ತಿರ ತಂದು ದೇಶದ ದುರಂತಗಳನ್ನು ಸರಿಪಡಿಸಬೇಕು, ದೇಶದ ಸಮಸ್ಯೆಗಳ ಮುಂದೆ ನಾವು ಸಾಧಿಸಬೇಕಾದುದು ಬಹಳಷ್ಟಿದೆ. ಧರ್ಮಪೀಠಗಳ ಶಕ್ತಿ ಋಷಿಮುನಿಗಳ ತ್ಯಾಗ ತಪಸ್ಸಿನ ಫಲ, ಸಾಧಿಸಬೇಕಾದ ಕಾರ್ಯದ ಬಗ್ಗೆ ಶಕ್ತಿ ಸಂಚಲನ ಮಾಡೋಣ. ಶಂಕರಾಚಾರ್ಯ, ರಾಮಾನುಜಾಚಾರ್ಯರ ಸಂದೇಶಗಳನ್ನು ಕಾರ್ಯರೂಪಕ್ಕೆ ತರಲು ನಿರಂತರ ಭಗವಂತನ ಚಿಂತನೆ ಮಾಡಬೇಕು. ಪರಮಾತ್ಮನಲ್ಲಿ ಶರಣಾಗತನಾಗಿ ಈ ಜೀವನದಲ್ಲಿ ಉನ್ನತಿ ಪಡೆಯಬೇಕು.

- ದೇವರ ಭಕ್ತಿ ಎಂದರೆ ದಿನದ ಕೆಲವು ಗಂಟೆಗಳು ಮಾತ್ರ ದೇವರನ್ನು ಪೂಜಿಸುವುದಲ್ಲ. ಭಕ್ತಿ ಹಾಗೂ ಧರ್ಮ ದೈನಂದಿನ ವ್ಯವಹಾರದಲ್ಲೂ ಹಾಸುಹೊಕ್ಕಾಗಿರಬೇಕು. ನಿಷ್ಕಲ್ಮಷ ಮನಸ್ಸಿನಿಂದ ದೀನದಲಿತರ ಸೇವೆ ಮಾಡಬೇಕು, ಇಡೀ ಜಗತ್ತು ಭಗವಂತನ ಶರೀರ. ಜನತಾ ಸೇವೆಯೇ ಜನಾರ್ದನ ಸೇವೆ ಎಂಬುದನ್ನು ಸದಾ ಗಮನದಲ್ಲಿಟ್ಟುಕೊಳ್ಳಬೇಕು. ದಲಿತರ ಸೇವೆಯೇ ನಾವು ದೇವರಿಗೆ ಕೊಡುವ ಟ್ಯಾಕ್ಸ್.
- ನಿಸ್ವಾರ್ಥ ಸೇವೆ, ಭಕ್ತಿ, ಪರೋಪಕಾರಗಳಿಂದ ದೇವರನ್ನು ಒಲಿಸಿಕೊಳ್ಳಬಹುದು. ಜನತೆ ತಮ್ಮ ಶಕ್ತಿಯನ್ನು ಮಠಾಧಿಪತಿಗಳಲ್ಲಿ ತುಂಬಿ ಸಮಾಜ ಹಾಗೂ ದೇಶದ ಉನ್ನತಿಗೆ ಶ್ರಮಿಸಬೇಕು. ಮಠಾಧಿಪತಿಗಳು ದಾರಿ ತಪ್ಪಿದ್ದರೆ ಅವರನ್ನು ಪ್ರಶ್ನಿಸುವ ಅಧಿಕಾರ ಸಮಾಜಕ್ಕಿದೆ.
- ಸರೋವರ ಸ್ವಚ್ಛ ಹಾಗೂ ಶುಭ್ರವಾಗಿರಲು ಅದರಲ್ಲಿರುವ ಮೀನುಗಳು ಹೇಗೆ ಕಾರಣವೋ ಅಂತೆಯೇ ಸಮಾಜ ಸ್ವಚ್ಛವಾಗಿರಲು ಮಠಾಧಿಪತಿಗಳು ಕಾರಣ, ನೀರಿಲ್ಲದೆ ಮೀನು ಹೇಗೆ ಬದುಕಲು ಸಾಧ್ಯವಿಲ್ಲವೋ ಹಾಗೆಯೇ ಸಮಾಜವಿಲ್ಲದೆ ಮಠಾಧಿಪತಿಗಳಿರಲು ಸಾಧ್ಯವಿಲ್ಲ. ಸಮಾಜ ಮತ್ತು ಧರ್ಮಪೀಠಗಳು ಪರಸ್ಪರ ಸಹಕಾರದಿಂದ ಧಾರ್ಮಿಕ ಮತ್ತು ರಾಷ್ಟ್ರದ ಸಮಸ್ಯೆಗಳ್ನು ಬಗೆಹರಿಸಬೇಕು.
- ಕಾನೂನು ಶಾಸನಗಳಿಂದ ಸಾಧ್ಯವಾಗದ ದೇಶದ ಹಲವಾರು ಸಮಸ್ಯೆಗಳನ್ನು ಆಂತರಿಕ ಕ್ರಾಂತಿಯಿಂದ ಬಗೆಹರಿಸಲು ಸಾಧ್ಯ. ಎಲ್ಲರ ಹೃದಯ ಮಂದಿರದಲ್ಲೂ ದೇವರಿದ್ದಾನೆ. ಪ್ರಪಂಚದ ಸರ್ವವೂ ಅವನ ಸ್ವತ್ತು. ದೇಹದ ಎಲ್ಲ ಭಾಗಗಳನ್ನು ನಮ್ಮದೆಂದು ನಾವು ಅಭಿಮಾನ ಪಡುವಂತೆ ಸರ್ವವ್ಯಾಪಿ ಪರಮಾತ್ಮನಿರುವ ಸಮಸ್ತವನ್ನು ಪ್ರೀತಿಸಬೇಕು.
- ಸಾಮಾಜಿಕ ವ್ಯವಹಾರದಲ್ಲಿಂದು ಕಳ್ಳದಾಸ್ತಾನಾಗಿರುವ ಅವಶ್ಯಕ ಸಾಮಗ್ರಿಗಳನ್ನು ಹೊರತೆಗೆಯಲು ಮಂತ್ರಿಗಳಿಂದು ಹೇಗೆ ಅಶಕ್ತರಾಗಿದ್ದಾರೋ ಅಂತೆಯೇ ಸಮಾಜದಲ್ಲಿ ಭೂಗತವಾಗಿರುವ ಧರ್ಮವನ್ನು ಹೊರತೆಗೆಯಲು ಪೀಠಾಧಿಪತಿಗಳು ಕಾರ್ಯತತ್ಪರರಾಗಬೇಕು ಧಾರ್ಮಿಕ ಅಭಿಮಾನವೇ ಸಂಪತ್ತು. ಇದೇ ಮಠಾಧಿಪತಿಗಳ ಬಹುದೊಡ್ಡ ಆಸ್ತಿ, ಸರ್ಕಾರದ ಯಾವ ಕಾನೂನಿನಿಂದಲೂ ಆಸ್ತಿಕ ಜನರ ಈ ಅಭಿಮಾನ ಸಂಪತ್ತನ್ನು ಪಡೆಯಲು ಸಾಧ್ಯವಿಲ್ಲ. ಎಲ್ಲರೂ ಕೂಡಿ ದೇಶ ಮತ್ತು ಸಮಾಜಸೇವೆ ಮಾಡೋಣ.
- ಮಗು ನಡೆಯಲು ಕಲಿಯುವಾಗ ಬಹಳ ಪ್ರಯಾಸದಿಂದಲೇ ಕಲಿಯುತ್ತದೆ. ಅದು ದೊಡ್ಡದಾದ ಮೇಲೆ ತಾನು ನಡೆಯುತ್ತೇನೆಂಬ ಕಲ್ಪನೆಯೇ ಇಲ್ಲದಂತೆ ಸಹಜವಾಗಿ ನಡೆಯುತ್ತದೆ. ಈ ಹಂತವನ್ನು ನಾವು ಸಾಧಕ ಮತ್ತು ಜ್ಞಾನಿಗಳಲ್ಲಿ ಕಾಣುತ್ತೇವೆ.
- ಹಾಲನ್ನು ನೀರಿನಲ್ಲಿ ಹಾಕಿದರೆ ಅದನ್ನು ಪ್ರತ್ಯೇಕಿಸುವುದು ಕಠಿಣವಾದೀತು. ಆದರೆ ಅದೇ ಹಾಲನ್ನು ಹದಗೊಳಿಸಿ ತಯಾರಿಸಿದ ಬೆಣ್ಣೆಯನ್ನು ನೀರಿನಿಂದ ಬೇಕಾದಂತೆ ತೆಗೆಯಲು ಏನೂ

ಆಯಾಸವಾಗುವುದಿಲ್ಲ. ನಾವು ನಮ್ಮ ಮನಸ್ಸನ್ನು ಪ್ರಪಂಚದಲ್ಲಿ ಹರಿಸಿಬಿಟ್ಟರೆ ಮತ್ತೆ ಅದು ನಮ್ಮ ಕೈಬಿಟ್ಟಂತೆ. ಪುನಃ ಜಗತ್ತಿನಿಂದ ಅದನ್ನು ಬೇರ್ಪಡಿಸಲಾರೆವು. ಜ್ಞಾನಿಗಳ ಮನಸ್ಸು ಹದಗೊಳಿಸಿದ ನವನೀತ ಪ್ರಪಂಚದಲ್ಲಿದ್ದರೂ ಅದು ನೀರಲ್ಲಿದ್ದ ಬೆಣ್ಣೆ.

- ಸ್ಥಿತಪ್ರಜ್ಞರು ಪರಮಾತ್ಮನಲ್ಲಿ ಭಕ್ತಿಯನ್ನೂ ಪ್ರಪಂಚದಲ್ಲಿ ವೈರಾಗ್ಯವನ್ನೂ ಅಳವಡಿಸಿಕೊಂಡಿದ್ದಾರೆ. ನಾವು ಪ್ರಪಂಚದಲ್ಲಿ ಭಕ್ತಿಯನ್ನೂ ಪರಮಾತ್ಮನಲ್ಲಿ ವೈರಾಗ್ಯವನ್ನೂ ಸಾಧಿಸಿಕೊಂಡಿದ್ದೇವೆ.
- ನಿಷ್ಕಾಮನೆಯಿಂದ ಯುದ್ಧವನ್ನು ಆಚರಿಸುವುದೆಂದರೆ ಕಲ್ಲಿದ್ದಲು ಗಣಿಯಲ್ಲಿ ಕೆಲಸಮಾಡಿ ಕೈಗೆ ಮಸಿ ಅಂಟಬಾರದೆಂದುಕೊಂಡಂತೆ ಅವ್ಯವಹಾರ್ಯವಿರುವುದೇ ಇಲ್ಲ.
- ಆಹಾರದಲ್ಲಿ ಒಳ್ಳೆಯದು ಕೆಟ್ಟದ್ದನ್ನು ಪರಾಮರ್ಶಿಸಿ ಒಳ್ಳೆ ಆಹಾರವನ್ನು ಸ್ವೀಕರಿಸುವಂತೆ ಇಡೀ ಕರ್ಮವನ್ನೇ ದ್ವೇಷಿಸದೆ ಕರ್ಮಗಳನ್ನು ಪೃಥಕ್ಕರಿಸಿ ಒಳ್ಳೆ ಕರ್ಮಗಳನ್ನು ಆಚರಿಸುವುದರಲ್ಲಿಯೇ ಆತ್ಮನ ಪೋಷಣೆ ಇದೆ.
- ಬರಿ ಅಗ್ನಿಯಲ್ಲಿ ಮಾಡುವ ಹೋಮವೇ ಯಜ್ಞವೆಂಬ ಪರಿಮಿತ ಅರ್ಥದಲ್ಲಿ ಈ ಯಜ್ಞ ಶಬ್ದವನ್ನು ಶ್ರೀ ಕೃಷ್ಣನು ಗೀತೆಯಲ್ಲಿ ಬಳಸಿಲ್ಲ. ಯಜ್ಞದ ಅರ್ಥದ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಭಗವತ್ಪ್ರೀತಿಯಲ್ಲಿ ಎಂಬ ಉದ್ದೇಶದಿಂದ ಅವನ ಪೂಜಾರೂಪವಾಗಿ ಫಲದ ಆಸಕ್ತಿಯಿಲ್ಲದೆ ಮಾಡುವ ಸತ್ಕಾರ್ಯಗಳೆಲ್ಲ ಯಜ್ಞಗಳಾಗುವುವು.
- ವ್ಯಕ್ತಿಯ ಬಾಹ್ಯ ವ್ಯಾಪಾರಕ್ಕಿಂತ ಅವನ ಮನಸ್ಸಿನ ಹಿನ್ನೆಲೆಯನ್ನು ನೋಡಿ ಅವನ ಕರ್ಮವನ್ನು ನಾವು ಅಳೆಯಬೇಕು.
- ತ್ಯಾಗ ಮತ್ತು ಸೇವೆ ಇವೆರೆಡು ಯಜ್ಞಗಳಲ್ಲಿ ಅಡಕವಾದ ಅಂಶಗಳು. ಭಗವತ್ಸೇವಾ ದೃಷ್ಟಿಯಿಂದ ನಮ್ಮಲ್ಲಿರುವ ವಸ್ತುವಿನ ತ್ಯಾಗದೊಂದಿಗೆ ನಡೆಸುವ ಕ್ರಿಯೆಯೇ ಯಜ್ಞವಾಗುವುದು.
- ನಮ್ಮ ಆತ್ಮನ ಕಲ್ಯಾಣಮಯ ರೂಪವನ್ನು ಮುಚ್ಚಿಡುವ ಅಜ್ಞಾನದ ಪೆಟ್ಟಿಗೆಯನ್ನು ತೆರೆಯುವ ಬೀಗದ ಕೈಯೇ ಕರ್ಮ ಎನ್ನಬಹುದು. ಬೀಗದ ಕೈಯಿಂದ ಪೆಟ್ಟಿಗೆಯನ್ನು ಮುಚ್ಚಲೂಬಹುದು. ತೆರೆಯಲೂಬಹುದು. ಅದರಂತೆ ಕರ್ಮವೂ ಬಂಧಕವೂ ಎನಿಸಬಹುದು. ಮೋಚಕವಾಗಿಯೂ ಪರಿಣಮಿಸಬಹುದು. ಅದನ್ನು ಮಾಡುವ ದೃಷ್ಟಿಯನ್ನು ಇದು ಅವಲಂಬಿಸಿಕೊಂಡಿದೆ.
- ನೀರನ್ನು ತರಬೇಕೆಂದು ಕೇಳಿಕೊಂಡಾಗ ಒಂದು ಪಾತ್ರೆಯಲ್ಲಿ ನೀರನ್ನು ತರಲಾಗುವುದು. 'ನಾನು ಪಾತ್ರೆಯಲ್ಲಿ ತರಲಿಕ್ಕೆ ಹೇಳಿಲ್ಲ. ನೀರನ್ನು ಮಾತ್ರ' ಎಂದು ಕೇಳಿದಾಗ ನೀರಿನ ಜೊತೆಗೆ ಪಾತ್ರೆಯನ್ನು ಯಾಕೆ ತಂದಿರುವರೆಂದು ಯಾರಾದರೂ ಆಕ್ಷೇಪಿಸುವರೇ? ಪಾತ್ರೆಯು ಇಲ್ಲದೇ ನೀರನ್ನು ಹೇಗೆ ತರುವುದು? ಅದರಂತೆ ಕರ್ಮದ ಹಿನ್ನೆಲೆ ಇಲ್ಲದ ಜ್ಞಾನವು ಪ್ರಕಟವಾಗಲಾರದು.
- ನೀರಿಗಿಂತ ಹಾಲು ಶ್ರೇಷ್ಠವೇನೋ ನಿಜ, ಆದರೆ ಮೀನನ್ನು ನೀರಿನಿಂದ ತೆಗೆದು ಹಾಲಿನಲ್ಲಿಟ್ಟರೆ ಅದು ಬದುಕಬಹುದೇ? ಅದರಂತೆ ಮಾನವನು ತನ್ನ ವ್ಯಕ್ತಿ ಧರ್ಮ, ವರ್ಣಧರ್ಮ, ಪ್ರಾಸಂಗಿಕ ಧರ್ಮಗಳನ್ನು ಪರಿಶೀಲಿಸಿ ತನ್ನ ಸ್ವಧರ್ಮವನ್ನು ನಿರ್ಧರಿಸಿ ಆ ಮಾರ್ಗದಿಂದಲೇ ನಡೆಯಬೇಕು.
- ಒಬ್ಬನು ತನಗೆ ಒಪ್ಪಿಗೆಯಾಗುವ ಪತ್ನಿಯನ್ನು ಆರಿಸಬಲ್ಲ. ತನಗೆ ಬೇಡವಾದಾಗ ಪತ್ನಿಯನ್ನು ತೊರೆಯಲೂ ಸಾಧ್ಯವಾಗಬಹುದು, ಆದರೆ ತನ್ನ ತಾಯಿಯ ಬಗ್ಗೆ ಹೀಗೆ ನಡೆಯಬಲ್ಲನೇ? ಈ ತಾಯಿ ಚೆನ್ನಾಗಿಲ್ಲ, ಸುಂದರಳಾಗಿಲ್ಲ, ತನಗೆ ಬೇರೆ ತಾಯಿ ಬೇಕೆಂದು ಬದಲಿಸಲು ಸಾಧ್ಯವೇ? ನಾವು ಹುಟ್ಟುವಾಗಲೇ ನಮ್ಮ ತಾಯಿ ಸಿದ್ಧವಾಗಿರುತ್ತಾಳೆ. ಅವಳನ್ನೇ ತಾಯಿಯೆಂದು ಸ್ವೀಕರಿಸಿ ಪುತ್ರರಾಗಿ ನಮ್ಮ ಸೇವೆ, ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ಧರ್ಮದ ಬಗ್ಗೆಯೂ ಇದೇ ರೀತಿಯನ್ನು ಅನುಸರಿಸಬೇಕು.

- ನಾವು ಹುಟ್ಟುವಾಗಲೇ ನಮ್ಮ ಧರ್ಮ ನಿರ್ಧರಿತವಾಗಿರುತ್ತದೆ. ಅದನ್ನು ಬದಲಿಸುವ ಗೋಜಿಗೆ ನಾವು ಹೋಗಬಾರದು, ನಮಗೆ ಪ್ರಾಪ್ತವಾದ ಧರ್ಮವನ್ನು ನಿಷ್ಠೆಯಿಂದ ಅನುಷ್ಠಾನ ಮಾಡಬೇಕು.
- ವಸ್ತ್ರವನ್ನು ಬರೇ ನೀರಿನಲ್ಲಿ ಮುಳುಗಿಸುವುದರಿಂದ ಅದು ನಿರ್ಮಲವಾಗಲಾರದು. ನೀರಿನಲ್ಲಿ ಮುಳುಗಿಸಿ ಒಗೆಯುವುದರಿಂದಲೇ ಅದು ಸ್ವಚ್ಛವಾಗುತ್ತದೆ. ಅದರಂತೆ ನಮ್ಮ ಹೃದಯವು ನಿರ್ಮಲವಾಗಲು ಬರೀ ಪರೋಕ್ಷ ಜ್ಞಾನವು ಸಾಲದು; ಪರೋಕ್ಷ ಜ್ಞಾನವನ್ನು ಪಡೆದು ಅದರ ಜೊತೆಗೆ ನಿಷ್ಕಾಮಕರ್ಮವನ್ನು ಆಚರಿಸಿದಾಗಲೇ ಸಮಾಧಿಗೆ ತರಬೇಕಾದ ಹೃದಯ ಪರಿಪಾಕವಾಗುವುದು, ಅನಂತರ ಅಲ್ಲಿ ಭಗವಂತನ ಚಿತ್ರವನ್ನು ಸುಂದರವಾಗಿ ಮೂಡಿಸಬಹುದು.
- ಆಮೆಯು ಬೇಕಾದಾಗ ತನ್ನ ಅವಯವಗಳನ್ನು ನಿರಾಯಾಸವಾಗಿ ಒಳಗೆ ಎಳೆದುಕೊಳ್ಳುತ್ತದೆ, ಅದರಂತೆ ಜ್ಞಾನಿಯಾದವನು ತನ್ನ ಇಂದ್ರಿಯಗಳನ್ನು ವಿಷಯ ಪದಾರ್ಥಗಳಿಂದ ಯಾವ ಪ್ರಯಾಸವಿಲ್ಲದೇ ಎಳೆದುಕೊಳ್ಳಬಲ್ಲನು. ವೈಷಯಿಕ ಪದಾರ್ಥಗಳ ಸಂಬಂಧವು ಅವನಿಗೆ ಆತಂಕವನ್ನುಂಟು ಮಾಡಲಾರವು.
- ವೇದಗಳು ದೊಡ್ಡ ಸರೋವರದಂತೆ ಇದ್ದು ಎಲ್ಲ ಬಗೆಯ ವಿಚಾರಗಳನ್ನು ಒಳಗೊಂಡಿರುವವು. ಸರೋವರದಲ್ಲಿಯ ನೀರನ್ನು ನಮಗೆ ಬೇಕಾದಷ್ಟು ತೆಗೆದುಕೊಳ್ಳುವಂತೆ ವೇದಗಳಲ್ಲಿ ವಿಚಾರಗಳನ್ನು ಸರಿಯಾಗಿ ಮಥನಮಾಡಿ ನಮಗೆ ಯಾವುದು ಯೋಗ್ಯವೋ ಯಾವುದು ಜೀರ್ಣವಾಗುವುದೋ ಅದನ್ನು ಸ್ವೀಕರಿಸಬೇಕು.
- ಗೀತೆಯ ಉಚ್ಚ ಆದರ್ಶ ನಮ್ಮ ಕಣ್ಣ ಮುಂದೆ ಇದ್ದಲ್ಲಿ ನಾವು ತಪ್ಪುದಾರಿ ತುಳಿಯುವ ಸಂಭವ ಕಡಿಮೆಯಾಗುವುದು. ಧ್ರುವ ನಕ್ಷತ್ರವನ್ನು ನಾವು ಮುಟ್ಟಲಾರೆವು. ಆದರೆ ಅದು ನಮ್ಮ ಕಣ್ಣ ಮುಂದೆ ಇದ್ದರೆ ಹಡಗು ದಾರಿ ತಪ್ಪಲಾರದು.
- ಒಬ್ಬನಿಗೆ ನದಿಯ ಆಚೆ ದಡವನ್ನು ಸೇರಬೇಕಾಗಿದೆ. ನದಿಯಲ್ಲಿ ಇಳಿಯದೆ ಆಚೆ ದಡವನ್ನು ಅವನು ಎಂದೂ ಮುಟ್ಟಲಾರ. ಅದರಂತೆ ಸಂಸಾರಕ್ಕೆ ಇಳಿಯದೆ ಕರ್ತವ್ಯವನ್ನು ಆಚರಿಸದೇ ಸಂಸಾರವನ್ನು ದಾಟಲಾರೆವು.
- ಅಲೆಗಳಿಂದ ಚಲವಿಚಲವೂ ಕಲುಷಿತವೂ ಆದ ನೀರಿನಲ್ಲಿ ಸೂರ್ಯನ ಪ್ರತಿಬಿಂಬವನ್ನು ಕಾಣಲಾರೆವು. ಅದಕ್ಕೆ ನಿರ್ಮಲ ಸರೋವರವೇ ಬೇಕಾಗುವಂತೆ ಭಗವಂತನನ್ನು ಕಾಣಲು ನಿರ್ಮಲ ಹೃದಯ ಬೇಕು.
- ಹಲಸಿನ ಹಣ್ಣು ತಿನ್ನಬೇಕು. ಆದರೆ ಮೇಣ ಅಂಟಬಾರದು. ಕೈಗೆ ಜಿಡ್ಡು ಬಡಿದುಕೊಂಡು ಹಣ್ಣು ಸುಲಿದರೆ ಆ ಕೆಲಸವಾಗುವುದು. ಕರ್ಮಯೋಗವೇ ಆ ಜಿಡ್ಡು.
- ಮರವೂ ಹೂ ಬಿಟ್ಟಾಗ ಅದರಿಂದ ಉಂಟಾಗುವ ಮಧುರ ಫಲಕ್ಕಾಗಿ ಕಾಯದೆ ಹೂವಿನ ಪರಿಮಳಕ್ಕಾಗಿ ಆತುರತೆಯಿಂದ ಹೂವನ್ನೇ ಕಿತ್ತುಕೊಂಡು ಹಣ್ಣನ್ನು ಕಳೆದುಕೊಳ್ಳುವವರಂತೆ ಬರೀ ಕರ್ಮವಾದಿಗಳಾದ ಮೀಮಾಂಸಕರ ಸ್ಥಿತಿಯಾಗಿದೆ. ವೇದವು ಮಾಡಿದ ಕಾಮ್ಯಕರ್ಮಗಳ ಬೋಧನೆಯ ಉದ್ದೇಶವನ್ನರಿಯದೆ ಭೋಗ ಪ್ರಧಾನವಾದ ಸಾಮಾನ್ಯ ಫಲಗಳನ್ನೇ ಆಶಿಸಿದರೆ ಶಾಸ್ತ್ರದ ಅಮೃತ ಫಲವನ್ನೇ ನಾವು ಕಳೆದುಕೊಳ್ಳುತ್ತೇವೆ.
- ಎಷ್ಟು ಕಾರ್ಯ ಮಾಡಿದೆವೆನ್ನುವುದಕ್ಕಿಂತ ಹೇಗೆ ಮಾಡಿದೆವು ಎಂಬುದು ಹೆಚ್ಚು ಮಹತ್ವದ್ದು. ದೊಡ್ಡ ಪ್ರಮಾಣದ ದಾನದ ಸಂಭ್ರಮವನ್ನು ನಡೆಯಿಸುವ ಶ್ರೀಮಂತನಿಗಿಂತ ತನ್ನಲ್ಲಿರುವ ಅಲ್ಪ ಪದಾರ್ಥವನ್ನು ಶುದ್ಧಭಾವದಿಂದ ನೀಡುವ ಬಡವನ ದಾನವೇ ಹೆಚ್ಚು ತ್ಯಾಗಪೂರ್ಣವಾಗಬಲ್ಲುದು.
- ಈಜು ಕಲಿಯದೆ ನದಿಗೆ ಹಾರಿದರೆ ಆಗುವ ಅನರ್ಥದಂತೆ ಕರ್ತವ್ಯದ ಕಲೆಯನ್ನು ಅರಿತುಕೊಳ್ಳದೆ

ಸ್ವಾರ್ಥಪರರಾಗಿ ಕಾರ್ಯಾಚರಣೆಯನ್ನು ಮಾಡುವುದರಿಂದ ಸಂಸಾರದಲ್ಲಿ ಮುಳುಗುವ ದುರಂತಕ್ಕೆ ಈಡಾಗುವೆವು.

- ಎರಡು ಸರೋವರಗಳು ಮೇಲಿನಿಂದ ನೋಡುವಾಗ ಒಂದೇ ರೀತಿಯಿರಬಹುದು, ಆದರೆ ಒಳಗೆ ಇಳಿದರೆ ಒಂದರಲ್ಲಿ ನೀರಿಗಿಂತ ಹೆಚ್ಚು ಕೆಸರೇ ಇರಬಹುದು. ಇನ್ನೊಂದು ಆಳವಾದ ನೀರಿನಿಂದ ಸ್ವಚ್ಛ, ಗಂಭೀರವಾಗಿ ಇರಬಹುದು. ಜ್ಞಾನಿ-ಅಜ್ಞಾನಿಗಳ ಸ್ಥಿತಿಯೂ ಹೀಗೆಯೇ.
- ಯಂತ್ರಗಳಿಂದ ಬಾಹ್ಯ ವಾತಾವರಣ ಕಲುಷಿತವಾಗಿದೆ. ಕಪಟ, ಮೋಸ ಇತ್ಯಾದಿ ತಂತ್ರಗಳಿಂದ ಹೃದಯದ ಒಳವಾತಾವರಣವೂ ಕಲುಷಿತವಾಗಿದೆ. ಈ ಎರಡೂ ವಾತಾವರಣಗಳೂ ಶುದ್ಧವಾಗ ಬೇಕಾದರೆ ಈಗ ಮಂತ್ರಲಹರಿಯೇ ಹರಿಯಬೇಕು.
- ಆತ್ಮದ ಅವಿರ್ಭಾವಕ್ಕೆ ಶರೀರದ ಹಿನ್ನೆಲೆಯು ಅವಶ್ಯವಿದ್ದಂತೆ ಕರ್ಮವಿಲ್ಲದೇ ಜ್ಞಾನದ ಪ್ರಾದು ರ್ಭಾವವೂ ಇಲ್ಲ. ಕರ್ಮವಿಲ್ಲದ ಜ್ಞಾನವು ಹೆಳವನಂತಿದ್ದರೆ ಜ್ಞಾನವಿಲ್ಲದ ಕರ್ಮ ಕುರುಡೇ ಆಗಿರುವುದು. ಅವೆರಡರ ಸಮಾವೇಶವಿಲ್ಲದೆ ಜೀವನವು ಸರ್ವಾಂಗ ಸುಂದರವಾಗಲಾರದು.
- ಎಷ್ಟೇ ನೀರಿದ್ದರೂ ಸಮುದ್ರವು ತನ್ನ ದಡಬಿಟ್ಟು ಮೇಲೆ ಬರುವುದಿಲ್ಲ. ಅದರಂತೆ ವೈಷಯೀ ವಸ್ತುಗಳನ್ನು ಭೋಗಿಸಿದರೂ ಜ್ಞಾನಿಯು ಧರ್ಮದ ಎಲ್ಲೆಯನ್ನು ಮೀರಿ ನಡೆಯುವುದಿಲ್ಲ.
- ನಾವು ಸಮರ್ಪಿಸುವ ಶುಭಕರ್ಮಗಳೆಂಬ ಪ್ರಿಯ ಭೋಜ್ಯಗಳನ್ನು ಸ್ವೀಕರಿಸಲು ನಮ್ಮ ಹೃದಯಕ್ಕೆ ಭಗವಂತನು ಓಡಿ ಬರುವನು. ದುಷ್ಕರ್ಮಗಳನ್ನಾಚರಿಸಿ ನಾವು ಆ ಹರಿಯನ್ನು ನಮ್ಮಿಂದ ದೂರ ಓಡಿಸುತ್ತಿದ್ದೇವೆ.
- ಇಂದು ಜಗತ್ತಿನಲ್ಲಿ ವಿಕಟ ತಾಂಡವ ಆಡುತ್ತಿರುವ ಭ್ರಷ್ಟಾಚಾರದ ಮಹಾದೈತ್ಯನ ಹುಟ್ಟಡಗಿಸಲು ಭಕ್ತಿಯ ಅಮೃತಪ್ರಾಶನವೇ ಏಕಮಾತ್ರ ಉಪಾಯ.
- ನಮ್ಮ ಜೀವನದುದ್ದಕ್ಕೂ ದೈವೀಭಾವನೆಯು ಜಾಗರೂಕವಾಗಿದ್ದರೆ ಅಂಥ ಜನ್ಮವು ಪಾವನವಾಗಿದೆಯೆಂದು ತಿಳಿಯಬಹುದು.
- ಇಡೀ ನಮ್ಮ ಜೀವನದ ಫಲಶ್ರುತಿಯೇ ಮರಣದಲ್ಲಿ ಅಡಕವಾಗಿದೆ.
- ನಮ್ಮ ಇಡೀ ಜೀವನವನ್ನು ಸದಾಚಾರ ಸದ್ವಿಚಾರಗಳಿಂದ ಪರಿಷ್ಕರಿಸಿದರೆ ಅದರ ಮಧುರ ಪ್ರತಿಧ್ವನಿಯನ್ನು ಮರಣಕಾಲದಲ್ಲಿ ನಾವು ಕಾಣಬಹುದು.
- ಏಣಿಯ ಮೇಲಿನ ತುದಿಗೆ ತಲುಪಿದರೂ ಅಲ್ಲಿಯೇ ನಿಂತು ಚಿಕ್ಕ ಹುಡುಗರನ್ನು ಮೇಲೆ ಏರಿಸಲು ಪ್ರಯತ್ನಿಸುವಂತೆ ಜ್ಞಾನಿಗಳು ಕರ್ಮದ ಏಣಿಯಲ್ಲೇ ಇದ್ದು ನಮ್ಮನ್ನು ತಮ್ಮ ಬಳಿಗೆ ಕರೆದೊಯ್ಯಲು ಉಪಕ್ರಮಿಸುವರು.
- ಸತ್ಕರ್ಮಗಳೇ ದೇವರಿಗೆ ನಾವು ಕೊಡಬಹುದಾದ ಆಹಾರ. ಭಗವಂತನಿಂದ ನಾವು ಆಹಾರವನ್ನು ಪಡೆಯುತ್ತಿರುವಾಗ ಪ್ರತಿಯಾಗಿ ನಾವೂ ಅವನಿಗೆ ಪ್ರಿಯವಾದ ಭೋಜ್ಯ ವಸ್ತುವನ್ನು ಕೊಡ ಬೇಡವೇ? ಲೋಕದಲ್ಲಿ ಧರ್ಮಕರ್ಮಗಳು ಲೋಪವಾದಾಗ ದೇವತೆಗಳು ಬಡವಾಗುತ್ತಾರೆಂದು ಪುರಾಣಗಳಲ್ಲಿ ವರ್ಣಿಸಲಾಗಿದೆ, ಇದರ ಅರ್ಥವೇನು? ನಾವು ಮಾಡುವ ಸತ್ಕರ್ಮಗಳನ್ನು ಪರಮಾತ್ಮನು ಸ್ವೀಕರಿಸುವನು. ದೇವತೆಗಳೂ ಸ್ವೀಕರಿಸುವರು.
- ಸ್ವಾರ್ಥದ ಉದ್ದೇಶದಿಂದ ನಡೆಸುವ ಕಾರ್ಯಗಳೇ ಸಂಸಾರದಲ್ಲಿ ನಮ್ಮನ್ನು ಬಿಗಿಯುವ ಶೃಂಖಲೆಗಳಾಗಬಲ್ಲವು. ಭಗವಂತನ ಪೂಜಾರೂಪವಾಗಿ ನಾವು ಕರ್ಮಗಳನ್ನು ಮಾಡಹೊರಟರೆ ಅವೇ ನಮ್ಮ ಆತ್ಮ ಸೌಂದರ್ಯವನ್ನು ಬೆಳಗಿಸುವ ಪುಷ್ಪಹಾರಗಳಾಗುವುವು.
- ನದಿಯಲ್ಲಿ ಒಬ್ಬನು ಮುಳುಗುತ್ತಿರುವಾಗ ತೀರದಲ್ಲಿ ಜಪ ಮಾಡುತ್ತಿರುವವನು ಜಪವನ್ನು ಬಿಟ್ಟು

ಮುಳುಗುವವನನ್ನು ಮೇಲಕ್ಕೆತ್ತಲು ಪ್ರಯತ್ನಿಸುವುದೇ ಧರ್ಮವೆನಿಸುವುದು. ಜಪವೇ ಶ್ರೇಷ್ಠವೆಂದು ಆತನು ಮೂಗು ಹಿಡಿದು ಕುಳಿತರೆ ಅದು ಸರಿಯೆನಿಸುವುದೇ?

- ಸಮುದ್ರದಲ್ಲಿ ನದಿಯ ನೀರು ಪ್ರವೇಶಿಸುವಂತೆ ಜ್ಞಾನಿಯು ವಿಷಯ ಪದಾರ್ಥಗಳನ್ನು ಸ್ವೀಕರಿಸುವನು. ಸಮುದ್ರಕ್ಕೆ ನದಿಯ ನೀರು ಬಂದರೂ ಅಷ್ಟೇ ಬಾರದಿದ್ದರೂ ಅಷ್ಟೇ, ಸಮುದ್ರದಲ್ಲಿ ಯಾವುದೇ ಉದ್ರೇಕವಾಗಲಾರದು. ಅದು ಏಕರೂಪವಾಗಿಯೇ ಇರುವುದು. ಸ್ಥಿತಪ್ರಜ್ಞನು ವಿಷಯ ಪದಾರ್ಥಗಳನ್ನು ಸ್ವೀಕರಿಸಿದರೂ ಅವನಲ್ಲಿ ಏನೂ ವಿಕಾರವಾಗಲಾರದು. ಅದು ಇಲ್ಲದಿದ್ದರೂ ಅವನು ಕೊರಗಲಾರನು. ಸಮುದ್ರದಂತೆ ಆತ ಅಚಲ ಪ್ರತಿಷ್ಠನಾಗಿರುವನು.
- ಮಠಾಧಿಪತಿಗಳ ಜನಸಂಪರ್ಕ ಇಂದು ಕೇವಲ ಪಾದಪೂಜೆ, ಕಾಣಿಕೆಗಳಲ್ಲಿ ಮಾತ್ರವೇ ಉಳಿದಿದೆ.

ಹಿಂದೂ ಧರ್ಮ-ಸಮಾಜ

- ಹಿಂದೂ ಸಮಾಜಕ್ಕೀಗ ಮುಚುಕುಂದ ನಿದ್ರೆ, ಆತ ಎದ್ದು ಕಣ್ತೆರೆದಾಗ ಕಾಲಯಮನ ಭಸ್ಮವಾಗಿ ಹೋದಂತೆ ನಿದ್ರಿತ ಹಿಂದೂ ಸಮಾಜ ಎದ್ದಾಗ ಘಾಸಿ ಪಡಿಸುತ್ತಿರುವ ದುಶ್ಶಕ್ತಿಯೆಲ್ಲ ಬೂದಿಯಾಗಿ ಬಿದ್ದೀತು.
- ಹಿಂದೂ ಸಮಾಜ ಕುರುಕ್ಷೇತ್ರದ ಅರ್ಜುನನಂತೆ ಜಡವಾಗಿದೆ. ಹಿಂದೂ ಸಮಾಜೋತ್ಸವ ಶ್ರೀಕೃಷ್ಣನ ವಿರಾಟ್‌ಸ್ವರೂಪ ದರ್ಶನದಂತೆ. ಹಿಂದೂಗಳು ಆಲಸ್ಯ ತೊರೆದು ದೇಶದ ಏಳ್ಗೆಗೆ ದುಡಿಯಲು ಜಾಗೃತರಾಗಬೇಕು. ದೇವರಿಗೆ ಸಾವಿರಮುಖ, ಹೃದಯ ಒಂದೇ. ಹಿಂದೂ ಧರ್ಮಕ್ಕೂ ಸಾವಿರಮುಖ, ತತ್ವ ಒಂದೇ. ಕ್ರೈಸ್ತ, ಮುಸ್ಲಿಮರಲ್ಲಿ ಅಸ್ಪೃಶ್ಯರಿಲ್ಲ. ಹಿಂದೂಗಳಲ್ಲಿ ಮಾತ್ರ ಈ ಪದ್ಧತಿ ಇರುವುದು ಅಪಚಾರ.
- ಹಿಂದೂಗಳೆಲ್ಲ ಒಂದೆ ಎಂಬ ಭಾವನೆ ಬೆಳೆಯಬೇಕು. ಎಲ್ಲ ಜಾತಿಯವರನ್ನು ಆತ್ಮೀಯವಾಗಿ ನೋಡಬೇಕು. ಈ ಒಗ್ಗಟ್ಟು ಇತರ ಯಾವುದೇ ಸಮಾಜದ ಕೆಡುಕಿಗಾಗಿ ಅಲ್ಲ. ಹಿಂದೂ ಸಮಾಜದ ಒಳಿತಿಗಾಗಿ ಮಾತ್ರ, ಯಾರನ್ನೂ ನಿಕೃಷ್ಟವಾಗಿ ಕಾಣಬೇಡಿ. ಹಿಂದೂ ಒಗ್ಗಟ್ಟು ಮುಷ್ಟಿಕಟ್ಟಿದಂತೆ. ಇದು ಯಾರಿಗೂ ಬಡಿಯಲು ಅಲ್ಲ, ಎಲ್ಲರ ಸೇವೆ ಮಾಡಲು ಎಂಬುದನ್ನು ಮರೆಯಬಾರದು, ಎಲ್ಲ ಹಿಂದುಗಳೂ ಒಂದಾಗಿ ಸಂಸ್ಕೃತಿ-ರಕ್ಷಣೆಗಾಗಿ, ದೇಶಕ್ಕಾಗಿ ದುಡಿಯಬೇಕು.
- ನಮ್ಮ ಸಮಗ್ರ ಹಿಂದೂಧರ್ಮ ಮತ್ತು ದೇಶಕ್ಕೆ ಬರುತ್ತಿರುವ ವಿಪತ್ತು, ಆಘಾತಗಳನ್ನು ಎದುರಿಸಿ ಜಾಗತಿಕ ಅಲೆ ಎಬ್ಬಿಸಲು ನಾವೆಲ್ಲ ಭಗವಂತನ ಪ್ರತಿನಿಧಿಗಳಾಗಬೇಕು. ಹಿಂದೆ ದುಷ್ಟಶಕ್ತಿಯನ್ನು ಸಂಹರಿಸಲು ದೇವತೆಗಳು ಅವತರಿಸುತ್ತಿದ್ದರು. ಈಗ ನಾವೇ ದೇವರ ಪ್ರತಿನಿಧಿಗಳಾಗಿ ದುಷ್ಟಶಕ್ತಿ ತೊಲಗಿಸಬೇಕು.
- ಶ್ರೀಕೃಷ್ಣ ತನ್ನ ಭಕ್ತರನ್ನು ರಕ್ಷಿಸಲು ಗೋವರ್ಧನಗಿರಿಯನ್ನೆತ್ತಿ ಹಿಡಿದಂತೆ ನಾವೆಲ್ಲ ಸಂಘಟಿತರಾಗಿ ಹಿಂದೂ ದೇಶವನ್ನು ಎತ್ತಿಹಿಡಿದು ರಕ್ಷಿಸಬೇಕು. ಶಕ್ತಿ ಸಂಘಟನೆಗಳ ಆವಾಹನೆ ನಮ್ಮಲ್ಲಾಗಬೇಕು. ನಮ್ಮ ನೆಲದಲ್ಲಿ ನಮಗೆ ಎರಡನೇ ಸ್ಥಾನಸಲ್ಲದು. ಭಾರತೀಯರೆಲ್ಲರೂ ಸಮಾನರು.
- ದುಷ್ಟರ ಬಗ್ಗೆ ಅನುಚಿತ ಅನುಕಂಪದಿಂದ ಸಮಾಜ ವ್ಯವಸ್ಥೆಯೇ ಶಿಥಿಲವಾಗಬಹುದು.
- ಸ್ವಧರ್ಮಾಚರಣೆ ಸರಿಯಾಗಿದ್ದರೆ ಯಾವ ಬಾಹ್ಯ ಶಕ್ತಿಯೂ ಹಿಂದೂ ಸಮಾಜವನ್ನು ವಿಘಟಿಸಲು ಅಸಾಧ್ಯ. ಹಿಂದೂ ಧರ್ಮದ ಮೇಲೆ ಪರಧರ್ಮೀಯರ ದಬ್ಬಾಳಿಕೆ ನಡೆದದ್ದು ನಮ್ಮ ಅನೈಕ್ಯದಿಂದಲೇ. ಅನೂಚಾನವಾಗಿ ಬಂದ ಸನಾತನ ಹಿಂದೂ ಸಮಾಜ ಹಲವು ಹದಿನೆಂಟು ಜಾತಿಗಳಲ್ಲಿ ಹರಿದುಹೋಗಿದ್ದರೂ ನಾವೆಲ್ಲ ಹಿಂದೂಗಳೆಂಬ ಐಕ್ಯ ಭಾವ ನೆಲೆಸಬೇಕು.

- ದ್ವೈತಾದ್ವೈತ ಸಿದ್ಧಾಂತಗಳು ಒಂದೇ ವೇದಮಾತೆಯಿಂದ ವಿಸ್ತೃತವಾದವುಗಳು. ಅಣ್ಣತಮ್ಮಂದಿರು ಬೇರೆ ಬೇರೆ ಮನೆಗಳಲ್ಲಿ ವಾಸಿಸಿದರೂ ಅಣ್ಣತಮ್ಮಂದಿರ ಸಂಬಂಧವನ್ನು ಅಲ್ಲಗಳೆಯುವಂತಿಲ್ಲ. ಅವರವರಿಗೆ ತಮ್ಮ ತಮ್ಮ ಧ್ಯೇಯ ವಿಚಾರಗಳಂತೆ ನಡೆಯುವ ಸ್ವಾತಂತ್ರ್ಯವಿದೆ. ನಮ್ಮ ಧಾರ್ಮಿಕ ವಿಚಾರಗಳು ಕಲಹಕ್ಕೆ ಕಾರಣವಾಗದೆ ಏಕತೆಗೆ ಕಾರಣವಾಗಬೇಕು.
- ಕಿತ್ತಳೆ ಹಣ್ಣಿನ ಬೇರೆ ಬೇರೆ ಸೋಳೆಗಳು ಸೇರಿ ಹಣ್ಣಾದಂತೆ ಬೇರೆ ಬೇರೆ ಮತ ಸಂಪ್ರದಾಯಗಳ ಒಕ್ಕೂಟವೇ ಹಿಂದೂ ಧರ್ಮ. ಹಿಂದೂ ಧರ್ಮದಲ್ಲಿರುವ ವಿವಿಧ ಜಾತಿಗಳು ಒಂದೇ ಮನೆಯಲ್ಲಿ ಇರುವ ಬೇರೆ ಬೇರೆ ಕೋಣೆಗಳಲ್ಲಿ ವಾಸಮಾಡುವ ಅಣ್ಣ ತಮ್ಮಂದಿರಂತಿರಬೇಕು. ಮನೆಗೆ ಬೆಂಕಿ ತಗುಲಿದಾಗ ಎಲ್ಲ ಅಣ್ಣ ತಮ್ಮಂದಿರು ಅದನ್ನು ಹತ್ತಿಕ್ಕುವಂತೆ ಹಿಂದೂ ಧರ್ಮಕ್ಕೆ ಬಂದ ಆಘಾತವನ್ನು ಬಗೆಹರಿಸಲು ನಾವೆಲ್ಲರೂ ಒಂದಾಗಬೇಕು. ವಿದೇಶೀ ಶಕ್ತಿಗಳು ಅನೇಕ ರೀತಿಯ ತಂತ್ರಗಳನ್ನು ನಡೆಸುತ್ತಿವೆ. ರಾಜಕೀಯ ವ್ಯಕ್ತಿಗಳಿಗೆ ಇದು ಒಳ್ಳೆಯ ಆಹಾರ ದೊರಕಿದಂತಾಗಿದೆ. ಬ್ರಾಹ್ಮಣ, ರೆಡ್ಡಿ, ಲಿಂಗಾಯತ ಹರಿಜನ ಎಂದು ಗುರುತಿಸುವಂತೆ ನಾವು ಹಿಂದೂ ಎಂದು ತಿರುಗುವ ಪ್ರವೃತ್ತಿ ನಮ್ಮಲ್ಲಿಲ್ಲ. ನಾವು ಸಂಘಟಿತರಾಗಿ ನಮ್ಮನ್ನು ನಾವು ಬೆಳೆಸಿಕೊಂಡರೆ ಯಾವುದೇ ದುಷ್ಟ ಶಕ್ತಿಗಳನ್ನು ಸಹಿಸಲು ಶಕ್ಯವಾದೀತು. ಅಲ್ಪ ಸಂಖ್ಯಾಕರ ಹಿಂದೆ ರಾಜಕೀಯ ಪಕ್ಷಗಳು ಓಡಾಡುತ್ತಿವೆ. ಯಾರು ಹಿಂದುತ್ವಕ್ಕೆ ಧಕ್ಕೆ ಮಾಡುತ್ತಾರೋ ಅವರಿಗೆ ಹಿಂದುಗಳ ಓಟು ಬೀಳದಿದ್ದಾಗ ಹಿಂದುಗಳ ಶಕ್ತಿ ಅರ್ಥವಾದೀತು. ಈಗ ಇರುವ ಮತಾಂತರ ಮುಂದುವರಿದರೆ ದೇಶಾಂತರವೇ ಆದೀತು. ಜಾತಿ, ಮತ, ಪಕ್ಷಗಳ ಎಲ್ಲೆ ಮೀರಿ ನಾವೆಲ್ಲ ಯಾವಾಗ ಒಂದಾಗಿ ಬಾಳುವೆವೋ ಆಗಲೇ ಹಿಂದೂಧರ್ಮದ ಜಾಗೃತಿಯಾಗಬಲ್ಲುದು.
- ಪ್ರಜೆಗಳನ್ನು ಸನ್ಮಾರ್ಗದತ್ತ ನಡೆಸುವ ಕಾರ್ಯದಲ್ಲಿ ಸಮಾಜದಲ್ಲಿ ಮಠಾಧೀಶರ ಪಾತ್ರ ಅಗ್ರಗಣ್ಯವಾಗಿದೆ. ಧಾರ್ಮಿಕ ಹಿತರಕ್ಷಣೆಯೊಡನೆ ಸಮಾಜ ಕಲ್ಯಾಣ ಸಾಧಿಸುವ ಮಹಾನ್ ಕಾರ್ಯದಲ್ಲಿ ಈ ಎರಡೂ ಅಂಗಗಳ ಸಂಯುಕ್ತ ಹೊಣೆಗಾರಿಕೆ ಇರುವುದು ಮಠಾಧಿಪತಿಗಳೆಂದೂ ಸಮಾಜದ ಹೊರತಾದವರಲ್ಲ. ಮಠಾಧಿಪತಿಗಳ ನೀತಿ ಸಂಹಿತೆಗಳನ್ನು ಪ್ರಶ್ನಿಸುವ ತಿದ್ದುವ ಹಕ್ಕು ಯಾವತ್ತೂ ಸಮಾಜಕ್ಕೆ ಇರುವುದಾಗಿಯೂ, ಶ್ರೀಗಳವರು ಕಾನೂನು ಕಟ್ಟಳೆಗಳಿಂದ ಬಗೆಹರಿಸಲಾಗದ ಸಾಮಾಜಿಕ ಸಮಸ್ಯೆಗಳನ್ನು ಆಧ್ಯಾತ್ಮಿಕ ಕ್ರಾಂತಿಯಿಂದ ಬಿಡಿಸಬಹುದು. ಆರ್ಥಿಕ, ಸಾಮಾಜಿಕ ರಾಜಕೀಯ, ಶೈಕ್ಷಣಿಕ ರಂಗಗಳಲ್ಲಿ ಸಂಭವಿಸುವ ದುರಂತಗಳನ್ನು ದೂರ ಮಾಡುವಲ್ಲಿ ಸಮಾಜದ ಮಠಾಧಿಪತಿಗಳ ಬಾಂಧವ್ಯದ ಬೆಸುಗೆ ಉತ್ತಮವಾಗಬೇಕು.
- ತಾನು ಗಳಿಸಿದ ಹಣ ಉತ್ತಮ, ಪಿತ್ರಾರ್ಜಿತವು ಮಧ್ಯಮ, ಅಣ್ಣ ತಮ್ಮಂದಿರಲ್ಲಿ ಜಗಳಾಡಿ ಪಡೆದ ಹಣ ಅಧಮ. ವರದಕ್ಷಿಣೆಯಿಂದ ಪಡೆದ ಹಣ ಅಧಮಾಧಮ. ಆದುದರಿಂದ ಯುವಕರು ವರದಕ್ಷಿಣೆ ತೆಗೆದುಕೊಳ್ಳದೆ ಇರುವ ಸಂಕಲ್ಪ ಮಾಡಬೇಕು.
- ಮಾನವ ಪುನರ್ನಿರ್ಮಾಣಕ್ಕೆ ಉಪನಿಷತ್ತುಗಳಲ್ಲಿ ಮತ್ತು ವೇದಗಳಲ್ಲಿ 'ಉಪನಯನ' ಅಥವಾ 'ಪುನರ್ಜನ್ಮ' ಎಂಬ ರೀತಿಯ ಉಲ್ಲೇಖವಿದೆ. ನಿಜವಾಗಿ ಹೇಳುವುದಾದರೆ ಪ್ರತಿ ಮನುಷ್ಯನಲ್ಲಿ, ಆತನ ಹೃದಯದಲ್ಲಿ ನೈತಿಕ ಮೌಲ್ಯಗಳು, ಉತ್ತಮ ಗುಣಗಳು ಹುದುಗಿಕೊಂಡಿವೆ. ಇಂತಹ ಗುಣಗಳನ್ನು ಅಭಿವ್ಯಕ್ತಗೊಳಿಸಿ, ಮೇಲೆತ್ತಿ ಬೆಳೆಸಿದಲ್ಲಿ ಪ್ರತಿಯೊಬ್ಬನು ಸುಧಾರಿತ ಹಾಗೂ ಉತ್ತಮ ಗುಣಗಳುಳ್ಳ ಮನುಷ್ಯನಾಗುತ್ತಾನೆ. ಇಂದು ಲಂಚಗುಳಿತನ ಇತ್ಯಾದಿ ಅನ್ಯಾಯಗಳನ್ನು ನಾವು ಧೈರ್ಯವಾಗಿ ನಮ್ಮನ್ನು ವೈಯಕ್ತಿಕವಾಗಿ ಬೆಳೆಸಿಕೊಂಡು ಎದುರಿಸಬೇಕು. ಹೊಡೆದೋಡಿಸಬೇಕು.
- ದುಂಬಿಯು ಬೇರೆ ಬೇರೆ ಹೂಗಳ ಮಕರಂದವನ್ನು ಸಂಚಯಿಸಿ ಮಧುವನ್ನು ನೀಡುವಂತೆ ನಾವು ವಿವಿಧ

ಧರ್ಮಗಳಲ್ಲಿ ಶ್ರೇಷ್ಠ ಅಂಶಗಳನ್ನು ಸ್ವೀಕರಿಸಿ ಜೇನು ಹರಿಸುವ ದುಂಬಿಗಳಾಗಬೇಕು.

- ಎಲ್ಲ ಮತಗಳ ಸುತ್ತಲೂ ಭಿನ್ನ ಆಚರಣೆಗಳಿದ್ದರೂ ಅವುಗಳಲ್ಲಿ ಸತ್ಯ ಇರುತ್ತದೆ. ಧರ್ಮಗಳಲ್ಲಿಯ ವಿರೋಧ ಅಂಶಗಳನ್ನು ಹುಡುಕುವ ಬದಲು ಸಮಾನ ಅಂಶಗಳನ್ನು ಅರಿತುಕೊಳ್ಳಬೇಕು.
- ಬದುಕಿಗೆ ಮೂಲಭೂತವಾದ ಪೋಷಕಗಳನ್ನು ಒದಗಿಸುವಂಥಹದೇ ಧರ್ಮ. ಅದನ್ನು ಬಲಪಡಿಸಲು ರೂಪಿಸಿಕೊಂಡಿರುವ ಬಾಹ್ಯ ಆಚರಣೆಗಳೇ ಧರ್ಮ ಎಂದು ನಂಬುವುದು ಧರ್ಮಕ್ಕೆ ದ್ರೋಹವೆಸಗಿದಂತೆ. ಎಲ್ಲ ಧರ್ಮಗಳಲ್ಲೂ ಭಕ್ತಿ, ಚಾರಿತ್ರ್ಯಗಳೂ ಪ್ರಮುಖವೂ ಸಮಾನವೂ ಆಗಿದ್ದು ಇವುಗಳನ್ನು ಬದುಕಿನಲ್ಲಿ ಬೆಳೆಸುವ ಬಗ್ಗೆ ನಾವೆಲ್ಲರೂ ಶ್ರಮಿಸಬೇಕಾಗಿದೆ.
- ಇವತ್ತು ಸಮಾಜ ಸೇವೆಯ ಬಗ್ಗೆ ಬಹಳ ಮಾತನಾಡುತ್ತೇವೆ. ಸೇವೆಯೆಂದರೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಮಾಡಬೇಕೆಂದು ಗೀತೆ ಹೇಳುತ್ತದೆ. ಇಂಥದನ್ನು ನಮ್ಮ ಜನರಿಂದ ನಾನು ನಿರೀಕ್ಷಿಸುತ್ತ ಇಲ್ಲ. ಸಮಾಜದಿಂದ ಪ್ರತಿಫಲವನ್ನು ಪಡೆಯಲಿ. ಆ ಪ್ರತಿಫಲಕ್ಕೆ ಅನುಗುಣವಾದ ಸೇವೆಯನ್ನು ಮಾಡುವ ಮನೋಭಾವ ನಮ್ಮ ಜನರಲ್ಲಿ ಜಾಗೃತವಾದರೆ ಸಾಕು.

ಭಿನ್ನತೆಯಲ್ಲಿ ಏಕತೆ

- ಭಿನ್ನ ಭಿನ್ನವಾದ ಆಚರಣೆ, ಉಪದೇಶ, ತತ್ವಜ್ಞಾನಗಳಿದ್ದರೂ ನಾವು ಎಲ್ಲ ಮತ ಸಂಪ್ರದಾಯಗಳಲ್ಲಿರುವಂತಹ ಮೂಲಭೂತವಾದ ಧರ್ಮವನ್ನು ಅರಿತುಕೊಳ್ಳುವ ಪ್ರಯತ್ನ ಮಾಡಿದರೆ ಪ್ರಪಂಚ ಜೀವನ ಸುಖಮಯವಾಗಲು ಸಾಧ್ಯ.
- ಮತ, ಸಂಪ್ರದಾಯಗಳಲ್ಲಿ ವಿರುದ್ಧಾಂಶಗಳನ್ನು ಹುಡುಕುವ ಬದಲು ಸಮಾನ ಅಂಶಗಳನ್ನು ಜಗತ್ತಿನ ಕಲ್ಯಾಣಕ್ಕೆ ಮಾರ್ಗದರ್ಶಕವಾದ ಸತ್ವಗಳನ್ನು ಹುಡುಕುವ ಪ್ರಯತ್ನ ನಾವು ಮಾಡಬೇಕು. ಪುಷ್ಪಗಳ ಆಕಾರ, ಬಣ್ಣ ಬೇರೆ ಬೇರೆಯಿದ್ದರೂ ಅವುಗಳ ಮಕರಂದವನ್ನು ಒಂದು ಜೇನುತುಪ್ಪದ ಧಾರೆಯಾಗಿ ನಿರ್ಮಾಣ ಮಾಡುವಂತೆ ನಾವೆಲ್ಲ ಭ್ರಮರರಾಗಬೇಕು. ಬೇರೆ ಬೇರೆ ಸಂಪ್ರದಾಯಗಳು ನಮ್ಮ ಜಗತ್ತಿನ ಉದ್ಯಾನದಲ್ಲಿರುವ ಬೇರೆ ಬೇರೆ ಪುಷ್ಪಗಳು. ಈ ಎಲ್ಲ ಪುಷ್ಪಗಳಲ್ಲಿ ಹಾರಾಡಿ ಅವುಗಳ ರಸವನ್ನು ಹೀರಿ ಒಂದು ಸಂಸ್ಕೃತಿಯ, ವಿಶ್ವಸಂಸ್ಕೃತಿಯ ಮಧುಧಾರೆಯನ್ನು ಹರಿಸುವ ಭ್ರಮರದ ಕೃತ್ಯವನ್ನು ನಾವೆಲ್ಲರೂ ಮಾಡಬೇಕು. ಅದಕ್ಕಾಗಿ ನಮ್ಮೆಲ್ಲ ಶಕ್ತಿಗಳ ಕೇಂದ್ರೀಕರಣ ನಡೆಯಬೇಕು.
- ಭಗವಂತನನ್ನು ಯಾವ ಹೆಸರಿನಿಂದಲೂ ಕರೆಯಬಹುದು. ಯಾವ ಆಕಾರದಿಂದಲೂ ಪೂಜಿಸಬಹುದು. ನೀರಿಗೆ ಇಂತಹದೇ ಆಕಾರವೆಂಬುದಾಗಿ ಹೇಳಲು ಬರುವುದಿಲ್ಲ. ಯಾವ ಪಾತ್ರೆಯಲ್ಲಿ ನೀರನ್ನು ಇಡುತ್ತೇವೋ ಆ ಆಕಾರದಲ್ಲಿ ನೀರು ಮಾರ್ಪಾಟು ಹೊಂದುವಂತೆ ಭಗವಂತನದ್ದು ಇಂತಹದೇ ವಿಶಿಷ್ಟ ಆಕಾರವೆಂಬುದಾಗಿ ನಿರ್ಬಂಧಿಸಲು ಸಾಧ್ಯವಿಲ್ಲ. ಯಾವುದೇ ಆಕಾರ, ಯಾವುದೇ ರೀತಿಯಿಂದ ಭಗವಂತನನ್ನು ಪೂಜಿಸಿದರೂ ಪರಮಾತ್ಮ ಅದನ್ನು ಸ್ವೀಕಾರ ಮಾಡಬಲ್ಲ.
- ಭಕ್ತನಾಗಬೇಕು. ಉತ್ತಮವಾದ ಆದರ್ಶವನ್ನು ಸ್ಫೂರ್ತಿಯನ್ನು ನಾವು ಜೀವನದಲ್ಲಿ ಪಡೆಯಬೇಕು. ಸತ್ಯ, ದಯೆ, ಸೇವೆ ಮುಂತಾದ ಸದ್ಗುಣಗಳಿಗೆ ನಮ್ಮ ಜೀವನದಲ್ಲಿ ವಿಶಿಷ್ಟ ಸ್ಥಾನ ನೀಡಬೇಕು. ಎಲ್ಲ ಮತ ಸಂಪ್ರದಾಯಗಳಿಗೆ ಸಮಾನವಾದ ಸೂತ್ರವೆಂದರೆ ಭಕ್ತಿ ಮತ್ತು ಸಚ್ಚಾರಿತ್ರ್ಯದ ಸೂತ್ರ. ಇದು ಇವತ್ತಿನ ಜಗತ್ತಿಗೆ ಅಗತ್ಯವಾದುದು. ವಿಷವರ್ತುಲ ತುಂಬಿದ ಈ ಜಗತ್ತಿಗೆ ಸರ್ವಮತ ಧರ್ಮಗಳು ನೀಡುವ ಒಂದೇ ಸಂದೇಶವೆಂದರೆ ಭಕ್ತಿ ಮತ್ತು ಸಚ್ಚಾರಿತ್ರ್ಯದ ಸಂದೇಶ. ಎಲ್ಲ ಮತ ಸಂಪ್ರದಾಯಗಳ ಅನುಯಾಯಿಗಳು, ಧರ್ಮಗುರುಗಳು ಸೇರಿ ಭಕ್ತಿ, ಸಚ್ಚಾರಿತ್ರ್ಯದ ಕ್ರಾಂತಿಯನ್ನು ಜಗತ್ತಿನಲ್ಲಿ ಮಾಡಬೇಕು.

ರಾಜಕೀಯ

- ಪ್ರಜಾಪ್ರಭುತ್ವದಲ್ಲಿ ಚುನಾವಣೆ ಅನಿವಾರ್ಯ. ಆದರೆ ಚುನಾವಣೆಯೇ ಎಲ್ಲರನ್ನೂ ಭ್ರಷ್ಟರನ್ನಾಗಿ ಮಾಡುತ್ತಿದೆ. ಅದರಲ್ಲಿ ಗೆಲ್ಲಲು ಎಲ್ಲ ರೀತಿಯ ಭ್ರಷ್ಟ ಅವ್ಯವಹಾರಗಳೂ ನಡೆಯುತ್ತಿವೆ. ಇದರಿಂದ ದೇಶದ ಆರ್ಥಿಕ ಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಸಾಧ್ಯವಾಗಿಲ್ಲ. ರಾಜಕಾರಣಿಗಳು ಚುನಾವಣೆಯಲ್ಲಿ ಯಾವುದೇ ವಾಮಮಾರ್ಗವನ್ನನುಸರಿಸಿ ಅಧಿಕಾರಕ್ಕೆ ಬಂದು ತಮ್ಮ ಭ್ರಷ್ಟ ಕೆಲಸಗಳಿಗೆ ತಾವೇ ಬಲಿಯಾಗಿ ದೇಶದಲ್ಲಿ ಯಾವುದೇ ಸುಧಾರಣೆ ತರಲು ಅಸಮರ್ಥರಾಗಿದ್ದಾರೆ. ಈ ರೋಗ ಎಲ್ಲೆಡೆ ಅರ್ಬುದದಂತೆ ಬೆಳೆಯುತ್ತ ಹೋಗಿದೆ.
- ಎಲ್ಲ ಪಕ್ಷಗಳೂ ಇಂದು ತಮ್ಮ ತಮ್ಮ ಸ್ವಾರ್ಥದಿಂದ ಕಚ್ಚಾಡುತ್ತಿವೆ. ಪಕ್ಷಾಂತರ ಪಿಡುಗು ಸಾಮಾನ್ಯವಾಗಿದೆ. ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಹೊಣೆಯಾಗುವ ಬದಲು ಜವಾಬ್ದಾರಿಯುತರಾಗಬೇಕು.
- ಆರ್.ಎಸ್. ಎಸ್. ರಾಜಕೀಯ ಪಕ್ಷವಲ್ಲ. ಅವರ ವಿಧಾಯಕ ಕಾರ್ಯಕ್ರಮಗಳನ್ನು ನಾನು ಮೆಚ್ಚಿಕೊಂಡಿದ್ದೇನೆ. ಯಾರು ತಪ್ಪು ದಾರಿಯಲ್ಲಿ ನಡೆದಾಗಲೂ ಅದನ್ನು ಸ್ಪಷ್ಟವಾಗಿ ಎತ್ತಿ ತೋರಿಸಿದ್ದೇನೆ. ದೇಶದ ಹಿತ ನನಗೆ ಮುಖ್ಯ. ಯಾವುದೇ ಪಕ್ಷವಲ್ಲ. ರಾಜಕೀಯಕ್ಕೆ ಅತೀತವಾಗಿ ನಾನು ಕಾರ್ಯ ನಡೆಸುತ್ತಿದ್ದೇನೆ ಹೊರತು ರಾಜಕೀಯಕ್ಕಾಗಿಯಲ್ಲ.
- ದೇಶದ ಸ್ವಾತಂತ್ರ್ಯಂದೋಲನದ ಸಂದರ್ಭದಲ್ಲಿ ಇದ್ದ ಶುದ್ಧ ವಾತಾವರಣವನ್ನು ನಾವು ಇಂದು ಕಾಣುವುದಿಲ್ಲ. ಹಣ, ಅಧಿಕಾರ ಮುಂತಾದ ಆಕರ್ಷಣೆಗಳಿಲ್ಲದೇ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುವಾಗ ಜನರಲ್ಲಿ ಇದ್ದ ನಿರ್ಮಲ ಮನೋಭಾವದ ಕಲ್ಪನೆಯನ್ನೇ ಈಗ ನಾವು ಮಾಡಲಾರರಾಗಿರುವೆವು. ಇನ್ನೂ ಸ್ವಾತಂತ್ರ್ಯವು ತಡವಾಗಿ ಸಿಗುವಂತಾಗಿದ್ದರೆ ಆಗುತ್ತಿತ್ತೇನೋ ಎನ್ನುವಷ್ಟು ಸ್ವಾರ್ಥಪರತೆ ಬೆಳೆದಿದೆ.
- ಚುನಾವಣೆಯಲ್ಲಿ ಆರಿಸಿ ಬಂದು ಮಂತ್ರಿ, ಪದವಿ ಮೊದಲಾದದ್ದು ದೊರೆಯಬೇಕಾದರೆ ಸರಕಾರಿ ನೌಕರಿ, ಸರಕಾರಿ ಕಂಟ್ರಾಕ್ಟ್ ಮೊದಲಾದವುಗಳಿರಬಾರದು. ಅವುಗಳನ್ನು ತ್ಯಾಗಮಾಡಿಯೇ ಚುನಾವಣೆಗೆ ನಿಲ್ಲಬೇಕಾಗುತ್ತದೆ. ಅದರಂತೆ ಸಕಾಮ ಕರ್ಮಗಳಿಂದ ಬರುವ ಅನಿಷ್ಟ ಪುಣ್ಯಗಳೂ ಕೂಡಾ ಮೋಕ್ಷಕ್ಕೆ ಪ್ರತಿಬಂಧಕಗಳಾಗಿರುತ್ತವೆ.
- ಆಸಕ್ತಿಯನ್ನು ಬಿಟ್ಟು ಕರ್ತವ್ಯ. ಧರ್ಮವನ್ನು ನಿರ್ವಹಿಸಬೇಕು. ವೇದನಾನಿರೋಧಕ ಇಂಜಕ್ಷನ್ ನೀಡಿ ಶಸ್ತ್ರಕ್ರಿಯೆ ಮಾಡುವಂತೆ ಆಗ ಯಾವ ಮನೋವೇದನೆಗೂ ಅವಕಾಶವಿರುವುದಿಲ್ಲ.

ಇಂದ್ರಿಯ ನಿಗ್ರಹ

- ಮೊದಲು ಮನುಷ್ಯನು ಮದ್ಯವನ್ನು ಕುಡಿಯಲು ಉಪಕ್ರಮಿಸುತ್ತಾನೆ. ಆ ಮೇಲೆ ಮದ್ಯವೇ ಮನುಷ್ಯನನ್ನು ಕುಡಿಯುತ್ತದೆ. ಅರ್ಥಾತ್ ಅಂತಹ ದುಶ್ಚಟಕ್ಕೆ ತಾನು ಪೂರ್ಣ ಬಲಿಯಾಗಿ ತನ್ನ ಸ್ವಾತಂತ್ರ್ಯವನ್ನೇ ಕಳೆದುಕೊಳ್ಳುತ್ತಾನೆ.
- ವಿಷಯ ಭೋಗಗಳಿಂದ ಕಾಮವು ಮತ್ತೂ ಪೆಡಂಭೂತವಾಗಿ ಕೊಬ್ಬಿ ನಮ್ಮನ್ನು ಪೂರ್ಣವಾಗಿ ಪಾದಾಕ್ರಾಂತಗೊಳಿಸುವುದು. ಆಹಾರವನ್ನು ನೀಡಿ ಉದರಾಗ್ನಿಯನ್ನು ತಣಿಸಬಹುದಾದರೂ ಕಾಮಾಗ್ನಿಯನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ.
- ವಿಷಯಾಸಕ್ತಿ ಮತ್ತು ಅಜ್ಞಾನಗಳು ಮೋಡ - ಕತ್ತಲೆಗಳಂತೆ ನಮ್ಮ ಜೀವನವನ್ನೇ ನಿಷ್ಪ್ರಭಗೊಳಿಸುವವು. ಇವುಗಳನ್ನು ನಮ್ಮ ಹೃದಯದಿಂದ ಹೊರದೂಡಿ ಚಂದ್ರನ ಬೆಳದಿಂಗಳಿನಂತಿರುವ ಶುದ್ಧ ತಾತ್ವಿಕ ವಿಚಾರಧಾರೆಯಿಂದ ನಾವು ಪರಿಶುದ್ಧರಾಗಿರಬೇಕು.

- ಎಷ್ಟು ಆಳವಾದ ವಿಸ್ತಾರವಾದ ಜಲರಾಶಿಯನ್ನು ಚಿಕ್ಕ ನಾವೆಯಿಂದ ನಾವು ಸುಲಭವಾಗಿ ದಾಟಬಲ್ಲೆವು. ಕಟ್ಟಿಗೆಗಳ ಮೂಟೆಗಳೆಷ್ಟಿದ್ದರೂ ಬೆಂಕಿಗೆ ಅವುಗಳನ್ನು ಸುಡಲು ಶ್ರಮವೆನಿಸುವುದೇ. ಪಾಪದ ಮಹಾಸಾಗರದಿಂದ ಪಾರುಮಾಡಿಸಬಲ್ಲ ಹಡಗೂ ದುಷ್ಕರ್ಮಗಳ ಒಣಕಟ್ಟಿಗೆಗಳನ್ನು ಭಸ್ಮೀಕರಿಸಬಲ್ಲ ದಿವ್ಯಾಗ್ನಿಯೂ ಈ ಜ್ಞಾನವೇ ಆಗಿದೆ.
- ಚಾರ್ವಾಕರು ತಮ್ಮ ಕಣ್ಣಿಗೆ ಕಾಣದಿರುವುದು ಮಾತ್ರ ಸುಳ್ಳು ಎಂದು ಹೇಳಿ ಕಣ್ಣಿಗೆ ಕಾಣುವ ವಸ್ತುಗಳೆಲ್ಲವೂ ಸತ್ಯ ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಕಣ್ಣಿಗೆ ಕಾಣುವದೂ ಕೂಡ ಸುಳ್ಳು ಎಂದು ಹೇಳುವ ಮಾಯಾವಾದಿಗಳು ನಾಸ್ತಿಕ್ಯದಲ್ಲಿ ಚಾರ್ವಾಕರನ್ನೂ ಮೀರಿಸುತ್ತಾರೆ.
- ಹುಟ್ಟುವಾಗ ಮಕ್ಕಳ ಮನಸ್ಸು ಖಾಲಿ ಕಾಗದದಂತೆ ಶೂನ್ಯವಾಗಿ ಇರುವುದಿಲ್ಲ. ಹಿಂದಿನ ಜನ್ಮದ ನಾನಾ ಅನುಭವಗಳ ಸಿಹಿ-ಕಹಿಗಳ ಪಡಿಯಚ್ಚು ಆ ಮನುಷ್ಯನಲ್ಲಿ ಇದ್ದೇ ಇದೆ. ಅದು ಜನ್ಮಾಂತರಕ್ಕೆ ಸಾಕ್ಷಿಯಾಗಿದೆ.
- ಸ್ಥಿತಪ್ರಜ್ಞನಿಗೆ ವೈಷಯಿಕ ಸಂಬಂಧವನ್ನು ಹಿಡಿಯುವುದೂ ಬಿಡುವುದೂ ಎರಡೂ ಸುಲಭ. ನಾವಂತೂ ಇಂದ್ರಿಯಗಳನ್ನು ವಿಷಯ ಪದಾರ್ಥಗಳ ಕಡೆಗೆ ಸುಲಭವಾಗಿ ಕಳುಹಿಸುವೆವು. ಆದರೆ ನಮ್ಮ ಇಂದ್ರಿಯಗಳನ್ನು ಭೋಗವಸ್ತುಗಳಿಂದ ತಿರುಗಿ ಹಿಂದೆಳೆಯಲು ಸಾಧ್ಯವೇ ಆಗುವುದಿಲ್ಲ. ಇದು ದುರ್ಬಲ ಚಿತ್ತದ ಪರಿಣಾಮ.
- ಏಕಾದಶಿ ದಿನ ನಿರ್ಜಲ ಉಪವಾಸ ಮಾಡುವಾಗಲೂ ದ್ವಾದಶಿ ದಿನದ ಅಡಿಗೆಯದೇ ಚಿಂತೆ. ಆಹಾರ ಇಲ್ಲದಾಗ ಇತರ ಇಂದ್ರಿಯಗಳ ಶಕ್ತಿ ಕುಂಟಿತವಾದರೂ ನಾಲಗೆಯ ಶಕ್ತಿಯು ಚುರುಕಾಗಿಯೇ ಇರುತ್ತದೆ. ಮರದ ಶಾಖೆಗಳನ್ನು ಕಡಿದರೂ ಬೇರಿಗೆ ನೀರು ಹಾಕಿ ಬೆಳೆಯುವಂತೆ ನಾಲಿಗೆಯನ್ನು ನಿಲ್ಲಿಸದಿದ್ದರೆ ಮಾನಸಿಕ ರೋಗವನ್ನು ನಿಲ್ಲಿಸಲಾಗದು. ನಮ್ಮ ಈ ಬಾಹ್ಯಪ್ರಯತ್ನದಿಂದ ತಕ್ಕಮಟ್ಟಿಗೆ ಪ್ರಯೋಜನವಾದರೂ ಪೂರ್ಣವಾಗಿ ನಮ್ಮ ಮಾನಸಿಕ ರೋಗವನ್ನು ನಿಲ್ಲಿಸಲಾಗದು.
- ರಾಗದ್ವೇಷಗಳಿಂದ ಕೂಡಿದ ಇಂದ್ರಿಯಗಳು ವಿಷಭರಿತ ಸರ್ಪಗಳಂತೆ ಪೂತ್ಕರಿಸಿ ನಮ್ಮನ್ನು ಕೆಡಹುವವು. ಇದಕ್ಕಾಗಿ ನಾವು ಇಂದ್ರಿಯಗಳನ್ನು ದ್ವೇಷಿಸಬೇಕಾಗಿಲ್ಲ. ಅವುಗಳಲ್ಲಿರುವ ಈ ವಿಷದ ಹಲ್ಲುಗಳನ್ನು ಮಾತ್ರ ತೆಗೆಯಬೇಕು. ಹಾವಾಡಿಗರು ವಿಷ ತೆಗೆಸಿದ ಹಾವುಗಳನ್ನು ಬೇಕಾದ ಹಾಗೆ ಆಡಿಸುತ್ತಾರೆ. ಅದರಂತೆ ರಾಜ ದ್ವೇಷಗಳನ್ನು ತೊರೆದರೆ ಆ ಇಂದ್ರಿಯಗಳು ನಮಗೆ ಅಪಾಯಕಾರಿಯಾಗಲಾರವು.
- ಅಲರ್ಕನೆಂಬ ರಾಜನು ಇಂದ್ರಿಯಗಳನ್ನು ಗೆಲ್ಲಬೇಕೆಂದು ಬಾಣಗಳಿಂದ ಅವುಗಳನ್ನು ಕಿತ್ತೊಗೆಯಲು ಉಪಕ್ರಮಿಸಿದನು. ಆಗ ಆ ಇಂದ್ರಿಯಗಳ ಅಭಿಮಾನಿ ದೇವತೆಗಳು ಅವನ ಈ ಹುಚ್ಚು ಕೆಲಸವನ್ನು ತಡೆದು ''ಇದರಿಂದ ನಿನಗೆ ಏನೂ ಸಾಧನೆ ಮಾಡಿಕೊಂಡ ಹಾಗಾಗುವುದಿಲ್ಲ, ಸಾಧನೆ ಮಾಡಲು ಬೇಕಾದ ಸಲಕರಣೆ ಒಡೆದು ಹಾಕುತ್ತಿ. ಇಂದ್ರಿಯಗಳನ್ನು ಕಿತ್ತೊಗೆಯುವುದರಿಂದ ಯಾವ ಜ್ಞಾನ, ಸತ್ಕರ್ಮಗಳಿಗೂ ಅವಕಾಶವಾಗದೇ ನಿನ್ನ ಜೀವನವೇ ವ್ಯರ್ಥವಾಗುವುದು. ಯೋಗ್ಯ ದಾರಿಯಲ್ಲಿ ಇಂದ್ರಿಯಗಳು ಪ್ರವೃತ್ತರಾಗುವಂತೆ ಮಾಡುವುದೇ ನಿಜವಾದ ಇಂದ್ರಿಯ ನಿಗ್ರಹ''.
- ''ಕಾಮ ಭೋಗದಿಂದಲ್ಲ. ಅದರ ತ್ಯಾಗದಿಂದಲೇ ಅದನ್ನು ಹಿಡಿತದಲ್ಲಿ ಇರಿಸಿಕೊಳ್ಳಬಹುದು'' ಎಂಬುದು ಯಯಾತಿ ಮಹಾರಾಜನು ಅನುಭವದಿಂದ ನುಡಿದ ಮಾತಾಗಿದೆ.
- ಬೆಂಕಿಗೆ ಹೊಗೆಯಂತೆ ಕೆಲವರಿಗೆ ಕಾಮದ ಆವರಣವಿರುತ್ತದೆ. ಆ ಕಾಮದ ಹೊಗೆಯಲ್ಲಿ ಅವರ ವ್ಯಕ್ತಿತ್ವದ ಪ್ರಭೆಯು ಪ್ರಕಾಶಮಾನವಾಗಿ ಕಾಣಬಹುದಾಗಿದ್ದರೂ ಅದು ಕಾಮದಿಂದಾಗಿ ಸ್ವಲ್ಪ ಮಟ್ಟಿಗಾದರೂ ಮಸುಕಾಗಿರುತ್ತದೆ.
- ಕಟ್ಟಿಗೆ ಹಾಕಿ ಬೆಂಕಿಯನ್ನು ತಣಿಸಲು ಶಕ್ಯವಾಗಬಹುದೇ? ಅದರಂತೆ ಕಾಮೋಪಭೋಗಗಳನ್ನೆಷ್ಟು

ಮಾಡಿದರೂ ಅದರಿಂದ ನಮ್ಮ ಕಾಮನೆ ತಣಿಯುವುದಿಲ್ಲ. ಅಪೇಕ್ಷಿಸಿದ ಭೋಗ್ಯ ವಸ್ತುಗಳನ್ನು ಪೂರೈಸಿದಂತೆ ಮನುಷ್ಯನ ಕಾಮವು ಕೆರಳುತ್ತ ಹೋಗುತ್ತದೆ.

- ಮಾತಾಪಿತರನ್ನು ಪ್ರೀತಿಸುವವರು ಸಹೋದರರನ್ನೂ ಪ್ರೀತಿಸುವ ಹಾಗೆ ಭಗವಂತನೇ ತಂದೆ ಹಾಗೂ ನಾಡೇ ತಾಯಿ ಎಂದು ಭಾವಿಸಿ ಎಲ್ಲರನ್ನೂ ಸೋದರರಂತೆ ಪ್ರೀತಿಸಬೇಕು.
- ವಿದ್ಯಾರ್ಥಿಗಳು ಭೌತಿಕತೆಯತ್ತ ಮನಮಾಡದೆ ದೇವರ ಕಡೆಗೆ ಗಮನ ಹರಿಸಿ ತಾವು ಕಲಿತ ವಿದ್ಯೆಯನ್ನು ಸಮಾಜದ ಸೇವೆಗೆ ಹಾಗೂ ಉನ್ನತಿಗೆ ವಿನಿಯೋಗಿಸಬೇಕು.
- ಸ್ವಾರ್ಥ, ಸಂಕುಚಿತ ಮನೋಭಾವ ಹಾಗೂ ಆಲಸ್ಯಗಳೆನ್ನುವ ರಾಕ್ಷಸರಿಂದ ಹಿಂದೂ ಸಮಾಜ ನುಚ್ಚು ನೂರಾಗುತ್ತಿದೆ. ಈ ರಾಕ್ಷಸರನ್ನು ನಾಶಮಾಡಿ ನಮಗೆ, ವಿಶ್ವದ ಮಿತ್ರರಿಗೆ ನಿಮ್ಮ ಪ್ರೇಮ ಹಾಗೂ ತ್ಯಾಗ ನೀಡಿ.
- ದೇಶದ ರಾಜಕಾರಣಿಗಳು ಹಿಂದೂ ಧರ್ಮ-ಸಂಸ್ಕೃತಿಗಳ ಸಾರವನ್ನು ಅರಿಯಬೇಕು. ಆಗ ಮಾತ್ರ ಅವರು ದೇಶಪ್ರೇಮದಿಂದ ಜನತೆ ಹಾಗೂ ತಾಯ್ನಾಡಿನ ಸೇವೆ ಸಲ್ಲಿಸಲು ಸಾಧ್ಯ.
- ಸಮಾಜದಲ್ಲಿ ಸುಪ್ತವಾಗಿರುವ ಚೈತನ್ಯವನ್ನು ಜಾಗೃತಗೊಳಿಸಬೇಕು. ಸ್ವಾರ್ಥರಹಿತ ಸೇವೆಯ ಮೂಲಕ ಮಾನವನು ಅಂತಃಕರಣದ ಶುದ್ಧಿಯನ್ನು ಸಾಧಿಸಬಲ್ಲ. ಆದುದರಿಂದ ಸಮಾಜದ ಪ್ರಗತಿ ಈ ಸ್ವಾರ್ಥ ನಿರ್ಮೂಲನೆಯನ್ನು ಅವಲಂಬಿಸಿದೆ.
- ನಾವು ನಮ್ಮ ಮನಸ್ಸನ್ನು ಮೊದಲು ಶುಚಿಗೊಳಿಸಿ ಮಡಿ ಮಾಡಬೇಕು. ಮನಸ್ಸು ಮಡಿಯಾಗಿ ಬಿಟ್ಟರೆ ಮತ್ತೆಲ್ಲವೂ ಮಡಿಯೇ ಸರಿ. ಆದರೆ ಮನಸ್ಸನ್ನು ಮಲಿನವಾಗಿಟ್ಟುಕೊಂಡು ಮೈಯನ್ನು ಮಾತ್ರ ಮಡಿಗೊಳಿಸಿದರೆ, ಅದು ನಾರುವ ಹುಣ್ಣಿಗೆ ರೇಷ್ಮೆಯ ಬ್ಯಾಂಡೇಜ್ ಕಟ್ಟಿದಂತೆ.
- ನಿಜವಾಗಿ ನಾವು ಆಧ್ಯಾತ್ಮಿಕ ವಿದ್ಯೆಯನ್ನೇ ಪೂರ್ಣವಾಗಿ ಅಭ್ಯಸಿಸಬೇಕು. ಆದರೆ ಕಾಲದ ಮಹಿಮೆಯಿಂದ ಅದಾಗುವುದಿಲ್ಲೆಂದಿದ್ದರೆ, ಶುದ್ಧ ಹಾಲನ್ನೇ ಕುಡಿಯಬೇಕಿದ್ದರೂ ಶುದ್ಧ ಹಾಲು ದೊರಕದಾಗ ನೀರಿಗೆ ಬೆರಸಿ ಹಾಲನ್ನು ಕುಡಿಯುವಂತೆ ಅಲೌಕಿಕ ವಿದ್ಯೆಯ ಜೊತೆಗಾದರೂ ಆಧ್ಯಾತ್ಮಿಕ ವಿದ್ಯೆಯನ್ನು ಅಭ್ಯಸಿಸದೆ ಇರಬಾರದು.
- ಭಗವದ್ಗೀತೆ ಒಂದು ಬೆಂಕಿ ಪೊಟ್ಟಣದಂತೆ ಕಿರಿದಾಗ ಗ್ರಂಥ. ಆದರೆ ಆ ಬೆಂಕಿಪೊಟ್ಟಣದ ಯಾವುದೇ ಕಡ್ಡಿ ತೆಗೆದು ಗೀರಿದರೂ ಜ್ಯೋತಿ ಬೆಳಗುವಂತೆ, ಭಗವದ್ಗೀತೆಯ ಯಾವೊಂದು ಶ್ಲೋಕವೂ ಜ್ಞಾನಜ್ಯೋತಿ ಬೀರಬಲ್ಲುದು.

(ಶ್ರೀ ವಿಶ್ವೇಶವಾಣಿ, ೯೮೮೩. ಸಂಗ್ರಾಹಕ – ಶ್ರೀನಿವಾಸ ತಂತ್ರಿ , ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ.ಕ.)

●

ಶ್ರೀ ವಿಶ್ವೇಶತೀರ್ಥ ಶ್ರೀಪಾದರು
(ಅನುವಾದ – ಭಾರತೀರಮಣಾಚಾರ್ಯ)

೩-೩೪

ಶ್ರೀಮಧ್ವಾಚಾರ್ಯರ ದೃಷ್ಟಿಯಲ್ಲಿ ಭಕ್ತಿ

ಮೈಸೂರು ಪ್ರಾಂತದ ಉಡುಪಿ ಕ್ಷೇತ್ರದಿಂದ ಏಳು ಮೈಲು ದೂರದಲ್ಲಿರುವ ಪಾಜಕ ಕ್ಷೇತ್ರ ಎಂಬ ಗ್ರಾಮದಲ್ಲಿ ಶ್ರೀಮಧ್ವಾಚಾರ್ಯರು ೧೩ನೇ ಶತಮಾನದಲ್ಲಿ ಹುಟ್ಟಿದರು. ಅವರು ತಮ್ಮ ಶೈಶವದಲ್ಲೇ ತಮಗಿರುವ ಅಸದೃಶವಾದ ಮೇಧಾಶಕ್ತಿಯನ್ನು ಅನೇಕ ಸಲ ವ್ಯಕ್ತಪಡಿಸಿದ್ದರು. ಬಾಲ್ಯದಲ್ಲಿಯೇ ಅಚ್ಯುತ ಪ್ರೇಕ್ಷಾಚಾರ್ಯ ಎಂಬುವರಿಂದ ಸನ್ಯಾಸವನ್ನು ಸ್ವೀಕರಿಸಿದರು; ಮತ್ತು ಆ ಚಿಕ್ಕ ವಯಸ್ಸಿನಲ್ಲೇ ಪ್ರಚಲಿತವಾಗಿದ್ದ ದರ್ಶನಶಾಸ್ತ್ರದಲ್ಲಿ ಎದ್ದು ಕಾಣಿಸುತ್ತಿದ್ದ ಲೋಪದೋಷಗಳತ್ತ ಜನರನ್ನು ಆಕರ್ಷಿಸಿ ಧಾರ್ಮಿಕ ಹಾಗೂ ದಾರ್ಶನಿಕ ವಿಚಾರಸರಣಿಯಲ್ಲಿ ಕ್ರಾಂತಿಯನ್ನೆಬ್ಬಿಸಿದರು.

ಪರಮಾತ್ಮನ ಪ್ರೇರಣೆಯಂತೆ ಬದರಿ ಕ್ಷೇತ್ರಕ್ಕೆ ಹೊರಟರು. ಅಲ್ಲಿ ಏಕಾಂಗಿಯಾಗಿ ಹಿಮಾಲಯದ ಉನ್ನತ ಶಿಖರಗಳನ್ನೇರುತ್ತಾ ದೊಡ್ಡ ಬದರಿಕಾಶ್ರಮದಲ್ಲಿ ಭಗವಾನ್ ವೇದವ್ಯಾಸರ ದರ್ಶನವನ್ನು ಪಡೆದರು. ಅವರಿಂದ ಪ್ರೇರಣೆಯನ್ನು, ಸ್ಫೂರ್ತಿಯನ್ನು ಪಡೆದರು. ಭಗವಂತನ ಆದೇಶದಂತೆ ಮರಳಿ ಬದರಿಕಾಶ್ರಮದಿಂದ ಬಂದು ತಮ್ಮ ಅಸದೃಶವಾದ ಬ್ರಹ್ಮಸೂತ್ರ ಭಾಷ್ಯವನ್ನು ರಚಿಸಿದರು. ಅಲ್ಲದೆ ಇನ್ನೂ ಅನೇಕ ಭಾಷ್ಯಗಳನ್ನು ದಾರ್ಶನಿಕ ಪ್ರಕರಣ ಗ್ರಂಥಗಳನ್ನು ರಚಿಸಿದರು. ಶ್ರೀಮಧ್ವಾಚಾರ್ಯರ ಈ ಕೃತಿಗಳೆಲ್ಲವೂ ಸರ್ವಮೂಲ ಎಂಬ ಹೆಸರಿನಿಂದ ಲೋಕಪ್ರಸಿದ್ಧವಾಗಿವೆ.

ಮಹಾಮೇಧಾವಿಗಳಾದ ವಿದ್ವಾಂಸರು ಅವರ ಅಪೂರ್ವವಾದ ವಾದ ಸರಣಿಗೆ ತಲೆಬಾಗಿ ಶಿಷ್ಯತ್ವವನ್ನು ವಹಿಸಿದರು. ದೇಶದ ಮೂಲೆಮೂಲೆಯಲ್ಲಿ ಅವರ ಶಿಷ್ಯರ ಸಂಖ್ಯೆ ಬೆಳೆಯುತ್ತಾ ಹೋಯಿತು. ಅವರು ತಮ್ಮ ಆಪ್ತ ಶಿಷ್ಯವರ್ಗದಿಂದ ಕೂಡಿ ಕಾಲ್ನಡಿಗೆಯಲ್ಲೇ ಭಾರತಾದ್ಯಂತ ಜೈತ್ರಯಾತ್ರೆಯನ್ನು ಕೈಗೊಂಡರು. ದಿವ್ಯತಪಃ ಪ್ರಭಾವದಿಂದಲೂ ವಿಶ್ವಕೋಶಕ್ಕೆ ಸದೃಶವಾದ ಪೂರ್ಣಜ್ಞಾನದಿಂದಲೂ ಹೋದೆಡೆಯಲ್ಲೆಲ್ಲಾ ವಾದಿಗಳನ್ನು ಗೆದ್ದು ದಾರ್ಶನಿಕ ಕ್ಷೇತ್ರದಲ್ಲಿ ವಿಕ್ರಮವನ್ನು ಸಾಧಿಸಿದರು. ಅವರು ವೇದಗಳಿಗೂ ಉಪನಿಷತ್ತುಗಳಿಗೂ ಭಾಷ್ಯವನ್ನು ಬರೆದು ಅದರ ರಹಸ್ಯಾರ್ಥವನ್ನು ಸ್ಪಷ್ಟಪಡಿಸಿದರು. ಈ ಪ್ರವಾಸಕಾಲದಲ್ಲಿ ಅವರನ್ನು ಬಲಾತ್ಕಾರವಾಗಿ ಪಾಶವೀಶಕ್ತಿಯಿಂದ ಹೆದರಿಸಲು ಯತ್ನಿಸಿದ ದುಷ್ಟಶಕ್ತಿಗಳು ತಮ್ಮ ದ್ವೇಷಾಸೂಯೆಗಳನ್ನು ತೊರೆದು ಭಯಭಕ್ತಿಯಿಂದ ಅಡಿದಾವರೆಗಳಲ್ಲಿ

ನತಮಸ್ತಕರಾಗಬೇಕಾಗಿ ಬಂದಿತು; ಏಕೆಂದರೆ ಆಚಾರ್ಯರ ಪ್ರಶಾಂತ ಮುಖಭಾವ, ಶಕ್ತಿಯುಕ್ತಿ ಪೂರ್ಣವಾದ ನಿರ್ಭೀತ ನಿಲುವು ಮತ್ತು ಗಂಭೀರವಾಣಿಯು ಎದುರಾಳಿಗಳನ್ನು ನಿಸ್ತೇಜವಾಗಿ ಮಾಡುತ್ತಿದ್ದುವು.

ತಮ್ಮದೇ ಆದ ದಾರ್ಶನಿಕ ವಿಚಾರಸರಣಿಯನ್ನು ಮಂಡಿಸಿದ ತರುವಾಯ ಶ್ರೀಮಧ್ವರು ಉಡುಪಿಯಲ್ಲಿ ತಮ್ಮ ಮಠದಲ್ಲಿ ಶ್ರೀಬಾಲಕೃಷ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಆ ವಿಗ್ರಹವು ದ್ವಾರಕೆಯಿಂದ ತಂದುದಾಗಿತ್ತು. ಆ ಬಾಲಕೃಷ್ಣನ ಪೂಜಾ ಕೈಂಕರ್ಯವನ್ನು ತಮ್ಮ ಎಂಟು ಜನ ಬಾಲ ಸನ್ಯಾಸಿ ಶಿಷ್ಯರಿಗೆ ವಹಿಸಿಕೊಟ್ಟರು. ಅವರುಗಳು ಅಷ್ಟಮಠದ ಯತಿಗಳೆಂದು ಪ್ರಖ್ಯಾತರಿದ್ದಾರೆ. ಕೃಷ್ಣ ಮಠದಲ್ಲಿ ನಡೆಯುವ ಪೂಜಾದಿಗಳಿಂದಲೂ, ಅಷ್ಟಮಠಗಳಲ್ಲಿ ಅನೂಚಾನವಾಗಿ ಶ್ರೀ ಮಧ್ವರ ದಾರ್ಶನಿಕ ವಿಚಾರಗಳ ಅಧ್ಯಯನ ಅಧ್ಯಾಪನ ಪರಂಪರೆಯು ಸಾಗಿಬರುತ್ತಿರುವುದರಿಂದಲೂ ಉಡುಪಿಯು ಆಧ್ಯಾತ್ಮಿಕ ವಿದ್ಯೆಯ ಕೇಂದ್ರವೂ ಸಾಧನೆಗೆ ಕ್ಷೇತ್ರವೂ ಆಗಿದೆ. ಶ್ರೀಮಧ್ವಾಚಾರ್ಯರು ತಾವು ಬಂದ ಕಾರ್ಯವು ಪೂರ್ಣವಾದ ಮೇಲೆ ತಮ್ಮ ಎಪ್ಪತ್ತೊಂಬತ್ತನೇ ವಯಸ್ಸಿನಲ್ಲಿ ಅದೃಶ್ಯರಾಗಿ ಬದರಿಕಾಶ್ರಮಕ್ಕೆ ಹೊರಟುಹೋದರು.

ಈ ಬಗೆಯಾಗಿ ತಮ್ಮ ಪ್ರಭಾವಶಾಲೀ ವ್ಯಕ್ತಿತ್ವ, ಅಸಾಧಾರಣ ಪಾಂಡಿತ್ಯ, ಮನಸೆಳೆಯುವ ಉಪದೇಶ ಮತ್ತು ಸಂಸಾರದಲ್ಲಿ ಬಿದ್ದು ತೊಳಲುತ್ತಿರುವ ಜೀವ ಕೋಟಿಯ ಮೇಲಿಟ್ಟ ಅಪಾರ ಕರುಣೆ ಇವುಗಳಿಂದಾಗಿ ಮಧ್ವಾಚಾರ್ಯರು ಸುಜೀವರುಗಳ ಉದ್ಧಾರಕ್ಕಾಗಿ ಆಧ್ಯಾತ್ಮಿಕ ಮಾರ್ಗವನ್ನು ಪ್ರಕಾಶನಗೊಳಿಸಿದರು.

ಮಧ್ವಾಚಾರ್ಯರ ದಾರ್ಶನಿಕ ವಾದದಲ್ಲಿ ಭಕ್ತಿಗೆ ಪರಮೋಚ್ಚ ಸ್ಥಾನವು ಲಭಿಸಿದೆ. ಆಚಾರ್ಯ ಅಭಿಪ್ರಾಯದಲ್ಲಿ ಸಮಸ್ತ ವೇದವಾಙ್ಮಯವು ಪರಮಾತ್ಮನ ಸ್ತುತಿರೂಪವಾದುದು. ಗುಣೋತ್ಕರ್ಷವನ್ನು ಸಾರುವುದು. ಸಕಲ ಶಾಸ್ತ್ರಗಳೂ ಭಗವಂತನ ಮಹಾತ್ಮ್ಯೆಯನ್ನು ಸ್ಪಷ್ಟಪಡಿಸಲು ರಚಿತವಾಗಿರುವುವು. ಸಂಸಾರ ಬಂಧದಿಂದ ಬಿಡುಗಡೆ ಹೊಂದಲಿಚ್ಛಿಸುವ ಸುಜೀವರುಗಳಿಗೆ ಭಕ್ತಿಯೇ ಸಾಧನ. ಸಕಲಶಾಸ್ತ್ರಗಳು ಭಗವಂತನ ಮಹಾತ್ಮ್ಯೆಯನ್ನು ನಿರೂಪಿಸಿ ಭಕ್ತಿಯನ್ನು ಪೋಷಿಸುವಲ್ಲಿ ನೆರವು ನೀಡುತ್ತವೆ. ವೇದಪ್ರತಿಪಾದ್ಯವಾದ ನಾನಾ ಬಗೆಯ ಯಜ್ಞಯಾಗಗಳು ಅಂದರೆ ಕರ್ಮಕಾಂಡವೂ ಸಹ ವೈರಾಗ್ಯವನ್ನು ದೃಢೀಕರಿಸಲು ಮತ್ತು ಭಗವದ್ಭಕ್ತಿಯನ್ನು ಪೋಷಿಸಲು. ನಿರ್ಮಲಾಂತಃಕರಣದಿಂದ ನಾವು ಮಾಡುವ ಕರ್ಮವೆಲ್ಲವೂ ಚಿತ್ತಶುದ್ಧಿಯನ್ನುಂಟುಮಾಡಿ ದೃಢವಾದ ಭಕ್ತಿ ಹಾಗೂ ಧ್ಯಾನಕ್ಕೆ ಮನಸ್ಸನ್ನು ಹದಗೊಳಿಸುತ್ತದೆ.

ಇಂದ್ರಿಯ ಪ್ರತ್ಯಕ್ಷವಾದ ಈ ಜಗತ್ತು ಅತೀಂದ್ರಿಯವಾದ ಭಗವತ್ ತತ್ತ್ವವೂ ಶ್ರೀಮಧ್ವಾಚಾರ್ಯರ ದಾರ್ಶನಿಕ ವಾದದಲ್ಲಿ ಯಥಾರ್ಥವಾದುವು. ಆದುದರಿಂದಲೇ ಭಗವಂತನನ್ನು ಮರೆತು ಈ ಜಗತ್ತಿನಲ್ಲಿ ಆಸಕ್ತಿಯನ್ನು ಹೊಂದಿರುವುದಾಗಲೀ, ಜಗತ್ತಿನ ಬಗ್ಗೆ ತನ್ನ ಕರ್ತವ್ಯವನ್ನು ಉಪೇಕ್ಷಿಸಿ ಕೇವಲ ಧಾರ್ಮಿಕ ಜೀವನವನ್ನು ನಡೆಸುತ್ತಾ ಭಕ್ತಿ ಮಾಡುವುದಾಗಲೀ – ಈ ಎರಡೂ ಸಮೀಚೀನವಲ್ಲ. ನಮ್ಮ ಈ ಜೀವನದಲ್ಲಿ ಭಕ್ತಿಯನ್ನೂ ಕರ್ತವ್ಯನಿಷ್ಠೆಯನ್ನೂ ಸಮಸಮವಾಗಿ ಸಾಧಿಸಬೇಕು. ಯಥಾರ್ಥವಾದ ಈ ಜಗತ್ತಿನ ಬಗ್ಗೆ ನಮ್ಮ ಕರ್ತವ್ಯವನ್ನು ಶ್ರದ್ಧಾಸಕ್ತಿಗಳಿಂದ ನಿರ್ವಹಿಸಬೇಕು. ಇದರಿಂದ ನಮ್ಮ ಪ್ರೇಮವು ವಿಸ್ತೃತವಾಗಿ ಕಡೆಯಲ್ಲಿ ಸರ್ವಾಧಿಕ ಪ್ರೇಮಾಸ್ಪದನಾದ ಭಗವಂತನ ಸಾಕ್ಷಾತ್ಕಾರಕ್ಕೆ ಸಾಧನವಾಗಬೇಕು. ಇದನ್ನೇ ಶ್ರೀಮಧ್ವಾಚಾರ್ಯರು ತಮ್ಮ ಈ ಶ್ಲೋಕದಲ್ಲಿ ಸ್ಪಷ್ಟಪಡಿಸುತ್ತಾರೆ –

ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ
ಹರಿಪಾದ ವಿನಮ್ರಧಿಯಾ ಸತತಂ

"ನಿನ್ನ ಕರ್ತವ್ಯವನ್ನು ನೀನು ಮಾಡು. ಅದಕ್ಕೆ ಪ್ರತಿಫಲವಾಗಿ ಬರುವ ಫಲವನ್ನು ಅನುಭವಿಸು. ನಿನ್ನ ನಿಯತವಾದ ಕರ್ಮವನ್ನು ಮಾಡುವಾಗಲೂ ಅದಕ್ಕೆ ಪ್ರತಿಫಲವಾಗಿ ದೊರೆತ ಫಲವನ್ನನು ಭವಿಸುವಾಗಲೂ ಸಹ ಹರಿಯ ಪಾದಗಳಲ್ಲಿ ಮನಸ್ಸನ್ನಿಟ್ಟಿರು." ಈ ಪ್ರಕಾರವಾಗಿ ಈ ಶ್ಲೋಕದಲ್ಲಿ ಐಹಿಕ ಮತ್ತು ಆಮುಷ್ಮಿಕ ಜೀವನಗಳ ಸಮನ್ವಯವನ್ನು ಎಷ್ಟು ಸೊಗಸಾಗಿ ತೋರಿದ್ದಾರೆ!

ಶ್ರೀಮಧ್ವಾಚಾರ್ಯರು ಭಕ್ತಿಯ ಲಕ್ಷಣವನ್ನು ಪ್ರತಿಪಾದಿಸುತ್ತಾ ಹೀಗೆ ಹೇಳಿದ್ದಾರೆ :

"ಮಾಹಾತ್ಮ್ಯಜ್ಞಾನ ಪೂರ್ವಸ್ತು
ಸುದೃಢಃ ಸರ್ವತೋಽಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಃ

ಭಕ್ತಿ ಅಂದರೆ ದೃಢವಾದ ಸ್ನೇಹ. ಆ ಸ್ನೇಹವು ಇತರೆ ಎಲ್ಲ ವಸ್ತುಗಳ ಮೇಲಿರುವ ಸ್ನೇಹಕ್ಕೆ ಮಿಗಿಲಾಗಿದ್ದಿರಬೇಕು, ಮತ್ತು ಮಹಾತ್ಮ್ಯಜ್ಞಾನಪೂರ್ವಕವಾಗಿರಬೇಕು. (ಮಹಾಭಾರತ ತಾತ್ಪರ್ಯ ನಿರ್ಣಯ.)

ಜ್ಞಾನ ಮತ್ತು ಪ್ರೀತಿಯ ರಸಾಯನವೇ ಭಕ್ತಿ ಎಂದಂತಾಯಿತು. ಭಗವಂತನ ಮಹಿಮೆಯ ಅರಿವು ಹೆಚ್ಚಿದಂತೆಲ್ಲಾ ಪ್ರೀತಿಯೂ ಹೆಚ್ಚುತ್ತಾ ಹೋಗುತ್ತದೆ. ಕುರುಡುಪ್ರೇಮ ಅಥವಾ ಅಂಧಶ್ರದ್ಧೆಯನ್ನು ಭಕ್ತಿ ಎನ್ನಲು ಸಾಧ್ಯವಿಲ್ಲ. ಭಕ್ತಿಯಲ್ಲಿ ನಮ್ಮ ಪರಿಸರದಲ್ಲಿರುವ ಸಕಲವಸ್ತುಗಳ ಇತಿಮಿತಿಯ ಯಥಾರ್ಥ ಜ್ಞಾನವೂ ಪರಮಾತ್ಮನ ಕಲ್ಯಾಣಗುಣ ವಿಷಯಕವಾದ ನಿಚ್ಚಳವಾದ ಜ್ಞಾನವೂ ನಿಸ್ವಾರ್ಥ ಶುದ್ಧ ಪ್ರೀತಿಯೂ ಮುಪ್ಪುರಿಗೊಂಡಿರುವುದೆಂಬುದನ್ನು ಮರೆಯಬಾರದು.

ಅಂಥ ಭಕ್ತಿ ಇದ್ದಾಗಲೇ ಪರಮಾತ್ಮನನ್ನು ಏಕಾಗ್ರತೆಯಿಂದ ಧ್ಯಾನ ಮಾಡಲು ಸಾಧ್ಯವಾಗುವುದು. ನಾವು ಪರಮಾತ್ಮನ ಧ್ಯಾನದಲ್ಲಿ ಮನಸ್ಸನ್ನು ಏಕಾಗ್ರಗೊಳಿಸುವಲ್ಲಿ ವಿಫಲರಾಗಲು ಕಾರಣವೆಂದರೆ ನಾವು ಅವನನ್ನು ಸರಿಯಾಗಿ ಪ್ರೀತಿಸದಿರುವುದು. ನಮಗೆ ಪರಮಾತ್ಮನ ಮಹಿಮೆಗಳ ಜ್ಞಾನವಿದ್ದು, ಅವನ ಬಗ್ಗೆ ನೈಜವಾದ ಪ್ರೀತಿಯೂ ಇದ್ದರೆ ಮನಸ್ಸನ್ನು ಏಕಾಗ್ರಗೊಳಿಸಿ ಧ್ಯಾನ ಮಾಡುವುದಕ್ಕೆ ಕಷ್ಟವಾಗುವುದೇ ಇಲ್ಲ. ಆದ್ದರಿಂದ ಎಲ್ಲಕ್ಕೂ ಮಿಗಿಲಾದ ಪ್ರೀತಿಯನ್ನು ಪರಮಾತ್ಮನಲ್ಲಿ ಮಾಡಬೇಕು – ಸರ್ವತೋ ಅಧಿಕಃ ಅಂದ ಮೇಲೆ ಭಕ್ತಿ ಇದ್ದರೇನೇ ಧ್ಯಾನವು ಸಾಧ್ಯ ಎಂದಂತಾಯಿತು. ಹೀಗೆ ಏಕಾಗ್ರತೆಯಿಂದ ಧ್ಯಾನ ನಿರತರಾದಾಗ, ನಮ್ಮ ಪ್ರೀತಿಯು ಪರಮಾತ್ಮನಲ್ಲಿ ಮತ್ತಷ್ಟು ದೃಢವಾಗಿ – ಪಕ್ವವಾಗಿ ಅವನ ಸಾಕ್ಷಾತ್ಕಾರಕ್ಕೆ ಅನುವಾಗುತ್ತದೆ. ಪರಮಾತ್ಮನ ದರ್ಶನವಾಗುತ್ತದೆ. ಇದೇ ನಿಜಕ್ಕೂ ಆಧ್ಯಾತ್ಮ ಸಾಧನೆಯ ಕೊನೆಯ ಹಂತ. ಈ ಪರಿಪಕ್ವ ಭಕ್ತಿಯಿಂದ ಪರಮಾತ್ಮನ ಪ್ರಸಾದವು ಲಭಿಸಿ ತನ್ಮೂಲಕ, ಮೋಕ್ಷವೂ ಕೂಡ ಲಭಿಸುತ್ತದೆ. ಈ ರೀತಿಯಲ್ಲಿ ಪರಮಾತ್ಮನ ಅಪರೋಕ್ಷಜ್ಞಾನಕ್ಕೆ ಪೂರ್ವದಲ್ಲಿ ಮತ್ತು ಅನಂತರ ಭಕ್ತಿಯು ನಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಅನಿವಾರ್ಯವಾದ ಸಾಧನೆಯಾಗಿದೆ ಎಂಬುದು ಗಮನಾರ್ಹ.

ಶ್ರೀಮಧ್ವಾಚಾರ್ಯರು ಭಕ್ತಿಮಾರ್ಗದಲ್ಲಿ ಮುನ್ನಡೆಯುವ ಸಾಧಕನು ಸತ್ಯಭೂತನಾದ ಸುಸ್ಥಿರ ಆಲಂಬನವನ್ನು ಹೊಂದಿರಬೇಕೆನ್ನುತ್ತಾರೆ. ಅನೇಕರು ಉಪಾಸನೆಗೂ ಮತ್ತು ಯಥಾರ್ಥಕ್ಕೂ ಏನೂ ಸಂಬಂಧವಿಲ್ಲವೆನ್ನುತ್ತಾರೆ. ಅನೇಕರು ಉಪಾಸನೆಗೆ ಆಲಂಬನವಾಗುವುದು ಕಲ್ಪಿತವಾಗಿರಬಹುದು ಮತ್ತು ಉಪಾಸಕನ ಮನೋಧರ್ಮಕ್ಕನುಸಾರವಾಗಿ ಯಾವ ನಾಮರೂಪವನ್ನು ಬೇಕಾದರೂ ಹೊಂದಿರಬಹುದು ಎನ್ನುತ್ತಾರೆ. ಆದರೆ ಸದಾ ಆಯಥಾರ್ಥ – ಅಥವಾ ಅಸತ್ಯವನ್ನು ಕುರಿತು ಧ್ಯಾನ ಮಾಡುತ್ತಿದ್ದರೆ ನಾವು ಸತ್ಯದಿಂದ ಕ್ರಮೇಣ ದೂರ ಸರಿಯುತ್ತಾ ಹೋಗಿಬಿಡುತ್ತೇವೆ. ಇದನ್ನು ಅಸಂಭವ ಎನ್ನಲಾಗದು. ಏಕೆಂದರೆ ಅಸತ್ಯವನ್ನು ಧ್ಯಾನ ಮಾಡುತ್ತಾ ಮಾಡುತ್ತಾ ಅದನ್ನೆ ಮೈಗೂಡಿಸಿಕೊಂಡಿರುತ್ತೇವೆ. ಹೀಗೆ ಮಿಥ್ಯಾಭೂತವಾದುದಕ್ಕೆ ಆಧ್ಯಾತ್ಮಿಕ ಸಾಧನೆಯಲ್ಲಿ ಎಡೆಕೊಟ್ಟಾಗ ನಾವು ಯಥಾರ್ಥವಾದುದರ

ಸಾಕ್ಷಾತ್ಕಾರವನ್ನೆಂದಿಗೂ ಪಡೆಯಲು ಸಾಧ್ಯವಿಲ್ಲ. ಆದುದರಿಂದ ಪ್ರಾರಂಭದಿಂದಲೂ ಸತ್ಯವಾದ ಆಲಂಬನವನ್ನು ಆಶ್ರಯಿಸಿ ಉಪಾಸನೆ ಮಾಡುತ್ತಾ ಭಕ್ತಿಪಂಥದಲ್ಲಿ ಮುನ್ನಡೆಯಬೇಕು. ಉಪಾಸನೆಗೆಂದು ಎದುರಿನಲ್ಲಿ ಮೂರ್ತಿಯನ್ನಿಟ್ಟುಕೊಂಡಾಗ ಆ ಜಡ ವಿಗ್ರಹವೇ ಪರಮಾತ್ಮನೆಂದು ಭಾವಿಸಬಾರದು. ಅಷ್ಟೆ ಅಲ್ಲ ನಾವು ಧ್ಯಾನಾವಸ್ಥೆಯಲ್ಲಿ ಯಾವ ಪರಮಾತ್ಮನ ರೂಪವನ್ನು ನಮ್ಮ ಮನಸ್ಸಿನಲ್ಲಿ ರೂಪಿಸಿ ಕೊಂಡಿರುವೆವೊ ಆ ಮನೋವೃತ್ತಿರೂಪವಾದ ರೂಪವೂ ಸಹ ಪರಮಾತ್ಮನಲ್ಲ ಎಂದು ಭಾವಿಸಿರಬೇಕು. ಇವು ಕೇವಲ ಪ್ರತೀಕಗಳು. ಏಕಾಗ್ರತೆಯು ಮುಖ್ಯವಾದುದೆಂದು ಭಾವಿಸಿ ಈ ಜಡಪ್ರತೀಕಗಳನ್ನೇ ಪರಮಾತ್ಮನೆಂದು ಎಂದಿಗೂ ಉಪಾಸನೆ ಮಾಡಬಾರದು. ಅದು ತಾತ್ಕಾಲಿಕವೆಂದೂ ಆದ್ದರಿಂದ ಗೌಣ ವೆಂತಲೂ ಭಾವಿಸಬಾರದು. ನಾವು ಯಾವಾಗಲೂ ಈ ಪ್ರತೀಕಗಳಲ್ಲಿ ಸನ್ನಿಹಿತನಾಗಿರುವ ಪರಮಾತ್ಮನನ್ನು ಮಾತ್ರ ಧ್ಯಾನ ಮಾಡಬೇಕು. ಹೀಗೆ ಶ್ರೀಮಧ್ವಾಚಾರ್ಯರು ಮುಕ್ತಿಯನ್ನು ಪಡೆಯುವಲ್ಲಿ ಸಾಧನಾನುಷ್ಠಾನದಲ್ಲೂ ಸಹ ಶುದ್ಧ ಸತ್ಯವಾದುದನ್ನೆ ಆಶ್ರಯಿಸಬೇಕೆಂಬುದನ್ನು ಒತ್ತಿ ಹೇಳಿದ್ದಾರೆ.

ಪರಮಾತ್ಮನ ಭಕ್ತಿಯು ಕೇವಲ ಪಾರಮಾರ್ಥಿಕ ಜೀವನಕ್ಕೆ – ಮೋಕ್ಷಪ್ರಾಪ್ತಿಗೆ ಅವಶ್ಯಕವೆಂದಲ್ಲ; ಇಹಲೋಕದಲ್ಲಿ ನೆಮ್ಮದಿಯಾಗಿ ಬಾಳಲೂ ಅತ್ಯಗತ್ಯವಿದೆ. ಶಾಂತಿ ಮತ್ತು ಸುರಕ್ಷೆ ಇವು ಸುಸ್ಥಿರವಾಗಿ ಸಮಾಜದಲ್ಲಿ ನೆಲಸಬೇಕಾದರೆ ನೈತಿಕ ಹಾಗೂ ಧಾರ್ಮಿಕ ವಾತಾವರಣವು ಇಲ್ಲದ ಹೊರತು ಸಾಧ್ಯವಿಲ್ಲವೆಂಬುದನ್ನು ಐತಿಹಾಸಿಕ ಘಟನೆಗಳು ನಿರ್ವಿವಾದವಾಗಿ ತೋರಿಸುತ್ತಿವೆ. ನೈತಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಒಪ್ಪದ ಸಮಾಜವು ಆರ್ಥಿಕವಾಗಿ ಎಷ್ಟೇ ಪ್ರಗತಿಯನ್ನು ಸಾಧಿಸಲಿ ಭೌತಿಕವಾಗಿ ಸುಖ ಸಂಪತ್ತಿನಲ್ಲಿ ಮುಳುಗಿರಲಿ ಪ್ರಾಮಾಣಿಕತೆ, ಸತ್ಯ, ನಿಷ್ಠೆ, ದಯ-ಕರುಣೆ ಮುಂತಾದ ಆದರ್ಶ ಗುಣಗಳನ್ನು ಬೆಳೆಸಿಕೊಳ್ಳಲು ಅಗತ್ಯವಾದ ನೈತಿಕ ಮತ್ತು ಧಾರ್ಮಿಕ ಮೌಲ್ಯಗಳನ್ನೊಪ್ಪದ ಕಾರಣ ಅತ್ಯಂತ ಸ್ವಾರ್ಥಿಗಳ ಗುಂಪುಗುಳಿತನಕ್ಕೆ ಬಲಿಯಾಗಿ ಜನರು ಭ್ರಷ್ಟಾಚಾರಿಗಳೂ ಇಂದ್ರಿಯಲೋಲುಪರೂ ಆಗಿಬಿಡುತ್ತಾರೆ. ಇಂತಹ ಭ್ರಷ್ಟ ಸಮಾಜದಲ್ಲಿ ಪಶುಬಲಕ್ಕೆ ಪ್ರಾಶಸ್ತ್ಯ ಬಂದು, ಅರಾಜಕತೆಯು ತಾಂಡವವಾಡುತ್ತದೆ ಮತ್ತು ಬಲಾಢ್ಯರ ಗುಲಾಮರಾಗಿ ಜನ ಬಾಳಬೇಕಾಗುತ್ತದೆ.

ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳೋಣ. ನಾನು ಏಕೆ ನೈತಿಕ ಜೀವನವನ್ನು ಒಪ್ಪಬೇಕು? ಅನೈತಿಕ ಜೀವನವನ್ನೇಕೆ ಒಪ್ಪಬಾರದು? ಅದಕ್ಕೆ ನಮ್ಮಲ್ಲಿ ಬರುವ ಉತ್ತರ ದೇವರಿದ್ದಾನೆ, ಅವನಿಗೆ ಒಪ್ಪಿಗೆ ಯಾಗುವ ರೀತಿಯಲ್ಲಿ ಬಾಳಬೇಕೆಂಬ ಹಂಬಲ. ಈ ಹಂಬಲವೇ ಭಕ್ತಿ. ನಿಜಕ್ಕೂ ಇದೇ ನಮ್ಮನ್ನು ನೀತಿಮಾರ್ಗದಲ್ಲಿ ನಡೆಯಲು ಪ್ರೇರಿಸುತ್ತದೆ. ಅನೀತಿಯಿಂದ ತಡೆ ಹಿಡಿಯುತ್ತದೆ. ಸರ್ವವ್ಯಾಪಕನಾದ ಪರಮಾತ್ಮನನ್ನು ನಂಬಿದಾಗಲೇ ಆತನು ಈ ಜಗತ್ತನ್ನು ಸೃಷ್ಟಿಸಿದ್ದಾನೆ, ಆತನೇ ಈ ಜಗತ್ತನ್ನು ಪಾಲಿಸುತ್ತಿದ್ದಾನೆ, ಆದ್ದರಿಂದ ಆತನು ತೋರಿದ ನೀತಿ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಹೋಗಲೇಬೇಕೆಂಬ ಆಂತರಿಕ ಪ್ರೇರಣೆಯು ನಮ್ಮನ್ನು ಸನ್ಮಾರ್ಗದಲ್ಲಿ ಕರೆದೊಯ್ಯುತ್ತದೆ. ಹೀಗೆ ಭೀತಿಯಿಂದಲೋ ಪ್ರೀತಿಯಿಂದಲೋ ಅಂತೂ ದೇವರು ತೋರಿದ ಸನ್ಮಾರ್ಗದಲ್ಲಿ ನಡೆಯಲೇಬೇಕೆಂದಾಗುತ್ತದೆ. ಮಾನವ ಜನಾಂಗವು ಇಂದಿಗೂ ಭಗವಂತನ ವಿಷಯದಲ್ಲಿ ಭಕ್ತಿಯನ್ನು ಪೋಷಿಸಿಕೊಂಡು ಬರಲು ಇದೇ ಕಾರಣ. ಆದುದರಿಂದ ಇಂದಿಗೂ ಮಾನವ ಸಮಾಜದಲ್ಲಿ ಅಲ್ಪಸ್ವಲ್ಪವಾದರೂ ಸಂಯಮವಿದೆ, ವ್ಯವಸ್ಥೆ ಎಂಬುದು ಉಳಿದು ಬಂದಿದೆ.

ನಾವು ದೇವರ ಅಸ್ತಿತ್ವವನ್ನೇ ನಂಬದೆ ಭಕ್ತಿಯ ಬುಡವನ್ನೇ ಕಿತ್ತೆಸೆಯಲು ಯತ್ನಿಸಿದುದಾದರೆ ಏನು ದುಃಸ್ಥಿತಿ ಬಂದೀತೆಂದು ಊಹಿಸಿಕೊಳ್ಳಬಹುದು. ನೈತಿಕ ಮೌಲ್ಯಗಳೇ ಇಲ್ಲದ ಭೌತಿಕೋನ್ನತಿಯ ಸಮಾಜದಿಂದ ಏನು ಅಪಾಯವಾಗಬಹುದೆಂಬುದರ ಬಗ್ಗೆ ಶ್ರೀಮಧ್ವಾಚಾರ್ಯರು ಈಗ್ಗೆ ಏಳುನೂರು ವರ್ಷಗಳ ಹಿಂದೆಯೇ ಎಚ್ಚರಿಕೆಯನ್ನು ನೀಡಿದ್ದಾರೆ.


''ತದಭಾವೇ ಪರಸ್ಪರ ಹಿಂಸಾದಿನಾ
ಅಪಕಾರಸ್ಯೈವ ಪ್ರಾಪ್ತೇಃ''

ಅಂದರೆ ನೈತಿಕ ಮತ್ತು ಅನೈತಿಕ ಜೀವನದ ಅಂತರವನ್ನು ಒಪ್ಪಲಾಗದ ವಾತಾವರಣದಲ್ಲಿ ಜನರು ಪರಸ್ಪರ ಹಿಂಸಾದಿಗಳಲ್ಲಿ ತೊಡಗುತ್ತಾರೆ. ಯಾರೊಬ್ಬರೂ ಇನ್ನೊಬ್ಬನಿಗೆ ಸಹಾಯ ಸಹಕಾರ ನೀಡದವರಾಗುತ್ತಾರೆ'' ಎಂದು ಅವರು ವಿಷ್ಣು ತತ್ತ್ವನಿರ್ಣಯದಲ್ಲಿ ಹೇಳಿರುವ ಮಾತು ಗಮನಾರ್ಹ.


ಒಟ್ಟಿನಲ್ಲಿ ಭಕ್ತಿ ಎಂಬುದು ಪಾರಮಾರ್ಥಿಕ ಜೀವನದ ಮುನ್ನಡೆಗೆ ಹೇಗೆ ಅವಶ್ಯಕವೋ ಹಾಗೆ ಐಹಿಕ ಜೀವನದಲ್ಲೂ ಅನಿವಾರ್ಯ. ಆಧ್ಯಾತ್ಮಿಕ ಸಾಧನೆಯಲ್ಲಿ ಭಕ್ತಿಯು ಕರ್ಮಯೋಗ ಹಾಗೂ ಜ್ಞಾನಯೋಗಗಳ ಜೀವಾಳ. ಭಕ್ತಿಯಿಲ್ಲದ ಕರ್ಮವಾಗಲೀ ಜ್ಞಾನವಾಗಲೀ ಏನೂ ಪರಿಣಾಮವನ್ನುಂಟುಮಾಡಲಾರದು. ನಮ್ಮ ಐಹಿಕ ಜೀವನದಲ್ಲಿ ಸುಖಶಾಂತಿಯು ನೆಲಸಬೇಕಾದರೂ ಭಕ್ತಿ ಅತ್ಯಗತ್ಯ. ಭಕ್ತಿಯು ಒಳಹೊರಗೆ ಪ್ರಕಾಶವನ್ನೀಯುವ ದಿವ್ಯಜ್ಯೋತಿ ಇದ್ದಂತೆ. ಲೌಕಿಕ ಜೀವನದಲ್ಲಿ ಮುಕ್ತಿಯ ಪಥದಲ್ಲಿ ಅದರ ಪ್ರಕಾಶ ಅತ್ಯಗತ್ಯ.

('ಅಂಜಲಿ' ಕನ್ನಡ ಅನುವಾದ ಸಂಪಾದಕರು – ಡಾ. ತಿಪ್ಪೇರುದ್ರ ಸ್ವಾಮಿ. (೧೯೭೪), ಪ್ರಕಾಶಕರು – ಗಾಂಧೀ ಭವನ, ಮಾನಸ ಗಂಗೋತ್ರಿ, ಮೈಸೂರು.)


●




ಅಕ್ಕಿಮುಹೂರ್ತ ಸಂಭ್ರಮ – ಶ್ರೀ ವಿಶ್ವೇಶತೀರ್ಥರ ಮೂರನೆಯ ಪರ್ಯಾಯ ೧೯೮೪




ಪರ್ಯಾಯ ಮೆರವಣಿಗೆಯಲ್ಲಿ ಶ್ರೀ ವಿಶ್ವೇಶತೀರ್ಥರು



ಅಕ್ಕಿಮುಹೂರ್ತ ಸಂಭ್ರಮ – ಶ್ರೀ ವಿಶ್ವೇಶತೀರ್ಥರ ಮೂರನೆಯ ಪರ್ಯಾಯ ೧೯೬೮




ಪರ್ಯಾಯ ಮೆರವಣಿಗೆಯಲ್ಲಿ ಶ್ರೀ ವಿಶ್ವೇಶತೀರ್ಥರು




ಕನಕನ ಕಿಂಡಿಯಲ್ಲಿ ಕೃಷ್ಣದರ್ಶನ




ತೃತೀಯ ಪರ್ಯಾಯ ದರ್ಬಾರಿನಲ್ಲಿ ವರನಟ ಡಾ। ರಾಜ್‌ಕುಮಾರ್‌ರಿಗೆ ಸಂಮಾನ




ಪರ್ಯಾಯ ದರ್ಬಾರಿನಲ್ಲಿ ಶ್ರೀ ವಿಷ್ಣುಮೂರ್ತಿ ಎರ್ಕಾಡಿತ್ತಾಯ – ಅಧ್ಯಕ್ಷರು ಇಂಡಿಯನ್ ಓವರ್‌ಸೀಸ್ ಬ್ಯಾಂಕ್ – ಅವರಿಗೆ ಸಂಮಾನ




ಡಾ| ಕೋಟ ಶಿವರಾಮ ಕಾರಂತರಿಗೆ ಸಂಮಾನ



ಪರ್ಯಾಯ ಕಾಲದ ಸಾಹಿತ್ಯ ಸಮಾರಂಭ ಒಂದರಲ್ಲಿ ಶ್ರೀ ಕೆ. ಎಸ್. ನರಸಿಂಹ ಸ್ವಾಮಿ, ಪ್ರೊ। ಕು. ಶಿ. ಹರಿದಾಸ ಭಟ್ಟ, ಡಾ. ಹಂಪನಾ



ಶ್ರೀ ಸೂರ್ಯನಾರಾಯಣ ಅಡಿಗರಿಗೆ ಕೃಷ್ಣಾನುಗ್ರಹ ಪ್ರಶಸ್ತಿ




ಶ್ರೀ ಕೆ. ಕೆ. ಪೈ ಅವರಿಗೆ ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ




ನೃತ್ಯವಿಶಾರದೆ ಡಾ। ಪದ್ಮಾ ಸುಬ್ರಹ್ಮಣ್ಯಂ ಅವರಿಗೆ ಸಂಮಾನ



ಗಾಯಕ ಶ್ರೀ ಜೇಸುದಾಸರಿಗೆ ಸಂಮಾನ




ದೀಪಾಲಂಕಾರ ರತ್ನ ಶ್ರೀ ದೇವರಾಜ ಅವರಿಗೆ ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ



ಶೃಂಗೇರಿ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸನ್ನಿಧಾನಂಗಳವರೊಂದಿಗೆ




ಸ್ವಾಮೀ ಚಿನ್ಮಯಾನಂದಜೀ ಮತ್ತು ಶ್ರೀ ಸತ್ಯಸಾಯಿಬಾಬಾ ಅವರೊಂದಿಗೆ




ಶೃಂಗೇರಿ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು ಮತ್ತು ಪಲಿಮಾರು ಮಠದ ಶ್ರೀ ವಿದ್ಯಾಮಾನ್ಯತೀರ್ಥರೊಂದಿಗೆ




ಕಾಂಚೀ ಶ್ರೀ ವಿಜಯೇಂದ್ರ ಸರಸ್ವತೀ ಸ್ವಾಮೀಜಿ ಮತ್ತು ಬಾಳೆಕುದುರು ಮಠದ ಶ್ರೀ ಶಂಕರಾಶ್ರಮ ಸ್ವಾಮೀಜಿ ಅವರೊಂದಿಗೆ



ದಕ್ಷಿಣಾಮ್ನಾಯ ಶೃಂಗೇರಿ ಮಠದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರೊಂದಿಗೆ




ಉತ್ತರಾದಿಮಠದ ಶ್ರೀ ಶ್ರೀ ಸತ್ಯ ಪ್ರಮೋದತೀರ್ಥರೊಂದಿಗೆ



ಧರ್ಮಸ್ಥಳದಲ್ಲಿ ನಡೆದ ಧರ್ಮ ಸಂಸತ್ತಿನಲ್ಲಿ ಪರಮಪೂಜ್ಯ ಜೈನ ಮುನಿ ಏಲಾಚಾರ್ಯರೊಂದಿಗೆ



ಹರೇಕೃಷ್ಣ ಪಂಥದವರೊಂದಿಗೆ ಶ್ರೀ ವಿಶ್ವೇಶತೀರ್ಥರು




ಶ್ರೀ ವಿಬುಧೇಶತೀರ್ಥರೊಂದಿಗೆ ಶ್ರೀ ವಿಶ್ವೇಶತೀರ್ಥರು



ಶ್ರೀ ವಿಬುಧೇಶತೀರ್ಥರಿಗೆ ಶ್ರೀ ವಿಶ್ವೇಶತೀರ್ಥರಿಂದ ಗೌರವ



ಶ್ರೀ ಆದಿಚುಂಚನಗಿರಿ ಶ್ರೀ ಬಾಲಗಂಗಾಧರ ಸ್ವಾಮೀಜಿಯವರೊಂದಿಗೆ ಶ್ರೀ ವಿಶ್ವೇಶತೀರ್ಥರು



ಶ್ರೀ ಸೋಸಲೆ ವ್ಯಾಸರಾಯ ಸ್ವಾಮೀಜಿಯವರೊಂದಿಗೆ

